
ಶಂಬಾ ಕೃತಿ ಸಂಪುಟ

ಸಂಸ್ಕೃತಿ - ಸಾಹಿತ್ಯ ೬



ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ
ಬೆಂಗಳೂರು ೫೬೦ ೦೧೮

ಜನಪ್ರಿಯ ಪುಸ್ತಕ ಮಾಲೆ

ಶಂಬಾ ಕೃತಿಸಂಪುಟ

೬

ಸಂಸ್ಕೃತಿ - ಸಾಹಿತ್ಯ

ಮಲ್ಲೇಪುರಂ ಜಿ. ವೆಂಕಟೇಶ

ಸಂಪಾದಕ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ

ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

SHAMBA KRUTI SAMPUTA : VOL. 6

SAMSKRUTI - SAHITYA

Complete Works of Dr. Shamba Joshi

Edited by : Prof. Mallepuram G. Venkatesha
Kannada University, Hampi

Published by The Administrative Officer
Kannada Pustaka Pradhikara
(Kannada Book Authourity)
Pampa Mahakavi Road, Chamarajpet
Bangalore - 560 018

First Edition : 1999

Page : xxxvi + viii + 468

ಮುಖಪುಟ ವಿನ್ಯಾಸ : **ಟಿ. ಎಫ್. ಹಾದಿಮನಿ**

ಬೆಲೆ : **125/-**

LAKSHMI MUDRANALAYA

ಚಾಮರಾಜಪೇಟೆ, ಬೆಂಗಳೂರು
ದೂರವಾಣಿ : ೬೬೧೩೧೨೩, ೬೬೧೮೭೫೨

ಮಹರ್ಷಿ

ಅರವಿಂದ ಘೋಷ

ಇವರ

ಸಂಕ್ಷಿಪ್ತ ಚರಿತ್ರವು.



ಲೇಖಕರು —

ಧಾರವಾಡ

ಶಂಬಾಜೋಶಿ ಅವರ ಮೊದಲ ಪ್ರಕಟಿತ ಪುಸ್ತಕದ ಮುಖಪುಟ

ॐ तत्सत्

ಮಹರ್ಷಿ ಅರವಿಂದ ಘೋಷ

ಇವರ

ಸಂಕ್ಷಿಪ್ತ ಚರಿತ್ರವು.

ಲೇಖಕ :— ಶ. ಬಾ. ಜೋಶಿ.

ಪ್ರಕಾಶಕ :— ಗುರುರಾವ ಧಾರವಾಡಕರ.

೧೯೨೧.

We live in deeds not years, in thoughts, not breaths
In feelings, not in figures on a dial
We should count time by heart throbs. He most lives
Who thinks most, feels most, acts the best.

—Bay lay.

ಅದೇ ಪುಸ್ತಕ ಒಳಪುಟ

ಟಿಳಕ ಕಥಾಮೃತಸಾರ

ಪ್ರಕಾಶಕರು
ಲೋಕಮಾನ್ಯ ಸ್ಮಾರಕ ಮಂಡಳ
ಧಾರವಾಡ

೧೯೩೨

ಟಿಳಕರನ್ನು ಕುರಿತ ಮೊದಲ ಪುಸ್ತಕದ ಮುಖಪುಟ

ಗೆಳೆಯರ ಕೂಟದ ಕಿರಣ ೧

ರೂಢಿ
ಹಾಗೂ
ಭಾವಿಕ ಕಲ್ಪನೆಗಳು.

ಲೇಖಕರು—


ಕನ್ನಡಿಗರ ನೆಲೆ, ಮಹಾರಾಷ್ಟ್ರದ ಮೂಲ, ಕರ್ನಾಟಕದ ವೀರ ಕ್ಷತ್ರಿಯರು, ಕನ್ನಡನುಡಿಯ ಹುಟ್ಟು, ಕಣ್ಮರೆಯಾದ ಕನ್ನಡ, ವೇದದಲ್ಲಿ ಪೀರಶೈವರು, ಇತ್ಯಾದಿ ಗ್ರಂಥಗಳ ಕರ್ತೃಗಳಾದ

ಶಂ. ಬಾ. ಜೋಶಿಯವರು.

ಪ್ರತಿ ೫೦೦] [೧೯೪೦.

ಬೆಲೆ ಒಂದಾಣೆ.

ಗೋಕರ್ಣದ 'ಗೆಳೆಯರ ಕೂಟ ಹೊರತಂದ ಮೊದಲ ಪುಸ್ತಿಕೆಯ ಮುಖಪುಟ


ಸಮಾಜ ದರ್ಶನ


ಲೇಖಕರು:

ಶ್ರೀಮಾನ್ ದಂ. ಬಾ. ಜೋಶಿ

೩೦ನೆಯ ಮೇ ೧೯೪೯

ಬೆಲೆ ೧-೮-೦

ಸಮಾಜ ದರ್ಶನದ ಒಳಪುಟ



ಯಕ್ಷಪ್ರಶ್ನೆ

ಅಥವಾ

ಬರಲಿರುವ ಸಮಾಜ

ದಂ. ಬಾ. ಜೋಶಿ

ಯಕ್ಷಪ್ರಶ್ನೆ ಪುಸ್ತಕದ ಮುಖಪುಟ


ಕರ್ಣನ ಮೂರು ಚಿತ್ರಗಳು

ದಂ. ಬಾ. ಜೋಶಿ


ಪ್ರಕಾಶಕರು

ಮಾಧವ ಬಲ್ಲಾಳ ಬಂಧುಗಳು

ಧಾರವಾಡ

೧—೪—೦

ಕರ್ಣನ ಮೂರು ಚಿತ್ರಗಳ ಮುಖಪುಟ


ಉತ್ತರ ಕನ್ನಡ ಜಿಲ್ಲೆಯ

ಸಾಹಿತ್ಯಸಮ್ಮೇಳನ

ಅಧ್ಯಕ್ಷರಾದ

ಶ್ರೀ ದಂ. ಬಾ. ಜೋಶಿಯವರ

ಭಾಷಣ

★

ಸೌಂದರ್ಯ ವಿಚಾರ

★

ಕಾರವಾರ

೧೯೪೯

ಸಾಹಿತ್ಯ ಸಮ್ಮೇಳನದ ಕಿರುಪುಸ್ತಿಕೆಯ ಮುಖಪುಟ



ಶಂಬಾ ಅವರ ಅಪರೂಪದ ಭಂಗಿ



ಶಂಬಾ ಅವರ ಪತ್ನಿ ಪಾರ್ವತಿಬಾಯಿ



'ಅಧ್ಯಯನ' ಅಭಿನಂದನ ಗ್ರಂಥದ ಬಿಡುಗಡೆ ಸಮಾರಂಭ
ಡಾ. ಹಾ. ಮಾ. ನಾಯಕ ಅವರಿಂದ ಅಭಿನಂದನೆ




'ಅಧ್ಯಯನ' ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಶ್ರೀ ಎಸ್. ಶಿವಲಿಂಗಯ್ಯ
ಡಾ. ಎಂ. ಚಿದಾನಂದಮೂರ್ತಿ ಡಾ. ಶಿವರಾಮಕಾರಂತ, ಶ್ರೀಮತಿ ಶಂಬಾ



ಶಂಬಾ ಅವರ ಅಪರೂಪ ಭಾವಚಿತ್ರ
(ಧಾರವಾಡದ ಟ್ರೈನಿಂಗ್ ಕಾಲೇಜಿನಲ್ಲಿ ಇದ್ದಾಗ)




ಶಂಬಾ ಅವರ ಜತೆ ಶ್ರೀ ಕೃಷ್ಣ ಆಲೂರ, ಶಂಬಾ ಅವರ ಕಿರಿಯಮಗ ಮಧುಜೋಶಿ
ಡಾ. ಮಧು ಕಿರ್ಲೋಸ್ಕರ್ ಡಾ. ವರದರಾಜ ಹುಯಿಲಗೋಳ



ಶಂಬಾ ಅವರ ಜತೆ ಮಗಳು ವಿಮಲ ಡಿಸ್ಕಳ್ಕರ್
ಮರಿಮೊಮ್ಮಗ ಸುಹಾಸ, ಪತ್ನಿ ಪಾರ್ವತೀಬಾಯಿ



ರಾಜ್ಯಪ್ರಶಸ್ತಿ ಸ್ವೀಕಾರ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ
ಶ್ರೀ ಅ. ರಾ. ಚಂದ್ರಹಾಸಗುಪ್ತ ಅವರಿಂದ



ಪ್ರೊ. ಕೆ. ಜಿ. ನಾಡಗೀರ್ ಅವರ ಜತೆ ಶಂಬಾ



ಇಳಿವಯಸ್ಸಿನಲ್ಲಿ ಪತ್ನಿ ಪಾರ್ವತೀಬಾಯಿ ಅವರೊಡನೆ ಶಂಬಾ

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಆತ್ಮಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹು ಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಕನ್ನಡದ ಅತ್ಯಂತ ಪ್ರಸಿದ್ಧ ಹಾಗೂ ಸ್ವೋಪಜ್ಞಶೀಲ ವಿದ್ವಾಂಸರಾದ, ಡಾ. ಶಂಬಾ ಜೋಶಿ ಅವರ ಸಮಗ್ರ ಕೃತಿಗಳನ್ನು ಒಟ್ಟು ಆರು ಸಂಪುಟಗಳಲ್ಲಿ ಪುಸ್ತಕ ಪ್ರಾಧಿಕಾರವು ಇದೀಗ ಪ್ರಕಟಿಸುತ್ತಿದೆ. ಲೇಖಕರೊಬ್ಬರ ಸಮಗ್ರ ಕೃತಿಗಳ ಸಂಪುಟಗಳನ್ನು ಹೊರತರುವಲ್ಲಿ ಇದು ಪ್ರಾಧಿಕಾರದ ಯೋಜನೆಯ ಮೊದಲ ಪ್ರಯತ್ನ. ಡಾ : ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ

ಡಾ: ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು. ಅವರು ತೆರೆದ ಆಯಾಮಗಳು ವೈವಿಧ್ಯಮಯವಾದವುಗಳು. ಕನ್ನಡ ವಿದ್ವತ್ ಪರಂಪರೆಯಲ್ಲಿ ಹೊಸ ಸಂಶೋಧನ ಪದ್ಧತಿಯೊಂದನ್ನೆ ಅವರು ರೂಪಿಸಿದರು. ಸಂಶೋಧನೆಗೆ ವಿಶಾಲವ್ಯಾಪ್ತಿಯನ್ನು ಮತ್ತು ಗಟ್ಟಿತಳಹದಿಯನ್ನು ನೀಡುವ ಸಲುವಾಗಿ ಹಲವು ಬಗೆಯ ಜ್ಞಾನಮಾರ್ಗಗಳನ್ನು ತಮ್ಮ ಶೋಧನೆ ಹಾಗೂ ಸತ್ಯಪ್ರತಿಪಾದನೆಯ ಆಕರಗಳನ್ನಾಗಿ ದುಡಿಸಿಕೊಂಡರು. ಅವರು ನಡೆಸಿದ ಸಾಂಸ್ಕೃತಿಕ ಅನ್ವೇಷಣೆ ಬೌದ್ಧಿಕ ವ್ಯಾಪಾರವಲ್ಲ; ವರ್ತಮಾನದ ವಿಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ದಾಟಿ ಸರ್ವಮಾನ್ಯವೆನಿಸಬಹುದಾದ ವೈಜ್ಞಾನಿಕ ಚಿಂತನೆಯ ಒಂದು ವಿಶಿಷ್ಟ ಉಪಕ್ರಮವಾಗಿ ಅದನ್ನು ಸ್ವೀಕರಿಸಿದರು. ತಾವು ಸತ್ಯವೆಂದು ನಂಬಿದ ಮತ್ತು ಕಂಡ ಅಂಶಗಳನ್ನು ಅನ್ಯಮೂಲಗಳಿಂದ ಪರೀಕ್ಷಿಸುವುದಕ್ಕಾಗಿ ಮತ್ತು ಪರಿಷ್ಕರಿಸುವುದಕ್ಕಾಗಿ ಅವರು ಪ್ರಾಚೀನ ಗಡಿಪ್ರದೇಶಗಳನ್ನು ಕಾಣುವ ವಿಶೇಷ ಪ್ರಯತ್ನ ಮಾಡಿದರು. ಕನ್ನಡ ನಾಡಿನಲ್ಲಿ ಮಾತ್ರವಲ್ಲದೇ ಮಹಾರಾಷ್ಟ್ರ, ಮಧ್ಯಪ್ರದೇಶ, ಬಂಗಾಳ, ಬಿಹಾರ ಮತ್ತು ಇನ್ನು ಹಲವು ಹತ್ತುಕಡೆಗಳಿಂದ ತಮ್ಮ ಸಂಶೋಧನೆಗೆ ಪೂರಕವಾದ ನೂರಾರು ಸಾಕ್ಷಿ ಮತ್ತು ಸಾಮಗ್ರಿಗಳನ್ನು ಹೆಕ್ಕಿಹೆಕ್ಕಿ ತೆಗೆದು; ಆ ಮೂಲಕ ವಿವಿಧ ವಾದ ಮತ್ತು ಅಭಿಪ್ರಾಯಗಳ ನಡುವೆ ಗೊಂದಲಮಯವಾಗಿದ್ದ ಕನ್ನಡನಾಡಿನ ಭೌಗೋಳಿಕ ಜಾನಾಂಗಿಕ ಮತ್ತು ಸಾಂಸ್ಕೃತಿಕ ಎಲ್ಲೆಗಳನ್ನು ಪುನರ್‌ರಚನೆ ಮಾಡಿದರು. ತಾವು ಸಮೃದ್ಧವಾಗಿ ಕಂಡು ಹಿಡಿದು, ಅಧ್ಯಯನಮಾಡಿದ ಆಕರಗಳ ಬೆಳಕಿನಲ್ಲಿ ನೂತನ ನೆಲೆಗಳನ್ನು ಕಂಡು ಕಾಣಿಸಿದರು. ಹಾಗೆಯೇ, ತಮ್ಮ ಸತತ ಪರಿಶ್ರಮ ಮತ್ತು ಶ್ರದ್ಧಾತಪಸ್ಸು ಗಳಿಂದ ದರ್ಶಿಸಿದ ಆ ನೆಲೆಗಳ ಮತ್ತು ಸೆಲೆಗಳ ಫಲಿತಗಳನ್ನು ಕಾಲಕಾಲಕ್ಕೆ ಕನ್ನಡದ ಅಗ್ರಮಾನ್ಯ ವಿದ್ವಾಂಸರ, ಸಂಶೋಧಕರ ಎದುರು ಇಟ್ಟು ಆರೋಗ್ಯಕರ ಚರ್ಚೆ ಮತ್ತು ವಿದಗ್ಧವಾದಗಳ ವೇದಿಕೆಯನ್ನು ಸೃಷ್ಟಿಸುವ ಮೂಲಕ ಕನ್ನಡನಾಡಿನಲ್ಲಿ ಹೊಸ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಚಿಂತನೆಗಳ ಮಿಂಚಿನ ಅಲೆಗಳನ್ನು ಎಬ್ಬಿಸಿದರು.

ಡಾ : ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ, ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು. ಹೀಗಾಗಿ ಆಧುನಿಕ ಸಮಾಜದ ಬಹುಮುಖ ನೆಲೆಗಳನ್ನು ಅರಿಯಲು ಮತ್ತು ಅರ್ಥೈಸಲು ಪ್ರಾಚೀನ ಆಕರಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಮುನ್ನಡೆದ ಶಂಬಾ ಅವರು ಹೊಸ ಅರ್ಥಗ್ರಹಣ ಪದ್ಧತಿಯನ್ನೇ ತಮ್ಮ ಬರಹಗಳ ಮೂಲಕ ನಮಗೆ ನೀಡಿದ್ದಾರೆ. ಇಂದಿನ ಸಂಕೀರ್ಣಯುಗದ ಮಾನವನ ಅಧೋಗತಿಗೆ ಸಮಾಜ ಸಮ್ಮುಖ ಆಚರಣೆಗಳು ಹಿಂದೆ ಸರಿದು ವ್ಯಕ್ತಿ ವಿಶಿಷ್ಟ ಆಚರಣೆಗಳು ದೈತ್ಯಾಕಾರವನ್ನು ತಳೆದು ನಿಂತದ್ದೆ ಕಾರಣವೆಂದು ತಮ್ಮ ಸತತ ಮತ್ತು ಸುವಿಸ್ತಾರವಾದ ಸಂಶೋಧನೆಯ ನೆಲೆಯಲ್ಲಿ ಅವರು ಕಂಡುಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಡಾ : ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು, ತನ್ನ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ ಹೂತು ಹೋಗಿದ್ದ ತಥ್ಯಗಳಿಗೆ

ಜೀವದಾನ ಮಾಡಿ ಹೊಸ ಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು-ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ. ಭೂತ ಮತ್ತು ವರ್ತಮಾನಗಳನ್ನು ನಿಷ್ಕೃಷ್ಟವಾಗಿ ಅರಿತು ಅವುಗಳ ತಳಹದಿಯ ಮೇಲೆ ಬಹುಶ್ರುತ ಚಿಂತನೆ ಮತ್ತು ಕ್ರಿಯೆಗಳನ್ನು ರೂಪಿಸುವ ಅದ್ಭುತ ಸ್ಫೂರ್ತಿಯ ಜೀವಕೇಂದ್ರಗಳಿವು. ಈ ಕಾರಣಗಳಿಂದಾಗಿ ಜೋಶಿ ಅವರ ಸಮಗ್ರ ಕೃತಿಗಳನ್ನು ಪ್ರಾಧಿಕಾರ ಹೊರತರುವ ಮೂಲಕ ಕನ್ನಡನಾಡಿನ ಜನರಿಗೆ ತಮ್ಮ ಸಂಸ್ಕೃತಿ ಮತ್ತು ಇತಿಹಾಸ ಪರಿಜ್ಞಾನವನ್ನು ಬೆಳಸಿಕೊಳ್ಳಲು ಇವು ಸಾಧಕವಾಗುತ್ತವೆ ಎಂದು ಭಾವಿಸಿದ್ದೇನೆ. ೨೦ನೆಯ ಶತಮಾನದ ಅಂಚಿನಲ್ಲಿ ನಿಂತಿರುವ ನಮಗೆ ಇವು ಹೊಸ ಆಕರಗಳಾಗಿ, ಮೌಲ್ಯಗಳ ಅನ್ವೇಷಣೆಯ ದಾರಿದೀಪಗಳಾಗಿ, ಮುಂದೆ ನಡೆಯಬಹುದಾದ ಮತ್ತು ನಡೆಯಬೇಕಾದ ಅರ್ಥಪೂರ್ಣ ಪಥಗಳನ್ನು ತಿಳಿಸುವ ಮೈಲುಗಲ್ಲುಗಳಾಗಿ ನೆಲೆನಿಲ್ಲುತ್ತವೆಂಬ ನಂಬುಗೆ ನಮ್ಮದು. ಈ ದೃಷ್ಟಿಯಿಂದ ಇವು ಈ ಶತಮಾನದ ಅಮೂಲ್ಯ ಸಂಪುಟಗಳು.

ಕನ್ನಡನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಶ್ರೀಮಂತ ಆಕರಗಳನ್ನು ಕನ್ನಡ ಓದುಗರಿಗೆ ಒದಗಿಸಬೇಕೆಂಬ ಹೆಬ್ಬಯಕೆಯಿಂದ ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳೂ ಹಾಗು ಹಣಕಾಸು ಸಚಿವರಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ಅವರು ಈ ಸಂಪುಟಗಳ ಪ್ರಕಟಣೆಗಳಿಗಾಗಿ ವಿಶೇಷ ಅನುವಾದವನ್ನು ತುಂಬಾ ಪ್ರೀತಿ ಮತ್ತು ಸಂತೋಷಗಳಿಂದ ಒದಗಿಸಿಕೊಟ್ಟಿದ್ದಾರೆ. ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರು ಈ ಯೋಜನೆಯಲ್ಲಿ ವಿಶೇಷ ಆಸಕ್ತಿತೋರಿ ಸಹಕರಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಸಹೃದಯ ಸದಸ್ಯರು ಈ ಯೋಜನೆ ನನಸಾಗಲು ಒತ್ತಾಸೆ ನೀಡಿದ್ದಾರೆ. ಈ ಸಂಪುಟಗಳ ಸಲಹಾ ಸಮಿತಿಯ ಮಾನ್ಯ ಸದಸ್ಯರುಗಳಾದ ಪ್ರೊ : ದೇ. ಜವರೇಗೌಡ, ಪ್ರೊ. ದೇವೇಂದ್ರಕುಮಾರ ಹಕಾರಿ ಮತ್ತು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಿ ಈ ಸಂಪುಟಗಳು ಉಪಯುಕ್ತವಾಗಿ ಪ್ರಕಟವಾಗುವಲ್ಲಿ ನೆರವಾಗಿದ್ದಾರೆ. ಪ್ರಸಿದ್ಧ ವಿದ್ವಾಂಸರೂ ಮತ್ತು ಸಂಶೋಧಕರೂ ಹಾಗು ಡಾ : ಶಂಬಾ ಅವರ ಅಭಿಮಾನಿಗಳೂ ಆದ ಪ್ರೊ : ಮಲ್ಲೇಪುರಂ ಜಿ. ವೆಂಕಟೇಶ ಅವರು ಈ ಆರು ಸಂಪುಟಗಳ ಬಹು ಜವಾಬ್ದಾರಿಯುತವಾದ ಸಂಪಾದಕತ್ವವನ್ನು ವಹಿಸಿಕೊಂಡು ವಿಶೇಷ ಪರಿಶ್ರಮ, ಶ್ರದ್ಧೆ ಮತ್ತು ಅರ್ಪಣಾ ಮನೋಭಾವಗಳಿಂದ ದುಡಿದಿದ್ದಾರೆ. ಖ್ಯಾತ ಯುವಕಲಾವಿದ ಶ್ರೀ ಹಾದಿಮನಿ ಅವರು ಈ ಸಂಪುಟಗಳಿಗೆ ಅರ್ಥಪೂರ್ಣ ಮುಖಪುಟಗಳನ್ನು ವಿನ್ಯಾಸಗೊಳಿಸಿ ಇವುಗಳ ಸೌಂದರ್ಯವನ್ನು ವರ್ಧಿಸಿದ್ದಾರೆ. ಕಲಾತ್ಮಕ ಮುದ್ರಣಕ್ಕೆ ಹೆಸರಾದ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ ಕುಮಾರ್ ಮತ್ತು ಸಿಬ್ಬಂದಿ ವರ್ಗ ಅತ್ಯಂತ ಆಸಕ್ತಿ ಮತ್ತು ಸಂತೋಷದಿಂದ ಅತ್ಯಲ್ಪಕಾಲದಲ್ಲಿ ಈ ಸಂಪುಟಗಳನ್ನು ಮುದ್ರಿಸಿ ದಾಖಲೆ ನಿರ್ಮಿಸಿದ್ದಾರೆ. ಪ್ರಾಧಿಕಾರದ ಸಿಬ್ಬಂದಿ ವರ್ಗ ಇವುಗಳ ತ್ವರಿತ ಪ್ರಕಟಣೆಗಾಗಿ ಹಗಲಿರುಳು ಶ್ರಮಿಸಿದೆ. ಇವರೆಲ್ಲರಿಗೂ ವೈಯಕ್ತಿಕವಾಗಿ ಮತ್ತು ಪ್ರಾಧಿಕಾರದ ಪರವಾಗಿ ಗೌರವದ ಪ್ರೀತಿಯ ಕೃತಜ್ಞತೆಗಳು.

ದಿನಾಂಕ : ೮.೦೭.೧೯೯೯
ಬೆಂಗಳೂರು - ೫೬೦ ೦೧೮

ಡಾ|| ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು

ಸಂಪಾದಕನ ಅರಿಕೆ

ಶಂಬಾ ಎಂಬ ಎರಡಕ್ಷರಗಳಿಂದಲೇ ಸುಪ್ರಸಿದ್ಧರಾದ ಡಾ. ಶಂಕರ ಬಾಳದೀಕ್ಷಿತ ಜೋಶಿ (೧೮೯೬-೧೯೯೧) ಕನ್ನಡದ ಮಹಾವಿದ್ವಾಂಸರು. ಅವರು ಕನ್ನಡ ಸಂಶೋಧನ ಕ್ಷೇತ್ರದ ಅಶ್ವತ್ಥವೃಕ್ಷ. ಬಹುಶ್ರುತರೂ, ಚಿಂತಕರೂ ಆದ ಶಂಬಾ, ಎಪ್ಪತ್ತು ವರ್ಷಗಳಿಗೂ ಹೆಚ್ಚುಕಾಲ 'ಜೀವನದ ಅರ್ಥಗ್ರಹಣ ಪದ್ಧತಿ'ಯ ಜಾಡು ಹಿಡಿದು ನಡೆಸಿದ ಕೆಲಸಗಳು ಅನನ್ಯವಾದವು. ಅವರು ವಿದ್ವತ್ತು ಮತ್ತು ವೈಚಾರಿಕ ಚಿಂತನೆಗಳ ಅಪೂರ್ವ ಸಂಗಮವಾಗಿದ್ದರು. ಅವರು ಸೃಜಿಸಿದ ಸಾಂಸ್ಕೃತಿಕ ಸಂಶೋಧನೆ, ಭೂತ ಹಾಗೂ ವರ್ತಮಾನ ಕಾಲಗಳ ನಡುವಣ ನೆಲೆಗಳನ್ನು ತಿಳಿಯಲು ಅನುವು ಮಾಡಿಕೊಡುತ್ತವೆ. 'ಕೃತಿಗಳೇ ಆಕೃತಿ ನಿರ್ಮಾಣಕ್ಕೆ ಮುಖ್ಯ ನೆಲೆಗಳು' ಎಂಬುದು ಅವರ ನಿಷ್ಠೆ ಹಾಗೂ ಶ್ರದ್ಧೆ. ವ್ಯಕ್ತಿವಿಶಿಷ್ಟ ಸಂಗತಿಗಳು ಬದುಕಿನಲ್ಲಿ ಗೌಣವಾಗಿದ್ದು, ಜೀವನ ಸಮಷ್ಟಿ ಸಂಗತಿಗಳು ಮುಖ್ಯವಾಗಬೇಕೆಂಬ ಹಂಬಲ ಅವರದಾಗಿತ್ತು. ಅವರು ಈ ಜಾಡಿನಲ್ಲಿ ಕೊನೆಯ ವರೆಗೂ ನಡೆದರು.

ಡಾ. ಶಂ. ಬಾ. ಅವರು ತೀರಿಕೊಂಡು ಇಂದಿಗೆ ಎಂಟು ವರ್ಷಗಳು ಆದುವು. ೧೯೯೬ ಅವರ ಜನ್ಮ ಶತಮಾನೋತ್ಸವದ ವರ್ಷ. ಆ ಹೊತ್ತಿಗೆ ಅವರ ಎಲ್ಲ ಪುಸ್ತಕಗಳು ಪ್ರಕಟಗೊಳ್ಳಬೇಕೆಂಬ ಅಪೇಕ್ಷೆ ಇತ್ತು. ಆ ಬಗೆಗೆ ಪ್ರಯತ್ನ ನಡೆದರೂ ಆಗ ಕೈಗೂಡಲಿಲ್ಲ. ಒಮ್ಮೆ ಖ್ಯಾತಕಲಾವಿದ, ಗೆಳೆಯ ಸಿ. ಚಂದ್ರಶೇಖರ್ ಅವರ ಮನೆಯಲ್ಲಿ ಲೋಕಸೇವಾ ಆಯೋಗದ ಸದಸ್ಯರೂ ಶಂಬಾ ಜೋಶಿ ಅವರ ಪ್ರಿಯ ಅಭಿಮಾನಿಗಳೂ ಕನ್ನಡ ಸಂಸ್ಕೃತಿ ಅಭ್ಯಾಸಿಗಳೂ ಆದ ಶ್ರೀ ಮುಕಡಪ್ಪ ಅವರ ಸ್ನೇಹವಾಯಿತು. ಅವರು ಶಂಬಾ ಅವರ ಕೃತಿಗಳು ಹಲವು ಸಂಪುಟಗಳಾಗಿ ಸಮಗ್ರರೂಪದಲ್ಲಿ ಬರಬೇಕೆಂದು ಹೇಳಿ ಒತ್ತಾಯಿಸಿದರು. ಆನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಬಂದ ಮೇಲೆ ನನ್ನ ಅಭಿಲಾಷೆಯನ್ನೂ ಶ್ರೀ ಮುಕಡಪ್ಪ ಅವರ ಇಚ್ಛೆಯನ್ನೂ ಅವರ ಬಳಿ ಹೇಳಿಕೊಂಡೆ. ಆನಂತರ ಈ ಯೋಜನೆಗೆ ಚಾಲನೆ ಸಿಕ್ಕಿತು. ಕರ್ನಾಟಕ ಸರ್ಕಾರದ ಉದಾರವಾದ ನೆರವು ಈ ಯೋಜನೆಗೆ ದೊರಕಿ, ಈ ಹಿನ್ನೆಲೆಯಲ್ಲಿ ಶಂಬಾ ಕೃತಿಸಂಪುಟಗಳು ಹೊರಬರುತ್ತಿವೆ.

ನಮ್ಮ ಕಾಲದ ಅಪರೂಪ ವಿದ್ವಾಂಸರೂ ಸಾಂಸ್ಕೃತಿಕ ಆಚಾರ್ಯರೂ ಆದವರೊಬ್ಬರ ಸಮಗ್ರ ಸಾಹಿತ್ಯ ವನ್ನು ಸಂಪಾದಿಸುವ ದೊಡ್ಡಹೊಣೆಯನ್ನು ಗೌರವವನ್ನು ಪಡೆದಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಇದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಹಾಗೂ ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರ ವಿಶ್ವಾಸದಿಂದ ಸಾಧ್ಯವಾಗಿದೆ. ಅದಕ್ಕಾಗಿ ಅವರಿಬ್ಬರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು ಮೊದಲಿಗೆ ಸಲ್ಲುತ್ತವೆ.

ಶಂಬಾ ಜೋಶಿ ಅವರು ಪುಸ್ತಕರೂಪದಲ್ಲಿ ಪ್ರಕಟಿಸಿರುವ ಸಾಹಿತ್ಯ ಸುಮಾರು ಡೆಮ್ಮೈ ಆಕಾರದಲ್ಲಿ ನಾಲ್ಕು ಸಾವಿರ ಪುಟಗಳಾಗುತ್ತವೆ. ೧೯೨೧ ರಿಂದ ಹಿಡಿದು ೧೯೮೬ರ ವರೆಗಿನ ಕಾಲಾವಧಿಯಲ್ಲಿ ಈ ಎಲ್ಲ ಕೃತಿಗಳು ರಚನೆಗಳಾಗಿವೆ. ಇವಲ್ಲದೆ ನೂರಾರು ಬಿಡಿಲೇಖನಗಳಿವೆ. ಅವು ವಿವಿಧ ವಿಷಯಗಳಿಗೆ ಸೇರಿವೆ. ಅವುಗಳಲ್ಲಿ ಅಪೂರ್ವವಾದ ಕೆಲವು ಲೇಖನಗಳನ್ನು ಆಯ್ದು ಪುಸ್ತಕರೂಪದಲ್ಲಿ 'ಕನ್ನಡ ಪುಸ್ತಕ ಪ್ರಾಧಿಕಾರ'ವು ೧೯೯೬ರಲ್ಲಿ ಪ್ರಕಟಿಸಿದೆ. ಅವರು ಬರೆದಿರುವ ಒಟ್ಟು ಪುಸ್ತಕಗಳು ಮೂವತ್ತೆರಡು. ಇವುಗಳಲ್ಲಿ ಮರಾಠಿ ಅನುವಾದ 'ಭಗವದ್ಗೀತೆ'ಯ ಮೊದಲಭಾಗ ಮತ್ತು ರಾನಡೆ ಅವರ 'ಉಪನಿಷತ್ ರಹಸ್ಯ'ದ 'ಮನಃಶಾಸ್ತ್ರ'ದ ಭಾಗ ಇವುಗಳನ್ನು ಸಂಪುಟಗಳಲ್ಲಿ ಸೇರಿಸಿಲ್ಲ. ಉಳಿದ ಎಲ್ಲ ಪುಸ್ತಕಗಳು ಸೇರ್ಪಡೆಗೊಂಡಿವೆ. ಅವುಗಳನ್ನು ವಿಷಯ ಹಾಗೂ ಚಾರಿತ್ರಿಕಾನುಗುಣವಾಗಿ ಜೋಡಿಸಿ ಈ ಸಂಪುಟಗಳನ್ನೂ ಸಿದ್ಧಪಡಿಸಿ ಹೀಗೆ ವಿನ್ಯಾಸಗೊಳಿಸಲಾಗಿದೆ.

ಸಂಪುಟ - ೧ ಕಂನಾಡು-ಕರ್ನಾಟ

ಈ ಸಂಪುಟದಲ್ಲಿ ಕಣ್ಮರೆಯಾದ ಕನ್ನಡ ೧೯೩೩, ಮಹಾರಾಷ್ಟ್ರದ ಮೂಲ ೧೯೩೪, ಮರ್‍ಹಾಟಿ ಸಂಸ್ಕೃತಿ : ಕೆಲವು ಸಮಸ್ಯೆಗಳು - ೧೯೮೯, (ಮರ್‍ಹಾಟಿ ಸಂಸ್ಕೃತಿ : ಕಾಂಹಿ ಸಮಸ್ಯಾ - ೧೯೫೭ರ ಮರಾಠಿ ಕೃತಿಯ ಕನ್ನಡಾನುವಾದ) ಕರ್ನಾಟದ ವೀರಕ್ಷತ್ರಿಯರು - ೧೯೩೭ ಇವು ಮುಖ್ಯವಾಗಿ ಕನ್ನಡದ ನೆಲೆಯನ್ನೂ ಮೂಲಿಗರ ಸಾಂಸ್ಕೃತಿಕ ನೆಲೆಗಳನ್ನು ಕುರಿತಿವೆ.

ಸಂಪುಟ - ೨ ಕಂನಡ-ಕಂನುಡಿ

ಈ ಸಂಪುಟವು 'ಕನ್ನಡದ ನೆಲೆ ೧೯೩೯, ಎಡೆಗಳು ಹೇಳುವ ಕಂನಾಡ ಕತೆ ೧೯೪೭, ಕಂನುಡಿಯ ಹುಟ್ಟು ೧೯೩೭, ಕನ್ನಡ ನುಡಿಯ ಜೀವಾಳ ೧೯೪೦ ಇವುಗಳನ್ನು ಒಳಗೊಂಡಿದೆ. ಮೊದಲೆರಡು ಪುಸ್ತಕಗಳು ಕನ್ನಡ ಸಂಸ್ಕೃತಿ ವಿಚಾರಧಾರೆಯ ಮೂಲಗಾಮಿ ಚರ್ಚೆಗಳನ್ನು ಮತ್ತು ಭಾಷೆಯ ಹಲವು ಬಗೆಯ ನಂಟುಗಳ ವಿಶಿಷ್ಟ ನೆಲೆಗಳನ್ನು ಚರ್ಚಿಸುತ್ತವೆ.

ಸಂಪುಟ - ೩ ಕರ್ನಾಟ ಸಂಸ್ಕೃತಿ

ಈ ಸಂಪುಟವು ಹಾಲುಮತದರ್ಶನ ೧೯೬೦, ಕರ್ಣಾಟ : ಸಂಸ್ಕೃತಿಯ ಪೂರ್ವಪೀಠಿಕೆ ಭಾಗ - ೨, ೧೯೬೭ ಇವೆರಡನ್ನು ಒಳಗೊಂಡಿದೆ ಈ ಹಿಂದಿನ ಕಂನಾಡ ಮೂಲಿಗರ ಸಂಸ್ಕೃತಿ-ಭಾಷೆ, ಪಾರಸ್ಪರಿಕ ಸಂಬಂಧ ಅವುಗಳ ಇಳಿಗಾಲಕ್ಕೆ ಈಡಾದ ಕಾರಣಮೀಮಾಂಸೆ ಯನ್ನು ಕುರಿತು ಈ ಸಂಪುಟಗಳು ಚರ್ಚಿಸುತ್ತವೆ.

ಸಂಪುಟ - ೪ ಭಾರತೀಯ ಸಂಸ್ಕೃತಿ

ಋಗ್ವೇದಸಾರ : ನಾಗಪ್ರತಿಮಾ ವಿಚಾರ - ೧೯೭೨, ಸರ್ತ್ಯ-ಸತ್ಯ ೧೯೭೫, ಭಾಷೆ ಮತ್ತು ಸಂಸ್ಕೃತಿ ೧೯೭೫ ಇವುಗಳನ್ನು ಒಳಗೊಂಡಿದೆ. ಕಂನಾಡ ನೆಲೆಯಿಂದ ಅಖಿಲ ಭಾರತೀಯ ಸಂಸ್ಕೃತಿಯ ಜೀವನ ಕ್ರಮವನ್ನು, ಜೀವನದ ಅರ್ಥಗ್ರಹಣದ ನೆಲೆಗಳನ್ನು ಇವು ವ್ಯಾಖ್ಯಾನಿಸಿ ತಿಳಿಸುತ್ತವೆ.

ಸಂಪುಟ - ೫ ಮಾನವ ಸಂಸ್ಕೃತಿ

ಈ ಸಂಪುಟವು ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ ೧೯೭೬, ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ ೧೯೭೭, ಮಾನವಧರ್ಮದ ಆಕೃತಿ ೧೯೭೯, ಬುಧನ ಜಾತಕ ೧೯೮೦, ಬಿತ್ತಿದ್ದನ್ನು ಬೆಳಕೊ ೧೯೮೪, ಜೀವನದ ಅರ್ಥಗ್ರಹಣ ಪದ್ಧತಿ ೧೯೮೬ ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಂನಾಡು, ಭಾರತೀಯ ನೆಲೆಗಳಿಂದ ಜಾಗತಿಕ ಸಂಸ್ಕೃತಿ ನೆಲೆಗಳ ಪುರಾಣ ಹಾಗೂ ಹಲವು ಜ್ಞಾನಶಾಖೆಗಳ ಜಾಡು ಹಿಡಿದು ಮನುಷ್ಯನ ಅಧಃಪತನಕ್ಕೆ ಕಾರಣವಾದ ನೆಲೆಗಳನ್ನು ತಿಳಿಯುವ ಕಡೆಗೆ ಸಾಗುತ್ತವೆ.

ಸಂಪುಟ - ೬ ಸಂಸ್ಕೃತಿ-ಸಾಹಿತ್ಯ

ಈ ಸಂಪುಟವು, ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತ್ರವು ೧೯೨೧, ಟಿಳಕ ಕಥಾಮೃತಸಾರ ೧೯೩೨, ರೂಢಿ ಹಾಗೂ ಭಾವಿಕ ಕಲ್ಪನೆಗಳು ೧೯೪೦, ಅಗ್ನಿವಿದ್ಯೆ - ಎದ್ದೇಳು ಕನ್ನಡಿಗಾ ಅಥವಾ ಅಸಂತೋಷವೆ ಏಳ್ಗೆಯ ಮೂಲ - ೧೯೪೩, ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ ೧೯೪೮, ಸಮಾಜದರ್ಶನ ೧೯೪೯, ಮಕ್ಕಳ ಒಡಪುಗಳು ೧೯೪೦, ಸೌಂದರ್ಯವಿಚಾರ ೧೯೪೯, ದಾರಿಯ ಬುತ್ತಿ ೧೯೫೦, ಕರ್ಣನ ಮೂರು ಚಿತ್ರಗಳು ೧೯೪೭, ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಎರಡು ಜೀವನ ಚರಿತ್ರೆಗಳು, ನಾಲ್ಕು ಸಮಾಜ ಚಿಂತನೆಗಳೂ, ನಾಲ್ಕು ಸಾಹಿತ್ಯ ಸಂಸ್ಕೃತಿಯನ್ನು ಒಳಗೊಂಡ ಪುಸ್ತಕಗಳಿವೆ.

ಶಂಬಾ ಜೋಶಿಯವರ ಎಲ್ಲ ಪುಸ್ತಕಗಳನ್ನು ಈ ಆರುಸಂಪುಟಗಳಲ್ಲಿ ಅಡಕಗೊಳಿಸಲಾಗಿದೆ. ಆರನೆಯ ಸಂಪುಟಕ್ಕೆ ಸೇರಬೇಕಾದ ೧೯೭೬ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಅಭಿವೃದ್ಧಿ' ಪುಸ್ತಿಕೆ ಕೊನೆಯ ವೇಳೆಯವರೆಗೂ ಲಭ್ಯವಾಗಲಿಲ್ಲ. ಅದನ್ನು ಇಲ್ಲಿ ಸೇರಿಸಲಾಗಿಲ್ಲ.

ಶಂಬಾ ಅವರು ಸಾಂಸ್ಕೃತಿಕ ಸಂಶೋಧನೆಯ ಹಾದಿಯಲ್ಲಿ ನಡೆದದ್ದು ಸುದೀರ್ಘ ನೆಲೆಯಲ್ಲೇ. ಅವರು ಅತ್ತ ಮಹಾರಾಷ್ಟ್ರ, ಇತ್ತ ಕರ್ನಾಟಕ ಈ ಎರಡೂ ಸಾಂಸ್ಕೃತಿಕ ಸಾಗರದಲ್ಲಿ ಮಿಂದೆದ್ದವರು. ಅವರು ಉಸಿರಾಡಿದ್ದು ಕಂನಾಡಿನ ಪುಣ್ಯ. ಅವರ ಕೃತಿಗಳನ್ನು ಬೇರೆ ಬೇರೆ ಕ್ಷೇತ್ರದ ಹಾಗೂ ಬೇರೆ ಬೇರೆ ಕಾಲಘಟ್ಟದ ಓದುಗರಿಗೆ ಪುನರ್ ಓದಿಕೆಗೆ ಸಜ್ಜುಗೊಳಿಸಿಕೊಡುವ ಆವಶ್ಯಕತೆ ಇತ್ತು. ಆ ಬಗೆಯ ಸಜ್ಜುಗೊಳಿಸುವ ಸಂಪಾದಕತ್ವದ ಕೆಲಸವನ್ನು ಈ ಆರು ಸಂಪುಟಗಳಲ್ಲಿ ಕೈಗೊಳ್ಳಲಾಗಿದೆ. ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಕೆಲವೊಂದು ನಿಯಮಗಳನ್ನು ಹಾಕಿಕೊಳ್ಳಲಾಯಿತು. ಆ ನಿಯಮಗಳು ಹೀಗಿವೆ:

i) ಶಂಬಾ ಅವರ ಕಾಲದಲ್ಲಿ ಪ್ರಕಟವಾದ ಮೊದಲ ಮುದ್ರಣ ಹಾಗೂ ಆನಂತರದ ಪುನರ್ಮುದ್ರಣಗಳನ್ನು ಗಮನಿಸುವುದು

ii) ಶಂಬಾ ಅವರ ಕೃತಿಗಳಲ್ಲಿ ಕಾಣಬರುವ ಅಚ್ಚಿನ ದೋಷಗಳು, ಉದ್ಧೃತ ಭಾಗಗಳ ಪರಿಷ್ಕರಣ, ಹಾಗೂ ಟಿಪ್ಪಣಿಗಳ ಆಮೂಲಾಗ್ರ ಪರಿಷ್ಕರಣ ಹಾಗೂ ಸೂಕ್ತವಾದ ಎಡೆಗಳಲ್ಲ ಅಧ್ಯಾಯಗಳ ಮರುವಿಂಗಡಣ.

iii) ಪ್ರತಿಸಂಪುಟಗಳ ಅನುಬಂಧಗಳಲ್ಲಿ ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ, ಆಕರ ಗ್ರಂಥಗಳ ಸೂಚಿ, ಶಬ್ದಸೂಚಿ ನೀಡುವುದು.

iv) ಪ್ರತಿ ಸಂಪುಟಗಳಿಗೂ ಪ್ರತ್ಯೇಕವಾದ ಪ್ರಸ್ತಾವನೆ ಬರೆಯುವುದು. ಈ ಪ್ರಸ್ತಾವನೆಯು ಸಮಕಾಲೀನ

ಸಂಸ್ಕೃತಿ, ಭಾಷೆಯ ವಾಗ್ವಾದಗಳನ್ನು ಶಂಬಾ ಜೋಶಿಯವರ ಸಾಂಸ್ಕೃತಿಕ ನಡೆಯ ನೆಲೆಗಳನ್ನು ಅವರ ಕೊಡುಗೆಗಳ ವೈಶಿಷ್ಟ್ಯಗಳು ಅದರಲ್ಲಿ ಬರುವಂತೆ ನೋಡಿಕೊಳ್ಳುವುದು.

v) ಪ್ರತಿಸಂಪುಟಗಳಿಗೂ ಆಯಾ ಸಂಪುಟಗಳಲ್ಲಿ ಇರುವ ಅಪರೂಪದ ಪುಸ್ತಕಗಳ ಮುಖಚಿತ್ರ, ಶಂಬಾ ಅವರ ಹಳೆಯ ಭಾವಚಿತ್ರ ಮೊದಲಾದುವುಗಳನ್ನು ನೀಡುವುದು.

ಈ ಅಂಶಗಳಿಗೆ ಸಂಪಾದಕ ಸಲಹಾ ಸಮಿತಿಯ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು. ಶಂಬಾ ಜೋಶಿಯವರ ಮಗಳು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ನೀಡಿದ ಸಲಹೆ ಮತ್ತು ಸಹಕಾರಗಳು ಈ ಸಂಪುಟಗಳು ಉತ್ತಮಗೊಳ್ಳಲು ಪರೋಕ್ಷವಾಗಿ ಕಾರಣವಾಗಿವೆ.

ಇನ್ನು, ಕೊನೆಯದಾಗಿ ನೆನೆಯಬೇಕಾದದ್ದು ಈ ಸಂಪುಟಗಳಿಗೆ ಚಾಲನೆ ಕೊಟ್ಟು, ವಿಶೇಷಾನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಲೋಕಸೇವಾ ಆಯೋಗದ ಸದಸ್ಯರೂ ನನ್ನ ಹಿರಿಯ ಮಿತ್ರರೂ ಆದ ಶ್ರೀ ಮುಕಡಪ್ಪ ಅವರಿಗೆ, ಈ ಹೊಣೆಗಾರಿಕೆಯನ್ನು ನನ್ನ ಹೆಗಲಿಗೆ ಹೊರಿಸಿ ಅಡಿಗಡಿಗೂ ಪ್ರೋತ್ಸಾಹ ನೀಡಿ ಈ ಸಂಪುಟಗಳು ಉತ್ತಮವಾಗಿ ಬರಲು ಕಾರಣರಾದ ಹಿರಿಯ ವಿದ್ವಾಂಸರೂ ಸಮರ್ಥ ಆಡಳಿತಗಾರರೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ, ಸಂಪಾದಕ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ ಜವರೇ ಗೌಡ, ಶ್ರೀಮತಿ ವಿಮಲ ಡಿಸ್ಕಳ್ಕರ್ ಹಾಗೂ ಡಾ. ದೇವೇಂದ್ರಕುಮಾರ ಹಕಾರಿ ಅವರಿಗೆ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ವಿ. ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕರಾದ ಶ್ರೀ ಜೆ. ಎನ್. ಶಾಮರಾವ್ ಅವರಿಗೆ, ಸಿಬ್ಬಂದಿವರ್ಗದವರಿಗೆ, ಹಲವು ಬಗೆಗಳಲ್ಲಿ ನೆರವಾದ ವಿದ್ವಾನ್ ಎಂ. ಆರ್. ರಕ್ಷಿತ್, ಶಂಬಾ ವಿಚಾರ ವೇದಿಕೆಯ ಎಸ್. ಶಿವಲಿಂಗಯ್ಯ ಇವರಿಗೆ, ಶ್ರೀ ಕೃಷ್ಣಾನಂದ ಕಾಮತ್, ಶ್ರೀ. ಕೆ. ಜಿ. ಸೋಮಶೇಖರ್, ಎಂ. ಮಲ್ಲಿಕಾರ್ಜುನಯ್ಯ ಇನ್ನು ಮುಂತಾದ ಗೆಳೆಯರು ತೆಗೆದ ಛಾಯಾಚಿತ್ರ ಗಳನ್ನು ವಿಶ್ವಾಸ ಹಾಗೂ ಕೃತಜ್ಞತಾಪೂರ್ವಕವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಮಹನೀಯರಿಗೆ, ಆರು ಸಂಪುಟಗಳ ಮುಖಪುಟ ವಿನ್ಯಾಸ ಮಾಡಿಕೊಟ್ಟ ತರುಣ ಕಲಾವಿದ ಶ್ರೀ ಹಾದಿಮನಿ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಗೆಳೆಯರಾದ ಶ್ರೀ ಅಶೋಕ್ ಕುಮಾರ್ ಮತ್ತು ಅವರ ಎಲ್ಲ ಸಿಬ್ಬಂದಿ ವರ್ಗದವರಿಗೆ, ಪರೋಕ್ಷವಾಗಿ ಅಪರೋಕ್ಷವಾಗಿ ಹಲವು ವಿಧಗಳಲ್ಲಿ ನೆರವಾದ ಹಾಗೂ ಈ ಮೇಲೆ ಹೆಸರಿಸದ ಎಲ್ಲರಿಗೂ ತುಂಬು ವಂದನೆಗಳು.

ಇವು ಡಾ. ಶಂ. ಬಾ. ಜೋಶಿ ಅವರ ಕೃತಿಸಂಪುಟಗಳು. ಇದರ ಗುಣಾತ್ಮಕ ಶ್ರೇಯಸ್ಸೆಲ್ಲವೂ ಅವರಿಗೆ ಸಲ್ಲಬೇಕು. ಉಪನಿಷತ್ತು ಶ್ರೇಯಸ್ಸು- ಪ್ರೇಯಸ್ಸು ಎಂದು ಎರಡು ತತ್ತ್ವಗಳನ್ನು ಹೇಳುತ್ತದೆ. ಶ್ರೇಯಸ್ಸು ಮುಖ್ಯವೆಂದು, ಅದೇ ಜೀವನ ಶ್ರದ್ಧೆಯೆಂದು, ಉಪನಿಷತ್ತು ಹೇಳುತ್ತದೆ. ಶಂಬಾ ಕಂನಾಡಿನ ಶ್ರೇಯಸ್ಸಿಗಾಗಿ ದುಡಿದವರು. ಇದರ ಸಮಗ್ರದರ್ಶನವನ್ನು ಅವರ ಕೃತಿಗಳು ರುಜುವಾತುಗೊಳಿಸುತ್ತವೆ. ಅವರ ಸಮಗ್ರ ಸಂಪುಟಗಳನ್ನು ನಿಮ್ಮ ಉಡಿಯಲ್ಲಿ ಹಾಕುತ್ತಿದ್ದೇವೆ. ಸಂಪುಟಗಳು ಹಲವು ರೀತಿಯ ಓದಿಕೆಗೆ ಹಾಗೂ ನಿಮ್ಮ ಪ್ರೀತಿಗೆ ಒಳಗಾಗಲಿ. ಈ ಸಂಪುಟಗಳಲ್ಲಿ ಏನಾದರೂ ಕೊರತೆಗಳಿದ್ದರೆ ಅದು ಸಂಪಾದಕನ ಸೀಮಿತ ಫಲ. ಇದಕ್ಕಾಗಿ ಕಂನಾಡ ಓದುಗರು ಮನ್ನಿಸಬೇಕು. ಇಷ್ಟು ಹೇಳಿದರೆ ತೀರೀತೆ?

ಕಂನಾಡಿನ ಜನರು ಈ ಸಂಪುಟಗಳನ್ನು ಸಹೃದಯತೆಯಿಂದ ಸ್ವೀಕರಿಸಬೇಕೆಂದೂ ಕುಗ್ಗಿರುವ ಕಂನಾಡನ್ನು ಹಿಗ್ಗುವ ತೆರದಲ್ಲಿ ಹೊರಳಬೇಕೆಂದೂ ಬೇಡುತ್ತೇನೆ. ನಮ್ಮ ತರುಣ ಜನಾಂಗವು ಶಂಬಾ ಅವರನ್ನು ಹೊಸ ಓದಿನ ನೆಲೆಯಲ್ಲಿ ಸ್ವೀಕರಿಸಬೇಕೆಂದೂ ಕೋರುತ್ತೇನೆ.

ಜುಲೈ ೨೫, ೧೯೯೯
ಕನ್ನಡ ವಿಶ್ವವಿದ್ಯಾಲಯ-ಹಂಪಿ

ಮಲ್ಲೇಪುರಂ ಜಿ. ವೆಂಕಟೇಶ
ಸಂಪಾದಕ

ಪ್ರಸ್ತಾವನೆ

ಸಮಾನೀ ವ ಆಕೂತಿಃ ಸಮಾನ ಹೃದಯಾನಿ ವಃ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ॥

ಯಾವ ರೀತಿ ನಮ್ಮಲ್ಲಿ ಐಕಮತ್ಯ ಇರುವುದೋ ಅದೇ ರೀತಿ ನಮ್ಮ ಉದ್ದೇಶವೂ ಒಂದೇ ಇರಲಿ. ನಮ್ಮ ಅಪೇಕ್ಷೆಗಳು ಒಂದೇ ಇರಲಿ. ನಮ್ಮ ಮನಸ್ಸೂ ಒಂದೇ ಆಗಿರಲಿ

- ಋಗ್ವೇದ- ೧೯೧ - ೪

ಹಿನ್ನೆಲೆ


ಶಂ. ಬಾ. ಜೋಶಿಯವರ ಪರಿಚಯ ಲಾಭದಿಂದ ದೊರಕಿದ ಸುಖವನ್ನು ನಾನು ಎಷ್ಟು ಹೇಳಿದರೂ ಕಡಮೆಯೇ. ಅವರ ಪರಿಚಯವು ಆಳವಾದ ಸ್ನೇಹಕ್ಕೆ ತಿರುಗಿ ನನ್ನ ಬದುಕಿನಲ್ಲಿ ಅತ್ಯಮೂಲ್ಯವಾದ ಪ್ರಜ್ಞಾ ಸಂಪತ್ತನ್ನು ಪಡೆಯುತ್ತಿದ್ದೇನೆ. ಇಂಥ ಮಹನೀಯರ ಪರಿಚಯ ಸ್ನೇಹಸಜ್ಜನಿಕೆ ನನಗೊದಗಿದ್ದು ಬದುಕಿನ ಭಾಗ್ಯ. ೧೯೭೪ರ ನವಂಬರ್ ತಿಂಗಳಿನ ಮೊದಲವಾರ ಇರಬೇಕು. ತುಮಕೂರಿನ ಸಾರ್ವಜನಿಕ ಗ್ರಂಥಾಲಯಕ್ಕೆ ಆಗೊಮ್ಮೆ ಈಗೊಮ್ಮೆ ಹೋಗುವ ಪರಿಪಾಠವನ್ನು ಇಟ್ಟುಕೊಂಡಿದ್ದೆ. ಒಂದು ದಿನ ಯಾರೂ ಮುಟ್ಟೂ ನೋಡದೆ ಇದ್ದ ಪರಾಮರ್ಶನ ಗ್ರಂಥಗಳು ಇರುವ ಸಾಲನ್ನು ನೋಡುತ್ತಿದ್ದಾಗ, ಅಕಸ್ಮಿಕವಾಗಿ 'ಋಗ್ವೇದ ಸಾರ ನಾಗಪ್ರತಿಮಾ ವಿಚಾರ' ಕಣ್ಣಿಗೆ ಬಿತ್ತು, ಹೆಸರಿನ ಕುತೂಹಲದಿಂದ ಕೈಗೆತ್ತಿಕೊಂಡೆ. ನಾನು ಸಂಸ್ಕೃತ ವಿದ್ಯಾರ್ಥಿಯಾಗಿದ್ದು, ವೇದದ ಸಾಂಪ್ರದಾಯಿಕ ಪರಿಚಯ ಆಗಿತ್ತು. ಆದ್ದರಿಂದ, 'ಋಗ್ವೇದ ಸಾರ' ಎಂದಾಗ ಕುತೂಹಲಿಯಾದೆ. ಅಲ್ಲಿಯ ವರೆಗೂ ವೇದಕ್ಕೆ ಸಂಬಂಧಪಟ್ಟ ಅನ್ಯೇತರ ಗ್ರಂಥಗಳ ಪರಾಮರ್ಶನವನ್ನು ನಾನು ಮಾಡಿರಲಿಲ್ಲ. ಮಂತ್ರಭಾಗಗಳ ಪಾಠ ಅಧ್ಯಯನ, ನಿರುಕ್ತದ ವಿವರಣೆ, ಅನುಮಾನ ಬಂದ ಕಡೆ ಗುರುಗಳಿಂದ ಕೇಳಿಕೆ, ಇದಿಷ್ಟೇ ಆಗಿನ ನನ್ನ ನೆಲೆ. ಇದರಿಂದಾಗಿ ಆ ಪುಸ್ತಕವನ್ನು ಕೈಯಲ್ಲಿ ಹಿಡಿದು ಅತ್ತ-ಇತ್ತ ತಿರುಗಿಸಿ ನೋಡಿದೆ. ಗ್ರಂಥವೇನೋ ದೊಡ್ಡದು ಹೆಸರೂ ವಿಚಿತ್ರ, ಅಲ್ಲೆ ಕೂತು ಪರಿವಿಡಿ, ಮುನ್ನುಡಿ, ಬೆನ್ನುಡಿಯ ಮೇಲಿನ ವಿವರಗಳನ್ನು ಓದಿದೆ. ಆಗಲೇ ಶಂ. ಬಾ. ಜೋಶಿಯವರ ಹೆಸರನ್ನು ಮೊದಲಿಗೆ ಕೇಳಿದ್ದು. ನನಗಾಗ ಇಪ್ಪತ್ತೆರಡು ವರ್ಷ. ಇದರಿಂದಾಗಿಯೋ ಏನೊ ಏನೇನೂ ಅರ್ಥವಾಗಲಿಲ್ಲ. ನಾನು ಓದಿದ್ದ ಕ್ರಮವೇ ಬೇರೆ; ಇಲ್ಲಿಯ ವಿವರಣೆಗಳೇ ಬೇರೆ. 'ಇದೇನು' ಎಂಬ ಪ್ರಶ್ನೆ ಮತ್ತು ಆಶ್ಚರ್ಯ ನನ್ನ ಮನಸ್ಸಿನಲ್ಲಿ ಮೈದೋರಿತು. ಆ ವಾರ ಪಟ್ಟು ಹಿಡಿದು ಅರ್ಥವಾಗುವಷ್ಟು ಆಗಲೆಂದು ಓದಿದೆ. ದಿನವೂ ಬೆಳಗ್ಗೆ ೯ ಗಂಟೆಗೆ ಬರುವುದು ಸಂಜೆ ೬ ಗಂಟೆಯ ವರೆಗೂ ಓದುವುದು. ಈ ಓದಿನಿಂದ ನನ್ನ ಮನಸ್ಸಿನ ಮೇಲೆ ಆಳವಾದ ಪರಿಣಾಮವೊಂದು ಮೂಡಿತು. ಓದುತ್ತ, ಓದುತ್ತ ನಮ್ಮ ಬದುಕಿನ ಚಿತ್ರ, ನಮ್ಮ ಇತಿಹಾಸದಲ್ಲಿ ಅಡಗಿರುವ ವಿಸಂಗತಿಗಳು,

ವೈರುದ್ಧ್ಯಗಳು ನನ್ನ ಅರಿವಿಗೆ ತುಸುತುಸುವೇ ಅಸ್ಪಷ್ಟವಾಗಿ ಬಂದುವು. ನಮ್ಮ ಆಚಾರ-ವಿಚಾರಗಳಲ್ಲಿ ಇರುವ ಅಂತರ ನನ್ನ ಕಣ್ಣಿಗೆ ನಾಟಿತು. ಯಾಕೆ ಹೀಗೆ? ಯಾಕೆ ಹೀಗೆ? ಎಂಬ ಪ್ರಶ್ನೆಗಳು ಮೇಲಿಂದ ಮೇಲೆ ಮೈದೋರಿದಂತೆಲ್ಲ ನಮ್ಮ 'ಭಾರತೀಯ ಸಂಸ್ಕೃತಿ'ಯ ಅಸ್ಪಷ್ಟ ಚಿತ್ರ ನನ್ನ ಮನಸ್ಸಿನ ಮೇಲೆ ಮೂಡಿತು. ಸಂದೇಹ, ಜಿಜ್ಞಾಸೆ ಒಮ್ಮಿಂದೊಮ್ಮೆಗೆ ಪುಂಖಾನುಪುಂಖವಾಗಿ ಮೈದೋರಿತು. ನಮ್ಮ ಜೀವನ, ವಿಚಾರ-ಆಚಾರಗಳ ಅಂತರಾಳದಲ್ಲಿ ಅಡಗಿರುವ ವಿಕ್ಷಿಪ್ತತೆ, ಅಸಂಗತಿಗಳು ದಿಗ್ಭ್ರಮೆಗೆ ಈಡುಮಾಡಿದುವು. ಅನಂತರ ಅವರು ಬರೆದಿರುವ ಪುಸ್ತಕಗಳನ್ನೆಲ್ಲ ಹುಡುಕಿ, ಹುಡುಕಿ, ಓದಿದೆ. ನನ್ನ ಕಣ್ಣು ತೆರೆಯಿತು. ಬಣ್ಣದ ಕನ್ನಡಕವನ್ನು ಬದಿಗಿಟ್ಟು ನೋಡಲು ತೊಡಗಿದೆ. ಶಂಬಾ ಅವರ ಪುಸ್ತಕದಿಂದ ಆದ ಲಾಭ ಅಷ್ಟಿಷ್ಟಲ್ಲ. ಅವರ 'ಋಗ್ವೇದಸಾರ ನಾಗಪ್ರತಿಮಾ ವಿಚಾರ'ದಿಂದ ಪ್ರಚೋದಿತನಾಗಿ ವೇದದಲ್ಲಿ ಬರುವ 'ಯಮ-ಯಮೀ' ಸೂಕ್ತದ ರಚನೆ ಮತ್ತು ಔಚಿತ್ಯ ಕುರಿತು, ಕಾಗದ ಬರೆದೆ. ಮೂರೇ ದಿನದಲ್ಲಿ ಅವರಿಂದ ಉತ್ತರವೂ ಬಂತು. ಅವರ ಪತ್ರದಲ್ಲಿ ನನ್ನ ಅಧ್ಯಯನವನ್ನು ಕುರಿತು, ಓದನ್ನು ಕುರಿತು ಕೇಳಿದ್ದರು. 'ಓದಬೇಕಾದ ಕ್ರಮ, ವಿವಿಧ ಕ್ಷೇತ್ರಗಳ ಜ್ಞಾನದಿಂದ ಇಡಿಯಾದ ಒಂದು ಚಿತ್ರ ನಮ್ಮ ಮುಂದೆ ತಂದು ನಿಲ್ಲಿಸುತ್ತದೆಂದು" ಹೇಳಿ ವಿವಿಧ ಜ್ಞಾನಮೀಮಾಂಸೆಗಳ ಬಗ್ಗೆ ಮಾರ್ಗದರ್ಶನ ಮಾಡಿದ್ದರು. ಅಲ್ಲಿಂದ ಆರಂಭವಾದ ನನ್ನ ಅವರ ಪರಿಚಯ, ಆಳವಾದ ಸ್ನೇಹದ ಫಲದಲ್ಲಿ ಮುಳುಗಿ ಹೋಯಿತು. ೧೯೭೬ರಲ್ಲಿ ಧಾರವಾಡಕ್ಕೆ ಹೋಗಿ, ಒಂದು ವಾರಗಳ ಕಾಲ ಅವರೊಡನೆ ಇದ್ದು ಬಂದೆ. ಆ ನಂತರ ೧೯೭೯ರಲ್ಲಿ ಮತ್ತೊಮ್ಮೆ ಹದಿನೈದು ದಿನಗಳ ಕಾಲ ಅವರೊಡನೆ ಇದ್ದು ಜ್ಞಾನಮೀಮಾಂಸೆಯ ತಳಹದಿಯ ಸ್ವರೂಪವನ್ನು ತುಸು ಕಂಡುಕೊಂಡೆ! ಒಬ್ಬ ಹಿರಿಯ ಸಂಶೋಧಕನ ಸಜ್ಜನಿಕೆಯ ಸತ್ಫಲವನ್ನೂ ಅನುಭವಿಸಿದೆ.

ಬಾಳದಾರಿಯ ಬೆಳಕು

ಈಗಿನ ಬೆಳಗಾವಿ ಜಿಲ್ಲಾ ಸವದತ್ತಿ ತಾಲ್ಲೂಕಿನ ಗುರ್ಲಹೊಸೂರು [ಈಗ ಈ ಊರು ಇಲ್ಲ. ಮಲಪ್ರಭಾ ಪ್ರವಾಹದಿಂದಾಗಿ ಮುಳುಗಿ ಹೋಗಿದೆ.] ಅಲ್ಲಿ ೧೮೯೬ ಜನವರಿ ೪ ರಂದು ಶಂ. ಬಾ. ಅವರು ಜನಿಸಿದರು. ಇವರದು ಶ್ರೋತ್ರೀಯವಂಶ; ಚಿತ್ಪಾವನ ಬ್ರಾಹ್ಮಣರು. ತಂದೆಯ ಹೆಸರು ಬಾಳದೀಕ್ಷಿತ. ತಾಯಿಯ ಹೆಸರು ಉಮಾಬಾಯಿ, ಜೋಶಿ ಎಂಬುದು ಮನೆತನದ ಹೆಸರು. ಹುಟ್ಟಿದಾಗ ಇಟ್ಟ ಹೆಸರು ಶಂಕರ. ಹೀಗಾಗಿ: ಶಂಕರ ಬಾಳದೀಕ್ಷಿತ ಜೋಶಿ. ಅವರು 'ಶಂ.ಬಾ.' ಎಂದೇ ನಾಡಿಗೆ ಪ್ರಖ್ಯಾತಿ.

ಹಂಶವೃಕ್ಷ



ಶಂಬಾ ಅವರ ಮನೆಯಲ್ಲಿ ವೈದಿಕ ವಾತಾವರಣ ಇತ್ತು. ಚಿಕ್ಕಂದೇ ತಂದೆಯಿಂದ 'ಪವಮಾನ ಸೂಕ್ತ' ಹೇಳಿಸಿಕೊಳ್ಳುತ್ತಿದ್ದರು. ವೇದದ ನಾದ, ಲಯ ಪದಗಳ ಅನುರಣನ ಅವರ ಮನಸ್ಸಿನ ಮೇಲೆ ಬಿದ್ದಿತ್ತು. ತಾಯಿ ಉಮಾಬಾಯಿ, ಕಿರ್ಲೋಸ್ಕರ್ ನಾಟಕ ಕಂಪೆನಿಯ ರಂಗತಾಲೀಮುಗಳನ್ನು ಕಂಡವಳು. ನಾಟಕಗಳಲ್ಲಿ ಹಾಡು, ಸಂಭಾಷಣೆಗಳನ್ನು ಕಣ್ಣಿಗೆ ಕಟ್ಟುವಂತೆ ಶಂಬಾ ಅವರಿಗೆ ಹೇಳುತ್ತಿದ್ದಳು. ಒಂದು ಕಡೆ ತಂದೆಯಿಂದ ವೇದಜ್ಞಾನ, ಮತ್ತೊಂದು ಕಡೆ ತಾಯಿಯಿಂದ ಸಾಹಿತ್ಯಜ್ಞಾನ. ಇದಕ್ಕೆಲ್ಲ ನೀರೆರೆಯುವಂತೆ ಗುರ್ಲಹೊಸೂರಿನ ವಾತಾವರಣ. ಮನೆಯಲೆಲ್ಲಾ ನೂರಾರು ತೊಂದರೆ. ಆದರೆ, ಅವರಿಗೆ ಆತ್ಮ ವಿಶ್ವಾಸವನ್ನು ಚಿಕ್ಕಂದೇ ಹುಟ್ಟಿಸಿದವರು ಇಬ್ಬರು ಮಹನೀಯರು. ಒಬ್ಬರು ಶ್ರೀ ವೆಂಕಣ್ಣಾಚಾರ್ಯ ಮತ್ತೊಬ್ಬರು ಶ್ರೀ ವಾಚೇಂದ್ರ ಕರವೀರ. ಇವರಿಬ್ಬರು ಬಹಳ ಭಕ್ತಿಯಿಂದ, ಸುಶ್ರಾವ್ಯವಾಗಿ ದಾಸರಪದ ಮತ್ತು ಭಜನೆಗಳನ್ನು ಹೇಳುತ್ತಿದ್ದರು. ಶಂಬಾ ಅವುಗಳನ್ನು ಕೇಳುತ್ತ ಮೂಕವಿಸ್ಮಿತರಾಗುತ್ತಿದ್ದರು. ವೆಂಕಣ್ಣಾಚಾರ್ಯರ ಹಾಡು ಮನಸ್ಸಿನ ಮೇಲೆ ಪ್ರಭಾವ ಬೀರುತ್ತಿತ್ತು. ಶ್ರೀ ಕರವೀರ ವಾಚೇಂದ್ರಪ್ಪ ಇವರು ಆಗ್ಗೆ ಪ್ರಖ್ಯಾತ ಅವಧೂತರಾದ ಶ್ರೀ ಬೋಠೆ ಸ್ವಾಮಿಗಳ ಶಿಷ್ಯಂದಿರು. ಅವರು ಒಳ್ಳೆಯ ಭವ್ಯಮೂರ್ತಿ. ಅವರು ಇದ್ದುದು ಧಾರವಾಡದಲ್ಲಿ. ಆದರೆ, ಗುರುಗಳ ಸೇವೆಗಾಗಿ ಧಾರವಾಡದಿಂದ ಗುರ್ಲಹೊಸೂರಿಗೆ ಆಗಾಗ್ಗೆ ಬರುತ್ತಿದ್ದರು. ಅವರು ಬಂದವರೇ ಗುರ್ಲಹೊಸೂರಿನ ಚಿದಂಬರೇಶ್ವರ ದೇವಾಲಯದಲ್ಲಿ ಇರುತ್ತಿದ್ದರು. ಅವರನ್ನು ನೋಡುವುದು ಶಂಬಾ ಅವರಿಗೆ ಹಬ್ಬ. ಒಂದು ಸಲ ಶಂಬಾ ಅವರನ್ನು ಕರೆದು 'ಶಂಕರ, ಈ ಊರಿಗೆ ಭವಿಷ್ಯತ್ತು ಇಲ್ಲ. ನೀನು ಊರಲ್ಲೆ ನಿಲ್ಲಬೇಡ; ನಿನ್ನ ಕಲ್ಯಾಣವಾಗದು. ಶಿಕ್ಷಣಕ್ಕಾಗಿ ಹೊರಗೆ ಹೋಗು' ಎಂದು ಬೆನ್ನಮೇಲೆ ಕೈಯಾಡಿಸುತ್ತ ಹೇಳಿದರು. ಗುರ್ಲಹೊಸೂರಿನಲ್ಲಿ ಏಳನೆಯ ವರ್ಗದ ವರೆಗೂ ಓದಿದ್ದರು. ಬಾಳಾಜಿ ಕೃಷ್ಣ ಹಳೇಪೇಟೆ ಎಂಬುವರು ಶಂಬಾ ಅವರ ಬಾಲ್ಯದ ಗುರುಗಳು. ೧೯೧೧ರಲ್ಲಿ ಮಲಪ್ರಭೆಗೆ ಮಹಾಪೂರ ಬಂದಾಗ ಗುರ್ಲಹೊಸೂರು ನೀರಿನ ಮಯವಾಯಿತು. ಇವರು ಇದ್ದ ಮನೆ ಜಲಮಯವಾಯಿತು; ಊರಲು ನೆಲೆಯಿಲ್ಲದಾಯಿತು. ಜೊತೆಗೆ ಚಿಕ್ಕಂದೇ ತಂದೆಯ ಸಾವು ಭೀಕರವಾಗಿ ಒದಗಿತು. ಆದ್ದರಿಂದ, ಅಜ್ಜಿಯ ಮನೆಯಿದ್ದ ಪುಣೆಗೆ ಮನೆಯವರೆಲ್ಲ ಹೋದರು. ಶಂಬಾ ಅವರ ಅಜ್ಜಿ (ತಂದೆಯ ತಾಯಿ) ಜೋಗಳೇಕರ ಮನೆತನಕ್ಕೆ ಸೇರಿದವಳು. ಅವರು ಸುಸಂಸ್ಕೃತರೂ ಸ್ಥಿತಿವಂತರೂ ಆಗಿದ್ದರು. ಅಣ್ಣ ಮೊದಲಾದವರು ಪುಣೆಯಲ್ಲಿರಲು ಅನುಕೂಲವಾಗಿದ್ದರು. ಪುಣೆಗೆ ಹೋದಾಗ ಅಣ್ಣ ಭಾನುದೀಕ್ಷಿತ ಜೋಶಿ ಪುರೋಹಿತಗಾರಿಕೆ ಮಾಡಿಕೊಂಡು ಇರಲು ಶಂಬಾ ಅವರಿಗೆ ಹೇಳಿದರು. ಆದರೆ, ಅವರ ಮನಸ್ಸು ಒಗ್ಗಲಿಲ್ಲ. ಈ ಮಧ್ಯೆ ಲೋಕಮಾನ್ಯ ತಿಲಕರ ದರ್ಶನವಾಯಿತು. ಇದರಿಂದಾಗಿ ದೇಶಸೇವೆಯ ಹುಚ್ಚು ಹತ್ತಿಕೊಂಡಿತು. ಮುಂದೆ ಅವರು 'ಟಿಳಕ ಕಥಾಮೃತಸಾರ' ಬರೆಯಲು ಪರ್ಯಾಯವಾಗಿ ಪ್ರಚೋದನೆ ನೀಡಿತು. ಆದರೆ, ಎಷ್ಟು ದಿನವೆಂದು ಬೇರೊಬ್ಬರ ಮನೆಯಲ್ಲಿ ಇರಲು ಸಾಧ್ಯ? ಅಲ್ಲಿಂದ ಧಾರವಾಡಕ್ಕೆ ಪ್ರಯಾಣಮಾಡಿದರು. ಅಲ್ಲಿಗೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಸರಕಾರಿ ಟ್ರೈನಿಂಗ್ ಕಾಲೇಜನ್ನು ಪ್ರವೇಶಿಸಿದರು. ಆ ಕಾಲೇಜಿನ ಪ್ರಿನ್ಸಿಪಾಲರು ಎಲ್. ಸಿ. ರಾಮರಾವ್. ಆ ಕಾಲದ ದಿಗ್ಗಜರಾದ ಮ. ಪ್ರ. ಪೂಜಾರ, ಮೂರ್ತಾಚಾರ್ಯ ಮೊದಲಾದವರು ಟ್ರೈನಿಂಗ್ ಕಾಲೇಜಿನ ಶಿಕ್ಷಕರಾಗಿದ್ದರು. ಇವರ ಕಲಿಸುವಿಕೆ ಉತ್ತಮ ಮಟ್ಟದಲ್ಲಿತ್ತು. ವ್ಯಾಕರಣದಲ್ಲಿ ವಿಶೇಷ ಆಸಕ್ತಿ ಇವರಿಬ್ಬರಿಂದ ಆಯಿತು. ಮುಂದೆ ಹೊಸ ರೀತಿಯಲ್ಲಿ ಕಲಿಯಲು ಆಸ್ಪದ ನೀಡಿದವರು ಮೂರ್ತಾಚಾರ್ಯರೇ. ಬುರ್ಲಿ ಬಿಂದುಮಾಧವ, ಕೇಶವಶರ್ಮಾ ಗಲಗಲಿ ಇವರ ಸಹಪಾಠಿಗಳು. ಶಂಬಾ ಅವರು ಅಸಾಧಾರಣ ಓದು, ಜ್ಞಾಪಕಶಕ್ತಿ, ಅವರಿಗೆ, ಕನ್ನಡ-ಸಂಸ್ಕೃತಗಳ ಸಾಹಿತ್ಯ ಶಾಸ್ತ್ರಜ್ಞಾನ ಜಿಜ್ಞಾಸೆ ಚಿಕ್ಕಂದೇ ಬೆಳೆಯಿತು. ೧೯೧೯ರಲ್ಲಿ ಟ್ರೈನ್ಡ್ ಕನ್ನಡ ಶಿಕ್ಷಕರಾಗಿ ರ್‍ಯಾಂಕ್ ವಿದ್ಯಾರ್ಥಿಯಾದರು. ಬೆಳಗಾವಿ ಜಿಲ್ಲಾ ಚಿಕ್ಕೋಡಿಯಲ್ಲಿ, ೧೯೨೦ರಲ್ಲಿ ಮೊದಲಬಾರಿಗೆ ಶಿಕ್ಷಕವೃತ್ತಿ ಆರಂಭಿಸಿದರು. ಅಲ್ಲಿರುವಾಗಲೆ ತಿಲಕರ ಮರಣವಾರ್ತೆ ಬಂದಿತು. ಇದರಿಂದ ಶಂ. ಬಾ. ಅವರಿಗೆ ತೀವ್ರ ಮಾನಸಿಕ ವೇದನೆ ಆಯಿತು. ತಮ್ಮ ಆದರ್ಶಭಾವ ಹೊರಟು ಹೋದುದರ ಬಗ್ಗೆ ನೋವು, ಈ ನೋವು ಮಾಯವಾಗುವಂತೆ ಚಿಕ್ಕೋಡಿಗೆ

ಗಾಂಧೀಜಿ ಅವರ ಆಗಮನವಾಯಿತು. ಆಗ್ಗೆ ಮಹಾತ್ಮಾಗಾಂಧಿಯವರ ರಾಮರಾಜ್ಯದ ಆದರ್ಶದ ಕನಸು ಅವರ ಮನಸ್ಸಿನಲ್ಲಿ ತುಂಬಿಕೊಂಡಿತ್ತು. ಒಂದು ಕಡೆ ರಾಷ್ಟ್ರೀಯ ಹೋರಾಟಗಾರ ಲೋಕಮಾನ್ಯ ಬಾಲಗಂಗಾಧರ ತಿಲಕ್ ಮತ್ತೊಂದು ಕಡೆ ಸತ್ಯಾನ್ವೇಷಣೆ ಹಿಡಿದ ಗಾಂಧೀಜಿ ಅವರ ಬದುಕಿನ ಮುಖ್ಯ ಕೈದೀವಿಗೆಗಳಾಗಿದ್ದರು. ಅವರು ಸ್ವಯಂಸೇವಕರಾಗಿ ದುಡಿದರು. ಗಾಂಧೀಜಿ ಅವರ ಬಗ್ಗೆ ಭಾವನಾತ್ಮಕವಾಗಿ ಹುಚ್ಚುಹತ್ತಿ ಅವರೊಡನೆಯೆ ಬೆಳಗಾವಿ-ಧಾರವಾಡದ ತನಕ ಪ್ರಯಾಣ ಮಾಡಿದರು. ಇದರ ಫಲವಾಗಿ, ಸರ್ಕಾರದವರ ಕ್ರೂರದೃಷ್ಟಿ ಇವರ ಮೇಲೆ ಬಿತ್ತು. ಇದರ ಪರಿಣಾಮವಾಗಿ ಚಿಕ್ಕೋಡಿಯಿಂದ ಉಗರಗೋಳಕ್ಕೆ ವರ್ಗಾವಣೆ ಆಯಿತು. ಕನ್ನಡ ಅಭ್ಯಾಸದತ್ತ ಅವರ ಮನಸ್ಸೂ ಹರಿಯಿತು. ಅಲ್ಲೆ ಕನ್ನಡದ ಮಹಾಕಾವ್ಯಗಳ ಅಧ್ಯಯನವನ್ನು ಮಾಡಿದರು. ಪಂಪ, ರನ್ನ, ಜನ್ನ, ನಾಗಚಂದ್ರ ಕುಮಾರವ್ಯಾಸ ಮೊದಲಾದವರ ಮಹಾಕಾವ್ಯಗಳಲ್ಲಿ ಕಂಡು ಬರುವ ನಾಣ್ಣುಡಿ, ಗಾದೆ, ಪಡೆನುಡಿಗಳು ಅವರನ್ನು ಆಕರ್ಷಿಸಿದುವು. ಅವರಿಗೆ ಪಡೆನುಡಿಗಳ ಬಗ್ಗೆ ಆಸಕ್ತಿ ಬೆಳೆಯಿತು. ಗೋವಿಂದ ವೆಂಕಟೇಶ ಚುಳಕಿ ಅವರ ಸಹವಾಸ ಇದಕ್ಕೆ ಮತ್ತಷ್ಟು ಉತ್ತೇಜನ ನೀಡಿತು. ಸರಕಾರದ ವಶೀಲಿ ಹಿಡಿದು ಬದುಕುವುದಕ್ಕೆ ದುಸ್ಸಾಧ್ಯವಾಯಿತು. ಒಂದೆಡೆ ರಾಷ್ಟ್ರೀಯ ಪ್ರೇಮ; ಮತ್ತೊಂದೆಡೆ ಬದುಕುವ ಮಾರ್ಗ. ಇವೆರಡರಲ್ಲಿ ಗಾಂಧೀಜಿಯವರ 'ಸತ್ಯದ ಪ್ರಯೋಗಕ್ಕಾಗಿ ನಾನು ಬಾಳುವೆ' ಎಂಬ ಮಾತು ಅವರನ್ನು ತುಂಬಾ ಕಾಡಿತು. ಹೊಟ್ಟೆ ಪಾಡಿಗಾಗಿ ಬದುಕುವ ಪರಿ ಇಷ್ಟವಾಗಲಿಲ್ಲ. ಸ್ನೇಹಿತ ಬುರ್ಲಿ ಬಿಂದುಮಾಧವ ನೌಕರಿ ತೊರೆದು ಕಾಂಗ್ರೆಸ್ಸಿನ ಸಂದೇಶ ಹರಡಲು ಬಿರುಗಾಳಿಯಾಗಿ ಸಂಚರಿಸುತ್ತಿದ್ದರು. ಆಗ 'ನಾಡಿಗಾಗಿ ಏನಾದರೂ ಮಾಡಬೇಕು, ನಿಜವರಿತು ಬಾಳಬೇಕು' ಎಂದು ಮನಸ್ಸಿನಲ್ಲಿ ನಿರ್ಧರಿಸಿದರು. ಜ್ಞಾನದ ಹಸಿವು, ದೇಶಸೇವೆಯ ಹಸಿವು ಜತೆಜತೆಗೆ ಕಾಡುತಿತ್ತು. ಕುಗ್ರಾಮದಲ್ಲಿದ್ದು ವಿಶೇಷ ವ್ಯಾಸಂಗಕ್ಕೆ ಅನುಕೂಲ ಇಲ್ಲದುದರಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟು ಧಾರವಾಡಕ್ಕೆ ಪ್ರಯಾಣ ಬೆಳೆಸಿದರು. ಧಾರವಾಡದಲ್ಲಿ ಅಕ್ಕನ ಮನೆಯಲ್ಲಿ ತಂಗಿದ್ದು, ಮುದವೀಡು ಅವರು ನಡೆಸುತ್ತಿದ್ದ 'ಕರ್ನಾಟಕ ವೃತ್ತ' ಮತ್ತು 'ಧನಂಜಯ' ಪತ್ರಿಕೆಗಳಿಗೆ ಸೇರಿಕೊಂಡು ಲೇಖನ ವ್ಯವಸಾಯ ಆರಂಭಿಸಿದರು. ಈ ಪತ್ರಿಕೆಗಳಲ್ಲಿ ಖಾದಿ, ಅಸ್ಪೃಶ್ಯೋದ್ಧಾರದ ಬಗೆಗೆ ಲೇಖನಗಳನ್ನು ಬರೆದರು. ಅಲ್ಲಿಂದ ಶ್ರೀ ರಂಗನಾಥ ದಿವಾಕರರ ಆದೇಶದಂತೆ ಕೆಲಕಾಲ ಕರ್ಮವೀರದ ಸಂಪಾದಕರಾಗಿ ದುಡಿದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಮೊದಲ ಕರ್ನಾಟಕ ಏಕೀಕರಣದ ಕಾರ್ಯದರ್ಶಿಯಾಗಿ ಏಕೀಕರಣದ ಕೂಗಿಗೆ ಓಗೊಟ್ಟು ದುಡಿದರು. ಸಮಾಜಸೇವೆ, ಕ್ರಾಂತಿವಿಚಾರಗಳು ನಡೆಯುತ್ತಿದ್ದಾಗಲೇ ಕನ್ನಡ ನಾಡು-ನುಡಿಯ ಪ್ರಾಚೀನತೆಯ ಬಗೆಗೆ ಕುತೂಹಲ ಇದ್ದೇ ಇತ್ತು. ಅದಕ್ಕಾಗಿ ವಿಪುಲವಾದ ಅಧ್ಯಯನ ನಡದೇ ಇತ್ತು. ಲೇಖನಗಳ ರಚನೆ ವೈವಿಧ್ಯರೀತಿಯಿಂದ ಸಾಗುತಿತ್ತು. ಆದರೆ, ಈ ಅಲೆದಾಟದಿಂದ ಒಂದು 'ಸ್ಥಿರನೆಲೆ' ಇಲ್ಲವಾಗುವ ಭೀತಿ ಆಯಿತು. ತಾತ್ಕಾಲಿಕವಾಗಿ ೧೯೨೬-೨೭ರ ಅವಧಿಯಲ್ಲಿ ಕರ್ನಾಟಕ ಹೈಸ್ಕೂಲಿನಲ್ಲಿ ಶಿಕ್ಷಕವೃತ್ತಿ ಕೈಗೊಂಡರು. ೧೯೨೮ರಿಂದ ೧೯೪೬ರ ನಿವೃತ್ತಿಯ ವರೆಗೂ 'ವಿಕ್ಟೋರಿಯಾ ಹೈಸ್ಕೂಲ್' [ಈಗಿನ ವಿದ್ಯಾರಣ್ಯ ಪ್ರೌಢಶಾಲೆ] ನಲ್ಲಿ ಕನ್ನಡ ಶಿಕ್ಷಕರಾಗಿ ನೇಮಕಗೊಂಡರು. ಹಲವು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದರು. ನೂರಾರು ಜನ ತರುಣರು ಶಂ. ಬಾ. ಅವರ ಸಮರ್ಥ ನಿರ್ದೇಶನದಲ್ಲಿ ತಯಾರಾದರು. ಶಂ. ಬಾ. ಅವರ ಸ್ನೇಹ ಬಳಗವಂತೂ ಅಪರೂಪವಾಗಿತ್ತು. ಬೆಟಗೇರಿ ಕೃಷ್ಣಶರ್ಮ, ಶಿವರಾಮ ಕಾರಂತ, ವಿ. ಸೀತಾರಾಮಯ್ಯ, ದೇವುಡು ನರಸಿಂಹಶಾಸ್ತ್ರೀ, ಕ. ವೆಂ. ರಾಘವಾಚಾರ್ಯ, ಮಂ. ಗೋವಿಂದ ಪೈ, ವೇದಜ್ಞ ಗಣೇಶ ರಾಮಕೃಷ್ಣ ಉಗ್ರು, ಆರ್. ವಿ. ಜಾಗೀರ್‌ದಾರ್; ಮುಂಬಯಿ ಕಡೆ ವಿಖ್ಯಾತ ಸಮಾಜಶಾಸ್ತ್ರಜ್ಞೆ ಇರಾವತಿಬಾಯಿ ಕರ್ವೆ, ಮಹಾವಿದ್ವಾಂಸ ವಿ. ಪ್ರ. ಲಿಮಯೆ, ಡಾ. ಎಸ್. ವಿ. ಪರಾಂಜಪೆ ಈ ಪಟ್ಟಿ ಹೀಗೆ ಬೆಳೆಯುತ್ತ ಹೋಗುತ್ತದೆ.

ಶಂ. ಬಾ. ಅವರು ಕನ್ನಡ-ಮರಾಠಿ ಎರಡೂ ಭಾಷೆಗಳಲ್ಲಿ ಅಧ್ಯಯನ ಮತ್ತು ಬರೆವಣಿಗೆ ನಡೆಸಿದರು. ಈ ಮಧ್ಯೆ ಮದುವೆ ಆಯಿತು. ಹೆಂಡತಿಯನ್ನು ಜೊತೆಗೆ ಕಟ್ಟಿಕೊಂಡು ಬದುಕನ್ನೂ ಬದುಕಿನೊಡನೆ ಬರುವ

ಬವಣೆಯನ್ನೂ ನುಂಗಿದರು. ಬದುಕಿನ ಅತ್ಯಂತ ಕಷ್ಟದಲ್ಲಿ ತಮ್ಮ ಜೊತೆಗಾತಿ ಉದ್ದಕ್ಕೂ ಸಹಕರಿಸಿಕೊಂಡು ಬಂದದ್ದನ್ನು ಕೃತಜ್ಞತೆಯಿಂದ ಅವರು ಸ್ಮರಿಸುತ್ತಾರೆ. ಗಂಡನು ಮಾಡುವ ಸಂಶೋಧನೆಯ ಬಗೆಗೆ ಪಾರ್ವತಿದೇವಿ ಅವರಿಗೆ ತುಂಬು ಗೌರವ; ಆ ವಿಷಯದಲ್ಲಿ ಕೊನೆಯವರೆಗೂ ಸಹಕಾರ ನೀಡಿದರು. ಶಂ. ಬಾ. ಅವರಿಗೆ ಮೂರು ಜನ ಮಕ್ಕಳು. ಎರಡನೆಯವರು ವಿಮಲ ಅವರಿಗೆ ಮದುವೆಯಾಗಿ ಒಬ್ಬ ಮಗಳಿದ್ದಾಳೆ, ನರ್ಸ್ ತರಬೇತಿ. ಲೋಕಮಾನ್ಯ ಟಿಳಕ ಹಾಸ್ಪಿಟಲಿನಲ್ಲಿ ಮೇಟ್ರನ್ ಹುದ್ದೆಯಲ್ಲಿದ್ದು ಈಗ ನಿವೃತ್ತರಾಗಿದ್ದಾರೆ. ಮೊದಲನೆಯ ಹಾಗೂ ಕೊನೆಯ ಗಂಡುಮಕ್ಕಳು, ಅವರಲ್ಲಿ ಹಿರಿಯಮಗ ಬಾಳ ಜೋಶಿ ಬಾಂಬೆಯ ಸೀಬಾದಲ್ಲಿ ವಿಜ್ಞಾನ ವೃತ್ತಿ. ನಿವೃತ್ತರಾದ ಬಳಿಕ ಈಗ ಇವರು ಅಮೇರಿಕೆಯಲ್ಲಿ ಸಂಶೋಧಕ. ಕಿರಿಯ ಮಗ ಮಧು ಜೋಶಿ ಅಂತಾರಾಷ್ಟ್ರೀಯ ವಿಜ್ಞಾನಿ; ಅಮೇರಿಕದಲ್ಲಿ ವಾಸ. ಇಬ್ಬರೂ ಡಾಕ್ಟರೇಟ್ ಮಾಡಿದವರು. ಯಾವುದು ಸಂದರ್ಭವಶದಿಂದ ಶಂ.ಬಾ. ಅವರಿಗೆ ಪದವೀಧರರಾಗಲೂ ಸಾಧ್ಯವಾಗಲಿಲ್ಲವೋ ಅದನ್ನು ಮಕ್ಕಳು ಮಾಡಿದ್ದು ಅವರಿಗೆ ಸಂತೋಷ ತಂದಿದೆ.

ವಿಚಾರ ಭಾವನೆಯು ಜೋಶಿಯವರ ತರುಣ ವಯಸ್ಸಿನಲ್ಲಿಯೇ ತಲೆದೋರಿ ಆಜೀವವಾಗಿ ಅವರ ಬದುಕನ್ನು ಬೆಳಗಿಸಿದ ಒಂದು ವಿಶೇಷಾಂಶವಾಗಿದೆ. ಶಂ. ಬಾ. ಅವರಲ್ಲಿ ಭಾವನೆ ಮತ್ತು ವಿಚಾರಗಳೆರಡೂ ಇದ್ದುವು. ಭಾವನೆಯು ಅವರ ತಾರುಣ್ಯದಲ್ಲಿ ತುಸು ಹೆಚ್ಚಾಗಿಯೇ ಇತ್ತು. ಅವರು ಬರೆದ ಮೊದಲ ಪುಸ್ತಕ ಅರವಿಂದ ಘೋಷರ ಚರಿತ್ರೆಯಲ್ಲಿ ಇದು ಸ್ಪಷ್ಟವಾಗಿದೆ. ಸತ್ಯಾನ್ವೇಷಣೆ ಮತ್ತು ದೇಶಸೇವೆಯ ಮುಖ್ಯ ಕಲ್ಪನೆಗಳು ಅಲ್ಲಿ ಕೆಲಸ ಮಾಡಿವೆ. ಆನಂತರ ಭಾವನೆಯ ಬಂಧನದಿಂದ ಬಿಡಿಸಿಕೊಂಡು ವಿಚಾರದ ಮೆಟ್ಟಲನ್ನು ಏರುತ್ತ, ಏರುತ್ತ ಹೋದರು. ಆದರೆ, ಭಾವನೆಯನ್ನು ಅವರು ಪೂರಾ ಕಳೆದುಕೊಳ್ಳಲಿಲ್ಲ. ಅದರ ಬದಲು 'ಭಾವನೆ'ಯನ್ನು ಗೌಣಸ್ವರೂಪದಲ್ಲಿ ತಿಳಿದುಕೊಂಡು; 'ವಿಚಾರ'ವನ್ನು ಪ್ರಾಧಾನ್ಯವಾಗಿ ಸ್ವೀಕರಿಸಿಕೊಂಡು ಮುನ್ನಡೆದರು. ಇದರಿಂದ ಅವರ ಬರವಣಿಗೆಯಲ್ಲಿ ಗೊಂದಲ ಏರ್ಪಡದೆ ಸತ್ಯಸಂಗತಿಗಳ ಸ್ವರೂಪವು 'ಕಲ್ಪನೆ'ಯಾಗದೆ 'ವಾಸ್ತವ' ದೃಷ್ಟಿಯದ್ದೂ ಆಯಿತು. ಇದನ್ನು ಶಂ. ಬಾ. ಅವರ ಕೃತಿಗಳ ಒಳನೋಟದಿಂದ ತಿಳಿಯಬಹುದು.

ತಮ್ಮ ಜೀವಿತದ ಮೊದಲು, 'ಕನ್ನಡ-ಸಂಸ್ಕೃತಿ' 'ಇತಿಹಾಸ'-ಭಾಷೆಯ ಅಧ್ಯಯನಕ್ಕೆ ಮೀಸಲಿರಿಸಿದ್ದು ಸರಿಯಷ್ಟೆ. ಇದಕ್ಕೂ ಮುನ್ನ ಅರವಿಂದ, ವಿವೇಕಾನಂದ ಕೃತಿಗಳ ಪ್ರಭಾವ; ಗಾಂಧೀಜಿ-ತಿಲಕ್ ರಾಷ್ಟ್ರಭಕ್ತಿಯ ಪ್ರಚೋದನೆ, ಇವುಗಳೊಡನೆ ಅವರು ಬೆಳೆದರು. ಅಸಹಕಾರ ಆಂದೋಲನದಲ್ಲಿ ಆರು ತಿಂಗಳು ಗೃಹಬಂಧನದಲ್ಲಿ ಇರಬೇಕಾಯಿತು; ಪೋಲಿಸರ ಕಾವಲೂ ಇತ್ತು. ಮೊದಲಲ್ಲಿ ಅರವಿಂದ ತತ್ತ್ವಜ್ಞಾನದಿಂದ ಸ್ಫೂರ್ತರಾದ ಶಂ. ಬಾ. ಅವರು ಅರವಿಂದರ ಜೀವನವನ್ನು ಕುರಿತು ಮೊದಲು ಗ್ರಂಥರಚನೆಯನ್ನು ಮಾಡಿದರು (೧೯೨೧). ಅದು ಅವರ ಮೊದಲ ಪುಸ್ತಕ. ರಂಗನಾಥ ದಿವಾಕರರು ಇಂಗ್ಲಿಷಿನಲ್ಲಿದ್ದ ಆರ್. ಡಿ. ರಾನಡೆಯವರ ಉಪನಿಷತ್ತಿಗೆ ಸಂಬಂಧಿಸಿದ ಖ್ಯಾತ ಪುಸ್ತಕವನ್ನು 'ಉಪನಿಷತ್ ರಹಸ್ಯ' ಕನ್ನಡಕ್ಕೆ ತರಬೇಕೆಂದು ಹವಣಿಸುತ್ತಿರುವಾಗ ಅದರಲ್ಲಿ ಮನಃಶಾಸ್ತ್ರಕ್ಕೆ ಸಂಬಂಧಿಸಿದ ಅಧ್ಯಾಯದ ಅನುವಾದವನ್ನು ಜೋಶಿ ಅವರಿಗೆ ನೀಡಿದರು. ಶಾಲೆಯಲ್ಲಿ ಇಂಗ್ಲಿಷನ್ನು ಕ್ರಮಶಃ ಅಧ್ಯಯನ ಮಾಡದೇ ಇದ್ದ ಶಂಬಾ ತನಗೆ ಅನುವಾದ ಸಮರ್ಥವಾಗಿ ಬರುತ್ತೊ ಇಲ್ಲವೋ ಎಂಬ ಅಳುಕು ಇದ್ದೇ ಇತ್ತು. ಅನುವಾದವನ್ನು ಚೆನ್ನಾಗಿ ಮಾಡಿದ್ದನ್ನು ನೋಡಿದ ಶ್ರೀ ದಿವಾಕರರಿಗೆ ಸಂತೋಷವಾಯಿತು. ಅದು ವರೆಗೂ ಇಂಗ್ಲಿಷಿನಲ್ಲಿ ತಾನು ಎಷ್ಟು ಬಲ್ಮೆಯುಳ್ಳವನೆಂಬ ಪ್ರಶ್ನೆಯಿದ್ದದ್ದು ದಿವಾಕರರ ಮಾತಿನಿಂದ ತೀರಿತು. ಒಮ್ಮೆ ಪುಣೆಯ ಡಾ. ವಿನಾಯಕರಾವ್ ಪರಾಂಜಪೆ (ಡೆಕ್ಕನ್ ಕಾಲೇಜಿನಲ್ಲಿ ಖ್ಯಾತ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು) ಎಂಬ ಖ್ಯಾತವಿದ್ವಾಂಸರ ಬಳಿಗೆ ಹೋಗಿದ್ದಾಗ ಅಮೇರಿಕದಿಂದ ಬಂದಿದ್ದ ವಿದ್ವಾಂಸನೊಬ್ಬನೊಡನೆ ಒಂದು ಗಂಟೆಯ ಸುಮಾರು ಚೆನ್ನಾಗಿಯೇ ಮಾತಾಡಿದರಂತೆ. ಶಂಬಾ ತಮ್ಮ ೨೪ ನೆಯ ವಯಸ್ಸಿನಲ್ಲಿ ಇಂಗ್ಲಿಷ್ ಅಕ್ಷರಾಭ್ಯಾಸದಿಂದ ಆರಂಭ ಮಾಡಿದರು. ಕೆಲವೇ ವರ್ಷಗಳಲ್ಲಿ

ಇತಿಹಾಸ- ಸಂಸ್ಕೃತಿ ತತ್ವಜ್ಞಾನ ಗ್ರಂಥಗಳ ವಾಚನ ಅವರಿಗೆ ಶಕ್ಯವಾಯಿತು. ಜೋಶಿಯವರ ಹಠ ಸ್ವಭಾವ ಮತ್ತು ಜ್ಞಾನವನ್ನು ಪಡೆಯಬೇಕೆಂಬ ಹಂಬಲ ಈ ಪ್ರಸಂಗದಿಂದ ವ್ಯಕ್ತವಾಗುತ್ತದೆ.

ಜೋಶಿ ಅವರು ನಡೆದ ಘಟ್ಟಗಳನ್ನು ಸ್ಥೂಲವಾಗಿ ನಾಲ್ಕು ವಿಭಾಗ ಮಾಡಬಹುದೆಂದು ತೋರುತ್ತದೆ. ೧೮೯೬ರಿಂದ ೧೯೧೪ ರ ವರೆಗಿನ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ, ಹುದ್ದೆ, ಗುರ್ಲಹೊಸೂರಿನಿಂದ ಮರಳಿ ಧಾರವಾಡದಲ್ಲಿ ಸ್ಥಳ ಊರುವತನಕ ನಡೆದ ಸಂಗತಿಗಳು ಮೊದಲನೆಯ ಘಟ್ಟವಾದರೆ; ೧೯೧೫ ರಿಂದ ೧೯೩೦ರ ವರೆಗಿನ ಕನ್ನಡ, ಸಂಸ್ಕೃತ, ಇಂಗ್ಲಿಷ್, ಭಾಷೆಗಳ ಅಧ್ಯಯನ, ರಾಷ್ಟ್ರೀಯ ಹೋರಾಟ, ಸ್ವಾತಂತ್ರ್ಯದ ಬಗೆಗಿನ ಕಲ್ಪನೆ, ಜೊತೆಗೆ ಸಂಶೋಧನಾ ಕ್ಷೇತ್ರಕ್ಕೆ ಮೊದಲಹೆಜ್ಜೆ ಇಟ್ಟಿದ್ದು ಎರಡನೆಯ ಘಟ್ಟ; ೧೯೩೦ ರಿಂದ ೧೯೬೯ರ ವರೆಗಿನ ಕನ್ನಡ ನಾಡು-ನುಡಿಗಳ ಬಗೆಗೆ ಅವಿಶ್ರಾಂತ ಬರವಣಿಗೆ, ಪುಸ್ತಕ ಪ್ರಕಟನೆ ೧೯೪೦ರ ಸುಮಾರಿಗೆ ಋಗ್ವೇದದ ಮೊದಲನೆಯ ಮಂಡಲ ಕನ್ನಡ ಭಾಷಾಂತರವನ್ನು ಶ್ರೀ ಗಣೇಶ ರಾಮಕೃಷ್ಣ ಉಗ್ರ ಮತ್ತು ವಿದ್ವಾನ್ ಸಾಂಬಶಾಸ್ತ್ರೀ ಗೋಕರ್ಣ ಈ ಮಿತ್ರರಿಂದ ಭಾಷಾಂತರಿಸಿ ಪ್ರಕಟನೆ ಮಾಡಿದ್ದರು. ಇದಕ್ಕೆ ಬಹಳ ಅಮೂಲ್ಯವಾದ ಮುನ್ನುಡಿಯನ್ನು ವಿಖ್ಯಾತವೇದಜ್ಞರೆಂದು ಹೆಸರಾದ ಡಾ. ಎ. ವೆಂಕಟಸುಬ್ಬಯ್ಯನವರು ಬರೆದರು. ಇದರಿಂದಾಗಿ ಕ್ರಮವಾದ ಅರ್ಥಪದ್ಧತಿಯನ್ನು ಕಂಡುಕೊಳ್ಳಬೇಕೆಂಬ ಹೊಳಹು ಮೂರನೆಯ ಘಟ್ಟವಾದರೆ; ೧೯೭೦ರಿಂದ ೧೯೮೬ರ ವರೆಗೆ ವೇದವ್ಯಾಸಂಗ, ಸಂಸ್ಕೃತಿ ಅಧ್ಯಯನಗಳು ನಾಲ್ಕನೆಯ ಘಟ್ಟ.

ಸಂಪುಟದ ತೋರಣ

ಪ್ರಸ್ತುತ ಸಂಪುಟವು ಹಲವು ಬಗೆಯ ವಾಗ್ವಾದಗಳಿಗೂ ಸಂವಾದಗಳಿಗೂ ಕಾರಣವಾಗುವ ಮಹತ್ವವನ್ನು ಪಡೆದಿದೆ. ಈ ವಾಗ್ವಾದಗಳ ದಿಕ್ಕು ಮತ್ತು ದೆಸೆಗಳು ಹಲವು ಬಗೆಯವು. ಈ ವಾಗ್ವಾದಗಳಿಗೆ ಈ ಶತಮಾನದ ಸಾಂಸ್ಕೃತಿಕ ಪರಿವರ್ತನೆ ಹಾಗೂ ಸಮಾಜೋ-ರಾಜಕೀಯ ಎಚ್ಚರಗಳು ಪರ್ಯಾಯವಾಗಿ ಕಾರಣವಾಗಿವೆ. ಈ ಸಂಗತಿಗಳನ್ನು ಪ್ರಸ್ತುತ ಸಂಪುಟದಲ್ಲಿ ಸಂಕಲನಗೊಂಡಿರುವ ಬರೆಹಗಳು ಸಾಕ್ಷ್ಯವನ್ನು ನುಡಿಯುತ್ತವೆ. ಈ ಸಂಕಲನದಲ್ಲಿರುವ ಕೃತಿಗಳು ಮೂರು ಆಶಯದ ನೆಲೆಗಳನ್ನು ಅಪ್ಪಿ ಹಿಡಿದಿವೆ. ಈ ನೆಲೆಗಳು ಜೀವನ ಚರಿತ್ರೆ, ವೈಚಾರಿಕತೆ ಮತ್ತು ಸಾಹಿತ್ಯಕ ಆಕೃತಿಗಳ ಪಾರಸ್ಪರಿಕ ನೆಲೆಗಳನ್ನು ಒಳಗೊಂಡಿವೆ. ಇವು ಚಾರಿತ್ರಿಕ ಕಾಲಗತಿಯಲ್ಲಿ ಮುಖ್ಯ ನೆಲೆಗಳನ್ನೂ ಸಾಂಸ್ಕೃತಿಕ ಜಗತ್ತಿನ ಬಹುರೂಪೀ ನೆಲೆಗಳನ್ನೂ ಹಿಡಿಯಲು ಆಳವಾಗಿ ಯತ್ನಿಸಿವೆ. ಈ ಸಂಗತಿಯು ಅರವಿಂದ ಘೋಷರ ಜೀವನ ಚರಿತ್ರೆ ಮತ್ತು ಟಿಳಕ ಕಥಾಮೃತಸಾರದಲ್ಲಿಯೂ ಅಗ್ನಿವಿದ್ಯೆ-ಎದ್ದೇಳು ಕನ್ನಡಿಗಾ ಮತ್ತು ಯಕ್ಷಪ್ರಶ್ನೆ, ಸಮಾಜದರ್ಶನಗಳಲ್ಲಿಯೂ ಸೌಂದರ್ಯ ವಿಚಾರ, ಕರ್ಣನ ಮೂರುಚಿತ್ರಗಳಲ್ಲಿಯೂ ಕಂಡು ಬರುತ್ತದೆ. ಶಂಬಾ ಅವರ ಬಾಳದಾರಿಯ ಬದುಕು ಪರ್ಯಾಯವಾಗಿ ಬೆಳವಣಿಗೆ ಪಡೆದುದನ್ನು ಇಲ್ಲಿ ಕಾಣಬಹುದು. ಶಂಬಾ ಅವರು ಜೀವನಚರಿತ್ರೆ ಬರೆಯುವಾಗ ಇದ್ದ ರಾಷ್ಟ್ರಕ ಮನೋಭಾವ; ವೈಚಾರಿಕ ಸಾಹಿತ್ಯವನ್ನು ಬರೆಯುವಾಗ ಇದ್ದ ಭವಿತವ್ಯದ ತತ್ವಜ್ಞಾನ, ಸಾಹಿತ್ಯಕೃತಿಯನ್ನು ಕುರಿತು ವಿಶ್ಲೇಷಿಸುವಾಗ ಇದ್ದ ಸಾಹಿತ್ಯಕ ತತ್ವಜ್ಞಾನ- ಇವುಗಳನ್ನು ಪರಸ್ಪರ ಒಂದರ ಜತೆ ಒಂದು ಸೇರಿಕೊಂಡಿವೆ. ಇವು ಬೇರೆ ಬೇರೆಯಾಗದೆ 'ಜೀವನ'ವನ್ನು ಈ ಮೂರೂ ನೆಲೆಗಳಲ್ಲಿ ತಿಳಿಯುವ ಹಂಬಲ ಉದ್ದಕ್ಕೂ ಇದೆ. ಶಂಬಾ ಅವರ ಬಗೆಗೆ ಬರೆಯುವಾಗ, ನಮ್ಮ ವಿದ್ವಾಂಸರು ಬಹುತೇಕವಾಗಿ ಕನ್ನಡಸಂಸ್ಕೃತಿ ಕುರಿತು ಯೋಚಿಸಿದ ನೆಲೆಗಳನ್ನು ಚರ್ಚೆಗೊಳಪಡಿಸುತ್ತಾರೆ. ಇಲ್ಲವೆ, ಅವರು ಆನಂತರ ಸಾಂಸ್ಕೃತಿಕ ತತ್ವಜ್ಞಾನಿಯಾಗಿ ಬರೆದ 'ವೈವಸ್ವತ ಮತ್ತು ಸ್ವಾಯಂಭುವ' ಸಾಂಸ್ಕೃತಿಕ ಪ್ರತಿಮಾಸಂಕೇತಗಳ ಕುರಿತು ಚರ್ಚೆಗೆ ತೆಗೆದುಕೊಳ್ಳುತ್ತಾರೆ. ಈ ಚರ್ಚೆಗಳ ಮೂಲಬೀಜ ಅವರು ಬರೆದ ಜೀವನ ಚರಿತ್ರೆಗಳಲ್ಲಿಯೂ ವೈಚಾರಿಕ ಕೃತಿಗಳಲ್ಲಿಯೂ ಸಾಹಿತ್ಯಕ-ವಿಶ್ಲೇಷಣೆಗಳಲ್ಲಿಯೂ ಅಡಗಿರುವುದನ್ನು ನಮ್ಮ ವಿದ್ವಾಂಸರು ಗಮನಿಸಬೇಕಾಗಿದೆ. ಈ ಸಂಕಲನದ ಬರೆಹಗಳು ಪರ್ಯಾಯವಾಗಿ ಈ ಬಗೆಯ ಓದಿಗೆ ಸಜ್ಜುಗೊಳಿಸುವ ಇರಾದೆ ಇದೆ.

ಬಾಳ ಒಳಬೆಳಕಿನ ಚರಿತ್ರೆಗಳು

ಶಂಬಾ ಜೋಶಿಯವರು ತಮ್ಮ ಜೀವಿತದಲ್ಲಿ ಎರಡು ಜೀವನ ಚರಿತ್ರೆಗಳನ್ನು ಬರೆದರಷ್ಟೆ. ಅವೆರಡು ಅವರ ಬಾಳದಾರಿಯ ಒಳನಡೆ ಹಾಗೂ ಹೊರನಡೆಗಳನ್ನು ಪರ್ಯಾಯವಾಗಿಯೂ ಸೂಕ್ಷ್ಮವಾಗಿಯೂ ಸಂಕೇತಿಸುತ್ತವೆ. ಶಂಬಾ ಅವರು ೧೯೧೯ ರಲ್ಲಿ ಧಾರವಾಡದ ಟ್ರೈನಿಂಗ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಆಗ ಅವರ ವಯಸ್ಸು ಇಪ್ಪತ್ತು ಮೂರು. ಒಂದೆಡೆ ರಾಷ್ಟ್ರೀಯ ಮನೋಧರ್ಮ ಅವರ ತಲೆಯ ತುಂಬಾ ತುಂಬಿತ್ತು; ಮತ್ತೊಂದೆಡೆ ದೇಶದ ಒಟ್ಟು ವ್ಯವಸ್ಥೆ, ಪಾರತಂತ್ರ್ಯದಲ್ಲಿ ಬಾಳುವ ಹೊಣೆಗೇಡಿತನ, ಅದರಿಂದ ಬಿಡುಗಡೆ ಪಡೆಯುವ ಹಂಬಲವಿತ್ತು. ಲೋಕಮಾನ್ಯ ತಿಲಕ್ - ಗಾಂಧೀಜಿ ಇವರಿಬ್ಬರ ಬರೆಹಗಳು, ಜೀವನ ನೋಟಗಳು ಅವರ ಮನಸ್ಸನ್ನು ಕಾಡಿದ್ದುವು. ಪ್ರಾಚೀನ ಸಾಹಿತ್ಯ, ತತ್ತ್ವಜ್ಞಾನದ ಗಾಢ ಓದು ಜತೆಗಿದ್ದುವು. ಈ ಹಿನ್ನೆಲೆಯಲ್ಲಿ ಇವೆರಡು ಜೀವನ ಚರಿತ್ರೆಗಳನ್ನು ಬರೆದರು. ಮೊದಲ ಜೀವನ ಚರಿತ್ರೆ ಬರೆಯುವಾಗ 'ಜೀವನ ಚರಿತ್ರೆ' ಎಂಬ ಆಕೃತಿ - ಆಶಯ ಇಷ್ಟವಾಗಿತ್ತು. ಎರಡನೆಯ ಜೀವನ ಚರಿತ್ರೆ ಬರೆಯುವ ಕಾಲಕ್ಕೆ ಆಕೃತಿ-ಆಶಯವು ಸಂಶಯದ ಒಳಗುದಿಯಲ್ಲಿ ಇದ್ದಂತೆ ತೋರುತ್ತದೆ. ಅವರು ಬರೆದ 'ಟಿಳಕ ಕಥಾಮೃತಸಾರ' ಪುಸ್ತಿಕೆಯ ಮೇಲೆ ಅವರ ಹೆಸರು ಇಲ್ಲದೆ ಇರುವುದು ನನ್ನ ಅಭಿಪ್ರಾಯವನ್ನು ಇನ್ನಷ್ಟು ದೃಢಪಡಿಸುತ್ತದೆ. ಆಗ್ಗೆ 'ಕಣ್ಮರೆಯಾದ ಕಂನಡ' ಹೊರಬಂದಿತ್ತು. ಅವರು ಸಾಂಸ್ಕೃತಿಕ ಸತ್ಯಾನ್ವೇಷಣೆಯ ಜಾಡು ಹಿಡಿದಿದ್ದರು; ಅದರ ನಡೆಯಲ್ಲಿ ಸಾಕಷ್ಟು ದೂರ ಸಾಗಿದ್ದರು.

ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತ್ರವು ಪ್ರಕಟವಾಗಿದ್ದು ೧೯೨೧ರಲ್ಲಿ. ಇದು ಕಂನಡದಲ್ಲಿ ಅರವಿಂದರ ಬಗೆಗೆ ಬಂದ ಮೊದಲ ಪುಸ್ತಕ. ಧಾರವಾಡದ 'ಗೆಳೆಯರ ಗುಂಪು' ರಾಷ್ಟ್ರೀಯ ತತ್ತ್ವಜ್ಞಾನದಿಂದ ಪ್ರೇರಿತರಾಗುವುದಕ್ಕೆ ಇದು ಪರ್ಯಾಯವಾಗಿ ಕಾರಣವಾಯಿತು. ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರು ಅರವಿಂದ ಘೋಷರ ಭಕ್ತರೂ ಉಪಾಸಕರೂ ಆಗಿದ್ದರು. ಅರವಿಂದರ 'ದೈವೀಪ್ರೇರಣೆ'ಯ ಗಾಳಿ ಧಾರವಾಡದ ಸಾಂಸ್ಕೃತಿಕ ಜಗತ್ತಿನ ಮೇಲೆ ವ್ಯಾಪಕವಾಗಿಯೇ ಬೀಸಿತ್ತು. ಶಂಬಾ ಅವರು 'ಜೀವನ ಚರಿತ್ರೆ' ಬರೆಯುವಾಗ ಕನ್ನಡದಲ್ಲಿ ಎಂ. ಎಸ್. ಪುಟ್ಟಣ್ಣ ಅವರು ಬರೆದ 'ಕುಣಿಗಲ್ ರಾಮಶಾಸ್ತ್ರಿಗಳವರ ಚರಿತ್ರೆ (೧೯೧೦) ಡಿ.ವಿ. ಗುಂಡಪ್ಪ ಅವರು ಬರೆದ ದಿವಾನ್ ರಂಗಾಚಾರ್ಯ (೧೯೧೧) ಮತ್ತು ಗೋಪಾಲಕೃಷ್ಣ ಗೋಖಲೆ (೧೯೧೫) ಇವು ಮೂರುಮಾತ್ರ ಪ್ರಕಟವಾಗಿದ್ದುವು. ಕುಣಿಗಲ್ ರಾಮಶಾಸ್ತ್ರಿಗಳವರ ಜೀವನ ಚರಿತ್ರೆಯು ಒಬ್ಬ ಆರ್ಷೇಯ ಸಂಪ್ರದಾಯದ ಬ್ರಾಹ್ಮಣ ವಿದ್ವಾಂಸನ ಜೀವನವನ್ನು ಕುರಿತದ್ದಾಗಿತ್ತು. ಇಲ್ಲಿ ವ್ಯಕ್ತಿ ಮತ್ತು ಪರಿಸರದ ವಿವರಗಳು 'ಕಥಾನಕ'ದ ಮಾದರಿಯಲ್ಲಿ ರಚಿತಗೊಂಡಿವೆ. ಆದರೆ, ಡಿ.ವಿ.ಜಿ., ಅವರ ಕೃತಿಗಳು ವ್ಯಕ್ತಿಯ ಆಕೃತಿ, ಹಿರಿಮೆ, ಜೀವನ ಪರ್ಯಂತರಗಳನ್ನು ಕುರಿತದ್ದಾಗಿದೆ. ಶಂಬಾ ಅವರು ಇವರಿಬ್ಬರ ನಡೆಗಿಂತ ಬೇರೆ ಬಗೆಯ ದಾರಿಯನ್ನು ಹಿಡಿದಿದ್ದಾರೆ. ಇದು ತುಂಬಾ ವಿಶೇಷದ್ದು. ಈ ನಡೆಯು ಆಂತರಿಕ ವ್ಯಕ್ತಿತ್ವವನ್ನು ಕುರಿತು ಚಿಂತಿಸುತ್ತದೆ. ಶಂಬಾ ಒಂದು ಕಡೆ ಹೇಳಿರುವಂತೆ "ಕೃತಿಯೇ ಆಕೃತಿಯನ್ನು ನಿರ್ಮಾಣ ಮಾಡಬೇಕು, ವ್ಯಕ್ತಿಗಿಂತ ಕೃತಿ; ಕರ್ಮ ದೊಡ್ಡದು" ಈ ಹಿನ್ನೆಲೆಯು ಇವೆರಡು ಜೀವನ ಚರಿತ್ರೆಗಳಲ್ಲಿ ಸಫಲವಾಗಿ ಮೂಡಿವೆ. ಇದಕ್ಕೆ ಕಾಲಧರ್ಮವೂ ಸಹಕಾರಿಯಾಗಿತ್ತು. ಜೀವನದ ಬಾಹ್ಯವಿವರಗಳಿಗಿಂತ ಆಂತರಿಕ ವಿವರಗಳೇ ಹೆಚ್ಚಾಗಿರುವುದು ವಿನಾ ಕಾರಣವಲ್ಲ. ಈ ಹಿನ್ನೆಲೆಯಲ್ಲಿ ಅರವಿಂದರ ಜೀವನವು ಸಂಕ್ಷಿಪ್ತವಾಗಿ ಮೂಡಿ ಬಂದಿದೆ. ಒಂದು ದೃಷ್ಟಿಯಿಂದ ಇದು 'ಜೀವನ ಚರಿತ್ರೆ'ಗೆ ಹೊಸ ವ್ಯಾಖ್ಯೆಯನ್ನೇ ನೀಡುತ್ತದೆ. ಈ ಕೃತಿಯು ಶಂಬಾ ಅವರ ರಾಷ್ಟ್ರಕ ಮನೋಧರ್ಮ, ಭಾರತೀಯ ತತ್ತ್ವಜ್ಞಾನದ ಹಿರಿಮೆ, ಯೋಗ-ಜ್ಞಾನಮಾರ್ಗದ ನೆಲೆಗಳ ಆಸ್ಥೆಗಳನ್ನು ತಿಳಿಸುತ್ತದೆ. ಈ ಆಶಯವು ಆನಂತರ ಬದಲಾವಣೆ ಪಡೆದದ್ದು ಬೇರೆಯೇ ಆದ ಸಂಗತಿ. ಎಂಟು ಪ್ರಕರಣಗಳಿರುವ ಈ ಜೀವನ ಚರಿತ್ರೆಯು ಪೀಠಿಕೆ, ವಂಶವೃತ್ತ, ಅಧ್ಯಯನ, ಪೂರ್ವಾಶ್ರಮ, ದೇಶಸೇವೆ, ಯೋಗಸಾಧನೆ, ಮತಗಳು ಮತ್ತು ಉಪಸಂಹಾರವೆಂದು ಎಂಟು ಪ್ರಕರಣಗಳಿಂದ ಕೂಡಿದೆ. ಈ ನಿರೂಪಣಾ

ಕ್ರಮವು ಅರವಿಂದರ ಬದುಕಿನ ಘಟನಾವಳಿಗಳನ್ನು ಹಾಗೂ ಒಳ ವಿವರಗಳನ್ನು ಒದಗಿಸಿ ಕೊಡುವುದಕ್ಕಿಂತ ; ಬದುಕಿನ ಪ್ರೇರಣೆಯನ್ನು ಕಂಡುಕೊಳ್ಳುವ ನಿರಂತರ ಯತ್ನ ಕಂಡುಬರುತ್ತದೆ. ದೇಶಸೇವೆ ಯನ್ನು ಕುರಿತು ಬರೆಯುವಾಗ ಶಂಬಾ ಹೇಳುವ ಈ ಮಾತುಗಳನ್ನು ಗಮನಿಸಬಹುದು.

> ಶ್ರೀ ಅರವಿಂದರು ತಮ್ಮ ಆಯುಷ್ಯದ ಎರಡು ಅವಸ್ಥೆಗಳನ್ನು ಮುಗಿಸಿ, ಮೂರನೆಯ ಅವಸ್ಥೆಯಲ್ಲಿ ಪ್ರವೇಶಿಸಿದರು. ಪೂರ್ವ ವಯಸ್ಸಿನಲ್ಲಿದ್ದ ವಿಕ್ಷಿಪ್ತತನವು ಈಗ ಒಂದು ವಿಶಿಷ್ಟ ಸ್ವರೂಪವನ್ನು ಧರಿಸಿತು. ಸಾಮಾನ್ಯರಂತೆ ಉಂಡುಟ್ಟು ಸ್ವಸ್ಥವಾಗಿರುವದನ್ನು ಬಿಟ್ಟು ಅವರು ಲೋಕಸೇವೆಗೆ ಟೊಂಕಕಟ್ಟಿದ್ದು ವಿಕ್ಷಿಪ್ತತನವೇ ಇರುತ್ತದೆ. ತನ್ನ ಪ್ರವೃತ್ತಿಯ ಅಥವಾ ಅಂತಃಕರಣದೊಳಗಿನ ಅಸ್ಫುಟಧ್ವನಿಯು ಸ್ಪಷ್ಟ ಬೋಧವಾಗದ್ದ ರಿಂದ ಮನುಷ್ಯನು ಹಲವು ಸಾರೆ ಸಾಮಾನ್ಯರಿಗೆ ವಿಚಿತ್ರವಾಗಿ ತೋರುವ ಕೃತಿಗಳನ್ನು ಮಾಡುತ್ತಿರುತ್ತಾನೆ. ಜ್ಞಾನದಿಂದ ಅಂತಃಸ್ಫೂರ್ತಿಯ ಬೋಧವು ಆಯಿತೆಂದರೆ ಮನುಷ್ಯನು ಸರಿಯಾದ ಮಾರ್ಗಕ್ಕೆ ಬರಲಿಕ್ಕೆ ಹತ್ತುವದುಂಟು, ಪ್ರತಿಯೊಬ್ಬನಿಗೆ ಒಂದುತರದ ಅಂತಃಪ್ರೇರಣೆಯಾಗುತ್ತಿರುವದುಂಟು. ಆದರೆ, ಆ ಪ್ರೇರಣೆಯ ಸರಿಯಾದ ಅರ್ಥವು ತಿಳಿಯದ್ದರಿಂದಲೂ, ಅದನ್ನು ಕೃತಿಯಲ್ಲಿ ಹೇಗೆ ತರಬೇಕೆಂಬ ಜ್ಞಾನವಿಲ್ಲದ್ದರಿಂದಲೂ, ಜ್ಞಾನವಿದ್ದರೂ ಅನೇಕಸಾರೆ ಸತ್ಯವೆಂದು ತಿಳಿದ ಸಂಗತಿ ಗಳನ್ನು ಆಚರಿಸುವ ನೈತಿಕಧೈರ್ಯದ ಅಭಾವವಿರುವದರಿಂದಲೂ ಮನುಷ್ಯನು ಬೆಳಕಿಗೆ ಬರುವದಿಲ್ಲ. ಈಶ್ವರನು ಕೊಟ್ಟ ತನ್ನ ಪಾಲಿನ ಸಂದೇಶವನ್ನು ಜಗತ್ತಿಗೆ ಮುಟ್ಟಿಸುತ್ತಿರುವದಿಲ್ಲ. ಅಪೂರ್ಣಾವಸ್ಥೆಯಲ್ಲಿಯೇ ಹೊರಟು ಹೋಗುವನು. ಶ್ರೀ ಅರವಿಂದರಿಗೆ ಅವರ ತಂದೆಯು ಐ.ಸಿ.ಎಸ್. ಕ್ಕೆ ಕಳಿಸಿದರೂ, ಪ್ರಸಂಗವು ಸಿಗುತ್ತಲೆ ಅವರು ತಮ್ಮ ಪ್ರವೃತ್ತಿಯಂತೆ ಇಷ್ಟಮಾರ್ಗವನ್ನೇ ಹಿಡಿದರು. (ಸಂಪುಟ ೬, ಪುಟ : ೨೫)

ಈ ಮಾತುಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಕೆಲವು ಅಂಶಗಳನ್ನು ಚರ್ಚಿಸಬಹುದಾಗಿದೆ. ಈ ಮಾತಿನಲ್ಲಿ, ಶಂಬಾ ಅವರ ಸಂಶೋಧನ ಪ್ರವೃತ್ತಿಯ ಸುಳುಹುಗಳು ದೊರಕುತ್ತವೆ. ಅರವಿಂದರ ಜೀವನ ಚರಿತ್ರೆ ಅವರ ಮೊದಲ ಕೃತಿಯಷ್ಟೆ. ಲೇಖನ ವ್ಯವಸಾಯದಿಂದ ಬದುಕುವ ಭ್ರಮೆಯಿಂದ ಧಾರವಾಡಕ್ಕೆ ಶಂಬಾ ಬಂದರಂತೆ. ಆನಂತರ ಈ ಭ್ರಮೆಯಿಂದ ಹೊರಬಂದರು. ಅವರು ಲೇಖನ ವ್ಯವಸಾಯವನ್ನು ಕೇವಲ ಜೀವಿಕೆಯಾಗಿ ಮಾಡಿಕೊಳ್ಳಲಿಲ್ಲ. ಅದರ ಬದಲು ತಮ್ಮೊಳಗೆ ತುಡಿಯುತ್ತಿದ್ದ ತುಮುಲಗಳನ್ನು ಪ್ರಕಟಿಸಿಕೊಳ್ಳಲು ಪರ್ಯಾಯವಾಗಿ ಪ್ರಕಟಿಸಿಕೊಂಡರು. ಏಕೆಂದರೆ: ಶಂಬಾ ಬರೆದದ್ದು ಸ್ವಾತಂತ್ರ್ಯ ಹೋರಾಟದ ಇಬ್ಬರು ಮಹಾನ್ ಚೇತನಗಳನ್ನು ಕುರಿತೇ. ಶಂಬಾ ಅವರಿಗೆ 'ಸ್ವಾತಂತ್ರ್ಯ' ಪ್ರಿಯವಾದದ್ದೇ. ಆದರೆ, ಬದುಕಿನ ವಿಶ್ಲೇಷಣೆ, ಅದರ ಆಕೃತಿ-ಆಶಯ ಹಾಗೂ ತತ್ವಚಿಂತನೆಗಳನ್ನೆ ಪ್ರಧಾನವಾಗಿ ಒಳಗೊಳ್ಳುವ ಹೊಸಕ್ರಮವೊಂದನ್ನು ಉಪಕ್ರಮಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ನೈತಿಕ ಬೆಂಬಲವನ್ನು ಸೂಚಿಸಿದರೆಂಬುದು ನಾವು ಗಮನಿಸತಕ್ಕ ಅಂಶಗಳಲ್ಲಿ ಒಂದು. ಈ ಕೃತಿಯ ಉದ್ದಕ್ಕೂ ಪ್ರಕಟಗೊಳ್ಳುವ ಸ್ವಾತಂತ್ರ್ಯ ಹೋರಾಟದ ವಿವಿಧ ಮಜಲುಗಳನ್ನು ಅವುಗಳ ಹಿನ್ನೆಲೆಗಳನ್ನು ಅಭಿಪ್ರಾಯ ಭೇದಗಳನ್ನು ಓದಿದಾಗ ಈ ಅಂಶವು ಸತ್ಯವೆಂದು ಮನವರಿಕೆ ಆಗುತ್ತದೆ. ಶಂಬಾ ಅವರು ಮುನ್ನುಡಿಯಲ್ಲಿ;

> ಭವಿಷ್ಯತ್ಕಾಲವು ಗಾಢಾಂಧಕಾರದೊಳಗಿಂದ ಸಾಮಾನ್ಯ ಜನರಿಗೆ ಪ್ರವಾಸ ಮಾಡಲಿಕ್ಕೆ ಇತಿಹಾಸದ ವಿದ್ಯುತ್ ಪ್ರಕಾಶವು ಬಹಳ ಸಹಾಯ ಮಾಡುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಅಲ್ಪ ಪ್ರಯತ್ನವು ಮಾಡಲ್ಪಟ್ಟಿದೆ. (ಸಂಪುಟ ೬, ಪುಟ : ೭)

ಈ ಸಂಗತಿಯು ಬಹುಮುಖ್ಯವಾಗಿದೆ. ಅವರು ಮುಂದೆ ಬರೆದ ಎಲ್ಲ ಕೃತಿಗಳಿಗೂ ಇದು ಬೀಜರೂಪದ ಸಾಂಸ್ಕೃತಿಕ ಮಂತ್ರವಾಗಿದೆ. ಅವರು ಮತ್ತೊಂದು ಕಡೆ ವಿವರಿಸುವ ಮಾತುಗಳು ಹೀಗಿವೆ:

> ಹಲವು ತರದ ವ್ಯಸನಗಳೂ, ಚೈನೀ ವಸ್ತುಗಳೂ, ದುಂದುಗಾರಿಕೆಯೂ ಜನರಲ್ಲಿ ಹೆಚ್ಚಾಗಹತ್ತಿತು. ಆಹಾರದ ಪದಾರ್ಥಗಳು ತುಟ್ಟಿಯಾದವು. ಹೈನವು ಕಡಿಮೆಯಾಯಿತು. ಸಾಂಸಾರಿಕ ಭಾರವನ್ನು ಹೇಗೆ ಸಾಗಿಸಬಹುದೆಂಬ ಚಿಂತೆಯಿಂದ ಸಾಮಾನ್ಯ ಜನರು ಕ್ಷೀಣರಾಗಹತ್ತಿದರು. ಮನೆತನಕ್ಕೆ ಒಬ್ಬನು ದುಡಿದರೆ ಹಿಂದಕ್ಕೆ ಹತ್ತು ಜನರ ಸಂಸಾರವು ಸುಖವಾಗಿ ಸಾಗುತ್ತಿತ್ತು. ಅಲ್ಲಿ ಈಗ ಹೆಂಡರು ಮಕ್ಕಳೂ ಕೂಡಿ ದುಡಿದರೂ ಹೊಟ್ಟೆತುಂಬವದು ಕಠಿಣವಾಗಿದೆ. ಹೀಗಾಗಿ ಶಾರೀರಿಕ ಹ್ರಾಸವು ಹೆಚ್ಚಾಯಿತು. ಎಲ್ಲಿ ನೋಡಿದಲ್ಲಿ ಅಕಾಲದಲ್ಲಿ ಬಂದ ತಾರುಣ್ಯದ ನಾಶಮಾಡಿ ಸಪ್ಪನ್ನ ಮೋರೆ ಮಾಡಿಕೊಂಡು ತಿರುಗುವ ಸುದಾಮರಾಯರೇ ಕಾಣುವರು. ಹೀಗೆ ಶಾರೀರಿಕ ಮತ್ತು ಮಾನಸಿಕ ಹ್ರಾಸವು ದೇಶದಲ್ಲಿ ಹೆಚ್ಚಾಗಿ ಒಂದು ತರದ ಅಸಂತೋಷವು ದೇಶವನ್ನಲ್ಲ ವ್ಯಾಪಿಸಿತು. "ರಾಜಾ ಕಾಲಸ್ಯ ಕಾರಣಮ್" ದೇಶದ ಪರಿಸ್ಥಿತಿಗೆ ಬಹ್ವಂಶದಿಂದ ರಾಜನೇ ಕಾರಣನೆಂಬುದನ್ನು ಜನರು ಮರೆತಿದ್ದರು. ಅದನ್ನು ವೀರಪಕ್ಷದವರು ವೀರತನದಿಂದ ತಿಳಿಸಹತ್ತಿದರು. ವೀರಪಕ್ಷದ ಉದಯಕಾಲವೆಂದರೆ ಕರ್ಝನ್ ಸಾಹೇಬರ ಇಲ್ಲಿಯ ಆಳಿಕೆಯ ಅಂತ್ಯಕಾಲವು. ಕರ್ಝನ್ ಸಾಹೇಬರು ಬಹು ಉಪದ್ವಾಪೀ ವ್ಹಾಯಿಸರಾಯರು. ತಮ್ಮ ಆಳಿಕೆಯಲ್ಲಿ ಹಿಂದೂಜನರ ಅಪಮಾನವನ್ನು ಹಲವು ತರದಿಂದ ಮಾಡಿದರು. ಯುನಿವ್ಹರ್ಸಿಟಿ ಕಮೀಶನದಿಂದ ವಿದ್ಯಾಲಯಗಳ ಕಾರ್ಯಕ್ಷೇತ್ರವನ್ನು ಸಂಕುಚಿತ ಮಾಡಿದರು. ಪ್ರೆಸ್‌ಆಕ್ಟಿನಿಂದ ಲೇಖಕರ ಸ್ವಾತಂತ್ರ್ಯಹರಣ ಮಾಡಿದರು. ಹೀಗೆ ಒಂದೇ, ಎರಡೇ, ಅನೇಕ ಕೃತ್ಯಗಳಿಂದ ಬಹುಜನ ಸಮಾಜಕ್ಕೆ ಅಪ್ರಿಯರಾದರು. ಇವರು ಮಾಡಿದ ಎಲ್ಲ ಕೃತ್ಯಗಳಲ್ಲಿ ಜನರನ್ನು ಹೆಚ್ಚು ರೊಚ್ಚಿ ಗೆಬ್ಬಿಸಲಿಕ್ಕೆ ಕಾರಣವಾದದ್ದು ವಂಗದೇಶದ ಭಂಗವು.
>
> ಕಲಕತ್ತೆಯಲ್ಲಿ ೧೯೦೬ರಲ್ಲಿ ನೆರೆದ ಪಿತಾಮಹ ದಾದಾಭಾಯಿ ನವರೋಜಿಗಳ ಅಧ್ಯಕ್ಷತೆಯ ಕೆಳಗೆ ಆದ ರಾಷ್ಟ್ರೀಯ ಸಭೆಯಲ್ಲಿ ತರುಣ ವೀರಪಕ್ಷದ ಜಯವಾಗಿ ಸ್ವರಾಜ್ಯವು ಹಿಂದುಸ್ತಾನದ ಧ್ಯೇಯವೆಂದು ನಿಶ್ಚಿತವಾಯಿತು. ಸ್ವರಾಜ್ಯ ಸಂಪಾದನೆಯ ಸಲುವಾಗಿ ಬಹಿಷ್ಕಾರ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣಗಳೆಂಬ ಉಪಾಯಗಳಿಂದ ಕಾರ್ಯಕ್ಕೆ ಹತ್ತಬೇಕೆಂದು ಗೊತ್ತಾಯಿತು. ಈಗಿನ ಅಸಹಕಾರವು ಹಿಂದಕ್ಕೆ ಹೊರಟ ಬಹಿಷ್ಕಾರ ಯೋಗದ ತಿದ್ದಿಬೆಳಿಸಿದ ಹೊಸ ಆವೃತ್ತಿಯೆಂದೇ ಹೇಳಬಹುದು.
>
> ಮಂದಪಕ್ಷದವರು ವೀರಪಕ್ಷದವರಿಂದ ಸಿಡಿದು ಹೋದದ್ದು ಸರಕಾರಕ್ಕೆ ಅನುಕೂಲ ವಾಯಿತು. ತರುಣ ಪಕ್ಷದ ಮಾರ್ಗಗಳು ಸೇರದಿದ್ದರೆ ಮಂದಪಕ್ಷದವರು ಸುಮ್ಮನೆ ಕೂಡ್ರಬೇಕಾಗಿತ್ತು. ಮಂದಪಕ್ಷದವರಿಗೆ ಹೇಗೆ ದೇಶದ ಹಿತವೇ ಸಾಧ್ಯವಾಗಿತ್ತೋ ಅದರಂತೆ ವೀರಪಕ್ಷದವರಿಗೂ ದೇಶದ ಕಲ್ಯಾಣವೇ ಬೇಕಾಗಿತ್ತು. ವೀರಪಕ್ಷದವರ ವಿರುದ್ಧ ಸಿಕ್ಕಸಿಕ್ಕ ಟೀಕೆಗಳನ್ನು ಬರೆದು ಮಂದಪಕ್ಷದವರು ಘೋರತರದ ಪಾಪಮಾಡಿದರು. ಕೆಲವು ಮಂದಪಕ್ಷದ ವೃತ್ತಪತ್ರಕಾರರು ವೀರಪಕ್ಷದವರೆಂದರೆ ಬಂಡುಗಾರರೆಂದು ಸಹ ಸಂಶಯ ತಕ್ಕೊಂಡರು! ಸರಕಾರಕ್ಕೆ ಬೇಕಾದದ್ದು ಇದೇ ಮಾತು. ಅದನ್ನು ನಮ್ಮ ಜನರೇ ಮಾಡಿಕೊಟ್ಟ ಬಳಿಕ ಅವರದೇನು ಹೋಗುತ್ತದೆ?

> ನಮ್ಮ ಜನರು ಚಾಡಿಬುರುಕರಾಗಿ ತಮ್ಮವರ ವಿರುದ್ಧವಾಗಿ ಅಧಿಕಾರಿಗಳ ಪ್ರೀತಿಯನ್ನು ಸಂಪಾದಿಸುವ ಇಚ್ಛೆಯಿಂದ ಹೇಡಿತನದ ಕೃತ್ಯವನ್ನು ಮಾಡಹತ್ತಿದರೆ ದೇಶಕ್ಕೆ ಊರ್ಜಿತ ಸ್ಥಿತಿಯು ಹೇಗೆ ಬರಬೇಕು? ಒಂದೇ ಹಡಗದಲ್ಲಿ ಕುಳಿತ ಜನರ ಹಾಗೆ ಹಿಂದುಸ್ತಾನ ವಾಸಿಗಳ ಸ್ಥಿತಿಯಿದೆ. ಹಿಂದೂ ಇರಲಿ, ಮುಸಲ್ಮಾನನಿರಲಿ, ಯಾರೇ ಇರಲಿ, ಪರಸ್ಪರರ ಹಿತವು ಪರಸ್ಪರರನ್ನೂ ಅವಲಂಬಿಸಿದೆ. ಹೀಗಿದ್ದು ತಾವು ಕುಳಿತ ಹಡಗಕ್ಕೆ ತೂತು ಕೆಡಹುವ ಆತ್ಮವಂಚಕ ಕೃತ್ಯವನ್ನು ಮಾಡಿದರೆ ಅದರಿಂದ ಯಾರ ಹಾನಿಯಾಗುವದು? ನಮ್ಮೊಳಗಿನ ಒಡಕಿನ ಲಾಭ ತಕ್ಕೊಂಡು ವೀರಪಕ್ಷದ ಮೇಲೆ ಸರಕಾರದವರು ಬಿಚ್ಚುಗತ್ತಿಯನ್ನೆತ್ತಿದರು. (ಸಂಪುಟ ೬, ಪುಟ : ೨೯-೩೨)

ಈ ಮಾತುಗಳು ಅವರ 'ರಾಷ್ಟ್ರಕ-ಮನೋಧರ್ಮ'ದ ವಿನ್ಯಾಸವನ್ನು ಸ್ಪಷ್ಟವಾಗಿ ಸಾರುತ್ತವೆ. ಈ ಮೇಲೆ ಉದ್ಧೃತ ಭಾಗಗಳಲ್ಲಿ ಭಾರತಾದ್ಯಂತ ನಡೆಯುತ್ತಿದ್ದ ನೈತಿಕ ಆಂದೋಲನ, ಸ್ವಾತಂತ್ರ್ಯದ ಹುಮ್ಮಸ್ಸು ಹಾಗೂ ಅವುಗಳ ಮೂಲಕ ಪ್ರೇರಿತವಾದ ಸಾಂಸ್ಕೃತಿಕ ನಡೆವಳಿ-ನುಡಿವಳಿಗಳ ಚಿಂತನೆ ಎದ್ದು ಕಾಣುತ್ತದೆ. ಈ ಜೀವನ ಆಕೃತಿಗಳ ಮುಖ್ಯಸತ್ತ್ವ ಇರುವುದು ಇಂಥ ನೆಲೆಗಳಲ್ಲೇ.

ಈ ಮೇಲಿನ ಅಂಶವನ್ನು ಅವರು ಬರೆದಿರುವ ಮತ್ತೊಂದು ಕೃತಿ 'ಟಿಳಕ ಕಥಾಮೃತಸಾರ' ದಲ್ಲಿಯೂ ನೋಡಬಹುದು. ಇದು ಮೂರು ಪ್ರಕರಣಗಳನ್ನು ಒಳಗೊಂಡಿದೆ. ಲೋಕಮಾನ್ಯರ ಜೀವನರಹಸ್ಯ, ಲೋಕಮಾನ್ಯರ ಗುಣಕಥನ ಮತ್ತು ಲೋಕಮಾನ್ಯರ ಕೆಲವು ವಿಚಾರಗಳು ಇಲ್ಲಿ ನಿರೂಪಿತವಾಗಿವೆ. ಮೊದಲನೆಯ ಪ್ರಕರಣದಲ್ಲಿ ಲೋಕಮಾನ್ಯರ ಆಚರಣೆಗೆ ತಕ್ಕಂತೆ ವಿಚಾರ ಇದ್ದುದನ್ನು ಹಲವು ಪ್ರಸಂಗಗಳನ್ನು ವಿವರಿಸಿ ಹೇಳಿದ್ದಾರೆ. ಮುಂಬೈಯಲ್ಲಿ ಶ್ರೀ ಸಯಾಜಿರಾವ್ ಮಹಾರಾಜ ಗಾಯಕ್ವಾಡ್, ಅವರ ಅಧ್ಯಕ್ಷತೆಯಲ್ಲಿ 'ಅಸ್ಪೃಶ್ಯರ ಮಹಾಸಭೆ' ಯೊಂದು ನಡೆಯಿತು. ಆ ಸಭೆಯಲ್ಲಿ ಲೋಕಮಾನ್ಯರು ಇದ್ದರು. ಅವರು :

> If a God were to tolerate Untouchability, I would not recognize him a god at all.'

'ದೇವರಿಗೆ ಅಸ್ಪೃಶ್ಯತೆಯು ಮಾನ್ಯವಿದ್ದರೆ ಅವನನ್ನು ದೇವನೆಂದು ನಂಬಿನೆಚ್ಚಲಿಕ್ಕೆ ನಾನು ಸಿದ್ಧನಿಲ್ಲ' ಎಂದು ಘನಗಂಭೀರ ಘರ್ಜನೆ ಮಾಡಿದರು. ಲೋಕಮಾನ್ಯರ ಸಾಮಾಜಿಕ ವಿಚಾರಗಳನ್ನು ಸ್ವಾತಂತ್ರ್ಯದ ಬಗೆಗಿನ ನಿಷ್ಠನೆಲೆಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಎರಡನೆಯ ಪ್ರಕರಣವು ಅವರ ಧೈರ್ಯ, ಸಾಹಸ, ಪರಿಶ್ರಮ, ಮಿತ್ರಪ್ರೇಮ, ಕೋಮಲಮನಸ್ಸು, ಬುದ್ಧಿವಂತಿಕೆಗಳು ಚಿತ್ರಿತವಾಗಿವೆ. ಮೂರನೆಯ ಪ್ರಕರಣವು ಕೇಸರಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಭಾಗಗಳನ್ನು ಒಳಗೊಂಡಿದೆ. ಈ ಲೇಖನಗಳು ಸಹಜವಾಗಿ ಶಂಬಾ ಅವರ ಸಾಮಾಜಿಕ ವಿಚಾರಗಳಿಗೆ ಅನ್ವಯವಾಗಿವೆ. ಇವು ಕಾಲದ ದೃಷ್ಟಿಯಿಂದ ಅತಿ ಮಹತ್ತ್ವದವು. ಶಂಬಾ ಅವರ ದೃಷ್ಟಿ-ಧೋರಣೆಗಳನ್ನು ವ್ಯಕ್ತಿತ್ವದ ಮೂರ್ತಿತ್ವವನ್ನು ಇವುಗಳಲ್ಲಿ ಕಾಣಬಹುದು. 'ಟಿಳಕ ಕಥಾಮೃತಸಾರ' ಹಾಗೂ 'ಅರವಿಂದ ಘೋಷರ ಚರಿತ್ರೆ' ಇವೆರಡೂ ಒಂದೇ ಆಶಯಗಳನ್ನು ಹೊಂದಿವೆ. 'ಜೀವನ ಚರಿತ್ರೆ'ಗಳ ಮಾದರಿಗೆ ಹೊಸದೊಂದು ಆಕೃತಿ-ಆಶಯಗಳನ್ನು ಶಂಬಾ ಈ ಕೃತಿಗಳ ಮೂಲಕ ಸೇರಿಸಿದ್ದಾರೆ.

ವಿಚಾರಗರ್ಭಗಳ ಮೂಲಕ

ವಿಚಾರ ಮಾನವನ ಸ್ವಭಾವ. ವಿಚಾರ ಚರ್ಚೆಗಳಿಂದ ದಾರಿಯ ಬೆಳಕು. ಈ ವಿಚಾರವು, ವಿಚಾರಗರ್ಭವನ್ನು ಹೊತ್ತಿರುತ್ತದೆ. ಈ ವಿಚಾರಗರ್ಭದ ಮೂಲಕ ಜೀವನ ವಿಶ್ವವನ್ನು ತಿಳಿಯಲು ಮನುಷ್ಯ ಪ್ರಯತ್ನಿಸುತ್ತಾನೆ. ಶಂಬಾ ಅವರ 'ರೂಢಿ ಹಾಗೂ ಭಾವಿಕ ಕಲ್ಪನೆಗಳು', 'ಅಸಂತೋಷವೇ ಏಳ್ಗೆಯ ಮೂಲ', 'ಅಗ್ನಿವಿದ್ಯೆ', 'ದಾರಿಯ ಬುತ್ತಿ' ಇವು ಕಂನಡದ ಬಹುಮುಖ್ಯ ವೈಚಾರಿಕ ಪುಸ್ತಿಕೆಗಳು. ಇವು ಆಕಾರದಲ್ಲಿ ಸಣ್ಣವಾಗಿದ್ದರೂ ಒಳಗೆ ಹುದುಗಿರುವ ವಿಚಾರಗಳು ಅತ್ಯಮೂಲ್ಯ. ಶಂಬಾ ಅವರು ವಿಚಾರಗರ್ಭದ ಬೆಳಕನ್ನು ಹಿಡಿದು ನಡೆಯುವ

ವೇಳೆಗೆ, ಆ ಬಗೆಯ ನೆಲೆಗಳಲ್ಲಿ ಪಂಡಿತ ತಾರಾನಾಥರು, ಡಿ.ವಿ.ಜಿ., ಶಿವರಾಮಕಾರಂತ ಮೊದಲಾದವರು ಹೆಜ್ಜೆ ಊರಿದ್ದರು. ತಾರಾನಾಥರ 'ಧರ್ಮ ಸಂಭವ', ಶಿವರಾಮಕಾರಂತರ 'ಬಾಳ್ವೆಯೇ ಬೆಳಕು', ಡಿ.ವಿ.ಜಿ., ಅವರ 'ಸಂಸ್ಕೃತಿ' ಇವುಗಳಲ್ಲಿ ವ್ಯಕ್ತವಾಗಿರುವ ಸ್ವಾತಂತ್ರಿಕೆ, ಅತ್ಯಾಶ್ಚರ್ಯ ಎನ್ನಿಸುವಷ್ಟು ಸ್ವತಂತ್ರವಾಗಿವೆ. ಆದರೆ, ಶಂಬಾ ಅವರು ಹಿಡಿದಿರುವ ಹಾದಿ, ಪ್ರಾಚೀನ ಋಷಿಸಂಪ್ರದಾಯದ ನೆಲೆಯನ್ನೇ. ಈ ನೆಲೆಗಳೇ ಮುಂದೆ ಅವರು ಇಡಿಯಾಗಿ ಭಾರತೀಯ ಸಂಸ್ಕೃತಿಯನ್ನು ಹಲವು ಪಾರ್ಶ್ವ ಎಳೆಗಳಲ್ಲಿಯೂ ಹಂತಗಳಲ್ಲಿಯೂ ವ್ಯಾಖ್ಯಾನಿಸಲು ಅನುವು ಮಾಡಿಕೊಟ್ಟವು. ಇಲ್ಲಿರುವ ವಿಚಾರಗರ್ಭಗಳಿಗೂ ಸಮಕಾಲೀನ ಸಾಮಾಜಿಕ ಸಂದರ್ಭಕ್ಕೂ ತಾಳಮೇಳವುಂಟು. ಇಲ್ಲಿರುವ ಪುಸ್ತಕಗಳು ಪ್ರಕಟಗೊಂಡದ್ದು ಸ್ವಾತಂತ್ರ್ಯ ಬರುವ ಮೊದಲು. 'ಸ್ವಾತಂತ್ರ್ಯ' ಎಂಬುದೇನು? ಈ ಪ್ರಶ್ನೆ ಅವರನ್ನು ಹಲವು ಬಗೆಗಳಲ್ಲಿ ಕಾಡಿದೆ. ಈ ಸ್ವಾತಂತ್ರ್ಯವು ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ? ಸ್ವಾತಂತ್ರ್ಯಕ್ಕೂ ಮನುಷ್ಯನ ವಿಚಾರತತ್ವಕ್ಕೂ ಪಾರಸ್ಪರಿಕ ಎಳೆಗಳುಂಟೆ? ಈ ಪ್ರಶ್ನೆಗಳು ಆಳವಾಗಿ ಅವರನ್ನು ಕಾಡಿವೆ. ಮನುಷ್ಯನು ಸಂತುಷ್ಟಿಯಾಗಿರಬೇಕೆ? ಅಸಂತುಷ್ಟಿಯನ್ನು ಹೊಂದಿರಬೇಕೆ? ಪ್ರಾಚೀನರು ಆರಾಧಿಸುವ ಅಗ್ನಿಪ್ರತಿಮೆ ಯಾವ ಬಗೆಯ ಅರ್ಥಗಳನ್ನು ಮಂಡಿಸುತ್ತದೆ? ಭಾಷಿಕ ಪ್ರತಿಮೆಗಳಿಂದ ಸಾಂಸ್ಕೃತಿಕ ಪ್ರತಿಮೆ ತಿಳಿಯುವ ಮೊದಮೊದಲ ಬರೆಹಗಳು ಇವಾಗಿವೆ. ಈ ಕೃತಿಗಳು ಒಂದು ಕಡೆ ವೈಚಾರಿಕ ನೆಲೆಗಳ ಹಲವು ಮಗ್ಗುಲುಗಳನ್ನು ಚರ್ಚಿಸುತ್ತವೆ. ಆ ಚರ್ಚೆಗಳು ಅವರ ಮುಂದಿನ ಕೃತಿಗಳಿಗೆ ಬೇರೆ ಬಗೆಯ ನೋಟಗಳನ್ನು ತಂದಿತ್ತಿವೆ.

ಪ್ರಾಚೀನರು ಆರಾಧಿಸುತ್ತಿದ್ದ ಅಗ್ನಿಯು ವಿಶ್ವವ್ಯಾಪಿಯಾದ ಸಾಂಸ್ಕೃತಿಕ ಅರ್ಥವನ್ನು ಬಂಬಿಸುತ್ತದೆ. ಇಂದಿನ ವೈಜ್ಞಾನಿಕ ಆವಿಷ್ಕಾರಗಳ ಹಿನ್ನೆಲೆಯಲ್ಲಿ ನೋಡಿದಾಗಲೂ ಸೃಷ್ಟಿಯ ಸರ್ವವಿಕಾಸದ ಮೂಲದಲ್ಲಿ ಅಗ್ನಿ ತತ್ವವೇ ಕಂಡು ಬರುತ್ತದೆ. ಶಂಬಾ ಅವರು ಅಗ್ನಿಯ ಸ್ವರೂಪವನ್ನು ಎರಡು ಬಗೆಗಳಲ್ಲಿ ವಿವೇಚಿಸುತ್ತಾರೆ. ಒಂದು ಹೊರಗಣ ಬೆಂಕಿ, ಮತ್ತೊಂದು ಒಳಗಣ ಬೆಂಕಿ. ಹಾಗೆಯೆ, ಆ ಅರ್ಥವನ್ನು ವೈಜ್ಞಾನಿಕ ಸತ್ಯವಾದ ಬೆಳಕು ಮತ್ತು ಶಕ್ತಿಗಳಿಗೂ ಅನ್ವಯಿಸುತ್ತಾರೆ. ವೇದಕಾಲದ ಯಜ್ಞವು ಈ ಅರಿವಿನ ವ್ಯಕ್ತರೂಪ. ಬಾಹ್ಯ ಯಜ್ಞಕ್ರಿಯೆ ಒಂದು ಸಂಕೇತ. ಜಠರಾಗ್ನಿಯ ತಣಿವಿಗಾಗಿ ಮಾಡುವ ಊಟವೂ ಒಂದು ಯಜ್ಞವೇ. ಹಾಗಾಗಿ, ಮನಸ್ಸಿನ ಯಜ್ಞವೂ ಉಂಟು. 'ಅಗ್ನಿ ಮುಖಾಃ ವೈ ದೇವಾಃ' ಎಂಬ ಶಬ್ದಪ್ರತಿಮೆಯು ಸಾಮಾಜಿಕ ಎಚ್ಚರ ಹಾಗೂ ವ್ಯಕ್ತಿಯ ಎಚ್ಚರಗಳನ್ನು ಏಕಕಾಲಕ್ಕೆ ತಿಳಿಸುತ್ತದೆ. ಮನುಷ್ಯನು ಸಂಕೇತಗಳ ನೆಲೆಗಳಲ್ಲಿ ಬಾಳನ್ನು ಕಂಡುಕೊಂಡಿದ್ದಾನೆ. ಅಗ್ನಿ ಮತ್ತು ಯಜ್ಞ ಎಂಬೆರಡು ಶಬ್ದ ಸಂಕೇತ-ಪ್ರತಿಮೆಗಳು ಮಾನವನ ನಿರಂತರ ವಿಚಾರದ ಹಸಿವನ್ನು ವ್ಯಕ್ತಪಡಿಸುವ ಒಳರೂಪ ಹಾಗೂ ಹೊರ ರೂಪಗಳಾಗಿವೆ. ಈ ಒಳರೂಪವು ಕುತೂಹಲ, ಸಂದೇಹ, ಅಸಂತುಷ್ಟಿಗಳಿಂದ ಜಿಜ್ಞಾಸೆ ಪ್ರಾರಂಭವಾಗುತ್ತದೆ. ಪ್ರಾಚೀನ ಗ್ರಂಥಗಳು 'ಈಗ ಬ್ರಹ್ಮನ ಜಿಜ್ಞಾಸೆ ಮಾಡೋಣ', 'ಈಗ ಯೋಗದ ಜಿಜ್ಞಾಸೆ ಮಾಡೋಣ' ಎಂದು ಹೇಳುತ್ತವೆ. 'ಯಜ್ಞ' ಎಂಬುದು ವಿಚಾರ ಮಾಡುವ ರೂಪಕಾರ್ಥಕ ಶಬ್ದ ಪ್ರತಿಮೆ. ಕಿಡಿಯಿಲ್ಲದೆ 'ಯಜ್ಞ'ವಿಲ್ಲ. ಜಿಜ್ಞಾಸೆಯೇ ಆ ಕಿಡಿ. ಸಂದೇಹ, ಜಿಜ್ಞಾಸೆ ಇರುವ ವರೆಗೂ ಒಳಗಿನ ಬೆಂಕಿ ನಿಗಿನಿಗಿ ಉರಿಯುತ್ತಿರುತ್ತದೆ. ಅದು ಇಲ್ಲದೆ ಹೋದರೆ ಒಳಗಿನ ಬೆಂಕಿ ಆರಿತಣ್ಣಗಾಗುತ್ತದೆ. ಹೀಗಾಗಿ ಈ ಕಿಡಿಯನ್ನು ಸದಾ ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು. ಸತ್ಯಶೋಧನೆ ಅಥವಾ ತತ್ವಾನುಸಂಧಾನ ಕೊರತೆಯ ರೋಗಕ್ಕೆ ಮದ್ದು. ಯಾವುದು ಸತ್ಯವೆಂದು ಈ ಸಂದರ್ಭಕ್ಕೆ ಸರಿ ಎನಿಸುತ್ತದೆಯೋ, ಒಳಗಿನ ಮಥನದಿಂದ ಉಂಟಾದ ಬೆಳಕಿನಿಂದ ತಿಳಿದುಬರುತ್ತದೆಯೋ ಅದೇ ಸತ್ಯ. ಯಾರೋ ಹೇಳಿದ್ದಲ್ಲ. ಅದು ಒಳಗಿನಿಂದ ಮೂಡಿದ್ದು. ಆತ್ಮಸಾಕ್ಷಿ ಎಂದರೆ ಇದೇ. ಹೀಗೆ ಸತ್ಯಸಾಧನೆಗೆ ಚಿದಗ್ನಿ ಮುಖ್ಯ. ಆ ಚಿದಗ್ನಿಯನ್ನು ಆರಗೊಡಬಾರದು. ಬೆಂಕಿಯನ್ನು ಹಾಗೆ ಬಿಟ್ಟರೆ ಬೂದಿ ಕವಿಯುತ್ತದೆ, ಕೆಂಡ ಆರುತ್ತದೆ, ಕಾವು ಕಡಿಮೆಯಾಗುತ್ತದೆ. ಹೊರಗೊಂದು ವಿಶ್ವ, ಒಳಗೊಂದು ವಿಶ್ವ. ಈ ಒಳ-ಹೊರಗನ್ನು ಅಗ್ನಿಯು

ಆವರಿಸಿದೆ. ಅದರ ಅರಿವು, ಅದರ ಉಪಾಸನೆಯೇ ಅಗ್ನಿವಿದ್ಯೆ. ಇದು ಪ್ರಾಚೀನರು ಕಂಡುಕೊಂಡು ಆಚರಿಸಿದ ಸಾಂಸ್ಕೃತಿಕ ಶಬ್ದಪ್ರತಿಮೆ.

ಮನುಷ್ಯ ಲೋಕವು ಇದ್ದುದರಲ್ಲಿ ತೃಪ್ತಿಪಡು ಎಂದು ಹೇಳುತ್ತದೆ. 'ಇದ್ದಷ್ಟು ಕಾಲುಚಾಚು' ಎಂಬ ಪಡೆನುಡಿಯಲ್ಲಿ ಈ ಅರ್ಥಗರ್ಭವು ಹಾಸಿಕೊಂಡಿದೆ. ಶಂಬಾ 'ಅಸಂತೋಷ' ಶಬ್ದ ಪ್ರತಿಮೆಯಿಂದ ಮನುಷ್ಯನ ಪಾಡನ್ನು ಕುರಿತು ಚಿಂತಿಸುತ್ತಾರೆ. ತೃಪ್ತಿ-ಅತೃಪ್ತಿ; ಸಂತೋಷ-ಅಸಂತೋಷ; ಸಾಕು-ಬೇಕು; ನಲಿವು-ನೋವು, ಸುಖ-ಅಸುಖ- ಈ ಎಲ್ಲ ಶಬ್ದಪ್ರತಿಮೆಗಳಲ್ಲಿ ರೂಢಿಗತವಾದದ್ದು ತೃಪ್ತಿ, ಸಂತೋಷ, ಸಾಕು, ಸುಖ ಎಂಬುವುಗಳೇ. ಶಂಬಾ ಅವರು ಹಿಡಿದ ಹಾದಿ, ಚರ್ಚಿಸಿದ ಹಾದಿ ಇದಕ್ಕಿಂತ ಬೇರೆಯದೇ. ಆ ಹಾದಿಯು ಬೆಳಕಿನ ಕಡೆಗೆ ಕರೆದೊಯ್ಯುತ್ತದೆ. ಹಸಿದವನಿಗೆ ಊಟದ ಹಕ್ಕು ಇರುತ್ತದೆ. ಅಸಂತುಷ್ಟಿಯಿದ್ದರೆ ಸುಖದ ಬೆಲೆ. ಬೇಕು ಎಂಬುದು ಬೆಳವಣಿಗೆಯ ಲಕ್ಷಣ. ಬೇಕು-ಬದುಕು ಇವೆರಡಕ್ಕೂ ಅನ್ಯೋನ್ಯಾಶ್ರಯವುಂಟು. ಚಲನೆ, ಗತಿ, ಜೀವಂತಿಕೆಯ ಲಕ್ಷಣ. ಸ್ಥಿತಿ, ಸ್ಥಿರತೆ ಕೊಳೆ; ನಿಂತ ನೀರು ಕೊಳೆಯುತ್ತದೆ. ಹರಿವ ನೀರು? ಬೆಳೆಯುವವನಿಗೆ ಬೆಳೆಯ ಬೇಕೆನ್ನುವವನಿಗೆ ಹಸಿವುಂಟು. ಆ ಹಸಿವು ಆರೋಗ್ಯದ ಲಕ್ಷಣ. ಆಸೆ, ಆಕಾಂಕ್ಷೆಗಳು ಮಾನವನ ಹುಟ್ಟುಗುಣಗಳು. ವಾಸನೆಯಲ್ಲಿ ಎರಡು ಬಗೆ, ದುರ್ವಾಸನೆ, ಸದ್ವಾಸನೆ. ಇವೆರಡರಲ್ಲಿ ಮಾನವ ಸಮಾಜಕ್ಕೆ ಯಾವುದು ಆರೋಗ್ಯಕಾರಿ? ಮನುಷ್ಯ ದುರ್ವಾಸನೆಯನ್ನು ಸದ್ವಾಸನೆಯನ್ನಾಗಿ ಪರಿವರ್ತಿಸಿಕೊಳ್ಳಬೇಕು. ಬೇಕು ಎಂಬುದು 'ಒಳ್' ಬೆಳಕು ಆಗಬೇಕು. ಆ ಒಳ್‌ಬೆಳಕನ್ನು ಹೆಚ್ಚಿಸಿಕೊಳ್ಳುತ್ತ ಹೋಗಬೇಕು. ಅದಕ್ಕೆ ಅಗಾಧವಾದ ಸಂಕಲ್ಪ ಬೇಕು. ಸಂಕಲ್ಪವು ಎಂದರೆ ಇಚ್ಛೆ ಮತ್ತು ಶ್ರದ್ಧೆ. ಅದೇ ಒಳಗಿನ ಬೆಂಕಿ, ಬೆಂಕೆ. ಪ್ರಾಚೀನರ ನುಡಿಯಲ್ಲಿ ಇದೇ ಅಗ್ನಿವಿದ್ಯೆ. ಈ ಅಗ್ನಿಯು ಹಸಿವನ್ನು ಹೆಚ್ಚಿಸುತ್ತದೆ. ಹಸಿವು, ಹಂಬಲ, ಅತೃಪ್ತಿ, ಅಸಂತೋಷ, ಬೆಳವಣಿಗೆಯ ಲಕ್ಷಣ. ಅದು ಏಳ್ಗೆಯ ಮೂಲ. ಯುವಕರು ನಾಡಿನ ಶಕ್ತಿ. ಅವರು ಸಾಂಸ್ಕೃತಿಕವಾಗಿ ಬೆಳೆಯಬೇಕು. ಆ ಬೆಳೆಯು ಬೆಂಕಿಯ ಮೂಲದಲ್ಲಿದೆ. ಆದ್ದರಿಂದ, 'ಅಸಂತೋಷಃ ಶ್ರಿಯೋ ಮೂಲಂ' ಎಂದು ಪ್ರಾಚೀನರು ಸಂಕಲ್ಪಮಂತ್ರವನ್ನು ಹೇಳಿದರು. ಹಸಿಯಬೇಕು, ಹಸಿವು ಒಳಗಿನ ಕಿಡಿ ನಿಗಿನಿಗಿಯಾಗಿಸಬೇಕು, ಕೆಂಡವಾಗಬೇಕು. ವೈದಿಕಋಷಿಗಳು ಬಯಸಿದ್ದು, ಪ್ರಾರ್ಥಿಸಿದ್ದು ಇದೇ ಅಗ್ನಿಯನ್ನೇ. ಇದು ಯುವಕರಿಗೆ ಶಂಬಾ ನೀಡಿದ ಕರೆ. ಇದು ನಲ್ದಾರಿ-ಸುಪಥ. ಅದಕ್ಕಾಗಿ ಈಶೋಪನಿಷತ್ತು. 'ಸುಪಥರಾಯೇ ಅಸ್ಮಾನ್ ಭವ'- ಎಂದು ಹೇಳಿದ್ದು. ಸಾಂಸ್ಕೃತಿಕ ಇತಿಹಾಸವು ಈ 'ಸುಪಥ' ನಲ್ದಾರಿಯ ಬೆಳಕನ್ನು ಅರಸಿಕೊಂಡು ಹೊರಟಿದೆ.

ಅಗ್ನಿವಿದ್ಯೆ-ಎದ್ದೇಳು ಕನ್ನಡಿಗಾ, ದಾರಿಯಬುತ್ತಿ, ಇತರ ಕೃತಿಗಳಲ್ಲಿ ಮಂಡಿತವಾಗಿರುವ ವಿಚಾರಗಳು ಸ್ವಾತಂತ್ರ್ಯದ ಹಂಬಲದಲ್ಲಿ ಮೂಡಿಬಂದ ಸಮಾಜವನ್ನು ಕುರಿತಿದ್ದಿತು. ವ್ಯಕ್ತಿಯ ಅಂತರಂಗದ ನೆಲೆಗಳನ್ನು ಇವು ಕುರಿತು ಚರ್ಚಿಸುತ್ತವೆ. ಈ ನೆಲೆಗಳ ಹಿಂದಿರುವ ಪ್ರೇರಣಾಕೇಂದ್ರಗಳ ಬಗೆಗೆ ಆಲೋಚಿಸುತ್ತದೆ. ಶಂಬಾ ಅವರ ಸಮಕಾಲೀನ ವಿಚಾರಗಳಿಗೂ ಶಂಬಾ ಅವರಿಗೂ ಇರುವ ಅಂತರ ಇದೇ ಆಗಿದೆ. 'ವಿಚಾರದ ಗರ್ಭ'ವನ್ನು ಪ್ರಾಚೀನರ ವಿಚಾರಗರ್ಭದ-ಮೂಲಕವೇ ವ್ಯಾಖ್ಯಾನಿಸುತ್ತ ಆಧುನಿಕಗೊಳಿಸುವ ತತ್ವಜ್ಞನ ಪರಿ ಇಲ್ಲಿ ದಟ್ಟವಾಗಿ ಕಾಣುತ್ತದೆ. ಶಂಬಾ ಅವರ ಹಿರಿಮೆ ಇರುವುದೆ ಇಂಥ ಎಡೆಗಳಲ್ಲಿ. ಈ ಎಡೆಗಳನ್ನು ಅನಂತರ ಸಾಂಸ್ಕೃತಿಕ ಹಾಗೂ ವೈಚಾರಿಕ ಸಂಶೋಧನೆಗೆ ಮುಂದುವರಿಸಿದ್ದು ಬೇರೆಯದೇ ಆದ ಚರ್ಚೆಯ ನೆಲೆಗಳನ್ನು ಬಯಸುತ್ತದೆ.

ಸಾಮಾಜಿಕ ಹುರುಳಿನ ನಲ್ದಾರಿ

ಶಂಬಾ ಅವರು, ಬಾಳದಾರಿಯ ಬೆಳಕನ್ನು ಹಿಡಿದು ನಡೆದ ಮೂರನೆಯ ಘಟ್ಟವು ಸಾಮಾಜಿಕ ವ್ಯಾಖ್ಯಾನದ ಕಡೆಗೆ ಕರೆದೊಯ್ಯುತ್ತದೆ. ಸ್ವಾತಂತ್ರ್ಯ ಬರುವ ಮುನ್ನ ಹಾಗೂ ಬಂದ ನಂತರ ಮೂಡಿಬಂದ ವಿಚಾರಗಳು 'ಸಮಾಜ ದರ್ಶನ' ಹಾಗೂ 'ಯಕ್ಷಪ್ರಶ್ನೆ' ಇವೆರಡೂ ಕೃತಿಗಳಲ್ಲಿ ಮಡುಗಟ್ಟಿ ನಿಂತಿವೆ. ಈ ಮೊದಲು ಚರ್ಚಿಸಿದ ಅಗ್ನಿವಿದ್ಯೆ- ಅಸಂತೋಷದ ಮೂಲ, ಎದ್ದೇಳು ಕಂನಡಿಗಾ, ದಾರಿಯ ಬುತ್ತಿ ಇವು ತತ್ವಜ್ಞನ ಶೈಲಿಯಲ್ಲಿ

ಇದ್ದುವು. ಇವು ಸಮಾಜ ತತ್ತ್ವಜ್ಞನ ನೆಲೆಗಳನ್ನು ಹಿಡಿದಿದ್ದವು. ಪ್ರಾಚೀನ ವಿಚಾರಗರ್ಭದ ಬೆಳಕಿನಲ್ಲಿ ಸೂತ್ರರೂಪಿಯಾಗಿ ಮೊದಲಿನ ಕೃತಿಗಳು ಮಾತಾಡುತ್ತವೆ. ಇವು ಸಮಾಜದ ಸದ್ಯತನದ ಸ್ಥಿತಿಗತಿಗಳನ್ನು ವ್ಯಾಖ್ಯಾನರೂಪೀ ಹಾಗೂ ವಿಶ್ಲೇಷಣ ಮಾದರಿಯಲ್ಲಿ ಮಾತಾಡುತ್ತವೆ. ಪ್ರಧಾನವಾಗಿ ಈ ಕೃತಿಗಳಲ್ಲಿ ಮುಂದಿನ ಸಮಾಜ ಹೇಗಿರಬೇಕೆಂಬ ಪ್ರಶ್ನೆಯನ್ನು ಶಂಬಾ ಎದುರಿಸಿದ್ದಾರೆ. ಸಮಾಜ ಹಾಗೂ ದೇಶ ಹಾಗೂ ಭವಿಷ್ಯದ ಪ್ರಶ್ನೆ ಬಂದಾಗಲೆಲ್ಲ ಅದಕ್ಕೆ ಕಾರಣವಾದ ಕಾರಣಮೀಮಾಂಸೆಯನ್ನು ಹುಡುಕಲು ಈಗಾಗಲೆ ನಮ್ಮಲ್ಲಿ ಎರಡು-ಮೂರು ಮಾದರಿಗಳು ಚಾಲ್ತಿಯಲ್ಲಿವೆ. ಮೊದಲನೆಯದು ಕಾಲಜ್ಞಾನದ ಮಾದರಿ. ಮನುಷ್ಯನ ಸಾಮಾಜಿಕ ಮತ್ತು ವೈಯಕ್ತಿಕ ನೈತಿಕತೆ ಅಧೋಗತಿಗೆ ಇಳಿಯುತ್ತ ಹೋಗುತ್ತಿದೆಯೆಂದೂ ದೈವಭಕ್ತಿ-ಧರ್ಮಭೀರುತ್ವ ಕ್ಷೀಣಿಸುತ್ತಿದೆಯೆಂದೂ ಹೇಳುತ್ತದೆ. ಪ್ರಳಯದ ಅನಂತರವೇ ಅರ್ಥಪೂರ್ಣವಾದ ಹೊಸಸೃಷ್ಟಿ ಎಂಬುದು ಇದರ ಮುಖ್ಯ ಕಾಳಜಿ. ತತ್ತ್ವಪದವನ್ನೊ ಕಾಲಜ್ಞಾನವನ್ನೊ ಹೇಳುವವರು ಕಾಲಜ್ಞಾನದ ಮಾದರಿಗಳಲ್ಲಿ ಇದ್ದಾರೆ ಎಂದು ಭಾವಿಸಬಾರದು. ಆಧುನಿಕರಾದ ಭೈರಪ್ಪ, ತೇಜಸ್ವಿ, ಲಂಕೇಶರಲ್ಲಿ ಸೃಜನಶೀಲ ಕೃತಿಗಳು ಸರ್ವನಾಶದ ಬಗೆಗೆ ಒಲವನ್ನು ವ್ಯಕ್ತಪಡಿಸುತ್ತವೆ. ವರ್ತಮಾನದ ಅನಗತ್ಯ ಭಯ, ಹತಾಶೆ, ಭವಿಷ್ಯದ ಬಗೆಗೆ ಭರವಸೆ ಇಲ್ಲದಿರುವುದು ಈ ಬಗೆಯ ಅಂಶಗಳು ಒಟ್ಟಿಗೆ ಕೆಲಸ ಮಾಡಿ 'ಪ್ರಳಯ'ದ ಆಸೆಯನ್ನು ಹುಟ್ಟಿಸುತ್ತವೆ. ಇದು ಒಂದು ಮಾದರಿ. ಎರಡನೆಯ ಮಾದರಿಯು ವಿಜ್ಞಾನ ಮತ್ತು ಆದರ್ಶಶಾಸ್ತ್ರಕ್ಕೆ ಸಂಬಂಧಿಸಿದ್ದು. ಸಮಾಜ ಮತ್ತು ಚರಿತ್ರೆಯ ಬೆಳವಣಿಗೆಗಳಲ್ಲಿ ವಿವಿಧ ಘಟ್ಟಗಳನ್ನು ಗುರುತಿಸಿ ಸೃಷ್ಟಿಯ ಓನಾಮದ ಕ್ಷಣದಿಂದ ಕೊನೆಯ ಕ್ಷಣದ ವರೆಗೆ ಆಗುವ ಎಲ್ಲ ಬೆಳವಣಿಗೆಗೆ ಹಿಂದಿರುವ ಪ್ರೇರಣೆಗಳನ್ನೂ ಗುರುತಿಸುವ ಇರಾದೆ ಈ ಮಾದರಿಯ ಮುಖ್ಯ ಲಕ್ಷಣವಾಗಿದೆ. ಇದು ಕೂಡಾ ಯುಗದ ಕಲ್ಪನೆ, ಮಾರ್ಕ್ಸ್‌ವಾದದ ಚರಿತ್ರೆಯ ಘಟ್ಟಗಳ ಪರಿಕಲ್ಪನೆ-ಈ ಮಾದರಿಯದೇ ಆಗಿದೆ. ಈ ಮಾದರಿಗೆ ಸಂಪನ್ಮೂಲಗಳ ಬಳಕೆ, ಶೋಧನೆ, ಅದರಿಂದಾಗುವ ಪ್ರಗತಿಯನ್ನು ಕುರಿತು ಚಿಂತಿಸುತ್ತದೆ.

ಶಂಬಾ ಅವರ ಎರಡು ಕೃತಿಗಳಲ್ಲಿ ಈ ಎರಡು ಮಾದರಿಗಳೂ ಇಲ್ಲ. ದುರಾಸೆ ಮತ್ತು ಮಹತ್ವಾಕಾಂಕ್ಷೆ ಇವೆರಡೂ ಪ್ರೇರಣಾ ಬೀಜಗಳು ಇಲ್ಲದಿರುವುದೇ ಇದಕ್ಕೆ ಕಾರಣ. ಅವರ ದರ್ಶನದ ವಾಂಛೆ ಹುಟ್ಟಿರುವುದೆ ಸದ್ಯದ ವಾಸ್ತವ ಹಾಗೂ ನಾಳೆ ಎಂಬುದನ್ನು ನಾವು ಹೇಗೆ ಹಸನುಗೊಳಿಸಿಕೊಳ್ಳಬೇಕೆಂಬ ಹಂಬಲದಿಂದ. ಹೀಗಾಗಿ, ಇಲ್ಲಿ 'ಭವಿಷ್ಯವಾದೀ' ಬರೆವಣಿಗೆಯ ಸೋಗಲಾಡಿತನ, ಸರ್ವಜ್ಞತ್ವದ ಭಂಗಿ, ಕಾಣುವುದಿಲ್ಲ. ಅದರ ಬದಲು, ಹಸಿವನ್ನು ಬಯಸುವವನಿಗೆ ಮುಗ್ಧ ಭಾವುಕತೆ ಹೇಗೆ ಬಂದೀತು? ಹೀಗಾಗಿ, ಶಂಬಾ ಅವರು ಚರ್ಚೆಯ, ಪ್ರಶ್ನೋತ್ತರದ ಹಾಗೂ ಸಂವಾದದ ಮೂರು ಮಾದರಿಗಳನ್ನು ಅನುಸರಿಸುತ್ತಾರೆ. ಶೈಲಿ ಹಾಗೂ ಈ ಬಗೆಯ ಅಂಶಕ್ಕೆ ಕೆಳಗಿನ ಮಾತುಗಳನ್ನು ನೋಡಿ.

> ಸ್ವಾತಂತ್ರ್ಯವೇ ಹೆಗ್ಗುರಿಯಾಗಿದ್ದರೆ, ಈಗಿನ ಸಮಾಜರಚನೆಯಲ್ಲಿ ಕೆಲವೊಂದು ಮಾರ್ಪಾಟಗಳು ಅನಿವಾರ್ಯವೆಂದು ನನ್ನ ಮನವರಿಕೆಯಾಗಿದೆ. ಸ್ವಾತಂತ್ರ್ಯವಂತೂ ಬೇಕು; ಮಾರ್ಪಾಟಗಳು ಮಾತ್ರ ಬೇಡವೆಂಬುದು ರೂಢಿಯ ಜನದ ರೀತಿಯಾಗಿದೆ. ಜನಗಳಲ್ಲಿ ಈ ಪರಸ್ಪರ ವಿಸಂಗತಿಯ ಅರಿವು ಉಂಟಾಗದಿದ್ದರೆ ದೊರೆತ ಸ್ವಾತಂತ್ರ್ಯಕ್ಕೆ ಬೇಗನೆಯೆ ಎರವಾಗುವಲ್ಲಿ ಸಂದೇಹವಿಲ್ಲ.
>
> ಇದು ಹೀಗೆಯೆ ಆಗಬೇಕೆಂದು ಹೇಳುವ ಅಧಿಕಾರವು ನನಗೆ ಇಲ್ಲ. ಅಥವಾ ಇದು ಹೀಗೆಯೆ ಆಗುವುದೆಂದು ಎದೆತಟ್ಟಿ ಹೇಳುವ ಭವಿಷ್ಯವಾದಿಯೂ ನಾನಲ್ಲ. ಇದರಲ್ಲಿ ಬಂದುವು ನನ್ನ ಕಂಡಿತದ ಕೆಲವು ಮಾತು ಮತ್ತು ಕೆಲವು ಸೂಚನೆಗಳು ಮಾತ್ರ. (ಸಂಪುಟ ೬, ಪು : ೧೪೧-೧೫೫)

ಕಾಲದ ಸ್ವಾತಂತ್ರ್ಯದ ಯಕ್ಷನು ಪ್ರಜ್ಞಾವಂತರ ಎದುರಿಗೆ ಒಡ್ಡಿರುವ ಹಲವು ಪ್ರಶ್ನೆಗಳುಂಟು. ಅವರು ಗುರುತಿಸಿರುವ ಹದಿನಾರು ಪ್ರಶ್ನೆಗಳು, ಜಾತಿ-ಧರ್ಮ, ಸಂಸ್ಕಾರ, ಶಿಕ್ಷಣ, ಮನಃ ಪರಿವರ್ತನೆ ಇಂಥ ಮಹತ್ವದ ಸಾಮಾಜಿಕ ಪ್ರಶ್ನೆಗಳೇ ಆಗಿವೆ. ಸ್ವಾತಂತ್ರ್ಯ ಬಂದ ನಂತರ ಕೆಲವರಿಗೆ ಭ್ರಮನಿರಸನ ಆಯಿತು. ಇದನ್ನು ನವ್ಯರ ರಚನೆಯಲ್ಲಿ ಕಾಣುತ್ತೇವೆ. ಆದರೆ, ಶಂಬಾ ಅವರಿಗೆ ಇದು ಸಮಾಜವನ್ನು ಪುನರ್‌ನಿರ್ಮಾಣ ಮಾಡುವ ಅವಕಾಶವಾಗಿ ಕಂಡಿದೆ. ಹಾಗಾಗಿ, ಶಂಬಾ ಅವರು ಚರ್ಚಿಸುವ ನೆಲೆಗಳಲ್ಲಿ ಭ್ರಮೆಗಳಾಗಲಿ, ವಿಘ್ನ ಸಂತೋಷವಾಗಲಿ ಇಲ್ಲ. ಅದರ ಬದಲು ಆಳವಾದ ಶ್ರದ್ಧೆ, ಕಳಕಳಿ ಮತ್ತು ವಿಚಿತ್ರ ರೀತಿಯ ಭರವಸೆಗಳಿವೆ. ನಾಳಿನ ಸಮಾಜ ಹಸನುಗೊಳ್ಳಬೇಕೆಂಬ ಆಳವಾದ ತಹತಹವನ್ನು ಅವು ಹೊಂದಿವೆ.

ಜಾತಿಸಮಸ್ಯೆ ಹಾಗೂ ಜಾತಿ ಮನೋಭಾವದ ಬಗೆಗೆ ಶಂಬಾ ಅವರು ಎತ್ತುವ ಒಳನೋಟಗಳು ಅಸಾಧಾರಣವಾದವು. ಈ ಹೊತ್ತಿನ ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಅಂತರ್‌ಶಿಸ್ತುಗಳ ನೆಲೆಗಳಲ್ಲಿ ಆಡುತ್ತಿರುವ ಮಾತುಗಳನ್ನು ನಾಲ್ವತ್ತು ವರ್ಷಗಳ ಹಿಂದೆಯೇ ಅಧ್ಯಯನ ಕ್ರಮ ಮತ್ತು ಆಳವಾದ ಕಳಕಳಿಯ ಮೂಲಕ ಆಡಿದ್ದರು. ಈ ಸಮಾಜದ ವಿವಿಧ ವರ್ಗಗಳು, ಜಾತಿಗಳು, ಬಲು ಪುರಾತನಕಾಲದಿಂದ ಇಲ್ಲೆ ಕೂಡಿ ಆಡಿ ಬದುಕಿವೆ. ಅಂಥದ್ದರಲ್ಲಿ ಹೊರಗಡೆಯಿಂದ ಬಿಳಿದೊರೆಗಳು ಬಂದು ಆಡಿದ ಮಾತುಗಳೆ, ಎತ್ತಿದ ಪ್ರಶ್ನೆಗಳೆ, ನಮ್ಮ ಪರಸ್ಪರ ಗ್ರಹಿಕೆ ಹಾಗೂ ವಿಶ್ವಾಸ ಕಳೆದುಕೊಳ್ಳುವುದಕ್ಕೆ ಅದೆಷ್ಟು ಸುಲಭವಾಗಿ ಕಾರಣವಾಯಿತು. ಬ್ರಾಹ್ಮಣ-ಬ್ರಾಹ್ಮಣೇತರರ ಲೋಕದೃಷ್ಟಿಯ ಭಿನ್ನತೆಯಲ್ಲಿ ಗ್ರಹಿಕೆಯಿಲ್ಲ. ಇಲ್ಲಿಯ ಬ್ರಾಹ್ಮಣೇತರರ ಗ್ರಹಿಕೆ ಹಾಗೂ ಕಳವಳ ಎಷ್ಟು ಪಾಲಿನದು, ಬ್ರಿಟಿಷರು ಹೇಳಿಕೊಟ್ಟ ಪಟ್ಟುಗಳು, ಪಿತೂರಿಗಳು ಎಷ್ಟು ಪಾಲಿನದು? ಮುಸ್ಲಿಂ ಜನದ ಬಗೆಗೆ ಸಂದೇಹ-ಧೋರಣೆಗಳಲ್ಲಿ ಹಿಂದೂಗಳ ಸ್ವಂತಗ್ರಹಿಕೆಯ ಪಾಲೆಷ್ಟು? ಈ ಬಗೆಯ 'ಯಕ್ಷಪ್ರಶ್ನೆ'ಗಳೇ ಈ ಕೃತಿಯನ್ನು ಕೈಹಿಡಿದು ನಡೆಸಿವೆ. ಈ ಪ್ರಶ್ನೆಗಳಿಗೆ ಅವರು ಉತ್ತರ ಕಂಡುಕೊಂಡಿರುವುದು ಗಾಂಧೀಜಿಯವರ ದರ್ಶನಾದರ್ಶದಲ್ಲಿ. ವಿಸಂಗತವೂ, ಸಮಾಜ ವಿನಾಶಕ್ಕೆ ಕಾರಣವೂ ಅಪನಂಬಿಕೆ, ಅಶ್ರದ್ಧೆ, ಗ್ರಹಿಕೆಗಳ ಭಿನ್ನತೆಯನ್ನು ಮುಚ್ಚಲು ಸಾಧ್ಯವಾಗುವುದೂ, ಗಾಂಧೀಜಿಯ ಜೀವನಕ್ರಮ, ವಿಚಾರಗಳಲ್ಲಿ ಮಾತ್ರ ಎಂಬ ದೃಢ ನಂಬುಗೆ ಈ ಕೃತಿಯ ಮುಖ್ಯ 'ಸಾರ' ಆಗಿದೆ. ಮುಸ್ಲಿಂ ಜನದ ಬಗೆಗೆ ಆಡುವ ಮಾತುಗಳು ಈ ಹೊತ್ತು ಒಪ್ಪುವಂತಹುವಲ್ಲ. ಆ ಬಗೆಗೆ ಮರು ಆಲೋಚನೆ ಅಗತ್ಯ. ಆದರೆ, ಮಿಶ್ರವಿವಾಹಗಳ ಬಗೆಗೆ ಶಂಬಾ ಅವರು ತೋರಿಸುವ ಉತ್ಸಾಹ ಮೆಚ್ಚುವಂಥದ್ದೇ.

ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಹಿನ್ನೆಲೆಯಲ್ಲಿ ನೋಡಿದರೆ ನಮ್ಮ ಸಮಾಜದಲ್ಲಿ ಸ್ಥಿರತೆ ಇತ್ತು ಎಂಬ ಸನಾತನಿಗಳ ಮಾತನ್ನು 'ಸಮಾಜ ದರ್ಶನ'ವು, ಆಳವಾದ ಪರಿಶೀಲನೆಗೆ ತೆಗೆದುಕೊಳ್ಳುತ್ತದೆ. ಹಿಂದೂಗಳಲ್ಲಿ ಸಾಮಾಜಿಕ ಪ್ರಜ್ಞೆಯ ಅಭಾವವಿದೆ. ಅವನ ವ್ಯಕ್ತಿತ್ವದಲ್ಲಿ ಸಾಮಾಜಿಕತೆಯ ಅಂಶ ನಗಣ್ಯವಾಗಿರುತ್ತದೆಂದು ಮನಃಶಾಸ್ತ್ರಜ್ಞರು ಹೇಳುವ ಮಾತನ್ನು ಬಹು ಹಿಂದೆಯೇ ಶಂಬಾ ಪ್ರಸ್ತಾಪಿಸಿದ್ದಾರೆ. ಶಂಬಾ ಅವರು ಒಂದು ಕಡೆ ಹೇಳುವ ಮಾತು ಹೀಗಿದೆ:

> ಭಾರತದಲ್ಲಿ 'ಸಮಾಜ' ಎಂಬುದು ಇನ್ನೂ ನಿರ್ಮಾಣವಾಗಬೇಕಾಗಿದೆ. ಆದುದರಿಂದಲೇ ನಮ್ಮ ದೇಶದಲ್ಲಿ ಸಾಮಾಜಿಕತೆ ಇನ್ನೂ ತೀರ ಪ್ರಾಥಮಿಕ ಸ್ಥಿತಿಯಲ್ಲಿದೆ. ನಮ್ಮಲ್ಲಿ ಜಾತಿಗಳು ಬೆಳೆದುವು; ಧರ್ಮಗಳು ವಿಕಾಸಗೊಂಡುವು ರಾಜ್ಯಗಳು ಪ್ರವರ್ಧಮಾನ ಸ್ಥಿತಿಗೆ ಬಂದುವು. ಆದರೆ 'ಸಮಾಜ' ಎಂಬುದು ಆರೋಗ್ಯಕರವಾಗಿ ಬೆಳೆಯಲೆ ಇಲ್ಲ. ಏಕೆಂದರೆ ಅದು ಹಾಗೆ ಬೆಳೆಯಲು ಅವಶ್ಯಕವಾದ ವಾತಾವರಣವು, ಈವರೆಗೆ ಇಲ್ಲಿ ಸಿಕ್ಕಲೇ ಇಲ್ಲ. "ಆದುದರಿಂದ ಸಮಾಜದ ಸರಿಯಾದ ಅರಿವು ನಮ್ಮಲ್ಲಿ ಬಹುಜನರಿಗೆ ಇಲ್ಲ. ಪರಲೋಕ-ಸಾಧನವೇ ಜೀವನದ ಹಿರಿಗುರಿಯಾದ ಭಾರತೀಯರು, ನಿರ್ವಾಹವಿಲ್ಲದೆ ಎಷ್ಟೋ ಅಷ್ಟಕ್ಕಿಂತ ಹೆಚ್ಚು ಗಮನ ಈ ಲೌಕಿಕ ವ್ಯವಹಾರಗಳಿಗೆ

> ಕೊಡದೆ ಇದ್ದರೆ ಸೋಜಿಗವಿಲ್ಲ. ಮುಂದಿನ ಊರಿಗೆ ಹೊರಟ ಯಾತ್ರಿಕರು ಧರ್ಮಶಾಲೆಯಲ್ಲಿ ತಂಗುವಂತೆ, ನಮ್ಮವರ ಈ ಲೋಕದ ಜೀವನ ಯಾತ್ರೆ; ಇಲ್ಲಿಯ ಇರುವು. ಹೊಟ್ಟೆ ಕೇಳುವುದಿಲ್ಲ- ಅದಕ್ಕಾಗಿ ಹೇಗೊ ದುಡಿಯುವುದು; ಜೀವ ಕೇಳುವುದಿಲ್ಲ-ಅಂತೂ ಮದುವೆಯಾಗುವುದು; ಮದುವೆಯಾದ ತಪ್ಪಿಗೆ ಮಕ್ಕಳು ಗಂಟು ಬೀಳುವುವು. ಅಷ್ಟರೊಳಗೆ ಈ ಮಾಯಾ ಸಂಸಾರದೊಳಗಿಂದ ಅಥವಾ ಸಂಸಾರ ಮಾಯೆಯೊಳಗಿಂದ ಒಮ್ಮೆ ಪಾರಾಗಿ ಮುಕ್ತಿಯ ದಾರಿಯನ್ನು ಹಿಡಿವ ಅವಸರವೇ ಅವಸರ! 'ಸಮಾಜ' ಎಂಬುದರ ಆವಶ್ಯಕತೆ ನಮ್ಮ ಜೀವನದ ದಾರಿಯಲ್ಲಿ ಎಲ್ಲಿಯಾದರೂ ಉಂಟೆ? ಈ ಕಾರಣದಿಂದಲೆ ಭಾರತೀಯ ಸಮಾಜ ಅಥವಾ ಹಿಂದೂ ಸಮಾಜವೆಂಬುದು ಕೂಡ ಇನ್ನೂ ಬಾಲ್ಯಾವಸ್ಥೆಯನ್ನು ಮೀರಿ ಮುಂದೆ ಬೆಳೆದಿಲ್ಲ. (ಸಂಪುಟ ೬, ಪುಟ : ೨೬೪)

ಸಮಾಜರಚನೆಗೆ ಮುಖ್ಯ ತಳಹದಿ ಯಾವುದು? ತಂತ್ರಜ್ಞಾನವೆ, ಸಂಪತ್ತೆ? ಮನುಷ್ಯನ ಭೌತಿಕ ಪ್ರವೃತ್ತಿಗಳೆ, ಆರ್ಥಿಕ ಅಂಶಗಳೆ? ಪಶ್ಚಿಮ ದೇಶಗಳು ಇದು ವರೆಗಿನ ಚಾರಿತ್ರಿಕ ಸಂಗತಿಗಳನ್ನು ಗಮನಿಸಿ ಶಂಬಾ ಕೊಡುವ ತೀರ್ಮಾನ ಇದು: ಮನುಷ್ಯನಲ್ಲಿ ಸುಪ್ತವಾಗಿರುವ ಸತ್ ಪ್ರವೃತ್ತಿಗಳೇ ಅವುಗಳ ವೃದ್ಧಿಯೆ, ಸಮಾಜ ರಚನೆಯ ಪ್ರೇರಣಾಕೇಂದ್ರ. ಈ ದೃಷ್ಟಿಯು ಸಮಾಜವನ್ನು ಎತ್ತರಕ್ಕೆ ಒಯ್ಯಬಲ್ಲುದು. ಸಮಾಜವೆಂಬುದು ವ್ಯಕ್ತಿಯ ಅಂತಃಸತ್ವದ, ಸತ್ವದ, ವ್ಯಕ್ತಿ ಸ್ವಾತಂತ್ರ್ಯದ ವಿರೋಧಿಯಲ್ಲ ಎಂಬುದನ್ನು ಶಂಬಾ ತೋರಿಸಿಕೊಡುತ್ತಾರೆ. ಈ ಅಂಶವು "ಅಗ್ನಿವಿದ್ಯೆ", "ಅಸಂತೋಷವೆ ಏಳ್ಗೆಯ ಮೂಲ" ಈ ಕೃತಿಗಳಲ್ಲಿ ಬೀಜರೂಪದಿಂದ ಅಡಗಿದೆ. ಈ ಬಗೆಯ ಬೀಜರೂಪದ ಮಾತುಗಳು ಬೆಳೆದು ವಿಕಾಸ ಪಡೆದಿರುವ ನೆಲೆಗಳನ್ನು ಈ ಎರಡೂ ಕೃತಿಗಳಲ್ಲಿ ಕಾಣುತ್ತೇವೆ. ಇಲ್ಲಿ ಭಾಷ್ಯಕಾರನ ಪ್ರವೃತ್ತಿಗಿಂತ ವ್ಯಾಖ್ಯಾನಕಾರನಾಗಿ, ಜಿಜ್ಞಾಸುವಾಗಿ, ಸಂದೇಹಿಯಾಗಿ, ಶಂಬಾ ಕಾಣುತ್ತಾರೆ. ಸತ್ಯದ 'ನವದರ್ಶನ' ಸಂದೇಹದಲ್ಲಿ ಕಾಣಿಸಿಕೊಳ್ಳುತ್ತದೆಯಷ್ಟೆ. 'ಸಮಾಜ ದರ್ಶನ' ಎಂಬುದು ವ್ಯಕ್ತಿಗಿಂತ ವ್ಯಕ್ತಿತ್ವದ ವಿಕಾಸ, ಆಂತರಂಗಿಕ ವಿಕಾಸ ಹಾಗೂ ಸಮಷ್ಟಿದರ್ಶನದ ನೆಲೆಯಲ್ಲಿ ಇವೆಯೆಂಬ ಅಂಶವನ್ನು ಚರ್ಚಿಸುತ್ತವೆ.

> ಪೂರ್ಣತೆಯ ಆದರ್ಶದಲ್ಲಿ ಶ್ರದ್ಧೆಯಿಂದ ದೃಷ್ಟಿಯನ್ನು ಸ್ಥಿರಗೊಳಿಸಿ, ತನ್ನ ಅನುದಿನದ ನಡೆವಳಿಯಲ್ಲಿ ಅಪೂರ್ಣತೆಯ ಅರಿಮೆಯು ಇರುವಲ್ಲಿಯೇ ಮಾನವರ ಕ್ಷೇಮವಿದೆ. ಅಪೂರ್ಣತೆಯ ಮೂಲಕವಾಗಿಯೆ ಈ ಲೋಕದಲ್ಲಿ ಎಲ್ಲ ವಸ್ತುಗಳೂ ಒಂದಕ್ಕೊಂದು ಪೂರಕವಾಗಿ ಪೋಷಕವಾಗಿ ಇರಬಲ್ಲುವಾಗಿವೆ. ಒಬ್ಬರಿಗೆ ಇನ್ನೊಬ್ಬರ ಆವಶ್ಯಕತೆಯಿದೆ. ಇದರಿಂದಲೇ ಜನ ಬದುಕಿಕೊಂಡಿದೆ. ಸಾಮಾಜಿಕ ಭಾವನೆ ಜನಹೃದಯದಲ್ಲಿ ಸ್ಥಿರವಾಗಿ ಉಳಿದಿದೆ. ಸಮಾಜವು ದೃಢವಾಗಿ ಶಾಶ್ವತವೆನಿಸಿದೆ. ಏನೊಂದು ಕಾರಣದಿಂದ ತಾನು 'ಪೂರ್ಣ'ನೆಂಬ ಭ್ರಾಂತಿಯು ಸ್ವಲ್ಪ ತಲೆಯೆತ್ತಿದರೂ ಸಾಕು. ಆ ವ್ಯಕ್ತಿಯ ತಲೆ ತಿರುಗುವುದು; ಅನರ್ಥಗಳಿಗೆ ಆರಂಭವಾಗುವುದು. 'ಅಹಂ ಬ್ರಹ್ಮಾಸ್ಮಿ' ಎಂಬ ಕೊಬ್ಬು ಆಸುರೀವೃತ್ತಿಗೆ ಒಯ್ಯುವುದೆಂದು ಹೇಳುವುದು ಈ ಅರ್ಥದಲ್ಲಿ ತೀರ ಸರಿ. ಧನ-ಮಾನ, ಪಟ್ಟ-ಪದವಿಗಳ ಗಾಳಿ ಸೋಂಕುತ್ತಲೆ ಕಣ್ಣು ನೆತ್ತಿಗೇರಿ, ಸಂಗಡಿಗರಾಗಿದ್ದ ಸ್ನೇಹಿತರೂ ಕಾಣದಾಗುವರು. ಇಂತಹರು ರಾಜ, ಒಡೆಯ, ಗುರು, ಮಹಾರಾಜ, ಸರ್ವಾಧಿಕಾರಿ ಎಂಬಿವೇ ಮೊದಲಾದ ಒಂದಿಲ್ಲೊಂದು ಬಗೆಯ ಕೇಂದ್ರಸ್ಥಾನವನ್ನು ಸಂಪಾದಿಸಿ, ಬಳಿಕ ಲೋಕಕಂಟಕರಾದುದನ್ನು ಇತಿಹಾಸವು ಹೇಳುತ್ತದೆ. (ಸಂಪುಟ ೬, ಪುಟ : ೨೯೦-೨೯೧)

ಈ ವಿಚಾರಸರಣಿಗಳನ್ನು ಗಮನಿಸಿದರೆ: ಸಮಾಜವು ಅಧೋಗತಿಗೆ ಇಳಿಯುತ್ತ ಹೋಗಿವೆಯೆಂಬ ಅಂಶದ ಬದಲು ಸಮಾಜ ಸಂರಚನೆಯ ತಾತ್ವಿಕ ನೆಲೆಗಳು ಸಮಾಜ ಪುರುಷನ ಕೈ ಹಿಡಿದು ನಡೆಸಬಲ್ಲುವು ಎಂಬ ದೃಢ ನಂಬುಗೆಗಳೇ ಮುಖ್ಯ ಧ್ವನಿಗಳಾಗಿವೆ. ಇವು ಬಿಡಿಬಿಡಿಯಾದ ದನಿಗಳಲ್ಲ; ಇಡಿಯಾದ ದನಿಗಳು. 'ಸಮಾಜ ಪುರುಷ' ಎಂಬ ಶಬ್ದ ಪ್ರತಿಮೆಯು ಇಡಿಯಾದ ಸಾಂಸ್ಕೃತಿಕ ನೇಯ್ಗೆಯನ್ನು ನಮ್ಮ ಮುಂದೆ ತಂದು ಇರಿಸುತ್ತದೆ. ಶಂಬಾ ಅವರು ಸಮಾಜದ ವ್ಯಾಖ್ಯಾನಕಾರರೂ ಹೌದು; ಸಮಾಜದ ಹಿಂದಿರುವ ಸಾಂಸ್ಕೃತಿಕ, ತಾತ್ವಿಕನೆಲೆಗಳ ಶೋಧಕರೂ ಹೌದು. ವ್ಯಾಖ್ಯಾನಕಾರ ಹಾಗೂ ಶೋಧನಕಾರ ಎರಡೂ ಆಗುವುದು ಸಂಸ್ಕೃತಿಯ ಭಾಗ್ಯಗಳಲ್ಲಿ ಒಂದು. ಶಂಬಾ ಈ ದಾರಿಯಲ್ಲಿ ಜೀವನದುದ್ದಕ್ಕೂ ನಡೆದರು.

ಶಂಬಾ, ವ್ಯಕ್ತಿ-ವ್ಯಕ್ತಿತ್ವ-ಸಮಾಜ-ಸಮಾಜತ್ವ, ಇವುಗಳನ್ನು ವಿಚಾರಗರ್ಭದ ಆಶಯದಲ್ಲಿ 'ಆಕೃತಿ'ಗಳನ್ನು ಹುಡುಕಿಕೊಂಡು ಹೊರಟದ್ದು ಇಲ್ಲಿಯ ವರೆಗಿನ ಬರೆಹಗಳಲ್ಲಿ ನಾವು ಕಂಡಿದ್ದೇವೆ. ಅವರ ಸಾಹಿತ್ಯಕ ಕೃತಿಗಳಲ್ಲೂ ಈ ಅಂಶಗಳನ್ನು ಹಲವು ಬಗೆಗಳಲ್ಲಿ ನೋಡಲು ಸಾಧ್ಯ. ಸಂಸ್ಕೃತಿಯಲ್ಲಿ ಪಾರ್ಶ್ವಭಾಗಗಳ ಮೂಲಕ ಅರಸುವ ತಾತ್ತ್ವಿಕ ವಿನ್ಯಾಸವೊಂದುಂಟು. ಅದರಂತೆ, ಹಲವು ಪಾರ್ಶ್ವಭಾಗಗಳ ಸಮಾಕೀರ್ಣಗೊಳಿಸುವ ವಿನ್ಯಾಸವೂ ಉಂಟು. ತತ್ವಜ್ಞಾನವು, ವ್ಯಾಖ್ಯಾನಕಾರನ, ಶೋಧಕನ ಪಾರ್ಶ್ವನೆಲೆಗಳೇ ಆಗಿ ಇಡಿಯಾದ 'ಆಕೃತಿ' ರಚನೆಯ ಕಡೆ ಮುಖಹಾಕುತ್ತವೆ. ಶಂಬಾ ಅವರ ಸಾಹಿತ್ಯಕ ಬರೆಹಗಳೂ ಈ ಆಕೃತಿ-ಆಶಯಗಳನ್ನು ಹಿಡಿದೇ ನಡೆಯುತ್ತವೆ. ಅವರು ಬರೆದ 'ಮಕ್ಕಳ ಒಡಪುಗಳು, ಸೌಂದರ್ಯವಿಚಾರ, ಕರ್ಣನ ಮೂರುಚಿತ್ರಗಳು' ಈ ಸಂಪುಟದಲ್ಲಿ ಸೇರಿವೆ. ಇವು ಪ್ರಧಾನವಾಗಿ ಸಾಹಿತ್ಯಕ ಆಕೃತಿಗಳನ್ನು ಹೊಂದಿವೆ. ಈ ಸಾಹಿತ್ಯಕ ಆಕೃತಿಯೊಳಗಿನ ವಿನ್ಯಾಸಗಳ ನೆಲೆಗಳನ್ನು 'ವೈಚಾರಿಕಾಕೃತಿ'ಗಳ ವಿನ್ಯಾಸದಲ್ಲಿ ನೋಡುವ ವಿಶಿಷ್ಟ ಪರಿ ಇಲ್ಲಿದೆ.

ಸಾಹಿತ್ಯ-ಸಂಸ್ಕೃತಿಗಳ ವ್ಯಾಖ್ಯಾನ

ಶಂಬಾ ಅವರಿಗೆ 'ಮಹಾಭಾರತ' ಹಲವು ಬಗೆಗಳಲ್ಲಿ ಕಾಡಿದೆ. ಯಕ್ಷಪ್ರಶ್ನೆ ಹೊರಟದ್ದೇ ಮಹಾಭಾರತದ ಆ ಯಕ್ಷನ ರೂಪಕದ ಮೂಲಕ. ಆ ರೂಪಕವು 'ಕರ್ಣ'ನ ಮೂಲಕ ಇನ್ನೊಂದು ಹಂತದಲ್ಲಿ ವಿನ್ಯಾಸ ಪಡೆದಿರುವುದನ್ನು 'ಕರ್ಣನ ಮೂರುಚಿತ್ರಗಳು' ಎಂಬ ಪುಸ್ತಕದಲ್ಲಿ ಕಾಣುತ್ತೇವೆ. ಕನ್ನಡದಲ್ಲಿ 'ಕರ್ಣ'ನ ಬಗೆಗೆ ಬಂದಿರುವ ಬರೆಹಗಳ ಹಿನ್ನೆಲೆ ಹಿಡಿದು ನೋಡಿದರೆ, ಶಂಬಾ ಅವರ ವ್ಯಾಖ್ಯಾನ ಹಾಗೂ ವಿಶ್ಲೇಷಣೆಗಳು ತೀರ ಹೊಚ್ಚ ಹೊಸದಾಗಿವೆ. ಭಾವುಕತೆಯ ನೆರಳಿಗಿಂತ, ವೈಚಾರಿಕ ಬೆಳಕುಗಳೇ ಮುಖ್ಯ ಎಂಬ ಜೀವನಸ್ಥ ಆಶಯ ಪರಿಕಲ್ಪನೆಗಳು ಇಲ್ಲಿ ಕೆಲಸ ಮಾಡಿವೆ.

ಮಹಾಭಾರತವನ್ನು ಸಾಂಸ್ಕೃತಿಕ ನೆಲೆಯಿಂದ ನೋಡುವ ಬರೆಹಗಳು ನಮ್ಮಲ್ಲಿ ಕಡಮೆ. ಇತಿಹಾಸ ಮತ್ತು ಕಾವ್ಯಸತ್ತೆಯ ಭೂಮಿಕೆಯಿಂದ ಈ ಕೃತಿಯ ಸಮೀಕ್ಷೆ, ವ್ಯಾಖ್ಯಾನ, ವಿವರಣೆಗಳು ಸಾಕಷ್ಟು ಬಂದಿವೆ. ಆದರೆ, ಶಂಬಾ ಈ ಕೃತಿಯನ್ನು ಆ ಬಗೆಯ ನೋಟಗಳಿಂದ ಹೊಗದೆ, ಇನ್ನೊಂದು ಮುಖ್ಯವಾದ ದಾರಿಯನ್ನು ಹಿಡಿದಿದ್ದಾರೆ. ಆ ದಾರಿಯು ತುಂಬ ಕಷ್ಟದ್ದು. ಮಹಾಭಾರತವು ಆಧ್ಯಾತ್ಮಿಕ ನೆಲೆಗಳಿಂದಲೋ ಈ ಹಿಂದೆ ಹೇಳಿದಂತೆ ಸಾಹಿತ್ಯಕ ಹಾಗೂ ಐತಿಹಾಸಿಕ ನೆಲೆಗಳಿಂದಲೊ ವ್ಯಾಖ್ಯಾನಕ್ಕೆ ಒಳಪಡಬಹುದು. ಅಥವಾ ಒಳಪಡಿಸಲು ಸಾಧ್ಯ. ಆದರೆ, ಇದೇ ಮಾತನ್ನು ಸಾಂಸ್ಕೃತಿಕ ವ್ಯಾಖ್ಯಾನಕ್ಕೆ ಒಳಪಡಿಸುವ ಸಾಧ್ಯತೆ ಇದೆಯೆ? ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವುದು ಕಡುಕಷ್ಟ. ಈ ಕಡುಕಷ್ಟದ ಹಾದಿಯನ್ನು ಶಂಬಾ ಹಿಡಿದು ನಡೆದಿದ್ದಾರೆ. ಅವರು, ಮರಾಠಿಯಲ್ಲೂ ಕನ್ನಡದಲ್ಲೂ ಈ ಬಗೆಯ ಲೇಖನಗಳನ್ನು ಬರೆದಿದ್ದಾರೆ. ಅವು ಬಹು ಮಹತ್ವವುಳ್ಳ ಲೇಖನಗಳಾಗಿವೆ. ಅವು ಮಹಾಭಾರತದ ಆಶಯ-ಆಕೃತಿಗಳನ್ನು ಕುರಿತು ಚರ್ಚಿಸುತ್ತವೆ. ವ್ಯಾಸನ ಕೈವಾಡ ಹಾಗೂ ಕಾವ್ಯದ ಪ್ರತಿಭೆಯು ವಾಸ್ತವತೆಯನ್ನು ಮುಚ್ಚಿರುವ ಹಾಗೂ ಗಹನತೆಯನ್ನು ಕುರಿತೇ ವ್ಯಾಖ್ಯಾನಿಸುತ್ತದೆ. ಕೃಷ್ಣ-ಅರ್ಜುನ ಈ ಪಾತ್ರಗಳಲ್ಲಿ ಹುದುಗಿರುವ ಸಂಕೇತಾರ್ಥಗಳನ್ನು ಕುರಿತಿರುವಂತೆ 'ಕರ್ಣ' ಪ್ರತಿಮೆಯ ಮೌಲಿಕತೆಯನ್ನು ಕುರಿತು ವ್ಯಾಖ್ಯಾನಿಸಲು ಶಂಬಾ ಹೊರಡುತ್ತಾರೆ.

'ಕರ್ಣನ ಮೂರುಚಿತ್ರಗಳು' ಪಂಪ, ಕುಮಾರವ್ಯಾಸ, ವ್ಯಾಸ ಈ ಮೂವರು ಕವಿಗಳ ಕಾವ್ಯಗಳಲ್ಲಿ ಕರ್ಣನ ಪಾತ್ರ ಸ್ವಭಾವಗಳನ್ನು ಕುರಿತು ಚಿಂತಿಸುತ್ತದೆ. ಅವರು ತಮ್ಮ ಪುಸ್ತಕದ ಅರಿಕೆಯಲ್ಲಿ

> ಕುಮಾರವ್ಯಾಸ, ಪಂಪರ ಕೃತಿ ಮತ್ತು ಸಂಸ್ಕೃತ ಭಾರತ ಇಂತಹ ಮಹಾಗ್ರಂಥಗಳಲ್ಲಿ ಕುಂದುಕೊರತೆಗಳುಂಟೆಂದು ಒಮ್ಮೆಲೆ ಹೇಳುವುದು ಒಂದು ಬಗೆಯ ಅವಿಚಾರದ ಸಾಹಸ, ಔದ್ಧತ್ಯವಾದೀತೆಂದು ಬಗೆದು ಈ ಸಂದೇಹಗಳನ್ನು ನನ್ನಲ್ಲಿಯೆ ಇಟ್ಟುಕೊಂಡಿದ್ದೆ. ಆದರೆ, ಹಲವು ಬಗೆಯಾಗಿ ವಿಚಾರ-ಚರ್ಚೆಗಳನ್ನು ನಡೆಸಿದ ನಂತರವೂ ನನ್ನ ಮೂಲಪ್ರಶ್ನೆಗೆ ಸರಿಯಾಗಿ ಯಾರಿಂದಲೂ ಉತ್ತರವು ದೊರೆಯದ್ದರಿಂದ ಕಂನಾಡ ಬಲ್ಲಿದರ ಎದುರಿಗೆ ನನ್ನ ಈ ವಿಚಾರಗಳನ್ನು ಮಂಡಿಸುವುದಕ್ಕೆ ಮನಸು ಮಾಡಿದ್ದೇನೆ.
> (ಸಂಪುಟ ೬, ಪುಟ : ೩೮೫)

ನಾನು ಈ ಮೊದಲು ಹೇಳಿದಂತೆ ಶಂಬಾ ಅವರು ತಮ್ಮ ವಿಚಾರಗಳನ್ನು ಮಂಡಿಸುವಾಗ ಸಮಸ್ಯೆಯನ್ನು ಮುಂದಿಟ್ಟು ಪರಿಹಾರ ಕೇಳುವ ಉದ್ದೇಶದ ಕಡೆ ಹೊರಳುವುದಿಲ್ಲ. ಅವರು, ಅದಕ್ಕಿಂತ ಹಿರಿದಾದ ಸಾಂಸ್ಕೃತಿಕ ಜವಾಬ್ದಾರಿಯಿಂದ ಇಂಥ ಸಮಸ್ಯೆಗಳನ್ನು ಎತ್ತುತ್ತಾರೆ. ಇವತ್ತಿನ ನಮ್ಮ, ಬದುಕಿನ ಅನೇಕ ಸಮಸ್ಯೆಗಳ ಮೂಲಕಾರಣವನ್ನು ಅನ್ವೇಷಿಸುವ ಹೊಣೆಗಾರಿಕೆಯನ್ನೂ ಜವಾಬುದಾರಿಯನ್ನೂ ತಾವೇ ಹೊರುತ್ತಾರೆ. ಅವರ ಮಾತುಗಳು ಹೀಗಿವೆ:

> ಇಂದಿನ ಪರಿಣಾಮದ ಕಾರಣವು ನಿನ್ನೆಯಲ್ಲಿರುತ್ತದೆ. ಈ ದೃಷ್ಟಿಯಿಂದ ನಮ್ಮ ಇಂದಿನ ರಾಷ್ಟ್ರೀಯ ಅವನತಿಯ ಬೇರುಗಳು, ನಮ್ಮ ಜನಗಳಿಗೆ ಆದರ್ಶವಾಗಿ ದಿನದ ನಡೆವಳಿಗೆ ಸ್ಫೂರ್ತಿಯನ್ನೀವ ಹಿಂದಿನ ಸಾಹಿತ್ಯದಲ್ಲಿ ಸೂಕ್ಷ್ಮವಾಗಿ ಎಲ್ಲಿಯಾದರೂ ಅಡಗಿ ಕೊಂಡಿರಲೇಬೇಕೆಂಬುದರಲ್ಲಿ ಸಂದೇಹವಿಲ್ಲ. ಈಗಿನ ನಮ್ಮ ಕೀಳ್ಮೆಗೆ ಕಾರಣವಾದ ಹಲವು ಮಾತುಗಳಲ್ಲಿ ಒಂದನ್ನು ಕಂಡುಕೊಂಡ ಸಮಾಧಾನವು ಈ ಪ್ರಕಟನೆಯಿಂದ ನನಗೆ ದೊರೆಯುತ್ತಲಿದೆ. 'ನಿನ್ನೆ' ಎಲ್ಲವೂ ದೋಷರಹಿತವೇ ಆಗಿದ್ದರೆ ಇಂದು ನರಳುವ, ಬಳಲುವ ಪಾಡು ಏಕೆ ಉಂಟಾಗುತ್ತಿತ್ತು? ನಿನ್ನೆಯೊಳಗಿನ ಗುಣದೊಡನೆ ಬೆರೆತುಕೊಂಡು ಕುಂದು-ಕೊರತೆಗಳನ್ನೂ ಗುಣವೆಂದೇ ಎತ್ತಿ ಕೊಂಡಾಡುವುದು ನಮ್ಮ ನಾಳಿನ ನೆಮ್ಮದಿಗೆ ಸಾಧನವಾಗದು. ಆದುದರಿಂದ ಹಿಂದಿನದು ಎಷ್ಟೇ ಹಿರಿದಾಗಿದ್ದರೂ ಏಳ್ಗೆಯನ್ನು ಹಾರಯಿಸುವ ಜನಾಂಗದವರು ಅದರ ಗುಣದೋಷಗಳನ್ನೂ ಸರಿಯಾಗಿ ಅರಿತುಕೊಳ್ಳುವುದು ಕರ್ತವ್ಯವಾಗಿದೆ. (ಸಂಪುಟ ೬, ಪುಟ : ೩೮೫)

ಜೋಶಿಯವರ ಅಧ್ಯಯನದ ಹಿಂದೆ ಕೇವಲ ಸಾಹಿತ್ಯ ಅಭ್ಯಾಸಿಯೊಬ್ಬನ ಕುತೂಹಲ ಮಾತ್ರವಲ್ಲದೆ. ಸಂಸ್ಕೃತಿಯನ್ನು ವ್ಯಾಖ್ಯಾನಿಸಬಯಸುವ ಸಂಶೋಧಕನೊಬ್ಬನ ವೈಚಾರಿಕ ಪ್ರತಿಭೆಯುಳ್ಳ ಮನಸ್ಸನ್ನು ಕಾಣುತ್ತೇವೆ. ಕುಮಾರವ್ಯಾಸನ ಭಾರತವನ್ನು ಓದುವಾಗ ಕರ್ಣನ ಪಾತ್ರಚಿತ್ರಣದ ಬಗೆಗೆ ಕೆಲವು ಸಂದೇಹಗಳು ಅವರಿಗೆ ಮೂಡಿವೆ. ಅವುಗಳ ಪರಿಹಾರಕ್ಕಾಗಿ ಪಂಪಭಾರತವನ್ನೂ ಮೂಲ ಸಂಸ್ಕೃತಭಾರತವನ್ನೂ ಪರಿಶೀಲಿಸಿದ್ದಾರೆ. ಮೂರು ಕೃತಿಗಳಲ್ಲಿ ಹುದುಗಿರುವ ಕರ್ಣನ ಪಾತ್ರದ ಸ್ವಭಾವ, ವಿಸಂಗತಿ, ಒರಟುತನಗಳನ್ನು ಗುರುತಿಸಿದ್ದಾರೆ. ಅವರು ಕರ್ಣನ ವಿಶ್ಲೇಷಣೆಗೆ ಆರಿಸಿಕೊಂಡದ್ದು ಮೂರು ಮುಖ್ಯ ಪ್ರಸಂಗಗಳನ್ನೇ. ಕರ್ಣ-ಕೃಷ್ಣರ ಭೇಟಿ, ಕರ್ಣ-ಕುಂತಿಯರ ಭೇಟಿ, ರಣರಂಗದಲ್ಲಿ ಕರ್ಣ. ಈ ಮೂರು ಪ್ರಸಂಗಗಳಲ್ಲಿ ಕುಮಾರವ್ಯಾಸನ ಕರ್ಣನು ಕೀಳನೆಂಬ ಅರಿಮೆಯ ತೊಡಕಿನಿಂದ ಬಳಲುತ್ತಿರುವಂತೆ ಕಾಣುತ್ತದೆಯೆಂದು ಶಂಬಾ ಅವರು ತಮ್ಮ ಈ ಸಂದೇಹವನ್ನು ವ್ಯಕ್ತಪಡಿಸಿ ಇದರ ಕಾರಣವನ್ನು 'ಭಕ್ತಿಮಾರ್ಗ'ದ ನೆಲೆಯು ಇದಕ್ಕೆ ಪರ್ಯಾಯವಾಗಿ

ಕಾರಣವಾಗಿರಬಹುದೇ? ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಪಂಪನು ಕರ್ಣನನ್ನು ಚಿತ್ರಿಸಿರುವ ಬಗೆ ಕುಮಾರ ವ್ಯಾಸನಿಗಿಂತ ಬೇರೆಯಾಗಿಲ್ಲ. ತಾಯಿಗೆ ಮಾತುಕೊಡುತ್ತಾನೆ. ಆದರೆ, ತನ್ನ ಒಡೆಯನಿಗೆ ತಿಳಿಸದೆ ವಂಚಿಸುತ್ತಾನೆ. ಪಂಪನು ಶಲ್ಯನ ಮೂಲಕ ಏಕಗ್ರಾಹಿ, ಒರಂಟ ಎಂದು ಹೇಳಿಸುವುದನ್ನು ಶಂಬಾ ಗುರುತಿಸುತ್ತಾರೆ. ಪಂಪನಿಗೆ ಕರ್ಣನ ದೋಷಗಳ ಅರಿವು ಇತ್ತೆಂಬುದನ್ನು ಬೆರಳಿಟ್ಟು ತೋರಿಸುತ್ತಾರೆ. ಆದರೆ, ಶಂಬಾ ಅವರ ಅತೃಪ್ತಿ ಶಮನಗೊಳ್ಳುವುದು ವ್ಯಾಸನ 'ಭಾರತ' ವನ್ನು ಓದಿದಾಗ. ಇಲ್ಲಿಯ ಕರ್ಣನ ಚಿತ್ರವು ಸರಿಯಾಗಿ ಬಂದಿದೆ. ಪಂಪ, ಕುಮಾರವ್ಯಾಸರಿಗಿಂತ ವ್ಯಾಸರಲ್ಲಿ ಕರ್ಣನ ಪಾತ್ರವು ಹೆಚ್ಚು ಸುಸಂಗತವಾಗಿ ಚಿತ್ರಿತವಾಗಿರುವುದನ್ನು ಉದಾಹರಣೆಗಳ ಮೂಲಕ ಶಂಬಾ ವ್ಯಾಖ್ಯಾನಿಸುತ್ತಾರೆ.

ಶಂಬಾ ಅವರು ಈ ಮೂರು ಕರ್ಣರ ತೂಕ ಮಾಡುತ್ತ ಆಡಿರುವ ಮಾತುಗಳು ಗಮನೀಯವಾದವು. ಇದು ಹಲವು ಬಗೆಯ ಗಂಭೀರ ಚರ್ಚೆಗಳಿಗೆ ಕರೆದೊಯ್ಯುವಂಥವು. ಒಂದು ಕೃತಿಯ ಸಂರಚನೆ ಎಂದರೆ ಆ ಕಾಲದ ಸಾಂಸ್ಕೃತಿಕ ರಚನೆಯ ಆಶಯಗಳೆಂದೇ ಶಂಬಾ ಬಗೆಯುತ್ತಾರೆ. ಅವರು, ಮುಂದೆ ಈ ಪಾತ್ರಗಳನ್ನು ಸಾಂಕೇತಿಕ ಪಾತಳಿಯ ಮೇಲೆ ನಿಲ್ಲಿಸಿ ವ್ಯಾಖ್ಯಾನಿಸುವುದಕ್ಕೆ ಈ ಬಗೆಯ ಅಧ್ಯಯನಗಳು ಪರ್ಯಾಯವಾಗಿ ನೆರವಾಗಿವೆ ಹಾಗೂ ನೆರವಾಗುತ್ತವೆ. ಈ ವಿಶ್ಲೇಷಣೆಯು ಸ್ವೋಪಜ್ಞವೂ ಮಹತ್ವದ್ದೂ ಆಗಿರುವುದು ಗಮನಾರ್ಹ. ಪಠ್ಯಕೇಂದ್ರಿತ ವಿಮರ್ಶಾ ಅಧ್ಯಯನಕ್ಕೆ ತೊಡಗುವ ಶಂಬಾ ಉತ್ತಮ ಸಾಹಿತ್ಯ ವಿಮರ್ಶಕರೂ ಜತೆಜತೆಗೆ ಸಾಂಸ್ಕೃತಿಕ ವಿಮರ್ಶಕರೂ ಆಗಿರುವುದು ಇಲ್ಲಿ ಎದ್ದು ಕಾಣುವ ಸಂಗತಿ. ಅವರು ಪಠ್ಯವನ್ನು ಇಟ್ಟುಕೊಂಡು ನಡೆಸುವ ವ್ಯಾಖ್ಯಾನ, ತೌಲನಿಕವಿಶ್ಲೇಷಣೆ, ವಿಷಯ ಮಂಡನೆಯ ಖಾಚಿತ್ಯ- ಇವು ಬಹುಮೌಲಿಕವೂ ಮಾರ್ಗದರ್ಶಕವೂ ಆಗಿವೆ.

ಶಂಬಾ ಜೋಶಿಯವರ ವ್ಯಾಖ್ಯಾನವು ಏಕಮುಖವಾಗದೆ; ಬಹುಮುಖವುಳ್ಳದ್ದೆಂಬ ಸಂಗತಿಯನ್ನು ಈ ಸಂಪುಟದ ಎಲ್ಲ ಬರೆಹಗಳು ರುಜುವಾತು ಪಡಿಸುತ್ತವೆ. ಈ ಎಲ್ಲ ಬರೆಹಗಳನ್ನು ನಾವು ಸಾಹಿತ್ಯಕ ಉತ್ಪನ್ನವೆಂದು ಭಾವಿಸುವಂತಿಲ್ಲ. ಇವೆಲ್ಲವೂ ಸಾಂಸ್ಕೃತಿಕ ಉತ್ಪನ್ನಗಳೇ ಆಗಿವೆ. ನಮ್ಮ ಭಾಷೆ ನಮಗೆ ಕನ್ನಡಿಯಷ್ಟೆ. ನಮ್ಮ ಜೀವನಾದರ್ಶಗಳು ಆಯಾಯ ಆಕೃತಿಗಳಲ್ಲಿ ಪಡಿಮೂಡಿನಿಲ್ಲಬೇಕು. ಇಂದಿನ ನಮ್ಮ ಬದುಕಿನ ಎಲ್ಲ ಬಗೆಯ ವಿಸಂಗತಿಗಳಿಗೆ ನಿನ್ನೆಯ ಸಂಗತಿಗಳೂ ಕಾರಣವಾಗಿವೆ. ಈ ಬಗೆಯ ಇಂದಿನ ದುರ್ದೈವ ನಿನ್ನೆಯಲ್ಲಿದೆ. ನಿನ್ನೆಯನ್ನು ಅರಿಯುವುದೆಂದರೆ ಇಂದಿನದ್ದನ್ನು ತಿಳಿಯುವುದೇ ಆಗಿದೆ. ಇದು ಭಾಷೆಯ ಮೂಲಕ ಕಟ್ಟಿರುವ ಸಾಂಸ್ಕೃತಿಕ ಆಕೃತಿಗಳನ್ನು ತಾತ್ವಿಕವಾಗಿ ತಿಳಿಯುವುದೇ ಇದರ ಮೂಲಕಾರಣವಾಗಿದೆ. ಶಂಬಾ ಅವರಂಥ ವೈಚಾರಿಕ ಪ್ರತಿಭೆ ಈ ಶತಮಾನದಲ್ಲೆ ಅಪೂರ್ವ. ಆ ಅಪೂರ್ವ ಸಾಂಸ್ಕೃತಿಕ ಹೆಣಿಗೆ, ವಿನ್ಯಾಸಗಳನ್ನು ಹಲವು ಬಗೆಗಳಲ್ಲಿ ನಮ್ಮ ಮುಂದಿಡುವುದು ಅವರ ಕ್ರಿಯೌಚಿತ್ಯವಾಗಿದೆ. ಈ ಕ್ರಿಯೌಚಿತ್ಯವು ಸಂಸ್ಕೃತ, ಕನ್ನಡ, ಮರಾಠಿ, ಇಂಗ್ಲಿಶ್ ಎಂಬ ಭೇದಗಳನ್ನು ತಿಳಿಯುವುದಿಲ್ಲ; ಮಹಾಕಾವ್ಯ, ಪುರಾಣ, ಸ್ಮೃತಿ - ಶ್ರುತಿಗಳೆಂಬ ಭೇದಗಳನ್ನು ತಿಳಿಯುವುದಿಲ್ಲ; ದೇಶ, ಕಾಲ, ಭೇದ, ವಸ್ತು ಸಾಮಗ್ರಿಗಳೆಂಬ ಭೇದಗಳನ್ನು ತಿಳಿಯುವುದಿಲ್ಲ. ಅದನ್ನೆಲ್ಲ ಒಂದೇ ಎಂದು ಅದು ತಿಳಿಯುತ್ತದೆ. ಸತ್ಯದ ಗ್ರಹಿಕೆ ಕೇವಲ 'ಖಂಡಾತ್ಮಕ' ನೆಲೆಯಲ್ಲಿ ಸಾಧ್ಯವಿಲ್ಲ. ಆ ಸತ್ಯದ ಗ್ರಹಿಕೆಯು 'ಅಖಂಡಾತ್ಮಕ' ನೆಲೆಯಲ್ಲಿ ಮಾತ್ರ ಸಾಧ್ಯ. ಇಲ್ಲಿಯ ಬರೆಹಗಳು ಅವುಗಳ ಸೂಕ್ಷ್ಮ ಸಾಂಸ್ಕೃತಿಕ ಸತ್ಯಗಳನ್ನು ತೆರೆದು ತೋರಿಸುತ್ತವೆ. ಇವು ಸಾಂಸ್ಕೃತಿಕ ಅನುಭಾವಿಯೊಬ್ಬನ ದೀರ್ಘವ್ಯಾಸಂಗ, ಚಿಂತನ, ಮನನಗಳಿಂದ ರೂಪುಗೊಂಡದ್ದು. ಶಂಬಾ ಕನ್ನಡದ ತತ್ವಜ್ಞರೆಂಬುದು ಈ ದಿಕ್ಕಿನಿಂದ ಸತ್ಯವೇ ಹೌದು. ಈ ಸಂಪುಟದ ಬರೆಹಗಳು ನನ್ನ ಮಾತನ್ನು ರುಜುವಾತುಗೊಳಿಸುತ್ತವೆ.

ಮಲ್ಲೇಪುರಂ ಜಿ. ವೆಂಕಟೇಶ

ಪರಿವಿಡಿ

ಮಹರ್ಷಿ ಅರವಿಂದ ಘೋಷ

ಇವರ ಸಂಕ್ಷಿಪ್ತ ಚರಿತ್ರವು

ಪ್ರಸ್ತಾವನೆ

ಶ್ರೀ ಶಂಕರರಾವ ಜೋಶಿಯವರು ಬರೆದ ಈ ಚಿಕ್ಕ ಪುಸ್ತಕವು, ನಮ್ಮ ದೇಶದ ಮೂವತ್ತಮೂರು ಕೋಟಿ ಜನರ ಉದ್ಧಾರಾರ್ಥವಾಗಿ ಈಗ ಹನ್ನೆರಡು ವರ್ಷಗಳಿಂದ ತಪಶ್ಚರ್ಯವನ್ನು ಮಾಡುತ್ತ, ಏಕಾಂತದಲ್ಲಿ ಕುಳಿತಿರುವ ಮಹಾಯೋಗಿಗಳಾದ ಶ್ರೀ ಅರವಿಂದಘೋಷ ಇವರ ಈವರೆಗಿನ ಇತಿಹಾಸವು. ಮಹರ್ಷಿ ಅರವಿಂದಘೋಷರವರ ಪರಿಚಯವು ಇತ್ತಲಿನ ತರುಣರಿಗೆ ವಿಶೇಷವಾಗಿ ಇರುವದಿಲ್ಲ. ಹನ್ನೆರಡು ವರ್ಷಗಳ ಹಿಂದೆ ಅವರು ರಾಜಕೀಯ ರಣಾಂಗಣದಲ್ಲಿ ಲೋಕಮಾನ್ಯ ಟಿಳಕರವರಿಗೆ ಸರಿಸಮಾನಸ್ಕಂಧರಾಗಿ ಸರಕಾರ ದೊಡನೆ ಕಾದುತ್ತಿದ್ದರು. ಆದರೆ, ಕೇವಲ ರಾಜಕೀಯೋನ್ನತಿಯ ಧ್ಯೇಯವು ಹಿಂದೂಸ್ಥಾನಕ್ಕೆ ಸಾಲದೆಂದೂ ನಮ್ಮ ಆರ್ಯಭೂಮಿಯ ಉದ್ಧಾರವನ್ನು ಮಾತ್ರವೇ ಅಲ್ಲ, ಇಡೀ ಮಾನವ ಜಾತಿಯ ಉದ್ಧಾರವನ್ನು ಮಾಡಬೇಕೆಂಬ ಅತ್ಯುಚ್ಚವಾದ ಮಹತ್ವಾಕಾಂಕ್ಷೆಯಿಂದ ಅವರು ರಾಜಕೀಯ ರಣಾಂಗಣವನ್ನು ತೊರೆದು, ಘೋರತರವಾದ ತಪಶ್ಚರ್ಯವನ್ನು ಪ್ರಾರಂಭಿಸಿರುವರು. ಅವರ ತಪಶ್ಚರ್ಯವು ಈಗ ಮುಗಿಯುತ್ತ ಬಂದಿರುವದು. ಮತ್ತು ಬೇಗನೇ ಅವರು ತಮ್ಮ ಅವತಾರ ಕಾರ್ಯವನ್ನು ಆರಂಭಿಸುವವರಿರುವರೆಂದು ಅವರ ಭಕ್ತರು ಸಾರುತ್ತಿರುವರು. ಇಂಥ ಸಮಯದಲ್ಲಿ ಅವರ ಉಜ್ವಲವಾದ ಇತಿಹಾಸವನ್ನು ನಮ್ಮ ಜನರ ಮುಂದಿಟ್ಟು, ಆ ಮಹಾವಿಭೂತಿಯ ಕಡೆಗೆ ಶ್ರೀ ಶಂಕರರಾವ ಜೋಶಿಯವರು ಜನಮನವನ್ನು ಆಕರ್ಷಿಸಿದ್ದು ಬಹಳ ಯೋಗ್ಯವಾದ ಕಾರ್ಯವೆಂದು ಯಾರು ಹೇಳಲಿಕ್ಕಿಲ್ಲ?

ಈ ಪುಸ್ತಕಕ್ಕೆ ಪ್ರಸ್ತಾವನೆಯನ್ನು ಬರೆಯುವದೆಂದರೆ ಮಹರ್ಷಿ ಅರವಿಂದರವರ ಚರಿತ್ರೆಯ ಮರ್ಮವನ್ನು ಸೂತ್ರರೂಪವಾಗಿ ಹೇಳಬೇಕಾಗುವದಲ್ಲವೆ? ಹಾಗೆ ಮಾಡುವದು ಮಾತ್ರ ದುಸ್ತರವಾದ ಕೆಲಸವು. ಯಾಕೆಂದರೆ, ಅವರ ಚರಿತ್ರವು ಮೊದಲಿನಿಂದಲೇ ಲೋಕೋತ್ತರವಾದುದು, ಗೂಢವಾದುದು, ಗಂಭೀರವಾದುದು, ಅತರ್ಕ್ಯವಾದುದು. ಅವರ ಚಾರಿತ್ರ್ಯಕ್ಕೆ-ನಿಜವಾದ ಚಾರಿತ್ರ್ಯಕ್ಕೆ ಇನ್ನು ಮುಂದೆ ಪ್ರಾರಂಭವಾಗತಕ್ಕದ್ದಿರುವದು. ಈಗ ಸದ್ಯಕ್ಕೆ ಅವರು ಅವ್ಯಕ್ತ ಸ್ಥಿತಿಯಲ್ಲಿ ಇರುವರು; ಮೌನವ್ರತಸ್ಥರು; ಯಾವ ಬಗೆಯ ತಪಶ್ಚರ್ಯವನ್ನು ನಡಿಸಿರುವರೆಂಬುದು ನಮಗೆ ಗೊತ್ತಿಲ್ಲ. 'ಆರ್ಯ'ವೆಂಬ ಮಾಸಪತ್ರಿಕೆಯಲ್ಲಿ ಏಳು ವರ್ಷಗಳಿಂದ ಅವರು, ಜಗತ್ತಿನ ವಿಚಾರದಲ್ಲಿಯೇ ಪ್ರಬಲವಾದ ಕ್ರಾಂತಿಯನ್ನುಂಟು ಮಾಡುವಂಥ ಅತ್ಯಂತ ಗಹನವಾದ ವಿಚಾರಗಳನ್ನು ಪ್ರಕಟಗೊಳಿಸುವರೆಂಬದು ಮಾತ್ರ ನಮಗೆ ಗೊತ್ತಿದೆ. ಅವರು ಆ ವಿಚಾರಗಳನ್ನು ಪ್ರತ್ಯಕ್ಷವಾಗಿ ಕೃತಿಯಲ್ಲಿ ತರುವದಕ್ಕೆ ಯಾವ ಬಗೆಯ ಸಾಧನಗಳನ್ನು ಕೈಕೊಳ್ಳುವರೆಂಬುದು ಇನ್ನೂ ಗೂಢವಾಗಿದೆ. ಇಂಥ ಸ್ಥಿತಿಯಲ್ಲಿ,

ನಾವು ಅವರ ಚಾರಿತ್ರ್ಯದ ಮರ್ಮವನ್ನು ಅವರ ಜೀವಿತದ ಸಂದೇಶವನ್ನು ಅವರ ಆಯುಷ್ಯದ ಆದೇಶವನ್ನು ಹೇಳಲೆತ್ನಿಸುವದೆಂದರೆ ಒಂದು ರೀತಿಯಿಂದ ಭವಿಷ್ಯ ಪುರಾಣವನ್ನು ಬರೆಯುವದೇ ಸರಿ. ಇರಲಿ.

ಶ್ರೀ ಬಾಬೂ ಅರವಿಂದರ ಆಯುಷ್ಯಕ್ರಮಣವನ್ನು ಮೊದಲಿನಿಂದ ನಿರೀಕ್ಷಿಸಿದರೆ ನಮಗೆ ಏನು ತೋರುತ್ತದೆ? ಅವರು ಜನರು ಏನೆಂದಾರೆಂಬದನ್ನು ಲಕ್ಷಕ್ಕೆ ತಾರದೆ, ಕೇವಲ ಅಂತಃಪ್ರೇರಣೆಯಿಂದ ತಮ್ಮ ಆತ್ಮದ ಉನ್ನತಿಯನ್ನು ಸಾಧಿಸುತ್ತ ಬಂದಿರುವರು. ಮೊದಲು ಅವರು ಆಯ್.ಸಿ.ಎಸ್. ಪರೀಕ್ಷೆಯನ್ನು ಕೊಟ್ಟು, ಕಲೆಕ್ಟರ ಕಮಿಶನರ ಮುಂತಾದ ಅಧಿಕಾರಗಳನ್ನು ಸಂಪಾದಿಸುವ ದಾರಿಯನ್ನು ಹಿಡದಿದ್ದರು. ಆ ಪರೀಕ್ಷೆಯಲ್ಲಿ ಪಾಸಾಗಿ ಇಂಗ್ಲಂಡದಲ್ಲಿ ಮೇಲಿನ ನಂಬರನ್ನು ಪಡೆದರು. ಆದರೆ ನಮ್ಮ ಸುದೈವದಿಂದ ಅವರು ಕುದುರೆಯನ್ನೇರುವದರಲ್ಲಿ ಅಕಸ್ಮಾತ್ತಾಗಿ ನಾಪಾಸಾದರು (ಕೆಲವರು ಅವರು ಅದಕ್ಕೆ ಕೂಡಲೇ ಇಲ್ಲವೆಂದು ಹೇಳುವರು.) ಆದ್ದರಿಂದ ಅವರ ಆ ಮಾರ್ಗವು ತಪ್ಪಿಹೋಯಿತು. ಆ ನಂತರ ಬಡೋದೆಯಲ್ಲಿ ಪ್ರೊಫೆಸರ, ವ್ಹಾಯಿಸ ಪ್ರಿನ್ಸಿಪಾಲ ಮುಂತಾದ ಹುದ್ದೆಗಳನ್ನು ಪಡೆದರು. ಇನ್ನೂ ಮುಂದೆ ದಿವಾಣರಾಗತಕ್ಕವರಿದ್ದರು. ಆದರೆ, ಇಷ್ಟರಲ್ಲಿ ನಮ್ಮ ದೇಶದಲ್ಲಿ ಸ್ವದೇಶಿ ಚಳವಳಿಯು ಪ್ರಾರಂಭವಾಯಿತು. ಕೂಡಲೆ, ಇವರಿಗೆ ದೈವಿಕ ಪ್ರೇರಣೆಯುಂಟಾಯಿತು. ಇವರು ಆ ಬಡೋದೆಯ ನವಕರಿಯಮೇಲೆ ತಿಲಾಂಜಲಿಯನ್ನಿಟ್ಟು, ದಾರಿದ್ರ್ಯ ವ್ರತವನ್ನು ಸ್ವೀಕರಿಸಿ ರಾಜಕೀಯ ರಣಾಂಗಣದಲ್ಲಿ ಒಮ್ಮೆಲೆ ಧುಮುಕಿದರು. ಆಗ ಇವರ ವಯಸ್ಸು ತೀರ ಚಿಕ್ಕದು, ಅಂದರೆ ೩೨. ಆದರೆ, ಧುಮುಕುವದೊಂದೇ ತಡ, ಒಂದೆರಡೇ ವರ್ಷಗಳಲ್ಲಿ, ಇವರು ತಮ್ಮ ಬುದ್ಧಿಬಲದಿಂದ, ಮೇಧಾಸಾಮರ್ಥ್ಯದಿಂದ ಎಲ್ಲ ದೇಶಭಕ್ತರಿಗಿಂತ ಮುಂದೆ ಈಸಿ ಹೋಗಿ ಲೋಕಮಾನ್ಯರ ಸರಿಸಮಾನಸ್ಕಂದರಾದರು. ದೇಶಾಭಿಮಾನಕ್ಕೆ ದಿವ್ಯವಾದ ತೇಜಸ್ಸನ್ನು ಕೊಟ್ಟರು. ತರುಣರಲ್ಲಿ ರಾಷ್ಟ್ರೀಯತ್ವದ ಜ್ಯೋತಿಯನ್ನು ಹೊತ್ತಿಸಿದರು. ಆದರೆ ರಾಷ್ಟ್ರೀಯತ್ವದ ಜ್ಯೋತಿಯೊಂದೇ ಸಾಲದು. ದೇಶಾಭಿಮಾನವೆಂಬ ದೀಪದ ಮಿಣಿಮಿಣಿ ಬೆಳಕಿನಿಂದ ನಮ್ಮ ದೇಶದ ಉದ್ಧಾರವು ಪೂರ್ಣವಾಗಿ ಆಗದೆಂದೂ ಹಿಂದೂಸ್ಥಾನದ ಮುವತ್ತಮೂರು ಕೋಟಿ ಜನರಲ್ಲಿ ಆಧ್ಯಾತ್ಮಿಕದ ದಿವ್ಯವಾದ ಜ್ಯೋತಿಯನ್ನು ಹೊತ್ತಿಸುವದೇ ಮುಖ್ಯವಾದ ಕಾರ್ಯವೆಂದೂ ಬಗೆದು ತಮ್ಮಲ್ಲಿ ಅಂಥ ಲೋಕೋತ್ತರವಾದ ಸಾಮರ್ಥ್ಯವನ್ನು ತಂದುಕೊಳ್ಳುವದಕ್ಕಾಗಿ ಅವರು ಇಷ್ಟು ತಪಶ್ಚರ್ಯವನ್ನು ನಡಿಸಿದರು. ಹೀಗೆ ಅವರ ಆಯುಷ್ಯಕ್ರಮಣದಲ್ಲಿ ಎರಡು ಮೂರಾವರ್ತಿ ಬದಲಾವಣೆಗಳಾಗಿವೆ. ಅವರ ಆತ್ಮವು ಏರುತ್ತೇರುತ್ತ ಈಗ ಅತ್ಯಂತ ಉಚ್ಚವಾದ ಶಿಖರದ ಮೇಲೆ ಕುಳಿತಿದೆ. ಇಂಥ ತಪೋಬಲರು ನಮ್ಮ ದೇಶದಲ್ಲಿ ಕಾರ್ಯ ಮಾಡುವದಕ್ಕೆ ಪ್ರವೃತ್ತರಾದರೆ, ಮಿಕ್ಕವರು ಮೂರು ವರ್ಷಗಳಲ್ಲಿ ಮಾಡುವ ಪರಿಣಾಮವನ್ನು ಇವರು ಮೂರುಗಳಿಗೆಯಲ್ಲಿ ಮಾಡಲಾರೆಂಬದು ನಿರ್ವಿವಾದವಾಗಿದೆ. ಆದರೆ ಅವರು ಹಾಗೆ ಯಾವ ರೀತಿಯಿಂದ ಮಾಡುವರು, ಯಾವ ಮಾರ್ಗವನ್ನು ಸ್ವೀಕರಿಸುವರು ಎಂಬಿವೇ ಮೊದಲಾದ ಸಂಗತಿಗಳು ನಮ್ಮ ಮಾನವ ದೃಷ್ಟಿಗೆ ಅಗೋಚರವಾದ ಸಂಗತಿಗಳು. ಅದಕ್ಕಾಗಿ ಅವರು ಈಗಿನ ಸಮಾಜ ಪದ್ಧತಿಯನ್ನು ಬುಡಮೇಲು ಮಾಡಬಹುದು, ರಾಜಕೀಯ ಪ್ರವಾಹವನ್ನು ಹೊರಳಿಸಬಹುದು. ಅಥವಾ ಮತ್ತಾವದೊಂದು ಮಾರ್ಗವನ್ನು ಸ್ವೀಕರಿಸಬಹುದು. ಅದು ಏನೇ ಇರಲಿ. ಅವರು ಬುದ್ಧ, ಕ್ರಾಯಿಸ್ಟ, ಶಂಕರ, ರಾಮಾನುಜ, ಮಧ್ವ ಮುಂತಾದ ಜಗತ್ತಿನ ದಿವ್ಯವಿಭೂತಿಗಳಲ್ಲಿ ಗಣಿಸಲ್ಪಡಬೇಕಾದ ಯೋಗ್ಯತೆಯುಳ್ಳವರೆಂದು ಮಾತ್ರ ನಿಃಸಂದೇಹವಾಗಿ ಹೇಳಬಹುದು. ಅವರ ಜೀವನವು ಎಂಥ ವಿಲಕ್ಷಣವಾದುದು ನೋಡಿರಿ! ಅವರು ಬಾಲ್ಯವನ್ನು ಕಳೆದುದು ಇಂಗ್ಲಂಡಿನಲ್ಲಿ; ವಿದ್ಯಾಭ್ಯಾಸವನ್ನು ಮಾಡಿದ್ದು ಇಂಗ್ಲಿಷಿನಲ್ಲಿ; ಅವರು ಮೊದಲಿನಿಂದ ಪಾಶ್ಚಿಮಾತ್ಯ ಸಂಸ್ಕಾರಗಳಲ್ಲಿ, ನಡೆನುಡಿಗಳಲ್ಲಿ, ವಿಚಾರಗಳಲ್ಲಿ ಮುಳುಗಿದವರು. ದೊಡ್ಡವರಾಗುವವರೆಗೆ ಮಾತೃದೇಶದ ನೆನಪಿಲ್ಲ, ಮಾತೃಭಾಷೆಯ ಗಂಧವಿಲ್ಲ, ದೇವ ಭಾಷೆಯ ಜ್ಞಾನವಿಲ್ಲ; ಆರ್ಯಸಂಸ್ಕೃತಿಯ ಸಂಸ್ಕಾರವಿಲ್ಲ. ಹೀಗೆ ಎಲ್ಲ ಬಗೆಯಿಂದಲೂ ಪಾಶ್ಚಿಮಾತ್ಯ ರಾದವರು ಇಂದಿಗೆ ಆಚಾರದಲ್ಲಿ ವಿಚಾರದಲ್ಲಿ ಸಂಸ್ಕೃತಿಯಲ್ಲಿ ಎಲ್ಲರಿಗಿಂತ ಹೆಚ್ಚು ಪೌರ್ವಾತ್ಯರಾಗಿ,

ಹಿಂದಿನ ಮಹಾಋಷಿಗಳ ಕೋಟಿಯಲ್ಲಿ ಸೇರಿರುತ್ತಾರೆಂಬದು ಎಂಥ ಆಶ್ಚರ್ಯಜನಕವಾದ ಸಂಗತಿಯ. ಅಥವಾ ಹಾಗೆ ಆಶ್ಚರ್ಯ ಪಡುವದಾದರೂ ಏಕೆ? ನಮ್ಮ ಪೂರ್ವಜರ ಪುಣ್ಯಪ್ರಭಾವವೇ ಅಂಥದು, ನಮ್ಮ ಆರ್ಯ ಸಂಸ್ಕೃತಿಯ ದಿವ್ಯಜ್ಞಾನದ ಪರಿಣಾಮವೇ ಅಂಥದು, ನಮ್ಮ ಭರತಭೂಮಿಯ ಭಾಗ್ಯವೇ ಅಂಥದು. ಅಂತಲೇ, ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ, ಮಹರ್ಷಿ ಅರವಿಂದರಂಥವರು ನಮ್ಮಲ್ಲಿ ಹುಟ್ಟುತ್ತಾರೆ!

ಧಾರವಾಡ
೫-೭-೧೯೨೧

ವೆಂಕಟೇಶ ಭೀಮರಾವ ಆಲೂರ

ಜಯ ಭುವನೇಶ್ವರೀ ! ಕರ್ನಾಟಕ ಮಾತೆ !!

ಪರಿಚಯ

೧. ಭವಿಷ್ಯತ್ಕಾಲವು ಗಾಢಾಂಧಕಾರದೊಳಗಿಂದ ಸಾಮಾನ್ಯ ಜನರಿಗೆ ಪ್ರವಾಸ ಮಾಡಲಿಕ್ಕೆ ಇತಿಹಾಸದ ವಿದ್ಯುತ್ ಪ್ರಕಾಶವು ಬಹಳ ಸಹಾಯ ಮಾಡುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಅಲ್ಪ ಪ್ರಯತ್ನವು ಮಾಡಲ್ಪಟ್ಟಿದೆ. ಇದು ಯಾವದೊಂದರ ಭಾಷಾಂತರವಾಗಿರದೆ ಬೇರೆ ಬೇರೆ ಆಧಾರಗಳಿಂದ ಬರೆದ ಸ್ವತಂತ್ರವಾದ ಪುಸ್ತಕವಾಗಿದೆ.

೨. ಮಹರ್ಷಿಗಳ ವಿಸ್ತೃತ ವೃತ್ತಾಂತವನ್ನೊಳಗೊಂಡ ಚರಿತ್ರವು ಈ ವರೆಗೆ ಯಾವ ಭಾಷೆಯಲ್ಲಿಯೂ ಆಗಿಲ್ಲ. ಮಾಹಿತಿಯನ್ನು ದೊರಕಿಸಲಿಕ್ಕೆ ಶಕ್ಯವಿದ್ದಷ್ಟು ಪ್ರಯತ್ನಗಳನ್ನು ಮಾಡಿದೆ. ಇದನ್ನು ಬರೆಯುವಾಗ ಈ ಲೇಖಕನು ಸಹಾಯವಾದ ಗ್ರಂಥಕಾರರಿಗೆ ತುಂಬಾ ಕೃತಜ್ಞನಾಗಿದ್ದಾನೆ. ಇದರ ಮೊದಲನೆಯ ಪ್ರತಿಯನ್ನು ಸ್ವಲ್ಪ ಅವಸರದಿಂದ ಬರೆಯಬೇಕಾಯಿತು. ಆಗ ದೊರೆತ ಆಧಾರ ಪುಸ್ತಕಗಳೊಳಗಿನ ಅವತರಣಗಳನ್ನು ತಕ್ಕೊಳ್ಳುವಾಗ ಅದರ ಪುಟ ಮುಂತಾದವುಗಳನ್ನು ಕಾಣಿಸುವದು ಹಾಗೇ ಉಳಿದು ಬಿಟ್ಟಿತು. ಮುಂದೆ ಹೊತ್ತಿಗೆ ಆ ಪುಸ್ತಕಗಳು ಸಿಗಲಿಲ್ಲವಾದುದರಿಂದ ಕೆಲವೆಡೆಗಳಲ್ಲಿ ಈ ದೋಷವು ಉಳಿದುದಕ್ಕೆ ಉಪಾಯವಿಲ್ಲ.

೩. ಸಜ್ಜನರ ಸಹವಾಸವು ಹೆಜ್ಜೇನು ಸವಿದಂತೆಯಿರುತ್ತದೆ. ಮಹರ್ಷಿಗಳ ಪ್ರತ್ಯಕ್ಷ ಸಹವಾಸದ ಯೋಗವು ಇನ್ನೂ ಈ ಬಡಲೇಖಕನಿಗೆ ಸಿಕ್ಕಿಲ್ಲವಾದರೂ ವಾಙ್ಮಯಾತ್ಮಕ ಸಹವಾಸದಲ್ಲಿ ಕೂಡ ಅವರ ವಿಚಾರಗಳನ್ನು ನೆನೆನೆನೆದು ಸ್ವರ್ಗೀಯ ಆನಂದವನ್ನು ಪಡೆಯಲಿಕ್ಕೆ ಸಿಕ್ಕಿತು. ಮಗುವು ಸೃಷ್ಟಿಯ ಶೋಭೆಯನ್ನು ನೋಡಿ ಆನಂದಪಟ್ಟು ಥೈ ಥೈ ಎಂದು ಕುಣಿದಾಡುತ್ತದೆ. ಅದು ತನಗಾದ ಆನಂದವನ್ನು ಶಬ್ದಗಳಿಂದ ವ್ಯಕ್ತಪಡಿಸುವದರಲ್ಲಿ ಅಸಾಮರ್ಥ್ಯ ವಿರುತ್ತದೆ. ಆದರೂ ಹಿರಿಯರೆದುರಿಗೆ ತನ್ನ ಮನೋಗತವನ್ನು ಅಸ್ಫುಟ ಶಬ್ದಗಳಿಂದ ಹೇಗೋ ವ್ಯಕ್ತಪಡಿಸಿ ಮನಸ್ಸಿನ ಸಮಾಧಾನವನ್ನು ಮಾಡಿಕೊಳ್ಳದೆ ಬಿಡುವದಿಲ್ಲ. ಹಿರಿಯರು ಕಕ್ಕುಲತೆಯಿಂದ ಅದರ ಆ ತೊದಲ್ನುಡಿಗಳನ್ನೇ ಮನ್ನಿಸಿ ಮಗುವಿಗೆ ಉತ್ತೇಜನವನ್ನೀಯುತ್ತಿರುವದುಂಟು.

೪. ಪ್ರಸ್ತುತ ಲೇಖಕನ ಸ್ಥಿತಿಯೂ ಹೀಗೆಯೇ ಇದೆ. ವಿದ್ವಜ್ಜನರೆದುರಿಗೆ ಬರುವ ಪ್ರಥಮ ಪ್ರಯತ್ನವಿದು. ಇದನ್ನು ಬರೆದಿಟ್ಟ ಬಳಿಕ ಮುದ್ರಿಸುವ ಸಾಹಸವನ್ನು ಮಾಡಬೇಕೇ ಬಿಡಬೇಕೇ ಎಂಬ ವಿಚಾರದಲ್ಲಿ ಕೆಲದಿನಗಳು ಹೋದವು. ಹಂಸದಂತೆ ಗಮನಮಾಡಲಿಕ್ಕೆ ಬರುವದಿಲ್ಲೆಂದು ನಡೆಯುವದನ್ನು ಯಾರೂ ಕಟ್ಟು ಮಾಡಿಲ್ಲ; ಅಥವಾ ಕೋಗಿಲೆಯಂತೆ ಕಂಠವಿಲ್ಲೆಂದು ಹಾಡುವದನ್ನು ಯಾರೂ ನಿಲ್ಲಿಸಿಲ್ಲವೆಂಬ ವಿಚಾರಗಳು ಪುಕ್ಕ ಮನಸ್ಸಿಗೆ ಧೈರ್ಯವನ್ನು ಕೊಟ್ಟು ಈ ಸಾಹಸವನ್ನು ಮಾಡಿಸಿವೆ.

೫. ಲೇಖಕನು ಹೊಸಬನಾದುದರಿಂದಲೂ, ಯಾವದೊಂದು ಭಾಷೆಯಲ್ಲಿ ಪಾಂಡಿತ್ಯವನ್ನು ಪಡೆಯದುದರಿಂದಲೂ ಇದರಲ್ಲಿ ಕುಂದು ಕೊರತೆಗಳುಳಿದಿರುವವು. ಮುದ್ರಣ ದೋಷಗಳಿಗೂ ಕಡಿಮೆಯಿಲ್ಲ. ಆದರೆ ಅವುಗಳನ್ನು ಉದಾರ ದೃಷ್ಟಿಯಿಂದ ನೋಡಬೇಕೆಂದು ಕೃಪಾಳುವಾದ ಸಮಾಜಪುರುಷನಿಗೆ ಪ್ರಾರ್ಥಿಸುತ್ತೇನೆ. ದಯಾರ್ದ್ರದೃಷ್ಟಿಯಿಂದ ಗುಣದೋಷಗಳನ್ನು ಚರ್ಚಿಸಿ ತಿಳಿಸಿದಲ್ಲಿ ಮುಂದಿನ ಪ್ರಯತ್ನದ ಕಾಲಕ್ಕೆ ಅವುಗಳ ಉಪಯೋಗವು ಬಹಳವಾಗುವುದು. ಭಾಷೆಯು ಸಜೀವವಾಗಬೇಕೆಂದು ಇದನ್ನು ವಿಶಿಷ್ಟಶೈಲಿಯಲ್ಲಿ ಬರೆದಿದೆ. ಕೆಲವು ಸಂಗತಿಗಳನ್ನು ಬಿಂಬಿಸುವದಕ್ಕಾಗಿ ದ್ವಿರುಕ್ತಿ ದೋಷವನ್ನು ಮಾಡಬೇಕಾಯಿತು.

೬. ಆಡದೆ ಮಾಡುವವನು ರೂಢಿಯೊಳಗುತ್ತಮನು ಎಂಬದು ಸತ್ಯವಾದರೂ ವಾಚಕ ಬಂಧು-ಭಗಿನಿಯರಿಗೆ ಈ ಪ್ರಥಮ ಪರಿಚಯದಲ್ಲಿ ಇನ್ನೊಂದು ಕಿವಿಮಾತು ಹೇಳುವದಿದೆ. ಪ್ರಸ್ತುತ ಲೇಖಕನು ಶ್ರೀಗಣೇಶಾಯನಮಃ ಎಂದು ಆರಂಭಿಸಿರುವ ಈ ವಾಙ್ಮಯ ಸೇವೆಯಲ್ಲಿ ಆರ್ಥಿಕ ದೃಷ್ಟಿಯು ಇರದೆ ಬೇರೊಂದು ಉದ್ದೇಶವಿರುತ್ತದೆ. ಗುರುಹಿರಿಯರ ಋಣವನ್ನೂ, ದೇಶದ ಋಣವನ್ನೂ, ತೀರಿಸಲಿಕ್ಕೆ ಈ ಲೇಖಕನಿಗೆ ಇದೊಂದೇ ಮಾರ್ಗವಿರುತ್ತಿರುವದರಿಂದ ತದ್ವಾರವಾಗಿಯೇ ನಿರಪೇಕ್ಷ ಬುದ್ಧಿಯಿಂದ ಈಶಸೇವೆಯನ್ನು ಮಾಡಿ ಕೃತಾರ್ಥನಾಗಬೇಕೆಂದು ಆತನ ಸಂಕಲ್ಪವಿದೆ. ಅದನ್ನು ಪೂರ್ಣಮಾಡುವದು ಕೆಲಮಟ್ಟಿಗೆ ವಾಚಕರುಗಳ ಕೈಯಲ್ಲಿದೆ.

೭. ಈ ಪುಸ್ತಕವು ವಾಚಕರ ಕೈಯಲ್ಲಿ ಬೀಳುವ ವರೆಗೆ ಅನೇಕ ಮಿತ್ರರಿಂದಲೂ ಹಿತಚಿಂತಕರಿಂದಲೂ ಸಹಾಯವಾಗಿದೆ. ಶ್ರೀಅರವಿಂದರ ತತ್ತ್ವಜ್ಞಾನದ ದೀರ್ಘ ವ್ಯಾಸಂಗ ಮಾಡಿದ ಶ್ರೀಯುತ ಆಲೂರವರು ಸ್ವಸಂತೋಷದಿಂದ ಪ್ರಸ್ತಾವನೆಯನ್ನು ಬರೆಕೊಟ್ಟು ಪ್ರೋತ್ಸಾಹಿಸಿದರು. ಶ್ರೀಮತ್ಸ್ವತಂತ್ರಾನಂದಮೂರ್ತಿಗಳ ದರ್ಶನದ ಲಾಭವು ಆಕಸ್ಮಿಕವಾಗಿ ಪ್ರಾಪ್ತವಾಗಿ, ಅವರ ಸಂಗಡ ಆದ ಸ್ವಲ್ಪ ಸಂಭಾಷಣದೊಳಗೆ ಮಹರ್ಷಿಗಳ ವಿಷಯಕ್ಕೆ ಕೆಲವು ಹೊಸ ಸಂಗತಿಗಳು ತಿಳಿಯಬಂದವು. ದೇ. ಭ. ಬೇಂದ್ರೆಯವರು ಕೆಲವು ಪುಸ್ತಕಗಳನ್ನು ಪೂರೈಸಿದರು. ಮೆಸರ್ಸ ಧಾರವಾಡಕರರು ಪ್ರಕಾಶನ ಕಾರ್ಯಕ್ಕೆ ಒಪ್ಪಿಕೊಂಡರು. ಇವರೆಲ್ಲರುಗಳ ಉಪಕಾರದ ಭಾರವು ಬಹಳವಿರುತ್ತದೆ. ಶ್ರೀ ಜಠಾರ ಯಶವಂತರಾಯರು ಮುದ್ರಣಕಾರ್ಯದಲ್ಲಿ ಬಹಳ ಸಹಾಯ ಮಾತಾಡಿದ ಬಗ್ಗೆ ಈ ಲೇಖಕನು ಅವರ ಆಭಾರಗಳನ್ನು ಮನ್ನಿಸದೆ ಇರಲಾರನು. ಶ್ರೀ ವೆಂಕಟರಾವ ಬಾಪಟರ ಸಹಾಯವನ್ನು ಒಂದೆರಡು ಶಬ್ದಗಳಲ್ಲಿ ಹೇಳಿದರೆ ತೀರದು. ಸ್ಥಳಾಭಾವದ ಮೂಲಕ ಇನ್ನೂ ಅನೇಕರ ಹೆಸರುಗಳನ್ನು ಬಿಡಬೇಕಾದುದರಿಂದ ಅವರು ಕ್ಷಮಿಸುವರೆಂದು ನಂಬುಗೆಯಿದೆ. ಪರಮೇಶನು ಇವರೆಲ್ಲರುಗಳಿಗೆ ಸದ್ಬುದ್ಧಿಯನ್ನಿತ್ತು ಸಹಾಯಕರಾಗಿ ಮಾಡಿದುದಕ್ಕೆ ಆತನ ಪಾದಾರವಿಂದದಲ್ಲಿ ಅನಂತ ಪ್ರಣಾಮಗಳೊಂದಿಗೆ ಈ ಕೃತಿಕುಸುಮವನ್ನು ಸಮರ್ಪಿಸಿ ಲೇಖಕರು ಸ್ವಸ್ಥನಾಗುತ್ತಾನೆ.

ಧಾರವಾಡ
ಆಷಾಢ ಶುದ್ಧ ೧೧, ೧೮೪೩

ತಮ್ಮ ನಮ್ರ ಸೇವಕನಾದ
ಶಂಬಾ. ಜೋಶಿ

ಪೀಠಿಕೆ

ಯನ್ಮನಸಾ ಧ್ಯಾಯತಿ ತದ್ವಾಚಾ ವದತಿ।
ಯದ್ವಾಚಾ ವದತಿ ತತ್ ಕರ್ಮಣಾ ಕರೋತಿ।
ಯತ್ ಕರ್ಮಣಾ ಕರೋತಿ ತದಭಿಸಂಪದ್ಯತೇ ।

-ಶ್ರುತಿ

ಮನಸ್ಸಿನ ಶಕ್ತಿಯು ಅತ್ಯದ್ಭುತವಿರುತ್ತದೆ. ಬ್ರಹ್ಮನು ಸೃಷ್ಟಿಯನ್ನು ಸೃಜಿಸಬೇಕೆಂದು ಮನಸಿನಲ್ಲಿ ತಂದನು; ಸೃಷ್ಟಿಯು ಉತ್ಪನ್ನವಾಯಿತು! 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' ಎಂಬ ವಚನವಾದರೂ ಮನಸ್ಸಿನ ಮಹತ್ವವನ್ನೇ ಸೂಚಿಸುತ್ತದೆ. ಈ ಪ್ರಕರಣದ ಶಿರೋಭಾಗದಲ್ಲಿ ಉದ್ಧೃತವಾದ ಶ್ರುತಿಯಾದರೂ ಮನಸ್ಸಿನಲ್ಲಿ ಅದ್ಭುತ ಶಕ್ತಿಯುಂಟೆಂದೇ ಹೇಳುವದಿಲ್ಲವೇ? ಅಷ್ಟು ದೂರ ಏತಕ್ಕೆ, ಜನರ ನಿತ್ಯವ್ಯವಹಾರಗಳು ಏನನ್ನು ಬೋಧಿಸುತ್ತವೆ? ಮನುಷ್ಯನ ಶರೀರವು ಮುಂಜಾವಿನಿಂದ ಸಂಜೆಯ ವರೆಗೆ ಮನಸ್ಸಿನ ದಾಸನಾಗಿರುತ್ತದೆ; ಮನಸ್ಸು ಆ ಜ್ಞಾಪಿಸಿದತ್ತ ಶರೀರವು ಒಂದು ಕ್ಷುಲ್ಲಕ ಯಂತ್ರದೋಪಾದಿಯಲ್ಲಿ ತಿರುಗುತ್ತಿರುತ್ತದೆ. ಮನಸ್ಸು ಏಳೆನ್ನುತ್ತಲೆ ಅದು ಏಳುವದು, ಕುಳ್ಳಿರೆಂದೊಡನೆ ಕುಳಿತುಕೊಳ್ಳುವದು. ಅಂತೂ ಶರೀರವೆಂದರೆ ಅದೊಂದು ಮನಸ್ಸಿನ ಕೈಯೊಳಗಿನ ಆಟಿಕೆಯ ಜೀನಸಿನಂತಿರುತ್ತದೆ.

ಈ ದೃಷ್ಟಿಯಿಂದ ವಿಚಾರಿಸಿದರೆ ಜಗತ್ತಿನ ಎಲ್ಲ ಘಡಾಮೋಡಿಗಳಿಗೂ ಮನಸ್ಸಿನ ಅಧಿಷ್ಠಾನವಿದ್ದೇ ಇರುತ್ತದೆಂದು ಹೇಳಬಹುದು. ಪ್ರತಿಯೊಬ್ಬನು ಮಾಡುವ ಪ್ರತಿಯೊಂದು ಕಾರ್ಯಕ್ಕೆ ಉಚ್ಚ ಅಥವಾ ನೀಚ ಹೇತು (ಉದ್ದೇಶ) ವು ಇರುತ್ತದೆ. ಪ್ರತಿಯೊಬ್ಬನು ಸರ್ವೇಶನನ್ನು ತನ್ನ ಕರ್ಮಮಯ ಪುಷ್ಪಗಳಿಂದ ದಿನಾಲು ಅರ್ಚಿಸುತ್ತಿರುತ್ತಾನೆ. ಈ ಕರ್ಮ-ಕುಸುಮಗಳಿಗೆ ಇರುವ ಹೇತುರೂಪಿಯಾದ ಗಂಧವು ಸುಷ್ಟ-ದುಷ್ಟವಾಗಿದ್ದಂತೆ ಪೂಜೆಯ ಫಲವು ಸಿಕ್ಕುತ್ತಿರುತ್ತದೆ. ಜಗಚ್ಚಾಲಕನಿಗೆ ಎಲ್ಲಿಯವರೆಗೆ ಸತ್ಕರ್ಮ ಸುಗಂಧಿತ ಪುಷ್ಪಗಳು ಸಿಗುವವೋ ಅಲ್ಲಿಯವರೆಗೆ ಆತನು ಸಿಟ್ಟಾಗಲು ಕಾರಣವೇ ಇಲ್ಲ. ಮಾತ್ರ ಇದಕ್ಕೆ ವಿಪರೀತವಾಗಿ, ಎಂದು ಆಚರಣಕ್ಕೆ ಆರಂಭವಾಗುವದೋ ಆಗ ಪರಮಾತ್ಮನ ಅವಕೃಪೆಗೆ ಆರಂಭವಾಯಿತೆಂದೇ ತಿಳಿಯತಕ್ಕದ್ದು.

ಎಂದು ಪರ್ಯಂತರ ಭಾರತೀಯರು ಭಾರತ ಜನನಿಯನ್ನು ಸತ್ಕ್ರಿಯ ಕುಸುಮಗಳಿಂದ ಅನನ್ಯಭಾವದಿಂದ ಅರ್ಚಿಸುತ್ತಿದ್ದರೋ ಅಂದು ಪರ್ಯಂತರ ಅವರು ಐಶ್ವರ್ಯ ಶಿಖರದಲ್ಲಿಯೇ ಇದ್ದರು. ಎಲ್ಲಿಯ ವರೆಗೆ ಬ್ರಾಹ್ಮಣರು ತಮ್ಮ ಬೌದ್ಧಿಕ ತಪಶ್ಚರ್ಯದಿಂದಲೂ, ನಿಸ್ವಾರ್ಥಿಯಾದ ನಿಸ್ಪೃಹ ವೃತ್ತಿಯಿಂದಲೂ ಭಾರತ ಜನನಿಯನ್ನು ಸೇವಿಸಿದರೋ, ಕ್ಷತ್ರಿಯರು ತಮ್ಮ ಅತುಲ ಪರಾಕ್ರಮದಿಂದ ಪರರಿಂದ ಮಾತೃಭೂಮಿಯನ್ನು

ಉಳಿಸಿದರೋ, ವೈಶ್ಯರು ಅನುಪಮೇಯ ವೈಭವದಿಂದ ಪ್ರಾಮಾಣಿಕ ವ್ಯವಹಾರಗಳಿಂದ ಜಗತ್ತಿನ ಯೋಗಕ್ಷೇಮ ವನ್ನು ಸಾಗಿಸಿದ್ದರೋ, ಎಲ್ಲಿಯ ವರೆಗೆ ಭಾರತೀಯರು ಕ್ಷುದ್ರದೃಷ್ಟಿಯವರಾಗಿ ಅಂತಃಕಲಹಗಳಿಗೆ ಈಡಾಗಿದ್ದಿಲ್ಲವೋ ಅಲ್ಲಿಯ ವರೆಗೆ ಹಿಂದುಸ್ತಾನವು ಐಶ್ವರ್ಯದ-ಸುಖ ಸಮಾಧಾನದ ತವರುಮನೆಯಾಗಿತ್ತು; ಹಿಂದುಸ್ತಾನವೆಂದರೆ ಬುದ್ಧಿವಂತರ ಆಗರ, ಶೌರ್ಯಶಾಲಿಗಳ ನಿಧಾನ, ವ್ಯವಹಾರ ಚತುರರ ಖನಿಯಾಗಿತ್ತು. ಭಾರತೀಯರಿಂದ ಪ್ರಜ್ವಲಿತವಾದ ಜ್ಞಾನಜ್ಯೋತಿಯ ಪ್ರಕಾಶದಲ್ಲಿ ಗ್ರೀಸ್' ರೋಮಾದಿಗಳು ತಮ್ಮ ವ್ಯವಹಾರಗಳನ್ನು ಸಾಗಿಸುತ್ತಿದ್ದವು!

ಈ ಸ್ಥಿತಿಯು ಎಂದಿನದು? ಯಾವಾಗ ಜನರು ತಮ್ಮ ಸುಮನ ಪರಿಮಳಯುಕ್ತ ಪುಷ್ಪಗಳನ್ನು ಪರಮಾತ್ಮನಿಗೆ ಅರ್ಪಿಸುತ್ತಿದ್ದರೋ ಆವಾಗಿನದು. ಆಗ ಹಿಂದುಸ್ತಾನದಲ್ಲಿ ಬಂಗಾರದ ಹೊಗೆ ಹಾಯುತ್ತಿತ್ತು. ಆದರೆ, ಇಂದು ಏನು? ಹೊತ್ತಿಗೆ ಕಟ್ಟಿಗೆಯ ಹೊಗೆ ಹಾಯುವದೂ ದುಸ್ತರವಾಗಿದೆ! ಹೀಗೆ ಯಾಕೆ ಆಯಿತು? ಯಕ್ಷನ ಮಾಟದಿಂದ ಹಿಂದುಸ್ತಾನದೊಳಗಿನ ಜನರೇನು ದನ ಕುರಿಗಳಾದರೋ ಅಥವಾ ಮನುಷ್ಯರೂಪಿ ಮೃಗಗಳಾದರೋ ಆದುದಾದರೂ ಏನು? ಈಶ ಕೋಪವು ಯಾಕೆ ಆಯಿತು? ಆ ನಿಸ್ವಾರ್ಥಿಗಳೂ, ನಿಗ್ರಹಾನುಗ್ರಹ ಸಾಮರ್ಥ್ಯ ವುಳ್ಳವರೂ ಆದ ಆ ಬ್ರಾಹ್ಮಣರು ಎಲ್ಲಿ ಹೋದರು? ಜ್ಞಾತ ಜಗತ್ತನ್ನು ಗೆದ್ದು ಮತ್ತೆ ತೋಳತಿಂಡಿ ತೀರದೆ ಇದ್ದುದರಿಂದ ಶೌರ್ಯದಿಂದ ಮುಸಗುಡುವ ಆ ಕ್ಷತ್ರಿಯರು ಎಲ್ಲಿ ಅಡಗಿದರು? ಜಗತ್ತಿನ ಬೇರೆ ಬೇರೆ ಭಾಗಗಳೊಡನೆ ವ್ಯಾಪಾರ ನಡಿಸಿ ಅಪಾರ ಸಂಪತ್ತು ಗಳಿಸಿ ಭರತ ಭೂಮಿಗೆ ಸುವರ್ಣ ಭೂಮಿ ಎಂದು ಸಾರ್ಥನಾಮ ಮಾಡಿದ ಆ ಕುಶಲ ವೈಶ್ಯರು ಎಲ್ಲಿ ಅದೃಶ್ಯರಾದರು? ಏನು ಮಾಟವಿದು! ಅಸದೃಶವಾದ ಬೌದ್ಧಿಕ ತೇಜಸ್ಸಿನಿಂದ ಜಗತ್ತಿನ ವಿದ್ವಜ್ಜನರ ಕಣ್ಣು ಕುಕ್ಕಿಸಿದ ಆ ಬ್ರಾಹ್ಮಣರ ನಿಸ್ವಾರ್ಥಿಯಾದ ಹಾಗೂ ಲೋಕೋಪಕಾರಕ್ಕೆಯೇ ದೇಹಧಾರಣೆಯನ್ನು ಮಾಡಿದ ಆ ಬ್ರಾಹ್ಮಣರ ವಂಶಜರು ಇವರೇ ಏನು, ಇಂದು ಗೇಣು ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಐವತ್ತು ಮಂದಿ ಹವಾಲದಾರರ ಬೂಟು ಒರಿಸುತ್ತ ತಿರುಗುವ ಇಂದಿನ ನಾಮಧಾರಿ ಬ್ರಾಹ್ಮಣರು? ತೋಳದ ನಾತ ಬಡಿಯುತ್ತಲೆ ಕೈಕಾಲು ಬಿಡುವ ಕುರಿಯಂತೆ ರಣಹೇಡಿಗಳಾದ ಸುಖಲೋಲುಪ ಇಂದಿನ ಕ್ಷತ್ರಿಯರು, ಆ ಮಹಾ ಪ್ರತಾಪಶಾಲಿಗಳಾದ ಆ ಕ್ಷತ್ರಿಯರ ರಕ್ತದವರೇ ಏನು? ಚುಟ್ಟಬೀಡಿಯ ಅಂಗಡಿಗಳನ್ನು ಅಥವಾ ಪರದೇಶೀ ಮಾಲಿನ ದಲಾಲಿ ಮಾಡಿ ವೈಶ್ಯರೆಂದು ಹೇಳುವ ವಣಕ್ಕರು ಆ ವೈಭವಶಾಲಿ ವ್ಯಾಪಾರಿಗಳ ಗೋತ್ರದವರೇ ಏನು? ಅಯ್ಯೋ! ಎಷ್ಟು ಹೃದಯಭೇದಕ ಅಭ್ಯಂತರವಿದು! ಭರತಖಂಡದ ನಿವಾಸಿ ಎಂಬ ಬಗ್ಗೆ ಅಭಿಮಾನ ಪಡುವಂಥ ಐಶ್ವರ್ಯದ ದಿನಗಳೆತ್ತ! ಮತ್ತು ಇಂದಿನ ಹಿಂದೂ ಎಂದೆನಿಸಿಕೊಳ್ಳಲಿಕ್ಕೆ ಮಾನಸಾಲದ ಈ ದುರ್ದಿನಗಳೆತ್ತ! ಮಾತೆ, ಯಾಕೆ ಇಷ್ಟು ಕೋಪಗೊಂಡೆ? ಛೇ ನೀನಾದರು ಏನು ಮಾಡೀ, ಯಥಾಪ್ರಕಾರ ನಿನ್ನ ಪೂಜೆಯಾಗದಾಯಿತು.

ಜನರ ಪ್ರತಿಯೊಂದು ವ್ಯವಹಾರವು ಉದಾತ್ತ ಸ್ವರೂಪದಲ್ಲಿರಲಿಕ್ಕೆ ಅವರ ಮನಸ್ಸು ಉದಾತ್ತವಿರಲಿಕ್ಕೆ ಬೇಕು. ಉದಾತ್ತ ಮನಸ್ಸು ಇದ್ದರೆ ಉದಾತ್ತ ಕೃತಿ. ಉದಾತ್ತ ಕೃತಿ ಕುಸುಮಗಳು ಭಾರತ ಮಾತೆಗೆ ಬರುಬರುತ್ತ ಸಿಗದಾದವು; ಅವಕೃಪೆಗೆ ಆರಂಭವಾಯಿತು. ಮೊದಲಿನ ಪೂಜೆಯಿಂದ ಸಿಕ್ಕ ಫಲದ ಅನುಭವ ತಕ್ಕೊಳ್ಳುವದರಲ್ಲಿ ಜನರು ಗುಂಗು ಆದರು. ಬ್ರಾಹ್ಮಣನು ತನ್ನ ಪೂರ್ವಜರ ವಿದ್ವತ್ತೆಯ ಪ್ರತಿಫಲವನ್ನು ಅನುಭವಿಸುವದರಲ್ಲಿ, ಕ್ಷತ್ರಿಯನು ತನ್ನ ಹಿರಿಯರು ಶೌರ್ಯದಿಂದ ದೊರಕಿಸಿದ ಐಶ್ವರ್ಯದ ವಿಲಾಸದಲ್ಲಿ, ವೈಶ್ಯನು ತನ್ನ ವಂಶಜರು ಗಳಿಸಿದ ಸಂಪತ್ತಿನ ಉಪಭೋಗದಲ್ಲಿ ಆನಂದಪಡಹತ್ತಿದನು. ಸ್ವಾತಂತ್ರ್ಯವೃತ್ತಿಯು ಕಡಿಮೆಯಾಗಹತ್ತಿತು. ಸ್ವಾವಲಂಬನವು ನಷ್ಟವಾಯಿತು. ಖಡ್ಗವು ಎಷ್ಟು ತೀಕ್ಷ್ಣವಿದ್ದರೂ ಅದನ್ನು ಆಗಾಗ್ಗೆ ಉಪಯೋಗಿಸದಿದ್ದರೆ ಜಂಗು ತಿನ್ನುವದು ಸ್ವಾಭಾವಿಕವಿದೆ. ಬುದ್ಧಿ, ಶೌರ್ಯ, ಚಾತುರ್ಯಗಳು ನಿತ್ಯದ ವ್ಯವಹಾರದ ಸಾಣೇಕಲ್ಲಿನ ಮೇಲೆ ಮಸೆಯದಿದ್ದರೆ ಜಂಗು ತಿನ್ನುತ್ತವೆ. ಹಿರಿಯರು ಗಳಿಸಿದ್ದರ ಮೇಲೆ ತೃಪ್ತಿಪಟ್ಟು ಅದರ ಉಪಭೋಗದಲ್ಲಿ ಮಗ್ನರಾದ ಭಾರತೀಯರು ದಿನೇ ದಿನೇ ಹೀನಮನಸ್ಕರಾಗಹತ್ತಿದರು. ಅಧಃಪಾತಕ್ಕೆ ಆರಂಭವಾಯಿತು. ಇಳಿಜಾರಿಗೆ ಒಮ್ಮೆ ಸಿಕ್ಕ ಕಲ್ಲು ಉರುಳುತ್ತ ಉರುಳುತ್ತ ತಳಕಾಣುವದು. ವೈಭವ ಶಿಖರದಿಂದ ಚ್ಯುತವಾದ

ಹಿಂದುಸ್ತಾನವು ಗಡಗಡನೆ ಉರುಳುತ್ತ ಅನೇಕ ಮುಸಲ್ಮಾನೀ ಮನೆತನಗಳೆಂಬ ಬಂಡೆಗಲ್ಲುಗಳ ಮೇಲೆ ಅಪ್ಪಳಿಸಿತು. ಕೆಲವು ಯುರೋಪೀಯ ಪ್ರಸ್ತಗಳ ಮೇಲೆ ದಕ್ಕೆ ತಿಂದಿತು. ಯುರೋಪೀಯ ಪ್ರಸ್ತಗಳಲ್ಲಿ ಇಂಗ್ಲಂಡವು ದೊಡ್ಡದಿದ್ದುದರಿಂದ ಅದರ ಸಂಯೋಗವಾಗಿ ಬಹು ದೊಡ್ಡ ಆಘಾತ ಪ್ರತ್ಯಾಘಾತಗಳನ್ನು ಹೊಂದಿತು.

ಹಿಂದುಸ್ತಾನವು ತನ್ನ ಪ್ರಾಚೀನ ವೈಭವವನ್ನು ಕಳಕೊಂಡಿತು. ಜನರು ಉದಾತ್ತ ಧ್ಯೇಯಚ್ಯುತರಾದರು. ಬದುಕುವದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎಂದು ಬಗೆಯಹತ್ತಿದರು. ಬಹು ಸಂಖ್ಯಾಕರು ಹೀನಮನಸ್ಸಿನವರಾದ ಬಳಿಕ ದೇಶವು ಹೀನದೆಶೆಗೆ ಬಂದದ್ದರಲ್ಲಿ ಏನು ಆಶ್ಚರ್ಯ? ಯಾಕಂದರೆ ದೇಶದೊಳಗಿನ ಜನರೆಂದರೇ ಆ ದೇಶ. ಶಾರೀರಿಕ ಅಧಃಪಾತದ ಮೊದಲು ಮಾನಸಿಕ ಅಧಃಪತನವಾಗುತ್ತಿರುತ್ತದೆ. ಮನಸ್ಸಿದ್ದರೆ ಶಾರೀರಿಕ ದಾಸ್ಯದೊಳಗಿಂದ ಪಾರಾಗಬಹುದು. ಆದರೆ, ಮಾನಸಿಕ ದಾಸ್ಯವೇ ಇದ್ದುದಾದರೆ ಅದರೊಳಗಿಂದ ದಾಟುವದು ಅಸಾಧ್ಯವು. ತಾನು ಕುರಿಯೆಂದು ನಂಬಿ ಸಿಂಹವು ಒಂದು ಕುರಿ ಹಿಂಡಿನೊಳಗೆ ವಾಸವಾಗಿತ್ತಂತೆ. ಓಡಿಹೋಗ ಬೇಕೆಂದು ನಿಶ್ಚಯಿಸಿದ ಪ್ರಾಣಿಯನ್ನು ಅರ್ಥಾತ್ ಮನಸ್ಸಿನಿಂದ ಒಪ್ಪದ ಪ್ರಾಣಿಯನ್ನು ಬಂಧಿಸುವದು ಅಸಾಧ್ಯ. ಅಂತೇ ಅದನ್ನು ಒಲಿಸಿಕೊಳ್ಳಲಿಚ್ಛಿಸುವವರು ಮೊದಲು ಅದು ತನ್ನನ್ನು ನಂಬುವಂತೆ (ವಿಶ್ವಾಸವಿಡುವಂತೆ) ಮಾಡುತ್ತಾರೆ. ಇದರ ರಹಸ್ಯವೇನು? ಬಾಬರನಿಗೆ ತನ್ನ ಸಾಮ್ರಾಜ್ಯದ ಸ್ಥಿರತ್ವದ ಬಗ್ಗೆ ಅವಿಶ್ವಾಸವಿತ್ತು. ಯಾಕಂದರೆ ಆಗ ಇನ್ನೂ ಮನಸ್ಸಿನಿಂದ ಜನರು ಆತನಿಗೆ ಅಂಕಿತರಾಗಿದ್ದಿಲ್ಲ. ಆದರೆ, ಅಕಬರನ ಕಾಲಕ್ಕೆ ಅದಕ್ಕೆ ಸ್ಥಿರತ್ವವು ಬಂತು. ಯಾಕಂದರೆ ಮಾನಸಿಂಹನಂಥ ರಣಧುರಂಧರರು ಮನಸ್ಸಿನಿಂದ ಆತನ ಗುಲಾಮರಾದರು. ಅಫಗಾಣರ ಒಂದು ಗೇಣು ದೇಶವು ಮನಸ್ಸಿನಿಂದ ಇಂಗ್ಲಿಶರ ಅಧಿಕಾರಕ್ಕೆ ಒಲ್ಲದುದರಿಂದ ಬ್ರಿಟಿಷರು ಎರಡು ಸಾರೆ ಮಾಡಿದ ಪ್ರಯತ್ನಗಳೂ ನಿಷ್ಫಲವಾದವು. ಆದರೆ, ೩೦ ಕೋಟಿಯ ಅವಾಢವ್ಯ ಹಿಂದುಸ್ತಾನವು ಬ್ರಿಟಿಶರನ್ನು ಮನಸ್ಸಿನಿಂದ ಆದರಿಸಿದ್ದರಿಂದ ಅವರ ವಿಯೋಗಕ್ಕೆ ಭೀತಿಪಡುತ್ತದೆ! ಇಂಗ್ಲಿಷರು ಬಹು ದೊಡ್ಡ ಮಾಟ ಮಾಡಿದ್ದೆಂದರೆ ಅವರು ಹಿಂದೂ ಜನರ ಮನಸ್ಸನ್ನು ನಾನಾವಿಧದಿಂದ ಗುಲಾಮವಾಗಿ ಮಾಡಿದುದು. ಅವರ ರೇಲ್ವೆ, ಅವರ ತಾರಾಯಂತ್ರ, ಅವರ ಕೋರ್ಟು, ಅವರ ಕಚೇರಿ, ಅವರ ಅಚ್ಚುಕಟ್ಟುತನ ಇವೆಲ್ಲವುಗಳೂ ಸಾದಾ ಭೋಳೆ ಹಿಂದೂ ಜನರ ಚಿತ್ತವನ್ನು ಆಕರ್ಷಿಸಿದವು. ಇಂಗ್ಲಿಷರೇ ತಮ್ಮ ಉದ್ಧಾರಕರ್ತರೆಂದು ಜನಗಳು ನಂಬಿದವರು. ೧೮೫೭ನೆಯ ಇಸವಿಯ ಗಂಡಾಂತರದಲ್ಲಿ ಇಂಗ್ಲಿಷರು ಇಲ್ಲಿಂದ ಕಾಲು ಕಿತ್ತುವ ಹೊತ್ತು ಬಂದರೂ, ನಮ್ಮ ಜನರು ಅವರನ್ನು ಆಗ್ರಹದಿಂದ ಇಟ್ಟುಕೊಂಡರು!

ಇಷ್ಟು ಮಾನಸಿಕ ದಾಸ್ಯವಿದ್ದ ಬಳಿಕ ಸ್ವಾತಂತ್ರ್ಯದ ಆಶೆಯಾದರೂ ಹೇಗೆ? ಸಾಮಾನ್ಯ ಜನರು ರಾಜಕರ್ತರ ಮೋಹಿನಿಗೆ ಹೀಗೆ ಬಲಿಬಿದ್ದುದು ನಿಜ. ಆದರೆ, ಮಾತೃಭೂಮಿಯ ಪುಣ್ಯದಿಂದ ಎಲ್ಲರೂ ಮೋಹವಶರಾಗಲಿಲ್ಲ. ದೇಶದಲ್ಲಿ ಎಲ್ಲಿಯಾದರೂ ಒಂದೊಂದು ಸಂದಿ ಮೂಲೆಯಲ್ಲಿ ಆಶೆಯ ಕಿರಣಗಳು ಮಿನುಗುತ್ತಿದ್ದವು. ಇವುಗಳು ಇದ್ದುದರಿಂದಲೇ ಇಂದಿನ ಗಾಢವಾದ ತಮವು ನಷ್ಟವಾದೀತೆಂಬ ಆಶೆ. ಆಲದ ಬೀಜವು ಕಸಕಸಿ ಕಾಳಿನಗಿಂತಲೂ ಸಣ್ಣದಾಗಿದ್ದರೂ ಅದು ಪೆರ್ಮರವಾಗುವದೆಂಬುದರಲ್ಲಿ ಸಂದೇಹವೇನು?

ಸೂರ್ಯೋದಯದ ಮುಂಚೆ ಸ್ವಲ್ಪ ಕಾಲ ಕಣ್ಣೊಳಗೆ ಬೊಟ್ಟು ಹಾಕಿದರೂ ಕಾಣದಷ್ಟು ಕಗ್ಗತ್ತಲೆಯು ಎಲ್ಲ ಕಡೆಗೆ ವ್ಯಾಪಿಸಿರುತ್ತದೆ. ಅದರಂತೆ ಹಿಂದುಸ್ತಾನದ ಭಾಗ್ಯಸೂರ್ಯನ ಉದಯವಾಗುವ ಮುಂಚೆ ಎಲ್ಲ ಕಡೆಗೂ ಅಂಧಃಕಾರವು ಪಸರಿಸಿತ್ತು. ಬ್ರಿಟಿಶರು ಮಾಡಿದ ಪ್ರತಿಯೊಂದು ಕಾರ್ಯವು ಕೇವಲ ಲೋಕೋಪಯೋಗಕ್ಕಾಗಿಯೇ ಇರುತ್ತದೆಂದು ಜನರು ತಿಳಿದಿದ್ದರು. ರೇಲ್ವೆಗಳು ಸೈನ್ಯದ ವಾಹನಕ್ಕೂ, ಜನರ ಪ್ರವಾಸಕ್ಕೂ ಕೂಡಿಯೇ ಉಪಯೋಗವಾಗುತ್ತಿದ್ದು, ಜನರು ಅವು ಕೇವಲ ತಮ್ಮ ಹಿತಕ್ಕೆ ಕಟ್ಟಿರುವರೆಂದು ತಿಳಿದರು! ತಮ್ಮ ಕಚೇರಿಕಟ್ಟೆಗಳಲ್ಲಿ ನೌಕರರು ಬೇಕೆಂದು ಶಾಲೆಗಳನ್ನು ಸ್ಥಾಪಿಸಿದ್ದು ಮರೆತು, ಜನರು ಅವು ತಮ್ಮ ಕಲ್ಯಾಣಕ್ಕಾಗಿಯೇ ಇರುತ್ತವೆಂದು ಕಲ್ಪಿಸಿದರು. ರಾವಸಾಹೇಬ, ರಾವಬಹಾದ್ದೂರಾದಿ ಪದವಿಗಳನ್ನು, ಅಧಿಕಾರೀ ವರ್ಗಕ್ಕೆ ಜನರು ಸಹಾಯ ಮಾಡಬೇಕು, ಮತ್ತು ಅನುಕೂಲರಾಗಿರಬೇಕೆಂದು ಕೊಡುವರೆಂಬುದನ್ನು ಮರೆತು, ಅವು ಕೇವಲ

ತಮ್ಮ ಅಮೂಲ್ಯ ಗುಣಗಳನ್ನು ಕಂಡು ಲುಬ್ಧರಾಗಿ ಅರ್ಪಿಸುವರೆಂದು ಗ್ರಹಿಸಹತ್ತಿದರು. ಸ್ವಲ್ಪದರಲ್ಲಿ ಹೇಳುವದೆಂದರೆ ಇಂಗ್ಲಿಷರು ಹಿಂದುಸ್ತಾನಕ್ಕೆ ರಾಜ್ಯಮಾಡಿ ತಮ್ಮ ಜನಾಂಗದ ಹಿತ ಸಾಧಿಸಿಕೊಳ್ಳಲಿಕ್ಕೆ ಬಂದಿರುವರೆಂಬುದನ್ನು ಮರೆತು ಅವರು ಇಲ್ಲಿ ಹಿಂದೂ ಜನರ ಹಿತಕ್ಕಾಗಿಯೇ ತಮ್ಮ ಆಯುಷ್ಯ, ಬುದ್ಧಿ, ಧನಗಳನ್ನೆಲ್ಲ ಅರ್ಪಿಸಿ ಮೋಕ್ಷ ಸಂಪಾದಿಸಲಿಕ್ಕೆ ಬಂದಿರುವರೋ ಏನೋ ಎಂಬ ಭಾವನೆ ಮಾಡಿಕೊಂಡರು.

ಹೀಗೆ ಜನರು ವಿಪರೀತ ಬುದ್ಧಿಯುಳ್ಳವರಾಗಿರಲು ಅವರಿಗೆ ಸತ್ಯಜ್ಞಾನವನ್ನು ಮಾಡಿಕೊಡುವದು ಬಲು ಬಿಗಿಯಾಗಿತ್ತು. ಜನರನ್ನು ಜಾಗ್ರತ ಮಾಡಹೋದರೆ ಜನರಂತೂ ಮಬ್ಬಿನಲ್ಲಿರುವದರಿಂದ ಏಳಲಿಕ್ಕೆ ಒಲ್ಲರು; ಅಮಲಿನಲ್ಲಿಯೇ ಇರಲಿಕ್ಕೆ ಇಚ್ಛಿಸುವಂಥವರು, ಜನರು ಜಾಗ್ರತರಾದರೆ ತಮ್ಮ ಅಸ್ತಿತ್ವಕ್ಕೆ ಭಂಗ ಬಂದೀತೆಂಬ ಭೀತಿ ಸರಕಾರಕ್ಕೆ. ಆದುದರಿಂದ ಜನರ ಪೂರ್ಣ ಸಹಾಯವಿಲ್ಲದ ಈ ಜಾಗ್ರತ ಮನುಷ್ಯನು ತನ್ನ ಕಾರ್ಯದಲ್ಲಿ ಸರಕಾರದವರಿಂದ ತಡೆಯಲ್ಪಡುವದು ಸ್ವಾಭಾವಿಕವಿದೆ. ಇಂಥ ಇಕ್ಕಟ್ಟಾದ ಮಾರ್ಗವನ್ನು ಕ್ರಮಿಸುವದು ಬಹಳ ಸಾಹಸದ ಕೆಲಸವಾಗಿದೆ.

ಜನರನ್ನು ಎಚ್ಚರಿಸಲಿಕ್ಕೆ ರಾಮಬಾಣ ಔಷಧವೆಂದರೆ ಅವರ ಮನಸ್ಸು ಜಾಗ್ರತಪಡಿಸುವದು. ತಾನು ಯಾರು? ಮೊದಲು ಏನಿದ್ದೆ? ಈಗ ಇದ್ದ ಸ್ಥಿತಿಯಾವದು? ಇರಬೇಕಾದ ಸ್ಥಿತಿ ಎಂಥದು? ಎಂಬ ಜ್ಞಾನವು ಜನರಿಗೆ ಆಯಿತೆಂದರೆ ಅರ್ಥಾತ್ ಮಾನಸಿಕ ಗುಲಾಮತನವು ನಷ್ಟವಾಯಿತೆಂದರೆ ಇಷ್ಟಸಾಧ್ಯವಾಗಲಿಕ್ಕೆ ತಡ ಹತ್ತುವದಿಲ್ಲ. ಸ್ವಾತಂತ್ರ್ಯಾರ್ಥವಾಗಿ ಹೆಣಗುವ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರಗಳಿಂದ ಮುಂಚೆ ಅದಕ್ಕೂ ಎಷ್ಟೋಪಾಲು ಮಹತ್ವದ ಜೀವಂತ ಮನಸ್ಸು ಬೇಕು. "ನಾನು ಸ್ವತಂತ್ರ್ಯನಾಗಲಿಕ್ಕೆ ಬೇಕು" ಎಂದು ತ್ರಿಕರಣಪೂರ್ವಕವಾಗಿ ದಿನಾಲು ಅಂತಃಕರಣದಲ್ಲಿ ಜಪಿಸುವಾತನಿಗೆ ಸ್ವಾತಂತ್ರ್ಯವು ಸಿಗದೆ ಎಂದೂ ನಿಲ್ಲಲಿಕ್ಕಿಲ್ಲ. 'ಅಹಂ ಬ್ರಹ್ಮಾಸ್ಮಿ' ಮಂತ್ರದ ಜಪದಿಂದ ದೇವತ್ವವನ್ನು ಹೊಂದುತ್ತಿರಲು ಸ್ವಾತಂತ್ರ್ಯದಂಥ ಸೊಟ್ಟ ಕೆಲಸವು ಸಾಧ್ಯವಾಗಲಿಕ್ಕೆ ಏನು ತಡ? ದೇಶದ ಹೀನಸ್ಥಿತಿಯಲ್ಲಿ ಜನರ ಮನಸ್ಸು ನಿರ್ಜೀವವಾಗಿರುತ್ತದೆ. ಅವುಗಳನ್ನು ಸಜೀವ ಮಾಡುವದೇ ರಾಷ್ಟ್ರೋದ್ಧಾರಕನ ಮೊದಲನೇ ಕರ್ತವ್ಯವಿದೆ. ಇದೇ ಕರ್ತವ್ಯವನ್ನು ಫ್ರಾನ್ಸದಲ್ಲಿ ರೂಸೋ, ವ್ಹಾಲ್ಟೇಯರಾದಿಗಳು ಮಾಡಿದರು; ಇದೇ ಕಾರ್ಯವನ್ನು ಟಾಲಸ್ಟಾಯಾದಿಗಳು ರಶಿಯದಲ್ಲಿ ಮಾಡಿದರು; ಇದೇ ಕಾರ್ಯವನ್ನು ಮ್ಯಾಜಿನಿ ಕಾವ್ಹರುಗಳು ಇಟಲಿಯಲ್ಲಿ ಮಾಡಿದರು.

ಇಂಥ ಪವಿತ್ರತಮವಾದ ಹಾಗು ಮಹತ್ವದ ಕಾರ್ಯವನ್ನು ಮಾಡಲಿಕ್ಕೆ ಭರತಖಂಡದ ಒಂದೊಂದು ಭಾಗವೂ ಅನೇಕರಿಗೆ ಅನೇಕ ಸಾರೆ ಜನ್ಮ ಕೊಟ್ಟಿದೆ. ಪಂಜಾಬವು ನಾನಕ, ರಣಜಿತಸಿಂಹ, ಲಜಪತರಾಯರುಗಳಿಗೆ, ರಜಪೂತಸ್ಥಾನವು ಪ್ರತಾಪಸಿಂಹನಿಗೆ, ಬಂಗಾಲವು ರಾಜಾ ರಾಮಮೋಹನರಾಯ, ರವೀಂದ್ರನಾಥ, ಬಿಪಿನಚಂದ್ರಪಾಲರಿಗೆ, ಗುರ್ಜರ ದೇಶವು ಮಹಾತ್ಮಾಗಾಂಧಿ ಮೊದಲಾದವರಿಗೆ; ಮಹಾರಾಷ್ಟ್ರವು ರಾಮದಾಸ, ತುಕಾರಾಮ, ತಿಲಕರಿಗೆ, ಕರ್ನಾಟಕವು ವಿದ್ಯಾರಣ್ಯಾದಿಗಳಿಗೆ ಜನ್ಮ ಕೊಟ್ಟಿದೆ. ಇತ್ತಲಾಗಿ ಇಂಥ ಅಸಾಧಾರಣ ಚರಿತರಿಗೆ ಜನ್ಮಕೊಡುವ ಭಾಗ್ಯವು ವಂಗ ದೇಶಕ್ಕಿದ್ದಷ್ಟು ಬೇರೆ ಯಾವ ಪ್ರಾಂತಗಳಿಗೆ ಇರುವಂತೆ ತೋರುವದಿಲ್ಲ. ನಗಾಧಿರಾಜ ಹಿಮಾಲಯದ ಪಾದಸನ್ನಿಧಿಯಲ್ಲಿದ್ದಂಥ, ಭಗೀರಥನ ದೀರ್ಘತಪಶ್ಚರ್ಯದಿಂದ ಭೂಲೋಕಕ್ಕೆ ಬಂದ ಪವಿತ್ರತಮಳಾದ ಭಾಗೀರಥಿಯ ವರಕೃಪೆಗೆ ಪಾತ್ರವಾದಂಥ, ಬ್ರಹ್ಮಪುತ್ರನ (ನದ) ಕೃಪಾದೃಷ್ಟಿಯುಳ್ಳಂಥ ಈ ಪವಿತ್ರವಾದ ಭೂಮಿಯಲ್ಲಿ ಅನೇಕ ಮಹಾತ್ಮರು ಹುಟ್ಟಿದುದೂ, ಅವರು ತಮ್ಮ ಕವಿತ್ವ, ವಕ್ತೃತ್ವ, ಚಿತ್ರಕೌಶಲ್ಯ, ಭೌತಿಕಶೋಧ ಮುಂತಾದವುಗಳಿಂದ ಇಡೀ ಜಗತ್ತಿಗೆ ಅಚ್ಚರಿಗೊಳಿಸಿದುದೂ ಆಶ್ಚರ್ಯವಲ್ಲ. ಪರಮಹಂಸ ಶ್ರೀರಾಮಕೃಷ್ಣರ ಆಶೀರ್ವಾದ ಪಡೆದ ಬಂಗಾಲಿಗಳು ಮುಂದೆ ಬರದೆ ಮತ್ತಾರು ಬರಬೇಕು? ಶ್ರೀಮತ್ ವಿದ್ಯಾರಣ್ಯಸ್ವಾಮಿಗಳ ವರ ಪಡೆದ ಕರ್ನಾಟಕವೂ, ರಾಮದಾಸ ಸ್ವಾಮಿಗಳ ಪ್ರಸಾದ ಗ್ರಹಣ ಮಾಡಿದ ಮಹಾರಾಷ್ಟ್ರವೂ, ಒಮ್ಮೊಮ್ಮೆ ತಮ್ಮ ಅದ್ಭುತ ಕಾರ್ಯವನ್ನು ಈ ಜಗತ್ತಿನ ರಂಗಭೂಮಿಯ ಮೇಲೆ ಮಾಡಿ ತೋರಿಸಲಿಲ್ಲವೇ?

ಜನರು ರಾಜಕೀಯ ಮಾಯೆಯಲ್ಲಿ ಸಿಕ್ಕಿಕೊಂಡಾಗ ಆ ಮಾಯೆಯಿಂದ ದೂರವಿದ್ದು ಜನರನ್ನೂ ಮಾಯಾಪಾಶದಿಂದ ಬಿಡಿಸಲಿಕ್ಕೆ ಹೆಣಗಿದ ಬಂಗಾಲದ ಶ್ರೇಷ್ಠಪುರುಷರಲ್ಲಿ ಶ್ರೀಬಾಬು ಅರವಿಂದ ಘೋಷ ಎಂಬವರು ಅಗ್ರಣಿಗಳಾಗಿದ್ದಾರೆ. ಯಾವ ಮಹಾತ್ಮನು ತನ್ನ ಪವಿತ್ರ ಕಾರ್ಯವನ್ನು ಯಾರ ಸ್ತುತಿ-ನಿಂದೆಗಳಿಗೆ ಅಥವಾ ಬೆದರಿಕೆಗೆ ಸೊಪ್ಪು ಹಾಕದೆ ಮಾಡುತ್ತಿರುವನೋ, ತನ್ನ ಅದ್ಭುತ ಚಾರಿತ್ರ್ಯದಿಂದ ಜಗತ್ತಿನ ಚಿತ್ತವನ್ನು ತನ್ನ ಕಡೆಗೆ ಆಕರ್ಷಿಸಿರುವನೋ ಅವನ ಅಲ್ಪ ಚರಿತ್ರವನ್ನಾದರೂ ತಿಳಿಯಬೇಕೆಂಬ, ಕುತೂಹಲವು ಯಾರಿಗಾಗಲಿಕ್ಕಿಲ್ಲ?

ವಂಶವೃತ್ತ

ಯಾದೃಶಂ ತುಪ್ಯತೇ ಬೀಜಂ ಕ್ಷೇತ್ರೇ ಕಾಲೋಪಪಾದಿತೇ।
ತಾದೃಗ್ರೋಹತಿ ತಾಸ್ಮಿನ್‌ಬೀಜಂ ಸ್ವೈರ್ವಜಿತಂ ಗುಣೈಃ

-ಮನುಸ್ಮೃತಿ

ಮನುಷ್ಯನ ಚಾರಿತ್ರ್ಯದ ಮೇಲೆ ಆನುವಂಶಿಕ ಸಂಸ್ಕಾರಗಳೂ ಸ್ವಲ್ಪ ಹೆಚ್ಚು ಕಡಿಮೆ ಪರಿಣಾಮಗಳನ್ನು ಮಾಡದೆ ಬಿಟ್ಟಿರುವದಿಲ್ಲ. ಆದುದರಿಂದ, ಯಾವನೊಬ್ಬ ಮನುಷ್ಯನ ಚಾರಿತ್ರ್ಯದ ವಿಚಾರ ಮಾಡುವಾಗ ಆತನ ಕುಲಗೋತ್ರಗಳನ್ನು ಲಕ್ಷದಲ್ಲಿ ತಕ್ಕೊಳ್ಳುವದು ಅವಶ್ಯವಿರುತ್ತದೆ. ಪೂರ್ವಜರಲ್ಲಿ ಪರಂಪರೆಯಿಂದ ಕಂಡುಬಂದ ಗುಣಗಳೇ ಅವರ ಮುಂದಿನ ವಂಶಜರಲ್ಲಿ ಅಂಶತಃ ಕಾಣಲಿಕ್ಕೆ ಸಿಗುತ್ತವೆ. ಅಥವಾ ಅಜ್ಜ-ಮುತ್ತಂದಿರಲ್ಲಿ ಅಂಕುರ ರೂಪದಲ್ಲಿದ್ದ ಗುಣಗಳೇ ಅವರ ಸಂತತಿಯಲ್ಲಿ ಪೂರ್ಣ ವಿಕಾಸವಾದುದನ್ನೂ ಕಾಣಬಹುದು. ಮಾರ್ಮಿಕ ನಾಟಕಕಾರನು ತನ್ನ ನಾಟಕದ ಸೂಚನೆಯನ್ನು ಆರಂಭದಲ್ಲಿ ಸ್ವಲ್ಪದರೊಳಗೆ ಪ್ರಸ್ತಾವನೆಯಲ್ಲಿ ವ್ಯಂಗ್ಯವಾಗಿ ಸೂಚಿಸುತ್ತಿರುತ್ತಾನೆ. ಜಗತ್ತಿನ ನಾಟಕ ಬರೆಯಲುದ್ಯುಕ್ತನಾದ ಬ್ರಹ್ಮನು, ಮಗನ ನಾಟಕದ ಪೂರ್ವಸೂಚನೆಯನ್ನು ಅವನ ಪೂರ್ವಜರಲ್ಲಿ ಅಂಶತಃ ಮಾಡಿಡುತ್ತಿದ್ದರೆ ಆಶ್ಚರ್ಯವೇನು? ಚರಿತ್ರನಾಯಕರಾದ ಶ್ರೀ ಅರವಿಂದರ ಚರಿತ್ರದ ಸಣ್ಣ ಪ್ರತಿಕೃತಿಯನ್ನು ನೋಡಬೇಕಾಗಿದ್ದರೆ ಇವರ ಅಜ್ಜಂದಿರಾದ (ತಾಯಿಯ ತಂದೆ) ಬಾಬು ರಾಜನಾರಾಯಣ ಬೋಸ ಇವರ ಆಯುಷ್ಯದ ಕಡೆಗೆ ನೋಡಬೇಕು. ಶ್ರೀ ಅರವಿಂದರ ಚರಿತ್ರದಲ್ಲಿ ವಿಲಕ್ಷಣವಾಗಿ ತೋರುವ ಸಂಗತಿಗಳ ಪೂರ್ವಸೂಚನೆಯು- ಉಗಮವು ರಾಜನಾರಾಯಣ ಬಾಬುಗಳ ಚರಿತ್ರದಲ್ಲಿದೆ.

ಶ್ರೀ ರಾಜನಾರಾಯಣ ಬಾಬುಗಳ ಜನ್ಮವು ೧೮೨೬ನೆಯ ಇಸವಿಯಲ್ಲಿ ಆಯಿತು. ಇವರ ಶಿಕ್ಷಣವು ಆರಂಭದಲ್ಲಿ ಹಳೇ ಪದ್ಧತಿಯಿಂದ ಆಯಿತು. ಮನೆಯಲ್ಲಿ ರಾಮಾಯಣ ಮಹಾಭಾರತಾದಿ ಸಂಸ್ಕೃತ ಗ್ರಂಥಗಳು ಮುಖೋದ್ಗತವಾಗಿ ಮಾಡಿಸಲ್ಪಟ್ಟವು. ಸ್ವಲ್ಪ ದೊಡ್ಡವರಾದ ಬಳಿಕ ಇವರಿಗೆ ಒಂದು ಆಂಗ್ಲೋ ವ್ಹರ್ನ್ಯಾಕ್ಯುಲರ ಸ್ಕೂಲಿಗೆ ಹಾಕಿದರು. ಆದರೆ, ಅಲ್ಲಿ ಮನಸಿನಂತೆ ಶಿಕ್ಷಣವು ಸಿಗುವದಿಲ್ಲೆಂದು ಮತ್ತೊಂದು ಶಾಲೆಗೆ ಹಾಕಿದರು. ಅಲ್ಲಿ ಅವರ ಮುಂದಿನ ಆಯುಷ್ಯದಲ್ಲಿ ಕಂಡುಬಂದ ಕೆಲವು ಗುಣಗಳಿಗೆ ಚಲನೆ ಸಿಕ್ಕಿತು. ಇಲ್ಲಿಯ ಶಿಕ್ಷಣವು ಮುಗಿದ ನಂತರ ಕಾಲೇಜು ಸೇರಿದರು. ಕಾಲೇಜದಲ್ಲಿ ರಾಜನಾರಾಯಣ ಬಾಬುಗಳು ತಮ್ಮ ಕುಶಾಗ್ರಬುದ್ಧಿಯಿಂದ ಎಲ್ಲರಿಗೆ ಪ್ರಿಯರಾಗಿದ್ದರು. ತಮ್ಮ ಚುರುಕು ಬುದ್ಧಿಯಿಂದ ಎಷ್ಟೋ ಸ್ಕಾಲರಶಿಪ್ಪುಗಳನ್ನು ಸಂಪಾದಿಸಿದರು. ಇವರು ಪರೀಕ್ಷೆಯಲ್ಲಿ ಬರೆದ ಉತ್ತರದ ಕಾಗದಗಳು ಬಹು ಸರಸಾಗಿದ್ದುದರಿಂದ ಅವುಗಳನ್ನು ಪರೀಕ್ಷಕರು

ಮಾದರಿಗಾಗಿ ವೃತ್ತಪತ್ರಗಳಲ್ಲಿ ಪ್ರಕಟಿಸಿದರು. ಇವರ ಸಹಪಾಠಿಗಳೂ ಇವರಂತೆಯೇ ಬುದ್ಧಿವಂತರಿದ್ದರು; ಮುಂದಿನ ಆಯುಷ್ಯದಲ್ಲಿ ಹೆಸರಾದ ಅನೇಕ ದೊಡ್ಡ ದೊಡ್ಡ ಜನರು ಇವರ ಸಂಗಡಿಗರಿದ್ದರು.

ರಾಜನಾರಾಯಣ ಬಾಬುಗಳ ಕಾಲವೆಂದರೆ ಬ್ರಿಟಿರ ಆಳಿಕೆಯ ಆರಂಭದ ಅವಧಿ. ಹಿಂದೆ ಹೇಳಿದಂತೆ ಜನರಲ್ಲಿ ಬ್ರಿಟಿಷ ಸರಕಾರದ ವಿಷಯಕ್ಕೆ ಆಗ ಅತ್ಯಂತ ಆದರವಿತ್ತು. ಮುಸಲ್ಮಾನರ ಗೈರಮುತ್ಸದ್ದಿತನದ ಆಳ್ವಿಕೆಗೆ ಜನರು ಬೇಸತ್ತಿದ್ದರು. ಗೈರಮುತ್ಸದ್ದಿ ಮುಸಲ್ಮಾನರಿಗೆ, ಜನರಿಗೆ ತಿಳಿಯದಲೇ ಅವರ ರಕ್ತಶೋಷವನ್ನು ಹೇಗೆ ಮಾಡಬೇಕೆಂಬ ಕಲೆಯ ಜ್ಞಾನವಿದ್ದಿಲ್ಲ. ಅವರ ಪ್ರತಿಯೊಂದು ರಾಜಕಾರಣದ ಕೃತ್ಯಕ್ಕೂ ಬಣ್ಣದ ಮಾತಿನ ಮುಲಾಮ (Guilt) ಇರುತ್ತಿದ್ದಿಲ್ಲ. ದುಡ್ಡು ಬೇಕಾದ ಕೂಡಲೆ ಬಹಿರಂಗವಾಗಿ ಜನರ ಕಣ್ಣಿಗೆ ಅಸಹ್ಯ ಕಾಣುವಂತೆ ಸುಲಿಯುತ್ತಿದ್ದರು. ಇದರಿಂದ ಜನರಿಗೆ ಬಹಳ ತಾಪವಾಗಿತ್ತು. ಆದಕಾರಣ, ಮುಸಲ್ಮಾನರ ಆಳಿಕೆಗೆ ಬೇಸತ್ತ ಜನರು ಬ್ರಿಟಿಷರನ್ನು ಆದರಿಸಿದರು. ಬ್ರಿಟಿಷರ ಬಣ್ಣದ ಮಾತುಗಳಿಗೆ ಮರುಳಾದರು. ಮನಸ್ಸು ಗುಲಾಮವಾಯಿತು. ಇಂಗ್ಲಿಷ ಮನುಷ್ಯನು ದೇವರಂತೆ ಕಾಣಹತ್ತಿದನು. ಆತನ ಎಲ್ಲ ಕೃತಿಗಳೂ ಸುಂದರವಾಗಿ ಕಾಣಹತ್ತಿದವು ಮತ್ತು ಅವುಗಳನ್ನು ಅನುಕರಿಸುವದರಲ್ಲಿ ಕೃತಕೃತ್ಯತೆಯನ್ನು ಪಡೆಯಹತ್ತಿದರು.

ಇಂಥ ಕಾಲದಲ್ಲಿ ರಾಜನಾರಾಯಣ ಬಾಬುಗಳ ಜನ್ಮವಾದದ್ದು. ಅಂದಬಳಿಕ ಪರಿಸ್ಥಿತಿಯ ಪರಿಣಾಮವು ಅವರ ಮೇಲಾದರೂ ಆಗದೆ ಹೇಗೆ ಇದ್ದೀತು? ಆರ್ಯ ಸಂಸ್ಕೃತಿಯು ತ್ಯಾಗಪ್ರಧಾನವಾದದ್ದು ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯು ಭೋಗ ಪ್ರಧಾನವಾದದ್ದು. ಸಾಮಾನ್ಯವಾಗಿ ಮನುಷ್ಯನ ಒಲವು ಭೋಗದ ಕಡೆಗೆ ಇರುತ್ತದೆ. ಆತ್ಯಂತಿಕ ಕಲ್ಯಾಣಕರವಾವುದೆಂಬದನ್ನು ತಿಳಿಯುವಷ್ಟು ದೂರದೃಷ್ಟಿಯು ಸಾಮಾನ್ಯ ಜನರಿಗೆಲ್ಲಿಂದ ಬಂದೀತು? ಇಂಗ್ಲಿಶ್ ಶಿಕ್ಷಣದಿಂದ, ಇಂಗ್ಲಿಶರ ಸಂಸರ್ಗದಿಂದ, ಇಂಗ್ಲಿಶ ವಸ್ತುಗಳ ಬಳಕೆಯಿಂದ ಜನರಲ್ಲಿ ಪಾಶ್ಚಿಮಾತ್ಯರ ಆಚಾರ ವಿಚಾರಗಳು ಸೇರಹತ್ತಿದವು. ಕಾಲೇಜದಲ್ಲಿರುವಾಗ ರಾಜನಾರಾಯಣರಿಗೆ ತತ್ಕಾಲೀನ ಇತರರಂತೆ ಮದ್ಯ ಮಾಂಸಾದಿಗಳ ಸೇವನೆ ಮಾಡುವದೇ ಭೂಷಣವೆನಿಸಹತ್ತಿತು. ಮದ್ಯಪಾನದ ಅತಿರೇಕದಿಂದ ಒಮ್ಮೆ ರಾಜಾನಾರಾಯಣರು ಬೇನೆಬಿದ್ದರು. ಆಗ ತಂದೆಯು ಮಗನ ಶುಶ್ರೂಷೆಯನ್ನು ಚನ್ನಾಗಿ ಮಾಡಿ, ಬಹುಪರಿಯಿಂದ ಉಪದೇಶಿಸಿದನು. ಆದರೆ, ತತ್ಕಾಲಕ್ಕೆ ಅದರ ಉಪಯೋಗವೇನೂ ಆಗಲಿಲ್ಲ. ಧರ್ಮದ ಮೇಲಿನ ವಿಶ್ವಾಸವು ಜನರೊಳಗಿಂದ ಹಾರಿತು. ಧರ್ಮಾಧಿಕಾರಿಗಳ ಧಾರ್ಮಿಕ ನಿಯಂತ್ರಣದ ಅಧಿಕಾರವು ಅಳಿಯಿತು. ಸುತ್ತೂಕಡೆಯಿಂದ ಆರ್ಯಧರ್ಮದ ಮೇಲೆ ಟೀಕೆಗಳಿಗೆ ಆರಂಭವಾಯಿತು. ಆಚಾರ ಧರ್ಮದಲ್ಲಿ ಪರಿಸ್ಥಿತಿಯಂತೆ ಸ್ವಲ್ಪ ಬದಲಾವಣೆಯಾಗುವದು ಅವಶ್ಯವಿರುತ್ತದೆ. ಆದರೆ, ಹೊಸ ಸಂಸ್ಕರಣಗಳನ್ನು ಹೊಂದದೇ ಇದ್ದ ಧಾರ್ಮಿಕ ವಿಕೃತ ಆಚಾರಗಳು ಆಂಗ್ಲವಿದ್ಯಾವಿಭೂಷಿತರ ಚೇಷ್ಟೆಯ ವಿಷಯಗಳಾದವು. ಮಡಿ, ಮಡಿ ಮಾಡುವವರು ನಗೆಗೀಡಾದರು, ಚಂಡಿಕೆಯು ಚೇಷ್ಟೆ ಮಾಡಿಸಿಕೊಂಡಿತು. ಪ್ರತಿಯೊಬ್ಬರು ಧರ್ಮದ ಉಪಹಾಸಮಾಡಹತ್ತಿದರು.

ಈ ಕಾಲಕ್ಕೆ ಧಾರ್ಮಿಕ ಆಚಾರ ವಿಚಾರಗಳಿಗೆ ನೂತನ ಸ್ವರೂಪಗೊಡುವದಕ್ಕೆ ಕೆಲವರು ಪ್ರಯತ್ನಿಸಿದರು. ಆರ್ಯಸಮಾಜ, ಬ್ರಹ್ಮೋಸಮಾಜ ಮತ್ತು ಪ್ರಾರ್ಥನಾ ಸಮಾಜಗಳು ಈ ಮಾತಿಗೆ ಸಾಕ್ಷಿಯಾಗಿವೆ. ಬಂಗಾಲದಲ್ಲಿ ರಾಜಾರಾಮ ಮೋಹನರಾಯ ಎಂಬವರು ಬ್ರಹ್ಮೋಸಮಾಜವನ್ನು ಸ್ಥಾಪಿಸಿ, ತಮ್ಮ ಪಂಥದ ಪ್ರಚಾರಮಾಡಿದರು. ಪಾಶ್ಚಿಮಾತ್ಯ ಶಿಕ್ಷಣ ಹೊಂದಿದ ಸುಶಿಕ್ಷಿತರು ಈ ಪಂಥದಲ್ಲಿ ಬಹಳವಾಗಿ ಸೇರಿದರು. ಮತಾಂತರಮಾಡಿ ಕ್ರಿಸ್ತಿಯನರಾಗುವದಕ್ಕಿಂತ ಬ್ರಹ್ಮೋಪಂಥವನ್ನು ಸ್ವೀಕರಿಸುವದು ಲೇಸೆಂದು ಬಗೆದು ಕೆಲವರು ಇದರಲ್ಲಿ ಸೇರಿದರು. ರಾಜಾನಾರಾಯಣ ಬಾಬುಗಳ ತಂದೆಯು ಮೊದಲು ಈ ಪಂಥಕ್ಕೆ ಸೇರಿದ್ದನು. ಆದರೆ, ಇಲ್ಲಿ ಆತನಿಗೆ ಸಮಾಧಾನವಾಗಲಿಲ್ಲ. ಅಂತ್ಯಕಾಲಕ್ಕೆ ಗಂಗಾತಟಾಕಕ್ಕೆ ಹೋಗಿ ಅಲ್ಲಿ ಸನ್ಯಾಸದೀಕ್ಷೆಯನ್ನು ತಕ್ಕೊಂಡು ಮೃತ್ಯುವನ್ನು ಆದರಿಸಿದನು! ರಾಜನಾರಾಯಣ ಬಾಬುಗಳಿಗೆ ಪಾಶ್ಚಿಮಾತ್ಯ ಆಚಾರ ವಿಚಾರಗಳನ್ನು ಅನುಕರಿಸಿ ಸುಖವೆನಿಸಲಿಲ್ಲ. ಮದ್ಯಪಾನಾದಿ ವ್ಯಸನಗಳಿಂದ ಶರೀರದ ಮೇಲೆ ಅನಿಷ್ಟ ಪರಿಣಾಮವಾಯಿತು. ಕರ್ಮಧರ್ಮ ಸಂಯೋಗದಿಂದ

ಇದೇ ಸುಮಾರಿಗೆ ಅಂದರೆ ೧೮೮೫-೮೬ರಲ್ಲಿ ಅವರ ಪ್ರೇಮದ ತಂದೆಯು ತೀರಿದನು. ಪ್ರೀತಿಯ ಸಹಚಾರಣಿಯ ವಿಯೋಗವಾಯಿತು. ಇದರಿಂದ ಮನಸ್ಸಿನ ಮೇಲೆ ಬಹು ದೊಡ್ಡ ಆಘಾತವಾಯಿತು.

ಬಾಹ್ಯ ಸುಖೋಪಭೋಗಗಳಿಂದ ತೃಪ್ತಿಹೊಂದಿ, ಶಾಂತಿಪಡೆಯಬೇಕೆಂದು ಮಾಡಿದ ಶ್ರೀ ರಾಜನಾರಾಯಣ ಬಾಬುಗಳ ಮನಸ್ಸು ಚಂಚಲವಾಯಿತು. ಆಗ ಅವರು ಆತ್ಮಿಕ ಶಾಂತಿಯು ಹೇಗೆ ದೊರೆತೀತೆಂಬ ವಿಚಾರಕ್ಕೆ ಬಿದ್ದರು. ಬ್ರಹ್ಮೋಸಮಾಜದ ಪೂಜ್ಯ ದೇವೇಂದ್ರನಾಥ ಟಾಗೋರರ ಪರಿಚಯವಾಗಿ ರಾಜನಾರಾಯಣರು ಅವರ ಪಂಥದಲ್ಲಿ ಸೇರಿದರು. ಈ ಸಮಯಕ್ಕೆ ಕಾಕತಾಲ ನ್ಯಾಯದಿಂದ ರಾಜನಾರಾಯಣರಿಗೆ ಉಪನಿಷತ್ತುಗಳ ಪರಿಶೀಲನ ಮಾಡುವ ಸುಯೋಗವು ಬಂತು. ಬಂಗಾಲದ ತತ್ವಬೋಧಿನಿ ಸಭೆಯವರು ಶ್ರೀ ರಾಜನಾರಾಯಣ ಬಾಬುಗಳ ಸಂಸ್ಕೃತ ಹಾಗೂ ಇಂಗ್ಲಿಷ ಭಾಷಾಪ್ರಭುತ್ವವನ್ನು ಕಂಡು, ತಿಂಗಳೊಂದಕ್ಕೆ ೬೦ ರೂ. ಗಳ ಮೇಲೆ ಉಪನಿಷದ್ಗ್ರಂಥಗಳ ಭಾಷಾಂತರ ಮಾಡಲಿಕ್ಕೆ ನಿಯಮಿಸಿದರು. ಸಹಜವಾಗಿಯೇ ವೇದಾಂತ ಗ್ರಂಥಗಳ ವಾಚನ ಮನನವಾಗಹತ್ತಿತು. ಇತ್ತ ಬ್ರಹ್ಮೋಪಂಥದ ಸಂಘಟನೆಯಿಂದ ಅದರ ಸ್ವರೂಪಜ್ಞಾನವೂ ಅವರಿಗೆ ಆಯಿತು. ಬ್ರಹ್ಮೋಪಂಥಿಗಳು ಧಡ ಕ್ರಿಸ್ತಿಯನರಲ್ಲ; ಧಡವೈದಿಕ ಧರ್ಮಿಗಳಲ್ಲ. ಅವರ ಅನುಯಾಯಿಗಳ ಆಚಾರ ವಿಚಾರಗಳಲ್ಲಿ ತಾಳಮೇಳವಿದ್ದಿಲ್ಲ. ಬ್ರಹ್ಮೋಪಂಥದ ಅನುಯಾಯಿಗಳು ಹೀಗಿದ್ದರೆಂದಮಾತ್ರಕ್ಕೆ ಆ ಪಂಥದ ಸಂಸ್ಥಾಪಕರೂ ಹಾಗೇ ಶೀಲಭ್ರಷ್ಟರಿದ್ದರೆಂದು ಯಾರಾದರೂ ಕಲ್ಪಿಸಿದರೆ ಅದು ತಪ್ಪು. ರಾಜರಾಮ ಮೋಹನರಾಯ, ದೇವೇಂದ್ರನಾಥ ಟಾಗೂರರಂಥವರಿಗೆ ಕಲಂಕ ಹಚ್ಚುವದೆಂದರೆ ಅದು ಪಾಪವಾದೀತು. ಯಾಕಂದರೆ ಯಾವದೇ ಧರ್ಮದ ಅಥವಾ ಮತದ ಇಲ್ಲವೇ ಪಂಥದ ಸಂಸ್ಥಾಪಕರು ಶೀಲವಂತರೇ ಇರುತ್ತಾರೆ. ಇರಲಿ, ರಾಜನಾರಾಯಣ ಬಾಬುಗಳಿಗೆ ಬ್ರಹ್ಮೋಪಂಥದವರ ನಡವಳಿಕೆಗಳು ಸೇರದಕಾರಣ ಸ್ವಲ್ಪ ಕಾಲದಲ್ಲಿಯೇ ಅವರು ಆ ಪಂಥವನ್ನು ಬಿಟ್ಟು, ವೈದಿಕ ಧರ್ಮಾನುಯಾಯಿಗಳಾದರು! ಶಾಂತಿಯನ್ನು ದೊರಕಿಸಲಿಕ್ಕೆ ಹಲುಬುವ ರಾಜನಾರಾಯಣರಿಗೆ ಧರ್ಮಾಂತರ, ಮತಾಂತರಗಳನ್ನು ಮಾಡಿ ಕಡೆಗೆ ವೇದಾಂತಧರ್ಮದಲ್ಲಿ ಅದು ಸಿಕ್ಕಿತು. ಬಳಿಕ ಉಪನಿಷತ್ತುಗಳ ನಿಧಿಧ್ಯಾಸ ಮಾಡಹತ್ತಿದರು.

ಇಂಗ್ಲಿಷರ ಸಂಸರ್ಗದಿಂದ ದೇಶದಲ್ಲಿ ಪರಸ್ಪರ ವಿರೋಧಿಗಳಾದ ಎರಡು ವಿಚಾರ ಪ್ರವಾಹಗಳು ಹುಟ್ಟಿದವು. "ಹಳೇದೆಲ್ಲ ಹೊಲಸು" ಎಂಬ ಮತದ ಜೋರು ವಿಶೇಷವಿತ್ತು. ಅದರ ಸೆಳವಿಗೆ ಅನೇಕ ತರುಣರು ಸಿಕ್ಕು, ಗಾಸಿವೀಸಿಯಾದರೂ ಶ್ರೀ ರಾಜನಾರಾಯಣ ಬಾಬುಗಳು ಈ ಪ್ರವಾಹದಲ್ಲಿ ಸಿಕ್ಕು, ಒದ್ದಾಡಿ, ಗುಟಕರಿಸಿ, ಬಾಯ್ಬಿಟ್ಟು ಕಡೆಗೆ ದಂಡೆಗೆ ಹತ್ತಿದರು. ದಂಡೆಗೆ ಬರುವ ಭಾಗ್ಯವು ಬಹು ಸ್ವಲ್ಪ ಜನರಿಗಿರುತ್ತದೆ. ಒಮ್ಮೆ ಪಾಶ್ಚಿಮಾತ್ಯರ ಸೆಳವಿಗೆ ಸಿಕ್ಕನಂತರ ಸ್ಮೃತಿಯ ಮೇಲೆ ಬರುವದು ಬಲು ದುಸ್ತರ. ರಾಜನಾರಾಯಣ ಬಾಬುಗಳು ವೇದಾಂತ ಜ್ಞಾನದಿಂದ ತೃಪ್ತಿಹೊಂದಿದ ಬಳಿಕ ಅದರ ಪ್ರಸಾರಕ್ಕಾಗಿ ಟೊಂಕಕಟ್ಟಿದರು. ಇವರಿಗೆ ಇಂಗ್ಲಿಷ, ಸಂಸ್ಕೃತ, ಹಾಗೂ ಪರ್ಶಿಯನ್ ಭಾಷೆಗಳು ಚೆನ್ನಾಗಿ ಬರುತ್ತಿದ್ದುದರಿಂದ ಹಿಂದಕ್ಕೆ ವೈದಿಕ ಧರ್ಮದ ನಿಂದೆಗೆ ಒಳ್ಳೇ ಅನುಕೂಲವಾಗಿತ್ತು. ಪಾಪ, ಬುದ್ಧಿಯೇನು ಮಾಡೀತು? ಅದೊಂದು ಶಸ್ತ್ರದಂತಿದೆ. ಕಳ್ಳನ ಮೇಲೆ ಹಾಕಿದರೆ ಅವನನ್ನು ತುಂಡರಿಸುತ್ತದೆ; ಸಜ್ಜನನ ಮೇಲೆ ಹಾಕಿದರೆ ಆತನನ್ನೂ ಛೇದಿಸುತ್ತದೆ. ರಾಜನಾರಾಯಣರ ಯಾವ ಬುದ್ಧಿಯು ಮುಂಚೆ ವೈದಿಕಧರ್ಮದ ನಗೆಗೇಡು ಮಾಡುವದರಲ್ಲಿ ವ್ಯರ್ಥವಾಗಿ ವ್ಯಯವಾಗುತ್ತಿತ್ತೋ, ಅದು ಈಗ ಅದರ ಮಂಡನೆ ಮಾಡುವದರಲ್ಲಿ ಸಾರ್ಥಕವಾಗಹತ್ತಿತು. ರಾಜನಾರಾಯಣರು ತಮ್ಮ ಸ್ವಾನುಭವಪೂರ್ಣ ಹಾಗೂ ವಿದ್ವತ್ತೆಯಿಂದ ತುಂಬಿತುಳುಕುವ ಅಧಿಕಾರಯುಕ್ತ ರಸಾಲವಾಣಿಯಿಂದ ಜನಗಳಿಗೆ ವೇದಾಂತ ಧರ್ಮದ ಉಪದೇಶ ಮಾಡಹತ್ತಿದರು. ಮತಮತಾಂತರಗಳ ಗೊಂದಲದಲ್ಲಿ ಸಿಕ್ಕುತೊಳಲಾಡುವವರಿಗೆ, ಧರ್ಮಾಂತರ ಮಾಡಿ ಆತ್ಮನಾಶ ಮಾಡಿಕೊಳ್ಳುವವರಿಗೆ ಸತ್ಯಜ್ಞಾನವನ್ನು ಉಪದೇಶಿಸಿ ಅವರ ಆತ್ಯಂತಿಕ ಕಲ್ಯಾಣ ಮಾಡಹತ್ತಿದರು. ಇವರು ಬಂಗಾಲಿಯಲ್ಲಿ ಬರೆದ ಗ್ರಂಥಗಳನ್ನು ಜನರು ಈಗಲೂ ಭಕ್ತಿಯಿಂದ ಪಠಿಸುತ್ತಾರೆ. ಜನರಲ್ಲಿ ಸ್ವದೇಶಾಭಿಮಾನವುಂಟಾಗಬೇಕು, ಮದ್ಯಪಾನಾದಿ ವ್ಯಸನಗಳು ಅವರಲ್ಲಿ

ಸೇರಬಾರದು, ಶಾರೀರಿಕ ಅವನತಿಯು ಅವರಲ್ಲಿ ಮನೆಮಾಡಬಾರದೆಂಬುದಾಗಿ ಹಲವು ವಿಧದಿಂದ ಪ್ರಯತ್ನ ಮಾಡಿದರು. ಇವರಿಗೆ ಬಂಗಾಲಿ ರಾಷ್ಟ್ರಧರ್ಮದ ಆದಿಪುರುಷರೆಂದು ಅನ್ನುತ್ತಾರೆ. ಇಂಥ ವಿಲಕ್ಷಣ ಚಾರಿತ್ರ್ಯದ ಪುರುಷನ ಮಗಳು ಶ್ರೀ ಅರವಿಂದ ಘೋಷರ ತಾಯಿ. ಇವಳು ತನ್ನ ತಂದೆಯಿಂದ ದೊರಕಿಸಿದ ಠೇವನ್ನು ಮಗನಿಗೆ ಒಪ್ಪಿಸಿಬಿಟ್ಟಳು.

ಇದು ತಾಯಿಯ ಕಡೆಯ ಐತಿಹ್ಯವಾಯಿತು ಇನ್ನು ತಂದೆಯಾದ ಕೃಷ್ಣಧನ ಬಾಬುಗಳ ವಿಷಯದ ಸ್ವಲ್ಪ ಮಾಹಿತಿಯನ್ನು ಹೇಳುವದು ಯುಕ್ತವಾಗಿದೆ. ಇವರ ಸ್ವಭಾವ ಪರಿಚಯವನ್ನು ಸ್ವಲ್ಪದರಲ್ಲಿ ಮಾಡಿಕೊಡಬೇಕಾದರೆ ಹೀಗೆ ಹೇಳಬಹುದು: ಶ್ರೀ ರಾಜನಾರಾಯಣ ಬೋಸರು ಆರ್ಯಸಂಸ್ಕೃತಿಯ ಎಷ್ಟು ಅಭಿಮಾನಿಗಳಾಗಿದ್ದರೋ ಅಷ್ಟೇ ಕೃಷ್ಣಧನ ಘೋಷರು ಪಾಶ್ಚಿಮಾತ್ಯ ಸಂಸ್ಕೃತಿಯ ಅಭಿಮಾನಿಗಳಾಗಿದ್ದರು. ಶ್ರೀ ಕೃಷ್ಣಧನರು ಆಂಗ್ಲವೈದ್ಯಕದ ಹೆಚ್ಚಿನ ಅಭ್ಯಾಸಕ್ಕಾಗಿ ವಿಲಾಯತಿಗೆ ಹೋದಾಗ ಕೃಷ್ಣಧನರ ಮಾವಂದಿರು ಅವರಿಗೆ ಹಿಂದೂ ಧರ್ಮವನ್ನೂ, ಹಿಂದೀ ಆಚಾರ ವಿಚಾರಗಳನ್ನೂ ತ್ಯಜಿಸಬಾರದೆಂದು ಬಹು ಪರಿಯಾಗಿ ಬರೆಯುತ್ತಿದ್ದರು. ಆದರೆ, ಫಲಿತಾಂಶವೇನೂ ಹೊರಡಲಿಲ್ಲ. ಮಾವಂದಿರ ಆಗ್ರಹಕ್ಕೆ ವಿಪರೀತವಾಗಿ ಆಂಗ್ಲ ಆಚಾರ ವಿಚಾರಗಳ ವಿಷಯಕ್ಕೆ ಆಗ್ರಹವು ಮಾತ್ರ ಕೃಷ್ಣಧನರಲ್ಲಿ ಹೆಚ್ಚಾಯಿತು. ಹಿಂದುಸ್ತಾನದ ಸುಧಾರಣೆಗೆ ಪಾಶ್ಚಿಮಾತ್ಯ ಆಚಾರ ವಿಚಾರಗಳನ್ನು ಅನುಕರಿಸುವದೊಂದೇ ಮಾರ್ಗವೆಂದು ಅವರು ತಿಳಿದಿದ್ದರು. ಶ್ರೀಕೃಷ್ಣಧನರು ಉದಾರರೂ, ಕೋಮಲಾಂತಃಕರಣಿಗಳೂ ಆಗಿದ್ದರು. ಬಡಬಗ್ಗರಿಗೆ ಪುಕ್ಕಟೆಯಾಗಿ ಔಷಧಗಳನ್ನು ಕೊಡುತ್ತಿದ್ದರು. ಆಪ್ತ ಇಷ್ಟರಿಗೆ ಉದಾರ ಹಸ್ತದಿಂದ ಆರ್ಥಿಕ ಸಹಾಯವನ್ನು ಮಾಡುತ್ತಿದ್ದರು.

ವಾಚಕರು ಇಲ್ಲಿ ಲಕ್ಷಿಸುವದೊಂದು ಮಹತ್ವದ ಮಾತಿದೆ. ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಸಂಸ್ಕೃತಿಗಳ ರಣಸಂಗ್ರಾಮದಲ್ಲಿ ಯಾವದು ವಿಜಯಿಯಾಗುತ್ತದೆಂಬದನ್ನು ತಿಳಿಯುವ ಲವಲವಿಕೆಯು ಬಹು ಮಂದಿಗಿರಬಹುದು. ಅದನ್ನು ತಿಳಕೊಳ್ಳಲಿಕ್ಕೆ ತಲೆಯನ್ನು ಬಹಳವಾಗಿ ತುರಿಸಬೇಕಾಗಿಲ್ಲ. ನಮ್ಮ ಚರಿತ್ರನಾಯಕರ ಕಡೆಗೆ ದೃಷ್ಟಿಕ್ಷೇಪ ಮಾಡಿದರೆ ಆ ಮಾತು ತಾನೇ ಒಡೆದು ತೋರುವಂತಿದೆ. ಬೋಸ ಹಾಗೂ ಘೋಷ ಮನೆತನಗಳ ಸಂಯೋಗವೆಂದರೆ ಪೂರ್ವ ಹಾಗೂ ಪಶ್ಚಿಮಗಳ ಸಂಯೋಗವೆಂದೇ ಹೇಳಬಹುದು. ಇವೆರಡೂ ಸಂಸ್ಕೃತಿಗಳ ಸಂಯೋಗದಿಂದಾದ ಶ್ರೀ ಅರವಿಂದರ ಜನ್ಮವು (ಅವರ ಚರಿತ್ರೆಯು) ಆರ್ಯಸಂಸ್ಕೃತಿಯ ವಿಜಯವನ್ನೇ ಸೂಚಿಸುತ್ತದೆಂದು ಧಾರಾಳವಾಗಿ ಹೇಳಬಹುದು.

ಪರಸ್ಪರ ವಿರೋಧಿಗಳಾದ ಒಲವಿನ (Nature) ಆದರೆ ಪ್ರೇಮಪಾಶಬದ್ಧರಾದ ದಂಪತಿಗಳು ಸುಖದಿಂದ ಸಂಸಾರವನ್ನು ನಡೆಸಿರಲು ಯಥಾಕಾಲದಲ್ಲಿ ನಾಲ್ಕು ಗಂಡೂ, ಒಂದು ಹೆಣ್ಣೂ ಹೀಗೆ ಐದು ಮಕ್ಕಳಾದವು. ಇವರಲ್ಲಿ ಹಿರಿಯನಾದ ವಿನಯಕುಮಾರ ಘೋಷ ಎಂಬಾತನು ಕುಚಬಿಹಾರ ಸಂಸ್ಥಾನದ ದಿವಾಣನಾಗಿದ್ದಾನೆ. ಎರಡನೆಯವನು ಮನಮೋಹನ ಘೋಷ ಎಂಬಾತನು. ಈತನು ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜದಲ್ಲಿ ಇಂಗ್ಲಿಷ ವಾಙ್ಮಯದ ಪ್ರೊಫೆಸರನಾಗಿದ್ದಾನೆ; ಹಾಗೂ ಉತ್ತಮ ಕವಿಯೆಂದು ಹೆಸರಾಗಿದ್ದಾನೆ. ಮೂರನೆಯವರೇ ನಮ್ಮ ಚರಿತ್ರನಾಯಕರಾದ ಶ್ರೀ ಬಾಬು ಅರವಿಂದ ಘೋಷರು. ಇವರ ಜನ್ಮವು ಕ್ರಿಸ್ತಾಬ್ದದ ೧೮೭೨ನೆಯ ವರುಷದ ಅಗಷ್ಟ ೧೫ನೆಯ ತಾರೀಖಿಗೆ ಆಯಿತು. ನಾಲ್ಕನೆಯ ಶಿಶುವು ಹೆಣ್ಣು ಆಯಿತು. ಇವಳ ಹೆಸರು ಸರೋಜಿನಿ ಎಂದಿದೆ. ಇವಳು ಸುಶಿಕ್ಷಿತಳಿರುತ್ತಾಳೆ; ತಮ್ಮನಾದ ಬರೀಂದ್ರಕುಮಾರನ ಕಡೆಗೆ ಕಲಕತ್ತೆಯಲ್ಲಿರುತ್ತಾಳೆ. ಬರೀಂದ್ರನು ಎಲ್ಲಕ್ಕೂ ಚಿಕ್ಕವನು. ಇವನಿಗೆ ೧೯೦೮ರ ಮಾಣಿಕತೋಳಾ ಬಾಂಬಿನ ಪ್ರಕರಣದಲ್ಲಿ ಕರೇನೀರಿನ ಶಿಕ್ಷೆಯಾಗಿತ್ತು. ಮೊನ್ನಿನ ೧೯೧೯ರ ಬಾದಶಾಹೀ ಜಾಹೀರನಾಮೆಯಂತೆ ಬಿಟ್ಟು ಬಂದಿದ್ದಾನೆ. ಇವನು "ನಾರಾಯಣ"ವೆಂಬ ಬಂಗಾಲೀ ಮಾಸಪತ್ರಿಕೆಯ ಉಪಸಂಪಾದಕನಿದ್ದು, ಒಂದೆರಡು ಪುಸ್ತಕಗಳನ್ನು ಬರೆದಿದ್ದಾನೆ. ಅಲ್ಲದೆ ಆಗಾಗ್ಗೆ ಬೇರೆ ಬೇರೆ ಕಡೆಗೆ ಲೇಖಗಳನ್ನೂ ಬರೆಯುತ್ತಿರುತ್ತಾನೆ. ಹೀಗೆ ಅರವಿಂದರ ಅಣ್ಣತಮ್ಮಂದಿರೆಲ್ಲರೂ ಒಂದಿಲ್ಲೊಂದು ರೀತಿಯಿಂದ ವಿಖ್ಯಾತರಿರುತ್ತಾರೆ. ಸಿಂಹದ ಹೊಟ್ಟೆಯಲ್ಲಿ ಹುಟ್ಟುವದು ಸಿಂಹವಲ್ಲವೇ?

ಅಧ್ಯಯನ

ಶೈಶವೇಭ್ಯಸ್ತವಿದ್ಯಾನಾಂ ಯೌವನೇ ವಿಷಯೈಷಿಣಾಂ।
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್॥

-ರಘುವಂಶ - ೧-೪

ಹುಡುಗರೆಂದರೆ ಕೈಯೊಳಗೆ ಸಿಕ್ಕ ಅರಲಿನ ಮುದ್ದೆಯೆಂದೂ, ಅದಕ್ಕೆ ತಮ್ಮ ಇಷ್ಟಬಂದ ಆಕಾರ ಕೊಡಲು-ಬಹುದೆಂದೂ ಸಾಧಾರಣವಾಗಿ ತಾಯಿತಂದೆಗಳು ತಿಳಿಯುವದುಂಟು. ಹುಡುಗನಿಗೆ ಆತ್ಮವಿಲ್ಲ, ಒಲವುಗಳಿಲ್ಲ, ವಿಶಿಷ್ಟ ಪ್ರವೃತ್ತಿಗಳಿಲ್ಲವೆಂದು ಗ್ರಹಿಸಿ ಅನೇಕ ತಾಯಿತಂದೆಗಳು ತಮ್ಮ ಮಕ್ಕಳಿಗೆ ತಮ್ಮ ಇಚ್ಛೆಯಂತೆ ರೂಪಗೊಡಲಿಕ್ಕೆ ಪ್ರಯತ್ನಿಸುತ್ತಾರೆ. ಅದರಿಂದ ಎಷ್ಟೋ ದುಷ್ಪರಿಣಾಮಗಳಾಗಿವೆ; ಮನೆತನಗಳು ಹಾಳಾಗಿವೆ, ದೇಶಗಳು ಹೀನಸ್ಥಿತಿಗೆ ಬಂದಿವೆ. ವಕೀಲ ತಂದೆಯು ಮಗನ ಒಲವು ಚಿತ್ರಕಲೆಯ ಕಡೆಗಿದ್ದರೂ, ಆತನಿಗೆ ಆ ಕಾಯದೆ ಬುಕ್ಕುಗಳ ಕಸವನ್ನು ತಲೆಯಲ್ಲಿ ತುಂಬಿಕೊಳ್ಳಲಿಕ್ಕೆ ಬಲಾತ್ಕಾರ ಮಾಡುವನು! ಸರಕಾರೀ ಸೇವೆಯಲ್ಲಿ ಮುಪ್ಪಾದ ವೃದ್ಧಪಿತನು ತನ್ನಂತೆಯೇ, ತನ್ನ ಚಿರಂಜೀವನೂ ಸಾಹೇಬರ ಪಕ್ಕಾ ಮರ್ಜಿಯೊಳಗಿನವನಾಗಲೆಂದು ಹಾರೈಸಿ, ಮಗನ ಪ್ರವೃತ್ತಿಯು ಕಾವ್ಯಶಾಸ್ತ್ರಾದಿಗಳ ಕಡೆಗಿದ್ದರೂ ಅವನನ್ನು ನೌಕರಿಯಲ್ಲಿ ತುರುಕಲು ಹೆಣಗುತ್ತಾನೆ! ಹೀಗೆ ತಂದೆ ಮಕ್ಕಳ ಪ್ರವೃತ್ತಿಗಳು ಭಿನ್ನವಾದಲ್ಲಿ ಅವೆರಡರ ನಡುವೆ ತಿಕ್ಕಾಟಕ್ಕೆ ಆರಂಭವಾಗುವದು. ಬಲವಾದ ಪಕ್ಷಕ್ಕೆ ಜಯವು ಕಟ್ಟಿಟ್ಟದ್ದು. ತಂದೆತಾಯಿಗಳ ಬಲುಮೆಗೆ ಕೈಕೊಂಡ ಅಭ್ಯಾಸಕ್ರಮದಲ್ಲಿ ಅವರ ಅಧಿಕಾರವಿರುವ-ವರೆಗೆ ಹೇಗೋ ಸ್ವಲ್ಪ ಮನಸ್ಸು ಹತ್ತುವದು. ಅನೇಕರು ಆಗಾಗ್ಗೆ ನಾಪಾಸಾಗುವದಕ್ಕೂ, ಕೈಗೊಂಡ ಅಭ್ಯಾಸ ಕ್ರಮದ ವಿಷಯಕ್ಕೆ ಬೇಸರಿಯುವದಕ್ಕೂ, ಅದರಲ್ಲಿ ಊರ್ಜಿತರಾಗದಿರಲಿಕ್ಕೂ ಇದೇ ಕಾರಣವಿರುತ್ತದೆ. ಪರರ ಒತ್ತಾಯದಿಂದ ಕೈಕೊಂಡ ಉದ್ಯೋಗದಲ್ಲಿ, ಆ ಒತ್ತಾಯವು ಕಡಿಮೆಯಾದೊಡನೆ ಶೈಥಿಲ್ಯವುಂಟಾಗುವದು; ಮತ್ತು ಅಂತಃಕರಣದಲ್ಲಿ ದಬ್ಬಿಕೊಂಡಿದ್ದ ಪ್ರವೃತ್ತಿಯು ತಲೆ ಎತ್ತುವದು. ಹಾಗೂ ಅದು ತಾನು ವಿಜಯಿಯಾಗಲಿಕ್ಕೆ ಹವಣಿಸುವದು.

ಕೃಷ್ಣಧನ ಘೋಷರಿಗೆ ಇಂಗ್ಲಿಶ್ ಪದ್ಧತಿಯ ಮೇಲೆ ಬಲು ಪ್ರೀತಿ. ಅವರಿಗೆ ತಮ್ಮ ಮಗನು ಚೊಕ್ಕ ಇಂಗ್ಲಿಷ ಮನುಷ್ಯನಾಗಬೇಕೆಂಬ ಇಚ್ಛೆಯಿರುವದು ಸಹಜವಿದೆ. ಮಗನ ಒಲವು, ಪ್ರವೃತ್ತಿ, ಸ್ವಭಾವ ಧರ್ಮಗಳೇನು ಬೇಕಾದವುಗಳಿರಲೊಲ್ಲವೇಕೆ? ಅವುಗಳ ಗೊಡವೆ ತಮಗೇನು? ಎಂದು ಅವುಗಳನ್ನು ದುರ್ಲಕ್ಷಿಸಿ ತಮ್ಮ ಇಚ್ಛೆಯಂತೆ ಮಗನ ಶಿಕ್ಷಣಕ್ಕೆ ಆರಂಭಿಸಿದರು. ಮಾತೃಭಾಷೆಯ ಅಭ್ಯಾಸವನ್ನು ಮುಂಚೆ ಮಾಡಿ ಬಳಿಕ ತದ್ವಾರವಾಗಿ ಇಂಗ್ಲಿಷ ಕಲಿಸುವ ದ್ರಾವಿಡೀ ಪ್ರಾಣಾಯಾಮವೇತಕ್ಕೆ ಎಂದು ಮೊದಲಿಗೆ ಇಂಗ್ಲಿಷವನ್ನೇ ಕಲಿಸಹತ್ತಿದರು.

೫ನೆಯ ವರುಷ ಅಭ್ಯಾಸಕ್ಕೆ ಆರಂಭವಾಯಿತು. ದಾರ್ಜಲಿಂಗದ ಸೆಂಟ್‌ಪಾಲ್ ಸ್ಕೂಲಿನಲ್ಲಿ ಹೆಸರು ಹಚ್ಚಿತು. ಅಲ್ಲಿ ಅರವಿಂದನು ತನ್ನ ವಿಲಕ್ಷಣವಾದ ಸ್ಮರಣ ಶಕ್ತಿಯಿಂದ ಎಲ್ಲರನ್ನು ದಂಗುಬಡಿಸಿದನು. ಉಪಾಧ್ಯಾಯರು ಇವನ ಮೇಲೆ ಬಲು ಪ್ರೇಮ ಮಾಡುತ್ತಿದ್ದರು. ಮುದ್ದು ಅರವಿಂದನ ಮುಖಾರವಿಂದವು ಸಂಗಡಿಗರಿಗೆಲ್ಲ ಬಲು ಪ್ರಿಯಕರವಾಗಿತ್ತು. ಹಿಂದುಸ್ತಾನದಲ್ಲಿಯೇ ಹೆಚ್ಚು ದಿನ ಶಿಕ್ಷಣದ ಸಲುವಾಗಿ ಇಟ್ಟರೆ ಮಗನು ಪೂರ್ಣ ಇಂಗ್ಲಿಷ ಮನುಷ್ಯನಾಗಲಿಕ್ಕಿಲ್ಲವೆಂಬ ಸಂಶಯದಿಂದಲೋ ಏನೋ ಎಂಬುವಂತೆ ಏಳು ವರುಷದ ಕಂದಮ್ಮನನ್ನು ಕೃಷ್ಣಧನರು ಇಂಗ್ಲಂಡಕ್ಕೆ ಒಬ್ಬ ಮಿತ್ರನೊಡನೆ ಕಳಿಸಿದರು.

ಇಂಗ್ಲಂಡದಲ್ಲಿ ಒಬ್ಬ ಮಿಶನರಿ (ಕ್ರಿಸ್ತೀಭಟ್ಟನ) ಬಳಿಯಲ್ಲಿ ಅರವಿಂದನೂ ಆತನ ತಮ್ಮನೂ ಕೂಡಿ ಇರಹತ್ತಿದರು. ಮಿಶನರಿಯು ಈ ಕೋಮಲ ಮನಸ್ಸಿನ ಮುದ್ದು ಮಕ್ಕಳ ಅಂತಃಕರಣದಲ್ಲಿ ಕ್ರಿಸ್ತೀಧರ್ಮದ ವಿಷಯಕ್ಕೆ ಪ್ರವೃತ್ತಿಯನ್ನುಂಟು ಮಾಡಬೇಕೆಂದು ಅವರಿಗೆ ನಾನಾವಿಧದಿಂದ ಉಪದೇಶಿಸಿದರು. ಈ ಉಪದೇಶದಿಂದ ಅರವಿಂದರಲ್ಲಿ ಕ್ರಿಸ್ತೀ ಧರ್ಮಕ್ಕೆ ಸೇರಬೇಕೆಂಬ ಆಕಾಂಕ್ಷೆಯು ಉತ್ಪನ್ನವಾಗದಿದ್ದರೂ, ಬಾಹ್ಯ ಆಡಂಬರದ ವಿಷಯಕ್ಕೆ ಅವರ ಮನಸ್ಸು ಹೇಸಿತು. ಭೋಗವೃತ್ತಿಯ ಕಡೆಗೆ ತಾತ್ಸಾರ ಮಾಡಲಿಕ್ಕೆ ಈ ಉಪದೇಶವು ಸಹಾಯ ಮಾಡಿತು. ಇಂಗ್ಲಂಡದಂಥ ವಿಲಾಸೀ ದೇಶದಲ್ಲಿದ್ದು ಅರವಿಂದರ ಒಲವು ತ್ಯಾಗದ ಕಡೆಗೆ ಇರಲಿಕ್ಕೆ ಈ ಮಿಶನರಿಯೇ ಕಾರಣನೆಂದು ಹೇಳಬಹುದು. ಈತನ ವಿಷಯಕ್ಕೆ ಅರವಿಂದರಲ್ಲಿ ಪೂಜ್ಯಬುದ್ಧಿ ಇರುತ್ತದೆ. ಮ್ಯಾಂಚೆಸ್ತರದಲ್ಲಿ ಕೊಂಚಕಾಲ ಖಾಸಗೀ ಅಭ್ಯಾಸ ಮಾಡಿದರು. ಬಳಿಕ ಲಂಡನದ ಸೆಂಟ್‌ಪಾಲ್ ಸ್ಕೂಲಿಗೆ ಹೆಸರು ಹಚ್ಚಿದರು. ಈ ಶಾಲೆಯ ಮುಖ್ಯಾಧ್ಯಾಪಕರು ಒಮ್ಮೆ ತಮ್ಮ ವಿದ್ಯಾರ್ಥಿಯಾದ ಅರವಿಂದನ ವಿಷಯಕ್ಕೆ ಅಂದುದೇನಂದರೆ: ನಾನು ಈಗ ಕೆಲಸಮಾಡಹತ್ತಿ ೨೫-೩೦ ವರುಷಗಳಾದವು. ಈ ಅವಧಿಯೊಳಗೆ ಈತನಷ್ಟು ವಿಲಕ್ಷಣ ಬುದ್ಧಿ ಚಾತುರ್ಯವುಳ್ಳ ವಿದ್ಯಾರ್ಥಿಯನ್ನು ನಾನು ಕಾಣಲಿಲ್ಲ. ಈ ಶಾಲೆಯೊಳಗಿನ ಅಭ್ಯಾಸವು ಮುಗಿದ ನಂತರ ಶ್ರೀ ಅರವಿಂದರು ಕೆಂಬ್ರಿಜ್‌ದ ಕಾಲೇಜದಲ್ಲಿ ಹೆಚ್ಚಿನ ಅಭ್ಯಾಸಕ್ಕಾಗಿ ಸೇರಿದರು.

ಶ್ರೀ ಅರವಿಂದರು ತಂದೆಯ ಸಂಕೇತದಂತೆ ಐ.ಸಿ.ಎಸ್. ಪರೀಕ್ಷೆಯ ತಯಾರಿಯನ್ನು ನಡೆಸಿದರು. ಈ ಪರೀಕ್ಷೆಗೆ ಹಿಂದುಸ್ತಾನದ ಯಾವದೊಂದು ಭಾಷೆಯ ಜ್ಞಾನವು ಅವಶ್ಯವಿದ್ದುದರಿಂದ ಇತರ ಇಂಗ್ಲಿಷ್ ವಿದ್ಯಾರ್ಥಿಗಳಂತೆ ಅರವಿಂದರು ಬಂಗಾಲಿಯನ್ನು ಕಲಿಯಲಿಕ್ಕೆ ಆರಂಭಿಸಿದರು! ಅರವಿಂದರಿಗೆ ಅಭ್ಯಾಸದ ಹುಚ್ಚು ಬಹಳ. ಕೋಣೆಯಲ್ಲಿ ಏಕಾಕಿಯಾಗಿ ಕುಳಿತು ಅಭ್ಯಾಸದ ಪುಸ್ತಕಗಳನ್ನು ಕಂಠಪಾಠಮಾಡುವದು ಇವರ ರೂಢಿಯಾಗಿತ್ತು, ಶರೀರದ ಕಡೆಗೆ ದುರ್ಲಕ್ಷ ಬಹಳ. ಅದರಲ್ಲಿ ತಂದೆಯ ಉದಾರತನದ ಮೂಲಕ ಆತನಿಗೆ ಮಕ್ಕಳ ಅಭ್ಯಾಸಕ್ಕಾಗಿ ಹೊತ್ತು ಹೊತ್ತಿಗೆ ಹಣ ಕಳಿಸುವದಕ್ಕೂ ಆಗುತ್ತಿದ್ದಿಲ್ಲ! ಇದರಿಂದ ಆಗಾಗ್ಗೆ ಉಪವಾಸದ ಪ್ರಸಂಗಗಳು ಬರುತ್ತಿದ್ದುವು. ಇಂಗ್ಲಂಡ ದೇಶ; ದುಡ್ಡಿದ್ದವನು ದೊಡ್ಡಪ್ಪನು. ಚಿಕ್ಕ ವಯಸ್ಸಿನ ಅರವಿಂದನ ಸ್ಥಿತಿಯು ಎಷ್ಟು ಕಷ್ಟಕರವಾಗಿತ್ತೆಂಬದನ್ನು ಹೇಳುವದೇ ಕಷ್ಟ. ಪರದೇಶ, ಆಪ್ತರಿಲ್ಲ ಇಷ್ಟರಿಲ್ಲ; ದುಡ್ಡಿನ ಸಂಬಂಧದಿಂದಾದರೂ ಜನರ ಸಹಾಯ ಸಿಕ್ಕೀತೆನ್ನಬೇಕೇ, ಹಾಗೆ ಸಹ ಇಲ್ಲ. ಅಂದ ಮೇಲೆ ಈ ಚಿಕ್ಕಮಕ್ಕಳ ಬೊಗಳಿಗೆ ಪಾರಾವಾರವೇ ಉಳಿಯಲಿಲ್ಲ. ಅರವಿಂದರಲ್ಲಿ ಒಂದು ತರದ ವಿಕ್ಷಿಪ್ತತನವು ಆರಂಭದಿಂದಲೇ ಇರುವದಂತೆ. ಪುಸ್ತಕದ ಕಡೆಗೆ ಎಷ್ಟೊತ್ತಿನವರೆಗೆ ನೋಡುತ್ತ ಕುಳಿತರೂ ಅದರಲ್ಲಿ ಏನು ಮಾಡುವೆನೆಂಬದರ ಕಡೆಗೆ ಲಕ್ಷವಿರುವಂತಿಲ್ಲ. ಗಡಿಯಾರ ನೋಡುತ್ತ ನಿಂತರೂ ಎಷ್ಟು ಗಂಟೆಯಾಯಿತೆಂಬದನ್ನೇ ತಿಳಿಯಲಿಕ್ಕೆ ಮರೆಯುವದು, ಇವರ ವಿಚಿತ್ರ ಪದ್ಧತಿಯಾಗಿತ್ತು. ಇದರಲ್ಲಿ ಉಪವಾಸ ಬೀಳುವ ಪ್ರಸಂಗಗಳಿಂದ ಶರೀರ ಮತ್ತು ಮನಸ್ಸಿನ ಮೇಲೆ ಆದ ಪರಿಣಾಮಗಳ ಭರತಿಬಿದ್ದಿತು.

೧೮೯೦ರಲ್ಲಿ ಆದ ಐ.ಸಿ.ಎಸ್. ಪರೀಕ್ಷೆಗೆ ಶ್ರೀ ಅರವಿಂದರು ಕುಳಿತರು. ವಯಸ್ಸಿನ ಹದಿನೆಂಟನೆಯ ವರುಷ ಈ ಪರೀಕ್ಷೆಗೆ ಕುಳಿತ ಹಿಂದೀ ವಿದ್ಯಾರ್ಥಿಗಳು ಸಿಕ್ಕುವರೋ ಇಲ್ಲವೋ ಸಂಶಯವೇ ಇದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಪರೀಕ್ಷೆಗೆ ಕುಳಿತರೂ ಪ್ರತಿಯೊಂದು ವಿಷಯದಲ್ಲಿ ಇವರಿಗೆ ಉತ್ತಮ ಗುಣಗಳು ಸಿಕ್ಕವು.

ಆದರೊಳಗೂ ಇತಿಹಾಸ ಮತ್ತು ಗ್ರೀಕ್ ಭಾಷೆಗಳ ಮೇಲೆ ಇವರ ಪ್ರಭುತ್ವವು ಹೆಚ್ಚಿಗಿತ್ತು. ಗ್ರೀಕ್ ಭಾಷಾ ವಿಷಯದಲ್ಲಿ ಇವರು ಮೊದಲನೆಯ ನಂಬರು ಪಡೆದಿದ್ದು, ಬೀಚ್‌ಕ್ರಾಷ್ಟ ಎಂಬವರು ಎರಡನೆಯವರಾಗಿದ್ದರು. ಈ ಬೀಚಕ್ರಾಷ್ಟರೇ ಮುಂದೆ ನ್ಯಾಯಾಧೀಶರಾಗಿದ್ದಾಗ ಶ್ರೀ ಅರವಿಂದರಿಗೆ ದೇಶಸೇವೆ ಮಾಡಿದ ಘೋರ ಅಪರಾಧಕ್ಕಾಗಿ ಆರೋಪಿಯ ಪಂಜರದಲ್ಲಿ ಶೃಂಖಲಾಬದ್ಧಹಸ್ತರಾಗಿ ನಿಲ್ಲುವ ವೇಳೆ ಬಂತು! ಕಲ್ಪನಾ ಚತುರ ನಾಟಕಕಾರನಿಗೂ ಕಲ್ಪನೆಯಾಗದಂಥ ಅದ್ಭುತ ರಮ್ಯದೃಶ್ಯಗಳನ್ನು ಜಗಚ್ಚಾಲಕನು ಭೂಲೋಕದ ರಂಗಭೂಮಿಯ ಮೇಲೆ ತೋರಿಸುತ್ತಿರುತ್ತಾನೆ.

ಐ.ಸಿ.ಎಸ್. ಪರೀಕ್ಷೆಯ ಎಲ್ಲ ಪ್ರಶ್ನೆ ಪತ್ರಿಕೆಗಳು ಮುಗಿದವು. ಅರವಿಂದರು ಎಲ್ಲವುಗಳಿಗೂ ಉತ್ತರಗಳನ್ನು ಬರೆದರು. ಈ ಪರೀಕ್ಷೆಯನ್ನು ಪಾಸಾಗಲಿಕ್ಕೆ ಅಶ್ವಾರೋಹಣ ಕಲೆಯ ಜ್ಞಾನವೂ ಅವಶ್ಯವಿತ್ತು. ಶ್ರೀ ಅರವಿಂದರು ಈ ಪರೀಕ್ಷೆಯಲ್ಲಿ ಪಾಸಾಗಲಿಲ್ಲವೆಂದು ಕೆಲವರೂ, ತಮ್ಮ ವಿಕ್ಷಿಪ್ತ ಸ್ವಭಾವದಂತೆ ಪರೀಕ್ಷೆಗೆ ಕೂಡ್ರಲಿಲ್ಲವೆಂದು ಕೆಲವರೂ ಅಭಿಪ್ರಾಯಪಡುತ್ತಾರೆ. ಒಂದುವೇಳೆ ಪರೀಕ್ಷೆಗೆ ಕುಳಿತು ನಾಪಾಸಾಗಿದ್ದರೂ ಅರವಿಂದರ ಕೀರ್ತಿಗೆ ಎಳ್ಳಷ್ಟೂ ಧಕ್ಕೆ ಬರುವಂತಿಲ್ಲ. ಶಾರೀರಿಕ ಹಾಗು ಮಾನಸಿಕ ಅಸ್ವಾಸ್ಥ್ಯದ ಮೂಲಕ ಅವರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ; ಎಂಬುದೇ ಬಹು ಜನರ ಮತವಿದೆ.

ಐ.ಸಿ.ಎಸ್. ಪರೀಕ್ಷೆ ನಾಪಾಸಾದುದು ಒಳಿತಾಯಿತೋ, ಕೆಡುಕಾಯಿತೋ? ಅರವಿಂದರ ಭೌತಿಕ ಐಶ್ವರ್ಯದಲ್ಲಿ ಪಾಲುಗಾರರಾಗಿ ಮೋಜು ಮಾಡಲಿಚ್ಛಿಸಿ, ಹೊಂಚುಹಾಕಿ ಕುಳಿತ ಕೆಲವು ಆಪ್ತ-ಇಷ್ಟರಿಗೆ ನಾಪಾಸಾದುದು ದುಃಖಕರವೆನಿಸಿದರೂ, ಭಾರತೀಯರ ದೃಷ್ಟಿಯಿಂದ ಅದು ಒಳಿತೇ ಆಯಿತೆಂದು ಹೇಳಬಹುದು. ಐ.ಸಿ.ಎಸ್. ಪರೀಕ್ಷೆಯಾದ ಬಳಿಕ ಸ್ವಲ್ಪ ಕಾಲ ವಿಶ್ರಾಂತಿ ತಕ್ಕೊಂಡು ಮತ್ತೆ ಹೆಚ್ಚಿಗೆ ಅಭ್ಯಾಸ ಮಾಡಲಿಕ್ಕೆ ಕಿಂಗ್ಸ್ ಕಾಲೇಜದಲ್ಲಿ ಸೇರಿದರು. ತಂದೆಯು ದಿವಂಗತನಾದುದರಿಂದ ಆರ್ಥಿಕ ಸಹಾಯದ ಆಶೆಯು ತೀರ ಕಟ್ಟಾಯಿತು. ಆದರೂ ಎದೆಗುಂದದೆ ಸ್ವಂತ ಕಾಲಮೇಲೆ ನಿಂತು ಅಭ್ಯಾಸ ಮಾಡುವದನ್ನು ನಿಶ್ಚಯಿಸಿದರು. ತಮ್ಮ ಬುದ್ಧಿ ಸಾಮರ್ಥ್ಯದಿಂದ ಕೆಲವು ವಿದ್ಯಾರ್ಥಿ ವೇತನಗಳನ್ನು (Scholarships) ದೊರಕಿಸಿದರು. ೧೮೯೨ರಲ್ಲಿ ಕೇಂಬ್ರಿಡ್ಜ್ ವಿದ್ಯಾಪೀಠದ ಕಡೆಯ ಪರೀಕ್ಷೆಗೆ ಕುಳಿತು ಅದರಲ್ಲಿ ಮೊದಲನೆಯ ತರಗತಿಯಲ್ಲಿ ಪಾಸಾದರು.

ಪೂರ್ವಾಶ್ರಮ

ದ್ವಿತೀಯಂ ಆಯುಷೋ ಭಾಗಂ ಕೃತದಾರೋ ಗೃಹೇ ವಸೇತ್

- ಮನುಸ್ಮೃತಿ

ಶ್ರೀ ಅರವಿಂದರು ಕೇಂಬ್ರಿಡ್ಜಿನ ಕಿಂಗ್ಸಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಬಡೋದೆಯ ಪ್ರಜಾನುರಂಜಕ ಮಹಾರಾಜರಾದ ಶ್ರೀ ಸಯಾಜಿರಾವ್ ಗಾಯಕವಾಡ ಇವರ ಪರಿಚಯವಾಯಿತು. ಶ್ರೀ ಸಯಾಜಿರಾಯರು ಒಳ್ಳೇ ಮನುಷ್ಯಪರೀಕ್ಷಕರೆಂದು ಹೆಸರಾಗಿದ್ದಾರೆ. ಉತ್ತಮೋತ್ತಮ ನರರತ್ನಗಳನ್ನು ಆರಿಸಿ, ಅವುಗಳನ್ನು ತಮ್ಮ ರಾಜ್ಯದಲ್ಲಿ ಉಪಯೋಗಿಸಿಕೊಂಡು ಪ್ರಜಾಸೌಖ್ಯವನ್ನು ವೃದ್ಧಿಂಗತ ಮಾಡುವದರಲ್ಲಿ ಇವರು ತತ್ಪರರಾಗಿರುತ್ತಾರೆ. ಇವರೊಡನೆ ಇಂಗ್ಲಂಡದಲ್ಲಾದ ಅರವಿಂದರ ಪರಿಚಯವು ಸ್ನೇಹದಲ್ಲಿ ಪರಿಣಮಿಸಿತು. ಶ್ರೀ ಸಯಾಜಿರಾವ ಗಾಯಕವಾಡರು ಅರವಿಂದ ಬಾಬುಗಳ ಗುಣಗಳಿಗೆ ಲುಬ್ಧರಾಗಿ ತಮ್ಮ ರಾಜ್ಯದಲ್ಲಿ ಕೆಲಸಮಾಡಬೇಕೆಂದು ಇಚ್ಛೆಯನ್ನು ಪ್ರಕಟಿಸಿದರು. ಐ.ಸಿ.ಎಸ್. ನಾಪಾಸಾದರೂ ಅದರಷ್ಟೇ ಮಾನ್ಯತೆಯುಳ್ಳ ಅಧಿಕಾರವು ಅರವಿಂದರಿಗೆ ಸಿಗುವ ಪ್ರಸಂಗವು ಬಂತು. ಅರವಿಂದರಾದರೂ ಮಹಾರಾಜರ ಇಚ್ಛೆಗೆ ಮಾನಕೊಟ್ಟು, ಅವರ ಖಾಸಗೀ ಕಾರುಭಾರಿಯಾಗಲೊಪ್ಪಿದರು.

ಬಡೋದೆಯಲ್ಲಿ ಶ್ರೀ ಅರವಿಂದರು ಹನ್ನೆರಡು ವರುಷಗಳವರೆಗೆ ಭಿನ್ನ ಭಿನ್ನ ಪದವಿಗಳ ಮೇಲೆ ಬಹಳ ಸರಸವಾಗಿ ಕೆಲಸಮಾಡಿದರು. ಎಲ್ಲಕ್ಕೂ ಮುಂಚೆ ಖಾಸಗೀ ಕಾರುಭಾರಿಗಳಿದ್ದರು; ಬಳಿಕ ಕೆಲದಿನ ಮಹಾರಾಜರ ದಿವಾಣೀ ಆಫೀಸಿನಲ್ಲಿ ಕೆಲಸಮಾಡಿದರು; ನಂತರ ಕೆಲವು ಕಾಲದ ವರೆಗೆ ಬಡೋದೆಯ ಸ್ಟೇಟ್‌ಕಾಲೇಜದಲ್ಲಿ ಪ್ರೊಫೆಸರರಾಗಿದ್ದರು. ಇಲ್ಲಿಂದ ಮಹಾರಾಜರ ಪ್ರಾಯವ್ಹೇಟ ಸೆಕ್ರೆಟರಿಗಳಾಗಿ ಸ್ವಲ್ಪಕಾಲ ಇದ್ದರು. ಕಟ್ಟಕಡೆಗೆ ಆರಂಭದಲ್ಲಿ ಪ್ರೊಫೆಸರರಾಗಿದ್ದ ವಿದ್ಯಾಲಯದಲ್ಲಿಯೇ ವ್ಹಾಯಿಸ ಪ್ರಿನ್ಸಿಪಾಲರಾದರು. "ಮನುಷ್ಯನ ಪರೀಕ್ಷೆ ಮಾಡುವದಿದ್ದರೆ ಆತನಿಗೆ ಅಧಿಕಾರಕೊಟ್ಟು ನೋಡು" ಎಂದು ಹಿರಿಯರು ಹೇಳುವದುಂಟು. ಕ್ಷುಲ್ಲಕರಿಗೆ ಅಧಿಕಾರ ಸಿಕ್ಕುತ್ತಲೆ, ಅವರು ಹೆಮ್ಮೆಯಿಂದ ಮೆರೆಯುವದುಂಟು. ಸಜ್ಜನರ ವೃತ್ತಿಯು ಇದಕ್ಕೆ ತೀರ ವಿಪರೀತವಿರುತ್ತದೆ. ಅರವಿಂದರು ಯಾವ ಅಧಿಕಾರದ ಮೇಲೆ ಕೆಲಸಮಾಡಿದರೂ ಎಲ್ಲರಿಗೆ ಬೇಕಾಗಿದ್ದರು. ವಿದ್ಯಾಲಯದಲ್ಲಿ ಅಧ್ಯಾಪಕರಿದ್ದಾಗ ವಿದ್ಯಾರ್ಥಿಗಳ ಪಂಚಪ್ರಾಣರಾಗಿದ್ದರು. ಶ್ರೀ ಅರವಿಂದರ ವಿಷಯಕ್ಕೆ ಶಿಷ್ಯವರ್ಗದಲ್ಲಿ ಎಷ್ಟು ಪೂಜ್ಯಬುದ್ಧಿಯಿತ್ತೆಂಬುದು ವ್ಯಕ್ತವಾಗುವ ಪ್ರಸಂಗವು ಮುಂದೆ ಒಮ್ಮೆ ಬಂತು; ೧೯೦೭ರಲ್ಲಿ ಅರವಿಂದರ ಮೇಲೆ ಆದ ಮೊದಲನೆಯ ಖಟ್ಲೆಯ ಕಾಲಕ್ಕೆ ಬಡೋದೆಯ ವಿದ್ಯಾಲಯದ ವಿದ್ಯಾರ್ಥಿಗಳು ಅಧಿಕಾರಿಗಳ ಬೆದರಿಕೆಗೆ ಭಯಪಡದೆ ಸಭೆಗೂಡಿಸಿ, ತಮ್ಮ ಗುರುಗಳ ವಿಷಯಕ್ಕೆ ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿದರು!

ಬಡೋದೆಯ ಸಂಸ್ಥಾನದ ಪ್ರಜೆಗಳು ತಮಗೆ ಇಂಥ ಅಧಿಕಾರಿಯು ದೊರೆತ ಬಗ್ಗೆ ಅಭಿಮಾನ ಪಡುತ್ತಿದ್ದರು. ಇನ್ನು ಮಹಾರಾಜರ ವಿಷಯಕ್ಕೆ ಕೇಳಿದರೆ, ಅವರು ಅಲ್ಪಾವಧಿಯೊಳಗೇ ಶ್ರೀ ಅರವಿಂದರನ್ನು ದಿವಾನರನ್ನಾಗಿ ಮಾಡತಕ್ಕವರಿದ್ದರಂತೆ! ಸಂಸ್ಥಾನಗಳಲ್ಲಿ ಕೆಲಸಮಾಡುವದು ಬಿಗಿಯಾದದ್ದು. ಯಾಕಂದರೆ ಅಧಿಪತಿಗಳ ಮನಸ್ಸಿನ ಲಹರಿಗಳಿಗನುಸರಿಸಿ ಕೈ ಕೆಳಗಿನವರ ಯೋಗ್ಯತೆಯ ಏರಿಳಿತಗಳಾಗುತ್ತಿವೆ. ಆದುದರಿಂದ ಸಂಸ್ಥಾನದಲ್ಲಿ ಕೆಲಸ ಮಾಡುವ ಅನೇಕರಿಗೆ ತಮ್ಮ ಪ್ರತಿಷ್ಠೆಯನ್ನು ಬೆಳಸಿಕೊಳ್ಳಲಿಕ್ಕೆ ಲಾಂಗೂಲಚಾಲನಾದಿ ವಾಮಮಾರ್ಗಗಳ ಅವಲಂಬನ ಮಾಡಬೇಕಾಗುವದು. ಇಲ್ಲವೆ ತಮ್ಮ ಮರ್ಯಾದೆಗೆ ಭಂಗಬರುವ ಲಕ್ಷಣಗಳು ಕಂಡೊಡನೆ ಆ ಅಧಿಕಾರಕ್ಕೆ ಒದ್ದು ಹೊರಬೀಳಬೇಕಾಗುತ್ತದೆ. ಶ್ರೀ ಅರವಿಂದರು ಸರಳ ಮಾರ್ಗದಿಂದ ಕೆಲಸ ಮಾಡಿ, ತಮ್ಮ ಕಾರ್ಯಕುಶಲತೆಯಿಂದ ರಾಜಪ್ರಜೆಗಳಿಬ್ಬರಿಗೂ ಬೇಕಾಗಿದ್ದರು.

ಶ್ರೀ ಅರವಿಂದರು ಬಡೋದೆಗೆ ಬಂದು ೩-೪ ವರುಷಗಳಾಗಿದ್ದವು. ೨೪ನೆಯ ವರುಷದ ವಯಸ್ಸು, ನೂತನ ತಾರುಣ್ಯ, ದೊಡ್ಡ ಸಂಬಳ; ಅಂದಮೇಲೆ ಸೃಷ್ಟಿಕ್ರಮದಂತೆ ವಿವಾಹದ ಉತ್ಸುಕತೆಯುಂಟಾಗುವದು ಸ್ವಾಭಾವಿಕವಿದೆ. ಶ್ರೀ ಅರವಿಂದರಂಥ ಲಕುಮಿ ಸರಸ್ವತಿಯರ ವರಕೃಪೆಗೆ ಪಾತ್ರರಾದ ವರಗಳಿಗೆ ಕನ್ಯಾದಾನ ಮಾಡಲಿಕ್ಕೆ ಒಲ್ಲದ ಕನ್ಯಾಪಿತನಾದರೂ ಆರು? ಶ್ರೀ ಅರವಿಂದರ ಅರ್ಧಾಂಗಿಯಾಗುವ ಭಾಗ್ಯವಿದ್ದ ವಂಗಕನ್ಯೆಯ ಪೂರ್ವ ಸುಕೃತವು ದೊಡ್ಡದೇ ಸರಿ. ಬಂಗಾಲದ ಅಗ್ರಿಕಲ್ಚರಲ್ ಖಾತೆಯ ವರಿಷ್ಠ ಅಧಿಕಾರಿಯ ಕನ್ಯೆಯಾದ ಮೃಣಾಲಿನಿ ಎಂಬುವಳು ವಧುವೆಂದು ನಿಶ್ಚಿತವಾಯಿತು. ಮೃಣಾಲಿನಿಯ ವಯಸ್ಸು ೧೫ ವರುಷಗಳದಿತ್ತು. ಇವಳಿಗೆ ಚನ್ನಾಗಿ ಓದು ಬರೆಯಲು ಬರುತ್ತಿತ್ತು. ಮಾವನೂ ಶ್ರೀಮಂತನು. ವಿವಾಹವು ಯಥಾಸಾಂಗವಾಗಿ ವಿಜೃಂಭಣೆಯಿಂದ ಜರಗಿತು. ವಯಸ್ಸಿನ ಏಳನೆಯ ವರುಷದಿಂದ ಅರವಿಂದರು ಇಂಗ್ಲಂಡದಲ್ಲಿದ್ದವರು; ಹಿಂದೂ ಆಚಾರ ವಿಚಾರಗಳ ಸಂಪರ್ಕವಾಗಿ ಅವು ನೆಲೆಗೊಳ್ಳುವ ಮುಂಚಿತವಾಗಿಯೇ ಇಂಗ್ಲಂಡದ ವಾಸಾಗಿದ್ದುದು. ಅದರಿಂದ ಇಂಗ್ಲಿಷ ಪದ್ಧತಿಯ ನಿತ್ಯದ ವ್ಯವಹಾರಗಳೇ ಅರವಿಂದರ ಮೈಯ್ಯುಂಡಿದ್ದವು. ಧೋತರವನ್ನುಡಲಿಕ್ಕೆ ನಾಚಿಕೆ, ಬರಿಗಾಲಿನಿಂದ ನಡೆಯಲಿಕ್ಕೆ ಹೇಸಿಕೆ, ಹೀಗೆ ಅವರು ಹಿಂದುಸ್ತಾನದ ಆಚಾರವಿಚಾರಗಳಿಂದ ದೂರವಾಗಿದ್ದರು. ಬಂಗಾಲಿಯ ಜ್ಞಾನವು ಎಷ್ಟು ಅಗಾಧವಾಗಿತ್ತೆಂಬದನ್ನು ಹಿಂದೆ ಹೇಳಿದೆ. ಸಂಸ್ಕೃತದ ಪರಿಚಯವೂ ಅದರಂತೆಯೇ ಇತ್ತು. ನಾಸ್ತಿಕತನವು ರೋಮ ರೋಮಗಳಲ್ಲಿ ತುಂಬಿಹೋಗಿತ್ತು. ಆರ್ಯಸಂಸ್ಕೃತಿಯ ವಿಚಿತ್ರ ಆಚಾರಗಳನ್ನು ಕಂಡು ಅವರಿಗೆ ನಗೆ ಬರುತ್ತಿತ್ತು. ಆತ್ಮಾನಾತ್ಮ ವಿಚಾರವೆಂದರೆ ಅದೊಂದು ಹುಚ್ಚರು ಮಾಡಿದ ಮೂರ್ಖತನದ ಪ್ರದರ್ಶನವೆಂದು ಅವರ ಗ್ರಹಿಕೆಯಾಗಿತ್ತು.

ಸುದೈವದಿಂದ ಶ್ರೀ ಅರವಿಂದರ ಈ ಸಂಶಯವು ಬಹಳ ದಿನ ಉಳಿಯಲಿಲ್ಲ. ಆತ್ಮಸೂರ್ಯನ ಅರುಣೋದಯವು ಹೃದಯಾಕಾಶದಲ್ಲಿ ಕ್ರಮವಾಗಿ ಆಗಹತ್ತಿತು. ಪಾಶ್ಚಾತ್ಯ ದೃಷ್ಟಿಯಿಂದ ವಿಚಾರಿಸಿ ಏನೋ ಕೆಲವು ಗೊತ್ತುಮಾಡಿಟ್ಟುಕೊಂಡ ಸಿದ್ಧಾಂತಗಳು ಅನುಭವದ ಒರೆಗಲ್ಲಿಗೆ ಹತ್ತದಾದವು. ಅವುಗಳಲ್ಲಿ ಹುರುಳಿಲ್ಲೆಂಬುದು ಸ್ವಲ್ಪ ಅನುಭವಕ್ಕೆ ಬರಹತ್ತಿತು. ಮನುಷ್ಯನ ಮನಸ್ಸು ತಿರುಗಲಿಕ್ಕೆ ಕ್ಷುಲ್ಲಕ ಕಾರಣಗಳೂ ಸಾಕಾಗುತ್ತವೆ. ಕೆಲವರಿಗೆ ಪ್ರಿಯಜನವಿರಹದಿಂದ ಉಪರತಿಯಾಗುವದು; ಬೇರೆ ಕೆಲವರಿಗೆ ಇಚ್ಛಿತ ಸಾಧ್ಯವಾಗದಿದ್ದರೆ ಮನಸ್ಸು ತಿರುಗುವದು. ಇನ್ನು ಕೆಲವರಿಗೆ ಧನನಾಶದಿಂದ ವೈರಾಗ್ಯವು ಬರುವದು. ಆಯುಷ್ಯದಲ್ಲಿ ಪ್ರತಿಯೊಬ್ಬನಿಗೆ ವೈರಾಗ್ಯಪರವಿಚಾರಗಳು ಒಂದೆರಡು ಸಾರೆಯಾದರೂ ಬಂದು ಭೆಟ್ಟಿಯಾಗದೆ ಹೋಗುವದಿಲ್ಲ. ಸ್ಮಶಾನವೈರಾಗ್ಯ ಪ್ರಸೂತಿವೈರಾಗ್ಯಾದಿ ಒಂದಿಲ್ಲೊಂದು ಪ್ರಕಾರದ ವಿರಾಗವು ಮನುಷ್ಯನ ಮೇಲೆ ಒಂದೆರಡು ತಾಸು, ಕನಿಷ್ಠ ಒಂದೆರಡು ಮಿನೀಟುಗಳ ವರೆಗಾದರೂ ತನ್ನ ಅಮಲು ನಡಿಸದೆ ಬಿಡುವದಿಲ್ಲ. ಆದರೆ, ಬಂದ ಪ್ರಸಂಗದಿಂದ ಬುದ್ಧಿಗಲಿತು ವರ್ತನವನ್ನು ಸುಧಾರಿಸುವ ದೃಢ ನಿಶ್ಚಯಿಗಳಾದ ಪುಣ್ಯಾತ್ಮರೇ ವಿರಳ. ನಾಯಿಯ ಬಾಲದಂಥ ವೃತ್ತಿಯ ಜನರೇ ಎಲ್ಲ ಕಡೆಯಲ್ಲಿ ಹರಡಿಕೊಂಡಿರುವರು. ಅಜ್ಞಾನಾವಸ್ಥೆಯಲ್ಲಿ ಅಜ್ಞಾನಜನ್ಯ ಅಪಕೃತಿಗಳು ಬೇಕಾದಷ್ಟಾಗಿದ್ದರೂ ಬೋಧವಾದ ಬಳಿಕ ಸಹ ಮೊದಲಿನಂತೆ ಅಧಮ ಮಾರ್ಗದಿಂದ ವರ್ತಿಸುವದೆಂದರೆ ತೀರ ನಿರ್ಲಜ್ಜತನದ

ಮಾತು. ತುಲಸೀದಾಸರಿಗೆ ಪತ್ನಿಯ ಎರಡು ನಿಷ್ಠುರ ವಚನಗಳು ಸನ್ಮಾರ್ಗಕ್ಕೆ ಹಚ್ಚಿದವು. ಪುರಂದರದಾಸರಿಗೆ ಪತ್ನಿಯ ನತ್ತು ಎಚ್ಚರದ ಮೇಲೆ ತಂದಿತು. ಜಾಣನಿಗೆ ಮಾತಿನ ಪೆಟ್ಟು ಸಾಕು. ಕೋಣನಿಗೆ ಏತರಿಂದ ಹೊಡೆದರೂ ಅಷ್ಟೇ; ಯಾತರಿಂದ ಏನು ಆಗಬೇಕಾಗಿದೆ? ಖಟ್ಲೆ ಮೈಮೇಲೆ ಬರಲಿ, ನಾಲ್ಕು ಏಟು ಥಳಿಸಿಕೊಳ್ಳಲಿ, ದೇಶ ಬಾಂಧವರು ಅಧಿಕಾರಿಗಳ ಗುಂಡಿಗೆ ಈಡಾಗಲಿ, ಬೇಕಾದುದು ಆಗಲಿ ತನ್ನ ಮಾರ್ಗವಾದ ಸುಖಂ ಚ ಮೆ, ಶಯನಂ ಚ ಮೆಗೆ ತಪ್ಪುವಂತಿಲ್ಲ. ಧಿಕ್ಕಾರವಿರಲಿ, ಈ ಜನರಿಗೆ!! ಶ್ರೀ ಅರವಿಂದರು ಬಡೋದೆಯಲ್ಲಿ ಹನ್ನೆರಡು ವರುಷ ಕೆಲಸದ ಮೇಲಿದ್ದರು. ಕೆಲದಿನ ವಿಲಾಸದಲ್ಲಿ ಕಳೆದರು; ಹಾಗೇ ಮುಂದೆ ಕಳೆಯಬೇಕೆಂದು ಇಚ್ಛಿಸಿದ್ದಾರು; ಆದರೆ ಅವರ ಸದಸದ್ವಿವೇಕ ಬುದ್ಧಿಯು ಅವರಿಗೆ ಹಾಗೆ ಮಾಡಗೊಡಲಿಲ್ಲ.

ಸದಸದ್ವಿವೇಕ ಬುದ್ಧಿಯು ಇದ್ದುದರಿಂದಲೇ ಈ ಜಗತ್ತಿನಲ್ಲಿ ಸ್ವಲ್ಪ ಅಂಶದಿಂದಾದರೂ ನ್ಯಾಯವು ಉಳಿದಿದೆ ಮತ್ತು ಮುಂದೆ ಹೆಚ್ಚಾಗುವ ಆಶೆಯಿದೆ. ಮನುಷ್ಯನಲ್ಲಿ ಅದು ಜಾಗ್ರತವಾಯಿತೆಂದರೆ ಆತನಿಗೆ ಕೂಳು ನೀರುಗಳನ್ನು ಸಹ ಸವಿ ಹಚ್ಚಿಗೊಡುವದಿಲ್ಲ. ಸ್ವೈರವೃತ್ತಿಯ ಜನರಿಗೆ ಸದಸದ್ವಿವೇಕವು ಒಂದು ಬಲವಾದ ಶತ್ರುವಾಗಿದೆ. ಈ ಜನರು ಇತರ ಪ್ರತಿಪಕ್ಷಿಗಳನ್ನು ವಾದದಲ್ಲಿ ಗೆದೆಯುವರು; ಸಂಪತ್ತಿನಿಂದ ತಣ್ಣಗೆ ಕೂಡ್ರಿಸುವರು; ಕೊಲೆಗಡುಕರಿಂದ ಪರಲೋಕಕ್ಕೆ ಕಳಿಸುವರು; ವೈರಿಯು ಎಷ್ಟು ಸಮೀಪದ ಆಪ್ತನಿರಲೊಲ್ಲನೇಕೆ, ಆತನನ್ನು ಇಲ್ಲದಂತೆ ಮಾಡಲಿಕ್ಕೆ ಈ ಜನರು ಹಿಂದೆ ಮುಂದೆ ನೋಡಲಿಕ್ಕಿಲ್ಲ. ಆದರೆ, ಪ್ರತ್ಯಕ್ಷ ಅವರ ಅಂತಃಕರಣದ ಮೂಲೆಯಲ್ಲಿ ಅಡಗಿಕೊಂಡು ಹೊತ್ತು ಹೊತ್ತಿನಲ್ಲಿ ತಾಪ ಕೊಡುವ ಈ ಸದಸದ್ವಿವೇಕವನ್ನು ನಾಶ ಮಾಡುವದು ಅವರಿಗೆ ಅಸಾಧ್ಯವಾಗುತ್ತದೆ. ಧಾರ್ಮಿಕ ಗ್ರಂಥಗಳ ಅಥವಾ ರಾಷ್ಟ್ರಧರ್ಮಗಳ ವಾಚನ, ಶ್ರವಣ, ಮನನಗಳಿಂದ ಜಾಗ್ರತವಾದ ವಿವೇಕ ಬುದ್ಧಿಯು ಪೀಡಿಸಹತ್ತುತ್ತದೆ. ಆಗ ಈ ಜನರು ಅದಕ್ಕೆ ಏನಾದರೂ ಹೇಳಿ ಸಮಾಧಾನಮಾಡಲೆತ್ನಿಸುವರು.

ಶ್ರೀ ಅರವಿಂದರು ಬಡೋದೆಯಲ್ಲಿರುವಾಗ ದೇಶದಲ್ಲಿ ಹಲವು ತರದ ಚಳವಳಿಗಳಿಗೆ ಆರಂಭವಾಗಿತ್ತು. ಅಧಿಕಾರಿಗಳ ಕಾಟಕ್ಕೆ ಜನರು ಬೇಸತ್ತಿದ್ದರು. (ಹೆಚ್ಚಿನ ವರ್ಣನೆ ಮುಂದಿನ ಪ್ರಕರಣದಲ್ಲಿ ನೋಡಿರಿ) ಇದನ್ನು ಕಂಡು ಅರವಿಂದರಿಗೆ ಸಮಾಧಾನವೆನಿಸಲಿಲ್ಲ. ಅವರಿಗೆ ಬಡೋದೆಯ ಬಡೇಜಾವಿನಲ್ಲಿ ಕಾಲಕಳೆಯುವದು ಸೇರದಾಯಿತು. ವೃತ್ತಪತ್ರಗಳಿಗೆ ಅವರು ಮುಂಚೆ ಲೇಖಗಳನ್ನು ಬರೆಯುತ್ತಿದ್ದರು. ಆದರೆ, ಯಾವಾಗಾದರೂ ಒಮ್ಮೆ ನಾಲ್ಕಕ್ಷರಗಳನ್ನು ಗೀಚಿ ದೇಶಸೇವೆಯನ್ನು ಮಾಡಿದೆನೆಂದು ಸಮಾಧಾನವನ್ನು ಹಚ್ಚಿಕೊಳ್ಳಲಿಕ್ಕೆ ಅವರ ಮನಸ್ಸು ಒಪ್ಪಲಿಲ್ಲ. ತಪ್ಪು ವಿಚಾರಸರಣಿಯಿಂದ ಮನಸ್ಸಿಗೆ ಸಮಾಧಾನಹಚ್ಚಿಕೊಳ್ಳಲಿಕ್ಕೆ ಅವರಿಗೆ ಬೇಕಾದಷ್ಟು ಅವಕಾಶವಿತ್ತು. ದೊಡ್ಡ ಅಧಿಕಾರವಿದ್ದುದರಿಂದ ಕೈಕೆಳಗಿನ ಜನರ ಮೇಲೆ ಉಪಕಾರ ಮಾಡಿದರೆ ದೇಶಸೇವೆ ಯಾಯಿತೆಂದು ತಿಳಿಯಲಿಕ್ಕೆ ಬರುವಂತಿತ್ತು. ಆದರೆ, ಈ ಯಾವದಕ್ಕೂ ಅವರ ಮನಸ್ಸು ಕೇಳಲಿಲ್ಲ. ಹಗಲು ಹನ್ನೆರಡುತಾಸು ದುಡಿದು ಮತ್ತೆ ಶಿಲಕು ಇದ್ದರೆ ಮನೆಗೆ ದಪ್ತರು ತಂದು XX ಯಂತೆ ದುಡಿಯುವಂಥ ಹಾಗೂ ಆಫೀಸಿನ ಕೆಲಸವಾದ ಬಳಿಕ ಕ್ರಿಕೇಟಾದಿ ವಿಲಾಸಗಳಾಗಿ, ಉಳಿದ ತಾಸು ಅರ್ಧ ತಾಸು ಯಾವದೊಂದು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿ ದೇಶಸೇವೆಯನ್ನು ಮಾಡುತ್ತೇವೆಂದು ತಿಳಿಯುವಂಥ ದೇ. ಭ. ಗಳು ಶ್ರೀಅರವಿಂದರ ಚರಿತ್ರವನ್ನು ನಿರೀಕ್ಷಿಸಬೇಕು.

೧೯೦೫ನೆಯ ಇಸವಿಯ ಜುಲೈ ತಿಂಗಳು. ಈ ಕಾಲಕ್ಕೆ ಶ್ರೀ ಅರವಿಂದರು ಬಡೋದೆಯಲ್ಲಿ ವ್ಹಾಯಿಸ ಪ್ರಿನ್ಸಿಪಾಲರಾಗಿದ್ದರು. ತಿಂಗಳಿಗೆ ೭೫೦ರೂ.ಗಳ ಸಂಬಳ; ಸುಂದರಳೂ ಸುಶೀಲಳೂ, ವಿದ್ಯಾವತಿಯೂ ಆದ ತರುಣ ಪತ್ನಿ; ಅಲ್ಲದೆ ಅರವಿಂದರ ವಯಸ್ಸಾದರೋ, ಅದೂ ವಿಲಾಸಕ್ಕೆ ಉತ್ತೇಜನವನ್ನೀಯುವಂಥಾದ್ದು. ಇಷ್ಟೇ ಅಲ್ಲ, ಮಹಾರಾಜರ ಪೂರ್ಣಕೃಪೆಗೆ ಪಾತ್ರರಾದಂಥವರು; ನಾಳೆ ದಿವಾನರಾಗತಕ್ಕವರು. ಇಂಥ ಸುಖಪರಂಪರೆಗಳು ಅರವಿಂದರನ್ನು ಮೋಹಿಸಲಿಕ್ಕೆ ಮೇಲಾಟವನ್ನು ನಡೆಸಿದ್ದವು. ತನ್ನ ದೇಶಬಾಂಧವರ ದುಃಖಗಳನ್ನು ಕಂಡು ಕರಗಿದ ಶ್ರೀ ಅರವಿಂದರ ಮನಸ್ಸು ಮೋಹಜಾಲದಲ್ಲಿ ಸಿಕ್ಕಲಿಲ್ಲ; ಬಡೋದೆಯೊಳಗಿನ

ಐಷಆರಾಮಿನ ಇರುವಿಕೆಯು ದುಃಖಕರವೆನಿಸಹತ್ತಿತು! ಸುಖದಾಯಕ ವಸ್ತುಗಳಿಂದ ದುಃಖವುಂಟಾಗಹತ್ತಿತು. ಎಂಥ ವಿಚಿತ್ರ ಸ್ಥಿತಿ ಇದು! ಸಾಮಾನ್ಯರಿಗೆ ಸುಖಕರವೆನಿಸಬಹುದಾದ ಸಂಗತಿಗಳು ಅರವಿಂದರಿಗೆ ದುಃಖದಾಯಕವಾದವು. ಸಾಮಾನ್ಯರು ನಿದ್ರಿತರಾಗಿರುವ ವಿಷಯದಲ್ಲಿ ಅಸಾಮಾನ್ಯರು ಜಾಗ್ರತರಾಗಿರುತ್ತಾರೆ. ಅಸಾಮಾನ್ಯರು ದುರ್ಲಕ್ಷಿಸುವ ವಿಷಯದಲ್ಲಿ ಸಾಮಾನ್ಯರು ಎಚ್ಚರ ತಕ್ಕೊಳ್ಳುತ್ತಿರುತ್ತಾರೆ. ಶ್ರೀ ಅರವಿಂದರು ಯಾವ ಮೋಹಪಾಶಕ್ಕೂ ಒಳಗಾಗದೆ ಅವರು ದಿನೇ ದಿನೇ ಹೆಚ್ಚುತ್ತಿರುವ ಮಾತೃಭೂಮಿಯ ದುರ್ದೆಸೆಯನ್ನು ಕಂಡು, ಕರಗಿದ ಅಂತಃಕರಣದವರಾಗಿ ತಮ್ಮ ಅಧಿಕಾರವನ್ನು ಒದ್ದು, ೭೫೦ ರೂಪಾಯಿಗಳಿಗೆ ಪರಂಪರೆಯಿಂದ ಪ್ರಾಪ್ತವಾಗುವ ನಾನಾಸುಖಗಳಿಗೆ ತಿಲಾಂಜಲಿಯನ್ನಿತ್ತು ದೇಶಸೇವೆಗೆ ಟೊಂಕ ಕಟ್ಟಿದರು. ಸದಸದ್ವಿವೇಕ ಬುದ್ಧಿಯು ನಿರ್ದೇಶಿಸಿದ ಮಾರ್ಗವನ್ನು ಅವಲಂಬಿಸಿದರು. ಪ್ರೇಯ ಮಾರ್ಗವನ್ನು ಬಿಟ್ಟು ಶ್ರೇಯ ಮಾರ್ಗವನ್ನು ಹಿಡಿದರು. ದೇಶಸೇವೆಯ ಅಸಿಧಾರಾವ್ರತವನ್ನು ಅಂಗೀಕರಿಸಿದರು. ಅಂತಃಕರಣವು ಇಷ್ಟೊಂದು ಕಸವಿಸಿಗೊಂಡುದರಿಂದ ಶ್ರೀ ಅರವಿಂದರು ದೇಶಸೇವೆಗೆ ತಮ್ಮನ್ನು ಅರ್ಪಿಸಿಕೊಂಡರಲ್ಲದೆ ಬರೆ ಲಬ್ಧಪ್ರತಿಷ್ಠಿತರಾಗಬೇಕೆಂದಲ್ಲ ಕೀರ್ತಿಯ ಅಪೇಕ್ಷೆಯಿಂದ ದೇಶಸೇವಕರಾಗಲಿಚ್ಛಿಸುವವರ ಕೈಯಿಂದ ದೇಶಸೇವೆಯೇ ಆಗುವದಿಲ್ಲ. ಸಾಧ್ಯವು, ಕೀರ್ತಿಯಲ್ಲ, ದೇಶಸೇವೆ; ಕೀರ್ತಿಯು, ಹಿಂಬಾಲಿಸಿ ಬರುವ ನೆರಳಿನಂತಿದೆ. ಸೂರ್ಯನ ಕಡೆಗೆ ಮೋರೆಮಾಡಿ ನಡೆದರೆ ನೆರಳು ಹೇಗೆ ತಾನೇ ಬೆನ್ನು ಹತ್ತದೆ ಬಿಟ್ಟೀತು?

ದೇಶಸೇವೆ

Breathes there the man with soul so dead
Who never to himself hath said,
This is my own, my native land !

Whose heart hath ne'er within him burned,
As home his footsteps he hath turned,
From wandering on a foreign strand

- **Scott**

ಶ್ರೀ ಅರವಿಂದರು ತಮ್ಮ ಆಯುಷ್ಯದ ಎರಡು ಅವಸ್ಥೆಗಳನ್ನು ಮುಗಿಸಿ, ಮೂರನೆಯ ಅವಸ್ಥೆಯಲ್ಲಿ ಪ್ರವೇಶಿಸಿದರು. ಪೂರ್ವ ವಯಸ್ಸಿನಲ್ಲಿದ್ದ ವಿಕ್ಷಿಪ್ತತನವು ಈಗ ಒಂದು ವಿಶಿಷ್ಟ ಸ್ವರೂಪವನ್ನು ಧರಿಸಿತು. ಸಾಮಾನ್ಯರಂತೆ ಉಂಡುಟ್ಟು ಸ್ವಸ್ಥವಾಗಿರುವದನ್ನು ಬಿಟ್ಟು ಅವರು ಲೋಕಸೇವೆಗೆ ಟೊಂಕಕಟ್ಟಿದ್ದು ವಿಕ್ಷಿಪ್ತತನವೇ ಇರುತ್ತದೆ. ತನ್ನ ಪ್ರವೃತ್ತಿಯ ಅಥವಾ ಅಂತಃಕರಣದೊಳಗಿನ ಅಸ್ಫುಟಧ್ವನಿಯ ಸ್ಪಷ್ಟ ಬೋಧವಾಗದ್ದರಿಂದ ಮನುಷ್ಯನು ಹಲವು ಸಾರೆ ಸಾಮಾನ್ಯರಿಗೆ ವಿಚಿತ್ರವಾಗಿ ತೋರುವ ಕೃತಿಗಳನ್ನು ಮಾಡುತ್ತಿರುತ್ತಾನೆ. ಜ್ಞಾನದಿಂದ ಅಂತಃಸ್ಫೂರ್ತಿಯ ಬೋಧವು ಆಯಿತೆಂದರೆ ಮನುಷ್ಯನು ಸರಿಯಾದ ಮಾರ್ಗಕ್ಕೆ ಬರಲಿಕ್ಕೆ ಹತ್ತುವದುಂಟು, ಪ್ರತಿಯೊಬ್ಬನಿಗೆ ಒಂದುತರದ ಅಂತಃಪ್ರೇರಣೆಯಾಗುತ್ತಿರುವದುಂಟು. ಆದರೆ, ಆ ಪ್ರೇರಣೆಯ ಸರಿಯಾದ ಅರ್ಥವು ತಿಳಿಯದ್ದರಿಂದಲೂ, ಅದನ್ನು ಕೃತಿಯಲ್ಲಿ ಹೇಗೆ ತರಬೇಕೆಂಬ ಜ್ಞಾನವಿಲ್ಲದ್ದರಿಂದಲೂ, ಜ್ಞಾನವಿದ್ದರೂ ಅನೇಕಸಾರೆ ಸತ್ಯವೆಂದು ತಿಳಿದ ಸಂಗತಿಗಳನ್ನು ಆಚರಿಸುವ ನೈತಿಕಧೈರ್ಯದ ಅಭಾವವಿರುವದರಿಂದಲೂ ಮನುಷ್ಯನು ಬೆಳಕಿಗೆ ಬರುವದಿಲ್ಲ. ಈಶ್ವರನು ಕೊಟ್ಟ ತನ್ನ ಪಾಲಿನ ಸಂದೇಶವನ್ನು ಜಗತ್ತಿಗೆ ಮುಟ್ಟಿಸುತ್ತಿರುವದಿಲ್ಲ. ಅಪೂರ್ಣಾವಸ್ಥೆಯಲ್ಲಿಯೇ ಹೊರಟು ಹೋಗುವನು. ಶ್ರೀ ಅರವಿಂದರಿಗೆ ಅವರ ತಂದೆಯು ಐ.ಸಿ.ಎಸ್. ಕ್ಕೆ ಕಳಿಸಿದರೂ, ಪ್ರಸಂಗವು ಸಿಗುತ್ತಲೆ ಅವರು ತಮ್ಮ ಪ್ರವೃತ್ತಿಯಂತೆ ಇಷ್ಟ ಮಾರ್ಗವನ್ನೇ ಹಿಡಿದರು.

ಶ್ರೀ ಅರವಿಂದರ ಮನಸ್ಸು ತಿರುಗಲಿಕ್ಕೆ ದೇಶದ ಪರಿಸ್ಥಿತಿಯೊಂದೇ ಕಾರಣವೆಂದರೆ ಅದು ಸರಿಯಾಗಲಿಕ್ಕಿಲ್ಲ. ಐಹಿಕ ಭೋಗಗಳ ಮೇಲಿಂದ ಮನಸ್ಸು ಹಾರಲಿಕ್ಕೆ ದೇಶದ ಪರಿಸ್ಥಿತಿಯು ಕಾರಣವಿದ್ದಂತೆ ಅವರಲ್ಲಿ ಉಂಟಾದ ಧರ್ಮಜಿಜ್ಞಾಸೆಯೂ ಒಂದು ಮಹತ್ವದ ಕಾರಣವಿದೆ. ಶ್ರೀ ಅರವಿಂದರು ರಾಜಕಾರಣದ ಸಲುವಾಗಿ ದೇಶಸೇವೆಗೆ ಆರಂಭಿಸಲಿಲ್ಲ. ಇದೊಂದು ಆತ್ಮೋನ್ನತಿಯ ಸಾಧನವೆಂದೂ ಜನತಾರೂಪಿಯಾದ ಜನಾರ್ದನನ ಸೇವೆ

ಮಾಡಬೇಕೆಂದೂ ದೇಶಸೇವೆಯನ್ನು ಕೈಕೊಂಡರು. ಅವರ ಈ ಕೃತ್ಯದ ಬುಡಕ್ಕೆ ಪ್ರಬಲವಾದ ಧಾರ್ಮಿಕ ಭಾವನೆಯೇ ಇರುತ್ತದೆ. ಶಾಂತ ವಿಚಾರಾಂತ್ಯದಲ್ಲಿ ಅವರಿಗೆ ವೇದಾಂತದ ಮತಗಳು ನಿತ್ಯವೆಂದು ತಿಳಿದು ಬರಹತ್ತಿತು. ಆರ್ಯಸಂಸ್ಕೃತಿಯ ಅಭ್ಯಾಸವನ್ನು ಶಾಂತರೀತಿಯಿಂದ ನಡೆಸಿದರು. ಅವರ ಅಂತರಂಗದ ಬದಲಾವಣೆ ಯಾಗಿದೆ ಎಂಬುದನ್ನು ಸೂಚಿಸಲಿಕ್ಕೆ ಉಡುಪು ತೊಡಪುಗಳು ವ್ಯತ್ಯಾಸ ಹೊಂದಿದವು. ಯೂರೋಪೀಯ ಪದ್ಧತಿಯ ಆಚಾರ ವಿಚಾರಗಳ ಸ್ಥಳವನ್ನು ಹಿಂದೀ ಆಚಾರ ವಿಚಾರಗಳು ಆಕ್ರಮಿಸಿದವು. ಧರ್ಮಗ್ರಂಥಗಳ ಮನನ ಮಾಡಬೇಕೆಂದೂ, ನಮ್ಮ ವಾಙ್ಮಯದ ಆಸ್ವಾದವನ್ನು ತಕ್ಕೊಳ್ಳಬೇಕೆಂದೂ ಸಂಸ್ಕೃತದ ಅಧ್ಯಯನ ನಡೆಸಿದರು. ಯಾವದೊಂದು ಭಾಷೆಯು ಉತ್ತಮ ರೀತಿಯಿಂದ ಬಾಯಲ್ಲಿ ಕುಳಿತುಕೊಳ್ಳಬೇಕಾದರೆ ಆ ವಾಙ್ಮಯದೊಳಗಿನ ಕೆಲವು ಉದ್ಗ್ರಂಥಗಳನ್ನು ಮುಖೋದ್ಗತ ಮಾಡಬೇಕೆಂದು ಇವರ ಮತವಿದ್ದದರಿಂದ ಸ್ವಲ್ಪ ಕಾಲದೊಳಗೆ ವಾಲ್ಮೀಕಿರಾಮಾಯಣದ ಕೆಲವೊಂದು ಭಾಗವನ್ನು ಅಸ್ಖಲಿತವಾಗಿ ಅನ್ನಲಿಕ್ಕೆ ಕಲಿತರು!

ವೇದಾಂತ ತತ್ವಗಳ ಬೋಧವಾದ ಬಳಿಕ ಅವುಗಳಂತೆ ಆಚರಣೆಯು ಅವಶ್ಯವಿಲ್ಲವೇ? ಶ್ರೀ ಅರವಿಂದರು ಹೊಟ್ಟೆಗಾಗಿ ದುಡಿದು ದುಡಿದು ಬೇಸರಾದ ಹೊತ್ತಿನಲ್ಲಿ ಮನಸ್ಸಿಗೆ ಆರಾಮವೆಂದೇನೂ ವೇದಾಂತದ ಜ್ಞಾನ ಮಾಡಿಕೊಳ್ಳಲಿಲ್ಲ. ಆಯುಷ್ಯದ ಉದ್ದೇಶವೇನು? ಹೇಗೆ ನಡೆದರೆ ಸಾರ್ಥಕವಾದೀತು? ಎಂಬುದನ್ನು ತಿಳಿದು ಅದರಂತೆ ಮನಃಪೂರ್ವಕವಾಗಿ ಆಚರಿಸಿ ದೇಹಸಾರ್ಥಕ ಮಾಡಿಕೊಳ್ಳುವದೇ ಅವರ ಅಧ್ಯಯನದ ಉದ್ದೇಶವಿತ್ತು; ಮತ್ತು ವಿಚಾರಗಳು ಸ್ಥಿರವಾದ ಬಳಿಕ ಆ ವಿಚಾರಗಳಂತೆ ಆಚಾರವನ್ನಿಡಲಿಕ್ಕೆ ಹಿಂಜರಿಯಲಿಲ್ಲ. ಭೌತಿಕ ಸುಖವನ್ನು ಕೃಷ್ಣಾರ್ಪಣ ಮಾಡಿ ಸತ್ಯತತ್ವದಂತೆ ನಡೆಯಹತ್ತಿದರು. ಅರವಿಂದರೂ ವೇದಾಂತಿಗಳು; ನಮ್ಮಲ್ಲಿಯ ಅನೇಕರೂ ವೇದಾಂತಿಗಳು. ಅರವಿಂದರು ಶ್ರೀ ಗೀತಾದಿ ಗ್ರಂಥಗಳನ್ನು ಓದಿದರು; ನಮ್ಮಲ್ಲಿಯ ಹಲವರೂ ಅವುಗಳನ್ನು ಓದಿದರು. ಆದರೆ ಇವರ ನಡುವಿನ ಅಭ್ಯಂತರವೆಷ್ಟಿದು! ಸೈ! ವೇದಾಂತಿಗಳೆನ್ನಬೇಕು ಅರವಿಂದರಿಗೇ. ದೀಡದಮಡಿಯ ಅನೇಕ ವೇದಾಂತಿಗಳು ಅರ್ಥದ ಅನರ್ಥಮಾಡಿ ಮನಸ್ಸಿನ ಸಮಾಧಾನ ಮಾಡಿಕೊಳ್ಳುತ್ತಾರೆ. ಅರವಿಂದರಂಥವರಿಗೂ ಈ ವರ್ಗಕ್ಕೂ ಕೆಲವು ಸಾಮ್ಯವಿದೆ, ಇಲ್ಲವೆಂಬುವಂತಿಲ್ಲ. ಲೋಕಸೇವೆಯಲ್ಲಿ ಅಥವಾ ಆತ್ಮೋನ್ನತಿಯ ಕಾರ್ಯದಲ್ಲಿ ಶ್ರೀ ಅರವಿಂದರಂಥ ವೇದಾಂತಿಗಳು ಮಾನಾಪಮಾನವನ್ನು ತ್ಯಜಿಸಿರುತ್ತಾರೆ; ಸುಖದುಃಖಗಳನ್ನು ಬಿಟ್ಟಿರುತ್ತಾರೆ; ಶಾಂತಿಯನ್ನು ತಳೆದಿರುತ್ತಾರೆ. ಮೇಲೆ ಹೇಳಿದಂಥ ವೇದಾಂತಿವರ್ಗವೂ ಈ ಗುಣಗಳುಳ್ಳದ್ದಿರುತ್ತದೆ. ಆದರೆ ಯಾವಾಗ? ಸದಾಕಾಲವೂ ಈ ವೃತ್ತಿಯಿರುವದಿಲ್ಲ; ಕೇವಲ ಹೊಟ್ಟೆಗಾಗಿ ಯಾವಾಗ ಧನಾರ್ಜನೆಯನ್ನು ಮಾಡಬೇಕಾಗಿರುವದೋ ಆಗ. ಆಗ ಅಧಿಕಾರಿಯು ಅಪಶಬ್ದಗಳನ್ನಾಡಲಿ ಅವರಿಗೆ ನಾಚಿಕೆಯಿಲ್ಲ, ಅಪಮಾನ ಮಾಡಲಿ ದುಃಖವಿಲ್ಲ. ಏನು ಮಾಡಿದರೂ ಅವರ ಶಾಂತಿ(?)ಗೆ ಭಂಗ ಬರುವದಿಲ್ಲ. ಈ ವರ್ಗದ ವೇದಾಂತಿಗಳಿಗೆ ತತ್ವಜ್ಞಾನದ ಪರಿಭಾಷೆಯು ತುದಿನಾಲಿಗೆಯ ಮೇಲೆ ಕುಳಿತಿರುತ್ತದೆ. ಆದರೆ, ಆ ಜ್ಞಾನವು ತುದಿಯಲ್ಲಿ ಕುಳಿತಿರುವದೇ ಹೊರ್ತು ಗಂಟಲ ಕೆಳಗೆ (ಅಂತಃಕರಣದಲ್ಲಿ) ಇಳಿದಿರುವದಿಲ್ಲ! ಶಾಬ್ದಿಕ ಕೋಟಿಕ್ರಮ ಮಾಡಿ ಸುಳ್ಳು ಸಂಗತಿಯನ್ನು ಸತ್ಯದಂತೆ ನಟಿಸಿ ತೋರಿಸುವರು. ಇಂಥ ವೇದಾಂತಿಗಳಿಂದಲೇ ನಮ್ಮ ಧರ್ಮಕ್ಕೆ ಅವನತಸ್ಥಿತಿಯು ಪ್ರಾಪ್ತವಾಗಿದೆ; ದೇಶವು ಹೀನಸ್ಥಿತಿಗೆ ಬಂದಿದೆ. ಆಚಾರವಿಲ್ಲದ ಉದಾತ್ತ ವಿಚಾರಗಳ ಪ್ರಯೋಜನವೇನು? 'ಕಲೌ ವೇದಾಂತಿನೋ ಭಾಂತಿ ಫಾಲ್ಗುಣೇ ಬಾಲಕ ಇವ' ಎಂಬುದೇ ಸತ್ಯ.

ಇಲ್ಲಿಯ ವರೆಗೆ ಶ್ರೀ "ಅರವಿಂದರು" ಎಂದ ಕೂಡಲೆ ಒಂದು ವ್ಯಕ್ತಿಯಷ್ಟೇ ಕಣ್ಣೆದುರಿಗೆ ಬರುತ್ತಿತ್ತು ಮತ್ತು ಇಲ್ಲಿಯ ವರೆಗಿನ ಅರವಿಂದರ ವರ್ಣನೆಯಲ್ಲಿ ವೈಯಕ್ತಿಕ ಭಾಗವೇ ಹೆಚ್ಚಾಗಿತ್ತು. ಆದರೆ, ಇನ್ನು ಮುಂದಿನ ಅರವಿಂದರ ವ್ಯಾಪ್ತಿಯು ಬರೇ ಮೂರೂವರೆ ಮೊಳದ ದೇಹದಲ್ಲಿ (ಬಹಳವಾದರೆ ಅವರ ಮನೆತನದಲ್ಲಿಯಷ್ಟೇ) ಇರದೆ ಇಡೀ ರಾಷ್ಟ್ರದಲ್ಲಿರುತ್ತದೆ. ಶ್ರೀ ಅರವಿಂದರಿಗೆ ತಮ್ಮ ಕ್ಷುದ್ರ ವೈಯಕ್ತಿಕ ಸುಖ, ಮಾನ-ಮಾನ್ಯತೆಗಳಲ್ಲಿ ಗುಂಗಾಗಿ ಇರುವದು ಸೇರಲಿಲ್ಲ. ತಮ್ಮ ಸುಖವೆಂದರೆ ದೇಶದ ಸುಖ, ತಮ್ಮ ಉನ್ನತಿಯೆಂದರೆ ದೇಶದ ಉನ್ನತಿಯೆಂದು ತಿಳಿದು, ಅವರು ಅಖಿಲ ಭಾರತೀಯರಲ್ಲಿ ವಿಲೀನರಾದರು; ಭಾರತೀಯರನ್ನು ತಮ್ಮ

ಅಂತಃಕರಣದಲ್ಲಿ ಆದರಿಸಿದರು. ಪ್ರತಿಯಾಗಿ ಭಾರತೀಯರೂ ಅವರನ್ನು ತಮ್ಮ ಹೃದಯಮಂದಿರದಲ್ಲಿ ಪೂಜಿಸಹತ್ತಿದರು. ಇನ್ನು ಮುಂದೆ ಅರವಿಂದರು ಒಂದು ವ್ಯಕ್ತಿಯಾಗಿರದೆ ರಾಷ್ಟ್ರವಾದರು. ದೇಶಬಾಂಧವರಲ್ಲಿ ತಾದಾತ್ಮ್ಯವನ್ನು ಹೊಂದಿದರು. ಆದುದರಿಂದ, ಅರವಿಂದರ ಮುಂದಿನ ಚರಿತ್ರದ ಅವಲೋಕನ ಮಾಡುವವರಿಗೆ ಇಡೀ ದೇಶದ ಪರಿಸ್ಥಿತಿಯ ಜ್ಞಾನ ಮಾಡಿಕೊಳ್ಳುವದು ಅವಶ್ಯವಿದೆ. ದೇಶಸೇವಕ ಅರವಿಂದರ ಚರಿತ್ರವೆಂದರೆ ತತ್ಕಾಲೀನ ದೇಶದ ಚರಿತ್ರೆ.

ಪೀಠಿಕೆಯಲ್ಲಿ ಸೂಚಿಸಿದಂತೆ ಇಂಗ್ಲಿಷ ಭಾಷೆಯ ಪ್ರಸಾರದ ಆರಂಭದ ದಿನಗಳಲ್ಲಿ ಜನರಲ್ಲಿ ಮಾನಸಿಕ ದಾಸ್ಯವು ಹೆಚ್ಚಾಗಿತ್ತು. ಮನಸ್ಸಿನಿಂದ ಇಂಗ್ಲಿಷ್ ಕೃತಿಗಳ ಅನುಕರಣವು ನಡೆದಿತ್ತು. ಮತ್ತು ಅವರ ಕಾಯಿದೆ ಕಾನೂನುಗಳ ವಿಷಯಕ್ಕೆ ಆದರವಿತ್ತು. “ಹಳೇದೆಲ್ಲ ಹೊಲಸು” ಎಂಬ ಪ್ರವೃತ್ತಿಯು ಜನರಲ್ಲಿ ಹೆಚ್ಚಾಯಿತು. ದುರ್ಗುಣಗಳಂತೆ ಕೆಲವು ಸುಗುಣಗಳ ಪ್ರವೇಶವೂ ಆಯಿತು. ದೇಶದ ಮೇಲೆ ಪ್ರೇಮ ಮಾಡಬೇಕು, ಸಮಾಜಸೇವೆ ಮಾಡಬೇಕೆಂಬ ಅಸ್ಪಷ್ಟ ಕಲ್ಪನೆಯು ಜನರಲ್ಲಿ ಅಂಕುರಿಸಿತು. ಅಲ್ಲಲ್ಲಿಗೆ ಕೆಲವು ಸಂಘಗಳೂ, ಸಂಸ್ಥೆಗಳೂ ಸ್ಥಾಪಿತವಾದವು. ಸ್ತ್ರೀಯರು ಸುಶಿಕ್ಷಿತರಾಗದ ವಿನಾ ಗತಿಯಿಲ್ಲವೆಂದು ಕೆಲವರು ಕನ್ಯಾಶಾಲೆಗಳನ್ನು ಸ್ಥಾಪಿಸಿದರು. ಸಮಾಜಸೇವಾ ಸಂಘಗಳು ಹೊರಟವು. ಅದು ತೀರ ಆರಂಭದ ಸ್ಥಿತಿಯಿದ್ದುದರಿಂದ ಈ ಸಂಘಗಳಲ್ಲಿ ಕೆಲವು ಚಿರಸ್ಥಾಯಿಗಳಾಗಲಿಲ್ಲ ಹಾಗೂ ಕಾರ್ಯಕಾರಿಗಳಾಗಲಿಲ್ಲ. ಉತ್ಪನ್ನವಾದವು, ನಷ್ಟವಾದವು.

ದೇಶದಲ್ಲಿ ಪಾಶ್ಚಿಮಾತ್ಯ ಶಿಕ್ಷಣವು ಬೆಳೆದಂತೆ ಜನರೂ ಜಾಗ್ರತರಾಗಹತ್ತಿದರು. ಅತಿ ಪರಿಚಯದಿಂದ ಪಾಶ್ಚಿಮಾತ್ಯ ಅಂತರಂಗವು ಗೊತ್ತಾಗಹತ್ತಿತು. ಆರಂಭಕ್ಕೆ ಯುರೋಪಿಯನರೆಂದರೆ ದೇವರು, ಅವರ ಆಚಾರ ವಿಚಾರಗಳನ್ನು ಅನುಕರಿಸಿದರೇ ನಮ್ಮ ಗತಿ ಎಂದು ತಲೆಗೇರಿದ ಮಬ್ಬು ಕ್ರಮಕ್ರಮವಾಗಿ ಕಡಿಮೆಯಾಗಹತ್ತಿತು. ಬ್ರಿಟಿಷರ ಬಣ್ಣದ ಮಾತುಗಳ-ಬಣ್ಣದ ಕೃತಿಗಳ ರಹಸ್ಯವು ಜನರ ಲಕ್ಷ್ಯದಲ್ಲಿ ಚನ್ನಾಗಿ ಬರಹತ್ತಿತು. ಬ್ರಿಟಿಶರು ಇಲ್ಲಿ ಬಂದದ್ದು ಮೋಕ್ಷ ಸಾಧನೆಯ ಉದ್ದೇಶದಿಂದಲ್ಲ, ಅವರು ರಾಜಕಾರಣ ಕುಶಲರಿರುವದರಿಂದ ತಮಗೆ ಬೇಕಾದ ಮಾತನ್ನು ನಮ್ಮ ಕೈಯಿಂದಲೇ ಸವಿಮಾತು ಹೇಳಿ ಹೇಗೆ ಮಾಡಿಸಿಕೊಳ್ಳುತ್ತಾರೆಂಬದು ಜನರ ಧ್ಯಾನಕ್ಕೆ ಬಂತು. ಆಗ ದೇಶದ ಸುಧಾರಣೆಯನ್ನು ಮಾಡಬೇಕೆಂದು ಪ್ರಯತ್ನಪಡುವ ಬೇರೆ ಬೇರೆ ಪ್ರಾಂತದ ಕೆಲವು ಸುಶಿಕ್ಷಿತರು ಒತ್ತಟ್ಟಿಗೆ ನೆರೆದು ಸಭೆಗೂಡಿಸಿ ವಿಚಾರ ವಿನಿಮಯ ಮಾಡಬೇಕೆಂದು ಗೊತ್ತುಪಡಿಸಿದರು. ೧೮೮೫ನೆಯ ಇಸವಿಯಲ್ಲಿ ಮುಂಬಯಿಯಲ್ಲಿ ಹೀಗೆ ಎಲ್ಲ ಭಾಗಗಳಿಂದ ಜನರು ಕೂಡಿದರು. ವಿಚಾರ ಮಾಡಿ ದೇಶಕ್ಕೆ ಅವಶ್ಯವಿರುವ ಸಂಗತಿಗಳ ಠರಾವು ಮಾಡಿದರು. ಇದೇ ಕಾಂಗ್ರೆಸ್ಸು, ಇದು ಮುಂದೆ ಪ್ರತಿ ವರುಷ ದೇಶದಲ್ಲಿ ಬೇರೆ ಬೇರೆ ಕಡೆಗೆ ನೆರೆಯುವದು ಗೊತ್ತಾಗಿ ಆ ಕ್ರಮವು ಇಂದಿಗೂ ನಡೆದಿದೆ.

ಇಂಗ್ಲಿಷರಂಥ ರಾಜಕಾರಣಿಗಳು ಇಂಗ್ಲಿಷರೇ. ತಮ್ಮ ವಿಷಯಕ್ಕೆ ಜನರಲ್ಲಿರುವ ವಿಶ್ವಾಸವು ಹಾರದಿರಲಿಕ್ಕೆ ಅವರು ಮಾಡಿದ ಎಷ್ಟೋ ಕುಶಲ ಪ್ರಯತ್ನಗಳು ಎಂಥವನ ಬುದ್ಧಿಗೂ ದಂಗು ಬಡಿಸುತ್ತವೆ. ಲಿಟನನಂಥ ಉದ್ಧಾಮ ಅಧಿಕಾರಿಯನ್ನು ಕಳಿಸಿ ಒಮ್ಮೆ ಕೆಣಕುವದು; ಬಳಿಕ ರಿಪನನಂಥ ಉದಾರ ಮನುಷ್ಯನನ್ನು ಕಳಿಸಿ ಸಮಾಧಾನ ಮಾಡುವದು ಅವರ ಪದ್ಧತಿಯಾಗಿದೆ. ಜನರಲ್ಲಿರುವ ಹುಳುಕುಗಳನ್ನು ಶೋಧಿಸಿ ತೆಗೆದು ಅದರ ಮೇಲೆ ರಾಜ್ಯಕರ್ತರು ತಮ್ಮ ಇಮಾರತು ನಿಲ್ಲಿಸುವರು. ಹಿಂದೂ ಮುಸಲ್ಮಾನರಲ್ಲಿ ಮನಸ್ಸು ನೆಟ್ಟಗಿರದ್ದನ್ನು ಕಂಡು ಅದರ ಲಾಭ ತಕ್ಕೊಳ್ಳುವದೂ, ಬ್ರಾಹ್ಮಣ-ಬ್ರಾಹ್ಮಣೇತರರಲ್ಲಿ ಅಸಂತೋಷವಿದ್ದರೆ ಅದರ ಉಪಯೋಗ ಮಾಡಿಕೊಳ್ಳುವದೂ ರಾಜಕಾರಣ ಕುಶಲರಾದ ಇಂಗ್ಲಿಷರಿಗೆ ಬಹು ಸುಲಭವಾಗಿದೆ. ದೇಶದ ಸ್ಥಿತಿಯ ವಿಚಾರ ಮಾಡಲಿಕ್ಕೆ ದೇಶದೊಳಗಿನ ಮುಖಂಡರು ಕಾಂಗ್ರೆಸ್ಸು ಸ್ಥಾಪಿಸಿ ಅಲ್ಲಿ ಪ್ರತಿವರುಷ ವಿಚಾರವಿನಿಮಯ ಮಾಡಹತ್ತಿದರು. ಕಾಂಗ್ರೇಸದ ಠರಾವುಗಳನ್ನು ತೆಗೆದು ಕ್ರಮವಾಗಿ ಅವುಗಳ ಭಾಷೆಯು ಹೇಗೆ ಓಜಸ್ವಿಯಾಗುತ್ತ ಹೋಗಿರುವದೆಂಬುದನ್ನು ನಿರೀಕ್ಷಿಸಿದರೆ ಆ ಸಭೆಯು ದಿನದಿನಕ್ಕೆ ಹೇಗೆ ಕಸುವುಳ್ಳದ್ದಾಗುತ್ತ ನಡೆಯಿತೆಂಬುದು ಕಂಡು ಬರುವದು.

ಈ ದೇಶಾಭಿಮಾನದ ಗಾಳಿಯು ಆರಂಭಕ್ಕೆ ಇಂಗ್ಲಿಷ ಬಲ್ಲ ಜನರಲ್ಲಿಯೇ ಇತ್ತು. ಕೆಳಗಿನ ವರ್ಗಕ್ಕೆ ದೇಶಾಭಿಮಾನವೆಂದರೆ ಎಂಥ ವಸ್ತುವಿರುತ್ತದೆಂಬುದರ ಕಲ್ಪನೆಯು ಸಹ ಇದ್ದಿಲ್ಲ. ಸರಕಾರದ ಅಂತರಂಗವು

ತಿಳಿಯದ ಕಾರಣ ಸಾಮಾನ್ಯ ಜನರು ಮಬ್ಬಿನಲ್ಲಿಯೇ ಇದ್ದರು. ಸುಶಿಕ್ಷಿತ ಜನರು ವರ್ತಮಾನ ಪತ್ರಗಳನ್ನು ತೆಗೆದು, ಮಾಸಪತ್ರಿಕೆಗಳನ್ನು ಪ್ರಕಟಿಸಿ, ಪುಸ್ತಕಗಳನ್ನು ಬರೆದು, ವ್ಯಾಖ್ಯಾನಗಳನ್ನು ಕೊಟ್ಟು ಜನರಲ್ಲಿ ನಿಜವಾದ ಜ್ಞಾನದ ಪ್ರಸಾರ ಮಾಡಬೇಕೆಂದು ಹಲವು ವಿಧದಿಂದ ಪ್ರಯತ್ನಿಸಿದರು. ರಾಷ್ಟ್ರೀಯ ಸಭೆಯಲ್ಲಿ ದಿನದಿನಕ್ಕೆ ಶಕ್ತಿಯು ಹೆಚ್ಚಾಗಹತ್ತಿತು. ರಾಷ್ಟ್ರ ಸಭಾಸ್ಥಾಪಕರಾದ ಮೊದಲಿನ ತಲೆಯ ಜನರು, ಹೊಸದಾಗಿ ರಾಷ್ಟ್ರಕಾರ್ಯಕ್ಕೆ ಆರಂಭಿಸಿದ ನೂತನ ಉತ್ಸಾಹದ ತರುಣರ ಮುಂದೆ ನಿಸ್ತೇಜರಾಗಿ ಕಾಣಹತ್ತಿದರು. ವರುಷದಲ್ಲಿ ಒಂದುಸಾರೆ ರಾಷ್ಟ್ರೀಯ ಸಭೆಯಲ್ಲಿ ಸರಕಾರದ ಹತ್ತರ ಬೇಡಿಕೊಳ್ಳುವ ವಿಷಯಗಳ ಠರಾವು ಪಾಸುಮಾಡಿ ಸ್ವಸ್ಥವಾಗಿ ಇಡೀ ವರುಷ ಕುಳಿತುಕೊಳ್ಳುವ ಪದ್ಧತಿಯು ತರುಣರಿಗೆ ಸೇರದಾಯಿತು. ವೃದ್ಧರ ಮಾರ್ಗಕ್ಕೂ ತರುಣರ ಮಾರ್ಗಕ್ಕೂ ಅಂತರ ಬರಹತ್ತಿತು. ತರುಣ ಪಕ್ಷಕ್ಕೆ ವೀರಪಕ್ಷವೆಂದೂ, ವೃದ್ಧರ ಪಕ್ಷಕ್ಕೆ ಮಂದಪಕ್ಷವೆಂದೂ ಹೆಸರುಗಳು ಸಿಕ್ಕವು. ದೇಶದ ಉತ್ಕರ್ಷವೇ ಎಲ್ಲರ ಸಾಧ್ಯವಾಗಿದ್ದರೂ ಮಾರ್ಗಭೇದಗಳಾಗಹತ್ತಿದವು. ವೀರಪಕ್ಷದ ಮತಗಳು ಜನರಿಗೆ ಹೆಚ್ಚು ಸೇರಹತ್ತಿದವು. ಜನರಲ್ಲಿ ಹೆಚ್ಚು ಜಾಗ್ರತಿಯಾಗಹತ್ತಿತು.

ಇದು ಸರಕಾರಕ್ಕೆ ಹೇಗೆ ಸೇರಬೇಕು? ಜನರಲ್ಲಿಯಾಗುವ ದೇಶಾಭಿಮಾನದ ಪ್ರಸಾರವೆಂದರೆ ಅದು ಬ್ರಿಟಿಷರ ಚಿರಸ್ಥಾಯಿತ್ವಕ್ಕೆ ಭಂಗ ತರುವಂಥ ಸಂಗತಿ. ತಮ್ಮ ದೇಶದಲ್ಲಿ ತಾವೇ ಬಾಧ್ಯಸ್ಥರಿರಲಿಕ್ಕೆ ಬೇಕು. ಪರಗೃಹಸ್ಥನು ಬಂದು ಮನೆಯಲ್ಲಿ ಅಧಿಕಾರ ನಡೆಸಿದರೆ ಯಾರಿಗೆ ಸೇರೀತು? ಮನೆಯ ಮಾಲೀಕನು ಮಬ್ಬಿನಲ್ಲಿರುವ ವರೆಗೆ ಪರಗೃಹಸ್ಥನ ಆಟವಷ್ಟೇ. ಮನೆಯ ಯಜಮಾನನಿಗೆ, "ಇದು ತನ್ನ ಮನೆ, ಅಧಿಕಾರ ನಡೆಸುವಾತನು ಪರನು, ಪಾಲು ಆಗಲಿ, ಹೊಡೆದಾಡಲಿ, ಬಡೆದಾಡಲಿ ಈ ಮನೆಯು ಅಣ್ಣ ತಮ್ಮಂದಿರಲ್ಲಿರಲಿ; ಇಂದಿಲ್ಲ ನಾಳೆಯಾದರೂ ನಮ್ಮ ಕೈಗೆ ಬಂದೀತು. ಪರ ಮನುಷ್ಯನ ಕೈಯಲ್ಲಿ ಅದು ಹೋದರೆ ತಿರುಗಿ ಬರುವ ಬಗೆ ಹೇಗೆ" ಎಂಬುವ ವಿಚಾರಗಳು ಬರಹತ್ತಿದರೆ ಮನೆಯಲ್ಲಿ ಆ ಪರ ಮನುಷ್ಯನ ಕಾಲು ಹೇಗೆ ಸ್ಥಿರವಾಗಿ ನಿಂತೀತು? ಇಂಥ ಸಮಯದಲ್ಲಿ ಆ ಪರಗೃಹಸ್ಥನ ಕರ್ತವ್ಯವೇನು ಉಳದೀತು? ಅರ್ಥಾತ್ ಅಣ್ಣ-ತಮ್ಮಂದಿರಲ್ಲಿ ನ್ಯಾಯ ಹಚ್ಚುವದು ಅಥವಾ ಅವರೆಲ್ಲರನ್ನೂ ಯಾವದೊಂದು ಮೋಹದಲ್ಲಿ ತೊಡಕಿಸಿ ಮಬ್ಬಿನಲ್ಲಿರಿಸುವದು ಇದೆಯಲ್ಲವೇ? ಇಂಗ್ಲಿಷ ರಾಜಕಾರಣಪಟುಗಳಾದರೂ ಈ ಯುಕ್ತಿಯನ್ನು ಮಾಡದೆ ಹೇಗೆ ಬಿಟ್ಟಾರು? ಆರಂಭದಲ್ಲಿ ಕಾಂಗ್ರೆಸ್ಸಿನಲ್ಲಿ ಹಿಂದೂ ಮುಸಲ್ಮಾನರೆಲ್ಲರೂ ಒಕ್ಕಟ್ಟಾಗಿಯೇ ಇದ್ದರು. ಮುಂದೆ ಮುಸಲ್ಮಾನರಿಗೆ ಸರಕಾರದ ಸ್ವಲ್ಪ ಪುಸಲತ್ತು ಸಿಕ್ಕಿತು. ಮೊದಲೇ ಹಿಂದೂ ಮುಸಲ್ಮಾನರಿಗೆ ಹೊಂದುವದಿಲ್ಲ. ಅದರಲ್ಲಿ ಸರಕಾರದ ಪುಟ ಸಿಕ್ಕ ಬಳಿಕ ಕೇಳುವದೇನು! ಹಿಂದೂ ಮುಸಲ್ಮಾನರಲ್ಲಿ ಕೆಲವು ಕಡೆಗೆ ದಂಗೆಗಳಾದವು. ಮುಸಲ್ಮಾನರು ಕಾಂಗ್ರೆಸ್ಸಿನಿಂದ ವಿಭಕ್ತರಾಗಿ ತಮ್ಮದೊಂದು ಬೇರೆ ಒಲೆ ಹೂಡಿದರು. ಇದೇ ಮುಸಲೀಮ್ ಲೀಗವು. ಸರಕಾರದ ದರಬಾರದಲ್ಲಿ ಮುಸಲ್ಮಾನರು ತುಂಬಹತ್ತಿದರು. ಮಳ್ಳ ಮುಸಲ್ಮಾನರು! ಸರಕಾರವು ತಮ್ಮನ್ನು ನಿಜವಾಗಿಯೇ ಪ್ರೀತಿಸುತ್ತದೆಂದು ತಿಳಿದರು ! ಆದರೆ, ಭವಿಷ್ಯತ್ ಕಾಲವು ನಿಜವಾದ ನ್ಯಾಯಾಧೀಶನಲ್ಲವೇ?

ಮುಸಲ್ಮಾನರು ಕಾಂಗ್ರೆಸ್ಸಿನ ಹೊರಗೆ ಹೋದ ಮಾತ್ರಕ್ಕೆ ಅದು ಕಟ್ಟಾಗಲಿಲ್ಲ. ಮುಂದೆ ಹಾಗೇ ನಡೆಯಿತು. ಯಥಾಪ್ರಕಾರ ಲೋಕಸೇವೆಯ ಕೆಲಸವನ್ನು ಮಾಡಿತು. ತರುಣ ಪಕ್ಷದ ವರ್ಚಸ್ಸು ದೇಶದಲ್ಲಿ ಹೆಚ್ಚಾಗಹತ್ತಿತು. ಈ ಪಕ್ಷದ ವರ್ಚಸ್ಸು ಹೆಚ್ಚಾಗಲಿಕ್ಕೆ ಪರ್ಯಾಯದಿಂದ ಸರಕಾರದವರೂ ಬಹಳ ಸಹಾಯ ಮಾಡಿದರು. ದೇಶದಲ್ಲಿ ರೇಲ್ವೆಗಳು ಹೆಚ್ಚಾಗಿ ದೇಶದ ವ್ಯಾಪಾರಕ್ಕೆ ಅನುಕೂಲವಾಗದೆ, ಧಾನ್ಯಾದಿ ಜನರ-ಆಹಾರದ ಪದಾರ್ಥಗಳು ಪರದೇಶಕ್ಕೆ ಹೋಗಲಿಕ್ಕೆ ಸಹಾಯವಾಯಿತು; ಪ್ಲೇಗು ಮುಂತಾದ ರೋಗಗಳ ಪ್ರಸಾರವಾಗಿ ಜನರ ಪೀಡೆಯು ಹೆಚ್ಚಾಯಿತು. ಇಂಗ್ಲೀಷ ಕಲಿತ ಜನರಿಗೆ ಆರಂಭಕ್ಕೆ ದೊಡ್ಡ ದೊಡ್ಡ ಸಂಬಳಗಳುಳ್ಳ ನೌಕರಿಗಳು ಸಿಕ್ಕವು. ಅದರಿಂದ, ಈ ಜನರು ತಮಗೆ ದೇಶದ ಪರಿಸ್ಥಿತಿಯ ಯಥಾರ್ಥ ಜ್ಞಾನವಿದ್ದರೂ ಸರಕಾರದ ಪಿಂಡದಿಂದ ಬಾಯಿ ಕಟ್ಟಿದ್ದರಿಂದ ಅದನ್ನು ಜನರಿಗೆ ಹೇಳಲಿಕ್ಕೆ ಸಮರ್ಥರಾಗಲಿಲ್ಲ. ವ್ಯಾಪಾರ ಉದ್ಯೋಗದ ಎಲ್ಲ ದಾರಿಗಳನ್ನು ಬಂದು ಮಾಡಿ ನೌಕರಿಯ ಒಂದೇ ಒಂದು ದಾರಿಯನ್ನು ತೆರವಿಟ್ಟಿದ್ದರಿಂದ ಆ ಮಾರ್ಗದ ಮೇಲೆ ವಿಶೇಷ

ದಟ್ಟಣೆಯಾಯಿತು. ಮುಲ್ಕೀ ಪರೀಕ್ಷೆಯವನಿಂದ ಬಿ. ಎ. ಆದವನ ವರೆಗೂ ಎಲ್ಲರಿಗೂ ಒಂದೇ ದಾರಿ-ನೌಕರಿ. ದಿನದಿನಕ್ಕೆ ಇಂಗ್ಲೀಷ ಬಲ್ಲ ಜನರು ಹೆಚ್ಚಾದರು. ನೌಕರಿಯ ಸ್ಥಳಗಳು ವಿಶೇಷ ಬೆಳೆಯಲಿಲ್ಲ. ಇದರಿಂದಲೂ ಜನರಲ್ಲಿ ಒಂದು ತರದ ಅಸಂತೋಷವುಂಟಾಯಿತು. ಬಿ.ಎ., ಎಂ. ಎ. ಆಗುವ ವರೆಗೆ ಸಾಯುವತನಕ ಕಲಿಯಬೇಕು; ಕಡೆಗೆ ತಕ್ಕಂತೆ ಪ್ರತಿಫಲವೇನೂ ಸಿಗುವಂತೆಯಿಲ್ಲ, ಹೆಂಡರು ಮಕ್ಕಳ ಹೊಟ್ಟೆ ತುಂಬಬೇಕಾದರೆ ಕಣ್ಣೀರು ಕಪಾಳಕ್ಕೆ ಬರಹತ್ತಿದವು. ಸ್ವತಂತ್ರ ಉದ್ಯೋಗ ಮಾಡುವದೆಂದರೆ ಪರದೇಶದ ಮಾಲಿನ ದಲಾಲಿ ಮಾಡುವ ವ್ಯಾಪಾರಿ ಅಥವಾ ಡಾಕ್ಟರರಾಗಬೇಕು; ಇಲ್ಲವೆ ಆ ಅಸಡ್ಡಾಳ ಕಾಯಿದೇ ಪುಸ್ತಕದ ಇಲ್ಲದ ಕಲಮು ಹುಡುಕಿ ಅಣ್ಣ ತಮ್ಮಂದಿರ ನ್ಯಾಯಗಳಿಗೆ ಪುಟಕೊಟ್ಟು, ಹಿಂಡೇ ಕೂಳಿನಿಂದ ಜೀವಿಸಬೇಕು. ಇದರಿಂದ ಸುಶಿಕ್ಷಿತ ವರ್ಗದಲ್ಲಿ ಅಸಮಾಧಾನ ಉಂಟಾಯಿತು. ದೇಶದಲ್ಲಿ ೧೦೦ಕ್ಕೆ ೫ ರಂತೆಯಾದರೂ ನೌಕರ ಜನರು ಇರುವರೋ ಇಲ್ಲವೋ ಸಂಶಯವೇ ಇದೆ. ಐದು ಜನರ ಸಲುವಾಗಿ ಬೇಕಾಗುವ ಶಿಕ್ಷಣವೇ ಎಲ್ಲರಿಗೆ ಕೊಡಲ್ಪಟ್ಟರೆ ಹೀಗಾಗದೆ ಏನು ಮಾಡೀತು? ೯೫ ಜನಕ್ಕೆ ಆವಶ್ಯಕವಾದ ಕಲಾಕೌಶಲ್ಯಾದಿಗಳ ಶಿಕ್ಷಣದ ವ್ಯವಸ್ಥೆಯೇ ಇಲ್ಲ.

ಹಲವು ತರದ ವ್ಯಸನಗಳೂ, ಚೈನೀ ವಸ್ತುಗಳೂ, ದುಂದುಗಾರಿಕೆಯೂ ಜನರಲ್ಲಿ ಹೆಚ್ಚಾಗಹತ್ತಿತು. ಆಹಾರದ ಪದಾರ್ಥಗಳು ತುಟ್ಟಿಯಾದವು. ಹೈನವು ಕಡಿಮೆಯಾಯಿತು. ಸಾಂಸಾರಿಕ ಭಾರವನ್ನು ಹೇಗೆ ಸಾಗಿಸಬಹುದೆಂಬ ಚಿಂತೆಯಿಂದ ಸಾಮಾನ್ಯ ಜನರು ಕ್ಷೀಣರಾಗಹತ್ತಿದರು. ಮನೆತನಕ್ಕೆ ಒಬ್ಬನು ದುಡಿದರೆ ಹಿಂದಕ್ಕೆ ಹತ್ತು ಜನರ ಸಂಸಾರವು ಸುಖವಾಗಿ ಸಾಗುತ್ತಿತ್ತು. ಅಲ್ಲಿ ಈಗ ಹೆಂಡರು ಮಕ್ಕಳೂ ಕೂಡಿ ದುಡಿದರೂ ಹೊಟ್ಟೆತುಂಬವದು ಕಠಿಣವಾಗಿದೆ. ಹೀಗಾಗಿ ಶಾರೀರಿಕ ಹ್ರಾಸವು ಹೆಚ್ಚಾಯಿತು. ಎಲ್ಲಿ ನೋಡಿದಲ್ಲಿ ಅಕಾಲದಲ್ಲಿ ಬಂದ ತಾರುಣ್ಯದ ನಾಶಮಾಡಿ ಸಪ್ಪನ್ನ ಮೋರೆ ಮಾಡಿಕೊಂಡು ತಿರುಗುವ ಸುದಾಮರಾಯರೇ ಕಾಣುವರು. ಹೀಗೆ ಶಾರೀರಿಕ ಮತ್ತು ಮಾನಸಿಕ ಹ್ರಾಸವು ದೇಶದಲ್ಲಿ ಹೆಚ್ಚಾಗಿ ಒಂದು ತರದ ಅಸಂತೋಷವು ದೇಶವನ್ನೆಲ್ಲ ವ್ಯಾಪಿಸಿತು. "ರಾಜಾ ಕಾಲಸ್ಯ ಕಾರಣಮ್" ದೇಶದ ಪರಿಸ್ಥಿತಿಗೆ ಬಹ್ವಂಶದಿಂದ ರಾಜನೇ ಕಾರಣನೆಂಬುದನ್ನು ಜನರು ಮರೆತಿದ್ದರು. ಅದನ್ನು ವೀರಪಕ್ಷದವರು ವೀರತನದಿಂದ ತಿಳಿಸಹತ್ತಿದರು. ವೀರಪಕ್ಷದ ಉದಯಕಾಲ ವೆಂದರೆ ಕರ್ಝನ್ ಸಾಹೇಬರ ಇಲ್ಲಿಯ ಆಳಿಕೆಯ ಅಂತ್ಯಕಾಲವು. ಕರ್ಝನ್ ಸಾಹೇಬರು ಬಹು ಉಪದ್ವ್ಯಾಪೀ ವ್ಹಾಯಿಸರಾಯರು. ತಮ್ಮ ಆಳಿಕೆಯಲ್ಲಿ ಹಿಂದೂಜನರ ಅಪಮಾನವನ್ನು ಹಲವು ತರದಿಂದ ಮಾಡಿದರು. ಯುನಿವ್ಹರ್ಸಿಟಿ ಕಮೀಶನದಿಂದ ವಿದ್ಯಾಲಯಗಳ ಕಾರ್ಯಕ್ಷೇತ್ರವನ್ನು ಸಂಕುಚಿತ ಮಾಡಿದರು. ಪ್ರೆಸ್‌ಆಕ್ಟಿನಿಂದ ಲೇಖಕರ ಸ್ವಾತಂತ್ರ್ಯಹರಣ ಮಾಡಿದರು. ಹೀಗೆ ಒಂದೇ, ಎರಡೇ, ಅನೇಕ ಕೃತ್ಯಗಳಿಂದ ಬಹುಜನ ಸಮಾಜಕ್ಕೆ ಅಪ್ರಿಯರಾದರು. ಇವರು ಮಾಡಿದ ಎಲ್ಲ ಕೃತ್ಯಗಳಲ್ಲಿ ಜನರನ್ನು ಹೆಚ್ಚು ರೊಚ್ಚಿಗೆಬ್ಬಿಸಲಿಕ್ಕೆ ಕಾರಣವಾದದ್ದು ವಂಗದೇಶದ ಭಂಗವು.

ವಂಗದೇಶದ ಭಂಗಮಾಡುವದರಲ್ಲಿ ಸರಕಾರದ ಒಂದು ಅಂತಸ್ಥ ಧೋರಣವಿತ್ತು. ಬಂಗಾಲದಲ್ಲಿ ಇತರ ಪ್ರಾಂತಗಳಿಗಿಂತ ಹೆಚ್ಚು ವಿದ್ಯಾ ಪ್ರಸಾರವಾಗಿತ್ತು. ಜನರಲ್ಲಿ ಜಾಗ್ರತಿಯಾಗಿತ್ತು. ಯಾಕಂದರೆ ಬ್ರಿಟಿಷರ ಪರಿಚಯವು ಆರಂಭಕ್ಕೆ ಬಂಗಾಲಿಗಳಿಗೇ ಆಗಿದೆ. ಬಂಗಾಲಿಗಳಲ್ಲಿ ಉಂಟಾದ ನವಜೀವನಜ್ಯೋತಿಯು ದಿನೇ ದಿನೇ ಹೆಚ್ಚು ಪ್ರಜ್ವಲಿತವಾಗಹತ್ತಿತ್ತು. ಇದು ಅಧಿಕಾರಿಗಳಿಗೆ ಹೇಗೆ ಸಹನವಾಗಬೇಕು? ಅವರು ಈ ಜ್ಯೋತಿಯನ್ನು ದೊಡ್ಡದು ಮಾಡಬೇಕೆಂದು ಎಣಿಕೆ ಹಾಕಹತ್ತಿದರು. (ನಿಜವಾಗಿ ಅದು ದೊಡ್ಡದಾಯಿತು!) ಈ ನಾತವು ಬಂಗಾಲಿಗಳಿಗೆ ಬಡಿಯಿತು. ಈ ಕಾಲಕ್ಕೆ ಕರ್ಝನ್ ಸಾಹೇಬರು ವ್ಹಾಯಿಸರಾಯರು; ಅವರು ಬಲು ಸಕ್ಕರೆಯ ಮಾತಿನವರು. ಗೋಖಲೆಯಂಥವರನ್ನು ತಮ್ಮ ಸವಿಮಾತಿನಿಂದ ಬಲೆಯಲ್ಲಿ ಹಿಡಿದಂಥವರು. ಬಂಗಾಲ ವಿಭಾಗದ ಆವಶ್ಯಕತೆಯ ಮೇಲೆ ಬಣ್ಣದ ಮಾತುಗಳಿಂದ ತುಂಬಿದ ವ್ಯಾಖ್ಯಾನಗಳನ್ನು ಕೊಟ್ಟರು. ಮುಸಲ್ಮಾನರನ್ನು ಅನುಕೂಲ ಮಾಡಿಕೊಳ್ಳಲಿಕ್ಕೆ ಹೆಣಗಿದರು. ಒಬ್ಬ ಲೆಫ್ಟಿನಂಟನಿಂದ ಇಡೀ ಬಂಗಾಲದ ಕೆಲಸ ನೋಡುವದಾಗುವದಿಲ್ಲ ವೆಂಬ ನೆಪದಿಂದ ಈ ವಿಭಾಗವು ಮಾಡಲ್ಪಡುತ್ತದೆಂದು ಅಧಿಕಾರಿಗಳು ಪ್ರತಿಪಾದಿಸುತ್ತಿದ್ದರು.

ಜನರ ಮನಸ್ಸಿಗೆ ಇದು ಎಳ್ಳಷ್ಟೂ ಬರಲಿಲ್ಲ. ಪೂರ್ವ ಬಂಗಾಲವನ್ನು ಆಸಾಮಕ್ಕೆ ಕೂಡಿಸುವದು ಗೊತ್ತಾಗಿತ್ತು. ಆಸಾಮವು ಅಶಿಕ್ಷಿತರ ಪ್ರಾಂತವು. ಆದಕಾರಣ ಆಸಾಮದ ಕೆಂಚರೊಡನೆ ಕೂಡುವದು ಪೂರ್ವ ಬಂಗಾಲಿಗಳಿಗೆ ಸೇರಲಿಲ್ಲ. ಕೆಲವು ಜನರಿಗೆ ಕಲಕತ್ತೆಯನ್ನು ಬಿಟ್ಟು ತಮ್ಮ ರಾಜಧಾನಿ ಡಾಕಾ ಪಟ್ಟಣವಾದದ್ದನ್ನು ನೋಡಿ ಕೆಡಕೆನಿಸಿತು. ಅನೇಕ ಶ್ರೀಮಂತರಿಗೆ ತಮ್ಮ ಹೊಲ ಮನೆಗಳು ಎರಡೂ ಭಾಗಗಳಲ್ಲಿ ಬರುತ್ತಿದ್ದುದರಿಂದ ನ್ಯಾಯಕೋರ್ಟಿಗೆ ಹೋಗುವದಾದಲ್ಲಿ ಕಲಕತ್ತೆ ಹಾಗೂ ಡಾಕಾಗಳೆಂಬ ಎರಡೂ ಕಡೆಗೆ ಓಡಾಡಬೇಕಾಗಹತ್ತಿತು. ಕಲಕತ್ತೆಯು ದೊಡ್ಡ ವ್ಯಾಪಾರದ ಸ್ಥಳವೂ, ಹಲವು ಆಟನೋಟಗಳ ಆಗರವೂ ಆದುದರಿಂದ ಒಂದು ಕಾರ್ಯ ನಿಮಿತ್ತವಾಗಿ ಕಲಕತ್ತೆಗೆ ಹೋದರೆ ಎರಡು ಮೂರು ಕೆಲಸಗಳನ್ನು ಏಕಕಾಲಕ್ಕೆ ಮಾಡಿಕೊಳ್ಳಲಿಕ್ಕೆ ಬರುತ್ತಿತ್ತು. ಡಾಕಾಕ್ಕೆ ನ್ಯಾಯಕೋರ್ಟಿಗೆ ಹೋದರೆ ಶರ್ಯತ್ತಿನ ಆಟನೋಟಗಳ ಸಲುವಾಗಿ ಕಲಕತ್ತೆಗೆ ಬರಬೇಕಾಗಹತ್ತಿತು. ಹೀಗೆ ಒಂದಿಲ್ಲೊಂದು ರೀತಿಯಿಂದ ಶ್ರೀಮತರಿಂದ ಬಡವರವರೆಗೆ ಎಲ್ಲರೂ ಕೆಣಕಲ್ಪಟ್ಟರು. ಆಗ ಜನರು ದೊಡ್ಡ ಸಭೆಗಳನ್ನು ಸೇರಿಸಿ, ಠರಾವು ಪಾಸು ಮಾಡಿ, ಸರಕಾರಕ್ಕೆ ವಂಗದೇಶದ ಭಂಗ ಮಾಡಬಾರದೆಂದು ಬೇಡಿಕೊಂಡರು. ಆದರೆ ಎಲ್ಲವೂ ನಿರರ್ಥಕವಾಯಿತು. ಸುಡುವದರಲ್ಲಿ ಹುಲ್ಲು ಹಾಕುವಂತೆ ಕರ್ಝನ್ ಸಾಹೇಬರು ಬಂಗಾಲಿಗಳು ಕೈಲಾಗದ ಹೇಡಿಗಳೆಂದು ದೂಷಿಸಿದರು. ವರಿಷ್ಠ ಅಧಿಕಾರಿಯೇ ಪ್ರಜಾಪೀಡನೆಗೆ ಅನುಕೂಲವಿದ್ದ ಬಳಿಕ ಕೆಳಗಿನ ಅಧಿಕಾರಿಗಳಿಗೆ ಕೇಳುವವರಾರುಳಿದರು? ಕೋತಿಯ ಕೈಯಲ್ಲಿ ಕೊಳ್ಳಿ ಕೊಟ್ಟಂತೆಯಾಯಿತು. ವಂಗೀಯರು ೭೦ ಸಾವಿರ ಸಹಿಗಳ ದೊಡ್ಡ ಹೊರೆಯನ್ನು ಬಂಗಾಲದ ವಿಭಾಗ ಮಾಡಬಾರದೆಂಬ ಬಗ್ಗೆ ಸರಕಾರಕ್ಕೆ ಕಳಿಸಿದರು. ಎಲ್ಲವೂ ವ್ಯರ್ಥ. ೧೯೦೫ನೆಯ ಇಸವಿಯ ೧೬ನೆಯ ಅಗಷ್ಟವು ಸಮಿಪಿಸಿತು. ದೇಶದಲ್ಲಿ ಒಂದೇ ಗೊಂದಲವೆದ್ದಿತು. ಸರಕಾರದವರು ೧೬ನೆಯ ಅಗಷ್ಟಕ್ಕೆ ಬಂಗಾಲದ ವಿಭಾಗವಾಯಿತೆಂದು ಪ್ರಕಟಿಸಿದರು. ಬಂಗಾಲಿಗಳು ಅದಕ್ಕೂ ಮುಂಚಿತವಾಗಿಯೇ ಅಂದರೆ ೭ನೆಯ ಅಗಷ್ಟಕ್ಕೆ ಸಭೆ ಮಾಡಿ ಸರಕಾರದವರು ತಮ್ಮ ಮಾತಿಗೆ ಮಾನ ಕೊಡದಿದ್ದರೆ ಬ್ರಿಟಿಷಮಾಲಿಗೆ ಬಹಿಷ್ಕಾರ ಹಾಕುವದನ್ನು ನಿಶ್ಚಯಿಸಿ ಸಾವಿರಾರು ಜನರು ಹಾಗೆ ಆಣೆ ಇಟ್ಟುಕೊಂಡರು. ೧೬ನೆಯ ಅಗಷ್ಟವು ರಾಷ್ಟ್ರೀಯ ಸೂತಕದ ದಿನವೆಂದು ಎಲ್ಲರೂ ಪಾಲಿಸಹತ್ತಿದರು. ಪ್ರತಿಯೊಂದು ಊರಲ್ಲಿ ಎಲ್ಲ ಜನರು ಅಂದು ಒತ್ತಟ್ಟಿಗೆ ಕೂಡಿ ಬೊಕ್ಕನೆತ್ತಿಯಿಂದ ಪಾದರಕ್ಷೆಗಳಿಲ್ಲದೆ ಗಂಗೆಯ ಧಡಕ್ಕೆ ಹೋಗಿ ಸ್ನಾನಮಾಡಿ ಉಪವಾಸದಿಂದಿರುತ್ತಿದ್ದರು. ಈ ಕ್ರಮವು ಮುಂದೆ ಬಂಗಾಲದ ವಿಭಾಗಣೆಯು ರದ್ದು ಆಗುವ ವರೆಗೆ ನಡೆದಿತ್ತು.

ಸರಕಾರದವರ ಕಲ್ಪನೆಯೇನು, ಈ ಜನರಲ್ಲಿ ಶಸ್ತ್ರಾಸ್ತ್ರಗಳಿಲ್ಲ; ಇವರಿಗೆ ಪರರಾಷ್ಟ್ರಗಳ ಸಹಾಯವಿಲ್ಲ; ಇವರಲ್ಲಿ ಒಕ್ಕಟ್ಟು ಸಹ ಇಲ್ಲ; ಒಂದು ಜಾತಿಯವರು ಮತ್ತೊಂದು ಜಾತಿಯ ವಿರುದ್ಧವಾಗಿ ಎಗ್ಗು ಇಲ್ಲದೆ ಚಾಡಿಯನ್ನು ಹೇಳಲಿಕ್ಕೆ, ಅವರನ್ನು ಮುರಿಯಲಿಕ್ಕೆ ಸಹ ಸಹಾಯಮಾಡುವರು. ಅಂದ ಬಳಿಕ ನಮ್ಮ ಮನಸ್ಸಿಗೆ ಬಂದುದನ್ನು ಯಾಕೆ ಮಾಡದೇ ಬಿಡಬೇಕು? ಎಂಬ ವಿಚಾರವಿತ್ತು. "ಇಂದು ನಾವು ಯಾವದೊಂದನ್ನು ಮಾಡುವದು ಗೊತ್ತುಮಾಡಿ ಜನರು ಬೇಡೆಂದೊಡನೆ ಬಿಟ್ಟರೆ ಅವರು (ಜನರು) ಏರಿ ಕೂಡ್ರುವರೆಂದು" ಸರಕಾರವು ತಿಳಿದಿತ್ತು. ಹೀಗೆ, ಸರಕಾರವು ಮಾಡಿಯೇ ತೀರೇನೆಂಬ ಹಟಕ್ಕೆಬಿತ್ತು; ಜನರು ಸರಕಾರದವರಿಂದ ಇದನ್ನು ರದ್ದು ಮಾಡಿಸೇ ಬಿಟ್ಟೇವೆಂಬ ಆಗ್ರಹಕ್ಕೆ ಬಿದ್ದರು. ತಿರಗಿಮುರಗಿ ಜನರು ಮಾಡುವದೇನು, ಬೈಲು ಸ್ಥಳ ನೋಡಿ ಸಭೆಗೂಡಿಸುವದು, ಆವೇಶಪೂರ್ಣ ನಾಲ್ಕು ವ್ಯಾಖ್ಯಾನಗಳನ್ನು ಕೊಡುವದು, ಕೆಲವು ಠರಾವುಗಳನ್ನು ಪಾಸು ಮಾಡುವದು, ಆಯಿತು; ಮತ್ತೇನು? ಇದರಿಂದ ಆಗಬೇಕಾದುದೇನು? ಇಷ್ಟುದಿನ ಕಾಂಗ್ರೆಸ್ಸು ಕೂಡಿತು. ಅಲ್ಲಿ ಪಾಸಾದ ಠರಾವುಗಳೆಂದರೆ ಸರಕಾರದ ಅನ್ಯಾಯಗಳ ಪಟ್ಟಿಯೇ ಎಂದು ಹೇಳಬಹುದು. ಅನೇಕ ಠರಾವುಗಳಾದವು. ವಕ್ತೃತ್ವಪೂರ್ಣ ಭಾಷಣಗಳಾದವು. ಪರಿಣಾಮವೇನಾಯಿತು?

ದೃಶ್ಯ ಪರಿಣಾಮವಿಲ್ಲದಿದ್ದರೂ ಕೆಲವು ಲಾಭಗಳಾದದ್ದು ಸುಳ್ಳಲ್ಲ. ಬಂಗಾಲಿಗಳು ಇನ್ನೂ ಹೆಚ್ಚು ಜಾಗ್ರತಿಯನ್ನು ಮಾಡಲಿಕ್ಕೆ ಟೊಂಕ ಕಟ್ಟಿದರು. ರಾಜರ ಸಿಂಹಾಸನವು ಪ್ರಜೆಗಳ ಸಂತೋಷವೆಂಬ ನೆಲಗಟ್ಟಿನ ಮೇಲೆ

ಕಟ್ಟಲ್ಪಟ್ಟಿರುತ್ತದೆ. ರಾಜರಿಗೆ ಎಚ್ಚರದಮೇಲೆ ತರಲಿಕ್ಕೆ ಲೋಕಜಾಗ್ರತೆಯೇ ಬಲವಾದ ಉಪಾಯವು. ಈ ಕಾರ್ಯಕ್ಕಾಗಿ ಬಂಗಾಲದಲ್ಲಿ ಬೇರೆ ಬೇರೆ ಪ್ರಕಾರದ ಕರ್ತೃತ್ವ ಶಕ್ತಿಯುಳ್ಳಂಥ ಪುರುಷರು ತಮ್ಮ ತಮ್ಮ ಒಲವಿನಂತೆ ವಿವಿಧ ಕಾರ್ಯಗಳಲ್ಲಿ ಆಸಕ್ತರಾದರು. ಬಾಬೂ ಸುರೇಂದ್ರನಾಥರು ಸ್ಫುರಣಗೊಡುವ ವಕ್ತೃತ್ವದಿಂದಲೂ, ಬ್ರಹ್ಮಬಂಧ್ಯೋಪಾಧ್ಯಾಯರು ತೇಜಸ್ವಿಯಾದ ಲೇಖಗಳಿಂದಲೂ, ಅಶ್ವಿನೀಕುಮಾರರು ತಮ್ಮ ಪ್ರತ್ಯಕ್ಷ ಕೃತಿಯಿಂದಲೂ ಬಂಗಾಲ ದೇಶದ ಉದ್ಧಾರಕ್ಕೆ ಹೆಣಗಹತ್ತಿದರು. ಬಂಗಾಲಿಗಳ ಅಂತಃಕರಣದಲ್ಲಿ ತೊಳಗಿ ಬೆಳಗುತ್ತಿದ್ದ ಈ ನವಜೀವನ ಜ್ಯೋತಿಗೆ ಇತರ ಪ್ರಾಂತದ ಮುಖಂಡರು ತಮ್ಮ ಅಂತಃಕರಣಸ್ಥ ಜ್ಯೋತಿಗಳನ್ನು ಹಚ್ಚಿ ತಮ್ಮ ತಮ್ಮ ಪ್ರಾಂತಗಳನ್ನು ಪ್ರಕಾಶಿತ ಮಾಡಿದರು. ಹೀಗಾಗಿ ಇಡೀ ಹಿಂದುಸ್ಥಾನವು ನವಚೈತನ್ಯದಿಂದ ತನ್ನ ಉದ್ಧಾರಕ್ಕೆ ಯತ್ನಿಸಹತ್ತಿತು. ಈ ಯಜ್ಞಕರ್ಮದಲ್ಲಿ ಶ್ರೀ ಅರವಿಂದ ಘೋಷರವರೂ ಬಹು ದೊಡ್ಡಭಾಗವನ್ನು ತಕ್ಕೊಂಡಿದ್ದರು. ಅದರ ವರ್ಣನವು ಯಥಾಕ್ರಮವಾಗಿ ಮುಂದೆ ಬರುವದು.

ವೃತ್ತಪತ್ರಗಳು ಜನರಿಗೆ ಎಚ್ಚರಿಸ ಹತ್ತಿದವು. ವ್ಯಾಖ್ಯಾನಕಾರರು ಸ್ಫೂರ್ತಿಗೊಡಹತ್ತಿದರು. ಹೀಗೆ ವಾಙ್ಮಯಸೇವೆಯು ಬಹುವಿಧವಾಗಿ ಸಾಗಿತು. ಮೊದಲು ಕಲ್ಪನೆ, ಆಮೇಲೆ ವಿಚಾರ ಬಳಿಕ ಕೃತಿ. ಈ ಕ್ರಮದಂತೆ ಮೊದಲು ವಾಙ್ಮಯಸೇವೆಯಿಂದ ಮುಖಂಡರು ಜನರಲ್ಲಿ ಹೊಸ ಕಲ್ಪನೆಗಳನ್ನು ಪಸರಿಸಿದರು; ಮಾನಸಿಕ ದಾಸ್ಯವಿಮೋಚನ ಮಾಡಿದರು. ಬ್ರಿಟಿಷ ಸರಕಾರದ ಬಣ್ಣದ ಮಾತುಗಳ ಮಬ್ಬಿಗೆ, ಬಣ್ಣದ ಸುಧಾರಣೆಗಳ ಮೋಹಕ್ಕೆ ಸಿಕ್ಕು ಗತಿಗಾಣದ ಜನರಿಗೆ ಎಚ್ಚರಿಸಿದರು. ಪಾಶ್ಚಿಮಾತ್ಯರಂತೆ ತಮಗೂ ಶಿಕ್ಷಣ ಸಿಕ್ಕರೆ ಬೇಕಾದಂಥ ಹೊಸ ಶೋಧಗಳನ್ನು ಮಾಡುವ ಯೋಗ್ಯತೆಯು ತಮ್ಮ ಜನರಲ್ಲಿರುವದೆಂಬುದನ್ನು ಸಿದ್ಧಪಡಿಸಿದರು. "ಶೋಧಗಳನ್ನು ಮಾಡಿದರೆ ಇಂಗ್ಲೀಷರೇ ಮಾಡಬೇಕು; ಆಳುವವರು ಯುರೋಪಿಯರು, ಆಳಿಸಿಕೊಳ್ಳತಕ್ಕವರು ತಾವು" ಎಂಬ ಮುಂತಾದ ಆತ್ಮವಿನಾಶಕ ಕಲ್ಪನೆಗಳನ್ನು ಬಹು ವಿಧದ ಉಪಾಯಗಳಿಂದ ಜನರೊಳಗಿಂದ ಓಡಿಸಿಬಿಟ್ಟರು. ಹುಡುಗರು ರಾಜಕಾರಣದಲ್ಲಿ ಭಾಗ ತಕ್ಕೊಳ್ಳುವರೆಂಬ ನಿಮಿತ್ತದಿಂದ ಸರಕಾರೀ ಶಾಲೆಗಳೊಳಗಿಂದ ಅವರಿಗೆ ಅರ್ಧ ಚಂದ್ರವು ಸಿಗಹತ್ತಿತು. ಆಗ ಈ ಸಂಧಿಯನ್ನು ಸಾಧಿಸಿ ರಾಷ್ಟ್ರೀಯ ಶಾಲೆಗಳು ಹೊರಟವು. ಈ ಶಾಲೆಗಳು ಸರಕಾರೀ ಶಾಲೆಗಳಿಂದ ಬಹಿಷ್ಕೃತರಾದ ವಿದ್ಯಾರ್ಥಿಗಳನ್ನು ತಕ್ಕೊಳ್ಳುವದಕ್ಕಾಗಿಯೇ ಮಾತ್ರ ಸ್ಥಾಪಿಸಲ್ಪಟ್ಟಿದ್ದಿಲ್ಲ. ಹೊಸ ಮಾದರಿಯ ನವಜೀವನದಾಯಿಯಾದ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕೆಂಬ ಉದ್ದೇಶವು ಅದರಲ್ಲಿ ಮುಖ್ಯವಾಗಿತ್ತು. ಸರಕಾರೀ ಶಾಲೆಗಳಲ್ಲಿ ಕಲಿಯುವದರಿಂದ ಮಕ್ಕಳಲ್ಲಿ ಮಾನಸಿಕ ದೌರ್ಬಲ್ಯವುಂಟಾಗುವದು; ಶಾರೀರಿಕ ಅವನತಿಯಾಗುವದು. ಈ ದೋಷಗಳನ್ನು ತೆಗೆದುಹಾಕುವದು ಈ ರಾಷ್ಟ್ರೀಯ ಶಾಲೆಗಳ ಉದ್ದೇಶವಿತ್ತು. ರಾಜಾ ಸುಬೋಧಚಂದ್ರ ಮಲಿಕ್ ಎಂಬ ಶ್ರೀಮಂತ ಗೃಹಸ್ಥನು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಈಕಾರ್ಯಕ್ಕೆ ಆರಂಭ ಮಾಡಿದನು. ರಾಷ್ಟ್ರೀಯ ಶಿಕ್ಷಣ ಮಂಡಲವು ಸ್ಥಾಪಿಸಲ್ಪಟ್ಟು ವಿದ್ಯಾಲಯವು ಹೊರಟಿತು. ಶ್ರೀ ಅರವಿಂದ ಘೋಷರು ಈ ವಿದ್ಯಾಲಯದ ಆಚಾರ್ಯ (Principal)ರಾದರು.

ವಾಙ್ಮಯಾತ್ಮಕ ಸೇವೆ ಮಾಡಿ ಜನರ ಬೌದ್ಧಿಕ ದಾಸ್ಯವನ್ನು ನಾಶಮಾಡಿದ ಬಳಿಕ ಮುಖಂಡರು ಇತರ ಕಾರ್ಯಗಳನ್ನು ಕೈಕೊಂಡರು. ಸ್ವದೇಶೀ ವಸ್ತುಗಳ ಪ್ರಚಾರವು ದೇಶದಲ್ಲಿ ಹೆಚ್ಚಾಗಹತ್ತಿದ್ದರಿಂದ ಅನೇಕ ದೇಶೀ ಉದ್ಯೋಗಗಳು ಹೊರಟವು. ಔದ್ಯೋಗಿಕ ಉನ್ನತಿಯ ಕಡೆಗೆ ಜನರ ಲಕ್ಷವು ಹೆಚ್ಚಾಗಹತ್ತಿತು. ದೇಶೀ ಸಕ್ಕರೆ, ದೇಶೀ ಅರಿವೆ, ದೇಶೀ ಬಳಿ ಹೀಗೆ ಆಯುಷ್ಯಕ್ಕೆ ಹತ್ತುವ ಎಲ್ಲ ವಸ್ತುಗಳನ್ನು ಇಲ್ಲಿಯೇ ತಯಾರಿಸುವ ಕಾರಖಾನೆಗಳನ್ನು ತೆಗೆಯಲಿಕ್ಕೆ ಕಂಪನಿಗಳು ಹೊರಟವು. ಜನರಲ್ಲಿ ಮಾನಸಿಕ ದೌರ್ಬಲ್ಯದಂತೆ ಶಾರೀರಿಕ ದೌರ್ಬಲ್ಯವೂ ಹೆಚ್ಚಾಗುತ್ತಿಲಿದ್ದುದರಿಂದ ಅದನ್ನು ತಡೆಯಲಿಕ್ಕೆ ವ್ಯಾಯಾಮ ಶಾಲೆಗಳು ಹೊರಟವು. ಜಾತ್ರೆಗಳಲ್ಲಿ ಕುಸ್ತಿಗಳಿಗೆ ಪ್ರಾಧಾನ್ಯವು ಬರಹತ್ತಿತು. ತರುಣರು ಸ್ವಯಂಸೇವಕರಾಗಿ ಜನರಿಗೆ ಅನುವು ಆಪತ್ತುಗಳಲ್ಲಿ ಸಹಾಯ ಮಾಡಲಿಕ್ಕೆ ಸಂಘಗಳನ್ನು ಸ್ಥಾಪಿಸಿದರು. ಊರ ಜಗಳಗಳು ಹೊರಗೆ ಹೋಗಬಾರದೆಂದು ಗ್ರಾಮ ಪಂಚಾಯತಿಗಳ ಸ್ಥಾಪನೆಗೆ

ಅನೇಕರು ಯತ್ನಿಸಿದರು. ಹೀಗೆ ಎಲ್ಲ ದಿಕ್ಕಿನಿಂದಲೂ ದೇಶದೊಳಗೆ ಜಾಗೃತಿಯಾಗಿ ಸುಧಾರಣೆಯಾಗಹತ್ತಿತು. ಬಾರಿಸಾಲ ಜಿಲ್ಹೆಯಲ್ಲಿಯ ಒಂದು ಸಂಘದ ಉದಾಹರಣೆಯನ್ನು ಇಲ್ಲಿ ಕೊಡಬಹುದು. ಅಲ್ಲಿ "ಸ್ವದೇಶ ಬಾಂಧವ ಸಮಿತಿ" ಎಂಬ ಸಂಘವು ಹೊರಟಿತು. ಅದರ ೧೫೦ ಶಾಖೆಗಳು ಬೇರೆ ಬೇರೆ ಕಡೆಯಲ್ಲಿ ಹೊರಟವು. ಊರೂರಿಗೆ ಹೋಗಿ ಉಪದೇಶ ಮಾಡಲಿಕ್ಕೆ ಮೂರು ಖಾಯಂ ಉಪದೇಶಕರನ್ನಿಟ್ಟಿದ್ದರು. ನೂರಾರು ಸಭೆಗಳನ್ನು ಮಾಡಿ ಜನರಿಗೆ ಪರಿಸ್ಥಿತಿಯ ಜ್ಞಾನಮಾಡಿಕೊಟ್ಟರು. ಪರದೇಶೀ ಸಕ್ಕರೆಗೆ ಬಹಿಷ್ಕಾರ ಹಾಕಿದರು. ತಮ್ಮ ಭಾಗದಲ್ಲಿ ಹೆಂಡದ ವ್ಯಸನವು ಉಳಿಯಬಾರದೆಂದು ಅವಿಶ್ರಾಂತ ಶ್ರಮಪಟ್ಟರು. ಇದರಿಂದ ಸರಕಾರದ ೨೦ ಸಾವಿರದ ಹಾನಿಯಾಯಿತಂತೆ! ಸ್ವದೇಶೀ ವ್ರತವನ್ನು ಮುರಿದ ೯೦ ಜನರಿಗೆ ಬಹಿಷ್ಕೃತ ಮಾಡಿದರು. ಇಷ್ಟು ಅಧಿಕಾರವು ಬೆಳೆದಿತ್ತು. ಪಂಚರ ವತಿಯಿಂದ ಅನೇಕ ವ್ಯಾಜ್ಯಗಳನ್ನು ತೀರಿಸಿದರು. ಅಲ್ಪ ಖರ್ಚಿನಲ್ಲಿ ಸರಿಯಾದ ನ್ಯಾಯವು ಸಿಗುತ್ತಿದ್ದುದರಿಂದ ಜನರು ಇಲ್ಲಿಯೇ ತಮ್ಮ ನ್ಯಾಯಗಳನ್ನು ತೀರಿಸಿಕೊಳ್ಳಲಿಕ್ಕೆ ಬರುತ್ತಿದ್ದರು. ಇಲ್ಲಿ ತೀರಿಸಲ್ಪಟ್ಟ ವಾಜ್ಯಗಳಲ್ಲಿ ಒಂದು ೯೦ ಸಾವಿರದ್ದು, ಮತ್ತೊಂದು ೬೫ ಸಾವಿರದ್ದು ಇತ್ತು. ಹೀಗೆ ಸರಕಾರದ ಕೋರ್ಟುಗಳ ಮೇಲಿನ ಪತ್ತು ಕಡಿಮೆಯಾಗಹತ್ತಿತು.

ಕಲಕತ್ತೆಯಲ್ಲಿ ೧೯೦೬ರಲ್ಲಿ ನೆರೆದ ಪಿತಾಮಹ ದಾದಾಭಾಯಿ ನವರೋಜಿಗಳ ಅಧ್ಯಕ್ಷತೆಯ ಕೆಳಗೆ ಆದ ರಾಷ್ಟ್ರೀಯ ಸಭೆಯಲ್ಲಿ ತರುಣ ವೀರ ಪಕ್ಷದ ಜಯವಾಗಿ ಸ್ವರಾಜ್ಯವು ಹಿಂದುಸ್ತಾನದ ಧ್ಯೇಯವೆಂದು ನಿಶ್ಚಿತವಾಯಿತು. ಸ್ವರಾಜ್ಯಸಂಪಾದನೆಯ ಸಲುವಾಗಿ ಬಹಿಷ್ಕಾರ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣಗಳೆಂಬ ಉಪಾಯಗಳಿಂದ ಕಾರ್ಯಕ್ಕೆ ಹತ್ತಬೇಕೆಂದು ಗೊತ್ತಾಯಿತು. ಈಗಿನ ಅಸಹಕಾರವು ಹಿಂದಕ್ಕೆ ಹೊರಟ ಬಹಿಷ್ಕಾರ ಯೋಗದ ತಿದ್ದಿಬೆಳಿಸಿದ ಹೊಸ ಆವೃತ್ತಿಯೆಂದೇ ಹೇಳಬಹುದು. ಈ ಠರಾವುಗಳನ್ನು ಪಾಸು ಮಾಡಿಕೊಳ್ಳಲಿಕ್ಕೆ ವೃದ್ಧಕಾಂಗ್ರೆಸ್ ಭಕ್ತರೊಡನೆ ವೀರಪಕ್ಷದವರಿಗೆ ಬಹು ಕಲಿತನದಿಂದ ಕಾದಬೇಕಾಯಿತು. ವೀರಪಕ್ಷದ ಅಗ್ರಣಿಗಳಾದ ಲೋಕಮಾನ್ಯ ತಿಲಕರ ಸಂಗಡ ಬಂಗಾಲದ ವತಿಯಿಂದ ಬೆಂಬಲಕ್ಕಾಗಿ ಬಿಪಿನಚಂದ್ರಪಾಲರೂ, ಅರವಿಂದ ಘೋಷರೂ ಪ್ರಾಮುಖ್ಯವಾಗಿ ಇದ್ದರು.

ವಂಗ-ಭಂಗದ ನಿಮಿತ್ತದಿಂದ ದೇಶದಲ್ಲಿ ಉತ್ಪನ್ನವಾದ ರಾಷ್ಟ್ರೀಯತ್ವದ ಭಾವನೆಯು ಹಾ ಹಾ ಅನ್ನುವದರಲ್ಲಿ ದೇಶವನ್ನೆಲ್ಲ ವ್ಯಾಪಿಸಿತು. ಜನರು ಸ್ವಾವಲಂಬಿಗಳಾಗಹತ್ತಿದರು. ಪರದೇಶಿ ಮಾಲಿನ ಮೇಲೆ ಬಹಿಷ್ಕಾರವನ್ನು ಹಾಕಿದ್ದರಿಂದ ಯುರೋಪದವರ ಹೊಟ್ಟೆಯ ಮೇಲೆ ಕಾಲು ಬಂತು. ಜನರಲ್ಲಿ ಆತ್ಮವಿಶ್ವಾಸವು ಉಂಟಾದುದರಿಂದ ಸರಕಾರೀ ಅಧಿಕಾರಿಗಳಿಗೆ ಮೊದಲಿಗಿದ್ದ ಮಾನವು ಕಡಿಮೆಯಾಗಹತ್ತಿತು. ಸರಕಾರೀ ನೌಕರಿಗೆ ಮೊದಲಿಗಿದ್ದ ಮಾನವು ಹೋಗಿ ನೌಕರೀ ಮಾಡುವದು ಹೀನತನದ ಲಕ್ಷಣವೆಂದು ಜನರ ಗ್ರಹಿಕೆಯಾಗಹತ್ತಿತು. ಇದು ಸರಕಾರಕ್ಕೆ ಹೇಗೆ ಸೇರಬೇಕು? ಜನರು ತಮ್ಮ ಹೊರ್ತು ಗತಿಯಿಲ್ಲವೆಂದು ನಂಬಿ ತಮ್ಮ ಮೇಲೆ ವಿಶ್ವಾಸದಿಂದ ಹೀಗೇ ಗುಲಾಮರಾಗಿರಬೇಕೆಂದು ಸರಕಾರದ ಇಚ್ಛೆ. ಇದಕ್ಕೆ ವಿಪರೀತವಾಗಿ ಅವರು ಜನರೂ ಸ್ವಾವಲಂಬಿಗಳಾಗಿ ಸ್ವಾತಂತ್ರಾಪೇಕ್ಷೆಯುಳ್ಳವರಾದರೆ ಸರಕಾರದ ಮನಸ್ಸಿಗೆ ಹೇಗೆ ಬರಬೇಕು? ರಾಷ್ಟ್ರೀಯತ್ವದ ಜ್ಯೋತಿಯನ್ನು ನೊಂದಿಸಲಿಕ್ಕೆ ಅಧಿಕಾರಿಗಳು ದಬ್ಬಾಳಿಕೆಯನ್ನು ಆರಂಭಿಸಿದರು. ಭೇದನೀತಿಯನ್ನು ಉಪಯೋಗಿಸಿ ಮುಸಲ್ಮಾನರನ್ನು ತಮ್ಮ ಪಕ್ಷಕ್ಕೆ ಎಳೆಯಲಿಕ್ಕೆ ನೋಡಿದರು. ೧೯೦೫ರ ಮಾರ್ಚ ತಿಂಗಳಲ್ಲಿ ಆದ ಬಾರಿಸಾಲದ ಪ್ರಾಂತಿಕ ಸಭೆಯನ್ನು ಚದರಿಸಿದರು. ಸುರೇಂದ್ರ ಬಾಬುಗಳಂಥ ಪ್ರಸಿದ್ಧ ಮುಖಂಡರಿಗೆ ಕೋರ್ಟಿನ ಅಪಮಾನ ಮಾಡಿದ ನಿಮಿತ್ತದಿಂದ ೨೦೦ ರೂ. ಗಳ ದಂಡಮಾಡಿದರು. ವಂದೇ ಮಾತರಂ ಎಂದು ಗರ್ಜಿಸಿದ್ದಕ್ಕಾಗಿ ವಿದ್ಯಾರ್ಥಿಗಳಿಗೆ ಸಾಲೆಯಿಂದ ಹೊರಗೆ ಹಾಕಿದರು. ಛಟಕಿಯ ಶಿಕ್ಷೆಯನ್ನು ಕೊಟ್ಟರು. ಪಿಶಾಚಿಗಳಿಗೆ ರಾಮನಾಮದ ಶ್ರವಣದಿಂದ ನಡಗು ಹುಟ್ಟುವಂತೆ ಈ ವಂದೇ ಮಾತರಮ್‌ದ ಗರ್ಜನೆಯಿಂದ ಅಧಿಕಾರಿಗಳ ತಲೆ ತಿರುಗುತ್ತಿತ್ತು. ಅಧಿಕಾರಿಗಳು ಇಷ್ಟು ಅಸಮ್ಮತಿಯನ್ನು ತೋರಿಸಿದ್ದರಿಂದ ಈ ಶಬ್ದಕ್ಕೆ ಒಂದು ತರದ ಗೌರವವು ಬಂತು. ದೇಶದಲ್ಲಿ ಎಲ್ಲ ಕಡೆಗೆ 'ವಂದೇ ಮಾತರಮ್'ದ ಘೋಷವು ನಡೆಯಿತು. ಅದಕ್ಕೆ ಮಂತ್ರದ ಸ್ವರೂಪವು

ಬಂತು. ವೇದದ ಸಾರಸರ್ವಸ್ವವು ಹೇಗೆ ಓಂಕಾರದಲ್ಲಿ ಬರುವದೋ ಹಾಗೆ ರಾಜಕಾರಣದ ರಹಸ್ಯವು ವಂದೇ ಮಾತರಮ್‌ದಲ್ಲಿ ಬಂತು ಈ ಶಬ್ದವು ರಾಜಕಾರಣದೊಳಗಿನ ಪ್ರಣವಮಂತ್ರವಾಯಿತು!

ರಾಜಕೀಯ ಸಭೆಗಳನ್ನು ಬಂದುಮಾಡಿದರು. ಪ್ರೆಸ್ಸುಗಳನ್ನು ಜಪ್ತಮಾಡಿದರು. ಯಾಕಂದರೆ ಅವು ಜನರ ಆಕಾಂಕ್ಷೆಗಳಿಗೆ ಮೂರ್ತಸ್ವರೂಪವನ್ನು ಕೊಡುತ್ತವೆ. "ಮೂಲೇ ಕುಠಾರಃ" ಎಂಬಂತೆ ಪ್ರೆಸ್ಸುಗಳನ್ನೇ ನಾಶಮಾಡಿದರೆ ಆಯಿತೆಂದು ಅಧಿಕಾರಿಗಳು ತಿಳಿದರು. ಸಂಪಾದಕರ ಮೇಲೆ ರಾಜದ್ರೋಹದ ಆರೋಪಗಳನ್ನು ಹೊರಿಸಿ ಖಟ್ಲೆಮಾಡಹತ್ತಿದರು. ಯಾವ ಪೋಲೀಸರನ್ನು ದೇಶದ ಸಂರಕ್ಷಣೆಗೆ ನೇಮಿಸುವದುಂಟೋ ಅಂಥ ಪೋಲೀಸರನ್ನೇ ದೇಶದ ಅಭ್ಯುದಯದ ಸಲುವಾಗಿ ಆತ್ಮಯಜ್ಞಮಾಡಿದ ನಿಸ್ವಾರ್ಥಿಗಳಾದ ಮುಖಂಡರನ್ನು ಕಾಡಲಿಕ್ಕೆ ಸರಕಾರದವರು ಉಪಯೋಗಿಸಹತ್ತಿದರು. ಮತ್ತು ನಿರ್ಲಜ್ಜರೂ ಸ್ವಾಭಿಮಾನಶೂನ್ಯರೂ, ತಮ್ಮ ಗೇಣು ಹೊಟ್ಟೆಗಾಗಿ ದೇಶದ್ರೋಹದ ಮಹಾಪಾತಕವನ್ನು ಮಾಡಲಿಕ್ಕೆ ಹೇಸದವರೂ ಆದಂಥ ಅದಮ ಅಧಿಕಾರಿಗಳು ಪರಿಪರಿಯಿಂದ ಪ್ರಜೆಗಳನ್ನು ಪೀಡಿಸುವದರಲ್ಲಿ ಆನಂದಪಡಹತ್ತಿದರು.

ಬಂಗಾಲಿಗಳು ಅಧಿಕಾರಿಗಳು ಈ ನಿಂದ್ಯವರ್ತನಕ್ಕೆ ಉತ್ತರವೆಂದು ತಮ್ಮ ಅಂಗೀಕೃತ ಕಾರ್ಯವನ್ನು ಇಮ್ಮಡಿ ಉತ್ಸಾಹದಿಂದ ಮುಂದೆ ಸಾಗಿಸಿದರು. ಒಬ್ಬ ಸಂಪಾದಕನು ಹೋದರೆ ಆ ಸ್ಥಳಕ್ಕೆ ಮತ್ತೊಬ್ಬ ಸಂಪಾದಕನು ಕೂಡಲೆ ಬರುತ್ತಿದ್ದನು. ಒಮ್ಮೆ ಹದಿನಾಲ್ಕು ವರುಷದ ಹುಡುಗನು ಡಿಕ್ಲೇರೇಶನದ ಸಲುವಾಗಿ ಮ್ಯಾಜಿಸ್ಟ್ರೇಟರ ಕಡೆಗೆ ಹೋಗಿ ಪರವಾನಗಿ ಬೇಡಿದನು! ಈ ಕಾಲಕ್ಕೆ ಬಂಗಾಲದಲ್ಲಿ ವೃತ್ತಪತ್ರಗಳಿಗೆ ಉಕ್ಕು ಬಂದಿತ್ತು. ಸ್ಫೂರ್ತಿದಾಯಕ ವಿಚಾರಗಳಿಂದ ತುಂಬಿ ತುಳುಕುವ ವೃತ್ತಪತ್ರಗಳೂ, ಮಾಸಪತ್ರಿಕೆಗಳೂ ತೆರಪಿಲ್ಲದೆ ಹೊರಡುತ್ತಿದ್ದವು.

ರಾಷ್ಟ್ರೀಯ ವಿದ್ಯಾಲಯದ ಆಚಾರ್ಯರಾಗಿ ಕಲಕತ್ತೆಯಲ್ಲಿ ಶ್ರೀ ಅರವಿಂದ ಘೋಷರು ಕೆಲಸಮಾಡಹತ್ತಿ ೪-೬ ತಿಂಗಳು ಆಗಿದ್ದಿಲ್ಲ. ಇಷ್ಟರಲ್ಲಿ ಇವರ ಕೀರ್ತಿ ಸುಗಂಧವು ದೇಶದ ಎಲ್ಲ ಭಾಗಗಳಲ್ಲಿ ಪಸರಿಸಿತು. ಬಂಗಾಲದ ರಾಷ್ಟ್ರೀಯ ಪಕ್ಷದ ಪ್ರಮುಖ ಪತ್ರವಾದ ವಂದೇ ಮಾತರಮ್‌ದ ಹನ್ನೆರಡನೆಯ ದಶಂಬರ ೧೯೦೬ರ ಸಂಚಿಕೆಯಲ್ಲಿ ಶ್ರೀ ಅರವಿಂದರು ತಮ್ಮ ಸಂಪಾದಕವರ್ಗದಲ್ಲಿ ಒಬ್ಬರಾಗುವರೆಂದು ಪ್ರಕಟಿಸಲ್ಪಟ್ಟಿತು. ಈ ಕಾಲಕ್ಕೆ ಶ್ರೀ ಅರವಿಂದ ಬಾಬುಗಳು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಿಲ್ಲ. ಆದರೂ ಶ್ರೀ ಅರವಿಂದರ ಸಂಬಂಧವನ್ನು ಜೋಡಿಸಿಕೊಳ್ಳಲಿಕ್ಕೆ ವಂದೇಮಾತರಂದಂಥ ಪ್ರಖ್ಯಾತ ಪತ್ರವು ಇಷ್ಟು ಆತುರವಾಗಿದ್ದುದರ ಮೇಲಿಂದ ಬಾಬೂ ಮಹಾಶಯರ ಯೋಗ್ಯತೆಯೂ ಕೀರ್ತಿಯೂ ಎಷ್ಟು ಬೆಳೆಯಿತೆಂಬುದು ಸಹಜವಾಗಿ ವ್ಯಕ್ತವಾಗುತ್ತದೆ. ರಾಷ್ಟ್ರೀಯ ಪಕ್ಷದ ವಿಚಾರಗಳನ್ನು ದೇಶದಲ್ಲಿ ಹರಡುವದಕ್ಕಾಗಿ ಒಂದು ಜಾಯಿಂಟ್ ಸ್ಟಾಕ್ ಕಂಪನಿಯು ಹೊರಟು ತದ್ವಾರವಾಗಿ ಈ ಪತ್ರವು ನಡಿಸಲ್ಪಡುತ್ತಿತ್ತು. ಇದರ ಸಂಪಾದಕತ್ವವು ಸುಪ್ರಸಿದ್ಧ ಲೇಖಕರೂ ಅಸದೃಶ ವಕ್ತೃತ್ವಶಾಲಿಗಳೂ ಆದ ಬಿಪಿನ ಚಂದ್ರಪಾಲ ಹಾಗೂ ಬಾಬು ಶಾಮಸುಂದರ ಚಕ್ರವರ್ತಿಗಳೆಂಬವರ ಕಡೆಗೆ ಇತ್ತು. ಇವರ ಜೊತೆಗೆ ಶ್ರೀ ಅರವಿಂದರಂಥ ಪ್ರತಿಭಾಶಾಲಿಗಳಾದ ಲೇಖಕರೂ ಇರಬೇಕೆಂದು ನೆನಿಸಿ ಚಾಲಕರು ಹಾಗೆ ಪ್ರಕಟಿಸಿದ್ದರು. ಆದರೆ, ಆಗ ಶ್ರೀ ಅರವಿಂದರು ಸಮ್ಮತಿಸದಿದ್ದರೂ ಮುಂದೆ ಏಪ್ರಿಲ್ ೧೫ನೆಯ ತಾರೀಖಿಗೆ ಆ ಕೆಲಸಕ್ಕೆ ಒಪ್ಪಿಕೊಂಡರು. ಆಗಾಗ್ಗೆ ಸ್ಫೂರ್ತಿದಾಯಕ ಲೇಖನಗಳನ್ನು ಬರೆದು ಜನರನ್ನು ಚೇತರಿಸ ಹತ್ತಿದರು. ಇವರಿಗೆ ಇಂಗ್ಲಿಷವು ಮಾತೃಭಾಷೆ; ಇದಲ್ಲದೆ ಸಂಸ್ಕೃತ, ಗ್ರೀಕ, ಲ್ಯಾಟಿನ, ಫ್ರೆಂಚ ಮತ್ತು ಜರ್ಮನ್ ಭಾಷೆಗಳಲ್ಲಿ ನಿಷ್ಣಾತರು. ಇಂಥ ಅಗಾಧ ಪಂಡಿತರು ಬರೆದ ಲೇಖನಗಳನ್ನು ಓದಿ ಯಾರು ತಾನೇ ತಲೆದೂಗರು? ಲಂಡನ್ ಟಾಯಿಮ್ಸದಂಥ ವಿರುದ್ಧ ಪಕ್ಷದ ಪತ್ರವು ಸಹ ವಂದೇ ಮಾತರಂದ ಲೇಖಗಳನ್ನು ಕಂಡು ತಲೆದೂಗಿತು! ವಂದೇಮಾತರಂದ ಸುಂದರವಾದ ಮಾರ್ಮಿಕ ಲೇಖಗಳು ಜನರ ಚಿತ್ತವನ್ನು ಕೂಡಲೆ ಆಕರ್ಷಿಸುತ್ತಿದ್ದವು. ಅದರೊಳಗಿನ ಸ್ಫೂರ್ತಿದಾಯಕ ವಿಚಾರಗಳು ಜನರಲ್ಲಿ ಚೈತನ್ಯವನ್ನುಂಟು ಮಾಡದೆ

ಬಿಡುತ್ತಿದ್ದಿಲ್ಲ. ಸಾವಿರಾರು ವಾಚಕರು ದಿನಾಲು ಈ ಪತ್ರವು ಯಾವಾಗ ಕೈಗೆ ಬಂದೀತೆಂದು ಆತುರರಾಗಿರುತ್ತಿದ್ದರು. ಇದರ ಲೋಕಪ್ರೀತಿಯೇ ಇದಕ್ಕೆ ಮುಳುವಾಯಿತು. ಅಲ್ಪಕಾಲದೊಳಗೆ ಸರಕಾರದ ಕಣ್ಣಲ್ಲಿ ಇದು ಅಳುಕಹತ್ತಿತು.

ರಾಷ್ಟ್ರೀಯ ಪಕ್ಷದ ಮುಖಂಡರನ್ನು ಹಿಡಿದು ಶಿಕ್ಷಿಸಿ, ಜನರಲ್ಲಿ ಒಂದು ತರದ ಅಂಜಿಕೆಯನ್ನುಂಟುಮಾಡಿ ತಮ್ಮ ವರ್ಚಸ್ಸು ಕೂಡ್ರಿಸಬೇಕೆಂದು ಸರಕಾರದವರು ಮುಂದಾಳುಗಳನ್ನು ಹಿಡಿಯುವ ಮಹಾಸತ್ರವನ್ನು ಆರಂಭಿಸಿದರು. ಇದರಲ್ಲಿ ಶ್ರೀ ಅರವಿಂದರಂಥ ಲೋಕಪ್ರಿಯ ಮುಖಂಡರ ಬಾರಿಯು ಬಂದರೆ ಆಶ್ಚರ್ಯವೇನು? ವಂದೇಮಾತರಂದ ತಾ॥ ೨೭ನೆಯ ಜುಲೈ ೧೯೦೭ರ ಸಂಚಿಕೆಯಲ್ಲಿ ಯುಗಾಂತರವೆಂಬ ಪತ್ರಿಕೆಯ ಮೇಲೆ ಯಾವ ಲೇಖದ ಸಲುವಾಗಿ ಖಟ್ಲೆಯಾಗಿತ್ತೋ ಆ ಲೇಖದ ಸಾರಾಂಶವು ಕೊಡಲ್ಪಟ್ಟಿತ್ತೆಂದೂ, ೨೮ನೆಯ ತಾರೀಖಿನ ಸಂಚಿಕೆಯಲ್ಲಿ "ಹಿಂದುಸ್ತಾನವು ಹಿಂದೂ ಜನರ ಸಲುವಾಗಿ" (India for Indians) ಎಂಬ ಲೇಖವು ಬರೆಯಲ್ಪಟ್ಟಿತ್ತೆಂದೂ ಆರೋಪವಿಟ್ಟು, ಪೋಲಿಸರು ಈ ಪತ್ರದ ಮೇಲೆ ಖಟ್ಲೆಯನ್ನು ಹಾಕಿದರು. ಆಗಸ್ಟ ೭ನೆಯ ತಾರೀಖಿನ ದಿವಸ ಆಫೀಸಿಗೆ ಜಪ್ತಿಯು ಬಂತು. ಪೋಲಿಸರು ಕಾರ್ಯಾಲಯ (Office) ದ ಸಂದೆ-ಗೊಂದಿಗಳನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ತಪಾಸ ಮಾಡಿದರು. ಒಂದೆರಡು ಗಾಡಿ ತುಂಬ ಕಾಗದಗಳನ್ನು ಜಪ್ತಮಾಡಿ ವೈದರು!

ಮೇಲೆ ಹೇಳಿದ ಆರೋಪಿತ ಲೇಖನಗಳನ್ನು ಶ್ರೀ ಅರವಿಂದ ಬಾಬುಗಳೇ ಬರೆದರೆಂಬ ಸಂಶಯದಿಂದ ವಾರಂಟು ಹೊರಟಿತು; ತಾ. ೨೦ನೆಯ ಅಗಸ್ಟಕ್ಕೆ ಸೆರೆ ಹಿಡಿದರು. ಬಳಿಕ ೨೫೦೦ ರೂಪಾಯಿಗಳ ಜಾಮೀನಿನ ಮೇಲೆ ಬಿಡುಗಡೆಯಾಯಿತು ೨೬ನೆಯ ಅಗಸ್ಟಕ್ಕೆ ನ್ಯಾಯವಿಚಾರಣೆಗೆ ಆರಂಭವಾಯಿತು. ಕೆಲವರ ಸಾಕ್ಷಿಗಳಾದವು; ಆದರೆ, ಅವುಗಳಿಂದ ಈ ಲೇಖನಗಳನ್ನು ಶ್ರೀ ಅರವಿಂದರೇ ಬರೆದರೆಂದು ಸಿದ್ಧವಾಗಲಿಲ್ಲ. ಕಾರಣ ಬಿಪಿನಪಾಲರನ್ನು ಸರಕಾರದವರು ತಮ್ಮ ವತಿಯಿಂದ ಸಾಕ್ಷಿಗೆ ಕರೆದರು. ಆದರೆ, ಪಾಲರು ಇಂಥ ಅನ್ಯಾಯದ ಖಟ್ಲೆಯಲ್ಲಿ ಸಾಕ್ಷಿ ಹೇಳಲಿಕ್ಕೆ ತಮ್ಮ ಮನೋದೇವತೆಯು ಒಪ್ಪುವದಿಲ್ಲವೆಂದು ಹೇಳಿದರು. ಆಗ ಮ್ಯಾಜಿಸ್ಟ್ರೇಟರು ಸಿಟ್ಟಾಗಿ ಪಾಲರ ಮೇಲೆ ಖಟ್ಲೆ ಮಾಡುವದಕ್ಕೆ ಅಪ್ಪಣೆಕೊಟ್ಟರು; ಅದರಲ್ಲಿ ಅವರಿಗೆ ಆರು ತಿಂಗಳ ಖೈದಿನ ಶಿಕ್ಷೆಯಾಯಿತು! ಶ್ರೀ ಅರವಿಂದ ಬಾಬುಗಳ ನ್ಯಾಯ ವಿಚಾರಣೆಯು ಮುಂದೆ ಸಾಗಿ ತಾ. ೨೩ನೆಯ ಸೆಪ್ಟೆಂಬರದ ದಿವಸ ನಿರ್ದೋಷಿಗಳೆಂದು ತೀರ್ಪು ಸಿಕ್ಕಿತು. ಸರಕಾರದವರ ಅವಕೃಪೆಗೆ ಪಾತ್ರರಾದ ಶ್ರೀ ಅರವಿಂದರನ್ನು ರಾಷ್ಟ್ರೀಯ ವಿದ್ಯಾಲಯದಲ್ಲಿ ಉಳಿಯಗೊಟ್ಟರೆ ಸಂಸ್ಥೆಗೆ ಬಾಧೆ ಬರುವದೋ ಏನೋ ಎಂಬ ಶಂಕೆಯು ಚಾಲಕ ವರ್ಗದಲ್ಲಿ ಸೇರಿತು. ಸ್ವತಂತ್ರ ಪದ್ಧತಿಯಿಂದ ಶಿಕ್ಷಣವನ್ನು ಕೊಡಬೇಕೆಂದು ರಾಷ್ಟ್ರೀಯ ವಿದ್ಯಾಲಯವು ಸ್ಥಾಪಿಸಲ್ಪಟ್ಟಿದ್ದರೂ ಕೆಲವು ಶ್ರೀಮಂತ ಆಶ್ರಯದಾತರು ಅರವಿಂದರನ್ನು ಇಟ್ಟುಕೊಳ್ಳಲಿಕ್ಕೆ ಅನುಮಾನಿಸಹತ್ತಿದರು! ಇಂಥ ಪರಿಯಿಂದ ಇಲ್ಲಿ ಇರುವದಕ್ಕಿಂತ ಬಿಟ್ಟುಹೋಗುವದು ಲೇಸೆಂದು ಬಗೆದು ಶ್ರೀ ಅರವಿಂದರು ತಮ್ಮ ಸ್ಥಳದ ರಾಜೀನಾಮೆಯನ್ನು ಕೊಟ್ಟರು.

೭೫೦ರೂ.ಗಳ ಸಂಬಳವನ್ನು ಬಿಟ್ಟು ಕೇವಲ ಹೊಟ್ಟೆಗೆ ಬೇಕಾಗುವಷ್ಟು ಪ್ರತಿತಿಂಗಳಿಗೆ ಸಿಗುವ ಫಲವನ್ನು ಮಾತ್ರ ತಕ್ಕೊಂಡು ಕೆಲಸ ಮಾಡಲಿಕ್ಕೆ ಒಪ್ಪಿದ ಶ್ರೀ ಅರವಿಂದ ಬಾಬುಗಳು ತಿಂಗಳೊಂದಕ್ಕೆ ಸಿಗುವ ತಮಗೆ ಈ ಕೆಲಸವನ್ನು ಬಿಡಬೇಕಾಯಿತೆಂದು ನಿರುತ್ಸಾಹಿಗಳಾಗಲಿಲ್ಲ. ಬಡೋದೆಯ ಬಡೇಜಾವಿನೊಳಗಿಂದ ಅವರನ್ನು ಯಾವ ರಾಷ್ಟ್ರ ಧರ್ಮವು ಎಳೆದುತಂದಿತ್ತೋ ಅದರ ಪ್ರಸಾರವನ್ನು ವಿದ್ಯಾಲಯದಲ್ಲಿ ಆಚಾರ್ಯರಾಗಿಯೇ ಮಾಡಲಿಕ್ಕೆ ಬರುತ್ತದೆಂದಲ್ಲ. ಈ ಧರ್ಮವನ್ನು ಜನರಲ್ಲಿ ಹಲವು ರೀತಿಯಿಂದ ಹರಡಲಿಕ್ಕೆ ಬರುತ್ತದೆ. ರಾಷ್ಟ್ರೀಯ ವಿದ್ಯಾಲಯದೊಳಗಿಂದ ಹೊರಟ ಬಳಿಕ ಅವರು ವಂದೇಮಾತರಂದ ಸಂಪಾದಕ ವರ್ಗದಲ್ಲಿ ಸೇರಿ ಕೆಲಸ ಮಾಡಹತ್ತಿದರು. ಶ್ರೀ ಅರವಿಂದರು ಮೊದಲು ನೂರಾರು ವಿದ್ಯಾರ್ಥಿಗಳ ಶಿಕ್ಷಕರಾಗಿದ್ದರೆ ಈಗ ಸಾವಿರಾರು ಶಿಷ್ಯರ ಆಚಾರ್ಯರಾದರು; ಮೊದಲು ನ್ಯಾಶನಲ್ ಕಾಲೇಜದ ಒಂದು ಪುಟ್ಟ ಕೋಣೆಯ ನಾಲ್ಕು ಗೋಡೆಗಳ ಅವಕಾಶದೊಳಗೆ ಕುಳಿತು ಅಧ್ಯಾಪನ ಕಾರ್ಯವನ್ನು ಮಾಡುತ್ತಿದ್ದರೆ, ಈಗ ನಿಸರ್ಗಸಿದ್ಧ ಮೇರೆಗಳಿಂದ

ಮರ್ಯಾದಿತವಾದ ಭರತಖಂಡದ ಕಿಂಬಹುನಾ ಜಗತ್ತಿನ ವಿಶಾಲವಾದ ರಂಗಭೂಮಿಯ ಮೇಲೆ ನಿಂತು ತಮ್ಮ ಗಂಭೀರವಾಣಿಯಿಂದ ಮಾನವ ಕುಟುಂಬಕ್ಕೆ ಉದ್ಧರಿಸಲು ಸಮರ್ಥವಾದ ಉದಾತ್ತ ತತ್ವಗಳ ಉಪದೇಶ ಮಾಡಹತ್ತಿದರು.

ನಿರ್ದೋಷಿಯೆಂದು ನಿರ್ಣಯವು ಸಿಕ್ಕಬಳಿಕ ಶ್ರೀ ಅರವಿಂದರು ಪುನಶ್ಚ ಹರಿಃ ಓಂ ಎಂದು ಮತ್ತೆ ಕಾರ್ಯಕ್ಕೆ ಹತ್ತಿದರು. ರಾಷ್ಟ್ರಸೇವೆಯ ಇಕ್ಕಟ್ಟಾದ ಕಣಿವೆಯ ಮಾರ್ಗವನ್ನು ಸಾಗುವದರಲ್ಲಿ ಸಹಕಾರಿಗಳಾದ ಕೆಲವು ಮಿತ್ರರ ವಿಯೋಗವಾಯಿತು. ಬಿಪಿನಚಂದ್ರಪಾಲರಿಗೆ ಶಿಕ್ಷೆಯಾಯಿತು. ಬ್ರಹ್ಮಬಂಧೋಪಾಧ್ಯಾಯರು ದಿವಂಗತರಾದುದರಿಂದ ಚಿರವಿರಹದ ಪ್ರಸಂಗವು ಬಂತು. ಮತ್ತೆ ಕೆಲವು ಮಿತ್ರರು ಸರಕಾರದ ಅವಕೃಪೆಗೆ ಈಡಾದರು. ಹೀಗೆ ದೊಡ್ಡ ದೊಡ್ಡ ಮುಂದಾಳುಗಳು ಒಂದಿಲ್ಲೊಂದು ತರದಿಂದ ಇಲ್ಲದಂತಾಗಲು ಬಂಗಾಲದ ತರುಣ ಪಕ್ಷದ ಮುಖಂಡತನವು ಶ್ರೀ ಅರವಿಂದರ ಕಡೆಗೆ ಬಂತು. ನವಂಬರದಲ್ಲಿ ಕೂಡಿದ ಜಿಲ್ಲಾ ಪರಿಷತ್ತಿಗೆ ಮಿದನಾಪುರಕ್ಕೆ ರಾಷ್ಟ್ರೀಯ ಪಕ್ಷದ ಪತಿಯಿಂದ ಶ್ರೀ ಅರವಿಂದರು ಹೋಗಿದ್ದರು. ಮಂದಪಕ್ಷದವರು ವೀರಪಕ್ಷದ ತೇಜಸ್ಸನ್ನು ತಾಳಲಾರದೆ ಆ ಸಭೆಯೊಳಗಿಂದ ಪಲಾಯನ ಹೇಳಿಸಿದರು. ರಾಷ್ಟ್ರೀಯ ಪಕ್ಷದ ಮೇಲೆ ಸರಕಾರದ ಕಣ್ಣು ಬಹಳವಿತ್ತು. ಸರಕಾರಕ್ಕೆ ಬೇಡಾದ ಈ ಪಕ್ಷದ ಸಂಗಡ ಕೂಡಿ ನಡೆಯಲಿಕ್ಕೆ ಮಂದಪಕ್ಷದವರು ಅಂಜುತ್ತಿದ್ದರು. ಮಂದ ಪಕ್ಷದವರು ಪರಿಷತ್ತನ್ನು ಬಿಟ್ಟುಹೋದರೂ, ವೀರ ಪಕ್ಷದವರು ಅದನ್ನು ಯಶಸ್ವಿಯಾಗಿ ಕೊನೆಗಾಣಿಸಿದರು. ಇದರ ಶ್ರೇಯಸ್ಸು ಶ್ರೀ ಅರವಿಂದರಿಗಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ.

ಮುಸಲ್ಮಾನರನ್ನು ಒಡೆದು ನೋಡಿತು; ಕೆಲವು ಜನರಿಗೆ ಶಿಕ್ಷೆ ಕೊಟ್ಟು ನೋಡಿತು; ಏನು ಮಾಡಿದರೂ ಜನರು ಮಣಿಯದಿದ್ದುದನ್ನು ಕಂಡು ಸರಕಾದವರು ಮತ್ತೊಂದು ಯುಕ್ತಿಯನ್ನು ಯೋಚಿಸಿದರು. ಮಂದ ಪಕ್ಷದವರ ಬೆನ್ನು ಚಪ್ಪರಿಸಿ, ಅವರನ್ನು ತಮ್ಮ ವಿಶ್ವಾಸದಲ್ಲಿ ತಕ್ಕೊಂಡು ತರುಣ ವೀರಪಕ್ಷವನ್ನು ಬಗ್ಗು ಬಡಿಯಬೇಕೆಂದು ಸರಕಾರದವರು ಹಂಚಿಕೆ ಹಾಕಿದರು. ಮಂದಪಕ್ಷದ ಬುದ್ಧಿಮಾಂದ್ಯದಿಂದ ಈ ಯುಕ್ತಿಗೆ ಯಶಸ್ಸು ಬಂತು. ರಾಷ್ಟ್ರೀಯ ಸಭೆಯಲ್ಲಿ ವೀರಪಕ್ಷದ ವರ್ಚಸ್ಸು ಹೆಚ್ಚಾಗುತ್ತಿಲಿದ್ದುದು ಮಂದಪಕ್ಷಕ್ಕೆ ಸೇರಲಿಲ್ಲ. ಮಂದಪಕ್ಷದವರು ರಾಷ್ಟ್ರೀಯ ಸಭೆಯನ್ನು ಸ್ಥಾಪಿಸಿದ್ದೇನೋ ನಿಜ. ಆದರೆ ರಾಷ್ಟ್ರದ ಆಕಾಂಕ್ಷೆಗಳು ವೃದ್ಧಿಂಗತವಾದಂತೆ ತಮ್ಮ ಧೋರಣವನ್ನಿಡಲಿಕ್ಕೆ ಮಂದಪಕ್ಷದವರು ಹೆದರಹತ್ತಿದರು. ಸರಕಾರದ ಹತ್ತರ ವಿನಂತಿ ಮಾಡಿಕೊಂಡು, ಠರಾವುಗಳನ್ನು ಮಾಡಿ ಕಳಿಕಳಿಸಿ ಜನರಿಗೆ ಬೇಸರಿಕೆ ಬಂದಿತ್ತು. ವಿನಂತಿ ಮಾಡಿಕೊಂಡರೆ ತಮ್ಮ ಕೈಯೊಳಗಿನ ಅಧಿಕಾರವನ್ನು ಯಾರೂ ಕೊಡುತ್ತಿರುವದಿಲ್ಲ. ಅದಕ್ಕೆ ಸ್ವಾವಲಂಬನದ ಮಾರ್ಗದಿಂದಲೇ ಯತ್ನಿಸಬೇಕೆಂದು ತರುಣರು ಅನ್ನುತ್ತಿದ್ದರು. ರಾಷ್ಟ್ರೀಯ ಪಕ್ಷದ ಈ ಮತಗಳು ಮಂದ ಪಕ್ಷದವರಿಗೆ ಸೇರಲಿಲ್ಲ. ಮಂದರ ಮಾರ್ಗಕ್ರಮಣ ಪದ್ಧತಿಯು ಮಂದವಿತ್ತು. ಮುಂದ ಮಂದವಾಗಿ ಸಾಗುವದು ವೀರರಿಗೆ ಸೇರದಾಯಿತು. ಮಂದವಾಗಿ ನಡೆದರೆ ಉದ್ದಿಷ್ಟಸ್ಥಾನಕ್ಕೆ ಹೋಗಲಿಕ್ಕೆ ಕಾಲಾವಧಿಯು ಬಹಳ ಬೇಕು. ಕಾರಣ ಕಾಲು ಬೇಗ ಎತ್ತುವದು ಅವಶ್ಯವೆಂದು ವೀರಪಕ್ಷದ ಮತವಿತ್ತು. ಈ ಮಾತು ಮಂದಪಕ್ಷದ ಕೆಲವು ಜನರಿಗೆ ಸರಿಯಾಗಿ ತೋರುತ್ತಿದ್ದರೂ ಸರಕಾರದ ಭೀತಿಯಿಂದ ಅವರು ಅದಕ್ಕೆ ಒಪ್ಪುತ್ತಿದ್ದಿಲ್ಲ. ಸರಕಾರದ ಭೀತಿಗೆ ಭಯಪಟ್ಟು ಧ್ಯೇಯಚ್ಯುತರಾಗಬೇಕೇ- ರಾಷ್ಟ್ರದ ಘಾತಕ್ಕೆ ಕಾರಣರಾಗಬೇಕೇ ಅಥವಾ ಬಂದದ್ದನ್ನು ಸಹಿಸಿ ಸರ್ವಭೂತ ಹಿತವನ್ನು ಸಾಧಿಸಬೇಕೇ ಎಂಬುದೇ ರಾಷ್ಟ್ರೀಯ ಪಕ್ಷದ ಕಣ್ಣೆದುರಿನ ಮುಖ್ಯ ಪ್ರಶ್ನವಾಗಿತ್ತು. ಹಾಗೂ ಅವರು ಧ್ಯೇಯ ಸಿದ್ಧಿಯ ಸಲುವಾಗಿ ಸರ್ವಸ್ವದ ತ್ಯಾಗಕ್ಕೆ ಸಿದ್ಧರಾಗಿದ್ದರು. ಮತ್ತು ಅದರಂತೆ ಬಂದ ಕಷ್ಟಗಳನ್ನು ಸಂತೋಷದಿಂದ ಸಹಿಸಿದರು.

೧೯೦೭ರಲ್ಲಿ ರಾಷ್ಟ್ರೀಯ ಸಭೆಯು ನಾಗಪುರಕ್ಕೆ ನೆರೆಯಬೇಕೆಂದು ಮೊದಲು ಗೊತ್ತಾಗಿತ್ತು. ಆದರೆ ಅಲ್ಲಿ ರಾಷ್ಟ್ರೀಯ ಪಕ್ಷದ ಬಹುಮತವಿದ್ದುದು ಕಂಡುಬಂತು. ರಾಷ್ಟ್ರೀಯ ಸಭೆಯ ಚಾಲಕತ್ವವು ಪರಂಪರೆಯಿಂದ ಮಂದಪಕ್ಷದ ಕೈಯೊಳಗಿದ್ದದರಿಂದ ಅವರು ಕೂಡಲೆ ನಾಗಪೂರದಿಂದ ಸೂರತ್‌ಕ್ಕೆ ಸಭೆಯನ್ನು ಕೂಡಿಸಬೇಕೆಂದು ಗೊತ್ತು ಮಾಡಿದರು. ಸೂರತದಲ್ಲಿ ಫೆರೋಝಶಹಾ ಮೇಥಾ ಇವರ ವರ್ಚಸ್ಸು ಹೆಚ್ಚು ಇತ್ತು. ೧೯೦೭ರ

ದಶಂಬರ ತಿಂಗಳು ಬಂತು. ರಾಷ್ಟ್ರೀಯ ಸಭೆಯು ನೆರೆಯುವ ದಿವಸಗಳು ಸಮೀಪಿಸ ಹತ್ತಿದವು ದೇಶದೊಳಗಿನ ಎರಡೂ ಪಕ್ಷದ ಜನರು ತಮ್ಮ ತಮ್ಮ ಮುಖಂಡರನ್ನು ಮುಂದೆ ಮಾಡಿಕೊಂಡು ಸಭೆಗೆ ಬಂದರು. ಅಲ್ಲಿ ಅಧ್ಯಕ್ಷರನ್ನು ಆರಿಸುವ ನಿಮಿತ್ತವಾಗಿ ನ್ಯಾಯವು ಹೊರಟು ಹಟದಲ್ಲಿ ಅದರ ಪರ್ಯವಸಾನವಾಯಿತು. ಲಾಲಾ ಲಜಪತರಾಯರು ಮಧ್ಯಸ್ಥಿಕೆಯನ್ನು ಮಾಡಿದರು; ಆದರೆ ಅದರ ಉಪಯೋಗವಾಗಲಿಲ್ಲ. ಮೇಥಾ ಪ್ರಭೃತಿಗಳ ಮುಖಂಡರ ದುರಾಗ್ರಹದಿಂದ ಕಾರ್ಯಹಾನಿಯಾಯಿತು. ವೀರಪಕ್ಷದವರು ಲೋಕಮಾನ್ಯ ತಿಲಕರ ನೇತೃತ್ವದ ಕೆಳಗೆ ಹೋರಾಡಿದರು. ಬಿಪಿನಚಂದ್ರಪಾಲರು ತುರಂಗಕ್ಕೆ ಹೋದುದರಿಂದ ಶ್ರೀಅರವಿಂದರು ಬಂಗಾಲಿಯ ವೀರಪಕ್ಷದ ವತಿಯಿಂದ ಲೋಕಮಾನ್ಯರ ಬೆಂಬಲಕ್ಕೆ ಇದ್ದರು. ಮೊದಲು ಶಾಬ್ದಿಕ ಕಲಹಕ್ಕೆ ಆರಂಭವಾಗಿ ಕಡೆಗೆ ಕೈಗೆ ಕೈ ಹತ್ತುವ ಪ್ರಸಂಗವು ಬಂತು. ಅನುಯಾಯಿಗಳೊಳಗೆ ಈ ಕಲಹವು ಸ್ವಲ್ಪ ವಿಕೋಪಕ್ಕೆ ಹೋಯಿತು; ಕೆಲವರು ಒಳಿತಾಗಿ ಪೆಟ್ಟು ತಿಂದರು. ಹೀಗೆ ಕಾಂಗ್ರೆಸ್ಸೆಂಬ ಯುದ್ಧ ನೌಕೆಯು ಕಲಹ (ಒಳ ಜಗಳಗಳ)ಗಳೆಂಬ ಬಂಡೆಗಲ್ಲಿಗೆ ಅಪ್ಪಳಿಸಿ ಒಡೆಯಿತು. ಸರಕಾರದ ಇಚ್ಛೆಯು ಸಫಲವಾಯಿತು. ಭೇದನೀತಿ ನಿಪುಣರಾದ ಅಧಿಕಾರಿಗಳು ಗೆದ್ದರು! ಅಧಿಕಾರಿಗಳ ವಿಜಯವೆಂದರೆ ರಾಷ್ಟ್ರದ ಪರಾಜಯವು. ವೀರಪಕ್ಷವು ಏಕಾಕಿಯಾಗಿ ಸರಕಾರದ ಆಳವಿನೊಳಗೆ ಸಿಕ್ಕಿತು.

ಸೂರತ್‌ದ ದುಃಖಪರ್ಯವಸಾಯಿಯಾದ ರಾಷ್ಟ್ರೀಯ ಸಭೆಯು ಮುಗಿಯಿತು. ಶ್ರೀ ಅರವಿಂದ ಘೋಷರು ತಮ್ಮ ಮತಗಳ ಪ್ರಸಾರಾರ್ಥವಾಗಿ ಮಹಾರಾಷ್ಟ್ರ, ಮಧ್ಯಪ್ರಾಂತಗಳಲ್ಲಿ ದೂರ ದೂರಿನ ಪ್ರವಾಸ ಮಾಡಿದರು. ದೇಶಸೇವೆಯು ಸುಮ್ಮನೆ ಆಗುವದಿಲ್ಲ. ಇದೊಂದು ಅಸಿಧಾರಾವ್ರತವಿದೆ. ಖಡ್ಗದ ಧಾರೆಯ ಮೇಲೆ ಮಾಡುವ ಕಸರತ್ತು ಇದೆ. ಉಗ್ರವಾದ ತಪಶ್ಚರ್ಯವಿದೆ ಆತ್ಮಯಜ್ಞ ಮಾಡಿದವರಿಗೇ ಇದು ಸಾಧ್ಯವಾಗುತ್ತಿರುತ್ತದೆ. ಶ್ರೀ ಅರವಿಂದರು ಮೊದಲೇ ಅಶಕ್ತರು. ಆದರೂ ದೇಹದ ಪರಿವೆಯಿಲ್ಲದೆ ಕಷ್ಟಕರವಾದ ಪ್ರವಾಸಗಳನ್ನು ಮಾಡಿ ಜನರಲ್ಲಿ ಜಾಗೃತಿಯನ್ನು ಮಾಡಿದರು. ಶ್ರೀ ಅರವಿಂದರಂತೆ ರಾಷ್ಟ್ರೀಯ ಪಕ್ಷದ ಎಲ್ಲ ಮುಖಂಡರೂ ಲೋಕಜಾಗೃತಿಯ ಕೆಲಸಕ್ಕೆ ಹತ್ತಿದರು. ಮಂದಪಕ್ಷದವರು ವೀರ ಪಕ್ಷದವರಿಂದ ಸಿಡಿದು ಹೋದದ್ದು ಸರಕಾರಕ್ಕೆ ಅನುಕೂಲವಾಯಿತು. ತರುಣ ಪಕ್ಷದ ಮಾರ್ಗಗಳು ಸೇರದಿದ್ದರೆ ಮಂದಪಕ್ಷದವರು ಸುಮ್ಮನೆ ಕೂಡ್ರಬೇಕಾಗಿತ್ತು. ಮಂದಪಕ್ಷದವರಿಗೆ ಹೇಗೆ ದೇಶದ ಹಿತವೇ ಸಾಧ್ಯವಾಗಿತ್ತೋ ಅದರಂತೆ ವೀರಪಕ್ಷದವರಿಗೂ ದೇಶದ ಕಲ್ಯಾಣವೇ ಬೇಕಾಗಿತ್ತು. ವೀರ ಪಕ್ಷದವರ ವಿರುದ್ಧ ಸಿಕ್ಕಸಿಕ್ಕ ಟೀಕೆಗಳನ್ನು ಬರೆದು ಮಂದ ಪಕ್ಷದವರು ಘೋರತರದ ಪಾಪಮಾಡಿದರು. ಕೆಲವು ಮಂದಪಕ್ಷದ ವೃತ್ತಪತ್ರಕಾರರು ವೀರಪಕ್ಷ ದವರೆಂದರೆ ಬಂಡುಗಾರರೆಂದು ಸಹ ಸಂಶಯ ತಕ್ಕೊಂಡರು! ಸರಕಾರಕ್ಕೆ ಬೇಕಾದದ್ದು ಇದೇ ಮಾತು. ಅದನ್ನು ನಮ್ಮ ಜನರೇ ಮಾಡಿಕೊಟ್ಟ ಬಳಿಕ ಅವರದೇನು ಹೋಗುತ್ತದೆ? ನಮ್ಮ ಜನರು ಚಾಡಿಬುರುಕರಾಗಿ ತಮ್ಮವರ ವಿರುದ್ಧವಾಗಿ ಅಧಿಕಾರಿಗಳ ಪ್ರೀತಿಯನ್ನು ಸಂಪಾದಿಸುವ ಇಚ್ಛೆಯಿಂದ ಹೇಡಿತನದ ಕೃತ್ಯವನ್ನು ಮಾಡಹತ್ತಿದರೆ ದೇಶಕ್ಕೆ ಊರ್ಜಿತಸ್ಥಿತಿಯು ಹೇಗೆ ಬರಬೇಕು? ಒಂದೇ ಹಡಗದಲ್ಲಿ ಕುಳಿತ ಜನರ ಹಾಗೆ ಹಿಂದುಸ್ತಾನ ವಾಸಿಗಳ ಸ್ಥಿತಿಯಿದೆ. ಹಿಂದೂ ಇರಲಿ, ಮುಸಲ್ಮಾನನಿರಲಿ, ಯಾರೇ ಇರಲಿ, ಪರಸ್ಪರರ ಹಿತವು ಪರಸ್ಪರರನ್ನೂ ಅವಲಂಬಿಸಿದೆ. ಹೀಗಿದ್ದು ತಾವು ಕುಳಿತ ಹಡಗಕ್ಕೆ ತೂತು ಕೆಡಹುವ ಆತ್ಮವಂಚಕ ಕೃತ್ಯವನ್ನು ಮಾಡಿದರೆ ಅದರಿಂದ ಯಾರ ಹಾನಿಯಾಗುವದು? ನಮ್ಮೊಳಗಿನ ಒಡಕಿನ ಲಾಭ ತಕ್ಕೊಂಡು ವೀರಪಕ್ಷದ ಮೇಲೆ ಸರಕಾರದವರು ಬಿಚ್ಚುಗತ್ತಿಯನ್ನೆತ್ತಿದರು.

ಅದು ಸರಕಾರದ ಅನುಕೂಲ ವೇಳೆ. ವೀರಪಕ್ಷವನ್ನು ಮುರಿಯಲಿಕ್ಕೆ ಮತ್ತೊಂದು ನೆವವೂ ಸಿಕ್ಕಿತು. ಶಾಂತತೆಯ ಮಾರ್ಗದಿಂದಲೇ ತಮ್ಮ ಇಚ್ಛಿತವನ್ನು ಸಾಧ್ಯಮಾಡಿಕೊಳ್ಳುವದೆಂದು ಮಂದಪಕ್ಷದವರಂತೆ ವೀರಪಕ್ಷದ ಮತವಿದೆ. ಇಂದಿನ ವರೆಗೆ ಆ ಮಾರ್ಗದಿಂದಲೇ ಅವರು ನಡೆಯುತ್ತ ಬಂದರು. ಆದರೂ ಸರಕಾರದವರು ಇಲ್ಲದ ಆರೋಪಗಳನ್ನು ಹೊರಿಸಿ ಜನರನ್ನು ಶಿಕ್ಷಿಸುವದನ್ನು ಕಂಡು ಕೆಲವು ತರುಣರ ತಲೆ ತಿರುಗಿತು. ಅವರಿಗೆ ವೀರಪಕ್ಷದ ಶಾಂತತೆಯ ಮಾರ್ಗವು ರುಚಿಸಲಿಲ್ಲ. ಶಸ್ತ್ರಧಾರಣದ ವಿನಾ ಕಾರ್ಯ

ಸಿದ್ಧಿಯಿಲ್ಲವೆಂದು ಗ್ರಹಿಸಿ ಈ ಜನರು ತಮ್ಮ ಉದ್ಯೋಗಕ್ಕೆ ಹತ್ತಿದರು. ಕದ್ದು ಮುಚ್ಚಿ ಕೆಲಸ ನಡೆಯಿತು. ಜೀವದ ಹಂಗು ಇಲ್ಲದ ಕೆಲವು ತಲೆ ತಿರುಕ ತರುಣರು ಬಾಂಬಿನ ಪ್ರಯೋಗದಿಂದ ಯುರೋಪಿಯನರ ಕೊಲೆಗಳನ್ನು ಮಾಡಹತ್ತಿದರು. ಇವರ ಈ ನಿಂದ್ಯಕರ್ಮದ ಫಲಗಳನ್ನು, ಪಾಪ ರಾಷ್ಟ್ರೀಯ ಪಕ್ಷದ ವೀರರು ಅನುಭವಿಸಬೇಕಾಯಿತು!

ಶ್ರೀ ಅರವಿಂದ ಘೋಷರು ಕಾಂಗ್ರೆಸ್ಸು ಮುಗಿಸಿಕೊಂಡು, ಪ್ರವಾಸ ಮಾಡಿ, ವ್ಯಾಖ್ಯಾನಗಳನ್ನು ಕೊಟ್ಟು, ಕಲಕತ್ತೆಗೆ ಬಂದು ಸ್ವಲ್ಪ ವಿಶ್ರಾಂತಿಯನ್ನು ತಕ್ಕೊಳ್ಳಹತ್ತಿದರು. ಅಷ್ಟರಲ್ಲಿ ಭಾವೀ ಗಂಡಾತರದ ಸುದ್ದಿಗಳು ಅವರ ಕಿವಿಯ ಮೇಲೆ ಬರಹತ್ತಿದವು. ಸಹಕಾರಿ ಭಗಿನಿಯಾದ ಸಿಸ್ಟರ್ ನಿವೇದಿತೆಯು ಶ್ರೀ ಅರವಿಂದರಿಗೆ ಎಲ್ಲಿಗಾದರೂ ಹೋಗಲಿಕ್ಕೆ ಆಗ್ರಹ ಮಾಡಿದಳು. ಆದರೆ, ತಾನು ನಿರ್ದೋಷಿಯಿರುವದರಿಂದ ಎಳ್ಳಷ್ಟೂ ಭಯಪಡುವದಿಲ್ಲ; ಬಂದದ್ದು ಬರಲಿ ಎಂದು ಸಂಕಟವನ್ನು ಎದುರುಗೊಳ್ಳಲಿಕ್ಕೆ ಸಿದ್ಧರಾದರು! ೧೯೦೮ನೆಯ ಇಸವಿಯು; ಅದು ದೇಶಿ ಚಳವಳಿಯ ಅತ್ಯುತ್ಕರ್ಷದ ಕಾಲ. ಅದರಂತೆ ಸರಕಾರದ ರೌಸಿನ ಕಾಲವಾದರೂ ಆಗಿತ್ತು. ಇಂದು ಯಾರ ಮೇಲೆ ಪೋಲೀಸರ ಕೃಪಾದೃಷ್ಟಿಯು ಬಿದ್ದು ಬಾಡಿಗೆಯಿಲ್ಲದ ಮನೆಯ ವಾಸವು ಲಭಿಸುವದೆಂಬ ನಿಯಮವಿದ್ದಿಲ್ಲ. ಮೈ ಕೈಯಿಂದ ಪುಷ್ಟವಾಗಿರುವದೂ ಈ ಕಾಲಕ್ಕೆ ಅಪರಾಧವಾಗಿತ್ತು. ಎಲ್ಲಿ ನೋಡಿದಲ್ಲಿ ಗುಪ್ತ ಪೋಲೀಸರು ಬೆರೆತುಕೊಂಡಿದ್ದರು. ಅವರಿಂದ ಅಪರಾಧಿ ನಿರಪರಾಧಿಗಳು ಕೂಡಿಯೇ ಗೋಳಾಡಿಸಲ್ಪಟ್ಟರು.

೧೯೦೮ನೆಯ ಇಸವಿಯ ಮೇ ತಿಂಗಳ ಎರಡು ದಿನಗಳು ಗತಿಸಿದ್ದವು. ಮೂರನೆಯ ದಿನದ ಆರಂಭವನ್ನು ಸೂಚಿಸಲಿಕ್ಕೆ ಭಗವಾನ್ ಸೂರ್ಯನಾರಾಯಣನು ಇನ್ನೂ ಕ್ಷಿತಿಜದ ಮೇಲೆ ಕೂಡ ಬಂದಿದ್ದಿಲ್ಲ. ಶ್ರೀ ಅರವಿಂದ ಬಾಬುಗಳು ಇನ್ನೂ ಹಾಸಿಕೆಯಲ್ಲಿದ್ದರು. ಅಷ್ಟರಲ್ಲಿ ರಾಜದೂತರು ಸಶಸ್ತ್ರರಾಗಿ ಶ್ರೀ ಘೋಷರವರ ಮನೆಯನ್ನು ಮುತ್ತಿದರು. ಮುಖ್ಯಾಧಿಕಾರಿಗಳು ಮನೆಯನ್ನು ಹೊಕ್ಕರು. ಒಬ್ಬ ಸಿಪಾಯಿಯು ಅಲ್ಲಿ ನಿಂತಿದ್ದ ಶ್ರೀ ಅರವಿಂದರ ತಂಗಿಯಾದ ಸರೋಜಿನಿಯ ಎದೆಗೆ ಪಿಸ್ತೂಲು ಆನಿಸಿದನು! ಪೋಲೀಸರು ಶಯನಗೃಹವನ್ನು ಹೊಕ್ಕು ಶ್ರೀ ಅರವಿಂದರನ್ನು ಹೆಡಮುಡಿಗಟ್ಟಿ ತಕ್ಕೊಂಡು ಹೋದರು!

ಮಝಫರಪುರದಲ್ಲಿ ಕೆಲವು ತಲೆತಿರುಕರು ಬಾಂಬಿನಿಂದ ಇಬ್ಬರು ಯುರೋಪಿಯನ್ ಸ್ತ್ರೀಯರನ್ನು ಕೊಂದಿದ್ದರು. ಇದರಲ್ಲಿ ಶ್ರೀ ಅರವಿಂದ ಘೋಷರ ಅಂಗವಿತ್ತೆಂದೂ, ದರೋಡೆಗಳಿಗೆ ಸಹಾಯ ಮಾಡುವರೆಂದೂ ಪೋಲಿಸರು ಸಂಬಂಧ ಜೋಡಿಸಿದರು. ಈ ಖೂನೀ ಪ್ರಕರಣದಲ್ಲಿ ಸುಮಾರು ಮೂವತ್ತೊಂಬತ್ತು ಜನ ಆರೋಪಿತರಿದ್ದರು. ಅವರಲ್ಲಿ ಕೆಲವರಿಗೆ ಮೊಗಮೀಸೆಗಳು ಸಹ ಒಡೆದಿದ್ದಿಲ್ಲ. ಸಣ್ಣವರೇನು, ದೊಡ್ಡವರೇನು, ಪೊಲೀಸರಿಗೆ ಯಾರ ಸಂಶಯ ಬಂತು, ಯಾರು ಚಳವಳಿಯಲ್ಲಿ ಹೆಚ್ಚಾಗಿ ಭಾಗ ತಕ್ಕೊಳ್ಳುವದು ಕಂಡು ಬರುತ್ತಿತ್ತು, ಅಂಥ ಎಲ್ಲರ ಸಂಬಂಧವನ್ನು ಒಂದಿಲ್ಲೊಂದು ತರದಿಂದ ಜೋಡಿಸಿ, ಅಪರಾಧಿ ನಿರಪರಾಧಿಗಳ ದೊಂದು ಹಿಂಡು ಕೋರ್ಟಿನ ಮುಂದೆ ನಿಲ್ಲಿಸಿದರು. ಮೇ ತಿಂಗಳ ೧೮ನೆಯ ತಾರೀಖಿಗೆ ನ್ಯಾಯ ವಿಚಾರಣೆಗೆ ಆರಂಭವಾಯಿತು. ಶ್ರೀ ಅರವಿಂದರನ್ನು ಅಲ್ಲಿಪುರದ ಜೇಲಿಗೆ ವೈದರು. ಅಲ್ಲಿ ಏಕಾಂತವಾಸದ ಶಿಕ್ಷೆಯನ್ನೂ ನ್ಯಾಯ ನಿರ್ಣಯವಾಗುವ ಮುಂಚಿತವಾಗಿಯೇ ಕೆಲವು ದಿನ ಅನುಭವಿಸಬೇಕಾಯಿತು!

ಆರಂಭಕ್ಕೆ ನ್ಯಾಯ ವಿಚಾರಣೆಯು ಅಲ್ಲಿಪುರದ ಮ್ಯಾಜಿಸ್ಟ್ರೇಟರಾದ ಮಿ. ಬಿರ್ಲೇ ಎಂಬವರ ಮುಂದೆ ನಡೆಯಿತು. ಕನ್ನಯ್ಯಾಲಾಲ ದತ್ತ ಮತ್ತು ಸತ್ಯೇಂದ್ರನಾಥ ಬೋಸ್ ಎಂಬೀರ್ವ ಆರೋಪಿಗಳು ಪೋಲಿಸರ ಮಾಫೀ ಸಾಕ್ಷಿದಾರನ ಕೊಲೆಯನ್ನು ಮಾಡಿದರು. ಅರ್ಥಾತ್ ಇವರಿಗೆ ದೇಹಾಂತ ಶಿಕ್ಷೆಯು ವಿಧಿಸಲ್ಪಟ್ಟಿತು. ಆದರೆ, ಸತ್ಯೇಂದ್ರನು ಹಾಯಕೋರ್ಟಿಗೆ ಅಪೀಲು ಮಾಡಿದ್ದರಿಂದ ಮೊದಲಿಗೆ ಕನ್ನಯ್ಯಾಲಾಲನ ದೇಹಾಂತ ಶಿಕ್ಷೆಯು ಅಮಲಿನಲ್ಲಿ ಬಂತು. ಕನ್ನಯ್ಯಾಲಾಲನ ಮೃತದೇಹಕ್ಕೆ ಅಗ್ನಿಸಂಸ್ಕಾರವನ್ನು ಮಾಡುವದಕ್ಕಾಗಿ ಪರವಾನಿಗಿ ಸಿಕ್ಕಿತು. ಜನರು ಆತನ ದೇಹವನ್ನು ಬಹು ಆದರದಿಂದ ದಹನ ಮಾಡಿದರು. ಸಾವಿರಾರು ಜನರು ಸೂತಕದ ವೇಷದಿಂದ ದಹನ ಭೂಮಿಗೆ ಹೋಗಿದ್ದರು. ಸುಗಂಧ ದ್ರವ್ಯಗಳ ಮಧ್ಯದಲ್ಲಿ ಆತನ ದೇಹವನ್ನಿಟ್ಟು ಪುಷ್ಪಮಾಲೆಗಳಿಂದ

ಸತ್ಕರಿಸಿ ಚಿತೆಯನ್ನು ಹೊತ್ತಿಸಿದರು. ಸತ್ಯೇಂದ್ರನ ಅಪೀಲು ರದ್ದು ಆಗಿ ಮೊದಲಿನ ಶಿಕ್ಷೆಯೇ ನಿಶ್ಚಿತವಾಯಿತು. ಈತನ ಮೃತಶರೀರಕ್ಕೆ ಅಗ್ನಿ ಸಂಸ್ಕಾರಮಾಡಲಿಕ್ಕೆ ಆಪ್ತರಿಗೆ ಪರವಾನಿಗಿಯು ಸಿಗಲಿಲ್ಲ! ಮಿ. ಬಿರ್ಲೆಯವರು ವಿಚಾರಣೆ ಮಾಡಿ ಒಬ್ಬ ಆರೋಪಿಯನ್ನು ದೋಷಮುಕ್ತವಾಗಿ ಮಾಡಿ, ಖಟ್ಲೆಯನ್ನು ಸೆಶನ್ ಕಮಿಟ್ ಮಾಡಿದರು.

ಶ್ರೀ ಅರವಿಂದ ಘೋಷರು ಲಕ್ಷ್ಮಿಯ ತ್ಯಾಗಮಾಡಿ ದಾರಿದ್ರ್ಯ ಲಕ್ಷ್ಮಿಯ ಪಾಣಿಗ್ರಹಣ ಮಾಡಿದ್ದರಿಂದ ಈ ಖಟ್ಲೆಯಕಾಲಕ್ಕೆ ಆರ್ಥಿಕ ಕೊರತೆಯುಂಟಾಯಿತು. ಬಾಬುಗಳವರು ಸೆರೆಮನೆಯಲ್ಲಿದ್ದುದರಿಂದ ಇತ್ತ ಹೊರಗೆ ಖಟ್ಲೆಯ ವ್ಯವಸ್ಥೆಯನ್ನು ಮಾಡಲಿಕ್ಕೆ ಯಾರೂ ಇಲ್ಲ! ಬ್ಯಾರಿಸ್ಟರುಗಳಿಗೆ ಕೊಡಲಿಕ್ಕೆ ದುಡ್ಡು ಇಲ್ಲದುದರಿಂದ ಅವರ ತಂಗಿಯಾದ ಸರೋಜಿನಿದೇವಿಯು ಚಿಂತೆಯಲ್ಲಿ ಬಿದ್ದಳು. ಆಗ ಸಾಮಾಜಿಕರಿಗೆ ಉದ್ದೇಶಿಸಿ ಅವಳೊಂದು ವಿನಂತಿ ಪತ್ರವನ್ನು ಪ್ರಕಟಿಸಿದ್ದಳು. ನಿಸ್ವಾರ್ಥಿಗಳೂ, ದೇಶಸೇವಕರೂ ಆದ ಅರವಿಂದ ಬಾಬುಗಳ ಕಾರ್ಯಕ್ಕೆ ಇಂಥ ಸಮಯದಲ್ಲಿ ಸಹಾಯ ಮಾಡಲಿಕ್ಕೆ ಒಲ್ಲದ ಪಾಪಿಯಾದರೂ ಯಾರು? ಮಗುವು ಸೃಷ್ಟಿಯನ್ನು ಕಂಡು ಆತ್ಮಭಾವವನ್ನು ಬಿಟ್ಟು ಆನಂದಿತವಿರುವ ವರೆಗೆ ಅದರ ಚಿಂತೆಯನ್ನು ಯಾರು ವಹಿಸುವರು? ಸ್ವಾರ್ಥಪರ ಭಾವನೆಯು ಹೆಚ್ಚಾಗುತ್ತ ನಡೆದಂತೆ ಪರರ ಜವಾಬುದಾರಿಯು ಕಡಿಮೆಯಾಗುತ್ತ ಹೋಗುವದು. ಇರಲಿ. ಸಾಕಷ್ಟು ದುಡ್ಡು ಕೂಡಿತು. ಹಾಗೂ ಶ್ರೀಯುತ ಸಿ.ಆರ್. ದಾಸರಂಥ ಅಗಾಧ ಕಾಯದೆ ಪಂಡಿತನು ಸ್ವಯಂಪ್ರೇರಣೆಯಿಂದ ದೇಶಸೇವಕ ಅರವಿಂದರನ್ನು ಉಳಿಸಿಕೊಳ್ಳಲಿಕ್ಕೆ ಒಂದು ಕಾಸು ಸಹ ತಕ್ಕೊಳ್ಳದೆ ಮುಂದೆ ಬಂದನು!

ಅಲಿಪುರದ ಸೆಶನ್ ಕೋರ್ಟಿನಲ್ಲಿ ಬೀಚ್‌ಕ್ರಾಫ್ಟ ಎಂಬ ನ್ಯಾಯಾಧೀಶರ ಮುಂದೆ ಈ ಖಟ್ಲೆಯು ನಡೆಯಿತು. ನ್ಯಾಯ ವಿಚಾರಣೆಗೆ ೨೩ನೆಯ ಅಕ್ಟೋಬರಕ್ಕೆ ಆರಂಭವಾಗಿ ಸರಕಾರದ ವತಿಯಿಂದ ಪ್ರಸಿದ್ಧ ಬ್ಯಾರಿಸ್ಟರರಾದ ನಾರ್ಟನ್ ಎಂಬವರಿದ್ದು ಅವರಿಗೆ ಆಶುತೋಷ ವಿಶ್ವಾಸ ಎಂಬವರು ಸಹಾಯ ಮಾಡುತ್ತಿದ್ದರು. ಸ್ವಯಂಸ್ಫೂರ್ತಿ ಯಿಂದ ಮುಂದೆ ಬಂದ ಶ್ರೀಯುತ ದಾಸರು ಶ್ರೀ ಅರವಿಂದರ ಪಕ್ಷವನ್ನು ವಹಿಸಿದ್ದರು. ಸರಕಾರೀ ವಕೀಲರಾದ ಆಶುತೋಷ ವಿಶ್ವಾಸ ಎಂಬವರಿಗೆ ಕೆಲವು ಗುಪ್ತ ಪತ್ರಗಳು ಬಂದವು. ಅವುಗಳಲ್ಲಿ, ಈ ಖಟ್ಲೆಗೆ ಆರೋಪಿಗಳ ವಿರುದ್ಧ ಸರಕಾರಕ್ಕೆ ಸಹಾಯ ಮಾಡಬಾರದೆಂದೂ, ಒಂದು ವೇಳೆ ಹಾಗೆ ಮಾಡಿದ್ದಾದರೆ ಜೀವಕ್ಕೆ ಎರವಾಗಬೇಕಾದೀತೆಂದೂ ಬರೆದಿತ್ತು. ಈ ಪತ್ರಗಳು ಬಂದ ನಂತರ ಕೆಲವು ದಿನಗಳು ಗತಿಸಿದವು. ಮುಂದೆ ೧೯೦೮ನೆಯ ಇಸವಿಯ ೧೮ನೆಯ ಫೆಬ್ರುವರಿಗೆ ಆಶುತೋಷರ ಕೊಲೆಯಾಯಿತು.

ಈ ಮಜಫರಪುರದ ಖೂನಿ ಖಟ್ಲೆಯು ಮುಂದೆ ಅನೇಕ ದಿವಸಗಳ ವರೆಗೆ ಸಾಗಿದರೂ ಶ್ರೀ ಅರವಿಂದರ ಆರೋಪದ ನಿರ್ಣಯವು ಇದೇ ಕೋರ್ಟಿನಲ್ಲಿ ಆಯಿತು. ೧೬ ದಿವಸಗಳವರೆಗೆ ಸರಕಾರದ ಪಕ್ಷವನ್ನು ನಾರ್ಟನರು ಮಂಡಿಸಿದರು. ಆದರೆ ಸಿ. ಆರ್. ದಾಸರು ೮ ದಿನಗಳ ತನಕ ಶ್ರೀ ಅರವಿಂದರ ಪಕ್ಷವನ್ನು ಮಂಡಿಸಿ ಸರಕಾರದ ಪಕ್ಷವನ್ನು ಸಪ್ರಮಾಣವಾಗಿ ಖಂಡಿಸಿದರು. ಶ್ರೀಯುತ ದಾಸರವರು ಈ ಕಾಲಕ್ಕೆ ಮಾಡಿದ ವಕ್ತೃತ್ವಪೂರ್ಣ ಭಾಷಣಗಳು ಭಾಷೆಯ ದೃಷ್ಟಿಯಿಂದಲೂ, ರಸಪರಿಪಾಕದ ದೃಷ್ಟಿಯಿಂದಲೂ ವಾಙ್ಮಯದಲ್ಲಿ ಅಜರಾಮರವಾಗಿ ಉಳಿಯುವಂತಿವೆ. ಅಸ್ಸೆಸರರು ಎರಡೂ ಪಕ್ಷಗಳನ್ನು ಕೇಳಿಕೊಂಡು ವಿಚಾರಮಾಡಿ ಶ್ರೀಅರವಿಂದ ಬಾಬುಗಳು ನಿರಪರಾಧಿಗಳೆಂದು ತಮ್ಮ ಅಭಿಪ್ರಾಯವನ್ನಿತ್ತರು. (೧೩ನೆಯ ಏಪ್ರಿಲ್ ೧೯೦೯). ನ್ಯಾಯಾಧೀಶರು ಮುಂದೆ ಒಂದು ತಿಂಗಳ ವರೆಗೆ ಮೌನಧಾರಣ ಮಾಡಿ ಮೇ ತಿಂಗಳಲ್ಲಿ ಶ್ರೀ ಅರವಿಂದರವರು ಪೂರ್ಣ ನಿರ್ದೋಷಿಗಳೆಂದು ತೀರ್ಪುಕೊಟ್ಟರು! ಈ ಖಟ್ಲೆಯ ಉಳಿದ ಕೆಲವು ಆರೋಪಿಗಳು ಹಾಯಕೋರ್ಟಿಗೆ ಕಳಿಸಲ್ಪಟ್ಟರು, ಅಲ್ಲಿ ಅವರ ನ್ಯಾಯವಿಚಾರಣೆಯಾಗಿ ಹದಿನಾಲ್ಕು ಮಂದಿ ಮಾತ್ರ ದೋಷಿಗಳೆಂದು ನಿರ್ಣಯವಾಯಿತು! ಎತ್ತ ೩೯ ಜನರು, ಎತ್ತ ೧೪ ಜನರು! ಯಾರ ಪಾಪವನ್ನು ಯಾರು ಅನುಭವಿಸಬೇಕು?

ಶ್ರೀ ಅರವಿಂದ ಬಾಬುಗಳಂಥ ಧಾರ್ಮಿಕ ವೃತ್ತಿಯ ಸಜ್ಜನರು ಕೊಲೆಗಳಂಥ ಹೇಡಿ ಕೃತ್ಯಗಳಿಗೆ ಎಂದಾದರೂ ಅನುಕೂಲವಿರುವದುಂಟೇ? ಸುಳ್ಳು ಆರೋಪದ ಸಲುವಾಗಿ ಒಂದು ವರುಷದ ವರೆಗೆ

ಕಾರಾಗೃಹವಾಸವನ್ನು ಸುಮ್ಮಸುಮ್ಮನೆ ಅನುಭವಿಸಬೇಕಾಯಿತು. ಸೆರೆಮನೆಯಿಂದ ಬಂದ ಬಳಿಕ ಶ್ರೀ ಅರವಿಂದರು ಆಪ್ತರಾದ ಕೃಷ್ಣಕುಮಾರ ಘೋಷರಲ್ಲಿ ವಿಶ್ರಾಂತಿಯನ್ನು ತಕ್ಕೊಡರು. ಶ್ರೀ ಅರವಿಂದ ಘೋಷರ ಆಗಮನದಿಂದ ರಾಷ್ಟ್ರೀಯ ಪಕ್ಷದ ಜನರಿಗೆ ಹೇಳಲಾರದಷ್ಟು ಆನಂದವಾಯಿತು. ಯಾಕಂದರೆ ಲೋಕಮಾನ್ಯ ತಿಲಕರೇ ಮುಂತಾದ ವೀರಪಕ್ಷದ ಅಧ್ವರ್ಯುರುಗಳು ಸರಕಾರದ ಆತಿಥ್ಯವನ್ನು ಸ್ವೀಕರಿಸಲಿಕ್ಕೆ ಕಾರಾಗೃಹಕ್ಕೆ ಹೋಗಿದ್ದರು. ವೀರಪಕ್ಷದ ಅನುಯಾಯಿಗಳಿಗೆ ಮಾರ್ಗದರ್ಶಕರಾರೂ ಉಳಿದಿದ್ದಿಲ್ಲ. ದಳವಾಯಿಯನ್ನು ಕಳಕೊಂಡ ಸೈನ್ಯದಂತೆ ಸ್ಥಿತಿಯಾಗಿತ್ತು; ಯಾರ ಧ್ವಜದ ಕೆಳಗೆ ಏಕತ್ರರಾಗಬೇಕು, ಯಾರ ಆಜ್ಞೆಗಳನ್ನು ಮನ್ನಿಸಿ ಕಾರ್ಯ ಮಾಡಬೇಕೆಂಬದು ತಿಳಿಯದ ಕಾರಣ ಅವರು ಗೊಂದಲದಲ್ಲಿ ಬಿದ್ದಿದ್ದರು. ಇಂಥ ಸಮಯದಲ್ಲಿ ಶ್ರೀ ಅರವಿಂದರು ಬಂದುದರಿಂದ ದೇಶಕ್ಕೆ ಹೇಗೆ ತಾನೇ ಆನಂದವಾಗದೆ ಇದ್ದೀತು? ಶ್ರೀ ಅರವಿಂದರು ದೋಷಮುಕ್ತರಾದ ಸುದ್ದಿಯು ತಂತಿಯಿಂದ ದೇಶದಲ್ಲೆಲ್ಲ ಪಸರಿಸಿತು. ಹಲವು ಕಡೆಗೆ ದೊಡ್ಡ ದೊಡ್ಡ ಸಭೆಗಳಾಗಿ, ಜನರು ತಮ್ಮ ಆನಂದವನ್ನು ವ್ಯಕ್ತಪಡಿಸಹತ್ತಿದರು. ಸರಕಾರಕ್ಕೆ ಬೇಡಾದ ಮನುಷ್ಯನ ವಿಷಯಕ್ಕೆ ಆದರವನ್ನು ವ್ಯಕ್ತಪಡಿಸುವದು ಕೂಡ ಆ ಕಾಲಕ್ಕೆ ಬಲು ಬಿಗಿಯಾಗಿತ್ತು. ಆದರೆ, ಜನರ ಅಂತಃಕರಣಗಳು ಉಕ್ಕೇರಿದವು. ಹುಣ್ಣಿಮೆಯ ದಿನ ಮೋಡಗಳು ಸಮುದ್ರಕ್ಕೆ ಉಕ್ಕು ಬರಬಾರದೆಂದು ಅಡ್ಡ ಬರುವ ಕ್ಷುಲ್ಲಕ ಪ್ರಯತ್ನಗಳನ್ನು ಮಾಡಿದರೂ ಅದರ ಉಪಯೋಗ ವೇನಾಗಬೇಕಾಗಿದೆ?

ಯೋಗಸಾಧನ

ಯೋಗೀ ಯುಂಜೀತ ಸತತಂ ಆತ್ಮಾನಂ ರಹಸಿ ಸ್ಥಿತಃ
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್‌ಯೋಗೀ ಭವಾರ್ಜುನ।

-ಭಗವದ್ಗೀತೆ ೬-೧೦,೪೬

ಪಿತಾಮಹ ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯ ಕೆಳಗೆ ಆದ ರಾಷ್ಟ್ರೀಯ ಸಭೆಯಲ್ಲಿ ನಿಶ್ಚಿತವಾದ ಸ್ವರಾಜ್ಯದ ಧ್ಯೇಯವನ್ನು ಪೂರ್ಣಮಾಡಲಿಕ್ಕೆ ವೀರಪಕ್ಷವು ಆತ್ಮಯಜ್ಞವನ್ನು ಮಾಡಿತು. ಆದರೆ, ವೀರಪಕ್ಷದ ಅನುಕರಣವನ್ನು ಇತರರು ಮಾಡಲಿಲ್ಲ. ಶ್ರೀ ಭಗವತೀ ಸ್ವಾತಂತ್ರ್ಯತಾದೇವಿಯ ಉಪಾಸನೆಯು ಸಹಜವಾದ ಮಾತಲ್ಲ. ಭಕ್ತರಿಗೆ ಪ್ರಸನ್ನಳಾಗುವ ಮುಂಚೆ ಅವಳು ಅವರ ಪರೀಕ್ಷೆ ಮಾಡುವಳು. ಸ್ವರಾಜ್ಯಾಮೃತವನ್ನು ಸಂಪಾದಿಸಲಿಕ್ಕೆ ರಾಜಕಾರಣೋದಧಿಯ ಮಂಥನವು ಭರದಿಂದ ನಡೆಯಿತು. ಅಮೃತಸಿದ್ಧಿಯಾಗುವ ಮೊದಲು ಹಾಲಾಹಲವು ಸತ್ವಪರೀಕ್ಷಣೆಗಾಗಿ ಹೊರಬೀಳುತ್ತಿರುತ್ತದೆ. ವಿಶ್ವಾಮಿತ್ರನ ತಪಶ್ಚರ್ಯಕ್ಕೆ ಮಧ್ಯದಲ್ಲಿ ಅನೇಕ ವಿಘ್ನಗಳು ಬಂದವು. ಅರ್ಜುನನಿಗೆ ಪಾಶುಪತಾಸ್ತ್ರವನ್ನು ದೊರಕಿಸುವ ಮೊದಲು ಶಬರ ವೇಷಧಾರಿಯಾದ ಶಂಕರನಿಂದ ಮೈಮುರಿ ಥಳಿಸಿಕೊಳ್ಳಬೇಕಾಯಿತು. ಅಂತೂ ಯಾವದೊಂದು ಮಹಾಕಾರ್ಯದ ಸಿದ್ಧಿಯಾಗುವ ಮುಂಚೆ ಮಧ್ಯದಲ್ಲಿ ಸಂಕಟಗಳು ಬರುವದು ನಿಶ್ಚಿತವಾದದ್ದು. ಈ ಸಂಕಟಗಳಿಗೆ ಸಾಧಕನು ಭಯಪಟ್ಟು ಮಾರ್ಗಬಿಟ್ಟರೆ ಸಿದ್ಧಿಯು ದೊರೆಯಲಾರದು. ಸತ್ವಗೆಡದೆ ಬಂದುದನ್ನು ಸಹಿಸಿ ತನ್ನ ಧ್ಯೇಯದ ಕಡೆಗೆ ಲಕ್ಷ್ಯವಿಟ್ಟು ಕಾರ್ಯ ಮಾಡಿದರೆ ಯಾವದು ತಾನೇ ಅಸಾಧ್ಯವು? ಸ್ವರಾಜ್ಯಕಾಂಕ್ಷಿಗಳಾದ ಭಾರತೀಯರ ಸತ್ವಪರೀಕ್ಷೆಯ ಕಾಲವು ಬಂತು. ಅವರು ಪರೀಕ್ಷೆಯಲ್ಲಿ ಪೂರ್ಣವಾಗಿ ತೇರ್ಗಡೆ ಹೊಂದಲಿಲ್ಲ. ಜಗತ್ತಿನಲ್ಲಿ ಬಿತ್ತಿದ್ದನ್ನು ಬೆಳಕೊಳ್ಳಬೇಕೆಂಬ ನ್ಯಾಯವಿದೆ. ಪೇಟೆಯಲ್ಲಿ ಒಂದು ಆಣೆಯನ್ನು ಕೊಟ್ಟು ನಾಲ್ಕು ಆಣೆಯ ಜೀನಸವನ್ನು ಬೇಡಿದರೆ ಹೇಗೆ ಸಿಕ್ಕೀತು? ಸ್ವಾತಂತ್ರ್ಯದೇವಿಯ ಪರೀಕ್ಷೆಯಲ್ಲಿ ಪೂರ್ಣವಾಗಿ ಪಾಸಾಗದ್ದರಿಂದ ಅವರ ಗುಣಕ್ಕೆ ತಕ್ಕಂತೆ ಅಷ್ಟೇ ಫಲವು ದೊರೆಯಿತು; ಮೋರ್ಲೆ-ಮಿಂಟೋ ಸುಧಾರಣೆಗಳಂಥ ದೀಡ-ದಮಡಿಯ ಬೆಲೆಯ ಸುಧಾರಣೆಗಳು ಅಮಲಿನಲ್ಲಿ ಬಂದವು. ಆಸೆಬುರುಕ ಮಂದ ಪಕ್ಷದವರು ಇಂಥ ಗೀಳು ಸುಧಾರಣೆಗಳನ್ನು ಅಮಚಿಕೊಂಡರು. ವೀರಪಕ್ಷದವರು ಅವುಗಳನ್ನು ತಿರಸ್ಕರಿಸಿ ತಮ್ಮ ಇಷ್ಟಧ್ಯೇಯದ ಕಡೆಗೆ ಸಾಗಿದರು. ಆದರೆ ಸರಕಾರದವರು ಇವರ ಬೆನ್ನು ಬಿಡಲಿಲ್ಲ.

ದೇಶದಲ್ಲಿ ವೀರಪಕ್ಷದ ಮುಖಂಡರನ್ನು ಉಳಿಯಗೊಡುವಂತಿಲ್ಲೆಂಬ ಹಟ ತೊಟ್ಟಂತೆ ಸರಕಾರದ ಕೃತಿಯು ನಡೆಯಿತು. ಲೋಕಮಾನ್ಯರಿಗೆ ಆರು ವರ್ಷದ ಶಿಕ್ಷೆಕೊಟ್ಟು ಮಂಡಲೆಗೆ ಕಳಿಸಿದರು. ಲಜಪತರಾಯರು

ಗಡಿದಾಟಿಸಲ್ಪಟ್ಟರು. ಬಿಪಿನಚಂದ್ರಪಾಲರು ಶಿಕ್ಷೆಯನ್ನು ಅನುಭವಿಸಿ ಬಂದನಂತರ ಇಲ್ಲಿರುವದರಿಂದ ಕಾರ್ಯಕ್ಕೆ ಅನುಕೂಲವಾಗುವದಿಲ್ಲೆಂದು ಇಂಗ್ಲಂಡಕ್ಕೆ ಪಯಣ ಬೆಳಿಸಿದರು. ತಲೆತಿರುಕ ತರುಣರ ಮೂರ್ಖತನದ ಕೃತಿಗಳಿಂದ ವೀರಪಕ್ಷದ ಮುಖಂಡರನ್ನು ಹಿಡಿಯಲಿಕ್ಕೆ ಸರಕಾರಕ್ಕೆ ಅನುಕೂಲವಾಯಿತು. ಮುಂದಾಳುಗಳ ಅವಸ್ಥೆಯು ಹೀಗಾದ ಬಳಿಕ ಅನುಯಾಯಿ ವರ್ಗದ ಬೊಗಳೆ ಎಷ್ಟೆಂದು ಹೇಳಬೇಕು? ಶ್ರೀ ಅರವಿಂದ ಘೋಷರು ಕಾರಾಗೃಹದಿಂದ ಬರುವಷ್ಟರಲ್ಲಿ ಇಷ್ಟೆಲ್ಲ ಸ್ಥಿತಿಯಾಗಿತ್ತು. ದೇಶದಲ್ಲಿ ಎಲ್ಲ ಕಡೆಗೆ ಘೋರ ಶಾಂತತೆಯು ಪಸರಿಸಿತ್ತು. ವಂದೇ ಮಾತರಂದ ಪ್ರಣವೋಚ್ಚಾರವನ್ನು ಮಾಡಲಿಕ್ಕೆ ಜನರು ಅಂಜಹತ್ತಿದ್ದರು. ೧೯೦೯ರಲ್ಲಿ ಕಾರಾಗೃಹದಿಂದ ಬಂದ ಬಳಿಕ ಶ್ರೀ ಅರವಿಂದರ ಕಡೆಗೆ ಇಡೀ ಹಿಂದುಸ್ತಾನದ ವೀರಪಕ್ಷದ ಮುಖಂಡತನವು ಬಂತು; ಈ ಜವಾಬುದಾರಿಯ ಸ್ಥಾನಕ್ಕೆ ತಕ್ಕಂತೆ ಉತ್ಸಾಹದಿಂದ ಕಾರ್ಯಕ್ಕೆ ಆರಂಭಿಸಿದರು. ಕರ್ಮಯೋಗಿನ್ ಎಂಬ ವಾರಪತ್ರಿಕೆಯಲ್ಲಿ ಲೇಖನಗಳನ್ನು ಬರೆಯಹತ್ತಿದರು. ದೇಶದಲ್ಲಿ ತಿರುಗಾಡಿ ರಾಷ್ಟ್ರಧರ್ಮದ ಗೀತೋಪದೇಶ ಮಾಡಹತ್ತಿದರು. ಶ್ರೀ ಅರವಿಂದರು ಹೋದ ಸಭೆಗಳಿಗೆ ಹಾಜರಿರಲಿಕ್ಕೆ ಮಂದಪಕ್ಷದ ಜನರು ಅಂಜಹತ್ತಿದರು. ಕೆಲವು ಪ್ರೆಸ್ಸಿನವರು ಇವರ ವ್ಯಾಖ್ಯಾನಗಳನ್ನು ಮುದ್ರಿಸಲಿಕ್ಕೆ ಬೆದರಹತ್ತಿದರು! ಸೋಡಚೀಟಿ, ಆಮಲದಾರರ ಮುಕ್ಕಾಮಗಳನ್ನು ಮುದ್ರಿಸಲಿಕ್ಕೆ ಸವಿಗಲಿತಂಥ, ಹೊಟ್ಟೆಗಾಗಿ ಪ್ರೆಸ್ಸು-ಪತ್ರಿಕೆಗಳನ್ನು ನಡಿಸುವಂಥ ಜನರು ಶ್ರೀ ಅರವಿಂದಘೋಷರ ತೇಜಸ್ವಿಗಳಾದ ವಿಚಾರಗಳನ್ನು ಮುದ್ರಿಸಲಿಕ್ಕೆ ಹೇಗೆ ಧೈರ್ಯಗೊಂಡಾರು? ಜನರು ತಮ್ಮ ಕರ್ತವ್ಯವನ್ನು ಮರೆತರೂ ಶ್ರೀ ಅರವಿಂದರು ಎದೆಗುಂದದೆ ಅವ್ಯಾಹತವಾಗಿ ಕಾರ್ಯವನ್ನು ನಡಿಸಿದರು. ಸರಕಾರದಿಂದ ಪ್ರೇರಿತರಾದ ಚಾಡಿಬುರುಕ ಚಾರರು ನೆಳಲಿನಂತೆ ಅರವಿಂದರ ಬೆನ್ನು ಬಿಡಲಿಲ್ಲ. ಆದರೆ ಇದಕ್ಕೆ ಸೊಪ್ಪು ಹಾಕದೆ ಶ್ರೀ ಅರವಿಂದರು ಕಾರ್ಯತತ್ಪರರಾಗಿದ್ದರು.

ಆದರೆ, ಶ್ರೀ ಅರವಿಂದರ ಇತ್ತಿತ್ತಲಾಗಿನ ಕರ್ತವ್ಯಗಳ ಭಾವನೆಯಲ್ಲಿ ರಾಜಕಾರಣದಕ್ಕಿಂತಲೂ ಧರ್ಮದ ಪ್ರಮಾಣವು ಬಹಳ ಹೆಚ್ಚಿತ್ತು. ರಾಜಕಾರಣವನ್ನು ಧಾರ್ಮಿಕ ದೃಷ್ಟಿಯಿಂದ ನಡೆಸಬೇಕೆಂದು ಮನಗಂಡು ಅವರು ಹಾಗೆ ಉಪದೇಶಿಸಹತ್ತಿದರು. ಸೆರೆ ಮನೆಯಿಂದ ಬಂದ ಕೂಡಲೆ ಉತ್ತರಪಾರಾದಲ್ಲಿ ಆದ ಉಪನ್ಯಾಸದಲ್ಲಿ ಶ್ರೀ ಅರವಿಂದರು ತಮಗೆ ಕಾರಾಗೃಹದಲ್ಲಿ ಶ್ರೀ ವಾಸುದೇವನ ದರ್ಶನವಾಯಿತೆಂದೂ, ಆತನು ತಮಗೊಂದು ಆದೇಶವನ್ನಿತ್ತನೆಂದೂ ಪ್ರಕಟಿಸಿದರು. ಕೆಲವು ನಾಸ್ತಿಕರಿಗೆ ಇದೊಂದು ಟೀಕೆಯ ವಿಷಯವೇ ಆಯಿತು.

ಯಾವದೊಂದು ವಿಷಯದ ಮೇಲೆ ಅಭಿಪ್ರಾಯವನ್ನು ಕೊಡುವವರು ಆ ವಿಷಯದಲ್ಲಿ ತಜ್ಞರಿರಬೇಕಾಗುತ್ತದೆ. ಗಣಿತವರಿಯದ ಮೂಢನು ಆ ಶಾಸ್ತ್ರದ ಮೇಲೆ ಮತಕೊಟ್ಟರೆ ಅದಕ್ಕೆ ಬೆಲೆ ಎಷ್ಟು ಬಂದೀತು? ಧಾರ್ಮಿಕ ವಿಚಾರಗಳ ಮೇಲೆ ಮತವನ್ನು ಕೊಡಬೇಕಾದರೆ ಯೋಗ್ಯತೆ ಬೇಕಾಗುತ್ತದೆ. ಶ್ರೀ ಅರವಿಂದರವರಿಗೆ ಭಗವಾನ್ ವಾಸುದೇವನ ದರ್ಶನವಾದುದರ ಮೇಲೆ ಕೆಲಜನರು ಟೀಕೆ ಮಾಡಹತ್ತಿದರು. ಆದರೆ, ಅದರಲ್ಲಿ ಹುರುಳು ಇದ್ದಿಲ್ಲ. ಶ್ರೀ ಅರವಿಂದರವರಿಗೆ ಪರಮಾತ್ಮನು ಪ್ರತ್ಯಕ್ಷನಾಗಿದ್ದರೆ ಅದರಲ್ಲಿ ಆಶ್ಚರ್ಯವೇನು? ಯಾಕೆಂದರೆ, ಅವರು ೧೯೦೫ರಿಂದ ಈ ಸಾಧನ ಮಾರ್ಗದಲ್ಲಿದ್ದರು. ತಮ್ಮ ಪತ್ನಿಯಾದ ಮೃಣಾಲಿನಿ ದೇವಿಗೆ ೧೯೦೫ರಲ್ಲಿ ಬರೆದ ಪತ್ರದೊಳಗೆ, ಅವರು ತಮಗೆ ದೇವರನ್ನು ಕಾಣುವ ಹುಚ್ಚು ಹಿಡಿದಿರುವದೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ದೇವರನ್ನು ಕಂಡುಕೊಳ್ಳದೆ ಬಿಡಲಿಕ್ಕಿಲ್ಲೆಂಬ ಇವರ ಹಟವು ೧೯೦೯ರವರೆಗೆ ಅಂದರೆ ೪-೫ ವರುಷಗಳವರೆಗೆ ಸತತವಿದ್ದು ಅದರಲ್ಲಿ ಯಶಸ್ಸು ಸಿಕ್ಕಿದ್ದರೆ ಅಚ್ಚರಿಯಾವುದು? ಮನಸ್ಸು ಕಾಮಕ್ರೋಧಾದಿ ವಿಷಯಗಳಿಂದ ದೂಷಿತವಾಗಿದ್ದಾಗ ಅದಕ್ಕೆ ಪರಮೇಶ್ವರೀ ಸಂದೇಶವನ್ನು ಕಂಡುಹಿಡಿಯುವ ಸಾಮರ್ಥ್ಯವಿರುವದಿಲ್ಲ. ದೇವದರ್ಶನವಾಗುವದಿಲ್ಲ. ಕನ್ನಡಿಯ ಮೇಲಿನ ಧೂಳು ತೆಗೆದ ಹೊರ್ತು ಅದರಲ್ಲಿ ಪ್ರತಿಬಿಂಬವು ಕಾಣುವದಿಲ್ಲ. ಸರೋವರವು ಅಲ್ಲೋಲ ಕಲ್ಲೋಲವಾಗಿ ನೀರು ಕದಡಿ ಕಶ್ಮಲವಾಗಿದ್ದರೆ ತಳವು ಕಾಣುವ ಬಗೆ ಹೇಗೆ? ಶಾಂತವಾಗಿದ್ದಾಗ ತಿಳಿಗೊಳದ ಬುಡವು ಉತ್ತಮ ರೀತಿಯಿಂದ ತೋರುವದು. ಮನಸ್ಸಾಗರವು ನಾನಾತರದ ವಿಚಾರಗಳ ಆಘಾತಗಳಿಂದ ಅಲ್ಲೋಲ ಕಲ್ಲೋಲವಾಗುತ್ತಿರಲು ಈಶದರುಶನವಾಗುವ ಸಂಭವವೆಂತು?

ಈ ವಿಷಯಕ್ಕೆ "Yogic Sadhan" ಎಂಬ ಚಿಕ್ಕ ಪುಸ್ತಕದಲ್ಲಿ ಒಬ್ಬ ಯೋಗಿಯು ಅನುಭವದಿಂದ ಬರೆದಿರುವದೇನಂದರೆ:—

> Animals think with their Manas, and animals are not able to form ideas that do not relate themselves to some image, form, sound, smell, touch, taste etc. They are bound by their sensations. That is why in animals the Buddhi is dormant, so far as it acts behind the voil...."I saw that" "I heard that" therefore it is true, that is the reasoning of the Manas. That is why people who have poorly developed Buddhi, attach so much importance to what they have seen or read. "I have seen it in print" says the just literate man, and he thinks he has closed the argument...........While it (Manas) is busy, knowledge is impossible. "You can get only fragments of knowledge. That is true, and the quiet is no doubt essential to the yogin...........That is why the Vedant attaches so much importance to samadhi.

ಶ್ರೀ ಅರವಿಂದರು ಬಡೋದೆಯಿಂದ ಹೊರಬಿದ್ದ ಬಳಿಕ ವಿಷಯಜಾಲದಿಂದ ಮುಕ್ತರಾಗಿದ್ದರು. ಯುಕ್ತಾಹಾರ ವಿಹಾರಗಳಿಂದ ಸಾಧನೆಯನ್ನು ನಡೆಸಿದ್ದರು. ಬುದ್ಧಿಯನ್ನು ಶುದ್ಧೀಕರಿಸಲಿಕ್ಕೆ ಪರಿಶ್ರಮಪಡುತ್ತಿದ್ದರು. ಕಾರಾಗೃಹಕ್ಕೆ ಹೋದ ಬಳಿಕ ಅನಾಯಾಸವಾಗಿ ಸಿಕ್ಕ ಏಕಾಂತದ ಉಪಯೋಗವನ್ನು ತಮ್ಮ ಇಷ್ಟದಂತೆ ಮಾಡಿಕೊಳ್ಳಹತ್ತಿದರು. ಇದರಿಂದ ಅವರ ಶಕ್ತಿಯು ವೃದ್ಧಿಂಗತವಾಗಿ ಇಷ್ಟ ಸಾಧ್ಯವಾಗಿದ್ದರೆ ಅಜ್ಞಾನೀ ಜನರು ಅದಕ್ಕೆ ಹೆಸರಿಡುವ ಕಾರಣವೇನು? ಶ್ರೀ ಅರವಿಂದರು ತಮ್ಮ ಪತ್ನಿಗೆ ಬರೆದ ಮತ್ತೊಂದು ಪತ್ರದಲ್ಲಿ ಬರೆದುದೇನಂದರೆ: "ಶಾಸ್ತ್ರಗಳಲ್ಲಿ ಹೇಳಿದ ಮಾರ್ಗದಂತೆ ನಡೆದಿರಲು ಹಾದಿಯಲ್ಲಿ ಹತ್ತುವ ಕೆಲವು ಸಂಗತಿಗಳ ಅನುಭವವು ನನಗೆ ಬರಹತ್ತಿದೆ; ಇದೇ ಕ್ರಮವನ್ನು ಮುಂದೆ ನಡೆಸಿದರೆ ನನಗೆ ಸಿದ್ಧಿಯು ಸಿಗಲಿಕ್ಕೆ ಬೇಕು." ಶುದ್ಧಮನಸ್ಸಿನಿಂದ ಜಗತ್ತಿನ ಗೂಢ ರಹಸ್ಯವನ್ನು ತಿಳಿಯಲಿಕ್ಕೆ ಬರುತ್ತದೆ. ಅದೇ ಯೋಗಿಕ ಸಾಧನವೆಂಬ ಪುಸ್ತಕದಲ್ಲಿ ಸಹ ಈ ವಿಷಯಕ್ಕೆ ಬರೆದುದೇನೆಂದರೆ.

> "The proof of that you can get daily, when the yogic power is developed....... Man can see with his Buddhi the truth about a thing he has never seen or known before."

ಸತ್ಯಜ್ಞಾನವು ಪೂರ್ಣ ಶುದ್ಧ ಮನಸ್ಕನಿಗೇ ಆಗುತ್ತದೆ. ಪರಮೇಶ್ವರನ ಆದೇಶವನ್ನು ತಿಳಿಯುವ ಸಾಮರ್ಥ್ಯವೂ ಇಂಥವನಿಗೇ ಇರುತ್ತದೆ. ಆ ಯೋಗಿಕ ಸಾಧನದಲ್ಲಿ ಇನ್ನೊಂದು ಕಡೆಗೆ ಹೇಳಿರುವದೇನಂದರೆ:

> "Only the shuddha can safely rely on having this kind of Adesh, Ashuddha yogin often mistakes his own imaginations, emotions or even desires for the Adesha."

ಪರಮೇಶನ ಆದೇಶ ಗ್ರಹಣ ಮಾಡಿ ಕಾರಾಗೃಹವಾಸದಿಂದ ಹೊರಬಿದ್ದ ಶ್ರೀ ಅರವಿಂದ ಯೋಗಿಗಳು ನೂತನ ಉತ್ಸಾಹದಿಂದ ಕಾರ್ಯಕ್ಕೆ ಹತ್ತಿದರು; ಲೋಕಮಾನ್ಯಾದಿಗಳನ್ನು ಒಂದಿಲ್ಲೊಂದು ತರದಿಂದ ಭರತ ಖಂಡದ ರಂಗಭೂಮಿಯ ಮೇಲಿಂದ ಅದೃಶ್ಯಮಾಡಿ ಕೃತಾರ್ಥವಾದ ಸರಕಾರವು ಅರವಿಂದ ಯೋಗಿಗಳ ಮೇಲೆ ಒಗೆದ ಬಲೆ ತಪ್ಪಿದ್ದನ್ನು ಕಂಡು, ಬಹಳ ವಿಷಾದಪಟ್ಟಿರಬಹುದು. ಅರವಿಂದ ಯೋಗಿಗಳು ರಾಷ್ಟ್ರಕಾರ್ಯವನ್ನು ಆಜನ್ಮಪರ್ಯಂತರ ನಡೆಸುವದನ್ನು ನಿಶ್ಚಯಿಸಿದಂತೆ ಸರಕಾರದವರು ರಾಷ್ಟ್ರಕಾರ್ಯದಲ್ಲಿ ಕಡೆತನಕ ಕಲ್ಲು

ಹಾಕುವದನ್ನು ಗೊತ್ತು ಮಾಡಿದ್ದರು. ಆರೋಪದಿಂದ ಮುಕ್ತರಾಗಿ ಪುಟಕೊಟ್ಟ ಬಂಗಾರದಂತೆ, ಕೆಚ್ಚಿದ ವಜ್ರದ ಹಾಗೆ ಪ್ರಕರ್ಷಿತ ತೇಜಸ್ಸುಳ್ಳವರಾಗಿ ಶ್ರೀಅರವಿಂದ ಯೋಗಿಗಳು ಮತ್ತೆ ಕಾರ್ಯಕ್ಕೆ ಹತ್ತಿದ್ದನ್ನು ಕಂಡು ಅಧಿಕಾರಿಗಳಿಗೆ ಹೊಟ್ಟೆ ಕಡತವು ಎದ್ದಿತು. ಏನಾದರೊಂದು ನೆವವನ್ನು ಹುಡುಕುತ್ತಿದ್ದ ಅಧಿಕಾರಿಗಳಿಗೆ ಅದು ಸಿಗಲಿಕ್ಕೆ ತಡವಾಗಲಿಲ್ಲ. ಕರ್ಮಯೋಗಿನ್‌ದ ೧೯೦೯ ನೆಯ ಇಸವಿಯ ದಿಶಂಬರ ತಿಂಗಳ ೫ನೇ ತಾರೀಖಿನ ಸಂಚಿಕೆಯಲ್ಲಿ ಬರೆದ ಲೇಖವು ಆಕ್ಷೇಪಾರ್ಹವೆಂದು ಸಂಶಯ ತಕ್ಕೊಂಡು ಶ್ರೀ ಅರವಿಂದ ಯೋಗಿಗಳನ್ನು ಹಿಡಿಯುವದಕ್ಕಾಗಿ ೧೯೧೦ರ ಮಾರ್ಚ ತಿಂಗಳಲ್ಲಿ ವಾರಂಟು ಹುಟ್ಟಿತು!

ಮಂದಪಕ್ಷದವರು ಸರಕಾರದ ಪಕ್ಕದಲ್ಲಿ ಸೇರಿಕೊಂಡುದರಿಂದಲೂ, ಮುಸಲ್ಮಾನರು ರಾಜಕಾರಣದಲ್ಲಿ ಅಷ್ಟೊಂದು ಮನಸ್ಸು ಹಾಕದೆ ಇದ್ದುದರಿಂದಲೂ, ಸಾಮಾನ್ಯ ಜನರು ಧೈರ್ಯದಿಂದ ಕಡೆತನಕ ನಿಲ್ಲದ್ದರಿಂದಲೂ, ತಲೆತಿರುಕ ಜನರು ಕೊಲೆಗಳಂಥ ನಿಂದ್ಯಕೃತ್ಯಗಳನ್ನು ಮಾಡಿದುದರಿಂದಲೂ, ಸರಕಾರವು ನ್ಯಾಯಾನ್ಯಾಯಗಳನ್ನು ಲಕ್ಷಿಸದೆ ಉಗ್ರಸ್ವರೂಪವನ್ನು ಧರಿಸಿದುದರಿಂದಲೂ ವೀರಪಕ್ಷದವರಿಗೆ ತಮ್ಮ ಕಾರ್ಯವನ್ನು ಅವ್ಯಾಹತವಾಗಿ ನಡಿಸುವದು ಎಷ್ಟು ದುಸ್ತರವಾಯಿತೆಂಬುದನ್ನು ಹಿಂದೆ ಹೇಳಿದೆ. ಇಂಥ ವಿಪರೀತಿ ಕಾಲದಲ್ಲಿ ಬ್ರಿಟಿಷರ ಹದ್ದಿನಲ್ಲಿ ನಿಲ್ಲುವದರಿಂದ ಆಗುವ ಕಾರ್ಯಕ್ಕಿಂತ ಬ್ರಿಟಿಷರ ಕಾಟವಾಗದಂಥದೊಂದು ಸ್ಥಾನಕ್ಕೆ ಹೋಗಿ ಅಲ್ಲಿ ನಿಂತು, ಮಾಡಿದರೆ ಆಗುವ ಕಾರ್ಯವು ದೇಶಕ್ಕೆ ಹೆಚ್ಚು ಉಪಯುಕ್ತವಾದೀತೆಂದು ಶ್ರೀ ಅರವಿಂದಯೋಗಿಗಳು ಗೊತ್ತು ಮಾಡಿದರು. ಮತ್ತು ಅವರಿಗಾದ ಪೂರ್ವ ಸೂಚನೆಯಂತೆ ಪಾಂಡೀಚೇರಿಗೆ ಫ್ರೇಂಚ ಹದ್ದಿನಲ್ಲಿ ಹೋಗಿ ಶಾಂತತನದಿಂದ ಕಾರ್ಯಕ್ಕೆ ಹತ್ತಿದರು. ಅನೇಕ ಗುಪ್ತಚಾರರು ಬೇರೆ ಬೇರೆ ವೇಷಗಳಲ್ಲಿ ಹೋಗಿ ಅರವಿಂದ ಯೋಗಿಗಳನ್ನು ಪೀಡಿಸಹತ್ತಿದರು. ಆದರೆ ಆ ಯಾವ ಕಾಟಗಳಿಂದಲೂ ಧ್ಯೇಯಚ್ಯುತರಾಗದೆ ಶ್ರೀ ಅರವಿಂದ ಯೋಗಿಗಳು ತಮ್ಮ ಮಹಾಕಾರ್ಯವನ್ನು ಅವ್ಯಾಹತವಾಗಿ ಇಂದಿಗೂ ನಡೆಸಿದ್ದಾರೆ.

ಶ್ರೀ ಅರವಿಂದ ಯೋಗಿಗಳು ಪಾಂಡಿಚೇರಿಗೆ ಹೋದ ಬಳಿಕ ಸೌ. ಮೃಣಾಲಿನೀ ದೇವಿಯವರು ತವರ ಮನೆಯಲ್ಲಿ ಕಾಲಹರಣ ಮಾಡಿದರು. ಇವರ ಪ್ರವೃತ್ತಿಯು ವೈರಾಗ್ಯದ ಕಡೆಗೆ ವಿಶೇಷವಿದ್ದಿಲ್ಲ. ಇವರಿಗೆ ಮಕ್ಕಳಿಲ್ಲ ಮೊನ್ನಿನ ಇನ್‌ಫ್ಲುಯಿಂಜಾದ ಪಿಡುಗಿನಲ್ಲಿ ಸ್ವರ್ಗಸ್ಥರಾದರು (೧೭ನೆಯ ದಶಂಬರ ೧೯೧೮).

ಶ್ರೀ ಅರವಿಂದ ಯೋಗಿಗಳು ಪಾಂಡಿಚೇರಿಯಲ್ಲಿ ಪ್ರೆಂಚರ ವೈಭವದ ಕಾಲದಲ್ಲಿ ಕಟ್ಟಿದ ಒಂದು ದೊಡ್ಡ ಅರಮನೆಯಂತಿರುವ ಹಳೇವಾಡೆಯಲ್ಲಿ ವಾಸವಾಗಿದ್ದಾರೆ; ಈ ಪುಣ್ಯಭವನದ ಅಂತರ್ವ್ಯವಸ್ಥೆಯೆಲ್ಲ ಹಿಂದೂ ಪದ್ಧತಿಯದೇ ಇರುತ್ತದೆ. ಶ್ರೀ ಅರವಿಂದ ಯೋಗಿಗಳು ಇಲ್ಲಿಗೆ ಬಂದು ಈಗ ಸುಮಾರು ೧೨ ವರುಷಗಳಾದವು. ಸರ್ವಕಾಲ ಬಹುತರ ಏಕಾಂತದಲ್ಲಿಯೇ ಕಳೆಯುತ್ತಾರೆ. ಇಲ್ಲಿ ಇವರ ತೀರ ಪರಿಚಯ ದೊಳಗಿನ ಜನರೇ ಕಡಿಮೆ. ಇಬ್ಬರು ಫ್ರೆಂಚ್ ಮುಮುಕ್ಷುಗಳು ಶ್ರೀ ಅರವಿಂದಯೋಗಿಗಳ ಸಹಕಾರಿಗಳಾಗಿದ್ದಾರೆ. ೧೯೧೦ರ ಏಪ್ರಿಲ ತಿಂಗಳಲ್ಲಿ ಎಮ್. ರಿಚರ್ಡರು ಫ್ರಾನ್ಸದಿಂದ ಅದೇ ಹೊಸದಾಗಿ ಪಾಂಡಿಚೇರಿಗೆ ಬಂದಾಗ ಶ್ರೀ ಅರವಿಂದ ಯೋಗಿಗಳ ಪ್ರಥಮ ದರ್ಶನವಾಯಿತು. ಯೋಗಸಾಧನದ ಜಿಜ್ಞಾಸೆಯುಳ್ಳವರಾಗಿ ಎಮ್. ರಿಚರ್ಡರು ಅರವಿಂದ ಯೋಗಿಗಳೊಡನೆ ಕೂಡಿರಹತ್ತಿದರು. ೧೯೧೪ರಲ್ಲಿ ಎಮ್. ರಿಚರ್ಡರು ಫ್ರಾನ್ಸದಿಂದ ತಿರುಗಿ ಬರುವಾಗ ತಮ್ಮ ಪತ್ನಿಯಾದ ಮಿರಾರಿಚರ್ಡ ಎಂಬವಳನ್ನು ಸಂಗಡ ತಂದರು. ಆದರೆ, ಕೂಡಲೆ ಯುದ್ಧವು ಆರಂಭವಾಗಿ ಫ್ರಾನ್ಸವು ಅದರಲ್ಲಿ ಭಾಗ ತಕ್ಕೊಳ್ಳುತ್ತಲೆ ಇವರೀರ್ವರಿಗೂ ಫ್ರಾನ್ಸಕ್ಕೆ ಹೋಗಲೇಬೇಕಾಯಿತು. ಆದರೆ, ಯುದ್ಧವು ಮುಗಿದುದರಿಂದ ಈಗ ಮತ್ತೆ ಪಾಂಡಿಚೇರಿಗೆ ಬಂದಿದ್ದಾರೆ. ಪ್ರತಿ ರವಿವಾರಕ್ಕೊಮ್ಮೆ ಬಹುತರ ಅರವಿಂದ ಯೋಗಿಗಳು ವಿಚಾರವಿನಿಮಯಕ್ಕಾಗಿ ಸಹಕಾರಿ ಬಂಧುಗಳೊಡನೆ ಒತ್ತಟ್ಟಿಗೆ ಕೂಡುವರು. ಧ್ಯಾನ-ಧಾರಣಾದಿ ಯೋಗಸಾಧನಗಳಲ್ಲಿಯೂ ಉದಾತ್ತ ವಿಚಾರಗಳ ಲೇಖನದಲ್ಲಿಯೂ ಮಹರ್ಷಿಗಳ ಎಲ್ಲ ವೇಳೆಯು ಹೋಗುವದು. ಎಷ್ಟೋ ಜನರು ಅದ್ಭುತಚರಿತ್ರದ ಈ ಯೋಗಿಯನ್ನು ಕಂಡು ನೇತ್ರಸಾಫಲ್ಯ ಮಾಡಿಕೊಳ್ಳಬೇಕೆಂದು ಹೋಗುತ್ತಾರೆ. ಆದರೆ ದರ್ಶನವಾಗುವದೇ ದುರ್ಲಭವು. ಒಳ್ಳೇ ಪ್ರಯತ್ನದಿಂದ

ದರ್ಶನದ ಸುಪ್ರಸಂಗವು ಬಂದರೂ ಸಂಭಾಷಣದ ಕಪಿಲಾಷ್ಠಯ ಯೋಗವು ಬರುವದು ಅಸಾಧ್ಯ. ಅನೇಕರು ಭೆಟ್ಟಿಗೆ ಹೋಗುವರು. ಆಗ ಶ್ರೀ ಅರವಿಂದರೊಂದು ವೇತ್ರಾಸನದ ಮೇಲೆ ಪ್ರೇಕ್ಷಕರು ಮತ್ತೊಂದರ ಮೇಲೆ ಗಂಭೀರವಾದ ಮೌನವನ್ನು ತಾಳಿ ಸ್ವಸ್ಥವಾಗಿ ಕುಳಿತುಕೊಳ್ಳುವ ಪ್ರಸಂಗವೇ ಬಹುತರ ಬರುವದು. ಈಗ ಯೋಗಿಗಳಿಗೆ ಪೂರ್ಣಾವಸ್ಥೆಯು ದೊರೆತಿದ್ದು ಆಹಾರ ನಿದ್ರಾದಿಗಳನ್ನು ಸಹ ಪೂರ್ಣವಾಗಿ ಜಯಿಸಿದ್ದಾರೆ. ದೀರ್ಘ ತಪಶ್ಚರ್ಯದಿಂದ ಭೌತಿಕ ಶರೀರವು ಕೃಶವಾಗಿದ್ದರೂ ಯೋಗಶಕ್ತಿಯ ಹೆಚ್ಚಳದಿಂದ ಆತ್ಮನ ಸ್ಫುರಣಗಳು ಹೆಚ್ಚಾಗಿವೆ. ಆಹಾರಾದಿಗಳ ನಿಯಮನದಿಂದ ಕಣ್ಣುಗಳು ಒಳಸಿಕ್ಕಿದ್ದರೂ ಅವುಗಳೊಳಗಿನ ತಪಃಪ್ರಭಾವದ ತೇಜಸ್ಸಿನ ಮಿಂಚು ಹೊರಬೀಳುತ್ತದೆ. ಶ್ರೀ ಅರವಿಂದ ಯೋಗಿಗಳ ತಪಃಪ್ರಭಾವದಿಂದ ತೇಜೋಮಯ ವಾಗಿರುವ ಆ ಕೃಶಾಂಗವು, ಆತ್ಮಾನಂದದಿಂದುಂಟಾದ ಶಾಂತಿಯನ್ನು ವ್ಯಕ್ತಪಡಿಸುವ ಮದಸ್ಮಿತದಿಂದೊಪ್ಪುವ ಆ ರಮ್ಯ ಮುಖವು, ವಿಶ್ವದ ರಹಸ್ಯಕ್ಕೆ ಕೈಹಾಕಿದ ಆ ಭೇದಕ ದೃಷ್ಟಿಯು, ಆತ್ಮಸಾಧನೆಯೊಳಗಿನ ನಿಮಗ್ನತೆಯನ್ನು ಸೂಚಿಸುವ ಭುಜದ ಮೇಲೆ ಅಲ್ಲಾಡುವ ಆ ಜಡೆಯು, ಮಹರ್ಷಿಗಳ ವಿಷಯಕ್ಕೆ ಪ್ರೇಕ್ಷಕರನ್ನು ಪೂಜ್ಯಬುದ್ಧಿ ಯನ್ನುಂಟುಮಾಡದೆ ಬಿಡುವದಿಲ್ಲ.

ಶ್ರೀ ಅರವಿಂದ ಯೋಗಿಗಳು ಪಾಂಡಿಚೇರಿಗೆ ಬಂದು ೪-೫ ವರ್ಷಗಳಾದ ಬಳಿಕ ಫ್ರೆಂಚ್ ಮಿತ್ರರಾದ ಎಮ್. ರಿಚರ್ಡರ ಬಿನ್ನಹದ ಮೇರೆಗೆ "ಆರ್ಯ" ಎಂಬ ಮಾಸಪತ್ರಿಕೆಯನ್ನು ಪ್ರಕಟಿಸಹತ್ತಿದರು. ಇದು ಇಂಗ್ಲಿಷ ಮತ್ತು ಫ್ರೆಂಚ ಭಾಷೆಗಳಲ್ಲಿ ಹೊರಡುತ್ತದೆ. ಇದು ಶುದ್ಧ ತತ್ತ್ವಜ್ಞಾನವಿಷಯಕ ಚರ್ಚೆಯನ್ನಷ್ಟೇ ಮಾಡುತ್ತದೆ. ಜಗತ್ತಿನ ವ್ಯವಹಾರಗಳು ಒಂದು ತತ್ತ್ವಜ್ಞಾನವನ್ನು ಅವಲಂಬಿಸಿ ನಡೆಯುತ್ತವೆ. ಆ ತತ್ತ್ವಜ್ಞಾನವು ಶುದ್ಧಾಶುದ್ಧವಿರುವಂತೆ ಅದನ್ನು ಅವಲಂಬಿಸಿ ನಡೆಯುವ ವ್ಯವಹಾರಗಳು ಉಚ್ಚ ಅಥವಾ ನೀಚ ತರದವಿರುತ್ತವೆ. ದೇಶದ ಅವನತ ಸ್ಥಿತಿಯ ಕಾಲದಲ್ಲಿ ತತ್ತ್ವಜ್ಞಾನವು ಮಲಿನವಾಗಿರುತ್ತದೆ. ಅದನ್ನು ಶುದ್ಧೀಕರಿಸಿ ಅದಕ್ಕೆ ದಿವ್ಯಸ್ವರೂಪವನ್ನು ಕೊಡುವದು ಮಹತ್ವದಿರುತ್ತದೆ. ಇಂಥ ಪವಿತ್ರವಾದ ಹಾಗೂ ಮಹತ್ವದ ಕಾರ್ಯವನ್ನು ಮಹರ್ಷಿ ಅರವಿಂದರು "ಆರ್ಯ" ಮಾಸಿಕ ಪುಸ್ತಕದ ದ್ವಾರವಾಗಿ ಮಾಡುತ್ತಲಿದ್ದಾರೆ. ಈ ಮಾಸಪತ್ರಿಕೆಯು ಅತಿ ಉದಾತ್ತ ವಿಚಾರದ ಲೇಖನಗಳ ನ್ನೊಳಗೊಂಡಿರುವದರಿಂದ ಅದು ಒಳ್ಳೊಳ್ಳೇ ಪಂಡಿತರಿಗೆ ಸಹ ಎಷ್ಟರ ಮಟ್ಟಿಗೆ ತಿಳಿಯುವದೋ ಎಂಬುದು ಪ್ರಶ್ನವಿದೆ. ಇಂಥ ಏಕಾಂತಪ್ರಿಯರೂ ವೇದಾಭ್ಯಾಸಜಡರೂ ಆದ ಶ್ರೀ ಅರವಿಂದ ಯೋಗಿಗಳು ರಸಿಕ ಕವಿಗಳಿರಬಹುದೆಂಬ ಕಲ್ಪನೆಯು ಸಹ ಆಗುವದಿಲ್ಲ. ಮಹಾತ್ಮರ ಚರಿತ್ರವು ವಿಚಿತ್ರವೆಂಬುವದು ಇದಕ್ಕಾಗಿಯೇ. ಮಹಾತ್ಮರ ಅಂತಃಕರಣವು ಕುಸುಮದಂತೆ ಕೋಮಲವೂ ವಜ್ರದಂತೆ ಕಠೋರವೂ ಇರುತ್ತದೆಂಬ ಮಾತು ಸುಳ್ಳಲ್ಲ. ಶ್ರೀ ಅರವಿಂದಯೋಗಿಗಳು ಗೂಢವೇದಾಂತ ವಿವೇಚನೆಯಲ್ಲಿ ನಿಷ್ಣಾತರಿದ್ದಂತೆ ಮಾರ್ಮಿಕ ಕಾವ್ಯರಚನೆಯಲ್ಲಿ ಸಹ ಪ್ರವೀಣರಿರುತ್ತಾರೆ. "Ahana" ದಂಥ ಸುಂದರ ಕಾವ್ಯವು ಮಹರ್ಷಿಗಳ ಲೆಕ್ಕಣಿಕೆಯಿಂದಲೇ ಹೊರಬಿದ್ದಿರುತ್ತದೆಂದು ಹೇಳಿದರೆ ಯಾರಿಗಾದರೂ ಸುಳ್ಳು ಕಾಣಬಹುದು; ಆದರೆ ಇದು ಸತ್ಯವಿರುತ್ತದೆ. ಶ್ರೀ ಅರವಿಂದ ಯೋಗಿಗಳ ನವಜೀವನದಾಯಿಯಾದ ಲೇಖಗಳ ಪರಿಚಯವು ಕನ್ನಡಿಗರಿಗೆ ಎಂದು ಆಗುವದೋ ಅದು ಸುದಿನ.

ಮಹರ್ಷಿಗಳ ಕೆಲವು ಬಂಗಾಲಿ ಶಿಷ್ಯರು ಚಂದ್ರನಗರದಲ್ಲಿ ನಿಂತು ಪ್ರವರ್ತಕವೆಂಬ ಸಂಸ್ಥೆಯನ್ನು ಸ್ಥಾಪಿಸಿ ತದ್ವಾರವಾಗಿ ಶ್ರೀ ಅರವಿಂದ ಯೋಗಿಗಳ ಮತಗಳ ಪ್ರಸಾರವನ್ನು ನಡೆಸಿದ್ದಾರೆ. ಇಂಗ್ಲಿಷ ಭಾಷೆಯಲ್ಲಿ Standard Bearer ಎಂಬುದೂ, ಬಂಗಾಲಿಯಲ್ಲಿ ಪ್ರವರ್ತಕ, ನಭಾ, ಬಿಜಲಿ ಎಂಬವುಗಳೂ ಶ್ರೀಮದ್ಯೋಗಿಗಳ ಮತಗಳನ್ನು ಪ್ರಸಾರ ಮಾಡುವ ಸಾಧನಗಳಾಗಿವೆ. ಶ್ರೀ ಅರವಿಂದ ಯೋಗಿಗಳ ಫ್ರೆಂಚಬಂಧುಗಳಾದ ಗೃಹಸ್ಥರು ತಮ್ಮ ಧ್ಯೇಯವಾದ ಮಾನವ ಕುಟುಂಬದ ಕಲ್ಯಾಣವನ್ನು ಸಾಧಿಸಲಿಕ್ಕೆ ಜಪಾನದಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ (೧೯೧೮). ಈ ಸಂಸ್ಥೆಯ ಉದ್ದೇಶವು ಭಾವೀಕಾರ್ಯದ ಆರಂಭವೆಂದು ಏಶಿಯಾಖಂಡದಲ್ಲಿ ಒಕ್ಕಟ್ಟನ್ನುಂಟು ಮಾಡುವದಿರುತ್ತದೆ. ಏಶಿಯವು ಎಚ್ಚತ್ತು ತನ್ನ ನಿಜಸ್ವರೂಪದ ಜ್ಞಾನ ಮಾಡಿಕೊಂಡು,

ಸ್ವತಂತ್ರವಾದ ಬಳಿಕ ಜಗತ್ತಿಗೆ ತನ್ನ ಸಂಸ್ಕೃತಿಯನ್ನು ಕೊಡುವ ದಿವ್ಯಕಾರ್ಯವನ್ನು ಅದಕ್ಕೆ ಮಾಡತಕ್ಕದ್ದಿರುತ್ತದೆ. ಇದರ ಕಾರ್ಯಪದ್ಧತಿಯನ್ನು ಕುರಿತು ಒಂದು ಪುಟ್ಟ ಪುಸ್ತಕವು ಬರೆಯಲ್ಪಟ್ಟಿದೆ. ಅರವಿಂದ ಯೋಗಿಗಳು ಸಹಕಾರಿ ಮಿತ್ರರಾದ ಎಮ್. ರಿಚರ್ಡ ಎಂಬವರು ಈ ಧ್ಯೇಯವನ್ನು ಈಡೇರಿಸುವದಕ್ಕಾಗಿ ಜಗತ್ತಿನ ಪ್ರವಾಸಕ್ಕೆ ಹೊರಡತಕ್ಕ ವರಿದ್ದಾರೆ! ಜಪಾನದಲ್ಲಿ ಹೊರಡುವ 'ಏಶಿಯನ್ ರಿವ್ಯೂ' ಎಂಬ ಮಾಸಪತ್ರಿಕೆಯಲ್ಲಿ ಏಶಿಯಾಖಂಡದ ಪ್ರಾಚೀನ ವೈಭವವನ್ನೂ, ಅದರ ಭಾವೀಕಾರ್ಯವನ್ನೂ ಕುರಿತು ಹಲವು ಬಗೆಯ ಉದ್ಬೋಧಕ ಲೇಖಗಳು ಬರುತ್ತಿರುತ್ತವೆ.* ಶ್ರೀಮದ್ಯೋಗಿಗಳ ತಪಶ್ಚರ್ಯವು ಮುಗಿಯುತ್ತ ಬಂದಿದ್ದು, ಅನುಯಾಯಿ ವರ್ಗದಿಂದ ಈ ರೀತಿಯಲ್ಲಿ ಭಾವೀಕಾರ್ಯಕ್ಕೆ ಆರಂಭವೂ ಆಗಿದೆ.

ಭರತಖಂಡದ ಪ್ರಸ್ತುತ ಪರಿಸ್ಥಿತಿಯು ೧೯೦೭-೦೮ರಗಿಂತ ತೀರ ಭಿನ್ನವಾಗಿದ್ದು ಮಹರ್ಷಿಗಳ ಆಗಮನವು ಬ್ರಿಟಿಶ ಹಿಂದುಸ್ತಾನಕ್ಕೆ ಎಂದು ಆಗುವದೋ ಎಂದು ಎಲ್ಲರೂ ತೀರ ಆತುರರಾಗಿದ್ದಾರೆ. ನಾಗಪುರದ ೧೯೨೦ರ ಕಾಂಗ್ರಸ್ಸಿಗೆ ಅಧ್ಯಕ್ಷರಾಗಲಿಕ್ಕೆ ಸಮ್ಮತಿಯನ್ನು ಕೇಳಿದ್ದರು. ಆದರೆ, ಮಹರ್ಷಿಗಳು ೧೨ ವರುಷಗಳ ವರೆಗೆ ಪೂರ್ಣ ತಪಶ್ಚರ್ಯವಾಗದ ವಿನಾ ಹೊರಬೀಳಲಿಕ್ಕೆ ಬರುವದಿಲ್ಲೆಂದು ಹೇಳಿ ಔತಣವನ್ನು ಸ್ವೀಕರಿಸಲಿಲ್ಲ.

ಕೆಲವರಿಗೆ ಮಹರ್ಷಿ ಅರವಿಂದರ ಮತಗಳು ಸೇರಲಿಕ್ಕಿಲ್ಲ; ಅಥವಾ ಅವು ಬೇರೆ ಕೆಲವು ಮಹಾ ಪುರುಷರ ಮತಗಳಂತೆ ಇರಲಿಕ್ಕಿಲ್ಲ. ಅದರಿಂದ ಶ್ರೀಮದ್ಯೋಗಿಗಳ ಯೋಗ್ಯತೆಯು ಕಡಿಮೆಯೆಂದು ಅಥವಾ ಆ ಎರಡನೇ ಮಹಾಪುರುಷರು ಕ್ಷುಲ್ಲಕರೆಂದು ಯಾರೂ ತಿಳಿಯುವ ಕಾರಣವಿಲ್ಲ. ಪ್ರಾಚೀನಕಾಲದಲ್ಲಿ ಸಹ ಸಮಾನ ಯೋಗ್ಯತೆಯ ಮಹಾಪುರುಷರಲ್ಲಿ ಮತಭೇದವು ಕಂಡು ಬರುತ್ತಿತ್ತು. ಭಿನ್ನ ಭಿನ್ನ ಸ್ಮೃತಿಗ್ರಂಥಗಳು ಈ ಮಾತಿಗೆ ಸಾಕ್ಷಿಯಾಗಿವೆ. ಮನು ಮತ್ತು ಯಜ್ಞ್ಯವಲ್ಕ್ಯರಲ್ಲಿ ಯಾರು ಶ್ರೇಷ್ಠರು? ಮಹಾತ್ಮಾಗಾಂಧಿ ಹಾಗೂ ಲೋಕಮಾನ್ಯರಲ್ಲಿ ಕೆಲವು ಮತಭೇದವಿದ್ದ ಮಾತ್ರಕ್ಕೆ ಅವರಲ್ಲಿ ಒಬ್ಬರು ಮತ್ತೊಬ್ಬರಿಗಿಂತ ಕಡಿಮೆಯೆಂದು ತಿಳಿಯುವದು ತಪ್ಪು. ಹಿಮಾಲಯದ ಶಿಖರಗಳು ಎತ್ತರವಾಗಿದ್ದೇ, ಫೆಸಫಿಕ್ ಮಹಾಸಾಗರವು ಆಳವಾಗಿರುವದು. ಇವುಗಳಲ್ಲಿ ಯಾವದು ಶ್ರೇಷ್ಠ ಮತ್ತು ಸುಂದರವೆಂದು ವಾದಿಸುತ್ತ ಕೂಡ್ರುವದು ಮೂರ್ಖತನ. ಬಾಳೆಯ ಸವಿ ಬಾಳೆಗೆ; ಮಾವಿನ ಸವಿ ಮಾವಿಗೆ. ಮಹರ್ಷಿ ಅರವಿಂದರು ತಮ್ಮ ತೀಕ್ಷ್ಣ ಬುದ್ಧಿಕೌಶಲ್ಯದಿಂದ ಜಗತ್ತಿನ ವಿಚಾರಕ್ಕೆ ಒಂದು ತರದ ಸ್ವರೂಪಗೊಡುತ್ತಲಿದ್ದಾರೆ. ಅದರಲ್ಲಿ ಮತಭೇದಗಳಾಗುತ್ತಿರಬಹುದು. ಅದರಿಂದ ಅವರ ವಿದ್ವತ್ತೆಗೆ ಅಥವಾ ಯೋಗ್ಯತೆಗೆ ಏನೂ ಬಾಧೆಬರುವದಿಲ್ಲ. ಇರಲಿ, ಮಹರ್ಷಿ ಅರವಿಂದರು ತಮ್ಮ ದೀರ್ಘ ತಪಶ್ಚರ್ಯದಲ್ಲಿ ಶಾಂತಚಿತ್ತದಿಂದ ಕಂಡು ಹಿಡಿದ ಪರಮೇಶ್ವರೀ ಆದೇಶವನ್ನು ಭಾರತೀಯರಲ್ಲಿ ಪ್ರಸಾರ ಮಾಡಲಿಕ್ಕೆ ಮತ್ತೆ ಬರಲೆಂದೂ, ಈ ಕಾರ್ಯವನ್ನು ಮಾಡಲಿಕ್ಕೆ ಪರಮೇಶನು ಅವರಿಗೆ ದೀರ್ಘಾಯು ರಾರೋಗ್ಯವನ್ನು ದಯಪಾಲಿಸಲೆಂದೂ ಅನ್ಯ ಭಾವದಿಂದ ಪ್ರತಿಯೊಬ್ಬರೂ ಬೇಡಿಕೊಳ್ಳುವ.

---

* See Standard Bearer, January 2. Page 1

ಮತಗಳು

ಸ್ಥಿತಪ್ರಜ್ಞಸ್ಯ ಕಾ ಭಾಷಾಸಮಾಧಿಸ್ಥಸ್ಯ ಕೇಶವ

-ಭಗವದ್ಗೀತೆ ೨-೫೪

"Being one with all beings, we possess in their enjoyment, in ours and in the cosmic being's delight of universal self-expression. It is only by this Ananda at once transcedent and universal that man can be free in his soul and yet live in the world with the full active life of the Lord in his universe of movement.

"**Arya.**" Vol. I Page 44.

★ ★ ★

Transform the animal into the Driver of the herds; let all thyself be they Krishna. This is the goal.

ಮಹರ್ಷಿ ಅರವಿಂದ ಘೋಷರು ಇಂಥ ಯಾವ ಮತಗಳನ್ನು ಬೋಧಿಸಿದರೆಂದು ಸರಕಾರದವರು ಅವರಿಗೆ ಕೈತೊಳಕೊಂಡು ಬೆನ್ನು ಹತ್ತಿದರು; ಇಂಥ ಯಾವ ತತ್ವಜ್ಞಾನದ ವಿವರಣವನ್ನು ಮಾಡಿದರೆಂದು ವಿದ್ವಜ್ಜನರು ಅವರಿಗೆ ಮನ್ನಿಸುವರು; ಇಂಥ ಅದಾವ ಸಂದೇಶವನ್ನು ಹೇಳಿದರೆಂದು ಭಾರತೀಯರು ಸ್ಫೂರ್ತಿಗೊಂಡು ಅರವಿಂದ ಯೋಗಿಗಳನ್ನು ತಮ್ಮ ಹೃದಯಮಂದಿರಗಳಲ್ಲಿ ಪೂಜಿಸುತ್ತಿರುವರು; ಹೀಗೆ ಏನನ್ನು ಮಾಡಿರುವರೆಂದು ಲಾಲಾ ಲಜಪತರಾಯರಂಥವರು ಅರವಿಂದ ಯೋಗಿಗಳ ಮುಂದೆ ಭಕ್ತಿಯಿಂದ ತಲೆವಾಗುವರು, ಅಥವಾ ಜಗತ್ಕವಿಕುಲಲಲಾಮರಾದ ರವೀಂದ್ರನಾಥರು ಶ್ರೀ ಅರವಿಂದರಿಗೆ "He is a true Rishi" ಎಂದೆನ್ನುವರು ಎಂಬುವದನ್ನು ತಿಳಿಯಲಿಕ್ಕೆ ವಾಚಕರು ಉತ್ಸುಕರಾಗಿರಬಹುದು. ಆದರೆ, ಅವರ ಮತಗಳನ್ನು ನಿರ್ದೋಷವಾಗಿ ವಾಚಕರ ಮುಂದೆ ಇಡಲಿಕ್ಕೆ ಈ ಪಾಮರ ಲೇಖಕನು ಸಮರ್ಥನಿಲ್ಲ. ಒಬ್ಬ ಕವಿಯು ಅಂದಂತೆ "ಕನ್ನಡಿಯೊಳಗೆಷ್ಟು ತೋರ್ಪುದು ವರ ಕಾಂಚನಾದ್ರಿ" ಎಂದು ಈ ಲೇಖಕನೂ ಅನ್ನುತ್ತಾನೆ. ಮಹರ್ಷಿಗಳ ಆ ಉದಾತ್ತ ವಿಚಾರಗಳನ್ನು ಆಕಲನ ಮಾಡುವ ಸಾಮರ್ಥ್ಯವಿಲ್ಲವೆಂದು ಒಳ್ಳೊಳ್ಳೇ ಪಂಡಿತರು ಕೈಯ್ಯೂರುವಾಗ ಈ ಲೇಖಕನ ಪಾಡು ಎತ್ತ? ಅರವಿಂದ ಯೋಗಿಗಳ ಗುಣಗಳ ಸರಿಯಾದ ವರ್ಣನೆ ಮತ್ತು ಮತಗಳ ಪ್ರತಿಪಾದನೆಯಾಗಬೇಕಾದರೆ

ಅದಕ್ಕೆ ಅಂಥ ಯೋಗ್ಯತೆಯವನೇ ಬೇಕು. ಮಹಾಸಾಗರದಲ್ಲಿ ಗುಬ್ಬಿಯು ತನ್ನ ಪುಟ್ಟ ಚಂಚುವಿನಿಂದ ನಾಲ್ಕು ಹನಿಗಳನ್ನು ತಕ್ಕೊಂಡು ತೃಪ್ತಿಪಡುವಂತೆ ಈ ಲೇಖಕನ ಸ್ಥಿತಿಯಿದೆ. ಮಹರ್ಷಿಗಳ ಅಗಾಧ ಚರಿತ್ರದ ವಾಚನದಿಂದ ಸ್ಫೂರ್ತಿಗೊಂಡು ಅವರ ಮೇಲಿನ ಭಕ್ತಿಯಿಂದ ಇದೊಂದು ಅಲ್ಪಸೇವೆಯೆಂದು ಆತನು ಈ ಕೆಲಸವನ್ನು ಮಾಡಿದ್ದಾನೆ. ಆದುದರಿಂದ ವಾಚನಾಂತ್ಯದಲ್ಲಿ ವಾಚಕರಿಗೆ ನಿರಾಶೆಯಾದರೆ ಅವರು ಆತನನ್ನು ಕ್ಷಮಿಸಬೇಕೆಂದು ನಮ್ರತನದಿಂದ ಬಿನ್ನವಿಸುತ್ತಾನೆ.

ಶ್ರೀ ಅರವಿಂದರ ಸಾಧಕಾವಸ್ಥೆಯು ೧೯೦೫ನೆಯ ಇಸವಿಗೆ ಮುಗಿಯಿತೆಂದು ಹೇಳಬಹುದು. ೧೯೦೫ರಿಂದ ೧೯೦೮ರ ವರೆಗೆ ಪತ್ನಿಗೆ ಬರೆದ ಪತ್ರಗಳಲ್ಲಿ ಶ್ರೀಮದ್ಯೋಗಿಗಳ ದೇವಸಂದರ್ಶನದ ವಿಷಯಕ್ಕಿರುವ ವ್ಯಾಕುಲತೆಯು ಕಂಡುಬರುವಂತಿದೆ. ಶಾಸ್ತ್ರೋಕ್ತ ಮಾರ್ಗದಿಂದ ಕರ್ಮಮಾಡಿ ೧೯೦೯ ರಲ್ಲಿ ಸಿದ್ಧಿಯನ್ನು ಪಡೆದರು. ಆಲಿಪುರದ ತುರಂಗದಲ್ಲಿ ಶ್ರೀ ಭಗವಾನ್ ವಾಸುದೇವನ ದರ್ಶನವಾಗಿ ಆದೇಶವು ಸಿಕ್ಕನಂತರ ಶ್ರೀ ಅರವಿಂದರು ಸಿದ್ಧಯೋಗಿಗಳಾದರು. ೧೯೦೭ರ ಚಳವಳಿಯು ಧಾರ್ಮಿಕ ಅಧಿಷ್ಠಾನದ ಮೇಲೆ ಆರಂಭಿಸಲ್ಪಡದ್ದರಿಂದ ಅದು ನಷ್ಟವಾಯಿತೆಂದು ಇವರ ಮತವಿದೆ. ಕೇವಲ ರಾಜಕಾರಣದಿಂದಲೇ ಯಾವ ದೇಶವೂ ಮುಂದೆ ಬರಲಾರದು. ರಾಜಕೀಯ ಮುತ್ಸದ್ದಿತನವು ಬಹು ದಿವಸ ತಡೆಯುವದಿಲ್ಲ. ಯಾಕಂದರೆ ಅದರ ಬುಡಕ್ಕೆ ಧಾರ್ಮಿಕ ಭಾವನೆಯಿರುವದಿಲ್ಲ. ಒಂದು ಪಕ್ಷವು ಮತ್ತೊಂದು ಪಕ್ಷವನ್ನು ಬೌದ್ಧಿಕ ಯುಕ್ತಿ-ಪ್ರಯುಕ್ತಿಗಳಿಂದ ಪೇಚಿನಲ್ಲಿ ತರಲಿಕ್ಕೆ ಹವಣಿಸುವಾಗ ಧಾರ್ಮಿಕ ಬಂಧನವಿಲ್ಲದಿದ್ದರೆ ತೀರ ಅನರ್ಥಗಳಾಗುವವು. ಪ್ರತಿಪಕ್ಷಿಗಳಿಗೆ ತಮ್ಮ ಶತ್ರುಗಳ ಸೇಡು ತೀರಿಸುವ ರೀತಿಯಲ್ಲಿ ನೀತಿ ನಿರ್ಬಂಧಗಳು ಉಳಿಯದ್ದರಿಂದ ಅನೀತಿಗೆ ಆಸ್ಪದ ಸಿಗುವ ಸಂಭವವು ಬಹಳವಿರುತ್ತದೆ. ೧೯೦೫ರ ಸುಮಾರಿಗೆ ದೇಶದಲ್ಲಿ ಎದ್ದ ರಾಜಕೀಯ ಬಿರುಗಾಳಿಯ ಕೆಲವು ಪರಿಣಾಮವೂ, ಅಂತಃಕರಣದಲ್ಲಿ ಜಾಗೃತವಾದ ಧರ್ಮ ಜಿಜ್ಞಾಸೆಯ ಕೆಲವು ಪರಿಣಾಮವೂ ಒಟ್ಟುಗೂಡಿ ಶ್ರೀ ಅರವಿಂದರನ್ನು ರಾಜಕೀಯ ರಣಾಂಗಣಕ್ಕೆ ತಂದಿದ್ದವು. ಆದರೆ, ಈ ಕಾಲಕ್ಕೆ ಬಂದ ವಿವಿಧ ಅನುಭವಗಳಿಂದ ಧಾರ್ಮಿಕ ಸುಧಾರಣೆಯ ಆವಶ್ಯಕತೆಯು ತೀರ ಅವಶ್ಯವೆಂದು ಅವರು ಮನಗಂಡರು. ಹಾಗೂ ತಮಗೆ ಪ್ರಾಪ್ತವಾದ ಸಿದ್ಧ ಸ್ಥಿತಿಯನ್ನು ಸ್ಥಿರಗೊಳಿಸಲಿಕ್ಕೆ ಕೆಲವು ದಿನ ಏಕಾಂತವು ಅವಶ್ಯವೆಂದೂ, ಈ ತೆರನಾಗಿ ಮಾಡಿದರೆ ಆಗುವ ಕಾರ್ಯವೇ ಹಿಂದುಸ್ತಾನದ ಚಿರಕಾಲಿಕ ಹಿತದ ಕೆಲಸವಾಗುವದೆಂದೂ ತಪಶ್ಚರ್ಯಕ್ಕಾಗಿ ಪಾಂಡಿಚೇರಿಗೆ ಹೋದರೆಂದೂ ಹಿಂದಿನ ಪ್ರಕರಣದಲ್ಲಿ ಹೇಳಿದೆ.

ಮಹರ್ಷಿಗಳ ದೃಷ್ಟಿಯಿಂದ ಮನುಷ್ಯನ ಆದ್ಯಕರ್ತವ್ಯವೆಂದರೆ ಆತ್ಮೋನ್ನತಿಯನ್ನು ಮಾಡಿಕೊಳ್ಳುವದು, ಯೋಗಿಯಾಗುವದು. ಯೋಗಿಯಾಗಲಪೇಕ್ಷೆಯುಳ್ಳವನು ಮೊದಲು ಆತ್ಮಶುದ್ಧಿಯನ್ನು ಮಾಡಿಕೊಳ್ಳಲಿಕ್ಕೆ ಬೇಕು; ಆತ್ಮಶುದ್ಧಿಯ ಮಾರ್ಗಗಳನ್ನು ಕುರಿತು ಅವರು "Synthesis of Yoga" ಎಂಬ ಸುಂದರವಾದ ನಿಬಂಧವನ್ನು ಬರೆದಿದ್ದಾರೆ. ಮಹರ್ಷಿಗಳ ಕಟಾಕ್ಷವು ಅಂತರ್ಜ್ಞಾನ (Intuition) ದ ಮೇಲೆ ಬಹಳವಿದೆ. ವಿವಾದ ಕುಶಲವಾದ ಬುದ್ಧಿಯನ್ನು ಅವರು ತಿರಸ್ಕರಿಸಿದ್ದಾರೆ.[೧]

ಅಂತರ್ಜ್ಞಾನವು ಪ್ರಾಪ್ತವಾಗಲಿಕ್ಕೆ ಆತ್ಮಶುದ್ಧಿಯಾಗಲಿಕ್ಕೆ ಬೇಕು. ಆತ್ಮಶುದ್ಧಿಯ ಸಲುವಾಗಿ ಪ್ರಾಚೀನ ಋಷಿಗಳು ಹಲವು ಮಾರ್ಗಗಳನ್ನು ಕಂಡುಹಿಡಿದಿದ್ದಾರೆ. ಅವುಗಳ ನಿಸ್ಸಂದಿಗ್ಧವಾದ ವರ್ಣನವು ಮೇಲೆ ಹೇಳಿದ ನಿಬಂಧದಲ್ಲಿ ಅರವಿಂದ ಯೋಗಿಗಳು ಮಾಡಿಟ್ಟಿದ್ದಾರೆ. ಹಠಯೋಗವು ಆತ್ಮಜ್ಞಾನಿಗೆ ಅಷ್ಟೊಂದು ಉಪಯುಕ್ತವಿಲ್ಲವೆಂದು ಅವರ ಮತವಿದೆ. ಯಾಕಂದರೆ ಅದರ ಸಾಧನೆಯು ಮಾನಸಿಕ ಶುದ್ಧೀಕರಣಕ್ಕಿಂತಲೂ ದೇಹಶುದ್ಧೀಕರಣದ ಕಡೆಗೆ ಹೆಚ್ಚು ಸಹಾಯಕವಿದೆ. ರಾಜಯೋಗವು ಮಾತ್ರ ಆತ್ಮಸಾಧನೆಯ ಕೆಲಸದಲ್ಲಿ ಸಾಧಕನಿಗೆ ಉಪಯುಕ್ತವಿದೆ. ಇದರಂತೆಯೇ ಭಕ್ತಿ, ಜ್ಞಾನ ಮತ್ತು ಕರ್ಮ ಮಾರ್ಗಗಳೂ ಇವೆ. ಇವುಗಳನ್ನು ಆಚರಿಸುವಾತನು ನಾಲ್ಕು ಸಾಧನಗಳ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ;[೨] ಶಾಸ್ತ್ರ, ಉತ್ಸಾಹ, ಗುರು ಮತ್ತು ಕಾಲ. ಶಾಸ್ತ್ರವೆಂದರೆ ಶಬ್ದಪ್ರಮಾಣ. ಶಬ್ದಪ್ರಮಾಣವು ವೇದ ಮತ್ತು ಉಪನಿಷತ್ತುಗಳಂಥ ಲಿಖಿತ ಗ್ರಂಥಗಳಲ್ಲಿ

ಸಿಕ್ಕಬಹುದು. ಇಲ್ಲವೆ ಅಂತರಂಗದಲ್ಲಿ ಹೊಳೆಯಬಹುದು. ಪೂರ್ಣ ಶುದ್ಧಾವಸ್ಥೆಯು ಪ್ರಾಪ್ತವಾಗದೆ ಇದ್ದುದರಿಂದ ಅಂತಸ್ಥ ಆದೇಶವು ಶುದ್ಧವಿರುವ ಸಂಭವವು ಕಡಿಮೆ ಇರುವದರಿಂದ ವೇದಾದಿ ಅನುಭಾವಿಕ ಗ್ರಂಥಗಳನ್ನು ಅವಲಂಬಿಸಿ ನಡೆಯತಕ್ಕದ್ದು. ಯಾಕಂದರೆ ಇವು, ಋಷಿ-ಮುನಿಗಳಿಂದ ಆಚರಿಸಲ್ಪಟ್ಟು ಬಂದ ಅನುಭವಗಳಾಗಿವೆ. ಎರಡನೆಯ ಸಾಧನವು ಉತ್ಸಾಹವು. ಸಾಧಕನಲ್ಲಿ ಸಾಧ್ಯದ ವಿಷಯದಲ್ಲಿ ಉತ್ಕಂಠೆಯು ಬೆಳೆದಂತೆ ಫಲವು ಬೇಗ ಸಿಗುವದು. ಒಂದೇ ಒಂದು ಧ್ಯೇಯದ ಹುಚ್ಚುಹಿಡಿದು ಎರಡನೆಯ ಯಾವ ಕಲ್ಪನೆ, ವಿಚಾರಗಳ ಸಂಪರ್ಕವು ಸಹ ಆಗದ ಹಾಗಾಗಹತ್ತುತ್ತಲೇ ಸಿದ್ಧಿಯು ಸಮೀಪಿಸಿತೆಂದು ತಿಳಿಯಬೇಕು. ಸರ್ವಶಕ್ತಿವಂತನ ದರ್ಶನದ ಉತ್ಸುಕತೆಯಲ್ಲಿ ತನ್ನ ಅಹಂಕಾರಾದಿಗಳನ್ನು ಮರೆತು ಹೋದಂತೆ ಸಾಧಕನು ಸಿದ್ಧಿಯ ಸಮೀಪಕ್ಕೆ ಹೋಗುವನು. ಮಹತ್ವದ ಮೂರನೆಯ ಸಾಧನವೆಂದರೆ ಗುರುವು. ಜಗತ್ತಿಗೇ ಗುರುವಾದ ಪರಮೇಶನೇ ಮನುಷ್ಯನ ಅಂತರಂಗದಲ್ಲಿ ವಾಸವಾಗಿರುವದರಿಂದ ಅವನಿಗೆ ಸಾಕ್ಷಿಯಾಗಿ ತನ್ನ ಯೋಗವನ್ನು ಸಾಗಿಸುತ್ತಿರಬೇಕು. ಆತನ ದಯೆಯ ವಿಷಯಕ್ಕೆ ಪೂರ್ಣ ನಂಬುಗೆಯನ್ನಿಟ್ಟು ಕಾರ್ಯ ಮಾಡಿದರೆ ಸಿದ್ಧಿಯು ಸಿಗಲೇಬೇಕು. ಆದರೆ ಇದಕ್ಕೆ ಬಹಳ ಧೈರ್ಯವು ಬೇಕು. ಸಾಮಾನ್ಯ ವಿಚಾರದವರಿಗೆ ಇದು ಅಸಾಧ್ಯ. ಹಲವು ತರದ ಮಾನವೀ ವೃತ್ತಿಗಳು ಆಗಾಗ್ಗೆ ಮಧ್ಯದಲ್ಲಿ ಬಂದು ಸಾಧಕನನ್ನು ಕಾರ್ಯಚ್ಯುತನಾಗಿ ಮಾಡಲು ಯತ್ನಿಸುವವು. ಆಗ ಸಾಧಕನಿಗೆ ಆ ಸ್ಥಿತಿಯಲ್ಲಿ ಕಲ್ಪನಾಗಮ್ಯನಾದ ಸರ್ವೇಶನ ವಿಷಯಕ್ಕೆ ಅಷ್ಟೊಂದು ವಿಶ್ವಾಸವುಂಟಾಗುವದಿಲ್ಲ. ಅದುದರಿಂದ ಇಂಥ ಸಮಯದಲ್ಲಿ ಆತನು ಸಾಕಾರ ಹಾಗೂ ಸಗುಣನಾದ ಗುರುವನ್ನೆಲ್ಲಿಯಾದರೂ ಗೊತ್ತು ಮತಾಡಿಕೊಳ್ಳಬೇಕು. ಭಗವಾನ್ ಶ್ರೀ ಕೃಷ್ಣ, ರಾಮಕೃಷ್ಣ ಪರಮಹಂಸರಂಥ ಭೂತಕಾಲೀನ ಯೋಗಿಗಳ ಉಜ್ವಲ ಚರಿತ್ರಗಳನ್ನು ಲಕ್ಷಿಸಿ ಆಚರಿಬೇಕು. ಈ ರೀತಿಯಿಂದ ಸಾಧನೆಯಿಡುವದೊ ಸಾಮಾನ್ಯ ಕೆಲಸವಲ್ಲ. ಸಾಮಾನ್ಯ ಮನುಷ್ಯನಿಗೆ ಈ ಗಡಚಾದ ಮಾರ್ಗವನ್ನು ಆಕ್ರಮಿಸುವದು ಜಡ ಹೋಗುವದು. ಯಾಕಂದರೆ ದಿನಾಲು ಬರುವ ಎದೆಗುಂದುವ ಪ್ರಸಂಗಳಲ್ಲಿ ಧೈರ್ಯ ಹೇಳಲಿಕ್ಕೆ, ತಪ್ಪಿದಲ್ಲಿ ಪ್ರತ್ಯಕ್ಷ ಕೃತಿಯಿಂದ ತೋರಿಸಲಿಕ್ಕೆ, ತನ್ನ ವರ್ಚಸ್ಸಿನಿಂದ (ಪ್ರಸಾದದಿಂದ) ಕಾರ್ಯಕ್ಕೆ ಉತ್ತೇಜಿಸಲಿಕ್ಕೆ ಆತನಿಗೆ ಯಾವನೊಬ್ಬ ಗುರುವಿನ ಆವಶ್ಯಕತೆಯೆನಿಸುವದು ಸ್ವಾಭಾವಿಕವಿದೆ. ಇಂಥ ಗುರುವು ಸಿಗುವದು ಕಷ್ಟ. ಆದರೂ ಹುಡುಕಿಕೊಂಡು ಕಾರ್ಯಸಾಧಿಸತಕ್ಕದ್ದು. ಆದರೆ, ಈ ಎಲ್ಲ ಪ್ರಸಂಗಗಳಲ್ಲಿ ಯಾವಾಗಲೂ ನೆನಪಿನಲ್ಲಿಡುವ ಸಂಗತಿಯು ಯಾವದೆಂದರೆ: ಶಾಸ್ತ್ರ ಅಥವಾ ಗುರುಗಳ ಮೇಲೆ ತಕ್ಕಷ್ಟಕ್ಕಿಂತ ಹೆಚ್ಚು ಅವಲಂಬಿಸಿ ಕೂಡ್ರಬಾರದು. ಶಾಸ್ತ್ರ ಇಲ್ಲವೆ ಗುರುಗಳನ್ನು ಸಾಧಕನು ಸಾಧನ ರೂಪದಲ್ಲಿ ಉಪಯೋಗಿಸಿ ಕೊಳ್ಳತಕ್ಕದ್ದಿರುತ್ತದೆ. ಅವುಗಳಿಗೆ ಗುಲಾಮನಾಗಿ ಅಂಟಿಕೊಂಡು ಕುಳಿತರೆ ಧ್ಯೇಯವು ಒಂದು ಕಡೆಗೆ ಉಳಿಯುವದು; ಸಾಧಕನೊಂದು ಕಡೆಗೆ ಉಳಿಯುವನು, ಆದುದರಿಂದ ತನ್ನ ಉದ್ದೇಶವು ಆತ್ಮಸಾಧನವೆಂಬುದನ್ನು ಎಂದಿಗೂ ಮರೆಯಲಾಗದು. ಶಾಸ್ತ್ರ, ಉತ್ಸಾಹ ಮತ್ತು ಗುರುಗಳ ವಿಷಯಕ್ಕೆ ಸ್ವಲ್ಪ ವಿಚಾರಿಸಿದ ಬಳಿಕ "ಕಾಲ"ದ ಬಗ್ಗೆ ಒಂದು ಸಂಗತಿಯನ್ನು ಧ್ಯಾನದಲ್ಲಿಡುವದು ಅವಶ್ಯವಿದೆ. ಕಾಲವು ಸಾಧಕನ ತೀವ್ರತೆಯ ಮೇಲೆ ಅವಲಂಬಿಸಿದೆ. ಕಾಲವೆಂಬ ರಂಗಭೂಮಿಯ ಮೇಲೆ ಪರಿಸ್ಥಿತಿಯು ನಾಟಕ ಮಾಡುತ್ತಿರುತ್ತದೆ. ಸಾಧಕನು ಶಾಸ್ತ್ರೋಕ್ತ ರೀತಿಯಿಂದ ಸಾಧನೆಯನ್ನಿಟ್ಟರೆ ಕ್ರಮವಾದ ಮೆಟ್ಟುಗಳಿಂದ ಉನ್ನತಿಯಾಗುತ್ತ ಹೋಗುವದು. ಇಲ್ಲದಿದ್ದರೆ ಜನ್ಮ-ಮರಣಗಳ ಕಣಿವೆಯಲ್ಲಿ ಸಹ ಹಾದು ಹೋಗಿ ಸತತವಾಗಿ ಕಾರ್ಯವನ್ನು ಮಾಡಬೇಕಾಗುತ್ತದೆ.

ಯೋಗದ ಸಾಧ್ಯವು ಇನ್ನೊಂದು ರೀತಿಯಿಂದ ಹೇಳುವದಿದ್ದರೆ ದಿವ್ಯದೃಷ್ಟಿಯನ್ನು ತಂದುಕೊಳ್ಳುವದಿರುತ್ತದೆ. ಅಹಂಕಾರ ಮತ್ತು ವಿಷಯವಾಸನೆಗಳಂಥ ಹೀನ ಭಾವಗಳನ್ನು ತೆಗೆದುಹಾಕುವದಿರುತ್ತದೆ. ತನ್ನನ್ನು ಪರಮೇಶನ ಅಡಿದಾವರೆಗಳಲ್ಲಿ ಸಮರ್ಪಿಸಿಕೊಂಡು ಸ್ವಾತಂತ್ರವನ್ನು ಪಡೆಯುವದಿರುತ್ತದೆ. ಎಲ್ಲರಲ್ಲಿ ಪರಮೇಶ್ವರನನ್ನೂ, ಪರಮೇಶ್ವರನಲ್ಲಿ ಎಲ್ಲರನ್ನೂ ಕಾಣುವದಿರುತ್ತದೆ.[೩]

"Life is the field of yoga" (Arya Vol. Page 493) ಎಂದು ಮಹರ್ಷಿ ಅರವಿಂದರ ಮತವಿದೆ. ಈಗ ವಿಶ್ವದ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣನಾದ ಆ ಸರ್ವೇಶ್ವರನ ಇಚ್ಛೆಯ ವಿರುದ್ಧವಾಗಿ ಎಲ್ಲಿಯೂ ಒಂದು

ಹುಲ್ಲು ಕಡ್ಡಿಯು ಸಹ ಅಲುಗಾಡುವಂತಿಲ್ಲ. ಆಯಾ ಕಾಲಕ್ಕೆ ಬೇಕಾದುದನ್ನು ಆತನೇ ಉಂಟು ಮಾಡುವನೆಂದು ಇವರು ಸಾರಿ ಹೇಳುತ್ತಾರೆ. ಮನುಷ್ಯನಿಗೆ ಉಂಟುಮಾಡಿದಾತನು ದೇವರು; ಆತನು ವಿದ್ಯೆಯನ್ನೂ, ಶರೀರವನ್ನೂ, ಅದ್ಭುತ ಪರಾಕ್ರಮಶಾಲಿಯಾದ ಇಚ್ಛಾಶಕ್ತಿಯನ್ನೂ ಕೊಟ್ಟಿದ್ದಾನೆ. ಇವುಗಳನ್ನು ದಯಪಾಲಿಸುವದರಲ್ಲಿ ಆತನ ಅಂತಸ್ಥ ಹೇತುವೇನಿರಬಹುದು? ಇಡೀ ಆಯುಷ್ಯವನ್ನೆಲ್ಲ ಈ ಕ್ಷುದ್ರ ಸಂಸಾರವನ್ನು ಅಹಂಕಾರ ಮಮಕಾರಗಳಿಗೆ ಒಳಗಾಗಿ ಮಾಡುವದಕ್ಕೆ ಕೊಟ್ಟಿರಬಹುದೋ? ಹಾಗಾದರೆ ಜಗದೀಶನ ಇಚ್ಛೆಯ ವಿರುದ್ಧವಾಗಿ ಆತನು ದಯಪಾಲಿಸಿದ ಅಮೌಲ್ಯ ಶಕ್ತಿಗಳನ್ನು ಮಾರಿಕೊಂಡು ಹೊಟ್ಟೆ ಹೊರಕೊಳ್ಳುವದರಲ್ಲಿ ಉಪಯೋಗಿಸಿಕೊಳ್ಳುವ ಮೂಢರಿಗೆ ಏನೆನ್ನಬೇಕು? ಶ್ರೀ ಅರವಿಂದ ಯೋಗಿಗಳು ಸೌ। ಮೃಣಾಲಿನಿದೇವಿಯವರಿಗೆ ಬರೆದ ಒಂದು ಪತ್ರದಲ್ಲಿ ಅಂದದ್ದೇನಂದರೆ: ನನಗೆ ದೇವರು ದಯಪಾಲಿಸಿದ ಬುದ್ಧಿಯನ್ನೂ, ಪ್ರತಿಭೆಯನ್ನೂ, ಸಂಪತ್ತನ್ನೂ ನನ್ನ ಸ್ವಂತಕ್ಕಾಗಿಯೇ ಉಪಯೋಗಿಸಿಕೊಳ್ಳಲಿಕ್ಕೆ ಎಳ್ಳಷ್ಟೂ ಅಧಿಕಾರವಿಲ್ಲ. ಯಾವ ದಯಾಘನನು ಇವುಗಳನ್ನು ಪ್ರೇಮದಿಂದ ನನಗೆ ಕೊಟ್ಟಿರುವನೋ ಆತನ ಪರವಾಗಿಯೇ ಅವುಗಳ ಉಪಯೋಗವನ್ನು ಮಾಡುವದು ನನ್ನ ಕರ್ತವ್ಯವಾಗಿದೆ! ಬಡಬಗ್ಗರು ಉಪವಾಸದಿಂದ ಒರಲುತ್ತಿರಲು ಚೈನಿಗಾಗಿ ಸಂಪತ್ತು ಸಂಗ್ರಹಿಸಿದರೆ ನನ್ನ ಪಾಲಿಗೆ ಕಳ್ಳತನದ ದೋಷವು ಬಾರದೆ ಎಂದೂ ನಿಲ್ಲದು! ಅಹಹಾ! ಎಷ್ಟು ಉದಾತ್ತ ವಿಚಾರಗಳಿವು!! ಆಚಾರ ವಿಚಾರಗಳಲ್ಲಿ ಪವಿತ್ರತಮರಾದಂಥ ಇಂಥ ಮಹಾತ್ಮರಿಗೆ ದೇವರು ದರ್ಶನವನ್ನು ಕೊಡದಿದ್ದರೆ ಮತ್ತಾರಿಗೆ ಪ್ರಸನ್ನನಾಗಬೇಕು? ಯೋಗಿಯಾಗಲಪೇಕ್ಷೆಯುಳ್ಳವನು ಈ ರೀತಿಯಾಗಿ ಆತ್ಮಯಜ್ಞವನ್ನು ಮಾಡಿದರೆ ಆತನಿಗೆ ಸಿದ್ಧಿಯಾಗಲೇಬೇಕು.

ಮನುಷ್ಯನಿಗೆ ಆತನಿಗಿರುವ ಇಂದ್ರಿಯಗಳಿಂದ ಸತ್ಯಜ್ಞಾನವಾಗುವದೇ ಇಲ್ಲ. ಆದುದರಿಂದ ನಿರ್ವಿಕಾರಿಯಾಗಿ ಅಂತರ್ಜ್ಞಾನವನ್ನು ಜಾಗ್ರತಪಡಿಸಿಕೊಂಡು ತದ್ದ್ವಾರವಾಗಿ ಆಚರಿಸಬೇಕು. ತನ್ನನ್ನು ವಿಶ್ವಸಂರಕ್ಷಕನ ಪಾದದಲ್ಲಿ ಅರ್ಪಿಸಿಕೊಳ್ಳಬೇಕು. ಆತನಲ್ಲಿ ಲೀನನಾಗಬೇಕು. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬ ಭಗವದುಕ್ತಿಯಂತೆ ಆಚರಿಸಬೇಕು. ಈ ಅವಸ್ಥೆಯಲ್ಲಿ ಮನುಷ್ಯನಿಗೆ ಆತನ ಸ್ವಂತದ ಇಚ್ಛೆ ಪ್ರವೃತ್ತಿಗಳೇನೂ ಉಳಿದಿರುವದಿಲ್ಲ. ಪರಮೇಶ್ವರನ ಇಚ್ಛೆಗಳೇ ಆತನ ಇಚ್ಛೆ; ಪರಮೇಶ್ವರನ ಕಾರ್ಯವೇ ಆತನ ಕಾರ್ಯವಾಗುವದು. ಈ ಅವಸ್ಥೆಯೊಳಗಣ ಪುರುಷನಿಗೆ ಯಾವ ಪ್ರಕಾರದ ಕರ್ತವ್ಯವು ಪ್ರಾಪ್ತವಾದರೂ ಅದು ಪರಮೇಶ್ವರನದೇ ಆಗಿರುವದರಿಂದ ಅದರಲ್ಲಿ ಆನಂದವನ್ನನುಭವಿಸಲಿಕ್ಕೆ ಸಿಗುತ್ತದೆ. ಈ ಸ್ಥಿತಿಯಂದರೆ ಆನಂದವೇ ಆನಂದವು; ಸದಾನಂದವು; ಸಚ್ಚಿದಾನಂದವು. ಇದೇ ಬ್ರಾಹ್ಮೀಸ್ಥಿತಿಯು; ಇದೇ ಸ್ಥಿತಪ್ರಜ್ಞಾವಸ್ಥೆಯು. ಈ ಅವಸ್ಥೆಯನ್ನು ಸಂಪಾದಿಸಿಯೇ ಕರ್ಮವನ್ನು ಮಾಡಬೇಕೆಂದು ಗೀತೆಯು ಹೇಳುತ್ತದೆಂದು ಮಹರ್ಷಿಗಳು "ಎಸ್ಸೇ ಆನ್ ಗೀತಾ" ಎಂಬ ನಿಬಂಧ ಮಾಲೆಯಲ್ಲಿ ಪ್ರತಿಪಾದಿಸಿದ್ದಾರೆ.[೪]

ವೇದಗ್ರಂಥಗಳ ಬಗ್ಗೆ ಮಹರ್ಷಿಗಳಲ್ಲಿ ಅತ್ಯಂತ ಆದರವಿದೆ. ವೇದರಹಸ್ಯವೆಂಬ ನಿಬಂಧಾವಳಿಯಲ್ಲಿ ಋಗ್ವೇದದ ಮರ್ಮವನ್ನು ಬಹು ಸರಸಾಗಿ ಪ್ರತಿಪಾದಿಸಿದ್ದಾರೆ. ವೇದದ ಅರ್ಥವನ್ನು ಮಾಡಲಿಕ್ಕೆ ಇಲ್ಲಿಯ ವರೆಗೆ ಮೂರು ಸಾರೆ ಪ್ರಯತ್ನಗಳಾದವು. ಉಪನಿಷತ್ತುಗಳು ಮೊದಲನೆಯ ಸಾರೆ ಈ ಪ್ರಯತ್ನವನ್ನು ಮಾಡಿದವು; ಅದು ಸರಿಯಾದದ್ದಿತ್ತು. ಆದರೆ, ಮುಂದಿನ ಎರಡು ಪ್ರಯತ್ನಗಳೂ ತಪ್ಪುಕ್ರಮವನ್ನು ಹಿಡಿದು ಆದುದರಿಂದ ಅವರಿಗೆ ಸರಿಯಾದ ಅರ್ಥವಾಗಲಿಲ್ಲ. ಸಾಯಣಾಚಾರ್ಯರೂ ಮತ್ತು ಅವರ ಅನುರೋಧದಿಂದ ಅರ್ಥಮಾಡಲಿಕ್ಕೆ ಹವಣಿಸಿದ ಪಾಶ್ಚಿಮಾತ್ಯ ಪಂಡಿತರೂ ವೇದಗಳ ಮರ್ಮವನ್ನೇ ತಿಳಿಯಲಿಲ್ಲವೆಂದು ಮಹರ್ಷಿಗಳು ಸ್ಪಷ್ಟವಾಗಿ ಅನ್ನುತ್ತಾರೆ. ವೇದಗಳಲ್ಲಿ ಏನಾದರೂ ಹುಚ್ಚುಕಲ್ಪನೆಗಳು ತುಂಬಿರುವವೆಂದೂ, ಯಜ್ಞಯಾಗಾದಿ ಕರ್ಮಗಳನ್ನು ಕುರಿತು ಎಲ್ಲ ಋಚೆಗಳುಂಟೆಂದೂ ಅನೇಕರು ತಪ್ಪುಗ್ರಹಿಕೆಯನ್ನು ಮಾಡಿಕೊಂಡಿದ್ದಾರೆ. ವ್ಯಂಗ್ಯಾರ್ಥದಲ್ಲಿ ಬರೆದ ಈ ಪವಿತ್ರಗ್ರಂಥಗಳನ್ನು ಯಾರೂ ಸರಿಯಾಗಿ ತಿಳಕೊಳ್ಳಲಿಲ್ಲ. ಇದರಲ್ಲಿ ಅಗ್ನಿ, ವಾಯು ಮುಂತಾದ ರೂಪಕಗಳಿಂದ

ತತ್ವಜ್ಞಾನದ ಚರ್ಚೆಯೇ ಹೇಗೆ ಮಾಡಲ್ಪಟ್ಟಿರುವದೆಂಬುದನ್ನು ಉದಾಹರಣ ಸಹಿತವಾಗಿ "ಆರ್ಯ" ಮಾಸಿಕ ಪುಸ್ತಕದಲ್ಲಿ ಗಂಭೀರ ರೀತಿಯಿಂದ ಚರ್ಚಿಸಿದ್ದಾರೆ.

ಮಹರ್ಷಿಗಳು ಸನಾತನ ಧರ್ಮದ ಅಭಿಮಾನಿಗಳಿದ್ದಾರೆ. ಹಾಗೂ ಈ ಸನಾತನ ಧರ್ಮವನ್ನು ಜಗತ್ತಿಗೆ ಕೊಡುವದೇ ಹಿಂದೂಸ್ಥಾನದ ಈಶನಿಯಮಿತ ಕಾರ್ಯವಿರುತ್ತದೆಂದು ಅವರು ತಮ್ಮ ದಿವ್ಯದೃಷ್ಟಿಯಿಂದ ಕಂಡು ಹಿಡಿದಿದ್ದಾರೆ. ಬಾಬಿಲೋನ, ಖಾಲ್ದಿಯಾ, ಗ್ರೀಸ್‌ಗಳಂಥ ಹಲವು ರಾಷ್ಟ್ರಗಳು ಹೇಳ ಹೆಸರಿಲ್ಲದಂತೆ ಆಗಿ ಹೋದವು. ಆದರೆ, ಅತಿ ಪುರಾತನ ಕಾಲದಿಂದ ಭರತಖಂಡವೇ ತಲೆ ಎತ್ತಿಕೊಂಡು ಅನೇಕ ರಾಷ್ಟ್ರಗಳ ಉದಯಾಸ್ತಗಳನ್ನು ನೋಡುತ್ತ ಇನ್ನೂ ನಿಂತಿರುವ ಉದ್ದೇಶವೇನಿರಬಹುದು? ಜಗತ್ತಿಗೆ ಧರ್ಮವನ್ನು ಕೊಡುವ ಕಾರ್ಯವು ಏಶಿಯಾ ಖಂಡದ-ಅಲ್ಲ ಭರತ ಖಂಡದ ಪಾಲಿಗೆ ಬಂದ ಕರ್ತವ್ಯವಿರುತ್ತದೆ. ಯಾಕಂದರೆ ಹಿಂದಕ್ಕೆ ಈ ಕಾರ್ಯವನ್ನು ಎರಡು ಸಾರೆ ಭರತಖಂಡವೇ ಜರುಗಿಸಿದೆ. ಕ್ರಿಸ್ತ ಧರ್ಮದ ಉತ್ಪತ್ತಿಗೆ ಕಾರಣವಾದ ಬೌದ್ಧ ಧರ್ಮವನ್ನೂ, ಅದಕ್ಕೂ ಮುಂಚೆ ಒಮ್ಮೆ ವೈದಿಕಧರ್ಮವನ್ನೂ ಹಿಂದುಸ್ತಾನವು ಜಗತ್ತಿಗೆ ಕೊಟ್ಟಿತ್ತೆಂದು ಇತಿಹಾಸವು ಹೇಳುತ್ತದೆ.[೫] ಇದಕ್ಕೆ ಪ್ರತಿಯಾಗಿ ಭೌತಿಕ ಐಶ್ವರ್ಯದ ಪಾಶ್ಚಿಮಾತ್ಯರ ದಾಳಿಗಳು ಹಿಂದುಸ್ತಾನದ ಮೇಲೆ ಬಂದವು. ಸಿಕಂದರನ ದಾಳಿಯು ಈ ಮಾತಿಗೆ ಸಾಕ್ಷಿಯಿದೆ. ಅದರಂತೆ ಈಗ ಯುರೋಪಿಯರು ತಮ್ಮ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರಲಿಕ್ಕೆ ಬಂದಿದ್ದಾರೆ. ಜಗತ್ತಿಗೆ ಸನಾತನ ಧರ್ಮದ ಉಪದೇಶವನ್ನು ಮಾಡಿ ಮಾನವ ಕುಟುಂಬಕ್ಕೆ ಸುಖಿಯಾಗಿ ಮಾಡುವದು ಭಾರತೀಯರ ಕರ್ತವ್ಯವಾಗಿದೆ. ಕನ್ಯಾಗತದಲ್ಲಿ ಭಾಗೀರಥಿಯು ಕೃಷ್ಣೆಗೆ ಬರುವಳಂತೆ. ಈಗ ಪೂರ್ವ ಪಶ್ಚಿಮ ಸಂಸ್ಕೃತಿಗಳೆಂಬ ಭಾಗೀರಥಿ-ಕೃಷ್ಣೆಗಳ ಸಂಯೋಗದ ಯೋಗವು ಬಂದಿದೆ. ದಿವ್ಯ ಧರ್ಮಗಳು ಈ ಮಾತಿಗೆ ಸಾಕ್ಷಿಯಾಗಿವೆ. ಈ ಧರ್ಮದ ನಿಜವಾದ ಅನುಯಾಯಿಗಳು ನೂರಿನ್ನೂರಾದರೂ ಸಿಕ್ಕಬಹುದೋ ಎಂಬುವ ಸಂಶಯವಿದೆ. ಹಿಂದುಸ್ಥಾನದಲ್ಲಿ ಸಂದಿಗೊಂದಿಗಳಲ್ಲಿ ಹಬ್ಬಿ, ಹೆಚ್ಚಾಗಿ ಇತರ ಜಗತ್ತನ್ನು ವ್ಯಾಪಿಸಿದ ಬೌದ್ಧಧರ್ಮವು ಇಂದಿಗೆ ಹಿಂದುಸ್ಥಾನದಲ್ಲಿಯೇ ನಾಮಾವಶೇಷವಾಗಿದೆ. ಆದರೆ ಸನಾತನಧರ್ಮವು ಮಾತ್ರ ಎಷ್ಟು ದಕ್ಕೆಗಳನ್ನು ತಿಂದರೂ ಇಂದಿಗೂ ಹಾಗೇ ಇದೆ. ಅದರ ಶುದ್ಧ ಸ್ವರೂಪದ ಒಂದು ತತ್ವವೂ ಬದಲಾಗಿಲ್ಲ. ಆದರೆ, ಅನುಯಾಯಿಗಳು ಮಾತ್ರ ಅಸದ್ವರ್ತನದಿಂದ ಅದಕ್ಕೆ ತಾತ್ಪೂರ್ತಿಕ ಮಾಲಿನ್ಯವನ್ನು ತಂದರೆ ಅದಕ್ಕೆ ಯಾವ ಉಪಾಯ? ಬೌದ್ಧ, ಕ್ರಿಸ್ತೀ ಧರ್ಮಗಳಂತೆ ಬಹುಜನ ಸಮಾಜಕ್ಕೆ ಆಚರಿಸಲಿಕ್ಕೆ ಅವ್ಯವಹಾರ್ಯವಾದ ಧರ್ಮವು ಮಾತ್ರ ಇದಲ್ಲ. ಸನಾತನ ಧರ್ಮದ ಹೊಟ್ಟೆಯಲ್ಲಿ ಇಂದಿಗೆ ಅಸ್ತಿತ್ವದೊಳಗೆ ಇರುವ ಎಲ್ಲ ಪ್ರಕಾರದ ಧಾರ್ಮಿಕ ಪಂಥಗಳೂ ಸೇರುತ್ತವೆ. ಇದು ಇಷ್ಟು ವಿಶಾಲವಾದದ್ದು. ಬೌದ್ಧ, ಕ್ರಿಸ್ತ ಮುಂತಾದ ಧರ್ಮಗಳು ಆರ್ಯಧರ್ಮದೊಳಗಿನ ಒಂದೊಂದು ಸಣ್ಣ ಪುಟ್ಟ ತತ್ವದ ಮೇಲೆ ನಿಂತಿವೆ! ಮಾನವಜಾತಿಗೆ ಆಚರಿಸಲಿಕ್ಕೆ ಇದೊಂದೇ ಧರ್ಮವು ತಕ್ಕುದ್ದಾಗಿದೆ. ಅಂತೆಯೆ ಮಹರ್ಷಿ ಅರವಿಂದಘೋಷರು ಈ ವೇದ-ನಿಕ್ಷಿಪ್ತ ಧನವನ್ನು ಧರ್ಮದ ಸಲುವಾಗಿ ಹಲಬುತ್ತಿರುವ ಜಗತ್ತಿಗೆ ಕೊಟ್ಟು ಸುಖಿಯಾಗಿ ಮಾಡಬೇಕೆಂದು ಅನ್ನುತ್ತಿರುವರು. ಮಹರ್ಷಿಗಳ ಸನಾತನ ಧರ್ಮದ ಕಲ್ಪನೆಯು ಇತ್ತಲಾಗಿ ಲೋಕರೂಢಿಯಲ್ಲಿರುವ ಅಸಡ್ಡಾಳ ಕಲ್ಪನೆಗಿಂತ ತೀರ ಭಿನ್ನವಾದದ್ದೂ ಉದಾತ್ತವಾದದ್ದೂ ಇರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಮಹರ್ಷಿಗಳು, ಒಮ್ಮೆ "ನಾನು ಹಿಂದುಸ್ತಾನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಂಗತಿಗಳನ್ನೆಲ್ಲ ಹೊಸ ಹಾಗೂ ವಿಸ್ತೃತ ಅಸ್ತಿವಾರದ ಮೇಲೆ ಕಟ್ಟತಕ್ಕವನಿದ್ದೇನೆ;" ಎಂದು ಅಂದಿದ್ದಾರೆ.

ಜಗತ್ತಿಗೆ ಧರ್ಮವನ್ನು ಕೊಡುವ ಕೆಲಸವನ್ನು ಮಾಡಲಿಕ್ಕೆ ಹಿಂದುಸ್ತಾನಕ್ಕೆ ಸ್ವಾತಂತ್ರ್ಯವು ಬೇಕು. ಸ್ವತಂತ್ರ ಹಿಂದುಸ್ತಾನವೇ ಈ ಕಾರ್ಯಕ್ಕೆ ಸಮರ್ಥವಾದೀತೇ ಹೊರ್ತು ಪರಾವಲಂಬಿಯೂ ಹೀನಮನಸ್ಕವೂ ಆದಂಥ ಹಿಂದುಸ್ತಾನವು ಎಂದೆಂದೂ ಸಮರ್ಥವಾಗಲಾರದು. ಆದ್ದರಿಂದ ಭರತಖಂಡದ ಸ್ವಾತಂತ್ರ್ಯಾರ್ಥವಾಗಿ ಪ್ರಯತ್ನಿಸುವದು ಮೊದಲನೆಯ ಕೆಲಸವು. ದೇಶದಲ್ಲಿ ದೇಶಾಭಿಮಾನದ ದೊಡ್ಡ ತೆರೆಯುಂಟಾಗಿ ಅದರಲ್ಲಿ ನಾನಾ ಜಾತಿಗಳೂ, ಪಂಥಗಳೂ ಏಕತ್ರವಾಗಿ ಕಾರ್ಯ ಮಾಡಲಿಕ್ಕೆ ಈಶ ಪ್ರೇರಣೆಯೇ ಮೂಲ ಕಾರಣವೆಂದು

ಶ್ರೀ ಅರವಿಂದ ಯೋಗಿಗಳು ಅಂದಿದ್ದಾರೆ.[೬] ಪರತಂತ್ರ ರಾಷ್ಟ್ರವು ಸ್ವಾತಂತ್ರ್ಯವನ್ನು ದೊರಕಿಸುವ ಮಾರ್ಗಗಳು ಮೂರು. ಒಂದು ಸ್ವಾವಲಂಬನದಿಂದ, ಎರಡನೆಯ ಮಾರ್ಗವು ಭಿಕ್ಷೆಬೇಡಿ, ಅಂದರೆ ಸಾಮ್ರಾಜ್ಯ ಸರಕಾರದ ಕೃಪೆದೊರಕಿಸಿ, ಅವರ ಕೈಯಿಂದ ಸ್ವಲ್ಪ ಸ್ವಲ್ಪ ಇಸಿದುಕೊಳ್ಳುತ್ತ ಹೋಗುವದು. ಅಥವಾ ಮೂರನೆಯ ದಾರಿಯೆಂದರೆ ಪರರಾಷ್ಟ್ರದವರನ್ನು ಸಹಾಯಕ್ಕೆ ಕರೆಯುವದು.

ಸಾರ್ವಭೌಮರಾಗಿ ಆಳಲಿಕ್ಕೆಂದು ಹಲವು ತರದ ಕಷ್ಟಸೋಸಿ, ತಮ್ಮ ಅನೇಕ ಸೈನಿಕರ ರಕ್ತವನ್ನು ಖರ್ಚುಮಾಡಿ ದೇಶವನ್ನು ಗೆದ್ದ ಸರಕಾರದವರು ಸುಮ್ಮಸುಮ್ಮನೆ ತಮ್ಮ ಕೈಯೊಳಗಿನ ಅಧಿಕಾರಗಳನ್ನು ಹೇಗೆ ಬಿಟ್ಟುಕೊಟ್ಟಾರು? ಜನರು ಸುಮ್ಮನೆ ಹೆಚ್ಚು ಗದ್ದಲ ಮಾಡಹತ್ತಿದರೆ ಏನೋ ಸ್ವಲ್ಪ ಕೊಟ್ಟಂತೆ ಮಾಡಿ ಅವರಿಗೆ ಸುಮ್ಮನೆ ಕೂಡಿಸುವದಕ್ಕೆ ವಿಜಯಿಗಳು ಪ್ರಯತ್ನ ಸಡುವದು ಸ್ವಾಭಾವಿಕವಿದೆ. ಆದರೆ, ಇದರಲ್ಲಿ ಆಳುವ ಜನಾಂಗದ ಕೈಯಿಂದ ತಮಗೆ ಸ್ವಾತಂತ್ರ್ಯವು ಸಿಕ್ಕೀತೆಂದು ನಂಬಿಕೊಂಡು ಕುಳಿತವರ ಮೂರ್ಖತನವು ಮಾತ್ರ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ವಿಚಾರಿಸಿದರೆ ಹಿಂದುಸ್ಥಾನದವರಿಗೆ ಯಾಚನೆಯ ಉಪಾಯವು ನಿರುಪಯುಕ್ತವೆಂದು ನಿರ್ಣಿತವಾಯಿತು. ಇನ್ನು ಪರಚಕ್ರದ ಸಹಾಯ ತಕ್ಕೊಳ್ಳುವ ಉಪಾಯದ ವಿಷಯಕ್ಕೆ ವಿಚಾರಿಸಿದರೆ ಅದೂ ಆತ್ಮಘಾತುಕ ಉಪಾಯವೆಂಬುದು ಸ್ಪಷ್ಟವಾಗುತ್ತದೆ. ಯಾಕಂದರೆ ಪರರನ್ನು ಮನೆಯಲ್ಲಿ ತಂದು ಇದ್ದರವನ್ನು ಹೊರಗೆ ಹಾಕುವದರಲ್ಲಿ ಆ ಹೊಸ ಗಂಡ (ಶೂರ)ನೇ ಗಂಟಲಕ್ಕೆ ಕುಳಿದರೆ, ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗಾಗುತ್ತದೆ. ಉಳಿದವರಿಗಿಂತ ಬ್ರಿಟಿಷರೇ ನೆಟ್ಟಗಿದ್ದಾರೆ.

ಇನ್ನು ಉಳಿದದ್ದು, ಸ್ವಾವಲಂಬನದ ಮಾರ್ಗವು. ಇದರಲ್ಲಿ ಎರಡು ಪ್ರಕಾರಗಳು. ಸಶಸ್ತ್ರವು ಮತ್ತು ನಿಶಸ್ತ್ರವು. ಸಶಸ್ತ್ರ ಪ್ರತೀಕಾರವು ಆಧುನಿಕ ಹಿಂದುಸ್ಥಾನಕ್ಕೆ ಉಪಯುಕ್ತವಿಲ್ಲ. ಆದುದರಿಂದ ಅಂತೂ ಉಳಿದದ್ದೆಂದರೆ ನಿಃಶಸ್ತ್ರ ಪ್ರತೀಕಾರವು. ೧೯೦೬ರಲ್ಲಿ ಕಲಕತ್ತೆಗೆ ರಾಷ್ಟ್ರೀಯ ಸಭೆಯಲ್ಲಿ ವೀರಪಕ್ಷದವರು ಸ್ವರಾಜ್ಯವನ್ನು ಸಂಪಾದಿಸುವ ಮಾರ್ಗವೆಂದು ಮೂರು ಸಾಧನಗಳನ್ನು ಹೇಳಿದರು. ರಾಷ್ಟ್ರೀಯ ಶಿಕ್ಷಣ, ಸ್ವದೇಶಿ ಮತ್ತು ಬಹಿಷ್ಕಾರ. ಬಹಿಷ್ಕಾರದ ವಿವರಣೆಯನ್ನು ಮಾಡುವಾಗ ಶ್ರೀ ಅರವಿಂದ ಯೋಗಿಗಳು ಕರ್ಮಯೋಗಿನ್‌ದ ಒಂದು ಸಂಚಿಕೆಯಲ್ಲಿ ಇದೆಲ್ಲವನ್ನು ಬಹು ಸರಸವಾಗಿ ವಿವರಿಸಿದ್ದಾರೆ ಮತ್ತು ಬಹಿಷ್ಕಾರದ ವ್ಯಾಪ್ತಿಯನ್ನು ಶಾಲೆ, ಕೋರ್ಟು-ಕಚೇರಿಗಳವರೆಗೆ ಬೆಳಿಸಿ, ಈಗಿನ ಅಸಹಯೋಗದ ಕಲ್ಪನೆಯನ್ನೇ ಆಗ ೧೨ ವರ್ಷಗಳ ಹಿಂದೆ ಸಂಪೂರ್ಣವಾಗಿ ಪ್ರತಿಪಾದಿಸಿದ್ದಾರೆ! ಆತ್ಮಸಾಮರ್ಥ್ಯವನ್ನು ದೊರಕಿಸದಿದ್ದರೆ ಯಾವದೂ ಸಾಧ್ಯವಾಗದು. 'ನ್ಯಾಯಮಾತ್ಮಾ ಬಲಹೀನೇನ ಲಭ್ಯಃ' ಸ್ವದೇಶಿಯ ಉಪಯೋಗ ಮಾಡಿರಿ, ಸಾಮರ್ಥ್ಯ ಬೆಳಿಸಿರಿ. ಮಾತು ಸ್ವದೇಶಿ, ಉಡಿಗೆ-ತೊಡಿಗೆ ಸ್ವದೇಶಿ, ಹೀಗೆ ಪ್ರತಿಯೊಂದು ವಿಷಯದಲ್ಲಿ ಸ್ವದೇಶೀ ವ್ರತದ ಆಚರಣವು ಬೇಕೆಂದು ಅರವಿಂದ ಯೋಗಿಗಳು ಪ್ರತಿಪಾದಿಸಿದ್ದಾರೆ.

ಮಹಾತ್ಮಾ ಗಾಂಧಿಯವರು ಮಹರ್ಷಿಗಳ ಅರ್ಧಕಾರ್ಯವನ್ನು ಈಗ ಮಾಡಿಟ್ಟಿದ್ದಾರೆ. ನಾಳೆ ಶ್ರೀ ಅರವಿಂದ ಯೋಗಿಗಳು ತಮ್ಮ ಅದ್ಭುತಕಾರ್ಯವನ್ನು ಮಾಡಲಿಕ್ಕೆ ಬರತಕ್ಕವರಿದ್ದಾರೆ. ಮಹಾತ್ಮರ ಕಾರ್ಯಗಳಿಗೆ ಉಪಯುಕ್ತರಾಗುವಂತೆ ಜಗತ್ಪಾಲಕ ಭಗವಂತನ ಚರಣಕಮಲಗಳಲ್ಲಿ ಆಯುಷ್ಯವನ್ನು ಅರ್ಪಿಸಿ, ನಿಷ್ಕಾಮ ಬುದ್ಧಿಯಿಂದ ಕಾರ್ಯಮಾಡಲಿಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುವದೇ ಬಹುಜನ ಸಮಾಜದ ಕರ್ತವ್ಯವಲ್ಲವೇ?

ಉಪಸಂಹಾರ

ಉತ್ಥಾತವ್ಯ ಜಾಗೃತವ್ಯಂ ಯೋಕ್ತವ್ಯಂ ಭೂತಿಕರ್ಮಸು ।
ಭವಿಷ್ಯತೀತ್ಯೇವ ಮನಃ ಕೃತ್ವಾ ಸತತಮವ್ಯಥೈಃ

- ಮಹಾಭಾರತ

ಮಹರ್ಷಿ ಅರವಿಂದಘೋಷರ ಚರಿತ್ರದ ಮಹತ್ವದ ಭಾಗವು ಇನ್ನು ಮುಂದೆ ಹೊರಗೆ ಬರತಕ್ಕದ್ದಿದೆ. ಭವಿಷ್ಯತ್ಕಾಲದ ಒಡಲೊಳಗೆ ಅದೃಶ್ಯವಾಗಿರುವ ಅರವಿಂದ ಯೋಗಿಗಳ ಅದ್ಭುತರಮ್ಯ ಚರಿತ್ರದ ಅನಾವರಣ ಸಮಾರಂಭವು ವೇಳಾ-ಪುರುಷನ(ವೇಳೆಯ) ಕೈಯಿಂದ ಆಗತಕ್ಕದ್ದಿದೆ. ಇದನ್ನು ಬೇಗನೇ ನೆರವೇರಿಸುವದಕ್ಕಾಗಿ ವೇಳಾ-ಪುರುಷನಿಗೆ ಆಗ್ರಹದಿಂದ ಸೂಚಿಸುತ್ತಿರುವರೋ ಏನೋ ಎಂಬಂತೆ ಮಹರ್ಷಿಗಳ ಆಗಮನದ ವಿಷಯಕ್ಕೆ ಜನರು ಉತ್ಸುಕರಾಗಿದ್ದಾರೆ. ನಮ್ಮ ಚರಿತ್ರನಾಯಕರ ಆಯುಷ್ಯದ ಪ್ರವಾಹವು ತಿರುಗುತ್ತ ತಿರುಗುತ್ತ ಒಮ್ಮೆ ತನ್ನ ನಿಜವಾದ ಸ್ಥಾನಕ್ಕೆ ಬಂತು. ಮೊದಲು ರಾಜ್ಯಮ್ಮಾನ್ಯರಿದ್ದ ಅರವಿಂದರು ಲೋಕಮಾನ್ಯ ಅರವಿಂದರಾದರು. ಮುಂದೆ ಲೋಕಮಾನ್ಯತೆಯಲ್ಲಿಯೇ ಅವರಿಗೆ ತುಷ್ಟಿಯಾಗದೆ ಮುಮುಕ್ಷುಗಳಾಗಿ ಸಾಧಕರಾದರು. ಈಗ ಈ ಸಾಧನಾವಸ್ಥೆಯು ಮುಗಿದು ಪೂರ್ಣಸಿದ್ಧಾವಸ್ಥೆಯು ಪ್ರಾಪ್ತವಾಗಿದೆ; ಮತ್ತು ಸ್ವಾನುಭವದಿಂದ ಮನುಷ್ಯನ ಆದ್ಯ ಕರ್ತವ್ಯವು ಆತ್ಮಜ್ಞಾನವನ್ನು ಮಾಡಿಕೊಳ್ಳುವದೇ ಇರುತ್ತದೆಂದು ಹಲವು ತರದ ಭಾಷೆಯಿಂದ ಜಗತ್ತಿನೆದುರಿಗೆ ಇಟ್ಟಿದ್ದಾರೆ.

ಮಹರ್ಷಿಗಳು ಹೇಳುವ ಮಾತುಗಳಲ್ಲಿ ಬಹುಭಾಗವು ಹಿಂದೂಜನರ ಪೂರ್ಣಪರಿಚಯದ್ದಿರುತ್ತದೆ. ವೈರಾಗ್ಯಪರ ವಿಚಾರಗಳೂ, ವೇದಾಂತದ ಉದಾತ್ತ ತತ್ವಗಳ ಶಾಬ್ದಿಕ ಉಚ್ಚಾರವೂ ಅವರಿಗೆ ಗರ್ಭವಾಸ ದೊಳಗಿಂದಲೇ ಕೇಳಲಿಕ್ಕೆ ಸಿಗುತ್ತಿರುತ್ತದೆ. ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲ; ಆ ಜಗಚ್ಚಾಲಕನೇ ಎಲ್ಲವನ್ನು ಮಾಡಿಸಲಿಕ್ಕೆ ಸಮರ್ಥನು; ಮನುಷ್ಯನು ಆ ಸರ್ವೇಶನ ಇಚ್ಛೆಗಳನ್ನು ಪೂರ್ಣಮಾಡಲಿಕ್ಕೆ ನಿಮಿತ್ತ ಮಾತ್ರನಾಗಿರುವನು ಎಂದು ಮುಂತಾಗಿ ಹಿಂದುಸ್ಥಾನದ ಹಳ್ಳಿ-ಕೊಂಪೆಗಳೊಳಗಿನ ಹುಂಬ ಒಕ್ಕಲಿಗರೂ ಮಾತಾಡುವರು. ಅಂದಬಳಿಕ ಶ್ರೀ ಅರವಿಂದ ಯೋಗಿಗಳು ಹೇಳಿದುದರಲ್ಲಿ ನಾವಿನ್ಯವೇನು?

ಸಾಧಾರಣವಾಗಿ ಅನೇಕರು, "ನಮ್ಮ ಕೈಯಲ್ಲೇನೂ ಇಲ್ಲ, ದೇವರು ಮಾಡಿಸಿದ್ದನ್ನು ಮಾಡುತ್ತೇವೆ," ಎಂದೆನ್ನುವರು; ನಿಜವು. ಆದರೆ, ಈ ಜನರು ಅಜ್ಞಾನದಿಂದ ಹೀಗೆ ಅನ್ನುತ್ತಿರಬೇಕು ಅಥವಾ ಠಕ್ಕತನದಿಂದ ವಂಚಿಸಲಿಕ್ಕೆ ಈ ಪ್ರಕಾರದ ಶಬ್ದಯೋಜನೆಯನ್ನು ಮತಾಡುತ್ತಿರಲಿಕ್ಕೆ ಬೇಕು. ಯಾಕಂದರೆ ಸ್ವಲ್ಪ ವಿಚಾರಿಸಿದರೆ ಈ ಜನರು ಪೂರ್ಣವಾಗಿ ಈಶ ಇಚ್ಛೆಗಳಲ್ಲಿ ವಿಲೀನರಾಗಿರುವದಿಲ್ಲೆಂದು ಕಂಡುಬರುವದು. ಮಹರ್ಷಿ ಅರವಿಂದರು,

"ನನಗೆ ಸ್ವಂತದ ಇಚ್ಛೆಗಳಿಲ್ಲ. ನಾನು ಪರಮಾತ್ಮನ ಕೈಯೊಳಗಿನ ಒಂದು ಆಯುಧವಾಗಿದ್ದು ಆತನ ಇಚ್ಛೆಗಳನ್ನು ಈಡೇರಿಸುವದರಲ್ಲಿ ನನ್ನ ಆಯುಷ್ಯದ ಉಪಯೋಗವಾಗತಕ್ಕದ್ದಿರುತ್ತದೆಂದು" ಅನ್ನುತ್ತಾರೆ. ಈ ಮಾತನ್ನು ಮಹರ್ಷಿಗಳು ಅನ್ನುವದರೊಳಗೂ, ಉಳಿದ ವಿಷಯ ಜಾಲದಲ್ಲಿ ತೊಳಲಾಡುವ ಜನರು ಅನ್ನುವದರೊಳಗೂ ಬಹಳ ಅಭ್ಯಂತರವಿರುತ್ತದೆ. ವಿಶ್ವದಲ್ಲಿ ಬೆರೆತು ತದಾಕಾರವನ್ನು ಹೊಂದಲಿಕ್ಕೆ ಅಡ್ಡಬರುವ ಅಹಂಕಾರವನ್ನು ಸುಟ್ಟು ನಾಶಮಾಡಿ "ಸೋಹಂ" ವೃತ್ತಿಯುಳ್ಳವರಾಗಿ ಶ್ರೀ ಅರವಿಂದ ಯೋಗಿಗಳು ಅನ್ನುವ ಮಾತಿದು. ಆದರೆ, ಅದನ್ನೇ ವಿಪರೀತ ಅರ್ಥದಲ್ಲಿ ಹೀನವೃತ್ತಿಗಳ ದಾಸರಾಗಿರುವ ಜನರು ಅಜ್ಞಾನದಿಂದ ಅಥವಾ ವಂಚನೆಯಿಂದ ಉಚ್ಚರಿಸಿದರೆ ಹೇಗೆ ಯೋಗ್ಯವಾದೀತು? ಅರವಿಂದ ಯೋಗಿಗಳು ದಾಸರೂ, ನಿಮಿತ್ತಮಾತ್ರರೂ ಆಗಿರುವರು; ಮೇಲೆ ಹೇಳಿದಂಥ ಜನರೂ ಗುಲಾಮರೂ ನಿಮಿತ್ತಕಾರಣರೂ ಆಗಿರುವರು. ಆದರೆ, ಮೊದಲನೆಯವರು ಪರಮಾತ್ಮನ ಆದೇಶಗಳನ್ನು ಗ್ರಹಿಸಿ ಆಚರಿಸುವದರಲ್ಲಿ ತತ್ಪರರಾಗಿದ್ದರೆ, ಎರಡನೆಯ ವರ್ಗದ:ವರು ತಮ್ಮ ಇಂದ್ರಿಯ ವಿಕಾರಗಳ ಅಪ್ಪಣೆಗಳನ್ನು ಅಮಲಿನಲ್ಲಿ ತರುವುದರೊಳಗೆ ಮಗ್ನರಾಗಿರುತ್ತಾರೆ. ಯಾರ ಬುದ್ಧಿಯು ಯಾವಾಗಲೂ ತೀರ ಶುದ್ಧನಿರ್ಣಯವನ್ನೇ ಕೊಡುವದಿಲ್ಲ ಅಥವಾ ಯಾರ ಸ್ಫೂರ್ತಿಯು ಹಗಲೆಲ್ಲ ಪವಿತ್ರವಿಚಾರದ ಕಡೆಗೇ ಇರುವದಿಲ್ಲ, ಇಂಥ ಜನರಿಗೆ, "ನನಗೆ ಈಗ ದೇವರು ಹೀಗೆ ಮಾಡಲಿಕ್ಕೆ ಬುದ್ಧಿಯನ್ನು ಕೊಟ್ಟಿದ್ದಾನೆ, ನಾನು ಮಾಡುತ್ತೇನೆ," ಎಂದೆನ್ನಲಿಕ್ಕೆ ಎಳ್ಳಷ್ಟೂ ಅಧಿಕಾರವಿಲ್ಲ. ಒಂದು ವೇಳೆ ಈ ಪ್ರಕಾರದ ಭಾಷೆಯನ್ನು ಉಪಯೋಗಿಸುತ್ತಿದ್ದರೆ ಅವರು ಅಜ್ಞಾನಿಗಳಾದರೂ ಇರಬೇಕು ಅಥವಾ ಮೋಸಗಾರರಾದರೂ ಇರಲಿಕ್ಕೆಬೇಕು.

ಆದುದರಿಂದ ಯಾರಿಗೆ ಮಹರ್ಷಿಗಳ ಸಂದೇಶದಂತೆ ಪರಮೇಶನಲ್ಲಿ ತದಾಕಾರ ವೃತ್ತಿಯನ್ನು ಹೊಂದಿ ಆತನ ಇಚ್ಛೆಗಳೇ ತನ್ನ ಇಚ್ಛೆಗಳೆಂದು ಮಾಡಿಕೊಂಡು, ಸರ್ವೇಶನ ಆಜ್ಞಾನುಸಾರವಾಗಿ ನಡೆಯುವ ಇಚ್ಛೆಯಿರುವದೋ ಅವರು ಹಿಂದೆ ಹೇಳಿದಂತೆ ಮುಂಚೆ ಆತ್ಮಶುದ್ಧಿಯನ್ನು ಮಾಡಿಕೊಳ್ಳಲಿಕ್ಕೆ ಬೇಕು. ಎಲ್ಲ ಇಂದ್ರಿಯಗಳಲ್ಲಿ ಮನಸ್ಸು ಶ್ರೇಷ್ಠವಾದದ್ದು. ಆದ್ದರಿಂದ ಮುಂಚೆ ಮನಸ್ಸಿನಿಂದ ಆರಂಭಿಸಬೇಕು. ಯಮ-ನಿಯಮಾದಿಗಳು ಮನಸ್ಸು ಅಂಕಿತವಾಗಬೇಕೆಂದೇ ಇರುತ್ತವೆ. ಕಾರಣ ಮುಂಚೆ ಮನಸ್ಸಿಗೆ ಕೈಹಾಕಬೇಕು. ಇದನ್ನು ಮಾಡುವ ಮುಂಚೆ ಮನಸ್ಸನ್ನು ಉಸುರುಗಟ್ಟುವ ಸಂಕುಚಿತ ವಾತಾವರಣದೊಳಗಿಂದ ಹೊರಗೆ ತೆಗೆದು ಅದಕ್ಕೆ ಸ್ವಾತಂತ್ರ್ಯದ ಶುದ್ಧಹವೆಯನ್ನು ಉಸುರಾಡಿಸಗೊಡಬೇಕು. ವ್ಯಕ್ತಿವಿಷಯಕ ಸಮಾಜವಿಷಯಕ ಅಥವಾ ಇತರ ಯಾವದೇ ತರದ ಕ್ಷುಲ್ಲಕ ಕಲ್ಪನಾವಲಯಗಳೊಳಗಿಂದ ಒಳ್ಳೇ ಎದೆಗಾರಿಕೆಯಿಂದ ಮೊದಲು ಹೊರಬಿದ್ದು ಹೊಸದೃಷ್ಟಿಯಿಂದ ಜಗತ್ತನ್ನು ನೋಡಲಿಕ್ಕೆ ಕಲಿಯಬೇಕು.

ಮಹರ್ಷಿಗಳ ಚರಿತ್ರದ ಫಲಶ್ರುತಿಯಾವುದು? ಅವರ ಉತ್ಕರ್ಷದ ರಹಸ್ಯವೇನು? ಧೈರ್ಯದಿಂದ ಶಾಸ್ತ್ರೋಕ್ತ ಮಾರ್ಗವನ್ನು ಸ್ವತಂತ್ರ ವಿಚಾರಪೂರ್ವಕವಾಗಿ ಅನುಸರಿಸಿದುದೇ ಅವರ ಚರಿತ್ರದ ರಹಸ್ಯ. ಹಲವರು ಉತ್ಕರ್ಷವನ್ನು ಮಾತ್ರ ಬಯಸುವರು. ಆದರೆ, ಪ್ರಯತ್ನ ಮಾಡಲಿಕ್ಕೆ ಒಲ್ಲರು. ಆಯುಷ್ಯದ ಸಾಧ್ಯ-ಸಾಧನಗಳನ್ನು ನಿಶ್ಚಯಿಸದೆ ಪ್ರವಾಹ ಪತಿತರಾಗಿ ಯಾವತ್ತು ತಿರುಗಣೆಗಳಲ್ಲಿ ಸಿಕ್ಕುತ್ತ ಒದ್ದಾಡುತ್ತ ದಿನಗಳನ್ನು ಕಳೆಯುವರು. ಆಯುಷ್ಯದ ಸಾಧ್ಯವು ವಿಷಯ-ಭೋಗವೇ, ಪ್ರಜೋತ್ಪಾದನವೇ, ಧನಾರ್ಜನೆಯೇ, ಕೀರ್ತಿಯೇ, ವಿದ್ಯಾವ್ಯಾಸಂಗವೇ ಅಥವಾ ಇವೆಲ್ಲವುಗಳಿಂದ ಮತ್ತೇನಾದರೂ ಒಂದು ದೊಡ್ಡದಿದ್ದು ಅದನ್ನು ದೊರಕಿಸಿಕೊಳ್ಳುವದೇ ಹೀಗೆ ಯಾವದೆಂಬದನ್ನು ಮುಂಚೆ ಸ್ಥಿರಪಡಿಸಿ, ಕಾರ್ಯಕ್ಕೆ ಹತ್ತಿದರೆ ಇಚ್ಛಿತ ಯಶಸ್ಸು ಸಿಕ್ಕಿತೋ ಇಲ್ಲವೋ ಎಂಬುದನ್ನು ತಿಳಿಯಲಿಕ್ಕೆ ಅನುಕೂಲವಾಗುವದು. ಮೊಟ್ಟಮೊದಲು ಅಂತಃಶುದ್ಧಿಯನ್ನು ಮಾಡಿಕೊಂಡು ಅಥವಾ ಮಾಡಿಕೊಳ್ಳುತ್ತ ಯಾವದೊಂದು ನಿಶ್ಚಿತ ಧ್ಯೇಯದ ಸಾಧನೆಗೆ ಪ್ರವರ್ತಿಸುವದು ಉಚಿತ ಧ್ಯೇಯವು ಧ್ರುವ ನಕ್ಷತ್ರದಂತೆ ಸ್ಥಿರವಾದದ್ದಿರಲಿಕ್ಕೆ ಬೇಕು. ಯಾವದೇ ಧ್ಯೇಯದ ಸಿದ್ಧಿಗಾದರೂ ಶುದ್ಧವೂ, ಸಾತ್ವಿಕವೂ, ಪ್ರಶಾಂತವೂ ಆದ ಮನಸ್ಸಿನ ಆವಶ್ಯಕತೆಯಿರುತ್ತದೆ. ಮೊದಲು ಆತ್ಯಂತಿಕ ಧ್ಯೇಯವಾವುದೆಂಬದನ್ನು ನಿಶ್ಚಯಿಸಿ, ಬಳಿಕ ಅದರ

ಸಿದ್ಧಿಯವರೆಗಿನ ಮಧ್ಯದೊಳಗಿನ ಕೆಲವು ಮೆಟ್ಟುಗಳನ್ನು ಅಂದರೆ ತಾತ್ಕಾಲಿಕ ಸಾಧ್ಯಗಳನ್ನು ಗೊತ್ತು ಮಾಡಿಕೊಳ್ಳಬೇಕು. ಈ ತಾತ್ಕಾಲಿಕ ಸಾಧ್ಯಗಳು ಪರಿಸ್ಥಿತಿಯಂತೆ ಬದಲಾಗುತ್ತಿರುತ್ತವೆ. ಇವುಗಳಿಗೆ ವಿಶೇಷ ಅಂಟಿಕೊಳ್ಳದೆ ಆತ್ಯಂತಿಕ ಧ್ಯೇಯವು ಹೇಗೆ ಸಾಧ್ಯವಾದೀತೆಂಬುದರ ಕಡೆಗೆ ಸಂಪೂರ್ಣ ಚಿತ್ತವನ್ನಿಡಬೇಕು. ತಾತ್ಪೂರ್ತಿಕ ಸಾಧ್ಯಗಳು ಸಾಧನಗಳೆಂಬುದನ್ನು ಮರೆಯಕೂಡದು. ಆತ್ಯಂತಿಕ ಧ್ಯೇಯದ ಮಧ್ಯದೊಳಗಿನ ಕೆಲವು ಮೆಟ್ಟುಗಳೇ ಕಡೆಯವೆಂದು ತಿಳಕೊಂಡರೆ ಘಾತವಾಗುತ್ತದೆ.

ಆದುದರಿಂದ, ಯಾರೇ ಆಗಲಿ, ತೀರ ಉಚ್ಚವಾದ ಹಾಗೂ ಸ್ಥಿರವಾದ ಆತ್ಯಂತಿಕ ಧ್ಯೇಯವನ್ನು ತಮ್ಮೆದುರಿಗೆ ಇಡಬೇಕು, ಕೆಲವು ಕ್ಷುದ್ರರು ಅದಕ್ಕೆ ನಗಬಹುದು, ನಗಲಿ. ಈ ಜಗತ್ತಿನೊಳಗೆ ಹೀಗೆ ಉಚ್ಚಧ್ಯೇಯದಿಂದ ಪ್ರೇರಿತವಾದವರಿಂದಲೇ ಏನಾದರೂ ಅಲ್ಪಸ್ವಲ್ಪ ಮಹತ್ಕಾರ್ಯಗಳಾಗಿರುತ್ತವೆಂಬುದು ಆ ಮಂದಮತಿಗಳಿಗೇನು ಗೊತ್ತು? ಹೆಂಡರು ಮಕ್ಕಳ ಮೋಹದೊಳಗಿಂದ, ಲಕ್ಷ್ಮಿಯ ಮದದೊಳಗಿಂದ, ಅಧಿಕಾರದ ಗಮಜಿನೊಳಗಿಂದ ಅಥವಾ ಅಲ್ಪವಿದ್ಯೆಯ ಮಹಾಗರ್ವದೊಳಗಿಂದ ಹೊರಗೆ ಬಂದು ವಿಚಾರಿಸಲು ಅಸಮರ್ಥರಾದ ಕ್ಷುದ್ರಪ್ರಾಣಿಗಳ ಚೇಷ್ಟೆಗೆ ಭಯಪಟ್ಟು ಆತ್ಮನಾಶವನ್ನು ಮತಾಡಿಕೊಳ್ಳುವದೇ ಲೇಸಾದೀತೇ? ಧ್ಯೇಯವು ದೊಡ್ಡದಿರುವದೆಂದು ಬೆದರಿ ಫಲವಿಲ್ಲ. ಪೂರ್ಣಮಾಡುವ ಹುಚ್ಚು ಹತ್ತಲಿ. ಈ ಹುಚ್ಚು ಕಾರ್ಯವನ್ನು ತಾನೇ ಮಾಡಿಸುವದು. ಅರವಿಂದ ಯೋಗಿಗಳು ತಮಗೆ ದೇವರನ್ನು ಕಾಣುವ ಹುಚ್ಚು ಹಿಡಿದಿದೆಯೆಂದು ಪತ್ನಿಗೆ ತಿಳಿಸಿದ್ದರು. ಆ ಹುಚ್ಚು ಅವರನ್ನು ಇಂದು ಮಹರ್ಷಿಗಳನ್ನಾಗಿ ಮಾಡಿತು. ಕೌಂಟಝೆಪೆಲಿನನ ವಿಮಾನದ ಹುಚ್ಚು ಇಂದು ವಿಮಾನಗಳಷ್ಟು ಅಸ್ತಿತ್ವದಲ್ಲಿ ತಂದಿತು. ಯಾವದೇ ಕೃತ್ಯವು ಮೂರ್ತಸ್ವರೂಪವನ್ನು ಧರಿಸಿ ಭೂಲೋಕದಲ್ಲಿ ಬರುವ ಮೊದಲು ಕಲ್ಪನಾ ಸೃಷ್ಟಿಯಲ್ಲಿ ಉದಯ ಹೊಂದುತ್ತದೆ. ಇಂದಿನ ಜೀವಂತ ವಿಚಾರಗಳು ನಾಳಿನ ಜಗತ್ತಿನಲ್ಲಿ ಮೂರ್ತಸ್ವರೂಪವನ್ನು ಹೊಂದುವವು. ಬ್ರಹ್ಮನು ಸೃಷ್ಟಿಯನ್ನು ಸೃಜಿಸುವ ಮೊದಲು ಸಂಕಲ್ಪವನ್ನು ಮಾಡಿದನು; ಬಳಿಕ ಸೃಷ್ಟಿಯಾಯಿತೆಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಅಂದಮೇಲೆ ದಿವ್ಯವೂ, ಪವಿತ್ರವೂ, ಸ್ಥಿರವೂ, ಆತ್ಮೋನ್ನತಿಕರವೂ ಆದ ಅತ್ಯುದಾತ್ತ ಧ್ಯೇಯವನ್ನು ಪ್ರತಿಯೊಬ್ಬನು ತನ್ನೆದುರಿಗೆ ಇಟ್ಟುಕೊಂಡು ಅದರ ಸಾಧನೆಯಲ್ಲಿಯೇ ಆಯುಶ್ಯವನ್ನು ಕಳೆಯುವದು ಕರ್ತವ್ಯವಲ್ಲವೇ?

ಕರ್ಮವು ಜಡವು. ಅದಕ್ಕೆ ಉಚ್ಚ-ನೀಚತ್ವಗಳೇನೂ ಇಲ್ಲ, ಅದು ಕರ್ತೃವಿನ ಭಾವನೆಯ ಮೇಲೆ ಅವಲಂಬಿಸಿದೆ. ನೀರಿಗೆ ಬಣ್ಣವಿರುವದಿಲ್ಲ. ಹಾಕಿದ ಬಣ್ಣವೇ ನೀರಿನದು. ಕೃಷ್ಣನು ರಾಜಸೂಯ ಯಜ್ಞದಲ್ಲಿ ಮುಸರಿಯನ್ನು ಬಳಿದನೆಂದೂ, ಯುದ್ಧದಲ್ಲಿ ಸಾರಥಿಯಾಗಿದ್ದನೆಂದೂ ಯಾರೂ ದೂಷಿಸಿಲ್ಲ. ರಾಮನು ಗೊಲ್ಲತಿಯ ಎಂಜಲದ ಬೋರೇ ಹಣ್ಣುಗಳನ್ನು ತಿಂದನೆಂದು ಯಾರೂ ನಿಂದಿಸಿಲ್ಲ. ನಿಂದೆ ಅಥವಾ ದೂಷಣೆಯು ಆ ಕರ್ಮವನ್ನು ಹೀನ ಭಾವನೆಯಿಂದ ಮಾಡಿದರೆ ಬರುತ್ತದೆ. ಆದುದರಿಂದ ಪ್ರತಿಯೊಬ್ಬರು ತಮ್ಮಲ್ಲಿರುವ ಯೋಗ್ಯತೆಯಂತೆ ಅನುಕೂಲವಿರುವ ಪರಿಸ್ಥಿತಿಯಂತೆ ಆತ್ಯಂತಿಕ ಧ್ಯೇಯದ ಸಾಧನೆಗೆ ಯತ್ನಿಸುವಾಗ ನಿಂದಕರನ್ನು ಲಕ್ಷಿಸದೆ ತಮಗೆ ಸಾಧ್ಯವಿರುವ ಮಾರ್ಗದಿಂದ ಹೋಗಲಿಕ್ಕೆ ಅಡ್ಡಿಯಿಲ್ಲ. ಸರ್ವೇಶ್ವರನನ್ನು ತಮ್ಮ ಕರ್ಮಮಯ ಪುಷ್ಪಗಳಿಂದ ಆರಾಧಿಸುವ ಅಧಿಕಾರವು ಪ್ರತಿಯೊಬ್ಬರಿಗೆ ಇರುತ್ತದೆ. ಪರಮಾತ್ಮನಿಗೆ ಗುಲಾಬಿ ಹೂವಿನಷ್ಟೇ ಮಲ್ಲಿಗೆಯ ಅಥವಾ ಚಂಡಿನ ಹೂವು ಸೇರುತ್ತದೆ ಅದನ್ನು ಏರಿಸುವವನ ಭಕ್ತಿಯ ಮೇಲೆ ಎಲ್ಲವೂ ಅವಲಂಬಿಸಿದೆ. ಕಾವ್ಯಶಕ್ತಿಯಿದ್ದವನು ಕವಿತ್ವದಿಂದಲೂ, ಚಿತ್ರಲೇಖನ ಕುಶಲನು ಚಿತ್ರಕಲೆಯಿಂದಲೂ, ಗಾಯಕನು ಗಾಯನ ದಿಂದಲೂ, ಮಾತುಗಾರನು ವಕ್ತೃತ್ವದಿಂದಲೂ ಹೀಗೆ ಯಾವ ಶಕ್ತಿಯೇ ಇರಲಿ ತದ್ವಾರವಾಗಿ ಪರಮಾತ್ಮನ ಸೇವೆಯನ್ನು ಮಾಡಲಿಕ್ಕೆ ಬರುತ್ತದೆ. ಆದರೆ, ದೇವದತ್ತ ಶಕ್ತಿಗಳ ದುರುಪಯೋಗವನ್ನು ಮಾಡಿಕೊಳ್ಳಕೂಡದು. ಸ್ವಂತದ ಪ್ರತಿಷ್ಠೆಯನ್ನು ಬೆಳಿಸಲಿಕ್ಕೆ ಇಲ್ಲವೆ ಪರಪೀಡನೆಗೆ ಅಥವಾ ಇತರ ಕ್ಷುದ್ರರೀತಿಯಲ್ಲಿ ಆ ಶಕ್ತಿಯ ಉಪಯೋಗವನ್ನು ಮಾಡಿಕೊಂಡರೆ ಅದು ಪಾಪ. ಏನನ್ನೇ ಮಾಡಿದರೂ ಪರಮೇಶ್ವರನಿಗೆ ಮುಟ್ಟಲೆಂಬ ಬುದ್ಧಿಯಿಂದ ಆರಂಭಿಸತಕ್ಕದ್ದು. ಹೆಂಡಿರು ಮಕ್ಕಳ ಹೊಟ್ಟೆಗೆ ಹಾಕಲಿ, ಕಬೀರನಂತೆ ಸಂತಸಜ್ಜನರ ಸಲುವಾಗಿ

ತುಡುಗು ಮಾಡಲಿ, ದಿಲೀಪನಂತೆ ಆಕಳ ಸಲುವಾಗಿ ಆತ್ಮಾರ್ಪಣ ಮಾಡಲಿ, ಏನೂ ಮಾಡಿದರೂ ಅದರ ಮೂಲಭೂತ ಕಲ್ಪನೆಯು, "ಇದು ಸರ್ವೇಶ್ವರನ ಸೇವೆಯೆಂದೇ" ಇರತಕ್ಕದ್ದು, ಆದರೆ ಇದಕ್ಕೆ ವಿಪರೀತವಾಗಿ ಎಲ್ಲ, ವೈಯುಕ್ತಿಕ ಅಥವಾ ಸಣ್ಣಪುಟ್ಟ ಸಮಾಜದ ಇಲ್ಲವೆ ಜಾತಿಯ ಹಿತಕ್ಕೆಂಬ ಭಾವನೆಯಿಂದ ಎಂಥ ಸಾಹಸವನ್ನು ಮಾಡಿದರೂ ಅದು ನಿರರ್ಥಕವು, ನಿಂದ್ಯವು, ಪಾಪಕರ.

ಶ್ರೀ ಅರವಿಂದ ಮಹರ್ಷಿಗಳ ಈ ಸಂದೇಶವನ್ನು ಗ್ರಹಿಸಿ ಪಚನ ಮಾಡಿಕೊಂಡು ಅದನ್ನು ಕೃತಿಯಲ್ಲಿ ತರಲಿಕ್ಕೆ ಬಂಧುಗಳೇ, ಸಿದ್ಧರಿರುವಿರೋ? ಏಳಿರಿ. ನಿದ್ರೆ ಸಾಕು. ಸ್ವಾರ್ಥದ ಬಡಿದಾಟಗಳನ್ನು ಸುಟ್ಟುಬಿಡುವ ಮಹರ್ಷಿ ಅರವಿಂದ ಘೋಷರವರ ಈ ಸಂದೇಶ ಗ್ರಹಣಮಾಡಿ ಕಾರ್ಯಕ್ಕೆ ಹತ್ತಿದರೆ ಯಾವ ಜಾತಿಯ ಅಥವಾ ಪಂಥದ, ಪ್ರಶ್ನವೂ ಅಡ್ಡಬರುವಂತಿಲ್ಲ. ಯಾಕಂದರೆ ಇದು ಅಷ್ಟು ಉದಾತ್ತವಾಗಿದೆ. ಇದು ದೇವರ ಆದೇಶವಿದೆ. ಇದು ಮಾನವ ಕುಟುಂಬದ ಹಿತದ ಬೀಜಮಂತ್ರವಿದೆ. ಸ್ವಾರ್ಥಸಾಧಕರ ಬೆನ್ನು ಹತ್ತುವದು ಸಾಕಾಯಿತು. ಮಹರ್ಷಿಗಳ ಕಣ್ಣೆದುರಿಗೆ ಒಂದೇ ಜಾತಿಯ ಹಿತವಿಲ್ಲ; ಒಂದೇ ಸಮಾಜದ ಹಿತವಿಲ್ಲ; ಒಂದೇ ದೇಶದ ಹಿತವಿಲ್ಲ; ಒಂದೇ ಮಾನವವಂಶದ ಹಿತವಿಲ್ಲ; ಒಂದೇ ಜಗತ್ತಿನ ಹಿತವಿಲ್ಲ. ಇಡೀ ವಿಶ್ವದ ಹಿತವೇ ಅವರ ಸಾಧ್ಯವಾಗಿದೆ. ಪರಮೇಶ್ವರನ ಆಜ್ಞೆಗಳನ್ನು ಜರುಗಿಸಲಿಕ್ಕೆ ನಿಮಿತ್ತಮಾತ್ರರಾಗುವದೇ ಅವರ ಧ್ಯೇಯವಾಗಿದೆ. ಪರಮಾತ್ಮನಿಗೆ ಎಲ್ಲರೂ ಅಷ್ಟೇ. ಹಿಂದುಗಳೂ ಅಷ್ಟೆ; ಮುಸಲ್ಮಾನರೂ ಅಷ್ಟೆ; ಯುರೋಪೀಯರೂ ಅಷ್ಟೆ; ಮನುಷ್ಯರೂ ಅಷ್ಟೆ; ತದಿತರ ಪ್ರಾಣ್ಯುದ್ಭಿಜಾದಿ ಕೋಟಿಗಳೂ ಅಷ್ಟೇ. ಎಲ್ಲವುಗಳ ಕಲ್ಯಾಣವೇ ಪರಮೇಶ್ವರನ ಉದ್ದೇಶ.

ಈ ಸಂದೇಶವನ್ನು ಅಮಾನ್ಯಮಾಡುವದೆಂದರೆ ದೇವರನ್ನು ಅಮಾನ್ಯಮಾಡಿದಂತಾಗುವದು. ಆತ್ಮಶುದ್ಧಿಯನ್ನು ಮಾಡಿಕೊಂಡು ಸತ್ಕ್ರಿಯ ಕುಸುಮಗಳಿಂದ ಜಗತ್ಪಾಲಕನನ್ನು ಆರಾಧಿಸುವದಕ್ಕೆ ಅಸಮ್ಮತಿಯನ್ನು ತೋರಿಸುವದೆಂದರೆ, ಅದು ಸ್ವಂತದ ಘಾತವು, ಸಮಾಜದ ಅನಹಿತವು, ದೇಶದ ದುರ್ದೈವವು, ಮಾನವ ಕುಟುಂಬದ ಅಪಮಾನವು. ಪರಮೇಶ್ವರನ ಅವಜ್ಞೆ.

ಏಳಿರಿ ! ಎಚ್ಚರಾಗಿರಿ ! ಮುಂದಕ್ಕೆ ಸಾಗಿರಿ !!

ಪೂರಕ ಪ್ರಕರಣಂ

ಮಹರ್ಷಿ ಅರವಿಂದ ಬಾಬುಗಳ ರಸಾಲವಾಣಿಯಿಂದ ನಾಲ್ಕು ಉಪದೇಶದ ಮಾತುಗಳನ್ನು ಕೇಳಲಿಕ್ಕೆ ಸಿಕ್ಕವರು ಧನ್ಯರು! ಆದರೆ ಆ ಭಾಗ್ಯವು ಎಲ್ಲರ ಹಣೇಬರಹದಲ್ಲೆಲ್ಲಿರುವದು? ಕನ್ನಡವಾಚಕರಿಗೆ ಅವರ ಉದಾತ್ತವಿಚಾರಗಳ ಕಲ್ಪನೆಯು ಸ್ಥೂಲಮಾನದಿಂದಾದರೂ ಆಗಲೆಂಬುವ ಹೇತುವಿನಿಂದ ಬಾಬುಗಳವರು ಹೌರಾದಲ್ಲಿ ೧೯೦೭ರಲ್ಲಿ ಒಮ್ಮೆ ಅಲ್ಲಿಯ ಪೀಪಲ್ಸ್ ಅಸೋಸಿಏಶನದ ವಾರ್ಷಿಕ ಸಭೆಯ ಮುಂದೆ ಕೊಟ್ಟ ಒಂದು ವ್ಯಾಖ್ಯಾನದ ಸಾರವನ್ನು ಕೆಳಗೆ ಕೊಟ್ಟಿದೆ. ಮೂಲವ್ಯಾಖ್ಯಾನದ ಸೌಂದರ್ಯದ ಅಲ್ಪಾಂಶವಾದರೂ ಇದರಲ್ಲಿ ಸಾಧಿಸಿಲ್ಲ. ಇಂಗ್ಲೀಷ ಬಲ್ಲ ವಾಚಕರು ಅದನ್ನು ಮೂಲದಲ್ಲಿ ಓದಿ ತೃಪ್ತಿಪಡಬೇಕು. ಏನೂ ಇಲ್ಲದ್ದಕ್ಕಿಂತ ಅಲ್ಪವಾದರೂ ಲೇಸೆಂದು ಆ ಸ್ಫೂರ್ತಿದಾಯಕ ಭಾಷಣದ ಸಾರಾಂಶವನ್ನು ಕೆಳಗೆ ಕೊಟ್ಟಿರುತ್ತದೆ.

೧. ಸಮಾಜಗಳ ಹಕ್ಕು[2]

ನನ್ನ ಮಿತ್ರರಾದ ಗಿಸ್ಪತಿ ಕಾವ್ಯತೀರ್ಥರು ತಮ್ಮ ಮೇಲಿನ ಜವಾಬುದಾರಿಯನ್ನು ತಪ್ಪಿಸಿ ಅದನ್ನು ನನ್ನ ಮೇಲೆ ಹಾಕಿದ್ದಾರೆ. ನಾನು ಈ ವಿಷಯದ ವಿವೇಚನವನ್ನು ಸ್ವಲ್ಪ ವಿಸ್ತೃತದೃಷ್ಟಿಯಿಂದ ಮಾಡತಕ್ಕವನಿದ್ದೇನೆ. ಇಂದು ಈ ವಿಷಯವನ್ನೇ ತಕ್ಕೊಳ್ಳಲಿಕ್ಕೆ ಕಾರಣಗಳು ಎರಡು. ಇಂದಿನ ಈ ಸಭೆಯು ನೆರೆದ ಉದ್ದೇಶವು ನನ್ನ ವಿಷಯಕ್ಕೆ ಸಂಬಂಧಪಟ್ಟಿರುವದು ಮೊದಲನೆಯದು. ಹಾಗೂ ಸಮಾಜಗಳ ಯಾವ ಹಕ್ಕುಗಳು ಜಗತ್ತಿನೊಳಗೆ ಎಲ್ಲ ಕಡೆಯಲ್ಲಿ ರಾಷ್ಟ್ರದ ಜೀವಾಳದ ಸಂಗತಿಗಳೆಂದು ತಿಳಿಯಲ್ಪಡುವವೋ ಅಂಥ ಆ ಹಕ್ಕುಗಳನ್ನು ನಷ್ಟಪಡಿಸಲಿಕ್ಕೆ ಸರಕಾರದವರು ಯತ್ನಿಸುವದು ಎರಡನೆಯದು.

ದೇಶವು ರಾಜನಿಂದಾಳಲ್ಪಡುತ್ತಿರಲಿ, ಅಲ್ಪಸಂಖ್ಯಾಕರಿಂದ ಸಂರಕ್ಷಿಸಲ್ಪಡುತ್ತಿರಲಿ ಅಥವಾ ಬಹುಸಂಖ್ಯಾಕರಿಂದ ನಡಿಸಲ್ಪಡುತ್ತಿರಲಿ ಯುರೋಪದೊಳಗಿನ ಜನರು ತಮಗೆ ಮೂರು ಜನ್ಮಸಿದ್ಧ ಹಕ್ಕುಗಳಿರುತ್ತವೆಂದು ತಿಳಿಯುತ್ತಾರೆ. ಈ ಪವಿತ್ರವಾದ ಜನ್ಮಸಿದ್ಧ ಹಕ್ಕುಗಳಿಗೆ ಯಾರಾದರೂ ಕೈ ಹಾಕಿದರೆ ಅದು ಅವರಿಗೆ ಸಹನವಾಗುವದಿಲ್ಲ. ಈ ಹಕ್ಕುಗಳಾವುವೆಂದರೆ ಒಂದನೆಯದು ಭಾಷಣಸ್ವಾತಂತ್ರ್ಯ; ಎರಡನೆಯದು ಮುದ್ರಣ ಸ್ವಾತಂತ್ರ್ಯ; ಮೂರನೆಯದು ಸಭಾಸ್ವಾತಂತ್ರ್ಯ; ಭಾಷಣ ಸ್ವಾತಂತ್ರ್ಯದಿಂದ ಜನರಲ್ಲಿ ಕಲ್ಪನೆಗಳು ಪ್ರಸಾರವಾಗುತ್ತದೆ. ಆತ್ಮೋನ್ನತಿಗೆ ಭಾಷಣ ಸ್ವಾತಂತ್ರ್ಯವೇ ಕಾರಣವು. ನಮ್ಮ ತತ್ವಜ್ಞಾನದಂತೆ ಶಬ್ದ-ಸೃಷ್ಟಿಯಿಂದ ಜಗದುತ್ಪತ್ತಿಗೆ ಆರಂಭವಾಯಿತು. ಭಾಷಣ ಸ್ವಾತಂತ್ರ್ಯದಿಂದ ಸಂಸ್ಥೆಗಳು ಹೊರಡುತ್ತುವವು. ರಾಜ್ಯಗಳು

ಉದಯಾಸ್ತಗಳನ್ನು ಹೊಂದುವವು. ಭಾಷಣಗಳಿಗೆ ಆರಂಭದಲ್ಲಿ ಭೌತಿಕ ಶಕ್ತಿಯ ಬೆಂಬವಿಲ್ಲದಿದ್ದರೂ ಜನರಲ್ಲಿ ಕಲ್ಪನೆಗಳ ಪ್ರಸಾರವಾಗಹತ್ತಿತೆಂದರೆ ಕಾರ್ಯಕ್ಕೆ ಆರಂಭವಾಗಹತ್ತುವದು. ಮೊದಲು ಅವ್ಯವಹಾರ್ಯ (ಅಶಕ್ಯ) ವೆನಿಸುತ್ತಿದ್ದವುಗಳೇ ಭಾಷಣ ಸ್ವಾತಂತ್ರ್ಯದಿಂದ ಜನರಲ್ಲಿ ಕಲ್ಪನೆಗಳು ಹರಡಿಕೊಂಡವೆಂದರೆ ಬರಬರುತ್ತ ವ್ಯವಹಾರ್ಯ (ಶಕ್ಯ) ಕೋಟಿಯಲ್ಲಿ ಬರುವವು. ಭಾಷಣಸ್ವಾತಂತ್ರ್ಯದ ಹಕ್ಕು ಕ್ಷುದ್ರವಲ್ಲ. ಅದೊಂದು ಅದ್ಭುತ ಶಕ್ತಿಯಿರುತ್ತದೆ. ಅದರಿಂದ ಕಲ್ಪನಾತೀತಗಳಾದ ಪರಿಣಾಮಗಳು ಆಗುತ್ತವೆ. ಮೊದಲಿಗೆ ಭಾಷಣದ ಪರಿಣಾಮಗಳು ಅಲ್ಪವೆನಿಸುತ್ತಿದ್ದರೂ ಕಡೆಯಲ್ಲಿ ಭಾಷಣಸ್ವಾತಂತ್ರ್ಯಕ್ಕೆ ಜಯಸಿಗದೆ ಉಳಿಯುವದಿಲ್ಲ.

ಮುದ್ರಣಸ್ವಾತಂತ್ರ್ಯವು ಭಾಷಣ ಸ್ವಾತಂತ್ರ್ಯದ ಎರಡನೇ ರೂಪವು. ಇದು ಕಾಗದಗಳೆಂಬ ಪಕ್ಕಗಳ ಸಹಾಯದಿಂದ ಊರಿಂದ ಊರಿಗೆ, ಪ್ರಾಂತದಿಂದ ಪ್ರಾಂತಕ್ಕೆ, ದೇಶದಿಂದ ದೇಶಕ್ಕೆ ಹಾರಿ ಕಲ್ಪನೆಗಳ ಪ್ರಸಾರಮಾಡುತ್ತದೆ. ಬಳಿಕ ಒಂದೇ ತರದ ಆಕಾಂಕ್ಷೆಗಳಿಂದ ಜನರು ಏಕತ್ರರಾಗಹತ್ತುವರು. ಇದರಿಂದ ಸಮಾಜಗಳಾಗುವವು ಸಭೆಗಳಲ್ಲಿ ವ್ಯಾಖ್ಯಾತೃವು ಮಾಡಿದ ಸ್ಫೂರ್ತಿದಾಯಕ ಉಪದೇಶವನ್ನು ಕೇಳಿ ಜನರಲ್ಲಿ ಉತ್ಸಾಹವುಂಟಾಗುವದು. ಸಾಮಾನ್ಯ ಮಹತ್ವಾಕಾಂಕ್ಷೆ, ಹುರುಪು, ಕಾರ್ಯಮಾಡುವ ಇಚ್ಛೆ ಇವುಗಳಿಂದ ಜನರು ಒಕ್ಕಟ್ಟಾಗಿ ಕೆಲಸ ಮಾಡಹತ್ತುವರು. ಸಂಘಟಿತ ಸ್ವರೂಪವು ಹೆಚ್ಚಾಗುವದು. ಬಂಧು-ಭಾವವು ಬೆಳೆಯುತ್ತ ನಡೆಯುವದು. ಆದರಿಂದ ಆರಂಭದಲ್ಲಿ ಕಲ್ಪನಾ ಸೃಷ್ಟಿಯೊಳಗಿನವೆನಿಸುತ್ತಿದ್ದ ಸಂಗತಿಗಳು ಪ್ರತ್ಯಕ್ಷ ಕೃತಿಯಲ್ಲಿ ಬರುವವು. ರಾಷ್ಟ್ರೀಯ ಜೀವನಕ್ಕೆ ಪೋಷಕವಾದ ಇಂಥ ಹಕ್ಕುಗಳನ್ನು ಕಳಕೊಳ್ಳಲಿಕ್ಕೆ ಜನರು ಒಪ್ಪುವದಿಲ್ಲ. ಇವುಗಳನ್ನು ಯಾರಾದರೂ ಕಸುಗೊಳ್ಳಲಿಚ್ಛಿಸಿದರೆ ಸಿಟ್ಟಾಗುವರು.

ಮನುಷ್ಯ ಕೋಟಿಯ ಉದ್ಧಾರದ ಮೂರುಧರ್ಮತತ್ವಗಳಿರುತ್ತವೆ. ಅವು:- ೧. ಸ್ವಾತಂತ್ರ್ಯ; ೨. ಸಮತ್ವ; ೩. ಬಂಧುಭಾವ. ಇವನ್ನು ಆಚರಣದಲ್ಲಿ ತರುವದೇ ಮಾನವ ಕುಟುಂಬದ ಧ್ಯೇಯವಾಗಿರುತ್ತದೆ. ಮನುಷ್ಯನಿಗೆ ಈ ಲೋಕದಲ್ಲಿ ಮುಕ್ತಿಯನ್ನು ದೊರಕಿಸತಕ್ಕದ್ದಿರುತ್ತದೆಂದು ನಮ್ಮ ಧರ್ಮವೂ ತತ್ವಜ್ಞಾನಗಳೂ ಹೇಳುತ್ತವೆ. ಇದನ್ನು ದೊರಕಿಸುವಾಗ ಹಾದಿಯಲ್ಲಿ ಬಂದ ವಿಘ್ನಗಳನ್ನು ನಿವಾರಿಸಿ ಹಾಗೇ ಮುಂದೆ ಧ್ಯೇಯವನ್ನು ಸಾಧಿಸುವ ವರೆಗೆ ಸಾಗಬೇಕು. ಭಾರತೀಯರಾದ ನಾವು ಆತ್ಮಿಕಸ್ವಾತಂತ್ರ್ಯವನ್ನು ದೊರಕಿಸಿದ್ದೇವೆ. ಯುರೋಪಿಯರು ಭೌತಿಕ ಸ್ವಾತಂತ್ರ್ಯವನ್ನು ಸಂಪಾದಿಸಿದ್ದಾರೆ. ಇಬ್ಬರೂ ನಮ್ಮ ನಮ್ಮ ಸ್ವಾತಂತ್ರ್ಯಗಳ ವಿನಿಮಯವನ್ನು ಮಾಡೋಣ. ಸಮತ್ವವು ಎರಡನೆಯ ತತ್ವವು. ಇದನ್ನು ಮಾನವ ಕುಟುಂಬವು ಇನ್ನೂ ಆಚರಣೆಯಲ್ಲಿ ತರದಿದ್ದರೂ ಅದರ ಧ್ಯೇಯವಾಗಿದೆ. ಎಲ್ಲ ಧರ್ಮಗಳು ಬೇರೆ ಬೇರೆ ಶಬ್ದಗಳಲ್ಲಿ ಜಗತ್ತಿಗೆ ಇದೇ ಸಂದೇಶವನ್ನು ಕಳಿಸುತ್ತವೆ. ಕ್ರಿಸ್ತ ಧರ್ಮವು "ನಾವೆಲ್ಲರೂ ಬಂಧುಗಳು, ದೇವರ ಮಕ್ಕಳು" ಎಂದು ಹೇಳುತ್ತದೆ. ಮುಹಮ್ಮದೀ ಧರ್ಮವು "ನಾವೆಲ್ಲರೂ ದೇವರ ಪ್ರಜೆಗಳು, ದೇವರ ಸೇವಕರು ಹಾಗೂ ಅಲ್ಲಾನಿಗೆ ಎಲ್ಲವರು ಅಷ್ಟೇ" ಎಂದು ಸಾರುತ್ತದೆ. ವೈದಿಕ ಧರ್ಮವು "ಏಕಮೇವಾದ್ವಿತೀಯಮ್ ಬ್ರ" ಎಂದು ಹೇಳುತ್ತದೆ. ಮನುಷ್ಯನು ಉಚ್ಚನಿರಲಿ, ನೀಚನಿರಲಿ, ಬ್ರಾಹ್ಮಣನಿರಲಿ, ಶೂದ್ರನಿರಲಿ ಶ್ರೀಮನ್ನಾರಾಯಣನಿಗೆ ಎಲ್ಲರು ಸಮಾನರು. ಎಲ್ಲರಲ್ಲಿ ನಾರಾಯಣನ ಅಂಶದ ವಾಸವಿರುತ್ತದೆ. ಆದುದರಿಂದ ನಾವು ಎಲ್ಲರನ್ನೂ ಸಮದೃಷ್ಟಿಯಿಂದ ನೋಡಬೇಕು. "ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ" ಎಂದು ಭಗವದುಕ್ತಿಯಿದೆ. ಜನರು ಬದ್ಧರೂ, ಅಜ್ಞಾನಿಗಳೂ, ಆಗಿರುವವರೆಗೆ ಸ್ವಾತಂತ್ರ್ಯವು ಸಿಗಲಾರದು. ಯುರೋಪವು ರಾಜಕೀಯ ಸಮತ್ವವನ್ನು ದೊರಕಿಸಿರುತ್ತದೆ. ಆದರೆ ಈ ಕ್ಷುದ್ರವಾದ ರಾಜಕೀಯ ಸ್ವಾತಂತ್ರ್ಯದಿಂದ ಶಾಂತಿ ಸೌಖ್ಯಗಳು ಅವರಿಗೆ ಸಿಗಲೊಲ್ಲವು. ಅವರ ಈ ಕ್ಷುದ್ರಸ್ವಾತಂತ್ರ್ಯದಲ್ಲಿ ನಿಜವಾದ ಬಂಧುಭಾವವಿಲ್ಲ. ಆದುದರಿಂದ ಅವರಲ್ಲಿ ಸಮಾಜ ಸಮತಾವಾದ (Socialism)ವು ಹೊರಟಿದೆ. ಇದರ ಪ್ರಸಾರವು ದಿನದಿನಕ್ಕೆ ಯುರೋಪದಲ್ಲಿ ಹೆಚ್ಚಾಗುತ್ತ ನಡೆದಿದೆ. (ಮಹರ್ಷಿ ಅರವಿಂದರು ತಮ್ಮ ದಿವ್ಯದೃಷ್ಟಿಯಿಂದ ಯುರೋಪದ ಭಾವೀಅವಸ್ಥೆಯ ವಿಷಯಕ್ಕೆ ಮಾಡಿದ ಭವಿಷ್ಯವು ಈಗ ನಿಜವಾಗಹತ್ತಿದೆ. ರಶಿಯಾ ಜರ್ಮನಿಗಳಲ್ಲಿ ಸಮಾಜಸಮತಾವಾದವು ಬೆಳೆದು ಅಲ್ಲಿಯ ಅರಸು ಮನೆತನಗಳು ಬುಡಮೇಲಾದವು.

“ದೇಶದಲ್ಲಿ ಬಡವರು ಶ್ರೀಮಂತರೆಂಬ ಭೇದಗಳಿರಬಾರದು, ದೇಶದೊಳಗಿನ ಕಾರಖಾನೆ, ಖನಿಜಗಳು, ಭೂಮಿ ಇತ್ಯಾದಿಗಳೆಲ್ಲ ಸಮಾಜದ ಮಾಲಕಿಯವು. ಅದರ ಮೇಲೆ ವೈಯಕ್ತಿಕ ಹಕ್ಕು ಇರಕೂಡದು. ಶ್ರೀಮಂತರಿಗೆ ತಮ್ಮಲ್ಲಿ ಹೆಚ್ಚು ದುಡ್ಡು ಸಂಗ್ರಹಿಸುವ ಹಕ್ಕು ಇಲ್ಲ. ಆ ದುಡ್ಡಿನ ಮೇಲೆ ಸಮಾಜದ ಹಕ್ಕು ಇರುತ್ತದೆ” ಎಂಬೀ ತರದ ತತ್ವಗಳ ಪ್ರಸಾರವು ಹೆಚ್ಚಾಗಿದೆ. ರಶಿಯದಲ್ಲಂತೂ ಈ ಮತದ ಪ್ರಸಾರವೂ ಎಲ್ಲ ಕಡಿಗಾಗಿದೆ. ಲೆನಿನ್ ಎಂಬವನೊಬ್ಬ ಈ ಮತದ ಪುರಸ್ಕರ್ತನು ಮುಂದಾಳಾಗಿ ಇಡೀ ರಶಿಯವನ್ನೇ ತನ್ನ ಅಧಿಕಾರದ ಕೆಳಗೆ ತಕ್ಕೊಂಡಿದ್ದಾನೆ. ಈ ಮತಗಳ ಪ್ರಸಾರವನ್ನು ಜಗತ್ತಿನ ಮೇಲೆ ಮಾಡಿ ಲೋಕಕ್ಕೆಲ್ಲ ಸ್ವಾತಂತ್ರ್ಯವನ್ನು ಕೊಡಬೇಕು, ಸಮಾಜದೊಳಗಿನ ಉಚ್ಚ ನೀಚ ಭಾವವನ್ನು ಮುರಿದು ಹಾಕಬೇಕು ಎಂದು ಲೆನಿನ್‌ನು ಟೊಂಕಕಟ್ಟಿದ್ದಾನೆ. (ಯುರೋಪದೊಳಗಿನ ಎಲ್ಲ ದೇಶಗಳಲ್ಲಿ ಈ ಮತಗಳು ಹರಡಿದ್ದು ಕೂಲಿಕಾರರ ಸಂಘದವರು ಇದರಲ್ಲಿ ಹೆಚ್ಚು ಮನಸ್ಸನ್ನು ಹಾಕಿದ್ದಾರೆ. ಇದರಿಂದ ಆ ದೇಶದಲ್ಲಿ ಆಗಾಗ್ಗೆ ಕೂಲಿಕಾರರು ಕಟ್ಟುಗಳನ್ನು ಮಾಡಿ ಶ್ರೀಮಂತ ಜನರನ್ನು ಹಣ್ಣಿಗೆ ತರಲಿಕ್ಕೆ ಪ್ರಯತ್ನಿಸಹತ್ತಿದ್ದಾರೆ. -ಲೇಖಕ) ಯುರೋಪಿಯರಿಗೆ ನಾವು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಕಲಿಸುವ; ಹಾಗೂ ಅವರಿಂದ ನಾವು ರಾಜಕೀಯ ಸ್ವಾತಂತ್ರ್ಯವನ್ನು ಹೇಗೆ ದೊರಕಿಸಬೇಕೆಂಬುವದನ್ನು ಕಲಿಯುವ.

ಮಾನವಧರ್ಮ ಶಾಸ್ತ್ರದ ಮೂರನೆಯ ತತ್ವವಾದ ಬಂಧು-ಭಾವವನ್ನು ಆಚರಣದಲ್ಲಿ ತರುವದು ಕಠಿಣವಿರುತ್ತದೆ. ಆದರೆ, ಮನುಷ್ಯ ಮಾತ್ರರ ಒಲವು ಮಾತ್ರ ಅದರ ಕಡೆಗೇ ಇರುತ್ತದೆ. ಸಂಸಾರವು ಬಂಧು-ಭಾವದ ವಿನಾ ಸುಸೂತ್ರವಾಗಿ ಸಾಗದು. ಈ ಬಂಧು-ಭಾವವಿಲ್ಲದವನ ಬಾಳು, ಹಾಳು. ಮನುಷ್ಯನ ಒಲವು ಶಾಂತಿ ಸೌಖ್ಯಗಳನ್ನು ದೊರಕಿಸುವದರ ಕಡೆಗೆ ಇರುತ್ತದೆ; ಬಂಧು-ಭಾವದ ಪ್ರಸಾರವು ಎಲ್ಲ ಕಡೆಯಲ್ಲಿ ಆಗಲಿಕ್ಕೆ ಇದೇ ಕಾರಣವಿರುತ್ತದೆ. ಕ್ರಿಸ್ತೀ ಧರ್ಮವು ಹಬ್ಬಿದ್ದು ಈ ನಿಮಿತ್ತದಿಂದಲೇ. ಬೌದ್ಧ ಧರ್ಮವು ಭರತಖಂಡದ ತುಂಬ, ಏಶಿಯಾ ಖಂಡದಲ್ಲೆಲ್ಲ ಪಸರಿಸಿದುದರೊಳಗಿನ ರಹಸ್ಯವು ಇದೇ. ವಿಶ್ವಬಂಧುತ್ವದೊಳಗಿನ ಗುಟ್ಟು ಇದೇ ಇರುತ್ತದೆ. ಸಮಾಜಗಳಲ್ಲಿ ಬಂಧು-ಭಾವವು ವಾಸಮಾಡುತ್ತಿರುತ್ತದೆಂದೇ ನಮ್ಮ ಅಸ್ತಿತ್ವವು.

ಪ್ರಾಚೀನಕಾಲದಲ್ಲಿ ಹಿಂದುಸ್ತಾನದಲ್ಲಿ ಎಷ್ಟೋ ತರದ ಸಂಸ್ಥೆಗಳಿದ್ದವು. ಯಾಕಂದರೆ ನಮ್ಮ ಸಮಾಜವು ಈಗಿನಕಿಂತಲೂ ಆಗ ಹೆಚ್ಚು ಸುಸಂಬಂಧವುಳ್ಳದ್ದೂ, ಬೆಳವಣಿಗೆಯನ್ನು ಹೊಂದಿದ್ದೂ ಇತ್ತು. ನಮ್ಮಲ್ಲಿ ರಾಜಕೀಯ, ಧಾರ್ಮಿಕ, ಔದ್ಯೋಗಿಕ ಮತ್ತು ಶೈಕ್ಷಣಿಕ ಸಂಸ್ಥೆಗಳಿದ್ದವು. ಯುರೋಪದವರಂತೆ ಹಿಂದುಸ್ತಾನದಲ್ಲಿ ಎಲ್ಲರೂ ಸಾಮಾನ್ಯ ಲಾಭದ ಸಲುವಾಗಿ ಕೂಡುತ್ತಿದ್ದರು. ಒಂದೇ ತರದ ಸಾಧ್ಯದ ಸಲುವಾಗಿ ಸಂಘಟಿತ ರೀತಿಯಿಂದ ಕಾರ್ಯಮಾಡಹತ್ತಿದ್ದರು. ಆದರೆ, ಪರದೇಶದವರ ಹಾವಳಿಗಳು ನಮ್ಮ ದೇಶದ ಮೇಲೆ ಆಗಹತ್ತಿದಂದಿನಿಂದ ಈ ಎಲ್ಲ ಸ್ಥಿತಿಯು ಬದಲಾಯಿತು. ಸಂಘಗಳು ನಷ್ಟವಾದವು. ಆಯುಷ್ಯವು ದುಃಖಮಯವಾಗಹತ್ತಿತು. ಹಿಂದಕ್ಕೆ ನಮ್ಮ ಹಳ್ಳಿಪಳ್ಳಿಗಳಲ್ಲಿ ಸಹ ಗ್ರಾಮ-ಪಂಚಾಯತಿಯ ಪದ್ಧತಿಯಿತ್ತು. ಪ್ರತಿ ಒಬ್ಬನು ಯಾವದೇ ಜಾತಿಯವನಿರಲಿ ಅದರಲ್ಲಿ ಭಾಗ ತಕ್ಕೊಳ್ಳುತ್ತಿದ್ದನು. ಮುಂಚೆ ನಮ್ಮಲ್ಲಿ ಅವಿಭಕ್ತ ಕುಟುಂಬ ಪದ್ಧತಿಯಿತ್ತು. ಅದರಿಂದ ಸಂಘ ಶಕ್ತಿಯಿಂದ ಕಾರ್ಯಮಾಡುವದು ನಮ್ಮ ಮೈಯ್ಯುಂಡಿತ್ತು. ಯುರೋಪದ ಸಮಾಜಗಳ ಬೆಳವಣಿಗೆಯು ನಮ್ಮಿಂದ ತೀರ ಭಿನ್ನರೀತಿಯಲ್ಲಿ ಆಗಿರುತ್ತದೆ. ನಮ್ಮ ವರ್ಣವ್ಯವಸ್ಥೆಯು ಈಗ ಅದು ಹೀನದೆಸೆಗೆ ಬಂದಿದ್ದರೂ ಮುಂಚೆ ಉದಾತ್ತ ತತ್ವಗಳ ಅಸ್ತಿವಾರದ ಮೇಲೆ ರಚಿಸಲ್ಪಟ್ಟಿತ್ತು.

ಒಂದೇ ತರದ ಭಾವನೆ, ಒಂದೇ ಪ್ರಕಾರದ ಒಲವು, ಒಂದೇ ರೀತಿಯ ನೈತಿಕ ಬಂಧನ, ಇವುಗಳಿಂದ ಸಮಾಜಗಳು ಆಗುತ್ತಿರುತ್ತವೆ. ಇಂಥ ಸಾಮಾನ್ಯ ಧರ್ಮಗಳಿಂದ ಬದಲಾದ ಭಿನ್ನ ಭಿನ್ನ ವರ್ಣದವರು ಒಕ್ಕಟ್ಟಾಗಿದ್ದರು. ಯೂರೋಪಿಯರ ದಾಳಿಗಳಿಂದ ನಮ್ಮ ಸಮಾಜಗಳು ಮುರಿದವು. ನಮ್ಮ ಗ್ರಾಮ ಪಂಚಾಯತಿಯು ಭೂತಕಾಲದ ಒಂದು ಮಾತಾಯಿತು! ಹಳ್ಳಿಗಳೊಳಗಿನ ಸಂಘಟಿತ ಸ್ವರೂಪವು ಹಾಳಾಗಿ ಹೋಯಿತು. ಧ್ಯೇಯವು ಮರೆತ ನಂತರ ಕಾರ್ಯವು ಕಟ್ಟಾಯಿತು. ಹಳ್ಳಿಯ ಸುಖಮಯವಾದ ಆಯುಷ್ಯವು ದುಃಖಮಯವಾಯಿತು. ಶ್ರೀಮಂತಿಕೆಯು ಹೋಯಿತು. ದರಿದ್ರತನವು ಪಾಲಿಗೆ ಬಂತು. ಹಳ್ಳಿಗಳಿಗೆ ಕ್ಷಯರೋಗವು ಹತ್ತಿರುವದು. ಏಕತ್ರ ಕುಟುಂಬ

ಪದ್ಧತಿಯು ನಷ್ಟವಾಗಹತ್ತಿರುವದು. ಅಣ್ಣ-ತಮ್ಮಂದಿರೊಳಗಿನ ಬಂಧು-ಭಾವವು ಇಲ್ಲದಂತಾಗಹತ್ತಿರುವದು. ಮೊದಲಿನ ಆಯುಷ್ಯಕ್ರಮಣ ಪದ್ಧತಿಯು ಮುರಿದು ಹೋದುದರಿಂದ ಮುಂಚಿನ ಸಂಘಗಳು ಹಾಳಾಗಿರುವವು.

ಇಷ್ಟು ಪೂರ್ವಪೀಠಿಕೆಯಾದ ಬಳಿಕ ಋಷಿವರ್ಯ ಅರವಿಂದರು ಮುಂದೆ ಹಿಂದುಸ್ತಾನದ ಪ್ರಸ್ತುತ ಸ್ಥಿತಿಯ ಕಡೆಗೆ ಹೊರಳಿ ಅದನ್ನು ವಿವೇಚಿಸುವಾಗ ಹೇಳಿದ್ದರ ಸಾರಾಂಶವೇನೆಂದರೆ:- ನಮ್ಮ ದೇಶದ ಸಮಾಜಗಳು ದಿನದಿನಕ್ಕೆ ಅವನತ ಸ್ಥಿತಿಗೆ ಬರಹತ್ತಿವೆ. ನಾವು ಅವನ್ನು ತಿದ್ದಬೇಕೆಂದು ಸುಧಾರಿಸಿದವರೆನಿಸಿದ ಪಾಶ್ಚಿಮಾತ್ಯರ ಅನುಕರಣಮಾಡಿ ಅವರಂಥ ಸಂಸ್ಥೆಗಳನ್ನು ಕಣ್ಣು ಮುಚ್ಚಿಕೊಂಡು ಸ್ಥಾಪಿಸ ಹತ್ತಿದ್ದೇವೆ. ೧೯ನೆಯ ಶತಮಾನದೊಳಗಿನ ನಮ್ಮ ದೇಶದ ಸ್ಥಿತಿಯು ತೀರ ಕರುಣಾಜನಕವಾಗಿತ್ತು. ದೇಶದೆದುರಿಗೆ ಒಂದು ಧ್ಯೇಯವಿರಲಿಲ್ಲ. ಅಥವಾ ದೇಶವನ್ನು ಉಚ್ಚಸ್ಥಿತಿಗೆ ವೈಯುವಂಥ ಅದ್ಭುತವಾದ ಉತ್ಸಾಹವಿರಲಿಲ್ಲ. ನಮ್ಮ ಮೇಲೆ ಬಂಧ ಪರಚಕ್ರಗಳಿಂದ ದುಃಸ್ಥಿತಿಯುಂಟಾಗಿ ಸಮಾಜ ವ್ಯವಸ್ಥೆಯು ಮುರಿದುಹೋಗಿತ್ತು. ನಮ್ಮ ರಾಜ್ಯಕರ್ತರ ಅನುಕರಣಮಾಡಿ ಅವರಂಥ ಸಂಸ್ಥೆಗಳ ಸಹಾಯದಿಂದ ರಾಜಕೀಯ ಸ್ವಾತಂತ್ರ್ಯವನ್ನು ದೊರಕಿಸುವ ಅಲ್ಪಉದ್ದೇಶದಿಂದ ಸ್ಥಾಪಿತವಾದ ಸಂಘಗಳಿಂದ ಹೇಳಿಕೊಳ್ಳುವಂತೆ ಕಾರ್ಯವಾಗಲಿಲ್ಲ. ಆದರೂ ಬರಬರುತ್ತ ಒಂದು ಉದ್ದೇಶದಿಂದ ಸ್ಥಾಪಿತವಾದ ಸಂಘಗಳು ಅಕಲ್ಪಿತವಾಗಿ ಒಂದು ಉದಾತ್ತ ಉದ್ದೇಶವನ್ನು ಸಾಧಿಸಲಿಕ್ಕೆ ಯತ್ನಿಸಹತ್ತಿದವು. ಇಷ್ಟರಲ್ಲಿ ರಾಷ್ಟ್ರೀಯತ್ವದ ತೆರೆಯು ದೇಶದ ತುಂಬ ಹಾಯಿತು. ಆದರಿಂದ ಈ ಸಂಸ್ಥೆಗಳಲ್ಲಿ ನವಜೀವನವು ಪ್ರಾಪ್ತವಾಯಿತು. ಬರೇ ಠರಾವುಗಳನ್ನು ಪಾಸು ಮಾಡುವ ಸಭೆಗಳಾಗಿ ಈ ಸಂಸ್ಥೆಗಳು ಉಳಿಯದೆ ಪ್ರತ್ಯಕ್ಷ ಕಾರ್ಯಕಾರೀ ಸಂಘಗಳಾದವು. ಈ ನೂತನ ಚೈತನ್ಯದ ಉದಯವು ತರುಣ ವರ್ಗದಲ್ಲಿ ಮೊದಲಿಗೆ ಆಯಿತು. ಅವರು ತಮ್ಮ ಜನ್ಮಭೂಮಿಯ ಸೇವೆಗೆ ಸ್ವಯಂ ಸೇವಕರಾಗಿ ಮುಂದೆ ಬಂದರು. ರಾಷ್ಟ್ರದ ಜನರ ಕಲ್ಯಾಣ ಚಿಂತನೆಗಾಗಿ ಅವರು ಒತ್ತಟ್ಟಿಗೆ ನೆರೆಯಹತ್ತಿದರು. ಹೀಗೆ ಏಕತ್ರವಾಗಿ ವಿಚಾರಿಸಿ ಕಾರ್ಯಮಾಡುವ ಕಲ್ಪನೆಯು ಬೆಳೆಯುತ್ತ ನಡೆಯಿತು. ಇದನ್ನು ಕಂಡು ಆಂಗ್ಲೋ ಇಂಡಿಯನ್‌ರು ನಮ್ಮನ್ನು ತಿರಸ್ಕರಿಸಹತ್ತಿದರು. "ಬಂಗಾಲಿಗಳಲ್ಲಿ ಲಷ್ಕರೀ ಜನರ ಗುಣಗಳು ಇಲ್ಲ. ಅವರ ಕೆನ್ನೆಯ ಮೇಲೆ ಹೊಡೆದರೆ ಹೊಡೆದಾತನಿಗೆ ಪ್ರತಿಯಾಗಿ ಒಂದು ಏಟು ಕೊಟ್ಟಾರೆಂಬುವಂತಿಲ್ಲ. ಆದುದರಿಂದ, ಈ ಜನರು ಗುಲಾಮರಾಗಲಿಕ್ಕೆ ತಕ್ಕವರು. ಆದಕಾರಣ ಇವರಿಗೆ ಸ್ವರಾಜ್ಯದ ಆವಶ್ಯಕತೆ ಇಲ್ಲ" ಎಂದು ಪ್ರತಿಪಾದಿಸಹತ್ತಿದರು. ಇದರಿಂದ ಜನರಲ್ಲಿ ಜಾಗೃತಿಯಾಗಲಿಕ್ಕೆ ಸಹಾಯವಾಯಿತು.

ನಮ್ಮ ಆಂಗ್ಲೋ ಇಂಡಿಯನ್ ಬಂಧುಗಳು ಈ ತತ್ವವನ್ನು ಈಗ ಪ್ರತಿಪಾದಿಸುವದಿಲ್ಲ. ರಾಷ್ಟ್ರವು ಮೇಲಿನಂಥ ಅಪಮಾನವನ್ನು ಬಹಳ ದಿನಗಳ ವರೆಗೆ ಸಹಿಸುವದು ತಕ್ಕದ್ದಲ್ಲ. ನಮ್ಮ ತರುಣರ ಹೃದಯಸ್ಥ ಪರಬ್ರಹ್ಮನು ಜಾಗ್ರತನಾದನಂತರ ಇಂಥ ಅಪಮಾನವನ್ನು ಸಹಿಸುವದು ಅಶಕ್ಯವು. ಸಂಘಗಳು ಶಾರೀರಿಕ ಬಲವನ್ನು ವೃದ್ಧಿಪಡಿಸಿ ತಮ್ಮ ಮೇಲಿನ ಅಪವಾದವನ್ನು ಕಳೆದುಕೊಳ್ಳಲಿಕ್ಕೆ ಯತ್ನಿಸಹತ್ತಿದವು. ದಿನದಿನಕ್ಕೆ ಭರಭರಾಟೆಯು ಹೆಚ್ಚುತ್ತ ನಡೆಯಿತು. ಶಾರೀರಿಕ ಸಾಮರ್ಥ್ಯವನ್ನು ಬೆಳೆಸಿ ಆತ್ಮಸಂರಕ್ಷಣವನ್ನು ಮಾಡಿಕೊಳ್ಳಲಿಕ್ಕೆ ಕಲಿತರೆ ಆದರಲ್ಲಿ ಸಂಶಯಾಸ್ಪದವೇನೂ ಇರುವದಿಲ್ಲ. ಯುರೋಪಿಯನ್ ರಾಷ್ಟ್ರಗಳು ಶಾರೀರಿಕ ಸಾಮರ್ಥ್ಯದಿಂದಲೇ ವಿಜಯವನ್ನು ಹೊಂದಿರುತ್ತವೆ. ಇಂಥ ಈ ಅಂಗ ಸಾಮರ್ಥ್ಯವನ್ನು ಬೆಳೆಸುವದನ್ನು ಕಂಡು ಸರಕಾರದವರು ಆ ಸಂಸ್ಥೆಗಳನ್ನು ಮುರಿಯಹತ್ತಿದರು.

ಹಿಂದೂ ಧರ್ಮದ ಕಲ್ಪನೆಯಂತೆ ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆ ಈ ಸಂಘಗಳಿಂದ ಅನುವು ಸಿಕ್ಕಿತು. ಸ್ವಾಮೀ ವಿವೇಕಾನಂದರು ಉಪದೇಶಿಸಿದಂತೆ ಸಮಾಜ ಸೇವೆಯ ಪವಿತ್ರಮಾರ್ಗವನ್ನು ಅನುಸರಿಸಲಿಕ್ಕೆ ಸಂಘಗಳು ಸಹಾಯ ಮಾಡಿದವು. ಸ್ವದೇಶ ಸೇವೆಯನ್ನು ಮಾಡಲಿಕ್ಕೆ, ಮಾತೃಭೂದೇವಿಯನ್ನು ಪೂಜಿಸಲಿಕ್ಕೆ, ದೇಶದೊಳಗಿನ ತರುಣರು ಒತ್ತಟ್ಟಿಗೆ ಕೂಡಹತ್ತಿ ಸಮಾಜಗಳನ್ನು ಮಾಡಹತ್ತಿದರು. ಶ್ರೀ ಅರವಿಂದರು ಈ ರೀತಿಯಲ್ಲಿ ನಮ್ಮ ದೇಶದ ಸಂಸ್ಥೆಗಳ ಸ್ಥೂಲ ಇತಿಹಾಸವನ್ನು ಹೇಳಿದ ನಂತರ ಸರಕಾರದವರು ಅವುಗಳ ನಾಶವನ್ನು ಮಾಡಲಿಕ್ಕೆ

ಹೇಗೆ ಪ್ರವೃತ್ತರಾದರೆಂಬುದನ್ನು ಬಾರಿಸಾಲದೊಳಗಿನ ವಿಶಿಷ್ಟ ಸಂಸ್ಥೆಯನ್ನು ಉದಾಹರಣವಾಗಿ ತಕ್ಕೊಂಡು ಮುಂದೆ ವಿವರಿಸುತ್ತಾರೆ. ಸರಕಾರದ ಬಲುಮೆಯ ವಿಷಯಕ್ಕೆ ಹೇಳುವಾಗ ಅವರು ಅಂದದ್ದರ ಭಾವವೇನಂದರೆ: ಹೀಗೆ ಸಂಘಗಳು ಆಗಹತ್ತಿದವು. ಜನರು ಪರೋಪಕಾರ ಬುದ್ಧಿಯಿಂದ ಲೋಕಸೇವೆಯನ್ನು ಮಾಡಹತ್ತಿದರು. ಸಂಸ್ಥೆಗಳು ಲೋಕಪ್ರಿಯವಾಗಹತ್ತಿದವು. ಇತ್ತ ಸರಕಾರದವರಿಗೆ ಈ ಸಂಸ್ಥೆಗಳು ದೊಂಬಿಯನ್ನೆಬ್ಬಿಸಲಿಕ್ಕೆ ಪ್ರೋತ್ಸಾಹಿಸುವವೆಂಬ ಸಂಶಯವು ಬರಹತ್ತಿತು. ಈ ಆರೋಪವು ಸುಳ್ಳೆಂದು ಸಿದ್ಧಮಾಡಲ್ಪಟ್ಟಿದೆ. ಆದರೂ ಸರಕಾರದವರು ಲೋಕೋಪಕಾರಿಗಳಾದ ಈ ಸಮಾಜಗಳನ್ನು ಮುರಿಯಹತ್ತಿದ್ದಾರೆ. ನಾನು ಮೊನ್ನೆ ಬಾರಿಸಾಲ ದಿಂದ ಬಂದೆನು. ಅಲ್ಲಿ ಸ್ವದೇಶಬಾಂಧವ ಸಮಿತಿಯವರು ಜನರ ಕಷ್ಟವನ್ನು ದೂರಮಾಡಲಿಕ್ಕೆ ಹಗಲಿರುಳು ದುಡಿಯುತ್ತಿದ್ದರು. ಬಕರಗಂಜ ಜಿಲ್ಹೆಯೇ ಇವರ ಕಾರ್ಯಕ್ಷೇತ್ರವಾಗಿತ್ತು. ಅಶ್ವಿನೀಕುಮಾರ ದತ್ತರವರು (ಇವರು ಒಂದು ಶ್ರೀಮಂತ ಮನೆತನದವರು, ತಂದೆಯ ಹೆಸರಿನಿಂದ ವಿದ್ಯಾಲಯವನ್ನು ಸ್ಥಾಪಿಸಿ ಅದರ ಮುಖ್ಯಾಧ್ಯಾಪಕರಾಗಿದ್ದರು. ಇವರು ಎಮ್.ಎ.,ಬಿ.ಎಲ್. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವವರು. ಇವರು ತಮ್ಮ ಶಿಷ್ಯಗಣದಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗ್ರತಪಡಿಸಿದರು ಹಾಗೂ ಶಿಷ್ಯರಿಂದ ಅದೇ ತರದ ಸಾಮಾಜಿಕ ಕಾರ್ಯಗಳನ್ನು ಮಾಡಿಸುತ್ತಿದ್ದರು. ಉದಾರಸ್ವಭಾವದವರು ಬಡಬಗ್ಗರಿಗೆ ಬೇಕಾದ ಹಾಗೆ ಸಹಾಯ ಮಾಡುವವರು. ಅದರಿಂದ ಸಮಾಜದಲ್ಲಿ ಅವರ ವರ್ಚಸ್ಸು ಬಹಳವಿರುತ್ತದೆ. ಜನರೆಲ್ಲ ಇವರು ಹೇಳಿದಂತೆ ಅಕ್ಷರಶಃ ನಡೆಯುತ್ತಾರೆ.) ತರುಣ ಜನರನ್ನು ಒಟ್ಟುಗೂಡಿಸಿ ನವಜೀವನದ ಮಂತ್ರೋಪದೇಶ ಮಾಡಿದರು. ತರುಣರು ಕುಲಗೋತ್ರಗಳ ಭೇದವನ್ನು ಲಕ್ಷಿಸದೆ ಎಲ್ಲತರದ ಸಹಾಯವನ್ನು ಮಾಡಿದರು. ಅಶಕ್ತರಿಗೆ ಕೈಕೊಟ್ಟರು. ರೋಗಿಗೆ ಔಷಧ ಕೊಟ್ಟರು. ಬೇನಿಗರಾದ ಅಂತ್ಯಜರನ್ನು ಎತ್ತಿ ದವಾಖಾನೆಗೆ ವೈಯ್ದರು. ಮುಸಲ್ಮಾನರನ್ನು ಉಪಚರಿಸಿದರು. ಹೀಗೆ ತಮ್ಮ ಜೀವದ ಪರಿವೆಯಿಲ್ಲದೆ ಪ್ಲೇಗದಂಥ ಸೋಂಕರೋಗದ ಕಾಲದಲ್ಲಿ ಜನರ ಸೇವೆಯನ್ನು ಮಾಡಿದರು. ಬಂಧುವು ಬಂಧುವಿಗೆ ಸಹಾಯ ಮಾಡುವಂತೆ ಅಂತಃಕರಣಪೂರ್ವಕವಾಗಿ ರೋಗಿಗಳ ಆರೈಕೆ ಮಾಡಿದರು. ಹಾಗು ಅನೇಕರನ್ನು ಮೃತ್ಯುವಿನ ಬಾಯಿಂದ ಉಳಿಸಿದರು. ಈ ಅಪರಾಧಕ್ಕಾಗಿ ಪರೋಪ ಕಾರಿಗಳು ಲೋಕಸೇವಕರೂ ಆದ ಅಶ್ವಿನೀ ಕುಮಾರದತ್ತರವರು ಗಡಿದಾಟಿಸಲ್ಪಟ್ಟರು! ಆದರೆ, ಅವರ ಶಿಷ್ಯವರ್ಗವು- ಅಶ್ವಿನೀ ಕುಮಾರರಿಂದ ನವಜೀವನದ ಉಪದೇಶ ಸಿಕ್ಕ ಶಿಷ್ಯವರ್ಗವು ತಮ್ಮ ಗುರುಗಳ ಅನುಕರಣವನ್ನೇ ಮಾಡಿತು. ಅಶ್ವಿನೀ ಕುಮಾರರು ಕೇವಲ ಯಾಂತ್ರಿಕ ಶಿಕ್ಷಣ ಕೊಡುವದರಲ್ಲಿ ತೃಪ್ತಿಪಡದೆ ವಿದ್ಯಾರ್ಥಿಗಳು ಶೀಲವಂತರಾಗಬೇಕೆಂದೂ ರಾಷ್ಟ್ರದ ಒಂದು ಜೀವಂತ ಘಟಕವಾಗಬೇಕೆಂದೂ ಇಚ್ಛಿಸಿ ಅದಕ್ಕೆ ತಕ್ಕ ಪದ್ಧತಿಯಿಂದ ಕಲಿಸಹತ್ತಿದರು.

ಸಾಮ್ರಾಜ್ಯದ ಸುರಕ್ಷಿತತನಕ್ಕೆ ಭಂಗ ತರುವ ಇಂಥ ಯಾವ ಕೃತ್ಯವನ್ನು ಈ ಸ್ವದೇಶ ಬಾಂಧವ ಸಮಿತಿಯವರು ಕೈಕೊಂಡರೆಂದು ಅವರ ಮೇಲೆ ಸರಕಾರದವರು ಸಿಟ್ಟಾದರು? ಈ ಸಮಿತಿಯವರು ಆರಂಭಿಸಿದ ಮೊದಲನೆಯ ಕೆಲಸವೆಂದರೆ, ಜನರ ದುಃಖವಿಮೋಚನದ ಕಾರ್ಯವು. ಬಕರಗಂಜ ಜಿಲ್ಲೆಯಲ್ಲಿ ಒಬ್ಬ ರೋಗಿಯೂ, ಒಬ್ಬ ದುಃಖಿತನೂ ಉಳಿಯಬಾರದಂತೆ ಪ್ರಯತ್ನಬಡುವದೇ ಈ ತರುಣರ ಸಂಘದ ಧ್ಯೇಯವಾಗಿತ್ತು. ಈ ಸಮಿತಿಯವರು ಮಾಡಿದ ಮೊದಲನೆಯ ಅಪರಾಧವಿದು. ಇವರ ಮೇಲಿನ ಎರಡನೆಯ ಆರೋಪವೇನಂದರೆ ಈ ಸಮಿತಿಯವರು ಬರಗಾಲದಲ್ಲಿ ಮನೆಮನೆಗೆ ತಿರುಗಿ ಉಪವಾಸದಿಂದ ಬಳಲಿದ ಜನರಿಗೆ ಸಹಾಯ ಮಾಡುತ್ತಿದ್ದುದು. ಬರಗಾಲವು ಎಲ್ಲ ಕಡೆಗೆ ತನ್ನ ಭಯಂಕರವಾದ ಸ್ವರೂಪವನ್ನು ತೋರಿಸುತ್ತಿತ್ತು. ಮನೆತನಸ್ಥರು ಪರರ ಹತ್ತರ ಸಹಾಯದ ಯಾಚನೆ ಮಾಡಲಿಕ್ಕೆ ನಾಚುತ್ತಿದ್ದರು. ಬಾರಿಸಾಲದ ತರುಣರು ಇಂಥ ಸ್ಥಳಗಳನ್ನು ಹುಡುಕಿ ಆ ಜನರ ಮಾನಕ್ಕೆ ಧಕ್ಕೆ ಬರದಂತೆ ಗುಪ್ತವಾಗಿ ಹೋಗಿ ಸಹಾಯ ಮಾಡುತ್ತಿದ್ದರು. ಈ ರೀತಿಯಲ್ಲಿ ಜನರಿಗೆ ಸಹಾಯಮಾಡಿ ಗಂಡಸರನ್ನೂ ಹೆಂಗಸರನ್ನೂ ಬರಗಾಲದ ಘೋರವಾದ ಆಪತ್ತಿನಿಂದ ಉಳಿಸಿದರು. ಸ್ವದೇಶಬಾಂಧವ ಸಮಿತಿ ಯವರು ಮಾಡಿದ ಎರಡನೆಯ ಗುನ್ಹೆ ಇದು.

ಬಂಗಾಲದ ಸಮಾಜದಲ್ಲಿ ಎಷ್ಟೋ ಒಳ್ಳೇ ತೊಡಕಿನ ಮಾತುಗಳ ಸಲುವಾಗಿ ಬಡಿದಾಟಗಳಿವೆ. ಅಣ್ಣತಮ್ಮಂದಿರ ನಡುವೆ ಬಡಿದಾಟ, ತಾಯಿಮಕ್ಕಳ ನಡುವೆ ಸಹ ಕಲಹ! ಹೀಗಾಗಿ ಸಮಾಜದಲ್ಲಿ ದ್ವೇಷವು

ಬೆಳೆಯಹತ್ತಿತು. ಇದರಿಂದ ಆತ್ಮನಾಶವಾಗುವದು ಸ್ವಾಭಾವಿಕವಿದೆ. ಆದರೆ, ಹೀಗಾಗಬಾರದೆಂದು ಸ್ವದೇಶಬಾಂಧವ ಸಮಿತಿಯವರು ಜನರಿಗೆ ಉಪದೇಶ ಮಾಡಹತ್ತಿದರು. "ಸರಕಾರಿ ಕೋರ್ಟುಗಳಿಗೆ ತಮ್ಮ ತಮ್ಮೊಳಗಿನ ನ್ಯಾಯಗಳನ್ನು ಒಯ್ಯಬೇಡಿರಿ. ನಾವು ಪಂಚರ ಕಡೆಯಿಂದ ನಮ್ಮ ನ್ಯಾಯಗಳನ್ನು ತೀರಿಸಿಕೊಳ್ಳುವ. ಮೊದಲು ಪಂಚರ ಕಡೆಗೆ ಹೋಗಿರಿ. ಅಲ್ಲಿ ನಿಮಗೆ ನ್ಯಾಯವು ಸಿಗದಿದ್ದರೆ, ಬೇಕಾದರೆ ಕೋರ್ಟಿಗೆ ಹೋಗಿರಿ." ಈ ಉಪದೇಶದ ಇಷ್ಟ ಪರಿಣಾಮವು ಜನರ ಮೇಲೆ ಆಗಿ ನೂರಾರು ಬಡಿದಾಟಗಳು ನೊಂದಿಸಲ್ಪಟ್ಟವು. ಸಮಾಜದೊಳಗಿನ ದ್ವೇಷವು ಕಡಿಮೆಯಾಗಹತ್ತಿ ಶಾಂತಸೌಖ್ಯಗಳು ಮತ್ತೆ ತಲೆದೋರಹತ್ತಿದವು. ಇದು ಈ ಸಮಿತಿಯವರಿಂದಾದ ಮೂರನೇ ದೋಷವು. ಈ ಸಮಿತಿಯ ಕಟ್ಟಕಡೆಯ ಹಾಗೂ ಮಹತ್ವದ ದೋಷವೆಂದರೆ ಅವರು ಸ್ವದೇಶಿ ವಸ್ತುಗಳ ಪ್ರಸಾರದ ವಿಷಯಕ್ಕೆ ಮಾಡಿದ ಪ್ರಯತ್ನವು. ಬಾಲ್ಯಾವಸ್ಥೆಯೊಳಗಿರುವ ನಮ್ಮ ದೇಶದ ಕಾರಖಾನೆಗಳು ಬೆಳವಣಿಗೆಯನ್ನು ಹೊಂದಬೇಕಾದರೆ ಸ್ವದೇಶಿವಸ್ತುಗಳನ್ನು ಉಪಯೋಗಿಸುವದೊಂದೇ ಉಪಾಯವು. ಪರದೇಶದ ವಸ್ತುಗಳಿಗಿಂತ ತನ್ನ ದೇಶದ ವಸ್ತುಗಳು ಹೀನತರದವಿದ್ದರೂ ಅವುಗಳನ್ನು ಮೆಚ್ಚಿ ತಕ್ಕೊಳಲಿಕ್ಕೇಬೇಕು. ಸ್ವದೇಶ ಬಾಂಧವ ಸಮಿತಿಯವರು, ದೇಶಾಭಿಮಾನವನ್ನು ಹುಟ್ಟಿಸಿ, ಸತತವಾಗಿ ಜನರ ಬೆನ್ನುಹತ್ತಿ, ದೇಶದ ಲಾಭವನ್ನು ತೋರಿಸಿಕೊಟ್ಟು, ಹೀಗೆ ಹಲವು ಉಪಾಯಗಳಿಂದ ಜನರಲ್ಲಿ ಸ್ವದೇಶಿ ಮಾಲಿನ ಪ್ರಸಾರಮಾಡಹತ್ತಿದರು. ಇಡೀ ಬಂಗಾಲದಲ್ಲಿ ಬಾರಿಸಾಲದಂತೆ ಒಂದು ಭಾಗದಲ್ಲಿ ಸಹ ವ್ಯವಸ್ಥಿತ ಪದ್ಧತಿಯಿಂದಲೂ ಶಾಂತತನದಿಂದಲೂ ಸ್ವದೇಶಿ ಚಳವಳಿಯ ಪ್ರಸಾರವಾಗಲಿಲ್ಲ. ಅಶ್ವಿನಿಕುಮಾರದತ್ತರಂಥವರು ಪ್ರತಿಯೊಂದು ಭಾಗಕ್ಕೆ ಎಲ್ಲಿಂದ ಸಿಗಬೇಕು? ಹೀಗೆ ಬಹಿಷ್ಕಾರದ ಚಳವಳಿಯು ಈ ಸಮಿತಿಯವರಿಂದ ಎಲ್ಲ ಕಡೆಗೆ ಹಬ್ಬಿತು.

ಸರಕಾರದವರಿಗೆ ಈ ಸಮಿತಿಯನ್ನು ಮುರಿಯಲಿಕ್ಕೆ ಮತ್ತೆ ಒಂದು ಕಾರಣವುಂಟಾಯಿತು. ಈ ಸಮಿತಿಯೊಳಗಿನ ತರುಣರು ಆತ್ಮರಕ್ಷಣೆಗಾಗಿ ಬಡಿಗೆಗಳನ್ನು ಉಪಯೋಗಿಸುತ್ತಿದ್ದರು. ಇದರ ಉಪಯೋಗವನ್ನು ಮಾಡಿಕೊಳ್ಳುವ ಪದ್ಧತಿಯು ಬಹಿರಂಗವಾಗಿ ಎಲ್ಲರಿಗೆ ಗೊತ್ತಾಗುವಂತೆ ಕಲಿಸಲ್ಪಡುತ್ತಿತ್ತು; ಕಲ್ಪನಾಚತುರರಾದ ಪೋಲಿಸರಿಗೆ ಈ ತರುಣರ ಹತ್ತರ ಬಾಂಬುಗಳ ಸಂಶಯವು ಬರಹತ್ತಿತು. ಪ್ರತಿಭಾಶಾಲಿಗಳಾದ ಪೋಲಿಸರು ಕೋಲುಗಳೇ ಬಾಂಬುಗಳ ಉತ್ಪತ್ತಿಗೆ ಕಾರಣವೆಂದು ಸಿದ್ಧಮಾಡಲೆತ್ನಿಸಹತ್ತಿದರು. ದರೋಡೆಯಾಗುವ ಸ್ಥಳದಲ್ಲಿ ಮೊದಲು ಪೋಲಿಸರು ಇರುವಂತೆಯಿಲ್ಲ. ಆದರೆ ಅದು ಆದನಂತರ ಅಲ್ಲಿ ಬಂದು ಈ ಸಮಿತಿಯ ತರುಣರ ಮೇಲೆ ಸಂಶಯತಕ್ಕೊಳ್ಳುವದು ಇವರ ಪದ್ಧಿತಿಯಿತ್ತು. "ಬಡಿಗೆಗಳು ಬಾಂಬುಗಳನ್ನು ಹುಟ್ಟಿಸುವವು. ಬಾಂಬುಗಳು ದರೋಡೆಗಳಿಗೆ ಕಾರಣವಾಗುವವು" ಎಂದು ಇವರು ತರ್ಕಿಸುವರು! ದರೋಡೆಯಾದ ಕೂಡಲೆ ಅದರ ಸಮೀಪದಲ್ಲಿರುವ ಸಮಿತಿಯ ತರುಣರನ್ನು-ಅವರಿಗೆ ೧೨ ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾಗಿದ್ದರೆ ತೀರಿತು ಹಿಡಿಯುವರು. ಕೆಲವು ದಿನ ಸೆರೆಯಲ್ಲಿಡುವರು. ಆರೋಪವನ್ನು ಸಿದ್ಧಮಾಡಲಿಕ್ಕೆ ಸಾಕಷ್ಟು ಪುರಾವೆಯು ದೊರೆಯದಾಗುತ್ತಲೆ ಅವರನ್ನು ಬಿಟ್ಟು ಬಿಡುವರು. ಪೋಲಿಸರು ಇಷ್ಟಕ್ಕೆ ಧೈರ್ಯಗೆಡದೆ (ನಾಚಿಕೊಳ್ಳದೆ) ಮತ್ತೆ ತಮ್ಮ ಕಾಯಕವನ್ನು ಹಾಗೇ ನಡೆಸುವರು ಒಬ್ಬನನ್ನು ಬಿಟ್ಟರೆ ಮತ್ತೊಬ್ಬನನ್ನು ಹಿಡಿಯುವರು. ಈ ರೀತಿಯಾಗಿ ಪುರಾವೆಯು ಸಿಗುವದಿಲ್ಲವೆಂದು ಮನವರಿಕೆಯಾಗುವವರೆಗೆ ತಮ್ಮ ಕೆಲಸವನ್ನು ಮುಂದೆ ನಡಿಸುವರು. ಕೆಲವು ಸಾರೆ ಸಭ್ಯಗೃಹಸ್ಥರನ್ನು ಮತ್ತೆ ಕೆಲವು ಸಾರೆ ತರುಣರನ್ನು ಹಿಡಿದು ಕೋರ್ಟಿನಮುಂದೆ ತರುವರು. ಆದರೆ ನ್ಯಾಯಾಧೀಶರಿಗೆ ತಕ್ಕಷ್ಟು ಪುರಾವೆಯಿಲ್ಲದ್ದರಿಂದ ಆರೋಪಿಗಳನ್ನು ಮುಕ್ತ ಮಾಡಬೇಕಾಗುವದು!

ಹಳ್ಳಿಪಳ್ಳಿಗಳಲ್ಲಿ ಪ್ರಕೃತಿಯಿಂದ ದಷ್ಟಪುಷ್ಟನಾದವನನ್ನು ಕಾಣುತ್ತಲೆ ಪೋಲಿಸರು ಬದಮಾಷಲಿಷ್ಟಿಗೆ ದಾಖಲ ಮಾಡಿಕೊಳ್ಳುವರು! ದೇಶದೊಳಗಿನ ಜನರು ಸಶಕ್ತರಾಗಬೇಕೆಂಬ ಹೇತುವಿನಿಂದ ಸಮಿತಿಯು ತರುಣರಿಗೆ ಕೋಲುಗಳ ಉಪಯೋಗವನ್ನು ಕಲಿಸಹತ್ತಿತು. ಪೋಲಿಸರು ಅವರ ಹೇತುವಿನ ವಿಪರ್ಯಾಸವನ್ನು ಮಾಡಹತ್ತಿದರು. "ಯಾವ ಪಕ್ಷದಲ್ಲಿ ಸಮಿತಿಗಳು ಕೋಲುಗಳ ಆಟಗಳಿಗೆ ಉತ್ತೇಜನ ಕೊಡುವವೋ ಆ ಪಕ್ಷದಲ್ಲಿ ಸಮಿತಿಗಳು

ದೊಂಬಿಗೆ ಉಬ್ಬಿಸುತ್ತಿರಲಿಕ್ಕೆಬೇಕು. ಬಾಂಬುಗಳ ಕಾರಖಾನೆಗಳಿರಲಿಕ್ಕೆ ಬೇಕು" ಪೋಲೀಸರ ಈ ವಿಚಾರ ಪದ್ಧತಿಯು ಸರಕಾರಕ್ಕೆ ಮಾನ್ಯವಾಯಿತು! ಈ ತತ್ವದ ಪ್ರಕಾರ ಕೆಲವು ತರುಣರನ್ನು ಸೆರೆಹಿಡಿದರು. ಇಂಥ ಜನರು ಶಿಕ್ಷಿಸಲ್ಪಡಬೇಕೆಂದು ಸರಕಾರದ ಅಂತಸ್ಥ ಆಜ್ಞೆಯಿತ್ತು. ಆದರೆ, ಹಾಯಕೋರ್ಟುಗಳ ಜಜ್ಜರಿಗೆ ಪುರಾವೆ, ಕಾಯಿದೆಗಳ ಅಲ್ಪಸ್ವಲ್ಪ ಕಲ್ಪನೆಯಾದರೂ ಇರುವದರಿಂದ ಪೋಲಿಸರ ಇಚ್ಛೆಯಂತೆ ಪ್ರತಿಯೊಬ್ಬರಿಗೆ ಶಿಕ್ಷೆಗಳಾಗಲಿಲ್ಲ.

ಸ್ವದೇಶಬಾಂಧವ ಸಮಿತಿಯವರು ಮೇಲೆ ಹೇಳಿದ ರೀತಿಯಲ್ಲಿ ರಾಷ್ಟ್ರಕಾರ್ಯವನ್ನು ಮಾಡಹತ್ತಿದರು. ಹೀಗೆ ಕಾಯಿದೆಶೀರ ರೀತಿಯಿಂದ ನಡೆಸಲ್ಪಟ್ಟ ಸಂಸ್ಥೆಗಳು ಮುರಿಯಲ್ಪಟ್ಟವು. ಇವುಗಳನ್ನು ಇರಗೊಡುವದು ತರವಲ್ಲವೆಂದು ಮುರಿದರಲ್ಲದೆ, ಈ ಸಂಸ್ಥೆಗಳು ದೋಷಿಯೆಂದಲ್ಲ! ಕಾಲವು ಬದಲಾದಂತೆ ರಾಜ್ಯಪದ್ಧತಿಯಲ್ಲಿ ಹೆಚ್ಚು ಕಡಿಮೆಯಾಗದಿದ್ದರೆ ಹೀಗಾಗತಕ್ಕದ್ದು ಸ್ವಾಭಾವಿಕವಿದೆ. ಅಧಿಕಾರಿಗಳು ಸಮಾಜದ ಹಕ್ಕುಗಳನ್ನು ಸಂಶಯದ ದೃಷ್ಟಿಯಿಂದ ನೋಡಹತ್ತಿದರು. ಭಾಷಾಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯಗಳನ್ನು ಹರಣಮಾಡಹತ್ತಿದರು. ಜನರಲ್ಲಿ ಸದ್ಗುಣಗಳು ಬೆಳೆದು ಸ್ವಾವಲಂಬನದ ಗುಣವು ಬೆಳೆದರೆ ರಾಷ್ಟ್ರದಲ್ಲಿ ಜಾಗೃತಿಯಾಗುವದೆಂಬ ಭೀತಿಯಿಂದ ಅಧಿಕಾರಿಗಳು ಸಮಾಜದ ಹಕ್ಕುಗಳನ್ನು ನಷ್ಟಮಾಡಿದರು. ಆದರೆ ಇದರಲ್ಲಿ ಅವರಿಗೆ ಯಶಸ್ಸು ಸಿಗಲಿಲ್ಲ. ಪ್ರೆಸ್ಸುಗಳು ಹೆಸರಿಗೆ ಮಾತ್ರ ಸ್ವತಂತ್ರವಾಗಿವೆ. ತಲೆಯ ಮೇಲೆ ಪ್ರೆಸ್ ಆಕ್ಟಿನ ಬಿಚ್ಚುಗತ್ತಿಯು ಜೋತಾಡುತ್ತಲಿದೆ. ಅದರಲ್ಲಿ ಸ್ವಾತಂತ್ರ್ಯದ ಅಲ್ಪಾಂಶವಾದರೂ ಇಲ್ಲ. ರಾಜದ್ರೋಹದ ಸುಂದರವಾದ ಕಟ್ಟಳೆಯಿದೆ. ಇದರ ಅನಿಶ್ಚಿತ ಸ್ವರೂಪದೊಳಗಿನ ಶಬ್ದಜಾಲದೊಳಗೆ ಸಿಗದ ಮನುಷ್ಯನೇ ಇಲ್ಲ. ಮ್ಯಾಜಿಸ್ಟ್ರೇಟನಿಗೆ ಮನಸ್ಸಿಗೆ ಬಂದರೆ ಬೇಕಾದವರನ್ನು ಬೇಕಾದಾಗ ಹಿಡಿಯಬಹುದು. ಆತನ ಇಚ್ಛೆಗೆ ಬರುತ್ತಲೆ ಬೇಕಾದ ಒಂದು ಲೇಖವು ರಾಜದ್ರೋಹಿಯಾಗಬಹುದು. ಅಧಿಕಾರಿಯು ಇಚ್ಛೆಗೆ ಬಂದಾಗ ತನ್ನ ಲೆಕ್ಕಣಿಕೆಯ ಗೀಟಿನೊಂದಿಗೆ ಸಮಾಜಗಳ ಹಕ್ಕುಗಳನ್ನು ನಷ್ಟಪಡಿಸಬಹುದು. ಬ್ರಿಟಿಷ ಜನರ ಪ್ರವೃತ್ತಿಯು ಸ್ವಭಾವತಃ ಸ್ವಾತಂತ್ರ್ಯದ ಕಡೆಗೆ ಇರುತ್ತದೆ. ಆದುದರಿಂದ ಅವರಿಂದ ಇಲ್ಲಿ ಅಷ್ಟೊಂದು ಜೋರಿನಿಂದ ಜುಲುಮೆಯನ್ನು ಮಾಡಲಿಕ್ಕೆ ಆಗಲೊಲ್ಲದಾಗಿದೆ. ಆದರೆ ಆ ಕಾಲವೂ ಬರಬಹುದು. ಇಂಥ ಪರಿಸ್ಥಿತಿಯಲ್ಲಿ ನಾವು ಮಾಡತಕ್ಕದ್ದೇನು? ಕೇವಲ ಸಂಶಯದ ಮೇಲೆ ನಮ್ಮನ್ನು ಹಿಡಿಯಬಹುದು; ಪೀಡಿಸಬಹುದು; ತಲೆಯಮೇಲೆ ಜೋತಾಡುತ್ತಿರುವ ಪ್ರೆಸ್ಸ್ ಆಕ್ಟಿನ ಬಿಚ್ಚುಗತ್ತಿಯು ಕೆಳಕೆಳಗೆ ಬರಬಹುದು. ನಮ್ಮ ಸಂಸ್ಥೆಗಳು ಬೇಕಾದಾಗ ದೋಷಿಗಳೆಂದೂ ನಿಯಮಬಾಹ್ಯಗಳೆಂದೂ ಪ್ರಕಟಿಸಲ್ಪಡಬಹುದು. ಆದರೆ ಬೇಕಾದಂಥ ಕಾಯಿದೆಗಳಾಗಲಿ, ಕಠಿಣ ಪ್ರಸಂಗಗಳು ಬರಲಿ ನಮ್ಮ ಮಾರ್ಗದ ಆಕ್ರಮಣವನ್ನು ನಾವು ಮುಂದೆ ಹಾಗೇ ಮಾಡಲಿಕ್ಕೆಬೇಕು. ಇಂದಿಗಿಂತಲೂ ನಾಳಿನ ಪರಿಸ್ಥಿತಿಯು ಹೆಚ್ಚು ಕಠಿಣವಾಗಬಹುದು. ಆದರೆ ನಮ್ಮ ಕಾರ್ಯವನ್ನು ನಾವು ನಿಲ್ಲಿಸಕೂಡದು. ನಮ್ಮ ದೇಶಭಕ್ತಿಯ ಮೇಲೆ ಬೇಕಾದಂಥ ಆರೋಪಗಳು ಮಾಡಲ್ಪಡಲಿ ಎಂಥ ಗಂಡಾಂತರಗಳಿಗೆ ಎದುರಾಗುವ ಪ್ರಸಂಗವು ಬರಲಿ ನಾವು ನಮ್ಮ ಕರ್ತವ್ಯಕರ್ಮವನ್ನು ಮಾಡಲಿಕ್ಕೆಬೇಕು. ಮುಂದೆ ಸಾಗಲಿಕ್ಕೆಬೇಕು.

ಸಮಿತಿಗಳೆಂದರೇನು? ಸಮಿತಿಗಳು ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿಗಳಿಂದ ಆಗುತ್ತವೆಂತಲ್ಲ. ಅದಕ್ಕೆ ಕೂಡಲಿಕ್ಕೆ ಒಂದು ನಿಶ್ಚಿತಸ್ಥಳವೂ ಬೇಕೆಂತಲ್ಲ. ಸಮಿತಿಯೆಂದರೆ ಒಕ್ಕಟ್ಟು, ಸಮಿತಿಯಂದರೆ ಬಂಧುಭಾವ, ಎಲ್ಲಿ ಸ್ವಾರ್ಥತ್ಯಾಗ, ನಿಸ್ವಾರ್ಥತನದಕಾರ್ಯ, ಚೈತನ್ಯಗಳಿರುವವೋ ಅಲ್ಲಿ ಸಂಘಗಳಾಗುತ್ತವೆ. ಒಬ್ಬ ಮನುಷ್ಯನಿದ್ದರೂ ಕಾರ್ಯಕ್ಕೆ ಆರಂಭವಾಗುವದು. ಕಾರ್ಯ ಮಾಡಲಿಕ್ಕೆ ಇಂಥ ಸಾಧನಗಳೇ ಬೇಕೆಂದು ಅದು ಅಡಗಾಣಿಸಿಕೊಂಡು ಕೂಡ್ರುವದಿಲ್ಲ. ಒಂದೇ ತರದ ಧ್ಯೇಯದಿಂದ ಪ್ರೇರಿತವಾದ ಅಂತಃಕರಣಗಳು ಒಂದರ ಸಮೀಪಕ್ಕೊಂದು ಬಂದರೆ ಸಮಿತಿಗಳಾಗುವವು. ಬಂಧು-ಭಾವದಿಂದ ಎಲ್ಲವರೂ ಕೈಯಲ್ಲಿ ಕೈಹಾಕಿ ಕಾರ್ಯಕ್ಕೆ ಹತ್ತುತ್ತಿದ್ದಲ್ಲಿ ಸಂಘಗಳಾಗುವವು. ಈ ರೀತಿಯಲ್ಲಿ ನಮ್ಮಲ್ಲಿ ನಮ್ಮ ಮಾತೃಭೂಮಿಯ ವಿಷಯಕ್ಕೆ ಇಡೀ ದೇಶದಲ್ಲಿ ಪ್ರೇಮವುಂಟಾದರೆ ದೊಡ್ಡದೊಂದು ಸಂಘವಾಗುವದು. ಈ ಸಂಘಗಳು ಯುರೋಪಿಯರಂತೆ ಸ್ವಾರ್ಥದ ಆಶೆಯಿಂದಾಗಿರದೆ ಜನ್ಮಭೂಮಿಯ ಮೇಲಿನ ನಿಸ್ವಾರ್ಥ ಪ್ರೇಮದಿಂದ ಆಗುವವು.

ಇಂಥ ಸಂಘಗಳನ್ನು ಮಾಡಿರಿ, ಒಕ್ಕಟ್ಟಾಗಿರಿ, ನಿಮ್ಮ ಸ್ವಜನಸೇವೆಯಲ್ಲಿ ಪರಮಾತ್ಮನ ಸೇವೆಯ ಸುಖವನ್ನು ಅನುಭವಿಸಿರಿ. ಕೇವಲ ಸ್ವಾರ್ಥದಿಂದ ಪ್ರೇರಿತರಾಗಿ ಕುಳ್ಳಿರಬೇಡಿರಿ. ಉದಾತ್ತ ಹೇತುವಿರಲಿ. ನೀವೆಲ್ಲರೂ ಒಂದು. ನೀವು ಬಂಧುಗಳಿರುವಿರಿ. ನಿಮ್ಮ ಮಾತೃಭೂಮಿಯ ಸಲುವಾಗಿ ಕೂಡಿರಿ.

ಸಂಘೇ ಶಕ್ತಿಃ ಕಲೌಯುಗೇ ಇದು ಕಲಿಯುಗದ ಧರ್ಮವಾಗಿದೆ. ಸಮಾಜಕಾರ್ಯವನ್ನು ಪ್ರೀತಿಸಲಿಕ್ಕೆ ಬಂಗಾಲಿಗಳು ಕಲಿತಿದ್ದಾರೆ. ಹೀಗೆ ಮಾತೃಭೂಮಿಯ ಸೇವೆ ಮಾಡುವದರಿಂದ ನೀವು (ಬಂಗಾಲಿಗಳು) ಒಂದು ದೊಡ್ಡಸಂಸ್ಥೆಯನ್ನು ನಿರ್ಮಾಣ ಮಾಡುತ್ತಲಿದ್ದೀರಿ. ದೇಶದ ಎಲ್ಲ ಮುಖಂಡರಲ್ಲಿ ಅಶ್ವಿನೀಕುಮಾರದತ್ತರ ತೇಜವು ಸ್ವಲ್ಪಮಟ್ಟಿಗಾದರೂ ಪ್ರವೇಶಿಸಿತೆಂದರೆ ಇಡೀ ದೇಶವೇ ತಾನೆ ಒಂದು ಬ್ರಹ್ಮಬಾಂಧವ ಸಮಿತಿಯಾಗುವದು "ಒಕ್ಕಟ್ಟಾಗಿರಿ, ಸ್ವತಂತ್ರರಾಗಿರಿ, ಒಂದಾಗಿರಿ, ಉತ್ಕರ್ಷಿಗಳಾಗಿರಿ." ಎಂದು ಭಾರತೀಯರಿಗೆ ದೇವರ ಆಜ್ಞೆಯಿರುತ್ತದೆ.

ಅರವಿಂದ ಯೋಗಿಗಳು ತುರಂಗದೊಳಗಿಂದ ಬಂದಬಳಿಕ ಇಡೀ ಭರತಖಂಡದ ಮುಖಂಡತನದ ಚುಕ್ಕಾಣಿಯು ಅವರ ಕೈಯಲ್ಲಿ ಬಂದಿತ್ತಷ್ಟೇ. ಆ ಕಾಲಕ್ಕೆ ಅವರು ಎಲ್ಲ ದೇಶಕ್ಕೆ ಉದ್ದೇಶಿಸಿ ತೆಗೆದ ಆಜ್ಞಾಪತ್ರದ ಸಾರಾಂಶವನ್ನು ಕೆಳಗೆ ಕೊಟ್ಟಿದೆ.

ನಮಗೆ ರಾಷ್ಟ್ರವನ್ನು ಪೂರ್ಣಾವಸ್ಥೆಗೆ ವೈಯ್ಯುವದಿರುತ್ತದೆ. ಈ ಮಾರ್ಗವನ್ನು ಕ್ರಮಿಸುತ್ತಿರಲು ಇದಕ್ಕಿಂತ ಕಡಿಮೆ ತರದ ಸ್ವರಾಜ್ಯವು ನಮಗೆ ಸಾಕು. ಜಾತಿ ಮತ್ತು ಧರ್ಮಗಳಿಗಾಗಿ ಕೌನ್ಸಿಲಿನಲ್ಲಿ ಬೇರೆ ಸ್ಥಳಗಳನ್ನು ಕಾಯ್ದಿಡುವ ಅಸಡ್ಡಾಳವಾದ ಪದ್ಧತಿಯು ನಮಗೆ ಬೇಡ. ಖಜಾನೆಯ ಮೇಲೆ ನಮ್ಮ ಅಧಿಕಾರವು ನಡೆಯಬೇಕು. ಅಧಿಕಾರ ನಡೆಸುವ ನೌಕರರ ಮೇಲೆ ನಮ್ಮ ಅಧಿಕಾರವು ನಡೆಯುತ್ತಿರಲಿಕ್ಕೇ ಬೇಕು. ಈ ಅಧಿಕಾರಗಳು ಸಿಗುವವರೆಗೆ ನಾವು ಸರಕಾರದ ಸಂಗಡ ಸಹಕಾರವನ್ನು ಎಂದೂ ಮಾಡಕೂಡದು. ಕಾಲ ಪರಿಸ್ಥಿತಿಯನ್ನು ನೋಡಿಕೊಂಡು ಇದರ ಪ್ರಯೋಗವನ್ನು ಹೆಚ್ಚುಕಡಿಮೆ ತೀಕ್ಷ್ಣ ರೀತಿಯಲ್ಲಿ ಮಾಡತಕ್ಕದ್ದಿರುತ್ತದೆ. ಈಗಿನ ಹೊಲಸು ಪದ್ಧತಿಯ ಶಿಕ್ಷಣದಿಂದ ರಾಷ್ಟ್ರವು ನಿಃಸತ್ವವಾಗುತ್ತಿರುವದರಿಂದ ನವಜೀವನದಾಯಿಯಾದ ರಾಷ್ಟ್ರೀಯ ಶಿಕ್ಷಣವನ್ನು ಕೊಡಲಿಕ್ಕೆ ಹತ್ತಬೇಕು. ಪಂಚರವತಿಯಿಂದ ನ್ಯಾಯಗಳನ್ನು ತೀರಿಸುವ ಪದ್ಧತಿಯು ಮರೆಯುತ್ತ ನಡೆದಿದೆ. ಆದರೆ, ಅದನ್ನು ಪುನಃ ಆರಂಭಿಸಲಿಕ್ಕೆ ಬೇಕು. ಲೋಕಶಿಕ್ಷಣದ ಕಾರ್ಯವನ್ನು ಕೈಕೊಂಡು ಚಲೋ ರೀತಿಯಲ್ಲಿ ಜರುಗಿಸಲಿಕ್ಕೆ ಬೇಕು. ಮತ್ತು ನಮ್ಮ ಔದ್ಯೋಗಿಕ ಹಾಗೂ ಸಾಂಪತ್ತಿಕ ಸ್ಥಿತಿಯಲ್ಲಿ ಸುಧಾರಿಸಿಕೊಳ್ಳಲಿಕ್ಕೆ ಬೇಕು. ಇವುಗಳನ್ನೂ ಇಂಥ ಬೇರೆ ತರದ ಚಟುವಟಿಕೆಗಳನ್ನೂ ನಾವು ಮರೆಮಾಚದೆ ಶಾಂತತೆಯ ಹಾಗೂ ಕಾಯದೆಶೀರ ಮಾರ್ಗದಿಂದಲೇ ನಡಿಸುವದಿರುತ್ತದೆ. ಇದರ ಸಲುವಾಗಿ ರಾಷ್ಟ್ರೀಯ ಪಕ್ಷದವರಿಗೆ ತಮ್ಮ ಸಂಸ್ಥೆಗಳನ್ನು ಸ್ಥಾಪಿಸಲಿಕ್ಕೆ ಬೇಕು. ಇವುಗಳನ್ನು ಮುರಿಯಲಿಕ್ಕೆ ಅಧಿಕಾರಿಗಳು ಯತ್ನಿಸಿದರೆ ಅದು ಸರಕಾರದವರ ತಪ್ಪು. ಲಂಚಬಡಕ ಪೋಲೀಸರು, ಅವಿಚಾರಿಗಳಾದ ಅಧಿಕಾರಿಗಳು ಅಥವಾ ಪಕ್ಷಪಾತಿಗಳಾದ ನ್ಯಾಯಾಧೀಶರು ಈ ಚಳವಳಿಗಳನ್ನು ಮಾಡುವವರನ್ನು ಮುರಿಯಲಿಕ್ಕೆ ಯತ್ನಿಸಬಹುದು. ಅವರನ್ನು ಗೋಳಾಡಿಸಬಹುದು. ಆದರೆ ಅದಕ್ಕುಪಾಯವಿಲ್ಲ. ಉತ್ಕರ್ಷದ ಮಾರ್ಗವನ್ನು ಆಕ್ರಮಿಸುವಾಗ ಹಾದಿಯಲ್ಲಿ ಹತ್ತುವ ಸುಂಕವನ್ನು ಕೊಡಲಿಕ್ಕೆ ರಾಷ್ಟ್ರೀಯ ಪಕ್ಷದವರು ಸಿದ್ಧರಿರಲಿಕ್ಕೆ ಬೇಕು. ಈ ಕಾಲದಲ್ಲಿ ರಾಷ್ಟ್ರೀಯ ಚಳವಳಿಗೆ ಕಾಯದೇ ತೀರ ಹಾಗೂ ಸಂಘಟಿತ ಸ್ವರೂಪವನ್ನು ಕೊಡಲಿಕ್ಕೆ ಪ್ರತಿಯೊಬ್ಬರು ಸಿದ್ಧರಿರಲಿಕ್ಕೆ ಬೇಕು. ಸರಕಾರದ ಒತ್ತಾಯಕ್ಕೆ ಬೆದರಿ ಬಾಯ್ಬಿಡುವವರು ಈ ಉಸಾಬರಿಗೆ ಬೀಳಬಾರದು. "ಆಂಗ್ಲೋ ಇಂಡಿಯನರ ಬಾಲ ಬಡಿದರೆ ಮತ್ತು ಇಂಗ್ಲೆಂಡದೊಳಗಿನ ಉದಾರ ಮತವಾದಿ ಜನರ ಸಂಗಡ "ಅಳ್ಳಳ್ಳ ಪಳ್ಳಳ್ಳ" ಮಾಡಿದರೆ ಸ್ವಪ್ರಯತ್ನದ ಆವಶ್ಯಕತೆಯಿಲ್ಲ. ನಮ್ಮ ಸಂಕಟಗಳ ಪರಿಹಾರವಾಗುವದು" ಎಂಬುವ ಅಭಿಪ್ರಾಯವಿದ್ದ ಜನರು ಈ ನಮ್ಮ ರಾಷ್ಟ್ರೀಯ ಚಳವಳಿಗಳಿಂದ ದೂರಿರಬೇಕು. ಹಾಗೂ ಯಾರು ಅಲ್ಪಸಂತುಷ್ಟರಿದ್ದು ಸರಕಾರದವರು ಕೊಟ್ಟ ಅರ್ಧಗಿರ್ಧ ತುಣುಕಿನಿಂದ ಸಮಾಧಾನ ಹೊಂದುವರೋ ಅವರೂ ನಮ್ಮಿಂದ ಸರಿದು ಒತ್ತಟ್ಟಿಗಾಗಬೇಕು. ಯಾರಿಗೆ "ರಾಷ್ಟ್ರೀಯ"ರೆಂಬ ಹೆಸರಿಗೆ ಒಪ್ಪುವಂತೆ ನಡೆಯುವ ಕೂವತ್ತು ಇರುವದೋ ಅವರೇ ಮುಂದೆ ಬಂದು ಈ ರಾಷ್ಟ್ರಕಾರ್ಯದ ಭಾರವನ್ನು ಹೊರಲಿಕ್ಕೆ ತಲೆಗೊಡಬೇಕು.

೧೯೦೭-ಅರಲ್ಲಿ ಎಲ್ಲ ಮುಖಂಡರು ಸಾಮ್ರಾಜ್ಯಾಂತರ್ಗದ ಸ್ವರಾಜ್ಯವನ್ನು ಬೇಡುತ್ತಿರಲು ಅರವಿಂದ ಯೋಗಿಗಳು ಮಾತ್ರ ಸಂಪೂರ್ಣ ಸ್ವಾತಂತ್ರ್ಯವು ಸಿಗದ ಹೊರ್ತು ಗತಿಯೇ ಇಲ್ಲವೆಂದು ಪ್ರತಿಪಾದಿಸುತ್ತಿದ್ದರು. ಆ ಸಂಬಂಧದ ಉದ್ಗಾರಗಳೇನೆಂದರೆ:

"ಅನೇಕರು ಸ್ವಾತಂತ್ರ್ಯ ಶಬ್ದವನ್ನು (ವಾಖ್ಯಾನದಲ್ಲಿ) ಉಪಯೋಗಿಸಲಿಕ್ಕೆ ಭಯಪಡುತ್ತಾರೆ. ಆದರೆ ನಾನು ಈವರೆಗೆ ಈ ಶಬ್ದವನ್ನೇ ಉಪಯೋಗಿಸಿದ್ದೇನೆ. ಈ ಶಬ್ದವು ಜನರಲ್ಲಿ ಸ್ವಾತಂತ್ರ್ಯದ ಮಹತ್ವಾಕಾಂಕ್ಷೆಯನ್ನುಂಟು ಮಾಡಲಿಕ್ಕೆ (ಉಪಯೋಗಿಸಲ್ಪಡುವ) ನನ್ನ ಮಂತ್ರವಾಗಿದೆ. ಈ ಮಂತ್ರವು ನನ್ನ ಮುಖದ ಉಪದೇಶವಾಗಿದೆ. ಇದನ್ನು ನಾನು ಆಗಾಗ್ಗೆ ಉಪಯೋಗಿಸಿದ್ದೇನೆ. ಸ್ವಾತಂತ್ರ್ಯದ ಮಹಾತ್ವಾಕಾಂಕ್ಷೆಯನ್ನುಂಟು ಮಾಡುವದು ದೋಷವಾಗಿದ್ದರೆ ನನ್ನನ್ನು ಕಾರಾಗ್ರಹದಲ್ಲಿಡಿರಿ! ಹಾಗೂ ನನ್ನ ಕೈಗಳನ್ನು ಶೃಂಖಲೆಯಿಂದ ಬಂಧಿಸಿರಿ, ಸ್ವಾತಂತ್ರ್ಯದ ಉಪದೇಶ ಮಾಡುವದು ಅಪರಾಧವಾಗಿದ್ದರೆ, ನಾನು ಅಪರಾಧಿಯಾಗಿದ್ದೇನೆ. ನನ್ನನ್ನು ಶಿಕ್ಷಿಸಿರಿ." ಕರ್ಮಯೋಗಿನ್ ದಲ್ಲಿ ಮಹರ್ಷಿ ಅರವಿಂದ ಘೋಷರು ಪ್ರಕಟಿಸಿದ ದಿವ್ಯಮಂತ್ರವನ್ನು ಕೆಳಗೆ ಕೊಟ್ಟಿದೆ. ಅದನ್ನು ದಿನಾಲು ಪ್ರತಿಯೊಬ್ಬ ಭಾರತೀಯನೂ ಭಕ್ತಿಪೂರ್ವಕವಾಗಿ ಅನ್ನುತ್ತಿರಬೇಕು. ಅದು:-

> ಹಿಂದುಸ್ತಾನವು ಅಭೇದ್ಯವಾದ ಹಾಗೂ ಸುಸಂಬದ್ಧವಾದ ಒಂದು ರಾಷ್ಟ್ರವಿರುತ್ತದೆಂದು ನನ್ನ ವಿಶ್ವಾಸವಿರುತ್ತದೆ.
>
> ಹಿಂದುಸ್ತಾನವು ನಮ್ಮ ಮನೆ, ನಮ್ಮ ಸಂಪತ್ತು, ಮತ್ತು ನಮ್ಮ ಭಕ್ತಿಸ್ಥಲವಿರುತ್ತದೆ. ವೇದೋಪನಿಷತ್ತು ಗಳೊಳಗಿಂದ ಉತ್ಪನ್ನವಾದಂಥ ಹಲವು ಧರ್ಮ ಹಾಗೂ ಸಾಮ್ರಾಜ್ಯಗಳಿಗೆ ಜನ್ಮಗೊಡುವಂಥ ಕವಿಗಳ ರಸವಂತಿಕೆಯಲ್ಲಿ ನರ್ತಿಸುವಂಥ ಹಾಗೂ ಋಷಿಗಳ ಸಮಾಧಿಸ್ಥಿತಿಯ ಧ್ಯಾನದಲ್ಲಿ ಪ್ರತ್ಯಕ್ಷವಾಗುವಂಥದೊಂದು ದಿವ್ಯಶಕ್ತಿಯು ಮತ್ತೆ ಉದಯವಾಗಿರುತ್ತದೆ. ಆ ಶಕ್ತಿಯ ಹೆಸರು "ರಾಷ್ಟ್ರೀಯತ್ವ" ವೆಂಬುದಾಗಿದೆ. ಹಿಂದುಸ್ತಾನದ ವರ್ತಮಾನ ಕಾಲದ ಅಸ್ತಿವಾರವು ಭೂತಕಾಲದಲ್ಲಿ ಒಳ್ಳೇ ಆಳದ ವರೆಗೆ ಹೋಗಿದ್ದು ಅದರೆದುರಿಗೆ ತೇಜಃಪುಂಜವಾದ ಭವಿಷ್ಯತ್‌ಕಾಲವು ಥಳಥಳಿ ಸುತ್ತಲಿದೆ. ಇದು ನನ್ನ ಸಾಕ್ಷಾತ್ಕಾರವು. ಅಮ್ಮಾ ಭಾರತ ಜನನೀ, ನೀನು ಸುಖದ ಪೀತಾಂಬರವನ್ನುಟ್ಟು ಬಾ, ಅಥವಾ ದುಃಖದ ರಗಟೆಯನ್ನು ಧರಿಸಿ ಬಾ! ಝುಗಝುಗಿಸುವ ಐಶ್ವರ್ಯದೊಳಗಿಂದ ಬಾ ಅಥವಾ ಹೀನದೆಶೆಯ ಅಂಧಃಕಾರ ದೊಳಗಿಂದ ಬಾ, ಹೇಗಾದರೂ ಬಾ, ಅಂತೂ ಬಂದು ನನ್ನನ್ನು "ಎಲೋ ಮಗು" ಎಂದು ಪ್ರೇಮದಿಂದ ಕರೆ! ಅಂದರೆ ನನ್ನ ಶವದಲ್ಲಿ ಸಹ ಜೀವನ ಕಲೆಯು ಬಂದೀತು!

ಟಿಪ್ಪಣಿಗಳು

೧. The Wisest then deponded on inner experonce and the suggestion of the intertive mind for all knowledge that ranged beyond mankind's ordinary perseption and daily activites. Their aim was illumination not logical conviction.

೨. See 'The Sinthes's of Yoga' Arya

'Arya' September 1914

Vol I, page 364

೩. The end of the path may be, qually, a perception of the divine in all energies, in all happenings, in all activities and a free and unegoistic participation of the soul in the cosmic action

'Arya' Vol I, Page A

೪. See Arya Vol. IV Page 217

೫. See Arya Vol II

೬. Nationalism is a religion That has come from God.... you must remeber that you are the instruments of God for the Salvation of Your own country. There is only one force and fro than for a I am not necessary, you are not necessary, we in not necessary.... God in doing everything. own bids us suffer, we suffer, become than suffering in necessary to give others strength, He himself is the worker and the work

Bombay we take Modern Reviview July 1908

೭. ಇದನ್ನು Nation builders Vol. III ದೊಳಗಿನ ಶ್ರೀ ಅರವಿಂದರ ವ್ಯಾಖ್ಯಾನದ ಮೇಲಿಂದ ತಕ್ಕೊಂಡಿದೆ.

ಟಿಳಕ ಕಥಾಮೃತಸಾರ

ಪ್ರಕಾಶಕರ ನಾಲ್ಕು ಮಾತುಗಳು

೧೯೨೦ರಲ್ಲಿ ಧಾರವಾಡದ ನಾಗರಿಕರು ಲೋಕಮಾನ್ಯರ ಸ್ಮಾರಕವನ್ನು ಮಾಡಬೇಕೆಂದು ನಿಶ್ಚಯಿಸಿದರು. ಆ ಕಾರ್ಯಕ್ಕಾಗಿ ಶ್ರೀ ಚಿಂತಾಮಣಿ ರಾಮಚಂದ್ರ ಸಹಸ್ರಬುದ್ಧೆಯವರು ೫೦೯ ರೂ. ಗಳನ್ನೂ, ಧಾರವಾಡದ ಟಿಳಕಸ್ಮಾರಕ ಫಂಡ್ ಕಮಿಟಿಯವರು ೪೦೯ ರೂಪಾಯಿಗಳನ್ನೂ ಕೂಡಿಸಿದರು. ಮುಂದೆ ಆ ಹಣದ ಮೇಲಿನ ಬಡ್ಡಿಯ ವಿನಿಯೋಗವು ಇ.ಸ. ೧೯೨೭ರ ವರೆಗೆ ಧಾರವಾಡದ ಕರ್ನಾಟಕ ರಾಷ್ಟ್ರೀಯ ವಿದ್ಯಾಲಯಕ್ಕಾಗಿ ಮಾಡಲ್ಪಟ್ಟಿತು. ಹಣದ ವ್ಯವಸ್ಥೆಯ ಮೇಲ್ವಿಚಾರಣೆಗಾಗಿ ಒಂದು ಮಂಡಲವೂ ಏರ್ಪಡಿಸಲ್ಪಟ್ಟಿತ್ತು. ವಿದ್ಯಾಲಯವು ೧೯೨೭ರಲ್ಲಿ ನಿಂತುಹೋಯಿತು. ಮೇಲ್ಕಂಡ ಮಂಡಲದ ತಾ॥ ೨೮-೭-೧೯೨೮ರ ಸಭೆಯಲ್ಲಿ ನಿಧಿಯ ಬಡ್ಡಿಯಿಂದ ಧಾರವಾಡದಲ್ಲಿ ವಿದ್ವಾಂಸರ ಉಪನ್ಯಾಸಗಳನ್ನು ಏರ್ಪಡಿಸಬೇಕೆಂದು ಮತ್ತು ನಿಧಿಯ ವ್ಯವಸ್ಥೆಗಾಗಿ ಶ್ರೀ ವಿಠ್ಠಲರಾವ ಜೋಶಿ (ಅಧ್ಯಕ್ಷರು), ಶ್ರೀ ಗೋವಿಂದಾಚಾರ್ಯ ಗುತ್ತಲ (ಕೋಶಾಧ್ಯಕ್ಷ), ದತ್ತಾತ್ರೇಯ ಕುಲಕರಣಿ, ಕಾಂತರಾವ ಕಮಲಾಪೂರ ಕಾರ್ಯದರ್ಶಿಗಳು, ಸುರೇಂದ್ರರಾವ ದೇಸಾಯಿ ಮತ್ತು ದತ್ತಾತ್ರೇಯ ಕರಮರಕರ ಇವರದೊಂದು 'ಲೋಕಮಾನ್ಯ ಸ್ಮಾರಕ ಮಂಡಲ'ವು ಏರ್ಪಡಿಸಲ್ಪಡಬೇಕೆಂದು ಗೊತ್ತಾಯಿತು. ಆದರೆ, ಕಾರಣಾಂತರಗಳಿಂದ ಯೋಜನೆಯು ನೆರವೇರಲಿಲ್ಲವಾದುದರಿಂದ ಸ್ಮಾರಕನಿಧಿಯ ಸಹಾಯದಿಂದ ರಾಷ್ಟ್ರೀಯ ಭಾವನೆಯನ್ನಪೇಕ್ಷಿಸುವಂತಹ ೫೦-೬೦ ಪುಟಗಳ ಚಿಕ್ಕಗ್ರಂಥಗಳನ್ನು ಬರೆಯಿಸಿ ಪ್ರಸಿದ್ಧ ಮಾಡಬೇಕೆಂದೂ ಮತ್ತು ಪುಸ್ತಕಗಳನ್ನು ಪರೀಕ್ಷಿಸಿ ಪ್ರಕಟನೆಗಾಗಿ ಮುಂದುವರಿಸುವ ಕುರಿತು ಶ್ರೀ ವಿನಾಯಕರಾವ ಜೋಶಿ, ಸುರೇಂದ್ರರಾವ ದೇಸಾಯಿ ಮತ್ತು ದತ್ತಾತ್ರೇಯ ಕರಮರಕರ ಈ ಮೂವರದೊಂದು ಮಂಡಲ ವಿರಬೇಕೆಂದೂ ತಾ॥ ೧೦-೧-೧೯೩೧ ದಿನ ಗೊತ್ತಾಯಿತು. ಆ ಗೊತ್ತಿನಂತೆ ಇದೀಗ ಮೊದಲನೆಯ ಪುಸ್ತಕವು ಪ್ರಸಿದ್ಧವಾಗಲಿದೆ.

ಇನ್ನು ಪ್ರಸ್ತುತ ಪುಸ್ತಕದ ವಿಷಯವಾಗಿ ನಾಲ್ಕುಮಾತುಗಳನ್ನು ಹೇಳುವರು ಅವಶ್ಯವಿದೆ. ಲೋಕಮಾನ್ಯರ ವಿಷಯವಾಗಿ ಈ ಮೊದಲೇ ಬೇರೆಬೇರೆ ಭಾಷೆಗಳಲ್ಲಿ ಅನೇಕ ಪುಸ್ತಕಗಳು ಪ್ರಕಟವಾಗಿವೆ. ಪ್ರಚಲಿತ ರಾಜಕೀಯ, ಸಾಮಾಜಿಕ ಪ್ರಶ್ನೆಗಳಿಗೆ ಸಂಬಂಧಿಸಿದ ಅವರ ಕೆಲವು ಲೇಖನಗಳನ್ನೂ ವೃತ್ತಾಂತಗಳನ್ನೂ ಕಲೆಹಾಕಿ ಈ ಚಿಕ್ಕ ಪುಸ್ತಕವನ್ನು ಲೋಕಮಾನ್ಯ ಸ್ಮಾರಕಮಂಡಲದವರು ಪ್ರಕಟಿಸಿರುವರು.

ಕಾರ್ಯದರ್ಶಿಗಳು

ಲೋಕಮಾನ್ಯರ ಜೀವನ ರಹಸ್ಯ

ಎಷ್ಟೋ ಸಾರೆ ಮನುಷ್ಯನಿಗೆ ಅವನ ಕೆಳೆಯರೆ ಕೇಡಿಗರು, ಕೇಡಿಗರೇ ಕೆಳೆಯರಾಗಿ ಪರಿಣಮಿಸುವರು. "ನನ್ನ ಗೆಳೆಯರಿಂದುಳಿಸು" ಎಂಬರ್ಥದ ಒಂದು ಗಾದೆಯೂ ಇಂಗ್ಲೀಷಿನಲ್ಲುಂಟು. ಈ ಮಾತು ಲೋ. ಟಿಳಕರ ವಿಷಯಕ್ಕಂತೂ ಒಂದಕ್ಕಿಂತ ಹೆಚ್ಚು ಸಂಗತಿಗಳಲ್ಲಿ ಸರಿಹೋಗುತ್ತದೆ. ರಾಜಕೀಯ ಕ್ಷೇತ್ರದೊಳಗಿನ ಲೋ. ಟಿಳಕರ ಕೀರ್ತಿಗೆ ಕಾರಣರು ಅವರ ವಿರೋಧಿಗಳಾದ ಆಂಗ್ಲೋ ಇಂಡಿಯನ್ ಪತ್ರಿಕಾಕಾರರೂ ಮತ್ತು ಆಳರಸರು. ಲೋ. ಟಿಳಕರ ನಿಜವಾದ ಇಂಗಿತವನ್ನರಿತು ಅವರಿಗೆ "ಭಾರತೀಯ ಅಶಾಂತಿಯ ಮೂಲಪುರುಷ"ರೆಂಬ ಸರ್ವಥಾ ಅನ್ವರ್ಥಕವೂ ಅರ್ಥಪೂರ್ಣವೂ ಆದ ಬಿರುದನ್ನು ಅರ್ಪಿಸಿದವರು ಸರ ವೆಲೆಂಟೈನ ಚಿರೋಲರು; ಲೋಕಮಾನ್ಯರನ್ನು ಕೆಣಕಿ, ಕಾಡಿಸಿ, ಪೀಡಿಸಿ, ಗೋಳಾಡಿಸಿ ಅವರ ಧೈರ್ಯ, ಶೌರ್ಯ, ಸತ್ವನಿಷ್ಠೆಗಳ ಪ್ರಕಟನೆಗೆ ಪುಟಕೊಟ್ಟು, ಹೊನ್ನಿನಂತೆ ಥಳಥಳಿಸಿ ಹೊಳೆಯಲಿಕ್ಕೆ, ಮಹಾಕೀರ್ತಿಗೆ ನಿಮಿತ್ತ ಕಾರಣರು ಅರಸಾಳುಗಳು. ವೇದಗಳಿಗೆ ಬಹಳ ಪ್ರಾಚೀನತೆಯು ಸಿಕ್ಕಬಾರದೆಂದು ಅವುಗಳ ಕಾಲವನ್ನು ಕ್ರಿಸ್ತಶಕಕ್ಕೆ ಶಕ್ಯವಿದ್ದಷ್ಟು ಸಮೀಪವಾಗಿ ಎಳೆದು ತರಲು ಹವಣಿಸುತ್ತಿದ್ದ ಯುರೋಪಿಯ ವಿದ್ವಾಂಸರ ಕ್ಷುದ್ರ ಪ್ರಯತ್ನವೆ ಲೋಕಮಾನ್ಯರ ವೇದಾಧ್ಯಯನಕ್ಕೂ,'ವೇದಕಾಲ ನಿರ್ಣಯ'ವೆಂಬ ಅವರ ಜಗದ್ವಿಖ್ಯಾತ ಗ್ರಂಥಲೇಖನಕ್ಕೂ ಮೂಲಕಾರಣ. ಲೋಕಮಾನ್ಯರ ಬಗ್ಗೆ ಜನರಲ್ಲಿ ಹಲವು ಬಗೆಯ ತಪ್ಪು ತಿಳುವಳಿಕೆಗಳು ಉಂಟಾಗಲಿಕ್ಕೆ ಮುಖ್ಯವಾಗಿ ಅವರ ಮಿತ್ರರೇ ಕಾರಣರು. 'ಅಸ್ಪೃಶ್ಯೋದ್ಧಾರಕ್ಕೆ ಶ್ರೀ ಟಿಳಕರು ಸಹಾಯ ಮಾಡಲಿಲ್ಲ; ಇವರು ಹಿಂದುಳಿದ ಸಮಾಜದ ಹಿತವಿರೋಧಿಗಳು, ಹಳೆಯ ನಿರ್ಜೀವ ಚಾತುರ್ವರ್ಣ್ಯವನ್ನು ಮತ್ತೆ ಪ್ರಸ್ಥಾಪಿಸಿ ತಮ್ಮ ಬ್ರಾಹ್ಮಣೀ ರಾಜ್ಯವನ್ನು-ಪೇಶವಾಯಿಯನ್ನು-ಆರಂಭಿಸಬೇಕೆಂದು ಇವರ ಎಲ್ಲ ಪ್ರಯತ್ನಗಳೂ ನಡೆದಿವೆ; ಎಂದು ಮುಂತಾಗಿ ಸತ್ಯಶೋಧಕರೇ ಮೊದಲಾದವರು ಗೊಣಗಲಿಕ್ಕೆ ನಿಜವಾಗಿ ಏನೂ ಕಾರಣವಿದ್ದಿಲ್ಲ. ಏಕೆಂದರೆ, ಲೋಕಮಾನ್ಯರು ತಮ್ಮ ವೈಯಕ್ತಿಕ ಆಚರಣದಲ್ಲಿ ಇಂತಹ ಅದಾವ ಸಂಕುಚಿತ ವಿಚಾರಕ್ಕೂ ಅವಕಾಶ ಕೊಟ್ಟಿದ್ದಿಲ್ಲ.

If a God were to tolerate Untouchability. I would not recognize him a God at all.

ದೇವನಿಗೆ ಅಸ್ಪೃಶ್ಯತೆಯ ಮಾನ್ಯವಿದ್ದರೆ ಅವನನ್ನು ದೇವರೆಂದು ನಂಬಿ ನೆಚ್ಚಲಿಕ್ಕೇ ನಾನು ಸಿದ್ಧನಿಲ್ಲವೆಂದು ಲೋಕಮಾನ್ಯರು ಮುಂಬೈಯಲ್ಲಿ ಶ್ರೀ ಸಯಾಜಿರಾವ ಮಹಾರಾಜ ಗಾಯಕವಾಡ, ಬಡೋದೆ ಇವರ ಅಧ್ಯಕ್ಷತೆಯಲ್ಲಿ ಆದ ಅಸ್ಪೃಶ್ಯರ ಮಹಾಸಭೆಯಲ್ಲಿ ಘನಗಂಭೀರ ಗರ್ಜನೆಯನ್ನು ಮಾಡಿದ್ದು ಪ್ರಸಿದ್ಧವಿದೆ. ೧೯೦೦ರಲ್ಲಿ ಲಾಹೋರಿಗೆ

ರಾಷ್ಟ್ರೀಯ ಮಹಾಸಭೆಯು ಸೇರಿದಾಗ ಲೋ. ಟಿಳಕರೂ ಅಲ್ಲಿಗೆ ಹೋಗಿದ್ದರು. ಆಗ ದೇ. ಭ. ಲಾಲಾ ಲಜಪತರಾಯರಿಗೆ ಲೋಕಮಾನ್ಯರ ಪರಿಚಯವಾಗಿ ತಮ್ಮ ಮನೆಗೆ ಊಟಕ್ಕೆ ಕರೆದರು. ಲೋ. ಟಿಳಕರು ಪರಂಪರಾಪ್ರಿಯರೂ ಹಳೆಯ ಆಚಾರವಿಚಾರದವರೂ ಎಂಬ ಜನಜನಿತವಾರ್ತೆಯನ್ನು ಮೊದಲೇ ಕೇಳಿದ್ದ ಶ್ರೀ ಲಾಲಾಲಜಪತರಾಯರು ಅವರನ್ನು ತಮಗೆ 'ಬ್ರಾಹ್ಮಣನಿಂದ ಅಡಿಗೆ ಮಾಡಿಸುವೆನು' ಎಂದು ವಿಜ್ಞಾಪಿಸಿಕೊಂಡರು. ಕೂಡಲೆ ಲೋ. ಟಿಳಕರು ಅದು ತಮಗೆ ಅನಾವಶ್ಯಕವೆಂದೂ ಬೇಕಾದವನಿಂದ ಬೇಯಿಸಲಟ್ಟಿದ್ದರೂ 'ಪಕ್ವವಾದ ಅನ್ನವನ್ನು ತಕ್ಕೊಳ್ಳಲಿಕ್ಕೆ ಯಾವ ಅಡ್ಡಿಯೂ ಇಲ್ಲ'ವೆಂದೂ ಹೇಳಿದರು. ಆದರೆ ಲಾಲಾಜಿಯವರಿಗೆ ಇಷ್ಟರಿಂದಲೇ ಸಂಶಯವು ದೂರವಾಗದೆ ಮತ್ತೆ ಬಿನ್ನವಿಸಿದರು "ತಮ್ಮ ಆಕ್ಷೇಪಣೆಯಿಲ್ಲದಿದ್ದರೆ ನನ್ನ ಹೆಂಡತಿಯು ಅಡಿಗೆಯನ್ನು ಮಾಡುವಳು. ಅಪ್ಪಣೆ ಕೊಡಿಸಿದರೆ ತಮಗೆ ಬೇಕಾದ ವಿಶಿಷ್ಟ ಜಾತಿಯ ಬ್ರಾಹ್ಮಣನಿಂದಲೂ ಊಟವನ್ನು ಸಿದ್ಧಪಡಿಸುವೆನು." ಆಗ ಲೋಕಮಾನ್ಯರು ಈ ಮಾತನ್ನೇ ಬದಿಗೊತ್ತಿಬಿಟ್ಟರು. ಯಾವ ಭೇದಭಾವವಿಲ್ಲದೆ ಶ್ರೀ ಲಾಲಾಜಿಯವರೊಡನೆ ಲೋ. ಟಿಳಕರ ಸಹಭೋಜನವಾಯಿತು. ಇಂತಹ ಪ್ರಸಂಗವು ಇದೊಂದೇ ಅಲ್ಲ. ಲೋ. ಟಿಳಕರು ಇಂಗ್ಲೆಂಡಿಗೆ ಹೋಮರೂಲಿನ ಕಾರ್ಯಕ್ಕಾಗಿ ಹೊರಟಾಗ ಅವರ ಸನ್ಮಾನಾರ್ಥವಾಗಿ ಮುಂಬೈಯಲ್ಲಿ ಒಂದು ಸಾರ್ವಜನಿಕ ಭೋಜನ ಸಮಾರಂಭವಾಯಿತು. ಅದರೊಳಗೆ ಲೋಕಮಾನ್ಯರೊಡನೆ ಡಾ. ಆನಿಬಿಸೆಂಟ್ ಮೊದಲಾದವರೂ ಅತಿಥಿಗಳಾಗಿದ್ದರು. ಪತಿತೋದ್ಧಾರಕ್ಕಾಗಿ ಆ ಜನ್ಮ ಸೇವೆ ನಡಿಸಿದ ಶ್ರೀಮಾನ್ ವಿಠ್ಠಲ ರಾಮಜಿ ಸಿಂಧೆಯವರು ಅಸ್ಪೃಶ್ಯತೆಯ ಕಲಂಕವನ್ನು ಸಂಪೂರ್ಣ ವಾಗಿ ತೊಡೆದು ಬಿಡಲಿಕ್ಕೆಂದು ಒಂದು ಸಾರ್ವಜನಿಕ ಸಹಭೋಜನವನ್ನು ಮಾಡಿಸಬೇಕೆಂದು ಗೊತ್ತುಮಾಡಿದ್ದರು. ಈ ಭೋಜನಪ್ರಸಂಗದಲ್ಲಿ ಅಸ್ಪೃಶ್ಯರೊಡನೆ ಊಟಕ್ಕೆ ಅನೇಕ ಪ್ರಮುಖ ಮಹನಿಯರಿಗೂ ಔತಣಕೊಟ್ಟಿದ್ದರು. ಲೋಕಮಾನ್ಯರಿಗೂ ನಿಮಂತ್ರಣವಿದ್ದು ಅವರು ಅದನ್ನು ಆನಂದದಿಂದ ಸ್ವೀಕರಿಸಿದ್ದರೆಂದು ಶ್ರೀ ಸಿಂಧೆಯವರೇ ಬರೆದಿದ್ದಾರೆ. ಆದರೆ, ಲೋಕಮಾನ್ಯರು ಅಕಸ್ಮಾತ್ತಾಗಿ ತೀರಿಕೊಂಡದ್ದರಿಂದ ಆ ಯೋಗವು ಒದಗಿ ಬರಲಿಲ್ಲ.

ನಿಜಸ್ಥಿತಿಯು ಹೀಗಿದ್ದರೂ ಲೋ. ಟಿಳಕರು ನವಮತ ವಿರೋಧಿಗಳು, ಪುರಾಣಪ್ರಿಯರೆಂದು ದೂಷಣೆಗೆ ಕಾರಣರಾದುದೇಕೆ? ಅವರ ಮಿತ್ರರಿಂದ ಲೋ. ಟಿಳಕರ ಸುತ್ತಲೂ ಇದ್ದ ಮಿತ್ರರು ಮತ್ತು ಅನುಯಾಯಿಗಳಲ್ಲಿ ನಿಜವಾಗಿ ಪುರಾಣಪ್ರಿಯರೂ ನವಮತ ವಿರೋಧಿಗಳೂ ಆದವರೇ ಹೆಚ್ಚಾಗಿ ತುಂಬಿದ್ದರು. ಲೋ. ಟಿಳಕರು 'ಸಮ್ಮತಿ ವಯಸ್ಸಿನ ಕಾನೂನಿಗೆ ' ವಿರೋಧಿಸಿದ್ದು ಆ ಕಟ್ಟಳೆ ಅನ್ಯಾಯದ್ದು, ಅನೀತಿಯದು ಎಂದಲ್ಲ. ಪರಕೀಯ ಸರಕಾರದವರು ನಮ್ಮ ಧಾರ್ಮಿಕ ಆಚಾರವಿಚಾರಗಳಲ್ಲಿ ಕೈಹಾಕಕೂಡದು ಎಂಬ ತತ್ವದ ಸಲುವಾಗಿ. ಲೋಕಮಾನ್ಯರ ಉದ್ದೇಶವು ಹೀಗಿದ್ದುದಾದರೂ ಅವರ ಅನುಯಾಯಿಗಳಲ್ಲಿ ಬಹುತರ ಎಲ್ಲರಿಗೆ ಹೆಣ್ಣುಮಕ್ಕಳ ಮದುವೆಯು ಎಂಟು ಹತ್ತು ವರ್ಷಕ್ಕೆ ಮೀರಿ ಆಗಲೇಕೂಡದು ಎಂದೇ ಇತ್ತು. ಆದರೆ, ಲೋ. ಟಿಳಕರು ಮಾತ್ರ ತಮ್ಮ ಹೆಣ್ಣುಮಕ್ಕಳ ಮದುವೆಯನ್ನು ೧೩-೧೪ನೆಯ ವರ್ಷದೊಳಗಾಗಿ ಮಾಡಲಿಲ್ಲ! ಹೀಗಿದ್ದರೂ ಸಂಗಡಿಗರೂ, ಗೆಳೆಯರೂ ಆದವರ ಅಭಿಪ್ರಾಯ, ಆಚಾರಗಳ ಛಾಯೆಯು ಲೋಕಮಾನ್ಯರ ಮೇಲೆ ಬಿದ್ದು ಟೀಕೆಗೆ ಆಸ್ಪದ ವುಂಟಾಯಿತು. 'ಶಿಷ್ಯಾಪರಾಧೇ ಗುರೋರ್ದಂಡಃ' ಎಂಬಂತಾಗಿದೆ. ಇದೆಲ್ಲ ಲೋಕಮಾನ್ಯರ ಸ್ನೇಹಿತರೂ, ಅನುಯಾಯಿಗಳೂ ಆದ ಹಲವರ ಕೃತಿಗಳಿಂದ ಲೋಕಮಾನ್ಯರ ಹೆಸರೂ ಅವರ ಪರಂಪರೆಯೂ ಸ್ವಲ್ಪ ಮೇಘಾಚ್ಛಾದಿತ ಚಂದ್ರಮನಂತಾಗಿದೆ. ತಮ್ಮದು ಹಿರಿದು, ಹೆಚ್ಚಿನದು ಎಂದು ಹೇಳುವದಕ್ಕಾಗಿ ಎಷ್ಟೋ ಟಿಳಕ ಪಂಥಿಗಳು ಮಾಡುತ್ತಿರುವ ಮಹಾತ್ಮ ಗಾಂಧಿಯವರ ನಿಂದೆ ಹೀಗಳಿಕೆಗಳಿಂದ ಇಂತಹ ಶಿಷ್ಯರ ಗುರುವೂ ಹಾಗೆಯೆ ಇದ್ದನೇನೊ ಎಂಬ ಸಂಶಯವು ಜನಮನದಲ್ಲಿ ಮೂಡಿ ಮರೆಯಾಗುತ್ತಲಿದೆ.

ಅನುಯಾಯಿಗಳು ಬಿದ್ದರೆಂದು ಆವುದೆ ಧರ್ಮವನ್ನು ಅಥವಾ ಅದರ ಮೂಲ ಸಂಸ್ಥಾಪಕರನ್ನು ಹೀಯಾಳಿಸುವದು ಸರಿಯಾದೀತೆ? ಅನಾಚಾರಿಯಾದ ಅದ್ವೈತಿಯಿಂದ, ಅಥವಾ ದುರಾಚಾರಿಯಾದ ದ್ವೈತಿಯಿಂದ ಶಂಕರ ಅಥವಾ ಮಧ್ವರು ಕ್ಷುಲ್ಲಕರೆಂದು ಎಣಿಸಲ್ಪಡುವುದು ಎಂದೆಂದಿಗೂ ಸಾಧ್ಯವಿಲ್ಲ. ಲೋ. ಟಿಳಕರ ಮಾತಾದರೂ ಹಾಗೆಯೆ ಇದೆ.

ಲೋಕಮಾನ್ಯ ಟಿಳಕರು ಯುಗಪುರುಷರು. ಇಂತಹ ಮಹಾವಿಭೂತಿಗಳು ನೂರಿನ್ನೂರು ವರ್ಷಗಳಿಗೊಮ್ಮೆ ಕಾಣಿಸಿಕೊಳ್ಳುತ್ತಿರುತ್ತವೆ. ಲೋಕಮಾನ್ಯರು ಮಾಡಿದ ಮಹಾಕಾರ್ಯದ ಅಲ್ಪಸ್ವಲ್ಪಾದರೂ ಕಲ್ಪನೆಯುಂಟಾಗ ಬೇಕಾದರೆ ಅವರು ಕಾರ್ಯರಂಗದ ಮೇಲೆ ಅವತೀರ್ಣರಾದಾಗ ದೇಶದ ಸ್ಥಿತಿಯೇನಿತ್ತು; ಅವರು ಇಹಲೋಕ ಯಾತ್ರೆಯನ್ನು ಮುಗಿಸಿದ ಕಾಲಕ್ಕೆ ದೇಶವು ಯಾವ ತರಗತಿಗೆ ಬಂದಿತ್ತು ಎಂಬುದನ್ನು ಒಂದರೆಗಳಿಗೆಯಾದರೂ ವಿಚಾರಿಸುವುದು ಅಗತ್ಯವಾಗಿದೆ.

ಶ್ರೀ ಟಿಳಕರು ತಮ್ಮ ಸಾರ್ವಜನಿಕ ಆಯುಷ್ಯ್ರಮಣಕ್ಕೆ ಆರಂಭ ಮಾಡಿದುದು ೧೮೮೦ರ ಜನೆವರಿ ಮೊದಲನೆಯ ತಾರೀಖಿಗೆ. ಅಂದೇ ಮಹಾರಾಷ್ಟ್ರದಲ್ಲಿ ನವಜೀವನವನ್ನೆರೆದ 'ನ್ಯೂ ಇಂಗ್ಲಿಷ್ ಸ್ಕೂಲ' ಎಂಬ ಶಿಕ್ಷಣಸಂಸ್ಥೆಯು ಹೊರಟುದು. ಈ ಸಂಸ್ಥೆಯಲ್ಲಿ ಆಜನ್ಮ ಸೇವೆ ಮಾಡುವದಕ್ಕೆ ಲೋ. ಟಿಳಕರು ಇನ್ನುಳಿದ ತಮ್ಮ ಸಹಕಾರಿಗಳೊಡನೆ ದೀಕ್ಷೆ ಪಡೆದರು. ಆಗ ಶ್ರೀ ಟಿಳಕರಿಗೆ ಇನ್ನೂ ೨೪ವರ್ಷಗಳು ತುಂಬಿದ್ದಿಲ್ಲ. ಆ ಕಾಲದಲ್ಲಿ ದೇಶದಲ್ಲಿ ಇಂಗ್ಲೀಷ ಕಲಿತವರ ಸಂಖ್ಯೆಯು ಕಡಿಮೆ. ಅದರೊಳಗೂ ವಿಶ್ವವಿದ್ಯಾಲಯದ ಪದವಿಗಳನ್ನು ಪಡೆದವರು ಇನ್ನಿಷ್ಟು ಕಡಿಮೆ. ಬರಿ ನಾಲ್ಕೈದು ಇಯತ್ತೆ ಇಂಗ್ಲಿಷು ಕಲಿತವರಿಗೂ ದೊಡ್ಡ ದೊಡ್ಡ (ನಿಯೋಗ) ನೌಕರಿಗಳು ಸಿಕ್ಕುತ್ತಿದ್ದವು. ಬಿ. ಎ., ಎಂ.ಎ. ಆದವರಿಗಂತೂ ನೂರಿನ್ನೂರು ರೂಪಾಯಿಗಳ ಸಂಬಳದ ಸ್ಥಳಗಳು ದಾರಿ ನೋಡುತ್ತಲೆ ಇದ್ದವು. ಇಂತಹ ಮನಮೋಹಕ ಆಮಿಷವು ಕಣ್ಣೆದುರಿಗಿರುವಾಗ ಅದನ್ನು ಕಣ್ಣೆಕ್ಕಿ ನೋಡದೆ ದೂರದೃಷ್ಟಿಯಿಂದ ವಿಚಾರಿಸಿ ಸಮಾಜಹಿತ, ದೇಶಹಿತಕ್ಕಾಗಿ ಸ್ವಾರ್ಥತ್ಯಾಗದಿಂದ ಆತ್ಮಾರ್ಪಣ ಮಾಡಿಕೊಳ್ಳುವ ಬುದ್ಧಿ ಹುಟ್ಟುವುದು ಎಷ್ಟು ಮಂದಿಗೆ? ಮನೆಯಲ್ಲಿ ಕಕ್ಕನೂ, ಅಕ್ಕನೂ ತುಂಬಾ ಒತ್ತಾಯಪಡಿಸುತ್ತಿದ್ದರೂ ಲೋಕಮಾನ್ಯರು ನ್ಯೂ ಇಂಗ್ಲೀಷ ಸ್ಕೂಲಿಗೆ ಸೇರಿ ಲೋಕಶಿಕ್ಷಣ ಕಾರ್ಯವನ್ನೇ ಕೈಕೊಳ್ಳುವದನ್ನು ನಿರ್ಧರಿಸಿದರು, ಈ ಶಾಲೆಯ ಮೂಲ ಸಂಸ್ಥಾಪಕರಾದ ಶ್ರೀ ಟಿಳಕ ಶ್ರೀ ಆಗರಕರ ಪ್ರಭೃತಿಗಳು ಜೆಸುಯಿಟ್ ಪಾದ್ರಿಗಳಂತೆ ತಮ್ಮ ಆಯುಷ್ಯವನ್ನೇ ಸಂಪೂರ್ಣವಾಗಿ ಈ ಸಂಸ್ಥೆಗೆ ಅರ್ಪಿಸುವುದನ್ನು ನಿಶ್ಚಯಿಸಿದ್ದರು. ಹೊಟ್ಟೆಬಟ್ಟೆಯ ಮಟ್ಟಿಗೆ ಮಾತ್ರ ವೇತನವನ್ನು ತಕ್ಕೊಳ್ಳಬೇಕು; ಯಾರೂ ತಮ್ಮ ವೈಯಕ್ತಿಕ ಉತ್ಪನ್ನಸಂಗ್ರಹಗಳೆಂದು ಬೇರೆ ಏನೂ ಇಟ್ಟುಕೊಳ್ಳಕೂಡದು. ತಾವು ಗಳಿಸಿದ್ದನ್ನೂ ಗಳಿಸುವದನ್ನೂ ಈ ಸಂಸ್ಥೆಗೇ ಸಲ್ಲಿಸಬೇಕು ಎಂಬ ನಿರ್ಬಂಧವನ್ನು ಹಾಕಿಕೊಂಡಿದ್ದರು. ಇಷ್ಟೊಂದು ಕಠೋರ ನಿಯಮಗಳನ್ನು ಹಾಕಿಕೊಂಡು ದೇಶಸೇವಾವ್ರತವನ್ನು ಕೈಕೊಂಡ ಆ ಜೀವಗಳ ಧೀರೋದಾತ್ತ ಸ್ವರೂಪವು ಆಗಿನ ಆಮಿಷಗಳನ್ನು ನೆನೆಸಿದರೆ ಇನ್ನಿಷ್ಟು ಚೆನ್ನಾಗಿ ವ್ಯಕ್ತವಾಗುತ್ತದೆ. ಶಾಲೆಯಲ್ಲಿ ಸೇರಿದ ಬಳಿಕ ಕೆಲದಿನಗಳ ಮೇಲೆ ಶ್ರೀ ಟಿಳಕರಿಗೂ ಅವರ ಸಹಕಾರಿಗಳಲ್ಲಿ ಹಲವರಿಗೂ ರಾಜಕೀಯ ಹಾಗೂ ಸಾಮಾಜಿಕ ವಿಚಾರಗಳಲ್ಲಿ ಮತಭೇದವಾಗಿ ಶ್ರೀ ಟಿಳಕರು ತಮ್ಮ ಶಾಲೆಯ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಕೇಸರಿ ಮತ್ತು ಮರಾಠಾ ಪತ್ರಿಕೆಗಳನ್ನು ಅದರ ೭೦೦೦(ಏಳು ಸಾವಿರ) ರೂ. ಸಾಲ ಸಹಿತ ವಹಿಸಿಕೊಂಡರು. ಕೇಸರೀ ಪತ್ರಿಕೆಯು ಜನಮನವನ್ನು ತನ್ನ ಕಡೆಗೆ ಕ್ರಮಕ್ರಮವಾಗಿ ಎಳೆದುಕೊಳ್ಳಲಾರಂಭಿಸಿತ್ತು. ಕೊಲ್ಹಾಪೂರ ಮಹಾರಾಜರನ್ನು ದಿವಾಣರು ಬಹಳ ಅನ್ಯಾಯದಿಂದ ನಡೆಸಿ ಕೊಳ್ಳುತ್ತಿದ್ದರೆಂದು ತಿಳಿದು ಶ್ರೀ ಟಿಳಕರೂ ಶ್ರೀ ಆಗರಕರರೂ ನಿರ್ದಾಕ್ಷಿಣ್ಯದಿಂದ ಟೀಕೆ ಮಾಡಿದರು. ಇದಕ್ಕಾಗಿ ಇಬ್ಬರಿಗೂ ೧೦೧ ದಿನಗಳ ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. ಆದರೆ, ಇದರಿಂದ ಎಳ್ಳಷ್ಟೂ ಎದೆಗುಂದದೆ ಶ್ರೀ ಟಿಳಕರು ಮತ್ತಿಷ್ಟು ಉತ್ಸಾಹದಿಂದ ಲೋಕಸೇವಾ ವ್ರತವನ್ನು ಮುಂದುವರಿಸಿದರು.

ಪತ್ರಿಕಾ ವ್ಯವಸಾಯವು ಸ್ವಲ್ಪವೂ ಲಾಭದಾಯಕವಲ್ಲವೆಂಬುದು ಕೇಸರಿ ಮರಾಠಾ ಪತ್ರಿಕೆಗಳಿಗೆ ಹೊರಬೇಕಾಗಿದ್ದ ೭೦೦೦ ರೂ. ಗಳ ಸಾಲದಿಂದಲೇ ಗೊತ್ತಾಗುತ್ತಿತ್ತು. ಕೈಯಿಂದ ಹಣ ಕಳೆದುಕೊಂಡು ದೇಶಸೇವೆ ಮಾಡುವ ಅವ್ಯಾಪಾರೇಷು ವ್ಯಾಪಾರವಷ್ಟೇ ಅಲ್ಲದೆ ಇದರಲ್ಲಿ ಪತ್ರಿಕೆಯೊಳಗಿನ ಲೇಖನಗಳಿಂದ ಸರಕಾರದ ಅವಕೃಪೆಗೆ ಪಾತ್ರರಾಗಿ ಕಾರಾಗೃಹಾದಿ ಶಾಸನಗಳಿಗೂ ಒಳಗಾಗಬೇಕಾಗುವುದು; ಆದಕಾರಣ ಈ ಉದ್ಯೋಗವೇ ಬೇಡವೆಂದು ಅವರ ಆಪ್ತೇಷ್ಟರಲ್ಲಿ ಹಲಕೆಲವರು ಹೇಳದೆ ಇರಲಿಲ್ಲ. ಆದರೆ, ಶ್ರೀ ಟಿಳಕರು

ಇಂತಹ ಯಾವ ಕ್ಷುದ್ರ ಎಣಿಕೆಗಳ ಬಲಿಗೆ ಸಿಲುಕದೆ ಆತ್ಮವಿಶ್ವಾಸದಿಂದ ತಾವು ಕೈಕೊಂಡ ಕೆಲಸವನ್ನೇ ಮುಂದೆ ಸಾಗಿಸಿದರು. ಈ ಹೊತ್ತಿಗೆ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಮಹಾಸಭೆಯು ಸ್ಥಾಪಿತವಾಗಿ ಎರಡು ವರ್ಷಗಳಾಗಿದ್ದವು. ರಾಷ್ಟ್ರೀಯ ಸಭೆಯಲ್ಲಿ ಈಗಿನಂತಹ ರಾಷ್ಟ್ರೀಯ ಜ್ಯೋತಿಯೇ ಇದ್ದಿಲ್ಲ. ಹೆಸರು ಮಾತ್ರ ರಾಷ್ಟ್ರೀಯಸಭೆ. ಮಹಾಸಭೆಯಲ್ಲಿ ವರ್ಷಕ್ಕೆ ಒಂದು ಸಾರೆ ಒಂದೆರಡು ದಿನ ಯಾವದಾದರೂ ಒಂದು ದೊಡ್ಡ ಊರಲ್ಲಿ ಎಲ್ಲರೂ ಸೇರುವುದು. ಸರಕಾರದ ಹತ್ತರ 'ನಮಗೆ ಆ ಕೆಲಸ ಕೊಡಿರಿ, ಈ ಕೆಲಸ ಕೊಡಿರಿ' ಎಂದು ಮುಂತಾಗಿ ಬೇಡಿಕೊಳ್ಳುವ ದೈನ್ಯವೃತ್ತಿ ಠರಾವುಗಳನ್ನು ಮಾಡುವುದು; ಇದಿಷ್ಟೇ ಕೆಲಸ.

೧೮೫೭ರಲ್ಲಿ ಹಿಂದೀ ಜನರು ಸಶಸ್ತ್ರ ಪ್ರತೀಕಾರ ಮಾಡಿ ಕಳೆದುಕೊಂಡ ಸ್ವಾತಂತ್ರ್ಯವನ್ನು ಬ್ರಿಟಿಷರಿಂದ ಕಸಿದುಕೊಳ್ಳಲಿಕ್ಕೆ ಪ್ರಯತ್ನ ಮಾಡಿ ಹತವೀರ್ಯರಾಗಿದ್ದರು. ಜನರು ನಿಶ್ಶಸ್ತ್ರರಾದರು. ಆತ್ಮವಿಶ್ವಾಸವು ಅಳಿದುಹೋಯಿತು. ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯಲ್ಲಿರಲಿಲ್ಲ. ಆದುದರಿಂದ, ಪರಕೀಯರ ಆಳಿಕೆಯ ಅನ್ಯಾಯಗಳನ್ನು ಸುಮ್ಮನೆ ನುಂಗಿಕೊಂಡು ಇರುವದರ ಹೊರ್ತು ಬೇರಿನ್ನಾವ ದಾರಿಯೂ ಜನರಿಗೆ ತೋಚಲೊಲ್ಲದು. ರಾಷ್ಟ್ರೀಯ ಮಹಾಸಭೆಯು ಜನ್ಮತಾಳಿದ್ದರೂ ಅದರ ಉತ್ಪಾದಕರು ಬ್ರಿಟಿಶರ ನ್ಯಾಯಬುದ್ಧಿಯಲ್ಲಿ ಸಂಪೂರ್ಣ ನಿಷ್ಠೆಯನ್ನಿಟ್ಟವರಾಗಿದ್ದರು. ಆದಕಾರಣ ಅವರಿಗೆ ಸರಕಾರದ ಅನ್ಯಾಯಗಳನ್ನು ತೀಕ್ಷ್ಣಶಬ್ದಗಳಿಂದ ಹೇಳುವುದಕ್ಕೆ ಸಹ ಮನಸು ಇದ್ದಿಲ್ಲ. ಬ್ರಿಟಿಷರು ನ್ಯಾಯನಿಷ್ಠರಾದ ಆಡಳಿತಗಾರರು. ಅವರು ಹಿಂದುಸ್ತಾನವನ್ನು ಆಳುತ್ತಿರುವುದು ಹಿಂದೀ ಜನರ ಕಲ್ಯಾಣಕ್ಕಾಗಿ ಎಂದು ಆಗಿನ ರಾಷ್ಟ್ರೀಯ ಸಭೆಯ ಚಾಲಕರು ನಂಬಿಕೊಂಡಿದ್ದರು. ಬ್ರಿಟಿಷರಿಂದ ತಮಗಾಗುವ ಕಷ್ಟನಷ್ಟಗಳನ್ನು ತಿಳಿಸಿ ಹೇಳಿದೊಡನೆ ಅವುಗಳ ನಿವಾರಣೆಯಾಗುವುದು ಎಂಬ ವಿಶ್ವಾಸದಿಂದಲೇ ಆಗಿನ ರಾಷ್ಟ್ರೀಯ ಸಭೆಯ ಸೂತ್ರಧಾರರು ಇಂಗ್ಲೆಂಡಿಗೆ ಶಿಷ್ಟಮಂಡಳಗಳನ್ನು ಕಳಿಸಿದರು. ಬ್ರಿಟಿಷ ಜನಾಂಗಕ್ಕೆ ಹಿಂದೀ ಜನರ ಆಕಾಂಕ್ಷೆಗಳನ್ನು ತಿಳಿಸಿ ಹೇಳಿದರು. ವೈಸರಾಯರಿಗೆ ಭೆಟ್ಟಿಯಾದರು; ತಮ್ಮ ಬೇಡಿಕೆಗಳನ್ನು ಅರಿಕೆ ಮಾಡಿಕೊಂಡರು. ಆದರೇನು? ಈ ಬಗೆಯ ಯಾಚನೆಯಿಂದ ಏನೂ ಲಾಭವಾಗಲಿಲ್ಲ. ಸರಕಾರಿ ಅಧಿಕಾರಿಗಳ ಅನ್ಯಾಯವು ಮಾತ್ರ ಹೆಚ್ಚಾಯಿತು.

ಶ್ರೀ ಟಿಳಕರಿಗೆ ಬ್ರಿಟಿಷ ನ್ಯಾಯನಿಷ್ಠೆಯಲ್ಲಿ ಎಂದೂ ವಿಶ್ವಾಸವಿದ್ದಿಲ್ಲ. ಬ್ರಿಟಿಷರು ಹಿಂದುಸ್ತಾನದ ಹಿತಕ್ಕಾಗಿ ಹಿಂದುಸ್ತಾನವನ್ನು ಆಳುತ್ತಿರದೆ ಇಂಗ್ಲಂಡ ಲಾಭವಾಗಬೇಕೆಂದು, ಇಂಗ್ಲಂಡದ, ಸಂಪತ್ತು ಬೆಳೆಯಬೇಕೆಂದು, ಎಂದೇ ಶ್ರೀ ಟಿಳಕರು ವಿಚಾರಪೂರ್ವಕವಾಗಿ ಅರಿತುಕೊಂಡಿದ್ದರು. ಬ್ರಿಟಿಷರು ಹಿಂದುಸ್ತಾನಕ್ಕೆ ಬಂದುದು ದೈವೀ ಸಂಕಲ್ಪದ ಮೂಲಕ, ಅವರು ಹಿಂದುಸ್ತಾನದ ಮೇಲೆ ರಾಜ್ಯಭಾರವನ್ನು ನಡಿಸಿ ಅನಂತ ಉಪಕಾರವನ್ನು ನಡಿಸಿದ್ದಾರೆ ಎಂಬ ವಿಚಾರ ಪದ್ಧತಿಯೇ ಶ್ರೀ ಟಿಳಕರಿಗೆ ಮಾನ್ಯವಿದ್ದಿಲ್ಲ. ಬ್ರಟಿಷರು ಏಳ್ಗೆಯನ್ನು ಹೊಂದುತ್ತಲಿದ್ದಾರೆ. ಆಸೇತುಹಿಮಾಚಲ ಯಾವನೇ ಆಗಲಿ ಕೋಲಿನ ತುದಿಗೆ ಹೊನ್ನು ಕಟ್ಟಿಕೊಂಡು ನಿರ್ಭೀತಿಯಿಂದ ಯಾತ್ರೆ ಮಾಡಬಹುದು ಎಂದು ಬ್ರಿಟಿಷರ ಭಕ್ತಿಯಿಂದ ಪರವಶರಾಗಿ ಆಗಾಗ್ಗೆ ಉಪನ್ಯಾಸ ಲೇಖನಾದಿಗಳಲ್ಲಿ ಪ್ರತಿಪಾದಿಸುವ ಮರುಳರನ್ನು ಕಂಡು ಲೋಕಮಾನ್ಯರ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತಿತ್ತು. "ಕೋಲಿನ ತುದಿಗೆ ಬಂಗಾರವನ್ನು ಕಟ್ಟಿಕೊಂಡು ಹೋದರೆ ಒಡೆಯುವವರಿಲ್ಲ" ನಿಜ. ಆದರೆ, ಕಟ್ಟಿಕೊಂಡು ಹೊರಡಲು ಬಂಗಾರವು ಯಾರ ಹತ್ತಿರ ಉಳಿದಿದೆ? ಎಂದು ಲೋಕಮಾನ್ಯರು ತಟ್ಟನೆ ಕೇಳುತ್ತಿದ್ದರು. ಬ್ರಿಟಿಷರ ಆಳ್ವಿಕೆಯಿಂದ ಹಿಂದೂ ದೇಶವು ದಿನದಿನಕ್ಕೆ ಬಡವಾಗಿ ಹೊಟ್ಟೆಗೆ ಕೂಳಿಲ್ಲದ ಸ್ಥಿತಿಗೆ ಬಂದಿದೆ ಎಂದು ಲೋಕಮಾನ್ಯರು ನಿರ್ದಾಕ್ಷಿಣ್ಯದಿಂದ ಪ್ರತಿಪಾದಿಸುತ್ತಿದ್ದರು.

ಈ ಪ್ರಕಾರವಾಗಿ ಆಗಿನ ರಾಷ್ಟ್ರೀಯ ಸಭೆಯ ಸೂತ್ರಚಾಲಕರಲ್ಲಿಯೂ ಲೋ. ಟಿಳಕರಲ್ಲಿಯೂ ಮೂಲತಃ ಮತಭೇದವಿದ್ದುದರಿಂದ ಇವರಿಬ್ಬರು ಎಂದೂ ಕೂಡಿ ನಡೆಯಲಿಲ್ಲ. ಲೋಕಮಾನ್ಯರು ಕೇಸರಿ ಮತ್ತು ಮರಾಠಾ ಪತ್ರಿಕೆಗಳ ಮುಖಾಂತರವಾಗಿ ಜನರಿಗೆ ರಾಷ್ಟ್ರೀಯ ವೃತ್ತಿಯ ಉಪದೇಶವನ್ನು ನಡಿಸಿದರು. ನಿರ್ಭೀತರಾಗಿ ನ್ಯಾಯವಾದ ಹಕ್ಕುಗಳನ್ನು ಸಂಪಾದಿಸುವದಕ್ಕೆ ಪ್ರಯತ್ನಿಸಿರೆಂಬುದೇ ಲೋ. ಟಿಳಕರ ಉಪದೇಶದ ಮುಖ್ಯ

ವಿಷಯವಾಗಿತ್ತು. ಈ ಉಪದೇಶವನ್ನು ಜನರ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಮಾಡಿಸುವದಕ್ಕಾಗಿ ಕಾಲಕಾಲಕ್ಕೆ ಪ್ರಾಪ್ತವಾಗುವ ಯಾವ ಪ್ರಸಂಗವನ್ನೂ ಅವರು ವ್ಯರ್ಥವಾಗಿ ಹೋಗಗೊಡುತ್ತಿದ್ದಿಲ್ಲ. ಸರಕಾರಿ ಅಧಿಕಾರಿಗಳಿಂದಾಗುವ ತಪ್ಪುತಡೆಗಳನ್ನೂ, ಕಾಯಿದೆ ಕಾನೂನುಗಳಲ್ಲಿರುವ ನ್ಯೂನಾಧಿಕ್ಯಗಳನ್ನೂ ವಿವರಿಸಿ ಸ್ವಾತಂತ್ರ್ಯ ಕಳೆದುಕೊಂಡುದರಿಂದ ಹಿಂದೀ ಜನರು ಎಷ್ಟು ಅನ್ಯಾಯಗಳನ್ನು ಸಹಿಸಬೇಕಾಗಿದೆಯೆಂಬದನ್ನು ಜನರಿಗೆ ಸ್ಪಷ್ಟಸ್ಪಷ್ಟ ಮಾಡಿ ತೋರಿಸುತ್ತಿದ್ದರು. ಲೋ. ಟಿಳಕರ ಕೇಸರಿ ಪತ್ರಿಕೆಯೆಂದರೆ ಅದೊಂದು ಬ್ರಿಟಿಶರ ನೂರಾಎಂಟು ಅನ್ಯಾಯಗಳ ಒಂದು ಪಟ್ಟಿ. ಲೋಕಮಾನ್ಯರ ಯಾವದೇ ಕೇಸರಿಯನ್ನೋದಲಿ, "ಪರಕೀಯರ ಅನ್ಯಾಯದ ಘೋರವಾದ ಈ ಆಳಿಕೆಯು ಎಂದಿಗೆ ಅಳಿಯುವುದೊ ದೇವಾ" ಎಂಬ ಕಳವಳವಾದ ಕೂಗು ಹೃದಯದೊಳಗಿಂದ ಏಳದೆ ಇರುತ್ತಿದ್ದಿಲ್ಲ.

ಕೇಸರಿ ಪತ್ರಿಕೆಯ ಮುಖಾಂತರವಾಗಿ ಜನರಿಗೆ ತಮ್ಮ ಪಾರತಂತ್ರ್ಯದ ಬಗ್ಗೆ ಹೇಸಿಕೆಯುಂಟಾಗುವಂತೆ ಮಾಡಿ ಅಷ್ಟರಿಂದಲೆ ಲೋಕಮಾನ್ಯರು ತೃಪ್ತರಾಗಲಿಲ್ಲ. ತಮ್ಮ ಸ್ವಂತದ ನಡೆವಳಿಯಿಂದ ದೇಶೋನ್ನತಿಯಾಗ ಬೇಕಾಗಿದ್ದರೆ ಪ್ರತಿಯೊಬ್ಬ ನಾಗರಿಕನೂ ಹೇಗೆ ನಡಕೊಳ್ಳಬೇಕೆಂಬ ಪಾಠವನ್ನೆ ಬೋಧಿಸುತ್ತಿದ್ದರು. ಸ್ವಾಭಿಮಾನ, ಆತ್ಮವಿಶ್ವಾಸಗಳಿಲ್ಲದೆ ಯಾವ ದೇಶವೂ ಮುಂದುವರಿಯಲಾರದೆಂಬ ಮಾತನ್ನು ಅರಿತು ಅದಕ್ಕಾಗಿ ಜನರಿಗೆ 'ಸ್ವ' ಅಂದರೆ ತನ್ನತನದ ಉಪದೇಶ ಮಾಡಿದರು. ಪರಕೀಯರ ಗುಣಾವಗುಣಗಳನ್ನೆಲ್ಲ ಅನುಕರಿಸುವುದರಲ್ಲಿಯೇ ಉಬ್ಬಿಹೋದ ಮಂದಮತಿಗಳು ಲೋಕಮಾನ್ಯರ 'ತನ್ನ'ತನದ ಉಪದೇಶದ ವಿಪರೀತಾರ್ಥವನ್ನು ಮಾಡಿದರು. ಆದರೆ ಲೋ. ಟಿಳಕರು ಇಂತಹ ಯಾವ ಟೀಕೆಗಳಿಗೂ ಅಂಜಲಿಲ್ಲ. ಗಣೇಶೋತ್ಸವ, ಶಿವಾಜಿ ಪುಣ್ಯತಿಥಿ ಮೊದಲಾದ ರಾಷ್ಟ್ರೀಯ ಉತ್ಸವಗಳನ್ನು ಆರಂಭಿಸಿದರು. ಜನರಲ್ಲಿ ಸ್ವಧರ್ಮಸ್ವದೇಶಗಳ ಅಭಿಮಾನವು ತಲೆದೋರುವಂತೆ ಮಾಡಿದರು. ೧೮೯೬ನೆಯ ಇಸವಿಯ ಕಡುತರವಾದ ಬರಗಾಲದಲ್ಲಿ ಬಡಬಗ್ಗರಿಗೆ ಕಾಳುಕಡಿಗಳು ಸಿಕ್ಕುವಂತೆ ಬಹಳ ಪರಿಶ್ರಮ ಪಟ್ಟರು. ಅದೇ ವರ್ಷ ಮುಂಬೈ ಇಲಾಖೆಯಲ್ಲಿ ಪ್ಲೇಗಿನ ಹಾವಳಿ ಯಾಯಿತು. ಪ್ಲೇಗಿನ ಸಲುವಾಗಿ ಜನರು ಊರು ಬಿಟ್ಟು ಹೋಗಬೇಕೆಂದೂ ಪ್ಲೇಗ-ಮೈಲಿ ಚುಚ್ಚಿಸಿಕೊಳ್ಳಬೇಕೆಂದೂ ಆಗಿನ ಅಧಿಕಾರಿಗಳು ಅನೇಕ ಕ್ರೂರಅನ್ಯಾಯಗಳನ್ನು ಮಾಡಿದರು. ಲೋಕಮಾನ್ಯರು ಜನರಿಗೆ ತಿಳಿಹೇಳಿ ಊರು ಬಿಡಿಸುವದಕ್ಕೆ ಅಧಿಕಾರಿಗಳಿಗೆ ನೆರವಾದರು. ಆದರೂ ಅವರ ಅನ್ಯಾಯದ ರೀತಿಗಳನ್ನು ಖಂಡಿಸಲು ಹಿಂಜರಿಯಲಿಲ್ಲ.

ಪ್ಲೇಗಿನ ಅಧಿಕಾರಿಗಳ ಒಲುಮೆ ಒತ್ತಾಯಗಳಿಂದ ತಲೆ ತಿರುಗಿದ ಒಬ್ಬನು, ಇಬ್ಬರು ಯುರೋಪೀಯ ಮುಖ್ಯಾಧಿಕಾರಿಗಳಿಗೆ ಗುಂಡು ಹಾಕಿ ಸೇಡು ತೀರಿಸಿಕೊಂಡನು. ಬ್ರಿಟಿಶ ರಾಜ್ಯವು ಆರಂಭವಾದ ಬಳಿಕ ಅಧಿಕಾರಿಗಳ ಅನ್ಯಾಯಕ್ಕಾಗಿ ಹೀಗೆ ಸೇಡು ತೀರಿಸಿಕೊಂಡ ಉದಾಹರಣವು ಇದೆ ಮೊದಲು. ಈ ಕೊಲೆಯು ಲೋ. ಟಿಳಕರಿಂದಲೆ ಆಯ್ತೆಂದು ಅಧಿಕಾರಿಗಳು ಕೂಗು ಎಬ್ಬಿಸಿದರು. ಆದರೆ, ಅದು ಸಿದ್ಧವಾಗಲಿಲ್ಲ. ಶ್ರೀ ಟಿಳಕರು ಕೇಸರಿ ಮುಖಾಂತರವಾಗಿ ಜನರಲ್ಲಿ ಹಬ್ಬಿಸಿದ ಅಸಂತೋಷವೇ ಕೊಲೆಗೆ ಪ್ರವರ್ತಕವಾಗಿರಲಿಕ್ಕೆ ಬೇಕೆಂದೂ ತರ್ಕಗಳು ಆರಂಭವಾದವು. ಕೇಸರಿಯೊಳಗಿನ ಲೇಖನಗಳ ಆಧಾರದ ಮೇಲೆ ರಾಜದ್ರೋಹದ ಆರೋಪವಿಡಲ್ಪಟ್ಟು ಹದಿನೆಂಟು ತಿಂಗಳ ಶಿಕ್ಷೆಯೂ ಆಯ್ತು. ಆದರೆ, ಶಿಕ್ಷೆಯಿಂದ ಶ್ರೀ ಟಿಳಕರು ಲೋಕಮಾನ್ಯ ಟಿಳಕರಾದರು. ರಾಷ್ಟ್ರೀಯ ಪಕ್ಷದ ಆದಿ ಗುರುಗಳಾದರು. ಏಕೆಂದರೆ ಅಖಿಲ ಹಿಂದುಸ್ತಾನದಲ್ಲಿ ರಾಜದ್ರೋಹದ ಆರೋಪದಿಂದ ಕಾರಾಗೃಹ ವಾಸವನ್ನು ಅನುಭವಿಸಬೇಕಾದ ಮೊಟ್ಟಮೊದಲನೆಯ ಮಾನವು ಲೋ. ಟಿಳಕರ ಗಿಲ್ಲದೆ ಅನ್ಯರಿಗಿಲ್ಲ.

ಲೋ. ಟಿಳಕರು ಕಾರಾಗೃಹದಿಂದ ಮರಳಿ ಬಂದ ಬಳಿಕ "ಪುನಶ್ಚ ಹರಿಃ ಓಂ" ಎಂದು ಮತ್ತೆ ಲೋಕಸೇವೆಗೆ ಸೊಂಟ ಕಟ್ಟಿದರು. ಈ ಅವಧಿಯಲ್ಲಿ ಲೋಕಮಾನ್ಯರು ಮಿತ್ರಕಾರ್ಯವೆಂದು ವಹಿಸಿದ ಶ್ರೀ ಬಾಬಾ ಮಹಾರಾಜ ಎಂಬ ಒಬ್ಬ ಶ್ರೀಮಂತ ಗೃಹಸ್ಥನ ಆಸ್ತಿಯ ನ್ಯಾಯದಲ್ಲಿ ಅವರ ಧನ-ಕಾಲ-ಶಕ್ತಿಗಳು ಬಹಳ ಹಾಳಾದವು.

ಸರಕಾರಿ ಅಧಿಕಾರಿಗಳೂ ಇದರಲ್ಲಿ ಲೋ. ಟಿಳಕರು ಇನ್ನಿಷ್ಟು ತೊಂದರೆಗಳಿಗೆ ಒಳಗಾಗುವಂತೆ ಪ್ರಯತ್ನಮಾಡಿ ನೋಡಿದರು. ಆದರೆ, ಅವಾವುಗಳಿಗೂ ಯಶಸ್ಸು ಸಿಕ್ಕಲಿಲ್ಲ. ಲೋಕಮಾನ್ಯರಿಗೆ ಈ ಮಿತ್ರಕಾರ್ಯದಲ್ಲಿ ಕಲ್ಪನಾತೀತ ಸಂಕಷ್ಟಗಳನ್ನು ಅನುಭವಿಸಬೇಕಾದರೂ ಅವರು ತಾವು ಕೈಕೊಂಡ ಸಾರ್ವಜನಿಕ ಕೆಲಸಗಳಾವುವನ್ನೂ ದುರ್ಲಕ್ಷಿಸಲಿಲ್ಲ. ಲೋ. ಟಿಳಕರಿಗೆ ಆಗಿನ ಕಾಲದಲ್ಲಿ ಇದ್ದ ವಿಪರೀತ ಪರಿಸ್ಥಿತಿ ಕಷ್ಟನಷ್ಟಗಳನ್ನು ನೆನೆಸಿದರೆ ಎದೆ ನಡುಗುತ್ತದೆ. ಇಂತಹ ತೊಂದರೆಗಳಿಂದ ನಿರಾಶವಾಗದೆ ಇಮ್ಮಡಿ ಉತ್ಸಾಹ ಧೈರ್ಯಗಳಿಂದ ಅವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುತ್ತಿದ್ದ ಅವರ ಆಂತರೀಕ ಸ್ಫೂರ್ತಿಯು ಅಗಾಧವಾದುದು ಅನ್ಯಾದೃಶವಾದದು ಎಂಬುದಕ್ಕೆ ಸಂದೇಹವಿಲ್ಲ.

ಆಗ ಸರಕಾರದ ಅವಕೃಪೆಗೆ ಪಾತ್ರರಾದ ರಾಷ್ಟ್ರಭಕ್ತರಿಗೆ ಈಗಿನಂತೆ ಜನಸಾಮಾನ್ಯರ ಬೆಂಬಲವಿದ್ದಿಲ್ಲ. ಲೋಕಮಾನ್ಯರ ಕಾರ್ಯದ ಬಗ್ಗೆ ಜನರಲ್ಲಿ ತುಂಬಾ ಆದರ ಪ್ರೀತಿಗಳಿದ್ದರೂ ಅದು ಕೇವಲ ಮನಸಿನೊಳಗೆ. ಲೋ. ಟಿಳಕರನ್ನು ದೇವರನ್ನು ಕಂಡಂತೆ ದೂರದಿಂದಲೆ ನಮಸ್ಕರಿಸುವವರಲ್ಲದೆ ಹತ್ತಿರ ಹೋಗಿ ಅವರ ಕಾರ್ಯದಲ್ಲಿ ಪ್ರತ್ಯಕ್ಷ ಸಹಾಯ ಮಾಡುವವರು ತೀರ ಕಡಿಮೆ. ಅರಸಾಳುಗಳಂತೂ ಲೋಕಮಾನ್ಯರನ್ನು ಎಷ್ಟು ರೀತಿಯಿಂದ ಪೀಡಿಸುವುದು ಸಾಧ್ಯವಿತ್ತೊ ಅಷ್ಟು ಬಗೆಗಳಿಂದ ಕಾಡಿಸಲಿಕ್ಕೆ ಹೊಂಚು ಹಾಕಿಕೊಂಡೆ ಕುಳಿತಿದ್ದರು. ರಾಷ್ಟ್ರೀಯ ಮಹಾಸಭೆಯಲ್ಲಿ ಲೋ. ಟಿಳಕರಿಗೆ ಎಡೆ ದೊರೆಯಬಾರದೆಂದು ಅದರ ಸೂತ್ರದಾರರು ಸತತವಾಗಿ ಪ್ರಯತ್ನಗಳನ್ನು ನಡೆಸಿದ್ದರು. ಲೋಕಹಿತದ ಸಲುವಾಗಿ ಹಗಲಿರಳೂ ಸವೆದು ಸರಕಾರದ ಅವಕೃಪೆಯನ್ನೂ ಲೆಕ್ಕಿಸದೆ ಕಾರಾಗಾರದ ಯಾತನೆಗಳನ್ನೂ ಅನುಭವಿಸಿ ಹಿಮಾಲಯದ ಪರ್ವತದಂತೆ ಅವಿಚಲಿತ ಶ್ರದ್ಧೆಯಿಂದ ಮತ್ತೆ ಲೋಕಸೇವೆಯನ್ನೆ ನಡೆಸಿದ ಲೋ.ಟಿಳಕರಿಗೆ ರಾಷ್ಟ್ರೀಯ ಮಹಾಸಭೆಗಳಲ್ಲಿ "ಮುಂದಕ್ಕೆ ಬನ್ನಿರಿ, ಇಲ್ಲಿ ಕುಳಿತುಕೊಳ್ಳಿರಿ" ಎಂದು ಪ್ರೀತಿ ವಿಶ್ವಾಸಗಳಿಂದ ಕರೆಯುವವರು ಸಹ ಯಾರೂ ಇದ್ದಿಲ್ಲ. ಸ್ವಾಮಿ ಶ್ರದ್ಧಾನಂದರು ತಾವು ಕಂಡ ಇಂತಹ ಒಂದು ಪ್ರಸಂಗವನ್ನು ವಿವರಿಸಿದ್ದಾರೆ. ಲೋಕಮಾನ್ಯರು ೧೯೮೯ರಲ್ಲಿ ಲಖನೌ ಕಾಂಗ್ರೆಸ್ಸಿಗೆ ಹೋದಾಗ ಪ್ರೇಕ್ಷಕರೂ ಪ್ರತಿನಿಧಿಗಳೂ ಅವರನ್ನು ಅತ್ಯಂತ ಆದರ ಪ್ರೀತಿಗಳಿಂದ ಜಯಜಯಕಾರದೊಡನೆ ಸತ್ಕರಿಸಿದರು; ಅಖಿಲ ಭಾರತವರ್ಷದ ಪ್ರಮುಖರು ಕುಳಿತುಕೊಂಡ ವ್ಯಾಸಪೀಠವನ್ನಲಂಕರಿಸಲು ಜನ ಸಮುದಾಯವು ಒತ್ತಾಯಪಡಿಸಲಾರಂಭಿಸಿತು. ಆದರೆ, ಆಗಿನ ರಾಷ್ಟ್ರೀಯ ಸಭೆಯ ಸೂತ್ರ ಚಾಲಕರಾದ ಮಂದಪಕ್ಷದ ಮುಂದಾಳುಗಳು ಲೋ. ಟಿಳಕರ ನೆರಳಿಗೂ ಹೆದರಿ ಅವರನ್ನು ಹತ್ತರಕ್ಕೆ ಸಹ ಕರೆಯಲಿಲ್ಲ. ಲೋ. ಟಿಳಕರು ಜನರ ಉತ್ಸಾಹ ಅಥವಾ ವಿರೋಧಿಗಳ ಅನಾದರಗಳೆರಡನ್ನೂ ಅಷ್ಟೇ ಬಗೆದು ತಮ್ಮ ಭಾಗದ ಪ್ರತಿನಿಧಿಗಳ ವಿಭಾಗದಲ್ಲಿ ಒಬ್ಬ ಸಾಮಾನ್ಯ ಮನುಷ್ಯನಂತೆ ಶಾಂತವಾಗಿ ಹೋಗಿ ಕುಳಿತುಕೊಂಡರು. ಲೋ. ಟಿಳಕರಿಗೆ ಇಂತಹ ಎಲ್ಲ ಪ್ರಸಂಗಗಳಲ್ಲಿಯೂ ಭಗವದ್ಗೀತೆಯ ಉಪದೇಶವೆ ಮಾರ್ಗದರ್ಶಕವಾಗಿತ್ತು. ಅನಾಸಕ್ತಿಯಿಂದ, ಫಲಾಶಾವಿರಹತರಾಗಿ ಕರ್ತವ್ಯವನ್ನು ಮಾಡುತ್ತಿರಬೇಕೆಂಬ ಯೋಗಸಾಧನವನ್ನೇ ನಡೆಸಿದ್ದರು.

ವರ್ಷದಲ್ಲಿ ಒಂದು ಸಾರೆ ಸಭೆ ಮಾಡಿ ಕೆಲವು ನಿರ್ಣಯಗಳನ್ನು ಮಾಡುವುದರಿಂದ ಕೆಲಸವು ಕೈಗೂಡಲಾರದು; ರಾಷ್ಟ್ರೀಯ ಸಭೆಯ ಕೆಲಸವು ಇಡಿ ವರ್ಷದಲ್ಲೆಲ್ಲ ಸತತವಾಗಿ ಸಾಗಬೇಕೆಂದು ಲೋಕಮಾನ್ಯರ ಅಪೇಕ್ಷೆಯಿತ್ತು. ಲೋಕಮತದ ಬೆಂಬಲವಿಲ್ಲದೆ ಸರಕಾರವು ನಮ್ಮ ಯಾವ ಬೇಡಿಕೆಗಳನ್ನೂ ಮನ್ನಿಸಲಾರದು. ಆದಕಾರಣ ಜನಜಾಗೃತಿಯನ್ನು ಮಾಡುವುದು ಆವಶ್ಯಕವೆಂದು ಪ್ರತಿಪಾದಿಸುತ್ತಿದ್ದರು. ಮತ್ತು ಅದರ ಸಲುವಾಗಿಯೇ ರಾಷ್ಟ್ರೀಯ ಉತ್ಸವ, ಸ್ವದೇಶಿ ಚಳವಳಿ ಮೊದಲಾದ ಆಂದೋಲನಗಳನ್ನು ಆರಂಭಿಸಿದ್ದರು. ಆದರೆ, ಇದಾವುದೂ ಮಂದ ಪಕ್ಷಿಗಳ ಮನಸ್ಸಿಗೆ ಬರಲಿಲ್ಲ. ಸರಕಾರದ ಸಂಗಡ ನಯವಿನಯದಿಂದ ನಡಕೊಂಡು ಅವರಿಗೆ ನಮ್ಮ ದುಃಖಗಳನ್ನು ತಿಳಿಸಿದರೆ ಅವರು ಅವುಗಳನ್ನು ನಿವಾರಿಸುವರೆಂದು ಹೇಳುತ್ತಿದ್ದರು. ಆದರೆ, ಆ ಮರುಳರ ದುರ್ದೈವದಿಂದ ಲಾರ್ಡ ಕರ್ಝನರ ಆಳಿಕೆಯಲ್ಲಿ ಬಂಗಾಲದ ಎರಡು ವಿಭಾಗಗಳು ಮಾಡಲ್ಪಟ್ಟವು. ಪ್ರಜಾಕ್ಷೋಭಕ್ಕೆ ಆರಂಭವಾಯಿತು. ರಾಷ್ಟ್ರೀಯ ಸಭೆಯಲ್ಲಿ ಮಂದಪಕ್ಷವು ಹಿಂದೆ ಬಿದ್ದು ಲೋ.ಟಿಳಕರ ತರುಣಪಕ್ಷವು ಪ್ರಬಲವಾಗಲಾರಂಭಿಸಿತು. ೧೯೦೫ರಲ್ಲಿ ಕಾಶಿಯಲ್ಲಾದ ರಾಷ್ಟ್ರೀಯ ಸಭೆಯೊಳಗೆ ಈ ಮಾತು ಸ್ಪಷ್ಟವಾಗಿ

ನಿದರ್ಶನಕ್ಕೆ ಬಂದಿತು. ಆ ವರ್ಷ ಇಂಗ್ಲೆಂಡಿನಿಂದ ಹಿಂದುಸ್ತಾನವನ್ನು ಸಂದರ್ಶಿಸಲಿಕ್ಕೆ ಬಂದ ಯುವರಾಜರ ಸ್ವಾಗತವನ್ನು ರಾಷ್ಟ್ರೀಯ ಸಭೆಯವರು ಮಾಡಬಾರದೆಂದು ಸೂಚನೆಯನ್ನು ಲೋ. ಟಿಳಕರೂ, ಲಜಪತರಾಯರೂ ತರತಕ್ಕವರಿದ್ದರು. ಆದರೆ, ಅಧ್ಯಕ್ಷರಾದ ನಾ. ಗೋಖಲೆಯವರು ಶ್ರೀ ಲಾಲಾಜಿಯವರನ್ನು ಒಡೆದುಕೊಂಡದ್ದರಿಂದ ಈ ಮಾತು ಅಷ್ಟು ಸಾಧ್ಯವಾಗಲಿಲ್ಲ. ಆದರೂ ಬಂಗಾಲಿಗಳು ಆಚರಣದಲ್ಲಿ ತಂದ ಬ್ರಿಟಿಷ್ ಸರಕಿನ ಬಹಿಷ್ಕಾರದ ಚಳವಳಿಗೆ ರಾಷ್ಟ್ರೀಯ ಸಭೆಯಿಂದ ಮಾನ್ಯತೆ ದೊರೆತಿತು. ೧೯೦೬ ಇಸವಿಯ ಕಲಕತ್ತಾ ಕಾಂಗ್ರೆಸ್ಸಿನಲ್ಲಂತೂ ಟಿಳಕರ ತರುಣ ಪಕ್ಷದ ಸಂಪೂರ್ಣ ವಿಜಯವಾಯ್ತು. ಸ್ವರಾಜ್ಯವೆ ಹಿಂದುಸ್ತಾನದ ಧ್ಯೇಯವೆಂದು ನಿಶ್ಚಿತವಾಯಿತು. ಸ್ವರಾಜ್ಯಸಾಧನೆಗೆ ರಾಷ್ಟ್ರೀಯ ಶಿಕ್ಷಣ, ಸ್ವದೇಶಿ ಮತ್ತು ಬಹಿಷ್ಕಾರಗಳೆ ಸಾಧನಗಳೆಂದೂ ಗೊತ್ತಾಯಿತು.

ತರುಣ ಪಕ್ಷದ ವಿಜಯವನ್ನು ಕಂಡು ಮಂದಪಕ್ಷದವರು ಗಾಬರಿಗೊಂಡರು. ಸ್ವದೇಶಿ ಮತ್ತು ಬಹಿಷ್ಕಾರದ ಪ್ರಸಾರವು ದೇಶದಲ್ಲೆಲ್ಲ ನಡೆಯಿತು. ಅರಸಾಳುಗಳು ವಿವೇಕವನ್ನು ಬದಿಗಿರಿಸಿ ಅನ್ಯಾಯಗಳಿಗೆ ಆರಂಭಿಸಿದರು. 'ವಂದೇಮಾತರಂ' ಪದವನ್ನು ಹೇಳುವುದೂ ಅಪರಾಧವೆಂದು ಅಪ್ಪಣೆಗಳು ಹೊರಟವು! ಸರಕಾರದ ಒಲವು ನೋಡಿಕೊಂಡು ಚಳವಳಿ ಮಾಡಬೇಕೆಂಬ ಮಂದಪಕ್ಷೀಯರು ಮುಂದಿನ ವರ್ಷದ ಅಂದರೆ ೧೯೦೭ನೆಯ ಇಸವಿಯ ಕಾಂಗ್ರೆಸ್ಸಿನಲ್ಲಿ ಕಲಕತ್ತಾ ಕಾಂಗ್ರೆಸ್ಸಿನಲ್ಲಿ ಟಿಳಕ ಪಕ್ಷದವರು ಪಾಸ್ ಮಾಡಿಕೊಂಡ ಸ್ವಾವಲಂಬನದ ಠರಾವುಗಳನ್ನು ತಿರುಗಿ ತಕ್ಕೊಳ್ಳಬೇಕೆಂದು ಕುಯುಕ್ತಿಗಳಿಗೆ ಆರಂಭಿಸಿದರು.

೧೯೦೭ರಲ್ಲಿ ರಾಷ್ಟ್ರೀಯ ಸಭೆಯು ನಾಗಪುರಕ್ಕೆ ಸೇರಬೇಕೆಂದು ಗೊತ್ತಾಗಿತ್ತು. ಆದರೆ ಮಧ್ಯಪ್ರಾಂತದಲ್ಲಿ ಲೋ. ಟಿಳಕರ ಪಕ್ಷದವರೇ ಹೆಚ್ಚಾಗಿರುವುದರಿಂದ ಸರ್ ಫಿರೋಜಶಹಾ ಮೇಥಾ ಇವರು ತಮ್ಮ ಅನುಯಾಯಿಗಳ ಪ್ರಾಬಲ್ಯವಿರುವ ಸುರತನಗರದಲ್ಲಿ ಮಹಾಸಭೆಯನ್ನು ಸೇರಿಸಿದರು. ಅಲ್ಲಿ ಜಗಳಗಳಾದುವು. ತರುಣ ಪಕ್ಷದವರು ಬಾರದಂತೆ ಹೊಸ ನಿರ್ಬಂಧಗಳನ್ನು ಹಾಕಿ ಮಂದಪಕ್ಷದವರು ಸರಕಾರಕ್ಕೆ ಹೆದರಿ ಸ್ವಾಭಿಮಾನದ ಮಾರ್ಗವನ್ನು ತ್ಯಜಿಸಿದರು; ರಾಷ್ಟ್ರೀಯವೃತ್ತಿಯ ತರುಣರನ್ನು ತಮ್ಮಿಂದ ದೂರ ನಿಲ್ಲಿಸಿ ಸರಕಾರದ ಹೊಡೆತಕ್ಕೆ ಈಡು ಮಾಡಿದರು. ತಮ್ಮ ರಾಜನಿಷ್ಠೆಯ ಪ್ರದರ್ಶನ ಮಾಡಿದರು. ಇತ್ತ ಎಷ್ಟೋ ತರುಣರಿಗೆ ಲೋ. ಟಿಳಕರ ಈ ಸ್ವಾವಲಂಬನದ ಮಾರ್ಗವು ಶೀಘ್ರಫಲದಾಯಿಯಾಗಿ ತೋರಲಿಲ್ಲ. ಅಧಿಕಾರಿಗಳ ಅನ್ಯಾಯಗಳೂ ಹೆಚ್ಚಿದ್ದರಿಂದ ಇನ್ನಿಷ್ಟು ಅವರ ತಲೆ ತಿರುಗಿತು. ಅಧಿಕಾರಿಗಳ ಕೊಲೆಗೆ ಮೊದಲಾಯಿತು. ಲೋಕಮಾನ್ಯರಿಗೆ ಈ ಮಾರ್ಗವು ದೇಶದ ಸದ್ಯಸ್ಥಿತಿಯಲ್ಲಿ ಏನೂ ಲಾಭದಾಯಕವೆಂದು ತೋರಲಿಲ್ಲ. ಅದುದರಿಂದ, ತಾವು ಆ ದಾರಿಯನ್ನು ಹಿಡಿಯದಿದ್ದರೂ ಸರಕಾರಕ್ಕೆ ಮಾತ್ರ 'ಈಗ ಹಾರುವ ಬಾಂಬುಗಳಿಂದ ಎಚ್ಚರಗೊಳ್ಳಿರಿ' 'ಬಾಂಬುಗಳ ರಹಸ್ಯವೇನೆಂಬುದನ್ನು ತಿಳಿದುಕೊಂಡು ಈ ಅಸಂತೋಷದ ಬುಡಕ್ಕಿರುವ ಆ ಮೂಲಕಾರಣವನ್ನೇ ತೆಗೆದು ಹಾಕಿಬಿಡಿರಿ' ಎಂದು ಸ್ಪಷ್ಟವಾಗಿ ಎಚ್ಚರ ಕೊಡುತ್ತಿದ್ದರು. ಲೋ. ಟಿಳಕರು ಹೀಗೆ ಬರೆಯುವುದು ಬಾಂಬುಗಳ ಅತ್ಯಾಚಾರಕ್ಕೆ ಪ್ರೋತ್ಸಾಹಕವಾಗಿದೆಯೆಂದು ಸರಕಾರದವರು ಆರು ವರ್ಷಗಳ ಕಠೋರ ಶಿಕ್ಷೆಯನ್ನು ಅವರಿಗೆ ವಿಧಿಸಿದರು.

ಲೋಕಮಾನ್ಯರ ಹಿಂದೆ ದೇಶದಲ್ಲೆಲ್ಲ ಮತ್ತೆ ಸ್ಮಶಾನಶಾಂತಿಯು ನೆಲೆಗೊಂಡಿತು. ಜನರು ದಿಙ್ಮೂಢರಾಗಿ ಲೋ. ಟಿಳಕರು ಎಂದು ಮರಳಿ ಬರುವರೊ ಎಂದು ಕಾಲನಿರೀಕ್ಷಣೆ ಮಾಡಹತ್ತಿದರು. ರಾಜಕೀಯ ಕ್ಷೇತ್ರದಲ್ಲಿ ಸೇರುವುದಿಲ್ಲೆಂದು ವಚನ ಕೊಟ್ಟರೆ ಲೋಕಮಾನ್ಯರನ್ನು ಬಂಧಮುಕ್ತ ಮಾಡಲಿಕ್ಕೆ ಸರಕಾರವು ಸಿದ್ಧವಿತ್ತು. ಆದರೆ ಲೋಕಮಾನ್ಯರು ಮಾತ್ರ ಆ ಮಾತಿಗೆ ಸರ್ವಥಾ ಒಪ್ಪಲಿಲ್ಲ. ಸೆರೆಮನೆಯಲ್ಲಿ ಗೀತೆಯ ರಹಸ್ಯವನ್ನು ಬರೆಯುವುದನ್ನು ಕೈಕೊಂಡರು; ಜರ್ಮನ್, ಫ್ರೆಂಚ, ಮತ್ತು ಪಾಲಿ ಭಾಷೆಗಳನ್ನು ಹೊಸದಾಗಿ ಕಲಿತರು. ಗೀತಾರಹಸ್ಯದ ಮೂಲಕ ಮನುಷ್ಯನು ಬ್ರಾಹ್ಮೀಸ್ಥಿತಿಯಲ್ಲಿದ್ದು ಲೋಕೋದ್ಧಾರಕ್ಕಾಗಿ ಹೇಗೆ ಕರ್ಮವನ್ನಾಚರಿಸಬೇಕೆಂಬುದನ್ನು ಹೇಳುವುದೇ ಅವರ ಮುಖ್ಯೋದ್ದೇಶವಾಗಿತ್ತು. ಗೀತೆಯ ಉಪದೇಶವು ಮನಸ್ಸಿನಲ್ಲಿ ಬಿಂಬಿಸಿದರೆ ಹಿಂದೀ ಜನರ ಉದ್ಧಾರವಾಗಲಿಕ್ಕೆ ಅವಕಾಶವೇ ಇಲ್ಲವೆಂದು ಲೋಕಮಾನ್ಯರ ನಂಬುಗೆಯಾಗಿತ್ತು. ಆದಕಾರಣ ಅವರು ತಮ್ಮ ಕಾರಾಗೃಹ

ವಾಸದಲ್ಲಿಯೂ ಲೋಕೋದ್ಧಾರ ಚಿಂತೆಯಿಂದಲೇ ವ್ಯಾಪ್ತರಾಗಿ ಅಧ್ಯಯನ, ಗ್ರಂಥಲೇಖನದ ಕಾರ್ಯವನ್ನು ಬಿಟ್ಟೂಬಿಡದೆ ನಡೆಸಿದ್ದರು.

೧೯೧೪ರಲ್ಲಿ ಶಿಕ್ಷೆಯ ಸಂಪೂರ್ಣ ಅವಧಿಯು ಮುಗಿದ ಬಳಿಕ ಬಿಡುಗಡೆಯಾಯಿತು. ಬಿಡುಗಡೆಯಾದ ಬಳಿಕ ದೇಶಸ್ಥಿತಿಯ ಸಮಗ್ರ ನಿರೀಕ್ಷಣೆ ಮಾಡಿ ಹೋಮ್‌ರೂಲಿನ ಚಳವಳಿಗೆ ಕೈಯಿಕ್ಕಿದರು. ಸ್ವರಾಜ್ಯದ ವಿಚಾರವನ್ನು ಜನರಿಗೆ ತಿಳಿಸಿ ಕೊಡುವುದಕ್ಕಾಗಿ ಕೊಟ್ಟ ಒಂದು ಉಪನ್ಯಾಸದಲ್ಲಿ ರಾಜದ್ರೋಹವಿರುವುದೆಂದು ಪೋಲೀಸರು ಖಟ್ಲೆ ಹಾಕಿದರು. ಹತ್ತು ಸಾವಿರ ರೂ.ಗಳ ಸ್ವಂತ ಜಾಮೀನು ಮತ್ತು ನಾಲ್ವತ್ತು ಸಾವಿರ ರೂ.ಗಳ ಇಬ್ಬರು ಜಾಮೀನುದಾರರನ್ನು ಕೊಡಬೇಕೆಂದು ಕೇಳಿದರು. ಮ್ಯಾಜಿಸ್ಟ್ರೇಟರು ಇದರಲ್ಲಿ ಲೋ. ಟಿಳಕರಿಗೆ ಅಪರಾಧಿಯೆಂದೂ ನಿರ್ಣಯಿಸಿದ್ದರೂ ಹೈಕೋರ್ಟಿನಲ್ಲಿ ಲೋಕಮಾನ್ಯ ಟಿಳಕರು ನಿರ್ದೋಷಿಯೆಂದು ತೀರ್ಪು ಸಿಕ್ಕಿತು. ಸ್ವರಾಜ್ಯ ಸಂಘಗಳು ದೇಶದಲ್ಲೆಲ್ಲ ಸ್ಥಾಪಿತವಾಗಿ ಜನಜಾಗ್ರತಿಯ ಕಾರ್ಯಕ್ಕೆ ಆರಂಭವಾಯಿತು. ರಾಷ್ಟ್ರೀಯ ಪಕ್ಷದವರು ಕಾಂಗ್ರೆಸ್ಸಿನಲ್ಲಿಯೂ ಸೇರಿ ಅದನ್ನು ಕೈವಶ ಮಾಡಿಕೊಂಡರು. ಮಹಾಯುದ್ಧದಿಂದ ಬದಲಾದ ಪರಿಸ್ಥಿತಿಯ ಲಾಭ ಪಡೆದು ಬೇಗನೆ ಸ್ವರಾಜ್ಯದ ಹಕ್ಕುಗಳನ್ನು ದೊರಕಿಸಿಕೊಳ್ಳಬೇಕೆಂದು ಚಳವಳಿಗೆ ಬಹಳ ಜೋರು ಬಂದಿತ್ತು. ೧೯೧೬ನೆಯ ಇಸವಿಯಲ್ಲಿ ಲಖನೌ ಕಾಂಗ್ರೆಸ್ಸಿನೊಳಗೆ ಹಿಂದೂ-ಮುಸಲ್ಮಾನರ ಒಕ್ಕಟ್ಟು ಲೋಕಮಾನ್ಯರ ಜಾಣತನದಿಂದಲೇ ಆಯಿತು. ಇವೆಲ್ಲ ಪ್ರಯತ್ನಗಳ ಫಲವೆ ಮಾಂಟೆಗ್ಯು ಚೆಲ್ಮ್ಸ್‌ಫರ್ಡ ಸುಧಾರಣೆಗಳು. ೧೯೨೦ನೆಯ ಸುಮಾರಕ್ಕೆ ಹಿಂದುಸ್ತಾನದಲ್ಲಿ ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ ಸುಧಾರಣಗಳು ಆರಂಭವಾದವು. ಇವುಗಳ ಆರಂಭವೆ ಲೋಕಮಾನ್ಯರ ಅವತಾರ ಸಮಾಪ್ತಿ ಕಾಲವೆಂದು ಹೇಳಬಹುದು.

ಜಲಿಯನವಾಲಾಬಾಗ್ ಮತ್ತು ಖಿಲಾಫತ್ ಪ್ರಕರಣಗಳಿಂದ ಉಂಟಾದ ವಿಶೇಷ ಪರಿಸ್ಥಿತಿಯ ಸಲುವಾಗಿ ಅಸಹಕಾರವನ್ನು ಆರಂಭಿಸಬೇಕೆಂದು ಮಹಾತ್ಮಾಜಿಯವರೂ ಅಲ್ಲೀ ಬಂಧುಗಳೂ ಪ್ರಯತ್ನಗಳನ್ನು ನಡಿಸಿದ್ದರು. ಇದಕ್ಕಾಗಿ ಲೋಕಮಾನ್ಯರ ಸಲಹೆ ಕೇಳಿದಾಗ ನೀವು ಮಾಡುವ ಯಾವದೇ ಚಳವಳಿಯು ನನ್ನಕ್ಕಿಂತ ಉಗ್ರವಾಗಿರಲಾರದು. ಆದಕಾರಣ ನಾನು ನಿಮಗೆ ಯಾವಾಗಲೂ ಸಹಾಯಕನಿದ್ದೇನೆಂದು ತಿಳಿಯಿರಿ ಎಂಬುದಾಗಿ ಹೇಳುವ ಉಲ್ಲೇಖಗಳಿವೆ. ನೀವೆಲ್ಲ ಒಮ್ಮನಸ್ಸಿನಿಂದ ನಿಶ್ಚಯಿಸಿದುದಕ್ಕೆ ನನ್ನ ಸಮ್ಮತಿಯಿದೆ. ವ್ಯಾವಹಾರಿಕ ಭಾಗದ ಒಂದೆರಡು ಮಾತುಗಳಲ್ಲಿ ಸ್ವಲ್ಪ ಮತಭೇದವಾದರೂ ತತ್ವತಃ ನಾನು ನಿಮ್ಮೊಡನೆಯಿದ್ದೇನೆಂದು ಅವರು ಅಲ್ಲೀಬಂಧುಗಳು ಡಾ. ಅನಸಾರಿ ಪ್ರಭೃತಿಗಳಿಗೆ ಆಶ್ವಾಸನವನ್ನಿತ್ತಿದ್ದರು. ಆದರೆ, ಲೋಕಮಾನ್ಯರಿಗೆ ಆಕಸ್ಮಿಕವಾಗಿ ಜ್ವರ ಬಂದು ೧೯೨೦ ಆಗಸ್ಟ ೧ನೆಯ ತಾರೀಖಿಗೆ ತೀರಿಕೊಂಡರು. ಲೋಕಮಾನ್ಯರು ಅದ್ವಿತೀಯ ಮಹಾಪುರುಷರು. ಅವರಲ್ಲಿ ಧೈರ್ಯ, ದೂರದೃಷ್ಟಿ, ಅವಿಚಲ ಶ್ರದ್ಧೆಗಳೊಡನೆ ಅಗಾಧವಾದ ಬುದ್ಧಿಸಾಮರ್ಥ್ಯವೂ ಇತ್ತು. ಯಾವದೇ ಹೊಸ ವಿಷಯವಿರಲಿ ಅದನ್ನು ೪-೬ ದಿನಗಳಲ್ಲಿ ಸಂಪೂರ್ಣವಾಗಿ ಅರಿತುಕೊಂಡು ಆ ವಿಷಯದಲ್ಲಿ ನಿಷ್ಣಾತನಾದ ಯಾವದೇ ಮನುಷ್ಯನೊಡನೆ ಅವರು ಪ್ರತಿಭಟಿಸಲು ಸಮರ್ಥರಾಗುತ್ತಿದ್ದರು. ಕೇಸರಿ ಪತ್ರಿಕೆಯ ಸಂಪಾದಕರಾಗಿದ್ದಾಗ ಅವರಿಗೆ ಇಂತಹ ಪ್ರಸಂಗಗಳು ಎಷ್ಟೋ ಬಂದಿದ್ದವು. ಕಾಲೇಜಿನಲ್ಲಿ ಪ್ರೊಫೆಸರರಾಗಿದ್ದಾಗ ಸಹ ಲೋಕಮಾನ್ಯರ ವಿವಿಧ ವಿಷಯಗಳೊಳಗಿನ ಜಾಣ್ಮೆಯನ್ನು ಕಂಡು ವಿದ್ಯಾರ್ಥಿಗಳೂ ಸಹಕಾರಿಗಳೂ ಬೆರಗಾಗುತ್ತಿದ್ದರು. ಆರ್ಯರ ಮೂಲಸ್ಥಾನ, ವೇದಕಾಲ, ವೇದಾಂಗ ಜ್ಯೋತಿಷ ಮತ್ತು ಗೀತಾರಹಸ್ಯಗಳು ಇವರ ಆಳವಾದ ಅಭ್ಯಾಸ, ಸೂಕ್ಷ್ಮ ಬುದ್ಧಿ, ವಿಶಾಲವಾದ ವಾಚನಗಳಿಗೆ ಸಾಕ್ಷಿಯಾಗಿವೆ. ವೇದಕಾಲ ನಿರ್ಣಯದ ಗ್ರಂಥವನ್ನೋದಿ ಅಮೇರಿಕೆಯ ವಿದ್ವಾಂಸನೊಬ್ಬನು ಆಶ್ಚರ್ಯಚಕಿತನಾಗಿ ಹಿಂದುಸ್ತಾನದ ಒಬ್ಬ ಕರಿಯ ಮನುಷ್ಯನು ಇಂತಹ ಸರ್ವೋತ್ಕೃಷ್ಟವಾದ ಗ್ರಂಥವನ್ನು ಬರೆಯಬಲ್ಲನೆಂದು ನಾನೆಂದೂ ತಿಳಿದಿರಲಿಲ್ಲ ಎಂದು ಉದ್ಗಾರಗಳನ್ನು ತೆಗೆದಿದ್ದಾನೆ. ಹಿಂದುಸ್ತಾನವನ್ನು ನೋಡಲಿಕ್ಕೆ ಬಂದ ಒಬ್ಬ ಪಶ್ಚಿಮ ದೇಶದ ಪ್ರವಾಸಿ ವಿದ್ವಾಂಸನಿಗೆ "ಈ ದೇಶದಲ್ಲಿ ನೀವು ನೋಡಿದುದೇನು?" ಎಂದು ಕೇಳಲಾಗಿ 'ಆಗ್ರಾದ ತಾಜಮಹಲ್ ಮತ್ತು ಟಿಳಕರ ಬುದ್ಧಿವೈಭವ' ಎಂದು ಹೇಳಿದನು. ಲೋಕಮಾನ್ಯರು ಬರಿ ಲೇಖನದ ಕಾರ್ಯವನ್ನೆ ಕೈಕೊಂಡಿದ್ದರೂ

ಅವರು ಜಗತ್ತಿಗೆ ಬೆರಗುಗೊಳಿಸುವ, ಲೋಕ ಕಲ್ಯಾಣಕಾರಿಯಾದ ಅನೇಕ ಉದ್ಗ್ರಂಥಗಳನ್ನು ನಿರ್ಮಿಸ ಬಹುದಾಗಿತ್ತು. ಆದರೆ, ಈ ಪರಕೀಯ ಸರಕಾರವು ಇರುವದರಿಂದ ಆ ಉದ್ಗ್ರಂಥಗಳು ಬೆಳಕನ್ನು ಕಾಣದೆ ಜಗತ್ತಿನ ಅಪಾರವಾದ ಹಾನಿಯಾಯಿತು.

ಲೋಕಮಾನ್ಯರ ಶಕ್ತಿಸರ್ವಸ್ವವು ಪರಕೀಯ ರಾಜರೊಡನೆ ಹೋರಾಡುವುದರಲ್ಲಿಯೆ ವೆಚ್ಚವಾಯಿತು; ತಾವು ಸ್ವಂತ ಅನೇಕ ಸಂಕಷ್ಟಗಳನ್ನು ಮೈಮೇಲೆ ಎಳೆದುಕೊಂಡು ಅವುಗಳೊಡನೆ ಪ್ರತಿಭಟಿಸಿ ಸ್ವಜನರಿಗೆ ಸ್ವಾಭಿಮಾನ, ಧೈರ್ಯ, ಸ್ವಾತಂತ್ರ್ಯ ಪ್ರೀತಿಗಳ ಪಾಠಗಳನ್ನು ಕಲಿಸುವುದರಲ್ಲಿ ಹೋಯಿತು. ದೇಶಕ್ಕಾಗಿ ಇವರಷ್ಟು ಸ್ವಾರ್ಥತ್ಯಾಗ ಮಾಡಿದವರೂ, ಸಂಕಟಗಳನ್ನು ಶಾಂತವಾಗಿ ಸಹಿಸಿದವರೂ ಇವರ ಮುಂಚೆ ಯಾರೂ ಆಗಲಿಲ್ಲ. ಜನರಿಗೆ ಪ್ರತಿಯೊಂದು ಮಾತಿನಲ್ಲಿಯೂ ಸ್ವದೇಶಿಯಾಗಲಿಕ್ಕೆ ಉಪದೇಶಿಸಿದವರು ಮೊಟ್ಟಮೊದಲು ಲೋಕಮಾನ್ಯರೆ, ಸ್ವಾಭಿಮಾನಿಯೂ ದೇಶದ ಉನ್ನತಿಯಲ್ಲಿ ಬಯಸುವವನೂ ಆದ ಪ್ರತಿಯೊಬ್ಬ ಭಾರತೀಯನಿಗೆ ಪ್ರಾತಃಸ್ಮರಣೀಯ ಮಹಾವಿಭೂತಿಗಳನ್ನು ಲೋಕಮಾನ್ಯರ ಪುಣ್ಯನಾಮವು ಒಂದಾಗಿದೆಯೆಂದು ಶ್ರೀ ಅರವಿಂದ ಬಾಬುಗಳು ಹೇಳಿದ್ದು ಸಮರ್ಪಕವಾಗಿದೆ.

> "ಲೋಕಮಾನ್ಯರು ಇಲ್ಲದಿದ್ದರೆ ಹಿಂದುಸ್ತಾನವು ಇನ್ನೂ ಅಧಿಕಾರಿಗಳೆದುರಿಗೆ ಲಾಂಗೂಲ ಚಾಲನ ಮಾಡುತ್ತಲೂ ಹುಡಿಯಲ್ಲಿ ಹೊಟ್ಟೆ ಹೊಸೆಯುತ್ತಲೂ ಅವರ ಅಡಿಗಳ ಮೇಲೆ ಹೊರಳಾಡುತ್ತಲೂ ದೀನ ಭಿಕ್ಷುಕ ವೃತ್ತಿಯಲ್ಲಿಯೇ ಇರಬಹುದಾಗಿತ್ತು. ಲೋಕಮಾನ್ಯರು ಹಿಂದೀ ಜನರಿಗೆ ತಲೆಯೆತ್ತಿ ಸ್ವಾಭಿಮಾನದಿಂದ ನಡೆಯಲಿಕ್ಕೆ ಕಲಿಸಿದರು. ಆದ್ದರಿಂದ, ಇನ್ನು ಮುಂದೆ ಹಿಂದೂದೇಶವು ಬೇಗನೆ ಸ್ವರಾಜ್ಯವನ್ನು ಸಂಪಾದಿಸಿ ತನಗೆ ಅನಂತ ಉಪಕಾರ ಮಾಡಿದ ಮಹಾಪುರುಷನ ನೆನೆಪನ್ನು ಅದು ಎಂದೂ ಮರೆಯಲಿಕ್ಕಿಲ್ಲವೆಂದು ನಂಬಿದ್ದೇನೆ"

ಎಂಬುದಾಗಿ ಸೆಂಟ್‌ನಿಹಾಲ್‌ಸಿಂಗರು ಬರೆದುದು ಯಥೋಚಿತವಾಗಿದೆ.

ಲೋಕಮಾನ್ಯರ ಗುಣಕಥನ

೧. ಧೈರ್ಯ, ಸ್ಥೈರ್ಯ ಮತ್ತು ಸಾಹಸ

ಲೋಕಮಾನ್ಯರು ನಿರ್ಭಯ ವೃತ್ತಿಯವರೂ, ಸಾಹಸಪ್ರಿಯರೂ ಆಗಿದ್ದುದು ಅವರ ಎಲ್ಲ ನಡೆವಳಿಯಲ್ಲಿಯೂ ಕಂಡು ಬರುತ್ತದೆ; ಅಪರಾತ್ರಿ ಕಾಳರಾತ್ರಿಗಳಲ್ಲಿ ಪ್ರವಾಸದ ಮಾತಿರಲಿ, ಕಟ್ಟಡವಿಯಲ್ಲಿ ಒಬ್ಬಂಟಿಗರಾಗಿ ಅಲೆದಾಡುವುದಿರಲಿ, ಪರ್ವತಾಗ್ರಗಳ ಇಕ್ಕಟ್ಟಿನ ಕಣಿವೆಗಳನ್ನು ಏರಿ ಇಳಿಯುವುದಿರಲಿ, ಗಲಾಟೆ ಗುದ್ದಾಟುಗಳ ನೆರವಿಯಲ್ಲಿ ಹೋಗುವುದಾಗಲಿ, ಕೊನೆಗೆ ಮಹಾಯುದ್ಧದ ಭೀಕರ ಕಾಲಾವಧಿಯಲ್ಲಿ ಹಡಗದ ಪ್ರವಾಸಮಾಡುವುದಿರಲಿ. ಬಹಳೆ ಚನ್ನಾಗಿ ಈಸಲು ಬರುತ್ತಿದ್ದುದರಿಂದ ಬೇಕಾದಲ್ಲಿ ಈಸಲು ಧುಮುಕುವುದು ಅವರಿಗೆ ಸಾಹಸವೆನಿಸುತ್ತಿದ್ದಿಲ್ಲ. ಇಂಗ್ಲೆಂಡಿನ ಪ್ರವಾಸದ ಕಾಲಕ್ಕೆ ಹಡಗದ ಮೇಲಿದ್ದಾಗ ಕೊರಳಲ್ಲಿ ತೇಲಿಸುವ ಪಟ್ಟಿಗಳನ್ನು ಕಟ್ಟಿಕೊಂಡು ಸಣ್ಣನಾವೆಗಳಲ್ಲಿ ಕುಳಿತುಕೊಳ್ಳುವದನ್ನು ಹೇಳಿಕೊಡುತ್ತಿದ್ದರು; ಏಕೆಂದರೆ ಆಗಿನ ಕಾಲದಲ್ಲಿ (ಟಾರ್ಪೆಡೊ) ನೀರಿನ ಸುರಂಗುಗಳಿಂದ ಹಡಗವು ಮುಳುಗುವ ಹೆದರಿಕೆಯಿತ್ತು. ಒಂದು ದಿನ ಸಣ್ಣ ನಾವೆಗಳಿಗೆ ಇಳಿಯುವ ರಂಗತಾಲೀಮು ಆಯ್ತು. ಲೋಕಮಾನ್ಯರು ಅಂತಹ ಇಳಿವಯಸ್ಸಿನಲ್ಲಿ ಸಹ ಕೊರಳಲ್ಲಿ ಪಟ್ಟಿಯನ್ನು ಕಟ್ಟಿಕೊಂಡು ಉದ್ದವಾದ ಹಗ್ಗದ ನಿಚ್ಚಣಿಕೆಯಿಂದ ಸರ್ರನೆ ಇಳಿದರು. ನಾವೆಯನ್ನು ಹುಟ್ಟು ಕಡಿಯುತ್ತ ದೂರಕ್ಕೆ ಒಯ್ಯುವ ಪ್ರಯೋಗವನ್ನು ಸ್ವಂತ ಮಾಡಿದರು; ಇಷ್ಟೆ ಅಲ್ಲ, ಹಗ್ಗ ಬಿಚ್ಚುವುದೇ ಮೊದಲಾದ ನೌಕೆಯು ಹೊರಡುವ ಪೂರ್ವಸಿದ್ಧತೆಯನ್ನೆಲ್ಲ ತಾವೇ ಮಾಡಿದರು. ತಿರುಗಿ ಬಂದು ತಮ್ಮ ಸಂಗಡಿಗರಿಗೆ ಅದನ್ನೆಲ್ಲ ಕಲಿಸಿ ಅವರಿಂದಲೂ ನಾವೆಯನ್ನು ಆಡಿಸಿದರು.

೧೮೯೩ರಲ್ಲಿ ಪುಣೆಯಲ್ಲಿ ಗಲಾಟೆ ಗುದ್ದಾಟವಾದ ಸುದ್ದಿಯನ್ನು ಕೇಳಿದೊಡನೆಯೆ ಟಿಳಕರು ನಾಮಜೋಶಿ ಪ್ರಭೃತಿಗಳೊಂದಿಗೆ ನೇರವಾಗಿ ಆ ದೊಂಬಿಯ ಸ್ಥಳಕ್ಕೆ ಹೋದರು. ಮುಂದೆ ನಾಮಜೋಶಿಯವರೇ ದೂರದೃಷ್ಟಿಯಿಂದ ಟಿಳಕರನ್ನು ಬೇರೊಂದೆಡೆಗೆ ಒಯ್ದರು. ಸೂರತಿನಲ್ಲಿ ಆದ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನು ಆರಿಸುವ ಠರಾವಿಗೆ ಉಪಸೂಚನೆಯನ್ನು ತರಬೇಕೆಂದು ಗೊತ್ತಾದಾಗ ಆ ಕೆಲಸವನ್ನು ತಾವಾಗಿಯೇ ವಹಿಸಿಕೊಂಡರು. ಆಗಿನ ಪ್ರಸಂಗದಲ್ಲಿ ಉರಿದೆದ್ದು ಮೈಮೇಲೆ ಬಂದ ವಿರೋಧಗಳಿಗೂ ಅತ್ಯಾಚಾರ ಮಾಡಲು ಹವಣಿಸಿದ ಹಲಕೆಲವು ಪುಂಡಗುಂಡರಿಗೂ ಸಹ ಎಳ್ಳಷ್ಟೂ ಲೆಕ್ಕಿಸದೆ ಪ್ರಶಾಂತ ಗಂಭೀರ ವೃತ್ತಿಯಿಂದ ವ್ಯಾಸಪೀಠದ ಮೇಲೆ ನಿಂತ ಟಿಳಕರು ಎಂಟೆದೆಯ ಬಂಟನಿಗೂ ಮೀರಿದವರಾಗಿದ್ದರು. ಅವರ ಆ ಸಮಯದ ಅತುಲಧೈರ್ಯ, ಸಹನಶೀಲತೆ, ಗಂಭೀರವೃತ್ತಿ ಮೊದಲಾದವುಗಳು ಒಳ್ಳೊಳ್ಳೆಯವರಿಗೂ ಬೆರಗುಗೊಳಿಸಿದುವು.

ಕೋರ್ಟಿನ ನ್ಯಾಯ, ಸೆರೆಮನೆಗಳ ವಿಚಾರದಲ್ಲಿ ಅವರು ತೋರಿಸಿದ ಧೈರ್ಯದ ಸಂಗತಿಗಳು ಸರ್ವಶ್ರುತವಾಗಿವೆ. ಇವರ ಮೇಲೆ ಹೀನ ಆರೋಪವನ್ನಿಟ್ಟು ಮಾಡಿದ ನ್ಯಾಯಸಮಯದಲ್ಲಿಯೂ ಅದರ ಕೊನೆಯ ತೀರ್ಪಿನ ಕಾಲದಲ್ಲಿಯೂ ಲೋಕಮಾನ್ಯರಿಗೆ ವಿನೋದ ಗೋಷ್ಠಿಗಳ ನೆನೆಪಾಗಬೇಕೆಂದರೆ ಅವರ ಮನಸ್ಸಿನ ಸ್ಥೈರ್ಯ, ಶಾಂತಿ ಅದೆಂತಹದಿರಬೇಕು! ನ್ಯಾಯದ ತೀರ್ಪು ಕೇಳಲು ಹೊರಟಾಗ ಹತ್ತರ ಕುಳಿತವರಿಗೆ ಅವರು ನುಡಿದುದೇನೆಂದರೆ: ಹೋಗುವಾಗ ನಾವು ನಾಲ್ವರು ಹೊರಟೆವು; ತಿರುಗಿ ಬರುವಾಗ ನೀವು ಮೂವರೇ ಇರತಕ್ಕವರು. ಆಗ ಜನರು ನಿಮಗೆ 'ತ್ರಯಾಣಾಂ ಧೂರ್ತಾಣಾಂ' ಎಂದು ಹೆಸರಿಡಬಹುದು ಎಚ್ಚರ". ಒಬ್ಬ ದೊಡ್ಡ ವಕೀಲನನ್ನು ನೋಡುವುದರ ಬದಲು ಇಬ್ಬರು ಮಧ್ಯಮ ವಕೀಲನನ್ನು ನೇಮಿಸಿದರಾಯಿತು ಎಂದು ಯಾರೊ ನುಡಿದುದಕ್ಕೆ ಇಪ್ಪತ್ತು ವರ್ಷದ ವರನ ಬದಲು ಹತ್ತು ಹತ್ತು ವರ್ಷದ ಎರಡು ವರಗಳನ್ನು ತರಬೇಕು ಎಂದು ಪರಿಹಾಸ ಮಾಡಿದರು.

೧೯೦೮ರಲ್ಲಿ ಮುಂಬೈ ಹೈಕೋರ್ಟಿನಲ್ಲಿ ನಡೆದ ಅವರ ಮೇಲಿನ ರಾಜದ್ರೋಹದ ಖಟ್ಲೆಯಲ್ಲಿ ಶಿಕ್ಷೆಯನ್ನು ವಿಧಿಸುವಾಗ ನ್ಯಾಯಾಧೀಶರು ಉಸುರಿದ ಗಂಭೀರ ಮತ್ತು ಭಯಂಕರ ಶಬ್ದಗಳಿಗೆ ಪ್ರತಿಯಾಗಿ ಲೋಕಮಾನ್ಯರು ತಮ್ಮ ಘನಗಂಭೀರ ಧ್ವನಿಯಿಂದ ದಿವ್ಯವಾದ ಶಾಶ್ವತ ತತ್ವವನ್ನೊಂದು ಹೇಳಿ ತಮಗೆ ಶಕ್ಯವಿದ್ದಷ್ಟು ಆ ನ್ಯಾಯಾಧೀಶನ ತೇಜೋಭಂಗ ಮಾಡಿದರು. ಟಿಳಕರಿಗೆ ಆಗ ೫೨ ವರ್ಷಗಳ ವಯಸ್ಸು; ಮುಪ್ಪು ಇಣಕಿ ನೋಡುತ್ತಿದೆ; ತನ್ನ ಅಧಿಕಾರವನ್ನು ಸ್ಥಾಪಿಸಲು ಇಂತಹ ವಯಸ್ಸಿನಲ್ಲಿ ತನಗೆ ಕಠೋರ ಶಿಕ್ಷೆಯಾಗುವುದನ್ನು ತಿಳಿದೂ ತಲ್ಲಣಗೊಳ್ಳದೆ ಎದೆಗುಂದದೆ ಲೋಕಮಾನ್ಯರು:

> "ಈ ನ್ಯಾಯಾಸ್ಥಾನಕ್ಕಿಂತಲೂ ಶ್ರೇಷ್ಠವಾದ ಒಂದು ದೈವೀಶಕ್ತಿಯಿದ್ದು ಜಗತ್ತಿನ ನಿಯಂತ್ರಣವನ್ನು ಮಾಡುತ್ತಿದೆ. ನಾನು ಶಿಕ್ಷೆಯನ್ನು ಅನುಭವಿಸುವುದರಿಂದಲೆ ನನ್ನ ದೇಶದ ಊರ್ಜಿತಾವಸ್ಥೆಯಾಗಬೇಕೆಂದು ದೈವೀ ಸಂಕಲ್ಪವಿರುವಂತೆ ತೋರುತ್ತದೆ"

ಎಂದು ನಿರ್ದಾಕ್ಷಿಣ್ಯದಿಂದ ಹೇಳಬೇಕಾದರೆ ಏನು ಅವರ ಆತ್ಮ ವಿಶ್ವಾಸ! ಎಷ್ಟು ಅವರ ಅವಿಚಲ ಧೈರ್ಯ! ವಿಲಾಯತಿಯಿಂದ ಮರಳಿ ಬಂದ ಬಳಿಕ ಲೋಕಮಾನ್ಯರಿಗೆ ಪುಣೆಯ ನಾಗರೀಕರು ಸಾರ್ವಜನಿಕವಾಗಿ ಒಂದು ಮಾನಪತ್ರವನ್ನು ಅರ್ಪಿಸಬೇಕೆಂದು ಗೊತ್ತು ಮಾಡಿದ್ದರು. ಆದರೆ, ಕೆಲವು ತಲೆತಿರುಕರು ಸಮಯ ಸಾಧಿಸಿದರೆ ಸೆಗಣಿಮಣ್ಣನ್ನು ಎರಚುವ ಹೊಂಚು ಹಾಕಿರುವರೆಂದೂ ಒಂದು ಸುದ್ದಿಯಿತ್ತು. ಈ ಸಂಬಂಧದಿಂದ ಮಿತ್ರರೂ ಅನುಯಾಯಿಗಳೂ ಮುಂದೇನು ಮಾಡಬೇಕು? ಎಂದು ಮುಂತಾಗಿ ಕಿವಿಮಾತು ನಡೆಯಿಸಿದುದನ್ನು ನೋಡಿದೊಡನೆ ಟಿಳಕರು ಸಿಟ್ಟಾಗಿ ಥಟ್ಟನೆ ನುಡಿದುದೇನಂದರೆ:

> "ಮಾರ್ಕೇಟಿನಲ್ಲಿ (ಸಭಾಸ್ಥಾನಕ್ಕೆ) ಹೋಗಿ ನಾನು ನಿಲ್ಲುತ್ತೇನೆ. ಅದಾವನು ಸೆಗಣಿಯನ್ನು ಎಸೆಯುವನೆಂಬುದನ್ನು ನಾನು ನೋಡತಕ್ಕವನಿದ್ದೇನೆ."

ರಾಯಗಡದ ಮೇಲೆ ಒಮ್ಮೆ ಅಲ್ಲಿಯ ಕೆರೆಯಲ್ಲಿ ಈಸಲು ಎಲ್ಲರೂ ಹೊರಟರು. ಆದರೆ, ಒಳಗೆ ಜಿಗಿಯಲು ಆವನೂ ಮುಂದೆ ಬರಲೊಲ್ಲನು. ಎಲ್ಲಿ ಅಡ್ಡತಿಡ್ಡ ಕಲ್ಲುಗಳು ನೀರಿನಲ್ಲಿ ಅವಿತಿವೆಯೊ ಎಂದು ಹೆದರಿಕೆ ಎಲ್ಲರಿಗೆ. ಆಗ ಟಿಳಕರು ಮುಂದುವರಿದು "ಈ ಕೆರೆಯೊಳಗಿನ ಕಲ್ಲುಗಳಿಂದಲೇ ಈ ದುರ್ಗದೊಳಗಿನ ಅರಮನೆ ಮೊದಲಾದವುಗಳನ್ನೆಲ್ಲ ಕಟ್ಟಿರುವರೆಂದ ಬಳಿಕ ಇಲ್ಲಿ ಅಂಕಡೊಂಕ ಕಲ್ಲುಗಳು ಎಲ್ಲಿಂದ ಬರಬೇಕು?" ಎಂದವರೆ ನೀರಿನಲ್ಲಿ ತಾವೇ ಮೊದಲು ಪ್ರವೇಶ ಮಾಡಿದರು.

ಡೆಕ್ಕನ್ ಕಾಲೇಜಿನಲ್ಲಿ ಒಮ್ಮೆ ಕೆಲವು ಮಿತ್ರರು ಸೇರಿ ಮೇಲ್ಮಾಳಿಗೆಯ ಮೇಲೆ ಮಾತಾಡುತ್ತ ಕುಳಿತಿದ್ದರು. ಆ ಮಾತು ಈ ಮಾತು ನಡೆದು ಶಕ್ತಿಪರಾಕ್ರಮದ ಮಾತುಗಳೂ ಬಂದವು. ಕೂಟದ ಮೈಯಲ್ಲಿ ಆವೇಶ ಉತ್ಸಾಹವು ಸಂಚರಿಸಿತು. ಅವರಲ್ಲಿ ಒಬ್ಬನು "ಈಗ ಇಲ್ಲಿಂದ ಥಕ್ಕನೆ ಅದೃಶ್ಯರಾಗುವ ಪ್ರಸಂಗ ಬಂದರೆ ಏನು

ಮಾಡುವಿರಿ?" ಎಂದನು. ಉಳಿದವರೆಲ್ಲನೇಕರು ಒಬ್ಬರೊಬ್ಬರನ್ನು ನಿರುಕಿಸಿ ಇದೇನು ಅಸಾಧ್ಯವೇ ಸರಿ ಎಂದರು. ಆದರೆ, ಟಿಳಕರು ತಟ್ಟನೆದ್ದು ಗಂಡುಗಚ್ಚೆಯನ್ನು ಕಟ್ಟಿ 'ಹುಂ', ಇಕೊಳ್ಳಿ ನಾನು ಹೀಗೆ ಮಾಡುವೆನು ಎಂದವರೆ ಆ ಮೇಲ್ಮಾಳಿಗೆಯಿಂದ ಕೆಳಕ್ಕೆ ಹಾರಿದರು. ಇವರು ಕಾಲು ಮುರಿದುಕೊಂಡಿರಲಿಕ್ಕೆ ಸಾಕೆಂದು ಗ್ರಹಿಸಿ ಉಳಿದವರೆಲ್ಲ ಸೋಪಾನ ಮಾರ್ಗದ ಕಡೆಗೆ ಬರುವಷ್ಟರಲ್ಲಿ ಟಿಳಕರು ತಮ್ಮ ಕಾಲಿನಿಂದಲೇ ಮೇಲೇರಿ ಬಂದುದು ಅವರಿಗೆ ಕಂಡಿತು!

೨. ಸತತ ಪರಿಶ್ರಮ

ಲೋಕಮಾನ್ಯರು ತಾವು ಆವುದೆ ಕಾರ್ಯವನ್ನು ಕೈಕೊಂಡ ಕೂಡಲೆ ಶಕ್ಯವಿದ್ದ ಎಲ್ಲ ಬಗೆಗಳಿಂದಲೂ ಅದನ್ನು ಕೊನೆಗಾಣಿಸಲಿಕ್ಕೆ ಅವಿಶ್ರಾಂತವಾಗಿ ಸತತ ಪರಿಶ್ರಮ ಮಾಡುತ್ತಿದ್ದರು. ಅವರ ಉನ್ನತಿಗೂ ಕೀರ್ತಿಗೂ ಕಾರಣವಾದ ಅನೇಕ ಗುಣಗಳಲ್ಲಿ ಇದೂ ಒಂದು ಮುಖ್ಯವಾಗಿದೆ. ಈ ಸಂಬಂಧದಿಂದ ಶ್ರೀ ಕಾ.ನ. ಕೇಳಕರರು ಹೀಗೆ ನೆನೆಪುಗಳನ್ನು ಕೊಡುತ್ತಾರೆ. ನ್ಯೂ ಇಂಗ್ಲಿಷ ಸ್ಕೂಲಿನ ಅನಾವರಣ ಸಮಾರಂಭವಾಗುವ ಮುನ್ನಾದಿನ ನಾಮಜೋಶಿ ಮತ್ತು ಟಿಳಕರು ಸ್ವತಃ ತಾವೆ ಆ ಕೋಣೆಯನ್ನು ಸಾರಿಸಿದರು. ಇರುಳನ್ನು ಅಲ್ಲಿಯೆ ಕರೆಹಲಿಗೆಯ ಮೇಲೆ ಮಲಗಿ ಕಳೆದರು. ಬೆಳಗಿನ ಜಾವದಲ್ಲೆದ್ದು ಬಾಕಿ ಖುರ್ಚಿಗಳನೆಲ್ಲ ತಮ್ಮ ಉತ್ತರೀಯದಿಂದ ತಿಕ್ಕಿ ಜಳಜಳ ಮಾಡಿ ಮತ್ತೆ ಹತ್ತುಗಂಟೆಯೊಳಗಾಗಿ ಊಟ ತೀರಿಸಿಕೊಂಡು ಸಮಾರಂಭದ ಹೊತ್ತಿಗೆ ಹನ್ನೊಂದಕ್ಕೆ ಸಿದ್ಧರೇ!

ಶಾಲೆಯು ಆರಂಭವಾದ ಬಳಿಕ ಸಹ ಎಷ್ಟೋ ದಿನಗಳ ವರೆಗೆ ಸಂಜೆಯ ಊಟ ತೀರಿಸಿಕೊಂಡು ಶಾಲೆಗೇ ಮಲಗುವದಕ್ಕೆ ಹೋಗುತ್ತಿದ್ದರು. ಅಲ್ಲಿ ಮುಂದಿನ ನಮ್ಮ ಕಾರ್ಯಕಲಾಪಗಳ ವಿಚಾರ ವಿಮರ್ಶೆಗಳನ್ನು ನಡೆಸುತ್ತಿದ್ದರು. ಕರೆಹಲಿಗೆಯ ಮೇಲೆ ಚಾಪಿಯನ್ನು ಚಲ್ಲಿದರಾಯಿತು; ಇದೆ ಹಾಸಿಗೆ. ಒಂದೆರಡು ಗಂಟೆಯವರೆಗೂ ಮಾತುಕಥೆಗಳು ನಡೆಯುತ್ತಿದ್ದುವು. ಈ ವಿಚಾರ ಚರ್ಚೆಯಲ್ಲಿಯೆ ಮುದ್ರಣಾಲಯ ಮತ್ತು ಕೇಸರೀ-ಮರಾಠಾ ಪತ್ರಿಕೆಗಳನ್ನು ತೆಗೆಯುವುದು ಗೊತ್ತಾಯಿತು. ಒಮ್ಮೆ ಮುದ್ರಣಾಲಯ ಕಟ್ಟಡಕ್ಕೆ ಬೆಂಕಿ ಬಿದ್ದಾಗ ಆ ನಟ್ಟಿರುಳಲ್ಲಿ ನಾಮಜೋಶಿ ಪ್ರಭೃತಿಗಳು ತಮ್ಮ ತಲೆಯಮೇಲೆ ಅಚ್ಚುಕೂಟದ ಸಾಮಾನುಗಳನ್ನೆಲ್ಲ ಹೊತ್ತು ಒಯ್ದರು. ಇದೇ ಮಾತನ್ನು ಕುರಿತು ಟಿಳಕರ ಚರಿತ್ರಕಾರರು ಪಟ್ಟಶಿಷ್ಯರೂ ಆದ ನ. ಚಿ. ಕೇಳಕರರು ಬರೆದಿರುವುದೇನಂದರೆ:

ಟಿಳಕರ ಕಾರ್ಯಕ್ಷೇತ್ರವು ದೊಡ್ಡದಿದ್ದಂತೆ ವಿಶ್ರಾಂತಿಯಿಲ್ಲದೆ ಕೆಲಸ ಮಾಡುವ ಸಾಮರ್ಥ್ಯವೂ ಅವರಲ್ಲಿ ಅಸಾಮಾನ್ಯವಾಗಿತ್ತು. ಕೆಲಸದಲ್ಲಿ ಮೈಮರೆತು ಹಸಿವೆ ನೀರಡಿಕೆಗಳ ಎಚ್ಚರವೂ ಇಲ್ಲದಿರುವುದು ಅತಿಶಯೋಕ್ತಿ ಯೆನಿಸಿದರೂ ಕೆಲವು ಅಳತೆಯವರೆಗೆ ಇದು ನಿಜವೂ ಆಗಿದೆ. ಟಿಳಕರು ಸೀಮಾಪುರುಷರೆಂದೇ ಹೇಳಲು ಅಡ್ಡಿಯಿಲ್ಲ. ಅವರು ಸ್ವತಃ ತಮ್ಮ ಒಬ್ಬ ಮಿತ್ರನ ಹತ್ತರ ಹೀಗೆ ಹೇಳಿದುದರ ಉಲ್ಲೇಖವಿದೆ: "ಮುಂಬೈಯ ಒಂದು ರಾಷ್ಟ್ರೀಯ ಸಭೆಯ ಸಮಯದಲ್ಲಿ ಕೇಸರೀ ಪತ್ರಿಕೆಯ ವಿಶೇಷ ಸಂಚಿಕೆಗಳನ್ನು ಪ್ರಕಟಿಸುವುದಕ್ಕಾಗಿ ನಾನು ಒಂದೇ ಖುರ್ಚಿಯ ಮೇಲೆ ಬಿಟ್ಟೂಬಿಡದೆ ೩೬ ತಾಸು ಕುಳಿತು ಕೆಲಸ ಮಾಡಿದ್ದೇನೆ." ಅವರು ಹೇಳಿದ ಈ ಮಾತು ಸತ್ಯವಿರಬೇಕೆಂದು ನಂಬಲು ಸಾಕಷ್ಟು ಅನುಭವಗಳು ಜನರಿಗೆ ಹೊರಗೆ ಬೇಕಾದಷ್ಟು ಬಂದಿವೆ. ಅವರ ದೊಡ್ಡದೊಡ್ಡ ಪ್ರಚಾರ ಪ್ರವಾಸಗಳ ಕಾಲಕ್ಕೆ ಹಗಲಿರುಳೆನ್ನದೆ ಹೇಗೆ ಕೆಲಸ ಮಾಡುತ್ತಿದ್ದರೆಂಬುದನ್ನು ಜನರು ನೋಡಿದ್ದುಂಟು. ಮತ್ತು ಅದೂ ಸಹ ಗಲಾಟೆಯ ಕೆಲಸ, ಓಡಾಟದ ಕೆಲಸ, ಕೂಗುವ ಕೆಲಸ. ಅಂದಬಳಿಕ ಮನೆಯಲ್ಲಿ ಆರಾಮವಾಗಿ ಕುಳಿತು ಓದುಬರೆವುದನ್ನು ಇಲ್ಲವೆ ವಾದ-ವಿವಾದದ ಕಾರ್ಯವನ್ನು ಅವರು ಬೇಕಾದಷ್ಟು ಹೊತ್ತು ಮಾಡುತ್ತಿರಬಹುದೆಂಬಲ್ಲಿ ಏನಾಶ್ಚರ್ಯ? ಬಾಪಟ ಕಮೀಶನ್ನಿನಲ್ಲಿ ದಿನಾಲು ಕಮೀಶನ್ನ ಮುಂದೆ ಹಾಜರಿದ್ದು ಉಳಿದ ಹೊತ್ತಿನಲ್ಲಿ ನಾಲ್ವತ್ತು ಐವತ್ತು ಹಾಳೆಗಳನ್ನು ಬರೆದು ಓದಲಿಕ್ಕೆ

ವಕೀಲನ ಕಡೆಗೆ ಕೊಡುತ್ತಿದ್ದರು. ಚಿರೋಲ ಕೇಸಿನ ಟಿಪ್ಪಣಿ ಪುಸ್ತಕಗಳನ್ನು ಬರೆಯಲು ಅವರು ಹಗಲೆನ್ನಲಿಲ್ಲ ಇರುಳೆನ್ನಲಿಲ್ಲ. ಸಿಂಹಗಡದ ಮೇಲೆ ಆರ್ಯರ ಮೂಲ ವಸತಿ ಸ್ಥಾನವನ್ನು ಕುರಿತು ಗ್ರಂಥ ಬರೆಯುವಾಗ ಮಧ್ಯಾಹ್ನ ಊಟ ಮಾಡಿ ಒಮ್ಮೆ ಕುಳಿತರೆಂದರೆ ರಾತ್ರಿ ಊಟದ ಹೊತ್ತಿನ ವರೆಗೆ ಅವರು ಮಿಸುಕಾಡುತ್ತಿರಲಿಲ್ಲ. ಮತ್ತು ಯಾವದೊಂದು ಅಧ್ಯಾಯವನ್ನು ಮುಗಿಸುವದಿದ್ದಾಗ ಊಟವನ್ನೂ ಮುಂದೆ ನೂಕುತ್ತಿದ್ದರು. ಅವರ ಈ ಹಿಡಿತದಲ್ಲಿ ಸಿಕ್ಕ ಲೇಖಕನು ದಣಿದು ತಿಣಿಕಬೇಕಾಗುತ್ತಿತ್ತು, ಆದರೆ, ಟಿಳಕರಿಗೆ ಮಾತ್ರ ದಣಿವಿಲ್ಲ. ಟಿಳಕರು ಇಡೀ ಆಯುಷ್ಯದಲ್ಲೆಲ್ಲ ಲೇಖಕನಿಗೆ ತಾವು ವಿಷಯವನ್ನು ಕೇಳಿ ಬರೆಯಿಸುತ್ತಿದ್ದುದು; ಸ್ವಂತ ಕೈಯಿಂದ ಬರೆಯುವುದಕ್ಕೆ ಅವರಿಗೆ ಬೇಜಾರು. ಹೀಗಿದ್ದರೂ (ಮಂಡಾಲೆ ಸೆರೆಮನೆಯಲ್ಲಿ) ಅವರು ಗೀತಾರಹಸ್ಯವನ್ನು ಆಮೂಲಾಗ್ರವಾಗಿ ಸ್ವಹಸ್ತದಿಂದ ಅಲ್ಪಾವಧಿಯಲ್ಲಿಯೇ ಬರೆದು ತೆಗೆದರೆಂಬ ಮಾತು ಅವರ ಅವಿಶ್ರಾಂತಶ್ರಮದ ಉತ್ಕೃಷ್ಟ ದೃಷ್ಟಾಂತವಾಗಿದೆ. ಗೀತಾರಹಸ್ಯದ ಪ್ರಥಮ ಮುದ್ರಣದ ಕಾಲಕ್ಕೆ ನಸುಕು ಹರಿವುದರೊಳಗಾಗಿ ಎದ್ದು ಚಿತ್ರಕಲಾ ಪ್ರೆಸ್ಸಿಗೆ ಹೋಗಿ ಅಲ್ಲಿ ಕಂಪೋಸಿಟರ್ ಮತ್ತು ಪ್ರೂಫ ಕರೆಕ್ಟರರಿಗೆ ಬೆನ್ನು ಹತ್ತುತ್ತಿದ್ದರು. ಇಂತು ಬೆಂಬತ್ತಿ ೨-೩ ತಿಂಗಳಲ್ಲಿಯೇ ಮೊದಲನೆಯ ಆವೃತ್ತಿಯನ್ನು ಪ್ರಕಟಿಸಿದರು. ಬೇಸರ ಎಂಬ ಶಬ್ದವೇ ಅವರಿಗೆ ಗೊತ್ತಿದ್ದಿಲ್ಲ.

೩. ಮಿತ್ರ ಪ್ರೇಮ

ಟಿಳಕರ ಮಿತ್ರಪ್ರೀತಿ ಅನ್ಯಾದೃಶ್ಯವಾದುದು. ಲೋಕಮಾನ್ಯರು ಯಾರನ್ನಾದರೂ ತಮ್ಮವನೆಂದು ತಿಳಿದ ಬಳಿಕ ಆಯಿತು; ಆ ವ್ಯಕ್ತಿಯನ್ನು ಎಂದೆಂದಿಗೂ ಮರೆಯುವಂತಿಲ್ಲ. ಲೋಕಮಾನ್ಯರು ತಮ್ಮ ಗೆಳೆಯರಿಗಾಗಿ ತೋರಿಸಿದ ಪ್ರೀತಿ ಸ್ವಾರ್ಥತ್ಯಾಗಗಳಿಗೆ ಅಳತೆಯೆ ಇಲ್ಲ. ಅವರಿಗಾಗಿ ಅನುಭವಿಸಿದ ಕಷ್ಟಗಳಿಗೆ ಎಣೆಯಿಲ್ಲ. ಶ್ರೀಮಂತ ಬಾಬಾ ಮಹಾರಾಜ ಎಂಬ ಮಿತ್ರನ ಕೆಲಸಕ್ಕಾಗಿ ಲೋಕಮಾನ್ಯರ ಅರ್ಧಕ್ಕಿಂತ ಹೆಚ್ಚು ಆಯುಷ್ಯವು ವೆಚ್ಚಾಯಿತು. ಎರಡು ಎರಡೂವರೆ ಲಕ್ಷ ಹಣವು ಹಾಳಾಯಿತು. ಲೋಕಮಾನ್ಯರ ಸುದೈವದಿಂದ ಈ ನ್ಯಾಯದಲ್ಲಿ ಕೊನೆಗೆ ಪ್ರಿವ್ಹಿ ಕೌನ್ಸಿಲಿನಲ್ಲಿ ಗೆಲವು ದೊರೆತುದರಿಂದ ವೆಚ್ಚವಾದ ಲಕ್ಷಾವಧಿ ರೂಪಾಯಿಗಳ ಸಾಲವು ಮೈಮೇಲೆ ಬರಲಿಲ್ಲವೆಂಬುದು ನಿಜ. ಆದರೆ, ಈ ಖಟ್ಲೆಯಲ್ಲಿ ಟಿಳಕರಿಗೆ ಸಹಿಸಬೇಕಾದ ಮಾನಸಿಕ ಶಾರೀರಿಕ ಕ್ಲೇಶಗಳ ಮೂಲಕವಾಗಿಯೇ ಅವರ ಕೆಲವೊಂದು ವರ್ಷಗಳ ಆಯುಷ್ಯವಾದರೂ ಕಡಿಮೆಯಾಗಿರಲಿಕ್ಕೆ ಬೇಕೆಂದು ಅನೇಕರು ಹೇಳುತ್ತಾರೆ.

ಶ್ರೀಯುತ ಬಾಪಟರೆಂಬ ಬಡೋದೆಯ ಇನ್ನೊಬ್ಬ ಮಿತ್ರರ ವಿಷಯಕ್ಕೂ ಹೀಗೆಯೆ ಕೆಲದಿನ ಲೋಕಮಾನ್ಯರಿಗೆ ತಮ್ಮ ಜೀವವನ್ನು ಸವೆಯಿಸಬೇಕಾಯಿತು. ಶ್ರೀ ಬಾಪಟರನ್ನು ಬಡೋದೆಯ ರೆಸಿಡೆನ್ಸಿಯವರು ತೊಡಕಿನಲ್ಲಿ ಹಿಡಿಯಬೇಕೆಂದು ಅವರ ಮೇಲೆ ಅನ್ಯಾಯದ ಆರೋಪವನ್ನು ಹೊರಿಸಿದ್ದರು. ಆಗ ಲೋಕಮಾನ್ಯರು ಬಡೋದೆಗೆ ಹೋಗಿ ಅಲ್ಲಿಯೆ ನಿಂತು ಇರುಳನ್ನು ಹಗಲು ಮಾಡಿ ದುಡಿದು ಕಾಯಿದೆ ಕಾನೂನುಗಳ ಸಹಾಯವನ್ನು ಒದಗಿಸಿಕೊಟ್ಟು ಮಿತ್ರರಿಗೆ ನೆರವಾದರು. ಈ ಕಾಲಕ್ಕೆ ನೆಳಲಿಗೆ ನಿಲ್ಲಲಿಕ್ಕೂ ಜನರು ಅಂಜುತ್ತಿದ್ದರು. ಆದರೆ ಲೋಕಮಾನ್ಯರು ಮಿತ್ರಪ್ರೇಮದಿಂದ ಆರ್ಥಿಕ, ಶಾರೀರಿಕ, ಮಾನಸಿಕ ತೊಂದರೆಗಳಾವುವನ್ನೂ ಲೆಕ್ಕಿಸದೆ ಶ್ರೀ ಬಾಪಟರ ಸಹಾಯಾರ್ಥವಾಗಿ ಬಡೋದೆಗೆ ಧಾವಿಸಿ ಹೋದರು.

ಅವರ ಆಯುಷ್ಯದಲ್ಲಿ ಇನ್ನೂ ಎಷ್ಟೋ ಇಂತಹ ಪ್ರಸಂಗಗಳು ಇವೆ. ರಾಜಕೀಯ ಆಂದೋಲನಗಳಲ್ಲಿ ಸಿಕ್ಕು ಕಷ್ಟಪಟ್ಟಂತಹ ದೇಶಸೇವಕರಲ್ಲಿ ಬಡತನದ ಬೇಗೆಯಿಂದ ಬಳಲಿ ಕಂಗೆಟ್ಟ ಎಷ್ಟೋ ಜನರು ಆವಶ್ಯಕವಾದ ನೆರವು ಕೊಟ್ಟು ಅವರನ್ನು ದಾರಿಗೆ ಹಚ್ಚಿದ ಉದಾಹರಣೆಗಳಿಗೂ ಕೊರತೆಯಿಲ್ಲ. ಶ್ರೀ ಭಟ್ಟ ಎಂಬ ನಾಸಿಕದ ತರುಣರೊಬ್ಬರು ೧೯೦೭ರ ಕ್ರಾಂತಿಕಾರರ ತಂಡದಲ್ಲಿ ಸೇರಿದ ಆರೋಪದಿಂದ ಶಿಕ್ಷೆಗೆ ಗುರಿಯಾಗಿದ್ದರು. ಅವರು ಸೆರೆಮನೆಯಿಂದ ಹೊರಗೆ ಬಂದ ಬಳಿಕ ಬಡತನದ ಬಳಲಿಕೆಯಿಂದ ಕಂಗೆಟ್ಟು ಇಲ್ಲದ ಎಣಿಕೆಗಳಿಗೆ

ಒಳಗಾಗಿದ್ದರು. ಇಂತಹ ಸಂದರ್ಭದಲ್ಲಿ ಲೋಕಮಾನ್ಯರು ಅವರನ್ನು ಕೇಸರಿಯ ಸಂಪಾದಕ ವರ್ಗದಲ್ಲಿ ಸೇರಿಸಿಕೊಂಡು ಹೊಟ್ಟೆಯ ಚಿಂತೆಯೊಳಗಿಂದ ಮುಕ್ತರನ್ನಾಗಿ ಮಾಡಿದರು. ಇಷ್ಟೇ ಅಲ್ಲದೆ ಶ್ರೀ ಭಟ್ಟರು ಮುಂದಿನ ವಿದ್ಯಾಭ್ಯಾಸಕ್ಕಾಗಿ ನೆರವು ಬೇಡಿದಾಗ ಶಿಕ್ಷಣಕ್ಕಾಗಿ ಕೆಲವು ಹಣವನ್ನೂ ಕೊಟ್ಟು ತಮ್ಮ ಮೇಲೆ ಲೋಕಮಾನ್ಯರು ಅನಂತ ಉಪಕಾರಗಳನ್ನು ಮಾಡಿದರೆಂದು ಅವರೇ ಬರೆದಿರುತ್ತಾರೆ.

೪. ಕೋಮಲ ಮನಸ್ಸು

ಪ್ರೊ. ವಾ. ಮ. ಜೋಶಿ ಎಂಬವರು ಮರಾಠಾ ಪತ್ರಿಕೆಯ ಸಹಸಂಪಾದಕರಿದ್ದಾಗ ಬಂದ ಒಂದು ಅನುಭವವನ್ನು ಹೀಗೆ ಬರೆದಿದ್ದಾರೆ:

ವಿಭೂತಿಗಳ ಸಂದರ್ಶನದಿಂದ, ಅವರ ಪ್ರೀತಿ ಪುರಸ್ಸರವಾದ ಒಂದೆರಡು ಶಬ್ದಗಳಿಂದ ಕಕ್ಕುಲತೆಯ ನೋಟದಿಂದ, ಗಂಭೀರ ಮಂದಸ್ಮಿತದಿಂದ ಅಥವಾ ಮೌನ ವ್ಯಾಖ್ಯಾನದಿಂದಲೇ ಎಷ್ಟೊ ಸಾರೆ

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।

ನನ್ನ ಅಂತರಂಗದೊಳಗಿನ ಕೆಲವು ಗಂಟುಗಳು ಹೀಗೆಯೆ ಒಡೆದಿವೆ. ಒಂದು ಗಂಟು ಟಿಳಕರ ಬಗೆಗೆ ಇತ್ತು. ಟಿಳಕರೆಂದರೆ ನನಗೆ ತುಂಬಾ ಆದರವಷ್ಟೇ ಅಲ್ಲ, ಪೂಜ್ಯ ಬುದ್ಧಿಯೂ ಇತ್ತು; ಮತ್ತು ಇನ್ನೂ ಇದೆ. ಆದರೆ ಎದೆಯ ಒಂದು ಬದಿಯಲ್ಲಿ ಅವರ ಬಗ್ಗೆ ಒಂದು ಗಂಟು ಇತ್ತು. ಟಿಳಕರು ಎಷ್ಟೇ ಧೀಮಂತರೂ ವಿದ್ವಾಂಸರೂ ಸ್ವದೇಶಾಭಿಮಾನಿಗಳೂ ಸ್ವಾರ್ಥತ್ಯಾಗಿಗಳೂ ಆಗಿರುವರಾದರೂ ಅವರು ನೀರಸ ತರ್ಕಪ್ರಧಾನ ಕಠೋರವೃತ್ತಿಯವರು ಎಂದು ನನ್ನ ತಿಳುವಳಿಕೆಯಾಗಿತ್ತು. 'ಮರಾಠಾ' ಆಫೀಸಿನಲ್ಲಿ ಒಂದು ವರ್ಷ ಕೆಲಸ ಮಾಡಿದ ಮೇಲೆ ನನ್ನ ಈ ಗ್ರಹಿಕೆಯು ದೃಢವಾಗತೊಡಗಿತು. ಆದರೆ, ಮುಂದೆ ಒಂದು ಶನಿವಾರ; ಇರುಳು ೧೧-೧೨ ಗಂಟೆಯ ಸುಮಾರು ಮರಾಠಾ (ಇಂಗ್ಲಿಷ) ಪತ್ರಿಕೆಯ ಮೊದಲ ಅಚ್ಚು (ಪ್ರೂಫು)ಗಳನ್ನು ತಿದ್ದಿ ಕೊಡುವದಕ್ಕಾಗಿ ನಾನು ಆಫೀಸಿಗೆ ಹೋಗಿದ್ದೆನು; ಆಗ ಟಿಳಕರೂ ಸಹಜವಾಗಿ ಅಲ್ಲಿಗೆ ಬಂದರು. ಅವರೊಡನೆ ಅಂದು ಆದ ಸಂಭಾಷಣದಿಂದ ಲೋಕೋತ್ತರ ಸಾಧುಸತ್ಪುರುಷರಂತೆ ಟಿಳಕರು ಸಹ

'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ'

ಎಂಬ ಮಾತಿಗೇನೂ ಹೊರತಾಗಿಲ್ಲವೆಂಬಿದರ ಮನವರಿಕೆಯಾಯಿತು. ಆ, ಈ ಮಾತುಕತೆಗಳು ನಡೆದು ನಾನು ಇರುತ್ತಿದ್ದ ಶನಿವಾರ ಪೇಟೆಯೊಳಗಿನ ತಾಂಬೆಯವರ ವಾಡೆಯ ಮಾತು ಹೊರಟಿತು. ಈ ಮಹಮನೆಯ ಯೋಗಾಯೋಗವೇ ಒಂದು ವಿಲಕ್ಷಣವಾಗಿದೆ. ಪುಣೆಯೊಳಗಿನ ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳು ಇಲ್ಲಿ ಹಲಕೆಲವು ದಿನಗಳಾದರೂ ಇದ್ದುದು ಕಂಡು ಬರುತ್ತದೆ. ಟಿಳಕ, ಅಗರಕರ, ಗೋಖಲೆ, ಶ್ರೀಧರಪಂತ, ಕರಂದೀಕರ, ಶಂಕರರಾವ್ ಲವಾಟೆ ಮೊದಲಾದವರಿಗೆ ಈ ಮನೆಯೇ ಆಶ್ರಯವನ್ನು ಕೊಟ್ಟಿತ್ತು. ಆ ವಾಡೆ ಮತ್ತು ಅಲ್ಲಿಯ ಸಂದಿಯ ಮಾತು ಬಂದು ಅಲ್ಲಿಯೆ ಕೆಲದಿನ ಟಿಳಕರ ಮನೆಯ ಹತ್ತರ ಬಾಡಿಗೆಯಿದ್ದು ಅವರ ಜೀವದ ಗೆಳೆಯ ಅಗರಕರರ ನೆನಪು ಸಹಜವಾಗಿ ಉಂಟಾಯಿತು. ಅಗರಕರರು 'ಸುಧಾರಕ' ಪತ್ರಿಕೆಯನ್ನು ಎಂಥ ಪರಿಸ್ಥಿತಿಯಲ್ಲಿ ಯಾಕೆ ತೆಗೆಯಬೇಕಾಯಿತು ಎಂಬುದನ್ನೆಲ್ಲ ಟಿಳಕರು ಹೇಳಿದರು. ತಾಂಬೆಯವರ ಮಹಮನೆಯಲ್ಲಿದ್ದುದರ ಮತ್ತು ಅಗರಕರರ ಗೆಳೆತನದ ಹಿಂದಿನ ಚಿತ್ರಪಟವೆ ಕಣ್ಣೆದುರಿಗೆ ಕಟ್ಟಿದಂತಾದುದರಿಂದ ಸಾಧಾರಣವಾಗಿ ಎಂದೂ ಭಾವನಾವಶರಾಗದಂತಹ ಟಿಳಕರು ಇಂದು ಅಲ್ಪಸ್ವಲ್ಪ ಮೈಮರೆತರು; ಅಗರಕರರ ಬಗ್ಗೆ ಮಾತನಾಡುವಾಗಲಂತೂ ಅವರ ಬಾಯಿಂದ ಮಾತುಗಳೆ ಹೊರಡದಾದುವು; ಕಣ್ಣಿಂದ ನೀರ ಹನಿಗಳು

---

೫. ಹೃದಯದೊಳಗಿನ ಗಂಟು ಒಡೆಯುತ್ತದೆ; ಎಲ್ಲ ಸಂಶಯಗಳೂ ಓಡುತ್ತವೆ ಎಂಬಲ್ಲಿ ಏನೂ ಸಂಶಯವಿಲ್ಲ.

ಮಾತ್ರ ಪಟಪಟನೆ ಕೆಳಗೆ ಉದುರಿದವು. ವೃತ್ತ ಪತ್ರಿಕೆಗಳಲ್ಲಿ ಬರೆಯುವಾಗ ಶ್ರೀ ಆಗರಕರರು ಪ್ರತಿಸ್ಪರ್ಧಿಗಳೆಂದು ಅವರ ಮೇಲೆ ನಿರ್ದಾಕ್ಷಿಣ್ಯದಿಂದ ತೀಕ್ಷ್ಣ ಟೀಕಾಸ್ತ್ರವನ್ನು ಪ್ರಯೋಗಿಸುತ್ತಿದ್ದರೂ ಲೋ. ಟಿಳಕರ ಅಂತಃಕರಣದ ಅಂತರಂಗದಲ್ಲಿ ತಮ್ಮ ಗೆಳೆಯನ ವಿಷಯಕ್ಕೆ ತುಂಬಾ ಆದರವೂ ಪ್ರೀತಿಯೂ ವಾಸವಾಗಿದ್ದುವೆಂಬುದು ಅಂದು ನನಗೆ ಅನುಭವಕ್ಕೆ ಬಂದಿತು. ಟಿಳಕರು ಇಷ್ಟು ಕೋಮಲ ಹೃದಯದವರೆಂದು ನಾನು ತಿಳಿದಿದ್ದಿಲ್ಲ. ಎದುರಾಳಿಗಳೊಡನೆ ಕಠೋರತನದಿಂದ ಕಾದಾಡುವ ಈ ಕಡುಗಲಿಯ ಅಂತರಂಗವು ಮೃದುಮಧುರವೂ ಆಗಿರುವುದೆಂದು ಅಂದು ಲೋಕಮಾನ್ಯರು ತಮ್ಮ ಮಿತ್ರನಿಗೆ ಅರ್ಪಿಸಿದ ಅಶ್ರುಗಳ ಜಲಾಂಜಲಿಯಿಂದ ಚೆನ್ನಾಗಿ ನನ್ನ ಮನವರಿಕೆಯಾಯಿತು. ಈ ಪ್ರಸಂಗವೇನೊ ಕ್ಷುಲ್ಲಕವೆನಿಸುವಂತಿದೆ. ಆದರೆ, ಮಹಾವಿಭೂತಿಗಳ ಬಾಹ್ಯ ಆಚರಣದ ನಿರ್ಜಲ ಮೇರು ಪ್ರದೇಶಗಳಲ್ಲಿ ಸ್ನೇಹರಸಪೂರ್ಣ ವಿದ್ವದ್ಗಂಗೆಯೂ ಹೇಗೆ ಗೂಢವಾಗಿ ಹರಿಯುತ್ತಿರುತ್ತಾಳೆಂಬದು ಈ ಪ್ರಸಂಗದಿಂದ ಚೆನ್ನಾಗಿ ವ್ಯಕ್ತವಾಗುವಂತಿದೆ.

೫. ಪ್ರಸಂಗಾವಧಾನ

೧೯೧೬ರಲ್ಲಿಯ ಒಂದು ಸಂಗತಿ. ಲೋಕಮಾನ್ಯರು ಗದುಗಿಗೆ ಕೆಲವೊಂದು ಸ್ವಂತದ ಕೆಲಸಕ್ಕಾಗಿ ದಯಮಾಡಿಸಿದ್ದರು. ಆಗ ಆ ಊರ ಪ್ರಮುಖರಾದ ಡಾ. ಉಮಚಗಿ, ಡಾ. ಹುಯಿಲಗೋಳ ಪ್ರಭೃತಿಗಳು ಲೋಕಮಾನ್ಯರಿದ್ದೆಡೆಗೆ ಹೋಗಿ, ಒಂದು ಉಪನ್ಯಾಸವನ್ನು ಕೊಡಲು ಬಿನ್ನವಿಸಿದರು. ಆದರೆ "ನನ್ನ ಮರಾಠಿ ಭಾಷಣಗಳು ಇಲ್ಲಿಯವರಿಗೆ ಹೇಗೆ ತಿಳಿಯಬೇಕು?" ಎಂದು ಲೋಕಮಾನ್ಯರು ಉಸುರಿದರು. ಅದಕ್ಕೆ ಪ್ರತ್ಯುತ್ತರವಾಗಿ ಊರ ಪ್ರಮುಖರು

ಇಲ್ಲಿಯ ಜನಗಳೆಲ್ಲ ತಮ್ಮ ದರ್ಶನೋತ್ಸುಕರಾಗಿ ಕಾದುಕೊಂಡು ಕುಳಿತಿದ್ದಾರೆ;
ಆದುದರಿಂದ ತಾವು ನಮ್ಮೂರವರ ಅಖಿಲ ಭಕ್ತಿಯ ಸನ್ಮಾನವನ್ನು ಸ್ವೀಕರಿಸುವುದಾಗಲಿ

ಎಂದು ಬೇಡಿಕೊಂಡುದಕ್ಕೆ ಲೋಕಮಾನ್ಯರು ಒಪ್ಪಿಕೊಂಡರು. ಇತ್ತ ಮಧ್ಯಾಹ್ನದಲ್ಲಿ ಅಲ್ಲಿಯ ಮಾಮಲೆದಾರರಾದ ಶ್ರೀ ಪಡಿಬಿದರಿಯವರು ಸಭೆಯನ್ನು ವಿರಚಿಸದಿರಲಿಕ್ಕೆ ಹೇಳಿದರು. ಊರ ಪ್ರಮುಖರು ಆ ಮಾತಿಗೆ ಒಪ್ಪದ್ದಕಾರಣ ಮಾಮಲೇದಾರರು ಸಭೆಯನ್ನು ನಿಲ್ಲಿಸಿಬಿಡುವ ಅಪ್ಪಣೆ ಕೊಡುವೆನೆಂದು ಹೆದರಿಕೆ ಹಾಕಿದರು. ಅಂದು ಜಿಲ್ಲೆಯ ಕಲೇಕ್ಟರ ಮಿ. ಟರ್ನರರು ಗದುಗಿನಲ್ಲಿಯೆ ತಂಗಿದ್ದರು. ಗೊತ್ತಾದ ವೇಳೆಗಿಂತ ಎಷ್ಟೋ ಹೊತ್ತು ಮೊದಲೆ ಸಭಾಸ್ಥಾನದಲ್ಲಿ ೧೦-೧೨ ಸಾವಿರ ಜನಸಮುದಾಯವು ಕಿಕ್ಕಿರಿದಿತ್ತು. ಲೋಕಮಾನ್ಯರು ಸಭೆಗೆ ಬರುವ ಮೊದಲೆ ಮಿ. ಪಡಿಬಿದಿರಿಯವರು ಬಂದು ಜನರನ್ನು ಚೆದರಿಸಿಬಿಟ್ಟರು; ಮುಂದಾಳುಗಳಿಗೆ ವ್ಯಾಸಪೀಠವನ್ನು ಕಿತ್ತೊಗೆಯಲಿಕ್ಕೆ ಆಜ್ಞಾಪಿಸುತ್ತಲೆ ಅವರು ಬಾಯ್ಮಾತು ಬೇಡ; ನಿಮ್ಮ ಕಟ್ಟಪ್ಪಣೆಯನ್ನು ಬರೆದು ಕೊಡಿರೆಂದರು. "ನನ್ನ ಬಾಯ್ಮಾತೇ ಬರೆದಪ್ಪಣೆಯೆಂದು ತಿಳಿಯಿರಿ. ನಾನು ಫರ್ಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟನಿದ್ದೇನೆ" ಎಂದು ಆರ್ಭಟಿಸಿದರು. "ಬೇಕಾದರೆ ನೀವೆ ವ್ಯಾಸಪೀಠವನ್ನು ಎತ್ತಿಸಿರಿ; ನಾವದನ್ನು ಕಿತ್ತಲಾರೆವು" ಎಂದು ಮುಂದಾಳುಗಳು ಮರುನುಡಿದರು. ಮಾಮಲೇದಾರ ಸಾಹೇಬರು ತಾವೇ ಅದನ್ನು ಕಿತ್ತಿಸಿದರು.

ಸಭೆಯ ಚಾಲಕರು ಈ ಸಂಗತಿಯನ್ನು ಲೋಕಮಾನ್ಯರಿಗೆ ಅರುಹಿ ಸಭೆಯಂತೂ ಜರುಗಲೇಬೇಕೆಂದು ತಮ್ಮ ಇಚ್ಛೆಯಿರುವುದಾಗಿ ವಿಜ್ಞಾಪಿಸಿಕೊಂಡರು. ಅನಾಯಾಸವಾಗಿ ತಮ್ಮೂರಿಗೆ ಬಂದ ವಂದ್ಯ ಮಹಾಪುರುಷನಿಗೆ ಆದರ ಸತ್ಕಾರವನ್ನು ಸ್ವೀಕರಿಸಲಿಕ್ಕೆ ಔತಣವನ್ನು ಕೊಟ್ಟು ಏನಾದರೊಂದು ನಿಮಿತ್ತದಿಂದ ಅದನ್ನು ಮಾಡದೆ ಬಿಡುವುದರಿಂದ ತಮ್ಮ ಹಾಗೂ ಆ ಮಾನ್ಯ ಅತಿಥಿಯ ಗೌರವಕ್ಕೆ ಕುಂದು ಬಂದಂತಾಗುವುದೆಂದು ತಿಳಿದು ಊರ ಪ್ರಮುಖರು ಏನೇ ಆಗಲಿ ಸಭೆಯು ಆಗುವುದೇ ಯುಕ್ತವೆಂದು ಆಗ್ರಹಪಟ್ಟರು. ಲೋಕಮಾನ್ಯರು

ಅವರಿಗೆ, ನೀವೇನೂ ಹಾಗೆ ಭಾವಿಸಿಕೊಳ್ಳಬೇಡಿರಿ, ನನಗೆ ಇಂತಹ ಪ್ರಕಾರಗಳು ಹೊಸವಲ್ಲ; ಎಂದು ಮುಂತಾಗಿ ಸಮಾಧಾನದ ಮಾತುಗಳನ್ನು ಹೇಳಿ ನಿಮಗೆ ಬರೆಹದಪ್ಪಣೆಯು ಬಂದಿದೆಯೆ ಎಂದು ಪ್ರಶ್ನಿಸಿದರು. ಅದಾವುದೂ ಇಲ್ಲವೆಂದು ತಿಳಿಯುತ್ತಲೆ ಲೋಕಮಾನ್ಯರು ನುಡಿದರು,

> ಹಾಗಾದರೆ ಅತ್ಯಗತ್ಯವಾಗಿ ಸಭೆಯನ್ನು ವಿರಚಿಸಿರಿ; ನಾನೊಪ್ಪಿಕೊಂಡಂತೆ ತಾಂಬೂಲ ಸಮಾರಂಭಕ್ಕೆ ಬರುವೆನು; ಅಲ್ಲಿ ಬಾಯ ಅಥವಾ ಬರೆಹದ ಅಪ್ಪಣೆಯು ಬಂದರೂ ಅದನ್ನು ನಾನು ನೋಡಿಕೊಳ್ಳುವೆನು.

ಮತ್ತೆ ಸಭೆಯು ಸೇರಿತು, ಲೋಕಮಾನ್ಯರು ದಯಮಾಡಿಸಿದರು. ಅಧಿಕಾರಿಗಳೂ ಕೂಡಲೆ ಬರಹದಪ್ಪಣೆಯನ್ನು ಅವರ ಕೈಗೆ ಕೊಟ್ಟರು. ಲೋಕಮಾನ್ಯರು ಅದನ್ನು ಶಾಂತರೀತಿಯಿಂದ ಓದಿಕೊಂಡಬಳಿಕ "ಇದರಲ್ಲೇನಿದೆ?" ಎಂದು ನಸುನಕ್ಕು ಮುಂದೆ ನುಡಿದರು. "ಈ ಅಪ್ಪಣೆಯಲ್ಲಿ ನಾನು ತಾಂಬೂಲವನ್ನು ಸ್ವೀಕರಿಸಕೂಡದೆಂದು ಎಲ್ಲಿದೆ? ಚಿತ್ತಕ್ಷೋಭಕ ಉಪನ್ಯಾಸ ಮಾಡಬಾರದೆಂದು ಮಾತ್ರ ವಿಧಿಸಿದೆ. ನಾನು ತಮ್ಮ ಅಪ್ಪಣೆಯನ್ನು ಶಿರಸಾ ವಹಿಸಲು ಸಿದ್ಧನಿದ್ದೇನೆ. ಚಿತ್ತಕ್ಷೋಭಕ ವ್ಯಾಖ್ಯಾನಗಳನ್ನು ಹೇಳಲು ನಾನಿಲ್ಲಿ ಬಂದಿಲ್ಲ. ಚಿತ್ತಕ್ಷೋಭಕ ಅಂದರೇನು ಎಂಬುದನ್ನು ನಾನು ಚೆನ್ನಾಗಿ ಬಲ್ಲೆ; ಅಲ್ಲದೆ ನನ್ನ ಉಪನ್ಯಾಸವು ಚಿತ್ತಕ್ಷೋಭಕವಾಗಿತ್ತೆಂದು ನೀವೇ ಸಿದ್ಧಪಡಿಸಬೇಕಾದೀತೆಂಬುದು ಮಾತ್ರ ನೆನಪಿರಲಿ." ಲೋಕಮಾನ್ಯರ ಕುಶಾಗ್ರಬುದ್ಧಿಯ ಹಾಗೂ ಪ್ರಸಂಗಾವಧಾನ ಜಾಣ್ಮೆಯ ಚತುರೋಕ್ತಿಗಳನ್ನು ಕೇಳುತ್ತಲೆ ಮಾಮಲೇದಾರರು ಬುದ್ಧಿಶೂನ್ಯರಾದರು. ಮುಂದೇನು ಮಾಡಬೇಕೆಂಬುದು ತಿಳಿಯದಾಯಿತವರಿಗೆ. "ಕಲೆಕ್ಟರರ ಬೀಡು ಇಲ್ಲಿಯೆ ಇದೆ" ಮಾಮಲೇದಾರರು ಉಸುರಿದರು. "ನಾನವರಿಗೆ ಕೇಳಿಬರುತ್ತೇನೆ; ಸ್ವಲ್ಪ ತಡೆಯುವಿರಾ?" ಲೋಕಮಾನ್ಯರು ಅದಕ್ಕೆ ಸಮ್ಮತಿಸಲು ಮಾಮಲೇದಾರರು ಕಲೆಕ್ಟರರನ್ನು ಕಾಣಹೋದರು. ತಾಂಬೂಲ ಸಮಾರಂಭಕ್ಕೆ ಅಡ್ಡಿ ಮಾಡುವುದು ಅನುಚಿತವೆಂದು ತೋರುವಂತಿತ್ತು. ಆಗ ಕಲೆಕ್ಟರರು ಮಾಮಲೇದಾರರ ಮೇಲೆ ತುಂಬಾ ರೇಗಿದರಂತೆ. ಈ ಸಭೆಯನ್ನು ನೀವೇ ಏಕೆ ನಿಲ್ಲಿಸಲಿಲ್ಲವೆಂಬ ಕಲೆಕ್ಟರರ ಪ್ರಶ್ನೆಗೆ ತಾವು ಇಲ್ಲಿರುವಾಗ ನಾನೇಕೆ ಆ ಹೊಣೆಯನ್ನು ಹೊರಲಿ ಎಂದು ಮಾಮಲೇದಾರರು ಮರುನುಡಿದರೆಂದು ಕೇಳಿಕೆ. ಅದೇನೆ ಇದ್ದರೂ ತಾಂಬೂಲ ಸಮಾರಂಭಕ್ಕೆ ಅಡ್ಡಿಯಿಲ್ಲ, ಐದು ಮಿನೀಟು ಉಪನ್ಯಾಸ ಮಾಡಬಹುದು ಎಂಬುದಾಗಿ ಕಲೇಕ್ಟರರಿಂದ ಒಪ್ಪಿಗೆ ಬಂದಿತು. "ಐದು ಮಿನೀಟಿನ ಅರ್ಥವೇನು?" ಲೋಕಮಾನ್ಯರು ಮಾಮಲೇದಾರರಿಗೆ ಕೇಳಿದರು "ಸಭೆಯು ಆರಂಭವಾದ ಬಳಿಕ ಐದು ಮಿನೀಟಿನಲ್ಲಿ ತೀರಬೇಕೊ ಅಥವಾ ಭಾಷಣವು ಆ ಅವಧಿಯಲ್ಲಿ ಮುಗಿಯಬೇಕೊ?" "ತಾವು ಐದು ಮಿನೀಟು ಮಾತಾಡಬಹುದು" ಎಂದು ಮಾಮಲೇದಾರರು ಹೇಳಿದರು. ಆಗ ಲೋಕಮಾನ್ಯರು "ನಾನು ಮಿನೀಟಿಗೆ ಎಂಬತ್ತು ಶಬ್ದಗಳನ್ನು ಆಡುತ್ತೇನೆ. ಐದು ಮಿನೀಟು ಅಂದರೆ ಕೇಸರಿಯ ಎರಡೂವರಿ ಕಾಲಂಮಿನಷ್ಟು ವಿಷಯವು ಆಯಿತೆಂಬುದು ಈ ಪ್ರಾಣಿಗಳಿಗೇನು ಗೊತ್ತು?" ಎಂದು ವಿನೋದವಾಗಿ ವಿಜಯಧ್ವನಿಯಲ್ಲಿ ನುಡಿದರು. ಸಭೆಗೆ ಆರಂಭವಾಯಿತು. ಅಲ್ಲಿದ್ದ ಪೋಲೀಸ ಸೂಪರಿಂಟೆಂಡೆಂಟ್ ಮತ್ತು ಮಾಮಲೇದಾರರನ್ನು ಲೋಕಮಾನ್ಯರು ವ್ಯಾಸಪೀಠದ ಮೇಲೆ ಕರೆದರು. ಆದರೆ, ಅವರಿಗೆ ಬರಲು ಮೋರೆಯಿರಲಿಲ್ಲ. ಲೋಕಮಾನ್ಯರ ಭಾಷಣವಾಯಿತು. ಸಭೆಯು ಯಾವ ಎಡೆತಡೆಗಳಿಲ್ಲದೆ ಶಾಂತವಾಗಿ ಕೊನೆಗೊಂಡಿತು.

೬. ಸ್ಪಷ್ಟೋಕ್ತಿ

೧೯೦೬ನೆಯ ಇಸವಿಯಲ್ಲಿ ಒಮ್ಮೆ ಲೋಕಮಾನ್ಯರು ಗುರ್ಲಹೊಸೂರಿಗೆ (ಬೆಳಗಾಂವಿ ಜಿಲ್ಲೆ) ದಯಮಾಡಿಸಿದ್ದರು. ಆಗ ಅಲ್ಲಿ ಶ್ರೀ ಚಿದಂಬರಸ್ವಾಮಿಯ ಜಾತ್ರೆ ಬೇರೆ. ಲೋಕಮಾನ್ಯರ ಆಗಮನವಾಗತಕ್ಕದೆಂದು ಕೇಳಿ ಇನ್ನಿಷ್ಟು ಜನಸಮುದಾಯಕ್ಕೆ ಉಕ್ಕು ಬಂದಿತು. ಅಂದಿನ ಇರುಳು ಶ್ರೀ ಚಿದಂಬರ ದೇವಾಲಯದ ಹೊರ ಮಗ್ಗಲಿನ ವಿಸ್ತಾರವಾದ ಬೈಲಲ್ಲಿ ಪ್ರಚಂಡ ಸಭೆಯು ಸೇರಿತು. ೧೫-೨೦ ಸಾವಿರಕ್ಕೆ ಮಿಕ್ಕಿ ಮಂದಿ ಕೂಡಿತ್ತು.

ಲೋಕಮಾನ್ಯರು ಒಂದು ತಾಸಿನವರೆಗೆ ಅವ್ಯಾಹತವಾಗಿ ಸ್ಫೂರ್ತಿದಾಯಕ ಉಪನ್ಯಾಸ ಮಾಡಿದರು. ಆದರೆ, ಸಭೆಗೆ ಬಂದ ಮಂದಿಯೆಲ್ಲ ಚಿತ್ರದ ಗೊಂಬಿಯಂತೆ ಸದ್ದಿಲ್ಲದೆ ಮಿಸುಕಾಡದೆ ಕುಳಿತಿತ್ತು. ಇದು ಲೋಕಮಾನ್ಯರ ಮನಸ್ಸಿಗೆ ತುಂಬಾ ವಿಷಾದವನ್ನುಂಟುಮಾಡಿತು. ತಮಗೆ ಇಲ್ಲಿಯ ಭಾಷೆ ಬಾರದುದಕ್ಕೆ ಮರಾಠಿಯಲ್ಲಿ ಮಾತನಾಡಬೇಕಾಯಿತು. ಆದರೆ, ಅದೆಲ್ಲ ಬೋರ್ಗಲ್ಲ ಮೇಲೆ ಮಳೆಗರೆದಂತಾಯಿತು. ಆದಕಾರಣ ಕನ್ನಡದಲ್ಲಿ ತಮ್ಮ ಭಾಷಣದ ಸಾರಾಂಶವನ್ನು ಹೇಳುವುದಕ್ಕಾಗಿ ಕರ್ನಾಟಕದ ಧುರೀಣರಾದ ಶ್ರೀ-ರಾಯರಿಗೆ ಸೂಚಿಸಿದರು. ಆದರೆ, ರಾಯರು ತಮಗೆ ಅಷ್ಟು ಕನ್ನಡವು ಬರುವದಿಲ್ಲವೆಂದುದರಿಂದ ಆ ಕೆಲಸವು ಅವರ ಒಬ್ಬ ಮಿತ್ರನಿಂದ ನೆರವೇರಿತು. ಅವನು ಕನ್ನಡದಲ್ಲಿ ಸಾರಾಂಶವನ್ನು ಹೇಳಿದ ಬಳಿಕ ಸಭಾವಿಸರ್ಜನೆಯಾಗಿ ಎಲ್ಲರೂ ಮನೆಗೆ ಹೋದರು.

ಆಗ ರಾತ್ರಿ ಸುಮಾರು ಎಂಟು ತಾಸು ಮೀರಿದ್ದವು. ಆದರೂ ಲೋಕಮಾನ್ಯರಿಗೆ ಆ ಸಭಾಪ್ರಸಂಗದಿಂದ ತಲೆಯಲ್ಲಿ ಬಂದ ಅನೇಕಾನೇಕ ವಿಚಾರಗಳಿಂದ ನಿದ್ದೆಯ ವಿಚಾರವು ಹಿಂದುಳಿಯಿತು. ಲೋಕಮಾನ್ಯರು ಶ್ರೀ ರಾಯರನ್ನು ಹತ್ತರಕ್ಕೆ ಕರೆದು ಕುಳ್ಳಿರಿಸಿಕೊಂಡರು. ನಿಜವಾದ ಲೋಕಸೇವೆಯ ಕಳವಳದಿಂದಲೂ ತಮ್ಮ ಒಬ್ಬ ಅದ್ಭುತ ಕಾರ್ಯಶಕ್ತಿಯುಳ್ಳ ಅನುಯಾಯಿ ಮಿತ್ರನ ಮೇಲಿನ ಪ್ರೇಮದಿಂದಲೂ ಅಂತಃಕರಣವು ತುಂಬಿ ಬಂದು ಶ್ರೀ ರಾಯರೊಂದಿಗೆ ದೇಶಸೇವೇಚ್ಛುಗಳಿಗೆ ಅತ್ಯಂತ ಮಹತ್ವದ ವಿಚಾರಗಳ ಚರ್ಚೆಯನ್ನು ಆರಂಭಿಸಿದರು.

ಲೋಕಮಾನ್ಯ:- ಇಂದಿನ ಸಭೆಗೆ ಹೆಚ್ಚಾಗಿ ಯಾವ ಜನರು ಬಂದಿದ್ದರು?

ರಾಯರು:- ಲಿಂಗವಂತರು.

ಲೋಕಮಾನ್ಯ:- ಯಾವ ಪ್ರಾಂತದಲ್ಲಿ ಸಾರ್ವಜನಿಕ ಚಳವಳಿಯನ್ನು ಮಾಡಬೇಕೆಂದು ನಿಮ್ಮ ಮನಸ್ಸಿನಲ್ಲಿದೆ?

ರಾಯರು:- ಅರ್ಥಾತ್ ಇದೇ ಈ ಕರ್ನಾಟಕದಲ್ಲಿ.

ಲೋಕಮಾನ್ಯ:- ಹಾಗಿದ್ದ ಪಕ್ಷದಲ್ಲಿ ನೀವು ಎರಡು ಸಂಗತಿಗಳನ್ನು ಆಚರಣೆಯಲ್ಲಿ ತರಲಿಕ್ಕೆಬೇಕು. ನೀವು ಮಾಡತಕ್ಕ ಮೊಟ್ಟ ಮೊದಲನೆಯ ಮಾತೇನೆಂದರೆ: ವೀರಶೈವ ಧರ್ಮದ ಉದ್ಗ್ರಂಥಗಳನ್ನು ಚೆನ್ನಾಗಿ ಪರಿಶೀಲಿಸಿ, ಆ ಧರ್ಮದ ಉದಾರತತ್ವಗಳ ಅಭ್ಯಾಸವನ್ನು ಆದರ ಪ್ರೀತಿಪೂರ್ವಕವಾಗಿ ನಡೆಯಿಸಿರಿ. ಹೀಗೆ ಮಾಡುವುದರಿಂದ ಆ ಜನಾಂಗದ ಬಗ್ಗೆ - ಆ ಜಾತಿಯ ಬಗ್ಗೆ ನಮ್ಮಲ್ಲಿ ಪ್ರೀತಿ ವಿಶ್ವಾಸಗಳುಂಟಾಗಿ ನಮ್ಮ ಕಾರ್ಯಕ್ಕೆ ಅವರ ಸಹಾನುಭೂತಿ ಸಹಕಾರವೂ ದೊರೆಯುವುದು. ಇಲ್ಲದಿದ್ದರೆ ನಿರರ್ಥಕವಾಗಿ ಪರಸ್ಪರರಲ್ಲಿ ತಪ್ಪು ತಿಳುವಳಿಕೆಗಳುಂಟಾಗುವವು. ಶ್ರೀ ಪಾಠಕ ಎಂಬವರಿಗೆ ಜೈನಧರ್ಮದ ತತ್ವಜ್ಞಾನವು ಚೆನ್ನಾಗಿ ಗೊತ್ತಿರುವುದರಿಂದ ಅವರ ವಿಷಯಕ್ಕೆ ಆ ಜನರಲ್ಲಿ ಎಷ್ಟು ಪೂಜ್ಯ ಬುದ್ಧಿಯಿದೆಯೆಂಬುದನ್ನು ನಾನು ಬಲ್ಲೆ. ನೀವು ಕೈಕೊಳ್ಳತಕ್ಕ ಇನ್ನೊಂದು ಸಂಗತಿ: ನೀವು ಕನ್ನಡದಲ್ಲಿ ಮಾತನಾಡಲಿಕ್ಕೆ ಬೇಕು. ಏಕೆಂದರೆ ನಾವು ಯಾವ ಜನರನ್ನು ತಿದ್ದಿ ತಿಳಿಹೇಳಿ ಮೇಲಕ್ಕೆ ತರಬೇಕೆನ್ನುತ್ತಿರುವೆವೊ ಆ ಜನರ ಭಾಷೆಯು ನಮಗೆ ಬಾರದಿದ್ದರೆ ಹೇಗೆ? ಆದಕಾರಣ ಕನ್ನಡದ ಜ್ಞಾನವು ನಿಮಗೆ ಅತ್ಯಂತ ಆವಶ್ಯಕವಾಗಿದೆ.

ಮರುದಿನ ಬೈಲಹೊಂಗಲದಲ್ಲಾದ ಲೋಕಮಾನ್ಯರ ಭಾಷಣದ ಇತ್ಯರ್ಥವನ್ನು ಕನ್ನಡದಲ್ಲಿ ಶ್ರೀ ರಾಯರೇ ಹೇಳಿದರು. ಅವರ ಕನ್ನಡ ಭಾಷಣವನ್ನು ಕೇಳಿ ಸಭಿಕರಲ್ಲುಂಟಾದ ಆವೇಶ ಉತ್ಸಾಹಗಳನ್ನು ನೋಡಿ ಲೋಕಮಾನ್ಯರೂ ಹಿಗ್ಗಿದರು.

೭. ಭಾಷಾಭಿಮಾನ

ಹಿಂದುಸ್ತಾನದ ಅನೇಕ ಪ್ರಾಂತಗಳಲ್ಲಿ ಲೋ. ಟಿಳಕರು ಎಷ್ಟು ವರ್ಷಗಳವರೆಗೆ ನಾ. ಗೋಖಲೆ, ಸುರೇಂದ್ರನಾಥ ಬ್ಯಾನರ್ಜಿ ಮೊದಲಾದವರಷ್ಟು ಪ್ರಖ್ಯಾತರಾಗಿರಲಿಲ್ಲ; ಇದಕ್ಕೆ ಕಾರಣವು ಲೋಕಮಾನ್ಯರ ಸ್ವಭಾಷಾಭಿಮಾನವೇ, ಇಂಗ್ರೇಜಿಯಲ್ಲಿ ಲೇಖ ಬರೆಯುವುದರಿಂದಲೂ ಉಪನ್ಯಾಸ ಮಾಡುವುದರಿಂದಲೂ

ಸಿಕ್ಕುವಷ್ಟು ಪ್ರಸಿದ್ಧಿಯು ದೇಶಭಾಷೆಯ ಮುಖಾಂತರ ಕೆಲಸ ಮಾಡುವುದರಿಂದ ದೊರೆಯಲಾರದೆಂದು ಬೇರೆ ಹೇಳಬೇಕಾಗಿಲ್ಲ. ಕೀರ್ತಿ, ಖ್ಯಾತಿ ಬೆಳೆಯುವ ಮಾತಂತೂ ಒತ್ತಟ್ಟಿಗಿರಲಿ, ಲೋಕಮಾನ್ಯರು ಮರಾಠಿ ಭಾಷೆಯ ಮೂಲಕವಾಗಿಯೆ ಮುಖ್ಯವಾಗಿ ತಮ್ಮ ಎಲ್ಲ ಕಾರ್ಯವನ್ನು ಮುಂದುವರಿಸಿದುದರಿಂದ ಅವರ ಬಗ್ಗೆ ಅನೇಕ ತಪ್ಪುಕಲ್ಪನೆಗಳನ್ನು ಹಬ್ಬಿಸಲಿಕ್ಕೆ ಅವರ ವಿರೋಧಿಗಳಿಗೆ ಅನುಕೂಲವಾಯಿತು. ಆದರೂ ತಾವು ಕೈಕೊಂಡ ಕೆಲಸವು ಸತ್ಯವಾಗಿದ್ದರೆ ಅದು ಯಶಸ್ವಿಯಾಗಲಿಕ್ಕೇಬೇಕು ಎಂಬ ಆತ್ಮವಿಶ್ವಾಸದಿಂದ ದೇಶಸೇವೆಯನ್ನು ನಡೆಸಿದ್ದರು. ಈ ಸಂಬಂಧದಿಂದಲೆ ಒಮ್ಮೆ ಮಾತಿಗೆ ಮಾತು ಬಂದಾಗ ದೇ. ಭ. ಕಾಕಾ ಕಾಲೇಲಕರರೆದುರು ಲೋಕಮಾನ್ಯರು ನುಡಿದಿದ್ದೇನಂದರೆ:

'ನಾನು ಕೇಸರೀ ಪತ್ರವನ್ನು ಕೈಕೊಂಡಾಗ ದೇಶಭಾಷೆಯಲ್ಲಿ ಏಕೆ ವರ್ತಮಾನಪತ್ರವನ್ನು ಆರಂಭಿಸುವಿರಿ, ನಿಮ್ಮ ಪತ್ರಿಕೆಯನ್ನು ಯಾರೂ ಕೇಳಲಿಕ್ಕೂ ಇಲ್ಲ ಎಂದು ಜನರು ಆಡಹತ್ತಿದರು. ಆದರೆ, ನಾವು ದೃಢನಿಶ್ಚಯವನ್ನು ಪ್ರಕಟಿಸಿದೆವು. ಆಗ ಅವರು, 'ಹಾಗಾದರೆ ಕೊನೆಗೆ ಎರಡು ಕಾಲಮಗಳನ್ನಾದರೂ ಇಂಗ್ರೇಜಿ ಲೇಖನಗಳಿಗಾಗಿ ಕಾದಿಡಿರಿ' ಎಂದು ಆಗ್ರಹಪಡಿಸಿದರು. ಆದರೆ, ನಾವು ಇದು ಸಾಧ್ಯವೇ ಇಲ್ಲ; ಕೇಸರಿಯು ಜನರ ಸಲುವಾಗಿ ಇದೆ; ಆದಕಾರಣ ಜನರು ಕೇಸರಿಯ ಸ್ವಾಗತವನ್ನು ಮಾಡಿಯೇ ಮಾಡುವರು ಎಂದು ಸ್ಪಷ್ಟವಾಗಿ ಹೇಳಿದೆವು. ಅದರಂತೆ ಇಂದು ಮರಾಠಾ ಎಂಬ ಇಂಗ್ಲಿಷ ಪತ್ರಿಕೆಯನ್ನು ಕೇಸರಿಯ ಉತ್ಪನ್ನಿನೊಳಗಿಂದ ನಡೆಸಬೇಕಾಗುತ್ತಿದೆ. ಕೇಸರಿಯನ್ನು ಮೊದಲು ಮಾಡಿದಾಗ ಹೊಸಭಾಷೆಯನ್ನೇ ಉಂಟುಮಾಡಬೇಕಾಯಿತು. ರಾಜಕೀಯ ವಿಷಯದ ಪರಿಭಾಷೆಯನ್ನು ಸಿದ್ಧಪಡಿಸಬೇಕಾಯ್ತು. ಹಳೆಯ ಮರಾಠಿಯಲ್ಲಿ ಭಕ್ತಿ ಮತ್ತು ವೇದಾಂತವಿದೆ; ಲಾವಣಿಕಾರರು ಮತ್ತು ಗೊಂದಲಿಗರು ಅದರಲ್ಲಿ ವೀರರಸದ ಮಾತುಗಳನ್ನು ತಂದರು; ಆದರೆ, ರಾಜ್ಯಕಾರ್ಯದ ಗಂಭೀರವಾದ ಚರ್ಚೆ, ವಾದವಿವಾದ, ವಿನೋದ ಉಪಹಾಸ, ಮೊನೆಮಾತು, ಮೂದಲಿಸುವ ಮಾತು, ಇವೆ ಮೊದಲಾದವುಗಳನ್ನೆಲ್ಲ ಮಾಡಲು ನಮಗೆ ಹೊಸದಾಗಿ ಭಾಷೆಯನ್ನೇ ನಿರ್ಮಿಸಬೇಕಾಯಿತು. ಯಾವ ಮನುಷ್ಯನಲ್ಲಿ ಉತ್ಕಟ ಇಚ್ಛಾಶಕ್ತಿಯು ಇರುವದೊ ಅವನು ಸಹಜವಾಗಿ ಭಾಷೆಯನ್ನು ನಿರ್ಮಿಸಬಲ್ಲನು.'

ಲೋಕಮಾನ್ಯರ ಈ ನುಡಿಗಳನ್ನು ಕೇಳಿಕೊಂಡಬಳಿಕ ಶ್ರೀ ಕಾಲೇಲಕರರೂ ಈ ವಿಷಯದಲ್ಲಿ ತಾವು ಕಣ್ಣಾರೆ ಕಂಡ ಮಹಾತ್ಮ ಗಾಂಧಿಯವರ ಉದಾಹರಣವನ್ನು ಹೇಳಿ ಆ ಮಾತನ್ನೇ ಪುಷ್ಟೀಕರಿಸಿದರು. ಅವರು ಅಂದುದೇನೆಂದರೆ:

'ಅಹುದು ತಾವು ಹೇಳಿದುದು ಅಕ್ಷರಶಃ ಸತ್ಯವಾಗಿದೆ. ಗಾಂಧಿಯವರೇನು ಗುಜರಾಥಿಯ ಮಹಾ ಪಂಡಿತರಲ್ಲ. ಆದರೂ ಅವರು ಗುಜರಾಥಿಯಲ್ಲಿ ನವಜೀವನವನ್ನೇ ಎರೆದಿದ್ದಾರೆ. ಅವರ ಲೇಖನ ಭಾಷಣಗಳಿಂದ ಗುಜರಾತಿಯು ಒಂದು ವೀರಜನಾಂಗದ ವೀರವಾಣಿ ಎನಿಸಿಕೊಳ್ಳುತ್ತಿದೆ.' ಆಗ ಅದಕ್ಕೆ "ನಿಜ; ನಾನದನ್ನು ನೋಡಿದ್ದೇನೆ" ಎಂದು ಲೋಕಮಾನ್ಯರೂ ತಲೆದೂಗಿ ಮುಂದೆ ನುಡಿದುದೇನಂದರೆ: 'ನನಗೆ ಗುಜರಾಥಿ ಮಾತನಾಡಲು ಬರುವದಿಲ್ಲ; ಆದರೆ ಅಚ್ಚಾದುದನ್ನು ಓದಬಲ್ಲೆ.'

೮. ಆತ್ಮವಿಶ್ವಾಸ

೧೯೦೭ರಲ್ಲಿ ಸೂರತ್ ಕಾಂಗ್ರೆಸ್ಸಿನ ಸಮಯ. ಮಹಾಸಭೆಯ ಮುನ್ನಾದಿನ ರಾತ್ರಿ ಒಬ್ಬ ಅನುಯಾಯಿಯು ಲೋಕಮಾನ್ಯರ ಹತ್ತರ ಬಂದು, ನಾಳೆ ತಮಗೆ ಹೊಡೆಯಬೇಕೆಂದು ಕೆಲವರು ಹೊಂಚುಹಾಕಿದ್ದಾರೆ. ಆದಕಾರಣ ಅದಕ್ಕೆ ಪ್ರತಿಯಾಗಿ ಏನು ಉಪಾಯ ಮಾಡಬೇಕೆಂಬುದರ ಅಪ್ಪಣೆಯಾಗಲಿ, ಎಂದು ಬಿನ್ನವಿಸಿದನು. ಆಗ ಲೋಕಮಾನ್ಯರು ತಟ್ಟನೆ ನುಡಿದುದೇನಂದರೆ, "ಹೊಡೆಯಲಿ; ಕೈಯಾರೆ ಹೊಡೆಯಲಿ; ನಾನು ಕೈಕೊಂಡಿರುವುದು ಸತ್ಕಾರ್ಯವು. ನನಗೆ ಹೊಡೆಯುವ ಶಕ್ತಿ ಅದಾವನಿಗೆ? ನಮ್ಮ ಸಂರಕ್ಷಣೆಯನ್ನು ಮಾಡುವುದಕ್ಕೆ ಪರಮೇಶ್ವರನು

ಸಿದ್ಧನಿದ್ದಾನೆ." ಮರುದಿನ ಹೊಂಬುಗಾರರು ಮಂಟಪದಲ್ಲಿ ಹೊಕ್ಕು ಪುಂಡಾಟಕ್ಕೆ ಆರಂಭಿಸಿದರು. ಲೋಕಮಾನ್ಯರಿಗೆ ಎಲ್ಲರೂ ಬೇಡಿಕೊಂಡರು, ಮಹಾಸ್ವಾಮಿ, ಹಿಂಭಾಗದಲ್ಲಿ ಬಿಡಾರಕ್ಕೆ ನಡೆಯಿರೆಂದು. ಲೋಕಮಾನ್ಯರು ಧೀರ ಗಂಭೀರ ವೃತ್ತಿಯಿಂದ ವ್ಯಾಸಪೀಠದ ಮೇಲೆಯೆ ನಿಂತು 'ನಾನು ಹೆಂಗಸರ ಬಾಗಿಲಿನಿಂದ ಓಡಿ ಹೋಗುವವನಲ್ಲ. ಈಶ ಸಂಕಲ್ಪವಿದ್ದಂತೆ ಆಗುವುದು ಆಗಲಿ" ಎಂದು ಹೇಳಿದರು.

೯. ಬುದ್ಧಿವಂತಿಕೆ

ಲೋಕಮಾನ್ಯರ ಹಿರಿಮಗನು ವಿಶ್ವನಾಥರಾಯನು ೧೯೦೨ರಲ್ಲಿ ಪ್ರಿವ್ಹಿಯಸ್ ಕ್ಲಾಸಿನಲ್ಲಿದ್ದನು. ಅದೇ ವರ್ಷ ಪ್ರಿನ್ಸಿಪಾಲ ಪರಾಂಜಪೆಯವರು ವಿಲಾಯತಿಯಿಂದ ಸೀನಿಯರ ರ್‍ಯಾಂಗ್ಲರಾಗಿ ಗಣಿತಶಾಸ್ತ್ರದಲ್ಲಿ ಅತಿ ನಿಷ್ಣಾತರೆಂದು ಮಾನ್ಯತೆಯನ್ನು ಪಡೆದು ಬಂದಿದ್ದರು. ಅವರೆ ಪ್ರಿವ್ಹಿಯಸ್ ಕ್ಲಾಸಿಗೆ ಗಣಿತವನ್ನು ಹೇಳುತ್ತಿದ್ದರು. ಒಂದು ದಿನ ವಿಷಯವನ್ನು ಹೇಳುತ್ತಿರುವಾಗ ಒಂದು ಗಡುಚಾದ ಪ್ರಶ್ನೆಯು ತತ್‌ಕ್ಷಣದಲ್ಲಿ ಪ್ರಿ. ಪರಾಂಜಪೆಯವರಿಗೆ ಬಗೆಹರಿಯಲಿಲ್ಲ. ನಾನು ನಾಳೆ ನೋಡಿಕೊಂಡು ಬಂದು ತಿಳಿಸುವೆನು ಎಂದು ಹೇಳಿ ಪ್ರಿನ್ಸಿಪಾಲರು ಹೊರಟು ಹೋದರು. ಮರುದಿನ ಕ್ಲಾಸಿಗೆ ಬರುವ ಮುನ್ನ ವಿಶ್ವನಾಥರಾಯನು ತಮ್ಮ ತಂದೆಗೆ ಅದೇ ಗಣಿತಪ್ರಶ್ನೆಯನ್ನು ಕೇಳಲು ಟಿಳಕರು ಅದನ್ನು ಮೂರೇ ಮೆಟ್ಟಿನಲ್ಲಿ ಬಿಡಿಸಿದರು. ವಿಶ್ವನಾಥರಾಯನಿಗೆ ಗಣಿತಜ್ಞಾನವು ಅಷ್ಟರಮಟ್ಟಿಗೆ ಇದ್ದುದರಿಂದ ತಂದೆ ಹೇಳಿದುದನ್ನು ಸುಮ್ಮನೆ ಬರೆದಿಟ್ಟುಕೊಂಡನು. ಮರುದಿನ ಕ್ಲಾಸಿನಲ್ಲಿ ಪ್ರಿ. ಪರಾಂಜಪೆಯವರು ಅದನ್ನು ವಿವರಿಸಿ ಹೇಳಿದರು. ಆದರೆ, ಅದನ್ನು ಬಿಡಿಸಲು ಅವರಿಗೆ ಹತ್ತು ಹನ್ನೆರಡು ಮೆಟ್ಟುಗಳು ಬೇಕಾದುವು. ಬಳಿಕ ವಿದ್ಯಾರ್ಥಿಗಳಿಗೆ ನೀವಾರಾದರೂ ಮಾಡಿಕೊಂಡು ಬಂದಿರುವಿರೊ? ಎಂದು ಕೇಳಲು ವಿಶ್ವನಾಥರಾಯನು ನೆಟ್ಟಗೆ ಕರೆಹಲಗೆಯ ಹತ್ತರ ಬಂದು ತಾನು ಬರೆದುಕೊಂಡುದನ್ನೇ ಮತ್ತೆ ಬರೆದಿಟ್ಟನು. ತಾವು ೧೦-೧೨ ಮೆಟ್ಟಿನಲ್ಲಿ ಬಿಡಿಸಿದ ಲೆಕ್ಕವು ಮೂರೇ ಹಾರಿಕೆಯಲ್ಲಿ ಅತಿ ಸುಲಭವಾಗಿ ಬಂದುದನ್ನು ನೋಡಿ ಪ್ರಿ. ಪರಾಂಜಪೆಯ ವರಿಗೆ ಆನಂದವಾಯ್ತು. ಇದನ್ನು ನೀನೇ ಬಿಡಿಸಿರುವೆಯಷ್ಟೆ? ಎಂದು ಕೇಳಿದರು. ವಿಶ್ವನಾಥರಾಯನು ನಿಜಸಂಗತಿಯನ್ನು ಹೇಳಲು "ಸರಿ, ಟಿಳಕರ ಹೊರ್ತು ಬೇರೆಯವರಾರೂ ಇಷ್ಟು ಸುಲಭವಾಗಿ ಬಿಡಿಸಲಾರರು" ಎಂದು ನುಡಿದರು.

೧೦. ಗುಣೀ ಗುಣಿನಂ ವೇತ್ತಿ

ಲೋಕಮಾನ್ಯರಿಗೆ ಪ್ರಿನ್ಸಿಪಾಲ ಪರಾಂಜಪೆ ಪ್ರಭೃತಿಗಳಿಗೂ ಎಣ್ಣೆ-ಸೀಗೆಯಷ್ಟು ಗೆಳೆತನ. ಪ್ರಿ. ಪರಾಂಜಪೆ ಯವರು ಮರ್ಯಾದೆ ಮೀರಿ ಲೋಕಮಾನ್ಯರನ್ನು ನಿಂದಿಸುತ್ತಿದ್ದರು. ಒಮ್ಮೆ ಒಬ್ಬ ಗೃಹಸ್ಥರು ಲೋಕ ಮಾನ್ಯರ ಓಲಗಶಾಲೆಯೊಳಗಿಂದ ಮಾತುಕತೆಗಳನ್ನು ತೀರಿಸಿಕೊಂಡು ಮರಳುವಾಗ ಅಲ್ಲಿ ಅವರ ಕಣ್ಣಿಗೆ ಪ್ರಿ. ಪರಾಂಜಪೆಯವರ ಛಾಯಾಚಿತ್ರದರ್ಶನವಾಯ್ತು. ಅವರು ಕೂಡಲೆ ಸೋಜಿಗಗೊಂಡು ಅದನ್ನೇ ನೋಡುತ್ತ ಅಲ್ಲಿ ನಿಲ್ಲಲು ಲೋಕಮಾನ್ಯರು ಹತ್ತರ ಬಂದು ಏಕೆ ಆಶ್ಚರ್ಯ ಮುದ್ರೆಯಿಂದ ನೋಡುತ್ತಿರುವಿರಿ? ಎಂದು ಕೇಳಿದರು. ಆ ಗೃಹಸ್ಥನು ತಮ್ಮ ಬಲವಾದ ವಿರೋಧಿಗಳಾದ ಈ ಪ್ರಿ. ಪರಾಂಜಪೆಯವರು ಫೋಟೋ ಇಲ್ಲೇಕೆ ಎಂದು ಕೇಳಿದನು. ಟಿಳಕರು ಆತನಿಗೆ "ನೀವು ಜನಗಳು ತಪ್ಪುವುದು ಇಲ್ಲಿಯೆ. ವಿರೋಧಿಯೆಂದು ಅವನ ಗುಣಗ್ರಹಣಕ್ಕೆ ಬಂದ ಅಡ್ಡಿಯೇನು? ನನ್ನ ಮತ್ತು ಅವರ ಮತಭೇದವಿರಬಹುದು. ಆದರೆ, ಅವರ ಸೂಕ್ಷ್ಮಬುದ್ಧಿ, ಸ್ವಾರ್ಥತ್ಯಾಗವು ಸುಳ್ಳೇನು? ಗುಣಕ್ಕೆ ನಾವೆಂದೂ ಮಾತ್ಸರ್ಯ ಮಾಡಲಾಗದು.

ಇದೇ ಮೇರೆಗೆ ನಾ. ಗೋಖಲೆಯವರ ವಿಷಯಕ್ಕೂ ಲೋಕಮಾನ್ಯರ ಅಂತಃಕರಣದಲ್ಲಿ ಆದರ ಪ್ರೀತಿಗಳು ವಾಸವಾಗಿದ್ದುವು. ನಾ. ಗೋಖಲೆಯವರಿಗೂ ಟಿಳಕರಿಗೂ ಇದ್ದ ತೀವ್ರವಾದ ವಿರೋಧವು ಜಗತ್‌ಪ್ರಸಿದ್ಧವೆ ಇದೆ. ಆದರೂ ನಾ. ಗೋಖಲೆಯವರು ದೇಶಹಿತದ ಒಳ್ಳೆಯ ಕೆಲಸವನ್ನು ಮಾಡಿದಾಗೆಲ್ಲ ಅವರನ್ನು ನಿರ್ವಂಚನೆಯಿಂದ ತುಂಬಾ ಹೊಗಳಿ ಲೋಕಮಾನ್ಯರು ಪ್ರಶಂಸಿಸುತ್ತಿದ್ದರು. ಪಬ್ಲಿಕ್ ಸರ್ವಿಸ ಕಮೀಶನದ ಮುಂದೆ ವಿಲಾಯತಿಯಲ್ಲಿ ಬಹಳೇ ಚೆನ್ನಾಗಿ ಸಾಕ್ಷಿಹೇಳಿ ಬಂದುದಕ್ಕೆ ಪ್ರಚಂಡ ಸಭೆ ಕೂಡಿಸಿ ಲೋಕಮಾನ್ಯರು ನಾ. ಗೋಖಲೆಯವರಿಗೆ ಅಭೂತಪೂರ್ವ ಸನ್ಮಾನ ಮಾಡಿದ್ದನ್ನು ನೋಡಿ ಅನೇಕರಿಗೆ ಆಶ್ಚರ್ಯವೆನಿಸಿತು.

ಲೋಕಮಾನ್ಯರ ಕೆಲವು ವಿಚಾರಗಳು

ಅಹಿಂಸಾ ಧರ್ಮದ ದಿಗ್ವಿಜಯ

ಜೈನರ ತತ್ವಜ್ಞಾನವು ಇಂದು ಎಲ್ಲೆಡೆಯಲ್ಲಿಯೂ ಪ್ರಚಾರದಲ್ಲಿ ಇಲ್ಲದಿದ್ದರೂ ಜೈನರ ಅಹಿಂಸಾದಿ ಆಚಾರ ವಿಚಾರಗಳ ಪರಿಣಾಮವು ವೈದಿಕ ಧರ್ಮದ ಮೇಲೆ ಸಂಪೂರ್ಣವಾಗಿ ಆಗಿದೆ. ಶಂಕರಾಚಾರ್ಯರು ಜೈನಮತದ ಖಂಡನೆಯನ್ನು ಮಾಡಿದ್ದರೂ ಜೈನರ ಆಚಾರದ ವರ್ಚಸ್ಸು ಬ್ರಾಹ್ಮಣ ಧರ್ಮದ ಮೇಲಿರುವುದನ್ನು ಒಪ್ಪಿಕೊಂಡೇ ತಮ್ಮ ಕೆಲಸವನ್ನು ಕೊನೆಗಾಣಿಸಿಕೊಳ್ಳಬೇಕಾಯಿತು. ಜೈನರು ವೇದಗಳನ್ನು ಪ್ರಮಾಣ ಗ್ರಂಥಗಳೆಂದು ತಿಳಿಯುವದಿಲ್ಲ. ಶ್ರೌತಧರ್ಮದೊಳಗಿನ ಹಿಂಸೆಯೆ ಇದಕ್ಕೆ ಮೂಲ ಕಾರಣವಿರಲಿಕ್ಕೆ ಬೇಕು; ವೈದಿಕಧರ್ಮ ಪರಂಪರೆಯ ಬಗ್ಗೆ ಅನಾಸ್ಥೆಯಲ್ಲ. ರಾಮಾಯಣ, ಮಹಾಭಾರತ, ಪುರಾಣಾದಿಗಳೊಳಗಿನ ತತ್ವಗಳೂ ನಮ್ಮಂತೆ ಜೈನರಿಗೂ ಮಾನ್ಯವಿರುತ್ತವೆ. ಅಷ್ಟೇಕೆ ಜೈನಧರ್ಮಿಗಳೂ ಆರ್ಯ ಬಾಂಧವರೇ ಆಗಿದ್ದಾರೆ, ಪರದೇಶಿಗಳಿಂದ ಬಂದವರಲ್ಲ. ಒಂದಾನೊಂದು ಸಮಯದಲ್ಲಿ ಜೈನಧರ್ಮಿಗಳು ವೈದಿಕಧರ್ಮವನ್ನೂ, ವೈದಿಕಧರ್ಮಿಗಳು ಜೈನಧರ್ಮವನ್ನೂ ಸ್ವೇಚ್ಛೆಯಿಂದ ಬೇಕಾದಾಗ ಸ್ವೀಕರಿಸುತ್ತಿದ್ದರು. (ಕರ್ನಾಟಕದಲ್ಲಿ ಕದಂಬರು, ಚಾಲುಕ್ಯರು, ಹೊಯ್ಸಳರ ಕಾಲಕ್ಕೆ ಆದ ಇಂಥ ಅನೇಕಾನೇಕ ಉದಾಹರಣಗಳು ಇತಿಹಾಸದಲ್ಲಿ ಸಿಕ್ಕುತ್ತವೆ.- ಲೇಖಕ) ಈ ಪದ್ಧತಿಯು ಇಂದಿಗೂ ಅಲ್ಪ ಸ್ವಲ್ಪ ಉಳಿದಿದೆ. ಕೆಲವು ಜೈನರು ವೈಷ್ಣವರಾದುದನ್ನೂ, ಕೆಲ ವೈಷ್ಣವರು ಜೈನರಾದುದನ್ನೂ ಮೊನ್ನೆ ತಾನೆ ಕೇಳಿದ್ದೇವೆ. ಆದುದರಿಂದ ಇವೆರಡೂ ಧರ್ಮಗಳೊಳಗಿನ ಭೇದವು ರಾಷ್ಟ್ರೀಯ ದೃಷ್ಟಿಯಿಂದ ತೀರ ಗೌಣವಾಗಿದೆ. ಇವೆರಡೂ ಧರ್ಮಗಳು ಒಂದೇ ಶರೀರದ ಎರಡು ಕೈಗಳಂತಿವೆ. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಇವೆರಡೂ ಧರ್ಮಗಳಿಗೆ ಸಮ್ಮತವಾಗಿರುವ ಅಹಿಂಸಾದಿ ತತ್ವಗಳ ಪ್ರಸಾರ ಮಾಡುವ ಕಾರ್ಯವನ್ನು ಇವರಿಬ್ಬರೂ ಒಮ್ಮನಸ್ಸಿನಿಂದ ಕೈಕೊಂಡರೆ ಅಹಿಂಸಾ ಧರ್ಮದ ಧ್ವಜಪತಾಕೆಯು ದಿಗ್ದೇಶಗಳಲ್ಲೆಲ್ಲ ಮೆರೆಯಲಿಕ್ಕೆ ಅದಾವ ಆತಂಕವೂ ಉಂಟಾಗಲಿಕ್ಕಿಲ್ಲ. ಒಂದು ಕಾಲಕ್ಕೆ ಹಿಂದುಸ್ತಾನದಲ್ಲಿ ಇವೆರಡು ಧರ್ಮಗಳಲ್ಲಿ ಸ್ವಲ್ಪ ವಿರೋಧವಿತ್ತು. ಆದರೆ ಆ ವಿರೋಧದಿಂದ ಆಗಬೇಕಾಗಿದ್ದ ಇಷ್ಟ ಪರಿಣಾಮವು ಆಗಿಬಿಟ್ಟಿದೆ; ಈಗ ವೈದಿಕ ಧರ್ಮಿಗಳು ಆಚಾರದಿಂದ ಜೈನ ಧರ್ಮಿಗಳಾಗಿದ್ದಾರೆ; ಜೈನ ಧರ್ಮಿಗಳು ತತ್ವಜ್ಞಾನದಿಂದ ವೈದಿಕ ಧರ್ಮಿಗಳಾಗಿದ್ದಾರೆ. ಆದಕಾರಣ ಈ ನಿಜಸ್ಥಿತಿಯನ್ನು ಮನಗಂಡು ಇಬ್ಬರೂ ತಮ್ಮ ತಮ್ಮ ಏಳ್ಗೆಗಾಗಿ ಸೊಂಟಕಟ್ಟಿದರೆ ಅದು ಕೈಗೂಡಲಿಕ್ಕೇಬೇಕೆಂಬಲ್ಲಿ ಸಂದೇಹವಿಲ್ಲ.

– ಕೇಸರಿ ೧೩-೧೨-೧೯೦೪

ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವು ಬೇಕು

"ಧರ್ಮಶಿಕ್ಷಣವಿಲ್ಲದ್ದರಿಂದ ಸಮಾಜದ ಮೇಲೆ ಅದಾವ ಬಗೆಯ ಪರಿಣಾಮಗಳುಂಟಾಗಿರುವವು ಹಾಗೂ ಬ್ರಿಟಿಶರ ಆಡಳಿತದಲ್ಲಿ ಅದಾವ ಬಗೆಯ ಹೊಸ ಪೀಳಿಗೆಯುಂಟಾಗಿದೆ ಎಂಬುದನ್ನು ಬಿಚ್ಚಿ ಹೇಳುವ ಆವಶ್ಯಕತೆಯಿಲ್ಲ. ಪರಕೀಯ ಸರಕಾರವಿರುವುದರಿಂದಲೂ, ಮೇಲಾಗಿ ಪರಧರ್ಮೀಯ ಸರಕಾರವೂ ಆಗಿರುವುದರಿಂದಲೂ ಧಾರ್ಮಿಕ ಶಿಕ್ಷಣಕ್ಕೆ ಅನುಕೂಲತೆಗಳನ್ನು ಅದು ಕಲ್ಪಿಸಿಕೊಡಲಾರದು; ಇದನ್ನು ನಾವೇ ಮಾಡಲಿಕ್ಕೆಬೇಕು. ಧಾರ್ಮಿಕ ಶಿಕ್ಷಣದ ಎರಡು ಅಂಗಗಳಿವೆ. ಬುದ್ಧಿಗ್ರಾಹ್ಯ ಶಿಕ್ಷಣವು ಅದರ ಒಂದಂಗವಾಗಿದೆ. ಆದರೆ, ಇಷ್ಟರಿಂದಲೆ ಬಗೆಹರಿಯಲಾರದು. ಯಾವ ಧರ್ಮಶಿಕ್ಷಣದಿಂದ ಮನುಷ್ಯನು ಸ್ವಾಭಿಮಾನಿಯೂ ಶ್ರದ್ಧಾವಂತನೂ, ಕರ್ತವ್ಯದಕ್ಷನೂ, ಸತ್ಯನಿಷ್ಠನೂ ಆಗುವನೊ ಅದುವೆ ನಿಜವಾದ ಧರ್ಮಶಿಕ್ಷಣ ಮತ್ತು ವಿದ್ಯಾರ್ಥಿಗಳಿಗೆ ಅತ್ಯಂತ ಆವಶ್ಯಕವಾಗಿರುವುದು ಈ ಬಗೆಯ ಶಿಕ್ಷಣವೇ. ಕೇವಲ ತಾತ್ವಿಕ, ಔಪಪತ್ತಿಕ ವಿಚಾರಗಳನ್ನು ಅವರು ದೊಡ್ಡವರಾದ ಬಳಿಕ ತಾವೇ ಆಳವಾಗಿ ಓದಿಕೊಳ್ಳಬಹುದು. ಚಿಕ್ಕಂದಿನಲ್ಲಿ ಕೋಮಲವಾದ ಅಂತಃಕರಣದಲ್ಲಿ ಸದಾಚಾರ, ಸ್ವಾಭಿಮಾನ ಮತ್ತು ಸ್ವಧರ್ಮ ನಿಷ್ಠೆಗಳ ಬೀಜಾರೋಪಣವು ಆದರೇನೇ ಮುಂದೆ ಮನುಷ್ಯನ ನಡೆನುಡಿಗಳಲ್ಲಿ ಅದರ ಸುಪರಿಣಾಮಗಳು ಕಂಡುಬರುವವು. ಆದುದರಿಂದಲೇ ಶಾಲೆಗಳಲ್ಲಿ ಆವಶ್ಯಕವಾದ ಧರ್ಮಶಿಕ್ಷಣವು ಬೇಕೇಬೇಕು. ಧಾರ್ಮಿಕ ಶಿಕ್ಷಣವನ್ನು ಕೊಡುವ ಅನೇಕ ಬಗೆಗಳಿದ್ದರೂ ಅವೆಲ್ಲವುಗಳಲ್ಲಿ ಶಿಕ್ಷಕರ ಆಚರಣದ ಆದರ್ಶವು ಸರ್ವೋತ್ಕೃಷ್ಟವಾಗಿದೆ.

ಮೂರ್ತಿಪೂಜೆ

ಪ್ರಾಚೀನ ಕಾಲದಲ್ಲಿ ಇಂದ್ರ, ಸೂರ್ಯ, ವಾಯು, ಅಗ್ನಿ, ಮೇಘ ಮೊದಲಾದವುಗಳ ಆರಾಧನೆಯು ನಡೆಯುತ್ತಿತ್ತು; ಮುಂದೆ ಸರ್ವಶಕ್ತಿಮಂತನಾದ ಪರಮೇಶ್ವರನು ಒಬ್ಬನೇ ಇದ್ದು ಆತನ ಅಂಶ ರೂಪಗಳೇ ಅಗ್ನಿ, ವಾಯು ಮೊದಲಾದವುಗಳೆಂಬ ಕಲ್ಪನೆಯು ತಲೆದೋರಿತು. ಬರಬರುತ್ತ ಈ ದೇವತೆಗಳ ಗುಡಿಗಳು ಅಸ್ತಿತ್ವದಲ್ಲಿ ಬಂದವು. ಅಗಸ್ತ್ಯಋಷಿಯ ಆಶ್ರಮದಲ್ಲಿ ಶ್ರೀರಾಮಚಂದ್ರನು ಹೋದಾಗ ಅಲ್ಲಿ ಅಗ್ನಿ ಮೊದಲಾದ ದೇವತೆಗಳ ಸ್ಥಾನಗಳನ್ನು ಕಂಡ ಉಲ್ಲೇಖವಿದೆ. ಇದರಿಂದ ರಾಮಾಯಣ ಕಾಲದಲ್ಲಿ ದೇವಾಯತನಗಳಿದ್ದುವೆಂದು ಸಿದ್ಧವಾಗುತ್ತದೆ. ಮನುಸ್ಮೃತಿಯಲ್ಲಿಯೂ ದೇವಾಲಯಗಳ ವಿಚಾರವು ಬಂದಿದೆ. ಇತರ ರಾಷ್ಟ್ರಗಳಲ್ಲಿಯೂ ಮೂರ್ತಿಪೂಜೆಯು ಅತಿ ಪ್ರಾಚೀನ ಕಾಲದಿಂದ ನಡೆದುಬಂದುದಿದೆ. ಇಜಿಪ್ತಿನಲ್ಲಿ ಐದು ಸಾವಿರ ವರ್ಷಗಳ ಮೊದಲು ಕಟ್ಟಲ್ಪಟ್ಟ ಸೂರ್ಯನ ದೇವಾಲಯವಿದೆ. ಮಹಮ್ಮದ ಮತ್ತು ಕ್ರಿಸ್ತನ ಅನುಯಾಯಿಗಳು ಮೂರ್ತಿಪೂಜಕರಲ್ಲ, ಆದರೆ ಒಂದು ದೃಷ್ಟಿಯಿಂದ ಅವರೂ ಮೂರ್ತಿಪೂಜಕರೇ ಆಗಿದ್ದಾರೆ. ವೇದಕಾಲದಲ್ಲಿ ಅಖಿಲ ವಿಶ್ವವೆಲ್ಲವೂ ಪರಮಾತ್ಮನ ಬಾಹ್ಯಶರೀರವೆಂಬ ಕಲ್ಪನೆಯಿತ್ತು; ಮತ್ತು ಅದರ ಆರಾಧನೆಯೆಂದರೇನೆ ಮೂರ್ತಿಪೂಜೆಯು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ವಿಶ್ವರೂಪದರ್ಶನ ಮಾಡಿಸಿದ ಉಲ್ಲೇಖವಿದೆ. ಅದರಂತೆ ಪುರುಷಸೂಕ್ತ ಮತ್ತು ಆರಣ್ಯಕಗಳಲ್ಲಿಯೂ ಇದೆ. ಮೂರ್ತಿಪೂಜೆಗೆ 'ಪ್ರತೀಕ'ವೆಂದು ಉಪನಿಷತ್ತುಗಳಲ್ಲಿ ಹೇಳಿದೆ. ಪ್ರತೀಕವೆಂದರೆ ಪ್ರತಿನಿಧಿ. ಎಲ್ಲ ವಿಶ್ವವನ್ನು ಕಣ್ಣೆದುರಿಟ್ಟುಕೊಳ್ಳುವುದು ಅಸಾಧ್ಯವಾಗಿರುವುದರಿಂದ ಅದರ ಒಂದಂಶವನ್ನು ಮುಂದಿರಿಸಿಕೊಳ್ಳುವುದು ಈ ತೆರನಾಗಿ ಮೂರ್ತಿಪೂಜೆಯ ಕಲ್ಪನೆಯು ತಲೆದೋರಿತು. ವೈಸರಾಯನೆಂದರೆ ಬಾದಶಹನಲ್ಲ, ಅವನ ಪ್ರತಿನಿಧಿಯು ಹೇಗೊ ಹಾಗೆಯೇ ಸರ್ವವ್ಯಾಪಿಯಾದ ಪರಮಾತ್ಮನ ಪ್ರತಿನಿಧಿಯೆ ಮೂರ್ತಿಯು. ಮೂರ್ತಿಪೂಜೆಯಲ್ಲಿ ಹಲಕೆಲವು ಸಾಂಕೇತಿಕ ಚಿಹ್ನಗಳೂ ಇವೆ. ಈಸ್ಟ ಇಂಡಿಯಾ ಕಂಪನಿಯ ಹಳೆಯ ಬಿಲ್ಲಿಯ ಮೇಲಿನ ತಕ್ಕಡಿಯು ಅದರ ಸಂಕೇತವಿರುವಂತೆ ಶ್ರೀ ವಿಷ್ಣುದೇವರ ಕೈಯಲ್ಲಿ ಚಕ್ರವಿದೆ.

ಪರಮಾತ್ಮನ ಕೈಯಲ್ಲಿ ಅವ್ಯಾಹತವಾಗಿ ತಿರುಗುತ್ತಿರುವ ಕಾಲಚಕ್ರದ ಸೂಚಕವಾಗಿದೆ ಅದು. ಮೂರ್ತಿಯು ಪರಮಾತ್ಮನ ಚಿತ್ರವು ಅಥವಾ ಪ್ರತಿನಿಧಿಯಾಗಿದೆ ಎಂದು ಮನವರಿಕೆಯಾದ ಬಳಿಕ ಮೂರ್ತಿಪೂಜೆಯನ್ನು ಮಾಡುವುದರಲ್ಲಿ ಪಾತಕವಿಲ್ಲ. ಮೂರ್ತಿಪೂಜೆಯನ್ನು ಹಲವು ಬಗೆಗಳಿಂದ ಮಾಡಬಹುದು. ದೇವದೇವನ ಸ್ತುತಿಸ್ತೋತ್ರಗಳನ್ನಷ್ಟು ಹೇಳಿದರೆ ಸಾಕು; ಅವನಿಗೆ ನೈವೇದ್ಯಾದಿ ಉಪಚಾರಗಳೇತಕ್ಕೆ? ಎಂದು ಕೆಲವರ ಆಕ್ಷೇಪ. ಹಾಗಾದರೆ ಆ ದೇವನಿಗೆ ಸ್ತುತಿಯಾದರೂ ಏತಕ್ಕೆ ಬೇಕೆಂದು ನನ್ನ ಪ್ರಶ್ನೆ. ಸ್ತುತಿಯಂತೆ ಇನ್ನುಳಿದ ಅನೇಕ ಉಪಚಾರಗಳನ್ನೂ ಮಾಡುವುದುಂಟು. ಇಂತಹ ಅನೇಕ ಉಪಚಾರಗಳಲ್ಲಿ ಮನಸ್ಸು ತೊಡಗಿ ಅಂತಃಕರಣವು ಉಲ್ಲಸಿತವಾಗಿ ಭಕ್ತಿಯು ಹೆಚ್ಚುವುದು. ಒಮ್ಮೆ ಮೂರ್ತಿಯ ಕಲ್ಪನೆಯು ಬೇರು ಹಿಡಿದ ಬಳಿಕ ಉಪಾಸಕರ ರುಚಿಭೇದದಂತೆ ಬಗೆಬಗೆಯ ದೈವತಗಳು ರೂಡಿಯಲ್ಲಿ ಬಂದುವು. ಮೂರ್ತಿಗಳು ಮುಖ್ಯವಾಗಿ ಮೂರು ಪ್ರಕಾರದವು: ೧) ಅವತಾರಿಕ ಪುರುಷರ ಪ್ರತಿಮೆಗಳು ೨) ಸೂರ್ಯ, ಚಂದ್ರ, ಬೃಹಸ್ಪತಿ ಮೊದಲಾದವರ ಪ್ರತಿಮೆಗಳು ೩) ಸಾಂಕೇತಿಕ ಚಿಹ್ನಗಳು (Symbols). ಗಣಪತಿಯ ಮೂರ್ತಿಯು ಸಾಂಕೇತಿಕ ವರ್ಗದೊಳಗಿನದು. ಮುದ್ಗಲ ಪುರಾಣದಲ್ಲಿ ಗಣಪ್ಪನಿಗೆ ಆನೆಯ ಸೊಂಡೆಯೇಕೆ ಬಂದಿತೆಂದು ಹೇಳಿದೆ. ಆದರೆ, ನಾನು ಆ ದೃಷ್ಟಿಯಿಂದ ನೋಡದೆ ತಾತ್ವಿಕ ದೃಷ್ಟಿಯಿಂದ ವಿಚಾರಿಸುತ್ತೇನೆ. ಗಣಪ್ಪನ ಸೊಂಡಿಯು ವಿದ್ಯೆಯ ಸೂಚಕವಾಗಿದೆ. ವಿದ್ಯೆಯ ಅಧ್ಯಕ್ಷ ಓಂ ಕಾರವು. ಅದನ್ನು ಮೂರ್ತಿಕರಿಸಬೇಕಾಗಿದ್ದರೆ ಸೊಂಡಿಲಿನ ರೂಪದಿಂದಲೆ ಅದನ್ನು ತೋರಿಸುವುದು ಅಗತ್ಯವಿದೆ. "ಸರ್ವೇಷು ಗಾತ್ರೇಷು ಶಿರಃ ಪ್ರಧಾನಮ್." ಆದುದರಿಂದಲೆ ಓಂಕಾರವನ್ನು ಅಲ್ಲಿ ಇಟ್ಟಿದ್ದಾಗಿದೆ. ಜ್ಞಾನವೇ ಶಕ್ತಿ. ಇಂಗ್ಲಿಷಿನಲ್ಲಿ "Knowledge is Power" ಎಂದು ಗಾದೆಯಿದೆ. ಇದರ ನಿದರ್ಶಕವೆಂದರೆ ಗಣೇಶನ ಮೂರ್ತಿ. ಜ್ಞಾನವಿದ್ದಲ್ಲಿ ಬುದ್ಧಿ ಸಿದ್ಧಿಗಳಿವೆ. ಇದರ ಸೂಚಕವೆಂದೇ ಗಣೇಶನ ಇಕ್ಕೆಲದಲ್ಲಿ ಎರಡು ಹೆಣ್ಣು ಮೂರ್ತಿಗಳು. ವೇದಗಳಲ್ಲಿ ಪರಮಾತ್ಮನ ಸೂಚಕವೆಂದು ಓಂಕಾರವು ಹೇಳಲ್ಪಟ್ಟಿದೆ. ಇಲಿಯು ವಿಘ್ನ ಸೂಚಕವಾಗಿದೆ. ಅಂಕುಶ, ಪರಶುಗಳಾದರೂ ಇದೇ ಮೇರೆಗೆ ಸಾಂಕೇತಿಕ ಚಿಹ್ನಗಳಾಗಿವೆ. ಇನ್ನು ಚತುರ್ಥಿಯ ದಿನದಲ್ಲಿಯೇ ಗಣಪ್ಪನ ಪೂಜೆ ಏಕೆ? ಜಾಗೃತಿ, ಸ್ವಪ್ನ ಅಥವಾ ಸುಷುಪ್ತಾವಸ್ಥೆಯಲ್ಲಿ ಪೂಜೆಯನ್ನು ಮಾಡುವುದಕ್ಕಿಂತ ಚತುರ್ಥಾವಸ್ಥೆಯಲ್ಲಿ ಅಂದರೆ ತುರ್ಯ ಸ್ಥಿತಿಯಲ್ಲಿ ಪೂಜಿಸುವುದು ಉತ್ತಮವೆಂದು ಚತುರ್ಥಿಯ ದಿನ ಗಣೇಶ ಪೂಜೆಯನ್ನು ಮಾಡುವ ಸಾಂಪ್ರದಾಯವುಂಟಾಗಿರಬೇಕು. ಅರ್ಧಚಂದ್ರನನ್ನು ನೋಡಬಾರದೆಂಬ ರೂಢಿಯೇಕೆ ಉಂಟಾಗಿರಬಹುದು. ಮನಸ್ಸು ಚಂಚಲ ಸ್ವಭಾವವುಳ್ಳುದು; 'ಚಂದ್ರಮಾ ಮನಸೋ ಜಾತಃ': ಇತ್ಯಾದಿ ವಚನಗಳಿಂದ ಚಂದ್ರನು ಪರಮಾತ್ಮನ ಮನಸ್ಸು; ಆದಕಾರಣ ಚಂಚಲ ಸ್ವಭಾವವು ಮನಸ್ಸಿನ ಕಡೆಗೆ ಗಮನಿಸದೆ ಪರಮಾತ್ಮನ ವಿಶ್ವರೂಪವನ್ನೇ ನಿರೀಕ್ಷಿಸಬೇಕು, ಧ್ಯಾನಿಸಬೇಕು ಎಂಬ ಉದ್ದೇಶವು ಇದರಲ್ಲಿರಬೇಕೆಂದು ಗೊತ್ತಾಗುತ್ತದೆ.

'ಸ್ವದೇಶಿ,' ಮತ್ತು 'ಬಹಿಷ್ಕಾರ' ಚಳವಳಿ

ಇದನ್ನು ಕುರಿತು ಲೋಕಮಾನ್ಯರ ವಿಚಾರಗಳು ಎಷ್ಟು ಓಜಸ್ವಿಯಾಗಿದ್ದುವೆಂಬುದು ಕೆಳಗಿನ ಉಲ್ಲೇಖಗಳಿಂದ ಕಂಡುಬರುವಂತಿದೆ.

> ಹಿಂದುಸ್ತಾನದಲ್ಲಿ ಇಂಗ್ಲಿಷ್ ಅಧಿಕಾರಿಗಳಿಗೆ ತಮ್ಮ ರಾಜ್ಯವು ಹೋದೀತೆಂಬ ಹೆದರಿಕೆಯೆ ಇಲ್ಲದಾಗಿದೆ; ಆದಕಾರಣ ಆಳರಸರು ನಮ್ಮ ಬಿನ್ನಹ, ಬೇಡಿಕೆಗಳಿಗೆ ಎಳ್ಳಷ್ಟೂ ಬೆಲೆಯನ್ನು ಕೊಡುವದಿಲ್ಲ. ಇಷ್ಟು ಹೆಮ್ಮೆ ಬಂದು ಬಿಟ್ಟಿದೆ ಅವರಿಗೆ. ಇವರನ್ನು ಚೆನ್ನಾಗಿ ಎಚ್ಚರಿಸಲಿಕ್ಕೆ ನಮ್ಮ ಹತ್ತರ ಒಂದೇ ಸಾಧನವಿದೆ; ಅದುವೆ ಬಹಿಷ್ಕಾರ. ನಾವು ಸದ್ಯಸ್ಥಿತಿಯಲ್ಲಿ ಎಲ್ಲ ವಿದೇಶಿ ವಸ್ತುಗಳನ್ನೂ ಬಹಿಷ್ಕರಿಸುವುದು ಕಷ್ಟ. ಆದರೂ ಅತ್ಯಂತ ಆವಶ್ಯಕವೇ ಆಗಿರುವ ವಿದೇಶೀಯ ವಸ್ತುಗಳನ್ನು ಕೊಳ್ಳುವಾಗ ಒಂದು

ಮಾತನ್ನಾದರೂ ನೆನಪಿಡುವುದು ಕರ್ತವ್ಯವಾಗಿದೆ. ವಿದೇಶೀಯ ವಸ್ತುಗಳನ್ನು ಉಪಯೋಗಿಸದೆ ಗತ್ಯಂತರವೇ ಇಲ್ಲದಿದ್ದರೆ ನಾವು ಕೊಳ್ಳಬೇಕೆಂದಿರುವ ವಸ್ತುಗಳನ್ನು ನಮ್ಮನ್ನು ಹಿಂಡಿಹಿಸುಕಿ ಸಿಪ್ಪೆ ಮಾಡುತ್ತಿರುವ ರಾಜಕರ್ತರ ದೇಶದೊಳಗಿಂದಾದರೂ ಕೊಳ್ಳಬಾರದೆಂಬ ನಿಶ್ಚಯವನ್ನಾದರೂ ಮಾಡುವುದು ಅಗತ್ಯವಾಗಿದೆ.

ಇಂಗ್ಲಿಷರು ನಮ್ಮ ದೇಶವನ್ನು ಕೈವಶಪಡಿಸಿಕೊಂಡಿರುವರು (ಇದು ಎಷ್ಟು ದಿನ ಸಾಗುವದೋ ಸಾಗಲಿ;) ಅವರ ವಿರುದ್ಧ ಶಸ್ತ್ರವನ್ನೆತ್ತುವ ಶಕ್ತಿಯು ನಮ್ಮಲ್ಲಿಲ್ಲ : ಆ ಇಚ್ಛೆಯೂ ಉಂಟಾಗಿಲ್ಲ.

ರೂಢಿ ಹಾಗೂ
ಭಾವಿಕ ಕಲ್ಪನೆಗಳು

ಪ್ರಕಾಶಕರ ಎರಡು ಮಾತು

ಕೆಳೆಯರ ಕೂಟ ಹುಟ್ಟಿ ಇಂದು ಎಂಟು ತಿಂಗಳಾಗಿವೆ. ಅದು ಕಾರ್ಯಮಾಡುತ್ತಿದೆಯೆಂಬುದಕ್ಕೆ ಕೂಟದ ಈ ಪ್ರಕಟಣೆಯಿಂದ ವಿದಿತವಾದೀತೆಂದು ಭಾವಿಸಿದ್ದೇವೆ.

ಇದನ್ನೋದಿ ನಮ್ಮ ಜನದ ಬಾಳು ಚಲುವಾಗಿ ದಿನಕ್ಕೊಂದು ರೀತಿಯಿಂದ ಅವರಲ್ಲಿ ಸದಸದ್ವಿವೇಕತೆಯು ಬೆಳೆದು ಕನ್ನಡ ಮನೆತನಗಳು ಅಂದದ, ಚಂದದ, ಮಂಗಲದ ಮನೆಯಾಗಿ ಚೆಲುವಿನ ನೆಲೆಯಾಗಲೆಂದು ಆಶಿಸುತ್ತೇವೆ. ಕನ್ನಡ ಜನ ಇದನ್ನು ಬಹಳ ಕೈಗಳಿಂದ ಬರಮಾಡಿಕೊಳ್ಳುವವರಾಗಿ ಭಾವಿಸುತ್ತೇವೆ.

ಧಾರವಾಡದ ಸಾಹಿತಿಗಳಾದ ಶಂ. ಬಾ. ಜೋಶಿ ಅವರೂ, ನಮ್ಮ ಕೂಟದ ಯಾವತ್ತೂ ಸದಸ್ಯರೂ ತಮ್ಮ ಪ್ರೀತಿಯನ್ನು ಎರೆದುದರ ಫಲವಾಗಿ ಇದು ಬೆಳಕು ಕಾಣುತ್ತಿದೆ. ನಮ್ಮ ಆಭಾರದ ಬಹುಭಾಗ ಇವರ ಪಾಲಿಗೆ ಸಲ್ಲಲಿ. ಇನ್ನುಳಿದ ಭಾಗ ಮುದ್ರಿಸಿದವರಿಗೆ.

ಗೋಕರ್ಣ
ತಾರೀಕು ೧೫-೭-೪೦

ಪ್ರಕಾಶಕರು

ರೂಢಿಯ ಪರಿಕಲ್ಪನೆ

ಮೊನ್ನೆ ನಮ್ಮ ನೆರೆಮನೆಯಲ್ಲಿ ಒಂದು ಮದುವೆಯ ನಿಶ್ಚಯದ ಪ್ರಾಸ್ತಾವಿಕ ಮಾತನಾಡುವದಕ್ಕೆ ಕುಳಿತಿದ್ದೆವು. ವರದಕ್ಷಿಣೆ ವರೋಪಚಾರದ ಮಾತುಕತೆಗಳ ಅರೆದಾಟಕ್ಕೆ ಆರಂಭವಾಗಿತ್ತು. ಅಷ್ಟರಲ್ಲಿ ಬಳಿಯಲ್ಲಿಯೇ ಕುಳಿತ ಒಬ್ಬ ಹುಡುಗನು ಸಟಕ್ಕನೆ ಒಂದೇ ಸೀನು ಸೀತುಬಿಟ್ಟನು. ಕೂಡಲೇ ಹತ್ತಿರದಲ್ಲಿದ್ದ ಒಬ್ಬ ಸಿಟ್ಟಿನ ಮುದುಕನು ಆ ಹುಡುಗನಿಗೆ ಒಂದು ಏಟು ಹಾಕಿಬಿಟ್ಟನು. ಮಗುವು ಅಳಲಾರಂಭಿಸಿತು. ಅದನ್ನು ಒಬ್ಬರು ಒಳಗೆ ಎತ್ತಿಕೊಂಡೊಯ್ದರು. ಇದೆಲ್ಲವನ್ನೂ ನೋಡಿ ಅಲ್ಲಿಯೇ ಇದ್ದ ಇನ್ನೊಬ್ಬ ಗೃಹಸ್ಥರು "ಇದರಲ್ಲಿ ಹುಡುಗನದು ಏನು ತಪ್ಪು? ಸೀನು ಬಂದಿತು, ಸೀತುಬಿಟ್ಟ. ಪಾಪ! ಮಗುವಿಗೆ ಹೊಡೆಯಬೇಕೇ?" ಎಂದರು.

ಈ ಬಗೆಯ ಎಷ್ಟೋ ರೂಢಿಗಳು ಪ್ರತಿಯೊಂದು ಸಮಾಜದಲ್ಲಿಯೂ ಇರುವದುಂಟು. ಇವಕ್ಕೆ ಸಂಪ್ರದಾಯಗಳು ಅಥವಾ ನಡವಳಿಕೆಗಳೆಂದು ಹೆಸರಿದೆ. ಚಿಕ್ಕಂದಿನಲ್ಲಿ ಈ ರೂಢಿ ಅಥವಾ ಸಂಪ್ರದಾಯಗಳ ತಿಳುವಳಿಕೆ ಇಲ್ಲದ ಬಾಲಕರಿಗೆ ಅಡಿಗಡಿಗೆ ಹೇಳಿಸಿಕೊಂಡು, ಸಿಟ್ಟುಮಾಡಿಸಿಕೊಂಡು, ಕೆಲಸಾರೆ ಪೆಟ್ಟುತಿಂದು ಇವನ್ನೆಲ್ಲ ಕಲಿತುಕೊಳ್ಳಬೇಕಾಗುತ್ತದೆ. ಸಂಪ್ರದಾಯಗಳು ತಲೆತಲಾಂತರದಿಂದ ಸಾಗಿಬಂದ ನಡವಳಿಕೆಗಳು. ಒಂದು ನಾಡಿನ ಸಂಪ್ರದಾಯಗಳು ಇನ್ನೊಂದು ನಾಡಿನಂತೆ ಇರುವದಿಲ್ಲ. ಆದುದರಿಂದ, ಒಂದು ನಾಡಿನವರು ಇನ್ನೊಂದು ನಾಡಿಗೆ ಹೋಗುವಾಗ ಅಲ್ಲಿಯ ದೇಶಾಚಾರಗಳನ್ನು ಅರಿತುಕೊಂಡಿರದಿದ್ದರೆ ನಗೆಗೆ ಈಡಾಗಿ ಅಸಂಸ್ಕೃತರೆಂದು ಎಣಿಸಕೊಳ್ಳಬೇಕಾಗುವದು. ಒಂದು ನಾಡಿನಲ್ಲಿಯೇ ಒಂದೊಂದು ಸಮಾಜದ ರೂಢಿ ಸಂಪ್ರದಾಯಗಳಲ್ಲಿ ಮತ್ತೆ ಎಷ್ಟು ಭಿನ್ನ ಭೇದಗಳಿರುತ್ತವೆ. ಅಷ್ಟೇ ಏಕೆ? ಮನೆತನ-ಮನೆತನಗಳ ಕುಲಾಚಾರಗಳೂ ಒಂದು ಬಗೆಯವಾಗಿರುವದಿಲ್ಲ. ನಮ್ಮ ನಾಡಿನವರು ಗೂಬೆಯನ್ನು ಅಶುಭ ಪ್ರಾಣಿಯೆನ್ನುವರು. ಇನ್ನು ಕೆಲವು ನಾಡಿನವರು ಅದನ್ನು ಪವಿತ್ರವೆಂದು ಎಣಿಸುವರು. ಚಂಡಿಕೆ ಬಿಡಿಸುವದು ಧರ್ಮವೆಂದು ಕೆಲವು ಸಮಾಜಗಳು ತಿಳಿದಿದ್ದರೆ, ಬೋಳತಲೆಯೇ ಧರ್ಮಸಮ್ಮತವೆಂಬ ಭಾವನೆಯಿರುವ ಪಂಗಡಗಳೂ ಇವೆ. ಕೆಲವು ಮನೆತನಗಳಲ್ಲಿ ಮದುವೆಯ ಕಾಲಕ್ಕೆ ಬನ್ನಿಯ ಟೊಂಗೆಯನ್ನು ತಂದು ಪೂಜಿಸುವ ಸಂಪ್ರದಾಯವಿದ್ದರೆ ಇನ್ನು ಕೆಲವು ಮನೆತನಗಳಲ್ಲಿ ಇಪ್ಪಿಯ ಕೊಂಬೆಯನ್ನು ತಂದು ದೇವರಂತೆ ಮರ್ಯಾದಿಸುವದುಂಟು.

ಇಂತಹ ರೂಢಿಗಳು ಏಕೆ ಉಂಟಾದವು? ಹೇಗೆ ಉಂಟಾದವು? ಎಂಬುದನ್ನು ಎಲ್ಲೆಡೆಗಳಲ್ಲಿ ನಿಶ್ಚಿತವಾಗಿ ಹೇಳಲಿಕ್ಕಾಗುವದಿಲ್ಲ. ಕಾರಣವಿಲ್ಲದೆ ಕಾರ್ಯವಿಲ್ಲ, ಎಂಬುದು ನಿಜ. ಆದರೂ ಆ ಹಿಂದಿನ ಕಾಲದ ಸಂಪ್ರದಾಯಗಳ ಹುಟ್ಟಿನ ಗುಟ್ಟನ್ನು, ಉಗಮದ ಕಾರಣಮೀಮಾಂಸೆಯನ್ನು ಊಹೆಯಿಂದ ತಿಳಿದುಕೊಳ್ಳಬೇಕೇ ಹೊರತು ಎದೆ ತಟ್ಟಿ ಹೇಳಲಿಕ್ಕಾಗುವದಿಲ್ಲ. ರೂಢಿ ಅಥವಾ ಸಂಪ್ರದಾಯಗಳ ಉಗಮವು ವಿಚಾರ ವಿಮರ್ಶೆಗಳಲ್ಲಿ ಇಲ್ಲ;

ಭಾವನೆಯಲ್ಲಿದೆ; ಶ್ರದ್ಧೆಯಲ್ಲಿದೆ. ವ್ಯಕ್ತಿಯಲ್ಲಾಗಲೀ, ಸಮಾಜಗಲ್ಲಾಗಲೀ, ವಿಚಾರ ವಿಮರ್ಶನಾ ಶಕ್ತಿಯು ಹೆಚ್ಚಿದಂತೆ ರೂಢಿಗಳ ಪ್ರಾಬಲ್ಯವು ಕಡಿಮೆಯಾಗುವದು. ಸಮಾಜದ ಪ್ರಾಥಮಿಕ ಸ್ಥಿತಿಯಲ್ಲಿ ಬುದ್ಧಿಶಕ್ತಿಯು ಇನ್ನೂ ಬೆಳೆದಿದ್ದಿಲ್ಲ. ಆಗಿನ ಜನಗಳಿಗೆ ತುಲನಾತ್ಮಕ ವಿಚಾರ ವಿಮರ್ಶೆಗಳ ಕಲ್ಪನೆಯೂ ಇರಲಿಲ್ಲ. ಭಾವನಾಶಕ್ತಿಯೇ ತಾನೇ ತಾನಾಗಿ ಆಗಿನ ಜನಸಮಾಜವನ್ನು ಆಳುತ್ತಲಿತ್ತು. ಈಗಲೂ ಆರಂಭದ ಸ್ಥಿತಿಯ ಸಮಾಜಗಳು ರೂಢಿ ಅಥವಾ ಸಂಪ್ರದಾಯಗಳ ಬಂಧನದಲ್ಲಿರುವದು ಈ ಕಾರಣದಿಂದಲೇ. ಮನುಷ್ಯರಲ್ಲಿ ತಿಳುವಳಿಕೆಯು ಬೆಳೆದುಬಂದಂತೆ ಕಟ್ಟು-ಕಟ್ಟಳೆ *(Laws)* ಗಳಿಗೆ ಹೆಚ್ಚು ಹೆಚ್ಚು ಮಹತ್ವವು ಬರಲಾರಂಭಿಸಿದೆ. ಎಷ್ಟೋ ಸಾರೆ ರೂಢಿಗಳೇ ಕಟ್ಟಲೆ (ಕಾಯಿದೆ) ಗಳಾಗಿ ಪರಿಣಮಿಸುವದುಂಟು.

ಕಟ್ಟಳೆಗಳನ್ನು ಜನರು ತಮಗೆ ಸರಿದೋರಿದಂತೆ ಬದಲಿಸಿಕೊಳ್ಳಬಲ್ಲರು. ಅವು ಬದಲಾದರೂ ಅದಾವ ದೈವೀಸಂಕೋಪದ ಭೀತಿಯಿಲ್ಲ. ಸಂಪ್ರದಾಯ ಅಥವಾ ರೂಢಿಗಳನ್ನು ಇಷ್ಟು ಬೇಗನೆ ಮಾರ್ಪಡಿಸಿಕೊಳ್ಳುವದು ಅಸಾಧ್ಯ. ಸಂಪ್ರದಾಯಗಳು ಬಾಳಿಕೆಯಲ್ಲಿ ಕಟ್ಟಳೆಗಿಂತಲೂ ಹೆಚ್ಚು ಜಿಗಟು. ಇದಕ್ಕೆ ಎರಡು ಕಾರಣಗಳು ೧) ಜನದ ಹೆದರಿಕೆ. ೨) ಮನದ ಹೆದರಿಕೆ. ಮೊದಲನೆಯದರಲ್ಲಿ ಜನರಿಂದ ನಗಿಸಿಕೊಳ್ಳುವ ಹೆದರಿಕೆಯಿದೆ; ಬಹಿಷ್ಕೃತರಾಗುವ ಅಂಜಿಕೆಯಿದೆ. ಎರಡನೆಯದರಲ್ಲಿ ಸ್ವಂತದ ಭಾವನೆಗಳೇ ಅಡ್ಡಬಂದು ಮನುಷ್ಯರು ರೂಢಿಗಳ ಬಂಧನದಲ್ಲಿ ಸಿಲುಕಿಕೊಂಡಿರಲು ಸಿದ್ಧರಾಗುವರು. ಇದರೊಂದಿಗೆ ದೇವರು ದೆವ್ವಗಳ ಕಾಟದ ವಿಚಾರವೂ ತಲೆಯೆತ್ತಿ ಮನೋಭಾವನೆಗಳು ಮನುಷ್ಯನನ್ನು ಪರಂಪರಾಪ್ರಿಯನನ್ನಾಗಿ ಮಾಡುತ್ತವೆ. ರೂಢಿಗೆ ತಲೆವಾಗದ ಮಾನವನಿಲ್ಲ. ಜಗತ್ತನ್ನೇ ಗೆದ್ದು ಆಳುವ ಸಮ್ರಾಟರನ್ನೂ ಸೇನಾಪತಿಗಳನ್ನೂ ರೂಢಿಯು ತನ್ನ ಗುಲಾಮರನ್ನಾಗಿ ಮಾಡಿಕೊಂಡಿರುತ್ತದೆ.

ಸಂಪ್ರದಾಯ ಅಥವಾ ರೂಢಿಗಳಲ್ಲಿ ಕೆಲವೊಂದು ವರ್ಗೀಕರಣವನ್ನು ಮಾಡಬಹುದು. ಕೆಲವು ರೂಢಿಗಳಲ್ಲಿ ಮನುಷ್ಯನು ತನಗೆ ಬಂದ ಅನುಭವಗಳನ್ನು ಹಿಡಿದು ಇಟ್ಟಿರುವಂತೆ ತೋರುತ್ತದೆ. ಒಂದೇ ಸೀನುವದು, ಬೆಕ್ಕು ಅಡ್ಡಬರುವದು, ಹಲ್ಲಿ ನುಡಿಯುವದು, ವಿಶಿಷ್ಟ ಕನಸುಗಳು ಬೀಳುವದು ಇವೇ ಮೊದಲಾದವುಗಳು ಈ ಬಗೆಯ ಉದಾಹರಣಗಳು. ಗಂಡಸರ ಎಡಗಣ್ಣು ಹಾರಬಾರದೆಂಬ ಒಂದು ಗ್ರಹಿಕೆ. ಗಂಡಸರ ಎಡಗಣ್ಣು ಹಾರಿದರೆ ಅಶುಭವಂತೆ. ಆದರೆ, ಕೆಲವರು ತಮಗೆ ಎಡಗಣ್ಣು ಹಾರುತ್ತಿದ್ದಾಗಲೇ ಶುಭವಾಗಿರುತ್ತದೆಂದು ತಮ್ಮ ಅನುಭವವನ್ನು ನನಗೆ ಹೇಳಿದ್ದಾರೆ. ಆದುದರಿಂದ ಇಂತಹ ಗ್ರಹಿಕೆಗಳನ್ನು ತ್ರಿಕಾಲಾಬಾಧಿತ ಸಿದ್ಧಾಂತಗಳೆಂದು ನಂಬುವದು ಮಾತ್ರ ತಿಳಿಗೇಡಿತನವಾಗದೆ ಇರಲಾರದು. ಹೀಗೆ ನಂಬಿ ಹಾಳಾದವರು ಕಡಿಮೆ ಇಲ್ಲ. ಹಗೆಗಳು ಮೈಮೇಲೆ ಏರಿಬಂದಾಗ ಆತ್ಮಸಂರಕ್ಷಣೆಯ ಉಪಾಯಗಳ ಬೇರೆ ಯೋಚನೆ ಯೋಜನೆಗಳಿಗಿಂತಲೂ ಮುಹೂರ್ತ ನೋಡುವುದು, ಶತಚಂಡೀ ಹೋಮ ಮಾಡಿಸುವದರಲ್ಲಿಯೇ ಕಾಲಕಳೆಯುವದು ಆತ್ಮಘಾತಕವಾಗದೆ ಇರಲಾರದು. ಟೀಪುಸುಲ್ತಾನನು ತನಗೆ ಯುದ್ಧದಲ್ಲಿ ಗೆಲುವು ದೊರೆಯಬೇಕೆಂದು ಶೃಂಗೇರಿಪೀಠದವರಿಗೆ ಹೋಮ-ಹವನಾದಿಗಳನ್ನು ಮಾಡಿಸುವದಕ್ಕಾಗಿ ಭೂಮಿ-ಸೀಮೆಗಳನ್ನು ಕೊಟ್ಟ ಕೆಲವು ಕಾಗದ ಪತ್ರಗಳು ದೊರೆತಿವೆ.*

ಇನ್ನು ಕೆಲವೊಂದು ಸಂಪ್ರದಾಯಗಳು ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ತಲೆದೋರಿರುತ್ತವೆ.

೧. ಅತಿ ಪ್ರಾಚೀನ ಕಾಲದಲ್ಲಿ ಹತ್ತಿಯೇ ಗೊತ್ತಿದ್ದಿಲ್ಲ. ಉಣ್ಣೆಯ ಬಟ್ಟೆಯೇ ಬಟ್ಟೆ. ಯಜ್ಞದಲ್ಲಿ ಸೋಮರಸವನ್ನು ಸೋಸುವದಕ್ಕೂ ಆಗ ಉಣ್ಣೆಯ ಬಟ್ಟೆಯನ್ನೇ ಉಪಯೋಗಿಸುತ್ತಿದ್ದರು. ಕಾಲಕ್ರಮದಿಂದ ಮುಂದೆ ಹತ್ತಿಯು ಗೊತ್ತಾಗಿ ನೂಲಿನ ವಸ್ತುಗಳು ರೂಢಿಯಲ್ಲಿ ಬಂದವು. ರಸವನ್ನು ಸೋಸುವದಕ್ಕೆ ಉಣ್ಣೆಯ ಬಟ್ಟೆಗಿಂತ

---

* ಬಖೈರು, ಕೈಫಿಯತ್ತು ಮೊದಲಾದುವು ಸಾಂಸ್ಕೃತಿಕ ಚರಿತ್ರೆಯ ಪುನಾರಚನೆಗೆ ಮುಖ್ಯ ಸಾಮಗ್ರಿಗಳು ಹೌದೆಂಬುದನ್ನು ಶಂಬಾ ಅವರು ೧೯೪೦ಕ್ಕಿಂತ ಮೊದಲು ಹಲವು ಗ್ರಂಥಗಳಲ್ಲಿ ಪ್ರತಿಪಾದಿಸಿದ್ದರು. (ಸಂ)

ನೂಲಿನ ಬಟ್ಟೆಯೇ ಲೇಸು. ಏಕೆಂದರೆ ಉಣ್ಣೆಯ ಬಟ್ಟೆಯಿಂದ ರಸವು ಬೇಗನೆ ಹೊರಬರುವದಿಲ್ಲ. ಸ್ವಲ್ಪ ಒತ್ತಿ ಹಿಂಡಿದರೆ ಕೂದಲಿನ ಸಣ್ಣ ಸಣ್ಣ ಎಳೆಗಳು ರಸದೊಡನೆ ಹೊರಬಂದು ಕುಡಿಯಲಿಕ್ಕೆ ಮನಸ್ಸುಬಾರದು. ಆದುದರಿಂದ, ಯಜ್ಞದಲ್ಲಿ ಸೋಮವನ್ನು ಸೋಸಲು ನೂಲಿನ ಬಟ್ಟೆಯಂತೂ ಅವಶ್ಯವಾಯ್ತು. ಆದರೆ ಉಣ್ಣೆಯ ಬಟ್ಟೆಯನ್ನು ಬಿಟ್ಟರೆ ಪುರಾತನ ಸಂಪ್ರದಾಯವನ್ನು ಮುರಿದ ಪಾಪಕ್ಕೆ ಗುರಿಯಾಗುವ ಹೆದರಿಕೆ! ಕೊನೆಗೆ ಈ ತೂಗಾಟದಲ್ಲಿ ನಡುವಿನ ದಾರಿ ಹೊರಟು ಒಂದು ರೀತಿಯ ತೀರ್ಮಾನಕ್ಕೆ ಬಂದರು. ಸೋಮವನ್ನು ಸೋಸಲು ನೂಲಿನ ಬಟ್ಟೆಯನ್ನು ಉಪಯೋಗಿಸಲಡ್ಡಿಯಿಲ್ಲ. ಆದರೆ, ಹಳೆಯ ಸಂಪ್ರದಾಯ ವನ್ನು ಬಿಟ್ಟಂತೆ ಆಗಬಾರದೆಂದು ಆ ನೂಲಿನ ಬಟ್ಟೆಯ ಅಂಚಿಗೆ ಉಣ್ಣೆಯ ಚೂರನ್ನು ಅಂಟಿಸುವ ಶಾಸ್ತ್ರಮಾಡುವರು.

೨. ಸೂಜಿಯ ಶೋಧವಾಗುವ ಮೊದಲು ಹೊಲಿಗೆಯ ಬಟ್ಟೆಗಳೇ ಇದ್ದಿಲ್ಲ. ಹೊಲಿಗೆ ಯಿಲ್ಲದ ಅಖಂಡ ಬಟ್ಟೆಗಳನ್ನೇ ಉಪಯೋಗಿಸುವದು ಆಗಿನ ರೂಢಿ. ಆದರೆ ಮುಂದೆ ಸೂಜಿಯು ಬಂದಿತು. ಹೊಲಿದ ವಸ್ತ್ರಗಳ ಉಡುಪು-ತೊಡುಪುಗಳು ಬಂದದ್ದಾಯ್ತು. ಒಲ್ಲೆನೊಲ್ಲೆನೆನ್ನುತ್ತಲೆ ಅಂಗಿ-ಕೋಟುಗಳನ್ನು ಸ್ವೀಕರಿಸಿದ್ದಾಯ್ತು. ಆದರು ವೈದಿಕಪರಂಪರೆಯ ರಕ್ಷಕರಾದ ಎಷ್ಟೋ ಭಟ್ಟರೂ ಆಚಾರ್ಯರೂ ಅಂಗಿ-ಕೋಟುಗಳನ್ನು ಧರಿಸುವದಿಲ್ಲ. ಉಡುವ ಧೋತರ, ಹೊದಿವ ಮೇಲುದಗಳ ಹೊರತು ಹೊಲಿದ ಬಟ್ಟೆಯನ್ನು ಮುಟ್ಟದವರೂ ಅಲ್ಲಿ ಇಲ್ಲಿ ಒಬ್ಬೊಬ್ಬರು ಈಗಲೂ ಬೇಕಾದರೆ ಸಿಕ್ಕುವರು. ಹೊಲಿದ ಬಟ್ಟೆಯು ಮಡಿಗೆ ಬರುವದಿಲ್ಲವೆಂಬ ರೂಢಿಯು ಸೂಜಿ ಹುಟ್ಟುವ ಮೊದಲಿನ ಕಾಲದ ನಡವಳಿಯ ಕುರುಹಾಗಿದೆ.

ಕೆಲವು ರೂಢಿಗಳಲ್ಲಿ ದೇವರು ಇಲ್ಲವೆ ದೈವದ ಸಂಬಂಧವು ಬರುತ್ತದೆ. ಇಂತಹವುಗಳಿಗೇ ಭಾವಿಕ ಕಲ್ಪನೆಗಳು ಎಂಬ ಹೆಸರು. ಅರಳೆ, ಬೇವು, ಆಲದ ಮರಗಳಲ್ಲಿ ದೆವ್ವಗಳು ಮನೆ ಮಾಡಿಕೊಂಡಿರುತ್ತವೆಂದು ಒಂದು ಗ್ರಹಿಕೆಯುಂಟು. ಅಮಾವಾಸ್ಯೆಯ ದಿನ ಅರಳೆ ಮತ್ತು ಬೇವಿನಮರಗಳ ಪೂಜೆ ನಡೆಯುವದು. ಇರುಳು ಅಲ್ಲಿ ಹಾಯುವದಕ್ಕೂ ಹೆದರುವರು.

ಇನ್ನು ಕೆಲವು ಈ ತೆರನವು. ಹಿಂದಕ್ಕೆ ನೂಲು ನೇಯ್ಗೆಯ ಗಿರಣಿಗಳು ಇರಲಿಲ್ಲ. ಆಗ ರಾಟಿಯೇ ಬಟ್ಟೆಯನ್ನು ಕೊಟ್ಟು ಜಗತ್ತಿನ ಮಾನವನ್ನು ಕಾಯುತ್ತಲಿತ್ತು. ಸಾವಿರಾರು ಜನಗಳ ಉಪಜೀವನದ ಮುಖ್ಯ ಸಾಧನವಾಗಿದ್ದಿತು. ಈ ಜಗತ್ತಿನ ಜೀವನಕ್ಕೆ ಮೂಲಾಧಾರವಾಗಿದ್ದ ರಾಟಿಯ ಬಗ್ಗೆ ಆದರ ಭಕ್ತಿಗಳು ಬೆಳೆದು ರಾಟಿಯ ಪೂಜೆಯು ಪ್ರಚಾರದಲ್ಲಿ ಬಂದಿತು. ಭಾದ್ರಪದ ಶುದ್ಧ ಅಷ್ಟಮಿಗೆ ದಾರದ ಅಷ್ಟಮಿ ಅಥವಾ ಎಳೆಯ ಅಷ್ಟಮಿ ಎಂದು ಕರೆವ ವಾಡಿಕೆಯಿದ್ದು, ಅಂದು ಒಕ್ಕಲುಮಕ್ಕಳ ಮನೆ-ಮನೆಗಳಲ್ಲಿ ರಾಟೀಪೂಜೆಯು ನಡೆಯುತ್ತದೆ. ಎಳೆ ಅಷ್ಟಮಿಯ ದಿನ ಸಾಮಾನ್ಯವಾಗಿ ಹಿಂದೂ ಹೆಂಗಸರಲ್ಲಿ ಅನೇಕರು ಕೈ ನೂಲಿನ ಪೂಜೆ ಮಾಡಿ ಕೊರಳಲ್ಲಿ ಧರಿಸುವರು. ಗಿರಣಿಗಳು ಬಂದ ಬಳಿಕ ರಾಟಿಗಳು ಮೂಲೆಗುಂಪಾಗಿದ್ದವು. ಎಳೆ ಅಷ್ಟಮಿಯ ದಿನ ಮಾತ್ರ ಮೂಲೆಯಲ್ಲಿ ಬಿದ್ದ ರಾಟಿಗಳನ್ನು ತಂದು ಧೂಳಜಾಡಿಸಿ ಪೂಜಿಸುವ ಪರಿಪಾಠವು ಈಗ ಉಳಿದಂತಾಗಿದೆ. ಆದರೂ ಮಹಾತ್ಮಾಜಿಯವರ ಪುಣ್ಯದ ಬಲದಿಂದ ರಾಟಿಗಳು ತಾವು ಕಳೆದುಕೊಂಡ ಮಹತ್ವವನ್ನು ಮರಳಿ ಪಡೆದುಕೊಂಡಿವೆ. ಹತ್ತಿಯ ನೂಲು ಗೊತ್ತಾಗುವ ಮೊದಲು ಉಣ್ಣೆಯ ಬಟ್ಟೆಗಳಿದ್ದವು. ಉಣ್ಣೆಗಿಂತ ಮೊದಲಿನವು ನಾರಿನ ಬಟ್ಟೆ. ಗಿಡದ ತೊಗಟೆಯಿಂದ ಮಾಡಿದ ಬಟ್ಟೆಗಳು; ಇವೇ ವಲ್ಕಲಗಳು; ಕನ್ನಡದಲ್ಲಿ ಇಂತಹ ಬಟ್ಟೆಗಳಿಗೆ

ಝಾಡಿ ಅಥವಾ ಜಾಡಿಗಳೆಂಬ ಹೆಸರು. ಕಾಲಿದಾಸನು ಶಾಕುಂತಲದಲ್ಲಿ ಈ ಸಂಗತಿಯನ್ನು ಸ್ವಲ್ಪ ಆಲಂಕಾರಿಕವಾಗಿ ಸೂಚಿಸಿದ್ದಾನೆ. ಶಕುಂತಲೆಯು ಕಣ್ವನ ಆಶ್ರಮದಿಂದ ಅತ್ತೆಯ ಮನೆಗೆ ಹೋಗುವಾಗ ಅವಳಿಗೆ ಒಂದು ಗಿಡವು ಬಹಳ ಸೊಗಸಾದ ಒಂದು ಬಟ್ಟೆಯನ್ನು ಕೊಟ್ಟಿತೆಂದು ವರ್ಣಿಸಿದ್ದಾನೆ. ನಮ್ಮ ನಾಡಿನ ನೇಕಾರರಿಗೆ "ಜಾಡ"ರೆಂದು ಹೆಸರುಂಟು. ಇದು ಜಾಡಿ ಎಂದರೆ ವಲ್ಕಲಗಳನ್ನು ನೇಯುವವರ ಪುರಾತನ ಕಾಲದ ಹೆಸರು. ಈ ಜಾಡರು ಪೂಜಿಸುವ ದೇವತೆ 'ಬನದಮ್ಮ' ಎಂದರೆ ವನದೇವತೆ ಎಂಬರ್ಥ. ಈ ಜಾಡರೆಲ್ಲ ಒಂದು ಕಾಲದಲ್ಲಿ ಮರಗಳ ಪೂಜಕರಾಗಿದ್ದರೆಂಬಲ್ಲಿ ಸಂದೇಹವಿಲ್ಲ.* ಹೀಗೆ ನೋಡಿದಲ್ಲಿ ಪ್ರಾಚೀನ ಕಾಲದ ಕೆಲವು ಜನಾಂಗದ ಮರಗಳ ಪೂಜೆಯಲ್ಲಿ ಉಪಯುಕ್ತತಾವಾದವು ಹುದುಗಿಕೊಂಡಿದ್ದುದು ಗೋಚರವಾಗುತ್ತದೆ. ಗೋಧಿ, ಜೋಳ ಮೊದಲಾದ ಧಾನ್ಯಗಳನ್ನು ಪೈರುಗಳನ್ನು ಪೂಜಿಸುವ ಪದ್ಧತಿಗಳಲ್ಲಿ ಇದೇ ಬಗೆಯ ವ್ಯಾವಹಾರಿಕ ದೃಷ್ಟಿಯು ಕಂಡುಬರುತ್ತದೆ.

ಆದರೆ, ದೈವೀಭಾವದಿಂದ ಮಾಡಲ್ಪಡುವ ಹಲವು ಸಂಪ್ರದಾಯಗಳಲ್ಲಿರುವ ಆಸುರ ಪ್ರಕಾರಗಳನ್ನು ನೋಡಿ ಮನಸ್ಸಿಗೆ ಹೇಸಿಕೆಯುಂಟಾಗುವಂತಿದೆ. ಉಪನಿಷತ್ತಿನ ಪರಿಶುದ್ಧ ತತ್ವಜ್ಞಾನವು ತಲೆದೋರಿದ ಬಳಿಕ ಇಂತಹ ಅಮಾನುಷ ಪ್ರಕಾರಗಳಿಗೆ ಗೌಣಸ್ಥಾನವು ಬಂದುದು ನಿಜ. ಆದರು, ಜನಗಳು ದೇವರು ದೆವ್ವಗಳ ಹೆದರಿಕೆಯಿಂದ ಕೀಳು ಧರ್ಮಾಚರಣೆಯಿಂದ ಬೇಗನೆ ಪರಾವೃತ್ತವಾಗಲಿಲ್ಲ. ದೇವತೆಗಳಿಗೆ ನರಬಲಿಯನ್ನು ಅರ್ಪಿಸುವ ಒಂದು ರೂಢಿಯನ್ನೇ ವಿಚಾರಿಸುವಾ. ಕನ್ನಡ ಸಾಹಿತ್ಯದಲ್ಲಿರುವ ಕೆಲವು ಉಲ್ಲೇಖಗಳಿಂದ ಹಿಂದಿನ ಕಾಲದ ಜನಜೀವನದ ಚಿತ್ರವು ನಮ್ಮ ಕಣ್ಣೆದುರು ನಿಲ್ಲುವಂತಿದೆ. ದುಷ್ಟಬುದ್ಧಿಯು ಚಂದ್ರಹಾಸನನ್ನು ಕೊನೆಗೆ ದೇವಿಗೆ ಬಲಿಕೊಡಬೇಕೆಂದು ಮಾಡಿದ ಒಳಸಂಚನ್ನು ಲಕ್ಷ್ಮೀಶನ ಕಾವ್ಯದಲ್ಲಿ ಓದಿಕೊಳ್ಳಬಹುದು. ಇದಕ್ಕಿಂತಲೂ ಹಳ್ಳಿಯ ಹಾಡುಗಳಲ್ಲಿ ಹಲವೆಡೆಗಳಲ್ಲಿ ಕೇಳಲು ಸಿಕ್ಕುವ ಒಂದು ಭೀಕರ ಪ್ರಕಾರವು ನಿನ್ನೆ-ಮೊನ್ನೆಯ ವರೆಗೂ ನಡೆಯುತ್ತಲಿತ್ತು. ಅದು ಕೆರೆ-ಕಟ್ಟೆಗಳನ್ನು ಕಟ್ಟುವಾಗ 'ಆಹಾರ' ಕೊಡುವುದು. ಕೆರೆಗೆ ನೀರು ಬರಬೇಕಾಗಿದ್ದರೆ ಅಥವಾ ಕಟ್ಟಿದ ಒಡ್ಡು ಗಟ್ಟಿಯಾಗಿ ನಿಲ್ಲಬೇಕಾಗಿದ್ದರೆ ಜಲದೇವತೆಯು ಬಲಿಯನ್ನು ಕೋರುತ್ತಿರುವಳೆಂದು ಊರಲ್ಲಿ ಯಾರಿಗಾದರೂ ಕನಸು ಬೀಳುವದು. ಆಮೇಲೆ ಊರ ಗೌಡ ಅಥವಾ ಹಿರಿಯರೊಬ್ಬರ ಮಗಳನ್ನೋ ಸೊಸೆಯನ್ನೋ ಬಲಿದಾನಕ್ಕಾಗಿ ಸಿದ್ಧಪಡಿಸುವುದು. ಆ ಹೆಣ್ಣುಮಗಳು ಊರಿಗೆ ಉಪಕಾರ ಮಾಡುವದಕ್ಕಾಗಿ ಸ್ವಸಂತೋಷದಿಂದ ತನ್ನ ಆತ್ಮಾಹುತಿಯನ್ನು ದಧೀಚಿಯಂತೆ ಅರ್ಪಿಸಲು ಸಿದ್ಧವಾಗುವಳು. ಊರವರೆಲ್ಲ ವಿಜೃಂಭಣೆಯಿಂದ ಮೆರೆಯಿಸುತ್ತ ಆ ಹೆಣ್ಣುಮಗಳನ್ನು ಕೆರೆಗೆ ಒಯ್ದು ಬಲಿ ಕೊಡುವುದು. ಇದು ಕಟ್ಟುಕತೆಯಲ್ಲ. ಇಂತಹ ಉದಾಹರಣೆಗಳು ಹಲವೆಡೆಗೆ ಆಗಿವೆ. ಇಲ್ಲಿಯೆ ಮುಂಬೈ ವಡಾವಾಕೆರೆಯ ನೀರು ಉಳಿಯಬೇಕೆಂದು ಆ ಊರ ಗೌಡನ ಮಗಳ ಬಲಿದಾನ ಮಾಡಿದ್ದುದರ ವರ್ಣನೆಯಿದೆ.*

---

* ಈ ವಿಚಾರವು ಶಂಬಾ ಅವರ ಕಣ್ಮರೆಯಾದ ಕನ್ನಡ, ಕಂನಡದ ನೆಲೆ ಮೊದಲಾದ ಗ್ರಂಥಗಳಲ್ಲಿ ಹಲವು ಬಗೆಗಳಲ್ಲಿ ಪ್ರತಿಪಾದಿತವಾಗಿದೆ (ಸಂ)

* 'ಕೆರೆಗೆ ಹಾರ'ದಂತಹ ಜಾನಪದ ಕತೆಗಳು ಸಂಸ್ಕೃತಿ ರೂಪಿಸಿದ ಬಗೆಗಳನ್ನು ವೈಚಾರಿಕ ಹಾಗೂ ಸಾಂಶೋಧಕ ನೆಲೆಗಳಲ್ಲಿ ಆದ ಪಲ್ಲಟಗಳನ್ನು ತಿಳಿಯುವ ಯತ್ನ ಮಾಡುತ್ತವೆ. ಶಂಬಾ ಈ ಎರಡೂ ನೆಲೆಗಳಲ್ಲಿ ವ್ಯಾಖ್ಯಾನಿಸುತ್ತಿರುವ ಕ್ರಮ ಇಲ್ಲಿ ಕಾಣುತ್ತದೆ (ಸಂ)

ಶಿಷ್ಟಾಚಾರ ಮತ್ತು ಸಂಪ್ರದಾಯ

ವಿಚಾರ-ವಿಮರ್ಶೆಗಳಿಂದ ತಿಳುವಳಿಕೆಯು ಬಂದ ಮೇಲೆಯೂ, ಮನುಷ್ಯನು ಹಿಂದಿನಿಂದ ಬಂದ ಸಂಪ್ರದಾಯಗಳನ್ನು, ಅವು ಒಳ್ಳೆಯವಲ್ಲವೆಂದು ಅರಿತರೂ, ಒಮ್ಮೆಲೇ ಅದನ್ನು ಬದಲಿಸಲು ಸಮರ್ಥನಾಗುವದಿಲ್ಲ. ಬದಲಾವಣೆಗೆ ಬುದ್ಧಿಯು ಸಿದ್ಧವಾದರೂ ಭಾವನೆಯು ಅಡ್ಡಬರುತ್ತಿದೆ. ಹರಿಜನರನ್ನು ಮುಟ್ಟುವದರಲ್ಲಿ ಯಾವ ಪಾಪವೂ ಇಲ್ಲ; ಅವರೂ ನಮ್ಮಂತೆಯೇ ಮನುಷ್ಯರು ಎಂಬ ಮನವರಿಕೆಯಾದ ಮೇಲೆಯೂ ಮೊದಲಿನ ಒಂದೆರಡು ಬಾರಿ ಮುಟ್ಟಿಸಿಕೊಳ್ಳುವಾಗ ಅಥವಾ ಮುಟ್ಟುವಾಗ ಮನಸ್ಸಿಗೆ ಹೇಗೆ ಹೇಗೋ ಎನಿಸುವದು. ಇದುವೆ ರೂಢಿಯ ಪ್ರಭಾವ. ಬುದ್ಧಿಯನ್ನು ಜಾಗ್ರತವಾಗಿಟ್ಟು ಭಾವನೆಗಳನ್ನು ತಿದ್ದಿಕೊಳ್ಳಲು ಅಸಮರ್ಥರಾದವರು ಸಂಪ್ರದಾಯಗಳ ಬಲೆಯೊಳಗಿಂದ ಎಂದೂ ಪಾರಾಗಲಾರರು.

ಸಂಪ್ರದಾಯಗಳಲ್ಲಿ ಶಿಷ್ಟಾಚಾರಗಳು ಎಂಬ ಇನ್ನೊಂದು ಪ್ರಕಾರವಿದೆ. ಶಿಷ್ಟಾಚಾರಗಳು ಸಂಪ್ರದಾಯದಲ್ಲಿ ಒಳಗೊಳ್ಳುವವಾದರೂ, ಎಲ್ಲ ಸಂಪ್ರದಾಯಗಳೂ ಶಿಷ್ಟಾಚಾರಗಳಲ್ಲ. ಶ್ರೇಷ್ಠರ ಆಚಾರಗಳೇ ಶಿಷ್ಟಾಚಾರಗಳು. ಶ್ರೇಷ್ಠರೆಂದರೆ ಆದರ್ಶಪುರುಷರು. ಕೇವಲ ಅನುಕರಣಶೀಲರಾದವರು ಅನುಯಾಯಿಗಳಾಗಬಲ್ಲರು; ಆದರ್ಶ ಪುರುಷರು ಆಗಲಾರರು. ತಮ್ಮದೇ ಆದ ಒಂದು ವೈಶಿಷ್ಟವನ್ನು ಜನಗಳ ಮನಸ್ಸಿನ ಮೇಲೆ ಬಿಂಬಿಸದೆ ಯಾರೂ ಆದರ್ಶಪುರುಷರೆಂದು ಎಣಿಸಲ್ಪಡರು. ವೈಶಿಷ್ಟವು ಎಂದರೆ ಇನ್ನೊಂದಕ್ಕಿಂತಲೂ ಭಿನ್ನ. ಆದುದರಿಂದ, ಒಂದು ಕಾಲದ ಆದರ್ಶ ಪುರುಷರ ಆಚಾರಗಳು ಇನ್ನೊಂದು ಕಾಲದ ಆದರ್ಶ ಪುರುಷರ ಆಚಾರಗಳಂತೆಯೇ ಇರುವವೆಂಬ ಭರವಸೆಯಿಲ್ಲ. ಈ ಕಾರಣದಿಂದಲೇ ಶಿಷ್ಟಾಚಾರಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಎಷ್ಟೋ ಸಾರೆ ಇಂದಿನ ಶಿಷ್ಟಾಚಾರಗಳೇ ನಾಳೆ-ಸಂಪ್ರದಾಯ ಅಥವಾ ರೂಢಿಯೆನಿಸುವವು. ರೂಢಿಯೇ ಧರ್ಮ ಎನಿಸುವದು. ಸಾಮಾನ್ಯ ಜನರು ಶಿಷ್ಟಾಚಾರ, ಸಂಪ್ರದಾಯ ಮತ್ತು ಧರ್ಮ ಇವುಗಳಲ್ಲಿರುವ ಸೂಕ್ಷ್ಮಭೇದವನ್ನು, ತರತಮ ಭಾವವನ್ನು ಅರಿಯಲು ಅಸಮರ್ಥರಾಗಿರುವದರಿಂದ ಶಿಷ್ಟಾಚಾರ-ಸಂಪ್ರದಾಯಗಳಲ್ಲಿ ಕಾಲಕ್ರಮದಿಂದ ಅನಿವಾರ್ಯವಾದ ಬದಲಾವಣೆಗಳು ಆಗಲಾರಂಭಿಸುತ್ತಲೇ 'ಧರ್ಮವೇ ಹಾಳಾಯಿತು.' ಎಂಬ ಕೂಗು ಎಬ್ಬಿಸುವರು. 'ಕಲಿಯುಗ ಬಂದಿತು. ಧರ್ಮವೇ ಮುಳುಗಿತು' ಎಂಬ ಆರ್ತಸ್ವರವು ಅಲ್ಲಿ ಇಲ್ಲಿ ಕೇಳಬರುವದಕ್ಕೆ ಇದೇ ಮುಖ್ಯ ಕಾರಣ.

ಕಾಲ ಮತ್ತು ಪರಿಸ್ಥಿತಿಗಳು ಬದಲಾಗುತ್ತಲೇ ಶಿಷ್ಟಾಚಾರಗಳಲ್ಲಿಯೂ ಸಂಪ್ರದಾಯಗಳಲ್ಲಿಯೂ ಹೆಚ್ಚು ಕಡಿಮೆಯಾಗುವದು ಅನಿವಾರ್ಯವಾಗುತ್ತದೆ. ಬೆಳಗುಮುಂಜಾನೆ ಇಬ್ಬರು ಸದ್ಗೃಹಸ್ಥರು ಒಬ್ಬರೊಬ್ಬರನ್ನು ಕಾಣುತ್ತಲೆ

ಅವರಿಬ್ಬರೂ ತಮ್ಮ ಜಾತಿಪದ್ಧತಿಗೆ ಅನುಸಾರವಾಗಿ 'ಶರಣಾರ್ತಿ' 'ರಾಮ ರಾಮ' 'ಜಯಗೋಪಾಳ' ಎಂದು ಪರಸ್ಪರರಿಗೆ ನಮಸ್ಕರಿಸುವ ರೀತಿಯುಂಟು. ಆದರೆ, ಈಗ ಪಟ್ಟಣಗಳಲ್ಲಿ ಸಾಮಾನ್ಯವಾಗಿ "Good Morning" ಎಂದು ಹೇಳುವ ರೂಢಿ ಹೆಚ್ಚಾಗುತ್ತಲಿದೆ. ಹಳ್ಳಿಗಳಲ್ಲಿ ಮಾತ್ರ ಮೊದಲಿನ ಈ ಶಿಷ್ಟಾಚಾರವು ಇನ್ನೂ ಬಹುಮಟ್ಟಿಗೆ ಉಳಿದಿರುವದನ್ನು ಕಾಣಬಹುದು. ಮನೆಗೆ ಬಂದ ಸದ್ಗೃಹಸ್ಥರಿಗೆ 'ಫಲಾಹಾರಕ್ಕೆ ಏಳಿರಿ' ಎಂದು ಹೇಳುವ ವಾಡಿಕೆಯಿತ್ತು. ಫಲಾಹಾರವು 'ಫರಾಳ'ವಾಗಿ ಹೆಸರಿಗೆ ಮಾತ್ರ 'ಫಲ' ಆಹಾರ; ಪ್ರತ್ಯಕ್ಷವಾಗಿ ಎಲೆಯ ಮೇಲೆ ಸಿಕ್ಕುವದ ಏನಾದರೂ ತಿನ್ನುವ ಜೀನಸು! ಇದೂ ಬದಲಾಗಿ 'ಚಹಕ್ಕೆ' ಕರೆವ ಪದ್ಧತಿಯು ಬಂದಿತು. ಈಗ 'ಚಹದ' ಬಹಿಷ್ಕಾರವಾದಿಗಳು ಸ್ವಲ್ಪ ಪ್ರಬಲರಾಗಿರುವದರಿಂದ 'ಚಹಕ್ಕೆ' ಎಂದು ಹೇಳಲು ಸಂಕೋಚವುಂಟಾಗಲಾರಂಭಿಸಿದೆ. ಆದರೂ ಒಬ್ಬರೊಬ್ಬರು ತಮ್ಮ ಮನೆಗೆ ಒಮ್ಮೆ ಬನ್ನಿರಿ ಎಂದು ಹೇಳುವದಕ್ಕೆ ಚಹಕ್ಕೆ ಬನ್ನಿರಿ ಎಂದು ಕರೆವ ವಾಡಿಕೆಯು ಸದ್ಯಕ್ಕೆ ಹಾಗೇ ಉಳಿಯುವಂತೆ ತೋರುತ್ತದೆ.

ಭಿನ್ನ ಸಂಸ್ಕೃತಿಯ ಭಿನ್ನ ಜನಾಂಗಗಳ ಸಂಪರ್ಕವು ಉಂಟಾದಾಗ ಈ ಬಗೆಯಾಗಿ ರೂಢಿ-ಶಿಷ್ಟಾಚಾರಗಳ ಅದಲು-ಬದಲಾಗುವದು ನಿಶ್ಚಿತ. ಮೊಹರಮ್ಮಿನಲ್ಲಿ ಭಾಗವಹಿಸುವ ಹಿಂದುಜನರ ನಡವಳಿಕೆಯೇ ಇದಕ್ಕೊಂದು ದೃಷ್ಟಾಂತ. ಇಂದು ನಮ್ಮ ಆರ್ಯಪದ್ಧತಿ, ವೈದಿಕಪದ್ಧತಿಗಳು ಎಂದು ಹೆಮ್ಮೆಪಡುವ ಎಷ್ಟೋ ಸಂಪ್ರದಾಯಗಳು ಅವೈದಿಕ; ದ್ರಾವಿಡರವೋ, ಆಸ್ಟ್ರೋ-ಏಶಿಯಾಟಿಕ್ ಜನಾಂಗದವೋ ಆಗಿವೆ. ವೇದದಲ್ಲಿ ಲಿಂಗಪೂಜೆಗೆ ಮನ್ನಣೆಯಿಲ್ಲ. ಲಿಂಗಕ್ಕೂ ಶಿವನಿಗೂ ಸಂಬಂಧವಿಲ್ಲ. ಶಿವನು ಎಂದರೆ ಲಿಂಗವಲ್ಲ. ವೇದದ ರುದ್ರಾಧ್ಯಾಯದಲ್ಲಿ ರುದ್ರ-ಶಿವನಿಗೆ ಲಿಂಗ ಎಂದು ಎಲ್ಲಿಯೂ ವರ್ಣಿಸಿಲ್ಲ. ಆದರೂ ಇಂದು ಲಿಂಗವೇ ಶಿವನೆಂಬ ಕಲ್ಪನೆಯು ರೂಢವಾಗಿಬಿಟ್ಟಿದೆ! ಶಿವನು ದ್ರಾವಿಡರ ದೇವತೆ. ಲಿಂಗವು ಆಸ್ಟ್ರೋ-ಏಶಿಯಾಟಿಕ್ ಜನಾಂಗದ ಮಾತು. ಆದರೆ, ಆರ್ಯತನದ ಅಭಿಮಾನಿಗಳೆಲ್ಲರೂ ಶಿವ-ಲಿಂಗವನ್ನು ಭಕ್ತಿಭಾವದಿಂದ ಅರ್ಚಿಸುತ್ತಿರುವದು ಕಂಡುಬರುತ್ತದೆ.

ಸಂಸ್ಕೃತ ಸಾಹಿತ್ಯದಲ್ಲಿ ಗಂಡುದೇವತೆಗಳು, ರಾಜಾಧಿರಾಜರು, ಅತಿರಥಿ-ಮಹಾರಥಿಗಳು, ಇವರೆಲ್ಲರ ರೂಪ, ಆಕಾರಗಳ ಸಂಪೂರ್ಣ ವರ್ಣನೆಗಳು ಕಣ್ಣಮುಂದೆ ಕಟ್ಟುವಂತೆ ಮಾಡಲ್ಪಟ್ಟಿವೆ. ಆದರೆ, ಆ ವರ್ಣನೆಯಲ್ಲಿ ಮೀಸೆಯ ಹೆಸರೇ ಬಾರದೆ ಇದ್ದುದು ಸೋಜಿಗವನ್ನುಂಟುಮಾಡಿದೆ. ಕಾಲಿದಾಸನು ರಘುವಂಶದ ವೀರರ ಅಂಗಾಂಗಗಳ ಸುಂದರ ವರ್ಣನೆಗಳನ್ನು ಮಾಡಿದ್ದಾನೆ. ಆದರೆ, ಒಬ್ಬ ವೀರನ ಮೀಸೆಯನ್ನೂ ವರ್ಣಿಸಿಲ್ಲ. ಏಕೆ? ಇದಕ್ಕೆ ಕಾರಣವೇನಿರಬಹುದು? ಮೀಸೆ ಬಿಡಿಸುವದು ಆರ್ಯಪದ್ಧತಿಯಾಗಿದ್ದರೆ, ಶ್ರೀರಾಮಚಂದ್ರಾದಿಗಳು ಮೀಸೆಯನ್ನು ಇಟ್ಟಿದ್ದುದರ ಪರಂಪರಾಗತ ದಂತಕಥೆಗಳಿದ್ದರೆ ಸಂಸ್ಕೃತದಲ್ಲಿಯ ಕಾವ್ಯ-ಪುರಾಣಾದಿಗಳಲ್ಲಿ ಮೀಸೆಯ ಉಲ್ಲೇಖಗಳು ಬರಲೇಬೇಕಾಗಿದ್ದಿತಲ್ಲವೇ? ಕನ್ನಡದಲ್ಲಿ ಮೀಸೆ ಎಂಬುದಕ್ಕೆ ವಿಶೇಷಾರ್ಥವು ಬಂದಿದೆ. ಇದೊಂದು ಪಡೆಮಾತು (Idiom) ಇದೆ. ಮೀಸೆಯಿಲ್ಲದವನು ವೀರನೇ ಅಲ್ಲ. ಮೀಸೆಯ ವರ್ಣನೆಯಿಲ್ಲದೆ ಯಾವ ವೀರನ ವರ್ಣನೆಯೂ ಕೊನೆಗಾಣುವಂತಿಲ್ಲ. ಲಾವಣಿ ಹಳ್ಳಿಯ ಹಾಡುಗಳಲ್ಲಿ ಮೀಸೆಯ ಸೊಗಸಾದ ವರ್ಣನೆಗಳುಂಟು. ಮೀಸೆಯ ಹಲವು ಪ್ರಕಾರಗಳ ಉಲ್ಲೇಖಗಳುಂಟು. ಗಲ್ಲಮೀಸೆಗಳನ್ನು ವೀರರ ಹೊರತು ಉಳಿದವರಿಗೆ ಬಿಡಿಸುವ ಅಧಿಕಾರವಿದ್ದಿಲ್ಲ. ಕೊಡಗಿನಲ್ಲಿ ಹುಲಿಬೇಟೆಯಾಡಿದವನೇ ಗಲ್ಲಮೀಸೆ ಬಿಡಿಸಲು ಅಧಿಕಾರಿ. ಸರಿಯಾಗಿ ಒಂದು ಸಾವಿರ ವರ್ಷಗಳ ಹಿಂದೆ ಪಂಪ ಎಂಬ ಮಹಾಕವಿಯು ಕನ್ನಡದಲ್ಲಿ ಆಗಿ ಹೋದನು. ಆತನು ದ್ರೋಣನ ಬಾಯಲ್ಲಿ ಒಂದು ಮಾತು ಹಾಕಿದ್ದಾನೆ. 'ನಿನ್ನನ್ನು ತಲೆ ಕೆಳಗೆ ಮಾಡಿ ಕಟ್ಟಿಸದಿದ್ದರೆ ಮೀಸೆ ಪೊತ್ತೆನೆ?' ಎಂದು ದ್ರೋಣನು ದ್ರುಪದನಿಗೆ ಪಂಥದಿಂದ ಹೇಳುತ್ತಾನೆ. ಮೀಸೆ ಬೋಳಿಸುವದೆಂದರೆ ಅವಮಾನ ಕನ್ನಡಿಗರಿಗೆ. ಮೀಸೆಯಿರಲೇಬೇಕು ಗಂಡಸು ಎಂಬವರಿಗೆ. ಆದರೆ, ಮೀಸೆಯ ನೀರು ಬಾಯಲ್ಲಿ ಹೋದರೆ ಪಾಪವೆಂಬ ಕಲ್ಪನೆ ವೈದಿಕಪರಂಪರೆಯಲ್ಲಿ ಅದೆ! ಆದರೂ ಬ್ರಾಹ್ಮಣರಲ್ಲಿ ಮೀಸೆ ಇಡುವ ರೂಢಿಯು ದೃಢಮೂಲವಾಗಿರುವದು ಏನನ್ನು ಸೂಚಿಸುತ್ತದೆ? ಮೀಸೆಯಿಡುವ ಪದ್ಧತಿಯನ್ನು ಆರ್ಯರು ದ್ರಾವಿಡರಿಂದ

ಎತ್ತಿಕೊಂಡರೆಂಬುದು ಸ್ಪಷ್ಟವಿದೆ. ಈಗ ಮತ್ತೆ ಆಧುನಿಕ ಶಿಕ್ಷಣದ ಪರಿಣಾಮದಿಂದ ಪಶ್ಚಿಮದ ಗಾಳಿ ಬೀಸಲಾರಂಭಿಸಿದಂದಿನಿಂದ ಮೀಸೆ ಬೋಳಿಸುವದೇ ಒಂದು ಶಿಷ್ಟರ ಸಂಪ್ರದಾಯವಾಗುತ್ತಲಿದೆ.

ಸಂಪ್ರದಾಯಗಳು ಈ ಬಗೆಯಾಗಿ ಬದಲಾಗತಕ್ಕವೇ. ಅದಕ್ಕೆ ಯಾರೂ ವಿಷಾದಪಟ್ಟುಕೊಳ್ಳಬೇಕಾಗಿಲ್ಲ. ಇದಕ್ಕೆ ಇನ್ನೂ ಒಂದು ದೃಷ್ಟಾಂತವನ್ನು ಕೊಡಬಹುದು. ಯಜನವು ಆರ್ಯರ ವೈಶಿಷ್ಟ್ಯ. ಅಗ್ನಿಮುಖಾಂತರವಾಗಿ ಇಂದ್ರಾದಿ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವದು ಆರ್ಯರ ಪದ್ಧತಿ. ಆದರೆ, ಈಗ ಯಜನಕ್ರಿಯೆಯ ಸುದ್ದಿಯೇ ಇಲ್ಲ! ಎಲ್ಲೆಲ್ಲಿಯೂ ನಡೆದು, ನಡೆಯುತ್ತಿರುವದು ಪೂಜನ. ಪೂವಿನಿಂದ ಮಾಡುವದು ಪೂಜನ. ಪೂ ಎಂದರೆ ಹೂವು. ಅಗ್ನಿಯಲ್ಲಿ ಹವಿಸ್ಸನ್ನು ಹಾಕುವದು ಹಿಂದೆ ಬಿತ್ತು. ದೇವರ ಮೂರ್ತಿಗಳನ್ನು ಇರಿಸಿ, ಅವುಗಳ ಮೇಲೆ ಹೂ-ಪೂ ಏರಿಸುವದನ್ನೇ ಎಲ್ಲರೂ ಪ್ರೀತಿಯಿಂದ ಸ್ವೀಕರಿಸಿದರು. 'ಪೂ' ದ್ರಾವಿಡಭಾಷಾವರ್ಗದ ಮಾತು. ಇದು ಸಂಸ್ಕೃತದಲ್ಲಿ ಸೇರಿ ಪೂಜನವಾಯಿತೆಂದು ಅನೇಕ ವಿದ್ವಾಂಸರಾದ ಸಂಶೋಧಕರು ಕಂಡುಹಿಡಿದಿರುವರು.

ಇಂತಹ ಇನ್ನೂ ಹಲವು ಉದಾಹರಣಗಳನ್ನು ಹೇಳಬಹುದು. ಭಿನ್ನ ಜನಾಂಗಗಳ ಸಂಬಂಧ-ಸಂಸರ್ಗದಿಂದ ಪರಸ್ಪರರ ಆಚಾರ-ರೂಢಿಗಳ ಮೇಲೆ ಬಹಳ ದೊಡ್ಡ ಪರಿಣಾಮವಾಗುತ್ತದೆ. ಇದು ಒಂದು ಬಗೆಯಿಂದ ಮಾನವನ ಪ್ರಗತಿಗೇ ಕಾರಣವಾಗುತ್ತದೆ. ಹಳೆ ಮತ್ತು ಹೊಸ ಆಚಾರ-ವಿಚಾರಗಳ ಎಳೆದಾಟದಲ್ಲಿ ಅವುದು ಯುಕ್ತ, ಅವುದು ಅಯುಕ್ತ ಎಂಬ ನಿರೀಕ್ಷಣ, ಪರೀಕ್ಷೆಗಳಿಗೆ ಆರಂಭವಾಗುವದು. ಇದರಿಂದ ಸಮಾಜದಲ್ಲಿ ವಿಚಾರಜಾಗ್ರತಿಯಾಗಿ ಒಳಿತು ಇರುವದನ್ನು ಸ್ವೀಕರಿಸಿ, ಕೆಡುಕಾದುದನ್ನು ಬಿಟ್ಟುಕೊಡಬೇಕೆಂಬ ಮಾತು ನಿಶ್ಚಿತವಾಗುವದು. ಸುಮ್ಮನೆ ರೂಢಿಯ ದಾಸರಾಗಿ ಸಂಪ್ರದಾಯಶರಣರಾಗಿ ಬಾಳನ್ನು ಕೀಳುಸ್ಥಿತಿಗೆ ಒಯ್ಯುವದು ಸರಿಯಲ್ಲ. ಅಥವಾ ಸಂಪ್ರದಾಯಗಳೆಂದೊಡನೆ ಅವೆಲ್ಲವೂ ಕೆಡಕಾದುವೇ ಇರುತ್ತವೆಂದು ಪೂರ್ವಗ್ರಹ ದೂಷಿತರಾಗುವದೂ ಒಳಿತಲ್ಲ. ಶಿಷ್ಟಾಚಾರ ಮತ್ತು ಸಂಪ್ರದಾಯಗಳ ಆಧಾರದ ಮೇಲೆಯೇ ಆವುದೊಂದು ನಾಡಿನ ಸಂಸ್ಕೃತಿಯು ನಿಂತುಕೊಂಡಿರುತ್ತದೆ. ಜನಾಂಗದ ಏಳಿಗೆಗೆ ಸಹಾಯಕವಾದಂತಹ ಶಿಷ್ಟಾಚಾರ-ಸಂಪ್ರದಾಯಗಳನ್ನು ಅವು ಕೇವಲ ಹಳೆಯವೆಂಬುದಿಷ್ಟೇ ನಿಮಿತ್ತದಿಂದ ಬಿಟ್ಟುಬಿಡುವದು ಜಾಣತನವಲ್ಲ. ಸಂಪ್ರದಾಯ ಶರಣರಾಗಿರುವದು ಒಳಿತಲ್ಲವೆಂದರೆ ಸ್ವೈರವೃತ್ತಿಯವರಾಗಿರೆಂದು ಹೇಳಿದಂತಾಗಲಿಲ್ಲ. ವಿಚಾರಪೂರ್ವಕವಾಗಿ ಹಳೆ-ಹೊಸದರ ಸಮನ್ವಯ ಮಾಡುವದರಲ್ಲಿಯೇ ನಮ್ಮ ಹಿತವಿದೆ; ನಮ್ಮ ಉನ್ನತಿಯಿದೆ. ಹಳೆ ಮತ್ತು ಹೊಸದರ ಸಮನ್ವಯವೆಂದರೇ ನಿನ್ನೆ ಮತ್ತು ನಾಳೆಗಳ ಸರಿಯಾದ ಜೋಡಣೆ. 'ನಿನ್ನೆ' ಬಿಟ್ಟರೆ 'ಇಂದು' ಇಲ್ಲ; ಇಂದು ಇಲ್ಲದಿದ್ದರೆ 'ನಾಳೆ' ಎಂಬುದಿಲ್ಲ. ನಿನ್ನೆ, ಇಂದು ಮತ್ತು ನಾಳೆಗಳ ಪ್ರವಾಹವು ಅಖಂಡವಾಗಿದೆ. ನಿನ್ನೆಯಿಂದ ನಾಳೆಯನ್ನು ಕಡಿದು ಬೇರ್ಪಡಿಸಲಿಕ್ಕಾಗುವದಿಲ್ಲ. ಹಳೆಯ ಹಿಂದಿನ ಪರಂಪರೆಗಳನ್ನು ವಿಚಾರ-ವಿಮರ್ಶೆಗಳಿಂದ ಪರಿಶುದ್ಧಗೊಳಿಸಿಕೊಳ್ಳಬೇಕು. ಹಿಂದಿನ ಸಂಬಂಧವೇ ಬೇಡವೆಂದು ಮೊದಲಿನ ಸಂಪ್ರದಾಯಗಳಲ್ಲಿ ಒಳ್ಳೆಯವಾಗಿರುವಂತಹವುಗಳನ್ನೂ ನಾಶಮಾಡಿಬಿಡಲಿಕ್ಕಾಗದು. "ಹಳೆಯದೆಲ್ಲ ಹೊನ್ನು" ಎಂದು ಹೊಗಳಿಕೊಳ್ಳುವವರಂತೆ, "ಹಿಂದಿನದೆಲ್ಲವೂ ಹೊಲ್ಲ" ಎಂದು ತೆಗಳುವವರೂ ಅತಿವಾದಿಗಳು; ಏಕಾಂಗಿಗಳು. ಇವರದು ತೂಕ ತಪ್ಪಿದ ಮಾತು; ಹದವಿಲ್ಲದ ನುಡಿ.

ಹಿಂದು-ಮುಂದಿನ ಅರಿವು ಇದ್ದವರು ಹೀಗೆ ಎಂದೂ ಮಾತನ್ನು ಆಡರು; ನಿನ್ನೆ-ನಾಳೆಗಳ ತಿಳುವಳಿಕೆ ಇದ್ದವರು ತಾಳಗೆಟ್ಟು ಉಸುರಲಾರರು. "ನಮ್ಮ ಸಂಸ್ಕೃತಿಯೇ ಮಿಗಿಲಾದುದು. ನಮ್ಮ ಧರ್ಮವು ಎಂದರೆ ಸಂಪ್ರದಾಯಗಳು ಅನಾದ್ಯನಂತ ಕಾಲದಿಂದ ಇದ್ದಕ್ಕಿದ್ದಂತೆ ಉಳಿದುಬಂದಿವೆ!" ಎಂಬೀ ಬಗೆಯಾಗಿ ಹೆಮ್ಮೆ ಕೊಚ್ಚಿಕೊಳ್ಳುವವರ ಮಾತಿನಲ್ಲಿ ಹುರುಳಿಲ್ಲ. ಸಂಪ್ರದಾಯ-ರೂಢಿಗಳು ಕಾಲಕಾಲಕ್ಕೆ ಹೇಗೆ ಬದಲಾಗುತ್ತವೆ, ಹಳೆಯ ರೂಢಿಗಳು ಹೋಗಿ ಹೊಸ ರೂಢಿಗಳು ಕಾಲಕ್ರಮದಲ್ಲಿ ಹೇಗೆ ಬಂದು ಸೇರಿಕೊಳ್ಳುತ್ತವೆ ಎಂಬುದರ ಎಚ್ಚರಿಕೆಯಿದ್ದವರು ಮೇಲಿನಂತೆ ಮಾತನಾಡರು.

ಕರ್ನಾಟಕದಲ್ಲಿ ಹಿಂದಿನಂತೆ ಇಂದು ಜೈನಸಂಸ್ಕೃತಿ, ವೀರಶೈವಸಂಸ್ಕೃತಿ, ಬ್ರಾಹ್ಮಣಸಂಸ್ಕೃತಿ ಎಂಬೀ ತೆರನಾಗಿ ಸಂಕುಚಿತ ವಿಭಾಗಗಳನ್ನು ಮಾಡಿಕೊಂಡು 'ನಮ್ಮ ಸಂಸ್ಕೃತಿ ಹೆಚ್ಚು, ನಮ್ಮ ಸಂಸ್ಕೃತಿ ಮಿಗಿಲು' ಎಂದು ಹೊಡೆದಾಟ-ಹೋರಾಟವನ್ನಾರಂಭಿಸಿದರೆ ಕನ್ನಡ ಜನಾಂಗವು ಮುಂದುವರಿಯುವ ಆಸೆಯೇ ಇಲ್ಲ. ಇಂದು ಈ ಬಗೆಯ ಸಂಕುಚಿತ ವರ್ಗೀಕರಣಕ್ಕೆ ಅವಕಾಶವಿಲ್ಲ. ಜಗತ್ತು ಮುಂದುವರಿಯುತ್ತಲಿದೆ. ಇಂದು ಒಂದೇ ಒಂದು ದೊಡ್ಡ ವಿಭಾಗ: "ಮಾನವ ಸಂಸ್ಕೃತಿ". ಮಾನವ ಸಂಸ್ಕೃತಿಗೆ ಪೋಷಕವಾಗುವಂತೆ ನಮ್ಮ ನಮ್ಮ ನಾಡಿನ ಉಪಾಂಗಗಳನ್ನು ನಾವು ವಿರಚಿಸಿಕೊಳ್ಳಬೇಕು. ಇದುವೇ ಇಂದಿನ ಗುರಿ.

ಅಗ್ನಿವಿದ್ಯೆ - ಎದ್ದೇಳು ಕನ್ನಡಿಗಾ

ಅರಿಕೆ

ಇದರೊಳಗಣ ಎರಡನೆಯ ಪ್ರಬಂಧವು ಕ್ರಿ.ಶ. ೧೯೪೩ರಲ್ಲಿ 'ಎದ್ದೇಳು ಕನ್ನಡಿಗಾ!' ಎಂಬ ಹೆಸರಿನಲ್ಲಿ ಹೊರಗೆ ಬಂದಿತು. ಪುಸ್ತಿಕೆಯು ಚಿಕ್ಕದಾದರೂ ಅದರ ಭಾಷೆ, ಶೈಲಿ ಮತ್ತು ವಿಚಾರಗಳ ಹೊಳಪು ಓದುಗರಲ್ಲಿ ಒಂದು ಬಗೆಯ ಮಿಂಚನ್ನುಂಟು ಮಾಡದೆ ಇರಲಿಲ್ಲ. ಇದಕ್ಕೆ 'ಅಗ್ನಿ ವಿದ್ಯೆ' ಎಂದು ಆ ಪ್ರಕಟನೆಯ ಅರಿಕೆಯಲ್ಲಿಯೆ ಹೆಸರಿಡಲಾಗಿತ್ತು. ಬೃಹದಾರಣ್ಯಕದ ಋಷಿವರ್ಯ ದಧ್ಯಙ್ಙನ 'ಮಧುವಿದ್ಯೆ'ಯ ತೆರದಲ್ಲಿ ಇದು ಶಾಂಡಿಲ್ಯನ 'ಅಗ್ನಿವಿದ್ಯೆ'. ಅಗ್ನಿಯ ಗೋತ್ರವೂ ಶಾಂಡಿಲ್ಯ. ಈ ಬಾರಿ ಇದರಲ್ಲಿ ಮತ್ತೆ ಎರಡು ಹೆಚ್ಚಿನ ಪ್ರಬಂಧ ಸೇರಿಸಿದೆ. ಆದರೆ, ಅವುಗಳ ವಿವೇಚನದ ಶೈಲಿ ಅಲ್ಲಿಯ ಉದ್ದೇಶಕ್ಕೆ ತಕ್ಕಂತೆ ಬೇರೆಯಾಗಿದೆ.

ಈ ಪುಸ್ತಿಕೆ ಮೊದಲ ಬಾರಿ ಪ್ರಕಟವಾದಾಗ ಅದನ್ನೋದಿ ಹಿಗ್ಗಿ ಕೆಲರು ಕಾಗದ ಬರೆದರು. ಅವೆಲ್ಲವುಗಳ ಪ್ರಾತಿನಿಧಿಕವೆಂದು, ಶ್ರೀಮಾನ್ ಹರಡೇಕರ್ ಮಂಜಪ್ಪನವರು ಶರಣರ ಸಂದೇಶದಲ್ಲಿ ಪ್ರಕಟಿಸಿದ ಅಭಿಪ್ರಾಯವನ್ನೆ ಎಲ್ಲರ ಅವಗಾಹನೆಗಾಗಿ ಇಲ್ಲಿ ಕೊಟ್ಟಿದೆ. ಅವರಂತಹ ಲೇಖನವ್ಯವಸಾಯದಲ್ಲಿ ಬಲ್ಲಿದರೂ ಹಿರಿಯರೂ ಆದವರ ಅಭಿಪ್ರಾಯವೆಂದು ಅದಕ್ಕೆ ಇನ್ನೂ ಹೆಚ್ಚಿನ ಮಹತ್ವವಿದೆ.

> 'ಇದೇನೋ ನೋಡಲಿಕ್ಕೆ ಬಹು ಚಿಕ್ಕ ಪುಸ್ತಕ. ಆದರೆ, ಇದರಲ್ಲಿರುವ ವಿಚಾರಗಳು ಬಹು ಘನವಾದವುಗಳು. ಎಷ್ಟೋ ಹೆಬ್ಬೊತ್ತಿಗೆಗಳಲ್ಲಿ ಹುಡುಕಿದರೆ ದೊರೆಯದಿರುವ ಮಹತ್ವದ ಸಂಗತಿಗಳನ್ನು ಈ ಪುಸ್ತಕದ ಒಂದೇ ಪುಟದಲ್ಲಿ ಕಾಣಬಹುದು. ಶ್ರೀಮಾನ್ ಶಂ. ಬಾ. ಜೋಶಿ ಅವರು ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾದ ಸ್ಫೂರ್ತಿದಾಯಕ ಪುಸ್ತಕವಿದನ್ನೊಂದು ಬರೆದಿದ್ದಾರೆಂದು ಹೇಳಬಹುದು. ಮನುಷ್ಯನ ನವಜೀವನಕ್ಕೆ ಕಾರಣವಾಗುವ ಅಮೋಘ ವಿಚಾರಗಳನ್ನು ಸೂತ್ರರೂಪವಾಗಿ ಚಿಕ್ಕ ಚಿಕ್ಕ ವಾಕ್ಯಗಳಿಂದ ಮನಸ್ಸಿಗೆ ನಾಟುವ ಶಬ್ದಗಳ ಮೂಲಕ ಬರೆದಿರುವ ಶ್ರೀಮಾನ್ ಶಂ. ಬಾ. ಜೋಶಿ ಅವರ ಶೈಲಿಯು ಅದ್ವಿತೀಯವಾದುದು.
>
> ಈ ಸ್ಫೂರ್ತಿದಾಯಕ ಪುಸ್ತಕದ ಉಪಯುಕ್ತತೆಯು ವಾಚಕರಿಗೆ ವ್ಯಕ್ತವಾಗದಿರಲಾರದು. ಹಿಂದಿನ ಕಾಲದ ಅಗ್ನಿಪೂಜೆಯ ಉದ್ದೇಶವು ಏನೇ ಇರಲಿ, ಈಗ ಶ್ರೀಮಾನ್ ಜೋಶಿ ಅವರು ಅದಕ್ಕೆ ಕೊಟ್ಟ ಅರ್ಥವು ಬಹು ಸಮಂಜಸವೂ ಶ್ರೇಯೋಭಿವೃದ್ಧಿಗಳಿಗೆ ಕಾರಣವೂ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಈಗ ಇಂತಹ ಅಗ್ನಿಹೋತ್ರಿಗಳು ಎಲ್ಲರೂ ಆಗಬೇಕಾದುದು ಅತ್ಯಗತ್ಯ.

ಲೇಖಕ ಮಹಾಶಯರು ಈ ಪುಸ್ತಕದ ಮೂಲಕ ತಮ್ಮ ಉಜ್ವಲ ವಿಚಾರ ಗಳನ್ನು ಕನ್ನಡಿಗರ ಮುಂದೆ ಈ ಪ್ರಕಾರ ಇಟ್ಟು ಉತ್ಸಾಹಗೊಳಿಸಿ ಮಹೋಪಕಾರ ಮಾಡಿದುದಕ್ಕೋಸ್ಕರ ಇವರನ್ನು ನಾವು ಹೃತ್ಪೂರ್ವಕ ಅಭಿನಂದಿಸುತ್ತೇವೆ.

ಈ ಪುಸ್ತಕವನ್ನು ಪ್ರತಿಯೊಬ್ಬ ಕನ್ನಡಿಗರೂ, ಮುಖ್ಯವಾಗಿ ತರುಣರು ಅಗತ್ಯವಾಗಿ ಓದಬೇಕು. ಉದಾರಿಗಳು ಅನ್ನಬಟ್ಟೆಗಳನ್ನು ದಾನಮಾಡಿ ಪುಣ್ಯಗಳಿಸುವಂತೆ ಜ್ಞಾನದಾನದ ಒಂದು ಹೊಸ ರೀತಿಯಲ್ಲಿ ಕಲಿತು ಇಂಥ ಪುಸ್ತಕಗಳನ್ನು ಸಾವಿರಾರು ತರಿಸಿ, ಕೊಂಡುಕೊಳ್ಳಲು ಸಮರ್ಥರಿಲ್ಲದ ತರುಣರಿಗೂ ಜ್ಞಾನದ ಹಸಿವೆಯುಳ್ಳವರಿಗೂ ಉಚಿತವಾಗಿ ಕೊಟ್ಟು ನಾಡು-ನುಡಿಗಳ ಉನ್ನತಿಯನ್ನು ಮಾಡಿದ ಹೆಚ್ಚಿನ ಪುಣ್ಯವನ್ನು ಹೊಂದಬೇಕಾಗಿ ನಮ್ಮ ಒತ್ತಾಯದ ವಿಜ್ಞಾಪನೆ.

ಕಾಗದ ಮತ್ತು ಮುದ್ರಣದ ತೊಂದರೆಯ ಮೂಲಕ ಇದನ್ನು ಸಂಪೂರ್ಣವಾಗಿ ಬರೆಯಿಸಿ ಪ್ರಕಟಿಸಲು ಆಗಲಿಲ್ಲ. ಆದರೂ ಹಿಂದಿನ ಆವೃತ್ತಿಯಂತೆ ಇದೂ ಓದುಗರಿಗೆ ಅಕ್ಕರೆಯಾದೀತೆಂದು ಹಾರೈಕೆ.

ಪ್ರಕಾಶಕರು

ಪೂರ್ವಪ್ರಸ್ತಾವ

ಬೆಂಕೆಯು ಗೊತ್ತಾಗದೆ ಇದ್ದರೆ ಮಾನವನು ಇಂದಿಗೂ ಪಶುವರ್ಗದಿಂದ ಬೇರೆಯಾಗಿರುತ್ತಿದ್ದಿಲ್ಲವೆಂದು ಎಲ್ಲ ಬಲ್ಲಿದರೂ ಒಪ್ಪಿಕೊಳ್ಳುತ್ತಾರೆ. ಮಾನವನ ಎಲ್ಲ ಸುಧಾರಣೆಗಳಿಗೆ ಆರಂಭವು, ಆತನಿಗೆ ಬೆಂಕೆಯನ್ನು ಮಾಡುವುದು ಗೊತ್ತಾದಂದಿನಿಂದಲೇ. ಬೆಂಕೆ ಗೊತ್ತಾಗುವ ಮೊದಲು ಮಾನವನಿಗೆ ಬೇಯಿಸಿ ತಿಂಬುವುದೂ ತಿಳಿದಿರಲಿಲ್ಲ. ತೀರ ಆರಂಭ ಕಾಲದಲ್ಲಿಯೂ ಮಾನವನ ಬಾಳಿಗೆ ಬೆಳಕನ್ನಿತ್ತುದು ಬೆಂಕೆಯೇ.

ಮಾನವನ ಬಾಳಿಗೆ ಬೆಳಕು ದೊರೆತು-ದೊರೆಯುವುದೂ ಬೆಂಕೆಯಿಂದಲೇ, ಎಂಬುದಿದು ಹೊರಗಣ ಬೆಂಕೆಯಂತೆ ಒಳಗಣ ಬೆಂಕೆಗೂ ಸರಿಹೋಗುತ್ತದೆ. ಜಠರಾಗ್ನಿಯು ಮಂದವಾಗುತ್ತಲೆ ದೇಹವು ರೋಗದ ಆಗರವಾಗುವುದು. ಆದುದರಿಂದ 'ಅಗ್ನಿ ಮೂಲಾನಿ ಕಾರ್ಯಾಣಿ' ಎಂಬುದು ವೈದ್ಯರ ಮೊದಲನೆಯ ಸೂತ್ರ. ಜಠರಾಗ್ನಿಯಲ್ಲಿ ಹಾಕಿದ ಆಹುತಿಯನ್ನು ಆತನು (ಅಗ್ನಿಯು) ಉಳಿದ ಇಂದ್ರಿಯ (ದೇವತೆ)ಗಳಿಗೆ ಒಯ್ದು ಮುಟ್ಟಿಸುವನು. ಊಟವೂ ಒಂದು ಯಜ್ಞವೆಂದು ವೇದೋಪನಿಷತ್ತುಗಳು ಹೇಳುತ್ತವೆ. ಅಗ್ನಿಯು ಜಾಗೃತವಿರದೆ ಮಾಡಿದ ಹವನವು ಹವನವೆ? ಬೂದಿಯಲ್ಲಿ ಮಾಡಿದ ಹೋಮ. ಅದರಿಂದ ಯಾವ ಫಲವು ತಾನೆ ದೊರೆತೀತು? 'ಅಗ್ನಿ ಮುಖಾಃ ವೈ ದೇವಾಃ' ಎಂಬ ಆದ್ಯರ ವಚನ ಅನುಭವಸಿದ್ಧವಾಗಿದೆ. ನಾವು ಅಗ್ನಿಯನ್ನು ಆರಾಧಿಸಿ, ಯಜ್ಞಮಾಡಬೇಕು. ಅಗ್ನಿಯ ಮುಖಾಂತರವಾಗಿ ಆ ಆಹುತಿಯು ದೇವತೆಗಳಿಗೆ ಸಲ್ಲುವುದು. ಇಂತು ಪೂಜಿಸಿಕೊಂಡ ದೇವತೆಗಳು ಸಂತುಷ್ಟರಾಗಿ ನಮ್ಮ ಏಳ್ಗೆಗೆ ಸಹಾಯಕರಾಗುತ್ತಾರೆ. ಹೀಗೆ 'ಪರಸ್ಪರಂ ಭಾವಯಂತಃ ಶ್ರೇಯಃ ಪರಂ ಅವಾಪ್ಸ್ಯಥ' ಎಂದು ಗೀತೆಯು ಹೇಳುವುದು ಅಕ್ಷರಶಃ ನಿಜವಾಗಿದೆ. ಜಠರದಲ್ಲಿರುವ ಅಗ್ನಿನಾರಾಯಣನನ್ನು ಆರಾಧಿಸಿ, ಆತನ ಮುಖಾಂತರವಾಗಿ ಉಳಿದ ಇಂದ್ರಿಯ-ದೇವತೆಗಳಿಗೆ 'ನ ಮಮ' (ನನಗಲ್ಲ. ಎಂದರೆ ಜಿಹ್ವಾಲೌಲ್ಯಕ್ಕಲ್ಲ; ಆ ದೇವತೆಗಳಿಗೆ) ಎಂದು 'ಹವಿಸ್ಸನ್ನು' ಅರ್ಪಿಸಿದಲ್ಲಿ ಈ 'ಯಜಮಾನನು' ಆರೋಗ್ಯಸಂಪನ್ನನಾಗಿ ಧನಕನಕಾದಿಗಳನ್ನು ಪಡೆದು ಮಕ್ಕಳು ಮರಿಗಳಿಂದೊಡಗೂಡಿ ಸಮೃದ್ಧ ಸೌಖ್ಯವನ್ನು ಅನುಭವಿಸುವನು; ಪರಮ ಶ್ರೇಯಸ್ಸಿನ ಪಾಲುಗಾರನಾಗುವನು; (ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ ಮಹಾನ್ ಕೀರ್ತ್ಯಾ) ಎಂದು ಈ ಯಜ್ಞದ ಮಹಿಮೆಯನ್ನು ಪುರಾತನರು ಹೇಳಿದ್ದು ಸ್ವಾನುಭವದಿಂದಲೇ. ಈ ಯಜ್ಞವನ್ನು ಸರಿಯಾಗಿ ಜರುಗಿಸಿದವನಿಗೆ ಪುರಾತನರ ಮಾತಿನ ಮನವರಿಕೆಯು ಈಗಲೂ ಆಗದೆ ಇರದು.

'ಶಕ್ತಿ' ದೇವಿಯು ಎಲ್ಲಿ ಹುಟ್ಟುವಳು, ಎಂಬುದನ್ನು 'ಲಲಿತಾ ಸಹಸ್ರ-ನಾಮಾವಳಿಯೊಳಗಿನ ಒಂದು ಉಕ್ತಿಯಿಂದ ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ. ಆ ದೇವಿಗೆ ನೀನು 'ಚಿದಗ್ನಿಕುಂಡ ಸಂಭೂತೇ' ಎಂದು ಒಂದೆಡೆಗೆ ಸಂಬೋಧಿಸಿದ್ದುಂಟು. ಪಾಂಡವರಿಗೆ ಶೌರ್ಯೋತ್ಸಾಹಗಳನ್ನೀವ ದ್ರೌಪದಿಯನ್ನು 'ಅಗ್ನಿಪುತ್ರೀ' ಎಂದು

ವ್ಯಾಸರು ವರ್ಣಿಸಿರುವ ಸಂಕೇತವೂ (Symbolism) ಈ ಪ್ರಾಚೀನ ಪರಂಪರೆಯನ್ನು ಅನುಸರಿಸಿಯೆ ಇದೆ. ಅಗ್ನಿಯಿಂದಲ್ಲದೆ ಬೇರೆಡೆಯಲ್ಲಿ ಶಕ್ತಿಯು ಹುಟ್ಟಲಾರದು. ಇದು ಭೌತಶಾಸ್ತ್ರದಲ್ಲಿ ಎಷ್ಟು ಸರಿಯೋ ಅಷ್ಟೇ ಆಧ್ಯಾತ್ಮಮಾರ್ಗದಲ್ಲಿಯೂ ಅನುಭವಸಿದ್ಧ ಸಂಗತಿ.

'ಅಗ್ನಿಂ ಈಡೇ' ಎಂದು ಋಗ್ವೇದದ ಆರಂಭವು ಅಗ್ನಿಸ್ತುತಿಯಿಂದಲೇ ಆದುದು ಅತ್ಯಂತ ಅರ್ಥಪೂರ್ಣ ವಾಗಿದೆ. ಚಿದಗ್ನಿಯು ಪ್ರಜ್ವಲಿತನಾಗಿ ಪ್ರಸನ್ನನಾಗದೆ ಇದ್ದಲ್ಲಿ ಕಣ್ಣಿದ್ದು ಎಲ್ಲವೂ ಕತ್ತಲೆ, ಕಗ್ಗತ್ತಲೆ. ಅರಿವಿನ ತಿಳಿಬೆಳಕಿಗೆ ಒಳಗಿನ ಚಿದಗ್ನಿಯೆ ಮೂಲಕಾರಣ. ಆದುದರಿಂದಲೆ, ಜ್ಞಾನಿಗಳು ಈ ಅಗ್ನಿಯನ್ನು ಎಂದಿನಿಂದಲೂ ಹೊಗಳುತ್ತ ಬಂದಿದ್ದಾರೆ. ಋಗ್ವೇದವು ಜಗತ್ತಿನಲ್ಲಿ ಮೊದಲನೆಯ ಗ್ರಂಥ. ಆ ಗ್ರಂಥದ ಋಷಿಯೆ ಹೇಳುತ್ತಾನೆ. 'ಪೂರ್ವೇಭಿಃ ಋಷಿಭಿಃ ಈಡ್ಯಃ' ಪ್ರಾಚೀನ ಋಷಿಗಳಿಂದ ಅಗ್ನಿಯೇ ನೀನು ಪೂಜ್ಯನಾಗಿರುವೆ!' ಮೂರು ನಾಲ್ಕು ಸಾವಿರ ವರುಷಗಳಾಚೆಯ ಋಗ್ವೇದದ ಋಷಿಗಿಂತಲೂ ಪ್ರಾಚೀನ ಋಷಿಗಳಿಗೂ ಅಗ್ನಿಪೂಜೆಯ ಮಹತ್ವವು ತಿಳಿದಿತ್ತು. ಅಗ್ನಿಪೂಜೆ ಅಷ್ಟು ಪುರಾತನಕಾಲದ್ದು ನಮ್ಮ ನಾಡಿನಲ್ಲಿ.*

ಈ ಅಗ್ನಿಯು ಜ್ಞಾನ-ಶಕ್ತಿಗಳ ಪ್ರತೀಕ. ಆದುದರಿಂದ, ಜ್ಞಾನ ಮತ್ತು ಶಕ್ತಿಗಳನ್ನು ಅಪೇಕ್ಷಿಸುವವರೆಲ್ಲರೂ ಅಗ್ನಿ ಪೂಜಕರಾಗಲೇ ಬೇಕಾಗುತ್ತದೆ. ಇವರೆ ನಿಜವಾದ ಅಗ್ನಿ ಹೋತ್ರಿಗಳು. ಅಗ್ನಿ ಹೋತ್ರಿಯು ತನ್ನ ಹೃತ್‌ಕುಂಡದಲ್ಲಿ ಅಗ್ನಿಯು ಯಾವಾಗಲೂ ಜಾಗತ್ರವಾಗಿರುವಂತೆ ಎಚ್ಚರಾಗಿರುತ್ತಾನೆ. ಈ 'ಜಾಗೃತಿ' 'ಎಚ್ಚರ' ಎಂದರೇ ಅರಿವು. ಅರಿವು ಬರುವುದು ಅರೆದಾಟದಿಂದ. (ಪೂರ್ವೋತ್ತರ ಪಕ್ಷಗಳೆಂಬ) 'ಅರಣಿ'ಗಳಿಂದ ತಿಕ್ಕಿ ಕಿಡಿಯನ್ನುಂಟು ಮಾಡುವುದು ಅಗ್ನಿಹೋತ್ರಿಗಳ ವಾಡಿಕೆ. ಇವರು ಯಾರಿಂದಲೂ ಎರವಲು ಬೆಂಕಿ ತರುವಂತಿರಲಿಲ್ಲ. ತಮ್ಮಲ್ಲಿ ತಾವೇ ನೇರ್ಪಡಿಸಿಕೊಳ್ಳಬೇಕೆಂದು ಕಟ್ಟಳೆಯಿದೆ. ತನ್ನಲ್ಲಿ ಕಿಡಿಯುಂಟಾದರೇ ಅದು ಲಾಭದಾಯಕ; ಶುಭದಾಯಕ; ಕಲ್ಯಾಣಪ್ರದ. ಹೆರವರಿಂದ ತರುವುದು ಗೌಣ; ಅಶುಭಕಾರಕ. ಆದುದರಿಂದ ಪ್ರತಿಯೊಬ್ಬ ಅಗ್ನಿಯ ಉಪಾಸಕನೂ ತಾನೇ ಕಿಡಿಯನ್ನು ನಿರ್ಮಾಣ ಮಾಡಿಕೊಳ್ಳಬೇಕು. ಪವಿತ್ರಭಾವನೆಯಿಂದ ಮಡಿಯಲ್ಲಿ ಇರದೆ ಹೋದರೆ ಆಗ ಹುಟ್ಟಿದ ಕಿಡಿ ಸರ್ವನಾಶಕ್ಕೆ ಕಾರಣವಾಗುವ ಸಂಭವವಿದೆ; ಪೂರ್ವೋತ್ತರ ಪಕ್ಷಗಳೆಂಬ ಅರಣಿಗಳು ಸದ್ಭಾವ ಯುಕ್ತವಾಗಿರದೆ ಇದ್ದಲ್ಲಿ ದ್ವೇಷ, ಈರ್ಷೆ, ಅಸೂಯಗಳಿಂದ ಅಪವಿತ್ರವಾದಲ್ಲಿ ಆ ಅರೆತ-ತಿಕ್ಕಾಟಗಳಲ್ಲಿ ಹುಟ್ಟಿದ ಕಿಡಿಯು ಬೇಗೆಯಾಗಿ ಲೋಕದ ಬೇಗುದಿಗೆ ಕಾರಣವಾಗುವುದು.

'ಅಥಾತೋ ಬ್ರಹ್ಮ-ಜಿಜ್ಞಾಸಾ' ಜಿಜ್ಞಾಸೆಯೆಂಬುದೆ ಆ ಕಿಡಿ. ಜಿಜ್ಞಾಸೆ, ಕುತೂಹಲ, ಸಂದೇಹ, ಅಸಂತುಷ್ಟಿ ಎಂಬುವು ಆ ಕಿಡಿಯ ಪರ್ಯಾಯ ನಾಮಗಳು. ಅಗ್ನಿಯ ಪ್ರಾರ್ಥನೆಯು ವೇದದ ಮೊದಲಮಂತ್ರ. ಜಿಜ್ಞಾಸೆಯನ್ನು ಜಾಗೃತಗೊಳಿಸುವುದು ಬ್ರಹ್ಮಸೂತ್ರದ ಮೊದಲ ಮಾತು. ಕುತೂಹಲ-ಸಂದೇಹ-ಅಸಂತುಷ್ಟಿಯು ಗೀತೆಯ ಆರಂಭ. ಮೂಲದಲ್ಲಿ ಈ ಕಿಡಿಯೆ ಇಲ್ಲದಿದ್ದಲ್ಲಿ ಮುಂದಿನ ಯಾವ ಯಜ್ಞವಿಧಾನವೂ ಸಾಧ್ಯವಿಲ್ಲ. ಆದಕಾರಣ ಪರಮ ಶ್ರೇಯಸ್ಸನ್ನು ಕೋರುವವರು ಆಜನ್ಮವೂ ತಮ್ಮಲ್ಲಿ ಈ ಅಗ್ನಿಯನ್ನು ಆರಗೊಡದಂತೆ ಒಂದು ಕಿಡಿಯನ್ನಾದರೂ ಉಳಿಸಿಕೊಳ್ಳಲು ಪ್ರಯತ್ನಪಡಬೇಕು. ಜಿಜ್ಞಾಸೆ, ಕುತೂಹಲ, ಸಂದೇಹ, ಅಸಂತುಷ್ಟಿಗಳು ನಷ್ಟವಾದೊಡನೆ ಮಾನವನೊಳಗಿನ ಬೆಂಕೆಯು ಆರಿ ಆತನ ಕೈಕಾಲು ತಣ್ಣಗಾಗುವವು. ಜೀವನ್ಮೃತಾವಸ್ಥೆಯು ಪ್ರಾಪ್ತವಾಗುವುದು.

ಈ ಕಿಡಿಯನ್ನು ಉಳಿಸಿಕೊಳ್ಳುವ ಕೆಲವೊಂದು ಹಂಚಿಕೆಗಳಿವೆ. ಮೊದಲನೆಯದು ನೋಂಪು. ಎಂದರೆ ವ್ರತ. ನೋವಿನ ನೆನಹು ಇದ್ದವರು ನೋಂಪಿಗಳಾಗುವರು. ವ್ರತಸ್ಥರಾಗಿ ಉಳಿಯುವರು; ಆದುದರಿಂದ ನೋವಿನ ಮರೆವು ಬಾರದಂತೆ ನೋಡಿಕೊಳ್ಳಬೇಕು. ಸೊಕ್ಕು, ನೋವಿನ ನೆನಪಿಲ್ಲದುದರ ಕುರುಹು. ವಿನಮ್ರನು

---

* 'ಅಗ್ನಿ' ಎಂಬ ಮಾತನ್ನು ಪುರಾತನ ಉಪನಿಷತ್‌ಕಾರರ ದೃಷ್ಟಿಯಿಂದ ವಿವರಿಸುವ ಬಗೆಯನ್ನು ಇಲ್ಲಿ ಕಾಣುತ್ತೇವೆ. ಈ ಅಂಶವು 'ಋಗ್ವೇದಸಾರ ನಾಗಪ್ರತಿಮಾ ವಿಚಾರ' ಗ್ರಂಥ ಬರೆಯುವ ಹೊತ್ತಿಗೆ ತೌಲನಿಕ ಸಂಸ್ಕೃತಿಶಾಸ್ತ್ರ ಹಾಗೂ ಸಂಕೇತ ಶಾಸ್ತ್ರಗಳ ನೆಲೆಯಿಂದ ಬೇರೆಯಾಗುತ್ತದೆ (ಸಂ)

ನೋಹಿಯಾಗಿರುವವನು. ನೋವಿನಲ್ಲಿ ತರಗತಿಗಳಿವೆ; ಹಣವಿಲ್ಲವೆಂಬ ನೋವು; ಹೆಣ್ಣು ದೊರೆತಿಲ್ಲವೆಂಬ ನೋವು; ಪದವಿಪಟ್ಟವಾಗಿಲ್ಲವೆಂಬ ನೋವು; ಮಕ್ಕಳು ಮರಿಗಳಾಗಿಲ್ಲವೆಂಬ ನೋವು; ತಿಳಿವು ತಲೆದೋರಬೇಕೆಂಬ ನೋವು; ತನ್ನಿಂದ ಒಳ್ಗೆಲಸ, ನಲ್ಗೆಲಸ, ಹಿರಿಗೆಲಸಗಳಾಗಲಿಲ್ಲವೆಂಬ ನೋವು; ಜನ್ಮಸಾರ್ಥಕತೆಯು ಹೇಗೆಂಬ ನೋವು. ಮೇಲ್‌ತರಗತಿಯ ನೋವು ಮೇಲ್ಮಟ್ಟಕ್ಕೆ ಒಯ್ಯುವುದು. ಬ್ಲೇಕನೆಂಬ ಇಂಗ್ಲಿಷ್ ಕವಿಯು 'ನಿಮಗೆ ಯಾವ ನೋವು ಇಲ್ಲದಿದ್ದಲ್ಲಿ ಯಾವುದೊಂದು ಕಾಲ್ಪನಿಕ ಅಸಮಾಧಾನ ಕೊರತೆಯನ್ನಾದರೂ ನಿರ್ಮಿಸಿಕೊಂಡು ಆ ಕೊರೆಯನ್ನು ಹೋಗಲಾಡಿಸಿಕೊಳ್ಳಲು ನಿತ್ಯ ಸಾಧಕರಾಗಿರಿ' ಎಂದು ಹೇಳುತ್ತಾನೆ. ಕುಂತಿಯು ಕೃಷ್ಣನಿಗೆ ತನಗೆ ನೋವನ್ನು ಕೊಡು ಎಂದು ಕೇಳಿದ ಕತೆ ನಮ್ಮಲ್ಲಿ ಸುಪ್ರಸಿದ್ಧವಿದೆ.

ನೋಹಿಯಾಗಿರುವುದೆಂದರೆ ಅಳುಮೋರೆಯಿಂದ ಇರುವುದಲ್ಲ. ನೋಹಿಗೆ ನಿರುತ್ಸಾಹ ವೈರಿ. ಪ್ರತಿಗೆ ತನ್ನ ಇಷ್ಟಸಿದ್ಧಿಯಲ್ಲಿ ಯಾವಾಗಲೂ ಶ್ರದ್ಧೆಯು ಇದ್ದೇ ಇರುತ್ತದೆ. ನಿರಾಶೆಯು ನಪುಂಸಕತ್ವದ ಲಕ್ಷಣ. ಆದಕಾರಣ ನಿರಾಶೆಗೆ ಕಾರಣವಾಗುವ ನೋವು ರೋಗ. ಅದನ್ನು ಹೊಡೆದೋಡಿಸಬೇಕು. ನೋವು ಯಾತಕ್ಕಾಗಿ? ಆತ್ಮನಿರೀಕ್ಷಣೆಯಿಂದ ಯಾವ ಕೊರತೆಯಿದೆಯೆಂಬುದನ್ನು ಅರಿತು ಅದನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ, ಪರಿಪೂರ್ಣತೆಯ ಆದರ್ಶವನ್ನು ಕಣ್ಣೆದುರಿಗೆ ಇರಿಸಿಕೊಂಡವನು ನಿತ್ಯದಲ್ಲಿಯೂ ನೋಹಿಯಾಗಿರುವವನು. ಏಕೆಂದರೆ ಅದರಿಂದ ತನ್ನ ಕೊರತೆಗಳ ಅರಿವಾಗಿ ಅವನು ಯಾವಾಗಲೂ ನಯ-ವಿನಯವಂತನಾಗಿರುತ್ತಾನೆ. ಈ ವಿನಯಕ್ಕೆ ತಿಳಿವಳಿಕೆಯೆಂದು ಹೆಸರು.

ಎರಡನೆಯದು ತನ್ನ ಸಂದೇಹಗಳಿಗೆ ಕಿವಿಗೊಡುವುದು. ಏನನ್ನಾದರೂ ಓದುವಾಗ, ಯಾರ ಮಾತನ್ನಾದರೂ ಆಲಿಸುವಾಗ ಅದು ಎಷ್ಟೋ ಸುಸಂಗತವಾಗಿ ಮೇಲೆ ತೋರಿದರೂ ತಮ್ಮ ಒಳಗೊಳಗೇ ಅದರಲ್ಲಿ ಏನೊ ಒಂದು ವಿಸಂಗತಿ ತೋರುತ್ತಿರುತ್ತದೆ. ಒದಗುತ್ತಿರುವ ಸಂಗತಿಗಳಲ್ಲಿ ಜನಸಾಮಾನ್ಯರು ತುಂಬ ಹಿಗ್ಗುಗೊಳ್ಳುತ್ತಿದ್ದರೂ ಅದರಲ್ಲಿ ತಮಗೆ ಕೆಲವೊಂದು ಕೊರತೆಯು ಕಂಡುಬರುತ್ತಿರುತ್ತದೆ. ಇಂತಹ ಹೊತ್ತಿನಲ್ಲಿ ತಮ್ಮ ಸಂದೇಹ, ತಮ್ಮ ಭಿನ್ನಾಭಿಪ್ರಾಯ ಅಥವಾ ತಮ್ಮ ಅಸಮಾಧಾನವನ್ನು, ತಮಗೇ ಅದರ ಯುಕ್ತಾಯುಕ್ತತೆಯ ಸಂಪೂರ್ಣ ಅರಿವು ಇಲ್ಲದೆ, ಒಮ್ಮೆಲೆ ತೋರ್ಪಡಿಸುವುದು ಶಿಷ್ಟಸಮ್ಮತವಾಗಲಾರದು. ಎಷ್ಟೋ ಬಾರಿ ಹೀಗೆ ಮಾಡುವುದರಿಂದ ಸಜ್ಜನರ ಅಪಮಾನವಾದಂತಾಗಬಹುದು. ತಮ್ಮ ಸಮಾಧಾನ, ಸಂದೇಹ, ಅಥವಾ ಭಿನ್ನ ವಿಚಾರವನ್ನು ಫಕ್ಕನೆ ಅಸಮರ್ಪಕ ರೀತಿಯಲ್ಲಿ ಹೇಳಿಬಿಡುವುದಕ್ಕಿಂತ ಅದನ್ನು ಸರಿಯಾದ ರೀತಿಯಲ್ಲಿ ವ್ಯಕ್ತಪಡಿಸಲು ಬೇಕಾಗುವ ಧೈರ್ಯ, ತಾಳ್ಮೆ ವಿವೇಚನದ ರೀತಿಗಳನ್ನು ಅರಿತುಕೊಂಡು ಅದನ್ನು ವ್ಯಕ್ತಪಡಿಸುವುದು ಲೇಸು. ಹಲವರು ಲೋಕರೂಢಿಗೆ ಹೆದರಿ ತಮ್ಮ ಅಂತರಂಗದೊಳಗಿನ ಚೈತನ್ಯಶಕ್ತಿಯು ಪಡುವ ಸಂದೇಹಗಳಿಗೆ ಸ್ವಲ್ಪವೂ ಇಂಬುಗೊಡದೆ ಅವನ್ನು ತೊಡೆದುಬಿಡುವರು. ಇನ್ನು ಕೆಲವರು ಯಾವುದಾದರೊಂದು ಮತ, ಪಂಥದ ನೇಣು ಹಾಕಿಕೊಂಡು ಸ್ವತಂತ್ರ ವಿಚಾರ ಶಕ್ತಿಯನ್ನು ಕೊಂದುಬಿಡುವರು.

ಆದುದರಿಂದ, ಈ ದಾರಿಯಲ್ಲಿ ನಡೆದವರು ಇನ್ನೂ ಒಂದು ಮಾತನ್ನು ನೆನೆಯಬೇಕು. ಸತ್ಯದ ಗುತ್ತಿಗೆ ಯಾರಿಗೆ ಒಬ್ಬರಿಗೇ ಇಲ್ಲ; ಇದು ಮೂರನೆಯ ಮಾತು. ಸತ್ಯದ ಆಧಾರವಿಲ್ಲದೆ ಯಾವುದೊಂದೂ ಅರಗಳಿಗೆಯೂ ಬಾಳಲಾರದು; ಬದುಕಲಾರದು. ಈ ಲೋಕದಲ್ಲಿ ಏಕಾಂತಿಕ ಸತ್ಯ, ಕೇವಲ ಸತ್ಯ, ಸಾರ್ವಕಾಲಿಕ ಸತ್ಯ ಎಂಬೀ ಮಾತುಗಳೆಲ್ಲವೂ ಭಾವಗಮ್ಯ. ಅವ್ಯವಹಾರ್ಯ. ವ್ಯವಹಾರ್ಯವಾಗಿರುವುದು ತಾರತಮ್ಯ. ತಾರತಮ್ಯದ ಲೋಕವಿದು. ಆದುದರಿಂದ ಕೇವಲವಾದಿಗಳ ಅತಿವಾದವು ಏಕಗ್ರಾಹಿಗಳಾದ ಎಗ್ಗರದು. ಅದು ಲೋಕವ್ಯವಹಾರದ ಮಿತಿಯನ್ನು ಮೀರಿದ ಅವ್ಯವಹಾರ. ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ವ್ಯವಹಾರ್ಯವಾಗಿ ಕಂಡರೂ ಒಂದು ಕ್ಷಣಕಾಲ ಮಾತ್ರ. ಪರಿಪೂರ್ಣತೆ ಭಾವಗಮ್ಯವಾದ ಆದರ್ಶದಲ್ಲಿ ಮಾತ್ರ. ವ್ಯವಹಾರದಲ್ಲಿ ಅಡಿಗಡಿಗೂ ಅಪೂರ್ಣತೆಯ ಅನುಭವವು ಬರುವುದು. ಅಪೂರ್ಣತೆಯು ಈ ಲೋಕದಲ್ಲಿಯ ಯಾರಿಗೂ ತಪ್ಪಿದ್ದಲ್ಲ. ಆದರೆ ಇದನ್ನು ಮರೆಯಿಸಿ ತಾವು ಪರಿಪೂರ್ಣರು ಎಂಬಂತೆ ನಟಿಸುವವರೂ, ಹೆರವರಿಗೆ ಹಾಗೆ ಭ್ರಮೆಯನ್ನುಂಟುಮಾಡುವವರೂ ಎಷ್ಟೋ!

ಜನರಿರುತ್ತಾರೆ. ಮಬ್ಬು ಜನಗಳು ಆ ಮಾತಿಗೆ ಮೋಸ ಹೋಗುತ್ತಾರೆ. ಬುದ್ಧಿವಂತರಾದವರೂ ಹಲವರು ತಮ್ಮ ಕಾರ್ಯಸಾಧಿಸಲಿಕ್ಕೊ, ಸ್ವಾರ್ಥಸಾಧಿಸಲಿಕ್ಕೊ ಆ ಲೋಕಭ್ರಮೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತಾರೆ. 'ಈ ನಮ್ಮ ಗುರುಗಳು, ಆಚಾರ್ಯರು, ಮಹಾತ್ಮರು ಅಥವಾ ಸಾಧುಗಳಿಗೆ ಶರಣು ಬನ್ನಿ' ಎಂದು ಗುಲ್ಲು ಎಬ್ಬಿಸುತ್ತಾರೆ. ಈ ಮಹಾ ಪುರುಷರು ಯಾವುದಾದರೊಂದು ವಿಶೇಷ ಶಕ್ತಿಯನ್ನು ಸಂಪಾದಿಸಿಕೊಂಡಿರುವುದು ನಿಜವಿರಬಹುದು. ಆದರೆ ಅವರಿಗೇ ಸತ್ಯದ ಗುತ್ತಿಗೆ ಸಿಕ್ಕಿದೆ; ಅವರು ಹೇಳುವುದೇ ಸತ್ಯವೆಂದು ವಾದಿಸುವುದು ಮಾತ್ರ ಅಯೋಗ್ಯ.

ಸಾಧಕನು ಇಂತಹ ಯಾರಿಗಾಗಲಿ ಶರಣು ಹೋಗಿ, ಅಥವಾ ಅವರ ಕಣ್ಣಿಂದಲೇ ಎಲ್ಲವನ್ನೂ ನೋಡಹತ್ತಿದಲ್ಲಿ ತನ್ನ ಕಣ್ಣುಗಳನ್ನು ಕಳೆದುಕೊಳ್ಳುವನು. ಇಂತಹರ ಅಂತರಾಳದೊಳಗಿನ ಚೈತನ್ಯದ ಕಿಡಿಯು ಆರಿ, ಇವರು ಪರಾವಲಂಬಿಗಳಾಗುವಲ್ಲಿ ಸಂದೇಹವಿಲ್ಲ. ತನ್ನ ಚಿದಗ್ನಿಯನ್ನು ಪ್ರಜ್ವಲಿಸಲು ಈತನು ತಾನೇ 'ಯಜಮಾನ'ನಾಗ ಬೇಕಾಗುತ್ತದೆ. ಇನ್ನೊಬ್ಬರನ್ನು ಯಜಮಾನರನ್ನಾಗಿ ಸ್ವೀಕರಿಸಿದರೆ ಈತನಿಗೆ ತನ್ನ ಅಗ್ನಿಪೂಜೆಯ ಶ್ರೇಯಸ್ಸು ಸಿಕ್ಕದು. ತನ್ನಂತರಂಗದಲ್ಲಿ ಜ್ಯೋತಿಯನ್ನು ಬೆಳಗಿಸಿಕೊಳ್ಳಲು ಅದಕ್ಕೆ ಸ್ವಾಧ್ಯಾಯ, ಅಭ್ಯಸನಗಳೆಂಬ ಸಮಿತ್ತು, ಹವಿಸ್ಸುಗಳನ್ನು ಅರ್ಪಿಸಿ ಯಜನಮಾಡಬೇಕು. ಯಜಮಾನನಾಗಬೇಕು.

ಅತಿಯಾದ ಅಗ್ನಿಮಾಂದ್ಯದಿಂದ ತಿಂದುದು ಅರಗದೆ ಇದ್ದಾಗ ಹೊರಗಿನ ಸಿದ್ಧಾನ್ನವನ್ನು ಅಂತಹ ರೋಗಿಗೆ ಹಾಕುವುದುಂಟು. ಆದರೆ, ಇದು ಕೊನೆಸಾಗುವ ಮಾತಲ್ಲ. ತಾತ್ಪೂರ್ತಿಕ. ಮತ್ತೆ ಅವನು ತನ್ನದನ್ನು ತಾನೇ ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಪಡೆಯಬೇಕು. ಇಲ್ಲವಾದರೆ ಅಂತ್ಯವು ಸಮೀಪಿಸಿತೆಂದು ನಿಶ್ಚಯವಾಗಿ ತಿಳಿಯಬೇಕು. ಹೆರವರ ತತ್ವ, ವಿಚಾರಗಳನ್ನು ಇದ್ದಕಿದ್ದಂತೆ ಸ್ವೀಕರಿಸುವುದು ಚಿದಗ್ನಿಯು ಮಂದವಾದುದರ ಲಕ್ಷಣ. ಆತನ ಚಿತ್ಕಲೆಯು ಕ್ಷೀಣಾವಸ್ಥೆಯನ್ನೈದುದರ ಸೂಚನೆ.

ಸತ್ಯಸಾಧನೆ ಅಥವಾ ತತ್ವಾನುಸಂಧಾನವು ನಮ್ಮ ಕೊರತೆಯನ್ನು ಹೋಗಲಾಡಿಸಲು ಸೇವಿಸುವ ಔಷಧಿ. ಔಷಧಿಯಲ್ಲದ ಸೊಪ್ಪು-ಬೇರುಗಳಿಲ್ಲ. ಆದರೂ ಯಾವನಾಗಲಿ ತನ್ನ ದೇಹಸ್ಥಿತಿಗೆ ಒಗ್ಗುವ ಆವಶ್ಯಕವಾದ ಔಷಧಿಯನ್ನೇ ತಕ್ಕೊಳ್ಳಬೇಕಷ್ಟೆ? ತಮ್ಮ ಹಿರಿಯರು ತಿನ್ನುತ್ತಿದ್ದ ಬಹಳ ಶ್ರೇಷ್ಠ ಔಷಧಿಯೆಂದು ತನ್ನ ಪ್ರಕೃತಿಮಾನವನ್ನು ವಿಚಾರಿಸದೆ ಅದನ್ನು ತಿನ್ನಲಿಕ್ಕಾದೀತೆ? ಸತ್ಯದ ಹಿನ್ನೆಲೆ ತಪ್ಪಿದೊಡನೆ ಯಾವುದೂ ಒಂದರಗಳಿಗೆಯೂ ಉಳಿಯದು. ವಿಚಾರಿಸಿದಲ್ಲಿ ಲೋಕದೊಳಗೆ ಎಲ್ಲೆಲ್ಲೂ ಸತ್ಯವೆ ತುಂಬಿಕೊಂಡಿದೆ. ಆದರೂ ಅದರಲ್ಲಿ ತನ್ನ ಈಗಿನ ದೇಹಸ್ಥಿತಿಗೆ ಯಾವುದು ಹಿತಕರವೊ ಅದನ್ನು ಆತನು ಸೇವಿಸಬೇಕಲ್ಲದೆ, ಬೇರೆಯದು ಎಷ್ಟೇ ಮೋಹಕವೆನಿಸಿದರೂ ಅದಕ್ಕೆ ಬಾಯಿಹಾಕಬಾರದು. ಈ ತಾರತಮ್ಯವನ್ನರಿಯದೆ ಹಾಳಾದವರು ಬಹಳ. ಇಂತಹ ಸಂದರ್ಭಗಳಲ್ಲಿ ತನಗೆ ಯಾವುದು ತಕ್ಕುದೆಂದು ತಿಳಿದುಕೊಳ್ಳಲು ಒಳಗಣ ತಿಳಿಬೆಳಕೆ ಕೊನೆಗೆ ಶ್ರೇಷ್ಠವಾದ ಸಾಧನವಾಗಿದೆ. ಆದುದರಿಂದ ತನಗೆ ಯಾವುದು ಹಿತಕರವೆಂಬುದನ್ನು ನಿರ್ಧರಿಸುವ ಕೊನೆಯ ಅಧಿಕಾರವನ್ನು ಹೊರಗೆ ಹೆರವರಿಗೆ ಯಾರಿಗೂ ಕೊಡದೆ ಆತ್ಮಸಾಕ್ಷಿಯಾಗಿ ಅದನ್ನು ತಾನೇ ನಿರ್ವಹಿಸಬೇಕು.

ಬೆಂಕೆಯನ್ನು ಇದ್ದಲ್ಲಿಯೆ ಬಿಟ್ಟರೆ ಅದರ ಮೇಲೆ ಬೂದಿಯು ಮುಸುಕುವುದು. ಅದಕ್ಕಾಗಿ ಕೆಂಡವನ್ನು ಅಲುಗಾಡಿಸಬೇಕು; ಊಬಬೇಕು; ಅದಕ್ಕೆ ಉರವಲು ಹಾಕಬೇಕು. ಚಿದಗ್ನಿಗೂ ಆರಗೊಡಬಾರದಿದ್ದರೆ ಅದನ್ನು ಒಂದೇ ಪರಿಸ್ಥಿತಿಯಲ್ಲಿ ಇರಗೊಡಬಾರದು. ಇದ್ದಲ್ಲಿಯೆ ಇದ್ದುಕೊಳ್ಳುವುದರಿಂದ ಅದರ ಮೇಲೆ ರೂಢಿ, ಸಂಪ್ರದಾಯಗಳ ಬೂದಿಯು ಮುಸುಕಿ ಅದರ ಕಾವು ಕಡಿಮೆಯಾಗುವುದು.

ಯಾವುದೇ ವಿಷಯವನ್ನು ಒಂವಕ್ಕಿಂತ ಹೆಚ್ಚು ಬದಿಗಳಿಂದ ನೋಡುವದಕ್ಕೆ ಕಲಿಯಬೇಕು. ಒಂದೇ ದಿಕ್ಕಿನಿಂದ ನೋಡುವ ಚಟವು ಅಂಟಿಕೊಂಡರೆ ರೂಢಿಯ ಮೂಲಕವಾಗಿ ಆ ವಿಷಯದೊಳಗಿನ ಹೊಸತನ, ಚೆಲುವು ಅಥವಾ ಕುಂದು ಕೊರತೆ ತಿಳಿಯದಾಗುತ್ತದೆ. ಸ್ಪರ್ಶಸುಖವನ್ನು ಕೊಡುವ ಒಂದು ಸುಖಾಸನದಲ್ಲಿ ಎಡೆಬಿಡದೆ ಕುಳಿತುಕೊಳ್ಳುವುದರಿಂದ ಅದರೊಳಗಿನ ಸುಖವು ಮುಂದೆ ಕಡಿಮೆ ಕಡಿಮೆಯೆನಿಸಹತ್ತುವುದು.

ಸಂವೇದನಾ ಶಕ್ತಿಯೊಳಗಿನ ತೀಕ್ಷ್ಣತೆಯು ನಷ್ಟವಾಗುವುದು. ಹೀಗೆ ಮನಸ್ಸು ಇಂದ್ರಿಯಗಳು ಮರಗಟ್ಟಿದವನು ಬದುಕಿನ ಸುಖವನ್ನು ಅನುಭವಿಸಲಾರನು. ಆದಕಾರಣ ಆಂತರಿಕ ಆದೇಶದ ವಿರುದ್ಧವಾಗಿ ಎಂದೂ ರೂಢಿಗೆ ತಲೆವಾಗಕೂಡದು. ಸಂಪ್ರದಾಯಶರಣರೂ ರೂಢಿದಾಸರೂ ಬೇಗನೆ ತಮ್ಮೊಳಗಿನ ಚಿತ್‌ಶಕ್ತಿಗೆ ಎರವಾಗ ಬೇಕಾಗುತ್ತದೆ. ಆದಕಾರಣ ನಿತ್ಯನೂತನರಾಗಿ ಅರಿತು ಆಚರಿಸಲಿಕ್ಕೆ ಹವಣಿಸುವುದು ಅವಶ್ಯ.

ವೈಶ್ವಾನರ ಅಗ್ನಿಯೆ ತಾನಾಗಿ ಎಲ್ಲ ಜೀವಿಗಳ ದೇಹದಲ್ಲಿ ಪರಮಾತ್ಮನು ವಾಸವಾಗಿರುವುದಾಗಿ ಗೀತೆಯಲ್ಲಿ ಹೇಳಿದೆ. 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ' 'ವೈಶ್ವಾನರ' ಎಂದರೆ ವಿಶ್ವದೊಳಗಿನ ಎಲ್ಲ ಜೀವಿಗಳಿಗೆ ಸಂಬಂಧಪಟ್ಟ ಎಂಬರ್ಥ. ವಿಶ್ವೇದೇವರೂ ಈತನೇ, ವಿಶ್ವೇದೇವನ ಉಪಾಸನೆಯು ಪ್ರತಿಯೊಬ್ಬ ಗೃಹಸ್ಥನ ಕರ್ತವ್ಯವಾಗಿದೆ. 'ಬಲವರ್ಧನ ನಾಮಾನಾಂ ಅಗ್ನಿಮ್ ಪ್ರತಿಷ್ಠಾಪಯಾಮಿ' ಎಂದು ಅದರಲ್ಲಿ ದಿನಾಲು ಹೇಳುವ ವಾಡಿಕೆ. ಮೇಲ್ಕಾಣಿಸಿದ ರೀತಿಯಲ್ಲಿ ದಿನಾಲು ನಡೆಯುವುದರಿಂದ 'ಬಲವರ್ಧನ' ಕಾರಕ ಅಗ್ನಿಯನ್ನು ತನ್ನಂತರಂಗದಲ್ಲಿ ಆತನು ಪ್ರತಿಷ್ಠಾಪಿಸಿಕೊಂಬುವನಲ್ಲದೆ ಸ್ಥೂಲಬೆಂಕಿಯಲ್ಲಿ ಹಾಕುವ ಆಹುತಿಗಳ ಯಾಂತ್ರಿಕ ಕ್ರಮದಿಂದಲ್ಲ.

'ನನ್ನ ಔಷಧಿಯನ್ನು ಸೇವಿಸಿರಿ; ಗುಣವಾಗುತ್ತದೆ;' ಎಂದು ಹೇಳುವ ರಾಮಬಾಣ ಔಷಧಿಯ ಒಬ್ಬ ವೈದ್ಯನಿಗೆ ರೋಗಿಯು, 'ಡಾಕ್ಟರರೆ, ಇನ್ನೂ ಬೇನೆ ಹಾಗೆಯೆ ಇದೆಯಲ್ಲ' ಎಂದನಂತೆ. ಆಗ ಅವನಿಗೆ 'ಹೀಗೋ; ಸರಿ; ಈ ದೇಹ ಕೆಟ್ಟಿದೆ; ಇನ್ನೊಂದು ಒಳ್ಳೇ ದೇಹಪ್ರಾಪ್ತಿಗೆ ನನ್ನ ಔಷಧಿಯು ನೆರವಾಗುತ್ತದೆ' ಎಂದು ಉತ್ತರವಿತ್ತನಂತೆ! ನಮ್ಮ ಧರ್ಮದ ಪುರೋಹಿತರು ಹೇಳುವುದೂ ಹೀಗೆಯೇ. 'ಮುಂದಿನ ಜನ್ಮದಲ್ಲಿ ನಿಮಗೆ ಕಲ್ಯಾಣವಾಗುವುದು' ಎಂದು ಅವರ ಹರಕೆ. ಈ ಜನ್ಮದಲ್ಲೂ ಸುಖವನ್ನೀವ ಅನುಭವಗಮ್ಯವಾದ ಧರ್ಮಾಚರಣೆಯನ್ನು ಹೇಳುವ ಪುರೋಹಿತರು ಇಂದು ಬೇಕಾಗಿದ್ದಾರೆ. ಸತ್ತಮೇಲಿನ ಸ್ವರ್ಗದ ಆಸೆಗಾಗಿ ಈಗಳಿನ ಸುಖವನ್ನು ದುರ್ಲಕ್ಷಿಸುವ ಮೂರ್ಖತನವು ಸಾಕು. 'ಯತೋ ಅಭ್ಯುದಯ ನಿಶ್ರೇಯಸ ಸಿದ್ಧಿಃ ಸ ಧರ್ಮಃ' ಎಂದು ಧರ್ಮದ ಲಕ್ಷಣ. ಅಭ್ಯುದಯಕ್ಕೆ ಕಾರಣವಲ್ಲದ, ಶ್ರೇಯಸ್ಸಿಗೆ ಒಯ್ಯದ ಆಚರಣ ಧರ್ಮವೆ ಅಲ್ಲ. 'ಜಗತಃ ಸ್ಥಿತಿ ಕಾರಣಮ್' ಜಗತ್ತಿನ ಸ್ಥಿತಿಗೆ, ಅದರ ಭದ್ರತೆಗೆ ಕಾರಣವಾದುದು ಧರ್ಮ. ಧರ್ಮವೆಂದರೆ ಸತ್ತಮೇಲಿನ ಕನಸಿನೊಳಗಿನ ಸ್ವರ್ಗ ಮೋಕ್ಷದ ವಿಚಾರವಲ್ಲ. 'ಸಾಕ್ಷಾತ್ ಅಭ್ಯುದಯ ನಿಶ್ರೇಯಸ ಸಾಧಕಃ ಧರ್ಮಃ'

ಔಷಧಿ ಸೇವಿಸಿಯೂ ಗುಣವಾಗಲೊಲ್ಲದು. ಈವರೆಗಿನ ಕ್ರಮದಲ್ಲಿ ನಾವು ಧರ್ಮದ ಹೆಸರಿನಲ್ಲಿ ಏನೇನೊ ಆಚರಿಸುತ್ತ ಬಂದೆವು. ಆದರೆ, ಅದರಿಂದ ನಮ್ಮ ಮೇಲಣ ಪರಕೀಯರ ದಾಳಿಗಳು ತಪ್ಪಲಿಲ್ಲ. ಪರರ ದಾಸ್ಯದಿಂದ ಮುಕ್ತರಾಗಲಿಲ್ಲ. ಅದು ನಮ್ಮ ಭಾರತದ 'ಸ್ಥಿತಿಗೆಕಾರಣ'ವಾಗಲಿಲ್ಲ. ಅದರ ದುಸ್ಥಿತಿಯನ್ನೇ ತಂದಿತು. ಆದುದರಿಂದ ಅದೆಲ್ಲವೂ ಧರ್ಮದ ಹೆಸರಿನಲ್ಲಿ ನಡೆದ ಅಧರ್ಮ, ಅನಾಚಾರವೇ ಸರಿ. ನಮ್ಮ ಧರ್ಮವಚನಗಳ ರಹಸ್ಯಾರ್ಥವನ್ನು ಅರಿತುಕೊಳ್ಳದೆ ಸ್ಥೂಲಾರ್ಥದಿಂದ ಅವನ್ನು ಸ್ವೀಕರಿಸಿ ಕೆಟ್ಟೆವು. ಶಕ್ತಿದೇವಿಯನ್ನು ಒಲಿಸಿಕೊಂಡು ನಾಡಿನ ಹಗೆಗಳನ್ನು ನಾಶಗೊಳಿಸುವುದಕ್ಕಾಗಿ ಶತಚಂಡಿ, ಸಹಸ್ರಚಂಡಿ ಹೋಮ ಹವನಾದಿಗಳನ್ನು ಪೇಶವರೆ ಮೊದಲಾದವರು ಮಾಡಿದರು. ಬೆಂಕೆಯಲ್ಲಿ ತುಪ್ಪ ಸುರುವುದರಿಂದ ಪ್ರಜ್ವಲಿತವಾಗುವ ಹೊರ ಉರಿಯಿಂದ ಹಗೆಗಳು ಎಂದೂ ಸುಟ್ಟು ಹೋಗಲಾರರು. ಹಾಗೆ ಧಗಧಗೆಂದು ಒಳಬೆಂಕೆ ಹೊತ್ತಬೇಕಾಗುತ್ತದೆ. ಆ ಒಳ ಬೆಂಕೆಯ ಸ್ಥೂಲ ರೂಪ, ಈ ಹೊರ ಬೆಂಕೆ. ಒಳಗಣ ಜ್ಯೋತಿಯನ್ನು ಹೊತ್ತಿಸಲು ಹೊರಗಣ ಕೃತಿಗಳು ಪೋಷಕವಾಗುವಂತೆ ಅವುಗಳನ್ನು ಕಾಲಪರಿಸ್ಥಿತಿಯಂತೆ ಮಾರ್ಪಡಿಸಿಕೊಳ್ಳಬೇಕಾಗುತ್ತಿರುತ್ತದೆ. ಒಮ್ಮೆ ಲತ್ತೆಯ ಪೆಟ್ಟಿನಿಂದ ಹುಡುಗನನ್ನು ಎಚ್ಚರಿಸುವುದು ಆವಶ್ಯಕವಾಗಿದ್ದರೆ, ಇನ್ನೊಮ್ಮೆ ಸೂಕ್ಷ್ಮ ಮಾತಿನ ಪೆಟ್ಟು ಸಾಕಾಗಿರುತ್ತದೆ. ಗುರಿಯು ಮುಖ್ಯ. ಅದನ್ನು ಪಡೆವ ಸಾಧನಗಳನ್ನು ಆಯಾ ಕಾಲಮಾನಕ್ಕೆ ತಕ್ಕ ರೀತಿಯಲ್ಲಿ ಬದಲಿಸಿಕೊಳ್ಳದೆ ಹೋದರೆ ನಾವು ಗುರಿಗಾರರೆಂದೆನಿಸಿಕೊಳ್ಳದೆ ಕುರಿಗಳೆಂದು ನಗಿಸಿಕೊಳ್ಳುವ ಹೊತ್ತು ಬರುತ್ತದೆ-ಬಂದಿದೆ. ನಾವು ಮಾಡುತ್ತಿರುವ ಸಾಧನವು ನಮ್ಮ ಇಷ್ಟಸಿದ್ಧಿಗೆ ಕಾರಣವಾಗುತ್ತಿದೆಯೆ, ಎಂಬ ವಿಚಾರವಿಲ್ಲದೆ, ಸಾಧ್ಯವನ್ನು

ಮರೆತು, ಹಳೆಯ ಆಚಾರಗಳಿಗೆ ಅಂಟಿಕೊಂಡಿರುವಲ್ಲಿಯೆ ಹೆಮ್ಮೆ ಪಡುತ್ತಿರುವುದೇ ನಮ್ಮ ಇಳಿಗಾಲಕ್ಕೆ ಕಾರಣವಾಗಿದೆ.

ದೇವರನ್ನು ಭಾವಿಸುವ ರೀತಿಯು ಸರಿಯಾದುದಾಗಿದ್ದರೆ ಆ ದೇವರು ನಮಗೆ ಸಂಭಾವನೆಯನ್ನೀಯದೆ ಇರುತ್ತಿದ್ದಿಲ್ಲ. ಶಿವ, ವಿಷ್ಣುಗಳೆಂಬ ಹೆಸರಿನಲ್ಲಿ ನಡೆದ ಪೂಜೆಯಾದರೂ ಯಾರದು? 'ರುದ್ರ'ನು 'ಜ್ಯೋತಿ'ರ್ಲಿಂಗ; ತೇಜೋರೂಪಿ. ರುದ್ರನೆಂದರೆ ಅಗ್ನಿ-ಕೆಂಪು, (ಶಿವನೆಂದರೂ ಕೆಂಪು). (ಶಿವರಹಸ್ಯದಲ್ಲಿ ಇದರ ಹೆಚ್ಚಿನ ವಿವರಣೆಯನ್ನು ಓದಬಹುದು). ವಿಷ್ಣುವೆಂದರೂ ಸೂರ್ಯನೆಂದು ವೇದಗಳಲ್ಲಿನ ಉಲ್ಲೇಖಗಳಿಂದ ಬಲ್ಲಿದರು ನಿರ್ಧರಿಸಿದ್ದಾರೆ.* 'ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಶ್ಚ ಹೃದಯಂ ಶಿವಃ' ಎಂದರೇನು? ಅಗ್ನಿಯ ಸಾರ ಸೂರ್ಯನು. ಸೂರ್ಯನ ಸಾರ ಅಗ್ನಿಯು, ಎಂದಲ್ಲದೆ ಬೇರೆ ಯಾವ ಅರ್ಥವು ಇಷ್ಟು ಸಮರ್ಪಕವಾಗುವುದಿಲ್ಲ. ಇಂತು ಮತ್ತೆ ವಿಷ್ಣು, ರುದ್ರರ ಪೂಜೆಯೆಂದರೆ ಸೂರ್ಯ, ಜ್ಯೋತಿಗಳ ಎಂದರೆ ತೇಜಸ್ಸಿನ ಆರಾಧನೆಯೆ ಎಂದಂತಾಯಿತು. 'ಸೂರ್ಯ ಆತ್ಮಾ ಜಗತಃ ತಸ್ಥುಷಶ್ಚ' ಶಿವಶರಣರು ಪರಶಿವನನ್ನು 'ಬೆಳ್ಳನೆಯ ಬೆಳಗಿನ ರೂಪದಲ್ಲಿ' ಕಂಡ, ಅನುಭಾವದ ವಚನಗಳಿವೆ. ಹೀಗಿರುವಲ್ಲಿ ಕಲ್ಲದೇವರ ಮಾಡಿ, ಕಂಚಿನ ದೇವರ ಮಾಡಿ ಮಕ್ಕಳಾಟಿಕೆಗಳಂತೆ ಹೂಡಿ ಪೂಜೆಯಮಾಡಿದೆವೆಂಬುದು ಭ್ರಾಂತಿಯಲ್ಲದೆ ಮತ್ತೇನು? ಅಗ್ನಿ ಉಪಾಸಕನು ತಾನೂ ಅಗ್ನಿಯಂತೆ 'ಶಿಖಿ'ಯಾದ; (ಜುಟ್ಟು ಬಿಟ್ಟ); ಯಜ್ಞೋಪವೀತ ಧರಿಸಿದ. ಆದರೆ, ಈ ಸಂಕೇತಗಳ ರಹಸ್ಯವು ಮರೆತ ಮೇಲೆ ಅವು ಕೂದಲು ದಾರವಾದುವು. ಆಂತರ್ಯದ ಅಗ್ನಿಯ ಕುರುಹಾಗಿ ಕೆಂಪನ್ನ ಕೇವೆಯ ಶಾಟಿ ಹೊತ್ತನು. ಅದೂ ಒಳಜೀವಾಳದ ಹುರುಳಿಲ್ಲದಲ್ಲಿ ಸೋಗಿನ ಹೊದಿಕೆಯಾಯ್ತು. ಒಳಗೆ ಕಿಡಿ ಇಲ್ಲದಿದ್ದಲ್ಲಿ ಇದೆಲ್ಲವೂ ಆತ್ಮವಂಚನೆ.

ವೇದಕಾಲದ ಅಗ್ನಿಪೂಜೆ, ಮುಂದಿನಕಾಲದ ರುದ್ರ ವಿಷ್ಣುಗಳ ಉಪಾಸನೆ ಎಲ್ಲದರ ಗುಟ್ಟು ಒಂದೇ. ಎಲ್ಲವೂ ಬೆಳಕಿನ ಆರಾಧನೆ. 'ಎಲ್ಲ ವೇದದ ಸಾರ, ಗಾಯತ್ರೀ ಮಂತ್ರ; ಏನನ್ನು ಮರೆತರೂ ಗಾಯತ್ರಿ ಉಪಾಸನೆಯನ್ನು ಮರೆಯಬೇಡ'ವೆಂದು ತಲೆತಲಾಂತರಗಳಿಂದ ಉಪನಯನ ಕಾಲದಲ್ಲಿ ಹೇಳುತ್ತ ಬಂದುದರ ರಹಸ್ಯವೇನು? ಅತ್ಯಂತ ಬೆಲೆಯುಳ್ಳ ಮಾತೆಂದು ಗಾಯತ್ರಿಯ ಉಪದೇಶವನ್ನು ಕಿವಿಯಲ್ಲಿ ಗುಟ್ಟಾಗಿ ಹೇಳುವ ವಾಡಿಕೆ. ಆದರೆ, ಆ ಗುಟ್ಟಿನ ಗುಟ್ಟೇ ಜನಗಳಿಗೆ ಮರೆಯಿತು.ಅಗ್ನಿಯ ಉಪಾಸನೆ, ಸೂರ್ಯನ ಆರಾಧನೆ, ಗಾಯತ್ರೀಜಪ ಇವೆಲ್ಲವೂ ಪರಸ್ಪರ ಪೂರಕ; ಪರಸ್ಪರ ಪೋಷಕ. ಎಲ್ಲವೂ ಒಂದೇ. ಬೆಳಕು, ಬೆಳಕು, ಬೆಳಕು. ಬೆಳಕಿನ ಹಂಬಲ. ಬಣ್ಣಬಣ್ಣದ ಮುಸುಕಿನಲ್ಲಿ ಸತ್ಯವು ಅಡಗಿದೆ. ಆ ಮುಸುಕನ್ನು ಬದಿಗಿರಿಸಿ, ಎಲೆ ಬೆಳಕೇ ಆ ಒಳಗಣ ಸತ್ಯರೂಪವನ್ನು ನನಗೆ ಕಾಣಿಸು, ಮನಗಾಣಿಸು ಎಂಬ ಹಂಬಲದ ಬೇಡಿಕೆಯ ಬೇಡಿಕೆ.

ಓಂ- ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ,
ತತ್ವಂ ಪೂಷನ್ ಅಪಾವೃಣು, ಸತ್ಯಧರ್ಮಾಯ ದೃಷ್ಟಯೇ.

---

* ಶಂಬಾ ಅವರು ತಮ್ಮ ಹಿಂದಿನ ಕೃತಿಗಳಲ್ಲಿ ದೈವತಶಾಸ್ತ್ರ ಮತ್ತು ಸಂಸ್ಕೃತಿಶಾಸ್ತ್ರ ದೃಷ್ಟಿಯಿಂದ ದೇವತಾ ಪ್ರತಿಮೆಗಳ ಅಭ್ಯಾಸವನ್ನು ಮಾಡಿದ್ದರು. ಒಂದೊಂದು ದೇವತೆಗಳನ್ನು ಸಂಕೇತದೃಷ್ಟಿಯಿಂದ ನೋಡುವ ಉಪಕ್ರಮದ ಪ್ರಾರಂಭಿಕ ನೆಲೆಗಳನ್ನು ಇಲ್ಲಿ ನಾವು ಕಾಣಬಹುದು (ಸಂ)

ಋಗ್ವೇದದ ಅಗ್ನಿಸ್ತುತಿ

ಓಂ

ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್।
ಹೋತಾರಂ ರತ್ನಧಾತಮಮ್ ॥೧॥

ಅಗ್ನಿಃ ಪೂರ್ವೇಭಿಃ ಋಷಿಭಿರೀಡ್ಯೋ ನೂತನೈರುತ।
ಸ ದೇವಾಂಗ್ ಏಹ ವಕ್ಷತಿ ॥೨॥

ಅಗ್ನಿನಾ ರಯಿಮಶ್ನಮ್ ಪೋಷಮೇವ ದಿವೇ ದಿವೇ।
ಯಶಸಂ ವೀರವತ್ತಮಮ್ ॥೩॥

ಅಗ್ನೇ ಯಂ ಯಜ್ಞಮಧ್ವರಂ ವಿಶ್ವತಃ ಪರಿಭೂರಸಿ।
ಸ ಇದ್ದ ದೇವೇಷು ಗಚ್ಛತಿ ॥೪॥

ಅಗ್ನಿರ್ಹೋತಾ ಕವಿಕ್ರತುಃ ಸತ್ಯಶ್ಚಿತ್ರಶ್ರವಸ್ತಮಃ ।
ದೇವೋ ದೇವೇಭಿರಾಗಮತ್ ॥೫॥

ಯದಂಗದಾಶುಷೇ ತ್ವಮಗ್ನೇ ಭದ್ರಂ ಕರಿಷ್ಯಸಿ।
ತವೇತ್ ತತ್ ಸತ್ಯಮಂಗಿರಃ ॥೬॥

ಉಪತ್ವಾಗ್ನೇ ದಿವೇದಿವೇ ದೋಷಾವಸ್ತರ್ಧಿಯಾ ವಯಮ್।
ನಮೋ ಭರಂತ ಏಮಸಿ ॥೭॥

ರಾಜಂತಮಧ್ವರಾಣಾಂ ಗೋಪಾಮೃತಸ್ಯ ದಿದೀವಿಮ್।
ವರ್ಧಮಾನಂ ಸ್ವೇ ದಮೇ ॥೮॥

ಸ ನಃ ಪಿತೇವ ಸೂನವೇಗ್ನೇ ಸೂಪಾಯನೋ ಭವ।
ಸ ಚಸ್ವಾ ನಃ ಸ್ವಸ್ತಯೇ ॥೯॥

(ಋಗ್ವೇದ ಸಂಹಿತೆ ಮಂಡಲ ೧ ಸೂಕ್ತ ೧)

೧. ನಾನಾ ಪ್ರಕಾರದ ರತ್ನಗಳನ್ನು (ಯಾಗಫಲರೂಪವಾದ) ಧರಿಸಿದ, ಯಜ್ಞದಲ್ಲಿ ಹೋತೃವೂ ಪುರೋಹಿತನೂ ದೇವನೂ ಋತ್ವಿಜನೂ ಆಗಿರುವ ಅಗ್ನಿರೂಪಿಯಾದ ದೇವನನ್ನು ಸ್ತೋತ್ರಮಾಡುತ್ತೇವೆ.

೨. ಅಗ್ನಿದೇವನು ಪುರಾತನ ಋಷಿಗಳಿಂದಲೂ ಪೂಜ್ಯನಾಗಿದ್ದಾನೆ. ಅವನು ದೇವತೆಗಳನ್ನು ಕರೆತರಲಿ.

೩. ಅನುದಿನವೂ ಬೆಳೆಯುವ, ಯಶೋಯುಕ್ತವಾದ ಬಹಳ ಬಲಿಷ್ಠವಾದ (ಪುತ್ರಪೌತ್ರಾದಿ ರೂಪವಾದ) ಧನವನ್ನು ಯಜಮಾನನು ಅಗ್ನಿಯಿಂದ ಹೊಂದುತ್ತಾನೆ.

೪. ಅಗ್ನಿಯೇ, ನೀನು ಸಂಪೂರ್ಣವಾಗಿ ವ್ಯಾಪಿಸಿರುವ ಯಜ್ಞವೇ ದೇವತೆಗಳಿಗೆ ಮುಟ್ಟುವುದು.

೫. ಅಗ್ನಿಯು ಹೋತೃವು; ಕವಿಯು (ದಿವ್ಯದೃಷ್ಟಿಯವನು); ಕ್ರತುವು (ಸಂಕಲ್ಪ ಸಾಮರ್ಥ್ಯವುಳ್ಳವನು); ಸತ್ಯ (ಸ್ವರೂಪ)ನು, ಯಾಗದ ವಿವಿಧ ಫಲಗಳನ್ನು ಕೊಡುವವನು; ಇಂತಹ ಕೀರ್ತಿಯುಳ್ಳವನಾಗಿ ದೇವತೆಗಳಿಂದ ಕೂಡಿ ಬರಲಿ.

೬. 'ಅಂಗಿರ'ನೇ ನೀನು ಹವಿರ್ದಾನ ಮಾಡುವ ಯಜಮಾನನಿಗೆ ಯಾವಾಗಲೂ ಒಳಿತನ್ನು ಮಾಡುವೆಯೆಂಬ ಮಾತು ಸುಳ್ಳಲ್ಲ.

೭. ಎಲೈ ಅಗ್ನಿಯೇ, ಪ್ರತಿದಿನ ಹಗಲಿರುಳು ನಿನಗೆ ನಮಸ್ಕರಿಸುವವರಾಗಿ ಬುದ್ಧಿ ಭಾವಗಳಿಂದ ನಿನ್ನನ್ನು ನೆನೆಯುತ್ತೇವೆ.

೮. ಯಜ್ಞಗಳ ರಕ್ಷನೂ ಯಜ್ಞಫಲವನ್ನು ಮತ್ತೆ ಮತ್ತೆ ಕೊಡುವವನೂ ತನ್ನ ಸ್ಥಾನದಲ್ಲಿ ಬೆಳೆವವನೂ ಬೆಳಕು ಕೊಡುವವನೂ ಆದ ಅಗ್ನಿಯನ್ನು ಧ್ಯಾನಿಸುತ್ತೇವೆ.

೯. ತಂದೆಯು ಮಕ್ಕಳ ಸಲುವಾಗಿ ಸಂಪಾದನೆ ಮಾಡಿ ಅವರ ಯೋಗಕ್ಷೇಮ ಚಿಂತನೆಯಲ್ಲಿ ದಕ್ಷನಾಗಿರುವಂತೆ (ಅಗ್ನಿಯೆ) ನೀನು ನಮ್ಮ ಸಲುವಾಗಿ ಸಂಪಾದಿಸಿ ಕಲ್ಯಾಣವನ್ನು ಮಾಡು. ಇಂತಿದು ಋಗ್ವೇದದೊಳಗಿನ ಅಗ್ನಿಯ ಒಂದು ಸ್ತವನ.

> "ವೇದಾರ್ಥವನ್ನು ತಿಳಿದವನು ಲೋಕವನ್ನು ಅರಿಯಬಲ್ಲನು; ಆಳಬಲ್ಲನು; ಲೋಕಕ್ಕೆ
> ವೇದವೇ ಕಣ್ಣು",

ಎಂದು ಮನುಸ್ಮೃತಿಯು ಎದೆತಟ್ಟಿ ಹೇಳುತ್ತದೆ. ಆದುದರಿಂದ ವೇದಗಳಲ್ಲಿ ಸ್ತುತಿಸಲ್ಪಟ್ಟ ಅಗ್ನಿಯು, ಬರಿ ಭೌತಿಕ ಅಗ್ನಿಯೇ ಅಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ಅಗ್ನಿಯ ಆರಾಧನೆಯಿಂದ ಲೋಕವನ್ನು ಅರಿಯಬಲ್ಲ, ಆಳಬಲ್ಲ ಶಕ್ತಿಯು ಪ್ರಾಪ್ತವಾಗದೇ ಇದ್ದರೆ ಆ ನಮ್ಮ ಪೂಜಾವಿಧಾನವು ಮೂಲದಲ್ಲಿಯೇ ಎಲ್ಲಿಯೋ ತಪ್ಪಿದೆಯೆಂದು ಬೇರೆ ಹೇಳಬೇಕೆ?

ಆದುದರಿಂದ ಏಳ್ಗೆಯನ್ನು ಬಯಸುವ ಪ್ರತಿಯೊಬ್ಬರೂ ಆ ಅಗ್ನಿಯ ನಿಜವಾದ ಸ್ವರೂಪವನ್ನು ಕುರಿತು ಬಗೆದು ಭಾವಿಸುವುದು ಕರ್ತವ್ಯವಾಗಿಲ್ಲವೆ?

ಅಸಂತೋಷವೇ ಏಳ್ಗೆಯ ಮೂಲ

ನಮಗಿಂದು ಬೇಕಾದುದೇನು? ಸಂತೋಷವಂತೆ, ಸಂತೋಷ! ಮೊದಲು ಸಂತೋಷ? ಛಿಃ! ಸಂತೋಷ-ಸಮಾಧಾನ-ಆನಂದ ಇವು ಯಾರ ತುತ್ತು? ಸಂತೋಷ ಪಡೆವ ಅಧಿಕಾರ ಯಾರದು? ಸಂತೋಷವು ಯಾರ ಹಕ್ಕು?

ಹಸಿದವನಿಗಲ್ಲವೆ ಉಂಬ ಊಟದ ಸೊಗಸು? ನೀರಳ್ಳಿದವನಿಗಲ್ಲವೆ ಕುಡಿವ ನೀರಿನ ಸಂತಸ? ನಿಜವಾಗಿ ಹಸಿವಾದವನಿಗೇ ಊಟದ ಅಧಿಕಾರ; ಉಣ್ಣುವ ಹಕ್ಕು. ಅದರಂತೆ, ನಿಜವಾದ ಸಂತಸದ ಸೌಖ್ಯವು ಅಸಂತುಷ್ಟರಿಗಲ್ಲದೆ ಬೇರೆಯವರಿಗಿಲ್ಲ. ಮೊದಲು ಹಸಿವು; ಬಳಿಕ ಊಟ, ಹಸಿಯದೆ ಉಂಡುದು ಅಜೀರ್ಣ, ಅನಾರೋಗ್ಯಕ್ಕೆ ಕಾರಣ. ಊಟದ ಆನಂದವು ದೊರೆಯಲು, ತುಂಬ ಅಸಂತುಷ್ಟಿಯ ಕಳವಳದ ಸಂತಾಪವನ್ನು ಅನುಭವಿಸಲು ಮೊದಲು ಸಿದ್ಧರಾಗಬೇಕು. ಬಿಸಿಲನ್ನೇ ಅರಿಯದವರಿಗೆ ನೆಳಲ ಸೌಖ್ಯವೇನು?

ಆದುದರಿಂದಲೇ ಮೊದಲು ತುಂಬ ಅಸಂತುಷ್ಟರಾಗಿರಿ. ಅತೃಪ್ತಿಯನ್ನು ಜಾಗ್ರತಗೊಳಿಸಿರಿ. ಎಷ್ಟು ಹೆಚ್ಚು ಅಸಂತುಷ್ಟಿಯೋ ಅಷ್ಟು ಹೆಚ್ಚಿನ ಸಂತಸ-ಪಡೆವ ಹಕ್ಕು ಅವರದು. ಬೇಡದೆ ಪಡೆಯಲಾರೆ; ಬೇಡಿದಕ್ಕಿಂತ ಹೆಚ್ಚಂತೂ ಸಿಕ್ಕದು. ಬೇಡಿದಷ್ಟು ದೊರೆಯುವುದೂ ದುರ್ಮಿಳ. ಬೇಡಿದಕ್ಕಿಂತ ಕಡಿಮೆ ಕೊಡುವುದೇ ಲೋಕರೂಢಿ. ಆದುದರಿಂದ, ಮೊದಲೇ ಕಡಿಮೆ ಬೇಡಿದರೆ ದೊರೆಯುವುದು ಅದಕ್ಕೂ ಕಡಿಮೆ. ಎಚ್ಚರ! 'ಬೇಕು' ಎಂಬುವನೇ ಬದುಕುವನು. 'ಸಾಕು' ಎಂಬವನು ಸಾವಿನ ಊರವನು. 'ಸಾಲದು' ಎನ್ನಿ. 'ಸಾಕು' ಎನಬೇಡಿ. ಸಾ-ವು ಮತ್ತು ಸಾ-ಕು ಬೇರೆಯಲ್ಲ; ಒಂದೇ. ಆದುದರಿಂದ 'ಸಾಕು' ಎಂಬುದೇ ಮರಣ. 'ಬೇಕು' ಎಂಬುದೇ ಜೀವನ. ಅತೃಪ್ತಿ, ಅಸಂತೋಷಗಳು ಬೆಳವಿಯ ಕುರುಹುಗಳು. ಅಸಂತೋಷದಲ್ಲಿಯೇ ಆರಂಭವಿದೆ. ತಲೆಯೆತ್ತ ಹಚ್ಚುವುದು ಅತೃಪ್ತಿ. ಅತೃಪ್ತಿ, ಅಸಂತೋಷಗಳ ಒತ್ತಾಯವಿಲ್ಲದೆ ತಲೆದೋರಿದ ಕಾರ್ಯಗಳಾವುವು, ಈ ಲೋಕದಲ್ಲಿ? ತೃಪ್ತಿಯ ಮೊದಲು, ಅತೃಪ್ತಿ. ಅತೃಪ್ತಿಯ ತುದಿ ತೃಪ್ತಿ. ಅತೃಪ್ತಿಯು ಮೊಳೆ (ಚಿಗುರು); ತೃಪ್ತಿ ಗೊನೆ. ತೃಪ್ತಿಯಲ್ಲಿ ಸಾಫಲ್ಯವಿದೆ; ಸಫಲತೆಯಿದೆ. ಫಲವೆಂದರೇ ಗೊನೆ. ಗೊನೆಯೆ ಕೊನೆ ಮತ್ತೆ! ಗೊತ್ತಿರಲಿ! ತೃಪ್ತಿ, ಸಂತೋಷ, ಆನಂದ ಎಂಬಿವು ಮಾನವನ ಅಂತ್ಯದ ಸಿದ್ಧಿ(ಫಲ)ಗಳು ಕೊನೆಯ ಗೊನೆಗಳು.

ಅತೃಪ್ತಿಯಿಂದ ಆರಂಭವಾಗಿ ತೃಪ್ತಿಯಲ್ಲಿ ಬಾಳು ಕೊನೆಗೊಳ್ಳಬೇಕು. 'ಬೇಕು' ಎಂಬುದರಿಂದ ಬೆಳಗೆಯಾಗುವುದು. ಸಾಕು ಎಂದರೆ ಸಮಾಪ್ತಿ. ಸಮಾಧಿ. 'ಬೇಕು' ಎಂಬುದೇ ಗೊತ್ತಿಲ್ಲದಿದ್ದರೆ 'ಸಾಕು' ಎಂಬುದಕ್ಕೇನು ಅರ್ಥ? ಆದುದರಿಂದಲೇ ತರುಣರು ಅತೃಪ್ತರಾಗಿರಬೇಕು. ಅಥವಾ ಅತೃಪ್ತರೇ ತರುಣರು. ಅತೃಪ್ತಿ, ಅಸಮಾಧಾನ, ಅಸಂತೋಷವಿದ್ದವರೇ ಯುವಕರು. ಬೇಕು; ಇನ್ನೂ ಬೇಕು, ಇನ್ನಿಷ್ಟು ಬೇಕು ಎಂಬ

ಹಂಬಲಿಗರೇ ಹರೆಯದವರು. ಹರೆಯದವರು ಹರಿದಾಡುವರು; ಪ್ರಸರಣಗೊಳ್ಳುವರು. ಮುರಟಿಕೊಳ್ಳುವುದು, ಮುದುಡಿಕೊಳ್ಳುವುದು, ಸಾಕೆಂಬುದು, ಅಲ್ಪಸಂತುಷ್ಟರಾಗುವುದು ಇವೆಲ್ಲ ಮುಪ್ಪಿನ ಲಕ್ಷಣಗಳು; ಅನಾರೋಗ್ಯದ ಸೂಚನೆಗಳು; ಕೊನೆಗಾಲದ ಕುರುಹುಗಳು, ಮೋಕ್ಷಕ್ಕೂ ಮೊದಲು ಮುಮುಕ್ಷುತ್ವವು ಬೇಕು. ಮುಮುಕ್ಷುತ್ವವು ಎಂದರೆ ಅತೃಪ್ತಿ; ಅಸಂತಸ; ಅಹಿಗ್ಗು; ಅಸಮಾಧಾನ. ಹಸಿವು; ಹಂಬಲ; ತಳಮಳ; ಕಳವಳ; ವಳವಳ; ಇದುವೆ ಚಳವಳ ಅಥವಾ ಚಳವಳಿ- (ತನ್ನ ಏಳ್ಗೆಗಾಗಿ ನಡೆಸಿದ) ಚಲನವಲನ, ಹೋರಾಟ. ಹೋರಾಟದ ಫಲಿತವೇ ಶಾಂತಿ. ಶಾಂತಿ ಒಂದು ಸ್ಥಿತಿ. ಹೋರಾಟ ಕೃತಿ. ಶಾಂತಿಯು ಸ್ಥಿತಿ. ಹೋರಾಟವು ಗತಿ. ಹೋರಾಟದಿಂದಲ್ಲದೆ, ಹೋರಾಟವಿಲ್ಲದೆ ದೊರೆತ ಶಾಂತಿ ಬರಿದು; ಶೂನ್ಯ. ಅರ್ಥವಿಹೀನ.

ಗಚ್ಛತಿ ಇತಿ ಜಗತ್. ಪ್ರಪಂಚವು ಒಂದು ಪ್ರವಾಹ. ಹರಿಯುತ್ತಲಿದ್ದರೇ ಇದರ ನೀರು (ಜೀವನ) ತಿಳಿಯಾಗಿರುವುದು. ಜೀವಂತವಾಗಿರುವುದು. ಹರಿಗಡಿದರೆ ಎಲ್ಲವೂ ಕೊಳೆ, ಕೊಳಚೆ ಅಶುಚಿ, ಪ್ರವಹಿಸುತ್ತಿದ್ದರೇ ಪವಿತ್ರ. ಆದುದರಿಂದ ಗತಿಯೇ ಲೋಕದ ಸ್ಥಿತಿ;- ಎಂದರೆ ಸ್ವಬಾವ. ಸ್ಥಿರತೆ ಎಂಬುದು ಭ್ರಮೆ. ಸ್ಥಿರತೆ ಕೊಳೆಗೆ ಕಾರಣ. ಆದುದರಿಂದ ಲೋಕಕ್ಕೆ ಗತಿಯೇ (ನಡೆಯೆ) ಸದ್ಗತಿ. ಇದುವೆ ಪ್ರಗತಿ. ಸ್ಥಿರತೆಯೆ ದುರ್ಗತಿ. ಅರ್ಥಾತ್ ಪರಾಗತಿ. ಆದುದರಿಂದ ಗತಿ, ಚಲನವಲನ, ಚಳವಳ, ಹರಿದಾಟ, ಹೋರಾಟಗಳೇ ಮಾನವನ ಜೀವನಧರ್ಮ ಎಂಬಲ್ಲಿ ಏನೂ ಸಂದೇಹವೆ ಇಲ್ಲ. ಹೋರಾಟ! ಎಷ್ಟು ಜೀವಂತ ಮಾತು! ಜೀವಂತ ಜನರೇ ಹೋರಾಡಬಲ್ಲರು. ಹೋರಾಡುವರು. ಈ ಲೋಕದಲ್ಲಿ ನಿರ್ಜೀವಿಗಳಾಗಿ ಜೀವಂತ ಹೆಣಗಳಾಗಿ-ಕೂಳಿಗೆ ಭಾರವಾಗಿ, ನಾಡಿನ ಬರಗಾಲವನ್ನು ಹೆಚ್ಚಿಸುವ-ದೇಶದ ದುಷ್ಕಾಲಕ್ಕೆ ಕಾರಣರಾದ (ಅಲ್ಲಲ್ಲ;ಕಾರಣವಾದ) ನರಗುರಿಗಳ ಬಲಿಯನ್ನು ತಕ್ಕೊಳ್ಳುವುದಕ್ಕಾಗಿ, ಭೂಮಿಯ ಭಾರವನ್ನು ಇಳಿಸುವುದಕ್ಕಾಗಿ ಮಾರೀದೇವಿಯು ಹೂಡುವ ಹೂಟವೇ ಹೋರಾಟ. ಹೋರಾಟವೇ ಈಶಸಂಕಲ್ಪ. ಸೃಷ್ಟಿಯ ನಿಯಮ. ಶಾಶ್ವತ ಸತ್ಯ. ಹೋರಾಟ! ಹೋರಾಟ ! ಹೋರಾಟ ! ಇದೇ ಸನಾತನಧರ್ಮ.

ಶಸ್ತ್ರಾಸ್ತ್ರಗಳಿಂದ, ತೋಪು ತುಬಾಕಿಗಳಿಂದ, ವಿಮಾನ, ಟ್ಯಾಂಕುಗಳಿಂದ ನಡೆದುದಷ್ಟೇ ಹೋರಾಟ, ಎಂದು ಭಾವಿಸಿದವರು ತೀರ ಎಗ್ಗರು. ಬರಿ ಹೊರಗಣ್ಣಿನವರು. ಅದು ಹೋರಾಟದ ತೀರ ವಿಕೃತ ರೂಪ; ಆ ಆಸುರೀ ಸ್ವರೂಪ. ಸ್ಥೂಲ, ಸೂಕ್ಷ್ಮವಾದ ಹಲವು ರೂಪಗಳಲ್ಲಿ ಹೋರಾಟವು ವಿಶ್ವದಲ್ಲೆಲ್ಲ ಎಡೆಬಿಡದೆ ನಡೆದಿದೆ. ಈ ಭೂಲೋಕದಲ್ಲಿ ಮೂರು ನಾಡುಗಳಿವೆ. ಅವುಗಳಲ್ಲಿ ಮತ್ತೆ ನೂರಾರು ಒಳನಾಡುಗಳಿವೆ. ೧) ಮನೋಲೋಕ, ೨) ಜೀವಲೋಕ, ೩) ಜಡಲೋಕ, ಎಂಬಿವು ಮೂರು ಹಿರಿನಾಡುಗಳು. ಈ ನಾಡುಗಳಲ್ಲಿ ನಡೆವ ಹೋರಾಟಗಳ ಬಗೆಯು ಬೇರೆ ಬೇರೆಯಾಗಿದೆ. ಶಾಂತಿಗಾಗಿ ಹೋರಾಟ ಮನೋಲೋಕದ್ದು. ಹೋರಾಟಕ್ಕಾಗಿ ಶಾಂತಿ ಜೀವಲೋಕದ್ದು. ಹೋರಾಟಕ್ಕಾಗಿ ಹೋರಾಟ, ಜಡಲೋಕದ್ದು. ಮೊದಲನೆಯವರು ಮನೀಷಿಗಳು; ಎರಡನೆಯವರು ಜನಗಳು; ಮೂರನೆಯವರು ದನಗಳು. ಮೊದಲನೆಯವರ ಹೋರಾಟದ ಗುರಿ ಸತ್ಯ, ಜ್ಞಾನ, ಅನಂತತ್ವದ ಸಾಧನೆ; ಶಾಂತಿ ಸಂಪಾದನೆ. ಎರಡನೆಯವರ ಗುರಿ ಅನ್ನ; ಅನ್ನ; ಅನ್ನ; ಕೇವಲ ಸ್ವಾರ್ಥ; ಸುಲಿಗೆಯ ಹೆಗ್ಗಳಿಕೆಯೇ ಇವರ ಪಡೆಪು. ತಾನು ಕೊಬ್ಬಬೇಕು; ಹೆರವರನ್ನು ತನ್ನ ಕೈಯಲ್ಲಿರಿಸಿಕೊಳ್ಳಬೇಕು; ಎಂಬ ಹಂಬಲ, ಇವರದು. ಮೂರನೆಯವರ ಗುರಿ...... ಗುರಿಯೇನು ಗುರಿ? ಬರಿ ಕುರಕುರಿ, ಫುರ್ ಫುರಿ, ಹುರ್ ಹುರಿ, ಹರಾಹುರಿ. ಜೀವವು ಸುಮ್ಮನೆ ಇರದ್ದಕ್ಕೆ ಗೂಳಿಯು ಕಾಲ್ಕೆದರಿ ಹೋರಾಟಕ್ಕೆ ಆಹ್ವಾನಿಸುವುದಿಲ್ಲವೆ? ಆ ಬಗೆಯ ಯಾವ ಗೊತ್ತುಗುರಿಯಿಲ್ಲದೆ ನೆತ್ತರದ ಒತ್ತಡದಿಂದ, ತೀನಿ ತುರಸಿನ ರಭಸದಿಂದ ಯಾವ ದೃಷ್ಟಿಯೆ ಇಲ್ಲದ ಮಬ್ಬು ಕೂಳಿಗಳು ನಡೆಯಿಸಿದ ಕೋಲಾಹಲ, ಹೊಡೆದಾಟವೆ ಈ ಹೋರಾಟ. ಮೊದಲನೆಯದು ಸಾತ್ವಿಕ. ಎರಡನೆಯದು ರಾಜಸಿಕ. ಮೂರನೆಯದು ತಾಮಸಿಕ. ಅವರವರ ಯೋಗ್ಯತೆಯಂತೆ, ಶಕ್ತಿ ಸಾಮರ್ಥ್ಯದಂತೆ ಈ ಮೂರರಲ್ಲಿ ಒಂದಿಲ್ಲೊಂದು ಬಗೆಯ ಕಾಳಗದ ಕಳವಳದಲ್ಲಿ ಮೈಮರೆಯದ ಮಾನವರೆ ದೊರೆಯರು. ಅಥವಾ ಅಂತಹರು ಯಾರಾದರೂ ಇದ್ದರೆ ಅವರು ಮಾನವರೆಂಬ ಹೆಸರಿಗೆ ಹೊರತಾದವರು.

ಹೋರಾಟವೇ ನಮ್ಮ ಜೀವನ ಸೂತ್ರ. ನಮ್ಮ ರಕ್ತ ಸಂಚಲನವೂ ಒಂದು ಹೋರಾಟವೇ. ನೆತ್ತರದ ಕಣಕಣಗಳಲ್ಲೂ ಶುದ್ಧಾಶುದ್ಧದ ಅಣುಗಳ ತಿಕ್ಕಾಟ, ತಾಕಲಾಟ, ಹೋರಾಟವು ಅವ್ಯಾಹತವಾಗಿ ಸಾಗಿದೆ. ನೆತ್ತರವು ತನ್ನ ಶುದ್ಧ ಸ್ಥಿತಿಯನ್ನು ಕಾಯ್ದುಕೊಳ್ಳಲು ಎಡೆಬಿಡದೆ ಹವಣಿಸುತ್ತದೆ. ನೆತ್ತರದೊಳಗಿನ ಈ ಶಕ್ತಿಯು ಕುಂದಿದೊಡನೆ ಮಾನವನೂ ನರಗುಂದಿದವನಾಗುವನು. ನಿರ್ಜೀವನಾಗುವನು. ಅದೇಕೆ, ಹೋರಾಟವೇ ವಿಶ್ವದ ಅಸ್ತಿತ್ವಕ್ಕೂ ಕಾರಣ. ಅಣುರೇಣುಗಳಲ್ಲಿಯೂ ಇಷ್ಟವಾದ ಎಳೆದಾಟ, ತಿಕ್ಕಾಟವು ನಡೆದುದನ್ನು ಭೌತಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಸಿಡಿಲು-ಮಿಂಚಿನ ತಾಯಿಯು ವಿದ್ಯುತ್ತು. ಆ ವಿದ್ಯುತ್ತೇ ವಿಶ್ವದ ಕಣಕಣಗಳಲ್ಲಿ ವ್ಯಾಪಿಸಿ ಹೊರಹೊಮ್ಮುತ್ತಿದೆ. ವಿದ್ಯುತ್ತು ಒಂದು ಶಕ್ತಿ. ಅನಂತ ಶಕ್ತಿಯೇ ಹೋರಾಟದ ಅಧಿದೇವತೆ.

ಶಕ್ತಿ ಸಂಪಾದನೆಗಾಗಿ ದೇವಿಯನ್ನು ಆರಾಧಿಸುವವರು ಹಲವರುಂಟು. ಆದರೆ, ಶಕ್ತಿಪೂಜೆಯ ಗುಟ್ಟನ್ನು ಸರಿಯಾಗಿ ಅರಿತವರು ಏಸುಜನ? 'ಕಲ್ಲ ಮೇಲೆ ಕಲ್ಲನಿಟ್ಟು' ನೀರನೆರೆದು ಹೂವನೇರಿಸಿ, ಮೂಗತಿಕ್ಕಿ ಹಣೆಘಟ್ಟಿಸಿ ಅರಚಿ-ಕಿರಿಚಿ ಸುಮ್ಮನಾದರೆ ಪೂಜೆಯಾಯ್ತೆಂಬ ಸಂಭ್ರಮಿಗಳೇ ಹೆಚ್ಚು. ಇದೆಂತಹ ಪೂಜೆ? ಪೂಜೆಯ ಹುಡುಗಾಟ! ಹುಡುಗರ ಆಟ; ತಿಳಿಗೇಡಿಗಳ ಮಾಟ. ತಿಳುವಳಿಕೆಯವರ ಮಾಳ್ಕೆ (ಕೃತಿಯ) ಇದಲ್ಲ. ಹೇಡಿಗಳಿಗೆ, ಪುಕ್ಕರಿಗೆ, ಬಲಹೀನರಿಗೆ, ದೇವರು ಎಂದೂ ಒಲೆಯುವುದಿಲ್ಲ. 'ಬಲಹೀನೇನ ನ ಲಭ್ಯಃ.' ಶ್ರೀಕೃಷ್ಣನು ಅರ್ಜುನನ ಗೆಳೆಯನೇಕೆ? ಆತನು ನರವೀರನೆಂದೇ ಅಲ್ಲವೆ? ಶ್ರೀ ರಾಮನ ಕೃಪೆಗೆ ಅರ್ಹನಾದವನು ಯಾರು? ಬಲವಂತನಾದ ಹನುಮಂತನೆ ಅಲ್ಲವೆ? ಯುದ್ಧವನ್ನು ಒಲ್ಲೆನೆಂಬ, ಕಾದಾಟವು ಸಾಕೆಂಬ ಅರ್ಜುನನಿಗೆ ಕೃಷ್ಣನು ಮೆಚ್ಚಿದನೆ? 'ಹೇಡಿಯೆ ಬುದ್ಧಿಯನ್ನು ಎಲ್ಲಿಟ್ಟಿರುವೆ? ಯುದ್ಧಕ್ಕೆ ಎದ್ದೇಳು' ಎಂದು, ಆಗ ಕೃಷ್ಣನಿಂದ ಅರ್ಜುನನಿಗೆ ತೆಗಳಿಸಿಕೊಳ್ಳಬೇಕಾಗಲಿಲ್ಲವೆ? ಅದು ಅಂತಿರಲಿ. ಪ್ರತ್ಯಕ್ಷ ಪರಮಾತ್ಮನೇ ಹತ್ತು ಅವತಾರ ತಾಳಿದನೆಂದು ಹೇಳುವರಲ್ಲ! ಆ ಅವತಾರಗಳಲ್ಲಿ ಆತನು ಮಾಡಿದ್ದೇನು? ಆ ಅವತಾರಗಳ ಕಾರಣವೇನು? ಹೋರಾಟ! ಹೋರಾಟ! ಹೋರಾಟ!

ಅಂಗಶಕ್ತಿ, ಧನಶಕ್ತಿ ಅಥವಾ ಧೀಶಕ್ತಿ ಮೊದಲಾದ ಯಾವುದೇ ಬಗೆಯ ಶಕ್ತಿಯು ಬೇಕಾದರೂ, ಆ ಶಕ್ತಿಯ ಹಂಬಲವಿದ್ದವರು ಮೊದಲು ತಮ್ಮಲ್ಲಿಯ ಹೇಡಿತನವನ್ನು ತೊಡೆದುಹಾಕಬೇಕು. ಹೋರಾಟಕ್ಕೆ ಸನ್ನದ್ಧರಾಗಬೇಕು. ಹೋರಾಡಿ ತಮ್ಮ ಆರಾಧ್ಯ ದೇವತೆಯನ್ನು ಮೆಚ್ಚಿಸಬೇಕು. ಇದುವೆ ನಿಜವಾದ ದೇವಪೂಜೆ. ಶಕ್ತಿಸಾಧನೆಯ ರಹಸ್ಯ. 'ನರಋತೇ ಶ್ರಾಂತಸ್ಯ ಸಖ್ಯಾಯ ದೇವಾಃ'-ಹೋರಾಡಿ ತನ್ನ ಹಂಬಲವನ್ನು ತನ್ನ ಅರ್ಹತೆಯನ್ನು ತೋರ್ಪಡಿಸಿಕೊಳ್ಳದೆ ದೇವರು ಯಾರನ್ನೂ ಮೆಚ್ಚಿಲ್ಲ. ಮೆಚ್ಚುವುದೂ ಇಲ್ಲ ಎಂದು ವೇದವು ಹೇಳುತ್ತದೆ. ಆದುದರಿಂದಲೆ 'ನಿನ್ನ ಉದ್ಧಾರವನ್ನು ನೀನೇ ಮಾಡಿಕೊ' ಎಂದು ಗೀತೆಯೂ ಉಪದೇಶಿಸಿದ್ದುಂಟು.

ಹೋರಟೆ! ಹೋರಾಟ ! ಇದು ಒಂದೇ ಒಂದು ಪ್ರತಿಯೊಬ್ಬರ ಏಳ್ಗೆಯ ದಾರಿ; ಉದ್ಧಾರದ ಮಾರ್ಗ. ಹೋರಾಟಕ್ಕೆ ಮೊದಲು ಅಸಂತೋಷವು ಬೇಕು. ಅಸಂತುಷ್ಟಿಯಿಲ್ಲದವರು, ಹೋರಾಟಕ್ಕೆ ಸೊಂಟಕಟ್ಟರು. ಹೋರಾಟದ ಉಗಮವು ಹಸಿವೆಯಲ್ಲಿದೆ; ತಿಂಡಿಯಲ್ಲಿದೆ. ತಿನಸು-ತುರಸಿನಲ್ಲಿ ಇದೆ. ಮನದ ಹಸಿವು ಜ್ಞಾನಸಾಧನೆಗೆ ಕಾರಣವಾಗುತ್ತದೆ. ಒಡಲ ತಿಂಡಿ ಹೋರೆಗೆ ಹಚ್ಚುತ್ತದೆ. ತೋಳತಿನಸು ತಿಕ್ಕಾಟವನ್ನು ಹುಟ್ಟಿಸುತ್ತದೆ. ಹಸಿವು ಜೀವನದ ಪ್ರಚೋದಕ ಶಕ್ತಿ. ಹಸಿಯದೆ ಭೂಮಿ ಬೆಳೆಯದು, ಹಸಿಯದೆ ಮಾನವನು ಬೆಳೆಯನು. ಹಸಿವು, ತಿಂಡಿ, ತೀನಿತಿನಸು ಇದುವೆ ಸೃಷ್ಟಿಯ ಪ್ರವರ್ಧಮಾನಕ್ಕೆ ಕಾರಣ. ಹಸಿವು ಎಂದರೆ, ಬಯಕೆ; ಇಚ್ಛಾಶಕ್ತಿಯ ಮೂಲ. ಹಸಿವು ಎಂದರೆ ಹಂಬಲ; ಹೋರಾಟದ ಆದಿ. ಹಸಿವಾಗದೆ ಇರುವುದು ಅನಾರೋಗ್ಯದ ಲಕ್ಷಣ. ಸಾವು ಸಮೀಪಿಸಿದ ಪೂರ್ವಸೂಚನೆ. ಆದುದರಿಂದ ಹಸಿವು ಬೇಡವೆಂಬುದೂ ಆತ್ಮಹತ್ಯೆ ಮಾಡಿಕೊಂಬುದೂ ಒಂದೇ.

ಹಸಿವು ಇಲ್ಲದಿದ್ದರೆ ಮಾವನು ಮೃಗಳ್ಳನಾಗುತ್ತಿದ್ದನು. ಹೋರೆ, ಹೋರಟೆಗಳ ಗೋಜಿಗೆ ಹೋಗುತ್ತಿದ್ದಿಲ್ಲ. ಜಗತ್ತಿನಲ್ಲಿ ಕಂಡುಬರುವ ಇಂದಿನ ನಾನಾವಿಧದ ಶಾಸ್ತ್ರೀಯ ಸಂಶೋಧನೆ, ಸುಧಾರಣೆ ಮೊದಲಾದುವುಗಳು ಒಂದೂ ತಲೆದೋರುತ್ತಿದ್ದಿಲ್ಲ. ಅದೇಕೆ? ಲೋಕದ ಅಸ್ತಿತ್ವವೇ ಸಾಧ್ಯವಿದ್ದಿಲ್ಲ. 'ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾ

ಪುರೋವಾಚ ಪ್ರಜಾಪತಿಃ। ಅನೇನ ಪ್ರಸವಿಷ್ಯಧ್ವಂ ಏಷವೋऽಸ್ತ್ವಿಷ್ಟ ಕಾಮಧುಕ್'॥ ಅಂದು ಬ್ರಹ್ಮನು, ಯಜ್ಞದೊಡನೆಯೆ ಪ್ರಜೆಗಳನ್ನು ಸೃಜಿಸಿದನು; ಮತ್ತು ಆತನು ಈ ಯಜ್ಞವು ನಿಮಗೆ ಕಾಮಧೇನುವಿನಂತೆ (ಬೇಡಿದ್ದನ್ನು ಕೊಡುವುದು) ಆಗಲಿ ಎಂದನಂತೆ. (ಗೀತೆ). 'ಯಜ್ಞ' ಎಂದರೆ ಅರ್ಥ ಸರಿಯಾಗಿ ಆಗಲಿಕ್ಕಿಲ್ಲ. ಈ ಸಂಸ್ಕೃತ ಮಾತನ್ನು ಕನ್ನಡಿಸಿದರೆ ಇದರ ಅರ್ಥದ ಸ್ವಾರಸ್ಯವು ಇನ್ನೂ ಚೆನ್ನಾಗಿ ಅನುಭವಕ್ಕೆ ಬರುವುದು. ಯಜ್ಞ ಎಂದರೆ ಬೇಳುವೆ ಅಥವಾ ಬೇಳ್ಕೆ; ಬೇಳ್ಕೆಯೆ ಬೇಡಿಕೆ. ಯಜ್ಞಕ್ಕೆ ಕ್ರತು ಎಂದೂ ಒಂದು ಹೆಸರಿದೆ. ಕ್ರತುವೆಂದರೆ ಸಂಕಲ್ಪವೂ ಅಹುದು. ಕ್ರತು ಶಕ್ತಿಯೆಂದರೆ ಸಂಕಲ್ಪ ಶಕ್ತಿ (Will power) ಆದುದರಿಂದ ಯಜ್ಞ ಎಂದರೆ ಕ್ರತು. ಕ್ರತು ಎಂದರೆ ಬೇಳುವೆ. ಬೇಳುವೆಯೆಂದರೆ ಸಂಕಲ್ಪಶಕ್ತಿ, ಇಚ್ಛಾಶಕ್ತಿ. ಸಂಕಲ್ಪವೇ ಸಂಸಾರದ ಮೂಲಾಧಾರ. ಬೇಕು ಎಂಬುದರಿಂದಲೇ ಬದುಕು. ಬೇಕು ಎಂಬುದೇ ಹಸಿವು. ಗೀತೆಯು ಹೇಳುವಂತೆ ಬೇಕು (ಬೇಳುವೆ) ಇದುವೆ ಲೋಕದ ಕಾಮಧೇನು. ಬೇಡುವುದು ಕೆಡುಕು, ಎಂದು ಗ್ರಹಿಸಿ ನಾವು ಹಾಳಾಗಿದ್ದೇವೆ. 'ನಮ್ಮ ಕಾಮ ಕಾಮಧೇನು'ವನ್ನೆ ಕೊಂದಿದ್ದೇವೆ. ಬೇಳುವೆ ಎಂದರೆ, 'ಯಜ್ಞ' ಮತ್ತು ಕ್ರತುಗಳನ್ನು ಬಿಟ್ಟು ಕರ್ಮ-ಭ್ರಷ್ಟರಾಗಿದ್ದೇವೆ. ಕರ್ಮಹೀನರಾಗಿ ಅನ್ನಕ್ಕೆ ಎರವಾಗಿದ್ದೇವೆ. 'ಇಂದ್ರ'ಪದವಿಯು ದೊರೆಯಬೇಕಾದರೆ 'ಶತ-ಕ್ರತು'ಗಳನ್ನು ಮಾಡಬೇಕೆಂದು ಮಹರ್ಷಿಗಳು ಹೇಳಿದುದು ಸುಳ್ಳಲ್ಲ. ಒಂದೊಂದು ಕ್ರತು (ಸಂಕಲ್ಪ) ಪೂರ್ಣ ಮಾಡಿದರೇ ಮಾನವನು ಮಾನವಂತನಾಗುವನು. ಮಹಾಪುರುಷನೆನಿಸುವನು. ಇನ್ನು, ನೂರು ಸಂಕಲ್ಪಗಳನ್ನು ಈಡೇರಿಸಿದವನು ಮಹಾತ್ಮನೂ ಲೋಕಪೂಜ್ಯನೂ ಜನಹೃದಯದ ಸಾಮ್ರಾಜ್ಯವನ್ನು ಆಳುವ ಮಹೇಂದ್ರನೂ ಆಗುವಲ್ಲಿ ಸಂದೇಹವೇನು?

ವಿಶ್ವಚಕ್ರವು ಅವ್ಯಾಹತವಾಗಿ ಸಾಗಲು ಯಜ್ಞವೇ ಕಾರಣವೆಂದು ದ್ರಷ್ಟಾರರು ಕಂಡುಹಿಡಿದಿದ್ದಾರೆ. ಯಜ್ಞವೆಂದರೆ ಅಗ್ನಿಪೂಜೆ ತಾನೆ? ಅಗ್ನಿಯು ಆವುದು? 'ಬೇ' ಕು ಎಂಬುದೇ ಈ ಬೇವ ಬೆಂಕೆ. ಈ ಬೆಂಕೆಯೆ ಬೇಡಿಸುವುದು, ಓಡಿಸುವುದು, ಮಾಡಿಸುವುದು, ಮಾನವನಿಂದ ನಾನಾ ಕೃತಿಗಳನ್ನು. ಈ ಬೆಂಕೆಯನ್ನು ಆರಿಸುವವರೆಲ್ಲ ಯಜ್ಞ ವಿರೋಧಿಗಳು. ಈ ಬೆಂಕೆಯ ಮೇಲೆ ನಿರಾಶೆಯ ತಣ್ಣೀರೆರಚುವರೆಲ್ಲ ನರಾಧಮರು. ಇದೇ, ಬೇಳುವೆಯ (ಯಜ್ಞದ) ನಿಜವಾದ ಬೆಂಕೆ. ಇದನ್ನು ಸರಿಯಾಗಿ ಆರಾಧಿಸಿದರೆ, ಅದು ಮಾನವನ ಉದ್ಧಾರಕ್ಕೆ ಕಾರಣವಾಗುವುದು. ತಪ್ಪಿದರೆ ಲೋಕಸಂಹಾರಕಾರಿಯಾಗುವುದು. ಆದುದರಿಂದಲೇ ಯಜ್ಞವಿಧಾನದಲ್ಲಿ-ಬೇಳುವೆಯಲ್ಲಿ ಸ್ವಲ್ಪವೂ ತಪ್ಪುತಡೆಯಾಗಬಾರದೆಂದು ಮೈತುಂಬ ಕಣ್ಣುಳ್ಳವರಾಗಿ ಯಜ್ಞಕಾಲದಲ್ಲಿ ಜಾಗ್ರತರಾಗಿರಬೇಕೆಂದು ಪುರಾತನರು ಎಚ್ಚರಿಕೆ ಕೊಟ್ಟಿದ್ದಾರೆ. ಇಲ್ಲವಾದರೆ ಆ ಬೇಳುವೆಯ ಅನಿಷ್ಟ ಫಲವನ್ನು ಅನುಭವಿಸಬೇಕಾಗುವುದು. ಮೊದಲು ಒಂದನ್ನು ಬೇಡಿ ಸಂಕಲ್ಪಮಾಡಿ ಅದು ಫಲಿಸುವ ಹೊತ್ತಿಗೆ ಬೇಡವೆಂಬುದು ಮೂಢತನವಾಗುವುದು. ಬಿತ್ತಿದ್ದನ್ನು ಬೆಳೆಯಲೇಬೇಕು. ಆದುದರಿಂದ ಬಿತ್ತುವಾಗಲೇ ಎಚ್ಚರ!

ಬೆಂಕೆಯಿಂದ ಮೈಕೈ ಸುಡುವುದು, ಮನೆ ಸುಡುವುದು, ಹಲವರು ಹಾನಿಗೀಡಾಗುವರು. ಎಂದು ಈ ಲೋಕದಲ್ಲಿ ಬೆಂಕೆಯೇ ಇರಕೂಡದೆಂದು ಹೇಳಬಹುದೆ? ನಾಲಗೆಯು ಬಯ್ಯುವುದೆಂದು ನಾಲಗೆಯನ್ನೇ ಕೊಯ್ಯಬಹುದೇ? 'ಎನ್ನ ಕಣ್ಣು ಅತ್ತಿತ್ತ ಹರಿದಾಡದಂತೆ, ಎನ್ನ ಅಂಧಕನ ಮಾಡಯ್ಯ' ಎಂಬ ಬಸವಣ್ಣನ ಮಾತಿನ ಗುಟ್ಟು ತಿಳಿಯದೆ ಕಣ್ಣಲ್ಲಿ ಕಳ್ಳಿಯ ಹಾಲು ಹಾಕಿಕೊಂಡರೆ ! ಬ್ರಹ್ಮಚರ್ಯೆಗೆ ಅಡ್ಡಿಯಾಗದಿರಲೆಂದು ಅ-ಲಿಂಗಿಯಾಗಹೊರಟರೆ! ಅಯ್ಯೋ ದುರ್ದೈವವೇ ! ಅದೇ ಬಗೆಯಾಗಿದೆ, ನಮ್ಮ ಇಂದಿನ 'ವಾಸನೆಗಳನ್ನು ನಾಶಮಾಡಿರಿ' ಎಂಬ ತತ್ವಜ್ಞಾನ!

'ವಾಸನಾಕ್ಷಯ'ದ ತತ್ವಜ್ಞಾನದಿಂದೇ ಭಾರತಕ್ಕೆ ಕ್ಷಯರೋಗವು ಅಂಟಿಕೊಂಡಿದೆ. 'ವಾಸನಾ-ನಾಶ' ಎಂದರೆ ಆತ್ಮನಾಶದಿಂದ ಬೇರೆಯಲ್ಲ. ಸಾವೇ ನಮ್ಮ ಗುರಿಯಾಗಿದ್ದರೆ ವಾಸನಾ-ನಾಶವೇ ಅದರ ಸಾಧನ. ಆದರೆ ಭಾರತೀಯ ತತ್ವಜ್ಞಾನದಲ್ಲಿ ಸಾವು ಸಾಧ್ಯವಲ್ಲ; ಸಾವು ಸಾಧನವಾಗಿದೆ. ಆದರೆ ಸಾವಿನ ಆಚೆಯದು ನಮ್ಮ ಗುರಿ. ಸಾವು ಒಂದು ಊರುಗೋಲು. ಬಿತ್ತಿದ ಬೀಜವು ಸಾಯುವುದು. ಸಾವು ಅದರ ಕೊನೆಯಲ್ಲ.

ಸಾಯುವುದೇ ಅದರ ಸಾಧ್ಯವಲ್ಲ. ಸತ್ತು ಬದುಕುವುದು ಅದರ ಗುರಿ. ತನ್ನ ಮೈಯ ಗೊಬ್ಬರಮಾಡಿ, ತನ್ನ ಒಡಲಿಂದ ಮತ್ತೆ ಸಾವಿರಾರು ಹೊಸ ಬೀಜಗಳಾಗಲು ಅದು ಸಾವನ್ನು ಉಪಯೋಗಿಸಿಕೊಳ್ಳುವುದು. ಮಾನವನ ಇರವೂ ಹೀಗಾಗಬೇಕು. ವಾಸನೆಗಳ ನಾಶ ಎಂದರೆ ಬೆಂದಬೀಜ. ಅದುವೆ ಹೆಣ. ವಾಸನೆಗಳನ್ನು ನಾಶಮಾಡುವ ತತ್ವಜ್ಞಾನವನ್ನು ಅನುಸರಿಸಿ, ನಮ್ಮ ಭಾರತೀಯರು-ಅದರಲ್ಲೂ ಹಿಂದುಗಳು ಜೀವಂತ ಹೆಣಗಳಂತಾಗಿದ್ದಾರೆ. ಬೇಕು ಎಂಬುದೇ ಬೆಂಕೆ. ಈ ಬೆಂಕೆಯಲ್ಲದೆ ಬೇಳುವೆಯೆ ಸಾಧ್ಯವಿಲ್ಲ. ಆದುದರಿಂದ ವಾಸನಾಕ್ಷಯದ ಅವೈದಿಕ ತತ್ವಜ್ಞಾನದಿಂದ ನಮ್ಮ ಜನಗಳು 'ನಿರಗ್ನಿ'ಗಳಾಗಿದ್ದಾರೆ. ಅನಾರ್ಯರಾಗಿದ್ದಾರೆ. ಏಕೆಂದರೆ ಯಜ್ಞಕ್ಕೆ ಅವಶ್ಯವಾದ ಅಗ್ನಿಯನ್ನೇ ಇವರು ಆರಿಸಿಬಿಟ್ಟಿದ್ದಾರೆ. ಅಗ್ನಿಪೂಜೆಯನ್ನು ಮರೆತುಬಿಟ್ಟಿದ್ದಾರೆ.

'ಶತಕ್ರತು'ವೆ ಯಾವಾಗಲೂ ಆದರ್ಶವಾಗಿದ್ದ ಅಂದಿನ ಆರ್ಯರು ವಿಜಯೋತ್ಸಾಹದಿಂದ ಭೂಲೋಕದಲ್ಲಿ ಮೆರೆದರು. ಒಂದು ಕ್ರತುವನ್ನೂ ಮಾಡಲಾಗದ ಸಂಕಲ್ಪಶಕ್ತಿಯನ್ನು (Will Power) ನಷ್ಟಪಡಿಸಿಕೊಂಡ ಇಂದಿನ ಹಿಂದೂಗಳು ಪರದಾಸ್ಯದಲ್ಲಿ ಬಿದ್ದುಕೊಂಡು ನಿರ್ವಿಣ್ಣರಾಗಿದ್ದಾರೆ. 'ಜಿಜೀವಿಷೇತ್ ಶತಂ ಸಮಾಃ' ಎಂಬುದು ಅಂದಿನವರ ಅಭಿಲಾಷೆ! 'ಸಾಕು ಸಾಕು, ಈ ಮನುಜ ಶರೀರ'ವೂ ಎಂಬುದು ಇಂದಿನವರ ಹಾಡು! 'ಪಶ್ಯಾಮ ಶರದಃ ಶತಂ; ಜೀವೇಮ ಶರದಃ ಶತಂ ಎಂಬುದು ಅಂದಿನವರ ಹಾರೈಕೆ; 'ಬೇಗನೆ ಕಣ್ಣು ಮುಚ್ಚಯ್ಯ ದೊರೆಯೆ, ನಿನ್ನಡಿಯಲ್ಲೆನಗೆ ಬೇಗನೆ ಎಡೆಗುಡಯ್ಯ ತಂದೆ' ಎಂಬುದು ಇಂದಿನವರ ಹಂಬಲ! 'ಮಯಿಮೇಧಾಂ ಮಯಿಪ್ರಜಾಂ ಮಯಿ ಅಗ್ನಿಃ ತೇಜಃ ದಧಾತು;' 'ಮಹಾನ್ ಭವತಿ ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ ಮಹಾನ್ ಕೀರ್ತ್ಯಾ' ಎಂಬುದು ಅಂದಿನವರ ಬೇಳುವೆಯ ಕೋರಿಕೆ. ನನಗೆ ಬಡತನವನ್ನಿತ್ತು ನೀ ಕರುಣಿಸಿದೆ,' 'ಅಡಿಗಡಿಗೆ ಅಪಮಾನವಾಗಲಿ ದೇವಾ' 'ನಾನು ಹೀನದೀನ' ಎಂಬುದು ಇಂದಿನ ಕನವರಿಕೆ! 'ಭೂಮಾ ವೈ ಸುಖಂ' ಎಂದು ಅವರು ಅನಂತಕ್ಕೆ ಕೈಯಿಕ್ಕಿದರು. 'ನಾಽಲ್ಪೇ ಸುಖಂ' ಎಂದು ಅಲ್ಪತೆಯನ್ನು ತ್ಯಜಿಸಿದರು. 'ಹೆಚ್ಚಳವು ಹಾನಿಕರ' ಎಂಬ ಅದೂರ ದೃಷ್ಟಿಯಿಂದ ಇವರು ನನಗೆ ಏನೂ ಬೇಡ ಎಂದು ಕೈಮುಚ್ಚಿಕೊಂಡು ಕುಳಿತರು. ಅಂದಿನವರದು ತುಂಬುಜೀವನ. ಹಿರಿ ಗುರಿ. ಇಂದಿನವರದು ಬರಿಜೀವನ. ಯಾರು ಏನು ಬೇಡಿದರೊ ಅವರು ಅದನ್ನು ಪಡೆಯುವರು, ಪಡೆದರು.

ಈ ಏಕಾದಶಿ, ಶಿವರಾತ್ರಿಗಳೇ ಇಂದಿನವರಿಗೂ ಗುರಿಯಾಗಿರಬೇಕೆ? 'ಭೂಮಾ ವೈ ಸುಖಂ' ಎಂಬುದನ್ನು ಮರೆಯಬೇಕೆ? 'ಆಯುಃ ಪೃಥಿವ್ಯಾಂ ದ್ರವಿಣಂ ಬ್ರಹ್ಮವರ್ಚಸಂ ಮಹ್ಯಂ ದತ್ವಾ'.... ಎಂದು ಬೇಡ ಕೂಡದೇ? ಬೇಡುವುದೇ ತಪ್ಪಾಗಿದ್ದರೆ ಬದುಕುವುದಾದರೂ ಏತಕ್ಕೆ? 'ಪ್ರಜಯಾ, ಪಶುಭಿಃ ಬ್ರಹ್ಮವರ್ಚಸೇನ ಮಹಾನ್ ಕೀರ್ತ್ಯಾ' ಮಹಾನ್(ಮಹಾಂತನು) ಆಗುವ ಹೆಗ್ಗುರಿಯಿಲ್ಲದಿದ್ದರೆ ಬಾಳುವಲ್ಲಿ ಬದುಕುವಲ್ಲಿ ಏನು ತಾನೆ ಸೊಗಸು? ಏಕಾದಶಿ ಶಿವರಾತ್ರಿಗಳೇ ಗುರಿಯಾಗಿದ್ದರೆ ಬದುಕುವುದಕ್ಕಿಂತ ಸಾಯುವುದೇನು ಕೇಡು?

ನಮ್ಮ ಇಂದಿನ ದುರ್ಗತಿಗೆ ನಾವೇ ಕಾರಣರು. ಅಲ್ಪಸಂತುಷ್ಟಿಯ ರೋಗವು ನಮ್ಮ ಜನಗಳ ತಲೆಹಿಡಿದಿತು. 'ಭೂಮಾ ವೈ ಸುಖಂ' ಎಂಬುದರ ಮರೆವು ಆಯ್ತು. 'ಇರಲೆನಗೆ ಕರಕನ್ನದೂಟವು' ಎಂದು ಕೊನೆದು ತೊನೆದು ಹಾಡಲಾರಂಭಿಸಿದೆವು! 'ಪಾಲಿಗೆ ಬಂದುದು ಪಂಚಾಮೃತ' 'ದೇವರು ಕೊಟ್ಟಷ್ಟರಲ್ಲಿಯೆ ತೃಪ್ತರಾಗುವ' ಎಂಬ ಹೇಡಿತನದ ವಿಚಾರಗಳನ್ನು ಅರ್ಥ ತಿಳಿಯದೆ ಹರಡಿದೆವು. ಈ ಬಗೆಯ ನಮ್ಮ ಕೀಳು ಬೇಳುವೆಯ ಫಲವೆ, ನಮ್ಮ ಇಂದಿನ ಆಳುತನದ ಬಾಳು. ಅಲ್ಪಸಂತುಷ್ಟಿಯ ಈ ಕರ್ಮವು ವೇದವಿಹಿತವಾದ ಯಜ್ಞವಲ್ಲ. ವೇದಕ್ಕೆ ಸಮ್ಮತವಾಗದ ಅಶಾಸ್ತ್ರೀಯವೂ ಘೋರವೂ ಆದ ದುಷ್ಕರ್ಮ. ವೈದಿಕರು ಎಂದರೆ ಜ್ಞಾನಿಗಳು, ನಿಜವಾದ ತತ್ವ ತಿಳಿದವರು ಇದಕ್ಕೆ ಎಂದೂ ಒಪ್ಪಿಗೆಯನ್ನೀಯರು. 'ನಾಽಲ್ಪೇ ಸುಖಮಸ್ತಿ' 'ಭೂಮಾ ವೈ ಸುಖಂ' ಎಂದು ಶ್ರುತಿಯಿದೆ. ಋಷಿಗಳು ಅಲ್ಪಸಂತುಷ್ಟರೆಂದು ಹಲವರ ಗ್ರಹಿಕೆಯಿದೆ. ಆದರೆ, ಅಲ್ಪತ್ವದಲ್ಲಿ ಸುಖವಿಲ್ಲವೆಂದು ಸಾರುವ-'ನಾಽಲ್ಪೇ ಸುಖಂ ಅಸ್ತಿ' ಎಂಬ ಋಷಿಗಳು ಅಲ್ಪಸಂತುಷ್ಟರೆ?

ವಾಸನಾಕ್ಷಯ, ಅಲ್ಪಸಂತುಷ್ಟಿ ಎಂಬುವು ಕೇವಲ ಅಸ್ವಾಭಾವಿಕ. ಜೀವದ ಮೂಲಸ್ವಭಾವಕ್ಕೆ ತೀರ ವಿಪರೀತವಾದುವು. ಮಹತ್ತಿನ ಕಡೆಗೆ ವಿಕಾಸಗೊಳ್ಳುತ್ತ ವಿಸ್ತಾರವಾಗುತ್ತ ಹೋಗುವುದು ಜೀವನದ ಸ್ವಭಾವ. ಆದುದರಿಂದ 'ಭೂಮಾ' 'ಮಹತ್ತು' 'ಬೃಹತ್ತು' ಇದುವೆ ಮಾನವನನ್ನು ಯಾವಾಗಲೂ ತನ್ನೆಡೆಗೆ ಸೆಳೆಯುತ್ತಿರುತ್ತದೆ. 'ಭೂಮಾ' 'ಮಹತ್ತು' 'ಬೃಹತ್ತು' ಎಂದರೆ ಅನಂತತ್ವ. ಅನಂತತತ್ವಕ್ಕೆ ಬೆನ್ನು ತೋರಿ 'ಅಲ್ಪತ್ವ'ವನ್ನೇ ಹಾರೈಸಿ ಕ್ಷೀಣತೆಯತ್ತ ಹೊರಟರೆ ಉನ್ನತಿಯ ಬದಲು ಅಧೋಗತಿಯಾಗುವದರಲ್ಲಿ ಸಂದೇಹವೇ? ಅದರ ಪ್ರತ್ಯಕ್ಷ ಫಲವೇ ನಮ್ಮ ಇಂದಿನ ಭಾರತದ ಸ್ಥಿತಿ. ಸ್ವಾಭಾವಿಕವಾದ ಹಸಿವು ನೀರಳ್ಕೆಗೂ ರೋಗವೆಂದು ಹೇಳುವ ತತ್ವಜ್ಞರು ಕೆಲರು. ಆರೋಗ್ಯಕ್ಕೆ ಕಾರಣವಾಗುವ ಹಸಿವೇ ರೋಗವಾದರೆ ಬದುಕುವುದೂ ಒಂದು ವ್ಯಾಧಿಯೆ ಸರಿ! 'ಜಿಜಿವಿಷೇತ್ ಶತಂ ಸಮಾಃ' 'ಭದ್ರಂ ಕರ್ಣೇಭಿಃ ಶೃಣುಯಾಮ.....' 'ಜೀವೇಮ ಶರದಃ ಶತಂ' ಎಂದು ಮುಂತಾಗಿ ಸೊಗಸಾಗಿ ಬಾಳುವ (ಭೂಮಾ) ಹಿಗ್ಗಿನ ಹುಮ್ಮಸವು ಎತ್ತ? 'ಬಾಳುವುದೇ ಒಂದು ಪಾಪ' ಎಂಬ ಈ ಕ್ಷೀಣ ಜೀವನದ ಕೀಳು ಹಳವಂಡವೆತ್ತ?

ನಿರೋಗಿ ಜೀವನಕ್ಕೆ ಹಸಿವು ಹೇಗೆ ಹುಟ್ಟುಗುಣವೊ, ಹಾಗೆ ಆಶೆ ಆಕಾಂಕ್ಷೆಗಳು-ವಾಸನೆಗಳೂ ಮಾನವನ ಹುಟ್ಟುಗುಣ, ಜೀವ ಸ್ವಭಾವ. ಜೀವವು ಅಂಕುರಿಸಿ ವಿಸ್ತರಿಸಿ ಸಫಲವಾಗತಕ್ಕುದು, ಪರಿಪಕ್ವವಾಗತಕ್ಕುದು, ಈ ಸ್ವಭಾವದ ಮೂಲಕವಾಗಿಯೇ. ಇದರಲ್ಲಿಯೆ ಜೀವದ ಸಾರ್ಥಕತೆಯಿದೆ; ಜೀವನದ ಧನ್ಯತೆಯಿದೆ. ಜೀವದೊಳಗಿನ ಬೆಳೆವ ಕಸುವೆ ಬಯಕೆ; ಬೇಡಿಕೆ, ಬಯಕೆಗಳು ಆಗದೆ ಜೀವ ಹುಟ್ಟದು. ಇಂದಿನ ಬಯಕೆಗಳು ನಾಳೆ ಬರುವುದರ ಮುಂಗುರುತುಗಳಾಗಿವೆ. ಇಂಥ ಬಯಕೆಗಳೇ ಬೇಡವೆನ್ನುವುದು ಲೋಕವಿನಾಶಕಾರಕ. ಬೆಳಕು ಬಿಟ್ಟು ಸೂರ್ಯನುಂಟೆ? ಶೆಕೆಯ ಬಿಟ್ಟು ಅಗ್ನಿಯುಂಟೆ? ಹಾಗೆ ಬೇಳಿಗೆಯನ್ನು ಬಿಟ್ಟು, ಜೀವವಿಲ್ಲ. ಬೆಳೆವುದು ಜೀವದ ಧರ್ಮ. ಬಯಸದ್ದು ಬೇಡದ್ದು ಎಂದೂ ಬೆಳೆಯಲಾರದು. ಸಿಹಿಯನ್ನು ನಷ್ಟಪಡಿಸಿ ಸಕ್ಕರೆಯನ್ನು ಕಾಣುವೆವೆಂಬುದು ಹೇಗೆ ತಿಳಿಗೇಡಿತನದ ಕನವರಿಕೆಯೊ ಹಾಗೆ ವಾಸನಾರಹಿತ ಜೀವವನ್ನು ಪಡೆವೆನೆಂಬುದೂ ಮೂರ್ಖನ ಕನಸು; ವಾಸನೆಗಳನ್ನು ನಾಶಗೊಳಿಸುವುದೆಂದರೆ ಜೀವವನ್ನು ನಿರ್ಜೀವ ಮಾಡುವುದು. ಹೆಣವಾಗುವುದು.

ದುರ್ವಾಸನೆಗಳಿದ್ದರೆ ಅವನ್ನು ಸದ್ವಾಸನೆಗಳನ್ನಾಗಿ ಮಾರ್ಪಡಿಸಿಕೊಳ್ಳಬೇಕು. ಆದರೆ ವಾಸನೆಗಳನ್ನೇ ನಷ್ಟಪಡಿಸುವೆವೆಂಬ ಹವ್ಯಾಸವು ಬರಿಯ ಹುಚ್ಚಾಟ. ಹಿಮಾಲಯದಿಂದ ಹೊರಟ ಗಂಗೆ ವಿಸ್ತೃತಳಾಗುತ್ತ ಸಮುದ್ರಕ್ಕೆ ಸೇರುವುದು ಅವಳ ಧರ್ಮ. ಆದಡೆ, ಹಿಮಾಲಯದಿಂದ ಅವಳು ಮೊದಲು ಹೊರಡುವುದೇ ತಪ್ಪು ಎಂದು ಗ್ರಹಿಕೆ ಮಾಡಿಕೊಂಡು ಆ ನೀರನ್ನು ಹರಿಯಗೊಡದೆ-ಬೆಳೆಯಗೊಡದೆ ಅಡೆತಡೆಗಳನ್ನು ಒಡ್ಡುವ ಹಂಬಲಿಗರಿದ್ದರೆ ಅವರಿಗೇನೆನ್ನಬೇಕು? ಇದರಂತೆ ಜೀವ ಹುಟ್ಟಿದ್ದೇ ತಪ್ಪು 'ಅಯ್ಯೋ ನಾನು ಏಕೆ ಹುಟ್ಟಿದೆ?' 'ಏನು ಪಾಪ ಮಾಡಿದ್ದರಿಂದ ಈ ಜನ್ಮ ತಾಳುವ ಹೊತ್ತು ಬಂದಿತೋ?' ಎಂದು ಸುಮ್ಮನೆ ಗೋಳಾಡಿ ಕಣ್ಣೀರಿಡುವ ಹಲಕೆಲವು ದಾಸರೂ ಶರಣರೂ ಉಂಟು. ಹುಟ್ಟಿದ ತಪ್ಪಿಗೆ ಹೇಗೂ ಬದುಕಿ, ಬೇಗನೆ ಒಮ್ಮೆ ಈ ಜನ್ಮದೊಳಗಿಂದ ಪಾರಾಗುವ ಅವಸರದಲ್ಲಿರುವ ಈ ಅಲ್ಪಜೀವಿಗಳಿಗೆ, ಜೀವದ ಮೂಲ ಸ್ವಭಾವವು ಏನೆಂಬುದು ಗೊತ್ತಿರದಿರುವುದೇ ಅವರ ಈ ಬಗೆಯ ನಂಬುಗೆಗೆ ಮೂಲ ಕಾರಣವು. ಜೀವಗಂಗೆಗೂ, ಹಿಗ್ಗಿ 'ಅನಂತ' ಸಾಗರಕ್ಕೆ ಸೇರಿದಾಗಲೆ ಸಂತೋಷ; ಸುಖ; "ಭೂಮಾ ವೈ ಸುಖಂ; ನ ಅಲ್ಪೆ ಸುಖಂ" ಇದುವೆ ಜೀವದ ಧರ್ಮ.

ಹೀಗಿದ್ದರೆ ಆಸೆ, ಆಕಾಂಕ್ಷೆಗಳೆಂಬುದಕ್ಕೆ ಹಲವು ಜನಗಳು ಬೆಚ್ಚಿ ಬೆದರಿ ಗಾಬರಿಗೊಂಡಿದ್ದೇಕೆ? ಕೈಲಾಗದಕ್ಕೆ. ಅಥವಾ ದುಡಿಯಲಾರದ್ದಕ್ಕೆ. 'ಹೊನ್ನನ್ನು ಹೆಣ್ಣನ್ನು ಹಣ್ಣಾದ ಫಲಗಳನ್ನು ಕಣ್ಣಾರೆ ಕಂಡು ಬಯಸದ ಅಣ್ಣಗಳಾರು' ಎಂದು ಸರ್ವಜ್ಞನು ಹೇಳಿದುದೇ ನಿಜ. ಎಲ್ಲರಿಗೂ ಹಣ್ಣು ಬೇಕು, ಹೆಣ್ಣು ಬೇಕು, ಹೊನ್ನು ಬೇಕು. ಆದರೆ ಅದಕ್ಕಾಗಿ ಮಾಡಬೇಕಾಗುವ ಹೆಣಗಾಟ-ಹೋರಾಟ ಮಾತ್ರ ಬೇಡ! ಪದವಿ, ಪಟ್ಟ, ಅಧಿಕಾರ, ಶಕ್ತಿ, ಮಾನ, ಮಾನ್ಯತೆಗಳನ್ನು ಧನಕನಕಾದಿಗಳನ್ನು ಪಡೆಯಬೇಕೆಂಬ ಹಂಬಲವು, ಹರೆಯದಿಂದಲೂ ಎಂದೂ ಇಲ್ಲದ

ಮನುಷ್ಯ ಪ್ರಾಣಿಯನ್ನು ಮೀಸಲಕ್ಕಾದರೂ ಕಾಣಬಹುದೇ? ಪ್ರತಿಯೊಬ್ಬರೂ ತಮ್ಮ ತಮ್ಮ ಕಾಲದಲ್ಲಿ, ತಮ ತಮಗೆ ಶಕ್ಯವಿರುವ ರೀತಿಯಲ್ಲಿ ಹೆಗ್ಗಳಿಕೆಯುಳ್ಳವರಾಗಲು ಹಾರೈಸಿದ್ದೂ ಹಾರೈಸಿದ್ದೇ. ಆದರೆ, ಈ ಲೋಕ ರೀತಿಯು ತುಂಬ ತೊಡಕಿನದಾಗಿದೆ. ಯಾರೊಬ್ಬರಿಗೇ ಅವ್ಯಾಹತವಾಗಿ ತಮ್ಮ ಕುದುರೆಯನ್ನೇ ಮುಂದೋಡಿಸಲು ಇಂಬು ದೊರೆಯದಂತೆ ಈ ಲೋಕ-ಸ್ವಭಾವದ ರಚನೆಯಿದೆ. ಅದರಿಂದ, ಪ್ರತಿಯೊಬ್ಬರಿಗೂ ಅಡಿಗಡಿಗೆ ಆತಂಕಗಳನ್ನು ಎದುರಿಸಬೇಕಾಗುವುದು. ನಿರಾಶರಾಗುವ ಹೊತ್ತು ಬರುವುದು; ಗೆಲುವಿನ ಹುಮ್ಮಸದ ಮೊದಲಿನ ಬಿಂಕವೆಲ್ಲ ತಗ್ಗಿ, ಸೋಲಿನ ಜೋಲಿಗೆ ಕೆಳಕ್ಕುರುಳಿ ಬೀಳುವ ಭೀತಿಯು 'ಆ' ಎಂದು ಬಾಯ್ದೆರೆದು ಮುಂದೆ ನಿಲ್ಲುವುದು. ಆಗ ಮನುಷ್ಯನು ಎದೆ ನಡುಗಿ ಕೈಯೊಳಗಿನ ಕೆಲಸ ಬಿಟ್ಟು 'ಆಶೆಯೆ ದುಃಖ; ನಿರಾಶೆಯೆ ಪರಮ ಸುಖ' ಎಂಬ ತತ್ವಾನುಭವಿಯಾಗುವನು. ಇದೆಲ್ಲವೂ, ಕೈಗೆ ನಿಲುಕದಿದ್ದುದಕ್ಕೆ 'ದ್ರಾಕ್ಷೆಯ ಹಣ್ಣುಗಳು ಹುಳಿ' ಎಂದ ನರಿಯ ತತ್ವಜ್ಞಾನವಲ್ಲದೆ ಮತ್ತೇನು? ಆದುದರಿಂದ 'ನಿರಾಶೆಯೆ ಪರಮಸೌಖ್ಯ; ಆಶೆಗಳನ್ನೆಲ್ಲ ನಾಶಮಾಡಬೇಕು' ಎಂಬುದು ಹೇಡಿಗಳ ತತ್ವಜ್ಞಾನ. ತಮ್ಮ ನಿರಾಶೆಯ ಅಸಮಾಧಾನವನ್ನು ಮುಚ್ಚಿಕೊಳ್ಳುವುದಕ್ಕಾಗಿ ಮಾಡಿಕೊಂಬ ಆತ್ಮವಂಚನೆ. ತಾನು ಯಶಸ್ವಿಯಾಗಲಿಲ್ಲವಲ್ಲ ಎಂದು ಮನಸು ಕಡಿಯಬಾರದೆಂದು ನುಂಗಿದ ಅಫೀಮಿನ ಗುಳಿಗೆ.

ಒಂದರೆಗಳಿಗೆಯಾದರೂ ಆಶೆ ತಪ್ಪಿಲ್ಲ. ಬೇಕು ಎಂಬುದು ಬೆನ್ನುಬಿಟ್ಟಿಲ್ಲ. ಆಸೆಯೆ ನಮ್ಮ ಶ್ವಸನ; ನಿರಾಶೆಯೆ ಮರಣ. ಆಸೆಯಿಂದ ಅಮೃತತತ್ವವು ಪ್ರಾಪ್ತವಾಗಬಲ್ಲದು; ಆದರೆ ನಿರಾಶೆಯಿಂದೇನು? ಶುದ್ಧ ಜೀವನ್ಮೃತಾವಸ್ಥೆ. ಆಸೆಯೆ ಬೆಳಕು. ನಿರಾಶೆ ಕೇವಲ ಕಗ್ಗತ್ತಲೆ; ಅಂಧಂ ತಮಸ್ಸು. ಆಸೆ ಯಾರಿಗೆ ಬಿಟ್ಟಿದೆ? ದೇವತೆಗಳು ತಾವು ಬದುಕಬೇಕೆಂದು ಬಯಸಿದರಲ್ಲವೆ? ಸುಧೆಯನ್ನು ಅವರು ಬಯಸಿದ್ದೇಕೆ? ರಕ್ಕಸರ ಕೈಯಿಂದ ಸಾಯಬಾರದೆಂದೇ ಅಲ್ಲವೇ? ದೇವತೆಗಳೆ ಆಶೆ ಆಕಾಂಕ್ಷೆಗಳನ್ನು ಬಿಟ್ಟಿಲ್ಲವೆಂದ ಬಳಿಕ ಮಾನವರು ಅದನ್ನು ತೊರೆಯಬೇಕೆಂದು ಹೇಳುವುದು ಯಾವ ಬುದ್ಧಿವಂತಿಕೆ?

ಇಂತು ಯಾವ ಬಗೆಯಿಂದ ವಿಚಾರಿಸಿದರೂ ಹಸಿವು ಹಂಬಲಗಳು, ಆಶೆ ಆಕಾಂಕ್ಷೆಗಳು ಮನುಷ್ಯನನ್ನು ಬಿಡುವುದು ಎಂದೂ ಸಾಧ್ಯವಿಲ್ಲ, ಎಂಬುದು ನಿಶ್ಚಿತವಾಗುತ್ತದೆ. ಹೀಗಿದ್ದ ಬಳಿಕ ಅವನ್ನು ನಷ್ಟಪಡಿಸುವ ವ್ಯರ್ಥ ಒದ್ದಾಟವೇತಕ್ಕೆ? ಯಾರ ಆಸೆಗಳು ಎಂತಹವೊ ಅಂತಹನು ಆ ಮನುಷ್ಯನಾಗುವನು. ಯಾರ ಆಸೆಗಳು ಎಷ್ಟು ಬೆಲೆಯವೊ ಅದಕ್ಕಿಂತ ಹೆಚ್ಚಿನ ಬೆಲೆಯ ಮನುಷ್ಯನು ಆತನಾಗಿರಲಾರನು. ಆದುದರಿಂದ ಕಿರುಕುಳ, ಅಲ್ಪತೆ ಬೇಡವಾದವರು ಹಿರಿಯಾಸೆಗಳನ್ನು ತಾಳಬೇಕು. ಭೂಮಾ ಸುಖ ಬೇಕಾದವರು, ಭೂಮಿಯ ತೂಕದ ಹುಮ್ಮಸದವರಾಗಬೇಕು. ಬೇಕು ಎಂಬುದೇ ಮನುಷ್ಯನೊಳಗಿನ ಕಾವು; ಕಿಡಿ. ಮನುಷ್ಯನು ಬೇಡುವುದು ಯಾವಾಗ? ಒಳಗಿನ ತಾಪದಿಂದಲೇ ಅಲ್ಲವೆ? ಒಳಗಣ ಕುದಿಯ-ಬೇಗುದಿಯ ದಾಹ ಕಡಿಮೆ ಮಾಡಲು ಕೇಳಿಕೊಂಬುದೇ ಬೇಕು ಎಂಬುದು. ಒಳಗಣ ಬೇವಸವನ್ನು ತಣಿಸಲು ಕೋರುವುದೇ ಬೇಡಿಕೊಂಬುದು. ಇಂತಿವು ಬೇಕು, ಬೇಡು, ಎಂಬುವು ಒಳಗಣ ಬೆಂಕೆಯ ಅಸ್ತಿತ್ವದರ್ಶಕ ಶಬ್ದಗಳಾಗಿವೆ. ಈ ಒಳಗಣ 'ಬೇಕೆ' ಅಥವಾ ಬೆಂಕೆಯನ್ನು ನಂದಿಸುವುದು ಜಾಣತನವಲ್ಲ. ಮನುಷ್ಯನ ಉನ್ನತಿಗೆ ಸಹಾಯಕವಾಗುವಂತೆ, ಹಿತಕರವಾಗುವಂತೆ ಅದನ್ನು ಸಂವರ್ಧಿಸಿ ಕೊಂಬುವಲ್ಲಿಯೇ ಜಾಣ್ಮೆಯಿದೆ, ಚಾತುರ್ಯವಿದೆ. ಈ ಹದವನ್ನು ಹೇಳುವ ಶಾಸ್ತ್ರವೇ ಅಗ್ನಿವಿದ್ಯೆ; ಯೋಗ; ಸಮ್ಯಕ್‌ವ್ಯವಹಾರಯೋಗ. ಇದೇ ನಮಗಿಂದು ಬೇಕಾಗಿದೆ.

ಈ ಅಗ್ನಿಯನ್ನು ಕಾಯ್ದುಕೊಳ್ಳಿರಿ. ಪ್ರತಿಯೊಬ್ಬರೂ ಅಗ್ನಿಹೋತ್ರಿಗಳಾಗಿರಿ. ಇದುವೇ ಮನೆಮನೆಗೂ ಇರಬೇಕಾದ ಗೃಹ್ಯಾಗ್ನಿ. ಪವಿತ್ರವಾದ ಹೃದಯಕುಂಡದಲ್ಲಿ ಈ ಬೆಂಕೆ ನಿಗಿನಿಗಿಯಾಗಿರಲಿ, ಸದ್ವಿಚಾರ, ಸತ್ಕರ್ಮಗಳ ಸಮಿತ್ತಿನಿಂದ ಇದನ್ನು ಆಗಾಗ ಹೊತ್ತಿಸಿ ಪುಟಗೊಳಿಸಿರಿ. ಇಷ್ಟಿಯನ್ನು ಮಾಡಿರಿ-ಇಷ್ಟವನ್ನು ಸಾಧಿಸಿರಿ. ಕ್ರತುವಿನ ಫಲ ಪಡೆಯಿರಿ. ಇದುವೆ ಪಾವನ ಪಾವಕ. ಮಾನವನನ್ನು ಪವಿತ್ರಮಾಡುವ ಬೆಂಕೆ. ಮಾನವನನ್ನು ಉದ್ಧರಿಸುವ ಚಿಚ್ಛಕ್ತಿ; ಕ್ರತುಶಕ್ತಿ.

ಅಸಂತೋಷವೇ ಅಗ್ನಿ

ಬೇಕು ಎಂದರೆ ಆಶೆ, ಆಶೆಯೆಂದರೆ ಅಸಂತೋಷ; ಅಸಂತೋಷವೇ ಅಗ್ನಿ. ಹೀನ ಅಸೂಯಾದಿಭಾವದ ಮತ್ಸರಾಗ್ನಿಯು ಪಾವಕಾಗ್ನಿಯಲ್ಲ; ಚಿತೆ. ಯಾವಾಗಲೂ ಅಧೋಮುಖ, ದುಃಖದಾಯಕ, ಕ್ಷಯಕಾರಕ, ಹೊಗೆಯ ಲೋಕಕ್ಕೆ ಒಯ್ಯುವುದು. ಏಳ್ಗೆಗೆ ಕಾರಣವಾಗುವ ಹಸನಾದ ಹಿರಿಯಾಸೆಗಳ ಕೆಂಡಗಳೆ ಪಾವಕಾಗ್ನಿ. ಇದು ಎಂದೆಂದೂ ಊರ್ಧ್ವಮುಖ. ಸುಖದಾಯಕ, ವೃದ್ಧಿದಾರಕ, ಸೂರ್ಯಲೋಕಕ್ಕೆ ಒಯ್ಯುವುದು.

ಆದುದರಿಂದ ಪ್ರತಿಯೊಬ್ಬರೂ ಸರಿಯಾಗಿ ಬೇಕು ಎನ್ನಲು ಕಲಿಯಬೇಕು. ಒಳ್-ಬೇಕುಗಳನ್ನು ಹೆಚ್ಚಿಸಬೇಕು. ಆದರೆ 'ಬೇಕು' ಎಂಬ ಯೋಗ್ಯತೆ ಯಾರಿಗಿದೆ? ದಾರಿಹೋಕ ತಿರುಕರಿಗೆ? ಬಾಯ್ಗೆ ಬಂದುದನ್ನೆಲ್ಲ ಬಡಬಡಿಸುವುದೆಲ್ಲ 'ಬೇಕು' ಎಂದಂತಲ್ಲ. ವಡವಡಿಕೆ, ಬಡಬಡಿಕೆಯವರೆಲ್ಲ ಬರಿ ಬುಡುಬುಡಿಕರು, ತಿರುಕರು. 'ಬೇಕಿ'ಗಳಲ್ಲ-ಬೇಳ್ವೆಯವರಲ್ಲ. ಸರಿಯಾಗಿ ಬೇಡಲು ಅರಿತವನೇ 'ಬೇಕಿ.' ಬೇಕಿಯು ಒಳಗೆ ನಿಗಿ ನಿಗಿ ಬೆಂಕೆಯನ್ನು ಕಾಯ್ದಿಟ್ಟುಕೊಳ್ಳಲು ಸಮರ್ಥನಾಗಿರಬೇಕಾಗುತ್ತದೆ. ಬೇಡಿದ್ದನ್ನು ಪಡೆಯಲು ತನ್ನ ಮೈಯನ್ನೂ ಆಹುತಿಯಾಗಿ ಬಲಿಗೊಡಲು ಸಿದ್ಧತೆಯುಳ್ಳವನಾಗಿರಬೇಕಾಗುತ್ತದೆ. ಹೀಗಿದ್ದರೆ, ಅವನು ನಿಜವಾಗಿ ಬೇಳ್ವೆಯವನು; ನಿಜವಾದ ಬೇಕಿ.

ಒಳಗಿನ ಕಾವಿನಿಂದ 'ಬೇಕು' ಎಂದರೇ ಅದು ಬೇಗನೆ ಸಿದ್ಧಿಸುತ್ತದೆ. ಇಲ್ಲವಾದರೆ ಆಡಿದ ನುಡಿ ಗಾಳಿಯೊಡನೆ ಗಾಳಿ. ಬೇಡುವವನ ಬೇಡಿಕೆಯನ್ನು ಸಲ್ಲಿಸದಿದ್ದರೆ ತಮಗೂ ಅದರ ಬಿಸಿ ತಾಗುವುದು, ಎಂಬ ಮನವರಿಕೆಯಾಗದೆ ಯಾರೂ ಕೈಯೆತ್ತಿ ಕೊಡುವುದಿಲ್ಲ. ಆದುದರಿಂದ, ತಮ್ಮಲ್ಲಿಯ ಬೆಂಕೆಯನ್ನು ಆರಗೊಟ್ಟವರ ಬೇಡಿಕೆಗಳು ಎಂದೂ ಪೂರ್ಣವಾಗುವುದಿಲ್ಲ. ಒಳಗಿನ ಬೆಂಕೆ ನಂದಿದವರು ಬೇಡಲು ಎಂದೂ ಅರ್ಹರಲ್ಲ. ಅವರು ಸುಮ್ಮನೆ ತಿರಿಯಬೇಕು; ದೊರೆತರೆ ತಿನ್ನುವ ಅಲ್ಪತುಷ್ಟಿಯ ವ್ರತಿಗಳಾಗಬೇಕು.

ಕ್ರತುಶಕ್ತಿಯಿದ್ದವರೇ ತಮ್ಮ ಇಷ್ಟಾರ್ಥಗಳನ್ನು ಸಿದ್ಧಿಸಿಕೊಳ್ಳಬಲ್ಲರು; ಸಾಧಿಸಿಕೊಳ್ಳಬಲ್ಲರು. ಯಜನಮಾಡದೆ ಯಾರೂ ಯಜಮಾನರಾಗಲಾರರು. ಕ್ರತುವಿಲ್ಲದೆ 'ಇಂದ್ರ' ಪದವಿಯಿಲ್ಲ. ಯಜನವೆಂದರೇ ಅಗ್ನಿಪೂಜೆ. ಹೃದಯಸ್ಥ ಚೈತನ್ಯಜ್ಯೋತಿಯ ಆರಾಧನೆ. ಅದು ಇನ್ನೂ ಪ್ರಜ್ವಲಿಸುವಂತೆ ಅನುದಿನವೂ ವಿಚಾರ ಮತ್ತು ಕೃತಿಗಳ ಹವಿಸ್ಸನ್ನು ಅರ್ಪಿಸಬೇಕು. ನಿತ್ಯ ಪ್ರಾರ್ಥನೆ ಇದೊಂದು ಯಜ್ಞ. ಮಹಾತ್ಮಾ ಗಾಂಧೀಜೀ ಅವರು ಸಿದ್ಧಿಯನ್ನು ಪಡೆದುದು ಈ ಸಾಧನೆಯಿಂದಲೇ. ಆದರೆ, ಸರಿಯಾದ ಹದವನ್ನು ತಿಳಿಯದೆ ಮಾಡುವ ಪ್ರಾರ್ಥನೆ ಬೂದಿಯಲ್ಲಿಯ ಹೋಮ. ಒಳಗೆ ಬೇಯದೆ ಬೇಡಿದುದು-ಎಂದರೆ ಪ್ರಾರ್ಥಿಸಿದುದು ಎಂದೂ ಪಕ್ವವಾಗದು. ಫಲಕ್ಕೆ ಬಾರದು. ತಕ್ಕ ಕಾವು ಇಲ್ಲದೆ ಕಾಯ್ಗಳಾಗವು. ಪಕ್ವವಾಗಲು-ಹಣ್ಣಾಗಲು ಬೇಯಬೇಕು ನೋಯಬೇಕು.

ಕಾಯದೆ ಕಾಯ್ಗಳಿಲ್ಲ. ಕಾದದೆ ಗೆಲುವಿಲ್ಲ. ಒಳಗಿನ ಜೀವವು ಹುರುಪಿನಿಂದ ಹುರಿಗೊಂಡು ಹಿಗ್ಗಲು ನಡೆಸುವ ಕ್ರಿಯೆಯೆ ಹೋರೆ; ಹೊರಟೆ; ಇದುವೆ ಹೋರಾಟ, ಕಾದು, ಕಾಳಗ, ವಿಜಯ, ವೈಭವಗಳು ಕಾದದೆ, ಹೋರಾಡದೆ ಯಾರಿಗಾದರೂ ದೊರೆತುದುಂಟೆ? ದೊರೆವುದುಂಟೆ? ಸಮುದ್ರ-ಮಥನದ ಹೋರೆಯನ್ನು ಕೈಕೊಳ್ಳದೆ ಅಮೃತಸಿದ್ಧಿಯು ಸಾಧ್ಯವಿದ್ದಿತೇ? ರಕ್ಕಸರೊಡನೆ ಹೋರಾಡಲು ಹಿಂಜರಿದಿದ್ದರೆ ರಾಮನು ರಾಮನಾಗುತ್ತಿದ್ದನೆ? ಕೃಷ್ಣನು ಕೃಷ್ಣನಾಗುತ್ತಿದ್ದನೆ? ರಾಮಕೃಷ್ಣರೇ ಲೋಕಕ್ಕೆಲ್ಲ ಆದರ್ಶರಲ್ಲವೇ? ಆದರ್ಶದಂತೆ ಆಚರಿಸಲು ಸ್ವಲ್ಪವಾದರೂ ಹವಣಿಸದೆ ಅವರನ್ನು ಆದರ್ಶವಾಗಿ ಇಟ್ಟುಕೊಂಡು ಪ್ರಯೋಜನವೇನು? ರಾಮ-ಕೃಷ್ಣರ ಜೀವನವು ಏನನ್ನು ಬೋಧಿಸುತ್ತದೆ? ಅಖಂಡ ಕಾದಾಟ! ಅವ್ಯಾಹತ ಹೋರಾಟ! ಇಸ್ಲಾಮ ಮತ ಸ್ಥಾಪಕನ ಜೀವನರಹಸ್ಯವಾದರೂ ಏನು? ಕಾದಾಟ, ಹೋರಾಟವೇ ಅವನ ಎಲ್ಲ ಯಶಸ್ಸಿಗೆ ಕಾರಣವಲ್ಲವೆ?

ಆದುದರಿಂದ, ಪ್ರತಿಯೊಬ್ಬರೂ ಬದುಕಲು ಕಾದಿರಿ. ಕಾದಲು ಕಾಯಿರಿ. ಕಾಯ್ದು ಕಾದಿರಿ. ಕಾಯದ ಜೀವವು ಬಂಜೆ-ನಿರ್ಜೀವ. ಕಾಯದೆ ಜೀವಕ್ಕೆ ಸಫಲತೆಯಿಲ್ಲ. ಜೀವದ ಹಿಗ್ಗು-ಹೆಚ್ಚಳ ಕಾವಿನಲ್ಲಿ. ಕಾವು ವಸಂತನ ತಂದೆ. ಸೃಷ್ಟಿಯ ಮೂಲ. ಲೋಕಮಾತೆ-ಭೂಮಾತೆಯ ಒಡಲೊಳಗಣ ಕಾವು (ಲಾವಾ ರಸ) ಆರಿದ ಕ್ಷಣವೆ ಪೃಥ್ವಿಯ ಮೇಲೆ ಒಂದು ಪಿಳ್ಳೆಯೂ ಬದುಕಲಾರದು! ಸೂರ್ಯನ ಕಾವು ಕಡಿಮೆಯಾದೊಡನೆ ಇಡೀ ಸೂರ್ಯಮಾಲೆಯೆ ಕಳಚಿ ಬೀಳುವುದು! ಆದುದರಿಂದ ಕಾವು ಕಳೆದುಕೊಂಬುದೆಂದರೆ ಮರಣಕ್ಕೆ ಔತಣ. ಬೇಡುವುದು ಸಾಕೆಂದರೆ ಸಾವಿಗೇ ಸಂಚಕಾರ.

ಮನೋಲೋಕದಲ್ಲಿ ಸಂಕಲ್ಪ-ಶ್ರದ್ಧೆಯೇ ಅಗ್ನಿ. ಜೀವಲೋಕದಲ್ಲಿ ಭಾವನೆಗಳೆ ಅಗ್ನಿ. ಜಡಲೋಕದಲ್ಲಿ (ಜೀವಿಗಳಲ್ಲಿ ಜಡರಾದವರಲ್ಲಿ) ಜಠರವೇ ಅಗ್ನಿ. ಸಂಕಲ್ಪ-ಸಿದ್ಧಿಗಾಗಿ ಶ್ರದ್ಧೆಯ ಅನುಸಂಧಾನಕ್ಕಾಗಿ ನಿತ್ಯವು ತಪ್ತರಾಗುವವರೇ ತಪಸ್ವಿಗಳು. ಜ್ಞಾನದ ಹಸಿವಿನಿಂದ ಸತ್ಯ-ಜಿಜ್ಞಾಸೆಯ ಕಳವಳದಿಂದ ಕಾಯ್ದವರು ಇವರು. ತಮ್ಮ ಧ್ಯೇಯ ಸಾಧನೆಗಾಗಿ ಇವರಿಗೆ ಕೈ-ಬಾಯಿ ಕಾಯಬೇಕಾಗುವದು. ತಮ್ಮ ಬೆಂಕೆಯನ್ನು ಲೋಕದ ತನಿಬೆಳಕು ಆಗುವಂತೆ ಮಾರ್ಪಡಿಸಬೇಕಾಗುವುದು. ಇದುವೆ ಇವರ ಪರಮಸಿದ್ಧಿ.

ಆದರೆ, ಇದೀಗ ಈ ಮನೋಲೋಕದಲ್ಲಿ ಒಂದು ಕಿಡಿಯೂ ಕಾಣದಾಗಿದೆ. ಕೆಂಡದ ಮಾತೇಕೆ? ಬೆಂಕೆಯ ವಿಚಾರವೇಕೆ? ಬೆಳಕಿನ ಆಶೆಯೇಕೆ? ಎಲ್ಲವೂ ನಿರಾಶೆಯ ಕಗ್ಗತ್ತಲೆ. ಸೇಡು ಹಿಡಿಸಿ ಲಟಕಟಿಸಿ ಹಚ್ಚುವ ಕುಳಿರ್ಗಾಳಿ. ಕೆಂಡದಂತೆ ತಳತಳಿಸುವ-ತೇಜಸ್ವಿಯಾದ ವಿಚಾರಗಳಿಲ್ಲದ ಬಡಪಾಯಿಗಳು: ಎಲ್ಲಿ ನೋಡಿದಲ್ಲಿ ಮನೆಯವರ ಕಾಟಕ್ಕಾಗಿ ಅಥವಾ ಯಾವ ದಾರಿ ತೋಚದೆ ವಿದ್ಯಾಲಯದಲ್ಲಿ ಹೊಕ್ಕು ಹೊರ ಬೀಳುತ್ತಿರುವ ಹುರುಡು ಗೆಟ್ಟ ಹುಡುಗರೂ ಹರಯದವರೂ! ಸಂಬಳದ ಆಶೆಗಾಗಿ ಓದಿದ್ದನ್ನು ಕಾರಿಕೊಂಡು, ಅಧ್ಯಾಪನ ಕಾರ್ಯ ಸಾಗಿಸಿದೆವೆಂದು ಸೋಗಲಾಡಿತನವನ್ನು ನಡೆಸಿದ ಸ್ವ-ಪರವಂಚಕರಾದ ಅಧ್ಯಾಪಕ-ಪ್ರಾಧ್ಯಾಪಕರು! ಶ್ರದ್ಧೆಯ ಒತ್ತಾಯವಿಲ್ಲದೆ-ಒಳಗಣ-ಕಳವಳವಿಲ್ಲದೆ, ಏನೋ ಒಂದು ನಿಮಿತ್ತದಿಂದ ಪರಿಸ್ಥಿತಿಯ ಸೆಳವಿನಲ್ಲಿ ಸಿಕ್ಕುದೇ ಭ. ಗಳಾಗಿ, ಲೇಖಕರಾಗಿ ಅಥವಾ ಪತ್ರಕಾರರಾಗಿ, ಬಳ್ಳಿಗುರುಡರಿಗೆ ದಾರಿತೋರಹೊರಟ ಮುಂದಾಳುಗಳು! ಸತ್ಯಸೃಷ್ಟಿಯ ಅರಿವಿಲ್ಲದೆ ಸ್ವಪ್ನಸೃಷ್ಟಿಯಲ್ಲಿಯೊ ಸ್ವಪ್ನಾವಸ್ಥೆಯಲ್ಲಿಯೊ ಇದ್ದುಕೊಂಡು ಬಿದ್ದುಕೊಂಡು ಹೆಣ್ಣುಗಂಡಿನ ಕೆಲವೊಂದು ಉತ್ತಾನಶೃಂಗಾರಿಕಚಿತ್ರಗಳನ್ನೂ ಹೋಳಿಪದಗಳನ್ನೂ ಬರೆದು ಹಾಡಿ, ಕಲಾಸೇವೆ ಮಾಡಿದೆವೆಂಬ ಹಿಗ್ಗಿನ ಮಬ್ಬು ಅಥವಾ ಮಬ್ಬಿನ ಹಿಗ್ಗಿನಲ್ಲಿರುವ ಕಲಾವಂತರು! ನರಕದ ಹೆದರಿಕೆಯನ್ನು ಒಡ್ಡಿ, ಪ್ರಪಂಚವು ಮಿಥ್ಯೆಯೆಂದು ಸಾರಿ, ತಾವು ಮಾತ್ರ ಮಠಾಧೀಶರಾಗಿ ಜಗದ್ಗುರುಗಳೆಂದು ಬಿರುದು ತಾಳಿ ಅಧೋಲೋಕದ ಒಡೆಯರೆಂಬಂತೆ ಲೋಲರಾಗಿರುವ-ಧರ್ಮ ಆಚಾರಗಳ ಹೆಸರಿನಲ್ಲಿ ಅನಾಚಾರವನ್ನು ನಡಸಿರುವ ಸನಾತನ ಧರ್ಮಾಭಿಮಾನಿಗಳು.

ಈ ವರ್ಗದಲ್ಲಿ ಜೀವಂತತನವು ಕಡಿಮೆಯಾದುದಕ್ಕೆ ಇವರಲ್ಲಿ ಹೆಚ್ಚಾದವರಲ್ಲಿ ಒಳಗೆ ಕಿಡಿಯಿಲ್ಲದುದೇ ಕಾರಣ. ಒಳಗೆ ಕಿಡಿ-ಕೆಂಡವಿಲ್ಲದ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿಯೋ ಏನೋ ಇಂತಹರು ಅಡಿಗಡಿಗೆ

(ಬೆಂಕೆ) ಸೇದುವ ಪರಿಪಾಠವನ್ನೂ ಇಡುವರು. ಕಾವಿನ ಕೆಂಪು-ಬಿಳಿ ಬಣ್ಣದ ಪೇಯಗಳ ಸಣ್ಣ ದೊಡ್ಡ ಸೀಸೆಗಳನ್ನು ಒಡಲಿನಲ್ಲಿ ಸುರುವುವರು. ಅಥವಾ ಒಡಲೊಳಗೆ ಏಕೆ ಎಂದು ಉಷ್ಣವನ್ನು ಮೈಮೇಲೆಯೆ ಧರಿಸುವರು. ಶಿವನು ವಿಷವನ್ನು ಕಂಠದಲ್ಲಿಟ್ಟುಕೊಂಡರೆ, ಇವರು ವಿಷಯ ಲೌಲ್ಯದ ವಿಷವನ್ನು ಶರೀರದ ಮೇಲೆ ಹಿಡಿದಿಟ್ಟಿರುತ್ತಾರೆ. ಆದರೆ ಇದು ಲೋಕವನ್ನು ಕಾವ (ಎಂದರೆ ಲೋಕವನ್ನು ಉಳಿಸುವ ಬೆಳಿಸುವ) ಕಾವು ಅಲ್ಲ; ಕೊಲ್ಲುವ ಕಾವು. ಲೋಕಪಾವಕ ಅಗ್ನಿಯಲ್ಲ; ಸಂಹಾರಕ ಚಿತೆ.

ಮನೋಲೋಕದ ಅಸಂತೋಷ ಜ್ಞಾನವಿಕಾಸಕ್ಕೆ ಕಾರಣ. ಜೀವಂತ ಮನುಷ್ಯನು ತನಗೆ ಮನವರಿಕೆಯಾಗದ, ತನ್ನ ಅನುಭವಕ್ಕೆ ಸರಿಹೋಗದ ಸಂಗತಿಗಳನ್ನು ಎಂದೂ ಒಪ್ಪಿಕೊಳ್ಳಲಾರನು. ಇವನೇ ಸತ್ಯಸಂಧನು. 'ಇದು ಏನಿದ್ದೀತು'? 'ಇದು ಹೀಗೆಯೇ ಸರಿಯೆ'? ಎಂಬ ಸಂದೇಹವು-ಅಸಂತೋಷವು ಚುಚ್ಚಿಚುಚ್ಚಿ ಯಾರ ಬಗೆಗಣ್ಣು ಅರಳಿಲ್ಲವೊ ಮೂರನೆಯ ಕಣ್ಣು ತೆರೆದಿಲ್ಲವೊ ಅವರಿಗೆ ಸತ್ಯದ ಅರಿವೇ ಆಗಲಾರದು. (ತೃತೀಯ ನೇತ್ರವು ಅಗ್ನಿ-ನೇತ್ರವಂತೆ!). ಜಿಜ್ಞಾಸೆ-ಅಸಂತೋಷ-ಸಂದೇಹಗಳಿಂದ ಕಾಯ್ದ ಮನೋಭೂಮಿಯಲ್ಲಿ ಬಿದ್ದ ಜ್ಞಾನವೃಷ್ಟಿಯೆ ಫಲದಾಯಕವಾಗಬಲ್ಲುದು. ಆದುದರಿಂದ ಸತ್ಯಜ್ಞಾನದ ಅಪೇಕ್ಷೆಯಿದ್ದವನು ಯಾವಾಗಲೂ ಸರಿಯಾದ ತೆರನಾಗಿ ಸಂದೇಹಪಡಲು ಕಲಿಯಬೇಕು. ಸಂದೇಹವೇ ತಲೆದೋರದಿದ್ದರೆ ಅಂತಹ ವ್ಯಕ್ತಿಯೊಳಗಿನ ಚೈತನ್ಯವು ನಷ್ಟವಾಗುತ್ತಲಿದೆಯೆಂದು ನಿಶ್ಚಿತವಾಗಿ ತಿಳಿಯಬೇಕು.

ತನಗೆ ಸರಿಯೆಂದು ತೋರದ ಯೋಗ್ಯವೆಂದು ಒಪ್ಪಿಗೆಯಾಗದ ಸಂಗತಿಗಳಿಗೆ ತಲೆವಾಗುತ್ತ ಹೋಗುವುದರಿಂದ ಅಂತರ್ಗತ ಜೀವಶಕ್ತಿಯು ಕ್ಷೀಣವಾಗುತ್ತ ಹೋಗುವುದು. ಆದುದರಿಂದ ಯಾವದೇ ಬಗೆಯ ಯಾಂತ್ರಿಕ ರೀತಿಯ ಜೀವನಕ್ಕೆ, ಸತ್ಯದ ಉಪಾಸಕರು ಎಂದಿನಿಂದಲೂ ಎದುರಿಸುತ್ತ ಬಂದಿದ್ದಾರೆ. ಸಂಪ್ರದಾಯ, ರೂಢಿ, ಪರಂಪರೆ, ಲೋಕವ್ಯವಹಾರ, ಮೊದಲಾದವುಗಳು ಧರ್ಮ, ಆಡಳಿತ ಮೊದಲಾದ ಹಿರಿ ಹೆಸರಿನಲ್ಲಿ ಜನಾಂಗದ ಜೀವವನ್ನು ಹಿಂಡಿ ಹಿಪ್ಪೆಮಾಡುತ್ತವೆಂದು ಮನಗಂಡು, ಆ ಹಳೆಯ ವಿಚಾರಗಳ ವಿರುದ್ಧ ಬಂಡುಹೂಡುವರು. ಇಂತಹ ಬಂಡುಗಾರರೇ ಲೋಕದಲ್ಲೆಲ್ಲ ಮಹಾತ್ಮರೆಂದು ಲೋಕಮಾನ್ಯರಾಗಿದ್ದಾರೆ. ಯಜ್ಞಯಾಗದ ಅಪಾರ್ಥವನ್ನು ವಿರೋಧಿಸಲು ಬುದ್ಧದೇವನು ಹೋರಾಟ ಮಾಡಿದನು. ರೋಗಗಳನ್ನು ವಾಸಿಮಾಡಲು ಕೆಲವೊಂದು ಔಷಧಿಗಳನ್ನು ಕೊಡುವುದು ಆವಶ್ಯಕವಾಗುವುದು. ಮುಂದೆ ಆ ಔಷಧಿಯ ಮೂಲಕ ಉಂಟಾದ ಕೆಲವು ಅನಪೇಕ್ಷಿತ ಮತ್ತು ಅನಿರೀಕ್ಷಿತ ಅನಿಷ್ಟ ಪರಿಣಾಮಗಳನ್ನು ಹೊಡೆದುಹಾಕಲು ಇನ್ನೊಂದು ಬೇರೆ ಔಷಧಿ ಕೊಡಬೇಕಾಗುವುದು; ಇದು ನಿತ್ಯ ಲೋಕಾನುಭವ. ಒಂದು ಕಾಲದ ಮುಂದೆ ಮತ್ತೆ ಬೇರೆ ಮಹಾಪುರುಷರು, ಜನ್ಮ ತಾಳಿ, ಹಿಂದಿನಕ್ಕಿಂತಲೂ ಕೆಲವೊಂದು ಬೇರೆ ವಿಚಾರ, ತತ್ವಗಳನ್ನು ಪ್ರಚಾರಗೊಳಿಸಲೇಬೇಕಾಗುವುದು ಈ ಕಾರಣಕ್ಕಾಗಿಯೆ. ಬೌದ್ಧಮತದ ಕೆಲವೊಂದು ಅನಿಷ್ಟ ಪರಿಣಾಮಗಳನ್ನು ಕಡಿಮೆ ಮಾಡಲು ಶಾಂಕರ ತತ್ವಜ್ಞಾನವು ಮುಂದೆ ಬಂದಂತಿದೆ. ಶಾಂಕರ ಮಾಯಾವಾದದ ಅನಪೇಕ್ಷಿತ ಪರಿಣಾಮಗಳನ್ನು ದೂರೀಕರಿಸಲು ಮಾಧ್ವಮತವು ತಲೆದೋರಿತೆಂದು ಹೇಳಬಹುದು. ಬ್ರಾಹ್ಮಣರ ಜಾತ್ಯಂಧತೆಯ ಪ್ರತಿಕ್ರಿಯೆಯೆಂದು ಲಿಂಗವಂತ ಮತ ಪ್ರಚಾರಕ್ಕೆ ಅನುಕೂಲ ವಾತಾವರಣವು ದೊರೆತಂತೆ ಕಂಡುಬರುವುದು. ಇಂತು ಬುದ್ಧ, ಶಂಕರ, ರಾಮಾನುಜ, ಅಲ್ಲಮ, ಮಧ್ವ ಮೊದಲಾದ ಮಹಾಪುರುಷರು ಕಾಲಕಾಲಕ್ಕೆ ಉದಯಿಸಿದರು. ತಮ್ಮ ಹಿಂದಿನ ವಿಚಾರ ಪದ್ಧತಿ, ಪರಂಪರೆಗಳಲ್ಲಿ ಪ್ರಾಮಾಣಿಕವಾಗಿ ಇವರಿಗೆ ಸಂದೇಹಗಳೇ ಉಂಟಾಗದೆ ಇದ್ದರೆ, ಇವರು ಮಹಾಪುರುಷರೆಂದು ವಿಖ್ಯಾತರಾಗುವ ಸಂಭವವಾದರೂ ಇದ್ದೀತೆ? ಹಿರಿಯರಿಂದ ಬಂದ ಹಳೆಯ ಪರಂಪರೆಗಳೆಲ್ಲ ಅಕ್ಷರಶಃ ಸರಿ, ಸಂಪೂರ್ಣ ಸತ್ಯ ಎಂದೇ ಎಣಿಸಿದ್ದರೆ ಇವರು ತಲೆ ಎತ್ತುವ ಆಸೆಯೆ ಇದ್ದಿಲ್ಲ. ಹಿಂದಿನದಕ್ಕೆಲ್ಲ ಸುಮ್ಮನೆ ತಲೆವಾಗದೆ ಅಥವಾ ಕಣ್ಣು ಮುಚ್ಚಿ ತಲೆದೂಗದೆ ತಮಗೆ ಸರಿಯೆನಿಸದೆ ಇದ್ದುದನ್ನು ಇದು ಹೀಗೆ ತಪ್ಪು, ಹೀಗಿರಕೂಡದು ಎಂದು ಹೇಳುವ ಎದೆಗಾರಿಕೆಯನ್ನು ತೋರಿಸಿದ್ದರಿಂದಲೇ ಇವರು ಲೋಕಕಲ್ಯಾಣ ಮಾಡಿದ ಸಿದ್ಧಪುರುಷರೂ ಆಚಾರ್ಯರೂ ಎನಿಸಿದರು. ಇವರು ಗತಾನುಗತಿಕರಾಗದೆ ಸ್ವತಂತ್ರ ಹೊಸ ವಿಚಾರಿಗಳಾದುದು ಲೋಕಹಿತಕ್ಕೇ ಕಾರಣವಾಯಿತು.

ಮಹಾವೀರ-ಮಧ್ವ-ಬಸವಾದಿಗಳ ಸ್ವತಂತ್ರ ವಿಚಾರದ ಪರಂಪರೆಯು ಅಖಂಡವಾಗಿ, ಅವ್ಯಾಹತವಾಗಿ ಹಾಗೆಯೆ ಮುಂದೆ ಸಾಗುತ್ತ ಬಂದಿದ್ದರೆ, ನಮ್ಮ ನಾಡಿಗೆ ಇಂದಿನಂತಹ ದುಃಸ್ಥಿತಿಯು ಬರುತ್ತಲೆ ಇದ್ದಿಲ್ಲ. ತಮ್ಮ ಮನಸ್ಸಿಗೆ ಸರಿ ತೋರದ, ತಮ್ಮ ಕಾಲದ ಪರಿಸ್ಥಿತಿಗೆ ಒಗ್ಗದ ಸಂಗತಿಗಳನ್ನು ಅಲ್ಲಗಳೆದು ಮಾರ್ಪಡಿಸಿಕೊಳ್ಳುವ ಸ್ವಾತಂತ್ರ್ಯವು ಪ್ರತಿಯೊಂದು ತಲೆಮಾರಿನವರಿಗೂ ಇರಲೇ ಬೇಕು. ಈ ಬಗೆಯಾಗಿ ಮಾರ್ಪಡಿಸಿಕೊಂಬ ಯೋಗ್ಯತೆಯು ಬರಬೇಕಾಗಿದ್ದರೆ ಯೋಗ್ಯ ಸಂದೇಹಪಟ್ಟುಕೊಂಬ ತಮ್ಮ ಹಕ್ಕನ್ನು ಕಳೆದುಕೊಂಡವರು ಸ್ವತಂತ್ರ ವಿಚಾರದ ಮನುಷ್ಯರಾಗಿ ಬೆಳೆಯುವುದೇ ಸಾಧ್ಯವಿಲ್ಲ.

ಯೋಗ್ಯ ಸಂದೇಹಪಟ್ಟುಕೊಳ್ಳದೆ ನಂಬುವವರು ಪುಕ್ಕರು. ಏಕೆಂದರೆ ತಮ್ಮ ಸಂದೇಹಗಳು ಬೇರೆದಾರಿಗೆ ಒಯ್ಯಬಹುದೆಂದು ಅವರಿಗೆ ಹೆದರಿಕೆ! ಸಂದೇಹಪಟ್ಟುಕೊಂಡು, 'ಮನವರಿಕೆಯಾದರೆ ನಂಬುತ್ತೇನೆ' ಎನ್ನುವುದಕ್ಕೆ ಎದೆಗಾರಿಕೆಬೇಕು. ಎದೆಗಾರರಿಗಲ್ಲದೆ ಉಳಿದವರಿಗೆ ಸತ್ಯದ ಜ್ಞಾನವಾಗದು. 'ಧೀರಾ' (ತಮ್) ಅನುಪಶ್ಯಂತಿ' ಎಂದು ಶ್ವೇತಾಶ್ವತರ ಉಪನಿಷತ್ತು ಹೇಳುವುದು ಸರಿ. ಆದುದರಿಂದ ಮಹಾವೀರ ಮಧ್ವ ಬಸವಾದಿಗಳಂತೆ ಕಾಲಕಾಲಕ್ಕೆ ಹೊಸ ವಿಚಾರಗಳು ಹುಟ್ಟಲಿಲ್ಲ. ಹೊಸಯುಗದ ನೂತನ ವಿಚಾರಗಳನ್ನು ಕಾಲಕಾಲಕ್ಕೆ ಉಚ್ಚರಿಸಲಿಲ್ಲ. ಆಚರಿಸಲಿಲ್ಲ. ಬರಿ ಹಿಂದಿನವರನ್ನು ಅನುಸರಿಸುವುದರಲ್ಲಿಯೆ ನಮ್ಮವರು ಹೆಮ್ಮೆಪಟ್ಟುಕೊಂಡುದನ್ನು ನೋಡಿದರೆ, ನಮ್ಮ ಸಮಾಜದಲ್ಲಿ ದಿನದಿನಕ್ಕೆ ಹೇಡಿತನವು ಬೆಳೆದುಕೊಂಡು ಬಂದುದೇ ಸಿದ್ಧವಾಗುತ್ತಿದೆ. ನಮ್ಮ ಸಮಾಜದ ಈ ನಡೆಯಲ್ಲವೂ ಜನಮರುಳೋ ಜಾತ್ರೆಮರುಳೊ........ ಎಂಬಂತಿರುವ ಗತಾನುಗತಿಕ ರೂಢಿಮೂಢತೆಯ ದಾರಿ. ಅದರಿಂದಲೆ ಇಂದಿನ ನಮ್ಮ ಈ ಅವಸ್ಥೆ.

ಸತ್ಯವು ಲೋಕದ ಗುರಿಯಾಗಿರಬೇಕು. ಏಕೆಂದರೆ, ಅದುವೆ ವಿಶ್ವವನ್ನೆಲ್ಲ ತನ್ನ ಸೂಕ್ಷ್ಮವಾದ ಆಕರ್ಷಣದಿಂದ ಬಿಗಿದಿಟ್ಟಿದೆ. ಮೊದಲು ಸತ್ಯದಿಂದ ದೂರ ಹೋಗಿ ಪೆಟ್ಟು ತಿಂದು ತಲೆಗೆ ತಾಗಿ ಬಳಿಕ ಸತ್ಯದ ಅಡಿಯಲ್ಲಿ ನಿರ್ಗತಿಕನಾಗಿ ಬಂದು ಬೀಳುವುದಕ್ಕಿಂತ ತಾನಾಗಿಯೆ ಮುಂಗಂಡು ಸ್ವಾಗತಿಸುವುದಕ್ಕಾಗಿ ಆನಂದದಿಂದ ಅದನ್ನು ಎದುರುಗೊಳ್ಳಲು ಹೊರಡುವದೇ ಬುದ್ಧಿವಂತಿಕೆಯಲ್ಲವೆ? ಇಂತಹರಿಗೆ ಮನೀಷಿಗಳೆಂದು ಹೆಸರು. ನಿಜವಾದ ಮನುಷ್ಯರು ಇವರು. ಉಳಿದವರು ಮನುಷ್ಯಾಕಾರದ ಪ್ರಾಣಿಗಳು. ಯಾರಲ್ಲಿ ಮನಸ್ಸು (ತಿಳಿವು) ಇನ್ನೂ ಮೂಡಿಯೇ ಇಲ್ಲವೋ, ಯಾರು ಮನಸ್ಸಿನ ವ್ಯಾಪಾರಗಳಿಗೆ ಮಹತ್ವವನ್ನೇ ಕೊಡುವುದಿಲ್ಲವೊ ಅವರಿಗೆ ಮನುಷ್ಯರೆಂಬ ಹೆಸರು ಸಲ್ಲದು.ಮನುಷ್ಯರಾದವರಿಗೆ ಬರಿಯ ಹೊಟ್ಟೆ ತುಂಬಿದ ಮಾತ್ರಕ್ಕೆ ಸಮಾಧಾನವಿಲ್ಲ. ಮನಸ್ಸಿನ ಬಗೆ ಬಗೆಯ ಹಸಿವನ್ನು ಹಿಂಗಿಸದೆ ಮನುಷ್ಯನಾದವನಿಗೆ ಆನಂದವಿಲ್ಲ. ಅಥವಾ ಮನೋಲೋಕದಲ್ಲಿ ವಿಹರಿಸಿ ಹಿಗ್ಗಬಲ್ಲವನೇ ಮನುಷ್ಯನು.

ಸತ್ಯವು ಏಕಮುಖವಾಗಿಲ್ಲ. ಬಹುಮುಖ. ಅನಂತಮುಖ. 'ಸಹಸ್ರಶೀರ್ಷಃ ಪುರುಷಃ'. ಇದನ್ನು ಸಂಪೂರ್ಣ ಕಾಣಲು ಎರಡು ಕಣ್ಣು ಸಾಲದು. ಆದುದರಿಂದಲೇ ಯಾರಿಗೇ ಆಗಲಿ, ಸತ್ಯವು ಸಂಪೂರ್ಣವಾಗಿ ತಿಳಿಯಿತು, ಎಂಬ ಹೆಮ್ಮೆ ವ್ಯರ್ಥ; ಸತ್ಯವು ಸಂಪೂರ್ಣ ತಿಳಿಯಿತು ಎಂಬ ಸಮಾಧಾನವೂ ಹುಸಿ. ಆಜನ್ಮವೂ, ಸತ್ಯವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಅರಿಯುವುದಕ್ಕಾಗಿ, ಅಳವಡಿಸಿಕೊಳ್ಳುವುದಕ್ಕಾಗಿ ಹವಣಿಸುತ್ತಿರಬೇಕು. ಎಂತಹ ಮಹಾಪುರುಷನೇ ಇರಲಿ, ಅವನ ಅನುಯಾಯಿಗಳಾದ ಹೊಗಳು ಭಟ್ಟರು ಆತನನ್ನು ಎಂತಹ ಅವತಾರಿಯೆಂದೇ ಹೇಳಲಿ, ಈ ಭೂಲೋಕದಲ್ಲಿ ಹುಟ್ಟಿ ಬಂದವರಲ್ಲಿ ಯಾರೂ ಸರ್ವಜ್ಞರಾಗಲಿ, ಪೂರ್ಣಪ್ರಜ್ಞರಾಗಲಿ ಇರುವುದು ಅಸಂಭವ. ಏಕೆಂದರೆ ಸತ್ಯವು ಅನಂತವಾಗಿದೆ. ಅನಂತವು ತನಗೆ ಕಂಡಿತು, ಎಂಬುದು ಪರಸ್ಪರ ವಿರುದ್ಧ ಮಾತು. ಕಂಡರೆ ಅದು ಅನಂತವಾಗಿರಲಾರದು; ಅನಂತವಾಗಿದ್ದರೆ ಅದು ಪೂರ್ಣ ಕಂಡಿರಲಾರದು. ಆದುದರಿಂದ ನಿಜವಾದ ಸತ್ಯಭಕ್ತನು, ಯಾವಾಗಲೂ ಯುಕ್ತ-ಸೂಕ್ತ ಸಂದೇಹಿಯಾಗಿರುತ್ತಾನೆ; ಸತ್ಯವನ್ನು ಇನ್ನೂ ತಿಳಿಯಬೇಕೆಂಬ ಹಂಬಲ (ಅಸಂತೋಷ)ವು ಆತನನ್ನು ಮುಂದು ಮುಂದಕ್ಕೆ ಒಯ್ಯುತ್ತಿರುತ್ತದೆ. ಬುದ್ಧ-ಶಂಕರರು ಕಂಡ ಸತ್ಯದ ಪರಿ ಒಂದು. ಮಹಾವೀರ-ಮಧ್ವರು ಕಂಡ ಸತ್ಯದ ಅಂದ ಇನ್ನೂ ಒಂದು. ರಾಮಾನುಜ ಅಲ್ಲಮರು ಕಂಡ

ಸತ್ಯದ ಅಂದ ಮತ್ತೂ ಒಂದು. ಹೀಗೆ ತಮ್ಮ ಕಣ್ಣುಗಳಿಂದಲೇ ನೋಡುವ ಪ್ರತಿಯೊಬ್ಬರಿಗೂ, ಸತ್ಯದ ಒಂದೊಂದು ಬಗೆಯ ನವ್ಯೋನವ ಅನುಭವವು ಬಂದಿದೆ, ಬರುತ್ತಿದೆ. ಇತಿಹಾಸವೂ ಇದಕ್ಕೆ ಸಾಕ್ಷಿಯಿದೆ.

ಹೀಗಿರುವಲ್ಲಿ, ರೂಢಿ-ದಾಸರಾಗಿ, ಸಂಪ್ರದಾಯ-ಶರಣರಾಗಿ, ಯಾವನಾದರೊಬ್ಬ ಪುರಾತನ ವೃದ್ಧನ ಬಾಡಿಗೆಯ ಕಣ್ಣಿನಿಂದ ನೋಡುವ ಚಟವನ್ನು ಹಚ್ಚಿಕೊಂಡರೆ ಅವರು ತಮ್ಮ ಕಣ್ಣುಗಳನ್ನು ವ್ಯರ್ಥಗೊಳಿಸಿದಂತೆ ಆಗಲಿಲ್ಲವೆ? ತಮ್ಮ ಕಣ್ಣು, ತಮ್ಮ ಬುದ್ಧಿ, ತಮ್ಮ ವಿಚಾರಗಳನ್ನು ಜಂಗು ಹಿಡಿಸಿದ ಅಪರಾಧಕ್ಕೆ ಒಳಗಾದಂತೆ ಅಲ್ಲವೆ? ನಮ್ಮ ಆಹಾರವನ್ನು ನಮ್ಮ ಹಲ್ಲಿನಿಂದ ನುರಿಸಿ, ನಮ್ಮ ಜೊಲ್ಲಿನಿಂದ ನೆನೆಸಿ, ನಮ್ಮ ಒಡಲ ರಸದಿಂದ ಅರಗಿಸಿಕೊಂಡರೆ ತಾನೇ ಅದು ನಮಗೆ ದಕ್ಕುವುದು? ಮೈಗೂಡುವುದು? ನಾವು ಅರಗಿಸಿಕೊಂಡುದಷ್ಟೇ ನಮ್ಮ ಬೆಳಿಗೆಗೆ ಕಾರಣವಾಗುವುದು. ಜೀವಂತ ಮನುಷ್ಯನು ತನ್ನ ಹಸಿವನ್ನು ತಾನೇ ಹಿಂಗಿಸಿಕೊಳ್ಳುವನು. ಅಥವಾ ಮುಖ್ಯವಾಗಿ ತನ್ನ ಪ್ರಯತ್ನದಿಂದ ಸ್ವತಂತ್ರವಾಗಿ ತನ್ನ ಪೋಷಣೆ ನಡಸಿದವನೇ ಜೀವಂತ ಮನುಷ್ಯನು. ಸತ್ಯದ ಹಸಿವನ್ನು ಹಿಂಗಿಸಿಕೊಂಬ ವಿಚಾರವೂ ಹೀಗೆಯೇ. 'ಉದ್ಧರೇತ್ ಆತ್ಮನಾತ್ಮಾನಮ್'. ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳಬೇಕೆಂದು ಶ್ರೀಕೃಷ್ಣನ ಅನುಭವ ವಚನ. ಸ್ವಾವಲಂಬಿಯೆ ಸ್ವತಂತ್ರನು. ಪರಾವಲಂಬಿಯು-ಆಳಾದವನು ಸತ್ಯವನ್ನು ಅರಿಯಲು ಎಂದೂ ಸಾಧ್ಯವಿಲ್ಲ. ಕಾಲಿಲ್ಲದ ಕಣ್ಣಿಲ್ಲದ ಪ್ರಾಣಿಯು ನಡೆಯುವುದು, ನೋಡುವುದು-ನೋಡಿ ನಡೆಯುವುದು ಎಂದಂತೆ! ಆದುದರಿಂದಲೆ, ಸತ್ಯದ ಬಗ್ಗೆ ಹಸಿದಿದ್ದವರು, ಯಾವ ಕಾರಣದಿಂದಲೂ ಪರಾವಲಂಬಿಗಳಾಗಲು ಸಿದ್ಧರಿರುವುದಿಲ್ಲ. ಸ್ವತಂತ್ರತೆ ಅವರ ಬಿರುದು. ಸ್ವಾತಂತ್ರ್ಯ ಅವರ ಉಸಿರು, ಆದುದರಿಂದ ಸತ್ಯಕ್ಕಾಗಿ ಹಸಿದವರಿಗೇ ಬಂಧನದಿಂದ ಬಿಡುಗಡೆ-ಎಂದರೆ ಬಂಧಮೋಚನೆ-ಮೋಕ್ಷ.

ಇಂತು ಈ ಮನಸ್ಸಿನ ಹಸಿವು (ಅತೃಪ್ತಿ) ಜ್ಞಾನಕ್ಕೆ ಕಾರಣ. ಜ್ಞಾನದಿಂದ ಸತ್ಯದ ಅರಿವು ಉಂಟಾಗುವುದು. ಸತ್ಯವು ಸ್ವಾತಂತ್ರ್ಯಕ್ಕೆ ಕಾರಣವಾಗುವುದು. ಅದರಿಂದ ಜ್ಞಾನವೇ ಸತ್ಯ, ಸತ್ಯವೇ ಸ್ವಾತಂತ್ರ್ಯ. ಜ್ಞಾನದೇವ ಮೋಕ್ಷ ತಿಳಿದವನೇ ಬಿಡುಗಡೆ ಹೊಂದುವನು. ತಿಳಿಗೇಡಿ ತೊಡಕಿನಲ್ಲಿ ಬೀಳುವನು. ಸತ್ಯದ ಹಸಿವು, ಸತ್ಯದ ಪ್ರೀತಿಯೇ ಸ್ವಾತಂತ್ರ್ಯದಾಯಕ. ಅದೇಕೆ ಪ್ರೀತಿಯೇ ಜ್ಞಾನ; ಪ್ರೀತಿಯೆ ಸ್ವಾತಂತ್ರ್ಯ. ಸತ್ಯ, ಜ್ಞಾನ, ಸ್ವಾತಂತ್ರ್ಯವೆಂಬುದರ ಮಧುರ ಮಿಲನವೇ ಪ್ರೇಮ.

ಪ್ರೀತಿ - ಕ್ರಿಯಾಶಕ್ತಿ

ಪ್ರೀತಿ ಬಹಳ ಅಮೌಲಿಕ ವಸ್ತು. ಇದರ ಸವಿಯನ್ನು ಅಲ್ಪಸ್ವಲ್ಪಾದರೂ ಅರಿಯದವರೇ ಇಲ್ಲ. ಸತ್ಯ, ಜ್ಞಾನ, ಸ್ವಾತಂತ್ರ್ಯ ಇತ್ಯಾದಿ ಮಾತುಗಳು, ಸಾಮಾನ್ಯ ಜನಗಳಿಗೆ ಒಮ್ಮೆಲೆ ಗೊತ್ತಾಗಲಿಕ್ಕಿಲ್ಲ. ಆದರೆ 'ಪ್ರೀತಿ' ಎಂದರೆ ಬೇಗನೆ ತಿಳಿಯುವುದು. ಪ್ರೀತಿಸುವದರಲ್ಲಿ ಮತ್ತು ಪ್ರೀತಿಸಿಕೊಂಬುವುದರಲ್ಲಿಯೇ ಈ ಲೋಕವು ಹಿಗ್ಗಿದೆ. ಒಂದು ಜೀವವು ಎರಡಾಗುವುದಕ್ಕೆ-ಹಿಗ್ಗುವುದಕ್ಕೆ ಪ್ರೀತಿಯೇ ಕಾರಣವು. ಆದುದರಿಂದ ಪ್ರೀತಿಯೆಂದರೇ ಹಿಗ್ಗು; ಹಿಗ್ಗು ಎಂದರೇ ಆನಂದ, ಆನಂದವೇ ಐಶ್ವರ್ಯ.

ಹಸಿದವರೇ ಪ್ರೀತಿಸುತ್ತಾರೆ. ಅಥವಾ ಪ್ರೀತಿಸುವವರು ಹಸಿದಿರುತ್ತಾರೆ. ಪ್ರೀತಿಯು ಬತ್ತಿತು-ನಷ್ಟವಾಯ್ತು, ಎಂದೊಡನೆ ಜೀವವು ನಿರಾಶೆಯ ಕಗ್ಗತ್ತಲೆಯಲ್ಲಿ ಮುಕ್ಕರಿಸಿ ಬೀಳುವುದು. ಪ್ರೀತಿ-ಭಗ್ನವಾದೊಡನೆ ಜೀವದ ಬೇಸರಿಕೆ ಬರುವುದು. ಸಾವಿನ ಬಯಕೆಯಾಗುವುದು. 'ಸಾಕು' (ಸಾವು) ಬೇಕಾಗುವುದು; 'ಬೇಕು'(ಬದುಕು) ಸಾಕಾಗುವುದು.

ಪ್ರೀತಿಯೆ ಮಾನವನೊಳಗಿನ ಕ್ರಿಯಾಶಕ್ತಿ. ಪ್ರೀತಿಸಲು ಬಾರದವನು-ಪ್ರೀತಿ ಇಲ್ಲದವನು ನಿರ್ವಿಣ್ಣನಂತೆ ಬಿದ್ದುಕೊಂಡಿರುವನು. ಪ್ರೀತಿಯು ತನ್ನ ಹಸಿವನ್ನು ಹಿಂಗಿಸಲು ತನಗೆ ಇಷ್ಟವಾದ ವಸ್ತುವನ್ನು ಪಡೆಯಲು ಹೆಣಗಾಡಲು ಹಚ್ಚುತ್ತದೆ. ಹೋರಾಡಲು ಒತ್ತಾಯಪಡಿಸುತ್ತದೆ. ಮಕ್ಕಳುಮರಿಗಳ ಮೇಲಣ ಪ್ರೀತಿಯಿಂದ ಮನುಷ್ಯನು ಬೇಕಾದಷ್ಟು ಸಂಕಷ್ಟಗಳನ್ನೂ ಆನಂದದಿಂದ ಎದುರಿಸಲು ಸಿದ್ಧನಾಗುತ್ತಾನೆ. ಮಗುವಿಗಾಗಿ ತಾಯಿ ಬೇಕಾದ ತೊಳಲಾಟಗಳನ್ನು ಸಹಿಸುತ್ತಾಳೆ. ಏಕೆ? ನಾಡಿಗಾಗಿ ಮನೆಮಾರುಗಳನ್ನೂ ತೊರೆದು, ತಮ್ಮ ಜೀವಗಳನ್ನು ಗಂಡಾಂತರಗಳಲ್ಲಿ ಹಾಕಿಕೊಳ್ಳುತ್ತಾರೆ; ನಾಡಿಗಾಗಿ ತಮ್ಮ ಜೀವನವನ್ನೇ ಧಾರೆಯೆರೆಯುತ್ತಾರೆ. ಏಕೆ? ಸತ್ಯದ ಹಸಿವಿನಿಂದ ಹಂಬಲಿಸಿ ಅದನ್ನು ಅರಿಯಲು, ಅರಿತು ಅರಗಿಸಿಕೊಳ್ಳಲು ಉಗ್ರತಪಸ್ವಿಗಳಾಗಿ-ಸುಟ್ಟಸುಣ್ಣದಂತೆ ಬೆದೆ ಬೆದೆ ಬೇಯುತ್ತಿರುತ್ತಾರೆ; ಅನ್ನ ನೀರಿನ ಪರಿವೆಯಿಲ್ಲದೆ ಜ್ಞಾನಸಾಧನೆ ನಡೆಸಿರುತ್ತಾರೆ. ಏಕೆ? ಪ್ರೀತಿ, ಪ್ರೀತಿ, ಪ್ರೀತಿ. ಈ ಬಗೆಯಾದ ಕಾರ್ಯಪ್ರಚೋದಕ ಶಕ್ತಿಯು ಪ್ರೀತಿಯಲ್ಲಿ ಮಾತ್ರ ಉಂಟು.

ಪ್ರೀತಿಯು ಹಲವು ಸದ್ಗುಣಗಳ ತಾಯಿ. ಪ್ರೀತಿಯಲ್ಲಿ ಲೆಕ್ಕವಿಲ್ಲದಷ್ಟು ಸುಗುಣಗಳು ಹುದುಗಿಕೊಂಡಿವೆ. ಪ್ರೀತಿಯು ಅಂತರಂಗದಲ್ಲಿ ಉದಯವಾಗಿ ಅದು ಬೆಳಗಹತ್ತಿದಂತೆ ಆ ವ್ಯಕ್ತಿಯಲ್ಲಿ ಅನೇಕ ಸುವಿಚಾರಗಳು ತಾವಾಗಿಯೆ ಕಾಣಿಸಿಕೊಳ್ಳಲಾರಂಭಿಸುತ್ತವೆ. ಪ್ರೀತಿಗೂ ಸುಳ್ಳಿಗೂ ಹಗೆ, ಸುಳ್ಳಿನ ಸಂದೇಹವುಂಟಾದರೂ ಪ್ರೀತಿಯು ಬಾಡಿ ಹಾಳಾಗುವುದು. ಪ್ರೀತಿಗೂ ಮೈಗಳ್ಳತನಕ್ಕೂ ಎಣ್ಣೆ-ಸೀಗೆ. ಪ್ರೀತಿಯು ತನ್ನ ಇಷ್ಟವನ್ನು ಒಲಿಸಿಕೊಳ್ಳಲು ಹಗಲಿರುಳೆನ್ನದೆ ಚಳಿಮಳೆಗಳನ್ನು ಲೆಕ್ಕಿಸದೆ ಎಡೆಬಿಡದೆ ದುಡಿಯುತ್ತಿರುತ್ತದೆ. ದುರ್ಲಕ್ಷವು ಪ್ರೀತಿಗೆ ಮಾರಕ.

ತ್ಯಾಗವು ಪ್ರೀತಿಗೆ ಪೋಷಕ. ಪ್ರೇಮಿಗೆ ತನ್ನ ಪ್ರೀತಿಯ ವಸ್ತುವಿಗಾಗಿ ದುಡಿದಾಗಲೇ ಸಮಾಧಾನ. ತನ್ನಲ್ಲಿರುವುದನ್ನು ಕೊಟ್ಟಾಗಲೆ ಸಂತೋಷ. ಅದೇಕೆ ಪ್ರೇಮದ ಕಾವು ಏರಿದಂತೆ ಎಷ್ಟು ಕೊಟ್ಟರೂ ಅತೃಪ್ತಿ. ಅರ್ಪಿಸಲು ತನ್ನಲ್ಲಿ ಇನ್ನೂ ಸಾಕಷ್ಟು ಇಲ್ಲವಲ್ಲ, ಎಂಬ ಸಮಾಧಾನ! ಅಸಂತೋಷ! ಸಂಪೂರ್ಣ ಆತ್ಮಸಮರ್ಪಣ ಮಾಡಿ ಕೊಂಡಾಗಲೇ ಸುಖ, ಪ್ರೇಮಿಗೆ. ತ್ಯಾಗವೇ ಭೋಗ. ಪ್ರೇಮಿಯು ಎಂದೂ ಸ್ವಾರ್ಥಿಯಾಗಿರಲಾರನು.

ವೀರನೇ ತ್ಯಾಗಿಯಾಗಬಲ್ಲ ಅಥವಾ ತ್ಯಾಗಿಯೇ ವೀರ. ವೀರನೇ ಪರಾರ್ಥಿ. ಜಿಪುಣನು ಸ್ವಾರ್ಥಿ, ಸ್ವಾರ್ಥಿಯು ಹೇಡಿ. ಕೊಟ್ಟರೆ ಕಳೆಯುವುದಲ್ಲ, ಎಂಬವ ಪುಕ್ಕ; ಅಂಜುಗುಳಿ. ಸಾವ ಮುಂದೆ ಎಲ್ಲವನ್ನು ತಾನು ಬೆನ್ನಿಗೆ ಕಟ್ಟಿಕೊಂಡು ಹೋಗಲಿರುವೆನೆಂಬ ಭ್ರಾಂತಿಯೊ ಏನೊ ಆತನಿಗೆ! ಪ್ರೇಮವಿಲ್ಲದೆ ಭಕ್ತಿ ಸಾಧ್ಯವಿಲ್ಲ. ದೇಶಭಕ್ತನಾಗಲು ಆತನಿಗೆ ದೇಶವು ಪ್ರಾಣಕ್ಕಿಂತಲೂ ಪ್ರಿಯವಾಗಿರಬೇಕು. ದೇವಭಕ್ತನಾಗಲು ಆತನು 'ತೊರೆದು ಜೀವಿಸಬಹುದೆ' ದೇವ ನಿನ್ನಡಿಗಳನು, ಎಂಬ ಹಂಬಲಿಗನಾಗಿರಬೇಕು. ರಸದೇವಿ-ಸರಸ್ವತಿಯ ಭಕ್ತನಾಗಲು 'ವಿದ್ಯಯಾ ಅಮೃತಂ ಅಶ್ನುತೇ' ಎಂಬ ನಿಷ್ಠೆಯುಂಟಾಗಿರಬೇಕು. 'ರಸೋ ವೈ ಸಃ' ತನ್ನ ಪ್ರೀತಿಯ ವಸ್ತುವು ಲೋಕದ ಸಾರ, ಸರ್ವಸ್ವ ಎಂಬ ಮನವರಿಕೆಯಾಗಿ, ಅದನ್ನು ಸಂಪಾದಿಸಿ ಅದನ್ನು ಪಡೆದ ಆನಂದರಸದಲ್ಲಿ ಓಲಾಡಬೇಕೆಂಬ ಆತುರವು ಭಕ್ತನನ್ನು ಯಾವಾಗಲೂ ಪೀಡಿಸುತ್ತಿರುತ್ತದೆ.

ಆದುದರಿಂದ, ಭಕ್ತನು ಯಾವಾಗಲೂ ಆತುರಿ; ಅಸಮಾಧಾನಿ ಅಸಂತುಷ್ಟ. ಇಷ್ಟವಸ್ತುವಿನ ಒಲವಿಗಾಗಿ, ಪಡೆಪಿಗಾಗಿ ನೊಂದು ಬೇವವ, ಬೆಂದುನೋವವ. ಆದುದರಿಂದಲೇ ಭಕ್ತರೆಲ್ಲರೂ ನೋಹಿಗಳು; ಎಂದರೆ ತಪಸ್ವಿಗಳು ನೋವವರು; ಕಾವವರು. ನೋಹು (ನೋಂಪು) ಎಂದರೆ ವ್ರತ ಎಂಬುದು ಕಂನುಡಿಯಲ್ಲಿ ತುಂಬ ಉಚಿತಾರ್ಥದ ಶಬ್ದವಾಗಿದೆ. ಬೆದೆ ಬೆದೆ ಬೆಂದ ಪ್ರೇಮಿಗಳೇ ಕಾದಲ-ಕಾದಲೆಯರು. ಇದೂ ಎಷ್ಟು ಸ್ವಾರಸ್ಯದ ಮಾತು! ಪ್ರೀತಿ ಎಂಬುದು ಯೋಗ. ಕಾಮವು (ಎಂದರೆ ಆಸೆ-ಬಯಕೆ) ಪ್ರೇಮದ ಪ್ರಾಥಮಿಕ ರೂಪ. ಮೋಹವೆಂಬುದು ಪ್ರೀತಿಯ ವಿಕೃತಿ. ಕುರುಡು ಪ್ರೀತಿಯೆ ಮೋಹ. ಮೋಹವೆಂದರೆ ಭ್ರಾಂತಿ, ಭ್ರಮ-ಸಂಭ್ರಮ. ಮೋಹದಲ್ಲಿ ತಿಳುವಳಿಕೆಯಿರುವುದಿಲ್ಲ; ಮೂಢತೆಯ ಅಂಶವು ಅದರಲ್ಲಿ ಅಡಕವಾಗಿರುವುದರಿಂದಲೇ ಅದು ಮೋಹ. ಜ್ಞಾನಯುಕ್ತವಾದ ಕಾಮವು ಪ್ರೇಮದ ಉಜ್ವಲ ರೂಪವನ್ನು ತಾಳುವುದು. ಕಾಮವನ್ನು ಪ್ರೇಮವನ್ನಾಗಿ ಮಾರ್ಪಡಿಸುವ ಯುಕ್ತಿಯೇ ಯೋಗ. ಯೋಗಃ ಕರ್ಮಸು ಕೌಶಲಂ. ಈ ಕೆಲಸದ ಕೌಶಲ್ಯವೇ ಯೋಗ.

ಕಾಮವು, ಮೈಗಳ್ಳ ಮಾನವನನ್ನು ಮೈಮುರಿದು ದುಡಿಯಲು ಒತ್ತಾಯಪಡಿಸುವುದು. ಆದರೆ, ಆತನು ಕಾಮಿಸುವುದು ಎಂದರೆ ಬೇಡುವುದು-ಕಾದುವುದು ತಿಳುವಳಿಕೆಯಿಂದ ಒಡಗೂಡಿದ್ದರೆ ಸರಿ. ಇಲ್ಲವಾದರೆ ಬರಿಯ ಕಾಮ ಮೈಸುಡಿಸಿಕೊಂಬುದು. ತಿಳಿವಿಲ್ಲದ್ದ ಬೇಡಿಕೆ ವಿಟಜನರ ಬೇಟವಾಗುವುದು. ನಿಷ್ಕ್ರಿಯತೆಯ ಹುಚ್ಚಿನ ಮಾನವನಲ್ಲಿ ಕ್ರಿಯಾ-ಪ್ರವೃತ್ತಿಯುಂಟಾದುದು, ಚಲನವಲನಕ್ಕೆ ಆರಂಭವಾದುದು 'ಬೇಕು' ಎಂಬ ಕಾವು ಒಳಗೆ ತಲೆದೋರಿದಾಗಲೇ. ಒಮ್ಮೆ ಕಾಮದಿಂದ ಚಲಿತನಾದ ಮಾನವನು ಮೋಹಿಯಾದರೆ ಎಂದರೆ ಮೂಢನಾದರೆ ತನ್ನ ಹಾನಿಗೆ ಕಾರಣನಾಗುವನು. ಪ್ರೇಮಿ ಎಂದರೆ ಜ್ಞಾನಿಯು ಭಕ್ತನಾದರೆ ತನ್ನ ಏಳ್ಗೆಯನ್ನು ಮಾಡಿಕೊಳ್ಳುವನು.

ಪ್ರೇಮದ ಅಸಂಸ್ಕೃತಿ ರೂಪವೇ ಸ್ವಾರ್ಥ. ಕೇವಲ ತನಗೆ ಒಬ್ಬನಿಗೇ ಬೇಕು ಎಂದು ಬೇಗುದಿಗೊಂಬವನ ಪ್ರೇಮದ ಕಲ್ಪನೆಯು ತೀರ ಸಂಕುಚಿತವಾಗಿರುತ್ತದೆ; ಅಷ್ಟೆ. ಆದರೆ ಅದೂ ಪ್ರೇಮವೇ. ಅದು ಸ್ವ-ರತಿಯಿದ್ದಂತೆ; ಹಾನಿಕರ. ಸುಖಾನುಭವಕ್ಕೆ ಆನಂದಾನುಭೂತಿಗೆ ಒಂದೇ ಜೀವ ಸಾಲದು, ಎಂಬ ಅರಿವು ಇಲದ ಮಾನವರು ಸ್ವಾರ್ಥಿಗಳಾಗುವರು. ತಾವೊಬ್ಬರು ಸುಖಿಯಾದರೆ ಆಯ್ತು, ಎಂಬ ಜಿಪುಣರೂ ಕೇವಲ ವೈಯಕ್ತಿಕ ಮೋಕ್ಷದ ಬೆಂಬತ್ತಿದ ಭ್ರಾಂತ ವೇದಾಂತಿಗಳೂ ಇವರೆಲ್ಲ ಒಂದೇ ಬಗೆಯ ಪ್ರಾಣಿಗಳು. ತೀರ ಸಂಕುಚಿತ ದೃಷ್ಟಿಯವರು 'ನಾಽಲ್ಪೇ ಸುಖಂ ಅಸ್ತಿ, ಭೂಮಾ ವೈ ಸುಖಂ' ಎಂಬ ವೇದವಚನವನ್ನು ಮರೆತುಬಿಟ್ಟ ತಿಳಿಗೇಡಿಗಳು. 'ಸರ್ವೇಜನಾಃ ಸುಖಿನಃ ಭವಂತು' ಎಲ್ಲರೂ ಹಿಗ್ಗಲಿ, ಎಂಬ ಹಿರಿದಾದ ವಿಚಾರದ ಗಂಧವೂ ಇಲ್ಲದ ಸ್ವ-ರತಿಯಲ್ಲಿಯೇ ಸಂಭ್ರಾಂತರಾದ ಕಿರುಕುಳರು.

'ಏಕಃ ತಥಾ ಸರ್ವಭೂತಾಂತರಾತ್ಮಾ' ಎಲ್ಲ ಭೂತಮಾತ್ರಗಳ ಆತ್ಮವೂ ಒಂದು; ಎಂದು ಶ್ರುತಿವಚನ. ಸಮಾಜ ಮಾನಸಶಾಸ್ತ್ರ(Social Psychology) ದೃಷ್ಟಿಯಿಂದ ವಿಚಾರಿಸಿದರೂ ಇದೇ ಮಾತು ಸಿದ್ಧವಾಗುತ್ತಲಿದೆ. ವ್ಯಕ್ತಿಗಳಿಲ್ಲದೆ ಸಮಾಜವಾಗದು; ನಿಜ. ಅದರಂತೆ ಸಮಾಜವಿಲ್ಲದೆ ವ್ಯಕ್ತಿಗೂ ಅಸ್ತಿತ್ವವಿಲ್ಲ. ಈ ಕಾರಣದಿಂದಲೇ ಉಪನಿಷತ್ತುಗಳು ಆತ್ಮಾನುಭೂತಿಯ ಸ್ಥಿತಿಯನ್ನು ವರ್ಣಿಸುವಾಗ "ಸರ್ವಭೂತೇಷು(ಚ) ಆತ್ಮಾನಮ್; ಸರ್ವಭೂತಾನಿ(ಚ) ಆತ್ಮಾನಿ" ಎಲ್ಲರಲ್ಲಿ ತನ್ನನ್ನೂ, ತನ್ನಲ್ಲಿ ಎಲ್ಲರನ್ನೂ ಕಂಡು ಸಹ-ಅನುಭೂತಿಯ ಸಾಮರಸ್ಯದ ಆನಂದವನ್ನು ಗಳಿಗೆಗಳಿಗೆಗೂ ಪಡೆಯುವವನೇ ಯೋಗಸಿದ್ಧನು ಎಂದು ಹೇಳಿದೆ. ತನ್ನಂತೆ ಎಲ್ಲರನ್ನೂ, ಎಲ್ಲರಂತೆ ತನ್ನನ್ನೂ ಅರಿಯಲು ಅರಿತು ಆಚರಿಸಲು ಹಚ್ಚುವ ಔಷಧೀಯ ಪ್ರೇಮ-ರಸಾಯನವು ಒಂದೇ. ಹೀಗೆ ಸಮ್ಯಕ್ ಆತ್ಮ-ಬೃಹದಾತ್ಮನ ಅನುಸಂಧಾನದಲ್ಲಿ ಜೀವನವನ್ನು ಕೃತಾರ್ಥಗೊಳಿಸಲು ಪ್ರೇಮವೇ ಸಾಧನ.

ಪ್ರೇಮಿಯು ಯಾವಾಗಲೂ ಆಶಾವಾದಿ. ನಿರಾಶೆ, ನಿರುತ್ಸಾಹವೆಂಬುದನ್ನು ಅರಿಯನು. ಪ್ರೇಮಿಯು ಪ್ರಿಯವಸ್ತುವಿಗಾಗಿ ಸಾಯಲೂ ಸಿದ್ಧನಾಗಿರುವನು. ಆದರೆ, ಸಾವಿನ ಪ್ರೀತಿಯು (ಸಾವೇ ಗುರಿಯಾಗಿ) ಆತನಿಗೆ ಎಂದೂ ಇಲ್ಲ. ಬದುಕಲು ಸಾವ ವೀರನು ಇವನು. ಸಾಯುವುದಕ್ಕಾಗಿ ಬದುಕಿದ-ಸಾವು ಎಂದು ಬಂದೀತೆಂದು ಎದುರು ನೋಡುವ, ಜೀವನಕ್ಕೆ ಹೆದರಿದ ಹೇಡಿಯಲ್ಲ ಇವನು. ಆದುದರಿಂದ, ಪ್ರೀತಿಗೆ ಸಾವು ಇಲ್ಲ. ಅಥವಾ ಸಾವುದು ಪ್ರೀತಿಯಲ್ಲ. ಬದುಕೇ ಪ್ರೀತಿ. ಪ್ರೀತಿಯೇ ಬದುಕು. ಈ ಕಾರಣದಿಂದಲೆ ಪ್ರೀತಿಯ ಸ್ಪರ್ಶದಿಂದ ಕೊರಡು ಕೊನರುವುದೆಂದು ಕವಿಗಳು ವರ್ಣಿಸುವುದು ಅತಿಶಯೋಕ್ತಿಯಲ್ಲ. ವಸಂತಮಾಸದಲ್ಲಿ ಸೃಷ್ಟಿಯೆಲ್ಲವೂ ಚಿಗುರಿ ಚೆಲ್ಲುವರಿದು ಹಬ್ಬುವುದು.

ಆದರೆ, ಅವರ ಈ ಪ್ರೀತಿಯು ಅಥವಾ ಪ್ರೀತಿಯ ಅಮೃತವು, ತಾಳುವುದೂ ಬಾಳುವುದು-ಬೆಳೆಯದುದೂ ಅತೃಪ್ತಿಯಲ್ಲಿಯೇ. ಪ್ರಿಯ ವಸ್ತುವನ್ನು ಹೊಂದುವ ಆತುರವು ಹೆಚ್ಚಾಗಿದ್ದ ಪ್ರಮಾಣದಲ್ಲಿ ಅದನ್ನು ಪಡೆಯುವ ಕ್ಷಣದ ಆನಂದವೂ ವಿಶೇಷ. ಆಯ್ತು, ಇನ್ನೇನು, ಎಲ್ಲವೂ ಕೈಗೂಡಿತು, ಎಂಬುದು ಯಾವಾಗಲೂ ಒಂದು ಕ್ಷಣ. ಇದು ಕ್ಷಣಕಾಲವಾಗಿಯೇ ಇರಬೇಕು. ಸೃಷ್ಟಿಯ ರಚನೆಯಲ್ಲಿ ಈ ನಿಯಮವೇ ಅಡಕವಾಗಿದೆ. ಆದರೆ ಮೈಗಳ್ಳ ಮಾನವನು ತನ್ನ ಮೈಮುರಿದು ಮನಮುಟ್ಟಿ ದುಡಿಯುವದಕ್ಕೆ ಮನಸ್ಸಿಲ್ಲದೆ, ಅಥವಾ ಕೈಲಾಗದ ಹೇಡಿತನಕ್ಕಾಗಿ ಇಲ್ಲವೆ ತಿಳಿಗೇಡಿತನದಿಂದುಂಟಾದ ಪುಕ್ಕತನದಿಂದ ಇದ್ದುದರಲ್ಲಿಯೇ ತೃಪ್ತಿಪಡಲು ಹವಣಿಸುತ್ತಾನೆ. 'ಏನು ಕಲಿತಡೆ ಅದೇನು? ಕಾನನದ ಬೆಳದಿಂಗಳಂದದಿ ವ್ಯರ್ಥವಾಗಿಹುದು' ಎಂಬ ವಿಚಾರದಿಂದ ತನ್ನ ಹೆಚ್ಚಳದ ಹಸಿವನ್ನು ಕೊಂದುಕೊಳ್ಳುತ್ತಾನೆ. ಹಾಳಾಗುತ್ತಾನೆ.

ಮೊದಲು ಹಸಿದು, ಹಬ್ಬದ ಸಮೀಚೀನವಾದ ಊಟವನ್ನು ಉಣ್ಣುವಾಗಿನ ಸಂತಸಕ್ಕೆ ಎಣೆಯಿಲ್ಲ. ಆದರೆ ಆ ಸಂತಸ, ಊಟ ಮುಗಿವವರೆಗೆ ಮಾತ್ರ. ಕಲಿತು ತನ್ನವರನ್ನೆಲ್ಲ ಮೆಚ್ಚಿಸಬೇಕೆಂದು ಹಂಬಲಿಸಿ ಎಂ.ಎ., ಪಿಎಚ್.ಡಿ., ಮುಂತಾದ ಮೇಲ್ತರಗತಿಯ ಪದವಿಗಳನ್ನು ಪಡೆದ ಹಿಗ್ಗು, ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ಪತ್ರಿಕೆಯನ್ನು ಓದಿ ಮುಗಿಸುವವರೆಗೇ. ಪ್ರಿಯೆಯನ್ನು ಕೂಡಬೇಕೆಂದು ಕಾದು ಕಾದಲನಾದವನಿಗೆ ನಲ್ಲೆಯನ್ನು ಹೊಂದಿದ ನಲವು, ಹೊಂದಿದ ಒಂದರಗಳಿಗೆಯೇ. ಅಸತ್ಯಕ್ಕೆ ಬೇಗುದಿಗೊಂಡು ಸುಳ್ಳು ಬೇಡವಾಗಿ, ಸತ್ಯದ ಸಾಕ್ಷಾತ್ಕಾರಕ್ಕಾಗಿ-ಪರಮ ವಸ್ತುವಿನ ಪ್ರಾಪ್ತಿಗಾಗಿ ಕಾತರನಾಗಿ ತವಕಗೊಂಡ ಭಕ್ತನಿಗೆ ಪರಮಸತ್ಯದ ದರ್ಶನಾನಂದವು ಅದು ಕಣ್ಣೆದುರು ನಿಂತ ನಿಮಿಷದವರೆಗೇ.

ಮುಂದೇನು? ಮುಂದೇನು? ಮುಂದೇನು?..........ಮುಂ? ಮುಂದೆ-ಎಲ್ಲವೂ ಮಂದ; ಮಂದ, ಮಂಜು. ಮಂಜು. ಈ ಮಂಜು-ಮಬ್ಬು ತಮಗೆ ಬೇಡವೆಂದು ಬೇಗನೆ ಕಣ್ಣು ಮುಚ್ಚಿಕೊಳ್ಳುವ ಗಡಿಬಿಡಿಯು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿದೆ.! ಆದರೇನು? ಕಣ್ಣುಮುಚ್ಚಿ ಹಾಲು ಕುಡಿಯುವ ಹಂಚಿಕೆ ಹಾಕಿದ ಬೆಕ್ಕಿನಂತೆಯೆ ಜನಗಳ ಗತಿಯಾಗಿದೆ! ಬೆನ್ನ ಮೇಲೆ ಬಡಿಗೆಯ ಪೆಟ್ಟು ಬೀಳುವುದು ತಪ್ಪಲಿಲ್ಲ. ತಪ್ಪುವುದೂ ಇಲ್ಲ. ಹಬ್ಬದ ಊಟದ ಹಿಗ್ಗೇ ಕಡೆಯ ಊಟದ್ದಾಗಲೆಂದು ಊಟವಾದೊಡನೆ ಕಣ್ಣು ಮುಚ್ಚಿದವನು, ಕಣ್ಣೇ ಮುಚ್ಚಿದರೆ!

ಪರೀಕ್ಷೆಗಳು ಮುಗಿದೊಡನೆ ಜ್ಞಾನದ ಸೀಮೆಯೇ ಮುಗಿಯಿತೆಂದು ಕಲಿಯುವ ಹಸಿವನ್ನು ಕೊಂದುಕೊಂಡರೆ! ನಲ್ಲನಲ್ಲೆಯರು ಇನ್ನು ಮುಂದೆ ಬೇಟದ ಬೇವಸ ಬೇಡವೆಂದು ಸಖ್ಯಯೋಗದ ಹಿಗ್ಗಿನಲ್ಲಿದ್ದಾಗಲೆ ಮಡಿವ ಮದ್ದನ್ನು ಕುಡಿದರೆ! ಆರ್ತಭಕ್ತನು ಇದುವೆ ಬ್ರಹ್ಮಾನಂದದ ಪರಮಾನಂದದ ಕ್ಷಣವೆಂದು ಕೂಡಲೆ ಜಲಸಮಾಧಿಯನ್ನು ಹೊಂದಿದರೆ! ಇದೆಲ್ಲವೂ ಬಡಿಗೆಗೆ ಹೆದರಿ ಬೆಕ್ಕು ಕಣ್ಣು ಮುಚ್ಚಿಕೊಂಡಂತೆಯೆ ಅಲ್ಲವೋ?

ಇದೆಲ್ಲವೂ ನಾಸ್ತಿಕತೆ ಅಥವಾ ತಿಳಿಗೇಡಿ ಪುಕ್ಕತನವಲ್ಲದೆ ಮತ್ತೇನೂ ಅಲ್ಲ. ಸತ್ತ ಬಳಿಕ-ಮತ್ತೇನೂ ಇಲ್ಲ; ಸಾವೇ ಕೊನೆಯದು ಎಂದು ನಂಬುವವರೇ ನಾಸ್ತಿಕರು. ಸತ್ಯದ ಅನಂತತೆಯಲ್ಲಿ ಶ್ರದ್ಧೆಯಿದ್ದವರೆಲ್ಲರೂ ಆಸ್ತಿಕರು. ಜೀವ ಅ-ಮರ, ಸಾವು ಒಂದು ಸ್ಥಿತಿ; ವಿಶ್ರಾಂತಿ ಮತ್ತೆ ಮತ್ತೆ ಮುಂದಿನ ಪಾತ್ರ ವಹಿಸಲು ನಟನು ತೆರೆಯ ಮರೆಗೆ ಹೋದಂತೆ.

ಸತ್ಯವು ಅನಂತವಾಗಿದೆ. ಇಂದಿನಂತೆ ನಾಳೆಯ ದಿನವಿಲ್ಲ. ಒಬ್ಬರಂತೆ ಇನ್ನೊಬ್ಬರಿಲ್ಲ. ಆದುದರಿಂದಲೆ ಸತ್ಯವು ಅಂದವಾಗಿದೆ. ಅಂದ, ಅಂದವಾಗಿದೆ. ಸುಂದರಳಾದ ವಸುಂಧರೆಯು ಬಹುರತ್ನೆ. ಬಹುರತ್ನಾ ವಸುಂಧರಾ. ಬದುಕು ಒಂದೇ ಬಗೆಯಾಗಿದ್ದರೆ ಈ ಸ್ವಾರಸ್ಯವೇ ಉಳಿಯುತ್ತಿದ್ದಿಲ್ಲ. ಒಂದೇ ಬಗೆಯ ಬಾಳು ಇದ್ದರೆ, ಬಾಳಿನಲ್ಲಿ ಅನುಭವದ ಆನಂದವೂ ಒಂದೇ ಬಗೆಯಾಗಿರಬಲ್ಲುದು. ಆದರೆ, ಅನಂತಸತ್ಯದ ಅನುಭವವೂ ಅನಂತವಾಗಿದೆ. ಒಂದರಂತೆ ಇನ್ನೊಂದಿಲ್ಲ, ಕಣ್ಣಿದ್ದವರಿಗೆ. ಆದುದರಿಂದ, ಜೀವನದ ಒಂದು ಅಂಚನ್ನಾದರೂ ಕಂಡುದಾಯ್ತೊ ಇಲ್ಲವೊ ಅಷ್ಟರಲ್ಲಿ 'ಧನ್ಯನಾದೆ ಸಾಕು ದೇವ ಈ ಜನ್ಮ' ಎಂದರೇನು ಅರ್ಥ? ಆ ಕ್ಷಣದ ಆನಂದದ ಉದ್ಗಾರವದು, ಎಂದಿಷ್ಟೇ ಅರ್ಥ. ಎಂದೆಂದೂ ಸಾಕು, ಈ ಜನ್ಮ ಎಂದರ್ಥವಲ್ಲ. ಊಟಕ್ಕೆ ಕೂತಾಗ ತೃಪ್ತನಾದೆ, ತಣಿದೆನೆಂದರೇನು? ನಾಳೆ ಹಸಿಯುವುದೇ ಬೇಡ ಎಂದಂತೆಯೆ? ಅನಂತ ಉತ್ತುಂಗ ಶಿಖರದ ಸೌಂದರ್ಯವನ್ನು ನೋಡಿ ಆನಂದಿಸಲು ಹೊರಟವನು ಘಟ್ಟದ ಒಂದು ಮೆಟ್ಟನ್ನು ಏರಿದೊಡನೆಯೆ ತಣಿದು, ದಣಿದು ಇನ್ನು ಮುಂದೆ ಸಾಕಪ್ಪ ಎಂದರೆ? ಎಲ್ಲವನ್ನು ಕಂಡಂತಾಯ್ತೆ? ನಾವು ಕಂಡಷ್ಟೇ ಸತ್ಯ ಇನ್ನು ಕಾಣುವುದೇನೂ ಇಲ್ಲ, ಎಂಬುದು ಅಜ್ಞಾನದ ಪರಮಾವಧಿ. ಹೆಮ್ಮೆಯ ಮಬ್ಬು. ಸತ್ಯವು ಅನಂತ ಎಂಬುದನ್ನು ಅಲ್ಲಗಳೆವಂತೆ. ಆದುದರಿಂದ, ಇದು ಸತ್ಯದ ಅಪಮಾನ. ಸತ್ಯವು ಅನಂತವಾಗಿರುವುದರಿಂದ ಅದರ ಸೊಗಸನ್ನು ಕಾಣಲು ಎಷ್ಟು ಜನ್ಮಗಳೂ ಸಾಲವು. ಆದುದರಿಂದಲೇ ತುಕಾರಾಮನು 'ದೇವಾ, ನಿನ್ನ ಅರಿವನ್ನಿತ್ತು ನನ್ನನ್ನು ಎಷ್ಟು ಬಾರಿ ಹುಟ್ಟಿಸಿದರೂ ಸರಿಯೇ; ಅದರಲ್ಲಿ ನನಗೆ ಹಿಗ್ಗು' ಎಂದು ಪ್ರಾರ್ಥಿಸಿಕೊಂಡಿದ್ದಾನೆ.

ಜನ್ಮಕ್ಕೆ ಹೆದರದ ಬಂಟನೇ ಭಕ್ತನು. ಹುಟ್ಟಿದೆವೇಕೆಂದು ಅಳುಕುವವರು ಹೇಡಿಗಳು; ನಾಸ್ತಿಕರು. ಅಲ್ಪ ಸಂತುಷ್ಟರು ಅನಂತನ ಭಕ್ತರಾಗಲಾರರು. ಅನಂತನ ಉಪಾಸರಿಗೆ ಅನಂತದಲ್ಲಿ ಪ್ರೀತಿಯಿದ್ದವರಿಗೆ 'ನಾಽಲ್ಪೇ ಸುಖಂ ಅಸ್ತಿ' 'ಭೂಮಾ ವೈ ಸುಖಂ'. ನಿಃಶೇಷನು ಅನಂತನೇ ಅಲ್ಲ. ಅನಂತನ ಆಧಾರ 'ಶೇಷ'! 'ಶೇಷ' ಎಂದಾದರೂ ತೀರಿದುದು ಉಂಟೆ? 'ತೀರಿದರೆ' ಅದು ಶೇಷವೆನಿಸೀತೆ? ಆದುದರಿಂದಲೇ ಶೇಷನು ಅಮರ. ಅನಂತ-ಭಕ್ತರು ಮರಣವನ್ನು ಬೇಡರು. ಸಾಯಲು ಅವರು ಬದುಕಿಲ್ಲ. ಬದುಕಲು ಸಾಯಲಿಕ್ಕೆ ಯಾವಾಗಲೂ ಸಿದ್ಧ. ಪ್ರಿಯ ವಸ್ತುವಿಗಾಗಿ ತಮ್ಮ ದೇಹವನ್ನು ಈಡಾಡಲು ಅವರು ಅನಂತನ ಬಿರುದಿನ ದಾರವನ್ನು ಮುಂಗೈಗೆ ಕಟ್ಟುತ್ತಾರೆ.

ಆದುದರಿಂದ, ಆನಂದದ ಒಂದು ಕ್ಷಣದಲ್ಲಿ ಆ ಕ್ಷಣವೇ ಕೊನೆಯದಾಗಲಿ, ಕೂಡಲೆ ಮರಣ ಬರಲಿ, ಎಂದು ಮುಂದಿನ ಮಂಜಿನ ಅಂಜಿಕೆಯಿಂದ ಹಾರೈಸುವುದು ಹೇಡಿತನ; ಮುಂದಿನ ಕ್ಷಣ ಮತ್ತೆ ಎಂತಹದಿ ರುವುದೊ, ಅದರ ಕಹಿ ಅನುಭವ ಬೇಡ ಎಂಬುದು ಪುಕ್ಕತನ. ಇದು ಅನಂತತ್ವದಲ್ಲಿ ಶ್ರದ್ಧೆಯಿದ್ದವರ ನಡೆವಳಿಯಲ್ಲ. ಅಲ್ಪವೇ ಸಾಕು ಎಂಬ ಕ್ಷುಲ್ಲಕರ ಹೀನವರ್ತನೆ. ಮರಣವೇ ಕೊನೆಯದೆಂಬ ನಾಸ್ತಿಕರ ನಡೆ. ಮರಣಕ್ಕಾಗಿ ಮರಣ, ಹೇಡಿತನ, ತನ್ನ ಹೆಂಡಿರು ಮಕ್ಕಳಿಗಾಗಿ, ಮನೆಮಾರಿಗಾಗಿ, ದೇಶಕೋಶಕ್ಕಾಗಿ, ಸದಾಚಾರ ಸತ್ಯಕ್ಕಾಗಿ, ಸಾಯುವುದರಲ್ಲಿಯೇ ಹೆಚ್ಚು ಹೆಚ್ಚಿನ ಸುಖವಿದೆ. ಸಾವಿನ ಸಾರ್ಥಕತೆಯಿದೆ. ಇಂತಹರೇ ವೀರಜೀವಿಗಳು.

ಇಂತಹರ ನಾಡಿನಲ್ಲಿಯೇ ಲಕ್ಷ್ಮಿಯು ನೆಲಸುವಳು. ಸ್ವರ್ಗಸುಖವು ಭೂಮಿಗೆ ಇಳಿದು ಬರುವುದು. ಅಮೇರಿಕಾ, ಇಂಗ್ಲಂಡ್, ರಶಿಯಗಳೇ ಇದಕ್ಕೆ ದೃಷ್ಟಾಂತ. ಆದರೆ ಹಿಂದುಸ್ತಾನದಲ್ಲಿ? ಹಿಂದುಸ್ತಾನದಲ್ಲಿ ಅಮೇರಿಕಾ ಇಂಗ್ಲಂಡ್ ರಶಿಯಗಳಿಗಿಂತ ಎಷ್ಟೋ ಪಟ್ಟು ಹೆಚ್ಚು ಜನಗಳಿದ್ದಾರೆ ನಾಲ್ವತ್ತುಕೋಟಿ ಜನರ ದೇಶ ನಮ್ಮದು. ಆದರೇನು? ಬದುಕಲು (ವಿಜಯಶ್ರೀಯನ್ನು ವರಿಸಲು, ಸಾಯಲಿಕ್ಕೆ) ಎಷ್ಟು ಜನ ಸಿದ್ಧವಿದೆ? ಸಾಯಲು ಬದುಕಿರುವವರೇ ಎಲ್ಲ! ಬದುಕಲು ಸಾಯಲಿಕ್ಕೆ ಸಿದ್ಧವಾದ ಒಂದು ಜರ್ಮನಿ-ಬರಿ ಆರು ಕೋಟಿ ಜನರ ದೇಶ! ಆದರೂ-ಇಂಗ್ಲಂಡ್ ಅಮೇರಿಕೆಗಳಿಗೂ ಭಾರವೆನಿಸಿತು. ಝಾರನ ಕಾಲದಲ್ಲಿ ತೃಪ್ತ ರಶಿಯಾ ಯೂರೋಪದೊಳಗಿನ ಟೊಳ್ಳು ನಾಡುಗಳಲ್ಲಿ ಎಣಿಸಲ್ಪಡುತ್ತಿತ್ತು. ಇಂದಿನ ಹಸಿದ ರಶಿಯಾ, ಇಂಗ್ಲಂಡ್ ಅಮೇರಿಕೆಗಳನ್ನೂ ಹೆದರಿಸಿದ ಜರ್ಮನಿಯನ್ನೂ ನುಂಗಿ ಮರಳಿ ಇಂಗ್ಲಂಡ್ ಅಮೇರಿಕೆಗಳಿಗೇ ಈಗ ಬೆದರಿಸುತ್ತಿದೆ! ಸಾಯಲು ಬದುಕಿದವರು ಹುಳುಗಳು. ಬದುಕಲು ಸಾಯುವವರೇ ಮಾನವರು. ಇವರೇ ನಿಜವಾಗಿ ನರವೀರರು. ಅನಂತತ್ವದ ಉಪಾಸಕರು.

ಸತ್ಯ-ಸೌಂದರ್ಯಗಳಿಗೆ ಕೊನೆಯಿಲ್ಲ, ಅವು ಅನಂತ. ಆದುದರಿಂದ ಸತ್ಯ-ಸೌಂದರ್ಯಗಳಿಗಾಗಿ ಇರುವ ಹಸಿವಿಗೂ ಕೊನೆಯು ಇರಕೂಡದು. ಇಂದು ಪೂರ್ಣವೆನಿಸುವುದು, ನಾಳೆ ಅಪೂರ್ಣ;-ಮಹಾಪೂರ್ಣದ ಒಂದು ಅಂಶ. ಆದುದರಿಂದ, ಅನಂತತ್ವದ ಮನವರಿಕೆಯಾದವರು ಹಸಿವನ್ನು ಎಂದೂ ಅಡಗಿಸಿಕೊಳ್ಳಲಾಗದು. ಹಸಿವನ್ನು ಕೊಂದುಕೊಳ್ಳಕೂಡದು. ಒಡಲ ಹಸಿವು ದೇಹದ ಆರೋಗ್ಯಕ್ಕೆ ಕಾರಣ. ನಲ್ಲೆಯ ಬೇಟ ಮನೆತನದ ನೆಲೆಗೆ ಕಾರಣ. ಮಕ್ಕಳ ಬಯಕೆ ಲೋಕಸ್ಥಿತಿಗೆ ಗತಿ. ನಾಡಿನ ಹಂಬಲ ರಾಷ್ಟ್ರೀಯ ಸ್ವಾತಂತ್ರ್ಯದ ತಾಯಿ. ಆದುದರಿಂದಲೆ, ಹಸಿವೆ ಹೆಚ್ಚಳದ ಹುಟ್ಟು. ಏಳ್ಗೆಯ ಗುಟ್ಟು. ಅಸಂತೋಷಃ ಶ್ರಿಯೋಮೂಲಂ. ಏಳ್ಗೆ ಬೇಕಾದವರು ಹಸಿಯಿರಿ; ಹಸಿದು ಒಳ್ಗಿಚ್ಚನ್ನು-ಒಳಗಣ ಕಿಚ್ಚನ್ನು-ಒಳ್ಳಿತ್ತಾದ ಕಿಚ್ಚನ್ನು ಹೆಚ್ಚಿಸಿಕೊಳ್ಳಿರಿ. ಆದುದರಿಂದ ವೈದಿಕ ಋಷಿಗಳು ಅಗ್ನಿಯನ್ನು ಹೀಗೆ ಪ್ರಾರ್ಥಿಸಿದ್ದು:

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ಭವ.....

-ಈಶೋಪನಿಷತ್ತು

ಎಲೆ ಅಗ್ನಿಯೆ, ನಮ್ಮನ್ನು ಸುಖಕರವಾದ ನಲ್ದಾರಿಯಿಂದ ಮುಂದೆ ಒಯ್ಯಯ್ಯಾ. ನಮ್ಮಲ್ಲಿರುವ ಹೀನತನವನ್ನೆಲ್ಲ ಸುಟ್ಟು ನಮ್ಮನ್ನು ಉದ್ಧರಿಸಯ್ಯಾ ತಂದೆ. ನಿನಗೆ ನಮ್ಮ ಅನಂತ ವಂದನೆಗಳು.

ಅನಂತತ್ವದ ಸಾಕ್ಷಾತ್ಕಾರ

ಸತ್ಯವು ಅನಂತವೆಂದು ಅನಾದಿ ಕಾಲದಿಂದ ಹೇಳುತ್ತಾ ಬಂದಿದ್ದಾರೆ. ಬ್ರಹ್ಮವೇ ಸತ್ಯವೆಂದು ವೇದಾಂತವು ಹೇಳುತ್ತದೆ. ಆದುದರಿಂದ ಸತ್ಯವೇ ಬ್ರಹ್ಮವೆಂದು ಬೇರೆ ಹೇಳಬೇಕಾಗಿಲ್ಲ. ಇದನ್ನೇ ಪಡುವಣರು God is truth, truth is God, ಎಂದು ಎನ್ನುವರು. ಸತ್ಯವೇ ದೇವರೆಂದ ಬಳಿಕ, ಸತ್ಯವು ಅನಂತವಾಗಿರುವುದೆಂದ ಮೇಲೆ, ದೇವರೂ ಅನಂತರೂಪಿ ಎಂಬ ಮಾತು ಸ್ವತಃ ಸಿದ್ಧವಾಗಿದೆ. ಆದುದರಿಂದಲೆ, ಹಿಂದೂಧರ್ಮದಲ್ಲಿ ಬ್ರಹ್ಮ, ವಿಷ್ಣು, ಮಹೇಶ, ಸೂರ್ಯ, ಗಣಪತಿ, ದುರ್ಗೆ, ಸರಸ್ವತಿ, ಲಕ್ಷ್ಮಿ ಮೊದಲಾದ ಲೆಕ್ಕವಿಲ್ಲದಷ್ಟು ರೂಪದಲ್ಲಿ ಆ "ಸತ್ಯ" ಸ್ವರೂಪವನ್ನು ಪೂಜಿಸುವುದು ವಾಡಿಕೆಯಾಗಿದೆ. ದೇವರು ಒಬ್ಬನೇ ಎಂಬ ವಿಶಾಲ ಅರ್ಥವನ್ನು ಮರೆತು, ಅವನು ಕೇವಲ "ಒಂದೇ" (ವ್ಯಕ್ತಿ); ಅವನೂ ತಮ್ಮ ಮತದೊಳಗಿನವನೇ, ಎಂಬ ಭ್ರಮೆಯಲ್ಲಿ ಇರುವ ಎಷ್ಟೋ ಧರ್ಮ-ಮತಗಳಿವೆ. ಅಲ್ಲಾನು ಒಬ್ಬನೇ ದೇವರು ಉಳಿದ ದೇವತೆಗಳು ದೇವತೆಗಳೇ ಅಲ್ಲ, ಎಂಬುದೂ, ದೇವನು (ಸತ್ಯವು), ಅನಂತವೆಂದು ಅದೇ ಬಾಯಿಂದ ನುಡಿಯುವುದೂ, ಒಂದಕ್ಕೊಂದು ವಿಪರೀತವಾಗಿವೆ. ದೇವರು ಒಬ್ಬನೇ, ಎಂದರೆ ಯಾವ ರೂಪದಲ್ಲಿದ್ದರೂ ಆತನು ಭಿನ್ನನಲ್ಲ ಎಂಬ ತಿಳುವಳಿಕೆಯು ಇನ್ನೂ ಎಲ್ಲ ಧರ್ಮಗಳಲ್ಲಿಯೂ ಸಾಕಷ್ಟು ದೃಢವಾಗಿಲ್ಲ. ಹಾಗಿದ್ದರೆ ಜಾತಿಮತಗಳ ಅಸೂಯೆಯು ಅದೆಷ್ಟೋ ಕಡಿಮೆಯಾಗಬಹುದಿತ್ತು.

ದೇವನೆಂಬ ಕಲ್ಪನೆ ಹಿಂದೂಧರ್ಮದಲ್ಲಿ ಅತ್ಯಂತ ಶಾಸ್ತ್ರೀಯವೂ, ಅನುಭವಪೂರ್ಣವೂ ಆಗಿದೆ. ದೇವರ ಅನಂತ ಸ್ವರೂಪದಲ್ಲಿ ಒಂದಿಲ್ಲೊಂದು ಅಂಶದ ಸಾಕ್ಷಾತ್ಕಾರವಾಗದ ಮಾನವರು ದೊರೆಯುವುದೇ ಅಪರೂಪ. ದಿವ್, ಎಂದರೇ ಹೊಳೆ,ಪ್ರಕಾಶಿಸು. ತನ್ನ ದಿವ್ಯರೂಪದಿಂದ ಯಾವುದು ಮಾನವನನ್ನು ತನ್ನೆಡೆಗೆ ಸೆಳೆಯುವುದೋ ಅದೆಲ್ಲವೂ 'ದೇವ' ಸ್ವರೂಪವೇ. ಭಗವದ್ಗೀತೆಯಲ್ಲಿ 'ಯದ್ ಯದ್ ವಿಭೂತಿ ಮತ್‌ಸತ್ವಂ, ಶ್ರೀಮತ್ ಊರ್ಜಿತಮ್, ಏವ ವಾ' ಅದೆಲ್ಲವೂ ಪರಮಾತ್ಮನ ಅಂಶವೆಂದು ಶ್ರೀ ವ್ಯಾಸರೂ ಹೇಳಿದ್ದಾರೆ. ಧನ-ಕನಕಾದಿಗಳಿಂದ, ಶಕ್ತಿ-ಸಾಮರ್ಥ್ಯಗಳಿಂದ, ವಿಚಾರ-ಪ್ರತಿಭೆಗಳಿಂದ, ಆಕರ್ಷಿತರಾಗದ ವ್ಯಕ್ತಿಗಳಾರು? ಹೀಗೆ ಆಕರ್ಷಣ ಮಾಡುವ ಆ ದಿವ್ಯ ಶಕ್ತಿಯೇ ದೇವರು.

ಹೃದಯವನ್ನು ಸೆಳೆಯುವುದು, ಮನವನ್ನು ಮೋಹಿಸುವುದು, ಸೌಂದರ್ಯದ ಧರ್ಮವೆಂದು ಹೇಳುವ ಆವಶ್ಯಕತೆ ಇಲ್ಲ. ಯಾವುದು ತನ್ನತ್ತ ಸೆಳೆದು ತನ್ನಲ್ಲಿ ಲೀನ ಮಾಡಿಕೊಳ್ಳುವುದೋ, ಅಳಿಗಾಲಕ್ಕೆ ಕಾರಣವಲ್ಲದ ವಿಶೇಷ ಆನಂದವನ್ನೀಯುವುದೋ, ಅದೆಲ್ಲವೂ ಸೌಂದರ್ಯವೆಂದು ಹೇಳಲು ಅಡ್ಡಿ ಇಲ್ಲ. ಹೀಗೆ ತನ್ನತ್ತ ನಮ್ಮನ್ನು ಸೆಳೆಯುವ ವಸ್ತುವು ದಿವ್ ಎಂದರೆ ದಿವ್ಯವಾಗಿರಬೇಕಷ್ಟೇ? ಆದುದರಿಂದಲೆ, ದೇವತೆಗಳು ಚೆಲುವಿನ ಮೂರ್ತಿಗಳೆಂದು ಒಪ್ಪತಕ್ಕ ಮಾತಾಗಿದೆ. ಸತ್ಯವು ಸ್ವಯಂ ಜ್ಯೋತಿಃಸ್ವರೂಪವಾಗಿದೆ. ಏಕೆಂದರೆ: ಹೊರಗಿನ

ಬೆಳಕಿನಿಂದ ಇದು ತಿಳಿಯತಕ್ಕ ವಸ್ತುವಲ್ಲ. ಒಳಗೆ ತಿಳಿಯದೇ, ಯಾವ ಜ್ಞಾನವೂ ಆಗಲಾರದು. ಆದುದರಿಂದಲೆ, ಜ್ಞಾನಕ್ಕೆ ಜ್ಯೋತಿ ಎಂದು ಹೇಳುವುದು. 'ಮಾತು, ಎಂಬುದು ಜ್ಯೋತಿರ್ಲಿಂಗ' ಎಂದು ಅಲ್ಲಮ ಪ್ರಭುಗಳು ಹೇಳಿದುದೂ ಇದೇ ಕಾರಣದಿಂದಲೇ. ಆದುದರಿಂದಲೇ ಬಲ್ಲವರು ದೇವರನ್ನು ಪ್ರಕಾಶರೂಪನೆಂದೂ, ಅಲ್ಲದೇ ಸತ್‌ಸ್ವರೂಪನೂ, "ಚೆಲುವರ ಚೆಲ್ವ, ಚೆನ್ನಿಗರ ಚೆನ್ನ ಸುವೀರ ವೀರ, ಸತ್ವಲಾಬಲರ ಬಲಾಢ್ಯ ಬಲ್ಲಿದರ ಬಲ್ಲಹನು" ಎಂದೂ ಹೇಳುವರು. ಕೀಟ್ಸನು ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯವೆಂದು ಹೇಳಿದುದೂ ಈ ದೃಷ್ಟಿಯಿಂದಲೇ.

ಸತ್ಯವು ಅನಂತವೆಂಬುದನ್ನು ಅಂತಃಕರಣದ ಆಳದ ಸ್ಫೂರ್ತಿಯಿಂದ ತಿಳಿದವರು ಕೆಲವರು. ತತ್ವಜಿಜ್ಞಾಸೆಯಿಂದ ವಿವೇಚಿಸಿ ಆ ನಿರ್ಧಾರಕ್ಕೆ ಬಂದವರು ಹಲವರು. ಆಧುನಿಕ ಸಂಶೋಧನೆಯಲ್ಲಿ ಗಣಿತಶಾಸ್ತ್ರವೂ ಅನಂತತ್ವದ ಸಾಕ್ಷಾತ್ಕಾರಕ್ಕೆ ತುಂಬ ನೆರವನ್ನೀಯುತ್ತಿದೆ. ವೈಟ್‌ಹೆಡ್ ಮೊದಲಾದ ಭೌತಶಾಸ್ತ್ರಜ್ಞರು ಈ ದಿಕ್ಕಿನಿಂದ ಮುಂದುವರೆದವರಾಗಿದ್ದಾರೆ.

ಆದರೆ, ಈ ಅನಂತತ್ವದ ಸಾಕ್ಷಾತ್ಕಾರವಾಗದೆ, ಅನಂತವು ತಿಳಿಯಿತು, ಎಂಬುದು ಹೇಗೆ? ಸಂಪೂರ್ಣ ತಿಳಿದರೆ ಅದು ಅನಂತವು ಹೇಗೆ? ಅನಂತವು ಶಬ್ದಗಳಿಗೆ ನಿಲುಕದ್ದು; ಎಂದರೆ ಎಷ್ಟು ಹೇಳಿದರೂ ಕೊನೆಗೆ ಮತ್ತೆ ಕೆಲವೊಂದು ಉಳಿಯುವುದು. ಅನಂತವನ್ನು ವಿವರಿಸುವ ಒಂದು ಸೋಜಿಗದ ಬಗೆಯನ್ನು ಪುರಾತನರು ಕಂಡು ಹಿಡಿದಿದ್ದಾರೆ.

'ಗುರೋಽಸ್ತು ಮೌನಂ ವ್ಯಾಖ್ಯಾನಂ; ಶಿಷ್ಯಾಃ ತು ಛಿನ್ನ ಸಂಶಯಾಃ'!

ಆದರೆ, ಈ ಬಗೆಯ ಮೌನ-ವ್ಯಾಖ್ಯಾನದಿಂದ ಶಿಷ್ಯರ ಸಂದೇಹಗಳನ್ನು ನಾಶಮಾಡುವ ಆಚಾರ್ಯರು ಎಲ್ಲ ಕಾಲದಲ್ಲಿಯೂ ಎಲ್ಲಿ ದೊರೆಯುವರು? ಗಣಿತವಿಶಾರದರು ಕ್ಷ ಎಂದು ಬರೆದು ಅದು ಅನಂತತ್ವದ ಸೂಚಕವೆಂದು ಹೇಳುವರು. ಕ್ಷ ಎಂಬುದು ನ....ಎಂದರೆ ಅನಂತ ಘಾತಗಳವರೆಗೆ, ಎಂದು ವಿವರಿಸುವರು. ಆದರೆ, ಇದು ಜನಸಾಮಾನ್ಯರಿಗೆ ತಿಳಿಯದ ವಿಷಯ. ದಾರಿಹೋಕರಿಗೂ ಅನಂತನ ದರ್ಶನ ಮಾಡಿಸುವ ಸಾಹಸವನ್ನು ಪಶ್ಯಂತಿವಾಣಿಯ ಭಾರತೀಯ ದ್ರಷ್ಟಾರನೊಬ್ಬನು ಸಾಧಿಸಿದ್ದಾನೆಂದು ಹೇಳಬಹುದಾಗಿದೆ. ಆ ಅಜ್ಞಾತ-ಪ್ರತಿಭಾಶಾಲಿಯು ಯಾವನೋ ತಿಳಿಯದು. ಆತನ ದೇಶ ಕಾಲ, ಗೊತ್ತಿಲ್ಲ. ಆದರೆ ಆತನದು ಅದು ಅಮರ ಕೃತಿ.

ಶೇಷಶಾಯಿಯಾದ ಪರಮಾತ್ಮನ ಚಿತ್ರವನ್ನು ಎಲ್ಲರೂ ಕಂಡಿರಬಹುದು. ಆದರೆ, ಆ ಚಿತ್ರದೊಳಗಿನ ಸಂಕೇತ (Symbolism)ಗಳನ್ನು ಸರಿಯಾಗಿ ಈವರೆಗೆ ಯಾರೂ ಬಿಡಿಸಿ ಹೇಳಿದುದನ್ನು ನಾನು ಕೇಳಿಲ್ಲ. ಪರಮಾತ್ಮನು ಅಲ್ಲಿ ಶೇಷಶಾಯಿಯೇ ಏಕೆ? ಸಾಮಾನ್ಯವಾಗಿ ಗರುಡವಾಹನನೆಂದು ಲೋಕವಿಖ್ಯಾತನಾದ ವಿಷ್ಣುವು ಇಲ್ಲಿ ಶೇಷನನ್ನು ಸ್ವೀಕರಿಸಿದ ಕಾರಣವೇನು? ಸಾಗರ ಶಯನನಾದುದಕ್ಕೆ ಕೆಲವರು ಏನೋ ಒಂದು ಕಾರಣವನ್ನು ಕಲ್ಪಿಸುವರು. ಲಕ್ಷ್ಮಿಪ್ರಿಯ ತವರು ಕ್ಷೀರಸಾಗರ. ವಿಷ್ಣುವಿಗೆ ಮಾವನ ಮನೆಯಲ್ಲಿ ಇರುವುದಕ್ಕೆ ಮನಸ್ಸು ಮೆಚ್ಚುವುದು. ಹೀಗೆ ಕಲ್ಪಿಸಿದವರಿಗೆ ಹೆಂಡತಿಯ ಸಂತೃಪ್ತಿಗಾಗಿ ಮಾವನಲ್ಲಿಯೇ ಬಿದ್ದುಕೊಂಡಿರುವ ಅಳಿಯನ ಸಮಾಚಾರವೊಂದೇ ತಿಳಿದಿರಬೇಕಲ್ಲದೆ, ಇಲ್ಲಿರುವ ಸಂಕೇತದ ಸೊಗಸು ಗೊತ್ತಾಗಿಲ್ಲ.

ಶೇಷಶಾಯಿಯಾದ ವಿಷ್ಣುವಿಗೆ 'ಅನಂತ'ನೆಂದು ಕರೆವ ಔಚಿತ್ಯವು ಪುರಾತನರ ಸೂಕ್ಷ್ಮವಾದ ದಿವ್ಯದೃಷ್ಟಿಯ ದ್ಯೋತಕವಾಗಿದೆ. 'ಶೇಷ' ಎಂದರೆ ಉಳಿದುದು; ಶಿಲ್ಕು. ಎಷ್ಟು ವೆಚ್ಚವಾದರೂ ಮತ್ತೆ ಉಳಿಯುವುದಕ್ಕೆ ಕೊನೆ ಇಲ್ಲದುದು, ನೆಲೆ ಇಲ್ಲದುದು, ಎಂದು ಹೇಳಬೇಕಾಗುತ್ತದೆ. ಕೊನೆ ಎಂದರೆ, ಅಂತವು ಇಲ್ಲದುದೇ ಅನಂತವಷ್ಟೇ? ಆದುದರಿಂದಲೆ, ಸಂಸ್ಕೃತದಲ್ಲಿ ಶೇಷ ಎಂಬುದಕ್ಕೆ ಅನಂತವೆಂದೂ ಅರ್ಥ ಉಂಟು. ನಿಃಶೇಷನು ಎಂದೂ ಅನಂತನಾಗಲಾರ. ಆದುದರಿಂದಲೇ 'ಅನಂತ'ನನ್ನು ಶೇಷನ ಮೇಲೆ ಇರಿಸಿದ್ದಾಗಿದೆ. ಇದೊಂದು ಶ್ಲೇಷಾಲಂಕಾರದ ಅಪೂರ್ವ ಚಮತ್ಕೃತಿ. ಇಲ್ಲಿ ಆ ಶೇಷನೂ ಒಂದೇ ಹೆಡೆಯವನಲ್ಲ, ಮತ್ತೆ ! ಸಾವಿರ ಹೆಡೆಗಳುಳ್ಳವನು. 'ಸಾವಿರ' 'ಕೋಟಿ' ಎಂಬ ಅಂಕೆಗಳು ನಮ್ಮಲ್ಲಿ ಲೆಕ್ಕವಿಲ್ಲದಷ್ಟು, ಅನಂತ ಎಂಬುದರ ಸೂಚಕವಾಗಿದೆ. "ಸಹಸ್ರ

ಶೀರ್ಷಃ ಪುರುಷಃ' ಎಂಬ ಪುರುಷ ಸೂಕ್ತದ ಋಙ್ಮಂತ್ರದಲ್ಲಿ ಸಹಸ್ರವೆಂದರೆ ಅನೇಕ ಎಂಬರ್ಥವು ಸ್ಪಷ್ಟವಿದೆ. ಪರಮಾತ್ಮನು ಒರಗಿದ ಶೇಷನಿಗೆ ಸಾವಿರ ಹೆಡೆಗಳಂತೆ; ಮತ್ತೆ ಇದೂ ಅನಂತತ್ವದ ಸೂಚಕ. ಸಾಗರವು ಅನಂತತ್ವದ ನಿದರ್ಶಕವೆಂದು ಅನೇಕ ಉಪಮಾನಗಳಲ್ಲಿ ಮನಗಾಣಬಹುದು. ಕೃಪಾ-ಸಾಗರನೆಂದರೆ ತುಂಬ ಕೃಪೆಯುಳ್ಳವನು. ಸಾಗರವೂ ಅನಂತತ್ವದ ಸಂಕೇತವಾಗಿರುವುದರಿಂದ ಅನಂತನನ್ನು ಸಾಗರಶಾಯಿಯಾಗಿ ನಿರೂಪಿಸಿದ್ದಾಗಿದೆ. ವಿಶಾಲವಾದ ಆಕಾಶದ ಬಣ್ಣ ನೀಲ. ನೀಲವು ವಿಶಾಲತೆ, ಗಂಭೀರತೆ ನೆಲೆ ಇಲ್ಲದ ಆಳದ ಸೂಚಕವಾಗಿದೆ. ಆದುದರಿಂದಲೆ, ಪರಮಾತ್ಮನು ನೀಲವರ್ಣನೆಂದು ಹೇಳುವುದು ವಾಡಿಕೆಯಾಗಿದೆ. 'ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ.....' ಎಂದು (ಹೇಳುವ) ಹೊಗಳುವ ದೇವರನ್ನು ನೀಲವರ್ಣನೆಂದು ಹೇಳುವದು ವಿಚಿತ್ರ ಕಾಣುವಂತಿದೆ. ಸತ್ಯವು ಸ್ವಯಂಜ್ಯೋತಿಸ್ವರೂಪವು. ಜ್ಯೋತಿಯು ಶುಭ್ರ-ಧವಲ ವರ್ಣದ್ದು. ಆದುದರಿಂದ ಸತ್ಯಸ್ವರೂಪಿಯಾದ ಪರಮತತ್ವವು ಧವಲವರ್ಣದ್ದೆಂಬಲ್ಲಿ-ಶಶಿವರ್ಣದ್ದೆಂಬಲ್ಲಿ ಸಂದೇಹವೇ ಇಲ್ಲ. ಆದರೆ ಅದರ ಅನಂತತ್ವದ ಸೂಚನೆಗಾಗಿ ಆ ಒಳಗಣ್ಣಿಗೆ ಹೊಳೆ ಹೊಳೆವ ಮೂರ್ತಿಯ ದರ್ಶನವನ್ನು ಹೊರಗಣ್ಣಿನವರಿಗೂ ಮಾಡಿಸಿಕೊಡುವುದಕ್ಕಾಗಿ ಮೇಲೆ ಕಾಣಿಸಿದ ಹಲವು ಸಂಕೇತಗಳಿಂದ ಶ್ರೀ ಅನಂತನನ್ನು ಚಿತ್ರಿಸಿದ್ದಾರೆ.

ಈ ಸಂಕೇತಗಳು ತಿಳಿಯದವರಿಗೆ, ಹಳೆಯ ಅಕ್ಷರಗಳ ಪರಿಚಯ ಇಲ್ಲದವರಿಗೆ ಅರ್ಥಪೂರ್ಣವಾದ ಶಿಲಾಶಾಸನವೂ ಒಂದು ಕಲ್ಲೇ ಆಗಿರುವಂತೆ ಅನಂತನ ಚಿತ್ರವೂ ಅರ್ಥವಿಹೀನವೆನಿಸಿದರೆ ಸೋಜಿಗವೇನು?

'(ಸಹಸ್ರಶೀರ್ಷಃ) ಪುರುಷಃ... ಸಃ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠತ್ ದಶಾಂಗುಲಮ್' ಹೀಗೆ, ಋಕ್ಕುಗಳು ಹೊಗಳಿದ ವೇದಪುರುಷನು ಭಾವಗಮ್ಯನು; ಒಳಗಣ್ಣಿಗೆ ಕಾಣಿಸಿಕೊಳ್ಳುವ ಈತನನ್ನು ಹೊರಗಣ್ಣಿನವರಿಗೂ ದರ್ಶನ ಮಾಡಿಸಿದ ಈ ಶೇಷಶಾಯಿ ಅನಂತನ ಚಿತ್ರಶಿಲ್ಪಿಯ ಪ್ರತಿಭೆಯು ಅಪೂರ್ವವಾಗಿದೆ.

ಆದರು, ಅನಂತತ್ವದ ಈ ಪವಿತ್ರ ಹಾಗೂ ದಿವ್ಯವಾದ ನೆನಹು ಎಡೆಬಿಡದೆ ತಮ್ಮಲ್ಲಿ ಉಳಿಯುವುದಕ್ಕಾಗಿ ಈ ಚಿತ್ರಸಂಕೇತದೊಡನೆ 'ಸಹಸ್ರಶೀರ್ಷ' ಮಂತ್ರವನ್ನೂ ಮತ್ತು ಕೆಳಗಣ ಶ್ಲೋಕವನ್ನೂ ಅನುದಿನವೂ ನೆನೆಯುತ್ತಿರಬೇಕು.

'ನಮೋಽಸ್ತ್ವನಂತಾಯ ಸಹಸ್ರ-ಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟಿ ಯುಗಧಾರಿಣೇ ನಮಃ'

ಯಕ್ಷಪ್ರಶ್ನೆ

ಅಥವಾ

ಬರಲಿರುವ ಸಮಾಜ

ಅರಿಕೆ

ಈಗ ಜೀವಕ್ಕೆ ಸ್ವಲ್ಪ ಸಮಾಧಾನ. ಎರಡು ವರುಷಗಳಿಂದ ಇದ್ದ ವಿಚಾರದ ಒತ್ತಡವು ಈ ಪ್ರಕಟಣೆಯಿಂದ ಅದೆಷ್ಟೊ ಕಡಿಮೆಯಾಯಿತು. ಪ್ರಕಟಿಸುವ ಸಾಹಸಕ್ಕೆ ಎಂತೂ ಕೈಯಿಕ್ಕಿದ್ದು ಈ ಕಾರಣದಿಂದಲೇ. ಇದರಲ್ಲಿಯ ಜಳ್ಳು ಹಾರಿಹೋಗಲಿ; ಗಟ್ಟಿಯಿದ್ದರೆ ಉಳಿಯಲಿ. ಸ್ವಾತಂತ್ರ್ಯವೇ ಹೆಗ್ಗುರಿಯಾಗಿದ್ದರೆ, ಈಗಿನ ಸಮಾಜರಚನೆಯಲ್ಲಿ ಕೆಲವೊಂದು ಮಾರ್ಪಾಟಗಳು ಅನಿವಾರ್ಯವೆಂದು ನನ್ನ ಮನವರಿಕೆಯಾಗಿದೆ. ಸ್ವಾತಂತ್ರ್ಯವಂತೂ ಬೇಕು; ಮಾರ್ಪಾಟಗಳು ಮಾತ್ರ ಬೇಡವೆಂಬುದು ರೂಢಿಯ ಜನದ ರೀತಿಯಾಗಿದೆ. ಜನಗಳಲ್ಲಿ ಈ ಪರಸ್ಪರ ವಿಸಂಗತಿಯ ಅರಿವು ಉಂಟಾಗದಿದ್ದರೆ ದೊರೆತ ಸ್ವಾತಂತ್ರ್ಯಕ್ಕೆ ಬೇಗನೆಯೆ ಎರವಾಗುವಲ್ಲಿ ಸಂದೇಹವಿಲ್ಲ.

ಈ ಕಾರಣದಿಂದಲೆ, ಸಂಧಿ ದೊರೆತಾಗಲೆಲ್ಲ ಇದನ್ನು ವಿಚಾರಿಗಳೊಡನೆ ಚರ್ಚಿಸುವುದು ಕರ್ತವ್ಯವೆನಿಸಿತು. ೧೯೪೬ರ ನಾಡಹಬ್ಬದಲ್ಲಿ ಹುಬ್ಬಳ್ಳಿ ಮತ್ತು ರಾಣೇಬೆನ್ನೂರುಗಳಲ್ಲಿ ಇದನ್ನು ಕುರಿತು ಮಾತನಾಡಿ ಜನಾಭಿಪ್ರಾಯ ತಿಳಿಯಲು ಯತ್ನಿಸಿದೆ. ಕಳೆದ ವರುಷ ವಿಜಾಪುರದ ದರ್ಬಾರ ಹೈಸ್ಕೂಲಿನ ವಾರ್ಷಿಕ ಸ್ನೇಹಸಮ್ಮೇಳನದ ಅತಿಥಿಯೆಂದು ಕರೆದಾಗ ಈ ವಿಚಾರಗಳನ್ನು ಸ್ವಲ್ಪದರಲ್ಲಿ ತರುಣರ ಎದುರು ಇರಿಸಲು ಎಡೆ ದೊರೆತಿತು. ಬಳಿಕ ಹಾವೇರಿಯ ನಾಡಹಬ್ಬದಲ್ಲೂ, ಮೈಸೂರಿನ ಇಂಟರ್ ಮಿಡಿಯೆಟ್ ಕಾಲೇಜಿನ ಕರ್ಣಾಟಕ ಸಂಘದ ಆರಂಭೋತ್ಸವದಲ್ಲೂ, ಪುತ್ತೂರಿನ ಸ್ವರಾಜ್ಯ ಸಪ್ತಾಹದಲ್ಲೂ 'ಮುಂಬರುವ ಸಮಾಜ'ವನ್ನು ಕುರಿತು ಚರ್ಚಿಸುವುದಕ್ಕೆ ಅವಕಾಶಸಿಕ್ಕಿತು. ಇದೇ ವರುಷ ಮಾರ್ಚ್ ಕೊನೆಯಲ್ಲಿ ಗದಗು ಸಮಿತಿ ಸ್ಕೂಲಿನ ಕುಮಾರವ್ಯಾಸ ಬಳಗದಲ್ಲಿ 'ಯಕ್ಷ-ಪ್ರಶ್ನೆ'ಗಳನ್ನು ವಿವರಿಸಿದ್ದಾಯಿತು. ಈ ಮಧ್ಯೆ ಜಯಂತಿ, ಜಯಕರ್ನಾಟಕ, ಸುಬೋಧಗಳಲ್ಲಿ ಕೆಲವು ಮಾತುಗಳನ್ನೆತ್ತಿ ಚರ್ಚಿಸಿದೆ. ಇವೆಲ್ಲ ಸಂಘ-ಸಂಸ್ಥೆ ಮತ್ತು ಪತ್ರಿಕೆಗಳ ಸಂಚಾಲಕರು ವಿಚಾರ-ಚರ್ಚೆಗಳಿಗೆ ಸಂಧಿಯನ್ನು ಕಲ್ಪಿಸಿ ಕೊಟ್ಟುದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ.

ಪೂಜ್ಯ ಬಾಪೂಜೀಯವರ ಘೋರ ಹತ್ಯಾಕಾಂಡದ ತರುವಾಯ, ಇತ್ತೀಚೆಗೆ, ಜಾತೀಯತೆಯು ನಷ್ಟವಾಗಲೇಬೇಕೆಂಬ ಕೂಗು ಎಲ್ಲೆಡೆಗೂ ಕಿವಿಗಡಚಿಕ್ಕುವಷ್ಟು ಕೇಳಬರುತ್ತಿದೆ. ಆದರೆ, ಪಕ್ಷಗಳ ಜಯಘೋಷ, ಉದ್ಘೋಷಗಳಂತೆ ಇದೂ ಒಂದು ಹೊಣೆಗಾರಿಕೆಯ ಅರಿವುಯಿಲ್ಲದೆ ಕೇವಲ ಕಿರಿಚಿ ಬಿಡುವ ಆರ್ಚಿಗಳ ಕೂಗು ಆಗದಿರಲಿ. ಏಕೆಂದರೆ ಜಾತೀಯತೆಯ ಲಾಭ ಪಡೆದು ಸಂಧಿಸಾಧಿಸಿಕೊಳ್ಳುವ 'ದುಷ್ಟಬುದ್ಧಿ'ಗಳು ಪಾಪಿಗಳಂತೆ ಸಮಾಜದಿಂದ ಇನ್ನೂ ತಿರಸ್ಕೃತರಾಗಿಲ್ಲ. ಪತ್ರಿಕೆಗಳಲ್ಲಿ ಜಾತೀಯತೆಗೆ ಪುಟಗೊಡುವ ಸುದ್ದಿ, ವಿಚಾರ, ಬರೆಹಗಳು ಬಗೆಬಗೆಯ ರೂಪದಲ್ಲಿ ತೆರಪಿಲ್ಲದೆ ಬರುತ್ತಲೆ ಇವೆ!

ಕೆಲಸ ಕೆಡಿಸಬೇಕಿದ್ದರೆ ಕೆಣಕಿ ಆಡಬೇಕು. ಒಬ್ಬರೊಬ್ಬರು ಕೂಡಿ ಶಾಂತಿ-ಸೌಖ್ಯದಿಂದ ಬಾಳಬೇಕೆಂದು ಹಾರಯಿಸುತ್ತಿದ್ದಲ್ಲಿ, ಅಂತಹರು, ಒಬ್ಬರೊಬ್ಬರ ಅಭಿಮಾನವನ್ನು ಕೆರಳಿಸುವುದರಿಂದ ಸುಖಜೀವನದ ತಮ್ಮ

ಮೂಲೋದ್ದೇಶವನ್ನು ತಾವೇ ಹಾಳುಮಾಡಿಕೊಳ್ಳುವರು; ದ್ವೇಷ, ದುಃಖಗಳಿಗೆ ಆಮಂತ್ರಿಸುವರು. ತಾವು ಧೀಮಂತರೆಂಬ ಹೆಮ್ಮೆಯಿಂದ ಉಳಿದವರನ್ನು ಹೀಯಾಳಿಸಿ ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿಡಬೇಕೆಂಬ ಹಂಬಲದ ಹಾರುವರು, ಬಹುಮತದ ಅಂಹಕಾರದಿಂದ ಉಳಿದವರ ಗುಣಾವಗುಣಗಳ ಎಗ್ಗಿಲ್ಲದೆ ಎಲ್ಲರ ತಲೆಮೆಟ್ಟಿ ತುಳಿಯಲು ಹಾತೊರೆವ ಬಹುಸಂಖ್ಯಾಕರ ಜಾತಿವಾದಿಗಳು, ಇಬ್ಬರೂ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಹಾಳುಮಾಡುವುದಕ್ಕೆ ಹೊರಟ ನರರಾಕ್ಷಸರೆ ಸರಿ. 'ನೀವು ಕೆಳಗಿನವರು' ಎಂದೊಡನೆ 'ನಮಗೆ ಕೀಳರೆಂಬ ನಿಮ್ಮ ಮೂಲವೇನು ಗೊತ್ತೇ?' ಎಂಬ ಮಾರ್ನುಡಿ ಬಂತೆ. 'ಇದೆ ನಿಮ್ಮ ಕಾರ್ಯಕ್ಷೇತ್ರ' ಎಂದು ವಿಧಿಸುವ ವಾಕ್ಯಕ್ಕೆ 'ನಾವು ಅದರಿಂದ ಹೊರಬರತಕ್ಕವರೆ' ಎಂಬ ಪ್ರತಿಕ್ರಿಯೆ ನಿಶ್ಚಿತ. 'ನೀವು ಇಲ್ಲಿ ಅಡಿಯಿಡಲಾಗದು' X 'ನಾವು ಬಂದೇ ಬಿಡತಕ್ಕವರು.' 'ನೀವು ನಮ್ಮನ್ನು ಮುಟ್ಟಿಸಿಕೊಳ್ಳಲೇಬೇಕು' X 'ಪ್ರಾಣತ್ಯಾಗಮಾಡಬಹುದು; ಹತ್ತಿರ ಹಾಯಗೊಡಲಿಕ್ಕಿಲ್ಲ'....... ಯಾರಿಗೆ ಯಾರು ಹೆದರಿ ಜಾತಿಯನ್ನು ಬಿಡುವ ಪ್ರಶ್ನೆಯೆ ಈಗ ಇಲ್ಲ. ಜಾತಿ-ಧರ್ಮಕ್ಕಿಂತಲೂ ರಾಷ್ಟ್ರೀಯ ಸ್ವಾತಂತ್ರ್ಯವು ಮಿಗಿಲಾದುದೆಂಬದು ನಿಜವಿದ್ದರೆ ಅದಕ್ಕಾಗಿ ಎಲ್ಲರೂ ತಮ್ಮ ಜಾತಿಯ (ಧರ್ಮದ) ಹೆಮ್ಮೆಯ ತ್ಯಾಗಮಾಡುವುದು ಆದ್ಯಕರ್ತವ್ಯವಾಗುವುದಿಲ್ಲವೆ?

ಬ್ರಾಹ್ಮಣದ್ವೇಷದ ಭೂತಕ್ಕೆ ಧೂಪಹಾಕಿ ಆ ಸೈತಾನೀ ಪ್ರಳಯದಲ್ಲಿ ಸಾವಿರಾರು ನಿರಪರಾಧೀ ಜೀವಿಗಳ ಜೀವಿತ-ವಿತ್ತದ ಧ್ವಂಸಮಾಡಿಸಿದ್ದಾಯಿತು. ಈ ಬಗೆಯ ಆಸುರೀಕೃತ್ಯಗಳಿಂದ ಬ್ರಾಹ್ಮಣರನ್ನು ಬಗ್ಗಿಸಬಹುದೆಂದು ಯಾರಾದರೂ ಭಾವಿಸಿದ್ದರೆ ಅದು ಅವರ ಬುದ್ಧಿಹೀನತೆಯ ಸಾಕ್ಷಿ. ಜಾತ್ಯಭಿಮಾನವನ್ನು ತೊರೆಯಬೇಕೆಂದು ಹಾರಯಿಸುತ್ತಿದ್ದ ಅನೇಕ ಹಾರುವರೂ ಉರಿದೆದ್ದು ರಾಷ್ಟ್ರೀಯ ದೃಷ್ಟಿಯು ಮಂದವಾಗಿ ಮತ್ತೆ ಜಾತ್ಯಂಧರಾಗುವ ಹೆದರಿಕೆಯುಂಟಾಗಿದೆ. ಆದರೆ, ಇದೂ ಅಸಮಂಜಸವೇ?. ಜಾತೀಯ ದಾರಿಯು ರಾಷ್ಟ್ರೀಯ ಸ್ವಾತಂತ್ರ್ಯದತ್ತ ಒಯ್ಯುವದಿಲ್ಲ. ಜಾತಿಯೆ ಅದರ ಆದಿ; ಜಾತಿಯೆ ಅದರ ಅಂತ್ಯ. ಜಾತಿಯನ್ನು ಹಿಡಿದುಕೊಂಡು ರಾಷ್ಟ್ರದ ಸಮಸ್ಯೆ ಬಿಡಿಸುವುದಾದರೆ ಆಡಳಿತದಲ್ಲಿ ಜಾತಿಯ ಪ್ರಾತಿನಿಧ್ಯ ಒಪ್ಪಿಕೊಳ್ಳಲೇಬೇಕು. ಭಾರತದೊಳಗಿನ ಜಾತಿಗಳಿಗೆಲ್ಲ ಪ್ರಾತಿನಿಧ್ಯವನ್ನು ಕೊಟ್ಟು ಆಡಳಿತ ಸಾಗಿಸುವುದು ಸಾಧ್ಯವೋ? ಗುಣಕ್ಕಿಂತಲೂ ಜಾತಿಯ ಹೆಸರಿನಲ್ಲಿ ಆರಿಸಿ ಬಂದ ವ್ಯಕ್ತಿ, ಅಂತರ್‌ರಾಷ್ಟ್ರೀಯ ರಂಗದಲ್ಲಿ ಬೇರೆ ದೇಶಗಳ ಕಾರ್ಯಕುಶಲರ ಎದುರು ಬೆಪ್ಪಾಗಿ ನಾಡಿಗೆ ಕೇಡು ಒದಗದೆ ಇದ್ದೀತೆ? ಆದುದರಿಂದ, ಭಾರತದ ಏಳ್ಗೆಯನ್ನು ಹಾರಯಿಸುವವರು ರಾಷ್ಟ್ರೀಯ ದೃಷ್ಟಿಯನ್ನು ದೃಢಪಡಿಸಿಕೊಂಡು, ಯಾರು ಎಷ್ಟು ಕೆಣಕಿದರೂ ಜಾತ್ಯಂಧತೆಯು ಆವರಿಸದಂತೆ ದೃಢವ್ರತಿಗಳಾಗುವುದು ಕರ್ತವ್ಯವಾಗಿದೆ. ಗುಣ, ಕರ್ತೃತ್ವಶಕ್ತಿಗೆ ತಕ್ಕ ಸ್ಥಾನಮಾನಗಳು, ಕೇವಲ ಬ್ರಾಹ್ಮಣನೆಂಬುದಕ್ಕಾಗಿಯೇ ದೊರೆಯದವರುಂಟು. ಬ್ರಾಹ್ಮಣನು; ಆದುದರಿಂದ ತಾನು ಬುದ್ಧಿವಂತ, ಗುಣಿಯೆಂದು ಅನೇಕ ಸ್ಥಳಗಳಿಗೆ ಆಸೆಪಡುವ ಅಥವಾ ಆ ಸ್ಥಳಗಳನ್ನು ಸಹಜವಾಗಿ ಆಕ್ರಮಿಸುತ್ತಿದ್ದ ಹಾರುವರುಂಟು. ಇಂತಹರಲ್ಲಿ ಕೆಲರು ನಿರಾಶೆಯ ಮಬ್ಬಿನಲ್ಲಿ ಆಡುವ ಮಾತುಗಳು ತಮಗೂ ರಾಷ್ಟ್ರಕ್ಕೂ ಯಾರಿಗೂ ಕಲ್ಯಾಣಕರವಾಗಿರುವುದಿಲ್ಲ. 'ಕೊನೆಗೆ ಬ್ರಾಹ್ಮಣನೇ ಮೊದಲನೆಯ ಗವ್ಹರ್ನರ ಜನರಲ್; ಮೊದಲನೆಯ ಪ್ರಧಾನಮಂತ್ರಿ! ಆಯ್ತೊ ಇಲ್ಲೊ?' ಎಂದು ಉಸುರಿ ವಿಚಿತ್ರ ಸಮಾಧಾನ ಹಚ್ಚಿಕೊಳ್ಳುವವರುಂಟು!

ಇದು ವಿವೇಕಶೂನ್ಯಮಾತು. ಇದರಲ್ಲಿ ಎರಡು ಬಗೆಯ ಅವಿಚಾರವುಂಟು. ಮೊದಲನೆಯದು, ರಾಜಾಜಿ-ಜವಾಹರಲಾಲರು ಬ್ರಾಹ್ಮಣರೆಂದು ಆನಂದಿಸುವವರನ್ನೆ ಇನ್ನೊಂದು ಪ್ರಸಂಗದಲ್ಲಿ ಕೇಳಿನೋಡಿ; ಅವರನ್ನು ಬ್ರಾಹ್ಮಣರೆಂದು ಒಪ್ಪಿಕೊಳ್ಳಲಿಕ್ಕೆ ಈಜನ ಸಿದ್ಧವಿರುವುದಿಲ್ಲ. ಬೇಕಾದ ಜಾತಿಯವರೊಡನೆ ಊಟ ಉಡಿಗೆಗೆ, ಬೀಗತನಕ್ಕೆ ಅಡ್ಡಿಯಿರದ ರಾಜಾಜಿ, ಪಂಡಿತಜಿಯವರು ಬ್ರಾಹ್ಮಣರೆಂದು ಹಿಗ್ಗುವ ಶರಣರು ತಾವು ಅವರಂತೆ ಆಚರಿಸಲಿಕ್ಕೆ ಸಿದ್ಧರಿರುವರೊ? ರಾಜಾಜಿ-ಪಂಡಿತಜಿಯವರಂತೆ ತಮ್ಮ ನಾಡಿನಲ್ಲಿ ನೆಲೆಸಿರುವವರನ್ನೆಲ್ಲ ನಿಜವಾಗಿಯೂ ಬಾಂಧವರೆಂದು ಸ್ವೀಕರಿಸಲು ಸಿದ್ಧರಾದವರಿಗೆ ಬ್ರಾಹ್ಮಣ, ವೀರಶೈವಾದಿ ಒಣ ಹೆಮ್ಮೆಯ ಬಿಂಕವು ಎಂದೂ ಸೋಂಕಲಾರದು. ಎಲ್ಲರೂ ಹೀಗೆ ನಡೆದುಕೊಳ್ಳಲಾರಂಭಿಸುತ್ತಲೆ ಜಾತಿಯ ಜಗಳಗಳ ಇಂದಿನ ಆಸುರೀ ಸ್ವರೂಪವು ನಷ್ಟವಾಗುವುದು. ಗುಣಕ್ಕೆ ಮನ್ನಣೆ ಬರುವುದು.

ಇನ್ನೊಂದು ಅವಿಚಾರವೆಂದರೆ, ಜಾತಿಭೇದದಿಂದ ದೂರ ಹೊರಟವರನ್ನೂ ಮತ್ತೆ ಜಾತಿಯ ತ್ತೊಡಕಿನಲ್ಲಿ ತಂದು ಅವರ ಕಾರ್ಯ ಘಾತಮಾಡುವುದು! ಚುನಾವಣೆಗಳ ಕಾಲದಲ್ಲಿ ರಾಜಾಜಿ-ಪಂಡಿತಜಿಯಂತಹರನ್ನು ಬ್ರಾಹ್ಮಣರೆಂದು ನೆಪಹೇಳಿ ಹಿಂದಿಕ್ಕಬೇಕೆಂಬ ಜಾತಿದ್ವೇಷಿ ಪಿಶಾಚಿಗಳಿಗೆ ಇವರೂ ಬೆಂಬಲಿಗರಾಗಿ ದನಿಗೂಡಿಸಿದಂತಾಗುವುದಿಲ್ಲವೆ? ಆದುದರಿಂದ ಜಾತಿಯ ಈರ್ಷೆಯ ಮಾತುಗಳಿಂದ ಲಾಭವಂತೂ ಯಾರಿಗೂ ಇಲ್ಲ. ಹಾನಿಯೆ ವಿಶೇಷ. ಜಾತಿನಿರ್ಮೂಲನದ ಆಂದೋಲನವು, ಅಸಹಕಾರದ ಅಂಗವಾಗಿ ಹರಿಜನೋದ್ಧಾರದೊಡನೆಯೆ ವ್ಯಕ್ತವಾಗಿ ಆರಂಭವಾಗಬೇಕಾಗಿತ್ತು. ಈಗ ಅದಕ್ಕೆ ಸ್ಪಷ್ಟವಾಗಿ ಬಾಯಿಯೊಡೆದಿದೆ. ಬಿತ್ತಿಗೆಯಾದ ಮರುದಿನವೆ ತೆನೆಯಾಗುವುದಿಲ್ಲ, ಕಾಯಬೇಕು. ಕಾಯದೆ ಕಾಯಾಗದು. ಸಮಾನ ಸ್ಥಿತಿಗತಿಯವರಲ್ಲಿ ಸಂಪರ್ಕ-ಸಂಬಂಧ. ಕಾರಣ-ಕಾರ್ಯಗಳು ಹೆಚ್ಚಿದಂತೆ ಜನ್ಮದಿಂದಿರುವ ಭೇದಭಾವವು ಅಳಿಯುವುದು. ವೈಷಮ್ಯ ಬುದ್ಧಿಯು ಮುಂದಿನ ಪೀಳಿಗೆಗೆ ಕ್ರಮವಾಗಿ ಕಡಿಮೆಯಾಗುವುದು.

ಬುದ್ಧಿ, ಭಾವನೆ ಮತ್ತು ಸಂಕಲ್ಪ, ಈ ಮೂರರ ಬೆಂಬಲದಿಂದ ಆದುದೆ ಸಮರ್ಪಕವಾದ ಕ್ರಿಯೆ. ಬುದ್ಧಿ ಹೆಳವ. ಹೀಗಾಗುವುದು ಲೇಸೆಂದು ಬರಿ ಹೇಳಬಲ್ಲುದು. ಬುದ್ಧಿಗೆ ಭಾವನೆಯ ಕಾವು ಇಲ್ಲದೆ ಕೆಲಸವಾಗದು. ಬರಿ ಭಾವನೆ ಕುರುಡ; ಅಥವಾ ಹುಂಬ; ಎಂಜಿನ್ ಶಕ್ತಿಯಿದ್ದಂತೆ. ಅದನ್ನು ಅಂಕೆಯಲ್ಲಿರಿಸುವ ಸಾಧನವಾದ ಬುದ್ಧಿಯ ನೆರವು ಇಲ್ಲದಲ್ಲಿ ಭಾವನೆಯು ಮನುಷ್ಯನನ್ನು ಅವಿಚಾರದ ಮಾರ್ಗದಲ್ಲಿ ನೂಕದಿರದು. ಬುದ್ಧಿ ಭಾವನೆಗಳಿಗೆ ಸಂಕಲ್ಪಶಕ್ತಿಯ ಸತತ ಪ್ರೇರಣೆಯು ದೊರೆತರೆ ಆ ಕಾರ್ಯವು ಮುಂದುವರೆಯುವುದು. ಇದೇ ಕ್ರತು. ರಾಷ್ಟ್ರೀಯ ಭಾವನೆಯು ಬಲಗೊಂಡು ಜಾತ್ಯತೀತ ಸಮಾಜ ನಿರ್ಮಾಣಕ್ಕಾಗಿ ಮಾಡುವ ಸಂಕಲ್ಪಶುದ್ಧಿಗಾಗಿ ಅದರ ವೈಚಾರಿಕ ಭೂಮಿಕೆಯು ಸ್ಪಷ್ಟವಾಗಬೇಕಾಗುತ್ತದೆ. ಇದನ್ನು ವಿವರಿಸುವುದೆ ಈ ಲೇಖನದ ಗುರಿ.

ಇದನ್ನು ಬರೆಯುವಾಗ ಡಾ. ಘುರ್ಯೆ, ಶ್ರೀ ದಿವೇಕರ, ಬಳ್ಳುಂಜೆಯವರ ಪುಸ್ತಕಗಳು ಸಹಾಯಕವಾದುವು. ಆದರೂ ಮಹಾಮಹೋಪಾಧ್ಯಾಯ ಕಾಣೆ ಪಿ. ವಿ. ಯವರ History of Dharmashastras ಎಂಬ ಮಹಾಗ್ರಂಥದಿಂದ ಪಡೆದ ಲಾಭವು ವಿಶೇಷ. ಅವರಿಗೆಲ್ಲ ವಂದನೆಗಳು.

ಶಂ. ಬಾ. ಜೋಶಿ

ವಿಚಾರ ಸೂತ್ರ

ಸತ್ಯಂ (ಜ್ಞಾನಂ ಅನಂತಂ) ಬ್ರಹ್ಮ ।

Truth is God.

ಪುರುಷ ಏವೇದಂ ಸರ್ವಂ ಯದ್ ಭೂತಂ ಯಚ್ಚ ಭವ್ಯಂ ।

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ।

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಮಂ ಪಶ್ಯನ್ ಆತ್ಮಯಾಜೀ ಸ್ವಾರಾಜ್ಯಮ್ ಅಧಿಗಚ್ಛತಿ ॥

ಅಹಂ ಸರ್ವೇಷು ಭೂತೇಷು ಭೂತಾತ್ಮಾದಾಸ್ಥಿತಃ ಸದಾ ।
ತಮವಜ್ಞಾಯ ಮಾಂ ಮರ್ತ್ಯಃ ಕುರುತೇಽರ್ಚಾ ವಿಡಂಬನಮ್ ॥

ಯೋ ಮಾಂ ಸರ್ವೇಷು ಭೂತೇಷು ಸಂತಮಾತ್ಮಾನಮೀಶ್ವರಮ್ ।
ಹಿತ್ವಾರ್ಚಾಂ ಭಜತೇ ಮೌಢ್ಯಾತ್ ಭಸ್ಮನ್ಯೇವ ಜುಹೋತಿ ಸಃ ॥

ಅಪಹಾಯ ನಿಜಂ ಕರ್ಮ ಕೃಷ್ಣ ಕೃಷ್ಣೇತಿ ವಾದಿನಃ ।
ತೇ ಹರೇರ್ ದ್ವೇಷಿಣಃ ಪಾಪಾಃ ಧರ್ಮಾರ್ಥಂ ಜನ್ಮ ಯತ್ ಪರೇಃ ॥

ಸರ್ವಸ್ಯೈವ ಜನಸ್ಯಾಸ್ಯ ವಿಷ್ಣುರಭ್ಯಂತರೇ ಸ್ಥಿತಃ ।
ತಂ ಪರಿತ್ಯಜ್ಯ ಯೇ ಯಾಂತಿ ಬಹಿರ್ವಿಷ್ಣುಂ ನರಾಧಮಾಃ ॥
ಪರಸ್ಪರಂ ಭಾವಯಂತಃ ಶ್ರೇಯಃ ಪರಂ ಅವಾಪ್ಸ್ಯಥ ॥

ಸತ್ಯಾನ್ನಾಸ್ತಿ ಪರೋ ಧರ್ಮಃ ।
ಯದ್ಭೂತಹಿತಂ ಅತ್ಯಂತಂ ಏತತ್ ಸತ್ಯಂ ಮತಂ ಮಮ ॥

In all possibility of things there is and can be but one misery is nature and creature left to itself, the one happiness is the Life, the Light, the Spirit of God, manifested in nature and creature, this is the true meaning of the words of our Lord : There is but one that good and that is god.

ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ।
ಸ್ವಲ್ಪಂ ಅಪಿ ಅಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ।
ಲೋಕಾಃ ಸಮಸ್ತಾಃ ಸುಖಿನೋ ಭವಂತು ॥

ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ।

ಯಕ್ಷಪ್ರಶ್ನೆ

'ವ್ಯಾಸರು ಮಹಾಭಾರತದ ನಿಮಿತ್ತದಿಂದ ಮಾನವನ ಸನಾತನ ಇತಿಹಾಸವನ್ನು ಬರೆದಿರುವರು,' ಎಂದು ಮಹಾತ್ಮಾಜೀಯವರು ಒಂದು ಸಂದರ್ಭದಲ್ಲಿ ಹೇಳಿದ್ದು ಯಥಾರ್ಥದ ಸಂಗತಿಯಾಗಿದೆ. ಮಹಾಭಾರತಾಂತರ್ಗತ ಯಕ್ಷಪ್ರಶ್ನೆಯ ಪ್ರಸ್ತುತ ಕತೆಯಲ್ಲಿಯೂ ಮಹಾತ್ಮಾಜಿಯವರ ಈ ಮಾತಿನ ಅನುಭವವು ಬರುತ್ತದೆ.

ಪಾಂಡವರು ವನವಾಸದಲ್ಲಿ ಇದ್ದಾಗ ಅವರು ವಾಸಿಸುತ್ತಿದ್ದ ಅಡವಿಯೊಳಗಿನ ಒಬ್ಬ ಬ್ರಾಹ್ಮಣನ ಅರಣಿಗಳನ್ನು ಒಂದು ಕೃಷ್ಣಸಾರಮೃಗವು ಕೊಂಡು ಓಡಿಹೋಯ್ತು. ಬ್ರಾಹ್ಮಣನ ಅಗ್ನಿಹೋತ್ರವು ಎಂದೂ ಲೋಪವಾಗಬಾರದು. ಅರಣಿಗಳೇ ಹೋದುದರಿಂದ ತನ್ನ ಅಗ್ನಿಸೇವೆಯೇ ಕಟ್ಟಾಗುವ ಹೊತ್ತು ಬಂದಿದೆ, ಏನು ಮಾಡಲಿ? ಎಂದು ಆ ಬ್ರಾಹ್ಮಣನು ಧರ್ಮನಲ್ಲಿಗೆ ದೂರುತಂದನು. ಕ್ಷತ್ರಧರ್ಮಕ್ಕನುಸರಿಸಿ ಧರ್ಮನು ಆ ಬ್ರಾಹ್ಮಣನ ಧರ್ಮಕಾರ್ಯಕ್ಕೆ ನೆರವಾಗುವುದು ತನ್ನ ಕರ್ತವ್ಯವೆಂದು ಬಗೆದು ತಮ್ಮಂದಿರೊಡನೆ ಅರಣಿಯನ್ನು ಹುಡುಕಿಕೊಂಡು ಬರುವುದಕ್ಕಾಗಿ ಹೊರ ಹೊರಟನು.

ಅರಣಿಯನ್ನು ಹುಡುಕಲು ಅಡವಿಯನ್ನು ಅಲೆಯುತ್ತಿರುವಾಗ ಪಾಂಡವರಿಗೆ ನೀರಡಿಕೆಯಾಯ್ತು. ಧರ್ಮನು, ನಕುಲನಿಗೆ ಸಮೀಪದಲ್ಲಿ ಎಲ್ಲಿಯಾದರೂ ನೀರಿದೆಯೆ ಎಂಬುದನ್ನು ಮರವನ್ನೇರಿ ನಿರೀಕ್ಷಿಸಲು ಬಿನ್ನವಿಸಿದನು. ಹತ್ತಿರದಲ್ಲಿಯೇ ಇರುವ ಒಂದು ಮರವನ್ನೇರಿ ನಕುಲನು ಸುತ್ತಲೂ ನಿಡಿದಾಗಿ ನೋಡುವಷ್ಟರಲ್ಲಿ ಅನತಿ ದೂರದಲ್ಲಿಯೆ ನೀರಿನ ಆಶ್ರಯದಿಂದ ಬೆಳೆದ ಹಲವು ಮರಗಳು ಕಂಡವು. ಸಾರಸಪಕ್ಷಿಗಳೂ ಅಲ್ಲಿ ಹಾರಾಡುತ್ತಿರುವುದು ಕಾಣಿಸಿತು. ಆದುದರಿಂದ ಅಲ್ಲಿ ಸರೋವರವು ಇರಲೇಬೇಕೆಂದು ನಿರ್ಧರಿಸಿ ಹೇಳಿದನು. ಅಣ್ಣನ ಅಪ್ಪಣೆಯಂತೆ ನೀರುತರಲು ಕೊಳಕ್ಕೆ ಹೊರಟನು. ನೀರಡಿಸಿದುದರಿಂದ ತಾನೂ ಕುಡಿದು ಅಣ್ಣಂದಿರಿಗೂ ಒಯ್ಯಬೇಕೆಂದು ಕೊಳದೊಳಗೆ ಕಾಲಿಟ್ಟನು. ಅಷ್ಟರಲ್ಲಿ ಒಂದು ಬಾನುಲಿಯು ಕೇಳಬಂದಿತು; 'ತಮ್ಮಾ, ಈ ಜಲಾಶಯದ ಮೇಲಿನ ಒಡೆತನವು ನನ್ನದು. ನನ್ನ ಒಪ್ಪಿಗೆಯಿಲ್ಲದೆ ಇಲ್ಲಿ ಯಾರೂ ನೀರು ಕುಡಿಯಲಾರರು. ನಿನಗೆ ನೀರು ಬೇಕಾಗಿದ್ದರೆ ಮೊದಲು ನನ್ನ ಪ್ರಶ್ನೆಗಳಿಗೆ ಉತ್ತರಕೊಡು.' ನಕುಲನು ಅದಾವುದನ್ನೂ ಕಿವಿಯದೆ ನೇರವಾಗಿ ನೀರು ಮೊಗೆಯ ಹೋದನು. ಆ ಗಳಿಗೆಯಲ್ಲಿ ಅರಿವು ಹಾರಿ ನೆಲಕ್ಕುರುಳಿದನು.

ತಮ್ಮನು ಇನ್ನೂ ಬಾರದ್ದನ್ನು ನೋಡಿ ಧರ್ಮನು ಸಹದೇವನಿಗೆ ತಮ್ಮನನ್ನೊಡಗೊಂಡು ನೀರುತರಲು ಸೂಚಿಸಿದನು. ಆತನು ಜಲಾಶಯವನ್ನು ಸೇರಿ ನೀರಿಗೆ ಇಳಿಯುವಷ್ಟರಲ್ಲಿ ತಮ್ಮನು ನಿಶ್ಚೇಷ್ಟಿತನಾಗಿ ಅಲ್ಲಿ ಬಿದ್ದಿರುವುದು ಕಂಡಿತು. ಸೋಜಿಗವಾಯಿತು. ಆದರೂ ನೀರಿಲ್ಲದೆ ಬದುಕಲಾರ. ನೀರು ಕುಡಿಯಹೋದನು.

ಮತ್ತೆ ಹಿಂದಿನ ಮಾತುಗಳೆ ಅಂತರಿಕ್ಷದೊಳಗಿಂದ ಕೇಳಬಂದುವು. ನೀರು ದೊರಕಿಸುವ ಅವಸರದಲ್ಲಿ ಸಹದೇವನೂ ಆ ನುಡಿಯನ್ನು ಗಮನಿಸಲಿಲ್ಲ. ನೀರು ಗಂಟಲಿನಲ್ಲಿ ಇಳಿವಷ್ಟರಲ್ಲಿ ಅದು ವಿಷವಾಗಿ ಪರಿಣಮಿಸಿತು. ಆತನೂ ಮೂರ್ಚ್ಛಿತನಾಗಿ ಬಿದ್ದನು.

ಆಗ, ನೀರಿಗಾಗಿ ಹೊರಡುವ ಅರ್ಜುನನ ಸರತಿಬಂತು. ಅರ್ಜುನನಿಗೆ ತಾನು ಲೋಕೈಕವೀರನೆಂಬ ಹೆಮ್ಮೆ ಬೇರೆ! ಸರೋವರಕ್ಕೆ ಬಂದನು. ತಮ್ಮಂದಿರ ಹೆಣಗಳು ಕಾಣಿಸಿದುವು .ಆತನಿಗೆ ಮೊದಲು ಅಚ್ಚರಿ. ತನ್ನ ತಮ್ಮಂದಿರನ್ನು ಸಾಯಿಸಿದ ಸಾಸಿಗನಾರೆಂದು ಸೋಜಿಗಪಟ್ಟನು. ಮೊದಲು ನೀರು ಕುಡಿದು ಬಳಿಕ ತಮ್ಮಂದಿರನ್ನು ಕೊಂದವನಿಗೆ ಕೈತೋರುವೆನು. ಆ ನೀಚನು ತನ್ನ ಕೂದಲೆಳೆಯನ್ನೂ ಕೊಂಕಿಸಲಾರನು ಎಂಬ ಗರುವತನದಲ್ಲಿ ಆತನು ನೀರು ಕುಡಿಯಹೋದನು. ಆಗ ಮತ್ತೆ ಅದೇ ಆ ಅಜ್ಞಾತ ಸೊಲ್ಲು! 'ಅರ್ಜುನಾ, ನನ್ನ ಪ್ರಶ್ನೆಗಳಿಗೆ ಉತ್ತರಕೊಡದೆ ನಿನಗೆ ಜೀವನವಿಲ್ಲ. ಬಲುಮೆಯಿಂದ ಕುಡಿಯಹೋದರೆ ನಿನ್ನ ತಮ್ಮಂದಿರ ಪಾಡೇ ನಿನ್ನದು.' ಅರ್ಜುನನಿಗೆ ಹಿಡಿಸಲಾರದ ಸಿಟ್ಟು, ಇದನ್ನು ಕೇಳಿ ಕೂಡಲೆ ಎಲ್ಲ ದಿಕ್ಕುಗಳಿಗೂ ಬಾಣಗಳ ಮಳೆಗರೆದನು. ಶಬ್ದ-ವೇಧದಿಂದ ಆ ವಿರೋಧಿಯನ್ನು ಸಂಹರಿಸ ಬಗೆದನು.

ಅಂತರಾಳದಲ್ಲಿ ನಗು ಕೇಳಬಂದಿತು. ನನ್ನನ್ನು ಕೊಲ್ಲಲಮ್ಮುವನಾವನಿಲ್ಲ. ನೀನು ವ್ಯರ್ಥ ಶ್ರಮಪಟ್ಟು ನಗೆಗೀಡಾಗಬೇಡ; ಎಂಬ ಧ್ವನಿ ಆತನ ಕಿವಿಗೆ ಬಂದಿತು. ಅರ್ಜುನನು ಅದಾವುದನ್ನೂ ಲೆಕ್ಕಿಸದೆ, ನೀರು ಕುಡಿಯಬಂದನು. ಹತ್ತಿರಬಂದು ತನ್ನನ್ನು ತಡೆಯುವದಕ್ಕಾದರೂ ಬರಲಿ, ನೋಡುವೆ, ಎಂಬ ಆವೇಶದಲ್ಲಿ ನೀರುಕುಡಿದನು. ನೆಲಕ್ಕೆ ಒರಗಿದನು. ಪರಾಕ್ರಮದ ಹುಮ್ಮಸದ ಭೀಮನು ಬಂದನು. ಅವನದೂ ಅದೇ ಗತಿಯಾಯಿತು. ಕೊನೆಗೆ ಧರ್ಮನೆ, ವಿಶ್ವಕರ್ಮನಿಂದ ನಿರ್ಮಿತವಾದಂತಿದ್ದ ಸುಂದರವಾದ ಆ ಸರಸ್ಸಿಗೆ ಬಂದನು. ತಮ್ಮಂದಿರು ಅರಿವುಗೆಟ್ಟು ಹೆಣಗಳಾಗಿ ಬಿದ್ದುಕೊಂಡಿದ್ದರು. ಧರ್ಮನಿಗೆ ಅದೆಲ್ಲವನ್ನೂ ಕಂಡು ಕಳವಳವಾಯಿತು. ಹತ್ತಿರಬಂದು ನಿಟ್ಟಿಸಿದನು. ಮೈಮೇಲೆ ಶಸ್ತ್ರದ ಗಾಯಗಳೇನೂ ಕಾಣಲಿಲ್ಲ. ದುರ್ಯೋಧನನು ಮೋಸದಿಂದ ಮಾಡಿದ ವಿಷಪ್ರಯೋಗವೆನಬೇಕೇ? ಹೆಣಗಳಂತಾಗಿದ್ದರೂ ಮೋರೆಯ ಮೇಲಿನ ಕಾಂತಿಯು ಸ್ವಲ್ಪವೂ ಕುಂದಿರಲಿಲ್ಲ! ಆದರಿಂದ ಆತನು ಸ್ವಲ್ಪ ಸಮಾಧಾನಪಟ್ಟುಕೊಂಡನು. ಇದೇನು ಎಂಬುದೇ ತಿಳಿಯದೆ ಕಂಗೆಟ್ಟನು.

ಮೊದಲು ನೀರುಕುಡಿಯ ಬಗೆದು ಕೊಳದತ್ತ ಹೊರಡಲು ಮತ್ತೆ ಆ ಸೊಲ್ಲು! 'ನನ್ನ ಪ್ರಶ್ನೆಗಳಿಗೆ ಮಾರುಗೊಡದೆ ನೀರು ಕುಡಿದವರು ಬದುಕಲಾರರು. ನೀನೂ ಒತ್ತಾಯದಿಂದ ನೀರು ಕುಡಿಯಹೋದರೆ ನಿನ್ನ ತಮ್ಮಂದಿರ ಸ್ಥಿತಿಯೆ ನಿನಗೂ ಬಂದೀತು;' ಎಂಬ ಆಕಾಶವಾಣಿಯು ಕೇಳಬಂತು. ಧರ್ಮನು ಆ ಧ್ವನಿಗೆ ಪ್ರತಿಯಾಗಿ ಪ್ರಶ್ನಿಸಿದನು. 'ಹೇ ಅದೃಶ್ಯ ಶಕ್ತಿಯೆ! ನೀನಾರು? ನೀನಾವುದಾದರೂ ದೇವಾಧಿದೇವತೆಯಾಗಿರಬೇಕು. ಅಲ್ಲದೆ, ಇದ್ದರೆ ನನ್ನ ತಮ್ಮಂದಿರನ್ನು ಈ ಪರಿಯಾಗಿ ನೆಲಕ್ಕುರಿಳಿಸುವ ಆರ್ಪು ಆವನಿಗೂ ಇಲ್ಲ. ನೀನಾರೆಂಬುದು ನನಗೆ ತಿಳಿಯಬಹುದೇ?

ಧರ್ಮನ ಎದುರು ಕೊಳದಲ್ಲಿ ಒಂದು ಬಕಪಕ್ಷಿಯು ಕಾಣಿಸಿಕೊಂಡಿತು. ಈ ಸರೋರದ ತೀರದಲ್ಲಿ ಶೈವಾಲ ಹಾಗೂ ಮಿಾನಗಳನ್ನು ತಿಂದು ಬದುಕುವ ಬಕನು ತಾನು, ಎಂಬ ಉತ್ತರವು ಬಂದಿತು. ಧರ್ಮನು ಮರಳಿ ನುಡಿದನು. ನೀನು ಕೇವಲ ಈ ಬಕನಲ್ಲ. ಮತ್ತಾರಾದರೂ ಒಂದು ಮಹಾಶಕ್ತಿಯಾಗಿರಲೆಬೇಕೆಂಬ ಧರ್ಮನಮಾತಿಗೆ ಪ್ರತಿಯಾಗಿ ಒಂದು ಸೊಲ್ಲು ಕೇಳಬಂದಿತು. 'ಇಕೋ! ನಾನೊಂದು ಯಕ್ಷ; ನಾನು ಈ ಕೊಳದ ಒಡೆಯ' ಎಂಬ ನುಡಿಯು ಬಂದ ದಿಕ್ಕಿನಕಡೆಗೆ ಧರ್ಮನು ಹೊರಳಿನೋಡಿದನು. ಕೊಳದ ತಡಿಗೆ ಆತುಕೊಂಡ ಪರ್ವತಪ್ರಾಯವಾದ ಒಂದು ಭವ್ಯಮೂರ್ತಿಯನ್ನು ಧರ್ಮನು ಕಂಡನು. ತಾಲವೃಕ್ಷದಂತೆ ಎತ್ತರವಾದ ಶರೀರನು; ಭಯಾನಕ ನೇತ್ರನು; ಅಗ್ನಿಸೂರ್ಯರಂತೆ ಅಂಗಕಾಂತಿಯವನು. ಮೇಘ ಗಂಭೀರಧ್ವನಿಯಿಂದ ಧರ್ಮನಿಗೆ ನುಡಿದನು. ತನ್ನ ಪ್ರಶ್ನೆಗಳನ್ನು ಬಿಡಿಸುವೆಯಾದರೆ ನೀರು ಕುಡಿ ಎಂದನು.

ಅವರಿಬ್ಬರಲ್ಲಿ ಹಲವು ಪ್ರಶ್ನೋತ್ತರಗಳು ನಡೆದುವು. ಧರ್ಮನು, ಯಕ್ಷನು ಒಡ್ಡಿದ ತೊಡಕುಗಳಿಗೆ ತನಗೆ ತಿಳಿದ ನ್ಯಾಯವಾದ ಉತ್ತರಗಳನ್ನು ಕೊಟ್ಟನು. ಯಕ್ಷನಿಗೆ ಸಂತೋಷವಾಯಿತು 'ನಾನು ನಿನ್ನ ನುಡಿಗಳಿಗೆ ಒಲಿದಿದ್ದೇನೆ. ನಿನ್ನ ತಮ್ಮಂದಿರಲ್ಲಿ ಬೇಕಾದ ಒಬ್ಬನನ್ನು ಬದುಕಿಸಲು ಕೇಳು' ಎಂದು ಯಕ್ಷನು ಹೇಳಿದನು. 'ನಕುಲನು ಜೀವಂತನಾಗಲೆಂದು ಧರ್ಮನು ಕೇಳಿಕೊಂಡನು.' ಯಕ್ಷನು ಸೋಜಿಗಗೊಂಡಂತೆ, 'ಎಲಾ! ಧರ್ಮಾ ಇದೇನು ಮಾಡಿದೆ? ಅತುಲಪರಾಕ್ರಮಿ ಭೀಮನನ್ನಾಗಲಿ, ಅಸದೃಶ ವೀರನಾದ ಅರ್ಜುನನ್ನಾಗಲಿ, ಬದುಕಿಸಲು ಹೇಳದೆ ತೀರ ಸಾಮಾನ್ಯ ಶಕ್ತಿಯ ನಕುಲನನ್ನೇಕೇ ಕೇಳಿಕೊಂಡೆ?' ಎಂದು ವಿಚಾರಿಸಿದನು. ಕೌರವರನ್ನು ಎದುರಿಸುವ ಹೊಣೆಯ ನಾಳಿನಚಿಂತೆಯು ತಲೆತಿನ್ನುತ್ತಿದ್ದರೂ ಯುಧಿಷ್ಠಿರನು ಭೀಮಾರ್ಜುನರನ್ನು ಬದುಕಿಸಲು ಪ್ರಾರ್ಥಿಸಲಿಲ್ಲ. ಕುಂತಿಯ ಒಬ್ಬ ಮಗನು ನಾನು ಜೀವಂತವಾಗಿರುವಂತೆ, ನನ್ನ ಇನ್ನೊಬ್ಬ ತಾಯಿ ಮಾದ್ರಿಯ ಒಬ್ಬ ಮಗನೂ ಬದುಕುವುದು ಧರ್ಮ. ತನ್ನ ಬೆನ್ನ ಬಂದ ತಮ್ಮಂದಿರೆಂಬ ಮೋಹದಿಂದ ಭೀಮಾರ್ಜುನರಲ್ಲಿ ಯಾರನ್ನಾದರೂ ಬದುಕಿಸಲು ಕೇಳಿದ್ದರೆ ನಾನು ನನ್ನ ಕರ್ತವ್ಯದಲ್ಲಿ ತಪ್ಪಿದಂತಾಗುತ್ತಿತ್ತು; ಎಂದು ಯಕ್ಷನಿಗೆ ತನ್ನ ಹೃದ್ಗತವನ್ನು ತಿಳಿಸಿಹೇಳಿದನು.

ಯಕ್ಷನು ಇನ್ನೂ ಮೆಚ್ಚಿ ನಿನ್ನ ತಮ್ಮಂದಿರೆಲ್ಲ ಬದುಕಲಿ ಎಂದು ಹರಿಸಿದನು. ಗಾಢನಿದ್ರೆಯಿಂದ ಎಚ್ಚೆತ್ತವರಂತೆ ಎಲ್ಲರೂ ನಗುಮೊಗದಿಂದ ಎದ್ದರು. ಯಕ್ಷನಾದರೂ ಧರ್ಮನಿಗೆ, ತಾನು ಕೇವಲ ಒಂದು ಸಾಮಾನ್ಯ ಯಕ್ಷವಲ್ಲ; ಪ್ರತ್ಯಕ್ಷ ಯಮ-ಧರ್ಮರಾಯನೇ ಆಗಿದ್ದೇನೆಂದು ದರ್ಶನವಿತ್ತು ಅದೃಶ್ಯನಾದನು. ಅದೃಶ್ಯನಾಗುವ ಮೊದಲು ಎಲ್ಲ ಪಾಂಡವರಿಗೆ ಜೀವನವನ್ನಿತ್ತುದಲ್ಲದೆ ಆ ಬ್ರಾಹ್ಮಣನ ಕಳೆದ ಅರಣಿ ಮತ್ತು ಪಾತ್ರೆಯನ್ನು ಮರಳಿಕೊಟ್ಟನು. ತಾನೇ ಕೃಷ್ಣಸಾರಮೃಗರೂಪದಿಂದ ಅವನ್ನು ದೋಚಿಕೊಂಡು ಬಂದುದಾಗಿಯೂ ಒಳಗುಟ್ಟನ್ನು ವಿವರಿಸಿದನು. ವ್ಯಾಸರು ಈ ಕಥೆಯ ರೂಪದಿಂದ ಒಂದು ಸನಾತನ ಸತ್ಯವನ್ನು ಲೋಕಕ್ಕೆ ಅರುಹಿದ್ದಾರೆ. ಇದರಲ್ಲಿ ಕೆಲವು ಸಂಕೇತಗಳಿವೆ. ಆ ಸಂಕೇತಗಳ ಅರ್ಥವು ತಿಳಿದರೆ ಉಳಿದ ಕಥೆಯ ಸ್ವಾರಸ್ಯವು ಚೆನ್ನಾಗಿ ಮನಸ್ಸಿಗೆ ಹೊಳೆಯುವುದು. ವಿಶ್ವಕರ್ಮ ನಿರ್ಮಿತವಾದ ಸರೋವರದಂತಹ ಆ ಜಲಾಶಯವೆಂದರೆ 'ಜೀವನ'-ಕಾಸಾರ. ಇಲ್ಲಿ ನೀರನ್ನು 'ಜೀವನ' ಎಂಬರ್ಥದಲ್ಲಿ ಬಳಸಿದ್ದಾಗಿದೆ.

ಮರವು, ಮೀನುಗಳು ಜೀವಿಗಳ ಪ್ರತೀಕ, ಮರವನ್ನು (ಜೀವಿಯ) ಸಂಸಾರಕ್ಕೆ ಹೋಲಿಸುವ ಸಂಪ್ರದಾಯವು ಅತ್ಯಂತ ಪುರಾತನವಾಗಿದೆ. ತೈತ್ತಿರೀಯೋಪನಿಷತ್ತಿನಲ್ಲಿ ತ್ರಿಶಂಕು ಋಷಿಯ ಒಂದು ಅನುಭಾವ ವಚನದಲ್ಲಿ ಈ ರೂಪಕವು ಬಂದಿದೆ. 'ಅಹಂ ವೃಕ್ಷಸ್ಯರೇರಿವ' ನಾನು (ಸಂಸಾರರೂಪಿ) ವೃಕ್ಷದ (ಅಂತರ್ಯಾಮಿಯಾಗಿ) ಅದರ ಪ್ರೇರಕನಾಗಿದ್ದೇನೆ; ಎಂಬ ಈ ವಚನದೊಂದಿಗೆ ಗೀತೆಯೊಳಗಿನ ಅಶ್ವತ್ಥವೃಕ್ಷದ ವರ್ಣನೆಯನ್ನು ನೆನೆದುಕೊಳ್ಳಬಹುದು. ಧರ್ಮನು ನಕುಲನಿಗೆ ಮರವನ್ನೇರಿ ನಿರೀಕ್ಷಿಸಿ ನೀರನ್ನು ಕಂಡು ಹಿಡಿಯಲು ಹೇಳಿದ್ದಾನೆ. ಸಂಸಾರ ವೃಕ್ಷದ ತುದಿಯಲ್ಲಿ ನಿಂತು ಸಮ್ಯಕ್‌ರೀತಿಯಿಂದ ನೋಡಿದ್ದಲ್ಲದೆ ಜೀವನಕಾಸಾರವು ಗೋಚರವಾಗದು. ಆ ಸರೋವರದ ದಂಡೆಯಲ್ಲಿ ಪ್ರಾಣಿ ವನಸ್ಪತಿಗಳು ಇರುವುದು ನಕುಲನ ಕಣ್ಣಿಗೆ ಬೀಳುವುದು. ('ಜೀವನ'-) ಕಾಸಾರದ ಸ್ವಾಮಿತ್ವವು ಮೊದಲಿನಿಂದಲೂ ತನಗೆ ಸೇರಿದ್ದೆಂದು ಯಕ್ಷನು ಹೇಳುವನು. ಈ ಯಕ್ಷನೆಂದರೆ 'ಕಾಲ' (Time-spirit) ಎಂಬುದು ನಿಃಸಂದಿಗ್ಧವಾಗಿದೆ. ಇದೇ ಯಕ್ಷನು ಧರ್ಮನಿಗೆ ಆರಂಭದಲ್ಲಿ ಬಕ-ರೂಪದಲ್ಲಿ ಕಾಣಿಸಿಕೊಂಡನೆಂಬುದೂ ಅರ್ಥವತ್ತಾಗಿದೆ. ಸರೋವರದೊಳಗಿನ ಶೈವಾಲ ಮತ್ತು ಮೀನುಗಳಿಂದ ತಾನು ಜೀವಿಸುವುದಾಗಿ ಆ ಬಕವು ಹೇಳುವ ಔಚಿತ್ಯವು ಇದರಿಂದ ಸ್ಪಷ್ಟವಾಗುವುದು. ಈ ವಿಷಯದಲ್ಲಿ ಇನ್ನೂ ಏನಾದರೂ ಸಂದೇಹವಿದ್ದಲ್ಲಿ ಈ ಅಧ್ಯಾಯದ ಕೊನೆಯಲ್ಲಿ ವ್ಯಾಸರು ಅದನ್ನೂ ನಿವಾರಿಸಿದ್ದಾರೆ. 'ನೀನು ಸಾಮಾನ್ಯ ಯಕ್ಷನಾಗಿರಲಾರೆ' ಎಂದು ಧರ್ಮನು ಕೇಳಿಕೊಂಡಾಗ ತಾನು ಪ್ರತ್ಯಕ್ಷ ಯಮ-ಧರ್ಮನೆಂದೇ ಹೇಳಿ ಆ ಯಕ್ಷವು ಅದೃಶ್ಯವಾದ ವರ್ಣನೆಯುಂಟು (ಅರಣ್ಯ ಪರ್ವ ೩೧೫. ೬)

ಪ್ರಾಣಿಮಾತ್ರರೆಲ್ಲ ಕಾಲವಶರು. ಕಾಲನ ಕೈಯಲ್ಲಿದ್ದಾರೆ. ಕಾಲಪುರುಷನು ಕಾಲಕಾಲಕ್ಕೆ ಕೆಲವೊಂದು ಜೀವನ ಸಮಸ್ಯೆಗಳನ್ನು ಮುಂದೊಡ್ಡುತ್ತಿರುತ್ತಾನೆ. ಆ ಸಮಸ್ಯೆಗಳನ್ನು ಬಿಡಿಸದೆ ಯಾರಿಗೂ ಜೀವಿಸುವ ಅರ್ಹತೆಯು ಇಲ್ಲ. 'ಜೀವನ' ಬೇಕಾದವರು ಯಕ್ಷನು ಎಂದರೆ ಕಾಲಪುರುಷನು ಒಡ್ಡಿದ ಪ್ರಶ್ನೆಗಳನ್ನು ಮೊದಲು ಬಿಡಿಸಲೇಬೇಕು'. ಇಲ್ಲವಾದರೆ ಹೇಗೂ ಮೊದಲು ಬದುಕುವಾ, ಎಂದು ಒತ್ತಾಯದಿಂದ ಜೀವನ-ಕಾಸಾರದೊಳಗಿನ ನೀರು ಕುಡಿಯ ಹೋದರೆ ಅವರು ನೆಲಕ್ಕುರುಳುವುದೇ ಕಂಡಿತು. ಭೀಮಾರ್ಜುನಾದಿ ಪಾಂಡವರ ಪಾಡೆ ಹಾಗಾದ ಬಳಿಕ ಉಳಿದವರು ಯಾವ ಗಿಡದ ತೊಪ್ಪಲು!

ಕಾಲನಿಗೆ ಯಮ-ಧರ್ಮನೆಂದಿರುವ ಹೆಸರಿನ ಔಚಿತ್ಯವು ಇಲ್ಲಿ ಶ್ರೀವ್ಯಾಸರು ಬಹಳ ಉದಾತ್ತವಾದ ತಾತ್ವಿಕ ಭೂಮಿಕೆಯ ಮೇಲಿಂದ ಮಾಡಿದ ವಿವರಣೆಯಿಂದ ಚೆನ್ನಾಗಿ ಮನವರಿಕೆಯಾಗುವಂತಿದೆ. ಕಾಲವು ಲೋಕವನ್ನು (ಯಮ) ನಿಯಮಬದ್ಧವಾಗಿ ಇರಿಸಿದೆ. ಕಾಲನು ಲೋಕವನ್ನು ಸಂಯಮದಲ್ಲಿ ಇರಿಸಿಕೊಂಡ ಅಂದವನ್ನೆ ಸೂಕ್ಷ್ಮವಾಗಿ ಬಗೆದು ಭಾವಿಸಿದರಲ್ಲಿ ಅದರಲ್ಲಿ ಆತ್ಯಂತಿಕ ಸ್ವರೂಪದಲ್ಲಿ ಕಟ್ಟಕಡೆಗೆ ಕಾಣುವ ಶಕ್ತಿಗಳಾವುವು? ಕಾಲವು ಒಂದು ದುಷ್ಟ ಶಕ್ತಿಯೆ? ಅವನು ಲೋಕನಾಶಕನೆ? ಸಂರಕ್ಷಕನೆ? ಒಳಿತು ಆಗಬೇಕೆಂಬುದೇ ಪ್ರತಿಯೊಂದು ವ್ಯಕ್ತಿಯ ಹೃದಯಾಂತರಾಳದಲ್ಲಿ ಹುದುಗಿರುವ ಆತ್ಯಂತಿಕ ಭಾವವಾಗಿದೆಯಷ್ಟೆ? ಪ್ರತಿಯೊಂದು ಕೃತಿಯ ಗುರಿಯೂ ಅವರವರ ಕಲ್ಪನೆಯಂತೆ ಯಾವುದೊಂದು ಒಳಿತೇ ಆಗಿದೆಯಲ್ಲದೆ ಕೆಡುಕಲ್ಲ. ಕಲ್ಯಾಣವೇ ಗುರಿ. ಲೋಕದಲ್ಲಿ ಯಾರೇ ಆಗಲಿ ಬದುಕುವುದಕ್ಕಾಗಿ ಸಾವನ್ನು ಸೇರುವರೆ ಹೊರತು, ಸಾವಿಗಾಗಿ ಸಾವನ್ನು ಯಾರೂ ಹಾರೈಸುವದಿಲ್ಲ. ಇದು ಲೋಕಧರ್ಮವು. ಈ ಧರ್ಮದಿಂದಲೆ ಲೋಕವು ಬದ್ಧವಾಗಿದೆ. ಈ ನಿಯಮವೆಂದರೇ ಯಮ-ಧರ್ಮನ ಆತ್ಯಂತಿಕ ರೂಪ.

ಯುಧಿಷ್ಠಿರನಿಗೆ ಯಕ್ಷನು, ಕೊನೆಗೆ, ತಾನು ನಿನ್ನ ತಂದೆ ಯಮ-ಧರ್ಮನೆಂದು ಸ್ಪಷ್ಟೀಕರಿಸಿದನು.

> ಯಶಃ ಸತ್ಯಂ ದಮಃ ಶೌಚಮಾರ್ಜವಂ ಹ್ರೀರಚಾಪಲಮ್।
> ದಾನಂ ತಪೋ ಬ್ರಹ್ಮಚರ್ಯಮಿತ್ಯೇತಾಸ್ತನವೋ ಮಮ ॥ ೭॥
> ಅಹಿಂಸಾ ಸಮತಾ ಶಾಂತಿಸ್ತಪಃ ಶೌಚಮಮತ್ಸರಃ।
> ದ್ವಾರಾಣ್ಯೇತಾನಿ ಮೇ ವಿದ್ಧಿ ಪ್ರಿಯೋಽಹ್ಯಸಿ ಸುತೋ ಮಮ ॥ ೮॥

ಬದುಕುವ ಹಾರಯಿಕೆ ಏತಕ್ಕೆ? ಕಲ್ಯಾಣಕ್ಕಾಗಿ; ಆನಂದಹೊಂದುವುದಕ್ಕಾಗಿ ತಾನೆ? ಆದುದರಿಂದ, ಕಲ್ಯಾಣಕ್ಕೆ ಕಾರಣವಾಗುವ ಸಂಗತಿಗಳೇ ತಾನು; ಅದುವೆ ತನ್ನ ಶರೀರ; ತನ್ನ ದ್ವಾರವೆಂದು ಯಕ್ಷನ ಬಾಯಿಂದ ಶ್ರೀ ವ್ಯಾಸರು ಯಮನ ತಾತ್ವಿಕಸ್ವರೂಪವನ್ನು ವರ್ಣಿಸಿದ್ದಾರೆ. ಶ್ರೀ ವ್ಯಾಸರ ದಿವ್ಯದೃಷ್ಟಿಯಲ್ಲಲ್ಲದೆ ಯಮ-ಧರ್ಮನ ಇಂತಹ ಉದಾತ್ತವಾದ ಆತ್ಯಂತಿಕ ವರ್ಣನೆಯು ಜಗತ್ತಿನ ಬೇರೆ ಸಾಹಿತ್ಯದಲ್ಲಿ ಸಿಕ್ಕುವುದು ದುರ್ಲಭ.

ಬದುಕುವುದೇ ಎಲ್ಲರ ಹೆಗ್ಗುರಿ. ಲೋಕವು ಯಾವ ನಿಯಮ (ಎಂದರೆ ಧರ್ಮ, Law)ಗಳಿಂದ ಬದ್ಧವಾಗಿದೆಯೊ ಅವನ್ನು ಮೀರಿ ನಡೆಯುವದರಿಂದಲೆ ಆತ್ಮನಾಶ; ಸಾವು. ಅವನ್ನು ಅನುಸರಿಸುವದರಿಂದಲೇ ಬದುಕು; ಕಲ್ಯಾಣ. ಈ ಬಗೆಯ ಬದುಕಿಗಾಗಿ ಹೆಣಗುವವನು, ಹೋರುವವನು ಯಕ್ಷನ ಅಥವಾ ಯಮಧರ್ಮನ ಒಲುಮೆಗೆ ಪಾತ್ರನಾಗಿ ಸಾವಿನಿಂದ ಪಾರಾಗುವನು. ಎಂದರೆ ಅಮರನಾಗುವನು. ಲೋಕಹೃದಯದಲ್ಲಿ ಸ್ಥಾನವನ್ನು ಪಡೆದು ಮರಣವನ್ನು ಗೆಲ್ಲುವನು. ಆ ನಿಯಮಗಳನ್ನು ಮೀರಿ ಬದುಕಿದವರೆಲ್ಲ ಜೀವನ್ಮೃತರಂತೆ ಜೀವಿಸುವುದರಲ್ಲಿ ಸಂದೇಹವಿಲ್ಲ. ಇದುವೆ ಮೇಲಣ ಯಕ್ಷನ ರೂಪಕದ ಸಾರವಾಗಿದೆ. ಈ ಕಾರಣದಿಂದಲೆ ಯುಧಿಷ್ಠಿರನು ಕೊನೆಗೆ ಆ ಯಕ್ಷರೂಪೀ ಯಮನಲ್ಲಿ ಹೀಗೆ ಬೇಡಿಕೊಂಡನೆಂದು ವ್ಯಾಸರು ವರ್ಣಿಸಿದ್ದಾರೆ.

> ದೇವದೇವೊ ಮಯಾದೃಷ್ಟೋ ಭವಾನ್ ಸಾಕ್ಷಾತ್ ಸನಾತನಃ।
> ಯಂ ದದಾಸಿ ವರಂ ತುಷ್ಟಸ್ತಂ ಗ್ರಹೀಷ್ಯಾಮ್ಯಹಂ ಪಿತಃ।
> ಜಯೇಯಂ ಲೋಭಮೋಹೌ ಚ ಕ್ರೋಧಂ ಚಾಹಂ ಸದಾ ವಿಭೋ।
> ದಾನೇ ತಪಸಿ ಸತ್ಯೇ ಚ ಮನೋ ಮೇ ಸತತಂ ಭವೇತ್ ॥೨೪॥

ಲೋಭ, ಮೋಹ, ಕ್ರೋಧಗಳನ್ನು ಗೆದ್ದು ನನ್ನ ಮನಸ್ಸು ಸದಾ ದಾನ, ತಪಸ್ಸು, ಸತ್ಯದಲ್ಲಿ ಸ್ಥಿರವಾಗಲಿ ಎಂದು ಬೇಡಿಕೊಂಡಿದ್ದಾನೆ. ಇದೇ ಅಮರಧರ್ಮ. ಈ ಧರ್ಮವನ್ನು ಯಾರು ಎಷ್ಟು ಅಳವಡಿಸಿಕೊಳ್ಳುವರೋ ಅಷ್ಟು ಅವರು ಅಮೃತತತ್ವವನ್ನು ಪಡೆಯುವರು.

ಧರ್ಮನ ಉತ್ತರಗಳನ್ನು ಕೇಳಿ ಸಂತುಷ್ಟನಾದ ಯಕ್ಷನು ವರವನ್ನು ಬೇಡೆಂದಾಗ ಧರ್ಮನು ಮೊದಲು ಯಾರನ್ನು ಬದುಕಿಸಲು ಕೇಳಿಕೊಂಡನು? 'ನ-ಕುಲನನ್ನು' (fallen, downtroden, oppressed or depressed) ನಿಜವಾದ ಧರ್ಮದ ರೀತಿಯು ಇದೇ ಆಗಿದೆ. ಮಹಾತ್ಮಾಜೀಯವರು ಧರ್ಮಾತ್ಮರೆಂದು ಲೋಕವು ಒಕ್ಕೊರಲಿನಿಂದ ಸಾರಿದ್ದುದೇಕೆ ಮತ್ತೆ! 'ನ-ಕುಲ' ಶಬ್ದದಲ್ಲಿ ಧ್ವನಿತವಾಗುವ ಅರ್ಥದ ಬಗೆಗೆ ಕೆಲವರಿಗೆ ಸಂದೇಹವುಂಟಾಗಬಹುದು. ಆದರೆ, ಭಾರತದೊಳಗಿನ ಮಹತ್ವದ ಹಲವು ಹೆಸರು ತಾಯ್ತಂದೆಗಳು ಇಟ್ಟ ಹೆಸರಾಗಿರದೆ, ಅವು ಅವರ ಗುಣ ಸ್ವಭಾವಾದಿಗಳಿಂದ ಬಂದ (ಅಥವಾ ವ್ಯಾಸರು ಕಲ್ಪಿಸಿದ) ಅನ್ವರ್ಥಕ ನಾಮಗಳಾಗಿವೆ. 'ಧೃತರಾಷ್ಟ್ರನು' ಕುರುಡನು. ರಾಷ್ಟ್ರಧಾರಣಮಾಡಿದವನು ಧೃತರಾಷ್ಟ್ರನು. ಧೃತ-ರಾಷ್ಟ್ರರು ಅಧಿಕಾರಮೋಹದಿಂದ ಕುರುಡರಾಗುವುದು ಲೋಕರೂಢಿ. ಪಾಂಡವರ ಹೆಸರುಗಳೂ ಇದೇ ಬಗೆಯಾಗಿ ಸಾರ್ಥವಾಗಿವೆ. ಭೀಮ-ಪರಾಕ್ರಮ, ವೀರ-ಶೌರ್ಯಗಳು ಧರ್ಮದ ಅಂಕೆಯಲ್ಲಿದ್ದರೇ ಅವಕ್ಕೆ ಗೆಲ್ಲು. ಧರ್ಮನು ಸಾಮಾನ್ಯವಾಗಿ ನಿಷ್ಕ್ರಿಯನಂತೆ ತೋರುವುದನ್ನು ಯುಧಿಷ್ಠಿರನ ಒಟ್ಟಿನ ವರ್ಣನೆಯಿಂದ ಚೆನ್ನಾಗಿ ಧ್ವನಿತಮಾಡಿದ್ದಾರೆ. ಪತಿತರನ್ನು ಬೆನ್ನ ಬಂದ ತಮ್ಮಂದಿರಂತೆ ನಡಿಸಿಕೊಂಬುವುದೇ ಧರ್ಮದ ಪರಾಕ್ರಮದ ಕರ್ತವ್ಯ. ಇದೆ ಧರ್ಮ. ಸ್ವರ್ಗದಲ್ಲಿ ಧರ್ಮನು ತನ್ನ ಸಂಗಡದ ನಾಯಿಯೊಡನೆಯ ಬರತಕ್ಕವನು ಹೊರತು ಒಬ್ಬನನ್ನೇ ಕರೆದರೆ ತಾನೊಲ್ಲೆನೆಂದ ಮಾತುಗಳನ್ನೂ ಈ ಸಂದರ್ಭದಲ್ಲಿ ಲಕ್ಷಿಸಬಹುದಾಗಿದೆ. ಇಂತಿದು ಶ್ರೀವ್ಯಾಸರ ವ್ಯಂಗ್ಯಸರಣಿಯು ನಿತಾಂತ ರಮಣೀಯವಾಗಿದೆ.

ಅಗ್ನಿಯ ಉಪಾಸನೆ, ಸೂರ್ಯೋಪಾಸನೆಯೆಂದರೆ ಜ್ಞಾನೋಪಾಸನೆ ಎಂಬುದನ್ನು 'ಅಗ್ನಿವಿದ್ಯೆ' ಎಂಬ ಚಿಕ್ಕ ಹೊತ್ತಿಗೆಯಲ್ಲಿ ನಾನು ಈ ಮೊದಲೆ ಒಂದೆಡೆಗೆ ವಿವರಿಸಿದ್ದೇನೆ. ಬ್ರಾಹ್ಮಣನು ಅಗ್ನಿಹೋತ್ರವನ್ನು ಬಿಡಲಾಗದು, ಎಂಬುದರ ರಹಸ್ಯವು ಆತನು ಆಜನ್ಮ, ಜ್ಞಾನ-ಜಿಜ್ಞಾಸುವಾಗಿ ಸ್ವಾಧ್ಯಾಯದಲ್ಲಿಯೆ ನಿರತನಾಗಿರಬೇಕೆಂಬುದಾಗಿದೆ. 'ಚಿದಗ್ನಿಕುಂಡ'ದಲ್ಲಿ ಅಗ್ನಿಯನ್ನು ಯಾವಾಗಲೂ ಜಾಗೃತವಾಗಿಡುವುದು ಆತನ ಆದ್ಯಕರ್ತವ್ಯವಾಗಿದೆ. ವಿಚಾರಮನನಗಳಿಂದ ಈ ಅಗ್ನಿಯನ್ನು ಪಡೆಯಬೇಕು. ಆದರೆ, ಅರೆದು, ಉಜ್ಜಿ-ಚರ್ಚೆ, ವಿಮರ್ಶೆ, ವಿವೇಕ, ವಿಚಾರಾದಿಗಳಿಂದ ಅಗ್ನಿಸಾಧನ ಮಾಡಿಕೊಳ್ಳುವ ಹದವನ್ನೆ ಮರೆತ ಬ್ರಾಹ್ಮಣನ ಅಗ್ನಿ ಉಪಾಸನೆಯು ಲೋಪವಾಗಿ ಆತನು ತೇಜಸ್ಸನ್ನೆ ಕಳೆದುಕೊಳ್ಳುತ್ತಾನೆ. ಕಾಲಪ್ರವಾಹದಲ್ಲಿ ಬ್ರಾಹ್ಮಣನು, ಅರೆವ ಸಾಧನವಾದ ಅರಣಿಯನ್ನೇ ಕಳೆದುಕೊಂಡನು. ಕಾಲನು (ಕೃಷ್ಣಸಾರಮೃಗವು) ದೋಚಿಕೊಂಡೊಯ್ದನು; ಅದನ್ನು ಮರಳಿ ತಂದುಕೊಂಡಲು ಬ್ರಾಹ್ಮಣನು ಧರ್ಮನಲ್ಲಿ ಮೊರೆಯಿಟ್ಟನು. ಜ್ಞಾನೋಪಾಸಕ ಮತ್ತು ರಾಜ್ಯಶಾಸಕರೊಳಗಿನ ಈ ಅನ್ಯೋನ್ಯ ಸಂಬಂಧವು ನಿಕಟ ಸಹಕಾರದ್ದಾಗಿದ್ದರೇ ಅದು ಅವರಿಗೂ ಮತ್ತು ಲೋಕಕ್ಕೂ ಕಲ್ಯಾಣಕಾರವೆಂಬ ಸೂಚನೆಯೂ ಈ ಕಥೆಯಲ್ಲಿ ಅಡಕವಾಗಿದೆ.

ವಿಚಾರಮಂಥನದ-ಅರೆದು ಅರಿತುಕೊಂಬ ಆಂತರಿಕ ಸಾಧನವನ್ನು ಅರಣಿಗಳನ್ನು ಕಳೆದುಕೊಂಡ ಬ್ರಾಹ್ಮಣನು ಜೀವನ್ಮೃತನು. ಯಕ್ಷನು ಒಡ್ಡಿದ ಕಾಲಿಕ ಪ್ರಶ್ನೆಗಳನ್ನು ಬಿಡಿಸಲು ಆಗದ ವೀರರೂ ಪರಾಕ್ರಮಿಗಳೂ ಜೀವನ್ಮೃತರಾಗಿ ಉಲುಕಲಿಕ್ಕಾಗದೆ ಬಿದ್ದುಕೊಂಡಿರುವಾಗ ಇನ್ನುಳಿದ ಹಿಂಬಾಲಿಗರ ಪಾಡೇನು? ಕೊಳದ ತಡಿಯಲ್ಲಿ ಬಿದ್ದವರು ಹೆಣಗಳಂತಾಗಿದ್ದಾರೆಂದು ಹೇಳಿದ್ದು ಬಹಳ ಸಮರ್ಪಕವಾಗಿದೆ. ಪೂರ್ಣ ಸತ್ತಿಲ್ಲ. ಮೋರೆಯ ಮೇಲೆ ಜೀವಂತಿಕೆಯ ಕಳೆಯಿದೆ. ಆದರೆ, ಬದುಕಿರುವರೆಂದೂ ಹೇಳಲಿಕ್ಕಾಗುವುದಿಲ್ಲ. ಆ ಕಾಲದ ಪ್ರಶ್ನೆಗಳಿಗೆ ಉತ್ತರವನ್ನು ಕೊಡದ ಯಾರಿಗೂ ಜೀವಂತವಾಗಿ ಬದುಕುವುದೇ ಸಾಧ್ಯವಿಲ್ಲ ಎಂಬುದೇ ಈ ಯಕ್ಷಪ್ರಶ್ನೆ ಕಥೆಯ ರಹಸ್ಯವಾಗಿದೆ.

ಏಳನೆಯ ಶತಮಾನದಿಂದ ಮುಂದೆ ಭಾರತದ ಸ್ವಾತಂತ್ರ್ಯವು ಕ್ರಮಕ್ರಮವಾಗಿ ನಷ್ಟವಾದಂತೆ ನಮ್ಮ ರಾಷ್ಟ್ರಕ್ಕೆ ಜೀವನ್ಮೃತಾವಸ್ಥೆಯು ಬಂದೊದಗಿತು. ಮೊದಲು ಉತ್ತರದಲ್ಲಿ ಸ್ವಾತಂತ್ರ್ಯ ಸೂರ್ಯನು ಮುಳುಗಿದನು. ಆ ಕಗ್ಗತ್ತಲೆಯು ಕ್ರಮವಾಗಿ ಭಾರತವನ್ನೆಲ್ಲ ವ್ಯಾಪಿಸಿತು. 'ಸೂರ್ಯ ಆತ್ಮಾಜಗತಃ ತಸ್ಥುಷಶ್ಚ 'ಆತ್ಮಾಂಧತೆಯ ಮೂಲಕ ಜೀವನ್ಮೃ ತಾವಸ್ಥೆಯಲ್ಲಿಯೆ ಈವರೆಗೆ ಹೇಗೋ ನಮ್ಮ ರಾಷ್ಟ್ರವು ಪ್ರಾಣಧಾರಮಾಡಿಕೊಂಡು ಉಳಿದು ಬಂದಿದೆ. ಇದೇ ಲೋಕವಿಲಕ್ಷಣವಾದ ಆಶ್ಚರ್ಯಕಾರಕ ಸಂಗತಿಯು!

ನಮ್ಮ ಸಮಾಜವು ಈ ಕಾಲದಲ್ಲಿ ಜೀವನ್ಮೃತಾವಸ್ಥೆಯಲ್ಲಿದ್ದಿತೆಂಬುದಕ್ಕೆ ಒಂದು ಕುರುಹನ್ನು ಇಲ್ಲಿ ನೋಡಿಕೊಳ್ಳಬಹುದು. ದೇಹವು ಜೀವಂತವಾಗಿದ್ದಾಗ ಉಂಡ ಅನ್ನವು ಒಡಲಲ್ಲಿ ಅರಗದೆ ಹಾಗೆಯೆ ಉಳಿದರೆ ಅದು ಸಲ್ಲ; ಅರಗಿಸಿಕೊಳ್ಳದೆ ಅನ್ನಾಂಶವನ್ನು ಹಾಗೆಯೆ ಉಳಿಸಿಕೊಂಬ ದೇಹವು ಅನಾರೋಗ್ಯದ ಬೀಡು ಆಗಿ ಸಾವಿಗೆ ಔತಣವು ದೊರೆಯುವುದು. ನಮ್ಮ ಸಮಾಜದಲ್ಲಿ ಸುಮಾರು ಆರನೆಯ ಶತಮಾನದ ವರೆಗೆ ಇದ್ದ ಈ ಪಚನಶಕ್ತಿಯು ಮುಂದೆ ನಷ್ಟವಾಯಿತೆಂಬುದಕ್ಕೆ ಮುಸಲ್ಮಾನರ ಕುತ್ತವೇ ಸಾಕ್ಷಿ.

ಆರ್ಯ ಮತ್ತು ಯದು-ತುರ್ವರ (ದ್ರಾವಿಡರ) ಸಂಬಂಧವು ಬಂದಿತು. ಅವರಿಬ್ಬರೂ ಬೆರೆತು ವರ್ಣವ್ಯವಸ್ಥೆಯು ನಿರ್ಮಾಣವಾಯಿತು. ಆರ್ಯೇತರರಾದ ವ್ರಾತ್ಯರನ್ನು ಒಳಗೊಳ್ಳಲು ಕೆಲವೊಂದು ಸಂಸ್ಕಾರಗಳು ನಿರ್ಮಾಣವಾದುವು. ಅಥರ್ವಣವೇದದಲ್ಲಿ ಬಂದ ವ್ರಾತ್ಯಸ್ತೋಮದ ವರ್ಣನೆಗಳು ಇದಕ್ಕೆ ಸಾಕ್ಷಿ. ಮುಸಲ್ಮಾನರ ಮೊದಲು ಹಿಂದೂದೇಶಕ್ಕೆ ಯವನರು, ಶಕರು, ಹೂಣರು, ಆಭೀರರು ಮೊದಲಾದ ಹಲವು ಪಂಗಡದವರು ಬಂದರು. ಆದರೆ, ಅವರಲ್ಲಿ ಹಲವರನ್ನು ಚೆದರಿಸಿ ಹೊರಗಟ್ಟಿದರೂ ಇಲ್ಲಿಯೆ ನೆಲೆಸಿದ ಇನ್ನುಳಿದವರನ್ನು ಅಂದಿನ ಭಾರತೀಯ ಸಮಾಜವು ತನ್ನಲ್ಲಿ ಅಳವಡಿಸಿಕೊಂಡು ಬಿಟ್ಟಿತು. ಆ ಜನಗಳು ತೀರ ಬೇರೆಯಾಗಿ ಉಳಿದುಕೊಳ್ಳಲಿಲ್ಲ. ಭಾರತೀಯ ಸಮಾಜದ ಅಂಗಾಂಗಗಳಲ್ಲಿ ಅವರು ಬೆರೆತು ಹೋದರು. ಆದರೆ, ಎಳನೆಯ ಶತಮಾನದ ಮುಂದೆ ನಮ್ಮ ಸಮಾಜದಲ್ಲಿ ಹೊರಗಿನವರನ್ನು ಹೀಗೆ ಅರಗಿಸಿಕೊಳ್ಳುವ ಶಕ್ತಿಯು ಉಳಿಯಲಿಲ್ಲ. ನಮ್ಮ ಸಮಾಜವು ನಿರ್ಜೀವವಾಗುತ್ತ ನಡೆದ ಸ್ಪಷ್ಟವಾದ ಕುರುಹು ಇದು. ಹೀಗಾಗಿ ಮುಸಲ್ಮಾನಾದಿಗಳ ಕುತ್ತವು ಬೆಳೆಯುತ್ತ ಹೋಯಿತು. ದೇಶವು ಪರಾಧೀನವಾಯಿತು. ಜನರು ಪರಕೀಯರ ಆಳಾದರು. ಪಾರತಂತ್ರ್ಯವೇ ನರಕ. ಪರಾವಲಂಬನಕ್ಕಿಂತಲೂ ಜೀವನ್ಮೃತಾವಸ್ಥೆಯು ಬೇರೊಂದಿಲ್ಲ.

ಹಾಗಾದರೆ ಈ ಬಗೆಯ ಜೀವನ್ಮೃತಾವಸ್ಥೆಯ ಕಾರಣ ಯಾವುದು? ಮಹಾಭಾರತದ ಪಾರಾಯಣಗಳು ನಮ್ಮ ನಾಡಿನಲ್ಲಿ ಎಡೆಬಿಡದೆ ನಡೆದಿದ್ದರೂ ಅದರ ರಹಸ್ಯಾರ್ಥವನ್ನು ನಮ್ಮ ಜನರ ಮನಸು ತಿಳಿಯಲಿಲ್ಲ. ಬಾಹ್ಯಾರ್ಥದಿಂದಲೆ ಸಮಾಧಾನ ಹಚ್ಚಿಕೊಳ್ಳುತ್ತಿದ್ದರು. ಯಕ್ಷಪ್ರಶ್ನೆಯ ರೂಪಕದ ಗುಟ್ಟು ತಿಳಿದು ಅದರಂತೆ ನಡೆದುಕೊಂಡಿದ್ದರೂ ನಾವು ಜೀವಂತರಾಗಬಹುದಾಗಿತ್ತು. ಕಾಲರೂಪಿಯಾದ ಯಕ್ಷನು ಕಾಲಕಾಲಕ್ಕೆ ಒಡ್ಡುವ ತೊಡಕುಗಳನ್ನು-ಪ್ರಶ್ನೆಗಳನ್ನು ತಿಳಿದುಕೊಂಡು ಬಿಡಿಸುವ ಪ್ರಯತ್ನಪಟ್ಟಿದ್ದರೆ ನಮ್ಮ ರಾಷ್ಟ್ರವು ಹೀಗೆ ಜೀವನ್ಮೃತಾ ವಸ್ಥೆಯನ್ನೈದುತ್ತಿರಲಿಲ್ಲ.

ತಲೆಯವರೂ (ತೋಳ್ಬಲದವರೂ) ಹೇಗೊ ಮೇಲೇಳುವುದಕ್ಕೆ ಹೆಣಗಾಡುತ್ತಿದ್ದರಾದರೂ ಅವರು ಸಂಕುಚಿತ ದೃಷ್ಟಿಯವರಾಗಿ ತಮ್ಮ 'ನ-ಕುಲ'ರನ್ನು ಮೇಲಕ್ಕೆತ್ತುವುದನ್ನೇ ಕಡೆಗಣಿಸಿದರು. ಅದು ತಮ್ಮ ಆದ್ಯ ಕರ್ತವ್ಯವೆಂಬುದನ್ನೂ ಮರೆತರು. ನಮ್ಮ ನಾಡಿನ ವಿಚಾರವಂತರ ಈ ಅಧರ್ಮಾಚರಣೆಯನ್ನು ಕಾಲನು ಸಹಿಸಲಿಲ್ಲ. ಸಹಿಸುವುದು ಸಾಧ್ಯವೂ ಇಲ್ಲ. ಮೇಲಣ ಎರಡೂ ಬಗೆಯ ಅಪರಾಧಕ್ಕಾಗಿ, ಅಧರ್ಮಾಚರಣಕ್ಕಾಗಿ ಕಾಲನಿಂದಾದ ಶಿಕ್ಷೆಯೆ ನಮ್ಮ ಈ ಪತಿತ ಪರಾವಲಂಬನದ ದಾಸ್ಯದ ಸ್ಥಿತಿ. ಕಾಲನ ಕೆಲವು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಕೊಟ್ಟು ಇದೀಗ ಒಬ್ಬ ಮಹಾತ್ಮನು ನಮ್ಮನ್ನು ಚೇತರಿಸಿ ಎದ್ದು ನಿಲ್ಲುವಂತೆ ಮಾಡಿದ್ದಾನೆ. ಆತನ ತಪಃ ಪ್ರಭಾವದಿಂದ ಭಾರತವು ಸ್ವಾತಂತ್ರ್ಯವನ್ನು ಪಡೆದುಕೊಂಡಿದೆ. ಆದರೆ ಇದೀಗ ಮತ್ತೆ ಹಲವು ಹೊಸ ಹೊಸ ಸಮಸ್ಯೆಗಳು ನಮ್ಮೆದುರು ಆಯೆಂದು ಬಾಯ್ದೆರೆದು ನಿಂತಿವೆ. ಅವುಗಳಿಗೆ ಸರಿಯಾದ ಉತ್ತರವು ದೊರೆತರೆ ಸರಿ. ಇಲ್ಲವಾದರೆ ಮತ್ತೆ ಕಾಲನ ಬಾಯಲ್ಲಿ ಬೀಳುವ ಹೆದರಿಕೆಯು ತಪ್ಪಿದ್ದಲ್ಲ.

ಯಕ್ಷನು ಇಂದು ನಮ್ಮೆದುರು ಒಡ್ಡಿರುವ, ನಾವು ಬಿಡಿಸಲೇ ಬೇಕಾದ ಇಂದಿನ ಕೆಲವು ಮಹತ್ವ ಪ್ರಶ್ನೆಗಳು:

೧. ಭಾರತ ಸ್ವಾತಂತ್ರ್ಯವು ನಿಜವಾಗಿಯೂ ನಮ್ಮ ಗುರಿಯೆ?

೨. ಹಾಗಾದರೆ, ಶ್ರೇಷ್ಠವಾವುದು, ಜಾತಿಧರ್ಮವೆ? ರಾಷ್ಟ್ರಧರ್ಮವೇ?

೩. ರಾಷ್ಟ್ರೀಯ ಸೈನ್ಯವಿಲ್ಲದೆ ಸ್ವಾತಂತ್ರ್ಯರಕ್ಷಣೆಯು ಸಾಧ್ಯವೆ?

೪. ಈಗಿನ ಜಾತಿಭೇದದ ಮೇಲೆ ನಿಂತಿರುವ ಸಮಾಜವು ರಾಷ್ಟ್ರೀಯ ಸೈನ್ಯನಿರ್ಮಾಣಕ್ಕೆ ಸಹಾಯಕವೆ? ವಿಘಾತಕವೆ?

೫. ಬ್ರಾಹ್ಮಣ ಇನಫಂಟ್ರಿ, ಲಿಂಗಾಯತ ಬ್ಯಾಟೇಲಿಯನ್, ಶೀಖರಪಡೆ, ಎಂಬೀ ತೆರನಾದ ಜಾತಿ ವಿಭಾಗಗಳು ಸೈನ್ಯದಲ್ಲಿ ರಾಷ್ಟ್ರೀಯತೆಯನ್ನು ದೃಢಪಡಿಸಬಲ್ಲುವೊ?

೬. ಪ್ರಜಾಪ್ರಭುತ್ವವು ನಮ್ಮ ಗುರಿಯೆ?

೭. ಹಾಗಾದರೆ ಜನ್ಮದಿಂದಲೆ ಕೆಲವು ಜಾತಿಗಳಿಗೆ ಹೆಚ್ಚಿನವು, ಕೆಲವು ಜಾತಿ ಕಡಿಮೆಯವು ಎಂಬ ಇಂದಿನ ಗ್ರಹಿಕೆಯು, ಪ್ರಜಾಪ್ರಭುತ್ವದ ಸಮಾನಭಾವದ ತತ್ವಕ್ಕೆ ಸುಸಂಗತವೆ?

೮. ಅದರಂತೆ, ಆಡಳಿತಕ್ಕೆ ಬೇಕಾಗುವ ಜನರನ್ನು ಆರಿಸುವಾಗಲೂ ನಿಯಮಿಸುವಾಗಲೂ ಗುಣಕ್ಕೆ ಪ್ರಥಮ ಸ್ಥಾನವಿರಬೇಕಷ್ಟೆ? ಜಾತಿಕುಲಗಳನ್ನು ಗಮನಿಸಿ ಅಥವಾ ಪ್ರಾಂತಾಭಿಮಾನದಿಂದ (ಕರ್ತೃತ್ವಶಾಲಿಗಳೂ ದಕ್ಷರೂ ಧೀಮಂತರೂ ಆದವರನ್ನು ದುರ್ಲಕ್ಷಿಸಿ) ಜನರನ್ನು ಆರಿಸಿದರೆ ಅಥವಾ ನಿಯಮಿಸಿದರೆ ಅವರು ಜಾಗತಿಕ ರಂಗದಲ್ಲಿ ರಾಜತಂತ್ರ ನಿಪುಣರಾದ ಕ್ರಿಪ್ಸ, ಮಾಲಟೋವರಂತಹ ಪ್ರಬಲರೊಡನೆ ಸರಿಸಮಾನರೆನಿಸಿ ಮುಂದುವರೆಯಲು ಸಾಧ್ಯವೆ? ಈ ಕಾರಣದಿಂದಲೂ ಇಂದಿನ ಸ್ವರೂಪದ ಜಾತಿಭೇದವು ಅಳಿಯುವುದು ಅನಿವಾರ್ಯವಾಗಿಲ್ಲವೆ?

೯. ಶುದ್ಧೀಕರಣದಿಂದ, ಮರಳಿ ಜನರನ್ನು ಹಿಂದುಗಳೆಂದು ಸ್ವೀಕರಿಸಬೇಕೆ?

೧೦. ಮರಳಿ ಹಿಂದುಗಳೆಂದು ಸ್ವೀಕರಿಸಲು ಒಪ್ಪಿದರೆ, ಇಂದು ಜಾತಿನಿಬದ್ಧವಾದ ನಮ್ಮ ಸಮಾಜದಲ್ಲಿ, ಸಂಸ್ಕಾರಪಡೆದು ಮರಳಿಬಂದವರ ಸ್ಥಾನಮಾನಗಳೇನು? ಅವರು ಆಯಾಯ ಮೊದಲಿನ ಜಾತಿಗಳಲ್ಲಿ ಸೇರಬೇಕೆ? ಅಥವಾ ಸಂಸ್ಕಾರದಿಂದ ಮರಳಿಬಂದವರ ಒಂದು ಹೊಸ ಜಾತಿಯೆ ನಿರ್ಮಾಣವಾಗಬೇಕೆ?

೧೧. ಸಂಸ್ಕಾರಹೊಂದಿ ಮರಳಿ ಬರುವ ಕ್ರಿಸ್ತಿ, ಮುಸಲ್ಮಾನ ಮೊದಲಾದ ಧರ್ಮದವರನ್ನು ಇಂದು ಉಚ್ಚಜಾತಿಯವರೆನಿಸುವ ಮಹಾಜನಗಳು ತಮ್ಮಿಂದ ದೂರವಿಡುತ್ತಿದ್ದರೆ ಆ ಜನಗಳು ಮರಳಿ ಒಳಗೆ ಬರಲು ಮನಸ್ಸು ಮಾಡಬಹುದೆ?

೧೨. ಸಂಸ್ಕಾರ ಹೊಂದಿ ಬಂದವರನ್ನು ಹಿಂದುಗಳನ್ನಾಗಿ ಸ್ವೀಕರಿಸಲು ಒಪ್ಪದೆ ಇದ್ದರೆ, ಪಂಜಾಬ, ಬಂಗಾಲಗಳಲ್ಲಿ ಮುಸಲ್ಮಾನರ ಒತ್ತಾಯಕ್ಕೆ ಸಿಲುಕಿ ಧರ್ಮಾಂತರ ಹೊಂದಿದ ಲಕ್ಷಾವಧಿ ಜನರು ಮಹಾತ್ಮಾಜೀಯವರ ಪುಣ್ಯದಿಂದ ಮರಳಿ ಹಿಂದುಗಳಾಗಲು ಮುಂದೆ ಬಂದವರನ್ನು ಮತ್ತೆ ಹಿಂದಕ್ಕಟ್ಟಿ ನಮ್ಮ ಎದುರಾಳಿಗಳಾದ ಪಾಕಿಸ್ತಾನಿಗಳ ಬಲವನ್ನು ಹೆಚ್ಚಿಸುವುದು ಆತ್ಮಘಾತಕ ಕೃತ್ಯವಾಗಲಿಕ್ಕಿಲ್ಲವೆ? ಸ್ವೀಕರಿಸಬೇಕಿದ್ದರೆ, ನಾವು ಉಚ್ಚ-ನೀಚ ಭೇದವನ್ನು ಮರೆತು ಅವರೆಲ್ಲರೊಡನೆ ಸಮಾನಭಾವದಿಂದ ನಡೆದುಕೊಂಬುವುದು (ಎಂದರೆ ಇಂದಿನ ಜಾತಿಭೇದವನ್ನು ತೊಡೆದುಹಾಕುವುದು) ಕರ್ತವ್ಯವಾಗಿಲ್ಲವೆ?

೧೩. ಹಿಂದೂ ಶಬ್ದವು ಮೂಲತಃ ದೇಶವಾಚಕ. ಇಂದು ಮತ್ತೆ ಅದೇ ಅರ್ಥದಲ್ಲಿ ಈ ಶಬ್ದವನ್ನು ಬಳಸಿ ಹಿಂದೂ ದೇಶದ ನಾಗರಿಕರೆಲ್ಲರೂ ಹಿಂದುಗಳು ಅಥವಾ ಹಿಂದೀಯರು ಎಂದರೆ ತಪ್ಪೇನು?

೧೪. ಮುಸಲ್ಮಾನರೆಲ್ಲರನ್ನೂ ಪಾಕಿಸ್ತಾನಕ್ಕೆ ತಳ್ಳುವುದು, ಅಥವಾ ಹಿಂದುಗಳನ್ನಾಗಿ ಮತಾಂತರಿಸುವುದು ನ್ಯಾಯವೆ? ಸಾಧ್ಯವೆ? ಹಾಗಾದರೆ ಅವರು ಭಾರತನಿಷ್ಠರಾಗಿ ಉಳಿದು ಪಂಚಮದಳದವರಾಗದಂತೆ ಅವರ ಮನಃಪ್ರವೃತ್ತಿಯಾಗಲು ಉಪಾಯಗಳು ಯಾವುವು?

೧೫. ಮನುಷ್ಯನು ಎಂಬುದು ಪುಲ್ಲಿಂಗ. ಆದುದರಿಂದ ಸ್ತ್ರೀಯರನ್ನು ಮನುಷ್ಯರೆಂದು ಎಣಿಸಬಹುದೆ?
೧೬. ಅವರೂ ಮಾನವರೆಂಬುದು ನಿಜವಿದ್ದರೆ ಗಂಡಸಿನಂತೆ ಅವರ ವ್ಯಕ್ತಿತ್ವ ವಿಕಾಸಕ್ಕೂ ಸಮಾಜದಲ್ಲಿ ಇಂಬು ಇರಬೇಕಷ್ಟೆ?

ಈ ಪ್ರಶ್ನೆಗಳು ನನಗೆ ಸ್ಪಷ್ಟವಾಗಿ ಕೇಳಬಂದುದು ಮೂಡಿ ಮಿನುಗಿ ಮಿಂಚಿಹೋದುದು ಈಗ ಎರಡು ವರ್ಷಗಳ ಮೊದಲು ಸಪ್ಟೆಂಬರ ತಿಂಗಳ ಮೊದಲನೆಯ ವಾರದಲ್ಲಿ. ೧೯೪೬ನೆಯ ವರುಷದ ಸಪ್ಟಂಬರ ತಿಂಗಳ ೨ನೆಯ ದಿನದಂದು ರಾಷ್ಟ್ರೀಯ ಮಹಾಸಭೆಯವರು ಕೇಂದ್ರದಲ್ಲಿ ತಾತ್ಪೂರ್ತಿಕ ಸರಕಾರವನ್ನು ಸ್ಥಾಪಿಸಿದರು. ಅಂದು ಸ್ವರಾಜ್ಯ ಸೂರ್ಯನು ಮುಸಲ್ಮಾನರ ಅನಾಚಾರ, ಅತ್ಯಾಚಾರಗಳ ಕಂಕಣಾಕೃತಿ ಗ್ರಹಣವು ಹಿಡಿದುಕೊಂಡೇ ಅಂದಿನ ಅರುಣೋದಯದ ಕಾಲಕ್ಕೆ ಪೂರ್ವಕ್ಷಿತಿಜದಲ್ಲಿ ಕಾಣಿಸಿಕೊಂಡನು.

ನವಕಾಲಿ ಮೊದಲಾದ ಕಡೆಗಳಲ್ಲಿ ಮುಸಲ್ಮಾನರು ಮಾಡಿದ ಹತ್ಯಾಕಾಂಡದ ಆ ಭೀಕರ ಸುದ್ದಿಗಳನ್ನು ಕೇಳಿ ಸ್ವರಾಜ್ಯದ ಸವಿಗನಸುಗಳೆಲ್ಲವೂ ಮಾಯವಾದುವು. ದಾರುಣವಾದ ಆ ಸುದ್ದಿಗಳಿಂದುಂಟಾದ ತಲ್ಲಣದಿಂದ ಆ ವಾರಾಂತವಾರವೆಲ್ಲವೂ ಮನಸ್ಸಿನಲ್ಲಾದ ಕಸಿವಿಸಿ ಹೇಳಲಾಸಲ್ಲ. ಪಂ. ಜವಾಹರಲಾಲರ ಹಲವಾರು ಆರ್ಥಿಕ, ಔದ್ಯೋಗಿಕ ಯೋಜನೆಗಳಿಂದ ಇನ್ನು ನಮ್ಮ ದೇಶವು ಉನ್ನತಸ್ಥಿತಿಗೆ ಬರುವುದು; ಜಗತ್ತಿನ ಪ್ರಮುಖ ರಾಷ್ಟ್ರಗಳ ಮಾಲಿಕೆಯಲ್ಲಿ ಸೇರುವುದು; ಎಂದು ಹಂಬಲಿಸಿ, ಹಾರಯಿಸುತ್ತಿದ್ದ ಜೀವಕ್ಕೆ ಈ ಸಾಮಾಜಿಕ ವಿಪ್ಲವದಿಂದ ಉಸಿರುಕಟ್ಟಿದಂತಾಯಿತು. ಸಭ್ಯ ಜೀವನಕ್ಕೆ ಜೀವನ ವಿಕಾಸಕ್ಕೆ ತೀರ ವಿಪರೀತವಾದ ಈ ಪರಿಸ್ಥಿತಿಯು ತಲೆದೋರಲು ಕಾರಣವೇನು? 'ಮೃತಂ ರಾಷ್ಟ್ರಂ ಅರಾಜಕಮ್;' ಪರದಾಸ್ಯದಿಂದ ಮುಕ್ತರಾಗಿ ಸ್ವರಾಜ್ಯವನ್ನು ಪಡೆದು ಸ್ವಾತಂತ್ರ್ಯ ಸುಖವನ್ನು ಅನುಭವಿಸಬೇಕೆಂದು ಹಾತೊರೆಯುತ್ತಿರುವಾಗಲೆ ದೇಶದಲ್ಲಿ ಅರಾಜಕತೆಯು ಹಬ್ಬಿ ಮತ್ತೆ ನಮ್ಮ ರಾಷ್ಟ್ರಕ್ಕೆ ಜೀವನ್ಮೃತಾವಸ್ಥೆಯು ಪ್ರಾಪ್ತವಾಗುವ ಲಕ್ಷಣಗಳು ಕಾಣಹತ್ತಿದುವು. ಇದಕ್ಕೆ ಕಾರಣವೇನೆಂದು ಚಿಂತಿಸುತ್ತಿರುವ ಕಾಲದಲ್ಲಿಯೆ ಮೇಲಣ ಹಲವು ಪ್ರಶ್ನೆಗಳು ಕಣ್ಣ ಮುಂದೆ ಕುಣಿಯಲಾರಂಭಿಸಿದುವು. ಭಾರತದೊಳಗಿನ ಯಕ್ಷಪ್ರಶ್ನೆಯ ಕತೆಯ ನೆನಪಾಯಿತು.

ನಮ್ಮ ಯಾವ ಸಾಮಾಜಿಕ ನೆಲಗಟ್ಟಿನ ಮೇಲೆ ಸ್ವಾತಂತ್ರ್ಯದ-ಪ್ರಜಾರಾಜ್ಯದ ಭವ್ಯ ರಾಜಮಂದಿರವನ್ನು ಕಟ್ಟತಕ್ಕವರಿರುವೆವೊ ಆ ನೆಲವೆ ಭದ್ರವಾಗಿ, ಗಟ್ಟಿಯಾಗಿ ಇಲ್ಲದೆ ಇದ್ದುದು ಅನುಭವಕ್ಕೆ ಬರಲಾರಂಭಿಸಿದೆ. ಜಾತಿದ್ವೇಷ, ಅಸೂಯಾದಿ ಹೆಗ್ಗಣಗಳ ಹೋರುಗಳು ಅಲ್ಲಲ್ಲಿ ಮುಚ್ಚಿ ಕೊಂಡಿದ್ದು ಅವು ಫಕ್ಕನೆ ಬಾಯ್ದೆರೆದಾಗ ಮನೆಯವರೆಲ್ಲ ಅದರಲ್ಲಿ ಮಾಯವಾಗುವ ಹೆದರಿಕೆಯೂ ಹಲವೆಡೆಗೆ ಉಂಟಾಗಿದೆ. ಸಾಧ್ಯವಾದಷ್ಟು ಬೇಗನೆ ಅದನ್ನು ಭದ್ರವಾದ ತಳಹದಿಯ ಮೇಲೆ ಅಡಿಯಿಂದ ಮಾಡದ ವರೆಗೆ ಹೊಸದಾಗಿ ಕಟ್ಟುವ ಆವಶ್ಯಕತೆಯು ಅಡಿಗಡಿಗೂ ಪ್ರತಿಯೊಬ್ಬರಿಗೆ ಎನಿಸುತ್ತಿದೆ. ಆದರೆ, ಸಾವಿರಾರು ವರ್ಷಗಳಿಂದ ತಲೆತಲಾಂತರಗಳಿಂದ ಇದ್ದು ಸಂಸಾರ ಮಾಡಿದ ಮನೆ. ಅದನ್ನು ಬದಲಿಸಿ ಕಟ್ಟುವುದಕ್ಕೆ ಅನೇಕರ ಮನಸು ಹಿಂಜರಿಯುತ್ತಲಿದೆ. ಹಲವೆಡೆಗೆ ಮನೆಯ ತೊಲೆ ಜಂತಿಗಳೇ ಮೈ ಮೇಲೆ ಬೀಳುವಂತಾಗಿದ್ದರೂ ಈ ಹಳೆಯ ಮನೆಯ ಮೇಲಣ ಮೋಹವು ಅದನ್ನು ಮಾರ್ಪಡಿಸಿಕೊಂಡು ಹೊಸದಾಗಿ ಕಟ್ಟಿಕೊಳ್ಳಲು ಅಡ್ಡಬರುತ್ತಿದೆ. ಹೀಗೆ ಸುಮ್ಮನೆ ಮೀನಮೇಷ ಮಾಡುತ್ತಿರುವುದು ಎಲ್ಲಿ ನಮ್ಮ ಜನದ ಸರ್ವಸ್ವನಾಶಕ್ಕೇ ಕಾರಣವಾಗುವುದೊ ಎಂಬ ಹೆದರಿಕೆಯುಂಟಾಯಿತು.

ನಿಂತ ನೆಲವೆ ಎದ್ದು, ಬಡೆಯಲು ಬಂದಂತೆ ನನಗಾದ ಆ ಅನುಭವವನ್ನು ಇನ್ನುಳಿದ ನನ್ನ ನೆರೆಹೊರೆಯವರಿಗೂ ಹೇಳಿ ಅವರ ವಿಚಾರ, ಅನುಭವವೇನೆಂದು ಅರಿತುಕೊಳ್ಳುವುದು ಕರ್ತವ್ಯವೆನಿಸಿತು. ನಮ್ಮ ಸಮಾಜದ ಬುಡಕಟ್ಟು ಅದಿರುತ್ತಿರುವುದರಿಂದ ಅದರ ಮೇಲೆ ನಾವು ನಿಲ್ಲಿಸಬೇಕೆಂದಿರುವ ಸ್ವರಾಜ್ಯ ಮಂದಿರವು ಸುಸ್ಥಿರವಾಗಿ ಎಂದೂ ತಾಳಿಬಾಳಲಾರದೆಂಬ ನನ್ನ ಎನಿಸಿಕೆಯು ಸುಳ್ಳೆಂದು, ಇದು ಕೇವಲ ನನ್ನ ಭ್ರಾಂತಿಯೆಂದು ಸಿದ್ಧವಾದರೆ ನನಗೂ ಅದರಲ್ಲಿ ಸಂತೋಷವೆ ಇದೆ. ಆದರೆ ಫಕ್ಕನೆ ಒಂದು ವೇಳೆ ನನ್ನ ಸಂದೇಹವೆ ನಿಜವಾದರೆ, ನನ್ನ ಕಂಡುದನ್ನು ಉಳಿದವರಿಗೂ ಹೇಳಿ ಸಕಾಲದಲ್ಲಿ ಎಚ್ಚರಿಸದೆ ಹೋದೆನಲ್ಲ,

ಎಂಬ ಮಿಡುಕಾಟಕ್ಕೆ ಕಾರಣವಾಗಬಾರದೆಂದು ಕಳೆದ ಎರಡು ವರುಷಗಳಿಂದ ಸಂಧಿದೊರೆತಾಗಲೆಲ್ಲ ಹಲವರೆದುರು ಅಲ್ಲಲ್ಲಿ ಈ ಯಕ್ಷಪ್ರಶ್ನೆಗಳನ್ನು ವಿವರಿಸುತ್ತಲೆ ಬಂದಿದ್ದೇನೆ.

ಆಗ ನನ್ನ ವಿಚಾರಗಳು ಕೆಲವರಿಗೆ ಸೇರಿದುವು; ಕೆಲವರಿಗೆ ಸೇರಲಿಲ್ಲ. ಮುಂದೆ ಆಗುವುದು ಆಗುತ್ತದೆ; ಈಗಲೆ ಅದರ ಚಿಂತೆಮಾಡಿ ಸುಮ್ಮನೆ ಕೊರಗುವುದೇತಕ್ಕೆ' ಎಂಬ ವಿಚಾರದವರು ಹಲವರು ದೊರೆತರು. ಹೋದಲ್ಲಿ ಮಾಡಿದ ಚರ್‌ಚೆ, ವಿಚಾರ-ವಿನಿಮಯದೊಡನೆ ಪತ್ರಿಕೆಗಳಲ್ಲಿ ಕೆಲವು ಲೇಖನಗಳನ್ನು ಬರೆದುದಾಯ್ತು. ಪ್ರತಿಯೊಂದು ಗುಂಪಿನವರೂ ತಮ್ಮ ಜಾತೀಯ ದೃಷ್ಟಿಯಿಂದಲೇ ಹೆಚ್ಚಾಗಿ ನೋಡುವರೆ ಹೊರತು, ಅಖಿಲ ರಾಷ್ಟ್ರೀಯ ಭಾವನೆಗೆ ಪ್ರಾಮುಖ್ಯತೆಯನ್ನು ಕೊಟ್ಟು ಅದಕ್ಕನುಗುಣವಾಗಿ ದೃಷ್ಟಿಯನ್ನು ತಿಳಿಮಾಡಿಕೊಂಡು ತಮ್ಮ ವಿಚಾರಗಳನ್ನು ಸರಿಪಡಿಸಿಕೊಳ್ಳಲು ಸಿದ್ಧರಿದ್ದವರು ತೀರ ವಿರಳವಾಗಿದ್ದುದೆ ಎಲ್ಲೆಡೆಯಲ್ಲೂ ಕಂಡುಬಂದಿತು. ಮಹಾತ್ಮಾಜಿಯವರ ಕೆಲವೊಂದು ಕಾರ್‍ಯಕ್ರಮಗಳ ಬಗೆಗೆ ಸ್ವಲ್ಪಭಿನ್ನಾಭಿಪ್ರಾಯವನ್ನು ಸೂಚಿಸಿದೊಡನೆ ರೊಚ್ಚುಗೊಳ್ಳುವ, ಹರಿಜನ ಪತ್ರಿಕೆಯನ್ನು ನಿತ್ಯಭಕ್ತಿಯಿಂದ ಓದುವ ಜನರು ಎಲ್ಲೆಲ್ಲೂ ತುಂಬಿದ್ದು ಅನುಭವಕ್ಕೆ ಬರುತ್ತಿದ್ದಿತಾದರೂ, ಆಗ ಗಾಂಧಿಜಿಯವರು ನವಕಾಲಿಯಲ್ಲಿ ನಡೆಸಿದ ಲೋಕೋದ್ಧಾರದ ಮಹಾಪ್ರಯೋಗದ ತಿರುಳೇನೆಂದು ಕೇಳಿದರೆ ಬೆಪ್ಪಾಗಿ ಬಾಯಿಬಾರದವರೆ ಬಹಳ. ಉಗಿಬಂಡಿಯ ನಿಲ್ದಾಣಗಳಲ್ಲಿ 'ಹಿಂದೂಪಾನಿ; ಮುಸಲ್ಮಾನಿಪಾನಿ' ಎಂಬ ಭೇದ ಬೇಡವೆಂದು ಮಹಾತ್ಮಾಜಿಯವರು ಉಪದೇಶಿಸುತ್ತಲಿರುವ ಮಾತಿನ ಮರ್ಮವೇನು? 'ಇಂದಿನ (ಅಂದಿನ) ಗಾಂಧೀಜೀ ಕೇವಲ ಖಾದಿಗಾಂಧಿಯಲ್ಲ; ಬರಿ ಹರಿಜನೋದ್ಧಾರಕ ಗಾಂಧಿಯೂ ಅಲ್ಲ; ಜಾತಿಭೇದ ನಿರ್ಮೂಲಕ ಮಾನವ ಕುಲೋದ್ಧಾರಕ ಗಾಂಧಿಜಿ ಇಂದಿನವರು. ಜಾತಿಬಂಧನಗಳನ್ನು ಹರಿದೊಗೆದು ಹೊಸ ಸಮಾಜಸ್ಥಾಪನೆಗೆ ನವಕಾಲಿಯಲ್ಲಿ ಆರಂಭಿಸಿರುವ ಈ ಗಾಂಧೀಜಿಯವರು ನಿಮಗೆ ಅನುಸರಣೀಯರೆ? ಅನುಕರಣೀಯರೆ ಎಂದು ಬಿಡಿಬಿಡಿಸಿ ಕೇಳಿದಾಗ ಹೌಹಾರಿ ಏನೂ ಮಾತಿಲ್ಲದಾದವರನ್ನು ಕಂಡಿದ್ದೇನೆ. ದೇವರನ್ನು ಜಗಲಿಯ ಮೇಲಿಟ್ಟು ಭಕ್ತಿಯಿಂದ ಪೂಜಿಸಿ ಕೈಮುಗಿದು ಆ ಮೇಲೆ ಮತ್ತೆ ಸ್ವೇಚ್ಛಾಚಾರಿಗಳಾಗಿ ನಡೆವ ಸನಾತನಿ ಆಸ್ತಿಕ ಭಕ್ತಗಣಗಳಂತೆ, ಗಾಂಧಿ-ಸ್ತುತಿಪಾಠಕರಾಗಿ ಗಾಂಧಿ ಅನುಯಾಯಿಗಳೆಂದು ಹೆಮ್ಮೆಪಟ್ಟುಕೊಂಬುವವರೇ ೧೦೦ಕ್ಕೆ ೯೫ಕ್ಕಿಂತಲೂ ಹೆಚ್ಚು ಜನವೆಂದು ನನಗೆ ಕಂಡಿತು.

ಪೂಜ್ಯ ಮಹಾತ್ಮಾಜಿಯವರ ಬಲಿದಾನದ ತರುವಾಯ ಈ ಮಾತು ಇನ್ನಿಷ್ಟು ನಿಚ್ಚಳವಾಗಿ ಎಲ್ಲರ ಅನುಭವಕ್ಕೆ ಬಂದಿತು. ಎರಡು ವರುಷಗಳ ಮೊದಲಿನಿಂದ ತಲೆದೋರುತ್ತಿದ್ದ ವಿಚಾರಗಳನ್ನು ಎಲ್ಲರ ಅರಿಕೆಗಾಗಿ ಬಲ್ಲಿದರ ಮುಂದೆ ಇರಿಸುವುದು ಅತ್ಯಗತ್ಯವೆನಿಸಿತು. ಇದು ಹೀಗೆಯೆ ಆಗಬೇಕೆಂದು ಹೇಳುವ ಅಧಿಕಾರವು ನನಗೆ ಇಲ್ಲ. ಅಥವಾ ಇದು ಹೀಗೆಯೆ ಆಗುವುದೆಂದು ಎದೆತಟ್ಟಿ ಹೇಳುವ ಭವಿಷ್ಯವಾದಿಯೂ ನಾನಲ್ಲ. ಇದರಲ್ಲಿ ಬಂದುವು ನನ್ನ ಕಂಡಿತದ ಕೆಲವು ಮಾತು ಮತ್ತು ಕೆಲವು ಸೂಚನೆಗಳು ಮಾತ್ರ. ಪ್ರವಾಹ-ಪತಿತರಾಗಿ ನಾವು ಹೊರಟಿದ್ದೇವೆ. 'ವಿಚಾರಿ' ಎಂದುಕೊಳ್ಳುವ ಮಾನವನಿಗೆ ಇದು ಭೂಷಣವಲ್ಲ. ಮಾನವ ಜೀವನದ ಗುರಿ ಮತ್ತು ಕಾಲಕಾಲದ ಯುಗಧರ್ಮಾದಿಗಳನ್ನು ಲೆಕ್ಕಕ್ಕೆ ಹಿಡಿದು ಆಯಾಕಾಲದ ಆವಶ್ಯಕತೆಗಳಂತೆ ನಮ್ಮ ಸಮಾಜರಚನೆಯನ್ನು ಮಾರ್ಪಡಿಸಿಕೊಳ್ಳುವುದರಲ್ಲಿಯೆ ಬುದ್ಧಿವಂತಿಕೆಯಿದೆ. ಸಮಾಜವೆಂಬುದು ಒಂದು ಸ್ಥಿರವಾದ ವಸ್ತುವಲ್ಲ. ಆದಕಾರಣ ಅದಕ್ಕೆ ಒಂದು ವಿಶಿಷ್ಟಕಾಲದಲ್ಲಿ ಮಾಡಿದ ಕಟ್ಟುಕಟ್ಟಳೆಗಳು ಆ ಕಾಲವು ಬದಲಾಗುತ್ತಲೆ ನಿರುಪಯುಕ್ತವಾಗುತ್ತವೆ. ಸಮಾಜವು ಯಾವಾಗಲೂ ಗತಿಯುಕ್ತವಾಗಿದೆ. ಅದು ಸ್ಥಿತ್ಯಾತ್ಮಕವಲ್ಲ. ನಿಂತ ವಸ್ತುವಲ್ಲ; ನಡೆದ ಸಂಗತಿ. ಆದ ಮಾತಲ್ಲ; ಆಗುತ್ತಿರುವ ವಿಷಯ. ಅದು ಕೇವಲ ಭೂತನಲ್ಲ; 'ಭವ್ಯವೂ' ಆಗಿದೆ. ಆದುದರಿಂದ ಬೆಳೆವ ವಸ್ತುವಿಗೆ ಆಗಾಗ ಅದರ ಮೈಗೆ ಸರಿಹೋಗುವ ಬಟ್ಟೆಗಳೇ ಬೇಕಲ್ಲವೆ? ಆದಕಾರಣ ಈಗ ಯಾವ ಬಗೆಯ ಸಮಾಜರಚನೆ ಬೇಕೆಂಬುದನ್ನು ಬಲ್ಲಿದರು ನಿರ್ಧರಿಸಬೇಡವೆ?

ಭಾರತಸ್ವಾತಂತ್ರ್ಯವೆ ನಮ್ಮ ಗುರಿಯಾಗಿದ್ದರೆ ಇಂದಿನ ನಮ್ಮ ಜಾತೀಯ ನಡವಳಿ, ಸಮಾಜ ಅದಕ್ಕೆ ಪೋಷಕವಾಗಿದೆಯೆ? ಎಂಬುದೆ ಇಲ್ಲಿ ಮುಖ್ಯಪ್ರಶ್ನೆ.

ಜಾತೀಯ ಸಮಸ್ಯೆಯ ಹಿನ್ನೆಲೆ

ನಮ್ಮ ಸಮಾಜದಲ್ಲಿ ಕಾಲಕ್ಕೆ ತಕ್ಕ ಮಹತ್ವದ ಕೆಲವು ಮಾರ್ಪಾಟುಗಳಾಗಬೇಕೆಂದು ಪ್ರಯತ್ನಿಸಿದ ಆಧುನಿಕರಲ್ಲಿ ಶ್ರೀರಾಜಾರಾಮ ಮೋಹನರಾಯರು ಮೊದಲಿಗರು (ಕ್ರಿ.ಶ. ೧೮೨೮) ಇವರು ಹಿಂದೂಸಮಾಜದೊಳಗಿನ ಜಾತಿಭೇದ ಮೊದಲಾದವುಗಳನ್ನು ತೊಡೆದು ಹಾಕಬೇಕೆಂದು ಪ್ರಯತ್ನಿಸಿದರೂ ಆಗ ಸಮಾಜವು ಈ ವಿಷಯದಲ್ಲಿ ತೀರ ವಿರೋಧವುಳ್ಳದಾಗಿತ್ತು.

ಕಾಲಚಕ್ರದಲ್ಲಿ ಸಿಲುಕಿ ಕಂಗೆಟ್ಟು ಜಾತಿಧರ್ಮಗಳ ಮೂಲೋದ್ದೇಶವನ್ನೆ ಮರೆತರೂ ನಮ್ಮ ಸಮಾಜವು ಎಂತಹ ಕಗ್ಗತ್ತಲೆಯೊಳಗಿಂದ ಪಾರಾಗಿ ಬಂದಿದೆಯೆಂಬುದನ್ನು ನೆನೆದರೆ ಯಾರಿಗಾಗಲಿ ಸೋಜಿಗವೆನಿಸದೆ ಇರದು. ಗೋವೆಯೊಳಗಿನ ಪರಂಗಿಗಳು ಕ್ರಿಸ್ತಧರ್ಮ ಪ್ರಸಾರಕ್ಕಾಗಿ ನಡಸಿದ ಅತ್ಯಾಚಾರಗಳನ್ನು ಎದುರಿಸಲು ಹಿಂದೂಸಮಾಜವು ನಡೆದುಕೊಂಡ ಬಗೆಯು ಅಂದಿನ ಮುಂದಾಳುಗಳ ತಿಳಿಗೇಡಿತನವನ್ನೆ ಬಯಲಿಗೆ ತರುತ್ತದೆ. ಧರ್ಮ ಪ್ರಸಾರಕ ಪಾದ್ರಿಗಳು, ಇರುಳು ಯಾವುದಾದರೂ ಒಂದು ಮನೆಯ ಮೇಲೆ ಮಾಂಸದ ಒಂದು ತುಂಡು ಚೆಲ್ಲಿದ್ದರೆ, ಮರುದಿನ ಹಿಂದೂ ಸಮಾಜವು ಆ ಮನೆಯವರನ್ನೆ ಜಾತಿಬಾಹಿರರೆಂದು ಅವರೊಡನೆ ಎಲ್ಲ ವ್ಯವಹಾರಗಳನ್ನು ನಿಲ್ಲಿಸುತ್ತಿತ್ತು! ತಮ್ಮ ಉಪದೇಶಕ್ಕೆ ಮನಮೆಚ್ಚಿ ಯಾರೂ ಕ್ರಿಸ್ತಿಗಳಾಗದೆ ಇರುವುದನ್ನು ಕಂಡು ಅಂದಿನ ಪಾದ್ರಿಗಳು ಈ ಹಂಚಿಕೆಯನ್ನು ಕಂಡುಹಿಡಿದು ತಮ್ಮ ಕೆಲಸವನ್ನು ಸಾಧಿಸಿದರು. ಹಲವರನ್ನು ಕ್ರಿಸ್ತಿಗಳನ್ನಾಗಿ ಪಡೆದುಕೊಂಡರು. ಆ ಮನೆಯವರು ಹಿಂದೂಧರ್ಮದಲ್ಲಿ ಉಳಿಯಲು ಹಂಬಲಿಸುತ್ತಿದ್ದರೂ ಅವರೊಡನೆ ಉಳಿದವರು ಅಸಹಕಾರವನ್ನೆ ಆರಂಭಿಸಿದ್ದರಿಂದ ಆ ಜನರಿಗೆ ಕ್ರಿಸ್ತಿಗಳಾಗದೆ ಬೇರೆ ದಾರಿಯೆ ಇರಲಿಲ್ಲ.

ಗೋವೆಯ ಪಾದ್ರಿಗಳು ಜುಟ್ಟು ಬಿಟ್ಟವರಿಗೆ ಧಾರ್ಮಿಕ ಕರವನ್ನು ಹಾಕಿದರು. ಚೆಂಡಿಕೆಯ ಆಕಾರದಂತೆ ಹೆಚ್ಚು ಅಥವಾ ಕಡಿಮೆ ಕರವನ್ನು ಕೊಡಬೇಕಾಗುತ್ತಿದ್ದಿತು. ಅನೇಕರು ಹೆಚ್ಚು ಚೆಂಡಿಕೆ ಇಟ್ಟು ಹೆಚ್ಚು ಕರವನ್ನು ಕೊಡುವುದರಲ್ಲಿ ಹೆಮ್ಮೆಪಡುತ್ತಿದ್ದರು. ಜುಟ್ಟದ ಕರವನ್ನು ಉಳಿದವರಿಗಿಂತ ಹೆಚ್ಚು ಕೊಡುವುದು ಅವರ ವಿಶೇಷ ಧರ್ಮಾಭಿಮಾನದ ದ್ಯೋತಕವೆಂದು ಅಂದಿನ ಜನದ ತಿಳುವಳಿಕೆಯಾಗಿತ್ತು! ಕಂನಾಡ ಕರಾವಳಿಯಲ್ಲಿ ಅಲ್ಬುಕರ್ಕನು ಹಾಗೂ ಪೋರ್ತುಗೀಸ ಪಾದ್ರಿಗಳು ಬಂದು ಧರ್ಮಪ್ರಸಾರಕ್ಕಾಗಿ ನಡಸಿದ ಕೋಲಾಹಲ ಕಾಲದ ಇತಿಹಾಸದಲ್ಲಿ ಅಂದಿನ ನಮ್ಮ ಧಾರ್ಮಿಕ ಕಲ್ಪನೆಗಳ ಚಿತ್ರವೂ ಚೆನ್ನಾಗಿ ಒಡಮೂಡಿ ನಿಂತಿದೆ. ೧೭, ೧೮, ೧೯ನೆಯ ಶತಮಾನಗಳಲ್ಲೂ ನಮ್ಮ ಜಾತಿ, ಧರ್ಮಗಳ ತಿಳುವಳಿಕೆಗಳು ದಿನದಿನಕ್ಕೆ ಹೀಗೆಯೆ ವಿರೂಪಗೊಳ್ಳುತ್ತಲೆ ನಡೆದುದು, (ಒಂದೆರಡು ಅಪವಾದಗಳನ್ನು ಬಿಟ್ಟರೆ) ಆ ಕಾಲದಲ್ಲಿ ನಮ್ಮ ರಾಷ್ಟ್ರದಲ್ಲಾದ ಹಲವು ಘಟನೆಗಳಿಂದ ಸ್ಪಷ್ಟವಾಗುತ್ತದೆ.

ಹೆರರು ಮುಟ್ಟಿದರೆ ಮೈಲಿಗೆಯಾಗುತ್ತದೆಂದು ತನ್ನ ನೆರಳಿಗೆ ತಾನೇ ಹೆದರಿ ಹಿಂದೂ ಸಮಾಜವು ಸಂಕೋಚಗೊಂಡಿತು. ಕ್ಷೀಣವಾಗುತ್ತ ನಡೆದಿತು. ತಾವು ಧಾರ್ಮಿಕರು, ತಾವು ಪವಿತ್ರರು ಎಂಬ ಈರ್ಷೆಯಲ್ಲಿ ಪ್ರತಿಯೊಂದು ಜಾತಿಮತದವರೂ ಒಬ್ಬರಿಂದೊಬ್ಬರು ದೂರವಾಗುತ್ತ ನಡೆದರು. ಒಬ್ಬರನ್ನೊಬ್ಬರು ಕೀಳ್ಗೆಯಲಾರಂಭಿಸಿದರು. ಮುಸಲ್ಮಾನರು ಮೈಮೇಲೆ ಬಂದರು. ಅವರು ಏರಿಬಂದಂತೆ ನಮ್ಮ ಮಡಿಯನ್ನು ಕಾಯ್ದುಕೊಳ್ಳಲು ನಾವು ಹಿಂದೆ ಹಿಂದೆ ಸರಿಯುತ್ತ ನಡೆದೆವು. ಭಾರತವು ಸ್ವಾತಂತ್ರ್ಯವನ್ನು ಕಳೆದುಕೊಂಡಿತು. 'ದೇಶವು ಹೋಗಲಿ ನಮ್ಮ ಧರ್ಮವೊಂದು ಉಳಿದರೆ ಸಾಕು' ಎಂಬ ಪ್ರವೃತ್ತಿಯು ತೋರಿಬಂತು. ಪರಕೀಯರ ಸೇವಕರಾಗಿ-ತಮ್ಮ ದೇಶವನ್ನು ದಾಸ್ಯದಲ್ಲಿಡಲು ಕಾರಣರಾಗಿ ಬದುಕುತ್ತಿದ್ದರೂ ಭವ್ಯವಾಗಿ ಜುಟ್ಟು, ಜನಿವಾರ, ಲಿಂಗ, ಮುದ್ರೆಗಳನ್ನು ಧರಿಸಿ ತಾವು ಪರಮಧಾರ್ಮಿಕರೆಂಬ ಭ್ರಾಂತಿಯಲ್ಲಿ ಜನ ಹೊರಳಾಡುತ್ತಲಿದ್ದಿತು.

ಬ್ರಿಟಿಷರು ಬಂದರು. ಅವರು ದೇಶವನ್ನು ಮುಸಲ್ಮಾನರಂತೆ ಹುಂಬತನದಿಂದ ಸುಲಿಯಲಿಲ್ಲ. ಮುಸಲ್ಮಾನರು ದಾಳಿಮಾಡಿ ದೇವಸ್ಥಾನಗಳನ್ನೂ ನಾಡಿನ ಸಿರಿವಂತರನ್ನೂ ಲೂಟಿಮಾಡುತ್ತಿದ್ದರು. ಒತ್ತಾಯದಿಂದ ಧರ್ಮಾಂತರಗಳನ್ನು ನಡೆಸುತ್ತಿದ್ದರು. ಹಿಂದೂ ಹೆಣ್ಣುಮಕ್ಕಳನ್ನು ಓಡಿಸುತ್ತಿದ್ದರು. ಈ ಕಾರಣದಿಂದ ತೀರ ಅಸಹ್ಯವಾಗಿ ಆಗ-ಈಗ ಹಿಂದೂಜನ ಪುಂಡು ಏಳುತ್ತಲಿತ್ತು. ತಮ್ಮ ಧರ್ಮರಕ್ಷಣೆಗಾಗಿ 'ಹಿಂದೂರಾಯ ಸುರತ್ರಾಣರು' ಮುಂದೆ ಬಂದರು. 'ಹಿಂದೂ ಪದಪಾದಶಾಹಿ' ತಲೆಯೆತ್ತಲು ಹವಣಿಸಿತು. ಆದರೂ ಇದರಲ್ಲಿ ನಿಜವಾದ ರಾಜಕೀಯ ಸ್ವಾತಂತ್ರ್ಯದ ಗುರಿಯಿರಲಿಲ್ಲ. ಹದಿನಾರನೆಯ ಶತಕದ ಸಂಕುಚಿತ ಧಾರ್ಮಿಕ ಭಾವನೆಯ ಮಾದರಿಯನ್ನು ತೋರಿಸುವ ಎರಡು ಉದಾಹರಣಗಳನ್ನು ಇಲ್ಲಿ ಎತ್ತಿ ಹೇಳಬಹುದು. ರಕ್ಕಸತಂಗಡಿಯ ಕಾಳಗದಲ್ಲಿ 'ಹಿಂದೂರಾಯ ಸುರತ್ರಾಣ'ರೆನಿಸಿದ ವಿಜಯನಗರದ ರಾಜರ ಎದುರಾಳಿಗಳೆಲ್ಲ ಮುಖ್ಯವಾಗಿ ಮುಸಲ್ಮಾನರೆ ಇದ್ದರಷ್ಟೇ. ಅವರು ಈ ಹಿಂದೂರಾಜ್ಯವನ್ನು ಸಮೂಲ ನಾಶಮಾಡಲು ಹೊಂಚು ಹಾಕಿದ್ದುದೂ ಸುಪ್ರಸಿದ್ಧವಿದೆ. ಆದರೆ, ಹೀಗೆ ಹಿಂದೂ ರಾಜ್ಯವನ್ನು ಸಂಪೂರ್ಣ ನಾಶಮಾಡಲು ಅಣಿಯಾದ ಹಗೆಗಳ ಸೈನಿಕರಲ್ಲಿ ಹಿಂದೂ ವೀರರೂ ಸೇರಿಕೊಳ್ಳಬೇಕೆ? ಇವರೆಂತಹ ಹಿಂದುಗಳು?

ವಿಜಯನಗರದ ಕೊನೆಯ ರಾಜರು ಹಿಂದೂ ಧರ್ಮದ ಒಂದು ವಿಶಿಷ್ಟ ಮತಕ್ಕೆ ಒಲಿದುದರಿಂದ, (ಹಿಂದೂ ಧರ್ಮದ) ಇನ್ನೊಂದು ಪಂಥದವರು ತಮ್ಮ ವಿಶಿಷ್ಟ ಮತದ ಆವೇಶದಿಂದ ಮುಸಲ್ಮಾನರೊಡನೆ ಒಂದುಗೂಡಿ ವಿದ್ಯೆಕಲೆಗಳ ಆಗರವಾದ ವಿಜಯನಗರವನ್ನೇ ಹಾಳುಮಾಡಲು ಅವರಿಗೆ ನೆರವಾದರಂತೆ! ತಮ್ಮ ಮತದ ವೀರಾವೇಶದಿಂದ ನೆರವೇರಿಸಿದ ಎಂತಹ ಸತ್ಕಾರ್ಯವಿದು! ಇಂದು ಇದನ್ನು ಅಭಿಮಾನದಿಂದ ಬರೆದು ಪ್ರಕಟಿಸುವವರೂ ದೊರೆಯುವರಲ್ಲ!

'ನಮ್ಮ ಮತ ಮಿಗಿಲು;' 'ನಮ್ಮ ಪಂಥ ಹಿರಿದು;' 'ನಮ್ಮ ಮಠ ಶ್ರೇಷ್ಠ' ಎಂಬೀ ಬಗೆಯ ಹೆಮ್ಮೆ ಹೆಗ್ಗಳಿಕೆಯಲ್ಲಿ ಮೈಮರೆತಿರುವಾಗ ಬ್ರಿಟಿಶರ ಕೈಗೆ ಇಲ್ಲಿಯ ರಾಜ್ಯದಾಡಳಿತ ಬಂದುದು ನಮ್ಮ ದೇಶದ ಬಹುಜನ ಸಮಾಜಕ್ಕೆ ಬಹಳ ಸುಖಾವಹವೆನಿಸಿತು. ಏಕೆಂದರೆ ಪ್ರತಿಯೊಂದು ಮತ ಪಂಥದವರಿಗೂ ಮುಸಲ್ಮಾನರ ಕಾಲದ ಯಾವ ಅಡ್ಡಿ ಆತಂಕಗಳಿಲ್ಲದೆ ತಮ್ಮ ಧರ್ಮ-ಕರ್ಮಗಳಲ್ಲಿ ನಿರತರಾಗಲು ಅನುಕೂಲ ವಾತಾವರಣವು ದೊರೆತಂತೆ ಎನಿಸಿತು. ಬ್ರಿಟೀಷರು ರಾಜಕೀಯ ಸ್ವಾತಂತ್ರ್ಯವನ್ನು ಕಸಿದುಕೊಂಡು ಅದರ ಬೆಲೆಯೆಂಬಂತೆ ಇಲ್ಲಿಯ ಜನರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ದಯಪಾಲಿಸಿದರು. ಮುಸಲ್ಮಾನರ ಕಾಲದಲ್ಲಿ ಎರಡೂ ಇದ್ದಿಲ್ಲ. ಈಗ ಅರ್ಧವಾದರೂ ದೊರೆತ ಸಂತೋಷ ನಮ್ಮವರಿಗೆ! 'ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ'. ನಮ್ಮ ಅಂದಿನ ಪಂಡಿತರು ತಮಗೆ ದೊರೆತ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಹಿಗ್ಗಿದರು. ಈ ಹಿಗ್ಗಿನಲ್ಲಿ ನಮ್ಮ ನಾಡಿಗರಿಗೆ, ಭಾರತದಿಂದ ಇಂಗ್ಲೆಂಡಿನ ಕಡೆಗೆ ಭರದಿಂದ ಹೊನ್ನಿನ ಹೊಳೆ ಹರಿದುಹೋಗ ಹತ್ತಿರುವುದೆಂಬ ಅರಿವೂ ಇರಲಿಲ್ಲ! ಮುಸಲ್ಮಾನರಂತೆ ಲೂಟಿ ಮಾಡದಲೆ ಶಾಂತವಾದ ಅಹಿಂಸಾತ್ಮಕ ರೀತಿಯಲ್ಲಿ ನಮ್ಮ ರಾಷ್ಟ್ರದ ರಕ್ತಶೋಷಣಮಾಡುವ ಬ್ರಿಟಿಷರ ಹದವು ಗೊತ್ತಾಗಲು ನಮಗೆ ಅದೆಷ್ಟೊ ಕಾಲವು ಹಿಡಿದಿತು! ಇಪ್ಪತ್ತನೆಯ ಶತಮಾನದ ಪ್ರಥಮ ದಶಕ[illegible]ಯಿತು!

> The plunder of Bengal which after the victories of Clive, flowed into the country (England) in a broad stream for about thirty years. This illgotten wealth played the same part in stimulating England's industries....'

ಎಂದು ಡೀನ್‌ಇಂಗರು ತಮ್ಮ ನಿಸ್ಪೃಹವಿಚಾರದ ಪ್ರಬಂಧಗಳಲ್ಲಿ ಬಿಚ್ಚುಮಾತಿನಲ್ಲಿ ಹೇಳಿದ್ದಾರೆ. ನಮ್ಮ-ನಾಡಿಗರು ತಮ್ಮ ತಮ್ಮ ಜಾತಿ, ಧರ್ಮ, ಮತಗಳ ಅನುಷ್ಠಾನದಿಂದ ಮೋಕ್ಷಸಂಪಾದನ ಕಾರ್ಯದಲ್ಲಿ ಆಸಕ್ತರಾಗಿದ್ದಾಗ ಬ್ರಿಟಿಷರು, ಇಲ್ಲಿಂದ ನಮ್ಮವರು ತ್ಯಾಜ್ಯವೆಂದು ಕಡೆಗಣಿಸಿದ ಭೌತಿಕ ಸಂಪತ್ತನ್ನು ಎತ್ತಿಕೊಂಡೊಯ್ಯುವುದರಲ್ಲಿ ತತ್ಪರರಾಗಿದ್ದರು. ಪರಮಾತ್ಮನು ಯಾರು ಏನನ್ನು ಬೇಡುವರೊ ಅದನ್ನು ಅವರಿಗೆ ಅನುಗ್ರಹಿಸುತ್ತಾನೆ. ಸತ್ತ ಮೇಲಿನ ಸ್ವರ್ಗ, ಮೋಕ್ಷದ ಸಂಕಲ್ಪ, ನಮ್ಮದು. ಅದು ನಮ್ಮವರಿಗೆ ದೊರೆತಿತು.

೧೮೫೭ರ ಕ್ರಾಂತಿಯ ನೆಪಮಾಡಿ ಬ್ರಿಟಿಶರು ನಮ್ಮ ನಾಡಿನ ಧಾರ್ಮಿಕ ನಡೆವಳಿಗಳಲ್ಲಿ ಕೈಹಾಕದಿರುವ ಆಶ್ವಾಸನವನ್ನಿತ್ತರು. ನಮ್ಮ ಜನದೊಳಗಿನ ರೂಢಿಮೂಢತೆ; ಜಾತಿ-ಧರ್ಮಗಳ ವಿಪರೀತ ಹೆಮ್ಮೆಗಳ ಲಾಭವನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯದ ಭದ್ರತೆಗೆ ಪಡೆದುಕೊಂಡರು. ನಮ್ಮೊಳಗಿನ ಜಾತಿ ಭೇದಗಳ ಭೂಮಿಯಲ್ಲಿ ಬ್ರಿಟಿಷರ ಭೇದನೀತಿಯು ಹುಲುಸಾಗಿ ಬೆಳೆದಿತು. ಹಿಂದೂ-ಮುಸಲ್ಮಾನವೆಂಬ ಈರ್ಷೆಯೊಡನೆ ಬ್ರಾಹ್ಮಣ-ಬ್ರಾಹ್ಮಣೇತರ, ಹಿಂದುಳಿದವರು-ಮುಂದುವರಿದವರು, ಸ್ಪೃಶ್ಯರು- ಅಸ್ಪೃಶ್ಯರು.... ಎಂದು ಮುಂತಾದ ಬಣಬಣಗಳೊಳಗಿನ ಸಂಘರ್ಷಣೆಗಳು ಬ್ರಿಟಿಷರ ಪ್ರೇರಣೆಯಿಂದ ಮೆಲ್ಲಗೆ ತಲೆಯೆತ್ತಿದುವು. ಧಾರ್ಮಿಕ ವಿಷಯಗಳಲ್ಲಿ ತಟಸ್ಥರಾಗಿ ಉಳಿಯುವ ಪ್ರತಿಜ್ಞೆ ಮಾಡಿದ ಬ್ರಿಟಿಷರು ಜಾತಿ ಮತಗಳೊಳಗಿನ ವೈಷಮ್ಯವನ್ನು ಹೋಗಲಾಡಿಸುವ ಅಧಿಕಪ್ರಸಂಗವನ್ನು ಮಾಡಲಿಲ್ಲ. ಸಾಧ್ಯವಿದ್ದಲ್ಲಿ ಒಂದೊಂದು ಮತ, ಪಂಥದವರಿಗೂ ಅವರವರ ಜಾತಿಮತದ ಹೆಮ್ಮೆ ಹೆಚ್ಚುಗಲು ಕೈಯಿಂದಾದಷ್ಟು ನೆರವಾದರು. ವಿರೋಧಿಸಲಿಲ್ಲ. ಜಾತಿಬಣಗಳೊಳಗಿನ ಮಾತುಗಳಲ್ಲಿ ತಾವು ತಟಸ್ಥರಾಗಿ ಉಳಿಯುವೆವೆಂಬ ವಚನವನ್ನು ಕರ್ತವ್ಯ ಬುದ್ಧಿಯಿಂದ ಬಹಳ ಧೂರ್ತತನದಿಂದ ಕೊನೆಯವರೆಗೂ ಪಾಲಿಸಿದರು.

ನಮ್ಮೊಳಗೆ ಇದ್ದ ಜಾತಿಭೇದಗಳ ಲಾಭ ಪಡೆದು ಬ್ರಿಟಿಶರು ತಮ್ಮ ರಾಜ್ಯವನ್ನು ಇಲ್ಲಿ ಸ್ಥಿರವಾಗಿ ಉಳಿಸಿಕೊಳ್ಳಲು ಹೆಣಗಾಡಿದರೆಂಬ ವಿಧಾನವು ಕೆಲವರಿಗೆ ನಿರಾಧಾರವಾದ ಕಾಲ್ಪನಿಕ ಸಂಗತಿಯೆನಿಸಬಹುದು. ಅಂತವರು ಕೆಳಗಣ ಈ ಅವತರಣಿಕೆಯನ್ನು ಮನನ ಮಾಡಬಹುದು. ಇದನ್ನು ಬರೆದವನು ಸರ್ ಜಾನ್ ಸ್ಟ್ರಾಚಿ, ಜಿ. ಸಿ. ಎಸ್.ಐ. ಎಂಬ ಒಬ್ಬ ಆಂಗ್ಲ ಅಧಿಕಾರಿಯು ಹಿಂದೂದೇಶದ ಆಡಳಿತದ ವರದಿಯ ಗ್ರಂಥದಲ್ಲಿ ಆತನು ಬರೆದಿರುವುದೇನೆಂದರೆ:

> Nothing could be more opposed of the policy and universal practice of our Government in India than the old maxim of divide and rule; the maintenance of peace among all classes has always been recognised as the most essential duties of our `bellingerent civilisation', but this should not blind us to the fact that the existatnce side by side of these hostile creeds is one of the strong points in our political position in India, the better class of Mahomedans are a sorce of strength and not of weakness.

ಡಾ. ಸೈಯದ್‌ಹುಸೇನರು ಎಂಬ Revising India ಗ್ರಂಥದಲ್ಲಿ ಬ್ರಿಟಿಶರ ಭೇದನೀತಿಯು ೧೮೫೯ರಿಂದಲೆ ಆಚರಣೆಯಲ್ಲಿ ಇದ್ದುದನ್ನು ಸಾಧಾರವಾಗಿ ಉಲ್ಲೇಖಿಸಿದ್ದಾರೆ.

'Lord Elphinstone said in 1859. Divide at Imperia is the old Roman motto and it should be ours'

ಲಾರ್ಡ ಎಲ್‌ಫಿನ್ಸಟನ್‌ನು ಭೇದನೀತಿಯಿಂದಲೇ ತಾವು ಇಲ್ಲಿ ಆಳಬೇಕೆಂದು ನಿರ್ಧರಿಸಿದ್ದಂತೆ ಲಾರ್ಡ ಎಲ್ಜಿನ್‌ನೆಂಬ ವೈಸರಾಯನೂ ಅಭಿಪ್ರಾಯಪಟ್ಟಿದ್ದಾನೆ. Keep the Hindu and Muslims devided ಹಿಂದೂ ಮತ್ತು ಮುಸಲ್ಮಾನರು ಒಬ್ಬರೊಬ್ಬರನ್ನು ಹಗೆಗಳಂತೆ ಕಾಣುವ ಹಾಗೆ ಹಂಚಿಕೆ ಮಾಡತಕ್ಕದ್ದೆಂಬ ವಿಚಾರವನ್ನು ಎಲ್ಜಿನ್ ಪ್ರಭೃತಿಗಳು ಸ್ಪಷ್ಟವಾಗಿ ಬರೆದಿಟ್ಟಿದ್ದಾರೆ. (ಮಾಡರ್ನರಿವ್ಯೂ ೧೯೪೭, ನವೆಂಬರ ಸಂಚಿಕೆ).

ಇಂಗ್ರೇಜಿ ವಿದ್ಯೆಯು ಬಂದ ಬಳಿಕ ಕೆಲಕಾಲದಲ್ಲಿ ನಮ್ಮ ನಾಡಿನ ಜನಗಳಲ್ಲಿ ತಮ್ಮ ತಮ್ಮ ಜಾತಿಯ ಹೆಮ್ಮೆಗೆ ಕೊಂಬು ಮೂಡಿ ಅವರೆಲ್ಲ ಒಬ್ಬರಿಂದೊಬ್ಬರು ಸಿಡಿದು ದೂರವಾಗಲಾರಂಭಿಸಿದರು. ಇಂಗ್ರೇಜಿಯರ ವಿಶಿಷ್ಟ ಶಿಕ್ಷಣಪದ್ಧತಿಯಿಂದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಭಾವನೆ, ರಾಷ್ಟ್ರೀಯತ್ವವು ಸ್ವಲ್ಪವೂ ಅಂಕುರಿಸದೆ ವೈಯಕ್ತಿಕ ಸ್ವಾರ್ಥಬುದ್ಧಿಯೆ ತಾನೆ ತಾನಾಗಿ ಬೆಳೆದಿತು. ಶಾಲೆ-ಕಾಲೇಜುಗಳಲ್ಲಿ ಸಾಮೂಹಿಕ, ಸಾಂಘಿಕ ರಾಷ್ಟ್ರೀಯ ಭಾವನಾಪೋಷಕ ಯಾವ ಚಟುವಟಿಕೆಗಳಿಗೂ ಇಂಬು ಇರಲಿಲ್ಲ.

ವಿದ್ಯಾರ್ಜನೆಯ ಕಾಲದಲ್ಲಿ ಇಂಗ್ರೇಜಿ ಭಾಷೆಯೊಂದು ಚೆನ್ನಾಗಿ ಬಂದರಾಯಿತು. ಆ ವಿದ್ಯಾರ್ಥಿಗೆ ಮುಗಿಲು ಮೂರೇ ಗೇಣು. ಜ್ಞಾನಶಾಖೆಗಳ ಆಳವಾದ ಅಭ್ಯಾಸವು ವಿದ್ಯಾರ್ಥಿಗಳ ಗುರಿಯಾಗಿರದೆ, ಸರಕಾರಿ ನೌಕರಿಗೆ ಬೇಕಾಗುವ ಅರ್ಹತೆಯನ್ನು ಪಡೆಯುವುದೇ ಅವರ ಶಿಕ್ಷಣದ ಧ್ಯೇಯವಾಗಿತ್ತು. ಆಗಿನ ವಿದ್ಯಾರ್ಥಿಗಳಲ್ಲಿ ಬ್ರಿಟಿಷ ಸಾಹೇಬನನ್ನು ತಾನು ಹೇಗೆ ಸಂತೋಷಗೊಳಿಸಲು ಸಮರ್ಥನಾದೇನೆಂಬ ಚಿಂತೆಯೆ ಚಿಂತೆ. ಶಿಕ್ಷಣವನ್ನು ಪಡೆದು ಸುಶಿಕ್ಷಿತನಾದ ತನಗೆ, ಸಾಮಾಜಿಕ ಹೊಣೆ, ರಾಷ್ಟ್ರೀಯ ಕರ್ತವ್ಯವು ಏನಾದರೂ ಉಂಟೆಂಬ ವಿಚಾರವು ಕೂಡ ಸೋಂಕುತ್ತಿದ್ದವರು ವಿರಳ. ಇಂಗ್ರೇಜಿ ಕಲಿತವರ ಸಂಖ್ಯೆ ಹೆಚ್ಚುತ್ತ ಹೋಗಿ, ಅವರ ಅಪೇಕ್ಷೆಗೆ ತಕ್ಕಂತಹ ಕೆಲಸಗಳು ದೊರೆಯದಾದ ಮೇಲೆ, ನಮ್ಮ ದೇಶದಲ್ಲಿ ಇಂತಹ ಕೆಲಸಗೇಡಿಗಳೊಳಗಿಂದಲೇ ಮುಂದೆ ಸಾವಿರಾರು ಸಂಖ್ಯೆಯಿಂದ ದೇಶಭಕ್ತರ ಸಂಖ್ಯೆಯು ವೃದ್ಧಿಂಗತವಾಗುತ್ತ ಬಂದಿತು. ಸರಕಾರಿ ನೌಕರಿಗಳಲ್ಲಿ ಇಂಗ್ರೇಜಿ ಕಲಿತವರ ಬೇಡಿಕೆಯು ವಿಶೇಷವಾಗಿದ್ದು ನೌಕರಿಗಳು ಸುಲಭಸಾಧ್ಯವಿದ್ದಾಗ ದೇಶದ ಸೇವೆಯ ನೆನಪಾದ ಮಹಾಮಹಿಮರು ಕ್ವಚಿತ. ಆದುದರಿಂದಲೆ ಲೋಕಮಾನ್ಯ ತಿಲಕ, ಆಗರಕರ, ಗೋಖಲೆ, ಲಾಲಾಲಜಪತರಾಯ, ಬಿಪಿನಚಂದ್ರಪಾಲ ಮೊದಲಾದ ಆ ಪೀಳಿಗೆಯ ತ್ಯಾಗವೀರರು ಭಾರತೀಯರಿಗೆಲ್ಲ ಪರಮ ವಂದ್ಯರಾಗಿದ್ದಾರೆ.

ಬ್ರಿಟಿಷರಿಗೆ ಇಲ್ಲಿ ತಮ್ಮ ಆಡಳಿತವನ್ನು ಸುಸ್ಥಿರಗೊಳಿಸುವ ದೃಷ್ಟಿಯಿಂದ ನಮ್ಮ ನಾಡಿನ ಜಾತಿಪಂಗಡಗಳಲ್ಲಿ ಹಿಂದೂ-ಮುಸಲ್ಮಾನವೆಂಬ ಭೇದವು ಬಹಳೇ ಉಪಯುಕ್ತವಾಯಿತು. ಇದರಂತೆ ಬ್ರಾಹ್ಮಣ-ಬ್ರಾಹ್ಮಣೇತರವೆಂಬುದರ ಲಾಭವನ್ನೂ ಬ್ರಿಟಿಷರು ಪಡೆಯದೆ ಇರಲಿಲ್ಲ; ನಮ್ಮ ನಾಡಿನ ಸಾಹಿತ್ಯ ಸಂಸ್ಕೃತಿಗಳ ಅಭ್ಯಾಸಿಗಳಾದ ಪಾಶ್ಚಾತ್ಯ ಸಂಶೋಧಕರು ಕಂಡು ಹಿಡಿದ ಹಲಕೆಲವು ಸಿದ್ಧಾಂತಗಳು ಇಲ್ಲಿಯ ಜಾತಿಮತಗಳ ಭಿನ್ನಭಾವಕ್ಕೆ ಪುಟಗೊಟ್ಟವು. ಹಿಂದೆ ಆಗಿ ಹೋದ ಐತಿಹಾಸಿಕ ಘಟನೆಗಳನ್ನು ರಾಷ್ಟ್ರೀಯ ಐಕ್ಯಕ್ಕೆ ಅನುಕೂಲ ವಾಗುವಂತೆ ವಿವರಿಸಿ ಹೇಳಬಹುದು; ಅದರಂತೆ ದೇಶದಲ್ಲಿ ಎಂದೆಂದೂ ಒಕ್ಕಟ್ಟು ತಲೆದೋರದಂತೆ ಪ್ರತಿಪಾದಿಸಬಹುದು. ಆದುದರಿಂದ ಅದನ್ನು ತಿಳಿಸಿ ಹೇಳುವ ಬಗೆಯು ಬಹಳ ಮಹತ್ವದ್ದಾಗಿರುತ್ತದೆ. ಆದರೆ ಇದರ ಕಡೆಗೆ ವಿಶೇಷ ಗಮನ ಕೊಡದೆ ಸಂಶೋಧಕರು ಬರೆದ ಹಲವು ಲೇಖನ, ಗ್ರಂಥಗಳು ನಮ್ಮೊಳಗಿನ ಅನೈಕ್ಯತೆಯು ದೃಢವಾಗುವುದಕ್ಕೆ ತುಂಬ ಸಹಕಾರಿಗಳಾಗಿವೆ. ಮ್ಯಾಕ್ಸಮುಲ್ಲರ ಮೊದಲಾದವರ ಗ್ರಂಥಗಳಿಂದ ಆರ್ಯಾಭಿಮಾನಕ್ಕೆ ಕೊಂಬು ಮೂಡಿದುವು: ಕಾಲ್ಡವೆಲ್ ಪ್ರಭೃತಿಗಳ ದ್ರಾವಿಡ (?) ಸಿದ್ಧಾಂತದಿಂದ ದಕ್ಷಿಣದಲ್ಲಿ ಇನ್ನೊಂದು ಬಗೆಯ ಹೊಸ ಅಹಂಕಾರವು ಚಿಗುರಿಕೊಂಡಿತು. ದೇಶದಲ್ಲಿ ಮುಸಲ್ಮಾನ, ಬೌದ್ಧ, ಜೈನ, ಶೀಖ, ಆರ್ಯ, ದ್ರಾವಿಡ, ಮೊದಲಾದ ಪಂಥದ ಅಭಿಮಾನಿಗಳು ಹೊಚ್ಚ ಹೊಸ ಬಗೆಯ ಆವೇಶದಿಂದ ತಮ್ಮ ತಮ್ಮ ಪಂಗಡಗಳಿಗೆ ಅನುಯಾಯಿಗಳನ್ನು ಕಲೆ ಹಾಕಲಾರಂಭಿಸಿದರು.

ಹಿಂದುಸ್ತಾನದ ಪಾರತಂತ್ರ್ಯದ ಬಂಧನಗಳನ್ನು ಇನ್ನಿಷ್ಟು ರಿಕ್ಕಾಗಿ ಬಿಗಿಯಾಗಿಸಲು ತಮ್ಮ ಬುದ್ಧಿವಂತಿಕೆಯನ್ನು ಮಾರಿ ವಿಶೇಷ ನೆರವಾದವರು ಬ್ರಾಹ್ಮಣರು. ಮಹಮ್ಮದೀಯರ ಕಾಲದಿಂದಲೂ-ಈ ವರ್ಗದವರು ಮಾಡುತ್ತ ಬಂದ ಈ ಬೌದ್ಧಿಕ ವ್ಯಭಿಚಾರದ ಪ್ರಾಯಶ್ಚಿತ್ತವೆ ಇಂದಿನ ಅವರ ಅಧೋಗತಿ. ಅಲೆಕ್ಸಾಂಡರನು ಬಂದಾಗ ಪರಕೀಯರನ್ನು ಇಲ್ಲಿ ಅರೆಗಳಿಗೆಯೂ ಉಳಿಯಗೊಡದಂತೆ ತಳ್ಳಿಬಿಡಲು ಜನರನ್ನು ಹುರಿದುಂಬಿಸಿದ್ದಕ್ಕಾಗಿ ಮರಣದಂಡನೆಯನ್ನು ಆನಂದದಿಂದ ಸ್ವೀಕರಿಸಿದ ಬ್ರಾಹ್ಮಣರು ಮುಂದಿನ ಕಾಲದ ಈ ಅಧೋಗತಿಯು ಅತ್ಯಂತ ಶೋಚನೀಯವಾಗಿದೆ. ಆದರೆ, ಈ ಅವನತಿಯಲ್ಲಿಯೂ ಭಾರತ ಸ್ವಾತಂತ್ರ್ಯದ ಕಾರ್ಯಾರಂಭವಾದುದು ಅವರಿಂದಲೆ ಮೊದಲು. ಬ್ರಿಟಿಷರ ಕುಟಿಲತಂತ್ರದ ದುಷ್ಪರಿಣಾಮಗಳನ್ನು ಅರಿತುಕೊಂಡು ಅದಕ್ಕೆ ವಿರೋಧಿಸಲು ಮೊದಲು ತಲೆತೆಗೆದು ನಿಂತವರೂ ಇವರೇ. ಬ್ರಿಟಿಷರು ಬ್ರಾಹ್ಮಣ ವರ್ಗದವರಿಂದ ತಮ್ಮ ರಾಜ್ಯಯಂತ್ರವನ್ನು ದೃಢಪಡಿಸಿಕೊಳ್ಳಲು ಸಾಧ್ಯವಿದ್ದಷ್ಟು ದಿನ ಅವರಿಂದ ಸಹಾಯಪಡೆಯಲು ಹಿಂದೆಗೆಯಲಿಲ್ಲ. ಆದರೆ, ಅವರು ಕ್ರಾಂತಿಕಾರರಾಗಿ ದೇಶದಲ್ಲಿ ತಮ್ಮ ಆಡಳಿತದ ವಿರುದ್ಧ ಅಪ್ರೀತಿ, ಅಸಮಾಧಾನ, ದ್ವೇಷಗಳನ್ನು ಉಂಟುಮಾಡ ಲಾರಂಭಿಸುತ್ತಲೆ, ಬ್ರಿಟಿಷರು ಬ್ರಾಹ್ಮಣರನ್ನು ನೆಲಕ್ಕೆ ಮೆಟ್ಟುವ ಹಂಚಿಕೆಯನ್ನು ಹುಡುಕಲಾರಂಭಿಸಿದರು. ಆ ಹಂಚಿಕೆಯೇ ಬ್ರಿಟಿಶ ಅಧಿಕಾರಿಗಳ ಸಹಕಾರ, ಸಹಾನುಭೂತಿ, ಸಹಾಯಗಳಿಂದ ಹುಟ್ಟಿ ಬೆಳೆದು ವಡವಾಗ್ನಿಯಂತೆ ಹಬ್ಬಲಾರಂಭಿಸಿದ್ದ ಬ್ರಾಹ್ಮಣೇತರ ಚಳವಳಿ.

ನಮ್ಮಲ್ಲಿ ಜಾತಿಭೇದ ನಿರ್ಮೂಲನಾದಿ ಸಾಮಾಜಿಕ ಸುಧಾರಣೆಗಳನ್ನು ಮಾಡಬೇಕೆಂಬ ವಿಚಾರಗಳು ಮೊದಲು ತಲೆದೋರಿದ್ದು ರಾಷ್ಟ್ರೀಯ ಭಾವನೆಯ ಮೂಲಕವಾಗಿಯಲ್ಲ. ಪರಂಗಿಗಳಾಗಬೇಕೆಂಬ ಹಂಬಲಕ್ಕಾಗಿ. ಉದಾತ್ತವಾದ ಮಾನವ್ಯಭಾವದಿಂದ ಈ ಸುಧಾರಣೆಗೆ ಪ್ರವೃತ್ತರಾದ ಒಬ್ಬಿಬ್ಬ ಮಹನೀಯರು ಇಲ್ಲದಿಲ್ಲ. ಆದರೂ ನಮ್ಮ ರಾಜ್ಯಕರ್ತರಾದ ಬ್ರಿಟಿಶರಂತೆ, ನಮ್ಮ ಸಮಾಜವೂ ಆಗಬೇಕೆಂಬ ಆಕಾಂಕ್ಷೆಯೆ ಈ ವಿಚಾರದ ಮುಖ್ಯವಾದ ಹಿನ್ನೆಲೆಯಾಗಿತ್ತು.

ಜಗತ್ತಿನಲ್ಲಿ ಹಿಂದೂ ಧರ್ಮವು ಹೀನ, ಕುಂದುಕೊರತೆಗಳುಳ್ಳುದು ಎಂಬ ಅಪವಾದಕ್ಕೆ ಗುರಿಯಾಗದೆ ಅದನ್ನು ಸ್ವಯಂಪರಿಪೂರ್ಣವಾಗಿಸಬೇಕು. ಕ್ರಿಸ್ತ, ಮುಸಲ್ಮಾನೀ ಧರ್ಮಗಳಲ್ಲಿರುವ ಒಳ್ಳೆಯ ಮಾತುಗಳನ್ನು (ಏಕೇಶ್ವರೀ ಪದ್ಧತಿ, ನಿರಾಕಾರನಾದ ಸರ್ವವ್ಯಾಪಿ ದೇವತಾಪೂಜೆ, ವರ್ಣರಹಿತ ಸಮಾಜ ಮುಂತಾದುವುಗಳನ್ನು) ಸ್ವೀಕರಿಸುವಲ್ಲಿ ಹಾನಿಯಿಲ್ಲ. ಏಕೆಂದರೆ ಇದು ಉಪನಿಷತ್ತುಗಳಲ್ಲಿ ಹೇಳಿದ ಉಚ್ಚವಿಚಾರಗಳಿಗೆ ಅನುಗುಣವಾಗಿಯೆ ಇದೆ. ಸ್ತ್ರೀಯರನ್ನು ಕೀಳ್ಗಳೆಯುವುದು ಅನ್ಯಾಯ, ಸತೀಪದ್ಧತಿಯು ನಮ್ಮ ಧರ್ಮಕ್ಕೆ ಕಲಂಕ ಎಂಬಿವೇ ಮೊದಲಾದ ಉದಾತ್ತ ಗಂಭೀರ ವಿಚಾರಗಳಿಂದ ಶ್ರೀ ರಾಜಾರಾಮ ಮೋಹನರಾಯರು ಬ್ರಹ್ಮೋ ಸಮಾಜವನ್ನು ಸ್ಥಾಪಿಸಿದರು. ಶ್ರೀ ದಯಾನಂದ ಸರಸ್ವತಿಗಳು ವೇದಗಳ ಶ್ರೇಷ್ಠತೆಯನ್ನು ಸಾರಿ ಮೂರ್ತಿಪೂಜೆಯನ್ನು ಖಂಡಿಸಿ ಆರ್ಯಧರ್ಮವನ್ನು ಪುನರುಜ್ಜೀವನಗೊಳಿಸಲು ಆರ್ಯಸಮಾಜವನ್ನು ನಿರ್ಮಿಸಿದರು. ಮುಂದೆ ಇದೇ ಮೇರೆಗೆ ಶ್ರೀ ಮಹಾದೇವ ಗೋವಿಂದ ರಾನಡೆ, ಪ್ರಭೃತಿಗಳಿಂದ ಪುಣೆ ಮುಂಬಯಿಯಲ್ಲಿ ಪ್ರಾರ್ಥನಾ ಸಮಾಜವು ಹೊರಟಿತು. ಆದರೆ ಈ ಎಲ್ಲ ಬುದ್ಧಿವಾದಗಳನ್ನೂ ಮೀರಿಸಿ, ಸುಶಿಕ್ಷಿತ ಭಾರತೀಯರ ದೃಷ್ಟಿಕೋನದಲ್ಲಿ ಅಪೂರ್ವವಾದ ಕ್ರಾಂತಿಯನ್ನು ಮಾಡಿದವರು ಶ್ರೀ ರಾಮಕೃಷ್ಣ ಪರಮಹಂಸರು; ಮತ್ತು ಅವರ ಅದ್ವಿತೀಯ ಶಿಷ್ಯ ಶ್ರೀ ವಿವೇಕಾನಂದರು.

ಮಹಮ್ಮದೀಯರ ದಾಳಿಗಳಿಂದ ಹಿಂದೂ ಸಮಾಜವು ಮೊದಲೆ ಸಡಿಲಿತ್ತು. ಇಂಗ್ರೇಜಿ ವಿದ್ಯೆಯ ಸಂಪಾದನೆಯಿಂದ ಈ ಸಮಾಜದ ತರುಣರಲ್ಲಿ ನಾಸ್ತಿಕತೆ-ತಮ್ಮ ದೇಶ, ಧರ್ಮಗಳ ಬಗೆಗೆ ಅಂತರಾಳದಲ್ಲಿ ತಿರಸ್ಕಾರವು ಬೆಳೆಯುತ್ತ ನಡೆದಿತ್ತು. ಕ್ರಿಸ್ತೀ ಮಿಶನರಿಗಳ ಧರ್ಮೋಪದೇಶದ ಪರಿಣಾಮವಾಗಿ ಹಿಂದೂ ಸಮಾಜವು ಇನ್ನು ಬೇಗನೆ ತಲೆಕೆಳಗಾಗದೆ ಇರದೆಂಬ ಭೀತಿಯು ಬಲವಾದ ಕಾಲದಲ್ಲಿ ಮೇಲ್ಕಾಣಿಸಿದ ವಿಭೂತಿಗಳು ಮುಂದೆ ಬಂದು ಭಾರತವನ್ನು ಒಂದು ಧಾರ್ಮಿಕ ಸಂಕಟದಿಂದ ಮುಕ್ತಮಾಡಿದರು. ಲೋಕವಿಖ್ಯಾತರಾದ ಶ್ರೀಮತಿ ಅನಿಬೆಸಂಟಮ್ಮರಿಂದ ಸಂದ ಸೇವೆಯೂ ಈ ವಿಷಯದಲ್ಲಿ ಸಾಮಾನ್ಯವಾದುದಲ್ಲ. ಇಂತಿದೆಲ್ಲವು ನಿಜವಿದ್ದರೂ

ಸಾಮಾನ್ಯವಾಗಿ, ಸಮಾಜ ಸುಧಾರಕರೆಂಬವರು ಹೆಚ್ಚಾಗಿ ಆಂಗ್ಲರ ಅನುಕರಣಶೀಲರೇ ಆಗಿದ್ದರು. ಆಗುದರಿಂದ ಸುಧಾರಕರ ಬಗೆಗೆ ಪೂರ್ವಪರಂಪರಾಭಿಮಾನಿಗಳಲ್ಲಿ, ಜನಸಾಮಾನ್ಯರಲ್ಲಿ ಅನಾದರ, ತಿರಸ್ಕಾರದ ಭಾವನೆಗಳೆ ಮನೆಮಾಡಿಕೊಂಡಿದ್ದುವು. 'ಸುಧಾರಕ' ನೆಂಬ ಮಾತು ಬೈಗಳಂತೆ ಉಪಯೋಗಿಸಲ್ಪಡುತ್ತಲಿದ್ದಿತು. ಇನ್ನೂ ಕೆಲವರ ಬಾಯಲ್ಲಿ ಅದೊಂದು ಈ ಬಗೆಯ ಪಡೆಮಾತಾಗಿ ಉಳಿದಿದೆ!

ಆಂಗ್ಲವಿದ್ಯಾಭ್ಯಾಸದ ಪರಿಣಾಮದಿಂದಲೂ ಬ್ರಿಟಿಷರ ಹಾಗೂ ಮಿಶನರಿಗಳ ವ್ಯಕ್ತಾವ್ಯಕ್ತ ಬೋಧನೆ, ಸೂಚನೆಗಳ ಕಾರಣದಿಂದಲೂ ನಮ್ಮ ದೇಶದಲ್ಲಿ ಸಾಮಾಜಿಕ ಮತ್ತು ಜಾತೀಯ ಆಂದೋಲನಗಳು ಆರಂಭವಾದವು. ಅದರಂತೆ ಘಟನಾಬದ್ಧ ರಾಜಕೀಯ ಚಳವಳಿಯ ಉಗಮವೂ ಬ್ರಿಟಿಷರ ಬುದ್ಧಿವಂತಿಕೆಯ ಕೈವಾಡದಲ್ಲಿಯೆ ಇದೆ. ಧೂರ್ತಬ್ರಿಟಿಷರ ಆಡಳಿತದಲ್ಲಿ ದೇಶವು ದಿನದಿನಕ್ಕೂ ನಪುಂಸಕವಾಗುತ್ತ ನಡೆದುದೂ ಸಂಪತ್ತಿನ ಸೂರೆಯಾಗಿ ಬಡತನವು ಹೆಚ್ಚಾಗುತ್ತಿದ್ದುದೂ ರಾಷ್ಟ್ರೀಯ ದೃಷ್ಟಿಯಿಂದ ವಿಚಾರ ಮಾಡುವ ಯಾರಿಗಾಗಲಿ ಸ್ಪಷ್ಟವಾಗಿ ಕಾಣುವಂತಿತ್ತು. ಆದರೆ ಇಂತಹವರ ಸಂಖ್ಯೆ ಇಪ್ಪತ್ತನೆಯ ಶತಮಾನದ ಆರಂಭದವರೆಗೂ ಬಹಳೇ ಸ್ವಲ್ಪವಿತ್ತು. ತಮ್ಮ ಜಾತಿ, ತಮ್ಮ ಕುಲ, ತಮ್ಮ ಮನೆತನ ಹದಿನಾರಾಣೆ ರಾಜ (ರಾಜ್ಯಅಲ್ಲ) ನಿಷ್ಠರದು-ಬ್ರಿಟಿಷನಿಷ್ಠೆ ತಮ್ಮ ರಕ್ತಗತವಾಗಿದೆಯೆಂದು ಅಂದಿನ ಬಿಳಿಯ ಆಡಳಿತಗಾರರಿಗೆ ತಮ್ಮ ಕೃತ್ಯ (ಅಕೃತ್ಯ)ಗಳಿಂದ ಸಿದ್ಧಪಡಿಸಿ ತೋರಿಸುವುದಕ್ಕೆ ನಮ್ಮ ಜನಗಳಿಗೆ ನಾಚಿಕೆಯೂ ಇದ್ದಿಲ್ಲ! ರಾಷ್ಟ್ರಹಿತವೆಂದರೇನೆಂಬ ಅರಿವು ಇದ್ದವರು. ತೀರ ಕಡಿಮೆ. ತಮ್ಮ ವೈಯಕ್ತಿಕ ಸ್ವಾರ್ಥ, ಹೆಚ್ಚಾದರೆ ತಮ್ಮ ಜಾತಿಯ ಸ್ವಾರ್ಥ, ಸೌಖ್ಯವನ್ನು ಗಮನಿಸುವವರೇ ಎಲ್ಲೆಲ್ಲೂ ತುಂಬಿದ್ದರಿಂದ ಬ್ರಿಟಿಶರಿಗೆ ಆಗ ತಮ್ಮ ಸಾಮ್ರಾಜ್ಯಕ್ಕೆ ಇಲ್ಲಿ ಏನಾದರೂ ಗಂಡಾಂತರವು ಬಂದೀತೆಂಬ ಹೆದರಿಕೆಯೆ ಇದ್ದಿಲ್ಲ. ಆದರೂ ಕಳ್ಳನ ಜೀವ ಹುಳುಳ್ಳಗೆ ಎಂದು ಗಾದೆಯುಂಟಲ್ಲ. ಬ್ರಿಟಿಶರಿಗೆ ಒಳಗೊಳಗೇ ಹೆದರಿಕೆ; ದೇಶವನ್ನು ದಾಸ್ಯದಲ್ಲಿ ಇಟ್ಟುದಕ್ಕಾಗಿ, ಆರ್ಥಿಕ ಸುಲಿಗೆಯನ್ನು ನಡಸಿದುದಕ್ಕಾಗಿ ಭಾರತೀಯರಲ್ಲಿ ಹಲಕೆಲವರಾದವರೂ ತಲೆತಿರುಕರು ತಲೆಯತ್ತಬಹುದಲ್ಲ, ಎಂದು. ಈ ಕಾರಣದಿಂದಲೆ ಸುಶಿಕ್ಷಿತ ಭಾರತೀಯ ತರುಣರು ತಲೆತಿರುಕರಾಗಿ ಒಳಸಂಚಿನ ಕ್ರಾಂತಿಕಾರರು ಆಗುವುದು ಬೇಡ; ಘಟನಾಬದ್ಧ ಬಹಿರಂಗವಾದ ಚಳವಳಿಯ ಕಡೆಗೆ ಅವರ ಮನಸ್ಸು ಒಲಿಯಲಿ ಎಂದು ದೂರದರ್ಶಿಗಳಾದ ಕೆಲವು ಬ್ರಿಟಿಶರು ಇಲ್ಲಿ ರಾಜಕೀಯ ಸಂಘ, ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಹಿಂದೀ ಜನರಿಗೆ ನೆರವಾಗುವುದಕ್ಕೆ ಮುಂದೆ ಬಂದರು. ಭಾರತದ ರಾಷ್ಟ್ರೀಯ ಮಹಾಸಭೆಯ ಸಂಸ್ಥಾಪಕರಲ್ಲಿ ಹ್ಯೂಮ ಮೊದಲಾದ ನಿವೃತ್ತ ಬ್ರಿಟಿಶ ಅಧಿಕಾರಿಗಳು ಇದ್ದುದೇ ಈ ಮಾತಿಗೆ ಸಾಕ್ಷಿ.

ಆಂಗ್ಲಭಾಷೆಯ ಅಧ್ಯಯನದಿಂದ ನಮ್ಮ ದೇಶದಲ್ಲಿ ರಾಷ್ಟ್ರೀಯ ಜಾಗ್ರತಿಯಾಯಿತೆಂದು ಹೇಳಲಾಗುತ್ತದೆ. ಈ ವಿಧಾನವು ಸಂಪೂರ್ಣ ಸುಳ್ಳಲ್ಲ. ಆದರೂ ಬ್ರಿಟಿಷ ರಾಜಕಾರಣಿಗಳು. ಕೂಲಂಕಷವಾಗಿ ವಿಚಾರ ವಿಮರ್ಶೆಗಳನ್ನು ಮಾಡದೆ ಈ ದೇಶದಲ್ಲಿ ಆಂಗ್ಲಭಾಷೆಯ ಶಿಕ್ಷಣವನ್ನು ಆರಂಭಿಸಿಲ್ಲ. ನಮ್ಮಲ್ಲಿ ಸ್ವದೇಶಾಭಿಮಾನವುಂಟಾಗುವುದು ಬ್ರಿಟಿಷರ ಇಲ್ಲಿಯ ತಮ್ಮ, ಸಾಮ್ರಾಜ್ಯಕ್ಕೇ ವಿಘಾತಕವಲ್ಲವೆ? ಇಂಗ್ರೇಜಿ ಕಲಿಸಿ, ಸ್ವದೇಶಾಭಿಮಾನ ಬೆಳೆಸಿ ಸಾಮ್ರಾಜ್ಯ ವೃಕ್ಷಕ್ಕೆ ತಾನೇ ಕೊಡಲಿಯ ಏಟು ಹಾಕುವ ಕೃತ್ಯವು ಬ್ರಿಟಿಷರಂತಹ ಪಾರದರ್ಶಿ ವಿಚಾರಿಗಳಿಂದ ಆಗುವುದು ಸಾಧ್ಯವೆ? ನಮ್ಮಲ್ಲಿ ಇಂಗ್ರೇಜಿ ಶಿಕ್ಷಣವನ್ನು ಆರಂಭಿಸುವಲ್ಲಿ ಬೇರೊಂದೇ ಬ್ರಿಟಿಷರ ಉದ್ದೇಶವಿದ್ದಿತು. ಮೊಗಲರ ಆಳಿಕೆಯು ಕೊನೆಗೊಂಡಿತು. ಬ್ರಿಟಿಷರು ಹಿಂದೂ ದೇಶದ ಚಕ್ರಾಧಿಪತ್ಯವನ್ನು ಸ್ವೀಕರಿಸಿದರು. ಆದರೆ ಅಖಿಲಭಾರತದ ಆಡಳಿತದ ಭಾಷೆಯು ಆವುದಿರಬೇಕೆಂಬ ಬಗೆಗೆ ಅವರು ಇನ್ನೂ ನಿಶ್ಚಿತಮತಿಗಳಾಗಿರಲಿಲ್ಲ. ಆಡಳಿತವನ್ನು ನಡಸಲು ಬೇಕಾಗುವ ಕಾರಕೂನರು, ಅಧಿಕಾರಿಗಳ-ಯಾವ ಭಾಷೆಯಲ್ಲಿ ರಾಯಸಗಳನ್ನು ಬರೆಯಬೇಕು? ಈ ಜನಗಳಿಗೆ ಯಾವ ಭಾಷೆಯ ಮೂಲಕ ಶಿಕ್ಷಣವನ್ನು ಕೊಟ್ಟು ತಕ್ಕವರನ್ನಾಗಿ ಮಾಡಿಕೊಳ್ಳಬೇಕು? ಎಂಬೀ ಪ್ರಶ್ನೆಗಳು ಇಲ್ಲಿಯ ಆಗಿನ ಬ್ರಿಟಿಷ ಅಧಿಕಾರಗಳ ತಲೆತಿನ್ನಲಾರಂಭಿಸಿದುವು.

ಕ್ರಿ. ಶ. ೧೮೩೩ರಲ್ಲಿ ಲಾರ್ಡ ವಿಲಿಯಂ ಬೆಂಟಿಂಕನು ಹಿಂದೂ ದೇಶದ ಗವ್ಹರ್ನರ ಜನರಲ್ಲನಾಗಿದ್ದಾಗ, ಆತನ ಕಾರ್ಯನಿರ್ವಾಹಕ ಮಂಡಲದಲ್ಲಿ ಮೆಕಾಲೆಯೆಂಬ ಮೇಧಾವಿಯು ಇದ್ದನು. ಈ ದೇಶದಲ್ಲಿ ಇಂಗ್ರೇಜಿ ಶಿಕ್ಷಣವನ್ನು ಆರಂಭಿಸಬೇಕೆಂದು ನಿರ್ಧರಿಸಿದವನು ಈತನೇ. ಈ ದೇಶೀಯರಿಗೆ ಇಂಗ್ರೇಜಿ ಕಲಿಸಬೇಕೆ? ಬೇಡವೆ? ಅದರಿಂದ ಯಾವ ಬಗೆಯ ಪರಿಣಾಮಗಳಾಗಬಹುದು? ಎಂಬ ಎಲ್ಲ ಸಂಗತಿಗಳನ್ನೂ ಈತನು ಎಷ್ಟೊಂದು ಕೂಲಂಕಷವಾಗಿ ಚರ್ಚಿಸಿದ್ದನೆಂಬುದು, ಮೆಕಾಲೆಯ ಆಗಿನ ಹಲವು ಕಾಗದ ಪತ್ರಗಳಿಂದ ಎಲ್ಲವೂ ಬೆಳಕಿಗೆ ಬಂದಿದೆ. ಲಾಲಾ ಹರದಯಾಳನೆಂಬ ಧೀಮಂತನಾದ ಕ್ರಾಂತಿವೀರನು Problems of Education ಎಂಬ ಪುಸ್ತಕದಲ್ಲಿ ಮೆಕಾಲೆಯ ಕೆಲವು ಪತ್ರವ್ಯವಹಾರವನ್ನು ಹೊರಗೆ ಹಾಕಿದ್ದಾನೆ.

ಅಂದು ಮೆಕಾಲೆಯ ಎದುರಿಗಿದ್ದ ತೊಡಕು ಇದು; ಹಿಂದುಸ್ತಾನದಲ್ಲಿ ಅಖಿಲಭಾರತೀಯ ಭಾಷೆಯಾಗಲು ಅರ್ಹತೆಯುಳ್ಳ ಭಾಷೆಗಳು ಎರಡು ಇದ್ದುವು. ಒಂದು ಸಂಸ್ಕೃತ. ಇನ್ನೊಂದು ಪರ್ಶಿಯನ್. ಒಂದು ಹಿಂದೂ ಜನರ ಪವಿತ್ರಭಾಷೆ. ಇನ್ನೊಂದು ಮುಸಲ್ಮಾನರ ಶ್ರೇಷ್ಠಸಾಹಿತ್ಯದ ಭಾಷೆ. ಬ್ರಿಟಿಶರು ಆರಂಭದಲ್ಲಿ ಸಂಸ್ಕೃತ ಹಾಗೂ ಪರ್ಶಿಯನ್ ಭಾಷೆಗಳ ಮುಖಾಂತರ ಉಚ್ಚಶಿಕ್ಷಣಕೊಡುವ ವಿದ್ಯಾಲಯಗಳನ್ನೂ ಸ್ಥಾಪಿಸುವದಕ್ಕೆ ಆರಂಭಿಸಿದ್ದರು. ಪುಣೆಯಲ್ಲಿ ಡೆಕ್ಕನ್ ಕಾಲೇಜಿನ ಮೊದಲು ಸಂಸ್ಕೃತ ಕಾಲೇಜನ್ನೆ ತೆರೆದರು.

ಆದರೆ, ಮೆಕಾಲೆ ಸಾಹೇಬರಿಗೆ ಒಂದು ಹೆದರಿಕೆ: ಈ ಸಂಸ್ಕೃತ ಮತ್ತು ಪರ್ಶಿಯನ್ ಮೂಲಕ ಅಧ್ಯಯನದಿಂದ ಈ ದೇಶದ ಜನಗಳಲ್ಲಿ ತಮ್ಮ ಪೂರ್ವಜರು ಮತ್ತು ಅವರ ಸಂಸ್ಕೃತಿಯ ವಿಷಯಕ್ಕೆ ನಿರತಿಶಯವಾದ ಆದರ ಮತ್ತು ಅಭಿಮಾನಗಳು ಹೆಚ್ಚಿ ಪರಕೀಯರಾದ ಆಂಗ್ಲರ ಬಗೆಗೆ ತಿರಸ್ಕಾರ, ದ್ವೇಷವು ತಲೆದೋರುವುದು, ಧೂರ್ತರಾದ ಮೆಕಾಲೆ ಸಾಹೇಬರಿಗೆ, ನಿಶ್ಚಿತವೆಂದು ಮನವರಿಕೆಯಾಯಿತು. ಧಾರ್ಮಿಕ ಭಾವನೆಗಳು ಪ್ರಬಲವಾದಂತೆ ಅದರ ರಕ್ಷಣೆ, ಪೋಷಣೆಗಾಗಿ ಮನುಷ್ಯನೊಳಗಿನ ಉದ್ವೇಗ ಆವೇಶಗಳು ತೀವ್ರತರವಾಗುವುವು. ತನ್ನ ಮತ, ಧರ್ಮದ ಹೆಸರಿನಲ್ಲಿ ಆವೇಶಗೊಂಢ ಮನುಷ್ಯನು ಎಂತಹ ತ್ಯಾಗಕ್ಕೂ ಸಿದ್ದನಾಗುವನು. ಅದಕ್ಕಾಗಿ ತನ್ನ ಪ್ರಾಣಗಳನ್ನು ನೀಡುವುದರಲ್ಲಿ ಧನ್ಯತೆಯನ್ನು ತಾಳುವನು. ತಮ್ಮ ಧರ್ಮ ಸಂಸ್ಕೃತಿಗಳ ಬಗೆಗೆ ತೀವ್ರತರವಾದ ಅಭಿಮಾನ ಆವೇಶಗಳು ಬೇರೂರಲು ನಿಶ್ಚಿತವಾಗಿಯೂ ಕಾರಣವಾಗುವ ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳ ಮೂಲಕ ಭಾರತೀಯರಿಗೆ ಶಿಕ್ಷಣ ಕೊಟ್ಟು, ನಾಳಿನ ಈ ಬಗೆಯ ಗಂಡಾಂತರಕ್ಕೆ ಇಂದೇ ಔತಣವನ್ನೀಯುವುದು ಜಾಣ್ಮೆಯೆ? ಎಂಬುದು ಒಂದು ಪ್ರಶ್ನೆ ಮೆಕಾಲೆಸಾಹೇಬರ ಎದುರು.

ಯಾವ ಜನವನ್ನು ಆಳಬೇಕಾಗಿದೆಯೊ ಅವರು ಹೃದಯಾಂತರಾಳದಲ್ಲಿ ತಮ್ಮನ್ನು ದ್ವೇಷಿಸುತ್ತಿರಬಾರದು. ಮನದಲ್ಲಿ ಸಂದೇಹ, ತಿರಸ್ಕಾರದ ಭಾವನೆಗಳು ಒಡಮೂಡಿದ ಜನರನ್ನು ಆಳುವುದು ವ್ಯರ್ಥ ಪರಿಶ್ರಮ; ಅದು ಇಬ್ಬರ ಹಾನಿಗೂ ಕಾರಣವೆಂಬುದು ಬ್ರಿಟಿಷ ರಾಜ್ಯತಂತ್ರಜ್ಞರ ಒಂದು ಮುಖ್ಯಸೂತ್ರ. ಆದಕಾರಣ ಬ್ರಿಟಿಷ ಜನ, ಅವರ ರೀತಿ, ನೀತಿ, ಧರ್ಮ, ಸಾಹಿತ್ಯ, ಸಂಸ್ಕೃತಿ, ಮೊದಲಾದವನ್ನು ಕುರಿತು ಈ ನಾಡಿಗರಲ್ಲಿ ಸಹಾನುಭೂತಿ, ಪ್ರೀತಿ, ಆದರವನ್ನುಂಟುಮಾಡದೆ ಈ ದೇಶವನ್ನಾಳುವುದು ದುಸ್ತರ. ಹಿಂದುಸ್ತಾನದವರಲ್ಲಿ ಇಂಗ್ಲೆಂಡಿನ ಬಗೆಗೆ ಸದ್ಭಾವನೆಯು ತಲೆದೋರಲು ಹಿಂದೀಯರಿಗೆ ತಮ್ಮ ವಿಚಾರಗಳು ತಿಳಿಯುವುದು ಆವಶ್ಯಕವೆಂದು ಮೆಕಾಲೆ ಸಾಹೇಬರು ಮುಂಗಂಡು ನಿರ್ಧರಿಸಿದರು. ಇಂಗ್ರೇಜಿಯನ್ನು ಅಭ್ಯಾಸಮಾಡಿ ತಮ್ಮ ಸಾಹಿತ್ಯ-ಶಾಸ್ತ್ರಗಳನ್ನು ಅರಿತುಕೊಂಡ ಹಾಗೆ, ಹಿಂದೀಯರಲ್ಲಿ ಆಂಗ್ಲರ ಉಚ್ಚ ಸಂಸ್ಕೃತಿಯ ಅರಿವು ಉಂಟಾಗುವುದು. ಆಂಗ್ಲರ ಶಾಸ್ತ್ರ ಸಾಹಿತ್ಯಗಳ ಅಧ್ಯಯನವು ಹೆಚ್ಚಿದಂತೆ ಇಲ್ಲಿಯವರಿಗೆ ತಮ್ಮ ಕುಂದುಕೊರತೆಗಳು ಚೆನ್ನಾಗಿ ಎದ್ದುಕಾಣುವುವು. ಅದರಿಂದ ತಮ್ಮ ದೇಶ, ಧರ್ಮ, ಸಂಸ್ಕೃತಿಗಳ ವಿಷಯಕ್ಕೆ ಸಹಜವಾಗಿ ಹುಟ್ಟಿನಿಂದ ಬರುವಂತಹ ಮೊದಲಿನ ದುರ್ದಮ್ಯವಾದ ಅಭಿಮಾನವು ಅದೆಷ್ಟೋ ಸಡಿಲುವುದು. ಆಂಗ್ಲಜನ ಅವರ ಸಂಸ್ಕೃತಿಗಳ ಅನುಕರಣದಲ್ಲಿ ಆಸ್ಥೆಯುಂಟಾಗುವುದು. ಹೀಗೆ, ಅಂತರಾಳದಲ್ಲಿ ತಮ್ಮ ಬಗೆಗೆ ಸದ್ಭಾವನೆಯು ನೆಲೆಸಿರುವ ಜನರನ್ನು ಆಳುವುದು ಸುಲಭ. ಇಲ್ಲವಾದರೆ, ಸಾವಿರಾರು ಮೈಲು ದೂರದಿಂದ ಬಂದ ಸ್ವಲ್ಪ ಜನರು, ತಾವು ಅಸಂಖ್ಯಾತ

ಬಹುಸಂಖ್ಯಾಕರಾದ ಈ ದೇಶೀಯರ ಮೇಲೆ ಶಾಸನ ನಡಸುವುದೇ ಸಾಧ್ಯವಿಲ್ಲವೆಂದು ಮೆಕಾಲೆಯು ಮನಗಂಡರು. ಇಂಗ್ರೇಜಿಯನ್ನೆ ಇಲ್ಲಿ ಕಲಿಸತಕ್ಕದ್ದೆಂದು ಗೊತ್ತುಪಡಿಸಿದರು.

ಆದರು, ಇನ್ನೊಂದು ಬಗೆಯ ಅಂಜಿಕೆಯು ಅವರನ್ನು ಸೋಂಕದೆ ಇರಲಿಲ್ಲ. ಇಂಗ್ರೇಜಿ ಭಾಷೆಯ ಅಧ್ಯಯನದಿಂದ ಈ ಜನರಿಗೆ ಇಂಗ್ಲಂಡಿನ ರಾಜಕೀಯ ಸ್ವಾತಂತ್ರ್ಯದ ಇತಿಹಾಸವು ಗೊತ್ತಾಗುವುದು. ಪಾರ್ಲಮೆಂಟಿನ ಬೆಳವಣಿಗೆ, ಪ್ರಜೆಗಳು ರಾಜನಿಂದ ಅಧಿಕಾರಗಳನ್ನು ಕಿತ್ತುಕೊಂಡ ಬಗೆಗಳು ತಿಳಿಯುವುವು. ಗ್ರೀಕ್, ರೋಮನ್‌ರ ಉಜ್ವಲವಾದ ಸ್ವತಂತ್ರ ವಿಚಾರಗಳು ಗೊತ್ತಾಗಿ ಇವರ ತಲೆಯಲ್ಲೂ ಆ ತೆರನಾದ ವಿಚಾರಗಳು ಸುಳಿಯಲಾರಂಭಿಸುವುವು. ಬ್ರಿಟಿಷ ಜನರಂತೆ ತಾವೂ ರಾಜನ ಏಕತಂತ್ರಾಧಿಕಾರವನ್ನು ವಿರೋಧಿಸಿ ಪ್ರಜಾಪ್ರಭುತ್ವವನ್ನು ಪಡೆಯಬೇಕೆಂಬ ಹಂಬಲವು ಇವರಲ್ಲಿ ತಲೆಯೆತ್ತುವುದು. ಇದು ಬ್ರಿಟಿಷರ ಇಲ್ಲಿಯ ಸಾಮ್ರಾಜ್ಯನಾಶಕ್ಕೆ ಕಾರಣವಾಗದೆ ಇರದು. ಆದುದರಿಂದ, ಈ ಜನರಿಗೆ ಇಂಗ್ರೇಜಿ ವಿದ್ಯೆ ಕಲಿಯುವುದು ಯುಕ್ತವೆ? ಎಂಬ ಇನ್ನೊಂದು ವಿಚಾರವೂ ಮೆಕಾಲೆಯವರಿಗೆ ಹೊಳೆಯದೆ ಹೋಗಲಿಲ್ಲ.

ತಮಗೆ ರುಚಿಸುವ ಮಾತನ್ನಷ್ಟೆ ಗಮನಿಸುವುದು ಬ್ರಿಟಿಶರ ಸ್ವಭಾವವಲ್ಲ. ರುಚಿಸದ ಮಾತನ್ನೂ ಎಣಿಕೆಗೆ ಹಿಡಿದು ತಮ್ಮ ಯೋಜನೆಗಳನ್ನು ಸಿದ್ಧಪಡಿಸುವ ಚತುರ ರಾಜಕಾರಣಿಗಳು ಅವರು. ಸತ್ಯದ ಪ್ರಿಯವಾದ ಸಿಹಿಯಾದ ಅಂಗವನ್ನಷ್ಟೇ ಪೂಜಿಸುವ ಜನ ರಸಿಕರೆಂದೆನಿಸಿದರೂ ಅವರಲ್ಲಿ ಬೇಗನೆ ಪುಕ್ಕು, ಹೇಡಿತನಗಳು ಮೆಲ್ಲನೆ ಸೇರಿಕೊಳ್ಳುವುವು. ಬ್ರಿಟಿಷರ ಮಾನಸಿಕ ಧೈರ್ಯ ಅಪೂರ್ವವಾದುದು. ವಾಸ್ತವ ಸತ್ಯದ ಅಪ್ರಿಯ ಕಟುವಾದ ಅಂಶವನ್ನು ಕಡೆಗಣಿಸಿದರೆ ಅದನ್ನು ಮೊದಲು ಲೆಕ್ಕಿಸುವ ಎದೆಗಾರಿಕೆ ಅವರಲ್ಲಿದೆ. ಇದೊಂದು ಅಸಾಧಾರಣವಾದ ಶಕ್ತಿ, ಪ್ರಶಾಂತವಾದ ಮನಸು, ದೃಢವಾದ ಬುದ್ಧಿ, ಅದಿರದ ಎದೆಯವರೆ ಸತ್ಯದ ಈ ಅಂಶವನ್ನೂ ಲೆಕ್ಕಿಸಬಲ್ಲರು. ಮೆಕಾಲೆಯು ಅಂದು ಸತ್ಯದ ಈ ಅಂಶವನ್ನೂ ಎಣಿಕೆಗೆ ಹಿಡಿದು ಲೆಕ್ಕಮಾಡಿ ನಮ್ಮ, ಶಿಕ್ಷಣಪದ್ಧತಿಯನ್ನು ಯೋಜಿಸಿದನು. ಆತನ ಧೂರ್ತದೂರದರ್ಶಿತ್ವದ ಅಂದಿನ ವಿಚಾರಗಳನ್ನು ಓದಿ ಈಗ ಯಾರಿಗಾಗಲಿ ಕೌತುಕ ಆಶ್ಚರ್ಯವೆನಿಸಿದೆ ಇರದು.

ಹುಟ್ಟಿದುದಕ್ಕೆ ಸಾವು ತಪ್ಪದು. ಹಿಂದೂ ದೇಶದಲ್ಲಿ ಸ್ಥಾಪಿತವಾದ ತಮ್ಮ ಸಾಮ್ರಾಜ್ಯಕ್ಕೂ ಒಂದು ದಿನ ಅಳಿವು ತಪ್ಪಿದ್ದಲ್ಲ. ಆದರೆ, ಆ ಕೊನೆಯ ದಿನವನ್ನು ಆದಷ್ಟು ಮುಂದೂಡುತ್ತ ಹೋಗುವುದರಲ್ಲಿಯೆ ಕೌಶಲವಿದೆ. ಬ್ರಿಟಿಷ ಸಾಮ್ರಾಜ್ಯವು ಇಲ್ಲಿ ಅಮರವಾಗಿ ಉಳಿಯುವುದೆಂಬ ಭ್ರಾಂತಿಯಲ್ಲಿ ಇದ್ದುಕೊಂಡು ಆಡಳಿತದ ಯೋಜನೆಗಳನ್ನು ಮಾಡುವುದು ಮೂರ್ಖತನದ ಪರಮಾವಧಿ, ಅಳಿಗಾಲವನ್ನು ತಪ್ಪಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದರೆ ಬರಲಿರುವ ಆ ಅಳಿಗಾಲವು ಸಂಸ್ಕೃತ, ಪರ್ಶಿಯನ್‌ಗಳ ಅಧ್ಯಯನದಿಂದ ಉಂಟಾಗುವ ಮನೋವೃತ್ತಿಯಿಂದ ಬೇಗ ಬಂದೀತೆ? ಅಥವಾ ಇಂಗ್ರೇಜಿ ಕಲಿಸುವುದರಿಂದ ಆಗುವ ಪರಿಣಾಮದಿಂದಲೆ ತಮ್ಮ ಸಾಮ್ರಾಜ್ಯದ ಅಂತ್ಯವು ಬೇಗ ಸಮೀಪಿಸಬಹುದೆ? ಇವೆರಡರಲ್ಲಿ ಮೊದಲನೆಯದೆ ಹೆಚ್ಚು ಭಯಾವಹವೂ ವಿನಾಶಕಾರಿಯೂ ಆಗಿದೆಯೆಂದು ಮೆಕಾಲೆಯು ನಿರ್ಧರಿಸಿದನು.

ಮೆಕಾಲೆಯ ಯೋಜನೆಯಂತೆ ಹಿಂದೂ ದೇಶದಲ್ಲಿ ಇಂಗ್ರೇಜಿಶಿಕ್ಷಣ ಕ್ರಮವು ಆರಂಭವಾಯಿತು. ಇಂಗ್ರೇಜಿ ಭಾಷೆಯ ಪ್ರಸಾರದಿಂದ ಬ್ರಿಟಿಷರ ಆಡಳಿತಕ್ಕೆ ಧಾರ್ಮಿಕ ಕಾರಣಕ್ಕಾಗಿ ರಾಜ್ಯಕ್ರಾಂತಿಯಾಗುವ ಭೀತಿಯೇ ದೂರವಾಯಿತು. ಆದರೂ ತಮ್ಮ ರಾಜ್ಯಗಳನ್ನು ಕಳೆದುಕೊಂಡು ಅಸಂತುಷ್ಟರಾದ ಹಲವು ರಾಜರು ೧೮೫೭ರಲ್ಲಿ ಬ್ರಿಟಿಷರ ವಿರುದ್ಧ ಯುದ್ಧವನ್ನು ಹೂಡಿದರು. ಬ್ರಿಟಿಷರ ಹಲವು ಕೃತಿಗಳಿಂದ-ಅವರ ಆಡಳಿತದಿಂದ ಧರ್ಮದ ಮೇಲೆ ಗಂಡಾಂತರವು ಒದಗಿದೆ ಎಂಬ-ಸಂದೇಹವು ಆವರಿಸಿದ ಸೈನಿಕರನ್ನೂ, ಪೂರ್ವ ಪರಂಪರಾಭಿಮಾನಿಗಳನ್ನೂ ಈ ರಾಜರು ತಮ್ಮ ಕಾರ್ಯ ಸಾಧಿಸಲು ಉಪಯೋಗಿಸಿಕೊಂಡರು. ಧಾರ್ಮಿಕ ಆವೇಶದಿಂದ ಮೈಮರೆತ ಜನವು, ತಮ್ಮ ಆಡಳಿತದ ವಿರುದ್ಧವಾಗಿ ಬಂಡು ಏಳಬಾರದೆಂದು ಇಂಗ್ರೇಜಿ ಶಿಕ್ಷಣವನ್ನು ಪ್ರಾರಂಭಿಸುವಲ್ಲಿ ಮೆಕಾಲೆಯ ದೂರದರ್ಶಿತ್ವವು ಚೆನ್ನಾಗಿಯೆ ವ್ಯಕ್ತವಾಗುತ್ತದೆ. ಮೆಕಾಲೆಯು ಆರಂಭಿಸಿದ ಶಿಕ್ಷಣ ಪದ್ಧತಿಯ ಪರಿಣಾಮಗಳು

ಕಾಣಿಸಿಕೊಳ್ಳುವುದರೊಳಗಾಗಿಯೆ ೧೮೫೭ರ ಯುದ್ಧವು ಆಯಿತು. ಬ್ರಿಟಿಷರು ಇನ್ನಿಷ್ಟು ಜಾಗ್ರತರಾಗಿ, ಈ ದೇಶದ ಧರ್ಮ, ಮತಗಳಿಗೆ ತಾವು ಯಾವ ಬಗೆಯಿಂದಲೂ ವಿರೋಧಿಸುವುದಿಲ್ಲವೆಂದು, ಜನರಿಗೆ ರಾಣಿಯ ಜಾಹೀರನಾಮೆಯ ಮೂಲಕ ಆಶ್ವಾಸನವನ್ನಿತ್ತರು. ಬ್ರಿಟಿಷರು ಹಿಂದೂ-ಮುಸಲ್ಮಾನ, ಬ್ರಾಹ್ಮಣ-ಬ್ರಾಹ್ಮಣೇತರ, ಸ್ಪೃಶ್ಯ-ಅಸ್ಪೃಶ್ಯ ಮೊದಲಾದ ಜಾತಿಭೇದಗಳ ಸಂರಕ್ಷಕರಾಗಿ ದಕ್ಷತೆಯಿಂದ ಕರ್ತವ್ಯವನ್ನು ಪರಿಪಾಲಿಸುತ್ತಲಿದ್ದ ನೋಟವೆ ಇನ್ನು ೧೮೫೭ರ ನಂತರದ ಇತಿಹಾಸದಲ್ಲಿ ಕಣ್ಣಿಗೆ ಬೀಳುತ್ತದೆ. ಇದಕ್ಕೆ ಪ್ರತಿಯಾಗಿ ಆಧುನಿಕ ವಿದ್ಯಾವಿಭೂಷಿತರಾದ ರಾಷ್ಟ್ರೀಯ ವೃತ್ತಿಯ ಮುಂದಾಳುಗಳಲ್ಲಿ ನಮ್ಮೊಳಗಿನ ಜಾತಿಭೇದಗಳನ್ನು ಇಲ್ಲದಂತೆ ಮಾಡಬೇಕೆಂಬ ಹಂಬಲವು ದಿನದಿನಕ್ಕೂ ಬಲಗೊಳ್ಳುತ್ತಿದ್ದುದು ಗೋಚರವಾಗುತ್ತದೆ!

ಇಂಗ್ರೇಜಿ ವಿದ್ಯೆಯಲ್ಲಿ ಸ್ವಾತಂತ್ರ್ಯ ಪ್ರೇಮದ ಬೀಜಮಂತ್ರವಿದೆ. ಇಂಗ್ರೇಜಿ ಕಲಿಸುವುದೂ ಬ್ರಿಟಿಷ ಸಾಮ್ರಾಜ್ಯಕ್ಕೆ ಮರಣವನ್ನು ಕೋರುವುದೂ ಒಂದೇ. ಆದುದರಿಂದ ಈ ಜನರಿಗೆ ಇಂಗ್ರೇಜಿ ಕಲಿಸುವುದೇ ಬೇಡ, ಎಂಬ ವಿಚಾರದ ಕೆಲವು ಬ್ರಿಟಿಷರೂ ಇದ್ದರು. ಮೆಕಾಲೆಯು ಅವರ ವಿರೋಧಕ್ಕೂ ಉತ್ತರ ಕೊಟ್ಟನು. ಹಿಂದೀಯರು ಇಂಗ್ರೇಜಿ ಕಲಿತರೂ ಅವರಲ್ಲಿ ರಾಷ್ಟ್ರಾಭಿಮಾನವು ಜಾಗ್ರತವಾಗದಂತೆ, ಜಾಗ್ರತವಾದರೂ ಅದು ತೀರ ಸೌಮ್ಯಸ್ವರೂಪದಲ್ಲಿರುವಂತೆ ಶಿಕ್ಷಣ ಪದ್ಧತಿಯಲ್ಲಿಯೆ ಹಂಚಿಕೆಗಳನ್ನು ಮಾಡಬೇಕೆ ಹೊರತು, ಇಂಗ್ರೇಜಿಯನ್ನೇ ಕಲಿಸದೆ ಇರುವುದು ಬ್ರಿಟಿಶರ ಹಿತದ ದೃಷ್ಟಿಯಿಂದ ಜಾಣತನದ್ದಾಗಲಾರದೆಂದು ಮೆಕಾಲೆಯ ಸ್ಪಷ್ಟವಾದ ಅಭಿಪ್ರಾಯವಾಗಿತ್ತು. ಸಮಾಜ ಸುಧಾರಣೆಯ ಚಳವಳಿಯು ಈಗಲೇ ನಡೆಯಬೇಕೆಂದು ಪ್ರತಿಪಾದಿಸುವ ಒಂದು ಪಕ್ಷವು ಸುಮಾರಾಗಿ ರಾಷ್ಟ್ರೀಯ ಸಭೆಯಷ್ಟೇ ಹಳೆಯದಾಗಿದೆ. ರಾಜಕೀಯ ಸುಧಾರಣೆಗಳೇ ಮೊದಲು ಅವಶ್ಯಕ. 'ರಾಜಾ ಕಾಲಸ್ಯ ಕಾರಣಂ' ರಾಜಕೀಯ ಪರಿವರ್ತನಗಳಾದೊಡನೆ ಸಾಮಾಜಿಕ ಬದಲಾವಣೆಗಳು ತನ್ನಷ್ಟಕ್ಕೆ ತಾನೇ ಆಗುವುವು ಎಂಬುದು ಇನ್ನೊಂದು ಪಕ್ಷದ ವಿಚಾರ. ಈ ವಾಗ್ವಾದವು ಆಗ ಕೆಲಕಾಲ ಒಂದು ದೊಡ್ಡ ರಗಳೆಗೇ ಇಟ್ಟಿತು. ಮಹಾರಾಷ್ಟ್ರದಲ್ಲಿ ಆಗರಕರ ಮತ್ತು ಲೋಕಮಾನ್ಯ ತಿಲಕರು ಒಂದೊಂದು ಪಕ್ಷದ ಪುರಸ್ಕರ್ತರಾಗಿದ್ದರು. ಇವೆರಡರಲ್ಲಿ ರಾಜಕೀಯ ಪಕ್ಷಕ್ಕೇ ಜನರು ಹೆಚ್ಚು ಬೆಂಬಲ ಕೊಟ್ಟರು.

ಇದಕ್ಕೆ ಕೆಲವೊಂದು ಕಾರಣಗಳುಂಟು. ಸಾಮಾಜಿಕ ಚಳವಳಿಗೆ ಮೊದಲನೆಯ ಆತಂಕ, ಜನಸಾಮಾನ್ಯರ ಪರಂಪರಾಪ್ರಿಯತೆ, ಧಾರ್ಮಿಕ ಅಂಧಶ್ರದ್ಧೆ; ಇದಲ್ಲದೆ ಅಂದಿನ ಇನ್ನೊಂದು ಮಹತ್ವದ ಕಾರಣವೆಂದರೆ ಆಗಿನ ಸಮಾಜಸುಧಾರಕರೆಂದು ಮುಂದೆ ಬಂದ ಹಲವರ ನಡೆನುಡಿಗಳು. ಈ ಜನರಲ್ಲಿ ತಮ್ಮ ನಾಡು, ನುಡಿ, ಧರ್ಮದ ಬಗೆಗೆ ಸದಭಿಮಾನವೆ ಇರಲಿಲ್ಲ. ಎಲ್ಲವನ್ನೂ ಹೀಯಾಳಿಸುತ್ತಿದ್ದರು. ಆದುದರಿಂದ ಇಂತಹರ ಮಾತಿಗೆ ಸಮಾಜದಲ್ಲಿ ಬೆಲೆ ಬರಲಿಲ್ಲ. ಇವರು ತಮ್ಮ ಸ್ವೈರವರ್ತನ, ಜಿಹ್ವಾಲೌಲ್ಯಕ್ಕಾಗಿ ಹಿಂದಿನ ಸಾಮಾಜಿಕ ಎಲ್ಲ ವಿಧಿ-ನಿಷೇಧಗಳನ್ನೂ ಬೇಡವೆಂದು ಪ್ರತಿಪಾದಿಸುತ್ತಾರೆಂಬ ಜನಸಾಮಾನ್ಯರ ಆರೋಪಕ್ಕೆ ಇಂಬು ದೊರೆವಂತೆ ಅಂದಿನ ಎಷ್ಟೋ ಸಮಾಜಸುಧಾರಕರ ನಡತೆಯಿದ್ದಿತು.

ಆಗ ಸಮಾಜಸುಧಾರಕರೆಂದು ಪ್ರಾಮುಖ್ಯವಾಗಿ ಮುಂದೆ ಬಂದ ಮಹನೀಯರು ರಾಜಕೀಯ ರಂಗದಲ್ಲಿ ತಲೆಮರೆಯಿಸಿಕೊಂಡವರೂ ಪುಕ್ಕರೂ ಅಥವಾ ಮಂದಪಕ್ಷದವರೂ (ಎಂದರೆ ಬ್ರಿಟಿಷ ಆಡಳಿತಗಾರರೊಡನೆ ಮೆತ್ತಗೆ ಇದ್ದು ಅವರ ಅನುಕೂಲವರ್ತಿಗಳಾಗಿ ನಡೆವವರು) ಆಗಿದ್ದರು. ಆದಕಾರಣ, ಜನರಲ್ಲಿ ಸುಧಾರಕರ ವಿಷಯಕ್ಕೆ ವ್ಯಕ್ತಿಶಃ ಸಾಕಷ್ಟು ಆದರವು ಇದ್ದಿಲ್ಲ. ಅದರಿಂದ ಅವರು ಹೇಳುವ, ಸುಧಾರಣೆ ಮಾಡಬೇಕೆಂಬ ಉಪದೇಶವೆಲ್ಲವೂ ಬೋರ್ಗಲ್ಲ ಮೇಲೆ ಮಳೆಗರೆದಂತೆ ಆಯಿತು. ಅಲ್ಲದೆ ಯಾವುದೊಂದು ಮಾತಿನ ಆವಶ್ಯಕತೆಯು ಅಥವಾ ಮಹತ್ವವು ತಿಳಿಯದೆ ಜನರು ಅದನ್ನು ಮಾಡಲು ಎಂದೂ ಮುಂದೆ ಬರಲಾರರು.

ಇಂಗ್ರೇಜಿ ಓದಿದ ಮೊದಲನೆಯ ತಲೆಮಾರಿನ ಹಿಂದೀಯರಲ್ಲಿ ತಮ್ಮ ದೇಶ, ಧರ್ಮಗಳ ವಿಷಯಕ್ಕೆ ಸಾಮಾನ್ಯವಾಗಿ ಅಸಡ್ಡೆ, ಅನಾದರವೆ ಹೆಚ್ಚಾಗುತ್ತಿದ್ದುದು ಕಂಡುಬರುತ್ತದೆ. ಇಂಗ್ರೇಜಿ ಎ, ಬಿ, ಸಿ, ಯೊಡನೆ ಬೂಟು, ಪಾಟ್ಲೋನು ಬಂತೇ? ಬೂಟು ಪಾಟ್ಲೋನು ಧರಿಸಿ ದೇಶಭಾಷೆ ಮಾತನಾಡುವುದಕ್ಕೆ ನಾಚಿಕೆಯೆನಿಸ

ಲಾರಂಭಿಸಿತು. ಬ್ರಿಟಿಷ ಸಾಹೇಬರನ್ನು ಹೋಲುವಂತೆ ಉಡುಪು ತೊಡಪು ಮಾಡುವ ಹುಮ್ಮಸ ಹೆಚ್ಚಿತು. ಎಷ್ಟೇ ಚೆನ್ನಾಗಿ ಸಾಹೇಬರಂತೆ ವೇಷ ಕಟ್ಟಿದರೂ, ಗಿಳಿಯ ಹಾಗೆ ಇಂಗ್ರೇಜಿ ಒಡನುಡಿದರೂ ಪೂರ್ಣ ಸಾಹೇಬರಂತಾಗಲು ಮೈಬಣ್ಣವೊಂದು ಅಡ್ಡ ಬರುವುದಲ್ಲ, ಎಂದು ಮಮ್ಮಲನೆ ಮರುಗಿ ತಮ್ಮ ಮೈಬಣ್ಣಕ್ಕಾಗಿ ಮಮ್ಮಲನೆ ಮಿಡುಕಾಡಿದ ಪಿಳ್ಳೆಗಳೂ ಇದ್ದಾರೆ. ಅನೇಕ ಸುಶಿಕ್ಷಿತರೆನಿಸಿದೆ ಜನಗಳು ಅಂದು ಕ್ರಿಸ್ತೀಮತಕ್ಕೆ ಸೇರಿ 'ಹಿಂದೂ' ಎಂಬ ತಮ್ಮ ಕಲಂಕವನ್ನು ತೊಳೆದುಕೊಳ್ಳಲು ಆತುರಪಟ್ಟರು. ಅಡಿಯಿಂದ ಮುಡಿಯ ವರೆಗೆ, ಒಳಹೊರಗೆಲ್ಲ ಸಾಹೇಬರಾಗುವ ಅರ್ಹತೆಯುಂಟಾಗಲೆಂದು ಹಸುಳೆಗಳನ್ನೆ ಇಂಗ್ಲೆಂಡಿಗೆ ಅಟ್ಟಿದ ಮಹನೀಯರುಂಟು. ತಮ್ಮ ಮಕ್ಕಳು ಹಿಂದುಸ್ತಾನದಲ್ಲಿ ಹುಟ್ಟುವುದು ಬೇಡ; ವಿಲಾಯತಿಯಲ್ಲಿ, ಕೊನೆಗೆ ಕಡಲಲ್ಲಿ ಹಡಗದ ಮೇಲಾದರೂ ಅಡ್ಡಿಯಿಲ್ಲವೆಂದು ಹೆರಲು ತಮ್ಮ ಹೆಂಡಂದಿರನ್ನೂ ಅತ್ತ ಕಳುಹಿದ ಗಂಡಂದಿರೂ ಆದರು!

ಆದರೆ, ಇದರೊಡನೆ, ಮೆಲ್ಲನೆ ದೇಶಾಭಿಮಾನವೂ ಸ್ವಲ್ಪಮಟ್ಟಿಗೆ ಅಲ್ಲಿ ಇಲ್ಲಿ ಒಡಮೂಲಾರಂಭಿಸಿದುದರ ಸಂದೇಹವೂ ಬ್ರಿಟಿಷರಿಗೆ ಬರಲಾರಂಭಿಸಿತು. ಮೆಕಾಲೆ ಇಂಗ್ರೇಜಿ ವಿದ್ಯೆ ಕಲಿಸುವುದಕ್ಕಾರಂಭಿಸಿ ಕೆಲಸವನ್ನು ಹದಗೆಡಿಸಿದನೆಂಬ ಟೀಕೆಯು ಕೇಳಿಬರಹತ್ತಿತು. ಈ ಸಂಬಂಧದಲ್ಲಿ ಬ್ರಿಟಿಷರೊಳಗೆ ಗುಪ್ತವಾದ ಪರ್ಯಾಲೋಚನೆಗಳು ನಡೆದುವು; ಮೆಕಾಲೆಯು ಮಾಡಿದ್ದು ಸರಿಯಾದುದೇ ಆಗಿದೆಯೆಂದು ಕೊನೆಗೆ ನಿರ್ಣಯವಾಯಿತು. ಹಿಂದೀ ಜನರಲ್ಲಿ ಅಲ್ಪ ಸ್ವಲ್ಪ ದೇಶಾಭಿಮಾನದ ಗಾಳಿಯು ಸುಳಿಯುತ್ತಿದ್ದರೆ ಅದು ಕೇವಲ ಇಂಗ್ರೇಜಿ ವಿದ್ಯೆಯಿಂದ ಆದ ಪರಿಣಾಮದಿಂದಲೇ ಎಂದು ಗ್ರಹಿಸುವುದರಲ್ಲಿ ಹುರುಳಿಲ್ಲ. ಹಿಂದುಸ್ತಾನದ ಇತಿಹಾಸವೂ ಓಜಸ್ವಿಯಾಗಿದೆ, ತೇಜಸ್ವಿಯಾಗಿದೆ. ಅದನ್ನು ಒಂದು ವಿಶಿಷ್ಟ ಪಠ್ಯಪುಸ್ತಕಗಳ ಮುಖಾಂತರವೆ ತೀರ ಸಪ್ಪಗೆಮಾಡಿ ಕಲಿಸುವ ಏರ್ಪಾಟು ಮಾಡಿದೆ. ಇಂಗ್ರೇಜಿ ವಿದ್ಯೆಯನ್ನು ಕಲಿಸದೆ ಇದ್ದರೆ ಇದಕ್ಕೂ ವಿಪರೀತ ಪರಿಣಾಮಗಳು ಆಗುತ್ತಿದ್ದುವು. ಈಗ ಆದುದು ಅನಿವಾರ್ಯ. ಈ ಅನಿವಾರ್ಯವಾದ ಕನಿಷ್ಟ ಪರಿಣಾಮಗಳೂ ಅನಿಷ್ಟವಾಗಿ ಪರಿಣಮಿಸದಂತೆ ಕಾಲಕಾಲಕ್ಕೆ ಏನಾದರೂ ಯೋಜನೆಗಳನ್ನು ಕೈಕೊಳ್ಳುತ್ತ ಹೋಗುವುದೊಂದೇ ಹಾದಿ, ಎಂಬ ತೀರ್ಪು ಆಯಿತು.

ಇಂಗ್ರೇಜಿ ತೀರ ನಿಲ್ಲಿಸಿಯೆ ಬಿಟ್ಟಿದ್ದರೆ ತಮ್ಮ ಹಾಗೂ ಹಿಂದೀಯರ ನಡುವಿನ ಬಿಚ್ಚುಮನಸಿನ ಮಾತುಕತೆಗೆ ಬ್ರಿಟಿಷರಿಗೆ ತಮ್ಮದಲ್ಲದ ಬೇರೊಂದು ಭಾಷೆಯನ್ನು ಬಳಸುವ ಹೊತ್ತು ಬರುತ್ತಿತ್ತು. ಇದು ಬ್ರಿಟಿಷರಿಗೇ ತೊಂದರೆಗೆ ಕಾರಣ. ಅಲ್ಲದೆ ಮುಖ್ಯವಾಗಿ ಸಂಸ್ಕೃತ ಮತ್ತು ಪರ್ಶಿಯನ್‌ನನ್ನೇ ಅಧ್ಯಯನ ಮಾಡಿದವರು ಏಕಾಂಗಿಯಾದ ಧಾರ್ಮಿಕ ಅತಿವಾದಿಗಳಾಗುವ ಸಂಭವವಿದ್ದು, ಅಂತಹ ತಲೆತಿರುಕ ಧರ್ಮಾಂಧರು ದೇಶದಲ್ಲಿ ಹೆಚ್ಚಾದರೆ ಪರಿಸ್ಥಿತಿಯು ಕೈಮೀರುವುದೆಂದು ಬ್ರಿಟಿಷರು ಚೆನ್ನಾಗಿ ಅರಿತಿದ್ದರು. ಹಿಂದೀಯರು ಸಂಸ್ಕೃತ, ಪರ್ಶಿಯನ್ ಅಥವಾ ಯಾವುದಾದರೊಂದು ದೇಶಭಾಷೆಯ ಮೂಲಕವಾಗಿಯೆ ತಮ್ಮ ವಿಚಾರಗಳನ್ನೆಲ್ಲ ಮುಖ್ಯವಾಗಿ ವ್ಯಕ್ತಪಡಿಸಲಾರಂಭಿಸಿದರೆ ಇಂಗ್ರೇಜಿಯಲ್ಲಿ ಭಾಷಾಂತರವಾಗುವ ವರೆಗೆ ಬ್ರಿಟಿಷರಿಗೆ ಅದರ ಗಂಧವೂ ಹತ್ತುವಂತಿಲ್ಲ. ದೇಶದೊಳಗಿನ ವಿಚಾರದ ದಿಕ್ಕು ತಿಳಿಯದೆ ಆಡಳಿತಗಾರರಿಗೆ ಅದನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು, ಅಥವಾ ಪ್ರತಿ ಉಪಾಯಗಳನ್ನು ಯೋಚಿಸಲು ಸಾಧ್ಯವಿಲ್ಲ. ಆದುದರಿಂದ ಹಿಂದೀಯರು ಇಂಗ್ರೇಜಿಯ ಮುಖಾಂತರವಾಗಿಯೆ ತಮ್ಮ ಅಂತರಂಗವನ್ನು ವ್ಯಕ್ತಪಡಿಸುವಂತೆ ಮಾಡಿದರೆ ಅವರ ಹೃದಯಾಂತರಾಳದಲ್ಲಿ ಏನು ನಡೆದಿದೆಯೆಂಬುದನ್ನು ತಾವು ಅರಿತುಕೊಳ್ಳಲು ಸುಲಭವಾಗುವುದೆಂದು ಬ್ರಿಟಿಷರು ಮನಗಂಡರು. ಇಂಗ್ರೇಜಿಯನ್ನು ಬಿಟ್ಟರೆ ತಮ್ಮ ಹೃದ್ಗತವನ್ನು ವ್ಯಕ್ತಪಡಿಸುವುದೇ ತಮಗೆ ಅಸಾಧ್ಯವೆನ್ನುವ ಪರಿಸ್ಥಿತಿಯು ಬ್ರಿಟಿಷರ ಶಿಕ್ಷಣದಿಂದ ಇಂದು ಉಂಟಾಗಿದೆ!

ದೇಶದೊಳಗಿನ ಸಾಮಾಜಿಕ ರಾಜಕೀಯ ಚಳವಳಿಗಳಲ್ಲಿ ಆಡಳಿತಗಾರರಾದ ಬ್ರಿಟಿಷರು ತಾವು ಪ್ರತ್ಯಕ್ಷವಾಗಿ ಕೈಹಾಕದಿದ್ದರೂ ಅವನ್ನು ವಿಶಿಷ್ಟ ರೀತಿಯಲ್ಲಿ ರೂಪಿಸುವುದರಲ್ಲಿ ಅವರು ಬಹಳ ದಕ್ಷತೆಯನ್ನು ವಹಿಸಿದರು. ಜನರು ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಬಹಿರಂಗವಾಗಿ ವ್ಯಕ್ತಪಡಿಸಲು ರಾಷ್ಟ್ರೀಯ ಮಹಾಸಭೆಯ ಸಾಧನವನ್ನು ಕಲ್ಪಿಸಿಕೊಟ್ಟರು. ತಮ್ಮ ಆಡಳಿತದ ವಿಷಯಕ್ಕೆ ಸುಶಿಕ್ಷಿತ ಹಿಂದೀಯರಲ್ಲಿ ಯಾವ ಬಗೆಯ ಭಾವನೆಗಳು

ಪುಟಗೊಳ್ಳುತ್ತಲಿವೆಯೆಂಬುದನ್ನು ಅರಿತುಕೊಳ್ಳಲು ಬ್ರಿಟಿಷರಿಗೆ ಹಿಂದೀಯರ ಭಾವನಾ-ಮಾಪಕ ಯಂತ್ರವೆ ಕೈಗೆ ದೊರೆತಂತಾಯಿತು. ವರ್ಷಕ್ಕೊಂದು ಬಾರಿ ಸೇರಿ ರಾಷ್ಟ್ರೀಯ ಸಭೆಯು ತನ್ನ ದುಃಖಗಳನ್ನು ಬ್ರಿಟಿಷ ಆಡಳಿತಗಾರರ ಎದುರು ತೋಡಿಕೊಳ್ಳುವ ವಾಡಿಕೆಯು ನಿರ್ಮಾಣವಾಯಿತು.

ಆಡಳಿತದ ಕೇಂದ್ರಸ್ಥಾನಗಳಲ್ಲಿ ಒಬ್ಬ ಹಿಂದೀಯನನ್ನೂ ತಕ್ಕೊಳಕೂಡದೆಂದು ಬ್ರಿಟಿಷ ಸಾಮ್ರಾಜ್ಯವಾದಿಗಳ ಆತ್ಯಂತಿಕ ಹಟ. ಆದರೆ ಲಾರ್ಡ ಕ್ಯಾನಿಂಗ್, ಲಾರ್ಡ ರಿಪನ್ ರಂತಹ ಕೆಲವು ಸಜ್ಜನ ಹೃದಯದ ಆಡಳಿತಗಾರರಿಗೆ ಇದು ತೀರ ಅನ್ಯಾಯವೆನಿಸಿ ಭಾರತೀಯರೊಡನೆ ಅವರು ಸ್ವಲ್ಪ ಒಳ್ಳಿದರಾಗಿ ನಡೆದುಕೊಂಡೊಡನೆ ಆಂಗ್ಲರು ಅವರ ವಿರುದ್ಧ ಹುಯಿಲೆಬ್ಬಿಸಿ ಅವರನ್ನು ಅಧಿಕಾರದಿಂದ ತಳ್ಳಲು ಹವಣಿಸಿದರು. ಬ್ರಿಟಿಷ ಯುವಕರಿಗೆ ಆಗದ ತೀರ ಕ್ಷುಲ್ಲಕ ನೌಕರಿಗಳನ್ನಷ್ಟು ಹಿಂದೀಯರಿಗೆ ಅನಿವಾರ್ಯವಾಗಿ ಕೊಡುತ್ತಿದ್ದರು. ಹಿಂದೀ ಕಲೆಕ್ಟರರು ಸುಮಾರಾಗಿ ೧೯೧೪ರ ಮುಂದೆಯೆ, ಮೊದಲನೆಯ ಮಹಾಯುದ್ಧಕ್ಕಾಗಿ ಆಂಗ್ಲರು ವಿಲಾಯತಿಗೆ ಹೋಗಬೇಕಾದುದರಿಂದ ಎಷ್ಟೋ ಮಹತ್ವದ ಸ್ಥಳಗಳಿಗೆ ಹಿಂದೀಯರನ್ನು ನೇಮಿಸದೆ ಗತಿಯಿರಲಿಲ್ಲ. ರಾಷ್ಟ್ರೀಯ ಸಭೆಯು ೧೮೮೫ರಿಂದ ಕಂಠಶೋಷ ಮಾಡಿಕೊಂಡರೂ ಬ್ರಿಟಿಷರು ಅದನ್ನು ವಂಚಿಸುವ ಹಲವು ಹಂಚಿಕೆಗಳನ್ನು ಹೂಡಿದರು. ಆಂಗ್ಲೋ ಇಂಡಿಯನ್, ಹಿಂದೀ ಕ್ರಿಶ್ಚಿಯನ್ ವರ್ಗಗಳನ್ನು ನಿರ್ಮಾಣ ಮಾಡಿ ಅವರನ್ನು ತಮ್ಮ ಹತ್ತಿರದವರಂತೆ ನಡೆಸಿಕೊಂಡರು. ನವಕರಿಯ ಆಮಿಷಕ್ಕಾಗಿ, ವರಿಷ್ಠ ಅಧಿಕಾರಿಗಳಾದ ಬ್ರಿಟಿಶರ ಕೃಪಾಪ್ರಸಾದವನ್ನು ಸಂಪಾದಿಸುವುದಕ್ಕಾಗಿ ಕ್ರಿಸ್ತಿಗಳಾದ ಸುಶಿಕ್ಷಿತ ಹಿಂದೂಗಳುಂಟು. ಅಲ್ಪಸ್ವಲ್ಪ ದೇಶಾಭಿಮಾನದ ಗಾಳಿ ಸೇರಿ ಕಾಂಗ್ರೆಸ್ಸಿನಲ್ಲಿ ಹೊಕ್ಕು ಬ್ರಿಟಿಶ ಆಡಳಿತವನ್ನೂ ಅವರು ನಡಸಿದ ದೇಶದ ಸುಲಿಗೆಯನ್ನೂ ಕಟುವಾಗಿ ಯಾರಾದರೂ ಟೀಕಿಸುವುದು ಕಂಡುಬಂದೊಡನೆ ಬ್ರಿಟಿಶರು ಅವರನ್ನು ತಮ್ಮ ಜೇಬಿಗೆ ಹಾಕಿಕೊಳ್ಳಲು ಹಲವು ಆಮಿಷಗಳನ್ನು ಮುಂದೆ ಒಡ್ಡುತ್ತಿದ್ದರು. ಕನ್ನದ ಕಾಲದಲ್ಲಿ ನಾಯಿಯು ಬೊಗಳಬಾರದೆಂದು ಅದಕ್ಕೊಂದು ರೊಟ್ಟಿಯ ತುಣುಕವನ್ನು ಚೆಲ್ಲಿ ಅದರ ಕೂಗನ್ನು ನಿಲ್ಲಿಸುವಂತೆ, ಕಾಂಗ್ರೆಸ್ ವ್ಯಾಸಪೀಠದಿಂದ ಬ್ರಿಟಿಶರ ಅಪಹಾರವನ್ನು ಟೀಕಿಸಿ ಗರ್ಜಿಸುತ್ತಿರುವವರನ್ನು ದೊಡ್ಡ ದೊಡ್ಡ ಅಧಿಕಾರಸ್ಥಾನ ಪದವಿಗಳನ್ನು ಕೊಟ್ಟು ಅಂದಿನ ಆಡಳಿತಗಾರರು ಅವರನ್ನು ಗೆದ್ದು ತಮ್ಮ ದಾಸರನ್ನಾಗಿ ಮಾಡಿಕೊಂಡಿದ್ದಾರೆ. ಹೈಕೋರ್ಟ ಜಡ್ಜಿ, ಎಗ್ಜಕ್ಯುಟಿವ್ಹ ಕೌನ್ಸಿಲರ, ಮೊದಲಾದ ಪದವಿಗಳನ್ನು ಆಶಿಸುವ ಮಹತ್ವಾಕಾಂಕ್ಷಿಗಳು ಕಾಂಗ್ರೆಸ್ ವ್ಯಾಸಪೀಠವನ್ನು ಈ ತೆರನಾದ ಸ್ವಾರ್ಥಸಾಧನೆಗೆ ಉಪಯೋಗಿಸಿಕೊಂಡಿದ್ದಾರೆ! ಅಧಿಕಾರ, ಸಂಪತ್ತುಗಳ ಲಾಲಸೆಯ ಆ ಸ್ವಾರ್ಥಬುದ್ಧಿಯು ಇಂದಿಗೂ ಅಳಿದಿದೆಯೆಂದು ತಿಳಿಯಲಾಗದು. ಬೇರೊಂದು ರೂಪತಾಳಿ ಲೋಕಸೇವೆಯ ಸೋಗಿನಲ್ಲಿ ಅದು ತನ್ನ ಕಾಯಕವನ್ನು ನಡೆಸಿಯೆ ಇದೆ.

ಸರಕಾರಿ ನೌಕರಿ ಕೊಟ್ಟು ಊಳಿಗದವರನ್ನಾಗಿ ಮಾಡಿ ಕೆಲವರನ್ನು ತಮ್ಮ ಬಲೆಯಲ್ಲಿ ಹಿಡಿದರು; ಸರ್, ರಾವಸಾಹೇಬರೆಂದು ಬಿರುದು ಬಾವುಲಿ ಕಟ್ಟಿ ಕೆಲವರನ್ನು ತೊಗಲಬಾವುಲಿಗಳನ್ನು ಮಾಡಿದರು. ಕೌನ್ಸಿಲರ, ಕಮೀಶನರ, ಆನರರಿ ಮ್ಯಾಜಿಸ್ಟ್ರೇಟ ಮೊದಲಾದ ಅಲ್ಪಸ್ವಲ್ಪ ಅಧಿಕಾರದ ಗಾಳಕ್ಕೆ ಕೆಲವರನ್ನು ಸಿಕ್ಕಿಸಿದರು. ಇಷ್ಟರಿಂದಲೂ ಬ್ರಿಟಿಶರಿಗೆ ತಮ್ಮ ಗಂಡಾಂತರವು ತಪ್ಪೀತೆಂದು ತೋರಲಿಲ್ಲ. ನಮ್ಮ ದೇಶದ ಜಾತಿಮತಗಳ ಸೂಕ್ಷ್ಮವಾದ ಅಭ್ಯಾಸ ಮಾಡಿ ಅದರಿಂದಲೂ ಲಾಭ ಪಡೆದುಕೊಂಡರು. ಸುಮಾರು ೧೮೯೬ರಿಂದ ಹಿಂದೂ ಮುಸಲ್ಮಾನರೆಂಬ ಭೇದನೀತಿಗೆ ಸ್ಪಷ್ಟವಾಗಿ ಆರಂಭವಾಯಿತು. ಅದನ್ನು ಬಹಳ ಯಶಸ್ವಿಯಾಗಿ ನಡಸಿಕೊಂಡು ಬಂದರು. ಲೋಕಮಾನ್ಯ ಟಿಳಕ, ಮಹಾತ್ಮಾಗಾಂಧಿಯವರನ್ನು ಕೂಡ ತಮ್ಮ ಇಷ್ಟವಾದ ರೀತಿಯಲ್ಲಿ (ಎಂದರೆ ಮುಸಲ್ಮಾನರ ಮಹತ್ವಾಕಾಂಕ್ಷೆಗಳು ಹೆಚ್ಚಿ, ಅವರು ಹಿಂದುಗಳಿಂದ ಹೆಚ್ಚು ಹೆಚ್ಚಿಗೆ ದೂರ ಸಿಡಿಯುವಂತೆ) ಅವರಾಗಿಯೆ ವರ್ತಿಸುವಂತೆ ತಂತ್ರವನ್ನು ಮಾಡಿದರು. ಲೋಕಮಾನ್ಯರ ಲಖನೌ ಒಪ್ಪಂದ, ಮಹಾತ್ಮಾಜೀಯವರ ಮುಸಲ್ಮಾರನ್ನು ಸಂತೈಸುವ ಪ್ರಯತ್ನಗಳು (ಗಾಂಧೀ-ಜಿನ್ನಾ ಮಾತುಕಥೆ) ಇವು ಹಿಂದೂ ಜನರಿಂದಾದ ಅನಿವಾರ್ಯವಾದ ಮಹಾಪರಾಧಗಳೇ ಸರಿ. ಕಂಡೂ ಕಂಡೂ ಬ್ರಿಟಿಶರು ತೋಡಿಟ್ಟ ತಗ್ಗಿನಲ್ಲಿ ನಾವಾಗಿಯೆ

ಹೋಗಿ ಬಿದ್ದಂತಾಯ್ತು. ಅಥವಾ ಪ್ರವಾಹಪತಿತರಾಗಿ ಅವರಿಗೆ ಅವನ್ನು ಮಾಡಲೇಬೇಕಾಯಿತು. ಬ್ರಿಟಿಶ ರಾಜತಂತ್ರಪ್ರವೀಣರು ಮುಸಲ್ಮಾನರ ಪಕ್ಷಪಾತಿಗಳಾಗಿ ಇದೆಲ್ಲವನ್ನೂ ಕಂಡು ಕಾಣದಂತೆ ಮಾಡಿ ಮಾಡಿಸುತ್ತಿದ್ದರು. ಇದೆಲ್ಲದರ ಫಲವೆ ಇಂದಿನ ಪಾಕಿಸ್ತಾನ.

೧೯೨೦ರಲ್ಲಿ ಲೋಕಮಾನ್ಯ ಟಿಳಕರು ತೆರಳಿ ಮಹಾತ್ಮಾಜೀಯವರು ನಾಡಿನ ಮುಂದಾಳ್ತನವನ್ನು ಸ್ವೀಕರಿಸದೆ ಇದ್ದರೆ, ದಕ್ಷಿಣ ಭಾರತದಲ್ಲಿ 'ದ್ರವಿಡಿಸ್ತಾನ'ವೂ ಒಂದು ಇಷ್ಟು ಹೊತ್ತಿಗೆ ಭೋಂಕನೆ ಮೇಲೇಳದೆ ಇರುತ್ತಿದ್ದಿಲ್ಲ. ಲೋಕಮಾನ್ಯರು ಭಾರತದ ರಾಜಕೀಯ ಧುರೀಣರಾಗಿದ್ದಾಗ ಅವರ ಪ್ರಭಾವವು ವೃದ್ಧಿಂಗತವಾಗಿ ರಾಜಕೀಯ ಆಂದೋಲನವು ತೀವ್ರಸ್ವರೂಪವನ್ನು ತಾಳಬಾರದೆಂದು ಬ್ರಿಟಿಶರು ಬಗೆಬಗೆಯಿಂದ ಹೆಣಗಿದರು. ತಿಲಕರನ್ನು ಹಲವು ಬಾರಿ ಸೆರೆಮನೆಯಲ್ಲಿ ಕೊಳೆ ಹಾಕಿದರು. ಅಖಿಲಭಾರತದಲ್ಲಿ ಸ್ವರಾಜ್ಯ ಸಂಪಾದನೆಗಾಗಿ ಹೋರಾಡಿ ಸೆರೆಮನೆಯನ್ನು ಸೇರಿದ ಮೊದಲನೆಯ ಮಹಾವೀರರೆಂದರೆ ಲೋಕಮಾನ್ಯರೇ. ಸೆರೆಮನೆಯು ಸ್ವರಾಜ್ಯದ ಸೋಪಾನ; ಭಾರತ ಸ್ವಾತಂತ್ರ್ಯದ ಮಾರ್ಗವು ಕಾರಾಗೃಹದೊಳಗಿಂದಲೇ ಹಾಯುತ್ತದೆ. ಆದುದರಿಂದ ದೇಶಸೇವೆಗಾಗಿ ಆನಂದದಿಂದ ಕಾರಾಗೃಹವನ್ನು ಸೇರುವುದು ಅವಶ್ಯವಾದ ಕರ್ತವ್ಯವೆಂದು ತಮ್ಮ ಸ್ವಂತದ ಆಚರಣದಿಂದ ತೋರಿಸಿ ಕೊಟ್ಟ ಸ್ವಾತಂತ್ರ್ಯಮಂತ್ರದ್ರಷ್ಟಾರರು ಲೋಕಮಾನ್ಯ ಟಿಳಕರು. ಸೆರೆಮನೆಯ ಗುಮ್ಮನಿಂದ ಲೋಕಮಾನ್ಯರನ್ನು ಹೆದರಿಸಲು ಸಾಧ್ಯವಾಗಲಿಲ್ಲ. ಆಗ ಬ್ರಿಟಿಶರು ಲೋಕಮಾನ್ಯರನ್ನು ಅನುಸರಿಸದಂತೆ ಜನರಿಗೆ ಬೆದರಿಸಿದರು. ತಿಲಕರ ಹೆಸರನ್ನೂ ಎತ್ತದಂತೆ, ಚಿತ್ರ, ಚರಿತ್ರಗಳನ್ನು ಹತ್ತಿರ ಇಡದಂತೆ ಆಜ್ಞಾಪಿಸಿದರು. ಇದಕ್ಕೆ ವಿಪರೀತವಾಗಿ ವರ್ತಿಸಿದ ವಿದ್ಯಾರ್ಥಿಗಳನ್ನು ಶಾಲೆಯಿಂದ ತಳ್ಳಿದರು. ಜನರನ್ನು ಗುಪ್ತಚಾರರು ನಾನಾ ಬಗೆಯಿಂದ ಪೀಡಿಸಿದರು. ಹೀಗೆ ಗೋಲಾಡಿಸಿದಷ್ಟೂ ತಿಲಕರ ಕೀರ್ತಿ, ಲೋಕಪ್ರಿಯತೆ ಚಕ್ರಬಡ್ಡಿಯಂತೆ ಅಭಿವರ್ಧಿಸಿತು. ಇನ್ನು ಬೇರೆ ಉಪಾಯಗಾಣದೆ ಬ್ರಿಟಿಶರು ಭೇದೋಪಾಯವನ್ನು ಯೋಜಿಸಿದರು. ತಿಲಕರು ಬ್ರಾಹ್ಮಣರು. ಬ್ರಾಹ್ಮಣರು ವಂಚಕರು. ಮಂತ್ರಿಗಳಾಗಿ ಇರಬೇಕಾದ ಪೇಶ್ವೆಗಳು ರಾಜನನ್ನು ಮೂಲೆಗಿರಿಸಿ ತಾವೇ ಅರಸರಂತೆ ನಡೆದುಕೊಳ್ಳಲಿಲ್ಲವೆ? ಆದಕಾರಣ, ಈಗ ಸ್ವರಾಜ್ಯವನ್ನು ಬೇಡುತ್ತಿರುವ ಹಾರುವ ತಿಲಕನೂ, ಅವನ ಜಾತಿಯವರೂ-ಬ್ರಾಹ್ಮಣರು, ಬ್ರಿಟಿಶರು ಹೋದೊಡನೆ ಬ್ರಾಹ್ಮಣೇತರರನ್ನು ಹಿಂದೆ ದೂಡಿ ತಾವೇ ರಾಜ್ಯ ಸೂತ್ರಗಳನ್ನು ಕೈವಶ ಮಾಡಿಕೊಳ್ಳದೆ ಬಿಡಲಾರರೆಂಬ ಮಂತ್ರೋಪದೇಶವು ದೊರೆತ ಹಲವು ಬ್ರಾಹ್ಮಣೇತರ ಮುಂದಾಳುಗಳೂ, ಅಂದಿನ ಕೊಲ್ಹಾಪುರ ಮಹಾರಾಜನೂ, ಮೊದಲಾದವರು ಆಗಿನ ಸ್ವರಾಜ್ಯದ ಚಳವಳಿಯನ್ನು ಬಗ್ಗು ಬಡಿಯಲು ಬ್ರಿಟಿಶರಿಗೆ ತುಂಬ ನೆರವಾದರು. ಮದರಾಸ್ ಇಲಾಖೆಯಲ್ಲಿ (ತಮಿಳನಾಡಿನಲ್ಲಿ) ಜಸ್ಟಿಸ್ ಪಕ್ಷವು ತಲೆಯೆತ್ತಿ ಬ್ರಾಹ್ಮಣದ್ವೇಷದ ಪ್ರಚಾರಕ್ಕೆ ಪ್ರೋತ್ಸಾಹವು ದೊರೆತಿತು. ಆರ್ಯ-ದ್ರಾವಿಡವೆಂಬ ವಾಗ್ಯುದ್ಧಗಳು ಭೀಕರ ರೂಪ ತಾಳಹತ್ತಿದುವು. ದ್ರಾವಿಡಸ್ತಾನದ ಬೇಡಿಕೆಯು ಮುಂದೆ ಬಂದಿತು!

ಈ ಹೊತ್ತಿಗೆ ಸರಿಯಾಗಿ ಮಹಾತ್ಮಾಜೀಯವರ ಕೈಗೆ ಭಾರತದ ರಾಜಕೀಯ ಸೂತ್ರಗಳು ಬಂದುವು. ಲೋಕಮಾನ್ಯರ ನಿರ್ಯಾಣಕಾಲದಲ್ಲಿ ಆದ ಅಪಾರದುಃಖದಿಂದ ಹಿಂದೂ ದೇಶವೆಲ್ಲವೂ ಕಂಗೆಟ್ಟಿತು. ಲೋಕಮಾನ್ಯರು ಇನ್ನೂ ನಾಲ್ವೊಪ್ಪತ್ತು ಬಾಳಬೇಕಿತ್ತು, ಎಂದು ಶೋಕಿಸಿತು. ಶೋಕಭರದಲ್ಲಿ ಲೋಕಮಾನ್ಯರ ಅವತಾರಕಾರ್ಯವು ನಿಜವಾಗಿಯೂ ಕೊನೆಗಂಡಿತ್ತೆಂಬ ವಿಚಾರವು ಹೊಳೆಯಲಿಲ್ಲ.

ಆಗಿನ ಆಡಳಿತದಿಂದ ಲಾಭಹೊಂದಿದ ಸರ್, ದಿವಾಣಬಹದ್ದೂರಗಳೂ, ನಿವೃತ್ತ ಸರಕಾರಿ ಹಿರಿ ನೌಕರರೂ, ಇವರ ಪರಿವಾರದ ಕೈಗೊಂಬೆಗಳೂ ಬ್ರಿಟಿಶರಾಳಿಕೆಯಿಂದ ಕೊಬ್ಬಿ 'ಬ್ರಿಟಿಶರೇ ತಮ್ಮನ್ನು ಚಿರಕಾಲವೂ ಆಳಲಿ, ಬ್ರಿಟಿಶ ಸಾಮ್ರಾಜ್ಯವು ಅಮರವಾಗಲಿ' ಎಂದು ದೇವರಿಗೆ ಸಾರ್ವಜನಿಕವಾಗಿ ಪ್ರಾರ್ಥನೆ ಸಲ್ಲಿಸುವುದಕ್ಕೂ ಹೇಸಲಿಲ್ಲ! ಇಂತಹ ಕುಲಕಂಟಕರೂ, ಭಾರತ ಕಲಂಕರೂ, ದೇಶದ್ರೋಹಿಗಳೂ 'ರಾಜನಿಷ್ಠ'ರೆಂದು ಆಡಳಿತಗಾರರಿಂದ ಸನ್ಮಾನಿಸಲ್ಪಡುತ್ತಿದ್ದರು. ಸರಕಾರದ ಕಚೇರಿಕಟ್ಟೆಗಳೊಳಗಿನ ತಮ್ಮ ಕೆಲಸಗಳು ಸುಲಭವಾಗಿ ಇವರಿಂದ ಕೈಗೂಡಬಲ್ಲವೆಂದು ಜನಸಾಮಾನ್ಯರು ಇವರಿಗೆ ಬೆಲೆ ಕೊಡಬೇಕಾಗಿತ್ತು. ಇದರಿಂದ ಎಲ್ಲಿ ನೋಡಿದಲ್ಲಿ

ಬ್ರಿಟಿಶರ ವಿಷಯಕ್ಕೆ ನಿಷ್ಠೆಯವರೇ ಮೇಲುಗೈಯವರಾಗಿದ್ದರು. ಬ್ರಿಟಿಶರ ಆಡಳಿತದಲ್ಲಿ ಹಿಂದಿನ ಮುಸಲ್ಮಾನರ ಕಾಲದಂತೆ ಕೊಲೆ ಸುಲಿಗೆಗಳಿಲ್ಲದೆ ದೇಶವು ಶಾಂತಿ ಸೌಖ್ಯಗಳ ತವರೂರಾಗಿದೆಯೆಂದು ಈ ರಾಜನಿಷ್ಠ ಸ್ತುತಿಪಾಠಕರು ಬ್ರಿಟಿಶರ ಹೊಗಳು ಭಟ್ಟರಾಗಿ (ಸ್ವಾರ್ಥಸಾಧಿಸುವ) ತಮ್ಮ ಕಾಯಕವನ್ನು ನಡಸಿದ್ದರು. ಕಾಶಿಯಿಂದ ರಾಮೇಶ್ವರದವರೆಗೆ ಬಂಗಾರದ ಗಟ್ಟಿಯನ್ನು ಅಂಗೈಯಲ್ಲಿ ಹಿಡಿದುಕೊಂಡು ಬೇಕಾದ ಹಾಗೆ ಅಲೆದಾಡಬಹುದು. ಮೊದಲಿನ ಕಾಲದಂತೆ ಈಗ ಜೀವಿತ, ವಿತ್ತದ ಹೆದರಿಕೆಯಿಲ್ಲವೆಂದು ಜಂಭ ಕೊಚ್ಚಿಕೊಳ್ಳುವುದು ಅಂದಿನ ವಾಡಿಕೆಯಾಗಿತ್ತು. 'ಆದರೆ ಈಗ ಅಂಗೈಯಲ್ಲಿ ಹಿಡಿದುಕೊಂಡು ಹೋಗಲು ಬಂಗಾರವೇ ಉಳಿದಿಲ್ಲವಲ್ಲ! ಬ್ರಿಟಿಶರು ಎಲ್ಲವನ್ನೂ ಕಾಯಿದೆಶೀರ ರೀತಿಯಿಂದ ಸುಲಿಗೆ ನಡಸಿ ನಮ್ಮ ದೇಶವನ್ನು ಬರಿದುಮಾಡಿದ್ದಾರೆ!' ಎಂದು ಲೋಕಮಾನ್ಯ ತಿಲಕರು ಧೈರ್ಯದಿಂದ ಎದುರಿಸಿ ಮೇಲಣ ಜಂಭದ ಮಾತು ಎಷ್ಟು ನಿರರ್ಥಕ ವಾದುದೆಂಬುದನ್ನು ಸಿದ್ಧಪಡಿಸಿ ತೋರಿಸಿದರು.

ಮುಸಲ್ಮಾನರ ಕಾಲದಲ್ಲಿ ಅಶಾಂತಿಯಿರಬಹುದು. ಆದರೆ, ಇಂದಿನ ಶ್ಮಶಾನಶಾಂತಿಗಿಂತಲೂ ಅಂದಿನ ಅಶಾಂತಿಯೇ ಲೇಸು. ಆ ಅಶಾಂತಿಯು ಹುಕ್ಕಬುಕ್ಕ, ಶಿವಾಜಿಗಳಂತಹ ಸ್ವಾಭಿಮಾನಿಗಳಾದ ನರವೀರರನ್ನು ನಿರ್ಮಿಸಬಲ್ಲದು. ಇಂದಿನ ಶ್ಮಶಾನಶಾಂತಿ ನಮ್ಮ ತರುಣರನ್ನು ಗಂಡುಗೇಡಿಗಳನ್ನಾಗಿ ಮಾಡಿದೆ. ನಾಜೋಕಾದ ಜಂಟ್ಲಮೆನ್ ಆಗುವುದರಲ್ಲಿ ನಮ್ಮ ತರುಣರಲ್ಲಿ ಈರ್ಷೆ ನಡೆದಿದೆ. ಇದೇನು ರಾಷ್ಟ್ರದ ಪೌರುಷದ ಲಕ್ಷಣವೇ? ಕೈಯಲ್ಲಿ ಶಸ್ತ್ರವನ್ನು ಹಿಡಿಯುವುದಕ್ಕೆ ಹೆದರಿಕೆಯಾಗುವ ಇಂದಿನ 'ಗಂಡಸ'ರನ್ನೂ ನಿರ್ಮಾಣಮಾಡುತ್ತಿರುವ ಬ್ರಿಟಿಶರ ಆಡಳಿತವು ಭಾರತದ ನಾಶಕ್ಕೆ ಕಾರಣವಾದೀತಲ್ಲದೆ ಉದ್ಧಾರಕ್ಕಲ್ಲ ಎಂದು ಮುಂತಾದ ರೀತಿಯಲ್ಲಿ ಲೋಕಮಾನ್ಯತಿಲಕರು ಗರ್ಜಿಸಿ ಸುಖಸ್ವಪ್ನದ ಭ್ರಾಂತಿಯಲ್ಲಿದ್ದ ಭಾರತವನ್ನು ಎಚ್ಚರಿಸಿದರು. 'ಸ್ವರಾಜ್ಯವು ನಮ್ಮ ಜನ್ಮ ಸಿದ್ಧ ಹಕ್ಕು' ಎಂಬ ತಾರಕ ಮಂತ್ರವನ್ನು ಭೋದಿಸಿದರು. ಬ್ರಿಟಿಶರ ಆಡಳಿತದ ಬಗೆಗೆ ಸಂತೋಷಪಟ್ಟುಕೊಂಡು ಆತ್ಮವಂಚನೆ ಆತ್ಮಘಾತಮಾಡಿಕೊಳ್ಳುತ್ತಿದ್ದ ಜನದಲ್ಲಿ ಬ್ರಿಟಿಶ ಆಡಳಿತದ ವಿಷಯಕ್ಕೆ ಅಸಂತೋಷದ ಬೀಜವನ್ನು ಬಿತ್ತಿದರು. ಬ್ರಿಟನ್ನಿನ ಆಡಳಿತದಿಂದ ಆಗುತ್ತಿರುವ ಘೋರ ದುಷ್ಪರಿಣಾಮಗಳನ್ನು ನಿರ್ಭಯವಾಗಿ ಜನರಿಗೆ ವಿವರಿಸಿ ಹೇಳಿದರು. ಅದಕ್ಕಾಗಿ ತಮ್ಮ ಸರ್ವಸ್ವವನ್ನೆಲ್ಲಸೂರೆಗೈದು ಸ್ವಾರ್ಥತ್ಯಾಗದಿಂದ ಹೋರಾಡಿ ಹಲವುಬಾರಿ ಕಾರಾಗೃಹವಾಸವನ್ನು ಅನುಭವಿಸಿ ದೇಶದಲ್ಲಿ ಎಲ್ಲೆಲ್ಲೂ ಬ್ರಿಟಿಶರ ಆಡಳಿತದ ಬಗೆಗೆ ತಿರಸ್ಕಾರಭಾವವು ನೆಲೆಗೊಳ್ಳುವಂತೆ ಮಾಡಿದರು. ಇದೇ ಲೋಕಮಾನ್ಯರ ಅವತಾರ ಕಾರ್ಯ.

ಸಾಮಾಜಿಕ ಸುಧಾರಣೆಗಳಾಗದೆ ರಾಜಕೀಯ ಸುಧಾರಣೆಗಳಿಗೆ ನಾವು ಅರ್ಹರಾಗುವುದಿಲ್ಲ. ಆದಕಾರಣ ನಮ್ಮ ಸಾಮಾಜಿಕ ನಡೆವಳಿಯಲ್ಲಿ ಕಾಲಕ್ಕೆ ತಕ್ಕ ಮಾರ್ಪಾಟುಗಳನ್ನು ಮಾಡಿಕೊಳ್ಳುವುದು ಕರ್ತವ್ಯ. ಆದುದರಿಂದ 'ನಮ್ಮ ದೇಶದ ಸಂಪತ್ತನ್ನು ಲೂಟಿ ಮಾಡಿ, ನಮ್ಮನ್ನು ದಾಸರನ್ನಾಗಿ ಮಾಡಿಕೊಂಡಿರುವ ಬ್ರಿಟಿಶರನ್ನು ಓಡಿಸುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ', ಎಂಬರಣಗರ್ಜನೆಯು ಜನಹೃದಯದಲ್ಲಿ ಎಷ್ಟು ಬೇಗನೆ ಇಂಬುಗೊಂಡಿತೊ ಅಷ್ಟು ವೇಗದಿಂದ 'ಜಾತಿಭೇದವನ್ನು ಅಳಿಸುವ', 'ಹರಿಜನೋದ್ಧಾರ ಮಾಡುವ' ಎಂಬ ಆತ್ಮಸುಧಾರಣೆಯ ವಿಚಾರವು ಜನರ ಮನಸು ಹಿಡಿಯಲಿಲ್ಲ. ರಾಜಕೀಯ ದಾಸ್ಯದ ದುಷ್ಪರಿಣಾಮಗಳು ಸಾಮಾಜಿಕ ಕುಂದುಕೊರತೆಗಳಿಗಿಂತ ಸಾಮಾನ್ಯ ಜನರಿಗೆ ಬೇಗನೆ ತಿಳಿಯಬಲ್ಲವು.

ಹೆರವರೊಡನೆ ಹೋರಾಡುವುದರಲ್ಲಿ ಮನುಷ್ಯನಿಗೆ ಇರುವ ಹುಮ್ಮಸವು ಆತ್ಮಸುಧಾರಣೆಗಾಗಿ ತನ್ನೊಡನೆಯೆ ಕಾದುವಾಗ ಇರುವುದಿಲ್ಲ. ಏಕೆಂದರೆ ತನ್ನ ದೋಷಗಳನ್ನು ದೋಷಗಳೆಂದು ಒಪ್ಪಿಕೊಳ್ಳುವುದಕ್ಕೇ ಆತನು ಮೊದಲು ಸಿದ್ಧನಿರುವುದಿಲ್ಲ. ಹೆರವರ ದೋಷಗಳನ್ನು ಕಡ್ಡಿಯಿದ್ದರೂ ಗುಡ್ಡವಾಗಿಸುವವನೇ ತನ್ನ ಕುಂದುಕೊರತೆಗಳು ಗುಡ್ಡವಿದ್ದರೂ ಅವನ್ನು ಕಡ್ಡಿಯಂತೆ ಭಾವಿಸುವನು! ರಾಜಕೀಯ ಚಳವಳಿಯಲ್ಲಿ ತೋರುವ ಸ್ಫೂರ್ತಿ ಉತ್ಸಾಹಗಳು ಸಾಮಾಜಿಕ ಆಂದೋಲನದಲ್ಲಿ ಕಾಣಬರದೆ ಇರುವುದಕ್ಕೆ ಇದೇ ಮುಖ್ಯ ಕಾರಣವು.

ಆದರೂ ಸ್ವಾತಂತ್ರ್ಯಸಂಪಾದನೆಗೆ ರಾಜಕೀಯದೊಡನೆಯೆ ಸಾಮಾಜಿಕ ಸುಧಾರಣೆಗಳು ಚಳವಳಿಯೂ ಅತ್ಯಾವಶ್ಯಕವೆಂಬುದು ಎಳ್ಳಷ್ಟೂ ಸುಳ್ಳಲ್ಲ. ಹರಿಜನ ಹಾಗೂ ಹಿಂದುಳಿದ ವರ್ಗದವರನ್ನು ಕಡೆಗಣಿಸಿದುದರಿಂದ ಹಿಂದೂ ಸಮಾಜವು ದಿನದಿನಕ್ಕೂ ಕ್ಷೀಣವಾಯಿತು. ಕ್ರಿಸ್ತೀ ಹಾಗೂ ಮುಸಲ್ಮಾನ ಮತಪ್ರಚಾರಕರಿಗೆ ತಮ್ಮ ಕಾಯಕ ನಡೆಸಲು ಅನುವು ದೊರೆತಿತು. ತೀವ್ರ ಜಾತಿಭೇದಗಳ ಮೂಲಕ ಹಿಂದೂ ಸಮಾಜದಲ್ಲಿ ಒಕ್ಕಟ್ಟು ಇದ್ದಿಲ್ಲ. ಹಿಂದೂ ಮುಸಲ್ಮಾನವೆಂಬ ಭೇದವಲ್ಲದೆ ಬ್ರಾಹ್ಮಣ-ಬ್ರಾಹ್ಮಣೇತರ ಭೇದವು ಇನ್ನೊಂದು; ಬ್ರಾಹ್ಮಣೇತರವೆಂದುಕೊಂಡ ಪಕ್ಷವೂ ತೋರಿಕೆಯಲ್ಲಿ ಮಾತ್ರ ಒಂದು. ಒಳಗೆ ನಾನಾ ಬಗೆಗಳು! ಬ್ರಾಹ್ಮಣೇತರವೆಂಬ ಹೆಸರಿನ ಒಂದು ದೊಡ್ಡ ಗುಂಪು ನಿರ್ಮಾಣ ಮಾಡಿ, ಅದರ ಮುಂದಾಳುಗಳೆಂದು ಮುಂದೆ ಬಂದು ಕೇವಲ ತಮ್ಮ ಸ್ವಾರ್ಥ ಸಾಧಿಸಿದ ಜಾತಿಯವರುಂಟು. ಅದರಿಂದ ಮತ್ತೆ ಒಳಬಣಗಳು ಹಲವು ತಲೆಯೆತ್ತಿದುವು. ಹೀಗೆ ದೇಶದಲ್ಲಿ ಅಸಂಖ್ಯ ಪಂಗಡಗಳು ಆದುವು. ಅವು ತಮ್ಮ ಸ್ವಾರ್ಥಸಾಧನೆಗಾಗಿ ಬ್ರಿಟಿಶ ಆಡಳಿತಗಾರರ ಅಡಿಯಲ್ಲಿ ಹೊರಳಾಡಿ ಲಾಂಗೂಲಚಾಲನ ನಡಸಿದ ಆ ಕಾಲದ ಭಾರತದ ದೈನ್ಯಸ್ಥಿತಿಯ ಚಿತ್ರವು ಅತ್ಯಂತ ಕರುಣಾಸ್ಪದವಾಗಿದೆ. ಯಾವ ರಾಷ್ಟ್ರೀಯ ಸ್ವಾಭಿಮಾನಿಗೂ ನಾಚಿಕೆಯಿಂದ ತಲೆತಗ್ಗಿಸಹಚ್ಚುತ್ತದೆ. ಬ್ರಿಟಿಶರು ತಾವು ಈ ಪಕ್ಷಪಂಗಡಗಳ ಸಂರಕ್ಷಕರಂತೆ ನಟಿಸಿ, ಅವುಗಳು ತಮ್ಮೆಡೆಗೆ ಎಡೆಬಿಡದೆ ದೂರುಗಳನ್ನು ತರುವಂತೆ ಪ್ರೋತ್ಸಾಹಿಸುತ್ತಿದ್ದರು. ಪ್ರತಿಯೊಂದು ಜಾತಿಯೂ ತನಗೆ ವಿಶಿಷ್ಟ ಹಕ್ಕುಬಾಧ್ಯತೆಗಳು ಇರಬೇಕೆಂಬ ಬೇಡಿಕೆಗಳನ್ನು ಮುಂದೊಡ್ಡಲಾರಂಭಿಸಿತು.

ಜನ್ಮದಿಂದಿರುವ ಜಾತಿಭೇದಗಳನ್ನು ಮುರಿದು ಬಿಡಲು ರಾಜಾರಾಮ ಮೋಹನರಾಯರ ಕಾಲದಿಂದಲೇ ಆರಂಭವಾಗಿದ್ದರೆ ಅದೆಷ್ಟು ಚೆನ್ನಾಗುತ್ತಿತ್ತು! ಬ್ರಿಟಿಶರಿಗೆ ಒಂದು ಜಾತಿಯನ್ನು ಇನ್ನೊಂದರ ವಿರುದ್ಧ ಕುಣಿಸುವುದಕ್ಕೆ ಇಂಬು ದೊರೆಯುತ್ತಿದ್ದಿಲ್ಲ. ಪಾಕಿಸ್ತಾನವಾಗಿ ಭಾರತವು ತುಂಡಾಗುವ ಹೊತ್ತು ಬರುತ್ತಿದ್ದಿಲ್ಲ. ಆದರೆ, ಜಾತಿಭೇದ ನಿರ್ಮೂಲನದ ಮಹತ್ವದ ಮತ್ತು ಆವಶ್ಯಕತೆಯು ತಿಳಿಯುವಷ್ಟು ಲೋಕಸ್ಥಿತಿಯ ಅರಿವು ಉಂಟಾದ ಜನ ಈ ಕ್ಷಣಕ್ಕೂ ಸಾಕಷ್ಟಿಲ್ಲದೆ ಇರುವಾಗ ಹಿಂದಿನ ಮಾತು ಏತಕ್ಕೆ?

ಲೋಕಮಾನ್ಯ ತಿಲಕರು ಆರಂಭಿಸಿದ ಹೋಮರೂಲ್ ಲೀಗಿನ ಉಗ್ರವಾದ ಆಂದೋಲನವನ್ನು ತಗ್ಗಿಸಲಿಕ್ಕೆ ಬ್ರಿಟಿಶರು ಒಂದು ಹಂಚಿಕೆ ಹುಡುಕಿದರು. ತಿಲಕರು ಬ್ರಾಹ್ಮಣರೆಂಬ ಮಾತಿನ ಲಾಭ ಪಡೆದು ಬ್ರಾಹ್ಮಣೇತರರ ಹಿತರಕ್ಷಣೆಯ ಕೂಗು ಎಬ್ಬಿಸಿದರು. ದೇವರ ದಯದಿಂದ ಲೋಕಮಾನ್ಯರು ಸಕಾಲದಲ್ಲಿಯೆ ತಮ್ಮ ಅವತಾರ ಕಾರ್ಯವನ್ನು ಮುಗಿಸಿ ರಂಗಭೂಮಿಯಿಂದ ತೆರೆಯ ಮರೆಯಾದರು. ಮಹಾತ್ಮಾಜೀಯವರು ಆ ಸ್ಥಳದಲ್ಲಿ ಪ್ರವೇಶಿಸಿದರು. ಬ್ರಿಟಿಶರ ದುರ್ದೈವದಿಂದ ಇವರು ಬ್ರಾಹ್ಮಣರಾಗಿರಲಿಲ್ಲ. ಮಹಾತ್ಮಾಜಿಯವರು ಬ್ರಾಹ್ಮಣರಾಗಿದ್ದರೆ ದಕ್ಷಿಣ ಭಾರತದ ಬ್ರಾಹ್ಮಣೇತರ ಚಳವಳಿ, ಜಸ್ಟಿಸ್ ಪಕ್ಷದ ಉಲ್ಬಣವು ಕಾಳ್ಗಿಚ್ಚಿನಂತೆ ಎಲ್ಲೆಡೆಗೂ ಹಬ್ಬಿ ಇಲ್ಲಿ ದ್ರವಿಡಿಸ್ತಾನದ ಬೇಡಿಕೆಯು ಪುಟಗೊಳ್ಳುವುದಕ್ಕೆ ಆವಶ್ಯಕವಾದ ವಾತಾರವಣವು ಬ್ರಿಟಿಶರ ಕೃಪೆಯಿಂದ ಚೆನ್ನಾಗಿಯೆ ಸಿದ್ಧವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ವಿಚಾರಿಸಿದರೆ ಇಷ್ಟುಮಟ್ಟಿಗಾದರೂ ಭಾರತವು ಅಖಂಡವಾಗಿ ಉಳಿದ ಶ್ರೇಯಸ್ಸು ಸಂಪೂರ್ಣವಾಗಿ ಮಹಾತ್ಮಾಗಾಂಧೀಜಿಯವರಿಗೇ ಸಲ್ಲುತ್ತದೆ. ಈ ಕಾರಣದಿಂದಲೆ ಗಾಂಧೀಜಿ ಭಾರತದ ತಂದೆ, ಭಾರತೋದ್ಧಾರಕ, ಮಹಾತ್ಮರೆಂಬ ವಿಶೇಷಣಗಳು ಸಾರ್ಥಕವಾಗಿವೆ. ಭಾರತೀಯರು ಗಾಂಧಿಜೀಯವರಿಗೆ ಚಿರಋಣಿಗಳು. ಅವರ ಉಪಕಾರಗಳನ್ನು ಎಷ್ಟು ನೆನೆದರೂ ಕಡಿಮೆಯೆ. ಜಾತ್ಯಭಿಮಾನ, ಪ್ರಾಂತಾಭಿಮಾನಗಳಿಂದ ಭಾರತವು ಇನ್ನೂ ತುಂಡುತುಂಡಾಗುವ ಮೃತ್ಯುಯೋಗದಿಂದ ಪಾರಾದುದು ಈ ಪುಣ್ಯಾತ್ಮನ ಮಹಿಮೆಯಿಂದಲೇ. ಇತಿಹಾಸ ಪೂರ್ವದಲ್ಲಿ ಇಂತಹ ಬೇರೆ ಕುತ್ತಗಳಿಂದ ನಮ್ಮ ರಾಷ್ಟ್ರವನ್ನುಳಿಸಿಕೊಂಡು ಬಂದ ಶ್ರೀರಾಮ ಮತ್ತು ಶ್ರೀಕೃಷ್ಣರಂತೆ ಗಾಂಧೀಜಿಯೂ ನಮಗೆ ಪರಮವಂದ್ಯ ಅಮರದಿವ್ಯಜ್ಯೋತಿ. ಮಹಾ ಆತ್ಮನಲ್ಲದೆ, ಪರಮ ಆತ್ಮನೂ ಅಹುದು.

ರಾಜಕೀಯ ಚಳವಳಿಯ ಅಂಗವಾಗಿಯೆ ಸಾಮಾಜಿಕ ಸುಧಾರಣೆಗಳ ಆಂದೋಲನವನ್ನು ನಡಸಿಕೊಂಡು ಬರುವ ಆವಶ್ಯಕತೆಯು ತಿಲಕರ ಕಾಲದಲ್ಲಿಯೆ ಕೊನೆಕೊನೆಗೆ ತೀರ ಅನುಭವಕ್ಕೆ ಬಂದಿತು. ತಿಲಕರು ಸ್ವತಃ

ಸಾಮಾಜಿಕ ವಿಚಾರದಲ್ಲಿ ಮುಂದುವರಿದವರಾಗಿದ್ದರೂ ಅವರ ಅನುಯಾಯಿಗಳಲ್ಲಿ ಬಹುಸಂಖ್ಯಾಕರು ಭಟ್ಟವೃತ್ತಿಯ ಸನಾತನಿಗಳೇ ಇದ್ದರು. ಬ್ರಾಹ್ಮಣ ಬಾಹ್ಮಣೇತರ ವಾದವು ತಲೆಯೆತ್ತಿದ ಕಾಲದಲ್ಲಿ ಕೆಲವು ಬ್ರಾಹ್ಮಣ ಪ್ರಮುಖರು ಬ್ರಾಹ್ಮಣರ ಹಕ್ಕುಬಾಧ್ಯತೆಗಳ ಸಂರಕ್ಷಣೆಗಾಗಿ ಪ್ರತ್ಯೇಕ ಒಂದು ಬ್ರಾಹ್ಮಣ ಸಂಘವನ್ನು ಸ್ಥಾಪಿಸುವ ತಮ್ಮ ವಿಚಾರಕ್ಕೆ ಬೆಂಬಲವನ್ನು ಕೂಡಲು ಲೋಕಮಾನ್ಯರನ್ನು ಕೇಳಿಕೊಂಡರು. ಆಗ ತಿಲಕರು ಬ್ರಾಹ್ಮಣರ ಜಾತೀಯ ಸಂಘಸ್ಥಾಪನೆಗೆ ಬಲವಾಗಿ ವಿರೋಧಿಸಿ, ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು. ತಾವು ಹಾರಯಿಸುವ ಸ್ವರಾಜ್ಯವು ಬಹುಸಂಖ್ಯಾಕರ ಸಹಾನುಭೂತಿ, ಸಹಕಾರದಿಂದ ಅವರ ಹಿತಕ್ಕಾಗಿಯೆ ಸ್ಥಾಪಿತವಾಗಬೇಕಾದುದು. ಬ್ರಾಹ್ಮಣರು ಬಹುಜನ ಸಮಾಜದಿಂದ ದೂರವಾಗಿ ಉಳಿದು ಬಾಳಬೇಕೆನ್ನುತ್ತಿದ್ದರೆ ಆ ಬಾಳು ಬಾಳಲ್ಲ. ದೇಶಕ್ಕೂ ಹಿತಕರವಲ್ಲ. ನಾವು ಈ ಮಣ್ಣಿನಲ್ಲಿಯೆ ಹುಟ್ಟಿ ಬೆಳೆದವರು. ಆದುದರಿಂದ, ಈ ಭೂಮಿತಾಯಿಯ ಮಕ್ಕಳೊಡಗೂಡಿ ಪ್ರೀತಿ ವಿಶ್ವಾಸಗಳಿಂದ ಒಂದು ತಾಯಿಮಕ್ಕಳಂತೆ ಬಾಳುವುದೇ ನ್ಯಾಯ ವಾದ ಕರ್ತವ್ಯವಾಗಿದೆ, ಎಂಬುದಿದು ಲೋಕಮಾನ್ಯರ ವಿಚಾರಸರಣಿ. ಅದನ್ನು ಅವರು ಹಲವೆಡೆಗೆ ಮುಕ್ತಕಂಠದಿಂದ ಸ್ವತಃ ಕಲಿಸಿದ್ದೂ ಉಂಟು.

ಆದರೂ ಅವರ ಅನುಯಾಯಿಗಳೆಂದು ಮುಂದೆ ಬಂದವರಲ್ಲಿ, ಪ್ರೊಫೆಸರರಾದ ವಾಮನ ಮಲ್ಹಾರ ಜೋಶಿಗಳಂತಹ ಕೆಲವರನ್ನುಳಿದರೆ ಜಾತೀಯ ಹೆಮ್ಮೆಯವರೇ ಹೆಚ್ಚಾಗಿದ್ದರು. ಈ ಕಾರಣದಿಂದಲೇ ಆಗ ಬ್ರಾಹ್ಮಣೇತರ ಚಳವಳಿಗೆ ಆಸ್ಪದವು ದೊರೆತಿತು. ಕೊನೆಗೆ ಲೋಕಮಾನ್ಯರಿಗೂ ಸ್ವಲ್ಪ ಅದರ ಝಳ ತಾಗದೆ ಹೋಗಲಿಲ್ಲ. ಲೋಕಮಾನ್ಯರ ಸ್ವರಾಜ್ಯದ ಬೇಡಿಕೆಗೆ ಬ್ರಾಹ್ಮಣೇತರ ಪಕ್ಷವು ವಿರೋಧಿಸಿ ಮಾಂಟೆಗ್ಯು ಚೆಲ್ಮ್ಸ್‌ಫರ್ಡರ ಕಡೆಗೆ ಹಲವಾರು ಸಂಘಗಳ ಮೂಲಕ ತಮಗೆ ಸ್ವರಾಜ್ಯದ ಆವಶ್ಯಕತೆಯಿಲ್ಲವೆಂದು ತಂತಿಗಳ ಸುರಿಮಳೆಯನ್ನೆ ನಡಸಿತು! ಮರಾಠಾ, ಶೀಖ, ಅಸ್ಪೃಶ್ಯ, ವೀರಶೈವ, ಮೊದಲಾದ ಸಂಘಗಳು ತಮ್ಮ ತಮ್ಮ ಜಾತಿಯವರಿಗಾಗಿ ಸ್ವತಂತ್ರ ಸ್ಥಾನಮಾನಗಳನ್ನು ಕಾಯ್ದಿಡಬೇಕೆಂದು ಬ್ರಿಟಿಶರ ಮಂತ್ರಿಗಳಿಗೂ ವೈಸರಾಯರಿಗೂ ಮನವಿಗಳನ್ನು ಅರ್ಪಿಸಿ ಪ್ರಾರ್ಥಿಸಿಕೊಂಡರು:

'ಸ್ವರಾಜ್ಯವನ್ನು ಕೊಡುವುದೇ ಬ್ರಿಟಿಶರ ಆಡಳಿತ ಗುರಿಯಾಗಿದೆ. ಆದರೆ, ನೀವು ಎಲ್ಲರೂ ಒಂದುಗೂಡಿ ನಿಮ್ಮ ಬೇಡಿಕೆಯನ್ನು ಮುಂದೆ ಇಡಿರಿ. ಮುಸಲ್ಮಾನ, ಅಲ್ಪಸಂಖ್ಯಾಕರ, ಹಾಗೂ ಹಿಂದುಳಿದವರ ರಕ್ಷಣಮಾಡುವುದು ನಮ್ಮ ಕರ್ತವ್ಯವಾಗಿದೆ. ಸ್ವರಾಜ್ಯವು ಸುಶಿಕ್ಷಿತರಾದ ಕೆಲವು ವಿಶಿಷ್ಟ ಜನರಿಗೆ ಮಾತ್ರ ಬೇಕಾಗಿದೆ. ಆದಕಾರಣ ಈಗಲೇ ನಿಮಗೆ ಸ್ವರಾಜ್ಯ ಸಿಕ್ಕಲಾರದು.' ಎಂದು ಬ್ರಿಟಿಶರು ಕಾಲಹರಣದ ಆಟಹೂಡಲು ನಮ್ಮ ನಾಡಿನೊಳಗಿನ ಜಾತಿಭೇದವೇ ಮುಖ್ಯವಾದ ಕಾರಣವಾಯಿತು. ಇಂತಹ ಪರಿಸ್ಥಿತಿಯಲ್ಲಿ ಜಾತ್ಯೈಕ್ಯವು ಅತ್ಯಾವಶ್ಯಕವೆನಿಸಿತು. ಇದರೆ ಇದು ಅಪೇಕ್ಷಿಸಿದೊಡನೆ ಫಲಕಾರಿಯಾಗುವ ವಿಷಯವಲ್ಲ. ಸಮಾಜದಲ್ಲಿ ಹಲವು ವರುಷಗಳಿಂದ ಮೈಯುಂಡ ರೂಢಿ-ಸಂಪ್ರದಾಯಗಳನ್ನು ಬೋಧನೆಯಿಂದ ಒಂದೆರಡು ವರುಷಗಳಲ್ಲಿ ಬದಲಿಸಿಕೊಳ್ಳುವುದು ಅಸಾಧ್ಯ. ಸವರ್ಣ ಹಿಂದುಗಳು ಹರಿಜನರನ್ನು ತ್ಯಾಜ್ಯರೆಂಬಂತೆ ನಡೆಸಿಕೊಳ್ಳುತ್ತಿರುವುದರ ಪ್ರತಿಕ್ರಿಯೆಯಾಗಿ, ಅವರು ಹಿಂದೂ ಸಮಾಜದಿಂದ ದೂರಸಿಡಿದು ಮುಸಲ್ಮಾನರೊಡನೆ ಸಹಕರಿಸಿ ಸ್ವರಾಜ್ಯದ ಬೇಡಿಕೆಗೆ ವಿರೋಧಿಸುವ ಲಕ್ಷಣಗಳು ಕಾಣಹತ್ತಿದುವು. ಹರಿಜನೋದ್ಧಾರದ ಮಹತ್ವವನ್ನು ಹಿಂದೂ ಸಮಾಜವು ಆಗ ಅರಿತುಕೊಂಡು ಕಣ್ತೆರೆದಿತು. ಅಸ್ಪೃಶ್ಯತಾ ನಿವಾರಣದ ಚಳವಳಿಯು ಆರಂಭವಾಯಿತು. ಮುಸಲ್ಮಾನರನ್ನು ಒಡೆದು ಹಿಂದುಗಳಿಂದ ಪ್ರತ್ಯೇಕಿಸಲು, ಬ್ರಿಟಿಶರು, ಅವರಿಗೆ ಯಾವ ಹೇಸಿಕೆ ನಾಚಿಕೆ ಇಲ್ಲದೆ ಅನ್ಯಾಯವಾಗಿ ಕೊಡುತ್ತಿದ್ದ ಸವಲತ್ತುಗಳನ್ನು ವಿರೋಧಿಸಲು ಹಿಂದುಗಳ ಸಂಘಟನೆಯು ಅಗತ್ಯವೆನಿಸಿತು. ಇದೇ ಹಿಂದೂ ಮಹಾಸಭೆಯಾಗಿ ಮುಂದೆ ಬಂದಿತು. ಹಿಂದೂಗಳೆಲ್ಲ ಒಂದೂಗೂಡದಿದ್ದರೆ ಬ್ರಿಟಿಶರ ಬೆಂಬಲದಿಂದ ಮಹಮ್ಮದೀಯರ ಕುಚೋದ್ಯವು ಮಿತಿಮೀರಿ ಬೆಳೆದು ಉತ್ತರ ಹಿಂದುಸ್ತಾನವೆಲ್ಲವೂ ಮುಸಲಸ್ತಾನ (=ಪಾಕಿಸ್ತಾನ) ವಾಗದೆ ಉಳಿಯಲಿಕ್ಕಿಲ್ಲವೆಂಬ ಪರಿಸ್ಥಿತಿಯು ತೋರಿಬಂದೊಡನೆ ಪಂಡಿತ ಮದನಮೋಹನ ಮಾಲವೀಯರು ಶೀಖ, ಜೈನ, ಬೌದ್ಧ ಮೊದಲಾದ ಎಲ್ಲ ಭಾರತೀಯ ಮತಸ್ಥರನ್ನೂ ಹಿಂದೂ ಮಹಾಸಭೆಯಲ್ಲಿ ಅಳವಡಿಸಿಕೊಂಡು

ಹಿಂದುವೆಂಬ ವ್ಯಾಖ್ಯೆಯನು ಹಿಗ್ಗಿಸಿದರು. ಕೇಳಕರ, ಸಾವರಕರರು ಒಳಭೇದಗಳನ್ನು ನಾಶಮಾಡಿ ಒಂದೇ ಜಾತಿನಿರ್ಮಾಣಕ್ಕಾಗಿ ಸಾರ್ವಜನಿಕ ಸಹಭೋಜನಾದಿ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡು ಹಿಂದುಗಳಲ್ಲಿ ಒಕ್ಕಟ್ಟು ಬೆಳಸುವ ಎತ್ತುಗಡೆ ನಡೆಸಿದರು.

ಅವಸರದಲ್ಲಿ ತೋಡಿದ ಒರ್ತಿಗೆ ನೀರು ಬಂದೀತೇನು? ಊರಿಗೆ ಬಿದ್ದ ಬೆಂಕಿ ಆರೀತೇನು? ಸ್ವರಾಜ್ಯಕ್ಕಾಗಿ ನಡೆದ ಪ್ರಯತ್ನಗಳಿಗೆ ಬೇರೆ ಬೇರೆ ಜಾತಿಗಳು-ಜಾತಿಭೇದವು ಅಡ್ಡಬರುವುದನ್ನು ಕಂಡು 'ನಾವೆಲ್ಲ ಒಂದು ಗೂಡುವಾ ಬನ್ನಿ' ಎಂಬ ಗಡಿಬಿಡಿಗೆ ಆರಂಭವಾಯಿತು. ಅದು ಕೂಡ ಮೇಲು ಮೇಲಿನ ಪ್ರಯತ್ನ. 'ಬ್ರಿಟಿಶರಲ್ಲಿ ಸ್ವರಾಜ್ಯದ ಬಿಕ್ಕೆ ಬೇಡಲು, ನಾವು ಹಿಂದೂಧರ್ಮದ ವೈಶಿಷ್ಟ್ಯವಾದ ಸನಾತನ ವರ್ಣಾಶ್ರಮವನ್ನು ನಾಶಮಾಡಬೇಕೆ?' ಎಂದು ಅಭಿಮಾನಧನರ ವಿರೋಧವು ಬೇರೆ! ಹರಿಜನರೊಡನೆ ಬೆರೆಯಲಿಕ್ಕೆ, ಜಾತಿಭೇದಗಳನ್ನು ಮುರಿಯಲಿಕ್ಕೆ ಬ್ರಿಟಿಶರು ಸ್ವರಾಜ್ಯದ ಆಶೆ ಹಚ್ಚಿ ಪರ್ಯಾಯದಿಂದ ಒತ್ತಾಯಪಡಿಸುತ್ತಿರುವರೆಂದು ಹಲವರ ಗ್ರಹಿಕೆಯಾಯಿತು. ಸಮಾಜದ ಸುಪ್ತಸ್ವಾಭಿಮಾನವು ಸಮಾಜ ಸುಧಾರಣೆಗೆ ಅಡ್ಡಬಂದಿತು. ಸ್ವಾಭಿಮಾನಕ್ಕೆ ಧಕ್ಕೆ ಹಚ್ಚಿ ಜಾತಿಬಿಡಲು ಕೇಳಿದರೆ ಅದಕ್ಕೆ ಹೇಡಿಗಳ ಹೊರತು ಯಾರೂ ಒಪ್ಪರು.

ಇಂತಹ ಸಂಧಿಕಾಲದಲ್ಲಿ ಹಿಂದೂದೇಶದ ಜಾತಿಮತಗಳ ಐಕ್ಯವೇ ಮೈವೆತ್ತಂತೆ ಮಹಾತ್ಮಾಜೀಯವರ ಅವತಾರವಾಯಿತು (೧೯೨೦). ಗೋಖಲೆಯವರನ್ನು ತಮ್ಮ ಗುರುಗಳೆಂದು ಸಾರಿದ್ದರಿಂದ ದೇಶದೊಳಗಿನ ಮಂದಗಾಮಿ ಧೀಮಂತರ ವಿರೋಧವು ಬಗೆಹರಿದಿತು-ಗೋಖಲೆಯವರು ಗುರುಗಳೆಂದು ಬಾಯಿಂದ ಹೇಳಿದರೂ ಕೃತಿಯಲ್ಲಿ ಉಗ್ರವಾದಿಗಳಿಗೆ ಮೆಚ್ಚಿಕೆಯಾಗುವಂತಹ ಕಾರ್ಯವನ್ನೇ ಇಟ್ಟುಕೊಂಡುದರಿಂದ ಅಸಹಕಾರದಿಂದ ಬ್ರಿಟಿಶರ ಆಡಳಿತವನ್ನು ನೆಲಕ್ಕುರಳಿಸಬೇಕೆಂಬ ಆಂದೋಲನಕ್ಕೆ ತರುಣ ಕ್ರಾಂತಿಕಾರರೂ, ತಿಲಕ ಪಕ್ಷದ ತೀವ್ರಗಾಮಿಗಳೂ ಗಾಂಧೀಜಿಯವರ ಧ್ವಜದಡಿಯಲ್ಲಿ ಕೆಲಸ ಮಾಡಲು ಅಣಿಯಾದರು. ಗಾಂಧೀಯವರು ಬ್ರಾಹ್ಮಣರಲ್ಲದುದರಿಂದ, ಬ್ರಿಟಿಶರ ಆಡಳಿತವನ್ನು ನಾಶಮಾಡಿ ಸ್ವರಾಜ್ಯ ಸಂಪಾದಿಸಬೇಕೆಂಬ ಚಳವಳಿಯು, ಬ್ರಾಹ್ಮಣರ ಒಂದು ಸ್ವಾರ್ಥದ ಕುತಂತ್ರವೆಂಬ ಸಂದೇಹಕ್ಕೆ ಎಡೆಯೆ ಇದ್ದಿಲ್ಲ. ಆದುದರಿಂದ, ಈ ಮೊದಲು ರಾಜಕೀಯ ಆಂದೋಲನಗಳಿಂದ ಸರಿದು ದೂರವಿದ್ದು ತಾವು ಕೇವಲ ರಾಜನಿಷ್ಠರೆಂದು ತೋರಿಸಿಕೊಂಡು ಬ್ರಿಟಿಶರ ಕೃಪಾಯಾಚನೆಗಾಗಿ ಅಂಗಲಾಚಿ ಬಾಯ್ಬಿಟ್ಟು ನಿಂತುಕೊಂಡಿದ್ದ ಅನೇಕ ಜಾತಿಮತಗಳ ಪಂಗಡಗಳು ಒಂದೊಂದಾಗಿ ಬಂದು ಗಾಂಧೀಜಿಯವರ ಚಳವಳಿಯಲ್ಲಿ ಧುಮುಕಲಾರಂಭಿಸಿದುವು. ಹರಿಜರ ಮಗುವನ್ನೊಂದು ತಮ್ಮ ಮಗಳೆಂದು ಸಾಕಿ ಜೋಪಾನ ಮಾಡಿದ್ದರು. ತಮ್ಮನ್ನು ಹರಿಜನನೆಂದೇ ಕರೆದುಕೊಳ್ಳುತ್ತಿದ್ದು ಅವರಿಗಾಗಿ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳು ದೊರೆಯುವಂತೆ ಅವಿಶ್ರಾಂತ ಪರಿಶ್ರಮಪಡುತ್ತಿದ್ದುದರಿಂದ ಆ ವರ್ಗದ ನಿಷ್ಪಕ್ಷಪಾತಿ ಜನರಿಗೆ ಗಾಂಧೀಜಿಯವರಲ್ಲಿ ವಿಶ್ವಾಸವು ಹೆಚ್ಚಿತು. ರೈತರು ಮತ್ತು ಕೂಲಿಕಾರರ ಕಲ್ಯಾಣಕ್ಕಾಗಿ ಖೇಡಾ, ಚಂಪಾರಣ್ಯ ಮುಂತಾದ ಕಡೆಗಳಲ್ಲಿ ಈ ಮೊದಲೆ ಸತ್ಯಾಗ್ರಹ ಹೂಡಿ ಕಾರ್ಯಮಾಡಿದ್ದರಿಂದ ಬಡವರ ಪಕ್ಷಪಾತಿಯೆಂಬ ಬಗೆಗೆ ಯಾರಿಗೂ ಸಂದೇಹವೇ ಇದ್ದಿಲ್ಲ. ಸ್ತ್ರೀಯರ ವಿಷಯದಲ್ಲಿ ಉದಾರ ವಿಚಾರಗಳುಳ್ಳವರಾಗಿದ್ದರಲ್ಲದೆ ದೇಶಸೇವೆಯ ಆಂದೋಲನಗಳಲ್ಲಿ ಭಾಗವಹಿಸಲು ಇಂಬುಗೊಟ್ಟು ಸಮಾಜದಲ್ಲಿ ಅವರಿಗೆ ಗೌರವವನ್ನು ತಂದುಕೊಟ್ಟರು.

ದೇಶಭಕ್ತಿ, ಗೀತಾಪಠಣ, ಉಪವಾಸ, ಬ್ರಹ್ಮಚರ್ಯ, ಆಶ್ರಮವಾಸ ಮೊದಲಾದ ಇವರ ನಡೆವಳಿಯಿಂದ ಭಾವಿಕ ಹಿಂದುಗಳಿಗೆ ಗಾಂಧೀಜಿಯವರ ರೂಪದಲ್ಲಿ ಒಬ್ಬ ಮಹಾಯೋಗಿ, ತಪಸ್ವಿ, ಮಹಾತ್ಮನೆ ತಮ್ಮ ಉದ್ಧಾರಕ್ಕಾಗಿ ಹುಟ್ಟಿರುವನೆಂಬ ಶ್ರದ್ಧೆಯುಂಟಾಯಿತು. ಇವರು ಗುಜರಾತಿಗಳಾದುದರಿಂದ ಪಾರ್ಸಿಗಳಿಗೆ ಇವರು ಅಪರಿಚಿತ ದೂರದ ಮನುಷ್ಯರೆನಿಸಲಿಲ್ಲ. ಅಲ್ಲದೆ ದಕ್ಷಿಣ ಆಫ್ರಿಕೆಯ ಆಂದೋಲನಗಳಲ್ಲಿ ಹಲವು ಪಾರ್ಸಿಗಳು ಇವರ ಪರಮ ಮಿತ್ರರಾಗಿದ್ದರು. ಮುಂಬೈಯಲ್ಲಿಯೂ ಅಂತಹ ಗೆಳೆಯರು ದೊರೆತರು. ಅಹಿಂಸಾ ತತ್ವದ ಪ್ರಚಾರ, ಅಸ್ತೇಯ, ಅಪರಿಗ್ರಹಾದಿ ವ್ರತಗಳ ಆಚರಣೆಯು ಜೈನ, ಬೌದ್ಧ ಸಮಾಜವನ್ನು ಗಾಂಧೀಜಿಯವರತ್ತ ಆಕರ್ಷಿಸಿತು. ಅಹಿಂಸಾ ವ್ರತ, ಬೈಬಲ್ಲಿನ ಪಾರಾಯಣ ಮತ್ತು ಪತಿತೋದ್ಧಾರಕ್ಕಾಗಿ ಆತ್ಮದಂಡನೆಯನ್ನು

ಮಾಡಿಕೊಳ್ಳುವ ವಿಧಾನದಿಂದ ಅನೇಕರು ಅಭಿನವ ಕ್ರಿಸ್ತನೆಂದೇ ಗಾಂಧೀಜಿಯನ್ನು ಕಂಡರು. ಗಾಂಧೀಜಿಯವರ ನಿಸ್ಪೃಹವೃತ್ತಿ, ಸ್ಪಷ್ಟವಾದಿತ್ವ, ಅಭಯಸಿದ್ಧಿ, ತಮಗೆ ಸರಿದೋರಿದ್ದನ್ನು ಯಾರ ಹಂಗು, ಅಳಕು ಇಲ್ಲದೆ ಆಡಿತೋರಿಸುವ ಮನೋಧೈರ್ಯ, ನುಡಿದಂತೆ ನಡೆಯಲು ಮಾಡುವ ಪ್ರಾಮಾಣಿಕ ಪ್ರಯತ್ನಗಳನ್ನು ಕಂಡು ಪ್ರಪಂಚದೊಳಗಿನ ಸ್ವತಂತ್ರ ವಿಚಾರಿಗಳೆಲ್ಲರೂ ಸೋಜಿಗ, ಕೌತುಕಗಳಿಂದ ಇವರನ್ನು ಆದರಿಸಿದರು.

ಮಹಾತ್ಮಾಜಿಯವರ ಇಂಗ್ರೇಜಿಯ ಮೇಲಣ ಪ್ರಭುತ್ವವೂ ಇವರ ಕಾರ್‍ಯಸಾಧನೆಗೆ, ಇವರ ತ್ರಿಖಂಡ ಕೀರ್ತಿಗೆ ಒಂದು ಮುಖ್ಯ ಕಾರಣವಾಗಿದೆ. ಬರಿ ಭಾಷಾಪ್ರಭುತ್ವವು ಏನು ಮಾಡೀತು? ಸುಂದರವಾದ ಆ ಭಾಷೆಯಿಂದ ಅವರು ಉದಾತ್ತವಾದ ವಿಚಾರಗಳನ್ನು ಮಂಡಿಸುತ್ತಿದ್ದ ಆ ರೀತಿಯೂ ಅಷ್ಟೇ ಮನೋಹರ ವಾಗಿರುತ್ತಿತ್ತು. ಅಲ್ಲಿ ಆ ಭಾಷೆ ಹೆಚ್ಚು ರಮ್ಯವೊ, ವಿಚಾರದ ರೀತಿಯ ವಿಶೇಷ ರಮ್ಯವೊ ಎಂಬುದನ್ನು ಬಗೆದು ಭಾವಿಸದಷ್ಟೂ ಅದರ ಮಾಧುರ್‍ಯವು ಹೆಚ್ಚುಹೆಚ್ಚಾಗಿಯೆ ಮನಸ್ಸನ್ನು ಸೂರೆಗೊಳ್ಳುತ್ತಲಿತ್ತು. ಬರವಣಿಗೆಯಂತೆಯೆ ಇವರ ವಾದಸಾಮರ್ಥ್ಯವೂ ಅಸಾಧಾರಣವಾಗಿದ್ದಿತು. ಇವರೊಡನೆ ವಾದಕ್ಕೆಂದು ಬಂದವರು ಗಾಂಧೀಜಿಯವರ ಮಾತಿಗೇ ಕಟ್ಟುಬಿದ್ದು ಮರಳಿದ್ದುಂಟು. ಇವರ ಭೂಮಿಕೆಯು ಯಾವಾಗಲೂ ಅತ್ಯಂತ ಸೂಕ್ಷ್ಮ ಮತ್ತು ಗಹನವಾದುದಾಗಿರುತ್ತಿತ್ತು. ಎದುರಾಳಿಗೆ ಅದು ಬಹಳೆ ತೊಂದರೆಗೆ ಈಡುಮಾಡುತ್ತಿತ್ತು. ವಿರೋಧಿಯನ್ನು ನಿರ್ಬಲ, ಮೂಕನನ್ನಾಗಿ ಮಾಡುವ ವಿಚಿತ್ರ ವಿಚಾರ ಬಿಂದುವನ್ನು ಇವರು ಎತ್ತುತ್ತಿದ್ದರು. ಇದು ಅಣುಬಾಂಬಿ ಗಿಂತಲೂ ಹೆಚ್ಚು ಪರಿಣಾಮಕಾರಿಯಾದುದು. ಇಂತಹ ಅಮೋಘವಾದ ವಾಕ್‌ಶಕ್ತಿಯು ಇವರದು.

ಲೋಕಮಾನ್ಯ ತಿಲಕರಂತಹ ಕುಶಾಗ್ರಬುದ್ಧಿಯವರೂ ಇವರ ಮಾತಿನ ಮೊನೆಗೆ ಸಿಕ್ಕು ಹಣ್ಣಾದರು. ತಿಲಕರು ಅತುಲಧೀಮಂತರಾದರೂ ಅವರ ಮಾತಿನಲ್ಲಿ ಗಾಂಧೀಜಿಯ ನಯ ನಾಜೋಕು ಇದ್ದಿಲ್ಲ. ಗಾಂಧೀಜಿ ಮಾತಿನ ಹದನವೇ ಬೇರೆ. ಮೋತೀಲಾಲ ನೆಹರು, ದಾಸ, ಲಜಪತರಾಯ ಮೊದಲಾದವರು ಅನುಯಾಯಿಗಳಂತೆ ಹಿಂಬಾಲಿಸಬೇಕಾಯ್ತು. ಲಾರ್ಡ ರೀಡಿಂಗ, ಅಯರ್ವಿನ, ಕ್ರಿಪ್ಸ ಮೊದಲಾದ ಮಹಾಮಹಾ ರಾಜಕಾರಣಿಗಳು ಮಣಿದು ಹೋದರು. ಲಾರ್ಡ ವಿಲಿಂಗ್ಡನನು ಇವರ ಮಾತಿನ ಜಾಲದಲ್ಲಿ ಸಿಕ್ಕು ಬೀಳುವೆನೆಂಬ ಹೆದರಿಕೆಯಿಂದ ಗಾಂಧೀಜಿಯವರನ್ನು ಭೆಟ್ಟಿಗೇ ಬರಗೊಡಲಿಲ್ಲ. ಮೊದಲು ವಿರೋಧಿಸಿದ ಶ್ರೀನಿವಾಸ ಶಾಸ್ತ್ರಿ ಮುಂದೆ ಗಾಂಧೀಜಿ ಸ್ತುತಿಪಾಠಕರಾದರು; ಭಿನ್ನಾಭಿಪ್ರಾಯದ ಶ್ರೀನಿವಾಸ ಅಯ್ಯಂಗಾರ, ಎಂ. ಎನ್. ರಾಯ್ ಪ್ರಭೃತಿಗಳು ಮೂಲೆಗುಂಪಾದರು; ಉಗ್ರವಾಗಿ ತೆಗಳಿದ ನ. ಚಿ. ಕೇಳಕರ ಪ್ರಭೃತಿಗಳು ಸ್ವಯಂದಗ್ಧರಂತೆ ಹತಪ್ರಭರಾದರು. ಉಜ್ವಲ ತರುಣ ಸುಭಾಸಚಂದ್ರಭೋಸನಿಗೆ, ಗಾಂಧೀಜಿಯವರ ಅವಕೃಪೆಯ ಮೂಲಕ ಭಾರತದಲ್ಲಿಯೆ ಕಾರ್‍ಯರಂಗವು ಇಲ್ಲದಾಯಿತು. ದೇಶಾಂತರ ವಾಸವು ಪಾಲಿಗೆ ಬಂತು. ದಿವ್ಯಜ್ಞಾನಿಯೆಂದು ಅವರ ಭಕ್ತರು ನಂಬಿರುವ ಅರವಿಂದಬಾಬುಗಳಿಗೂ ಒಳಗೊಳಗೇ ಪೀಕಲಾಡಬೇಕಾಯಿತು. ಗಾಂಧೀಜಿ, ಕೆಲವರನ್ನು ಮಾತಿನ ಸೂಕ್ಷ್ಮ ತೊಡಕಿನಲ್ಲಿ ಸಿಲುಕಿಸಿ ಮೆತ್ತಗೆಮಾಡಿದರು. ಕೆಲವರನ್ನು ದರ್ಶನಮಾತ್ರದಿಂದ ಗೆದ್ದರು; ಕೆಲವರನ್ನು ಒಮ್ಮೆಯೂ ಸಾರ್ವಜನಿಕವಾಗಿ ಉಲ್ಲೇಖಿಸದೆ ಅವರ ಬೆಲೆಯನ್ನು ಕಡಿಮೆ ಮಾಡಿದರು.

ಇಂತಹ ಈ ಅದ್ಭುತ ನೈತಿಕ ಪ್ರಭಾವದ ಮಹಾವ್ಯಕ್ತಿಯು ೨೫ ವರ್ಷಕ್ಕಿಂತ ಹೆಚ್ಚುಕಾಲ ಭಾರತವನ್ನು ಅಖಂಡವಾಗಿ ತೊಳಗಿ ಬೆಳಗಿತು. ಇದು ನಮ್ಮ ನಾಡಿನ ಮಹದ್ಭಾಗ್ಯ. ಅಪೂರ್ವ ಪೂರ್ವಪುಣ್ಯ. ಇವರ ಪುಣ್ಯದ ಬಲದಿಂದಲೆ ನೂರು ವರುಷಗಳಲ್ಲಿ ಆಗುವ ಕೆಲಸ ಇಪ್ಪತ್ತೈದು ವರುಷಗಳಲ್ಲಿ ನೆರವೇರಿತು. ಜಗತ್ತಿನ ಇತಿಹಾಸದಲ್ಲಿಯೆ ಅತ್ಯದ್ಭುತವಾದ,ಎಂದೂ ಕಂಡು ಕೇಳದ ರಕ್ತಪಾತರಹಿತ ರಾಜ್ಯಕ್ರಾಂತಿಯಾಯಿತು. ಯುದ್ಧವಿಲ್ಲದೆ ಭಾರತವು ಸ್ವಾತಂತ್ರ್ಯವನ್ನು ಸಂಪಾದಿಸಿತು! ಭಾರತಕ್ಕೆ ಸ್ವರಾಜ್ಯವನ್ನು ಸಂಪಾದಿಸುವಲ್ಲಿ ಗಾಂಧೀಜಿಯವರು ಗೆದ್ದಿದ್ದರೂ ಪಾಕಿಸ್ತಾನವನ್ನು ನಿರ್ಮಿಸುವುದರಲ್ಲಿ ಬ್ರಿಟಿಶರ ಕುಟಿಲ ತಂತ್ರದ ವಿಜಯವಾಗಿದೆ. ಮಹಾತ್ಮಾಜೀಯವರು ಭಾರತದ ಐಕ್ಯದ ಮೂರ್ತಿಮಂತ ಪ್ರತೀಕವಾಗಿದ್ದರೂ ಮುಸಲ್ಮಾನರ ಧರ್ಮಾಂಧತೆ ಸ್ವಜಾತಿಯ ಮಿತಿಮೀರಿದ ಸ್ವಾರ್ಥವು ಗಾಂಧಿಯವರ ಮಹತ್ವವನ್ನು ಸರಿಯಾಗಿ ಅರಿತುಕೊಳ್ಳಲು ಅಡ್ಡಬಂದಿತು. ಮುಸಲ್ಮಾನರು

೧೯೨೦-೨೧ರ ಅಸಹಕಾರದಲ್ಲಿ ಖಿಲಫತ ಚಳವಳಿಯ ನಿಮಿತ್ತದಿಂದ ಹಿಂದೂ ಜನರೊಡನೆ ಕೆಲಕಾಲ ಒಂದುಗೂಡಿ ಕೆಲಸ ಮಾಡಿದುದೇನೊ ನಿಜ. ಆದರೆ ಮುಂದೆ ಬೇಗನೆ ಗಾಂಧಿಜಿಯವರಿಂದ ಸಿಡಿದು ದೂರಸರಿದವರು. ದಿನದಿನಕ್ಕೂ ದೂರ ದೂರವೆ ಹೋದರು. ಭರತಖಂಡವನ್ನು ತುಂಡರಿಸುವ ಹಟಹಿಡಿದು ಅದರಲ್ಲಿ ಯಶಸ್ವಿಯಾದರು. ಪಾಕಿಸ್ತಾನವನ್ನು ಸಂಪಾದಿಸಿದರು.

ಬಹುಸಂಖ್ಯಾಕ ಮುಸಲ್ಮಾನರು ಪಾಕಿಸ್ತಾನದಲ್ಲಿ ಒಳಗೊಂಡುದರಿಂದಲೂ, ಪಾಕಿಸ್ತಾನವು ಒಂದು ಸ್ವತಂತ್ರದೇಶವೆಂದು ಪರಿಗಣಿಸಲ್ಪಟ್ಟುದರಿಂದಲೂ, ಇತ್ತ ಹಿಂದುಸ್ತಾನದಲ್ಲಿ ಉಳಿದ ಮುಸಲ್ಮಾನರು ಬಹುಮಟ್ಟಿಗೆ ಅನಾಥರಾದರು. ಪಾಕಿಸ್ತಾನದಲ್ಲಿ ಮುಸಲ್ಮಾನ ತಲೆತಿರುಕರು ಹಿಂದುಗಳ ಮೇಲೆ ನಡೆಸುವ ಅತ್ಯಾಚಾರಗಳ ಸೇಡು ಇಲ್ಲಿಯ ಮುಸಲ್ಮಾನರ ಮೇಲೆ ತೀರುವ ಲಕ್ಷಣಗಳು ತೋರಲಾರಂಭಿಸಿದುವು. ಆದರೆ, ಮುಯ್ಯಕ್ಕೆ ಮುಯ್ಯ ತೀರಿಸಲಾಗದು. ಇದು ಹೀನಮಾರ್ಗವೆಂದು ಮಹಾತ್ಮಾಜೀಯವರು ಮುಸಲ್ಮಾನರ ಸಂರಕ್ಷಣೆಗಾಗಿ ತಮ್ಮ ಜೀವವನ್ನೆ ಪಣಕ್ಕೆ ಹಚ್ಚಿದರು. ಅದಕ್ಕಾಗಿ ಉಪವಾಸವನ್ನು ಕೈಕೊಂಡರು. ಉಪವಾಸದಲ್ಲಿಯೇ ಎಲ್ಲಿ ಅವರ ಕೊನೆಯಾಗುವುದೆಂದು ಉಂಟಾಗಿದ್ದ ಹೆದರಿಕೆಯು ದೂರವಾದರೂ ಉಪವಾಸದ ತರುವಾಯ ಸ್ವಲ್ಪದಿನಗಳಲ್ಲಿಯೆ ಓರ್ವ ಅತ್ಯಾಚಾರಿ ದುರಾತ್ಮ ಹಿಂದುವೆ ಮಹಾತ್ಮರ ಕೊಲೆಮಾಡಿದನು. ಮುಸಲ್ಮಾನರ ಮೇಲಣ ರೊಚ್ಚನ್ನು ಗಾಂಧೀಜಿಯವರ ಮೇಲೆ ತೀರಿಸಿದನು! ಮುಸಲ್ಮಾನರಿಗಾಗಿ ಗಾಂಧೀಜಿ ತಮ್ಮ ಆತ್ಮಾಹುತಿಯನ್ನಿತ್ತರು. ಆಗ ಮುಸಲ್ಮಾನರ ಬುದ್ಧಿಗೆ ಹಿಡಿದ ಮಂಕು ಸ್ವಲ್ಪ ತಿಳಿದಿತು. ಗಾಂಧಿಜೀಯವರೇ ತಮ್ಮ ನಿಜವಾದ ಹಿತಕರ್ತರೆಂದೂ ಜಿನ್ನಾರ ಮಾತುಕೇಳಿ ತಾವು ಪಾಕಿಸ್ತಾನಕ್ಕಾಗಿ ಕೂಗಾಟ ದೊಂಬಿಗಳಲ್ಲಿ ಸೇರಿ ತುಂಬ ಹಾನಿಮಾಡಿಕೊಂಡುದಾಗಿಯೂ ಬಾಯ್ಬಿಟ್ಟು ಆಡತೊಡಗಿದರು.

ಮಹಾತ್ಮಾಜೀಯವರು ರಾಜಕೀಯ ರಂಗದಲ್ಲಿ ದೃಢವಾಗಿ ನಿಂತಿರುವವರೆಗೂ ಹಿಂದೂಸಮಾಜದ ಐಕ್ಯದ ವಿಷಯಕ್ಕೆ ಯಾರಿಗೂ ಎಳ್ಳಷ್ಟು ಸಂದೇಹವೆ ಉಂಟಾಗಲಿಲ್ಲ. ಹಿಂದೂಸಮಾಜ ಸಂಘಟನೆಯೆ ಹೆಗ್ಗುರಿಯಾಗಿದ್ದ ಹಿಂದೂಮಹಾಸಭೆಯು ಕೂಡ ಗಾಂಧಿಯವರ ಪ್ರಭಾವದ ಮುಂದೆ ನಿಸ್ತೇಜವಾಯಿತು. ಹಲವು ಠರಾವು ಮಾಡಿ ಸಾಧಿಸಲಾರದ ಜಾತೀಯ ಐಕ್ಯವನ್ನು ಮಹಾತ್ಮರು ಆ ವಿಷಯಕ್ಕೆ ಹೆಚ್ಚೇನೂ ಆಡದೆಯೆ ಮಾಡಿಬಿಟ್ಟರು ರಾಷ್ಟ್ರೀಯ ಮಹಾಸಭೆಗಳು ಜರುಗಿದಲ್ಲೆಲ್ಲ ಸಹಪಂಕ್ತಿಗಳು ಜಾತಿಭೇದವಿಲ್ಲದೆ ನಡೆದುವು. ಮಹಾತ್ಮಾಜೀಯವರ ಆಶ್ರಮವೆಂದರೆ ಜಾತೀಯ ಐಕ್ಯದ ಪ್ರಯೋಗಶಾಲೆಯೆ ಆಗಿದ್ದಿತು. ಮಹಾತ್ಮರ ಆಶೀರ್ವಾದ ಪಡೆದು ಹಲವು ಅಂತರ್ಜಾತೀಯ ವಿವಾಹಗಳು ಆದುವು. ಪಶ್ಚಿಮ ಪಂಜಾಬ ಪೂರ್ವ ಬಂಗಾಲಗಳಲ್ಲಿ ಮುಸಲ್ಮಾನರ ಒತ್ತಾಯಕ್ಕೆ ಒಳಗಾದ ಲಕ್ಷಾವಧಿ ಸ್ತ್ರೀಪುರುಷರನ್ನು ಮರಳಿ ಹಿಂದೂಧರ್ಮಕ್ಕೆ ಬರಮಾಡಿಕೊಂಡರು. ಅಸ್ಪೃಶ್ಯರಿಗೆ ಸಮಾಜದಲ್ಲಿ ಸ್ಪೃಶ್ಯರೊಡನೆ ಸಮಾನ ಸ್ಥಾನವನ್ನು ಕೊಡಿಸಿದರು. ಹಿಂದುತ್ವರಕ್ಷಣೆಯೆ ತಮ್ಮ ಏಕಮೇವ ಆದ್ಯಕರ್ತವ್ಯವೆಂದು ಬಢಾಯಿ ಹೇಳುವ ಸಾವರಕರ ಪ್ರಭೃತಿಗಳು, ನವಕಾಲಿಯ ಹಿಂದುಗಳ ಹತ್ಯಾಕಾಂಡವನ್ನು ಮುಸಲ್ಮಾನರ ವಿಷಯಕ್ಕೆ ಇನ್ನಷ್ಟು ದ್ವೇಷವನ್ನು ಹೆಚ್ಚಿಸುವ ವಿಘಟನಾತ್ಮಕ ಕೆಲಸಕ್ಕೇ ಬಳಸಿಕೊಂಡರಲ್ಲದೆ, ಅಲ್ಲಿ ಗೋಳಾಡುವ ಜನರನ್ನು ಸಂತಯಿಸಿ, ಅವರಿಗೆ ಆಪತ್ತಿನಿಂದ ಹೊರಬೀಳುವ ದಾರಿಯನ್ನು ತೋರಲು ಒಬ್ಬರೂ ಮುಂದೆ ಬರಲಿಲ್ಲ! ಆದರೆ ಮಹಾತ್ಮಾಜೀಯವರ ತಮ್ಮ ಬೇರೆ ಮಹತ್ವದ ಕೆಲಸಗಳಿದ್ದರೂ ಅವನ್ನೆಲ್ಲ ಬದಿಗಿರಿಸಿದರು. ನವಕಾಲಿಯ ಆರ್ತರ ದುಃಖಗಳನ್ನು ಪ್ರತ್ಯಕ್ಷವಾಗಿ ಅರಿತುಕೊಂಡು ಅವರಿಗೆ ನೆರವಾಗುವುದಕ್ಕಾಗಿ ಅತ್ತಕಡೆಗೆ ಧಾವಿಸಿದರು. ಆ ಹಣ್ಣು ಮುಪ್ಪಿನಲ್ಲಿಯೂ ಹರೆಯದವರನ್ನು ನಾಚಿಸುವ ಉತ್ಸಾಹದಿಂದ ಕೊಳ್ಳೆಹೋದ ಆ ಪ್ರದೇಶವನ್ನು ಕಾಲುನಡಿಗೆಯಿಂದ ಸುತ್ತಿದರು! ಹಿಂದೂಗಳು ಒಳಭೇದ ಗಳನ್ನು ಮರೆತು ಒಂದೇ ಕುಲದವರಂತೆ ಕೂಡಿ ಬಾಳುವ ಅವಶ್ಯಕತೆಯನ್ನು ಜನರಿಗೆ ಮನಗಾಣಿಸಿಕೊಟ್ಟರಲ್ಲದೆ ಹಿಂದೂ-ಮುಸಲ್ಮಾನರ ಐಕ್ಯದ ಹೊಸತೊಂದು ಮಂತ್ರವನ್ನು ಕಂಡುಹಿಡಿದು ಅದರಲ್ಲಿ ಅದೆಷ್ಟೊ ಸಿದ್ಧಿಯನ್ನೂ ಪಡೆದರು.

ಅಲ್ಲಾ, ಹರಿ-ಹರಾದಿ ಹೆಸರುಗಳು ಬೇರೆಯಾದರೂ ಮೂಲವಸ್ತುವು ಒಂದೇ; ದೇವರು ಒಬ್ಬನೇ, ಎಂಬ ತತ್ವವು ಗಾಂಧೀಜಿಯವರು ಅನುದಿನವೂ ನಡೆಸುತ್ತಿದ್ದ ಸಾರ್ವಜನಿಕ ಪ್ರಾರ್ಥನೆಗಳಿಂದ ಎಲ್ಲೆಡೆಗೂ ಪ್ರಚಾರಗೊಂಡಿತು. ಉಪನಿಷತ್ತು, ಗೀತೆ ಮೊದಲಾದ ಪುರಾತನ ಶ್ರೇಷ್ಠ ಗ್ರಂಥಗಳ ಬಗೆಗೆ ಶ್ರದ್ಧೆಯು ನೆಲೆಗೊಂಡಿತು. ಹಿಂದೂ ಎನಿಸಿಕೊಳ್ಳಲು, ಬ್ರಿಟಿಶರ ಆಳಿಕೆಯ ಆರಂಭಕಾಲದಲ್ಲಿ ನಾಚಿಕೆಯಿಂದ ಸಣ್ಣಾಗುತ್ತಿದ್ದ ಜನಾಂಗದವರೆ, ಗಾಂಧೀಜಿಯವರ ಮಹಿಮೆಯ ಪ್ರಭಾವದಿಂದ ಉಂಟಾದ ವಾತಾವರಣದಲ್ಲಿ, ಬ್ರಿಟಿಷರ ಆಳಿಕೆಯ ಕೊನೆಗಾಲದಲ್ಲಿ, ಹಿಂದುವೆಂದು ಹೇಳುವಲ್ಲಿ ಹೆಮ್ಮೆಯಿಂದ ಹಿಗ್ಗುತ್ತಿದ್ದರು. ಮಹಾತ್ಮಾಜಿಯವರು ಹಿಂದೂಧರ್ಮದ ತಿರುಳಿನಂತಿರುವ ಅಭಯ, ಸತ್ಯ, ಅಹಿಂಸಾ, ತಪ ಮೊದಲಾದ ಗುಣಗಳನ್ನು ತಮ್ಮಲ್ಲಿ ಸಂಪೂರ್ಣವಾಗಿ ಅಳವಡಿಸಿಕೊಂಡು ಈ ಧರ್ಮವು ಮಾನವಕುಲದ ಉದ್ಧಾರಕ್ಕೆ ಹೇಗೆ ಸಹಾಯಕವಾಗ ಬಲ್ಲದೆಂಬುದನ್ನು ತಮ್ಮ ಆಚರಣೆಯಿಂದ ಲೋಕಕ್ಕೆ ಮನಗಾಣಿಸಿಕೊಟ್ಟರು. ಜಗತ್ತಿನಲ್ಲಿ ಹಿಂದೂಧರ್ಮಕ್ಕೆ, ಹಿಂದೂದೇಶಕ್ಕೆ ಮರ್ಯಾದೆಯನ್ನು ತಂದುಕೊಟ್ಟರು. ಆದರೇನು?

ಆದರೇನು? ಇದೆಲ್ಲವೂ ಆ ಯುಗಪುರುಷನು ಸಂಪಾದಿಸಿದ ಯಶಸ್ಸು. ತಾನು ಸಂಪಾದಿಸಿದ ಯಶಸ್ಸನ್ನು ತನ್ನ ದೇಶಬಾಂಧವರಿಗೂ ಹಂಚಿ ಅವರ ಬೆಲೆಯನ್ನೂ ಹೆಚ್ಚಿಸಿದ್ದು ನಿಜ. ಆದರೆ, ಅದರಿಂದ ಈ ಜನಗಳ ನಿಜವಾದ ಬೆಲೆ ಹೆಚ್ಚಿದಂತಾಗಲಿಲ್ಲ. ಅಯಸ್ಕಾಂತದ ಸಂಪರ್ಕದಿಂದ ಕಬ್ಬಿಣದಲ್ಲೂ ಕೆಲಮಟ್ಟಿಗೆ ಆ ಶಕ್ತಿ ಬಂದಂತಾಗುವದು. ಸಂಪೂರ್ಣ ಅಯಸ್ಕಾಂತವೇ ಆಗಬೇಕಾದರೆ ಕಬ್ಬಿಣವು ಇನ್ನೂ ಹೆಚ್ಚಿನ ಸಂಸ್ಕಾರ ಪಡೆಯಬೇಕು. ಮಹಾತ್ಮಾಜಿಯವರು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ನಾವು ಅದನ್ನು ಅರ್ಥವರಿತು ಆಚರಿಸಿ ಅಳವಡಿಸಿಕೊಳ್ಳುವ ಕೆಲಸವು ಇನ್ನೂ ಆಗಬೇಕಾಗಿದೆ. ಇದಕ್ಕೆ ನಾವು ಸಿದ್ಧರಿರುವೆವೊ?

ಜಾತೀಯ ಒಕ್ಕಟ್ಟು ಮಹಾತ್ಮಾಜಿಯವರ ನೇತೃತ್ವದಲ್ಲಿ ಕೈಗೂಡಿದಂತೆ ಭಾಸವಾಗಿತ್ತು. ಸ್ವರಾಜ್ಯ ಗಳಿಸಲು ಜಾತಿಯ ಐಕ್ಯವು ಎಷ್ಟು ಆವಶ್ಯಕವಾಗಿದ್ದಿತೊ ಅದಕ್ಕಿಂತಲೂ, ಅದನ್ನು (ಸ್ವರಾಜ್ಯವನ್ನು) ಉಳಿಸಿ ಮೈಗೂಡಿಸಿಕೊಳ್ಳಲು ಜಾತಿಯ ಸಮನ್ವಯವು ಹೆಚ್ಚಾಗಿ ಬೇಕಾಗಿದೆ. ಜಾತಿಯ ತೊಡಕು ಬಿಡಿಸದೆ ಈಗ ಬಂದ ಸ್ವಾತಂತ್ರ್ಯವು ನಮಗೆ ಉಳಿಯಲಾರದು.

ರಾಷ್ಟ್ರೀಯನಿರ್ಮಾಣ ಮಾಡಬಲ್ಲೆವೆ?

ಭಾರತವು ಬೇಗನೆ ಸ್ವತಂತ್ರವಾಗಲಿದೆಯೆಂಬುದರಲ್ಲಿ ಏನೂ ಸಂದೇಹವೆ ಇಲ್ಲ. ಆದರೆ, ಕೆಲವು ಅಧಿಕಾರಿಗಳೂ ದೇಶಭಕ್ತರೂ 'ನಾವು ಸ್ವತಂತ್ರರಾಗಿದ್ದೇವೆ; ನಮ್ಮನ್ನು ತಡೆಗಟ್ಟುವವರಾರು?' ಎಂಬ ಆರ್‌ಭಟೆಯನ್ನು ಮಾಡುವುದುಂಟು. ಇದು ಸುಮ್ಮನೆ ಜನಸಾಮಾನ್ಯರನ್ನು ಹುರಿದುಂಬಿಸಲು ಎಬ್ಬಿಸಿದ ಹುಯಿಲು ಆಗಿದ್ದರೆ, ಅದರ ಬಗೆಗೆ ವಿಶೇಷ ಆಕ್ಷೇಪಣೆಯಿಲ್ಲ. ಹೀಗಲ್ಲದೆ, ಇದು ನಿಜವಾದ ಸಂಗತಿಯೆಂದು ಯಾರಾದರೂ ಗ್ರಹಿಸಿದ್ದರೆ ಅದು ಸಂಪೂರ್ಣ ಸಂಭ್ರಮದ ಮಾತು; ಆನಂದದ ವಿಷಯವಲ್ಲವೆಂದು ಎಚ್ಚರಿಸದೆ ಗತಿಯಿಲ್ಲ. ಏಕೆಂದರೆ, ಸ್ವತಂತ್ರರಾಷ್ಟ್ರವೆಂದೊಡನೆ, ಅದಕ್ಕೊಂದು ಸ್ವಂತದ ಸೈನ್ಯವು ಬೇಕು. ಪರಕೀಯರ ದಂಡನ್ನಿಟ್ಟುಕೊಂಡು ಯಾವ ರಾಷ್ಟ್ರವು ತಾನೆ ಸ್ವತಂತ್ರವೆನಿಸೀತು? ಅಥವಾ ಸ್ವತಂತ್ರವಾದೀತು? ಆದುದರಿಂದ, ಭಾರತವು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ತನ್ನದೇ ಆದ ಒಂದು ದಂಡು ಬೇಕೆಂಬುದು ನಿಶ್ಚಿತವಾಯಿತು. ಆ ದಂಡು ಈಗ ಎಲ್ಲಿದೆ?

ಈಗಿರುವದು ಬ್ರಿಟಿಷ್ ದಂಡು; ಮತ್ತು ಬ್ರಿಟಿಷರ ದಂಡು ಎಂದರೆ ಬ್ರಿಟನ್‌ರಿಂದಲೇ ಕೇವಲ ಆದುದು. ಇದನ್ನು ಬ್ರಿಟಿಷರು ಹಿಂತಗೆದೊಯ್ಯಲು ಒಪ್ಪಿದ್ದಾರೆ. ಬ್ರಿಟಿಷರ ದಂಡು ಎಂಬುದನ್ನು ರಾಷ್ಟ್ರೀಯ ಸರಕಾರವು ತನ್ನ ಅಧಿಕಾರದಲ್ಲಿ ಭಾರತದ ದಂಡನ್ನಾಗಿ ಮಾರ್ಪಡಿಸಿಕೊಳ್ಳಬಹುದೆಂದು ಈಗ ಎಣಿಸಲಾಗಿದೆ. ಈ ಬಗೆಯಾಗಿ ಮಾರ್ಪಟ್ಟ, ಮುಂಚಿನ ಬ್ರಿಟಿಷರ ದಂಡೇ, ನಮ್ಮ ಮೊದಲನೆಯ ರಾಷ್ಟ್ರೀಯ ಸೇನೆಯಾಗತಕ್ಕುದಿದೆ. ಆದರೆ, ಇದು ನಿಜವಾಗಿಯೂ ನಮ್ಮ ರಾಷ್ಟ್ರೀಯ ಸೈನ್ಯವಾಗಿ ಮಾರ್ಪಡಬಹುದೆ? ಎಂಬ ಬಗೆಗೆ ಎರಡು ದೊಡ್ಡ ತೊಂದರೆಗಳು ನಮ್ಮ ಎದುರಿಗಿವೆ; ತಜ್ಞರ ಕೊರತೆಯು ಅಷ್ಟು ಮಹತ್ವದ್ದಲ್ಲ, ಸದ್ಯಕ್ಕೆ. ಏಕೆಂದರೆ ಇದು ಯುದ್ಧಕಾಲವಲ್ಲ. ಬೇರೆ ಬೇರೆ ದೇಶದ ಸಮರತಂತ್ರ ವಿಶಾರದರನ್ನು ಕೆಲಸಕ್ಕೆ ತಂದು ಅವರಿಂದ ನಮ್ಮ ನಾಡಿನ ದಂಡನ್ನು ಸಜ್ಜುಗೊಳಿಸಬಹುದಾಗಿದೆ. ಈಗಲೆ ಬ್ರಿಟಿಷರ ಕೈಯಲ್ಲಿ ಯುದ್ಧಶಿಕ್ಷಣ ಪಡೆದು ಇರುವ ಸೈನ್ಯವು ಅನಾಯಾಸವಾಗಿ ನಮ್ಮ ರಾಷ್ಟ್ರೀಯ ಸರಕಾರಕ್ಕೆ ದೊರೆಯಬಹುದಾದರೂ ಅದು ನಿಜವಾಗಿ ರಾಷ್ಟ್ರೀಯವಾಗುವುದಕ್ಕೆ ಒಂದು ತೊಡಕು ಇದೆ. ಈಗಿನ ಸೈನಿಕರಿಗೆ ಬ್ರಿಟಿಷ ಅಧಿಕಾರಿಗಳ ಕೈಕೆಳಗೆ ಕೆಲಸಮಾಡಿ ಅವರ ಅಪ್ಪಣೆಗಳನ್ನು ಪಾಲಿಸುವುದು ಮೈಯುಂಡಿದೆ. ಇವರಲ್ಲಿ ಬಹುಜನರು, ಒಮ್ಮೆಲೆ ತಮ್ಮ ನಾಡಿನ ಮುಖ್ಯಾಧಿಕಾರಿಗಳ ಕೈಕೆಳಗಿನವರಾಗಲು ಮನಸ್ಸನ್ನು ಸಿದ್ಧಪಡಿಸುವದಕ್ಕೆ ಸಂಕೋಚಪಟ್ಟುಕೊಳ್ಳುವ ಸಂಭವವು ಇದೆ. ಪರಕೀಯರಿಗೆ ವಿಧೇಯರಾಗಿ, ಅವರಿಂದ ಹೇಳಿಸಿಕೊಳ್ಳಲು, ಅನಿಸಿಕೊಳ್ಳಲು ನಮ್ಮ ಜನರಿಗೆ ಏನೂ ಎನಿಸುವುದಿಲ್ಲ. ಆದರೆ ಅದೇ ತಮ್ಮವರ ಕೈಯಲ್ಲಿ ಕೆಳಗಿನವರಾಗಿ ದುಡಿಯಲು ಕುಲಕುರಿ ಮಾಡುವರು. ಜಿಲ್ಲೆಯ ಕಲೆಕ್ಟರನು, ನ್ಯಾಯಧೀಶನು ಇಂಗ್ಲಿಷ ಮನುಷ್ಯನಿದ್ದಾಗ ಹುಮ್ಮಸದಿಂದ ಕೆಲಸ ಮಾಡುತ್ತಿದ್ದ ಕೈಕೆಳಗಿನ ಅಧಿಕಾರಿಗಳು ಆ ಸ್ಥಳದಲ್ಲಿ ಹಿಂದೀಯನು

ಬರುತ್ತಲೆ ಒರಗುಮೋರೆ ಮಾಡಿದ, ಗೊಣಗಲಾರಂಭಿಸಿದ ಉದಾಹರಣಗಳು ಪ್ರತಿ ಜಿಲ್ಲೆಯಲ್ಲಿಯೂ ಸಿಕ್ಕುತ್ತವೆ. ಮುಲ್ಕಿ ಮತ್ತು ನ್ಯಾಯಖಾತೆಯಲ್ಲಿ ಕಂಡಬಂದ ಈ ಮನುಷ್ಯ ಸ್ವಭಾವವೇ ದಂಡಿನಲ್ಲಿ ಇನ್ನೂ ಹೆಚ್ಚಿನ ಸ್ವರೂಪದಲ್ಲಿ ಅನುಭವಕ್ಕೆ ಬಂದರೆ ಸೋಜಿಗವೇನು? ಈ ಕಾರಣದಿಂದ ಈವರೆಗೆ ಬ್ರಿಟಿಷ ಅಧಿಕಾರಿಗಳ ಅಪ್ಪಣೆಗಳಿಗೆ ಅಂಕಿತರಾಗಿರುವ ಸ್ವಭಾವವು ಬೆಳದುಕೊಂಡು ಬಂದ ಈಗಿನ ನಮ್ಮ ಸೈನ್ಯವು ನಿಜವಾದ ರಾಷ್ಟ್ರೀಯ ಸೈನ್ಯವಾಗಲು ಕೆಲವೊಂದು ಕಾಲಾವಧಿಯು ಬೇಕೆಂಬುದು ಸ್ಪಷ್ಟವಿದೆ.

ಇನ್ನು ನಿಜವಾಗಿ ಇದಕ್ಕೂ ವಿಶೇಷ ಮಹತ್ವದ ದೊಡ್ಡ ತೊಂದರೆಯೊಂದಿದೆ. ಅದರ ಅರಿವು ಕೂಡ ನಮ್ಮ ಜನಗಳಿಗೆ ಸಾಕಷ್ಟಿಲ್ಲ. ಮುಖಂಡರೆನಿಸಿಕೊಳ್ಳುವ ಹಲವು ಮಹನೀಯರಿಗೆ ಇದರ ಎಚ್ಚರವು ಇಲ್ಲದಿರುವಾಗ ಸಾಮಾನ್ಯ ಜನಗಳ ಮಾತೇನು?

'ತೊಲಗಿರಿ ಬ್ರಿಟಿಷರೇ, ಭಾರತ ಬಿಟ್ಟು ತೊಲಗಿರಿ' (Quit India)ಎಂದು ಉಚ್ಚರಿಸಿದೊಡನೆಯೇ ಬ್ರಿಟಿಶರು ಹಿಂದೀಯರನ್ನು ಸೆರೆಮನೆಗೆ ಅಟ್ಟುತ್ತಿದ್ದರು; ಅವರೇ-ಅದೇ ಬ್ರಿಟಿಷ ಸರಕಾರವೇ ಈಗ ತಾವಾಗಿಯೆ 'ನಾವು ಭಾರತ ಬಿಟ್ಟು ತೊಲಗುವೆವು' ಎಂದು ಹೇಳುತ್ತಿರುವದು ಸೋಜಿಗಲ್ಲವೆ? ಕೈಗೆ ಸಿಕ್ಕ ಸಣ್ಣ ಒಡವೆ, ಮನೆ, ಹೊಲವನ್ನು ಬಿಟ್ಟುಕೊಡಬೇಕಾದರೆ ಮನುಷ್ಯನಿಗೆ ಅದೆಷ್ಟೋ ಕಷ್ಟವಾಗುವದು; ಅದನ್ನು ತನ್ನ ಕೈಯಲ್ಲಿಯೇ ಉಳಿಸಿಕೊಳ್ಳಲು ತನಗೆ ಶಕ್ಯವಿರುವ ಎಲ್ಲ ಉಪಾಯಗಳೂ ಮುಗಿದ ಬಳಿಕ ನಿರುಪಾಯವಾಗಿ ಆ ವಸ್ತುವನ್ನು ಬಿಡುವುದುಂಟು. ಅಥವಾ ಸಾಧುವಾದ ಮನುಷ್ಯನು ತನಗೆ ಹೆರವರ ಪದಾರ್ಥವೇಕೆ ಎಂದು ತಾನೇ ಬಿಟ್ಟುಕೊಡುವನು. ಆದರೆ, ಹೀಗೆ ತಾವಾಗಿಯೆ ಹಿಂದುಸ್ತಾನವನ್ನು ಬಿಟ್ಟು ತೊಲಗುವೆವೆಂದು ಹೇಳಲು ಬ್ರಿಟಿಶರೇನು ಧರ್ಮಾತ್ಮರೋ? ಅವರ ಈವರೆಗಿನ ಇತಿಹಾಸವು ಈ ಮಾತಿಗೆ ತೀರ ವಿಪರೀತವಾಗಿದೆ. ಬ್ರಿಟಿಶರು ಯಾವ ಮಾತನ್ನೂ ಸರಳವಾಗಿ ಆಡುತ್ತಿರುವುದಿಲ್ಲ. ಅವರಾಡುವ ನೇರವಾಗಿ ಕಾಣುತ್ತಿರುವ ಮಾತಿನ ಹಿಂದೆ ಏನೊಂದು ತಂತ್ರವು ಇದ್ದೇ ಇರುತ್ತದೆಂದು ಇತಿಹಾಸವು ಹೇಳುತ್ತದೆ. ಹಾಗಾದರೆ ಅವರು ತಾವು ಭಾರತದಿಂದ ಹೊರಟು ಹೋಗುವುದಾಗಿ ಹೇಳುವ ಮಾತಿನ ಹಿಂದೆ ಇರುವ ಕವಡು ಏನು?

ಭಾರತೀಯರು ತಮಗೆ 'ತೊಲಗಿ ಇಲ್ಲಿಂದ' ಎಂದು ಹೇಳುತ್ತಿರುವರಾದರೂ ತಮ್ಮನ್ನು ಇಲ್ಲಿಂದ ಅವರು ಬೇಗನೆ ಕದಲಿಸಲಾರರೆದೆಂದು ಬ್ರಿಟಿಶರಿಗೆ ಚೆನ್ನಾಗಿಯೆ ಗೊತ್ತಾಗಿದೆ. ಈ ಮಾತನ್ನು ಅವರು ಮುಂಗಂಡಿದ್ದಾರೆ; ಮನಗಂಡಿದ್ದಾರೆ ಎಂಬುದನ್ನು ಸೈಮನ್ ಕಮೀಶನ್ನಿನ ವರದಿಯಲ್ಲಿ ಬಂದ ಕೆಳಗಿನ ಅವತರಣಿಕೆಯಿಂದ ಸ್ಪಷ್ಟವಾಗಿ ಅರಿತುಕೊಳ್ಳಬಹುದಾಗಿದೆ.

> 'The formation of an Indian National Army drawn from India as whole, in which Indian officers will lead men who may be of different classes or races, in which member will recognise the rest as his comrade and in which public opinion will have general confidence is a task of the greatest possible difficulty.

- Siman Commission Report

Vol I P. 977

ಇಡೀ ಹಿಂದುಸ್ತಾನದಿಂದ ಆಯ್ದುಕೊಂಡ, ಬೇರೆ ಬೇರೆ ಜಾತಿಪಂಗಡ ಅಥವಾ ಜನಾಂಗದ ಸೈನ್ಯಾಧಿಕಾರಿಗಳು ತಮ್ಮ ಸಂಗಡಿಗರೆಲ್ಲರನ್ನೂ ತಮ್ಮ ಸಮಾನ ಬಾಂಧವರೆಂದು ಬಗೆದು ಅವರನ್ನು ಹಾಗೆ ನಡೆಸಿಕೊಳ್ಳುವುದು ಸಾಧ್ಯವಾಗಿ ತೋರುವುದಿಲ್ಲ. ಅಲ್ಲದೆ, ಇಂತಹ ಸೈನ್ಯದಲ್ಲಿ ಎಲ್ಲ ಜನತೆಯ ವಿಶ್ವಾಸವು ಸಾಕಷ್ಟು ಇದ್ದೀತೆಂದು ಬಗೆಯುವುದೂ ಕಷ್ಟ. ಆದುದರಿಂದ ಭಾರತಕ್ಕೊಂದು ರಾಷ್ಟ್ರೀಯ ಸೇನೆಯನ್ನು ನಿರ್ಮಿಸುವುದು ಅತ್ಯಂತ

ಕಠಿಣವಾದ ಕಾರ್ಯವಾಗಿದೆಯೆಂದು, ಸೈಮನ್ ಶಿಷ್ಟಮಂಡಳದವರು ತಮ್ಮ ಅಭಿಪ್ರಾಯವನ್ನು ಈ ಮೊದಲೆ ಬರೆದಿಟ್ಟಿದ್ದಾರೆ!

ಹೀಗೆ ಭಾರತೀಯ ರಾಷ್ಟ್ರೀಯ ಸೈನ್ಯವೇ ಅಸಂಭವವಾದ ಬಳಿಕ ಬ್ರಿಟಿಷರನ್ನು ತೊಲಗಿಸುವುದೂ ಅಶಕ್ಯವೆಂದು ಅವರು (ಬ್ರಿಟಿಶರು) ಊಹಿಸಿದ್ದರೆ ಸೋಜಿಗವೇನು?

ಹಿಂದೂ-ಮುಸಲ್ಮಾನರ (ಲೀಗಿನವರ) ತಿಕ್ಕಾಟವು ಅಖಂಡವಾಗಿ, ಅವ್ಯಾಹತವಾಗಿ ಉಳಿಯುವಂತೆ ಬ್ರಿಟಿಶ ರಾಜಕಾರಣಿಗಳು ಆಟವಾಡುತ್ತಿರುವರು. ಆ ಆಟವನ್ನು ನಡೆಯಗೊಡಬಾರದೆಂದು ಮಹಾತ್ಮಾಗಾಂಧೀಜಿಯವರೂ ನೆಹರುಗಳೂ ತಮ್ಮ ಅಂತಃಕರಣ ಶಕ್ತಿಯಿಂದ ಸಾವಿರಾರು ರಾಷ್ಟ್ರೀಯ ಮುಸಲ್ಮಾನರನ್ನು ಕಾಂಗ್ರೆಸ್ಸಿನ ಕಡೆಗೆ ಆಕರ್ಷಿಸಿದ್ದಾರೆ. ಅದರಿಂದ ಲೀಗಿನವರ ಶಕ್ತಿಯು ಎಷ್ಟೋ ಮಟ್ಟಿಗೆ ಕುಗ್ಗಿದೆ; ಲೋಕದಲ್ಲಿ ಲೀಗಿನ ಮರ್ಯಾದೆ ಗೇಡಾಗಿದೆಯೆಂಬುದು ನಿಜ. ಆದರೂ ಲೀಗಿನ ಸರಕಾರವಿರುವ ಸಿಂಧ, ಬಂಗಾಲಗಳಲ್ಲಿ, ವಿಶೇಷತಃ ಬಂಗಾಲದಲ್ಲಿ ನವಕಾಲಿ, ತಿಪ್ಪೇರಾದಂತಹ ಭಯಂಕರ ಅನಾಹುತಗಳಾಗಿ ಹಿಂದೂ ಜನರು ತುಂಬ ಕೇಡಿಗೆ ಈಡಾಗಬೇಕಾಯಿತು. ಇದರ ಸೇಡನ್ನು ಹಿಂದುಗಳು ಬಿಹಾರದಲ್ಲಿ ತೀರಿಸಿಕೊಳ್ಳಲು ದೊಂಬೆ ಎದ್ದರು. ಆಯ್ತು; ಇದರಿಂದ ಬ್ರಿಟಿಶರಿಗೆ ತುಂಬು ಹಿಗ್ಗು! ಬ್ರಿಟಿಶರು ಹೂಡಿದ ಆಟದ ಫಲವಿದು. ದೊಂಬಿಮಾಡಿ ಜನರು ಅವರ ಜಾಲದಲ್ಲಿ ಬಿದ್ದಂತೆ ಆಯಿತೆಂದು ಮಹಾತ್ಮಾಜಿ ಮತ್ತು ಅಬ್ದುಲ್ಲ ಗಫರಖಾನರು ಹೇಳಿದುದು ತೀರ ಸರಿ.

ಏಕೆಂದರೆ ಕಲಕತ್ತೆ ಮೊದಲಾದ ಕಡೆಗೆ ಹಿಂದೂ ಮುಸಲ್ಮಾನರ ಕೋಲಾಹಲಗಳು ಆದಬಳಿಕ ಈ ಸಮಾಜದವರು ತಮ್ಮ ರಕ್ಷಣೆಗಾಗಿ ಗವ್ಹರ್ನರ ಮತ್ತು ವೈಸರಾಯರಿಗೆ ಮೊರೆ ಇಡಲಾರಂಭಿಸಿದರು! ಶರಚ್ಚಂದ್ರ ಬೋಸರಂತಹರು ಕೂಡ ವೈಸರಾಯರನ್ನು ಭೆಟ್ಟಿಯಾಗಿ 'ಕಲಕತ್ತೆಗೆ ಬಂದು ಹಿಂದೂ ಜನರಿಗೆ ಆದ ಹಾನಿಯನ್ನು ನೋಡಿ ಹೋಗಿ' ಎಂದು ಕೇಳಿಕೊಂಡರು! ಬ್ರಿಟಿಷರಿಗೆ ಬೇಕಾದುದೇ ಇದು! ಸೈಮನ್ ವರದಿಯಲ್ಲಿ ಅವರು ಭವಿಷ್ಯ ನುಡಿದಂತೆಯೆ ಆಯಿತು. ಬ್ರಿಟನ್‌ರಿಗೆ ಅದೆಷ್ಟು ಹಿಗ್ಗು ಆಗಿರಲಿಕ್ಕಿಲ್ಲ?

ಆದರೆ, ಮಹಾತ್ಮಾಜಿಯವರು ಮತ್ತು ಅಬ್ದುಲ್‌ಗಫರಖಾನರು ಕೂಡಲೆ ನಮ್ಮ ಜನಗಳಲ್ಲಿ ಉಂಟಾದ ಬ್ರಿಟಿಶರಿಗೆ ಮೊರೆ ಇಡುವ ದೈನ್ಯ, ಹೀನ ಮನಸ್ಥಿತಿಯನ್ನು ತಡೆಹಿಡಿದರು. ನಮ್ಮಲ್ಲಿ ನಾವು ಎಷ್ಟೇ ಕಾದಾಡಲಿ, ಬ್ರಿಟಿಶರ ಮರೆಗೆ ನಿಂತು ಜೀವ ಬದುಕಿಸಿಕೊಳ್ಳುವುದು ಬೇಡ. ಈ ಬಗೆಯಾದ ನಾಚಿಕೆಗೇಡಿ ಬಾಳಿಗಿಂತಲೂ ಸಾವು ಮಿಗಿಲಾಗಿದೆ. ಹೊಡೆದಾಡಿದರೆ ನಾವೇ ಕಾದುವಾ. ಅದರಲ್ಲಿ ಹಿಂದುವು ಬದುಕಲಿ, ಅಥವಾ ಮುಸಲ್ಮಾನನು ಗೆದೆಯಲಿ, ಆದರೆ ಬ್ರಿಟಿಶನು ಮಾತ್ರ ನಡುವೆ ಬೇಡ, ಎಂಬ ಧೀರೋದಾತ್ತ ಮಂತ್ರೋಪದೇಶವನ್ನು ಮಾಡಿದರು. ಮತ್ತು ತಮ್ಮ ವೈಯಕ್ತಿಕ ತಪಸ್ಸಿನ ಪ್ರಭಾವದಿಂದ ಹಿಂದೂ ಮುಸಲ್ಮಾನರಿಗೆ ಸಕಾಲದಲ್ಲಿ ಎಚ್ಚರಿಸಿದರು. ಲೀಗಿನ ಸ್ವಾರ್ಥಿಗಳಲ್ಲಿ ಕೆಲವರನ್ನು ಬಿಟ್ಟರೆ ಮುಸಲ್ಮಾನರಲ್ಲಿ ರಾಷ್ಟ್ರೀಯ ವೃತ್ತಿಯ ಜನರು ಹೆಚ್ಚುತ್ತಲಿದ್ದುದು ಶುಭಸೂಚಕ ಸಂಗತಿಯಾಗಿದೆ.

ಆದರೆ, ಹಿಂದೂ ಮುಸಲ್ಮಾನರ ರಾಜಕೀಯ ಒಪ್ಪಂದವಾದರೂ ರಾಷ್ಟ್ರೀಯ ಸೈನ್ಯ ನಿರ್ಮಾಣಕ್ಕೆ ಅದಿಷ್ಟೇ ಮಾತು ಸಾಲದು. ಅದಲ್ಲದೆ ಹಿಂದೂ ಎಂಬ ಸ್ಥೂಲ ಹೆಸರಿನ ಕೆಳಗೆ ಮರೆಯಲ್ಲಿ ಹುದುಗಿಕೊಂಡಿರುವ ಹಲವು ಪಂಗಡಗಳಲ್ಲಿ ಒಳಗಿನ ಜಾತಿದ್ವೇಷವು ಕಡಿಮೆ ಉಗ್ರ ಸ್ವರೂಪದಲ್ಲಿಲ್ಲ. ಇವೆಲ್ಲವೂ ಜೀವಂತವಾಗಿರುವಾಗ ರಾಷ್ಟ್ರೀಯ ಸೈನ್ಯನಿರ್ಮಾಣವಾಗುವುದು ಸಾಧ್ಯವೆ? ರಾಷ್ಟ್ರೀಯ ಸೈನ್ಯ ನಿರ್ಮಾಣದ ಕೆಲಸವು ಏಕೆ ದುಃಸಾಧ್ಯವೆಂಬುದನ್ನು ತಿಳಿಯಲು ನಮ್ಮ ನಾಡಿನ ಪೋಲೀಸಪಡೆಯೊಳಗಿನ ತೊಡಕುಗಳನ್ನು ಅರಿತುಕೊಂಡರೂ ಕೆಲಮಟ್ಟಿಗೆ ಗೊತ್ತಾಗುವಂತೆ ಇದೆ.

ಈಗ ಹಿಂದೂ ಮುಸಲ್ಮಾನರ ಕಾದಾಟಗಳು ನಡೆದಿವೆ. ಅಲ್ಲಿ ಮುಂಬೈಯಂತಹ ಸ್ಥಳದಲ್ಲಿ ಬರುತ್ತಿರುವ ಅನುಭವವು ನಮ್ಮ ಕಣ್ದೆರೆಯಲು ಸಾಕಷ್ಟು ತೀಕ್ಷ್ಣವಾಗಿಯೇ ಇದೆ. ಮುಸಲ್ಮಾನರ ಓಣಿಯಲ್ಲಿ ಹಿಂದೂ ಸಿಪಾಯಿಯನ್ನು ಕಾವಲಿಗೆ ಇರಿಸಿದರೆ ಹಲವು ಬಾರಿ ಆತನು ತನ್ನ ಪ್ರಾಣಭಯಕ್ಕಾಗಿ ಅಲ್ಲಿ ಹೋಗುವದನ್ನೇ

ತಪ್ಪಿಸುವನು. ಮುಸಲ್ಮಾನನ್ನು ಇರಿಸಿದರೆ ಆತನು ತನ್ನ ಬಾಂಧವನಾದ ಅಪರಾಧಿಯನ್ನು ಹಿಡಿದು ಬಂಧಿಸುವಲ್ಲಿ ಅಷ್ಟು ದಕ್ಷತೆಯನ್ನು ವಹಿಸುವುದಿಲ್ಲ.

ಕರ್ಣಾಟಕದಲ್ಲಿ ಹಿಂದಕ್ಕೆ ವ್ಯಾಸನ ತೋಳಿನ ಗಲಾಟೆಯ ಕಾಲದಲ್ಲಿ ಬಂದ ಅನುಭವವೂ ಇದಕ್ಕೆ ಬೇರೆಯಾಗಿಲ್ಲ. ವೀರಶೈವ ಮತ್ತು ವೀರವೈಷ್ಣವರ ಈ ಜಗಳದಲ್ಲಿ ಶಾಂತಿ ಸ್ಥಾಪನೆಗೆ ಮಹಮ್ಮದೀಯ ಫೌಜದಾರರನ್ನು ನೇಮಿಸುವ ಹೊತ್ತು ಬರುತ್ತಲಿತ್ತು.

ಈಗ ಹಿಂದೂ-ಮುಸಲ್ಮಾನರ ಜಗಳಗಳಲ್ಲಿ ಬ್ರಿಟಿಶ ಸೈನಿಕರನ್ನು ತರುವ ಪ್ರಸಂಗವು ಬರುತ್ತಲಿದೆ. ಆದರೆ ಬ್ರಿಟಿಶ ದಂಡಾಳಿಗೆ, ಇವೆರಡೂ ಸಮಾಜಗಳು ಕಾದಾಡಿ ಹಗೆತನ ನಡೆಸಿದರೇನೆ ತಮ್ಮ ಇಲ್ಲಿಯ ರಾಜ್ಯವು ಭದ್ರವಾಗಿ ಇರುವುದೆಂಬ ಮನವರಿಕೆಯಾಗಿರುವುದರಿಂದ ಅವನು ಈ ಜಗಳದಲ್ಲಿ ಮನಃಪೂರ್ವಕವಾಗಿ ಕೈಹಾಕುವದಿಲ್ಲವೆಂಬ ಮಾತನ್ನು ಕಲಕತ್ತೆಯ ದೊಂಬಿಯ ನ್ಯಾಯ ವಿಚಾರಣೆಯಲ್ಲಿ ಒಬ್ಬರು ಆಡಿತೋರಿಸಿದ್ದಾರೆ. ಬ್ರಿಟಿಶರು ಒಮ್ಮೆ ಹಿಂದುಗಳ ಕಡೆಗೂ ಇನ್ನೊಮ್ಮೆ ಮುಸಲ್ಮಾನರ ಕಡೆಗೂ ಒಲಿದಂತೆ ತೋರಿಸಿ ಇವರಿಬ್ಬರ ನಡುವಿನ ಜಗಳಗಳು ನಿರಂತರವಾಗಿ ಉಳಿಯುವಂತೆ ಕೈವಾಡ ನಡೆಸುತ್ತಾರೆ.

ನಮ್ಮ ಹಿಂದೂ ಸಮಾಜದಲ್ಲಿ ಹರಿಜನ, ಬ್ರಾಹ್ಮಣ, ಲಿಂಗವಂತ, ರೆಡ್ಡಿ, ಬೇಡ, ಕುರುಬ, ದಾಸ, ಶೀಖ, ಮೊದಲಾದ ಜಾತಿಭೇದಗಳು ತೀಕ್ಷ್ಣವಾಗಿ ಜೀವಂತವಾಗಿರುವ ವರೆಗೆ ರಾಷ್ಟ್ರೀಯ ಸೈನ್ಯವು ಕನಸಿನೊಳಗಿನ ರಾಜ್ಯವೇ ಸರಿ. ಇವರಲ್ಲಿ ತಾವು ಹೆಚ್ಚಿನವರು, ತಾವು ಹೆಚ್ಚಿನವರೆಂಬ ಸೆಣಸಾಟವಿರುವವರೆಗೆ ರಾಷ್ಟ್ರೀಯ ಸೈನಿಕರಾಗಲು ಇವರು ಅರ್ಹರಾಗುವುದಿಲ್ಲ. ಧರ್ಮಕ್ಕೆ ಪ್ರಥಮ ಸ್ಥಾನವನ್ನು ಕೊಡುವವನು ರಾಷ್ಟ್ರೀಯ ವೃತ್ತಿಯನ್ನು ಗೌಣವೆಂದು ಭಾವಿಸುವುದು ಸಹಜ. ಆದಕಾರಣ ಜಾತೀಯ ದೊಂಬೆಗಳನ್ನು ಶಾಂತಮಾಡಲು ಇಂತಹ ಸೈನಿಕರು ನಿರುಪಯುಕ್ತ. ದೇಶದೊಳಗಿನ ಶಾತಿ ರಕ್ಷಣಗೆಗೆ ನಿರುಪಯುಕ್ತವಾದ ಸೈನ್ಯವಿದ್ದ ದೇಶವು ಎಂದೂ ಸ್ವಾತಂತ್ರ್ಯ ಸುಖವನ್ನು ಅನುಭವಿಸಲಾರದು. ಇಂತಹ ದೇಶವು ಯಾವಾಗಲೂ ಪರಕೀಯರಿಗೆ ಅಂಕಿತವಾಗಿಯೆ ಉಳಿಯದೆ ಗತಿಯಿಲ್ಲ.

ಆದುದರಿಂದ ಜಾತಿ, ಧರ್ಮಗಳನ್ನು ಕಡೆಗಣಿಸಿ (ಅದಕ್ಕೆ ದ್ವಿತೀಯ ಸ್ಥಾನಕೊಟ್ಟು) ರಾಷ್ಟ್ರೀಯತ್ವಕ್ಕೇ ಪ್ರಥಮ ಸ್ಥಾನವನ್ನು ಕೊಡುವ ವೃತ್ತಿಯ ಸೈನಿಕರಿಂದ ಸಿದ್ಧವಾದ ನಾಡಪಡೆ (ರಾಷ್ಟ್ರೀಯ ಸೈನ್ಯವು) ಇಲ್ಲದೆ ಯಾವ ದೇಶವೂ ಸ್ವಾತಂತ್ರ್ಯಕ್ಕೆ ಅರ್ಹವಾಗಲಾರದು. ಎಲ್ಲಿಯವರೆಗೆ ನಾಡಿನಲ್ಲಿ ಜನರು, ತಮಗೆ ತಮ್ಮ ಧರ್ಮ, ಜಾತಿ ಇದುವೆ ಮೊದಲು, ರಾಷ್ಟ್ರವು ಹಿಂದುಗಡೆ ಎಂಬ ನಂಬುಗೆಯವರೇ ಹೆಚ್ಚಾಗಿ ಇರುವರೊ ಅಲ್ಲಿಯವರೆಗೆ ರಾಷ್ಟ್ರೀಯ ಸೈನ್ಯವು ತಲೆಯೆತ್ತುವುದು ಅಸಂಭವವು. ರಾಷ್ಟ್ರೀಯ ಸೈನ್ಯವಿಲ್ಲದೆ ದೇಶವು ತನ್ನ ಬಿಡುಗಡೆಯನ್ನು ಮಾಡಿಕೊಳ್ಳಲಾರದು. ಈ ಕಾರಣದಿಂದಲೇ, ಜಾತಿಯು ಬೇಕೆಂದರೆ ಸ್ವಾತಂತ್ರ್ಯವಿಲ್ಲ; ಸ್ವಾತಂತ್ರ್ಯವು ನಮ್ಮ ಗುರಿಯೆಂದರೆ ಜಾತಿಯನ್ನು ಬಿಡದೆ ಗತಿಯಿಲ್ಲ. ಆದರೆ ಈಗ ಬ್ರಿಟಿಶರು ಭಾರತವನ್ನು ವಿಚ್ಛೇದಿಸಿ ಪಾಕಿಸ್ತಾನವನ್ನು ಸ್ಥಾಪಿಸಿದ್ದಾರೆ. ಹಿಂದುಸ್ತಾನವು 'ಸ್ವತಂತ್ರ' ವೆಂದು ಒಪ್ಪಿಸಿಕೊಂಡಿದ್ದಾರೆ. ಬ್ರಿಟಿಶ ಸೈನ್ಯವೂ ಸಂಪೂರ್ಣವಾಗಿ ಹೊರಟು ಹೋಗಿದೆ. ಆದರೂ ನಾವು ಸ್ವತಂತ್ರರೆಂದು ಹೇಳುವುದು ಸಾಹಸದ ಮಾತು.

ಏಕೆಂದರೆ, ಸೈನ್ಯದಲ್ಲಿ ರಾಷ್ಟ್ರೀಯತೆಯು ಬೇರೂರಲು ಇನ್ನೂ ಕೆಲವು ಕಾಲವಾದರೂ ಬೇಕೇ ಬೇಕು. ಬ್ರಿಟಿಶರ ಕಾಲದಲ್ಲಿ ಸ್ಥಾಪಿತವಾಗಿರುವ ಸೈನ್ಯದಲ್ಲಿರುವ ದಂಡಾಳುಗಳೂ, ದಂಡನಾಯಕರೂ, ದಳವಾಯಿಗಳೂ ಜಾತೀಯ ಭಾವನೆಗಳಿಂದ ಅಲಿಪ್ತರಾಗಿರುವವರು ತೀರ ಕಡಿಮೆ. ಏಕೆಂದರೆ ಬ್ರಿಟಿಶರು ಆಗ ಆ ಜಾತಿಯ ಭೇದಗಳನ್ನು ಲೆಕ್ಕಿಸಿಯೆ ಪಡೆಗಳನ್ನು ಕಟ್ಟಿದ್ದಾರೆ. ಮುಸಲ್ಮಾನ ಸೈನಿಕರು ಬಹುತರವಾಗಿ ಪಾಕಿಸ್ತಾನಕ್ಕೆ ಹೋಗಿರುವವರಾದರೂ ಹಿಂದುಸ್ತಾನದ ಸೈನ್ಯದಲ್ಲಿ ಇನ್ನೂ ಸ್ವಲ್ಪ ಅಧಿಕಾರಿಗಳೂ ದಂಡಾಳುಗಳೂ ಉಳಿದಿರುವುದಾಗಿ ಕೇಂದ್ರ ಸರಕಾರದಿಂದಲೇ ಪ್ರಕಟವಾಗಿದೆ. ಪಾಕಿಸ್ತಾನವು ಸ್ವತಂತ್ರವಾಗಿರುವಾಗ ಹಿಂದುಸ್ತಾನದ ದಂಡಿನಲ್ಲಿ ಮುಸಲ್ಮಾನರು ಇರುವುದು ಗಂಡಾಂತರದ್ದೆಂದು ಸಿದ್ಧಪಡಿಸಬೇಕಾದ ಆವಶ್ಯಕವಿಲ್ಲ. ಕೆಲವರು ರಾಷ್ಟ್ರೀಯ

ವೃತ್ತಿಯ ಮುಸಲ್ಮಾನರು ಇರಬಹುದು. ಆದರೆ, ಪಾಕಿಸ್ತಾನದ ಮುಸಲ್ಮಾನರೊಡನೆ ಹಿಂದುಸ್ತಾನಕ್ಕೆ ಎದುರಿಸಬೇಕಾದಾಗ ಈ ರಾಷ್ಟ್ರೀಯ ವೃತ್ತಿಯವರೂ ಉಭಯ ಸಂಕಟದಲ್ಲಿ ಸಿಕ್ಕು ನಿರ್ವಿಣ್ಣರಾಗುವರು. ಅಲ್ಲದೆ ಜಾತ್ಯಭಿಮಾನ ತಲೆಯೆತ್ತಿ ಭಾರತ ಸೈನ್ಯದ ಗುಟ್ಟುಗಳೆಲ್ಲ ಪಾಕಿಸ್ತಾನಕ್ಕೆ ಕೂಡಲೇ ಗೊತ್ತಾಗುವ ಹೆದರಿಕೆಯಂತೂ ಪ್ರತಿಕ್ಷಣಕ್ಕೂ ಉಂಟು! ಆದಕಾರಣ ಪಾಕಿಸ್ತಾನವು ಭಾರತದಿಂದ ಸ್ವತಂತ್ರವೆನಿಸುತ್ತಿರುವವರೆಗೆ ಮುಸಲ್ಮಾನರು ಸೈನ್ಯದಲ್ಲಿ, ಪೋಲೀಸಿನವರಲ್ಲಿ ಕೂಡ ಇರತಕ್ಕದ್ದಲ್ಲ. ಇವರು ಈ ವಿಭಾಗಗಳಲ್ಲಿ ಸೇರಿಕೊಂಡಿರುವ ಭಾರತವು ಸ್ವತಂತ್ರವಾಗಿದೆಯೆಂಬುದು ಕೇವಲ ಭ್ರಮೆ.

ಸೈನ್ಯದಲ್ಲಿ, ಸಂರಕ್ಷಕ ದಳಗಳಲ್ಲಿ ಮುಸಲ್ಮಾನರದೊಂದೆ ಹೆದರಿಕೆಯಲ್ಲ. ಹಿಂದೂ ಜಾತಿಯ ಒಳಬಣಗಳ ಜಾತೀಯತೆಯ ದುಷ್ಪರಿಣಾಮದ ಗಂಡಾಂತರವೂ ಅಷ್ಟಿಷ್ಟಲ್ಲ. ಸೈನ್ಯದಲ್ಲಿ ಸೀಖ ಪಲ್ಟನ್, ಗುರ್ಖಾಪಡೆ, ಲಿಂಗಾಯತ ಬ್ಯಾಟೇಲಿಯನ್ ಮುಂತಾಗಿ ಜಾತಿಗನುಸರಿಸಿ ವಿಭಾಗಗಳು ಈಗ ಇವೆ. ಇವುಗಳು ತಮ್ಮ ತಮ್ಮ ಜಾತಿಯ ವಿಷಯಕ ಈರ್ಷೆಯಲ್ಲಿ ರಾಷ್ಟ್ರವನ್ನೆ ಮರೆಯುವುದು ಅಸಂಭವವಲ್ಲ. ಆಯಾ ಜಾತಿಯ ರಾಷ್ಟ್ರೀಯ ವೃತ್ತಿಯ ಮುಖಂಡರು, ತಮ್ಮ ಜಾತಿಯ ಹೆಸರಿನ ದಂಡಿನ ಭಾಗಕ್ಕೆ ಬೇರೊಂದು ಅಖಿಲ ಭಾರತೀಯ ಅಭಿಮಾನದರ್ಶಕ ಹೆಸರನ್ನಿಡಲು ತಾವಾಗಿಯೆ ಸಂರಕ್ಷಕ ಮಂತ್ರಿಗಳಿಗೆ ಅಥವಾ ಭಾರತದ ಮುಖ್ಯ ಮಂತ್ರಿಗಳಿಗೆ ಪ್ರಾರ್ಥಿಸಿಕೊಳ್ಳುವದರಲ್ಲಿಯೇ ಭೂಷಣವಿಲ್ಲವೆ? ಅಖಿಲ ಭಾರತೀಯ ನೇತಾರರ ಒತ್ತಾಯಕ್ಕೆ ಈ ಮಾತಿಗೆ ಒಪ್ಪುವ ಪ್ರಸಂಗ ಬರುವುದು ಅಷ್ಟು ಉಚಿತವಲ್ಲ.

ಈಗ ದೊಡ್ಡ ಪಟ್ಟಣಗಳಲ್ಲಿ ಗೃಹರಕ್ಷಕ ದಳಗಳಿಗೆ ಸೈನಿಕರಂತಹ ಕೆಲವೊಂದು ಶಿಕ್ಷಣವನ್ನು ಕೊಡುವ ಉಪಕ್ರಮವು ಆರಂಭವಾಗಿದೆ. ಶಿಕ್ಷಣಸಂಸ್ಥೆಗಳಲ್ಲಿ ತರುಣರಿಗೆ ಸೈನಿಕ ಶಿಕ್ಷಣ ಕೊಡುವ ಏರ್ಪಾಟವೂ ನಡೆದಿದೆ. ಸ್ಥೂಲದೃಷ್ಟಿಯಿಂದ ನೋಡಿದರೆ ಇದರಲ್ಲಿ ಏನೂ ಗಂಡಾಂತರವು ಕಾಣುವುದಿಲ್ಲ; ಅಷ್ಟೇ ಅಲ್ಲ, ರಾಷ್ಟ್ರವನ್ನು ಬಲಿಷ್ಠ ಮಾಡುವುದಕ್ಕಾಗಿ ಇದೆಲ್ಲವೂ ಸಹಕಾರಿಯಾಗುವುದು, ಎಂಬ ಹಿಗ್ಗಿನಲ್ಲಿಯೆ ನಾವೆಲ್ಲ ಮುಗ್ಧರಾಗಿದ್ದೇವೆ. ಆದರೆ, ಕರ್ನಾಟಕ-ಮಹಾರಾಷ್ಟ್ರದ ಸಮಾಜಸ್ಥಿತಿಯನ್ನು ನಿರೀಕ್ಷಿಸಿದರೆ ಇಲ್ಲಿಯ ನಾಗರಿಕ ದಳಗಳೂ, ತರುಣರ ಸೈನಿಕ ಶಿಕ್ಷಣವೂ ಒಂದು ದೃಷ್ಟಿಯಿಂದ ಚಿಂತೆಗೆ ಕಾರಣವಾಗುವಂತೆಯೆ ಇದೆ. ಸಮಾಜದಲ್ಲಿ ಎಲ್ಲಿಯ ವರೆಗೆ ಜಾತಿಯ ವೈಷಮ್ಯವು ನಷ್ಟವಾಗಿಲ್ಲವೊ ಅಲ್ಲಿಯ ವರೆಗೆ ಈ ಯುದ್ಧ ಶಿಕ್ಷಣದಿಂದ ಯಾದವೀ ಕಲಹಗಳು ಇನ್ನಷ್ಟು ಭಯಾವಹವಾಗುವ ಹೆದರಿಕೆಯೆ ಉಂಟು. ಇದರ ಜೊತೆಗೆ ಮಿತಿಮೀರಿದ ಪ್ರಾಂತಾಭಿಮಾನವೂ ಒಂದು ಕುತ್ತ. ತಮ್ಮ ಪ್ರಾಂತವೇ ಒಂದು ರಾಷ್ಟ್ರ; ಸ್ವತಂತ್ರದೇಶವೆಂಬ ಗಾಳಿ ತುಂಬಿ ಮಾತನಾಡುವ ಅತಿವಾದಿಗಳುಂಟು. ಹಲಕೆಲವು ಸ್ವಾಯತ್ತಪ್ರಾಂತಗಳೂ ಸಂಸ್ಥಾನಗಳೂ ತಮ್ಮ ತಮ್ಮ ದಂಡು, ಹಡಗುಪಡೆ, ವಿಮಾನಪಡೆ ಇರಬೇಕೆಂಬ ಒಲವು ಉಳ್ಳವುಗಳಾಗಿವೆ. ಇದು ನಿಜವಾಗಿಯೂ ಭಾರತವು ಛಿನ್ನ ವಿಛಿನ್ನವಾಗಲು ಸಂಚಕಾರ!

'ಕೊಲ್ಲಾಪುರವು ಅಚ್ಚುಕಟ್ಟಿನ ಮರಾಠಾ ಸಂಸ್ಥಾನ; ಪುಣ್ಯಶ್ಲೋಕ ಶಿವಾಜಿ ಮಹಾರಾಜರ ನೆತ್ತರವು ಹರಿದಾಡುತ್ತಿರುವ ರಾಜವಂಶ ಈ ಸಂಸ್ಥಾನವನ್ನು ಆಳುತ್ತಿದೆ. ಪವಿತ್ರವಾದ ಈ ಅರಸುಕುಲವನ್ನು ಉಳಿಸಿಕೊಂಡು ಬರುವುದು ಪ್ರತಿಯೊಬ್ಬ ಮರಾಠನ ಕರ್ತವ್ಯ. ಕೊನೆಯ ನೆತ್ತರದ ಹನಿಯು ನರದಲ್ಲಿ ಇರುವ ವರೆಗೂ ತಾವು ಈ ಕರ್ತವ್ಯಕ್ಕಾಗಿ ಹೋರಾಡತಕ್ಕವರೇ'! ಎಂಬ ಒಂದೊಂದು ಜಾತಿಯ ಈ ಬಗೆಯ ವೀರಾವೇಶದ ಮಾತಿನ ಹುಚ್ಚುಹೊಳೆ ಆಯಾ ಜಾತಿಯ ಅಜ್ಞಜನರನ್ನು ಕೊಚ್ಚಿಕೊಂಡೊಯ್ದು ಎಂತಹ ಅನಾಹುತವನ್ನು ಮಾಡಬಲ್ಲದು ಎಂಬುದು ಹಲವೆಡೆ ದಿನಾಲು ಅನುಭವಕ್ಕೆ ಬರುತ್ತಲಿದೆ. ಹಿಂದೀ ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಗುಪ್ತಸಂಘ ಸ್ಥಾಪಿಸಿಕೊಂಡು ಕೆಲಸಮಾಡುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕದಲದವರಿಂದ ಆದ ಹೀನಕೃತ್ಯವು ಲೋಕವಿಶ್ರುತವಾಗಿವೆ. ಈ ಮೊದಲು ಜಿನ್ನಾರ ಅನುಯಾಯಿಗಳು ಮಾಡಿದ ರಾಕ್ಷಸೀಕೃತ್ಯಗಳು, ಈಗ ಹೈದರಾಬಾದಿನ ರಜಕಾರರು ನಡೆಸಿರುವ ಕೊಲೆಸುಲಿಗೆಗಳು, ಕೊಲ್ಲಾಪೂರ, ಸಾಂಗ್ಲಿ, ಮಿರಜಿ, ಬೆಳಗಾವ ಜಿಲ್ಹೆಯ ಹಲವೆಡೆಗೆ ಆದ ಕೊಳ್ಳೆ ಲೂಟಿಗಳೂ ಇದಕ್ಕೆ ನಿದರ್ಶನ.

ಜನ್ಮದಿಂದ ಜಾತಿಭೇದವನ್ನು ನಾವು ಇಟ್ಟುಕೊಂಡಿರುವ ವರೆಗೂ ಮತ್ತು ರಾಷ್ಟ್ರೀಯತೆಗಿಂತಲೂ ತಮ್ಮ ಧರ್ಮ, ಮತವು ಮಿಗಿಲೆಂದು ನಮ್ಮ ಅಂತರಾಳದಲ್ಲಿ ದೃಢವಾಗಿ ನಂಬುಗೆಯು ಬೇರೂರಿರುವ ವರೆಗೂ ನಮ್ಮ ಸಮಾಜಕ್ಕೆ ಕೊಡಲ್ಪಡುವ ಸೈನಿಕಶಿಕ್ಷಣವು, ಸಂಧಿಸಾಧಿಸುವುದೆಂದೊಡನೆ ತಮ್ಮ ಜಾತಿ, ಧರ್ಮದ ವರ್ಚಸ್ಸನ್ನು ಸ್ಥಾಪಿಸಬೇಕೆಂಬ ವ್ಯಾಮೋಹವನ್ನು ಉಂಟುಮಾಡದೆ ಇರಲಾರದು.

ಇಂದಿನ ಶಿಕ್ಷಣಸಂಸ್ಥೆಗಳು ವ್ಯಕ್ತಾವ್ಯಕ್ತ ಹೆಸರುಗಳಿಂದ ಕೆಲವೊಂದು ಜಾತಿ ಪಂಗಡದವರ ಕೈಯಲ್ಲಿವೆ. ಈ ಸಂಸ್ಥೆಗಳಲ್ಲಿ ಉಳಿದ ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲವೆಂಬುವಂತಿಲ್ಲವಾದರೂ ಬಹುಸಂಖ್ಯಾಕ ವಿದ್ಯಾರ್ಥಿಗಳು ಆ ಶಿಕ್ಷಣಸಂಸ್ಥೆಯ ಸಂಚಾಲಕರ ಜಾತಿಯವರೇ ಆಗಿರುವುದುಂಟು. ಶಿಕ್ಷಕವರ್ಗದಲ್ಲಿ ಶಾಲೆಯ ಕಾರ್ಯನಿರ್ವಾಹಕ ಮಂಡಲದಲ್ಲಿ ಆಯಾ ಜಾತಿಯವರ ಕೈಯಲ್ಲಿಯೆ ಮುಖ್ಯಸೂತ್ರಗಳು ಇರುತ್ತವೆ. ಈ ಕಾರಣದಿಂದ ಇಂತಹ ಶಿಕ್ಷಣಸಂಸ್ಥೆಗಳ ಮೇಲ್ವಿಚಾರಣೆಯಲ್ಲಿ ನಡೆವ ಪಥಕಗಳು ಜಾತೀಯ ಸ್ವರೂಪವನ್ನು ತಾಳಲಿಕ್ಕಿಲ್ಲವೆಂದು ಗ್ರಹಿಸುವುದು ಸಮಂಜಸವಾದೀತೆ? ಶಿಕ್ಷಣಸಂಸ್ಥೆಗಳಲ್ಲಿ ಜಾತೀಯಭಾವನೆಯ ಸೂಕ್ಷ್ಮವಾದ ಸ್ಪರ್ಧೆಯು ಈಗ ಇದ್ದೇ ಇದೆ. ಇದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಕೆಲವರು ಸಿದ್ಧರಾಗಲಿಕ್ಕಿಲ್ಲ. ಆದರೂ ಇದು ವಾರ್ಷಿಕೋತ್ಸವಗಳಿಗೆ ಮುಖ್ಯ ಅತಿಥಿಗಳನ್ನು ಬರಮಾಡಿಕೊಳ್ಳುವಲ್ಲಿ ವ್ಯಕ್ತವಾಗುತ್ತದೆ. ವಿದ್ಯಾರ್ಥಿಗಳ ಆಟಪಾಟಗಳಲ್ಲಿ ಒಂದು ಶಿಕ್ಷಣ ಸಂಸ್ಥೆಯವರಿಗೂ ಇನ್ನೊಂದು ಶಿಕ್ಷಣಸಂಸ್ಥೆಯವರಿಗೂ ಇರುವ ಆಂತರಿಕ ಮನೋಭಾವವು ಎಂತಹುದು, ಎಂಬುದು ಆ ವಿದ್ಯಾರ್ಥಿಗಳ ಮುಖಾಂತರ ಬರುವ ಮಾತುಗಳಿಂದ, ಆಗುವ ಕಲಹಗಳಿಂದ ಸ್ಪಷ್ಟವಾಗುತ್ತಿರುತ್ತದೆ.

ಖಾಸಗೀ ಶಿಕ್ಷಣಸಂಸ್ಥೆಗಳನ್ನೆಲ್ಲ ಸರಕಾರವು ವಶಪಡಿಸಿಕೊಳ್ಳಬೇಕು ಅಥವಾ ಸಂಚಾಲಕರಲ್ಲಿ ಒಂದೇ ಬಗೆಯವರೇ ಇರದಂತೆ ನಿರ್ಬಂಧವಿಟ್ಟು ಅವುಗಳ ಕಾರ್ಯ ನಿರ್ವಾಹಕ ಮಂಡಲಗಳಲ್ಲಿ ಶಿಕ್ಷಣ ತಜ್ಞನೊಬ್ಬನು ಸರಕಾರದ ಪ್ರತಿನಿಧಿಯಾಗಿ ಅಂತರ್ಗತ ಶಕ್ತಿಗಳ ನಿರೀಕ್ಷಣೆಗಾಗಿ ನೇಮಿಸಲ್ಪಡುವ ಕಟ್ಟಳೆಯಾಗಬೇಕು. ಈ ಬಗೆಯಾದ ಯಾವುದೊಂದು ಮಾರ್ಪಾಟಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಹುದುಗಿಕೊಂಡಿರುವ ಜಾತೀಯತೆಯು ಸಮೂಲ ನಷ್ಟವಾಗದೆ ಇದ್ದರೆ ಈ ಸಂಸ್ಥೆಗಳಿಂದ ನೇರ್ಪಡುವ 'ಸಮೀರ ಸೇನಾ' 'ವಿದ್ಯಾರಣ್ಯದಳ' 'ಬಸವೇಶ್ವರ ಪಥಕ' 'ಅಂಜುಮಾನ ತುಕಡಿ' 'ಶಿವಾಜೀ ಸವಾರರು' 'ಹೇಮರಡ್ಡೀ ಪದಾತಿ' 'ಮಹಾವೀರ ತಂಡ' ಎಂದು ಮುಂತಾದ ಶಿಬಿರಗಳು ರಾಷ್ಟ್ರದ ಬಲಸಂವರ್ಧನೆಗೆ ಕಾರಣವಾಗದೆ ಅಂತರ್ಗತ ಕಲಹಗಳಿಗೆ ಪೋಷಕವಾಗುವ ಹೆದರಿಕೆಯು ತಪ್ಪಿದ್ದಲ್ಲ.

ಹೀಗೆ ತಿಳಿದು ನೋಡಿದಷ್ಟೆಲ್ಲ ನಮ್ಮ ದೇಶದೊಳಗಿನ ಜಾತೀಯತೆಯು ರಾಷ್ಟ್ರೀಯ ಸೈನ್ಯ ನಿರ್ಮಾಣಕ್ಕೆ ಬಗೆ ಬಗೆಯಾಗಿ ಅಡ್ಡಬರುತ್ತಿದೆ. ಈಗಿನ ಜಾತಿಭೇದಗಳನ್ನು ಇದ್ದಂತೆ ಉಳಿಸಿಕೊಂಡೂ ರಾಷ್ಟ್ರೀಯ ಸೈನ್ಯನಿರ್ಮಾಣದ ಹಂಚಿಕೆಯು ಯಾವುದಾದರೂ ಇದ್ದರೆ, ಸನಾತನ ಧರ್ಮಾಭಿಮಾನಿಗಳು ಸೂಕ್ಷ್ಮ ವಿಚಾರದಿಂದ ಕಂಡು ಹಿಡಿದು ಅದನ್ನು ದೇಶದ ಬಲ್ಲಿದರ ಎದುರು ಬೇಗನೆ ಮಂಡಿಸುವುದು ಸಾಧ್ಯವಾದರೆ ಅವರು ಕೂಡಲೆ ಹಾಗೆ ಮಾಡಬೇಕು. 'ಸಾವಿರಾರು ವರುಷಗಳಿಂದ ನಡೆದು ಬಂದ ಸನಾತನ ವರ್ಣವ್ಯವಸ್ಥೆಯನ್ನು ಹಾಳುಮಾಡುತ್ತಾರಲ್ಲ,' ಎಂದು ಒಳಗೊಳಗೆ ಮಿಡುಕಾಡುತ್ತ ಕುಳ್ಳಿರುವುದರಿಂದ ಅವರಿಗೂ ಲಾಭವಿಲ್ಲ! ದೇಶಕ್ಕೂ ಹಿತವಿಲ್ಲ. ಹಾಗೆ ಏನಾದರೂ ದಾರಿಯಿದ್ದರೆ ಅದರ ಚರ್ಚೆಯೂ ಬಹಿರಂಗವಾಗಿ ನಡೆಯುವುದು ಉತ್ತಮ. ಯಾರಿಗೆ ಒಪ್ಪಿಗೆಯಾಗಲಿ ಆಗದಿರಲಿ, ಲೋಕ ಹಿತಕಾರಕ ಪ್ರಾಮಾಣಿಕವಾದ ಯಾವ ವಿಚಾರ, ಭಾವನೆಗಳೂ ಒತ್ತಾಯದಿಂದ ಅಥವಾ ಹೆದರಿಕೆಯಿಂದ ಒಳಗೆ ಹುಗಿಯಲ್ಪಡಲಾಗದು. ಅದು ವ್ಯಕ್ತಿಯ ಹಾಗೂ ರಾಷ್ಟ್ರದ ಆರೋಗ್ಯಕ್ಕೆ ಹಾನಿಕರ. ಸತ್ತ ಮೇಲಿನ ಪಾರಲೌಕಿಕ ಮುಕ್ತಿಯೇ ನಮ್ಮ ಗುರಿ; ಈ ರಾಜಕೀಯ ಸ್ವಾತಂತ್ರವು ಭೌತಿಕ; ಎಂಬ ಶ್ರದ್ಧೆಯೆ ಬಹುಜನರದಾಗಿದ್ದರೆ ಇಷ್ಟು ಚಳವಳಿ ಮಾಡಿ ಬ್ರಿಟಿಶರನ್ನು ಹೊರಗೆ ಅಟ್ಟಿದ್ದು ಮೂರ್ಖತನವಾಯಿತು. ಇನ್ನೂ ಹೊತ್ತು ಮೀರಿಲ್ಲ. ಬ್ರಟಿಶರು ದೂರ ಹೋಗಿಲ್ಲ. ಕರೆದರೆ ಸಾಕು; ಅವರು ಬರಲು ಸಿದ್ಧರಿದ್ದಾರೆ.

'ಯದ್ಯಯತ್ ಪರವಶಂ ದುಃಖಮ್' ಎಂಬುದು ನಿಜವಿದ್ದರೆ, ಪಾರತಂತ್ರ್ಯವು ನರಕಕ್ಕಿಂತಲೂ ಹೀನ. ಪರಕೀಯರ ಆಡಳಿತದಲ್ಲಿ ನಿಜವಾದ ಆತ್ಮವಿಕಾಸವು ಆಗಲಾರದು. ಆತ್ಮವಿಕಾಸವೇ ಇಲ್ಲದಾಗ ಧರ್ಮವು ಉಳಿದಿದೆಯೆಂಬುದು ಭ್ರಮೆ. ಆದುದರಿಂದ ನಿಜವಾದ ಧರ್ಮವು ರಾಷ್ಟ್ರದ ಸ್ವಾತಂತ್ರ್ಯದಲ್ಲಿಯೆ ಎಂದು ನಂಬುವುದಾದರೆ ನಮಗೆ ಈಗ ದೊರೆತ ಸ್ವರಾಜ್ಯವನ್ನು ಉಳಿಸಿಕೊಳ್ಳಲು ಎಂತಹ ತ್ಯಾಗಮಾಡಬೇಕಾದರೂ ಆದಕ್ಕೆ ನಾವು ಸಿದ್ಧರಾಗಬೇಕಷ್ಟೆ?

ರಾಷ್ಟ್ರೀಯ ಸೈನ್ಯವಿಲ್ಲದೆ ರಾಷ್ಟ್ರಕ್ಕೆ ಸ್ವಾತಂತ್ರ್ಯವಿಲ್ಲ; ಉಳಿಗಾಲವಿಲ್ಲ. ಜನ್ಮದಿಂದ ಜಾತಿಭೇದಗಳಿರುವುದು ರಾಷ್ಟ್ರೀಯ ಸೈನ್ಯ ನಿರ್ಮಾಣಕ್ಕೆ ವಿಘಾತಕವೆಂದು ಒಪ್ಪಲೇಬೇಕಷ್ಟೇ?

ನಮಗೆ ಬೇಕಾದುದು ಜಾತಿಯೆ? ಪ್ರಜಾಪ್ರಭುತ್ವವೆ?

ಅಖಿಲ ಭಾರತೀಯ ಘಟನಾ ಸಮಿತಿಯಲ್ಲಿ ಪಂಡಿತ ಜವಾಹರಲಾಲ ನೆಹರು ಒಂದು ಗೊತ್ತುವಳಿಯನ್ನು ಮಂಡಿಸಿ ಭಾರತದ ಗುರಿ ಪ್ರಜಾಪ್ರಭುತ್ವವೆಂದು ಸಾರಿದರು. ಈ ದೃಷ್ಟಿಯಿಂದ ಆ ಗೊತ್ತುವಳಿಯ ಮುಖ್ಯ ಭಾಗವು ಹೀಗಿದೆ:

> This constituent Assembly declares its firm and solemn resolve to proclaim India as an Independent sovereign Republic and to draw up for her future governance a constitution,
>
> Wherein all powr of authority of the sovereign Independent India its constituent parts and organs of government are derived from the people and.
>
> Wherein shall be guaranteed and secured to all the people of India justice social, economic and political equality of status of opportunity and before the law, freedom of thought, expression, belief, faith, worship, vocation, association and action, subject to law and public morality and,
>
> Wherein adequate safeguards shall be provided for minorities, backward and tribal areas and other backward classes.......
>
> This anciant land attain its rightful and honoured place in the world and make its full and willing contribution to the promotion of world peace and welfare of mankind.

ಈ ಸಂಕಲ್ಪರೂಪಿಯಾದ ಗೊತ್ತು ಎಲ್ಲರ ಒಪ್ಪಿಗೆಯನ್ನು ಪಡೆದು ಘಟನಾಸಮಿತಿಯಲ್ಲಿ ಮಾನ್ಯವಾಯಿತು. ಇದರಲ್ಲಿರುವ Independent Republic ಎಂಬ ಶಬ್ದ ಸಮುಚ್ಚಯವು ಬಹಳ ಮಹತ್ವದ್ದಿದೆ. ಇದರ ಅರ್ಥವು ಸ್ವತಂತ್ರ ಪ್ರಜಾಪ್ರಭುತ್ವದ ರಾಜ್ಯವೆಂದಿದೆ. ಆ ನಿರ್ಣಯದಲ್ಲಿ 'ಪ್ರಜಾಪ್ರಭುತ್ವ'ವು ತಮ್ಮ ಗುರಿ ಎಂದಿಷ್ಟೇ ಹೇಳದೆ, ಮುಂದೆ ಪ್ರಜಾಪ್ರಭುತ್ವದ ಎಲ್ಲ ಅಧಿಕಾರಗಳ ಉಗಮವು ಪ್ರಜೆಗಳಲ್ಲಿಯೆ ಇದೆಯೆಂಬ ಮಾತನ್ನೂ

ಸ್ಪಷ್ಟೀಕರಿಸಲಾಗಿದೆ. (wherin all power of authority .... derived from the people) ಮತ್ತು ಎಲ್ಲರಿಗೂ ಸಾಮಾಜಿಕ, ರಾಜಕೀಯ, ಆರ್ಥಿಕ, ನ್ಯಾಯನೀತಿಗಳಲ್ಲಿ ಸಮಾನ ಹಕ್ಕುವುಂಟೆಂಬುದನ್ನು ಸಾರಲಾಗಿದೆ. ಪ್ರತಿಯೊಬ್ಬರಿಗೂ ವಿಚಾರಸ್ವಾತಂತ್ರ್ಯವಿದೆ. ಉಚ್ಚಾರಸ್ವಾತಂತ್ರ್ಯವಿದೆ; ಧಾರ್ಮಿಕ ಸ್ವಾತಂತ್ರ್ಯವಿದೆ-ಆಚಾರ ಸ್ವಾತಂತ್ರ್ಯವಿದೆ (ಆದರೆ ಈ ಸ್ವಾತಂತ್ರ್ಯವು ಸಾರ್ವಜನಿಕ ಹಿತಕ್ಕೆ ಅವಿರೋಧಿಯಾಗಿರತಕ್ಕದ್ದು) ಎಂಬ ಮಾತನ್ನು ಅಲ್ಲಿ ವಿಶದೀಕರಿಸಿದೆ.

ಅಲ್ಪಸಂಖ್ಯಾಕರಾದ ಹಿಂದುಳಿದವರಿಗೂ, ತಂಡಗಳ ಪ್ರದೇಶಗಳಿಗೂ, ಹರಿಜನರೇ ಮೊದಲಾದ ದಲಿತ ವರ್ಗಕ್ಕೂ ಆವಶ್ಯಕವಾದ ಸಂರಕ್ಷಣೆಯನ್ನು ಕೊಡಲಾಗುವದೆಂದೂ ಆಶ್ವಾಸನವನ್ನೀಯಲಾಗಿದೆ. ಇಂತೀ ಪ್ರಜಾಪ್ರಭುತ್ವವು ನಮ್ಮ ಗುರಿ. ಇದು ನಿಜವಿದ್ದರೆ, ಇದಕ್ಕನುಗುಣವಾಗಿ ಇಂದಿನ ನಮ್ಮ ಸಮಾಜರಚನೆಯಲ್ಲಿ ಆಮೂಲಾಗ್ರವಾದ ಬದಲಾವಣೆಯು ಅವಶ್ಯವಾಗಿಲ್ಲವೆ? ಏಕೆಂದರೆ, ಪ್ರಜಾಪ್ರಭುತ್ವವು ನಿಜವಾಗಿಯು ನಮ್ಮ ರಾಷ್ಟ್ರದ ಧ್ಯೇಯವಾಗಿದ್ದರೆ ನಮ್ಮ ನಾಡಿನ ಪ್ರತಿಯೊಬ್ಬರಲ್ಲಿಯೂ 'ಇಲ್ಲಿ ಹುಟ್ಟಿ, ನೆಲಸಿದ ತಾವೆಲ್ಲ ಸಮಾನಸ್ಕಂಧರು,' ಎಂಬ ಮಾತನ್ನು ಒಪ್ಪಿಕೊಂಡು ಆ ಆಶಯದ ಆತ್ಯಂತಿಕವಾದ ನಂಬುಗೆಯು ನೆಲೆಗೊಳ್ಳಲೇಬೇಕು. ಹೀಗೆ ನಂಬಿಕೆ, ನೆಚ್ಚಿಕೆ ಇಲ್ಲದ ದೇಶವು ಪ್ರಜಾಪ್ರಭುತ್ವಕ್ಕೆ ಎಂದೂ ತಕ್ಕುದಾಗಲಾರದು.

ಈ ಗಳಿಗೆಯಲ್ಲಂತೂ ನಮ್ಮ ನಾಡಿನಲ್ಲಿ ವೈಯಕ್ತಿಕ ಗುಣ-ಶಕ್ತಿಗಳಿಂದ ಅವರವರು ಮೇಲು ಕೀಳೆಂಬ ಭಾವನೆಯನ್ನುಂಟುಮಾಡಿಕೊಂಬ ವಾಡಿಕೆಗಿಂತ ಅವರವರ ಜಾತಿಯಿಂದ, ಧರ್ಮದಿಂದ, ಹುಟ್ಟಿನಿಂದ ಅವರ ಮೇಲ್ಮೆ ಅಥವಾ ಕೀಳ್ಮೆಯು ನಿರ್ಧರಿಸಲ್ಪಡುವ ಇಂದಿನ ದಿನದ ರೂಢಿಯೆ ಹೆಚ್ಚಾಗಿದೆ. ಇದು ಪ್ರಜಾಪ್ರಭುತ್ವದ ಮೂಲತತ್ವಕ್ಕೇ ತೀರ ವಿರೋಧ.

ಅಸಹಕಾರದ ಆಂದೋಲನದ ಆರಂಭದ ಉಕ್ಕು, ಅದರೊಡನೆ ಕಿಲಾಫತ್ ಚಳವಳಿಯೂ ಸೇರಿಕೊಂಡಿತ್ತು. ಮಹಾತ್ಮಾಜಿಯವರೊಡನೆ ಮಹಮ್ಮದ ಅಲ್ಲೀ ಬಂಧುಗಳೂ ಕೂಡಿಕೊಂಡು ಏಕಜೀವರಾಗಿ ಆಸೇತು ಹಿಮಾಚಲ ಕಾರ್ಯಮಾಡಿದರು. ಮಹಾತ್ಮಾ ಗಾಂಧಿಜೀ ಮತ್ತು ಮಹಮ್ಮದ ಅಲ್ಲೀಬಂಧುಗಳೊಳಗಣ ಪ್ರೀತಿ ವಿಶ್ವಾಸಗಳನ್ನು ಕಂಡು ಲೋಕವೆ ಕೌತುಕಬಡುತ್ತಿದ್ದಿತು. ಇವರು ಮೂವರ ಒಡಲು ಬೇರೆಯಾದರೂ ಜೀವವೊಂದೇ ಎಂಬಂತೆ ಅವರ ಹೊರಗಿನ ನಡೆನುಡಿಗಳಾಗಿದ್ದುವು. ಇಂತಹ ಕಾಲದಲ್ಲಿ ಒಬ್ಬನು ಒಮ್ಮೆ ಮೌ. ಮಹಮ್ಮದ ಅಲ್ಲಿಯವರಿಗೆ ಒಂದು ಪ್ರಶ್ನೆ ಕೇಳಿದನು: ನಿಮ್ಮ ಮತ್ತು ಮಹಾತ್ಮಾಜಿಯವರ ಹಿರಿಮೆಯನ್ನೂ ನೀವು ಅರಿತು ಒಪ್ಪಿದ್ದೀರಿತಿ. ಆದರೆ, ಸಾಮಾನ್ಯ ಕಿರುಕುಳ ಒಬ್ಬ ಮಹಮ್ಮದೀಯ ಮತ್ತು ಮಹಾತ್ಮಾಜಿ ಇವರಲ್ಲಿ ನಿಮ್ಮ ಧಾರ್ಮಿಕ ದೃಷ್ಟಿಯಿಂದ ಯಾರು ಹೆಚ್ಚಿನವರೆಂದು ಬಗೆಯುವಿರಿ? ಎಂದು ಕೇಳಿದ ಪ್ರಶ್ನೆಗೆ ಮೌ. ಮಹಮ್ಮದಲ್ಲಿಯವರು ಏನೆಂದು ಉತ್ತರವಿತ್ತರು ಗೊತ್ತೆ? ಎಂತಹ ಕೀಳು ಮಹಮ್ಮದೀಯನಾದರೂ ಆತನ ಜೀವದ ಯೋಗ್ಯತೆ ಮ. ಗಾಂಧೀಜಿಯವರಿಗಿಂತಲೂ ಯಾವಾಗಲೂ ಹೆಚ್ಚಿನದೆ ಆಗಿದೆ!'

ಶ್ರೀ. ಮಹಮ್ಮದ್ ಅಲ್ಲಿಯವರು ಬರಿ ಒಬ್ಬ ಮೌಲಾನಾ ಅಷ್ಟೇ ಆಗಿದ್ದರೆ ಈ ಉತ್ತರದ ಬಗೆಗೆ ಯಾರಿಗೂ ಸೋಜಿಗಪಡಬೇಕಾಗಿದ್ದಿಲ್ಲ. ಬ್ರಾಹ್ಮಣರೊಳಗಿನ ಭಟ್ಟರೂ ಆಚಾರ್ಯರೂ, ಅದರಂತೆ ಉಳಿದ ಪ್ರತಿಯೊಂದು ಜಾತಿಯೊಳಗಿನ ಧರ್ಮಮಾರ್ತಾಂಡರೂ ಹೀಗೆಯೆ ದೃಢವಾಗಿ ನಂಬಿರುವುದನ್ನು ಕಾಣಬಹುದಾಗಿದೆ. ಆದರೆ ಶ್ರೀ. ಮಹಮ್ಮದ್ ಅಲ್ಲಿಯವರು ಬರಿ ಮೌಲಾನಾಧರ್ಮ ಮಾರ್ತಾಂಡರಾಗಿದ್ದಿಲ್ಲ. ಅವರು ಇಂಗ್ಲೆಂಡಿನಲ್ಲಿ ಅಲ್ಲಿಯ ವಿದ್ಯೆಯ ಆಗರವಾದ ಕೆಂಬ್ರಿಡ್ಜ್‌ನಲ್ಲಿ ನಿಂತು ಅಭ್ಯಾಸಮಾಡಿದವರು. ಕೊನೆಗೆ ಬ್ಯಾರಿಷ್ಟರ್ ಪದವಿಯನ್ನೂ ಪಡೆದವರು. ಅದ್ಯ ಯಾವತ್ ಆಧುನಿಕ ವಿದ್ಯಾಪರಿಣತರಾಗಿ ಭಾರತಕ್ಕೆ ಮರಳಿದವರು-ಇಂತಹರಲ್ಲಿ ಈ ಬಗೆಯ ಮೂಲಭೂತ ವೈಷಮ್ಯದ ಭಾವನೆಯು ಬೇರೂರಿಕೊಂಡು ಹೀಗೆ ಬೆಳೆದುದು ಗೋಚರವಾಗಬೇಕೆ! ತಮ್ಮ ವಿಶಿಷ್ಟ ಪಂಥದ ಒಬ್ಬ ಕಿರುಕುಳನು-ಹೀನನೂ ಕೂಡ ಬೇರೆ ಮತೀಯ ಗಣ್ಯವ್ಯಕ್ತಿಗಿಂತ ಆಧ್ಯಾತ್ಮಿಕ ದೃಷ್ಟಿಯಿಂದ ಶ್ರೇಷ್ಠನೆಂದು ಬಗೆಯುವ ಈ ಚಟವು ಭಾರತೀಯ ಪ್ರತಿಯೊಂದು ಜಾತಿ, ಧರ್ಮಗಳಲ್ಲೂ

ಹುದುಗಿಕೊಂಡಿರುವುದನ್ನು, ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರಿಸಿದರೆ, ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಮೌ. ಮಹಮ್ಮದ್ ಅಲ್ಲಿಯವರೊಬ್ಬರೆ ಇಂಥ ವ್ಯಕ್ತಿಯಲ್ಲ. ಆಂಗ್ಲವಿದ್ಯಾವಿಭೂಷಿತರಾಗಿದ್ದೂ. 'ತಮ್ಮ ಧರ್ಮ, ಜಾತಿಯೊಂದೇ ಶ್ರೇಷ್ಠ; ಉಳಿದುವು ಕನಿಷ್ಠ'ವೆಂದು ದೃಢವಾಗಿ ನಂಬಿರುವ ಬೇಕಾದಷ್ಟು ಹಿಂದೂ ಜನಗಳನ್ನೂ ಕಾಣಬಹುದಾಗಿದೆ. ಇಷ್ಟೇ ಅಲ್ಲ, ತಮ್ಮ ಶಿಕ್ಷಣ, ಬುದ್ಧಿವಂತಿಕೆಗಳನ್ನೆಲ್ಲ ಉಪಯೋಗಿಸಿ. ತಾವು ಹುಟ್ಟಿಬಂದ ಜಾತಿಯೇ ಹಿರಿದು, ತಮ್ಮ ಮನೆತನದ ಧರ್ಮವೇ ಜಗತ್ತಿನಲ್ಲಿ ಹೆಚ್ಚಿನದು, ತಮ್ಮ ಮತದ ಸ್ಥಾಪಕ, ಪುನರುದ್ಧಾರಕ ಆಚಾರ್ಯ ಅಥವಾ ವಿಭೂತಿಯೊಬ್ಬರೇ ಸರ್ವಜ್ಞರು, ತ್ರಿಕಾಲಜ್ಞಾನಿಗಳು; ಎಂದು ವಕೀಲಿಯ ನಾನಾಬಗೆಯ ಹಂಚಿಕೆ, ವಾದಸರಣಿಗಳನ್ನು ಉಪಯೋಗಿಸಿ ಸಿದ್ಧಮಾಡುವ ವ್ಯಾಪಾರದಲ್ಲಿ ಅವರು ಧನ್ಯತೆಯನ್ನು ಪಡೆದುಕೊಳ್ಳುತ್ತಿರುವುದನ್ನು ನೋಡಲು ಸಿಕ್ಕುತ್ತದೆ.

ನಮ್ಮ ದೇಶದ ಸಮಾಜದಲ್ಲೆಲ್ಲ ಇದೇ ಬಗೆಯ ಮನೋವೃತ್ತಿಯ ಜನಗಳೇ ಹೆಚ್ಚಾಗಿ ತುಂಬಿಕೊಂಡಿದ್ದರೆ 'ಪ್ರಜಾಪ್ರಭುತ್ವವು' ನಮ್ಮ ನಾಡಿನಲ್ಲಿ ಬೇರು ಹಿಡಿವ ಆಶೆಯೆಲ್ಲಿ? ಜನ್ಮದಿಂದ ಜಾತಿಗಳು ಮತ್ತು ಪ್ರಜಾಪ್ರಭುತ್ವವು ಪರಸ್ಪರ ಅಸಂಬದ್ಧ. ಪ್ರಜಾಪ್ರಭುತ್ವವು ಸ್ಥಾಪಿತವಾಗಿಬೇಕಾಗಿದ್ದರೆ ಹುಟ್ಟಿನಿಂದ ಬರುವ ಜಾತಿ, ಧರ್ಮಗಳು ಅಳಿಯಲೇಬೇಕು. ಯಾರೊಬ್ಬರಿಗೆ ಅವರ ಹುಟ್ಟಿನಿಂದಲೇ ಯಾವುದೊಂದು ಜಾತಿ, ಧರ್ಮವು ಅಂಟಿಕೊಂಡು ಅವರಿಗೆ ಆ ಬಗೆಯಲ್ಲಿ ಮೇಲಿನ ಅಥವಾ ಕೆಳಗಿನವನೆಂಬ ಸ್ಥಾನವು ದೊರೆಯುವುದೇ ಸರಿಯೆಂದು ನಮ್ಮ ದೃಢವಾದ ನಂಬುಗೆಯಿದ್ದರೆ ನಾವು ಪ್ರಜಾಪ್ರಭುತ್ವವನ್ನು ನಮ್ಮ ಗುರಿಯೆಂದು ಹೇಳುವುದು ಯುಕ್ತ. ಪ್ರಜಾಪ್ರಭುತ್ವವು ತಮ್ಮ ಗುರಿಯೆಂದು ಒಪ್ಪಿ ಮತ್ತೆ ಒಳಗೊಳಗೇ ತಮ್ಮ ಜಾತಿಭೇದಗಳನ್ನು ಪುಟಗೊಳಿಸುವ ಮನುಷ್ಯರು ವಂಚಕರೆಂದೇ ಹೇಳಬೇಕಾಗುತ್ತದೆ. ನಮ್ಮಲ್ಲಿ ಅನೇಕರಿಗೆ ತಾವು ಆಡುವ ಮಾತಿನ ಅರ್ಥವು ಅದರ ಮುಂದಿನ ಉಪಸಿದ್ಧಾಂತಗಳ ತೊಡಕುಗಳು ಗೊತ್ತಾಗದೆ, ಅವರು ಪತ್ರಿಕೆಗಳಲ್ಲಿ ಓದಿದ ಅಥವಾ ಹಿರಿಯ ಮುಖಂಡರು ಆಡಿದ ಮಾತುಗಳನ್ನು ಗಿಳಿಯಂತೆ ಉಸುರುತ್ತಿರುತ್ತಾರೆ. ತಿಳಿಗೇಡಿಗಳಾದ ಪ್ರಾಮಾಣಿಕ ಪ್ರಾಣಿಗಳ ವರ್ಗವು ಇದೊಂದು. ಪ್ರಜಾಪ್ರಭುತ್ವಕ್ಕೆ ಒಪ್ಪಿಕೊಂಡುದರ ಹೊಣೆಯೇನೆಂಬುದರ ಅರಿವೇ ಈ ಜನಕ್ಕಿರುವುದಿಲ್ಲ. ಈ ಕಾರಣದಿಂದಲೆ ಪ್ರತ್ಯಕ್ಷ ಹೊತ್ತುಬಂದಾಗ ಇವರು ವಿಪರೀತವಾಗಿ ನಡೆದುಕೊಳ್ಳುವುದು ಕಂಡುಬರುತ್ತದೆ.

ಆದಕಾರಣ, ಇಂದು ತಿಳುವಳಿಕೆ ಬಂದ ಪ್ರತಿಯೊಬ್ಬ ಗೃಹಸ್ಥನು ಮೊದಲು ತನ್ನ ಹೃದಯಪರೀಕ್ಷೆ ಮಾಡಿಕೊಂಡು ನೋಡುವುದು ಕರ್ತವ್ಯವಾಗಿದೆ. ಪಂಡಿತ ಜವಾಹರಲಾಲ ನೆಹರು ಮತ್ತು ಮಹಾತ್ಮಾಗಾಂಧೀಜಿಯವರು, ಪ್ರಜಾಪ್ರಭುತ್ವವು ನಮ್ಮ ರಾಷ್ಟ್ರದ ಗುರಿಯೆಂದು ಹೇಳಿದ್ದು ನಿಜ. ಆದರೆ, ಆ ಮಾತು ತನಗೆ ಒಪ್ಪಿಗೆಯೇ? ಒಪ್ಪಿಗೆಯಾದರೆ ತಮ್ಮ ಪರಂಪರಾಗತ ಭಾವನೆಗಳನ್ನೆಲ್ಲ ಬದಲಿಸಿಕೊಳ್ಳಲು ಮನಸ್ಸು ಸಿದ್ಧಪಡಿಸಿಕೊಳ್ಳಬೇಕು. ಹೀಗೆ ಮನಸ್ಸನ್ನು ಕ್ರಮವಾಗಿ ನಿಶ್ಚಿತವಾಗಿ ತಿದ್ದಿಕೊಳ್ಳಲು ಸಮಾಜವು ಅಣಿಯಾಗದಿದ್ದರೆ ಅಥವಾ ಸಮಾಜವನ್ನು ಅಣಿಮಾಡದಿದ್ದರೆ 'ಪ್ರಜಾಪ್ರಭುತ್ವವೇ ನಮ್ಮ ಗುರಿ' ಎಂದು ಮಾಡಿದ ಸಂಕಲ್ಪವು ಬರಿ ಕಾಗದದ ಮೇಲಣ ಎಣಿಕೆಯಾಗಿ ಉಳಿಯದೆ ಇರಲಾರದು. ಇಂದು ಮೇಲಿನ ಜಾತಿಧರ್ಮದವರೆಂದು ಹೇಳಿಕೊಳ್ಳುವ, ಅಥವಾ ಹಾಗೆ ಭಾವನೆಯಿರುವ ಸಮಾಜದವರು ಪ್ರಜಾಪ್ರಭುತ್ವದ ತತ್ವವನ್ನು ಒಪ್ಪಿಕೊಂಡೊಡನೆ ಜಾತಿಯಿಂದ, ಹುಟ್ಟಿನಿಂದ ಇಲ್ಲವೆ ಧರ್ಮದಿಂದ ದೊರೆವ ಅನಾಯಾಸವಾದ ಶ್ರೇಷ್ಠತೆ, ಮಾನ ಮಾನ್ಯತೆಗಳನ್ನೆಲ್ಲ ತೊರೆಯಲು, ಸಿದ್ಧರಾಗ ಬೇಕಾಗುತ್ತದೆ. ಹುಟ್ಟಿನಿಂದ ಯಾರೂ ಹೆಚ್ಚಿನವರಲ್ಲ. ಅವರವರು ಸಂಪಾದಿಸುವ ಶಿಕ್ಷಣ, ಸಂಸ್ಕೃತಿಗಳ ಹಿರಿಮೆಯ ಮೇಲೆಯೆ ಆ ವ್ಯಕ್ತಿಯ ಮೇಲು-ಕೀಳುಗಳು ಅವಲಂಬಿಸಿವೆ, ಎಂಬ ಮಾತನ್ನು ಸಮಾಜದಲ್ಲಿ ಜನಸಾಮಾನ್ಯರಿಗೆಲ್ಲ ಚೆನ್ನಾಗಿ ಮನದಟ್ಟಾಗುವಂತೆ ತಿಳಿಸುವುದು ಅವಶ್ಯವಾಗಿದೆ. ಪ್ರಜಾಪ್ರಭುತ್ವವನ್ನು ಬರಮಾಡಿಕೊಳ್ಳಲಲು ಅತ್ಯಂತ ಆವಶ್ಯಕವಾದ ಪ್ರಾಥಮಿಕ ಶಿಕ್ಷಣವು ಇದೇ ಆಗಿದೆ.

ಆದಕಾರಣ, ಪ್ರಜಾಪ್ರಭುತ್ವವೇ ನಮ್ಮ ಗುರಿಯಾಗಿದ್ದಲ್ಲಿ ಜಾತಿ, ಧರ್ಮಗಳ ಹೆಸರಿನ ಸಂಬಂಧ ಹಚ್ಚಿ ನಡೆಸುವ ಸಾರ್ವಜನಿಕ ಯಾವ ಪ್ರಯತ್ನಗಳಿಗೂ ತಮ್ಮ ನೆರವನ್ನೀಯಲಾಗದು. ಅಲ್ಲದೆ, ಇಂತಹ ಪ್ರಯತ್ನಗಳಿಂದ

ಸಾಮಾಜಿಕ ಸಮಭಾವನೆಗೆ ಅಡ್ಡಿಯಾಗುತ್ತಿದ್ದಲ್ಲಿ ಅವನ್ನು ವಿರೋಧಿಸಿ, ತಡೆದು ನಿಲ್ಲಿಸುವುದೂ ಸರಕಾರದ ಕರ್ತವ್ಯವಾಗಿದೆ. ಉದಾಹರಣಾರ್ಥವಾಗಿ, ಇಂದು ನಡೆದಿರುವ ಜಾತೀಯ ವಿದ್ಯಾರ್ಥಿಗಳ ವಸತಿಗೃಹಗಳ ಒಂದು ಮಾತನ್ನೇ ನೋಡಬಹುದು. ಇಂತಹ ವಸತಿಗೃಹಗಳಲ್ಲಿ ಇರಬೇಕಾಗುವ ವಿದ್ಯಾರ್ಥಿಗಳಿಗೆ ಅವರ ಆ ವಿಶಿಷ್ಟವಾದ ಜಾತಿ, ಧರ್ಮವೇ ಮಿಗಿಲಾದುದು ಎಂಬ ಬೋಧನೆಯು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ನಡೆಯದೆ ಇರದು. ಈ ಬಗೆಯ ವಾತಾವರಣದಲ್ಲಿ ಬೆಳೆದ ತರುಣರಿಗೆ ಭಿನ್ನಮತೀಯ ಒಳ್ಳೆಯ ಗೆಳೆಯರ ಸಂಗತಿ ಸಹವಾಸಗಳ ಲಾಭವು ಸಾಕಷ್ಟು ದೊರೆಯಲು ಅಷ್ಟು ಆಸ್ಪದವು ಉಳಿಯುವುದಿಲ್ಲ. ಇದರಿಂದ ಆ ತರುಣರು ಏಕಾಂತಿಕ ವಿಚಾರಿಗಳಾಗುವ ಸಂಭವವಿದೆ. ದೊಡ್ಡವರಾದ ಬಳಿಕ ಅವರಲ್ಲಿ ಉಳಿದ ಧರ್ಮ, ಜಾತಿಗಳ ಬಗೆಗೆ ವಿಶೇಷ ಸಹಾನುಭೂತಿ ಉಂಟಾಗುವ ಪ್ರಸಂಗವು ಬಂದರೂ ಆಗ ಅವರು ಒಂದು ಬಗೆಯ ಧರ್ಮಸಂಕಟಕ್ಕೆ ಒಳಗಾಗುತ್ತಾರೆ. ತಮ್ಮನ್ನು ಚಿಕ್ಕಂದು ಪೋಷಿಸಿ ಶಿಕ್ಷಣ ಕೊಟ್ಟ ಜಾತಿಗೆ ತಾನು ಹೆಚ್ಚು ಒಲೆಯದಿರುವುದು ಕೃತಜ್ಞತೆಯ ಲಕ್ಷಣವೆ? ಎಂಬ ವಿಚಾರವು ಆಗಾಗ ತೊಂದರೆಗೆ ಈಡುಮಾಡುವುದು.

ಹೀಗಾಗಿ ವಿಶಿಷ್ಟ ಜಾತೀಯ ಶಿಕ್ಷಣ ಸಂಸ್ಥೆಗಳಿಂದ ನೆರವನ್ನು ಪಡೆದವರು, ಮುಂದಿನ ತಮ್ಮ ಜೀವನದಲ್ಲಿ ತೀರ ನಿಷ್ಪಕ್ಷಪಾತಿಗಳಾಗಿ ತಮ್ಮದಲ್ಲದ ಇನ್ನೂ ಒಂದು ಮತದವರ ವಿಶ್ವಾಸದ ಮುಂದಾಳಾಗಿ ಬೆಳೆಯಲು ಬಹಳ ಕಷ್ಟವಾಗುತ್ತದೆ, ಒಂದು ಮತದವನು ಇನ್ನೊಂದು ಮತದ ಸಮಾಜದ ಮುಂದಾಳುಗಳಾಗಿರುವ ಉದಾಹರಣೆಗಳು ತೀರ ವಿರಳವಾಗಿರುವುದೇ ನನ್ನ ಮಾತಿನ ಸತ್ಯತೆಯ ಸಾಕ್ಷಿಯಾಗಿದೆ. ಆದುದರಿಂದ, ಇಂತಹ ಸಂಘ ಸಂಸ್ಥೆ, ಸಮಿತಿಗಳು ನಮ್ಮ ನಾಡಿನ ಪ್ರಜಾಪ್ರಭುತ್ವದ ಗುರಿಯನ್ನು ಮುಟ್ಟಲು ಅಡ್ಡಿಯನ್ನುಂಟುಮಾಡುವ ಕಾಲ್ತೊಡಕುಗಳೆಂದು ಹೇಳದೆ ಗತಿಯಿಲ್ಲ. ಈ ಕಾರಣದಿಂದಲೆ ಇಂತಹವುಗಳನ್ನು ನಾಡಿನ ಏಳ್ಗೆಗೆ ಅನುಕೂಲವಾಗುವಂತೆ ಮಾರ್ಪಡಿಸಿಕೊಳ್ಳಬೇಕು. ಇಲ್ಲವಾದರೆ, ಅವನ್ನು ತಡೆದು ನಿಲ್ಲಿಸಬೇಕು. ಘಟನಾ ಸಮಿತಿಯು ಪ್ರಜಾಪ್ರಭುತ್ವವು ತನ್ನ ಗುರಿಯೆಂದು ಸಾರಿದ್ದಾಯಿತು. ಆದರೆ, ಇನ್ನು ಮುಂದಿನ ಕೆಲಸವೆ ಬಹಳ ಹಿರಿಯದಾಗಿದೆ. ಜನಾಭಿಪ್ರಾಯವನ್ನು ಈ ಗುರಿಗೆ ತಕ್ಕಂತೆ ಯೋಗ್ಯರೀತಿಯಲ್ಲಿ ಬದಲಿಸಿಕೊಳ್ಳುವುದಕ್ಕಾಗಿ ನಾಡಿನಲ್ಲೆಲ್ಲ ಹೊಸ ಚಳವಳವು ಆರಂಭವಾಗಬೇಕು. ಅದಕ್ಕಾಗಿ ಆವಶ್ಯಕವಾದ ಹೊಸ ಸಂಸ್ಥೆಗಳು ತಲೆದೋರಬೇಕು.

ಕಳೆದ ವರುಷ ಮೀರತ್ ಕಾಂಗ್ರೆಸ್ಸಿನ ಕಾಲಕ್ಕೆ 'ಜಾತಿವರ್ಗ ವಿನಾಶಕ ಪರಿಷತ್ತು' ಒಂದು, ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನೆರೆಯುವುದಿದ್ದಿತು. ಆದರೆ, ಹಿಂದೂ-ಮುಸಲ್ಮಾನರ ದೊಂಬಿಗಳಿಂದ ಉಂಟಾದ ಅನಿಶ್ಚಿತ ವಾತಾವರಣದ ಮೂಲಕ ಆ ಪರಿಷತ್ತು ಜರುಗಲಿಲ್ಲ. ಆದರು, ಶ್ರೀ ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷೀಯ ಭಾಷಣದ ಬಹುಭಾಗವು ಪತ್ರಿಕೆಗಳಲ್ಲಿ ಪ್ರಸಿದ್ಧವಾದುದನ್ನು ಅನೇಕ ಓದುಗರು ಓದಿರಲೂ ಸಾಕು.

ರಾಷ್ಟ್ರೀಯ ಮುಂದಾಳುಗಳು-ವಿಶೇಷವಾಗಿ ಮಹಾತ್ಮ ಗಾಂಧಿ, ಜವಾಹರಲಾಲ ನೆಹರು ಪ್ರಭೃತಿಗಳಿಗೆ ಇದರ ಸಂಪೂರ್ಣ ಅರಿವು ಇದೆ. ಈಗಿರುವಂತೆಯೆ, ಜಾತಿಬಂಧನದಲ್ಲಿ ನಮ್ಮ ಸಮಾಜವು ಸಿಕ್ಕಿಕೊಂಡಿರುವುದಾದರೆ ಪ್ರಜಾಪ್ರಭುತ್ವವು ಕೇವಲ ಕನಸೆಂಬುದನ್ನು ಅವರು ಬಲ್ಲರು. ಈ ಕಾರಣದಿಂದಲೇ ಮಹಾತ್ಮಾಜೀಯವರು ಜನ್ಮದಿಂದ ವರ್ಣಗಳೆಂಬ ತಮ್ಮ ಮೊದಲಿನ ಅಭಿಪ್ರಾಯವನ್ನು ಮಾರ್ಪಡಿಸಿಕೊಂಡಿದ್ದಾರೆ. ಹಿಂದೂಧರ್ಮದವರಲ್ಲಿ (ಹಳೆಯ ಸಂಪ್ರದಾಯದ ವಿರುದ್ಧ) ಬೇಕಾದವರು ತಮ್ಮ ಸಮಾನಸಂಸ್ಕೃತಿಯವರೊಡನೆ ಮದುವೆಯಾಗಬಹುದೆಂದು ಒಪ್ಪಿಗೆಯನ್ನಿತ್ತಿದ್ದಾರೆ. ಜನ್ಮದಿಂದ ವರ್ಣಗಳಲ್ಲ; ಗುಣಕರ್ಮಕ್ಕೆ ಅನುಸರಿಸಿ ವರ್ಣಗಳು ಎಂಬ ಮಾತೇ ಈಗ ಮುಂದೆ ಬಂದಿದೆ; ಬ್ರಾಹ್ಮಣ-ಅಬ್ರಾಹ್ಮಣ, ಸ್ಪೃಶ್ಯ-ಅಸ್ಪೃಶ್ಯವೆಂಬ ಭೇದವನ್ನು ತೊರೆದು ಯೋಗ್ಯ ವಧೂವರರಲ್ಲಿ ಹಿಂದುಗಳು ಮದುವೆ ನಡಸಬೇಕೆಂಬ ತತ್ವವನ್ನು ಈ ಮುಂದಾಳುಗಳೇ ಪ್ರತಿಪಾದಿಸಿ ಶಕ್ಯವಿದ್ದಲ್ಲಿ ಅದನ್ನು ನಡೆವಳಿಯಲ್ಲಿಯೂ ತಂದಿದ್ದಾರೆ. 'ಯುದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ'

ಗುರುವಿನಂತೆ ಶಿಷ್ಯ. ನಮ್ಮ ನಾಡಿನ ಮುಂದಾಳುಗಳು ಪ್ರಜಾಪ್ರಭುತ್ವಕ್ಕೆ ಆವಶ್ಯಕವಾದ ರೀತಿಯ ಮಾರ್ಪಾಟುಗಳನ್ನು ಈ ತೆರನಾಗಿ ತಮ್ಮ ನಡೆನುಡಿಗಳಲ್ಲಿ ಮಾಡಿಕೊಳ್ಳುತ್ತಿರುವುದೇ ನಾಳಿನ ನಮ್ಮ ಭಾಗ್ಯೋದಯದ ಪೂರ್ವಸೂಚನೆಯಾಗಿದೆ. ಹಿಂಬಾಲಿಗರಲ್ಲಿ ರೂಢಿಪರಂಪರೆಗಳ ಪ್ರಭಾವವು ಒಮ್ಮೆಲೆ ಕಡಿಮೆಯಾಗುವುದು ಕಷ್ಟ. ಆದರೂ ಮುಂದಾಳುಗಳ ಈ ನಡೆವಳಿಯು ನಾಡಿಗೆಲ್ಲ ಮೇಲ್ಪಂಕ್ತಿಯಾಗಿ ಅದು ಅವರ ಅನುಯಾಯಿಗಳ ಮೇಲೂ ಕ್ರಮವಾಗಿ ಪರಿಣಾಮವನ್ನು ಮಾಡದೆ ಇರಲಾರದು.

ಪ್ರಜಾಪ್ರಭುತ್ವದ ಯಶಸ್ಸಿಗೆ ವರ್ಣರಹಿತ, ವರ್ಗರಹಿತ ಸಮಾಜದ ಆವಶ್ಯಕತೆಯಿದೆ. ಆದುದರಿಂದ ಪ್ರಜಾಪ್ರಭುತ್ವವು ಭಾರತದ ಗುರಿಯೆಂಬುದು ನಿಜವಿದ್ದರೆ ವರ್ಣರಹಿತ, ವರ್ಗರಹಿತ ಸಮಾಜ ನಿರ್ಮಾಣಕ್ಕೆ ನೆರವಾಗುವುದು ಪ್ರತಿಯೊಬ್ಬ ಭಾರತ ಹಿತಚಿಂತಕನ ಕರ್ತವ್ಯವಲ್ಲವೆ? ಜನ್ಮದಿಂದ ಇರುವ ಜಾತಿಗಳನ್ನೂ ಉಳಿಸಿಕೊಂಡು ಪ್ರಜಾಪ್ರಭುತ್ವವನ್ನೂ ಬಯಸುವುದು ಅಸಂಗತ. ಇವುಗಳಲ್ಲಿ ಯಾವುದಾದರೂ ಒಂದು ಸಾಧ್ಯ. ಏಕೆಂದರೆ ಇವೆರಡೂ ಪರಸ್ಪರ ವಿಸಂಗತವಾಗಿವೆ. ಒಂದೊಂದು ಜಾತಿಯ ಹಿರಿಯರು ಸೇರಿ ಊರ 'ದೈವ' ದವರಾಗಿ, 'ಮಹಾಜನ'ರೆನಿಸಿ ಹಳ್ಳಿಗಳ ಆಡಳಿತ ನಡೆಯುತ್ತಿದ್ದ ಕಾಲವು ಹಿಂದೆ ಆಯ್ತು. ಜನ್ಮದಿಂದ ದೊರೆಕೊಳ್ಳುವ ಜಾತಿ ಮತ್ತು ಅದಕ್ಕೊಂದು ವಿಶಿಷ್ಟ ಬೆಲೆಯನ್ನು ಅಂದಿನ ಯುಗವು ದೈವದತ್ತವೆಂದು ನೆರೆನಂಬಿದ್ದಿತು. ಆದರೆ, ಆ ನಂಬುಗೆಯು ಆಧುನಿಕ ಶಾಸ್ತ್ರಜ್ಞರಿಗೆ ಮಾನ್ಯವಿಲ್ಲ; ಅದು ನಿರಾಧಾರವಾದ ಹುರುಳಿಲ್ಲದ ಶ್ರದ್ಧೆಯೆಂದು, ಇಂದಿನ ಯುಗವು ಅದನ್ನು ತಿರಸ್ಕರಿಸಿದೆ. ಹುಟ್ಟಿನಿಂದ ಕೆಲವೊಂದು ಗುಣವಿಶೇಷಗಳು ಪ್ರತಿಯೊಬ್ಬರಲ್ಲೂ ಹೆಚ್ಚುಕಡಿಮೆ ಪ್ರಮಾಣದಲ್ಲಿ ಇರುವುದು ನಿಜವಾದರೂ, ಪರಿಸ್ಥಿತಿ, ಶಿಕ್ಷಣ, ರಾಜಕೀಯ ಅನುಕೂಲತೆ ಮೊದಲಾದ ಕಾರಣಗಳಿಂದ ಯಾರಾಗಲಿ ತಮ್ಮ ಯೋಗ್ಯತೆಯನ್ನು ಅಂತಃಶಕ್ತಿಗಳನ್ನು, ವಿಕಾಸಗೊಳಿಸಿಕೊಳ್ಳಬಲ್ಲರು. ಆದುದರಿಂದ, ಕೇವಲ ಜನ್ಮದಿಂದಲೇ ಇಂತಹರು ಮೇಲು, ಇಂತಹರು ಕೀಳು ಎಂದು ಎಣಿಸುವುದು ಅಸಮರ್ಪಕವೆಂದು ಶಾಸ್ತ್ರ ಮತ್ತು ಅನುಭವದಿಂದ ಮನಗಂಡ ಮಾತಾಗಿದೆ. ಆದಕಾರಣ ಹುಟ್ಟಿನ ಮೇಲಿಂದಲೇ ಯಾರಿಗೂ ಹೆಚ್ಚಿನ ಬೆಲೆಕೊಡದೆ, ಮುಂದೆ ಸ್ವಪ್ರಯತ್ನದಿಂದ ಪಡೆದುಕೊಂಡ ಸಂಸ್ಕಾರ, ಮಾಡಿಕೊಂಡ ಶಕ್ತಿವಿಕಾಸಾದಿಗಳಿಂದಲೇ ವ್ಯಕ್ತಿಗಳ ಯೋಗ್ಯತೆಯನ್ನು ನಿರ್ಣಯಿಸಬೇಕೆಂಬುದು ಪ್ರಜಾಪ್ರಭುತ್ವದ ಸಿದ್ಧಾಂತವಾಗಿದೆ.

ಹಲವರು ಗುರುವರ್ಗದವರೆಂದು ಹುಟ್ಟಿನಿಂದಲೆ ಶ್ರೇಷ್ಠರೆಂಬ ಠೀವಿಯಲ್ಲಿ ಜನಸಾಮಾನ್ಯರ ಮೇಲೆ ಅಧಿಕಾರ ನಡಸುವ ಚಟವು ಅಲ್ಲಲ್ಲಿ ಕಂಡುಬರುತ್ತದೆ. ತಾವು ಶ್ರೀಮಂತರು, ಕುಲವಂತರು, ಮಠಸ್ಥರು, ಪಟ್ಟದವರು, ರಾಯರು, ಗೌಡರು, ಧನಿಯರು ಎಂದು ಮುಂತಾಗಿ ಹುಟ್ಟಿನಿಂದಲೇ ಪ್ರತಿಷ್ಠೆಯನ್ನು ಹಕ್ಕಿನಿಂದ ಕೇಳುವ ಆಢ್ಯರು ಊರೂರಿಗೆ ಉಂಟು. ಇವರೆಲ್ಲರೂ ಧರ್ಮರಾಜನು ಯಕ್ಷನ ಎದುರು ನಡೆದುಕೊಂಡ ಬಗೆಯನ್ನು ಗಮನಿಸಲಿ. ತಮ್ಮಂದಿರಲ್ಲಿ 'ನ-ಕುಲ'ನಿಗೆ ಜೀವದಾನಮಾಡಲು ಧರ್ಮನು ಯಕ್ಷನನ್ನು ಪ್ರಾರ್ಥಿಸಿಕೊಂಡನು. ಬಲಿಷ್ಠರಾದ ಭೀಮ, ಅರ್ಜುನರನ್ನಲ್ಲ. ನಿಜವಾಗಿ ತನ್ನ ತಾಯಮಕ್ಕಳನ್ನೇ ಜೀವಂತ ಮಾಡೆಂದು ಕೇಳಬೇಕಾಗಿತ್ತು! ನಮ್ಮ ನಾಡಿನ ಗುರುವರ್ಗದವರು-ಬ್ರಾಹ್ಮಣ, ಜಂಗಮ, ಯತಿ, ಸಿದ್ಧರು ಮೊದಲಾದವರು, ನಿಜವಾಗಿಯೆ ಧರ್ಮವಂತರಾಗಿದ್ದರೆ ಧರ್ಮರಾಯನಂತೆ ಇವರೂ ತಮ್ಮ 'ನ-ಕುಲ'ರನ್ನು ಮೊದಲು ಮೇಲೇಳಿಸಬೇಕಲ್ಲವೆ? 'ನ-ಕುಲನ' ಜೊತೆಗೆ (ಸಹ) ದೇವನು ಯಾವಾಗಲೂ ಇರುತ್ತಾನೆ. ಏಕೆಂದರೆ: ಇವರು ಅವಳಿ (ಜವಳಿ). ಪತಿತರು ದೀನರುಗಳ ಉದ್ಧಾರದಲ್ಲಿಯೆ ದೇವಸೇವೆಯಾಗುವುದೆಂದು ಸಂತಸಜ್ಜನರು ಹೇಳುವುದನ್ನು ವ್ಯಾಸರ 'ನ-ಕುಲ' ಮತ್ತು 'ಸಹ-ದೇವ'ರೆಂಬ ಅವಳಿಗಳ ಸಂಕೇತದಲ್ಲೂ ಮನಗಾಣಬಹುದು.

ಸಾಮಾಜಿಕ ಅಥವಾ ರಾಜಕೀಯ ಒಂದು ಮತದವರ ವಿರುದ್ಧ ಇನ್ನೊಂದು ಮತದವರನ್ನು 'ಛೂ' ಬಿಡುವುದಕ್ಕೆ ಹೊತ್ತಿನಲ್ಲಿ ಉಪಯೋಗವಾಗುವುದೆಂದು ಇಂದು ಹಲಕೆಲವರು ಪತಿತೋದ್ಧಾರದ ಕಾರ್ಯದಲ್ಲಿ ಮನಸ್ಸು ಹಾಕಿದ್ದಾರೆ. ಇದರಿಂದ ವರ್ಗಕಲಹ, ವರ್ಣದ್ವೇಷಗಳೇ ಹೆಚ್ಚಾಗುವುದಲ್ಲದೆ ದೇಶದ ಏಳ್ಗೆಯು ಸ್ವಲ್ಪವೂ ಆಗಲಾರದು. ವೈಯಕ್ತಿಕ ನಿಃಸ್ವಾರ್ಥತೆಯಷ್ಟೇ ಸಾಲದು; ಪಕ್ಷಪಂಗಡದ ಅಧಿಕಾರ ಲಾಲಸೆಯ ಲೋಭವೂ ಈ

ಕೆಲಸದಲ್ಲಿ ತೊಡಗಿದವರಿಗೆ ಸೋಂಕುವುದು ಅನಿಷ್ಟ. ಇನ್ನೊಬ್ಬ ತಾಯ ಮಗನಾದರೂ 'ನ-ಕುಲನು' ತನ್ನ ತಮ್ಮನು. ತನ್ನ ಉಳಿದ ಖಾಸ ತಮ್ಮಂದಿರಗಿಂತ ಆತನು ಎಳ್ಳಷ್ಟೂ ಕಡಿಮೆಯವನಲ್ಲ. ಆತನನ್ನೂ ಖಾಸ ತಮ್ಮಂದಿರಷ್ಟೇ ಅದೇಕೆ ಚಿಕ್ಕವನೆಂದು ಸ್ವಲ್ಪ ಹೆಚ್ಚೇ ಅಕ್ಕರೆಯಿಂದ ಕಾಣುವುದು ಅಣ್ಣನ ಧರ್ಮವಾಗಿದೆ; ಅಥವಾ ಧರ್ಮವಂತ ಅಣ್ಣನ ಕರ್ತವ್ಯವಾಗಿದೆ. ಈ ಬಗೆಯ ಬಂಧು ಭಾವ, ದಯೆ, ಅಂತಃಕರಣ, ಕರುಣೆ, ಪ್ರೀತಿಯೆ ಪತಿತೋದ್ಧಾರದ ಕಾರ್ಯಕ್ಕೆ ಪ್ರಚೋದಕ ಶಕ್ತಿಯಾಗಿದ್ದಷ್ಟೂ ಅದು ಪವಿತ್ರವಾದ ಪುಣ್ಯದ ಕೆಲಸವಾಗುವುದು. ಇದಕ್ಕೆ ಹೊರತಾದ ಬೇರೆ ಭಾವನೆಯಿಂದ ನಡೆದ ಪತಿತೋದ್ಧಾರದ ಕಾರ್ಯವು ದೊಡ್ಡ ಹೆಸರಿನಲ್ಲಿ ಕೇವಲ ಸ್ವಾರ್ಥಸಾಧನೆಗಾಗಿ ನಡಸಿದ ಅಕೃತ್ಯ.

ಬ್ರಿಟಿಶರು ತಮ್ಮ ಆಡಳಿತದಲ್ಲಿ ಧಾರ್ಮಿಕಸ್ವಾತಂತ್ರ್ಯ ಮತ್ತು ಅಲ್ಪಸಂಖ್ಯಾಂತರ ಸಂರಕ್ಷಣೆ ಹೆಸರಿನಲ್ಲಿ ನಮ್ಮ ದೇಶದೊಳಗೆ ಪ್ರಜಾಪ್ರಭುತ್ವಕ್ಕೆ ವಿಘ್ನಕಾರಿಯಾದ ಕೆಲವು ಸಂಪ್ರದಾಯಗಳನ್ನು ಆಚರಣೆಯಲ್ಲಿ ತಂದಿದ್ದಾರೆ. ಜಾತಿವಿಶಿಷ್ಟ ಮತದಾರರ ಸಂಘಗಳು ಮತ್ತು ಜಾತಿಗಳ ಹೆಸರಿನಲ್ಲಿ ಪ್ರಾತಿನಿಧ್ಯ ಇವರೆಡು ಪದ್ಧತಿಗಳೂ ಪ್ರಜಾಪ್ರಭುತ್ವದ ಮೂಲತತ್ವಕ್ಕೆ ಅರದಾಳ ಹಚ್ಚುತ್ತವೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಗುಣಕ್ಕೆ ಮನ್ನಣೆಯಲ್ಲದೆ ಜನ್ಮದಿಂದ ಬಂದ ಜಾತಿಗೆ ಸ್ಥಾನವೇ ಇಲ್ಲ. ಜಾತಿಜಾತಿಗಳಿಗೆ ಪ್ರಾತಿನಿಧ್ಯ ಕೊಡುವ ಆಮಿಷವನ್ನು ಹಚ್ಚಿದ್ದರಿಂದ ಪ್ರತಿಯೊಂದು ಪಂಗಡವೂ ಬ್ರಿಟಿಶ ಅಧಿಕಾರಿಗಳಲ್ಲಿ ಮೊರೆಯಿಟ್ಟು ತನ್ನ ಸಂರಕ್ಷಣೆಯನ್ನು ಕೇಳಿಕೊಳ್ಳಲಾರಂಭಿಸಿತು. ಹಿಂದೂ ಸಮಾಜದಿಂದ ತಾವು ಬೇರೆ; ನಮ್ಮದೊಂದು ಸ್ವತಂತ್ರ ಜಾತಿ, ಮತ, ಎಂದು ಮುಂತಾಗಿ ಸ್ಥಾಪಿಸಿಕೊಂಡರೆ ತಮಗೆ ವಿಶೇಷ ಪ್ರಾತಿನಿಧ್ಯವು ದೊರೆವ ಆಶೆಯು ತೋರಿ ಹಲವರ ಬಾಯಿಗೆ ನೀರು ಊರಿತು. ತಾವು ಶೀಖರು, ತಾವು ಜೈನರು, ತಾವು ವೀರಶೈವರು, ತಾವು ಅಸ್ಪೃಶ್ಯರು, ತಾವು ದಲಿತರು ಎಂದು ಮೊದಲಾಗಿ ಹೇಳಿಕೊಳ್ಳುವುದರಿಂದ ವಿಶೇಷ ಅಧಿಕಾರಸ್ಥಾನಗಳು, ಪ್ರಾತಿನಿಧಿತ್ವವು ದೊರೆಯಲಾರಂಭಿಸಿದ್ದನ್ನು ಕಂಡು ಹಾರುವರೆನಿಸಿಕೊಳ್ಳುವವರಲ್ಲಿ ಕೆಲವರು ತಾವು 'ಬ್ರಾಹ್ಮಣರಲ್ಲ;' ಏಕೆಂದರೆ ಸಾಮಾನ್ಯವಾಗಿ ಬ್ರಾಹ್ಮಣರೆಂಬ ವರಿಗಿಂತಲೂ ತಾವು ಬೇರೆ ಎಂದು ಮೆತ್ತಗೆ ಗೊಣಗುವ ದನಿಯೂ ಹೊರಡಲಾರಂಭಿಸಿತು.

ಇದೆಲ್ಲವೂ ಪ್ರಜಾಪ್ರಭುತ್ವದ ಮೂಲಕ್ಕೆ ಕೊಡಲಿಯ ಪೆಟ್ಟು. ಬ್ರಿಟಿಶರು ತಮ್ಮ ಸ್ವಾರ್ಥಕ್ಕಾಗಿ ಮುಸಲ್ಮಾನ ಮೊದಲಾದ ಜಾತಿಗಳಿಗೆ ವಿಶೇಷ ಹಕ್ಕು, ಪ್ರಾತಿನಿಧ್ಯ ಕೊಟ್ಟು ಕೆಲವು ಪಂಗಡಗಳ ಜಾತೀಯ ಸ್ವಾರ್ಥಬುದ್ಧಿಯನ್ನು ಬಲಿಸಿಟ್ಟಿದ್ದಾರೆ. ತಮಗೆ ದೊರೆತ ವಿಶೇಷ ಪ್ರಾತಿನಿಧ್ಯ, ಅನ್ಯಾಯದ ಹಕ್ಕುಗಳನ್ನು ಉಳಿಸಿಕೊಳ್ಳುವದಕ್ಕಾಗಿ ಇವರಲ್ಲಿ ತಮ್ಮ ಜಾತೀಯತೆಯನ್ನು ಕಾಯ್ದುಕೊಳ್ಳುವ ಚಪಲವು ತಲೆದೋರುತ್ತಿದ್ದರೆ ಸೋಜಿಗವಿಲ್ಲ. ಇದೇ ಬಗೆಯ ಒಂದು ಸ್ವಾರ್ಥಭಾವವು ಬ್ರಾಹ್ಮಣರನ್ನು ಬಾಧಿಸುತ್ತಲಿದೆ. ಗುಣಕ್ಕೆ ಮನ್ನಣೆಯನ್ನೀಯಬೇಕೆಂದು ತತ್ವವನ್ನು ಪ್ರತಿಪಾದಿಸಿ, ಗುಣಿಗಳೆಂದರೆ ಬ್ರಾಹ್ಮಣರೆ ಎಂಬ ಸಮೀಕರಣವನ್ನು ಮರುಮಾತಿನಲ್ಲಿ ಮೆಲ್ಲಗೆ ಹೇಳುತ್ತಾರೆ. ತಾವೇ ಬುದ್ಧಿವಂತರಾದುದರಿಂದ ಮಹತ್ವದ ಸ್ಥಾನಗಳು ತಮಗೇ ದೊರೆಯಬೇಕೆಂಬ ಹಿರಿಯಾಸೆ ಈ ಜನಕ್ಕೆ. ಇಂದಿನ ಬ್ರಾಹ್ಮಣರಿಗೆ 'ತಾವೇ ಬ್ರಾಹ್ಮಣರು' ಎಂಬ ಅರಿವು ಅವರನ್ನು ಬಾಧಿಸುತ್ತದೆ. ಬ್ರಾಹ್ಮಣ, ತಾನು ಶ್ರೇಷ್ಠ; ಧೀಮಂತ ಎಂಬ ಸುಪ್ತ ಸೂಕ್ಷ್ಮ ಅಹಂಕಾರವು, ಅವನನ್ನು ಉಳಿದ ಜನಸಾಮಾನ್ಯರೊಡನೆ ಒಂದುಗೂಡಲಿಕ್ಕೆ ಅಡ್ಡಿಯನ್ನುಂಟು ಮಾಡುತ್ತಿದೆ.

ಇಂದಿನ ಸಾಮಾಜಿಕ ತೊಡಕುಗಳಲ್ಲಿ ಇದೊಂದು ಅತಿ ವಿಚಿತ್ರವಾದ ಸಮಸ್ಯೆ. 'ತಾವು ಹಿಂದುಳಿದವರು, ಆದಕಾರಣ ತಮಗೆ ವಿಶೇಷ ಹಕ್ಕು, ಪ್ರಾತಿನಿಧ್ಯ, ನೌಕರಿ ದೊರೆಯಲೇಬೇಕು' ಎಂದು ಹೇಳುವ ಜನವು ಇದಕ್ಕಾಗಿ ಈ ಬಗೆಯಾದ ಹಕ್ಕು, ನೌಕರಿ ದೊರೆವ ವರೆಗೆ ತಮ್ಮ 'ಹಿಂದುಳಿತನ'ವನ್ನು ಬಿಡಲಾರದು. ಹಿಂದುಳಿದವರಿಗೆ ವಿಶೇಷ ಸವಲತ್ತು ಕೊಟ್ಟು ಮುಂದೆ ತರದಿದ್ದರೆ ಅವರು ಸುಧಾರಿಸಲಾರರು. ಔಷಧವೆಂದು ಕುಡಿಯುವುದಕ್ಕೆ ಆರಂಭಿಸಿದವನು ಕುಡಿತಕ್ಕೇ ಸವಿಗಲಿತು, ಬಳಿಕ, ಬೇನೆ ಹೋಗುವುದೇ ಬೇಡವೆಂದಂತೆ ಗಂಡಾಂತರದ್ದಾಗುವ ಹಾಗಿದೆ. ಈ ಸೂಕ್ಷ್ಮ ಧರ್ಮಸಂಕಟದೊಳಗಿಂದ ಪಾರಾಗುವ ದಾರಿಯು ಬಲು ಇಕ್ಕಟ್ಟಿನದಾಗಿದೆ.

ಗುಣಕ್ಕೆ ಮನ್ನಣೆಯನ್ನೀಯಬೇಕು, ಎಂಬ ತತ್ವಪ್ರಚಾರಕರು, ಪರ್ಯಾಯದಿಂದ ಬ್ರಾಹ್ಮಣ ಜಾತಿಯವರ ಸ್ವಾರ್ಥ ಸಾಧಿಸಿಕೊಳ್ಳುವುದಕ್ಕಾಗಿಯೇ ಹೂಡಿದ ಆಟವಿದು ಎಂಬ ಸಂದೇಹಕ್ಕೆ ಎಳ್ಳಷ್ಟೂ ಇಂಬು ದೊರೆಯದಂತೆ ತಮ್ಮ ನುಡಿವಳಿ, ನಡೆವಳಿಯನ್ನಿಡುವುದು ಅವರ ಕರ್ತವ್ಯವಾಗಿದೆ. ಜನ್ಮದಿಂದ ಬ್ರಾಹ್ಮಣ್ಯವು ಯಾರಿಗೂ ಪ್ರಾಪ್ತವಾಗುತ್ತಿರುವುದಿಲ್ಲ. ದ್ವಿಜತ್ವವು ಸಂಸ್ಕಾರದಿಂದ ಬರುವುದು ಎಂಬ ತತ್ವವನ್ನು ಇಂದಿನ ಜಾತಿಬ್ರಾಹ್ಮಣರು ಬೇಗನೆ ಒಪ್ಪಿಕೊಂಡಷ್ಟೂ ಲೇಸು. ಆಗಲೇ ಗುಣಕ್ಕೆ ಮರ್ಯಾದೆಯನ್ನೀಯಲು ಉಳಿದ ಸಮಾಜವು ನಿರಾತಂಕವಾಗಿ ಒಪ್ಪಿಕೊಳ್ಳುವುದು. ಹುಟ್ಟಿನಿಂದಲೇ ತಾವು ಬ್ರಾಹ್ಮಣರು ಎಂಬ ಹೆಮ್ಮೆಯು ಅಂಟಿಕೊಂಡಿರುವತನಕ ಗುಣಿಯಾಗಿದ್ದರೂ ಬ್ರಾಹ್ಮಣನೆಂಬುದರ ಸಲುವಾಗಿಯೇ ಆತನನ್ನು ಹಿಂದಿಕ್ಕಬೇಕೆಂಬ ಅಸೂಯೆಯ ಈರ್ಷೆಯು ಇನ್ನುಳಿದವರಲ್ಲಿ ತಲೆಯೆತ್ತುವುದು ಸಹಜವಾಗಿದೆ. ಹುಟ್ಟಿನಿಂದ ಎಲ್ಲರೂ ಸಮಾನರು, ವಿದ್ಯೆ, ಸಂಸ್ಕಾರ, ಸ್ವಾನುಭವಗಳಿಂದ ಮನುಷ್ಯನು ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬಲ್ಲನೆಂಬುದು ಪ್ರಜಾಪ್ರಭುತ್ವಕ್ಕೆ ಹೊಂದಿಕೆಯಾದ ಮಾತು. ಹುಟ್ಟಿನಿಂದಲೇ ಯಾರೂ ಹೆಚ್ಚಿನವರಲ್ಲ. ಈ ಬಗೆಯಾದ ಗ್ರಹಿಕೆಯು ಅಶಾಸ್ತ್ರೀಯ; ಸ್ವಾರ್ಥಸಾಧನೆಗಾಗಿ ಕೆಲವೊಂದು ವರ್ಗದವರು ಪೋಷಿಸಿಕೊಂಡು ಬಂದ ನಿರಾಧಾರವಾದ ಗ್ರಹಿಕೆ ಇದು.

ಇಂದಿನ ಜಾತಿಬ್ರಾಹ್ಮಣರದೂ ಒಂದು ವಿಸಂಗತವಾದ ವಿಚಾರಸರಣಿ. ತಾವು ಬ್ರಾಹ್ಮಣರೆಂಬ ಅಭಿಮಾನ ಇವರಿಗೆ. ಆದರೆ 'ಬ್ರಾಹ್ಮಣ' ಎಂದುಕೊಂಡೊಡನೆ ಕ್ರಮಪ್ರಾಪ್ತವಾದ ಬ್ರಾಹ್ಮಣ್ಯದ ಹೊಣೆಗಾರಿಕೆ ಮಾತ್ರ ಬೇಡ! ಬ್ರಾಹ್ಮಣ್ಯದ ಹೊಣೆಗಾರಿಕೆ ಒಲ್ಲದ ಬರಿ ಅಭಿಮಾನ, ದುರಭಿಮಾನ. ಅದು ಬ್ರಾಹ್ಮಣಿಕೆಯ ಕೊಬ್ಬು. (ಬ್ರಾಹ್ಮಣನು ಯಾರು? ಎಂಬ ಹೆಚ್ಚಿನ ವಿವರಗಳನ್ನು ಇನ್ನೊಂದೆಡೆಗೆ ಕೊಟ್ಟಿದೆ.) ಸತ್ಯಜ್ಞಾನಿಯಾಗಿ ತತ್ವನಿಷ್ಠನಾಗಿ ಲೋಕಕಲ್ಯಾಣಕ್ಕಾಗಿ ತನ್ನ ಜೀವನವನ್ನು ಸವೆಸುವುದು ಬ್ರಾಹ್ಮಣನ ಕರ್ತವ್ಯ. ಇದಕ್ಕೆ ಹೊರತಾದವರು ಬ್ರಾಹ್ಮಣರೇ ಅಲ್ಲವೆಂದು ವೇದ, ಉಪನಿಷತ್ತು, ಮಹಾಭಾರತಾದಿಗಳಿಂದ ನಿಃಸಂದಿಗ್ಧವಾಗಿ ಗೊತ್ತಾಗುತ್ತದೆ. ಬ್ರಾಹ್ಮಣರೆಂಬವವರೆಲ್ಲ ತತ್ವಚ್ಯುತರಾಗದೆ ಇದ್ದರೆ ನಮ್ಮ ಸಮಾಜಕ್ಕೂ, ದೇಶಕ್ಕೂ ಈ ಅಧೋಗತಿಯು ಬರುತ್ತಲೆ ಇದ್ದಿಲ್ಲ. ಇಂತಹ ತತ್ವನಿಷ್ಠ ಬ್ರಾಹ್ಮಣರನ್ನು ವಿರೋಧಿಸುವ ಸಾಹಸವು ಯಾರಿಂದಲೂ ಆಗುತ್ತಿದ್ದಿಲ್ಲ. ಹಾಗೆ ಯಾರಾದರೂ ಮದಾಂಧರಾಗಿ ಆ ಬ್ರಹ್ಮಸ್ವಾಪಹರಣಕ್ಕೆ ಮನಸ್ಸು ಮಾಡಿದರೆ ಕಪಿಲಋಷಿಯ ಮೇಲೆ ಏರಿಬಂದ ಸಗರಪುತ್ರರಂತೆ ಅವರು ಸ್ವಯಂದಗ್ಧರಾಗದೆ ಹೋಗರು. ಮೊನ್ನೆ ಮಹಾತ್ಮಾಜಿಯವರ ಕೊಲೆಯ ತರುವಾಯ ಆದ ಘಟನೆಗಳಿಂದ ಸಗರರ ನಾಶದ ಪೌರಾಣಿಕ ಕಥೆಯ ಸತ್ಯತೆಯನ್ನು ಮನಗಾಣಬಹುದಾಗಿದೆ. ಆ ಬಗೆಯ ಬ್ರಾಹ್ಮಣ ಘಾತದಿಂದುಂಟಾಗುವ ಪ್ರಳಯದಲ್ಲಿ ಯುಕ್ತಾಯುಕ್ತ ವಿವೇಕವು ಉಳಿಯುವುದಿಲ್ಲ. ಹಸಿದು ಒಣದೂ ಕೂಡಿಯೆ ಸುಡುವುದು.

ನಿಜವಾಗಿ ಬ್ರಾಹ್ಮಣನಿಗೆ ಬ್ರಾಹ್ಮಣತ್ವವು ಬಂದುದು ಆತನ ಶೀಲದಿಂದ; ಆತ್ಮಜ್ಞಾನಯುಕ್ತ ನಡೆವಳಿಯಿಂದ, 'ಸರ್ವಭೂತ ಹಿತದಲ್ಲಿರತನಾಗಿ' ಜೀವನಪಥದಲ್ಲಿ ಸಾಗಿದವನು ಲೋಕಪೂಜ್ಯನಾಗುವಲ್ಲಿ ಸಂದೇಹವೇನು? ರಾವಣ, ಜರಾಸಂಧಾದಿ ಲೋಕಕಂಟಕರು ಬ್ರಾಹ್ಮಣ ಪೀಡೆಗೆ ಮನಸ್ಸು ಮಾಡಿದಾಗ ಶ್ರೀರಾಮ, ಶ್ರೀಕೃಷ್ಣರಂತಹ ವೀರರು ಅವರು ರಕ್ಷಣೆಗೆ ತಾವಾಗಿಯೆ ಮುಂದೆ ಬರಲಿಲ್ಲವೆ? ಸೂರ್ಯನಿಗೆ ಸೂರ್ಯನೆನ್ನಲು ಒಲ್ಲದವನು ತಾನೇ ನಗೆಗೆ ಈಡಾಗುವನು. ಬೆಂಕಿಯೊಡನೆ ಚಿನ್ನಾಟವಾಡ ಹೋದಲ್ಲಿ ಅದು ಆತನ ಮೈಸುಡದೆ ಇರಲಾರದು. ಗುಣ-ಶೀಲವಂತರನ್ನು ನಾಮಾವಶೇಷ ಮಾಡುವುದು ಯಾರಿಂದಲೂ ಸಾಧ್ಯವಿಲ್ಲ. ಬ್ರಿಟಿಶ ಸರಕಾರದಂತಹ ಅಗಾಧ ಶಕ್ತಿಯ ಸಮ್ರಾಟರು ತಿಲಕ, ಮಹಾತ್ಮಾ ಗಾಂಧೀಜಿಯವರನ್ನು ಹುಡಿಗೂಡಿಸಲು ಹವಣಿಸಿ ತಾವೇ ಮಣ್ಣುಮುಕ್ಕಿದ್ದನ್ನು ನಾವೇ ನೋಡಿಲ್ಲವೆ? ಸತ್ಯಕ್ಕೆ ಸಾವಿಲ್ಲ. ಸತ್ಯಸಂಧರಾದವರನ್ನು ನಾಶಮಾಡುವುದಕ್ಕೆ ಪ್ರಯತ್ನಿಸುವವನೆ ಆತ್ಮನಾಶ ಮಾಡಿಕೊಳ್ಳುವನು. ಹೀಗೆ ಗುಣ-ಶೀಲದಲ್ಲಿ ಮೂಲಭೂತವಾಗಿರುವ ಅಂತಃಶಕ್ತಿಯಲ್ಲಿಯೆ ವಿಶ್ವಾಸವಿಲ್ಲದವರು ಬ್ರಾಹ್ಮಣರೆ ಅಲ್ಲ. ಏಕೆಂದರೆ ಗುಣ-ಶೀಲದಲ್ಲಿ ಶ್ರದ್ಧೆಯಿಲ್ಲದವರು ಆಸ್ತಿಕರೆ ಅಲ್ಲ. ಅಗಮ್ಯ ಅಗೋಚರವಾದ ಈಶಶಕ್ತಿಯ ಗಮ್ಯವಾದ ಅಂಶವೆಂದರೇ ಲೋಕದ

ನಡೆನುಡಿವಳಿಯಲ್ಲಿ ಕಾಣಿಸಿಕೊಳ್ಳುವ ಗುಣ-ಶೀಲ. ಗುಣ-ಶೀಲದಲ್ಲಿ ಈ ಬಗೆಯ ಶ್ರದ್ಧೆಯಿದ್ದು ಹಾಗೆ ನಡೆವಳಿಯಿದ್ದವರು ಯಾರಿಗೂ ಹೆದರುವ ಕಾರಣವೆ ಇಲ್ಲ. ಇಂತಹ ನಡೆನುಡಿಯಿದ್ದವರು ಯಾವ ಜಾತಿ, ಕುಲ, ದೇಶದವರಿದ್ದರೂ ಅವರೆ ನಿಜವಾದ ಬ್ರಾಹ್ಮಣರು.

ನಮ್ಮಲ್ಲಿ ಇಂದು ಕಾಣುತ್ತಿರುವವರೆಲ್ಲ ಬಹುತರ ಜಾತಿಬ್ರಾಹ್ಮಣರೇ. ನಿಜವಾದ ಬ್ರಾಹ್ಮಣರೇ ಇಲ್ಲ. ಆದುದರಿಂದ ಭಾರತದಲ್ಲಿ ಇಂದು ಎಲ್ಲರೂ ಒಂದೇ ವರ್ಣದವರು. ಕೆಲವರಿಗೆ ಬಹುಕಾಲದಿಂದ ವಿದ್ಯಾಭ್ಯಾಸದ ಅನುಕೂಲತೆಗಳು ದೊರೆತುವು. ಕೆಲವರಿಗೆ ದೊರೆಯಲಿಲ್ಲ; ಇಷ್ಟೇ ಭೇದ. ವಿದ್ಯಾಭ್ಯಾಸದ ಅನುಕೂಲತೆಗಳಿದ್ದ ಕೆಲವು ಜಾತಿಯವರೂ ಬಲಿಷ್ಠ ಜಾತಿಯ ಕೆಲವು ಪ್ರಬಲರೂ ಮುಸಲ್ಮಾನರ ಆಳಿಕೆಯಲ್ಲಿಯೂ, ಬ್ರಿಟಿಶರ ಆಡಳಿತದಲ್ಲಿಯೂ ದೇಶದಲ್ಲಿ ಆವರಿಸಿದ ಕೃತ್ರಿಮ ವಾತಾವರಣದಲ್ಲಿ ದೇಶದ್ರೋಹಿಗಳಾಗಿ ತಮ್ಮ ಸ್ವಾರ್ಥ ಸಾಧಿಸಿಕೊಂಡು, ಮಹತ್ವದ ಸ್ಥಾನಗಳನ್ನು ಆಕ್ರಮಿಸಿಕೊಂಡು ಕುಳಿತಿದ್ದಾರೆ. ಈಗ ಅದಕ್ಕೆ ಆಘಾತವಾಗುತ್ತಲೆ ಉತ್ಪಾತಕ್ಕೆ ಆರಂಭವಾಯಿತೆಂಬಂತೆ ಗುಲ್ಲು ಎಬ್ಬಿಸುತ್ತಿದ್ದಾರೆ. (ಜಾತಿಬ್ರಾಹ್ಮಣರೂ, ಸಂಸ್ಥಾನಿಕರೂ, ಜಹಗೀರದಾರರೂ ಮುಂ.)

ಆದರೆ, ಈ ಪರಿಸ್ಥಿತಿಯನ್ನು ತಿದ್ದುವುದಕ್ಕೆಂದು ಮುಂದೆ ಬಂದವರು ಸಮಾಜದಲ್ಲಿ ಜಾತಿದ್ವೇಷವನ್ನೂ ವರ್ಗಕಲಹಗಳನ್ನೂ ನಿರ್ಮಾಣ ಮಾಡುತ್ತಿರುವರು. ಇದೂ ಶೋಚನೀಯವೇ. ಏಕೆಂದರೆ ರೋಗಕ್ಕಿಂತಲೂ ಅದನ್ನು ಹೋಗಲಾಡಿಸಲು ನಡೆಸುವ ಉಪಾಯಗಳು, ಇನ್ನೂ ದಾರುಣವಾದ ಪರಿಣಾಮವಾಗುವಂತಹವು ಇರಲಾಗದು. ಈ ಸಂದರ್ಭದಲ್ಲಿ ತಪೋನಿಧಿ ಮಹಾತ್ಮಾಜಿಯವರೇ ನಮಗೆಲ್ಲ ಮೇಲ್ಪಂಕ್ತಿ. ನಿಂದ್ಯ ಉಪಾಯಗಳಿಂದ ವಂದ್ಯವಾದ ಕಾರ್ಯಗಳು ಎಂದೂ ಸಿದ್ಧಿಸವು, ಎಂಬುದು ಮಹಾತ್ಮಾಜಿಯವರ ಎಲ್ಲ ಕಾರ್ಯ ಕಲಾಪಗಳೊಳಗಿನ ಸೂತ್ರವಾಕ್ಯವಾಗಿತ್ತು. ದ್ವೇಷಾಸೂಯೆಗಳಿಗೆ ಧೂಪಹಾಕಿ ಎಬ್ಬಿಸಿದ ಜನಜಂಗುಳಿ ವೇತಾಳಮಂತ್ರದಿಂದ ಎಚ್ಚರಿಸಿದ ಭೂತವಿದ್ದಂತೆ. ಅದು ಮಾಂತ್ರಿಕನನ್ನೆ ಕೊನೆಗೆ ತಿನ್ನುವುದೆಂದು ಹೇಳುವ ಲೋಕಾನುಭವವು ಸುಳ್ಳಲ್ಲ. ಅಹಿಂಸೆ ಮತ್ತು ಪ್ರೀತಿಯ ಸಿದ್ಧಿಯಿಂದ ಆಗುವ ಕಾರ್ಯವು ಎಷ್ಟು ಲೋಕೋತ್ತರವಾದುದಾಗಿರುತ್ತದೆಂಬುದಕ್ಕೆ ಮಹಾತ್ಮಾಗಾಂಧೀಜಿಯವರ ಕೃತಿಗಳೇ ಸಾಕ್ಷಿ. ಮಹಾತ್ಮಾಜಿಯವರಿಗೆ ಬ್ರಿಟಿಶರ ನೀಚ ಕೃತಿಗಳು ಗೊತ್ತಿದ್ದರೂ ಅವರ ಬಗೆಗೆ ದ್ವೇಷದ ಪ್ರಚಾರ ಮಾಡುವುದು ಬೇಕಾಗಿರಲಿಲ್ಲ; ಸಿರಿವಂತರು ನಡೆಸುವ ಬಡವರ ಸುಲಿಗೆಯನ್ನು ಗಾಂಧೀಜಿಯವರು ಖಂಡಿಸಿದರು. ಆದರೂ ಅವರ ಬಗೆಗೆ ಜನರಲ್ಲಿ ಅಸೂಯೆಯನ್ನು ಹುಟ್ಟಿಸಲಿಲ್ಲ. ಸಾಮಾನ್ಯವಾಗಿ ಬ್ರಾಹ್ಮಣರಲ್ಲಿ ತಾವು ಶ್ರೇಷ್ಠರೆಂಬ ಅಭಿಮಾನವು ಮನೆಮಾಡಿಕೊಂಡಿರುವುದನ್ನು ಅರಿತವರಾದರೂ ತಮ್ಮ ಉದಾತ್ತ ನಡೆನುಡಿಗಳಿಂದ, ಗಾಂಧೀಜಿಯವರೇ ನಿಜವಾದ ಬ್ರಾಹ್ಮಣರೆಂದು ಅವರಿಂದಲೇ ಹೊಗಳಿಸಿಕೊಳ್ಳಲಿಲ್ಲವೆ? ಬಿರ್ಲಾದಿಗಳು ತಮ್ಮ ಸಂಪತ್ತನ್ನು ಗಾಂಧೀಜಿಯವರ ಅಡಿಯಲ್ಲಿ ಇಡುವುದಕ್ಕೆ ಮುಂದೆ ಬರಲಿಲ್ಲವೇ?

ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಅಹಿಂಸೆಯನ್ನು ಬಳಸುವ ಸುಯೋಗವು ಬೇಗನೆ ಬರಲಿ, ಎಂದು ಲೋಕವೆಲ್ಲವೂ ಹಂಬಲಿಸುತ್ತಿರುವ ಕಾಲದಲ್ಲಿ ಒಂದು ರಾಷ್ಟ್ರದೊಳಗಿನ ಜನಗಳೇ ದ್ವೇಷಾಸೂಯೆಗಳಿಂದ ಪ್ರೇರಿತರಾಗಿ ಹಿಂಸಾಚಾರಕ್ಕೆ ಪ್ರವೃತ್ತರಾದರೆ ಆ ದೇಶದ ರಾಷ್ಟ್ರೀಯ ಸ್ವಾತಂತ್ರ್ಯವು ಬೇಗನೆ ನಾಮಾವಶೇಷವಾಗದೆ ಇರಲಾರದು. ಪ್ರಾಮಾಣಿಕವಾದ ಭಿನ್ನಾಭಿಪ್ರಾಯಗಳನ್ನು ಸಹನೆಯಿಂದ ತಾಳಿಕೊಂಡು ಅವಕ್ಕೆಲ್ಲ ಅವಕಾಶವನ್ನು ಕಲ್ಪಿಸಿಕೊಡದೆ ಇರುವ ದೇಶವು ಸ್ವಾತಂತ್ರ್ಯವನ್ನು ಪಡೆದಿದೆಯೆಂದು ತಿಳಿಯಲಾಗದು. ಅಲ್ಲಿ ಸ್ವಾತಂತ್ರ್ಯದ ಗಂಧವೂ ಇರುವುದಿಲ್ಲ. ಒಂದು ಪಕ್ಷವು ಇನ್ನೊಂದು ಪಕ್ಷವನ್ನೂ ದ್ವೇಷಿಸಿ ಹಿಂಸಾಚಾರಗಳಿಂದ ಅದನ್ನು ನೆಲಕ್ಕಿಕ್ಕಿ, ಮಣ್ಣುಗೂಡಿಸುವ ಗುಪ್ತಸಂಘಟನೆಯನ್ನು ನಡೆಸುವ ದುರ್ಬುದ್ಧಿಯು ನಮ್ಮ ನಾಡಿಗರೊಳಗಿಂದ ಇಲ್ಲದಂತಾಗುವ ವರೆಗೆ ಪ್ರಜಾಪ್ರಭುತ್ವವು ನಮ್ಮ ದೇಶದಲ್ಲಿ ಎಂದೂ ತಲೆಯೆತ್ತಲಾರದು. ಸ್ವರಾಜ್ಯದ ಹಲವು ಪದ್ಧತಿಗಳಲ್ಲಿ ಪ್ರಜಾಪ್ರಭುತ್ವವೇ ಎಲ್ಲಕ್ಕೂ ಮಿಗಿಲಾದುದು. ಉಳಿದವು ಹೆಚ್ಚುಕಡಿಮೆ ಸರ್ವಾಧಿಕಾರಿತ್ವದ

ಪರ್ಯಾಯಗಳೇ ಆಗಿವೆ. ಒಬ್ಬ ಸರ್ವಾಧಿಕಾರಿಯ ಕೈಯಲ್ಲಿ ತಮ್ಮ ಆಗು-ಹೋಗುಗಳನ್ನೆಲ್ಲ ಒಪ್ಪಿಸಿ ತಮ್ಮ ವಿವೇಕ, ವಿಚಾರಶಕ್ತಿಯನ್ನೆಲ್ಲ ಕುಗ್ಗಿಸಿಕೊಂಡು ಆತನನ್ನು ಕಣ್ಣುಮುಚ್ಚಿ ಅನುಸರಿಸಲು ಸಿದ್ಧರಾಗುವುದೆಂದರೆ ಮನುಷ್ಯರಿದ್ದವರು ಕುರಿಗಳಾಗಲು ಒಪ್ಪಿಕೊಂಡಂತೆಯೇ ಸರಿ. ಈ ಜನ ಬರಿ ನರಗುರಿಗಳು ಆಗುತ್ತಿದ್ದರೂ ಎಷ್ಟೋ ಲೇಸಿರಬಹುದಿತ್ತು. ಆದರೆ, ಇನ್ನೊಂದು ಪಕ್ಷದ ವಿಷಯದಲ್ಲಿ ದ್ವೇಷಾಸೂಯೆಗಳನ್ನು ತುಂಬಿ ರೊಚ್ಚಿಗೆಬ್ಬಿಸಿ ಈ ಅನುಯಾಯಿಗಳನ್ನು ಎದುರಾಳಿಗಳ ಬೇಟೆಗೆ ಸದಾ ಸಜ್ಜಾಗಿರುವಂತೆ ಮಾಡಿ, ಮುಂದಾಳುಗಳು ಕಾಡುಪ್ರಾಣಿಗಳ ಸಾಲಿಗೆ ಈ ಜನರನ್ನು ಒಯ್ದು ನಿಲ್ಲಿಸುತ್ತಾರೆ. ಯಾವನೊಬ್ಬ ಮುಂದಾಳಿನ ಕೆಲವೊಂದು ವಿಚಾರಗಳು, ಆ ಪಕ್ಷದ ಕೆಲವೊಂದು ಕಾರ್ಯಕ್ರಮಗಳು ದೇಶಕ್ಕೆ ಉಪಯುಕ್ತವಾಗಿವೆಯೆಂದು ಗ್ರಹಿಕೆಯಾಗಿ ವಿಶ್ವಾಸದಿಂದ ಹತ್ತಿರ ಬಂದವರನ್ನು ಈ ಬಗೆಯಾಗಿ ಪಕ್ಷಾಂಧರನ್ನಾಗಿಸುವ ರೀತಿ ಅತ್ಯಂತ ನಿಂದ್ಯವಾಗಿದೆ. ದೇಶದೊಳಗಿನ ಜನರು ಸ್ವತಂತ್ರ ವಿಚಾರಕ್ಷಮರು ಆಗುವುದರಿಂದ ರಾಷ್ಟ್ರದಲ್ಲಿ ಸುಖವು ಉಳಿದೀತೆ ಹೊರತು ವಿಕಾರವಶರಾಗಿ ರಾಷ್ಟ್ರದೊಳಗಿನ ಒಂದು ಪಕ್ಷದವರು ಇನ್ನೊಂದು ಪಕ್ಷದವರ ಚೆಂಡಾಡುವುದನ್ನು ಆರಂಭಿಸಿದರೆ ಯಾವ ಪಕ್ಷವೂ ಆರೋಗ್ಯಕರವಾಗಿ ಬೆಳೆಯಲಾರದು. ಭಿನ್ನಾಭಿಪ್ರಾಯಗಳಿದ್ದರೆ ಜನರಿಗೆ ಅವ್ಯನ್ನು ಬಹಿರಂಗವಾಗಿ ತಿಳಿಸಿ ಹೇಳುವ ಸಂಸ್ಥೆಗಳು ಹೊರಡುವುದರಲ್ಲಿಯೆ ರಾಷ್ಟ್ರದ ಬೆಳವಣಿಗೆಯಿದೆ. ಚುನಾವಣೆಗಳ ಮುಖಾಂತರವಾಗಿ ಜನತೆಯ ಅಭಿಪ್ರಾಯವನ್ನು ತಿಳಿದುಕೊಂಡು ಯಾವ ಪಕ್ಷವಾಗಲಿ ಅದಕ್ಕನುಗುಣವಾಗಿ ನಡೆಯುವುದರಲ್ಲಿಯೆ ಪ್ರಜಾಪ್ರಭುತ್ವದ ತಿರುಳಿದೆ. ಇದಕ್ಕೆ ವಿಪರೀತವಾಗಿ ಹಿಂಸಾಚಾರಗಳಿಂದ ಜನರನ್ನು ಬೆದರಿಸಿ ತಮ್ಮ ಪಕ್ಷವನ್ನು ಬೆಳಸಿಕೊಳ್ಳುವ ಅಧಮರು ರಾಷ್ಟ್ರವನ್ನೆ ರಸಾತಳಕ್ಕೆ ನೂಕುತ್ತಾರೆ. ಹಿಟ್ಲರ್-ಮುಸಲೋನಿಗಳೆ ಇದಕ್ಕೆ ಸಾಕ್ಷಿ. ರಶಿಯದ ಸರ್ವಾಧಿಕಾರಿತ್ವವೂ ಯಾವಾಗ ಆ ನಾಡನ್ನು ಪಾತಾಳಕ್ಕೆ ಒಯ್ಯುವುದೊ ಹೇಳಲಿಕ್ಕಾಗದು. ಸರ್ವಾಧಿಕಾರಿತ್ವದಿಂದ ಬೇಗನೆ ಪ್ರಗತಿಯಾದಂತೆ ಎನಿಸಿದರೂ ಅದು ಸ್ಥಿರವಾದ ಲೋಕಶಕ್ತಿಯ ಬಲದ ಅಡಿಗಲ್ಲ ಮೇಲೆ ನಿಂತುದಲ್ಲ. ಒಬ್ಬ ವ್ಯಕ್ತಿಯ ಅಥವಾ ನಾಲ್ಕಾರು ವ್ಯಕ್ತಿಗಳ ಪ್ರಭಾವದಿಂದಾದ ಏಳ್ಗೆ, ಆ ವ್ಯಕ್ತಿಗಳು ಕಣ್ಮರೆಯಾದ ಕೂಡಲೆ ಅವರೊಡನೆ ಆ ರಾಷ್ಟ್ರವೂ ಹಿಂದೆ ಬೀಳುವುದು. ಜನಸಾಮಾನ್ಯರ ಮಟ್ಟವನ್ನು ಹೆಚ್ಚಿಸುವುದೇ ಪ್ರಜಾಪ್ರಭುತ್ವದೊಳಗಿನ ಅತ್ಯಂತ ಶ್ರೇಷ್ಠಗುಣ. ಇಂಗ್ಲೆಂಡಿನ ವೈಶಿಷ್ಟ್ಯವೇನಾದರೂ ಇದ್ದರೆ, ಅದು ಈ ಗುಣದಲ್ಲಿಯೆ ಇದೆ. ಇಂಗ್ಲೆಂಡಿನಲ್ಲಿ ರಾಜಕೀಯ ರಂಗದಲ್ಲಿ ಪಕ್ಷ-ಪಕ್ಷಗಳು ಹಿಂಸಾಮಾರ್ಗವನ್ನು ಎಂದೂ ಅನುಸರಿಸುವುದಿಲ್ಲ. ಇಂದು ಸಾಮ್ರಾಜ್ಯವನ್ನೇ ತುಂಡರಿಸಿ, ಹಿಂದುಸ್ತಾನ, ಬ್ರಹ್ಮದೇಶ, ಸಿಲೋನ್‌ಗಳ ಸ್ವಾತಂತ್ರ್ಯವನ್ನು ಕೊಡುವ ಕೂಲಿಕಾರ ಪಕ್ಷದ ಆಟ್ಲೆ, ಕ್ರಿಪ್ಸರನ್ನು ಕೊಲ್ಲಲು ಸಾಮ್ರಾಜ್ಯವಾದೀ ಪಕ್ಷದ ತರುಣರ ಪಿತ್ತ ನೆತ್ತಿಗೇರಿ ಒಮ್ಮೆಯೂ ಪ್ರಯತ್ನಿಸದೆ ಇರುವುದು ಅವರ ರಾಜಕೀಯ ವಿಚಾರದ ಹಿರಿಮೆಯನ್ನೇ ತೋರಿಸುವುದಿಲ್ಲವೆ? ಮಾಂಸಭಕ್ಷಕರಾದರೂ ಅಹಿಂಸಾವ್ರತಸ್ಥರಲ್ಲವೆ ಅವರು? ಜಾತ್ಯಂಧತೆಯಂತೆ ಪಕ್ಷಾಂಧತೆಯು ಬೆಳೆದುಕೊಂಡರೂ ಅದು ಸ್ವಾತಂತ್ರ್ಯಕ್ಕೆ ಏಕವೇ ಆಗಿದೆ.

ಪಂಥಗಳ ಗುರಿಯು ಅಧಿಕಾರಲಾಲಸೆಗಿಂತ ಲೋಕಹಿತವೇ ಮುಖ್ಯವಾಗಿರಬೇಕು. ಪ್ರಾಮಾಣಿಕವಾದ ಅಭಿಪ್ರಾಯಗಳ ಮಂಡನ ಪ್ರಚಾರಗಳಿಗಾಗಿ ಒಂದು ಪಕ್ಷವು ಇನ್ನೊಂದನ್ನು ಟೀಕಿಸಬೇಕಾಗುವುದು, ಖಂಡಿಸ ಬೇಕಾಗುವುದು ನ್ಯಾಯವೇ ಆಗಿದೆ. ಆದರೆ, ಅದು ನ್ಯಾಯವಾದ ಮಾರ್ಗದಿಂದ ನಡೆಯಬೇಕು. ಹಿಂಸಾ, ಅತ್ಯಾಚಾರಗಳ ಹಾದಿಯಿಂದಲ್ಲ. ಜನರ ವಿಚಾರಗಳನ್ನು ಅರಳಿಸಬೇಕಲ್ಲದೆ ವಿಕಾರಗಳನ್ನು ಕೆರಳಿಸಬಾರದು.

ಭಾರತೀಯರು ನಾವು ಬ್ರಿಟಿಶರಿಗಿಂತಲೂ ಹೆಚ್ಚು ಸಾತ್ವಿಕರೂ, ಧರ್ಮನಿಷ್ಠರೂ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದುಂಟು. ಬ್ರಿಟಿಶರು ಮಾಂಸಭಕ್ಷರು; ನಾವು ಮಾಂಸಹಾರಿಗಳಲ್ಲ. ಬ್ರಿಟಿಶರು ಗೋಭಕ್ಷರೂ; ನಾವು ಗೋಪೂಜಕರು; ಎಂದು ಮೊದಲಾಗಿ ಹೋಲಿಸಿಕೊಂಡು ಅವರಿಗಿಂತ ತಾವು ಮಿಗಿಲಾದವರೆಂಬ ಆತ್ಮವಂಚನೆಯನ್ನೆ ಮಾಡಿಕೊಳ್ಳುತ್ತಲಿದ್ದೇವೆ. ಏಕೆಂದರೆ ಗೋಪೂಜೆಮಾಡುವ ನಮ್ಮ ಗೋವು ಸಾಮಾನ್ಯವಾಗಿ ಒಂದು ವರುಷ ಹಿಂಡುವಷ್ಟು ಹಾಲು, ಗೋಭಕ್ಷರ ಗೋವು ಒಂದು ತಿಂಗಳಲ್ಲೇ ಕರೆಯುವುದು! ನಾವು ಬರಿ ಪೂಜೆ ಮಾಡಿ ಗೋಶುಶ್ರೂಷೆ ಹಿಂಡಿ ಹತ್ತಿಕಾಳು ಹಾಕಿ ಆರೈಕೆಮಾಡುವುದು ಮರೆಯುವೆವು. ಬ್ರಿಟಿಶರು ಪೂಜೆಯ ಫಾರ್ಸುಮಾಡದೆ ಗೋವನ್ನೇ ಪುಷ್ಟವಾಗಿ ಆರೋಗ್ಯಕರವಾಗಿ ಸಲಹುತ್ತಾರೆ. ಬ್ರಿಟಿಶರು ಹಿಂಸಾಚಾರಿ

ಗಳೆನಿಸಿದರೂ ಹೊರನಾಡುಗಳೊಡನೆ ಶಸ್ತ್ರಧರಿಸಿದರೂ ತಮ್ಮ ನಾಡಿನ ವಿರೋಧಿ ಪಕ್ಷದವರ ಕುತ್ತಿಗೆ ಕೊಯ್ಯುವ ಒಳಸಂಚು ಎಂದೂ ನಡೆಸುವುದಿಲ್ಲ; ಅಹಿಂಸಾ, ಸತ್ಯ, ತಪಸ್ಸು ನಮ್ಮ ಸಂಸ್ಕೃತಿಯ ತಿರುಳೆಂದು ಬಾಯಿಂದ ದಿನಾಲು ನಾವು ಧರ್ಮವಚನಗಳ ಪಠನಮಾಡುವೆವು. ಆದರೆ, ಆಚಾರದಲ್ಲಿ ಎಲ್ಲವೂ ಹಿಂಸೆ, ದ್ವೇಷ, ಅಸೂಯೆಯ ವಿವಿಧ ರೀತಿಗಳು! ಅದೂ ಒಳನಾಡಿನಲ್ಲಿ; ತನ್ನ ದೇಶಬಾಂಧವರೊಡನೆಯೆ ಹಗೆತನ! ಹೊರರಾಷ್ಟ್ರಗಳಲ್ಲಿ ತೋರಬೇಕಾದ ವೀರ್ಯ, ಶೌರ್ಯವೆಲ್ಲದರ ಪ್ರದರ್ಶನವೆಲ್ಲಿ? ಮನೆಯ ಮುದುಕನ ಮುಂದೆ! ಏನು ಧೈರ್ಯ! ಎಂತಹ ಸಾಹಸ! ಯಾವ ಧರ್ಮನೀತಿಯಿದು!

ಆದರೂ ಭಾರತೀಯರು ನಾವು ಶ್ರೇಷ್ಠರು! ಭಾರತವು ಧರ್ಮದ ತವರು! ತಮ್ಮ ಮೊಗಕ್ಕೆ ತಾವೇ ಆರತಿ ಬೆಳಗಿಕೊಳ್ಳುವುದರಿಂದ ಏನು ಭೂಷಣವೊ! ನಮ್ಮ ಜನಗಳು ಆಚರಿಸುತ್ತಿದ್ದುದು ನಿಜವಾದ ಧರ್ಮವೇ ಆಗಿದ್ದರೆ, ಅಧರ್ಮಾಚರಣೆಗೆ ದೊರೆಯತಕ್ಕ ಫಲಗಳನ್ನುಣ್ಣುವ ಪ್ರಸಂಗವು ನಮಗೆ ಬಂದುದೇಕೆ? ಮಾವಿನ ಬೀಜವನ್ನೆ ನೆಟ್ಟಿದ್ದರೆ ಅದಕ್ಕೆ ಬೇವಿನ ಕಹಿಹಣ್ಣು ಬರುವುದುಂಟೆ? ನಮ್ಮ ಇಂದಿನ ಪಾಡು ನಮ್ಮ ಯೋಗ್ಯತೆಯನ್ನೆ ಸೂಚಿಸುವುದಿಲ್ಲವೆ? ಎಲ್ಲಿಯೊ ನಾವು ತಪ್ಪುತ್ತಿರುವುದರಿಂದಲೆ ಜಗದ್ರಂಗದಲ್ಲಿ ನಾವು ಹಿಂದುಳಿದವರಾಗಿರಬೇಕಲ್ಲವೆ? ಹಾಗಾದರೆ ನಮ್ಮ ಆ ತಪ್ಪುಯಾವುದು?

'ನೀನು ಯಾರು?' ಎಂದೊಡನೆ ಜಾತಿಯನ್ನು ನೆನೆದುಕೊಳ್ಳುವುದೇ ನಮ್ಮಲ್ಲಿ ಮೈಯುಂಡಿದೆ. ಇದು ಬದಲಾಗಬೇಕು. ಇದೀಗ ಪ್ರಾಂತಭಾವನೆಯು ಸ್ವಲ್ಪಮಟ್ಟಿಗೆ ಆ ಸ್ಥಳದಲ್ಲಿ ಹಣೆಯಿಕ್ಕುತ್ತಿದೆ. ಆದರೆ, ಇವೆಲ್ಲಕ್ಕಿಂತಲೂ ಮೊದಲು 'ನಾನು ಭಾರತೀಯ' ಹಿಂದೂವೂ ಅಲ್ಲ; ಮಹಮ್ಮದೀಯನೂ ಅಲ್ಲ; 'ಭಾರತೀಯ' ಎಂಬ ನೆರೆನಂಬುಗೆಯು ನಮ್ಮ ನಾಡಿಗರಲ್ಲಿ ನೆಲೆಗೊಳ್ಳುವುದು ಆವಶ್ಯಕ. 'ಮೊದಲು ಭಾರತ; ಬಳಿಕ ನನ್ನ ಪ್ರಾಂತ; ಆಮೇಲೆ ನನ್ನ ಮತಧರ್ಮ' ಎಂಬ ತಾರತಮ್ಯ ಜ್ಞಾನವಿಲ್ಲದೆ ನಮ್ಮವರು ಬಹಳ ಹಾನಿಗೆ ಈಡಾಗಿದ್ದಾರೆ. 'ನಾನು ಮೊದಲು ಭಾರತೀಯನು' ಎಂಬ ನೆನಹು ನಮ್ಮ ರೋಮರೋಮಗಳಲ್ಲಿ ತುಂಬಿಕೊಂಡಲ್ಲಿ ಸಾರ್ವಜನಿಕ ಜೀವನದಲ್ಲಿ ಜಾತೀಯ ಪ್ರಶ್ನೆಯೆ ಮುಂದೆ ಬರಲಾರದು. ಪಕ್ಷಾಂಧತೆಯು ಕೂಡ ಹಿಮ್ಮೆಟ್ಟುವುದು. ಭಾರತದ ಹಿತವೇ ಹೆಗ್ಗುರಿಯಾಗಿ ಪ್ರಜಾಪ್ರಭುತ್ವವು ಯಶಸ್ವಿಯಾಗಬಲ್ಲದು.

ಹಿಂದೂ ಎಂಬ ಸಮಾಜ ಇದೆಯೆ? ಆಗಬೇಕೆ?

ಕೆಲದಿನಗಳ ಹಿಂದೆ ಒಂದು ಸುದ್ದಿ, ದಿನಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅದನ್ನೋದಿ ನಮ್ಮ ಹಿರಿಯ ಮುಂದಾಳುಗಳೊಬ್ಬರು ತುಂಬ ಸಂತೋಷಪಟ್ಟುಕೊಂಡಿದ್ದರು. ಅವರು ನನ್ನನ್ನು ಕಾಣುತ್ತಲೆ ಎಂದರು : 'ಕಚ್ಛದಲ್ಲಿ ೮೦೦ ಜನ ಮುಸಲ್ಮಾನರು ಹಿಂದೂಗಳಾದರಂತೆ. ನಿಜವಾಗಿಯೂ ಬಹಳ ಆನಂದದ ಸಂಗತಿ; ಹೀಗೆಯೇ ಉಳಿದ ಭಾಗದಲ್ಲಿಯೂ ವಿಶೇಷತಃ ಉತ್ತರ ಹಿಂದುಸ್ತಾನದಲ್ಲಿ ಮುಸಲ್ಮಾನರು ಹಿಂದೂ ಧರ್ಮವನ್ನು ಸ್ವೀಕರಿಸಿದರೆ ಪಾಕಿಸ್ತಾನದ ಪ್ರಶ್ನೆಯೆ ಉಳಿಯುವುದಿಲ್ಲ....' ಎಂದು ಮುಂತಾಗಿ ತಮ್ಮ ವಾಕ್ ಪ್ರವಾಹವನ್ನು ನಡೆಸಿದರು.

ನನಗೆ ಅವರ ಈ ಮಾತುಗಳನ್ನು ಕೇಳುವಾಗ ತುಂಬ ದಿಗಿಲು. ಏನು ಹೇಳಬೇಕೊ ತಿಳಿಯದಾಯ್ತು. ಅವರಲ್ಲಿ ನನಗೆ ಅತ್ಯಂತ ಆದರ ಬೇರೆ. ಆದರೂ ಅವರ ವಿಚಾರಸರಣಿಯನ್ನು ಕಂಡು ದಿಗಿಲುಗೊಂಡು ನಾನು ಕೇಳಿದೆ: ಅಹುದು, ಆ ಸುದ್ದಿ ಓದಿ ನನಗೂ ಸಂತೋಷವಾಗಬಹುದಿತ್ತು. ಆದರೆ, ಚಿಂತೆಯುಂಟಾಗಿದೆ. ನೀವು, ಎಲ್ಲರೂ ಹಿಂದೂಧರ್ಮಕ್ಕೆ ಬರಲೆಂದು ಹಾರಯಿಸಿದರಲ್ಲ, ಸರಿ; ಹಾಗೆ ಅವರು ಹಿಂದುಗಳಾದರೆಂದು ಬಗೆಯುವಾ. ನಮ್ಮ ಇಂದಿನ ಸಮಾಜದಲ್ಲಿ 'ಹಿಂದೂ' ಎಂದರೆ ಯಾರು? ನಮ್ಮನ್ನು ಒಬ್ಬೊಬ್ಬರನ್ನೂ ಬಾರಿಸಿ ನೋಡಿದರೆ ಹೊರಡುವ ನಾದ ಏನು? ನಾನು ಬ್ರಾಹ್ಮಣ; ನಾನು ವೀರಶೈವ; ನಾನು ಮರಾಠಿ ಎಂಬೀ ಬಗೆಯದೆ ಅಲ್ಲವೇ? ಈಗ ಮುಸಲ್ಮಾನಾದಿ ಧರ್ಮದಿಂದ ಮರಳಿ ಬಂದವರು 'ಹಿಂದೂ'. ಹಾಗಾದರೆ 'ಹಿಂದೂ' ಎಂದರೆ ಧರ್ಮಾಂತರ ಮಾಡಿ ಮರಳಿ ಬಂದವರೆ? 'ಹಿಂದೂ' ಎಂಬ ಹೊಸತೊಂದು ಜಾತಿಯು ನಿರ್ಮಾಣವಾಗಲಿ, ಎಂದು ನಿಮ್ಮ ಅರ್ಥವೊ? ಅವರು ಹಿಂದು'ಗಳು; ಸರಿ. ಹಾಗಾದರೆ ನಾವೂ ಹಿಂದುಗಳೊ? ಅಥವಾ ಬ್ರಾಹ್ಮಣ, ಲಿಂಗಾಯತ, ಜೈನ, ಅಕ್ಕಸಾಲಿಗ...ರೊ? ಅವರಿಗೆ ನೀವು ಯಾವ ಜಾತಿಯನ್ನು ಕಲ್ಪಿಸುವಿರಿ? ಅಲ್ಲದೆ, ಜಾತಿ ಮತ್ತು ವರ್ಣಗಳು ಹಿಂದೂಧರ್ಮದ ವೈಶಿಷ್ಟ್ಯವೆಂದು ನೀವೇ ಪ್ರತಿಪಾದಿಸುವಿರಲ್ಲವೆ?

ಹೀಗೆಂದೊಡನೆ ಅವರಿಗೆ ತಮ್ಮ ವಿಚಾರಸರಣಿಯೊಳಗಿನ ಪರಸ್ಪರ ವಿರೋಧವು ಹೊಳೆಯದೆ ಹೋಗಲಿಲ್ಲ. ಏಕೆಂದರೆ, ಅವರು ಮೂಲತಃ ಸನಾತನಿಗಳು. ಜನ್ಮದಿಂದ ಬಂದ ಜಾತಿಮತಗಳಲ್ಲಿ ಅವರಿಗೆ ತುಂಬ ವಿಶ್ವಾಸ. ಆದರೂ ಅತ್ಯಂತ ರಾಷ್ಟ್ರೀಯವೃತ್ತಿಯವರು. ದೇಶದ ಸ್ವಾತಂತ್ರ್ಯದ ಬಗೆಗೆ ಅವರ ಹೃದಯವು ಕೊರಗಿ ಕಷ್ಟಪಟ್ಟಿದೆ. ಹಿಂದೂ ದೇಶ, ಹಿಂದೂ ಜನಾಂಗವೆಂದೊಡನೆ ಅವರ ಸದ್ಭಾವನೆಗಳು ಉಕ್ಕೇರಿ, ಉತ್ಸಾಹವು ಹೆಚ್ಚುವುದು. ಇಂತಹ ಉತ್ಸಾಹದ ಭರದಲ್ಲಿ ಅವರಾಡಿದ ಮಾತುಗಳವು. ಇನ್ನೂ ಅನೇಕ ಸುಶಿಕ್ಷಿತರು ಹಿಂದೂ ಜನಾಂಗ, ಹಿಂದೂ ಸಮಾಜವೆಂಬ ಮಾತುಗಳನ್ನು ಹುಮ್ಮಸದಿಂದ ಆಡಿ ತಮ್ಮ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ. ಆದರೆ, ತಾವು ಎಷ್ಟು ಸ್ಥೂಲವಾಗಿ ಮಾತನಾಡುತ್ತೇವೆಂಬ ಅರಿವು ಅವರಿಗೇ ಇರುವುದಿಲ್ಲ.

ನನ್ನ ತಿಳುವಳಿಕೆಯಂತೆ, ಹಿಂದೂಧರ್ಮವಾಗಲಿ, ಹಿಂದೂಸಮಾಜವಾಗಲಿ ಇನ್ನೂ ರೂಪಗೊಳ್ಳುವುದರಲ್ಲಿದೆ. ಅದು ಆಗಬೇಕಾಗಿದೆಯೆ ಹೊರತು ಈಗ ಇನ್ನೂ ಅಸ್ತಿತ್ವದಲ್ಲಿಲ್ಲ. 'ಹಿಂದೂ ಜಾತಿ' ಎಂಬ ಹೆಸರು ಕೇಳಬರುತ್ತಿರುವುದು ನಿಜ. ಆದರೆ, ಅದು ಒಂದು ವಿಶಿಷ್ಟ ಹಿನ್ನೆಲೆಯಲ್ಲಿ ಮಾತ್ರ. ಪರಿಸ್ಥಿತಿಯ ಒತ್ತಾಯದಿಂದ 'ಹಿಂದೂ' ಎಂಬ ಜಾತಿಯ ಹೆಸರನ್ನು ಹೇಳಬೇಕಾಗುತ್ತಿದೆ. ಇಲ್ಲವಾದರೆ ನಮ್ಮ ನಾಡಿನಲ್ಲಿ 'ಹಿಂದೂ' ಎಂಬ ಮಾತಿಗೆ ಇಂಬಿದ್ದಂತಿಲ್ಲ. ನಮ್ಮಲ್ಲಿ ನಿಜವಾಗಿ ಎಲ್ಲೆಲ್ಲೂ ಬ್ರಾಹ್ಮಣಾದಿ ಹಲವು ಜಾತಿಗಳು ಇವೆ. 'ಹಿಂದೂ' ಎಂಬುದು ಮುಸಲ್ಮಾನರ ಹಿನ್ನೆಲೆಯಲ್ಲಿ ತಲೆದೋರಿದ ಮಾತು. ಮುಸಲ್ಮಾನರ ಭೀತಿಯ ಭೂತವು ಆವರಿಸದಿದ್ದರೆ 'ನಾವು ಹಿಂದೂ ಜನರು' ಎಂಬ ವಿಚಾರವು ನಮ್ಮ ಜನಗಳಲ್ಲಿ ತಲೆದೋರುತ್ತಿದ್ದಿತೆ? ಎಂಬ ವಿಷಯಕ್ಕೆ ಸಂದೇಹವೆ ಇದೆ. 'ನಾವು ಹಿಂದೂ ಜನ; ಒಂದಾಗೋಣ; ನಮ್ಮ ಧರ್ಮ ಕಾಯ್ದುಕೊಳ್ಳೋಣ' ಎಂಬ ವಿಚಾರವು ಹೊಳೆದು ನಮ್ಮ ಜನಗಳ ತಲೆಯಲ್ಲಿ ಅದರ ಬೆಳಕು ಬೀಳಲಾರಂಭಿಸಿದುದು ಮಹಮ್ಮದೀಯರ ಆಗಮನದ ನಂತರವೇ. ಅದಕ್ಕೂ ಮೊದಲು ಈ ಮಾತಿನ ಅವಶ್ಯಕತೆಯೆ ಇದ್ದಿಲ್ಲ.

ನಿಜವಾಗಿ ವಿಚಾರಿಸಿದರೆ ಇತ್ತೀಚೆಗೆ 'ಹಿಂದೂ' ಚಳವಳಿಯ ಪೋಷಕರು ಬ್ರಿಟಿಶ ಸರಕಾರದವರೇ ಆಗಿದ್ದಾರೆ. ಅವರು ಭೇದನೀತಿಯಿಂದ ಹಿಂದೂ ದೇಶವನ್ನು ತಮ್ಮ ಅಂಕೆಯಲ್ಲಿರಿಸಿಕೊಳ್ಳಲು ಮುಸಲ್ಮಾನರನ್ನು ಒಲಿಸಿಕೊಳ್ಳುವುದಕ್ಕೆ ಆರಂಭಿಸಿದರು. ಮುಸಲ್ಮಾನರಿಗೆ ತುಂಬ ಸವಲತ್ತು, ಹೆಚ್ಚಿನ ಅಧಿಕಾರಗಳು ಬ್ರಿಟಿಶರಿಂದ ದೊರೆಯಹತ್ತಿದುವು. ಮುಸಲ್ಮಾನರು ಮುಸಲ್ಮಾನೇತರರೊಡನೆ ಉದ್ಧಟತನದಿಂದ ನಡಕೊಳ್ಳುವುದಕ್ಕೆ ಮೊದಲಾಯಿತು. ಒತ್ತಾಯದಿಂದ ಹೆಣ್ಣುಮಕ್ಕಳನ್ನೂ ಹುಡುಗರನ್ನೂ ಒಯ್ದು, ಆಮಿಷ ತೋರಿಸಿ ಮುಸಲ್ಮಾನರನ್ನಾಗಿ ಮಾಡಿಕೊಳ್ಳುವ ಕಾಯಕಕ್ಕೆ ಕಳೆ ಬಂತು. ತಾವು ಹೆಚ್ಚು, ತಮ್ಮ ಜಾತಿ ಹೆಚ್ಚು, ಎಂಬೀ ಬಗೆಯ ಕುಲೀನತೆಯ ಹೆಮ್ಮೆಯ ಹಗಲುಗನಸುಗಳಲ್ಲಿ ಮೈಮರೆತಿದ್ದ ಮುಸಲ್ಮಾನೇತರ ಸಮಾಜವು ಬಡಿದೆಬ್ಬಿಸಿದಂತೆ ಎಚ್ಚೆತ್ತಿತು.

ಈ ದೇಶದ ಹೆಸರು ಹಿಂದೂ. ಆದಕಾರಣ ಈ ದೇಶದವರೆಲ್ಲ ಹಿಂದೂಗಳೆ; ಮುಸಲ್ಮಾನರಲ್ಲ ಪರಕೀಯರು ಎಂಬ ತರ್ಕಸರಣಿಗೆ ಎಡೆದೊರೆಯಿತು. ಈ ತರ್ಕ ಸರಣಿಯಲ್ಲಿ ಇದ್ದ ದೋಷವು ಮೊದಲು ಬಹಳ ಜನರ ಗಮನಕ್ಕೆ ಬರಲಿಲ್ಲ. ಹಿಂದೂತನದ ಆವೇಶದಲ್ಲಿ ಮುಸಲ್ಮಾನರನ್ನು ಪರಕೀಯರೆಂದು ಬಗೆಯುವುದು ಸುಲಭವಾಯ್ತು. ಬ್ರಿಟಿಶ ಚಾಣಕ್ಯರಿಗೂ ಇದೇ ಬೇಕಾಗಿದ್ದಿತು. ಮುಸಲ್ಮಾನರಿಗೆ, ಅವರು ಎಲ್ಲರೂ ಭಾರತದ ಹೊರಗಣಿಂದ ಬಂದವರೆಂಬಂತೆ ಗಾಳಿ ತುಂಬಿಸಿದರು. ಮುಸಲ್ಮಾನರೂ ಗಾಳಿ ಬಡಿದವರಂತೆ ಮಕ್ಕಾ-ಮದಿನಾಗಳನ್ನು ಕನವರಿಸುತ್ತ ಭಾರತವನ್ನು ಕಡೆಗಣಿಸಿದರು. ತಾವು ನಿಂತ ಗಿಡವನ್ನೆ ಕಡಿಯುವುದಕ್ಕೆ ಹೇಸದಾದರು.

ಈ ಹಿನ್ನೆಲೆಯಲ್ಲಿ ಹಿಂದೂ ಸಮಾಜದ ಒಕ್ಕಟ್ಟಿನ ಆವಶ್ಯಕತೆಯು ದಿನದಿನಕ್ಕೂ ಹೆಚ್ಚು ಹೆಚ್ಚು ಅನುಭವಕ್ಕೆ ಬರಲಾರಂಭಿಸಿತು. ವೈದಿಕ ಧರ್ಮದ ತೀವ್ರ ಅಭಿಮಾನಿಗಳಾಗಿದ್ದ ಆರ್ಯಸಮಾಜದವರೇ, ಪರಿಸ್ಥಿತಿಗನುಸರಿಸಿ ಹಿಂದೂಧರ್ಮ ಸಂಘಟನೆಯ ನೇತೃತ್ವವನ್ನು ಸ್ವೀಕರಿಸಿದರು. ಮುಸಲ್ಮಾನರ ಲೀಗು ಕಾಂಗ್ರೆಸ್ಸಿನಿಂದ ಬೇರೆಯಾಗಿ ತಮ್ಮ ಸ್ವಾರ್ಥವನ್ನೇ ಹೆಗ್ಗುರಿಯಾಗಿ ಇಟ್ಟುಕೊಂಡು ಚಳವಳಿಯನ್ನು ನಡೆಸುತ್ತಲೆ ಹಿಂದೂ ಮಹಾಸಭೆಯ ಆವಶ್ಯಕತೆಯೂ ಮಹತ್ವವು ಹೆಚ್ಚಾಯಿತು. ಆದರೆ, ಆರ್ಯಸಮಾಜದವರಷ್ಟು ಹಿಂದೂ ಮಹಾಸಭೆಯಿಂದ ಹಿಂದೂಸಮಾಜ ಸಂಘಟನೆಯ ಕೆಲಸವು ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಹಿಂದೂ ಸಮಾಜದ ಆಶೆ-ಆಕಾಂಕ್ಷೆಗಳನ್ನು ಹಿಂದೂ ಮಹಾಸಭೆಯ ಕೆಲವು ನೇತಾರರು ಜಗತ್ತಿನ ಎದುರು ಚೆನ್ನಾಗಿ, ತರ್ಕಶುದ್ಧವಾಗಿ ಮಂಡಿಸಿದ್ದೇನೊ ನಿಜ. ಆದರೆ, ಅದರ ಮುಂದಾಳುಗಳಲ್ಲಿ ಕೆಲವರುನ್ನುಳಿದು ಬೇರೆಯವರೆಲ್ಲ ಇನ್ನೂ ತಮ್ಮ ವಿಶಿಷ್ಟ ಜಾತೀಯ ಅಭಿಮಾನದಿಂದ ಮುಕ್ತರಾಗಿರಲಿಲ್ಲ. ಅಸ್ಪೃಶ್ಯೋದ್ಧಾರದ ಠರಾವು ಪಾಸಾದರೂ ಕಾಂಗ್ರೆಸ್ಸಿನಷ್ಟೂ ಈ ಕೆಲಸದಲ್ಲಿ ಹಿಂದೂ ಮಹಾಸಭೆಯು ಮುಂದುವರಿದುದಿಲ್ಲ. ಕ್ರಾಂತಿವೀರ ಸಾವರಕರರು ಹಿಂದೂ ಮಹಾಸಭೆಯ ಅಧ್ವರ್ಯುಗಳಾಗಿ ಕೆಲದಿನ ಅದರಲ್ಲಿ ಜೀವಂತ ಕಳೆಯನ್ನು

ಸ್ವಲ್ಪ ತಂದರು. ಆದರೆ, ರಾಷ್ಟ್ರೀಯ ಮಹಾಸಭೆಯ ಹಿರಿಯ ಮುಂದಾಳುಗಳ ವಿಷಯಕ್ಕಿದ್ದ ತುಚ್ಛತೆಯ ಭಾವನೆಯು ಅವರಿಂದಾಗತಕ್ಕ ಮಹಾಕಾರ್ಯಕ್ಕೆ ಕುಂದನ್ನು ತಂದಿತು. ಹಿಂದೂ ಮಹಾಸಭೆಯ ನೇತಾರರೆಂದರೆ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಸ್ಥಾನ ದೊರೆಯದೆ ಅಸುಂತಪ್ತರಾದ ಹಲಕೆಲವು ಮಹತ್ವಾಕಾಂಕ್ಷಿಗಳ ಗುಂಪು, ಎಂದು ಬಹು ಜನ ಸಮಾಜದ ಭಾವನೆಯಾದುದು ಕಂಡುಬಂದಿತು. ಇದರಿಂದ ಹಿಂದೂ ಸಮಾಜ ನಿರ್ಮಾಣ ಕಾರ್ಯವು ಈ ಮಹಾಸಭೆಯಿಂದ ಆಗುವುದಕ್ಕೆ ತಡೆಯುಂಟಾಯಿತು. ಸ್ವನಾಮಧನ್ಯ ಪಂಡಿತ ಮಾಲವೀಯರು ಹಿಂದೂ ಮಹಾಸಭೆಯ ಕಾರ್ಯಕ್ಕೆ ಕೆಲದಿನ ಸ್ಫೂರ್ತಿಯನ್ನಿತ್ತರು. ವೇದಗಳನ್ನು ಪ್ರಮಾಣವೆಂದು ನಂಬಿದವರಷ್ಟೇ ಹಿಂದುಗಳು, ಎಂದು ಲೋಕಮಾನ್ಯರ ಕಾಲಕ್ಕೆ ಒಂದು ವ್ಯಾಖ್ಯೆಯು ಪ್ರಚಾರದಲ್ಲಿದ್ದಿತು. ಅದರಿಂದ ಜೈನ, ಬೌದ್ಧ ಮೊದಲಾದ ಸಮಾಜಗಳು ಹಿಂದೂಗಳಲ್ಲಿ ಒಳಗೊಳ್ಳುವುದಕ್ಕೆ ಅಡ್ಡಿಯಾಗಿತ್ತು. ಕಂನಾಡಿನ ವೀರಶೈವರಲ್ಲಿಯೂ ಕೆಲವರು ತಾವು ಹಿಂದುಗಳಲ್ಲವೆಂಬ ಪ್ರಚಾರಕ್ಕೆ ತೊಡಗಿದ್ದರು. ಪಂ. ಮಾಲವೀಯರು ಹಿಂದೂ ಮಹಾಸಭೆಯ ವ್ಯಾಸಪೀಠದಿಂದ ಉದ್ಘೋಷಿಸಿ ಹಿಂದೂ ಶಬ್ದದ ವ್ಯಾಖ್ಯೆಯನ್ನು ವಿಸ್ತರಿಸಿದರು. ಎಲ್ಲ ಭಾರತೀಯ ಧರ್ಮಮತಗಳ ಜನಗಳೂ ಹಿಂದೂಗಳೇ ಎಂದು ಪ್ರತಿಪಾದಿಸಿದರು. ಅಂದಿನಿಂದ ಬೌದ್ಧ, ಜೈನ ಮೊದಲಾದ ಸಮಾಜಗಳನ್ನು ಹಿಂದೂಗಳಲ್ಲಿ ಎಣಿಸಲಿಕ್ಕೆ ಆರಂಭವಾಯಿತು.

ಬ್ರಿಟಿಶ ರಾಜತಂತ್ರಜ್ಞರು, ಮುಸಲ್ಮಾನರನ್ನು ರಾಷ್ಟ್ರೀಯ ಸಭೆಯಿಂದ ಒಡೆದು ಬೇರೆಯಾಗಿ ನಿಲ್ಲಿಸುವ ಅವಸರದಲ್ಲಿ ಅವರಿಗೆ ಬೆಂಬಲವನ್ನು ಕೊಡುವ ತಂತ್ರಗಾರಿಕೆಯಲ್ಲಿ ತೊಡಗಿದಾಗ ತಮಗೆ ಅರಿಯದೆಯೆ ಒಂದು ದೊಡ್ಡ ತಪ್ಪನ್ನು ಮಾಡಿದರು. 'ಮುಸಲ್ಮಾನರು ಒಂದು ಸ್ವತಂತ್ರ ಸಮಾಜ; ಇದೊಂದು ಪಂಗಡ ಬೇರೆ' ಎಂಬ ಮಾತನ್ನು ಹೇಳಬೇಕಾಗಿ ಬಂದಾಗ ಮುಸಲ್ಮಾನರನ್ನು ಹೊರತುಪಡಿಸಿ ಉಳಿದವರಿಗೆ ಸಾಮಾನ್ಯವಾಗಿ 'ಹಿಂದೂ'ಗಳೂ ಎಂದು ಒಂದೇ ಗುಂಪಿನಲ್ಲಿ ಸೇರಿಸಿದರು. ಹಿಂದೂ ಸಮಾಜವೆಂದು ಅವರು ಹೀಗೆ ನಾಮಕರಣ ಮಾಡಿದ ಸಮಾಜದಲ್ಲಿ ಒಂದುತರದ ಭಾವನೆಯು ತಲೆದೋರುವುದನ್ನು ಕಂಡೊಡನೆ, ಅದು ಬೇರು ಹಿಡಿಯದಂತೆ ಕೂಡಲೆ ಉಪಾಯಗಳನ್ನು ಯೋಜಿಸಲಿಕ್ಕೂ ಅವರು ಮರೆಯಲಿಲ್ಲ.

ಹಿಂದೂಗಳಲ್ಲಿ ಸ್ಪೃಶ್ಯ-ಅಸ್ಪೃಶ್ಯರೆಂದು ಬಣಗಳು ಇದ್ದುದನ್ನು ಕಂಡುಹಿಡಿದು ಅದರ ಲಾಭ ಪಡೆಯಲು ಸನ್ನದ್ಧರಾದರು. ಬೌದ್ಧ, ಜೈನರನ್ನು ಅವರು ಸರಕಾರಿ ಕಾಗದಪತ್ರಗಳಲ್ಲಿ ಹಿಂದುಗಳಿಂದ ದೂರವಾಗಿಯೆ ಇಟ್ಟಿದ್ದರು. ಜರ್ಮನಿಯ? ಮ್ಯಾಕ್ಸಮುಲ್ಲರಾದಿಗಳು ನಮ್ಮ ದೇಶದ ಧರ್ಮ ಮತಗಳ ಸೂಕ್ಷ್ಮ ಅಭ್ಯಾಸ ಮಾಡಿ ಒಂದು ಬಗೆಯ ಆತ್ಮೀಯತೆಯಿಂದ ಎಲ್ಲವನ್ನೂ ಅರಿತುಕೊಂಡು ಮಹಾ ಮಹಾ ಗ್ರಂಥಗಳನ್ನು ಬರೆದರು. ಬ್ರಿಟಿಶ ರಾಜತಂತ್ರ ವಿಶಾರದರು ಅವರ ಅಭ್ಯಾಸದ ಲಾಭ ಪಡೆದು ನಮ್ಮೊಳಗಣ ಭೇದಾಭೇದಗಳ ಜ್ಞಾನ ಮಾಡಿಕೊಂಡರು.

'ಹಿಂದೂ'ಗಳ ಅಖಂಡವಾದ, ಅವಿಭಾಜ್ಯವಾದ ಏಕಜೀವ ಸಮಾಜವೊಂದು ಎಚ್ಚತ್ತರೆ ತಮ್ಮ ಇಲ್ಲಿಯ ಸುಲಿಗೆಗಾರಿಕೆಗೆ ಸೊನ್ನೆ ಬಿದ್ದೀತೆಂಬುದನ್ನು ಬ್ರಿಟಿಶರು ಸರಿಯಾಗಿ ಅರಿತುಕೊಂಡಿದ್ದರು. ಆದುದರಿಂದಲೇ ಮಾಕ್ಸಮುಲ್ಲರಾದಿಗಳ ವೇದ, ಬ್ರಾಹ್ಮಣ ಗ್ರಂಥಗಳ ಅಭ್ಯಾಸದಿಂದ ಹೊರಬಂದ ಸಂಗತಿಗಳ ಆಧಾರದ ಮೇಲೆ ನಮ್ಮ ದೇಶದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಎಂಬ ಇನ್ನೂ ಒಂದು ಚಳವಳವು ತಲೆಯೆತ್ತಲು ಇಲ್ಲಿಯ ಬ್ರಿಟಿಶರ ಅಧಿಕಾರಿಗಳು ಅಲ್ಲಲ್ಲಿ ನೆರವಾದರು. ಮುಸ್ಲಿಂಲೀಗಿನವರು ರಾಷ್ಟ್ರೀಯ ಸಭೆಯ ಬಲ ಕುಗ್ಗಿಸುವ ಕೆಲಸದಲ್ಲಿ ಮೊದಲೆ ತೊಡಗಿದ್ದರು. ಅಸ್ಪೃಶ್ಯರಲ್ಲಿ ಅವರ ಸ್ವಾಭಿಮಾನವನ್ನು ಕೆಣಕಿ ಅವರ ಹಿಂದೂಗಳಿಂದ ದೂರವಿರುವಂತೆ ವಾತಾವರಣವನ್ನು ನಿರ್ಮಿಸಲಾಗಿತ್ತು. ಮೇಲೆ ಇನ್ನೂ ಒಂದು ಈ ಬ್ರಾಹ್ಮಣ ಬ್ರಾಹ್ಮಣೇ ತರವಾದ!

ದಕ್ಷಿಣ ಭಾರತದಲ್ಲಿ ಈ ಬ್ರಾಹ್ಮಣ-ಅಬ್ರಾಹ್ಮಣ ವಾದವು ದ್ರಾವಿಡ ಸಂಘದ ಕಲ್ಪನೆಗೆ ಜನ್ಮಕೊಟ್ಟಿತು. ದೂರದರ್ಶಿಗಳಾದ ಬ್ರಿಟಿಶರಿಗೆ, ಹಿಂದೂಸ್ತಾನವನ್ನು ಬಿಟ್ಟು ಒಂದಲ್ಲ ಒಂದು ದಿನ ತೆರಳಲೇ ಬೇಕಾಗುವುದೆಂದು

ಎಂದೊ ಗೊತ್ತಿದ್ದಿತು. ಮೆಕಾಲೆ ಸಾಹೇಬನು ಈ ಮಾತನ್ನು ಕ್ರಿ. ಶ. ೧೮೩೩ರ ಸುಮಾರಿಗೇ ತನ್ನ ಒಂದು ಬರೆಹದಲ್ಲಿ ಕಾಣಿಸಿದ್ದಾನೆ. ಪೀಲ ಎಂಬವನು Expansion of British Empire ಎಂಬ ಗ್ರಂಥದಲ್ಲಿ ಈ ಸಂಗತಿಯನ್ನು ಮುಂಗಂಡು ಬರೆದಿಟ್ಟಿದ್ದಾನೆ. ಹಿಂದಿನ ಬ್ರಿಟಿಶ ರಾಜಕಾರಣಿಗಳ ಪರಂಪರೆಯಲ್ಲಿಯೆ ಬೆಳೆದು ಬಂದ ಇಂದಿನ ಅವರ ಧುರೀಣರೂ ಈ ವಿಷಯದಲ್ಲಿ ಮೈತುಂಬ ಕಣ್ಣುಗಳುಳ್ಳವರಾಗಿಯೆ ನಡೆದುಕೊಳ್ಳುತ್ತಲಿದ್ದಾರೆ.

ಹಿಂದುಸ್ತಾನವನ್ನು ಬಿಟ್ಟುಹೋಗುವುದು ನಿಜ. ಆದರೆ, ಅದು ಅಖಂಡವಾಗಿ ಉಳಿಯದಂತೆ ಶಕ್ಯವಿದ್ದ ಎಲ್ಲ ಉಪಾಯಗಳನ್ನೂ ಯೋಜಿಸತಕ್ಕದ್ದೆಂದು ಅವರು ಮೊದಲಿನಿಂದಲೇ ನಿರ್ಧರಿಸಿ ಹಾಗೆ ನಡೆದುಕೊಳ್ಳುತ್ತ ಬಂದಿದ್ದಾರೆ. ಮುಸಲ್ಮಾನರ ವಿರುದ್ಧ ಹಿಂದೂಗಳು ಎಂದು ಹೇಳಿ ಇಬ್ಬರಲ್ಲಿ ಸ್ಪರ್ಧೆ ಬೆಳೆವಂತೆ ಮಾಡಿ ಅಷ್ಟಕ್ಕೆ ಅವರು ತೃಪ್ತರಾಗದೆ ಹಿಂದೂಗಳಲ್ಲಿಯೂ ಒಂದೇ ಒಂದು ಪಂಗಡವು ಆಗಿ ಬೆಳೆಯದಂತೆ ಈ ವರೆಗೆ ಜಾಗರೂಕರಾಗಿ ಕೆಲಸ ಮಾಡಿದ್ದಾರೆ. ಹಲವು ಒಳಜಾತಿ-ಮತಗಳಿಗೆ ಪದವಿ, ಪಟ್ಟ, ದುಡ್ಡು, ನೌಕರಿ, ಸ್ಕಾಲರಶಿಪ್ಪು ಮೊದಲಾದವುಗಳ ಆಸೆ ಹಚ್ಚಿ ಅವರೆಲ್ಲರೂ ತಮ್ಮ ತಮ್ಮ ಜಾತಿಗಳಿಗೇ ಅಂಟಿಕೊಂಡಿರುವಂತೆ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರು. ಅದರಿಂದ ಹಿಂದೂ ಸಮಾಜವೆಂಬುದು ಒಂದು ಕನಸಿನ ಕನವರಿಕೆಯಾಗಿದೆಯೆ ಹೊರತು ಇಂದಿನ ವ್ಯವಹಾರ ಲೋಕದಲ್ಲಿ ಕಣ್ಣಿಗೆ ಕಾಣುವ ಕಂಡಿತದ ಮಾತಾಗಲು ಸಾಧ್ಯವಾಗಿಲ್ಲ.

೧೯೨೭ರ ಅಸಹಕಾರದ ಆಂದೋಲನದ ಕಾಲಕ್ಕೆ ಈ ದೇಶಕ್ಕೆ ಇಂಗ್ಲಂಡಿನ ಪತ್ರಿಕಾ ಪ್ರತಿನಿಧಿಯಾಗಿ ಬಂದ ಮಿ. ಬ್ರೆಲ್ಸಫರ್ಡರು ಆಗಿನ ತಮ್ಮ ಲೇಖನಗಳಲ್ಲಿ ಒಂದು ಮಹತ್ವದ ಸಂಗತಿಯನ್ನು ಬಯಲಿಗೆಳೆದರು. ಹಿಂದೂ ದೇಶದಲ್ಲಿ ಒಂದು ಸೋಜಿಗದ ದೃಶ್ಯವು ಕಣ್ಣಿಗೆ ಬೀಳುತ್ತಲಿದೆ; ಬ್ರಿಟಿಶರು ಸನಾತನ ಧರ್ಮರಕ್ಷಕರಾಗಿ ಕೆಲಸ ಮಾಡುತ್ತಲಿದ್ದಾರೆ. ಆದರೆ, ರಾಷ್ಟ್ರೀಯ ವೃತ್ತಿಯ ಮುಂದಾಳುಗಳು ತಮ್ಮೊಳಗಣ ಜಾತಿ ಪಂಥಗಳನ್ನು ಮುರಿದೊಗೆದು ಅಖಂಡ ಭಾರತದ ಒಂದೇ ಹಿಂದೀಸಮಾಜ ನಿರ್ಮಾಣವಾಗಬೇಕೆಂಬ ಹಂಬಲದವರಾಗಿದ್ದಾರೆ. ಈ ಸೋಜಿಗದ ಸಂಗತಿಯು ಈವರೆಗೆ ಎಷ್ಟು ಜನರ ತಲೆಗೆ ನಿಲುಕಿದೆಯೊ ನಾಕಾಣೆ. ಬ್ರಿಟಿಶ ಚಕ್ರವರ್ತಿಯು ಕ್ರಿ. ಶ. ೧೮೫೭ರಲ್ಲಿ 'ನಾನು ಹಿಂದುಸ್ತಾನದೊಳಗಣ ಜಾತಿ ಮತ ಪಂಥಗಳಲ್ಲಿ ಕೈಹಾಕುವುದಿಲ್ಲ;' ಎಂದು ಸಾರಿದಳು. ಮುಂದೆ ಸಂಪೂರ್ಣವಾಗಿ ಈ ವಚನ ಪಾಲಿಸಿದುದರ ಶ್ರೇಯಸ್ಸು ಬ್ರಿಟಿಶ ಸರಕಾರಕ್ಕಿದೆ! ವಚನಗಳನ್ನು ಬದಲಿಸುವುದರಲ್ಲಿ ಬ್ರಿಟಿಶರನ್ನು ಸರಿಗಟ್ಟುವವರು ಜಗತ್ತಿನಲ್ಲಿಯೇ ಯಾರೂ ಇಲ್ಲವೆಂದು ಲೋಕವೇ ಹೇಳುತ್ತಿದೆಯಾದರೂ, ಈ ಒಂದು ವಿಷಯದಲ್ಲಿ ಮಾತ್ರ ಬ್ರಿಟಿಶರು ಏಕನಿಷ್ಠರಾಗಿ ಉಳಿದು ನಮ್ಮ ಜಾತಿಮತಗಳನ್ನು ಸಂರಕ್ಷಿಸುವದಕ್ಕೆ ಎಂದೂ ತಪ್ಪಲಿಲ್ಲವೆಂದು ನಾಳಿನ ಇತಿಹಾಸಕಾರರು ಅವರಿಗೆ ಶಿಫಾರಸು ಪತ್ರವನ್ನು ಕೊಡಲೇ ಬೇಕಾಗುವುದು!

ಇಂತಹ ಪರಿಸ್ಥಿತಿಯಲ್ಲಿ ಎಲ್ಲಿಯ ಹಿಂದೂ ಸಮಾಜ? ಎಲ್ಲಿದೆ ಹಿಂದೂ ಸಮಾಜ! ದಕ್ಷಿಣ ಹಿಂದುಸ್ತಾನದಲ್ಲಿ ದ್ರವಿಡಸ್ತಾನವು ನಿರ್ಮಾಣವಾಗಲೇಬೇಕೆಂದು ಕೆಲವರ ಕೂಗು ಎದ್ದಿದೆ! ಜಾತಿ, ಧರ್ಮಗಳನ್ನೆಲ್ಲ ಒಂದುಗೂಡಿಸಿ ಏಕವರ್ಣ ಹಿಂದೂ ಸಮಾಜವನ್ನು ನಿರ್ಮಿಸುವ, ಎಂದು ನಡೆವ ಪ್ರಯತ್ನಕ್ಕೆ ಜಾತಿಗಳ ಹೆಸರಿನಲ್ಲಿ ಲಾಭ ಪಡೆಯುತ್ತಿರುವ ಹಲವು ಮುಂದಾಳುಗಳ ಕ್ಷುದ್ರ ಸ್ವಾರ್ಥವು ಅಡ್ಡಬರುತ್ತದೆ. ನಮ್ಮ ಜಾತಿ ಹಾಗೆಯೆ ಇರತಕ್ಕದ್ದೇ. ಅದಕ್ಕೆ ಸರಕಾರದಿಂದ ವಿಶೇಷ ಸವಲತ್ತು ದೊರೆಯಲೇಬೇಕೆಂದು ಹಟ-ವಾದ ನಡೆದಿದೆ. ಇದೇನು ಹಿಂದೂ ಸಮಾಜದ ಅಖಂಡತನದ ಲಕ್ಷಣವೊ? ಬ್ರಿಟಿಶರ, ಬಾದಶಹರ ಪ್ರತಿನಿಧಿಗಳಾದ ವೈಸರಾಯರು ಹಿಂದುಗಳನ್ನುದ್ದೇಶಿಸಿ ಮಾತನಾಡುವಾಗ Peoples of India ಎನ್ನುವರು. People of India ಎನ್ನುವುದಿಲ್ಲ! ನಮ್ಮೊಳಗಣ ಭೇದಗಳ ನೆನಪು ಅಡಿಗಡಿಗೆ ಆಗುವಂತೆ ಬ್ರಿಟಿಶ ಅಧಿಕಾರಿಗಳು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂದೂ ಸಮಾಜವೆಂಬುದು ಒಂದುಗೂಡಿ ಎದ್ದುನಿಲ್ಲಬೇಕಾಗಿದೆ!

ಇದಕ್ಕೆ ಇನ್ನೂ ಒಂದು ಹೆಚ್ಚಿನ ತೊಡಕು ಈಗ ಮುಂದೆ ಬರುವುದಿದೆ. ಈಗಣ ಯುಗ ಪ್ರಾದೇಶಿಕ ಅಭಿಮಾನಕ್ಕೆ ಅಗ್ರಸ್ಥಾನವಿರುವ ಯುಗ. 'ಹಿಂದೂಗಳು' ಎಂಬ ಮಾತು ಈ ದೃಷ್ಟಿಯಿಂದ ಇಂದು ಉಚಿತವೇ ಆಗಿದೆ. 'ಹಿಂದೂಗಳು' ಎಂಬುದು ಪ್ರಾದೇಶಿಕ ಹೆಸರಾಯಿತು. ಇಂಗ್ಲೆಂಡಿನಲ್ಲಿ ನೆಲಸಿದವರು ಆಂಗ್ಲರು; ಅಮೇರಿಕೆಯನ್ನು ನೆಲೆವೀಡು ಮಾಡಿಕೊಂಡವರು ಅಮೇರಿಕನ್ನರು; ಹಾಗೆ ಹಿಂದೂಸ್ತಾನವು ತಮ್ಮ ತಾಯ್ನಾಡು ಎಂಬವರೆಲ್ಲರೂ ಹಿಂದೂಗಳು ಎಂದು ಆಗಬಹುದಲ್ಲವೆ? ನಮ್ಮ ಘಟನಾ ಸಮಿತಿಯ ವಿಚಾರ ಸರಣಿಯು ಸುಮಾರಾಗಿ ಇದೇ ತೆರನಾಗಿದೆ. ಆದರೆ, ನಮಗೆಲ್ಲ ಅಂಟಿಕೊಂಡ ಹಳೆಯ ಚಟವು ಒಂದಿದೆ. ಅದು ಈ ಬಗೆಯ ವಿಚಾರಕ್ಕೆ ಅಡ್ಡಿಯನ್ನುಂಟು ಮಾಡುತ್ತಿದೆ. ಹುಟ್ಟಿನಿಂದ ಜಾತಿಮತಗಳನ್ನು ಹೇಳುವ ಅಭ್ಯಾಸವಿದ್ದ ನಾವು ಹಿಂದೂಗಳೆಂಬ ಮಾತಿಗೂ ಅದೇ ಬಗೆಯಾಗಿ ಅರ್ಥವನ್ನು ಕಲ್ಪಿಸುತ್ತಿದ್ದೇವೆ. ಹಿಂದೂ ಎಂಬ ಹೆಸರು ಪ್ರಾದೇಶಿಕ; ಆದರೆ, ಅದಕ್ಕೆ ನಾವು ಅಂಟಿಸುವ ಅರ್ಥವು ಮಾತ್ರ ಧಾರ್ಮಿಕ! ಇದು ವಿಸಂಗತವಲ್ಲವೆ?

ಹಿಂದೂ ಸಮಾಜವೆಂಬ ನೆನಪು ನಮಗೆ ಆಗುವುದು ಯಾವಾಗ? ಮುಸಲ್ಮಾನರ ವಿರೋಧದ ಕಾಲಕ್ಕೆ ಅಥವಾ ತಾವು ಕಿರಸ್ತರಲ್ಲವೆಂದು ಸೂಚಿಸುವ ಕಾಲಕ್ಕೆ; ಆಯ್ತು. ಅದರ ಹೊರತುಪಡಿಸಿ ಉಳಿದ ಕಾಲದಲ್ಲಿ ನಾವು ನಮ್ಮ ವಿಶಿಷ್ಟ ಜಾತಿಯವರೆ! ಹೀಗಿದು ಹೆಸರಿಗೆ ಮಾತ್ರ ಹಿಂದೂ ಸಮಾಜವಾಗಿದೆ! "ಹಿಂದೂ" ಎಂಬುದು ಪ್ರಾದೇಶಿಕ ಶಬ್ದವಿದ್ದು ಅದಕ್ಕೆ ಧಾರ್ಮಿಕ ಅರ್ಥ ಅಂಟಿಸುವುದರಿಂದ ಒಂದು ಹಾನಿಗೆ ಒಳಗಾಗುತ್ತಿದ್ದೇವೆ. ನಮ್ಮ ನಾಡವರೇ ಆಗಿದ್ದೂ ಕೇವಲ ಧಾರ್ಮಿಕ ನಂಬುಗೆ ಬೇರೆಯಾಗಿರುವ ಕ್ರಿಸ್ತಿ ಹಾಗೂ ಮುಸಲ್ಮಾನರು ಈ ದೇಶದ ಅಭಿಮಾನವನ್ನು ವಹಿಸಿ ಈ ದೇಶದೊಡನೆ ಸಮರಸರಾಗಿ ಈ ದೇಶದ ಹೆಸರಿನಿಂದಲೆ ಕರೆದುಕೊಳ್ಳುವಲ್ಲಿ ಹೆಮ್ಮೆಪಟ್ಟುಕೊಳ್ಳಲು ನಾವೇ ಅವರಿಗೆ ತಡೆ ಹಿಡಿಯುತ್ತಿರುವೆವಲ್ಲವೆ? ವೈಯಕ್ತಿಕ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟು ಹಿಂದೂ ದೇಶದೊಡನೆ ಒಂದು ಜೀವವಾದವರೆಲ್ಲ ಹಿಂದೂಗಳೇ ಎಂದು ಹೇಳಲು ಅಡ್ಡಿಯೇನು?

ಇನ್ನು, ಈ ಮುಂದಡಿಯ ವಿಚಾರವು ಹೋಗಲಿ, ಧಾರ್ಮಿಕ ಅರ್ಥವನ್ನೆ ಇಟ್ಟುಕೊಂಡರೂ ಹಿಂದೂ ಸಮಾಜವೆಂಬುದು ಅವಿಭಾಜ್ಯ, ಅಖಂಡ, ಏಕಜೀವ ಸಮಾಜವಾಗಬೇಕಿದ್ದರೆ ನಮ್ಮೊಳಗೆ ಸ್ಪೃಶ್ಯಾಸ್ಪೃಶ್ಯ, ಬ್ರಾಹ್ಮಣ-ಅಬ್ರಾಹ್ಮಣ ಎಂಬೀ ಬಗೆಯ ವಾದಗಳಿಗೆ ಇಂಬು ದೊರೆಯದಂತೆ ನಮ್ಮ ಈಗಿನ ನಡೆವಳಿಯಲ್ಲಿ ಹಲವು ಮಹತ್ವದ ಬದಲಾವಣೆಗಳು ಆಗಲೇಬೇಕಲ್ಲವೆ? ಹಳೆಯ ನಾಲ್ಕು ವರ್ಣಾಶ್ರಮಗಳು ಮೂಲೆಗುಂಪಾಗಿ ಈಗ ಸಾವಿರಾರು ಜಾತಿಮತಗಳ ಸಂತೆ ನೆರೆದಿದೆ. ಈ ಅವ್ಯವಸ್ಥೆಯನ್ನು ಹೋಗಲಾಡಿಸಲು ಮಹಾತ್ಮಾಜೀಯವರು ಇತ್ತೀಚೆಗೆ ಸೂಚಿಸುತ್ತಿರುವಂತೆ ಹಿಂದೂಗಳೆಂಬವರೆಲ್ಲರೂ ಏಕವರ್ಣೀಯರೆಂದು ನಂಬಬೇಕು. ಇವರಲ್ಲಿ ಅನ್ನ-ಕನ್ಯಾ ವ್ಯವಹಾರಗಳಿಗೆ ಹಳೆಯ ರೀತಿಯ ಜನ ಜಾತಿಯ ಮೂಲಕವಾದ ಯಾವ ಅಡೆತಡೆಗಳೂ ಉಳಿಯಲಾಗದು. ಸಮಾನ ಸಂಸ್ಕೃತಿಯವರೊಡನೆ ತಾವು ಅನ್ನ-ಕನ್ಯಾ ವ್ಯವಹಾರ ಮಾಡಲು ಸಿದ್ಧರೆಂಬ ತತ್ವವನ್ನು ಮಾನ್ಯ ಮಾಡಬೇಕಾಗುವುದು. ಸ್ಪೃಶ್ಯರು ಅಸ್ಪೃರಿಗೆ, ಅಸ್ಪೃಶ್ಯರೆಂದು ಊಟಕ್ಕಾಗಲಿ, ಮದುವೆಗಾಗಲಿ ಅಯೋಗ್ಯರೆಂದು ಭಾವಿಸಲಾಗದು. ಇನ್ನು ಮೇಲೆ ವಿವಾಹಗಳಲ್ಲಿ ಸಂಸ್ಕೃತಿಯ ಮಟ್ಟವು ಮುಖ್ಯವಾದ ವಿಚಾರವೇ ಹೊರತು ಜನ್ಮ-ಜಾತಿಯಲ್ಲ. 'ಶಿಕ್ಷಣ, ವಿಚಾರ, ಸಂಸ್ಕಾರಗಳಲ್ಲಿ ವ್ಯತ್ಯಾಸವು ಬಹಳವಿರುವುದರಿಂದ ತಾವು..... ಇವರಿಗೆ ತಮ್ಮ ಬೀಗರೆಂದು ಮಾಡಿಕೊಂಡಿಲ್ಲ'? ಎನ್ನಬಹುದು. ಆದರೆ, ಈ ಮಾತು ಜಾತಿಯ ಹೆಸರಿನಲ್ಲಿ ಮುಖ್ಯವಾಗಿ ಮುಂದೆ ಬರಲಾಗದು. ಶ್ರೀ ರಾಜಗೋಪಾಲಾಚಾರ್ಯ ಹಾಗೂ ಶ್ರೀ ಗಾಂಧಿಯವರು ಭಿನ್ನಜಾತಿಯವರಾದರೂ ಸಮಾನ ಸಂಸ್ಕೃತಿಯವರೆಂದು ಬೀಗರಾಗಲಿಲ್ಲವೇ? ಹೀಗೆ ಸಂಸ್ಕೃತಿಯ ಮಟ್ಟಕ್ಕೆ, ಜೀವನದ ಮೇಲ್ಮೆಗೆ ಮಹತ್ವವು ಕೊಡಲ್ಪಟ್ಟರೆ ನಮ್ಮ ಒಳಜಾತಿಗಳಲ್ಲಿ ಸುಧಾರಣೆಗಳು ತಾವೇ ಆಗಹತ್ತುವವು. ಇಂದಿನ ಭೇದಗಳು ಬೇಗನೆ ಕಡಿಮೆಯಾಗಿ ಒಳಪಂಗಡಗಳು ಕ್ರಮವಾಗಿ ಮಾಯವಾಗಲಾರಂಭಿಸುವುವು.

ಇಂತೀ ಬಗೆಯಾಗಿ ಹಿಂದೂ ಸಮಾಜವೆಂಬುದು ಜನ್ಮತಾಳಿ, ಬೇಗನೆ ಒಳಗಣ ಅಂಗಾಂಗಗಳಲ್ಲಿ ಹೊಂದಿಕೊಂಡು ಪರಸ್ಪರ ಸಹಕಾರ, ಸಹಾನುಭೂತಿ ಆತ್ಮೀಯತೆಗಳಿಂದ ಪುಷ್ಟವಾಗಿ ಸತ್ವಶಾಲಿಯಾಗಿ

ಜಗದ್ರಂಗದಲ್ಲಿ ಮುಂದುವರಿದು ಮೆರೆದೀತೆಂಬುದು ನನ್ನ ಕಂಡಿತ. ಹಿಂದೂ ಎನಿಸಿಕೊಳ್ಳುವ ಸಮಾಜಕ್ಕೆಲ್ಲ ಸಮಾನವಾದ ಕಾಯದೆ ಕಾನೂನಿನ ಗ್ರಂಥವು ಇನ್ನೂ ಆಗಿಲ್ಲ. ಒಂದೊಂದು ಪಂಗಡದವರಿಗೆ ಅನ್ವಯಿಸುವ ಕಟ್ಟಗಳೆಗಳೇ ಬೇರೆ ಬೇರೆ! ಇದೀಗ ಕೇಂದ್ರಸರಕಾರವು, ರಾವ್‌ಸಮಿತಿಯವರು ಸೂಚಿಸಿದ ಕ್ರಮದಲ್ಲಿ ಅಖಿಲ ಹಿಂದೂ ಸಮಾಜವೆಲ್ಲ ಒಂದೇ ಬಗೆಯ ಕಾನೂನುಗಳಿಂದ ಬದ್ಧವಾಗಿರಬೇಕೆಂದು, ಒಂದು ಯೋಜನೆಯನ್ನು ಹಿರಿಯೋಲಗದಲ್ಲಿ ವಿಚಾರಿಸಲು ಮಂಡಿಸಿದೆ. ಈ ಸಂಗತಿಯಿಂದಲೂ ಹಿಂದೂ ಎಂಬ ಸಮಾಜವು ಈಗ ಒಂದು ಏಕರದಲ್ಲಿ ರೂಪಗೊಳ್ಳುತ್ತಲಿದೆ, ಎಂಬುದೇ ಸಿದ್ಧವಾಗುತ್ತದೆ.

ಬ್ರಿಟಿಶರು ಮನಸುಮಾಡಿದ್ದರೆ, ಒಳಜಾತಿಮತಗಳು ಏನೇ ಇರಲಿ; 'ಹಿಂದೂಸ್ತಾನದ ನಾಗರಿಕರೆಲ್ಲರೂ ಹಿಂದೂ' ಎಂದು ವ್ಯಾಖ್ಯೆಮಾಡಿ ಅದಕ್ಕನುಗುಣವಾಗಿ ಶಿಕ್ಷಣಕೊಟ್ಟು ದೇಶಾಭಿಮಾನವನ್ನು ಜಾಗೃತಗೊಳಿಸಿ ದೇಶದೊಳಗೆ ಐಕ್ಯವನ್ನುಂಟು ಮಾಡಬಹುದಿತ್ತು. ನಮ್ಮೊಳಗಿನ ಒಳಬಣಗಳೆಲ್ಲ ಒಂದಾಗಿ ಸ್ವಾರ್ಥಕ್ಕಾಗಿ ಒಂದರೊಡನೊಂದು ಕಲಹಗಳನ್ನು ನಡಸದೆ ಇದ್ದರೆ, ಬ್ರಿಟಿಶರಿಗೆ ಇದಕ್ಕೂ ಮೊದಲೇ ಎಂದೊ ಕಾಲುಕಿತ್ತ ಬೇಕಾಗುತ್ತಿತ್ತು. ಭೇದಬುದ್ಧಿಯ ತಾವು ನಿಂತ ಕೊಂಬೆಯನ್ನು ತಾವೇ ಕತ್ತರಿಸುವಷ್ಟು ಬುದ್ಧಿಹೀನರೆ ಬ್ರಿಟಿಶ ರಾಜಕಾರಣಿಗಳು? ಹಿಂದೂ ಎಂಬ ಪದವು ಹನ್ನೆರಡನೆಯ ಶತಮಾನದ ಮೊದಲು ಅಷ್ಟು ಪ್ರಚಾರದಲ್ಲಿ ಬಂದಿರಬಹುದೆಂದು ತೋರುವುದಿಲ್ಲ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಈ ಪದವು ಕಾಣಿಸಿಕೊಳ್ಳುವುದಿಲ್ಲ. 'ಭರತವರ್ಷೇ, ಭರತ ಖಂಡೇ'...... ಎಂದು ಭಾರತದ ಹೆಸರೇ ಪುರಾತನವಾದುದು.

ಸುಲ್ತಾನರು ಮುಸಲ್ಮಾನರ ರಾಜರು; ತಾವು ಮುಸಲ್ಮಾನರಲ್ಲದ ಇನ್ನೊಂದು ಸಮಾಜದ ಸುಲ್ತಾನರು ಎಂಬರ್ಥದಲ್ಲಿ ವಿಜಯನಗರದ ರಾಜರು ತಮ್ಮನ್ನು 'ಹಿಂದೂರಾಯ ಸುರತ್ರಾಣ'ರೆಂದು ವಿಶೇಷಿಸಿಕೊಂಡುದು ಕಂಡುಬರುತ್ತದೆ. ಹಿಂದೂಸ್ತಾನವೆಂಬ ಹೆಸರು ಬಳಕೆಯಲ್ಲಿ ಬಂದುದು ಪರಕೀಯರಾದ ಮಹಮ್ಮದೀಯರಿಂದಲೇ. ಸಿಂಧೂದೇಶವೆಂದು ಆ ನದಿಯಾಚೆಯವರು ಈ ದೇಶಕ್ಕೆ ಕರೆವ ವಾಡಿಕೆಯಿತ್ತು. ಸಿಂಧೂ ಶಬ್ದವಾ ಮಹಮ್ಮದೀಯರ ಬಾಯಲ್ಲಿ ಹಿಂದೂವಾಗಿ ಪರಿಣಮಿಸಿತು. ಇದು ಹಿಂದೂದೇಶ. ಈ ದೇಶದಲ್ಲಿ ವಾಸಿಸುವರು ಹಿಂದುಗಳು; ದೇಶವಾಚಕ ಅರ್ಥದಿಂದಲೇ ಹಿಂದೂಜನವೆಂಬ ಮಾತು ಮೊದಲು ತಲೆದೋರಿತು. ಆಮೇಲೆ ಕ್ರಮವಾಗಿ ಲಕ್ಷಣಾರ್ಥದಿಂದ ಧರ್ಮವೆಂಬ ಅರ್ಥವೂ ಹಿಂದೂ ಪದಕ್ಕೆ ಬಂದಿದೆ.

ಈ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಿದರೆ, ಹಿಂದೂ ದೇಶದ ನಾಗರಿಕರಾದ ಬಳಿಕ ಮುಸಲ್ಮಾನಾದಿ ಎಲ್ಲ ಜನಗಳೂ ಹಿಂದುಗಳೇ ಆಗುವುದಿಲ್ಲವೆ? ಆದರೆ, ಬ್ರಿಟಿಶರ ಭೇದ ನೀತಿಯ ದುಷ್ಪರಿಣಾಮಗಳ ಫಲವಾಗಿ ಹಿಂದೂ ಎಂಬುದಕ್ಕೆ ಒಂದು ಜಾತಿ ಎಂಬ-ಎಲ್ಲಿ ಈವರೆಗೆ ಒಂದೇ ಜಾತಿಯಾಗಿಲ್ಲವೊ, ಒಂದು ಧರ್ಮಗ್ರಂಥ ಇಲ್ಲ, ಕಾನೂನು ಇಲ್ಲವೊ ಅವರಿಗೆ ಒಂದು ಜಾತಿ, ಎಂಬ ಸಂಕುಚಿತಾರ್ಥವು ಅಂಟಿಕೊಂಡಿತು! ಅದರಿಂದ ಮುಸಲ್ಮಾನರು ಹಿಂದೂದೇಶದವರಲ್ಲವೆಂಬ ದುರ್ವಿಚಾರಕ್ಕೆ ಬೇರು ಹಿಡಿಯಲು ಇಂಬು ದೊರೆತಿತು.

ಧಾರ್ಮಿಕ ಹುಚ್ಚಿನಲ್ಲಿ ನಾವು ಈ ಭೇದ ನೀತಿಗೆ ಬಲಿಯಾದೆವು. ಮುಸಲ್ಮಾನರನ್ನು ಅರಗಿಸಿಕೊಳ್ಳುವ ಬಗೆಯನ್ನು ಕಂಡು ಹಿಡಿಯುವುದು ಒತ್ತಟ್ಟಿಗೆ ಉಳಿಯಿತು. ಅವರಿಗೆ, ಸ್ವತಂತ್ರ ಮತದಾರ ಸಂಘ, ಸ್ವತಂತ್ರ ಪ್ರತಿನಿಧಿತ್ವದ ಹಕ್ಕುಗಳನ್ನು ಕೊಡಮಾಡಿದ ಬ್ರಿಟಿಶರ ತಂತ್ರವನ್ನು ವಿರೋಧಿಸದೆ ಆ ದಿಕ್ಕನಲ್ಲಿಯೆ ದಿನದಿನಕ್ಕೂ ಮುಂದೆ ಸಾಗಿ ಅಂತ್ಯವು ಸಮೀಪಿಸಿದಾಗ, 'ಇದು ಹೀಗಾಗಬಾರದಾಗಿದ್ದಿತು; ಹೀಗಾಗಲೇ ಕೂಡದು' ಎಂದು ಕೂಗಾಟ; ಮಿಡುಕಾಟಕ್ಕೆ ಆರಂಭವಾಯ್ತು! ಮಹಾತ್ಮಾಜೀಯವರು ಖಿಲಾಫತ್ ಚಳವಳಿಯ ಕಾಲದಲ್ಲಿ ಮುಸಲ್ಮಾನರ ಧರ್ಮಾಭಿಮಾನದ ಬಂಡವಾಳವನ್ನು ಬಳಿಸಿ, ಅದನ್ನು ಇಮ್ಮಡಿಸಿದರು! ರಾಜಕಾರಣದಲ್ಲಿ ಧಾರ್ಮಿಕ ವಿಚಾರಕ್ಕೆ ಇಂಬುಗೊಡಲಾಗದೆಂದು ಅವರೇ ಮುಂದೆ ಬಹಳ ಜಾಗೂಕರಾಗಿ ಪ್ರತಿಪಾದಿಸಿದ್ದೇನೋ ನಿಜ. ಆದರೆ ೧೯೨೦ರಲ್ಲಿ ಬಂದ ಕಟು ಅನುಭವದಿಂದಲೇ ಅವರು ಎಚ್ಚತ್ತಿರಬೇಕು. ಖಿಲಾಫತ್ ಚಳವಳಿಯ ಮೂಲಕ ಮೌಲಾನಾಗಳಂತಹ ಧಾರ್ಮಿಕರದು ಅಲ್ಲದೆ, ಜನಸಾಮಾನ್ಯದ ದೃಷ್ಟಿಯೂ ಕೂಡ ಸಂಪೂರ್ಣವಾಗಿ

ಬಹಿರ್ಮುಖವಾಯಿತು. ತಮ್ಮ ಜೀವಾಳದ ಸ್ಥಾನಗಳು ಭಾರತದಲ್ಲಿಲ್ಲ; ಖಲೀಫನು ತಮ್ಮ ನೇತಾರ; ಮಕ್ಕಾ-ಮದೀನಾ ತಮ್ಮ ಪಂಚಪ್ರಾಣದಂತಿರುವ ಕ್ಷೇತ್ರಗಳು. ಹೀಗೆ ಇವರ ದೃಷ್ಟಿ ತುರ್ಕಸ್ತಾನ, ಅರಬಸ್ತಾನಗಳ ಕಡೆಗೆ ನೆಟ್ಟಿತು. ಹಿಂದುಸ್ತಾನದಿಂದ ತಾವು ಭಿನ್ನರೆಂಬ ವಿಷವು ಖಿಲಾಫತ ಚಳವಳಿಯಿಂದ ಬಹುತರ ಮುಸಲ್ಮಾನರ ದೇಹದಲ್ಲಿ ಚೆನ್ನಾಗಿ ವ್ಯಾಪಿಸಿತು. ಪಾಕಿಸ್ತಾನದ ಪೂರ್ವಪೀಠಿಕೆಯು ಇಂತು ಗಾಂಧಿಜೀಯವರಿಂದಲೆ ಆಯಿತು! ಇದುವೆ ಕಾಲನ ವಿಚಿತ್ರಲೀಲೆ: 'ಉದ್ಧರೇತ್ ಆತ್ಮನಾತ್ಮಾನಂ; ಆತ್ಮಾನಮವಸಾದಯೇತ್' ಎಂಬ ಎರಡೂ ದಿವ್ಯವಚನಗಳಿಗೆ ದಿವ್ಯವಾದ ದೃಷ್ಟಾಂತವಿಲ್ಲಿದೆ.

ಈಗ ಮತ್ತೆ ಆ ಮೂಲ ಪ್ರಶ್ನೆಯೆ ತಲೆದೋರಿದೆ. 'ಇನ್ನುಳಿವ ಮುಸಲ್ಮಾನರಾದರೂ ಹಿಂದೂ ದೇಶದ ನಾಗರಿಕರಾಗುವರೆ?' ಹಿಂದುಸ್ತಾನದ ನಾಗರಿಕರೆಲ್ಲ ಹಿಂದುಗಳು, ಎಂದು ಎಲ್ಲರಿಗೂ ಹಿಂದುಗಳೆನ್ನಲು, ಹಿಂದೂ ಶಬ್ದಕ್ಕೆ ಮಧ್ಯಕಾಲದಲ್ಲಿ, ದೊರೆಕೊಂಡಿರುವ ಸಂಕುಚಿತಾರ್ಥವು ಅಡ್ಡಬರುತ್ತದೆ. ಹಿಂದೂ ಎಂದೊಡನೆ ಮುಖ್ಯವಾಗಿ ಮುಸಲ್ಮಾನರನ್ನುಳಿದ ಕೆಲವೊಂದು ವಿಶಿಷ್ಟ ಜನವೆಂಬ ಅರ್ಥವು ಈಗ ರೂಢವಾಗಿದೆ; ಎಂದು ಕೆಲವರು ಆಕ್ಷೇಪಿಸಲು ಅವಕಾಶವಿದೆಯಾದರೂ ಈ ಆಕ್ಷೇಪಣೆಯಲ್ಲಿ ವಿಶೇಷ ಹುರುಳಿಲ್ಲ. ಇದು ಜಾತ್ಯತೀತವಾದ ಕೇವಲ ಪ್ರಾದೇಶಿಕ ಅರ್ಥದ ಪದವಾಗಿದ್ದು ಎಲ್ಲರೂ ಹಾಗೆ ಅದನ್ನು ಬಳಸಲು ತೊಡಗಿದರೆ, ಎಲ್ಲವೂ ಸರಿ ಹೋಗುವುದು. ಅಮೇರಿಕೆಯಲ್ಲಿ ಹಿಂದುಸ್ತಾನದವನೆಂಬರ್ಥದಲ್ಲಿ 'ಹಿಂದೂ' ಎಂಬ ಪದವೇ ಬಳಕೆಯಲ್ಲಿ ಇಲ್ಲವೆ? 'ಇಂಡಿಯನ್' ಎಂದರೆ ರೆಡ್‌ಇಂಡಿಯನ್‌ರೆಂಬ ಕಾಡಾಡಿಗಳ ಹೆಸರು ಅಲ್ಲಿ!

ಆದರೆ, ಬ್ರಿಟಿಶರ ಕೈವಾಡದಿಂದಲೂ, ಮತ್ತು ಮುಸಲ್ಮಾನರ ಲೀಗಿನ ವಿರುದ್ಧ ಹಿಂದೂ ಮಹಾಸಭೆಯು ಸ್ಥಾಪಿತವಾಗಿ, ನಡೆದ ಹಿಂದೂಸಂಘಟನೆಯ ಚಳವಳಿಯಿಂದಲೂ ಹಿಂದೂ ಶಬ್ದವು ಮುಸಲ್ಮಾನರ ಭಾವನೆಗಳನ್ನು ಉದ್ರೇಕಿಸುವ ಒಂದು ಪದವಾಗಿ ಬಿಟ್ಟಿತು. ಈ ಕಾರಣದಿಂದಲೇ ಇಂದು ಭಾರತದ ಸಂಘ ರಾಜ್ಯಕ್ಕೆ 'ಹಿಂದೂ ಸಂಘರಾಜ್ಯ'ವೆಂಬ ಹೆಸರಿನಿಂದ ಕರೆಯಲು ಪಂ. ಜವಾಹರಲಾಲ ನೆಹರೂರ ವಿರೋಧವು ಕಂಡುಬರುತ್ತಿದೆ. 'ಹಿಂದೂಸಂಘರಾಜ್ಯ'ವೆಂಬ ದೇಶೀಯ ಹೆಸರಿನ ಸ್ಥಳದಲ್ಲಿ 'ಇಂಡಿಯನ್' ಎಂಬ ಪರಕೀಯ ಪದವನ್ನೇ ಕೇಂದ್ರ ಸರಕಾರವು ಬಳಸುತ್ತಲಿದೆ! ಹಾಗಾದರೆ, 'ಇಂಡಿಯನ್' ಎಂಬುದಕ್ಕೆ ಸಮಾನವಾದ ಹಿಂದೂ ದೇಶದ ಜನಗಳು, ಎಂಬ ಭಾವದ ಜಾತ್ಯತೀತವಾದ ಅರ್ಥದ ಒಂದು ದೇಶೀಯ ಪದದ ಅವಶ್ಯಕತೆಯಂತೂ ಉಂಟಷ್ಟೆ? 'ಇಂಡಿಯನ್' ಎಂಬುದು ಇಂಗ್ರೇಜಿ ಭಾಷೆಯಲ್ಲಿ ಮಾತ್ರ ರೂಢವಾಗಿದೆ. ದೇಶ ಭಾಷೆಗಳಲ್ಲಿ ಇದು ಇನ್ನೂ ಶಿಷ್ಟ ಸಂಮತವಾದ ಮಾತಾಗಿಲ್ಲ. 'ಹಿಂದೀ'ಯರು ಎನ್ನವುದರಿಂದ 'ಇಂಡಿಯನ್' ಎಂಬ ಸಮಾನ್ಯವಾದ ಅರ್ಥವು ಈಗ ಧ್ವನಿತವಾಗುತ್ತಲಿದೆ. 'ಹಿಂದೂ' ಪದಕ್ಕೆ ಇರುವ ಸಂದಿಗ್ಧತೆಗೆ ಇಲ್ಲಿ ಅವಕಾಶವಿಲ್ಲ. ಹಿಂದೀಯರು ಎಂಬಲ್ಲಿ ಮುಸಲ್ಮಾನರು, ಮುಸಲ್ಮಾನೇತರರು ಹಿಂದೂ ದೇಶದ ಎಲ್ಲ ಜನವೆಂಬ ಅರ್ಥವು ಈಗ ರೂಢವಾಗುತ್ತಲಿದೆ. ಹಿಂದೂ ದೇಶದ ಜನರು ಹಿಂದೀಯರು; ಅವರ ರಾಷ್ಟ್ರಭಾಷೆ ಹಿಂದೀ, ಎಂಬ ಮಾತುಗಳು ಈಗ ಬಳಕೆಯಲ್ಲೂ ಉಂಟು.

ಆದರೆ, ಹಿಂದೀಯರೆಂಬುದಕ್ಕೆ ಒಂದು ದೊಡ್ಡ ಆಕ್ಷೇಪವಿದೆ. ಪರರಾಷ್ಟ್ರಗಳಲ್ಲಿ ನಮ್ಮವರನ್ನು ನಮ್ಮ ರಾಷ್ಟ್ರದ ಹೆಸರಿನಿಂದಲೇ ಗುರುತಿಸುವ ಆವಶ್ಯಕತೆಯ ಮಹತ್ವವನ್ನು ಬೇರೆ ಹೇಳಬೇಕಾಗಿಲ್ಲ. ನಮ್ಮ ರಾಷ್ಟ್ರಭಾಷೆ ಇಂಗ್ರೇಜಿಯಲ್ಲ; ನಮ್ಮ ಸ್ವಂತದ ರಾಷ್ಟ್ರಭಾಷೆಯೊಂದಿದೆ, ಎಂಬ ಹೆಮ್ಮೆಯನ್ನು ತಾಳುವ ನಮ್ಮ ಮುಂದಾಳುಗಳು, ತಮ್ಮ ರಾಷ್ಟ್ರಕ್ಕೆ ಮಾತ್ರ ಇನ್ನೂ 'ಇಂಡಿಯಾ' ಎಂತಲೇ ಕರೆದುಕೊಳ್ಳುತ್ತಿರುವುದು ಅವರ ಸ್ವಾಭಿಮಾನಕ್ಕೇ ಕುಂದು. ತಮ್ಮ ಜಾತ್ಯತೀತನದ ಪ್ರದರ್ಶನದಲ್ಲಿ ಬಹುಸಂಖ್ಯಾಕರು ನಿರ್ದೇಶಿಸಲ್ಪಡುವ 'ಹಿಂದೂ' ಎಂಬ ಹೆಸರನ್ನೆ ಒರಸಿಬಿಡುವ ಎತ್ತುಗಡೆಯಲ್ಲಿದ್ದಾರೆ. ಸಹಜ ಸುಲಭವಾದ 'ಹಿಂದೀ' ಎಂಬುದರ ಬದಲು ಭಾಷೆಗೆ 'ಹಿಂದುಸ್ತಾನೀ' ಎಂದು ಉಚ್ಚರಿಸಲು ಉದ್ದವಾದ ಪದವನ್ನು ರೂಢಿಸಬೇಕೆಂದಿದ್ದಾರೆ. ದ್ವಿರಾಷ್ಟ್ರವಾದದ ನಂಜು ನಮ್ಮ ನಾಡಿನಲ್ಲಿ ಉಳಿಯಲಾಗದೆಂದು ಆವೇಶದಿಂದ ಹೇಳುತ್ತಾರೆ. ಆದರೆ, ದೇವನಾಗರಿಯೊಡನೆ ಉರ್ದೂಲಿಪಿ

ಯನ್ನೂ ಕಲಿಸುವ ಒತ್ತಾಯದ ವಿಚಾರ ನಡಸಿದ್ದಾರೆ! ಹಿಂದೂ ದೇಶದಲ್ಲಿ ನೆಲಸಿದವರೆಲ್ಲರೂ ಹಿಂದೂಗಳೇ, ಎಂಬ ಸರಳವಾದ ವ್ಯಾಖ್ಯೆಮಾಡಿದರೆ ಎಲ್ಲ ಜನಗಳಿಗೂ ಜಾತ್ಯತೀತ ದೃಷ್ಟಿಯನ್ನು ತಂದುಕೊಳ್ಳುವ ಆವಶ್ಯಕತೆ ಯುಂಟಾಗುತ್ತದೆ. 'ಹಿಂದೂ' ಎಂಬ ಹೆಸರು ಯಾವ ಧರ್ಮದವರ ಸೊತ್ತಲ್ಲ. ಇದು ದೇಶವಾಚಕ ಪದವೆಂಬುದು ನಿಶ್ಚಿತವಿದೆ. ಆದರೆ, ಹಿಂದಿಯರೆನ್ನುವುದರಿಂದಲೇ ಹಿಂದೂ ಮತ್ತು ಮುಸಲ್ಮಾನರೆಂಬ ವಿಷಬೀಜದ ನೆನಹನ್ನು ಸ್ಥಿರವಾಗಿ ಉಳಿಸಿಕೊಂಡು ನಾವು ಹೊರಡುತ್ತಲಿದ್ದೇವೆ. ಮುಸಲ್ಮಾನರು ತಾವು ಬೇರೆ, ಎಂಬುದಕ್ಕೆ ಎಲ್ಲಿಯೂ ಇಂಬು ಉಳಿಯದಂತೆ ಜಾಗರೂಕತೆಯಿಂದ ಮುಂದೆ ಸಾಗುವುದೇ ಜಾಣ್ಮೆಯಲ್ಲವೊ?

ಹಿಂದೂ ದೇಶದ ನಾಗರಿಕರಿಗೆ ಹಿಂದುಗಳೆನ್ನಲು ಒಪ್ಪದೆ ಹೋದರೆ ಬಹುಸಂಖ್ಯಾಕರ ಹೆಸರನ್ನೆ ಮೂಲೆ ಗುಂಪುಮಾಡಿ ಪ್ರಜಾಪ್ರಭುತ್ವದ ತತ್ವಕ್ಕೆ ಅರದಾಳ ಹಚ್ಚಿದಂತಾಗುವದಿಲ್ಲವೆ? 'ಹಿಂದುಸ್ತಾನದ ನಾಗರಿಕರಿಗೆ ಹಿಂದೂಗಳೆಂದು ಕರೆಯುವುದಕ್ಕೆ ಹಿಂದೆಗೆಯುವ ಮನಃಪ್ರವೃತ್ತಿಯನ್ನು ಪೃಥಕ್ಕರಿಸಿ ವಿಚಾರಿಸಿದರೆ ಅಲ್ಲಿ ಏನು ಕಂಡುಬರುವುದು? ಮುಸಲ್ಮಾನರು ಅಸಂತುಷ್ಟರಾದರೆಂಬ ಹೆದರಿಕೆ! ತಮ್ಮ ದಾರಿಯನ್ನುಬಿಟ್ಟು ಹೋಗಿ ಮುಸಲ್ಮಾನರನ್ನು ಸಂತುಷ್ಟಗೊಳಿಸುವ ಪ್ರಯತ್ನಗಳಿಂದ ಬಂದಿರುವ ಈವರೆಗಿನ ಕಟು ಅನುಭವಗಳು ಸಾಕಾಗಿಲ್ಲವೆ? ಹಿಂದೀ, ಹಿಂದೂ ಎಂಬ ಎರಡು ಜಾತಿವಿಭಾಗಗಳಿಂದ ದೇಶದಲ್ಲಿ ಜಾತೀಯತೆಯ ವಿಷದ ಬೇರುಗಳನ್ನು ಇನ್ನೂ ಉಳಿಸಿಕೊಂಡಂತಾಗಲಿಲ್ಲವೆ? ಅದರಿಂದ ಮುಸಲ್ಮಾನರ ಜಾತ್ಯಂಧತೆಯ ವಿಷವೃಕ್ಷವು ಮತ್ತೆ ಚಿಗುರುವ ಹೆದರಿಕೆಯು ಉಳಿಯಲಿಲ್ಲವೆ?

ಅಖಿಲ ಹಿಂದೂ ಸಮಾಜಕ್ಕೆ ಅನ್ವಯಿಸುವ ಒಂದೇ ಬಗೆಯ ಕಾನೂನುಗಳನ್ನು ರಚಿಸುವ ಸ್ತುತ್ಯವಾದ ಉಪಕ್ರಮವು ಇದೀಗ ನಡೆದಿದೆಯಷ್ಟೆ. ಈ ಸಂದರ್ಭದಲ್ಲಿ 'ಸಂಯುಕ್ತ ಕರ್ನಾಟಕ'ದ ಸಂಪಾದಕರು ಇನ್ನೂ ಒಂದು ಅಡಿ ಮುಂದಿಟ್ಟು ವಿಚಾರಾರ್ಹವಾದ ಬಹಳ ಮಹತ್ವದ ಒಂದು ಸೂಚನೆಯನ್ನು ಮಾಡಿದ್ದಾರೆ. ಹಿಂದೂ ದೇಶದ ನಾಗರಿಕರಿಗೆಲ್ಲ ಒಂದೇ ಸ್ಮೃತಿ ಗ್ರಂಥ (ಕಾಯಿದೇ ಪುಸ್ತಕ) ಇರುವುದೇ ನ್ಯಾಯವಾದುದು. ಹಿಂದೂ ಕಾಯಿದೆ, ಮುಸಲ್ಮಾನ ಕಾಯಿದೆ, ಕ್ರಿಸ್ತೀಕಾಯಿದೆ, ಪಾರ್ಸಿಕಾಯಿದೆ ಹೀಗೆಲ್ಲ ಬೇರೆ ಬೇರೆ ಕಾಯಿದೆಗಳನ್ನು ಚಲಾವಣೆಯಲ್ಲಿ ಉಳಿಸಿಕೊಂಡು ಹೊರಡುವುದು ಭಾರತೀಯ ಸಂಗರಾಜ್ಯದಲ್ಲಿ ಜಾತ್ಯತೀತವಾದ ಒಂದೇ ಜನಾಂಗವು ರೂಪುಗೊಳ್ಳಬೇಕೆಂಬ ಮೂಲೋದ್ದೇಶಕ್ಕೇ ಬಾಧಕವಾಗುತ್ತದೆ. ಆದಕಾರಣ, ಹಿಂದೂ ದೇಶದ ನಾಗರಿಕರಿಗೆಲ್ಲ ಒಂದೇ ಸ್ಮೃತಿಯನ್ನು ಅನುಸರಿಸುವ ಆವಶ್ಯಕತೆಯಿದೆ.

> "ಹಿಂದುಸ್ತಾನವು ಸ್ವತಂತ್ರ ಜಾತ್ಯತೀತ ರಾಷ್ಟ್ರವೆಂದು ರಾಷ್ಟ್ರೀಯ ಸರಕಾರವು ತನ್ನ ಗುರಿಯನ್ನು ಸಾರಿದೆ. ಈ ಘೋಷಣೆಯ ಮೇರೆಗೆ ಹಿಂದುಸ್ತಾನದಲ್ಲಿರುವ ಎಲ್ಲ ಜಾತಿಯವರಿಗೂ ಒಂದೆ ಬಗೆಯ ಕಾಯಿದೆ ಕಾನೂನುಗಳಿರುವಂತೆ ಏರ್ಪಡಿಸುವುದು ಸರಕಾರದ ಕರ್ತವ್ಯವಾಗಿದೆ." (೧೩-೪-೪೮).

ಹಿಂಬರೆಹದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವು ಅತ್ಯಂತ ಮನನೀಯವಾಗಿದೆ.

ಹೊಸ ಹಿಂದೂ ಕಾಯಿದೆಯ ಮೇರೆಗೆ ಒಬ್ಬನಿಗೆ ಒಬ್ಬಳೇ ಮಡದಿಯಿರತಕ್ಕದ್ದು. ಆದರೆ, ಮುಸಲ್ಮಾನ ಕಾಯಿದೆಯಂತೆ ಒಂದಕ್ಕಿಂತ ಹೆಚ್ಚು ಹೆಂಡಂದಿರು ಇರಲು ಅಡ್ಡಿಯಿಲ್ಲ! ಹಿಂದೂ ವಿಲಾಸಿಯೊಬ್ಬನು ಒಬ್ಬಳಿಗಿಂತ ಹೆಚ್ಚು ಮದುವೆಯಾಗುವ ಅಪೇಕ್ಷೆಯುಳ್ಳವನಾದರೆ ಅಥವಾ ಯಾರಿಗಾದರೂ ಒಬ್ಬ ಹೆಂಡತಿಯಿರುವಾಗ ಇನ್ನೊಬ್ಬಳನ್ನೂ ಕೈಹಿಡಿವ ಅನಿವಾರ್ಯ ಪ್ರಸಂಗವು ಉದ್ಭವಿಸಿದಾಗ ಇಂತಹರು ಹಿಂದೂಧರ್ಮದಲ್ಲಿ ಇರುವುದಕ್ಕಿಂತ ಮುಸಲ್ಮಾನನಾಗುವುದು ಲೇಸೆಂದು ಬಗೆಯಬಹುದಾಗಿದೆ. ಬಹುದಿನ ಮಾತು ಏತಕ್ಕೆ? ಈ ಕಾರಣಾಕ್ಕಾಗಿಯೆ ಜಾತಿಯನ್ನು ತೊರೆದವರ ಉದಾಹರಣಗಳು ಬೇಕಾದಷ್ಟಿವೆ. ಬೇರೆಬೇರೆ ಕಾನೂನುಗಳು ಆದಲ್ಲಿ ಇಂತಹ ಸಂಗತಿಗಳು ಸಂಭವಿಸಿ ಹಿಂದು-ಮುಸಲ್ಮಾನರಲ್ಲಿ ಮತ್ತೆ ಜಾತಿಜಾತಿಗಳೊಳಗಿನ ಹಗೆತನವು ಹೊತ್ತಿ ಬೆಳೆಯದೆ ಇರಲಾರದು.

ಇಂದಿನ ವಿಶೇಷ ಪರಿಸ್ಥಿತಿಯ ಕಾವಿನಲ್ಲಿ ಕರಗಿ ಎಲ್ಲವೂ ಒಂದು ರೂಪವನ್ನು ತಾಳುವುದರಲ್ಲಿದೆ. ಈ ಸಂದರ್ಭದ ಲಾಭಪಡೆದು ರಾಷ್ಟ್ರೀಯ ಸರಕಾರದವರು ಹಿಂದೂ ದೇಶಕ್ಕೆಲ್ಲ ಅನ್ವಯಿಸುವ ಒಂದೆ ಬಗೆಯ ಕಾಯಿದೆ ಕಾನೂನುಗಳನ್ನು ಮಾಡುವುದು- ಹಿಂದೂ ದೇಶದ ನಾಗರಿಕರನ್ನೆಲ್ಲ ಹಿಂದುಗಳೆಂದು ಸಾರುವುದು ಸಮಂಜಸವಾಗಿದೆ. ಹಿಂದುಗಳೆಂಬ ಪದವನ್ನು ಬಳಕೆಯಲ್ಲಿ ತರುವುದಕ್ಕಾಗಿ ಮುಸಲ್ಮಾನರೂ ಮುಸಲ್ಮಾನೇತರರು ಎಲ್ಲರೂ ಒಂದು ಬಗೆಯ ತ್ಯಾಗಕ್ಕೆ ಸಿದ್ಧರಾಗಿ ಹಳೆಯ ಸಂಕುಚಿತ ಭಾವನೆಗಳ ಕೊಳೆಯನ್ನು ತೊಳೆದು ಶುಚಿಯಾಗಿ ತಾವು ನೆಲೆಸಿದ್ದು ಹಿಂದೂ ದೇಶದಲ್ಲಿ; ಹಿಂದೂ ದೇಶದ ನಾಗರಿಕರೆಲ್ಲ ಹಿಂದುಗಳು ಎಂಬ ನಿರ್ಧಾರಕ್ಕೆ ಬರುವುದು ಆವಶ್ಯಕವಿದೆ. ರಾಷ್ಟ್ರೀಯ ಅಖಂಡತೆಗೆ, ಜನಾಂಗದ ಒಂದು ತನದ ಸಿದ್ಧಿಗೆ ಇದೇ ಉತ್ತಮ ಉಪಾಯ.

ಮುಸಲ್ಮಾನರ ತೊಡಕು

ಖಿಲಾಪತಿನಂತಹ ಧಾರ್ಮಿಕ ಆಂದೋಲನಕ್ಕೆ ಉತ್ತೇಜನಕೊಟ್ಟ ಮಾತುಗಳನ್ನು ಬಿಟ್ಟರೂ ಮಹಾತ್ಮಾಜೀಯವರು ೧೫ನೆಯ ಆಗಷ್ಟಿನ ವರೆಗೆ ಹಿಂದೂ ಮುಸಲ್ಮಾನರ ಒಕ್ಕಟ್ಟಿನ ವಿಷಯವಾಗಿ ಮಾಡುತ್ತಿದ್ದ ಉಪದೇಶದ ತಾತ್ವಿಕ ಭೂಮಿಕೆಯನ್ನು ಸಮಂಜಸರಾದವರು ಯಾರಾಗಲಿ ಒಪ್ಪಲೇ ಬೇಕಾಗುತ್ತಿತ್ತು. ಆದರೆ, ೧೫ನೆಯ ಆಗಷ್ಟಿನ ನಂತರದ ಸ್ಥಿತಿಯು ತೀರ ಬದಲಾಗಿದೆ.

ಭಾರತವು ಒಂದೇ ರಾಷ್ಟ್ರ. ಆದರಲ್ಲಿ ನೆಲಸಿದವರೆಲ್ಲರೂ ಯಾವ ಧರ್ಮದವರೇ ಇರಲಿ ಒಂದು. ಇವರಲ್ಲಿ ಐಕ್ಯ ಸೌಹಾರ್ದಗಳು ನೆಲೆಗೊಳುವುದು ಅವಶ್ಯ. ಆದಕಾರಣ ಮುಸಲ್ಮಾನರೊಡನೆ ಹೊಂದಿಸಿಕೊಂಡಿರುವುದು ಬಹುಸಂಖ್ಯಾಕರಾದ ಹಿಂದುಗಳ ಕರ್ತವ್ಯವೇ ಆಗಿತ್ತು. ಅಲ್ಪಸಂಖ್ಯಾಕರಿಗೆ ತಮ್ಮ ಬದುಕು, ಬಾಳು, ಏಳ್ಗೆಗಳು ಇಲ್ಲಿ ಯಾವ ಅಡೆತಡೆಗಳಿಲ್ಲದೆ ಸುಸೂತ್ರ ಸಾಗುವುವು ಎಂಬ ವಿಶ್ವಾಸವುಂಟಾಗುವಂತಹ ವಾತಾವರಣವನ್ನು ಕಲ್ಪಿಸಿಕೊಡುವುದು ಬಹುಸಂಖ್ಯಾಕರ ಆದ್ಯಕರ್ತವ್ಯ. ಈ ದೃಷ್ಟಿಯಿಂದ ಮಹಾತ್ಮಾಗಾಂಧೀಜಿಯವರು ಆಗ ಮಾಡುತ್ತಿದ್ದ ಉಪದೇಶವು ಸರಿಯಾದುದೇ ಆಗಿದ್ದಿತು. ಆದರೆ, ಧರ್ಮಾಭಿಮಾನದ ಅತಿರೇಕದಲ್ಲಿ ಮುಸಲ್ಮಾನ ಸಮಾಜವು ಪಾಕಿಸ್ತಾನದ ಆರ್ಭಟೆಯನ್ನು ಹೆಚ್ಚಿಸುತ್ತಲೇ ಹೋಗಿ ೧೫ನೆಯ ಆಗಸ್ಟಿಗೆ ಅದರ ಪರಮಾವಧಿ ದುರಂತವೂ ಆಯಿತು. ಹಿಂದೂ ದೇಶವು ತುಂಡರಿಸಲ್ಪಟ್ಟು, ಮುಸಲ್ಮಾನರಿಗಾಗಿ ಒಂದು ಸ್ವತಂತ್ರ ರಾಜ್ಯವನ್ನು ನಿರ್ಮಿಸಿಕೊಟ್ಟಂತಾಯಿತು.

ಇಳಿಗಾಲದೊಳಗಿನ ಹಿಂದು ಸಮಾಜದ, ವಿಶೇಷತಃ ಉಪಾಧ್ಯಾಯ-ಪುರೋಹಿತ ವರ್ಗದ ಸಂಕುಚಿತ ಧಾರ್ಮಿಕದೃಷ್ಟಿ, ವಿಚಿತ್ರ ಮಡಿವಂತಿಕೆಯ ಕಲ್ಪನೆಯ ಮೂಲಕ ಈ ದೇಶದಲ್ಲಿ ಮುಸಲ್ಮಾನರ ಜನಸಂಖ್ಯೆಯು ವಿಪರೀತವಾಗಿ ಬೆಳೆದಿತು. ಜೀವಂತವಿದ್ದಾಗ ಯಾವ ಹಿಂದೂ ಸಮಾಜವು ಅಂದು ಒಳನುಗ್ಗಿ ಬಂದ ಆಭೀರ, ಹೂಣ ಮೊದಲಾದವರನ್ನು ತನ್ನಲ್ಲಿ ಅರಗಿಸಿಕೊಂಡಿತೊ ಅದುವೆ ಕ್ರಿ. ಶ. ದ ೭-೮ನೆಯ ಶತಮಾನದಿಂದ ಮುಂದೆ ಮುಸಲ್ಮಾನರನ್ನು ಪಚನ ಮಾಡಿಕೊಳ್ಳಲು ಸಮರ್ಥವಾಗಲಿಲ್ಲ. ಆದರೂ ತಮ್ಮ ರಾಜ್ಯವನ್ನು ನೆಲಕ್ಕುರುಳಿಸಿ ಬ್ರಿಟಿಶರು ತಾವೇ ರಾಜರಾಗಿ ಮೆರೆಯಲಾರಂಭಿಸಿದುದು ಹಿಂದುಗಳಿಗೂ ಮುಸಲ್ಮಾನರಿಗೂ ಸಹನವಾಗಲಿಲ್ಲ. ಹಿಂದಿನದೆಲ್ಲ ಆಯ್ತು; ಹೋಯ್ತು. ನಮ್ಮಿಬ್ಬರಿಗೂ ಬ್ರಿಟಿಶರೇ ಸಾಮಾನ್ಯ ಶತ್ರುಗಳು. ಅವರನ್ನು ಹೊರಗೆ ಅಟ್ಟುವುದು ನಮ್ಮ ಕರ್ತವ್ಯ; ಇದಕ್ಕಾಗಿ ನಾವೆಲ್ಲ ಒಂದುಗೂಡಲೇಬೇಕು, ಎಂಬೀ ಬಗೆಯ ವಿಚಾರಗಳು ಎರಡೂ ಸಮಾಜದಲ್ಲಿ ಬ್ರಿಟಿಶರ ಆಡಳಿತವು ಆರಂಭವಾದೊಡನೆ ಆಗ ತಲೆದೋರಿದುವು. ೧೮೫೭ರ ಸ್ವಾತಂತ್ರ್ಯ ಯುದ್ಧ ಈ ಬಗೆಯ ವಿಚಾರದ ತಳಹದಿಯಿಂದಲೇ ಆರಂಭವಾಯಿತು. ೧೮೮೫ರಲ್ಲಿ

ರಾಷ್ಟ್ರೀಯ ಮಹಾಸಭೆಯನ್ನು ಸ್ಥಾಪಿಸುವದಕ್ಕಾಗಿ ಹಿಂದೂ ಮುಸಲ್ಮಾನ (ಪಾರ್ಸಿ, ಕ್ರಿಸ್ತಿಗಳು ಕೂಡ) ಈ ಭಾವದಿಂದಲೇ ಮುಂದುವರಿದರು.

ಹೀಗೆ, ಹೊಸ ಪರಿಸ್ಥಿತಿಯಲ್ಲಿ ಬ್ರಿಟಿಶರು ಹಿಂದೂ-ಮುಸಲ್ಮಾನರಿಬ್ಬರಿಗೂ ಹೊರಗಿನ ಸಾಮಾನ್ಯ ಶತ್ರುಗಳೆಂಬ ಭಾವವು ಬಲಿಷ್ಠವಾಗಿ, ಅವರು ಒಂದುಗೂಡಲಾರಂಭಿಸಿದರು. ಆದರೆ, ಬ್ರಿಟಿಶ ರಾಜತಂತ್ರ ಪ್ರವೀಣರು ಇದನ್ನು ಮುಂಗಂಡು ಮೆಲ್ಲನೆ ಹಲವು ಬಗೆಯ ಕುಯುಕ್ತಿಗಳಿಂದ ಇವೆರಡೂ ಸಮಾಜದಲ್ಲಿ ಕಲಕಲ, ಕಾದಾಟಗಳು ತಲೆದೋರುವಂತೆ ಮಾಡಿದರು. ೧೮೯೬ರಿಂದ ಹಿಂದೂ-ಮುಸಲ್ಮಾನ ದೊಂಬಿಗಳು ಆರಂಭವಾದುವು. ಇದರ ಸಂಪೂರ್ಣ ಇತಿಹಾಸವನ್ನು ಸಾಧಾರವಾಗಿ ಡಾ. ರಾಜೇಂದ್ರಪ್ರಸಾದರು India Divided ಎಂಬ ತಮ್ಮ ಅಮೌಲಿಕವಾದ ಗ್ರಂಥದಲ್ಲಿ ವಿವರಿಸಿದ್ದಾರೆ. ಬ್ರಿಟಿಶರು ಅಂದು ಬಿತ್ತಿದ ವಿಷಬೀಜವು ಮೊಳೆತು, ಮರವಾಗಿ ಹಣ್ಣಾಗಲು ೫೦ ವರುಷಗಳು ಬೇಕಾದುವು. ನಂಜಿನ ಆ ಹಣ್ಣೇ ಇಂದಿನ ಪಾಕಿಸ್ತಾನ.

ಪಾಕಿಸ್ತಾನವನ್ನು ಕೊಟ್ಟುಬಿಟ್ಟರೆ ಹಿಂದೂ-ಮುಸಲ್ಮಾನರ ತೊಡಕು ಬಿಟ್ಟು ಹೋಗುವುದೆಂದು ಕೆಲವರಿಗೆ ಭ್ರಮೆಯಿದ್ದಿತು. ಅದು ಈಗ ಬಯಲಾಗಿದೆ. ಆ ತೊಡಕು ಇನ್ನಿಷ್ಟು ಬಿಗಿಯಾದುದು ಅನುಭವಕ್ಕೆ ಬಂದಿದೆ. ಅಖಂಡ ಹಿಂದುಸ್ಥಾನವಿದ್ದು ಇಂದಿನ ಸ್ವಾತಂತ್ರ್ಯ ದೊರೆತಿದ್ದರೆ, ಜಾತಿ ಧರ್ಮದ ಬಂಧನಗಳನ್ನು ಬಿಟ್ಟು ಮುಸಲ್ಮಾನರೊಡನೆ ಒಂದುಗೂಡುವ ವರೆಗೆ ಮನಸ್ಸಿನ ಸಿದ್ಧತೆಯಿದ್ದ ಹಿಂದುಗಳಿದ್ದರು. ಆದರೆ, ಪಾಕಿಸ್ತಾನವೆಂಬ ಮುಸಲ್ಮಾನರ ಒಂದು ಸ್ವತಂತ್ರ ರಾಜ್ಯವೇ ತಲೆ ಎತ್ತಿದ್ದರಿಂದ ಇಂದು ಪರಿಸ್ಥಿತಿ ಎಲ್ಲವೂ ತಿರುವು ಮುರುವಾಗಿದೆ! ಭಾರತವನ್ನು ಅಖಂಡವಾಗಿ ಉಳಿಸುವ ಮನಸ್ಸು ಮಾಡಿದ್ದರೆ ಬ್ರಿಟಿಶರಿಗೆ ಅದು ಅಸಾಧ್ಯವೂ ಇದ್ದಿಲ್ಲ. ಹಿಂದೀ ಘಟನಾಸಮಿತಿಯಲ್ಲಿ ಬರಲು ಸಿದ್ಧರಿಲ್ಲದ ಜಿನ್ನಾಪಕ್ಷವನ್ನು ಕಡೆಗಣಿಸಿ ಸ್ವತಂತ್ರ ಭಾರತದ ಘಟನೆಯನ್ನು ಸಿದ್ಧಪಡಿಸಲು ಕಾಂಗ್ರೆಸ್ಸಿನವರಿಗೂ ಉಳಿದ ಮುಸಲ್ಮಾನರಿಗೂ ಬ್ರಿಟಿಶರು ಅನುಮತಿಸಬೇಕಾಗಿತ್ತು. ದೊಂಬಿ ಯುದ್ಧವನ್ನು ಸದೆಬಡಿದು ಈ ಕೆಲಸವನ್ನು ಕೊನೆಗಾಣಿಸಬಹುದಿತ್ತು. ಹಿಟ್ಲರನನ್ನು ನಿರ್ನಾಮಮಾಡಿ ನಾಜಿಗಳನ್ನು ಮಣ್ಣು ಮುಕ್ಕಿಸಿದ ಬ್ರಿಟಿಶರಿಗೆ ಜಿನ್ನಾಗಳನ್ನು ಬಗ್ಗಿಸುವುದು ಅಸಾಧ್ಯವಿದ್ದಿಲ್ಲ. ಆದರೆ, ಬ್ರಿಟಿಶರಿಗೆ ಭಾರತವು ಅಖಂಡವಿರುವುದು ಬೇಕಾಗಿದ್ದಿಲ್ಲ. ಆದುದರಿಂದ, ಪಾಕಿಸ್ತಾನಗಳಿಗೆ ಪ್ರೋತ್ಸಾಹಿಸಿ ಅವರದೊಂದು ಸ್ವತಂತ್ರ ಪಂಗಡ ಹೂಡಿದರು. ಅವರಿಗೆ ಬೇರೆ ರಾಜ್ಯಕಟ್ಟಿಕೊಟ್ಟರು.

ಆದುದೆಲ್ಲವೂ ಒಳಿತೇ ಆಯಿತು. ಏಕೆಂದರೆ ಮುಸಲ್ಮಾನರಿಗೆ ಈಗ ನಿಜವಾದ ಪರಿಸ್ಥಿತಿಯ ಅರಿವು ಉಂಟಾಗತೊಡಗಿದೆ. ಪಾಕಿಸ್ತಾನದಿಂದ ಸಿಂಧ-ಪಂಜಾಬದ ಮುಸಲ್ಮಾನರಿಗೆ-ಬಹುಸಂಖ್ಯಾಕ ಮುಸಲ್ಮಾನರಿಗಂತೂ ನಿಜ; ಅದರಿಂದ ಆಗಿದೆಯೆಂದು ಅವರೇ ಒಪ್ಪುತ್ತಿದ್ದಾರೆ. ಹಿಂದುಗಳೊಡನೆ ಒಂದುಗೂಡುವ ಮಾತನ್ನಾಡುತ್ತಿದ್ದಾರೆ!

ಆದರೆ, ಇದೀಗ ಮುಖ್ಯಪ್ರಶ್ನೆ ಬೇರೆಯೆ ಇದೆ. ಯಾವ ಮುಸಲ್ಮಾನರು ಲೀಗಿನ ಕೂಗಿಗೆ ದನಿಗೂಡಿಸಿ 'ಲಢಕೇ ಲೇಂಗೇ ಪಾಕಿಸ್ತಾನ'! ಎಂದು ಊರೂರಿಗೆ ಗುಂಪುಗಟ್ಟಿಕೊಂಡು ಹೆದರಿಕೆ ಬೆದರಿಕೆಯ ಮಾತುಗಳನ್ನಾಡುತ್ತಿರೊ ಅವರೇ, ಈಗ ಜಿನ್ನಾಸಾಹೇಬರ ಬೆಂಬಲವು ತಮಗೆ ದೊರೆಯುವುದು ಸಾಧ್ಯವಿಲ್ಲವೆಂದು ಮನವರಿಕೆಯಾದೊಡನೆ ತಮ್ಮ ವೇಷಬದಲಿಸಿ ಭಾರತಾಭಿಮಾನವನ್ನು ತೋರ್ಪಡಿಸಲಾರಂಭಿಸಿರುವರು! ಇಂತವರ ಮಾತನ್ನು ಭಾರತವು ಎಷ್ಟರ ಮಟ್ಟಿಗೆ ನಂಬಬೇಕು? ಸಂಯುಕ್ತಪ್ರಾಂತದ ಮುಖ್ಯಮಂತ್ರಿಗಳಾದ ಶ್ರೀ ವಲ್ಲಭಪಂತರು ಹಿಂದುಸ್ತಾನದಲ್ಲಿ ಉಳಿದಿರುವ ಮುಸಲ್ಮಾನರನ್ನು ಉದ್ದೇಶಿಸಿ ಒಂದು ಸವಾಲು ಹಾಕಿದ್ದರು. 'ನಾಳೆ ಪಾಕಿಸ್ತಾನದೊಡನೆ ಯುದ್ಧವು ಆರಂಭವಾದರೆ ಇಲ್ಲಿಯ ಮುಸಲ್ಮಾನರು ಅವರೊಡನೆ ಕಾದಲು ಸಿದ್ಧರೆ?' ಎಂಬ ಈ ಪ್ರಶ್ನೆಗೆ ಕೆಲವು ಮುಸಲ್ಮಾನ ಮುಂದಾಳು ಅಂತೂ ತಮ್ಮ ಒಪ್ಪಿಗೆಯನ್ನೂ ಸೂಚಿಸುವ ಹೊತ್ತುಬಂದಿದೆ!

ಹೀಗೆ, ಹಿಂದುಗಳು ಕೇಳಿದ ಯಾವ ಕರಾರಿಗೂ ಒಪ್ಪಲು ಸಿದ್ಧರಾದ ಮುಸಲ್ಮಾನರ ಇಂದಿನ ಈ ಮಾತುಗಳನ್ನು ಹಿಂದಿನ ಅವರ ನಡೆವಳಿ ತಿಳಿದವರು ನಂಬುವುದು ಕಷ್ಟ! ನಂಬಲಿಕ್ಕಾಗುವುದಿಲ್ಲವೆಂಬುದೂ

ಕಷ್ಟ! ಏಕೆಂದರೆ ನಿಮಗೆ 'ಶರಣು' ಎಂದವನನ್ನು ಶಂಕಿಸುವುದು ಸಭ್ಯತೆಗೆ ಒಪ್ಪುವುದಿಲ್ಲ. ಆದರೆ, ನಂಬಬೇಕೆ? ಅದಕ್ಕೆ ಅನೇಕ ಅಡ್ಡಿ ಆತಂಕಗಳಿವೆ. ಕುತ್ತಿನಲ್ಲಿದ್ದಾಗ ಶರಣೆಂದು ಹೇಳಿ, ಆ ಪ್ರಸಂಗದಿಂದ ಪಾರಾದೊಡನೆ ತಿರುಗಿ ಬಿದ್ದು ಕೃತಘ್ನರಾದ ಉದಾಹರಣೆಗಳು ಮುಸಲ್ಮಾನರ ಇತಿಹಾಸದಲ್ಲಿ ಹಲವಾರು ಇವೆ. ಪೃಥ್ವಿರಾಜ ಚವ್ಹಾಣನ ಕೈಯಲ್ಲಿ ಸೋತು ಸಿಕ್ಕಿಬಿದ್ದಾಗ ಶರಣೆಂದು ಹೇಳಿ ಓಡಿ ಹೋದ ಘೋರಿ ಮಹಮ್ಮೂದನು ಮತ್ತೆ ಮರಳಿಬಂದು ಪೃಥ್ವಿರಾಜನನ್ನು ಸೆರೆಹಿಡಿದುಕೊಂಡು ಹೋದನು. ಅಲ್ಲಾವುದ್ದೀನ ಖಿಲಜಿಯು ಭೀಮದೇವನಲ್ಲಿ ಜೀವದಾನ ಬೇಡಿ, ಮರಳಿ ದಿಲ್ಲಿಗೆ ಹೋದವನು, ಮತ್ತೆ ಆತನ ಮೇಲೆ ಹೊತ್ತು ಸಾಧಿಸಿ ಏರಿಬಂದು ರಜಪೂತ ರಾಜ್ಯವನ್ನು ಸೂರಗೆಯ್ದನು.

ವಿಜಯನಗರದವರ ಕಾಲದಲ್ಲಿ ಬಂದ ಅನುಭವವು ಇದಕ್ಕಿಂತ ಬೇರೆಯಾಗಿಲ್ಲ. ರಾಮರಾಜನು ಯಾರನ್ನು ತನ್ನ ಮಗನೆಂದು ಬೆಳಸಿದ್ದನೊ ಆ ವಿಜಾಪುರದ ಆದಿಲ್‌ಶಹನೆ ಆತನ ಚೆಂಡಾಡಿದನಂತೆ. ಪೇಶವರ ದಂಡಿನ ತೋಫಖಾನೆಯ ಮಹಮ್ಮದೀಯರು ಕೊನೆಯ ಪಾಣಿಪತ್ತಿನ ಕಾಳಗದಲ್ಲಿ ಮಹಮ್ಮದಶಹಾ ಅಬ್ದಾಲಿಯೊಡನೆ ಕಾದುವಾಗ ವಿಶ್ವಾಸಘಾತಮಾಡಿದುದಾಗಿ ಇತಿಹಾಸವು ಹೇಳುತ್ತದೆ. ಹಳೆಯ ಕಾಲದಲ್ಲಿ ಆದುದು ಹಿಂದೆ ಆಗಿಹೋಯ್ತು; ಅದು ಸಟೆಯೊ ದಿಟವೋ, ಹೋಗಲಿ ಬಿಡಿ, ಎಂದು ಅದನ್ನು ಮರೆತು ಬಿಡಬೇಕೆಂದರೆ ಮಹಮ್ಮದೀಯ ಹಲವು ಮುಂದಾಳುಗಳ ಇಂದಿನ ನಡೆವಳಿಯೂ ಭಾರತೀಯ ರಾಷ್ಟ್ರೀಯತ್ವಕ್ಕೆ ಪೋಷಕವಾಗಿದೆಯೆಂದು ಕಣ್ಣುಮುಚ್ಚಿ ನಂಬುವುದು ಘೋರ ಪರಿಣಾಮಕ್ಕೆ ಕಾರಣವಾಗುವಂತಿದೆ. ಏಕೆಂದರೆ ಅವರಲ್ಲಿ ಚಿಕ್ಕಂದಿನಿಂದಲೂ ಕಲಿಸಲ್ಪಡುವ ವಿಚಾರಗಳ ರೀತಿಯೇ ಹಾಗಿದೆ. ಇಸ್ಲಾಮ ಧರ್ಮವು ಗಂಡಾಂತರಲ್ಲಿದೆ; ಎದ್ದೇಳಿ' ಎಂದು ಹುಯಿಲು ಎದ್ದರೆ ಅವರೊಳಗಿನ ಒಂದು ಚಿಳ್ಳೆಯಾದರೂ ರಾಷ್ಟ್ರೀಯತ್ವಕ್ಕೆ ಏನಾದರೂ ಬೆಲೆ ಕೊಟ್ಟಿತೇ? ಎಂಬುದೇ ಸಂದೇಹಾಸ್ಪದವಿದೆ.

ರಾಷ್ಟ್ರೀಯತ್ವವೆಂಬ ವಸ್ತುವು ಮುಸಲ್ಮಾನರಿಗೆ ತೀರ ಹೊಸದು. ರಾಷ್ಟ್ರವೋ, ಧರ್ಮವೋ ಯಾವುದು ನಿಮಗೆ ಮಹತ್ವದ್ದು? ಎಂದು ಕೇಳಿದರೆ ಅವರೆಲ್ಲ ಧರ್ಮವೆಂದೇ ಹೇಳತಕ್ಕವರು. ಅಲ್ಲೀ ಬಂಧುಗಳಲ್ಲಿ ಮಹಮ್ಮದಲ್ಲಿಯವರು ಬ್ಯಾರಿಷ್ಟರರು; ಕೆಂಬ್ರಿಡ್ಜ್ ಎಂ. ಎ. ಆದವರು. ಅವರಿಗೆ ಕೂಡ ರಾಷ್ಟ್ರೀಯತ್ವವು ಧರ್ಮಕ್ಕಿಂತ ಕಡಿಮೆಯದೆನಿಸುತ್ತಿತ್ತು. ಮನುಷ್ಯರೆಲ್ಲ ಸಮಾನ ಯೋಗ್ಯತೆಯವರೆಂಬ ಸಾಮಾನ್ಯ ವಿಚಾರವೂ ಅವರಿಗೆ ಮಾನ್ಯವಿದ್ದಿಲ್ಲ. ಇಸ್ಲಾಮ ಧರ್ಮದವರು ಲೋಕದಲ್ಲಿ ಮಿಗಿಲಾದರವರೆಂದು ಅವರ ನೆರೆ ನಂಬುಗೆ! ಮುಸಲ್ಮಾನ್ ಒಂದು ಕ್ಷುದ್ರವ್ಯಕ್ತಿ ಮತ್ತು ಮಹಾತ್ಮಾಗಾಂಧೀಜಿ ಇವರಲ್ಲಿ ನಿನಗೆ ಯಾರ ಆತ್ಮದ ಯೋಗ್ಯತೆ ಹೆಚ್ಚಿನದೆಂದು ಎನಿಸುವುದು? ಎಂದು ಕೇಳಿದಾಗ ಮಹಮ್ಮದಲ್ಲಿ ಕೊಟ್ಟ ಉತ್ತರವೇನು? 'ಮುಸಲ್ಮಾನ ವ್ಯಕ್ತಿಯು ಕ್ಷುದ್ರವಾಗಿದ್ದರೂ ಅದರ ಆತ್ಮದ ಯೋಗ್ಯತೆ ಹಿರಿದಾದುದು; ಮೋಕ್ಷಕ್ಕೆ ಅರ್ಹವಾದ ಆತ್ಮವು ಅದು; ಮುಸಲ್ಮಾನ ಧರ್ಮಕ್ಕೆ ಬಾರದೆ ಮಹಾತ್ಮಾಜಿಯವರಿಗೂ ಪರಗತಿ ದೊರೆಯಲಾರದು.'! ಇಂಗ್ಲೆಂಡಿನ ಅತ್ಯಾಧುನಿಕ ಶಿಕ್ಷಣ ಪಡೆದ ಮಹಮ್ಮದಲ್ಲಿ ಬ್ಯಾರಿಷ್ಟರರ ವಿಚಾರಗಳಿವು! ಇನ್ನು ಉಳಿದವರ ಮಾತೇನು?

ಆದಕಾರಣ, ಜಿನ್ನಾರ ಬೆಂಬಲವು ತಪ್ಪಿದ್ದರಿಂದ ಗಾಬರಿಗೊಂಡ ಸ್ಥಿತಿಯಲ್ಲಿ, ಮುಸಲ್ಮಾನರು ಭಾರತದೊಡನೆ ಒಂದುಗೂಡುವ ಮಾತುಗಳನ್ನಾಡುತ್ತಿದ್ದರೂ ಅದು ಅವರ ತ್ರಿಕರಣಪೂರ್ವಕವಾದ ಪ್ರಾಮಾಣಿಕ ವಚನವೆಂದು ನಂಬಿ ಬಿಡುವುದಕ್ಕೆ ಹೆದರಿಕೆಯುಂಟಾಗುತ್ತದೆ. ಜಿನ್ನಾ ಸಾಹೇಬರು ಪಾಕಿಸ್ತಾನದಿಂದ ಇದ್ದ ಬಿದ್ದ ಹಿಂದುಗಳನ್ನೆಲ್ಲ ಹರಳು ಆರಿಸಿದಂತೆ ಕೂಡಿಸಿ ಬಳಿದು ಹೊರಗೆ ತಳ್ಳಿದರು; ತಳ್ಳುತ್ತಿರುವರು. ಆದರೆ, ಇಲ್ಲಿ ಭಾರತದಲ್ಲಿ ಮಹಮ್ಮದೀಯರು ಸ್ಥಿರವಾಗಿ ಉಳಿಯುವಂತೆ ವಾತಾವರಣವನ್ನು ಕಲ್ಪಿಸಿಕೊಡುವಲ್ಲಿ ಮಹಾತ್ಮಾಜೀಯವರು ತಮ್ಮ ಜೀವವನ್ನು ಪಣಕ್ಕೆ ಹಚ್ಚಿ ಪ್ರಯತ್ನಿಸುತ್ತಿರುವರು! ಮುಸಲ್ಮಾನರು ಹಿಂದುಗಳ ಮನೆಗಳನ್ನು ಕೊಳ್ಳೆಯಿಟ್ಟು, ಸೂರೆಮಾಡಿ, ಅವರ ಮಕ್ಕಳು ಮರಿಗಳನ್ನು ತುಂಡರಿಸಿ, ಹೆಂಗಸರನ್ನು ಓಡಿಸಿ ಕೊಂಡೊಯ್ದು ಅಮಾನುಷ ಕೃತ್ಯಗಳನ್ನು ಮಾಡಿದರು. ಅದಕ್ಕೆ ಪ್ರತಿಯಾಗಿ ಭಾರತದಲ್ಲೂ ಕೆಲವೆಡೆಗೆ ಅದೇ ಬಗೆಯ ಸೇಡಿನ ಹೀನ

ಕೆಲಸಗಳಾದುವು. ಹೀಗೆ ಸೇಡು ತೀರಿಸುವದಕ್ಕಾಗಿ, ಇಲ್ಲಿ ನೆಲಸಿರುವ ಮುಸಲ್ಮಾನರ ಕೊಲೆ ಸುಲಿಗೆ ಮಾಡುವುದು ಮಾನವತೆಗೆ ಒಪ್ಪದ ಕೆಲಸ; ಹಿಂದೂ ಸಂಸ್ಕೃತಿಗೆ ಅದೊಂದು ಕಳಂಕ ಎಂಬಲ್ಲಿ ಸಂದೇಹವಿಲ್ಲ.

ಹಾಗಾದರೆ ಈ ಧರ್ಮಸಂಕಟದೊಳಗಿಂದ ಪಾರಾಗಲು ದಾರಿಯಾವುದು? ಪಾಕಿಸ್ತಾನವಾದೀ ಮುಸಲ್ಮಾನರನ್ನು ಹಾಗೆಯೇ ತನ್ನಲ್ಲಿ ಉಳಿಯಗೊಟ್ಟರೆ ಭಾರತದ ಸ್ವಾತಂತ್ರ್ಯವು ಯಾವ ಕ್ಷಣಕ್ಕೆ ನಾಶವಾಗುವದೋ ಹೇಳುವುದಕ್ಕೆ ಸಾಧ್ಯವಿಲ್ಲ. ಬದಿಗೆ ಪಾಕಿಸ್ತಾನದ ಸ್ವತಂತ್ರ ರಾಜ್ಯವಿದ್ದು, ಅವರು ಭಾರತವನ್ನು ಗೆದ್ದು ಹಿಂದೆ ಮೊಗಲರು ಕಳೆದುಕೊಂಡ ಮುಸಲ್ಮಾನೀ ರಾಜ್ಯವನ್ನು ಮರಳಿ ಇಲ್ಲಿ ಸ್ಥಾಪಿಸುವ ಕನಸು ಕಾಣುತ್ತಲಿದ್ದಾರೆ. ಪಾಕಿಸ್ತಾನದೊಳಗಿನ ಮುಸಲ್ಮಾನರು ಭಾರತದ ಮೇಲೆ ದಾಳಿಯಿಟ್ಟಾಗ ಇಲ್ಲಿಯ ಮುಸಲ್ಮಾನರು-ಇವರ ಇಂದಿನ ಮನೋವೃತ್ತಿ ಹಾಗೆಯೇ ಉಳಿದರೆ,-ಅವರಿಗೆ ಪಂಚಮ ದಳದವರಾಗಿ ನೆರವಾಗುವರೆಂಬಲ್ಲಿ ಸಂದೇಹವೇ ಇಲ್ಲ. ಆದಕಾರಣ, ಪಾಕಿಸ್ತಾನವಾದಿ ಮುಸಲ್ಮಾನರು ಹಿಂದೂದೇಶದಿಂದ ಪಾಕಿಸ್ತಾನಕ್ಕೆ ಬೇಗನೆ ಹೋಗಿ ಬಿಡುವಂತೆ ಶಾಂತವಾದ ಆದರೂ ಪರಿಣಾಮಕಾರಿಯಾದ ಉಪಾಯಗಳನ್ನು ಕಂಡುಹಿಡಿಯುವುದು ಭಾರತೀಯ ಮುಖಂಡರ-ಹಿಂದೂ ಸ್ವಾತಂತ್ರ್ಯವನ್ನು ಪ್ರೀತಿಸುವ ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯವಲ್ಲವೆ?

ರಾಷ್ಟ್ರೀಯ ವೃತ್ತಿಯ ಪ್ರೊ. ಅಬ್ದುಲ್ ಮಜೀದರಂತಹ ಕೆಲವು ಮುಸಲ್ಮಾನರೂ ಈ ಮಾತುಗಳನ್ನು ಜಾಹೀರು ರೀತಿಯಿಂದ ಹೇಳುತ್ತಿದ್ದಾರೆ. ಪಾಕಿಸ್ತಾನವಾದಿಗಳು ಇಲ್ಲಿಂದ ಬೇಗನೆ ತೊಲಗಲಿ, ಎಂದು ಪಂ. ಜವಾಹರರೂ ಮೊದಲು ಸಾರಿರುವರು. ಆದರೆ, ಇದೀಗ ಇಲ್ಲಿ ಒಂದು ಸೂಕ್ಷ್ಮ ತೊಡಕು ಬರಲಿದೆ. 'ಪಾಕಿಸ್ತಾನಕ್ಕಾಗಿ ಪ್ರಾಣತ್ಯಾಗ ಮಾಡುವಾ' ಎಂದು ಕೂಗುತ್ತಿದ್ದ ತಲೆತಿರುಕ ಮುಸಲ್ಮಾನರೇ ಈಗ ಹೊತ್ತು ಬದಲಾದುದನ್ನು ನೋಡಿ ತಾವೂ ರಾಷ್ಟ್ರೀಯ ಮುಸಲ್ಮಾನರೆಂಬಂತೆ ಸೋಗು ಹಾಕುತ್ತಿದ್ದಾರೆ! ಯಾವ, ಮುಸಲ್ಮಾನರು ಪಾಕಿಸ್ತಾನವಾದಿ, ಎಂಬುದನ್ನು ನಿರ್ಣಯಿಸುವುದು ಇನ್ನು ಮೇಲೆ ತುಂಬ ಗಡಚಾದ ಕೆಲಸವಾಗಿದೆ. ಅಲ್ಲದೆ ಲೀಗಿನವರು, ಮುಸಲ್ಮಾನರಿಗೆ ಗುಪ್ತ ಆಜ್ಞಾಪತ್ರಗಳನ್ನು ಕಳಿಸಿ, ನೀವು ಭಾರತದಲ್ಲಿಯೆ ಉಳಿದು ಅಲ್ಲಿಂದಲೇ ಪಾಕಿಸ್ತಾನಕ್ಕೆ ನೆರವಾಗಿರೆಂದು ಕಿವಿಯೂದಿದ್ದಾರಂತೆ! ಆದಕಾರಣ, ಭಾರತವು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದರೆ ಹಿಂದೂ ದೇಶದಲ್ಲಿ ಒಂದೂ ಮುಸಲ್ಮಾನ ಪಿಳ್ಳೆ ಉಳಿಯದಂತೆ ಮಾಡದೆ ಭಾರತಕ್ಕೆ ಬೇರೆ ಗತಿಯಿಲ್ಲ ಎಂಬ ಆತ್ಯಂತಿಕವಾದ ಒಂದೇ ದಾರಿಯೆ ಇನ್ನು ಉಳಿದಂತಾಯಿತೆ? ಆದರೆ, ಎಲ್ಲ ಮುಸಲ್ಮಾನರನ್ನೂ ಹಿಂದೂ ದೇಶದಿಂದ ತಳ್ಳಿಬಿಡುವುದು ಸಾಧ್ಯವೆ? ಪರಶುರಾಮನು ೨೧ ಬಾರಿ ನಿಃಕ್ಷತ್ರಿಯ ಪೃಥ್ವಿಮಾಡಿದನಂತೆ! ಆದರೆ ಮತ್ತೆ ಕ್ಷತ್ರಿಯರು ಉಳಿಯದೆ ಹೋಗಲಿಲ್ಲ!

ಜೀವಂತ ವ್ಯಕ್ತಿಯು, ಅರಗಿಸಿಕೊಳ್ಳುವುದು. ಅರಗಿ ಮೈಗೂಡದೆ ಹೊಟ್ಟೆಯಲ್ಲಿ ಹಾಗೆಯೆ ಉಳಿಯ ಲಾರಂಭಿಸಿದರೆ ಅದನ್ನು ಔಷಧಿಯ ಸಹಾಯದಿಂದ ವಾಂತಿ ಅಥವಾ ಭೇದಿಯ ರೂಪದಿಂದ ಹೊರಗೆ ಹಾಕುವುದು. ಇದಾವುದೂ ಆಗದೆ ಹಾಗೆ ಸಲ್ಲವಾಗಿ ಗಂಟಾಗಿ ಉಳಿಯಲಾರಂಭಿಸಿದರೆ ಶಸ್ತ್ರವೈದ್ಯನಿಂದ ಅಷ್ಟು ಭಾಗವನ್ನು ಕತ್ತರಿಸಿಕೊಳ್ಳಲು ಸಿದ್ಧವಾಗಬೇಕಾಗುವುದು. ಈಗ ಭಾರತವು ತನ್ನ ಒಡಲಲ್ಲಿ ಬೆಳೆದ ಪಾಕಿಸ್ತಾನದ ಗಂಟನ್ನು ಕೊಯ್ದುಕೊಂಬ ಪ್ರಾಣಾಂತಿಕ ದುಃಖದ ವೇದನೆಗಳನ್ನು ತಾಳಿಕೊಂಡಿತು. ಆದರೂ ಬೇನೆಯು ಮಾತ್ರ ಇನ್ನೂ ಪೂರ್ಣಹೋಗಲಿಲ್ಲ!

ಈಗ ಉಳಿದ ಮಹ್ಮದೀಯರನ್ನು ಹೇಗೆ ಅರಗಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಹಿಂದೂ ಸಮಾಜವು ಬೇಗನೆ ವಿಚಾರಿಸಲಿ. ಇಲ್ಲವಾದರೆ ಇದು ಇನ್ನೂ ಹೆಚ್ಚಿನ ಒಂದು ಗಂಡಾಂತರದ ಸ್ವರೂಪವನ್ನು ತಾಳದೆ ಇರದು. ಇನ್ನು ಈ ಅರಗಿಸಿಕೊಂಬ ವಿಧಾನದಲ್ಲಿ ಎರಡು ರೀತಿ. ಅವರಿಗೆ ಸಂಸ್ಕಾರಕೊಟ್ಟು ಹಿಂದೂಗಳೆಂದು ಅವರನ್ನು ಸ್ವೀಕರಿಸುವುದು ಒಂದು; ಅಥವಾ ಮುಸಲ್ಮಾನರ ಇಂದಿನ ತೀವ್ರ ಧರ್ಮಭಾವನೆಗಳಿಗೆ ಕಾರಣವಾಗುವ ಅವರ ತತ್ವಜ್ಞಾನ ಹಾಗೂ ನಡೆವಳಿಯ ರೀತಿಗಳನ್ನು ಬದಲಿಸುವಂತೆ ಅವರ ಧಾರ್ಮಿಕ ವಿಧಿವಿಧಾನಗಳಲ್ಲಿಯೇ ಬದಲಾವಣೆಗೆ ಅವರು ಸಿದ್ಧರಾಗಬೇಕು. ಇಂತಹ ಶಿಕ್ಷಣಯೋಜನೆಯನ್ನು ಸಿದ್ಧಪಡಿಸಬೇಕು. ಮುಸಲ್ಮಾನರೆಂದು

ಈಗ ಅವರಿಗೆ ಇರುವ ವಿಶೇಷ ಹಕ್ಕುಗಳನ್ನು ಇನ್ನು ಮುಂದೆ ಉಳಿಯಗೊಡಲಾಗದು. ಹಿಂದುಗಳೊಳಗಿನ ಅನೇಕ ಪಂಗಡಗಳಂತೆ, ಅವರೂ ಇನ್ನೂ ಒಂದು ಪಂಗಡದ (ಜಾತಿ) ಜನಗಳಂತೆ ಎಲ್ಲರೊಡನೆ ಕೂಡಿ ನಡೆಯಲು ಸಿದ್ಧರಾಗಬೇಕು.

ಈ ಯಾವ ಮಾರ್ಪಾಟು ಆಗಬೇಕಾದರೂ ಹಿಂದೂ ಸಮಾಜದೊಳಗಿನ ಬ್ರಾಹ್ಮಣಾದಿ ಜಾತಿಗಳ ಇಂದಿನ ಮಡಿವಂತಿಕೆಯ ಕಲ್ಪನೆಗಳಲ್ಲಿ ಬದಲಾವಣೆಯು ಅಗತ್ಯವಾಗಿದೆ. ಮುಸಲ್ಮಾನರಿಗೆ ಸಂಸ್ಕಾರ ಕೊಟ್ಟು ಹಿಂದುಗಳೆಂದು ಅವರನ್ನು ಒಳಗೆ ತಕ್ಕೊಳ್ಳುವ ಉಪಾಯವು ಅನೇಕ ಹಿಂದೂ ಜನರಿಗೆ ಮೇಲ್ನೋಠಿಕೆಯಲ್ಲಿ ಹಿಗ್ಗಿನದೆನಿಸುವಂತಿದೆ. ಆದರೆ, ಸಂಸ್ಕಾರ ಹೊಂದಿ ಹಿಂದುವಾದ ಮುಸಲ್ಮಾನನು, ಸುಶಿಕ್ಷತನೂ ಸುಸಂಸ್ಕೃತನೂ ಇದ್ದರು ಬ್ರಾಹ್ಮಣಾದಿಗಳು ಆತನೊಡನೆ ಅನ್ನ-ಕನ್ಯಾ ವ್ಯವಹಾರಕ್ಕೆ ಸಿದ್ಧರಾಗದೆ ಇದ್ದರೆ ಆತನಾಗಲಿ, ಬೇರೆ ಮುಸಲ್ಮಾನರಾಗಲಿ ಹಿಂದುಗಳಾಗಲು ಏಕೆ ಸಿದ್ಧರಾದರು? ಒಂದು ವೇಳೆ ಪರಿಸ್ಥಿತಿಯ ಒತ್ತಾಯಕ್ಕೆ ಹಿಂದುಗಳು ಹೇಳಿದ ಸಂಸ್ಕಾರಕ್ಕೆ ಒಪ್ಪಿ ಹಿಂದುವೆನಿಸಿ ಇದ್ದರೂ ಆತನು ಇಲ್ಲಿ ಬೇರೆಯಾಗಿಯೇ ದೂರ ಇರುವುದರಿಂದ ಹೊತ್ತು ಬರುತ್ತಲೆ ತನ್ನ ವೇಷ ಬದಲಿಸಿ ಮುಸಲ್ಮಾನನಾಗುವ ಸಂಧಿಯನ್ನು ಆತನು ಕಳೆದುಕೊಳ್ಳಲಾರನು. ಮೇಲಿನ ಜಾತಿಯವರೆನಿಸಿದ ಹಿಂದೂಗಳ ವರ್ಣಾಶ್ರಮದ ಹೆಮ್ಮೆಯ, ತಿರಸ್ಕಾರದ ಮತ್ತತೆಯ ನಡೆವಳಿಯ ಮೂಲಕವಾಗಿಯೇ ಹಲವು ಎಡಗೈ ಕುಲದವರು ಮುಸಲ್ಮಾನರೂ, ಕ್ರಿಸ್ತಿಗಳೂ ಆಗಲಿಲ್ಲವೆ? ಈಗ ಮತ್ತೆ ವರ್ಣಾಶ್ರಮಿಗಳು ತಮ್ಮ ನಡತೆ ಬದಲಿಸದೆ ಹೋದರೆ ಹಿಂದೂಧರ್ಮದಲ್ಲಿ ಬರಲು ಯಾರು ತಾನೆ ಸಿದ್ಧರಾದರು?

ರಾಷ್ಟ್ರೀಯ ವೃತ್ತಿಯವರೆಂದು ಹೇಳಿಕೊಂಡು, ಪಾಕಿಸ್ತಾನವು ತಮಗೆ ಮಾನ್ಯವಿಲ್ಲವೆಂದು ಸಾರಿ ದೂರಿ,ಇಲ್ಲಿಯೆ ನೆಲಸಲಿಚ್ಛಿಸುವ ಮುಸಲ್ಮಾನರನ್ನು ಹಿಂದೂ ದೇಶದಿಂದ ತೊಲಗಿಸುವುದು ಕಷ್ಟವಾಗಿದೆ-ಅಸಾಧ್ಯವಾಗಿದೆ. ಇವರೆಲ್ಲರೂ ಪ್ರಾಮಾಣಿಕರೇ ಎಂದು ಕ್ಷಣಹೊತ್ತು ಕಲ್ಪಿಸಿದರೂ ನಾಳೆ ಇವರ ಸಂತತಿಯವರ ಮನೋವೃತ್ತಿ ಏನಾಗುವುದೆಂಬನ್ನು ಹೇಗೆ ಹೇಳಲಿಕ್ಕಾದೀತು? ಮುಸಲ್ಮಾನರ ಓಣಿಗಳು ಬೇರೆ, ಮುಸಲ್ಮಾನರ ಗುಡಿಗಳು ಬೇರೆ, ಮುಸಲ್ಮಾನರ ಶಾಲೆಗಳು ಬೇರೆ. ಅವರಲ್ಲಿ ಬೇರೆ ಯಾರೂ ಬೆರೆಯುವಂತಿಲ್ಲ; ಎಂಬ ಇಂದಿನ ತೆರನಾದ ನಡೆವಳಿಯನ್ನೆ ಮುಂದೆಯೂ ಇಟ್ಟುಕೊಂಡರೆ ಅಥವಾ ಉಳಿಯಗೊಟ್ಟರೆ ಅದು ಹಿಂದೂ ಸಮಾಜಕ್ಕೂ, ಹಿಂದೂ ಸ್ವಾತಂತ್ರ್ಯಕ್ಕೂ ಸಂಕಟದಲ್ಲಿ ನೂಕದೆ ಇರಲಾರದು.

ಆದಕಾರಣ, ನಾಳಿನ ನಮ್ಮ ಸ್ವಾತಂತ್ರ್ಯದ ಸ್ಥಿರತೆಗಾಗಿ, ಇಲ್ಲಿ ತಾವು ಭಾರತದ ರಾಷ್ಟ್ರೀಯ ನಾಗರಿಕರಾಗಿ ಬಾಳಲು ಸಿದ್ಧರಿದ್ದೇವೆಂಬ ಮುಸಲ್ಮಾನರನ್ನು ಒಂದು ಗುಂಪಾಗಿ ಒಂದೆಡೆಗೇ ಮನೆಕಟ್ಟಿಕೊಂಡು ಇರುವಂತೆ ಮಾಡಲಾಗದು. ಇನ್ನು ಮುಂದಿನ ನಮ್ಮ ನಗರ ರಚನೆಯೂ ಬದಲಾಗಬೇಕಾಗಿದೆ. ಒಂದೊಂದು ಜಾತಿಯವರ ಒಂದೊಂದು ಓಣಿಯಿರುವದು ಒಳಿತಲ್ಲ. ಅದು ಇನ್ನು ಮುಂದಿನ ನಮ್ಮ ಸ್ವತಂತ್ರ ಭಾರತದ ಅಭಿವೃದ್ಧಿಯ ದೃಷ್ಟಿಯಿಂದ ತೀರ ಹಾನಿಗೆ ಕಾರಣವಾಗುವುದಿದೆ. ಮುಸಲ್ಮಾನರನ್ನು ಹಿಂದೂ ವಸತಿಯ ಓಣಿ ಓಣಿಗಳಲ್ಲಿ ಹಂಚಿ ಒಬ್ಬೊಬ್ಬನಂತೆ ನೆಲೆಸಲು ಹಚ್ಚಬೇಕು. ವಿಚಾರ, ಸಂಸ್ಕೃತಿ, ಉದ್ಯೋಗ ವ್ಯವಹಾರಾದಿಗಳಲ್ಲಿ (ಭಿನ್ನಜಾತಿಯವರಾದರೂ) ಹತ್ತುಗೆ ಇರುವ ಜನಗಳು ಒಂದೊಂದು ಓಣಿಗಳಲ್ಲಿ ನೆರೆಮನೆಯವರಾಗಿ ಬಾಳುವುದಕ್ಕಾರಂಭವಾಗಬೇಕು.

ಧಾರ್ಮಿಕ ಸ್ವಾತಂತ್ರ್ಯವು ಎಲ್ಲರಿಗೂ ಅವಶ್ಯ. ಹರಿಜನರಿಗೆ ಅಷ್ಟೇ. ಗುಡಿಯಲ್ಲಿ ಪ್ರವೇಶದ ಚಳವಳಿಯು ಇನ್ನು ಸಾಕು. ಭಾರತದಲ್ಲಿ ಯಾವುದೇ ಧರ್ಮದ ದೇವಾಲಯಗಳು ಇರಲಿ, ಅಲ್ಲಿಗೆ ಭಕ್ತಿಭಾವದಿಂದ ಬರಲು ಒಪ್ಪಿದ ಯಾವನಿಗಾಗಲಿ ಪ್ರವೇಶವು ಇರುವುದು ಅತ್ಯವಶ್ಯವಾಗಿದೆ. ಮುಸಲ್ಮಾನರು ಹಿಂದೂ ದೇವಾಲಯಗಳಿಗೆ ಬರಲಿ, ಹಿಂದುಗಳು ಪ್ರಾರ್ಥನೆಗಾಗಿ ಮಶೀದಿಗಳಿಗೆ ಹೋಗಲಿ. ಇದರಿಂದ ಒಬ್ಬರೊಬ್ಬರ ಒಳ್ಳೆಯ ಗುಣಗಳ ಪರಿಚಯವಾಗಿ ಸಹಾನುಭೂತಿ ಬೆಳೆಯುವದು. ಧರ್ಮಾಂಧತೆಯಲ್ಲಿ ತಮ್ಮವರಿಗೆ ಮಾಡುವ ಹೀನಮಾರ್ಗದ ಉಪದೇಶ, ದೊಂಬಿ ಏಳುವುದಕ್ಕೆ ಕೊಡುವ ಉತ್ತೇಜಕ ಭಾಷಣಗಳಿಗೆ ತಡೆಯಾಗುವುದು. ಶಾಲೆ, ವಿದ್ಯಾರ್ಥಿ

ನಿಲಯಗಳು ಬೇರೆಯಾಗಿರುವದರಿಂದಲೂ ಇದೇ ಬಗೆಯ ಹಾನಿಗಳಾಗಿವೆ. ಇಂದಿನ ರಾಷ್ಟ್ರೀಯ ಸರಕಾರವು ಬೇಗನೆ ಎಚ್ಚೆತ್ತು, ಎಲ್ಲ ಸಮಾಜಗಳು ಬೆರೆತು ಒಂದೇ ಭಾರತಸಮಾಜವು ತಲೆದೋರುವದಕ್ಕೆ ಆವಶ್ಯಕವಾದ ವಾತಾವರಣವನ್ನು ನಿರ್ಮಿಸುವ ಕಟ್ಟಳೆಗಳನ್ನು ಮಾಡುವುದು ಅವಶ್ಯವಾಗಿದೆ. ಮತ್ತು ಇತ್ತ ಹಿಂದೂ ಸಮಾಜವೂ ಎಚ್ಚೆತ್ತು ಆತ್ಯಂತಿಕ ಧರ್ಮಾಭಿಮಾನಿಗಳಾದ ಮುಸಲ್ಮಾನರಿಗೆ ಶಾಂತವಾಗಿ ಬುದ್ಧಿಗಲಿಸುವಂತೆ ತನ್ನ ಸಂಘಟನೆಯನ್ನು ಮಾಡಿಕೊಳ್ಳಬೇಕು. ಈ ಸಂಘಟನೆಯು ಹಿಂದೂ ಧರ್ಮಾಂಧತೆಯ ಅತಿವಾದಿಗಳ ಕೈಯಲ್ಲಿ ಹೋದರೆ ಅದು ಹಾನಿಗೆ ಕಾರಣವಾಗುವಂತಿದೆ. ರಾಷ್ಟ್ರೀಯ ದೃಷ್ಟಿಯವರು ಈ ಸಂಘಟನೆಯ ನೇತಾರರಾಗಿದ್ದಲ್ಲಿ ಚೆನ್ನಾಗುವುದು. ಧರ್ಮವು ಸಂಘಟನೆಯ ಗುರಿಯಲ್ಲ. ರಾಷ್ಟ್ರೀಯ ಸ್ವಾತಂತ್ರ್ಯ ರಕ್ಷಣೆಯೇ ಗುರಿ. ಆದಕಾರಣ ಜಾತಿಸೂಚಕ ಧಾರ್ಮಿಕ ಚಿಹ್ನೆಗಳಿಗೆ, ಆಚಾರಗಳಿಗೆ ಪ್ರಾಶಸ್ತ್ಯವು ಇರಕೂಡದು. ಧರ್ಮವು ವ್ಯಕ್ತಿಯ ಆಂತರಿಕ ಒಂದು ನಿಷ್ಠೆಯಾಗಿರಬೇಕೆ ಹೊರತು, ಯಾವುದೊಂದು ಗುಂಪಿನ ಅಥವಾ ಸಂಘದ ಸಾಮೂಹಿಕ ಪ್ರತಿಷ್ಠೆಗೆ ಕಾರಣವಾಗುವ ಒಂದು ಸಾಧನವಾಗಕೂಡದು. ಇನ್ನು ಬೇಗನೆ ಉಡುಪು, ತೊಡವು, ಅಥವಾ ಬೇರೆ ಹೊರಗಿನ ಯಾವ ಚಿಹ್ನೆಗಳಿಂದಲೂ ಒಮ್ಮೆಲೆ ಜಾತಿ, ಪಂಥವನ್ನು ಹೇಳಲು ಸಾಧ್ಯವಾಗದಂತೆ ನಮ್ಮ ನಡೆವಳಿ ನುಡಿವಳಿಗಳಲ್ಲಿ ಮಾರ್ಪಾಟುಗಳು ನಡೆಯಬೇಕು. ಹೆಸರುಗಳನ್ನು ಇಟ್ಟುಕೊಂಬಲ್ಲಿ ಕೂಡ ಈ ಮಾರ್ಪಾಟವಾಗುವದು ಅವಶ್ಯವಿದ್ದರೂ ಅದಕ್ಕೆ ಕೆಲವೊಂದು ಹೆಚ್ಚು ಕಾಲವು ಹಿಡಿಯಬಹುದೆಂದು ತೋರುತ್ತದೆ.

ಅಮೇರಿಕೆಯಲ್ಲಿ (ಸಂಯುಕ್ತ ಸಂಸ್ಥಾನ) ಬೇರೆ ಬೇರೆ ದೇಶದ ಬೇರೆ ಜಾತಿಗಳ ಜನಗಳು ಬಂದು ಒಕ್ಕಲಾಗುವರು. ಆದರೆ, ಅವರೆಲ್ಲರಲ್ಲಿ ಅಮೇರಿಕೆಯ ಅಭಿಮಾನವು ಅಂಕುರಿಸಿ, ಅದರ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣ ಮಾಡಲು ಅವರು ತ್ರಿಕರಣಪೂರ್ವಕವಾಗಿ ಹೇಗೆ ಸಿದ್ಧರಾದರೆಂಬುದನ್ನು ಕುರಿತು ಆ ಸರಕಾರವು ತುಂಬ ಯೋಚನೆ ಮಾಡಿದೆ; ಯೋಜನೆ ಮಾಡುತ್ತಲಿದೆ. Immigration and Assimilation ನನ್ನು ಕುರಿತು ಅಲ್ಲಿಯ ಶಿಕ್ಷಣ ಶಾಸ್ತ್ರಜ್ಞರೂ ಆಳವಾಗಿ ವಿಚಾರಿಸಿ ಗ್ರಂಥರಚನೆ ಮಾಡಿದ್ದಾರೆ. ಅಲ್ಲಿಯ ಸರಕಾರಕ್ಕೆ ಸಲಹೆಗಳನ್ನೀಯುತ್ತಲಿದ್ದಾರೆ. ಆ ಬಗೆಯ ಯೋಚನೆ, ಯೋಜನೆಗಳು ನಮ್ಮಲ್ಲಿಯೂ ನಡೆಯಲಾರವೇ?

ಈ ದೃಷ್ಟಿಯಿಂದ ನನಗೆ ಹೊಳೆದ ನಾಲ್ಕು ಮಾತುಗಳನ್ನು ಬಲ್ಲಿದರ ಎದುರು ಇರಿಸಿದ್ದೇನೆ. ಇವು ಕೊನೆಯ ನಿರ್ಣಯಗಳೆಂತಲ್ಲ. ಅಂತಹ ನಿರ್ಣಯಕ್ಕೆ-ಚರ್ಚೆಗೆ ಸಹಾಯಕವಾಗಲೆಂದು ಬರೆದಿರುವೆನು. ಅನುಕೂಲ ಪ್ರತಿಕೂಲ ಚರ್ಚೆಯಾಗಿ ಇದರ ಕೂಲಂಕಷ ವಿಚಾರವಾದೀತೆಂದು ಹಾರಯಿಸಿದ್ದೇನೆ.

ಪಾಕಿಸ್ತಾನದಲ್ಲಿ ಮುಸಲ್ಮಾನರು ಅತ್ಯಾಚಾರಗಳನ್ನು ನಡೆಸಿದ ಕಾಲದಲ್ಲಿ, ಹಿಂದುಸ್ತಾನದಲ್ಲಿ ಮಹಾತ್ಮಾಜೀಯವರು ಮುಸಲ್ಮಾನರ ಜೀವಿತ ವಿತ್ತಗಳ ರಕ್ಷಣೆಗಾಗಿ ತಮ್ಮ ಪುಣ್ಯವನ್ನೆಲ್ಲ ಸೂರೆಮಾಡಿದರು. ಹಾಗೆ ಮಾಡದೆ ಗಾಂಧೀಜಿಯವರು ಕೆಲಹೊತ್ತು ಸುಮ್ಮನಿರಬೇಕಾಗಿತ್ತು. ಸುಮ್ಮನಿರದೆ, ಪಾಕಿಸ್ತಾನಿಗಳ ಅತ್ಯಾಚಾರ, ಹತ್ಯಾಕಾಂಡದ ನಿಮಿತ್ತದಿಂದ ಹಿಂದೂ ದೇಶದಲ್ಲಿದ್ದ ಮುಸಲ್ಮಾನರೆಲ್ಲರ ನಿರ್ಮೂಲ ಮಾಡಿಬಿಡಲು ಪ್ರಾಪ್ತವಾದ ಒಳ್ಳೇ ಬಂಗಾರದಂತಹ ಸಂಧಿಯನ್ನು ಕಳೆದರು. ರಾಜಕಾರಣಿಗಳಾಗಿ ಮುಸಲ್ಮಾನರ ಮುಳ್ಳು ತೆಗೆದೊಯ್ಯಲು ಗಾಂಧೀಜಿಯವರು ಇಂತಹ ಅಪೂರ್ವ ಪ್ರಸಂಗದ ಲಾಭಪಡೆಯಬೇಕಾಗಿತ್ತು. ಧರ್ಮಾತ್ಮರಾಗಿ ಲೋಕಕ್ಕೆ ಶಾಂತಿಪಾಠ ಹೇಳ ಹೊರಟುದು ತಪ್ಪು, ಎಂಬ ಒಂದು ವಾದವಿದೆ. 'ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ, ತಾತ ಗಚ್ಛತಿ'। ಕಲ್ಯಾಣವನ್ನು ಮಾಡಿ ಕೇಡಿಗೀಡಾದವರಿಲ್ಲ, ಎಂಬುದು ಪುರಾತನ ಆದ್ಯರ ವಚನ. ಇದು ಭಾರತ ಸಂಸ್ಕೃತಿಯ ಸಾರ. ಪ್ರಪಂಚದಲ್ಲಿ ಜಾಗತಿಕ ಯುದ್ಧಗಳು ನಿಂತು, ಶಾಂತಿಸೌಖ್ಯವು ನೆಲೆಸಲು ಏನಾದರೊಂದು ದಾರಿಯಿದ್ದರೆ ಅದು, ಇದುವೆ ಒಂದು. ಮತ್ತು ಕೇವಲ ತರ್ಕಗಮ್ಯವಾದುದಲ್ಲ. ಮನೆಯ ಪ್ರಪಂಚದಲ್ಲಿ ಮನಗಂಡ ಮಾತು. ನಿತ್ಯ ಸತ್ಯವಚನ. ಒಳ್ಳಿತಿಗೆ ಕೆಡುಕಿನ ಫಲವು ದೊರೆಯುವುದಾದರೆ ಲೋಕಕ್ಕೆ ಬಾಳ್ವ ಆಶೆ ಯಾವುದು? ಬಿತ್ತಿದ ಗೋಧಿ ಸೀಗೆಬಳ್ಳಿಯಾಗುವುದಾದರೆ ಜನದ ಬಾಯಿಗೆ ಮಣ್ಣೇ ಸರಿ! ಆದಕಾರಣ, ಈ ಮೂಲಶ್ರದ್ಧೆಯನ್ನು ನಾಶಮಾಡಿಕೊಳ್ಳವವರು, ಮೊದಲು ತಮ್ಮ ಸುತ್ತಲಿನವರ ಸುಖವನ್ನೂ ಹಾಳುಮಾಡುವರು.

ಭಾರತವು ಈವರೆಗೆ ಬಾಳಿ ಒಳ್ನಡೆಯಲ್ಲಿ ತಿಳಿನಡೆಯಲ್ಲಿ ಲೋಕದ ಗುರುವೆಂದು ಹೆಸರಾಗಿದೆ. ಅದಕ್ಕೆ ನಮ್ಮ ನಾಡಿಗರ ಮೇಲಣ ಬಗೆಯ ಶ್ರದ್ಧೆಯೆ ಮುಖ್ಯವಾದ ಕಾರಣ. ಭಾರತವು ನಡುವೆ ಕಳೆದುಕೊಂಡಿದ್ದ ತನ್ನ ಹಿರಿಮೆಯನ್ನು ಮಹಾತ್ಮಾಜೀಯವರು ಈ ಮೂಲಶ್ರದ್ಧೆಯ ಅನುಷ್ಠಾನದಿಂದಲೆ ಮರಳಿದೊರಕಿಸಿ ಕೊಟ್ಟಿದ್ದಾರೆ. ಇದು ಬರಿ ಗೊಡ್ಡು ವೇದಾಂತ; ವ್ಯವಹಾರಿಕ ಸತ್ಯವಲ್ಲವೆಂದು ವಾದಿಸುವವರನ್ನು ನಾನು ಬಲ್ಲೆ. ಅವರೇ ಒಂದು ಕ್ಷಣ ವಿಚಾರಿಸಿ ನೋಡಲಿ; ಮಹಾತ್ಮಾಜೀಯವರು ಸುಮ್ಮನಿದ್ದು, ಪಾಕಿಸ್ತಾನದಲ್ಲಿ ಹಿಂದೂ ಜನರ ಕೊಲೆ ಸುಲಿಗೆಗಳು ನಡೆದಿರುವಂತೆ, ಹಿಂದುಸ್ತಾನದಲ್ಲಿ ಮುಸಲ್ಮಾನರ ಹುಟ್ಟಡಗಿಸುವ ದೊಂಬಿಗಳಿಗೆ ಇಂಬುಗೊಟ್ಟಿದ್ದರೆ ಏನಾಗಬಹುದಿತ್ತು? ದೇಶದ ಆದ್ಯಂತವೂ ಕೋಲಾಹಲ; ಹೆಣಗಳರಾಸಿ, ನೆತ್ತರದ ಕಾಲುವೆ. ಹಿಂಸೆ! ನೆತ್ತರ! ಎಂದು ಮುಂತಾಗಿ ನುಡಿದು ಜುಗುಪ್ಸೆಯನ್ನುಂಟುಮಾಡಿ ಅಹಿಂಸೆಯ ಹೇಡಿತನದ ಪಾಠಹೇಳಲು ಹೊರಟಿರುವೆನೆಂದು ರಾಷ್ಟ್ರೀಯ ಸೇವೆಯ ಗಡಿಬಿಡಿಯ ತರುಣರು ತಪ್ಪು ಭಾವಿಸಬಾರದು. ಹೇಡಿತನಕ್ಕೆ ಕಾರಣವಾಗುವ ಅಹಿಂಸೆಯನ್ನು ಭಾರತ ಧರ್ಮವು ಎಂದೂ ಒಪ್ಪಿಕೊಂಡಿಲ್ಲ. ಹಿಂದುಸ್ತಾನದಲ್ಲಿ ಮುಸಲ್ಮಾನರ ಸಂಹಾರವನ್ನು ಆರಂಭಿಸಿದ್ದರೆ ಅದು ಯಶಸ್ವಿಯಾಗಬಹುದಿತ್ತೇ? ಭಾರತಕ್ಕೆ ಕಲ್ಯಾಣಕಾರವೆ? ಎಂಬುದನ್ನು ಕೇವಲ ವ್ಯವಹಾರಿಕ ಲೆಕ್ಕಾಚಾರದಿಂದಲೂ ವಿಚಾರಿಸಿ ನೋಡಬಹುದು.

ಮುಸಲ್ಮಾನರನ್ನು ಹೇಳಹೆಸರಿಲ್ಲದಂತೆ ಮಾಡುವ ನಿಮಿತ್ತದಿಂದ ಆರಂಭವಾಗುವ ದೊಂಬಿಗಳು ಕೇವಲ ಮುಸಲ್ಮಾನರ ಮಟ್ಟಿಗೇ ಉಳಿಯಬಹುದೇ? ಆ ದ್ವೇಷಾಗ್ನಿಯು ಊರಲ್ಲಿ ಒಮ್ಮೆ ಹೊತ್ತಿ ಉರಿಯಲಾರಂಭಿಸಿದರೆ ಇಡಿಯ ಊರನ್ನೇ ಸುಡದೆ ಇದ್ದೀತೇ? ಒಂದು ಮನೆಗೆ ಬೆಂಕಿ ಹತ್ತಿದರೆ ನೆರೆಹೊರೆಯ ಮನೆಗಳಿಗೂ ಅದು ಹಬ್ಬದೆ ಇರುವುದೆ? ಸುಡುಸುಡುತ್ತಿರುವ ಮನೆಯ ಸಂಬಂಧ ತಪ್ಪಿಸಲು ಹೊಂದಿಕೊಂಡ ಮನೆಯ ತಮ್ಮ ಭಾಗವನ್ನು ಕೆಡಹಿ ಕೆಲವೊಂದು ಹಾನಿಗಳಾದರೂ ಒಳಗಾಗಬೇಕಲ್ಲವೇ? ಆತ್ಮಹಾನಿ-ಸ್ವಂತದ ಹಾನಿ ಮಾಡಿಕೊಳ್ಳದೆ ಇನ್ನೊಬ್ಬರಿಗೆ ಕೇಡನ್ನು ಬಗೆಯುವುದೇ ಸಾಧ್ಯವಿಲ್ಲವೆಂಬ ಮಾತು ಇದರಿಂದ ಸಿದ್ಧವಾಗುವುದಿಲ್ಲವೆ?

೧೯೪೨ರ ಚಳವಳಿಯಲ್ಲಿ ಬ್ರಿಟಿಶರ ಸರಕಾರದ ಟಪ್ಪಾಲಿನ ಲೂಟಿ, ಕಚೇರಿಗಳ ಮೇಲಿನ ದಾಳಿಗಳು ಮೊದಲು ಬಹಳ ಪ್ರಾಮಾಣಿಕ ರೀತಿಯಲ್ಲಿ ಆರಂಭವಾದುವು. ಆದರೆ, ಅಲ್ಲಿ ಸಿಕ್ಕ ಬೆಲೆಯುಳ್ಳ ಆಕರ್ಷಕ ವಸ್ತುಗಳಿಂದಲೂ ದ್ರವ್ಯದಿಂದಲೂ ಚಂಚಲವಾಗತೊಡಗಿದ ಮನಸು, ಮುಂದೆ ಆ ಜನರಲ್ಲಿ ಹಲವರನ್ನು ಅಲ್ಲದ ದಾರಿಗೆ ಒಯ್ದಿತು. ದೇಶಭಕ್ತರ ಸೋಗಿನಲ್ಲಿ ಅನೇಕ ಕಳ್ಳರೂ ಪೋಲಿಗಳೂ ಆ ಸುಲಿಗೆಯ ಕಾರ್ಯಕ್ರಮದಲ್ಲಿ ಕ್ರಮವಾಗಿ ಬಂದು ಕೂಡಿದರು. ಅಥವಾ ಈ ಬಗೆಯ ಕೊಳ್ಳೆ ಹೊಡೆಯುವುದರಲ್ಲಿ ತಮ್ಮನ್ನು ತರಬೇತು ಮಾಡಲು ದೇಶಭಕ್ತರೇ ತಮ್ಮೊಳಗೆ ಅವರನ್ನು ಔತಣಕೊಟ್ಟು ಕರೆದುಕೊಂಡರು. ಆಗ, ಇಂತಹ 'ದೇಶಭಕ್ತ' ತುಡುಗರ ಕೈಯ್ಯಿಂದ ನಮ್ಮನ್ನು ಹೇಗಾದರೂ ಉಳಿಸಿರೆಂದು ಕಾಂಗ್ರೆಸ್ಸ ವರಿಷ್ಠರಿಗೂ, ಬ್ರಿಟಿಶ ಸರಕಾರಕ್ಕೂ ಕೂಡಿಯೆ ಜನತೆ ಮೊರೆಯಿಟ್ಟಿತು! ರಾಜ್ಯಕ್ರಾಂತಿಯ ಧ್ಯೇಯವನ್ನಿಟ್ಟುಕೊಂಡ ಬಂಗಾಲದ ಗುಪ್ತಸಂಘಗಳು ತಮ್ಮ ಕಾರ್ಯಕ್ಕಾಗಿ ಧನಸಂಗ್ರಹಿಸಲು ಕನ್ನಹಾಕುವದು ನ್ಯಾಯವೆಂದು ಬಗೆದಿದ್ದುವು. ಆದರೆ, ಅಲ್ಲಿಯೂ ಮೇಲಣ ತೆರನಾದ ಅನುಭವವೇ ಬಂದಿತು.

ಕೊಲೆ, ಸುಲಿಗೆ ಮೊದಲಾದ ಅನಾಚಾರ, ಸ್ವೈರಾಚಾರಗಳು ಒಮ್ಮೆ ಆರಂಭವಾಯಿತೆಂದರೆ ಅವನ್ನು ತಡೆದು ಹಿಡಿಯುವುದು ಅಸಾಧ್ಯವಾಗುತ್ತದೆ. ಪಾಕಿಸ್ತಾನದಲ್ಲಿ ಜಿನ್ನಾ ಸಾಹೇಬರಿಗೆ ಶಾಂತಿಸ್ಥಾಪನೆಯು ಅಸಾಧ್ಯವಾಗಿದ್ದೇಕೆ ಮತ್ತೆ? ಹಿಂದೂ ದೇಶವೂ ಪಾಕಿಸ್ತಾನದಂತೆ ಅಶಾಂತಿಯ ತವರ್ಮನೆಯಾಗಬೇಕೆಂದು ಹಾರಯಿಕೆಯೆ? ಹೋಗಲಿ; ಇಷ್ಟಕಾರ್ಯವು ಸಂಪೂರ್ಣವಾಗಿ ನಿಶ್ಚಿತವಾಗಿಯೂ ಕೈಗೂಡುತ್ತಿದ್ದರೆ, ಕೆಲಕಾಲ ಅಶಾಂತಿ, ಅಸ್ಥಿರತೆಯ ಕಷ್ಟಗಳನ್ನು ಅನುಭವಿಸಲಿಕ್ಕೂ ಅಡ್ಡಿಯಿಲ್ಲ. ಆದರೆ, ದೇಶದಲ್ಲಿ ಒಬ್ಬ ಮಹಮ್ಮದೀಯನೂ ಉಳಿಯದಂತೆ ಅವರನ್ನು ತಳ್ಳಿಬಿಡಲು ಸಾಧ್ಯವೇ? ಅಥವಾ ನಾಶಮಾಡಲು ಶಕ್ಯವೆ? ಈ ಕೆಳಗಣ ಕಾರಣಗಳಿಗಾಗಿ ಮುಸಲ್ಮಾನರನ್ನು ನಿರ್ಮೂಲನಗೊಳಿಸುವೆವೆಂಬ ವಿಚಾರವು ಕೇವಲ ಭಾವನಾತ್ಮಕ ಅವಿಚಾರ; ಅಸಂಭಾವ್ಯ ಅಸಂಬದ್ಧ ಕಲ್ಪನೆ.

೧. ಕಾಶ್ಮೀರವು ಒಂದು ಕಾಲಕ್ಕೆ ಭಾರತ ಸಂಸ್ಕೃತಿಯ ಆಗರ. ಚೆಲುವಿನ ನೆಲೆವೀಡು. ಅದು ಭಾರತದಲ್ಲಿಯೇ ಉಳಿಯಬೇಕೆಂದುಹಾರಯಿಸಿದರೆ, ಅಲ್ಲಿ ಇರುವ ೧೦೦ಕ್ಕೆ ೯೦ ರಷ್ಟು ಮುಸಲ್ಮಾನರನ್ನು ನಾವು ಒಲಿಸಿಕೊಳ್ಳಲೆ ಬೇಕಷ್ಟೆ? ೧೦೦ಕ್ಕೆ ೯೦ರಷ್ಟು ಜನರನ್ನು ಹಗೆಗಳೆಂದು ಎಣಿಸಿದರೆ ಆ ದೇಶದ ಹಂಬಲವೇತಕ್ಕೆ ಹಾಗಾದರೆ!

೨. ಕಾಂಗ್ರೆಸ್ಸಿನವರು ಪಾಕಿಸ್ತಾನಕ್ಕೆ ಒಪ್ಪಿದ್ದೂ, ಗಾಂಧಿಜೀಯವರು ತಮಗೆ ಒಪ್ಪಿಗೆ ಯಿಲ್ಲದ್ದರೂ ಆಗ ಕಾಂಗ್ರೆಸ್ಸಿಗೆ ವಿರೋಧಿಸದೆ ಸುಮ್ಮನೆ ಇದ್ದುದೂ ತಪ್ಪೆಂದು ಪ್ರತಿಪಾದಿಸುವ ಹಿಂದೂ ಅಭಿಮಾನದ ಅಖಂಡ ಭಾರತವಾದಿಗಳು ಸಿಂಧ, ಪಂಜಾಬ, ಬಂಗಾಳಗಳಲ್ಲಿರುವ, ಮುಸಲ್ಮಾನರು ಬಹುಸಂಖ್ಯಾಕರಾಗಿರುವ ಭಾಗಗಳನ್ನು ಹೇಗೆ ಅರಗಿಸಿಕೊಳ್ಳಲಿದ್ದರು? ಎಲ್ಲಿ ೧೦೦ಕ್ಕೆ ೫೦ಕ್ಕಿಂತ ಹೆಚ್ಚು ಜನರು ಒಂದು ಆಡಳಿತವನ್ನು ವಿರೋಧಿಸುವರೊ ಅಲ್ಲಿ ರಾಜ್ಯವನ್ನು ಆಳುವುದು ಯಾರಿಂದಲಾದರೂ ಸಾಧ್ಯವೊ? ದಿನಾಲು ಜನರಿಗೆ ಸೆರಮನೆ ಅಥವಾ ಗುಂಡಿಕ್ಕಿ ಕೊಲ್ಲುವ ಹೆದರಿಕೆ ಹಾಕುವ ಆಡಳಿತವು ಏಸುದಿನ ನಡೆದೀತು?

೩. 'ನಮಗೆ ಮುಸಲ್ಮಾನರು ಬಹುಸಂಖ್ಯಾಕರಾಗಿರುವ ಪ್ರದೇಶವು ಬೇಡವೇ ಬೇಡ; ಹಿಂದುಗಳು ಬಹುಸಂಖ್ಯೆಯಲ್ಲಿರುವ ಭಾರತದೊಳಗಿಂದ ಅವರ ಹುಟ್ಟಡಗಿಸುವದೇ ತಮ್ಮ ಗುರಿ,' ಎಂದು ಕೆಲವರು ಊಹಿಸಿರಬಹುದು.

ಆದರೆ, ಇದೂ ಭದ್ರವಾದ ವಿಚಾರವಲ್ಲ. ಯಾವುದೇ ಒಂದು ಬಗೆಯ ದೇಶಾಭಿಮಾನದ ಅಥವಾ ಧಾರ್ಮಿಕಭಾವನೆಯ ಅತಿರೇಕದ ಆವೇಶದಲ್ಲಿ ಮೂಲಭೂತವಾದ ಮಾನವಸ್ವಭಾವವನ್ನೇ ಈ ಜನವು ಮರೆತು ಬಿಡುತ್ತದೆ.

(ಅ) ಮುಸಲ್ಮಾನರೆಲ್ಲರೂ ನೀಚರು; ದುಷ್ಟರು ಎಂದು ಒಂದು ಸಾಮಾನ್ಯ ಸಿದ್ಧಾಂತವನ್ನು ಕಲ್ಪಿಸುವುದೇ ಮೊದಲು ತಪ್ಪು. ಮನುಷ್ಯ ಮಾತ್ರರೆಲ್ಲ ಸುಷ್ಟ-ದುಷ್ಟ ಭಾವಗಳ ಸಮ್ಮಿಶ್ರಣ. ಯಾವುದೊಂದು ಜನಪಕ್ಷ-ಪಂಗಡ ಅಥವಾ ಜಾತಿಯವರೆಲ್ಲರೂ ಸಜ್ಜನರು, ಶ್ರೇಷ್ಠರು, ಅಥವಾ ಪವಿತ್ರರು ಎಂದು ಬಗೆಯುವುದು ವಾಸ್ತವವಲ್ಲ. ಯಾರನ್ನಾಗಲಿ ಹಾವು ಎಂದಾಗಲಿ ಇಲ್ಲವೆ ದೇವನೆಂದಾಗಲಿ ನೆರೆನಂಬುವದು ವಾಸ್ತವಸತ್ಯದಿಂದ ದೂರ; ಬಹುದೂರ. ಮುಸಲ್ಮಾನರಲ್ಲಿಯೂ ಕಬೀರ, ಶರೀಫಸಾಹೇಬರಂತಹ ಸಾಧುಗಳು ಆಗಿದ್ದಾರೆ. ಸತ್ಪುರುಷರಿದ್ದಾರೆ: ಸಜ್ಜನರೂ ಉಂಟು. ಪಾಕಿಸ್ತಾನದಲ್ಲಿ ಹಿಂದುಗಳ ಹತ್ಯಾಕಾಂಡದ ಕಾಲಕ್ಕೆ ಅವರಿಗೆ ತಮ್ಮ ಮನೆಗಳಲ್ಲಿ ಆಶ್ರಯವನ್ನಿತ್ತು ಕಾಪಾಡಿದಂತಹ ಮುಸಲ್ಮಾನ ಮಹನೀಯರು ಇಲ್ಲವೆಂತಲ್ಲ. ಇವರ ಜೊತೆಗೆ ಹಿಂದುಸ್ತಾನದಲ್ಲನೇಕ ಪ್ರಾಮಾಣಿಕರಾದ ರಾಷ್ಟ್ರೀಯ ಮುಸಲ್ಮಾನರನ್ನೂ ನೆನೆದುಕೊಳ್ಳಿ.

(ಆ) ಹಿಂದೂಗಳೆಂಬವರೆಲ್ಲ ಸಜ್ಜನರು; ಅವರಲ್ಲಿ ಒಕ್ಕಟ್ಟಿದೆ; ಇವರೆಲ್ಲ ಒಂದು ಎಂಬಿವೇ ಮೊದಲಾದ ಗ್ರಹಿಕೆಗಳು ಬಹಳ ಸಂಶಯಾಸ್ಪದವಾಗಿವೆ. ವಿಜಯನಗರದ ಕಾಲದ ಮಾತು ಅದಂತಿರಲಿ; ಹಿಂದವೀ ಸ್ವರಾಜ್ಯ ಸಂಸ್ಥಾಪನೆಗೆ ಹೊರಟ ಶಿವಾಜಿಗೆ ಹಗೆಗಳಾಗಿ ಮುಸಲ್ಮಾನ ರಾಜರಿಗೆ ಸಹಾಯಕರಾದಂತಹ ಹಿಂದು ಕುವರರಿದ್ದಾರೆ. ಶಾಂತಿನಿಕೇತನದ ಪ್ರಿನ್ಸಿಪಾಲರಾಗಿರುವ ಶ್ರೀ ಕ್ಷಿತಿಮೋಹನ ಸೇನರು ಹಿಂದೂದೇಶದ ಜನ ಮತ್ತು ಮತಗಳನ್ನು ಕುರಿತು ಒಂದು ಗ್ರಂಥ ಬರೆದಿರುವರು. ಅದರಲ್ಲಿ ಅವರು ಕಾಣಿಸಿರುವ ಒಂದು ಪ್ರಸಂಗದ ವರ್ಣನೆಯು ಉದ್ಬೋಧಕವಾಗಿದೆ.

ಗಡಿನಾಡ ಪ್ರಾಂತದ ಕೆಲವು ಪಠಾಣರು ಒಂದು ಊರ ಹಿಂದೂ ಓಣಿಯಲ್ಲಿ ಹೊಕ್ಕು ಒಂದು ಮನೆಯನ್ನು ನುಗ್ಗಿದರು. ಆ ಮನೆಯವನ ಕೋಲಾಹಲವನ್ನು ಕೇಳಿ ಓಣಿಯ ಹಿಂದೂಗಳೆಲ್ಲ ಹೊರಗೆ ಒಂದೆಡೆಗೆ ನೆರೆದರು.

ಅಷ್ಟರಲ್ಲಿ ಪಠಾಣರು ಆ ಮನೆಯಿಂದ ಒಂದು ಕೊಡುಗೂಸನ್ನು ಎತ್ತಿಕೊಂಡು ಓಡಿದರು. ಆ ಹುಡುಗೆಯು ಹಿಂದೂ ಸಮಾಜದ ಬನಿಯಾ ಜಾತಿಯವಳಿರಬೇಕು. ಅದನ್ನು ಕಂಡು ಅಲ್ಲಿ ಸೇರಿದ ನೆರವಿಯ ಜನಗಳು 'ಅದೇನು? ಆ ಜಾತಿಯ ಹುಡುಗೆಯನ್ನೋಡಿಸಿಕೊಂಡೊಯ್ದರೆ ನಾವೇಕೆ ಪಠಾಣರ ಮೇಲೇರಿ ಹೋಗಿ ಸಂಕಟವನ್ನು ಮೈಮೇಲೆ ಹಾಕಿಕೊಳ್ಳಬೇಕು!' ಎಂದು ಆ ಹುಡುಗೆಯ ಜಾತಿಯವರಲ್ಲದ ಆ ಗಂಡಸರು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರಂತೆ! ಇಂತಿದು ಹಿಂದೂ ಜನ! ಎಲ್ಲಿದೆ ಹಿಂದೂ ಎಂಬ ಜನ? ನಮ್ಮಲ್ಲಿ ಬ್ರಾಹ್ಮಣ, ವೀರಶೈವ, ರೆಡ್ಡಿ, ಕುರುಬಾದಿ ಜಾತಿಗಳು ಮಾತ್ರ ಇವೆ. ಹಿಂದೂ ಎಂಬುದು ಇನ್ನೂ ಆಗಬೇಕಾಗಿದೆ. ಒಳಜಾತಿಗಳು ಈಗಿನ ಸ್ವರೂಪದಲ್ಲಿ ಎಂದರೆ ಜನ್ಮದಿಂದ ಜಾತಿ ಎಂಬುದನ್ನೇ ಉಳಿಸಿಕೊಳ್ಳುವುದಾದರೆ ಹಿಂದೂ ಎಂಬ ಸಮಾಜ ಎಂದೂ ತಲೆದೋರಲಾರದು. ದುಡ್ಡಿನ ಆಸೆಯಿಂದ, ಹೆಣ್ಣಿನ ಆಸೆಯಿಂದ ಮುಸಲ್ಮಾನರಾದ ಹಿಂದೂ ಸದ್ಗೃಹಸ್ಥರುಂಟು. ಪಾಕಿಸ್ತಾನಕ್ಕೆ ಕಳ್ಳತನದಿಂದ ಸರಕುಗಳನ್ನು ಕಳಿಸಿ ಧನ ಸಂಪಾದಿಸಲು ಆತುರರಾದ ಹಿಂದೂ ವರ್ತಕರು ಭಾರತದಲ್ಲಿಯೇ ಈ ಕ್ಷಣಕ್ಕೂ, ದೊರೆಯುತ್ತಲಿದ್ದಾರೆ; ಇಷ್ಟು ನಮ್ಮ ರಾಷ್ಟ್ರೀಯತ್ವ!

(೩) ಹಿಂದೂ ಅಥವಾ ಮುಸಲ್ಮಾನವೆಂಬ ಧಾರ್ಮಿಕ ಕೃತ್ರಿಮಭಾವನೆಗಳು ಮಿತಿಮೀರಿ ಸಮಾಜವು ಎಷ್ಟೇ ಧರ್ಮಾಂಧವಾದರೂ ಅದರೊಳಗಿನ ಒಬ್ಬಿಬ್ಬ ಸಜ್ಜನರಲ್ಲಾದರೂ ಮಾನವತೆಯು ಜಾಗ್ರತವಾಗಿ ಧರ್ಮದ ಹೆಸರಿನಲ್ಲಿ ನಡೆವ ಘೋರ ಕೃತ್ಯಗಳನ್ನು ವಿರೋಧಿಸುವ ಪ್ರಯತ್ನಗಳು ನಡೆಯತಕ್ಕುವೇ; ಆರಂಭದಲ್ಲಿ ಇವು ಅಲ್ಪವಾಗಿದ್ದರೂ ಕೊನೆಗೆ ಇವಕ್ಕೆ ಜಯವು ನಿಶ್ಚಿತ. ಹಿಂದೂ, ಮುಸಲ್ಮಾನ, ಫಾರ್ಶಿ, ಕ್ರಿಸ್ತಿ ಎಂಬಿವೆಲ್ಲವು ನಾವು ಮಾಡಿಕೊಂಡ ಭೇದಭಾವಗಳು. ಜೀವನದ ವಿಕಾಸವಾಗಲೆಂದು ಧರ್ಮವೆಂಬುದು ನಿರ್ಮಾಣವಾಯಿತು. ನಾವೆಲ್ಲ ಮೊತ್ತ ಮೊದಲಲ್ಲಿ ಮಾನವರು. ಹಿಂದೂ ಮುಸಲ್ಮಾನಾದಿ ಹೆಸರುಗಳು ನಾನು ಮನುಷ್ಯನೆಂಬುದನ್ನೇ ಮರೆಯಿಸುತ್ತಿದ್ದರೆ, ಧರ್ಮದ ಹೆಸರಿನಲ್ಲಿ ಮಾನವನು ಕಾಡು ಕ್ರೂರ ಮೃಗಗಳ ಸಾಲಿಗೆ ನಿಲ್ಲುವಂತಹ ಕೃತಿಗಳನ್ನು ಮಾಡಬೇಕಾಗುತ್ತಿದ್ದರೆ ನಾವು ಈ ಹಿಂದುವೂ ಅಲ್ಲ; ಅಥವಾ ಆ ಮುಸಲ್ಮಾನನೂ ಅಲ್ಲ...... ಎಂದು ಲೋಕಕ್ಕೆ ಸಾರಿ, ಹತ್ಯಾಕಾಂಡವನ್ನು ನಿಲ್ಲಿಸಲು ಆ ಮಹಾನುಭಾವರು ತಮ್ಮ ಬಲಿದಾನಮಾಡಲಿಕ್ಕೂ ಹಿಂಜರಿಯರು.

ದ್ವೇಷ, ಅಸೂಯಾದಿ ವಿಘಾತಕ ಗುಣಗಳು ಮಾನವನ ಮೂಲ ಸ್ವಭಾವವಲ್ಲ; ವಿಘ್ನಗಳನ್ನು ನೆನೆದುಕೊಂಡು ಹೆದರಿ, ಅವುಗಳ ನಿವಾರಣೆಗಾಗಿ ಉತ್ಪನ್ನವಾಗುವ ಮನೋಭಾವಗಳು ಇವು ಪ್ರೀತಿಯ ವಿಧಾಯಕ ಗುಣ. ಪ್ರೀತಿಯಲ್ಲಿ ಮನುಷ್ಯನಿಗೆ ಆತನ ಆತ್ಮಾನುಭವವು ದೊರೆಯುತ್ತದೆ. ಆತ್ಮವಿಕಾಸವಾಗುತ್ತದೆ. ಪ್ರೀತಿಮಾಡುವಲ್ಲಿ, ಪ್ರೀತಿಯನ್ನು ಮಾಡಿಸಿಕೊಂಬುವಲ್ಲಿಯೆ ಆತನಿಗೆ ಕೃತಾರ್ಥತೆಯ ಅನುಭವವು ಉಂಟಾಗುವುದು. ಧನ್ಯತೆಯೆನಿಸುವುದು. ಕೊಲೆ ಸುಲಿಗೆಗಳಿಂದ ನಿಜವಾದ ಸಂತೃಪ್ತಿಯನ್ನು ಪಟ್ಟವರಾರೂ ಇಲ್ಲ.

ಆದುದರಿಂದ, ಒಂದು ಜಾತಿಗೆ ಜಾತಿಯನ್ನೇ ನಾಶಮಾಡಬೇಕೆಂದು ಮಾಡುವ ಪ್ರತಿಜ್ಞೆಯು ಅಥವಾ ನಿಶ್ಚಯವು ಸಂಪೂರ್ಣವಾಗಿ ಕೊನೆಗಾಣುವುದೇ ಸಾಧ್ಯವಿಲ್ಲ. ಪರಶುರಾಮನು ಕ್ಷತ್ರಿಯರನ್ನು, ೨೧ ಬಾರಿ ನಿರ್ನಾಮ ಮಾಡಿದನೆಂದು ಪುರಾಣಗಳು ವರ್ಣಿಸಿದುದರಲ್ಲಿಯೇ ಒಂದು ಕಟಕಿ ಇದೆ; ವ್ಯಂಗ್ಯವಿನೋದವಿದೆ. ಇಂತಹ ಆತ್ಯಂತಿಕ ಕೃತಿ ಅಸಾಧ್ಯವೆಂಬ ಧ್ವನಿಯಿದೆ. ಜ್ಯೂಗಳ ಬೇಟೆಯಾಡ ಹೊರಟ ಹಿಟ್ಲರನು ಸರ್ವ ಸಮರ್ಥನಾಗಿದ್ದರೂ ಅದು ಅವನಿಂದ ಸಾಧ್ಯವಾಯಿತೆ?

೪. ಮುಸಲ್ಮಾನರ ಸಂಪೂರ್ಣನಾಶವು ಸಾಧ್ಯವಿಲ್ಲವಾದರೆ ಹೋಗಲಿ, ಶಕ್ಯವಿದ್ದ ನಾಶಮಾಡುವ ಪ್ರಯತ್ನವಾದರೂ ಏಕೆ ಆಗಬಾರೆಂದು ಗೊಣಗುವವರೂ ಇದ್ದಾರೆ. ಆಗಲಿ; ಈ ಬಗೆಯ ಪ್ರಯತ್ನಗಳಿಗೆ ಆರಂಭವಾಗಿದ್ದಿತೆಂದು ತಿಳಿಯೋಣ. ಅಯೋಧ್ಯಾ ಪ್ರಾಂತ, ಬಿಹಾರಗಳಲ್ಲಿ ನಡೆದ ಮುಸಲ್ಮಾನರ ಮೇಲೆ ಮುಯ್ಯ ತೀರಿಸಿಕೊಳ್ಳುವ ಪ್ರಯತ್ನಗಳು ಇನ್ನುಳಿದ ಪ್ರಾಂತಗಳಿಗೂ ಹಬ್ಬಿದ್ದುದಾದರೆ ಯಾವ ಪರಿಣಾಮಗಳು ಆಗಬಹುದಿತ್ತು, ಗೊತ್ತೆ?

(ಅ) ಮುಸಲ್ಮಾನರ ಮೇಲೆ ಕೈಮಾಡ ಹೋಗಲು ಅವರೂ ಪ್ರತಿಯಾಗಿ ಹಿಂದುಗಳ ನಾಶಮಾಡದೆ ಇರುತ್ತಿದ್ದಿಲ್ಲ.

(ಆ) ಮುಸಲ್ಮಾನರಲ್ಲಿಯೂ ಧೂರ್ತರೂ ಬುದ್ಧಿವಂತರೂ ಉಂಟು. ಅವರು ತಮ್ಮ ರಕ್ಷಣೆಗಾಗಿ, ಹಿಂದುಗಳೊಳಗಿನ ಒಳಜಾತಿಗಳಲ್ಲಿರುವ ಮತದ್ವೇಷ, ಅಸೂಯಾದಿಗಳ ಲಾಭಪಡೆಯದೆ ಇರುತ್ತಿದ್ದಿಲ್ಲ.

ಕೊಲ್ಲಾಪೂರ, ಮಿರ್ಜಿ, ಸಾಂಗಲಿ, ಸಾತಾರಾ ಭಾಗದಲ್ಲಿ ಕಳೆದ ಫೆಬ್ರುವರಿಯಲ್ಲಾದ ದೊಂಬಿಗಳಲ್ಲಿ ಮಹಾತ್ಮಾಜೀಯವರ ಕೊಲೆಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲೆ ಸೇಡುತೀರಿಸಿಕೊಳ್ಳುವ ಸೋಗಿನಲ್ಲಿ ಬ್ರಾಹ್ಮಣರ ಮನೆಗಳ ಕೊಳ್ಳೆ ಹೊಡೆಯಲಾಯಿತು. ಅದರಲ್ಲಿ ಹಿಂದುಗಳೆಂದು ಕರೆಯಲ್ಪಡುವ ಕೆಲವು ಒಳಜಾತಿಗಳೇ ಬ್ರಾಹ್ಮಣರ ಮೇಲೆ ಮುನಿದುದು ಕಂಡುಬಂತು. ಮುಸಲ್ಮಾನರೂ ಹಲವರು ರಾ. ಸ್ವ. ಸೇವಕರ ಮೇಲಿನ ತಮ್ಮ ಕುನಸು ತೀರಿಸಲು ಈ ಸಂಧಿಯನ್ನು ಉಪಯೋಗಿಸಿಕೊಳ್ಳದೆ ಬಿಡಲಿಲ್ಲ.

ಕಳೆದ ನವೆಂಬರ ತಿಂಗಳಲ್ಲಿ ನಾನು ಮೈಸೂರಿಗೆ ಹೊರಟಾಗ ರೈಲಿನಲ್ಲಿ ಕಿವಿಯಾರೆ ಕೇಳಿದ ಸಂಗತಿಯೊಂದು: ಮಂಡ್ಯದಲ್ಲಿ ಒಕ್ಕಲತನದ ಶಿಕ್ಷಣಕ್ಕಾಗಿ ಪ್ರದರ್ಶನವನ್ನು ತೋರಿಸುವುದಕ್ಕಾಗಿ ಕೆಲವು ಜನರೊಡನೆ ಆ ಖಾತೆಯ ಡೆಪ್ಯುಟಿ ಡೈರೆಕ್ಟರರು ಇಬ್ಬರೂ ಪ್ರಯಾಣ ಬೆಳೆಸಿದ್ದರು. ನನ್ನೊಡನೆ ಪ್ರೊ. ಮಳಗಿ ಸೇತು ರಾಮಾಚಾರ್ಯರೂ ಇದ್ದರು. ಡೆ. ಡೈರೆಕ್ಟರರಲ್ಲಿ ಒಬ್ಬನು ಬ್ರಾಹ್ಮಣ; ಇನ್ನೊಬ್ಬನು ಮುಸಲ್ಮಾನ. ಅವರಿಬ್ಬರ ಮಾತು, ಚರ್ಚೆಗಳಿಂದ ಮುಸಲ್ಮಾನ ಅಧಿಕಾರಿಯು ತುಂಬ ಚತುರನೂ, ಕರ್ತವ್ಯದಕ್ಷನೂ ಆಗಿದ್ದನೆಂದು ವ್ಯಕ್ತವಾಗುತ್ತಿತ್ತು. ಬ್ರಾಹ್ಮಣ ಅಧಿಕಾರಿಯು ಕಡಿದಷ್ಟು ತುರಿಸಿಕೊಂಬ, ಹೇಗೊ ತನ್ನ ಕೆಲಸ ನೂಕುತ್ತ ನಡೆದವನೆಂದು ನಮಗೆನಿಸಿತು. ಆತನ ಈ ಬಗೆಯ ನಿರುತ್ಸಾಹಕ್ಕೆ ಏನು ಕಾರಣವೊ ನಮಗೆ ಗೊತ್ತಾಗಲಿಲ್ಲ.

ಆ ಮಾತು ಈ ಮಾತಿನಿಂದ ವಾಕ್‌ಚತುರನಾದ ಆ ಅಧಿಕಾರಿಯು ಮೆಲ್ಲನೆ ಮೈಸೂರ ಸಂಸ್ಥಾನದ ಬ್ರಾಹ್ಮಣ-ಬ್ರಾಹ್ಮಣೇತರರ ತಿಕ್ಕಾಟದ ವಿಷಯಕ್ಕೆ ಬಂದನು. ಆ ಬ್ರಾಹ್ಮಣ ಅಧಿಕಾರಿಯಲ್ಲಿ ಹುದುಗಿಕೊಂಡಿದ್ದ ಕಹಿ ಅನುಭವಗಳ ಅಸಮಾಧಾನವು ಒಂದೊಂದು ಮಾತಿನಲ್ಲಿ ಹೊರಬರಲಾರಂಭಿಸಿತು. ಜಾಣ ಮಹಮ್ಮದೀಯನು, ಆ ಬ್ರಾಹ್ಮಣನ ಬೆಂದ ಮನಸಿಗೆ, ಮೆಲುಮಾತಿನಿಂದ ಮಾಂತ್ರಿಕನಂತೆ ಉಸುರಿದುದು ಸ್ವಲ್ಪವಾದರೂ ಸಮಾಧಾನವನ್ನು ತಂದಿರಬೇಕು. ಆ ಮಾತಿನ ಕೊನೆಗೆ ಧೂರ್ತ ಅಧಿಕಾರಿಯು ಸಹಜವಾಗಿ ಒಡನುಡಿದನು. "ಮಿಸ್ಟರ್ ಇನ್ನು ಮೇಲೆ ನಮಗೆ ನಿಮಗೆ ಸ್ನೇಹವಾಗಲೇಬೇಕು. ಇಬ್ಬರ ಸ್ಥಿತಿಯೂ ಒಂದೇ ಆಗಿದೆ," ಎಂದ! ಆ ಸಂವಾದಗಳನ್ನು ಆಲಿಸುತ್ತಿದ್ದ ನನ್ನ ಮೈ ಆಗ ಜುಮ್ಮೆಂದಿತು. ಈ ಧರ್ಮಸಂಕಟದಲ್ಲಿ ಬ್ರಾಹ್ಮಣ ಜಾತಿಗೆ ದಾರಿ ಯಾವುದು? 'ಜಾತಿ' ಉಳಿಸಿಕೊಳ್ಳಲು ಮುಸಲ್ಮಾನರ ಕೊರಳಿಗೆ ಬೀಳಬೇಕೆ? ಅಥವಾ ಹಿಂದುಗಳೆಲ್ಲ ಒಂದು ಜಾತಿಯೆಂದು ಸಿದ್ಧಪಡಿಸಲು ಉಳಿದ ಎಲ್ಲ ಬಹುಜನ ಸಮಾಜದೊಡನೆ ಸಮರಸವಾಗಬೇಕೆ?

ಅದೇನೆ ಇರಲಿ, ಹಿಂದುಗಳೆಲ್ಲ ಸಮರಸರಾಗಿ ಒಂದುಗೂಡುವ ವರೆಗಂತೂ ಮುಸಲ್ಮಾನರು ಅನುಕೂಲವಿದ್ದಂತೆ, ಒಮ್ಮೆ ಬ್ರಾಹ್ಮಣರ ಕಡೆಗೆ ಬಂದರೆ ಇನ್ನೊಮ್ಮೆ ಜೈನ, ಮರಾಠಾ ಅಥವಾ ವೀರಶೈವ ಹೀಗೆ ಯಾರ ಬೆಂಬಲವನ್ನೂ ಪಡೆದೂ ತಾನು ಬದುಕುವ ಹೆಣಗಾಟ ನಡೆಸುವುದು ಸ್ವಾಭಾವಿಕವಾಗಿದೆ. ಹಿಂದುಗಳ ಜಾತಿ ಜಾತಿಗಳಲ್ಲಿ ಈರ್ಷೆ ಇರುವ ವರೆಗೆ ಮುಸಲ್ಮಾನರು ಬದುಕಲಿಕ್ಕೆ ಬೇಕಾದಷ್ಟು ಇಂಬಿದೆ. ಇಲ್ಲಿ ಮುಸಲ್ಮಾನರನ್ನು ಹುರಿದುಬಿಡುವ ಎತ್ತುಗಡೆ ನಡೆದಿದ್ದರೆ, ಹಿಂದೂವೆನಿಸಿಕೊಳ್ಳುವ ಜಾತಿಗಳೊಳಗಿನ ಒಕ್ಕಟ್ಟಿನ ಪ್ರದರ್ಶನವು ಕೊಲ್ಲಾಪುರ, ಸಾಂಗಲಿಗಳಂತೆ ಎಲ್ಲೆಡೆಗೂ ಆಗಿ ಕೀಲೋತ್ಪಾಟನೆ ಮಾಡಿದ ವಾನರನ ಗತಿಯಾಗದೆ ಇರುತ್ತಿದ್ದಿಲ್ಲ.

(ಇ) ಅಲ್ಲದೆ ಇನ್ನೊಂದು ಬಗೆಯಾದ ಯಾದವೀ ಕಲಹಗಳೂ ಆಗುತ್ತಿದ್ದವು. ಹಿಂದೂ ಮಹಾಸಭೆಯ ಅಭಿಮಾನಿಗಳೆನಿಸುವ ಕೆಲವರು, ರಾ. ಸ್ವ. ಸೇವಕದಳದ ಹಲವರು ಮುಸಲ್ಮಾನರ ವಿರುದ್ಧ ಹೊರಟರೂ ಕಾಂಗ್ರೆಸ್ಸಿನ ವರಿಷ್ಠರು ಮುಸಲ್ಮಾನರ ಪಕ್ಷದಿಂದ ಕಾದಲು ಮುಂದೆ ಬರುತ್ತಿದ್ದರು.

(ಈ) ಈ ಕಾರಣಗಳಿಂದ ದೇಶದಲ್ಲೆಲ್ಲ ಅನಾಯಕತ್ವ, ಅನಾಚಾರಗಳ ತಾಂಡವ ನಡೆಯುತ್ತಿತ್ತು, ಈಗ ಏನೋ ಸ್ವಲ್ಪ ಸ್ಥಿರತೆಯಿದ್ದು ಘಟನಾತ್ಮಕ ಪ್ರಗತಿಯು ನಡೆದಿದೆ. ಅದೂ ಅಸಾಧ್ಯವಾಗುತ್ತಿತ್ತು. ಮುಸಲ್ಮಾನರ ವಸತಿ ಯಾವ ಒಂದೆಡೆಯಲ್ಲಿಯೆ ಇಲ್ಲ; ಊರೂರಿಗೆ ಅವರ ಮನೆಗಳಿವೆ; ಅದರಿಂದ ರಕ್ತಪಾತವು ಆಗದೆ ಇರುವ ಹಿಂದೂ ದೇಶದ ಹಳ್ಳಿಯು ಸಿಕ್ಕುವುದು ದುರ್ಲಭವಾಗುತ್ತಿತ್ತು. ಕೆಲವು ಮಟ್ಟಿಗಾದರೂ ಶಾಂತವಾಗಿರುವ ಈ ಕಾಲದಲ್ಲಿಯೆ ಅನ್ನ ಬಟ್ಟೆಗಳ ತೊಂದರೆಯಿಂದ ಪೀಕಲಾಡುವ ಹೊತ್ತು ಬಂದಿರುವಾಗ ದೇಶದಲ್ಲೆಲ್ಲ ದೊಂಬಿಗಳೆದ್ದಿದ್ದರೆ ಕೂಳು ಕೂಳೆಂದು ಜನ ಗೋಳಾಡಬೇಕಾಗುತ್ತಿತ್ತು. ದೇಶದೊಳಗಿನ ಔದ್ಯೋಗಿಕ ಪರಿಸ್ಥಿತಿಯು ಹದಗೆಡುತ್ತಿತ್ತು. ಆರ್ಥಿಕ ದುರಂತಕ್ಕೆ ಒಳಗಾಗ ಬೇಕಾಗುತ್ತಿತ್ತು.

(ಉ) ಇದೆಲ್ಲವೂ ಬ್ರಿಟಿಶ ತಂತ್ರಗಾರರು ಬೇಡಿ ಬಯಸುತ್ತಿರುವ ವಿಷಯವು. ಚರ್ಚಿಲ್ ವಾವೆಲ್ಲರು ಶಕುನದ ಹಕ್ಕಿಗಳಂತೆ ಎಂದಿನಿಂದಲೇ ನುಡಿಯುತ್ತಿದ್ದಾರೆ. ಹಿಂದೂ ಮುಸಲ್ಮಾನ ಅಂತಃಕಲಹಗಳಿಂದ ಭಾರತದ ಉದ್ದಕ್ಕೂ ರಕ್ತಪಾತವು ನಡೆಯುವುದೆಂದು ಸಾರಿದ್ದಾರೆ. ಬ್ರಿಟಿಶರ ಈ ಭವಿತವ್ಯವನ್ನು ಸತ್ಯವಾಗಿಸಲಿಕ್ಕೆ ಪಾಕಿಸ್ತಾನಿಗಳು ಬದ್ಧಕಂಕಣ-ಎಲ್ಲ ಖಡ್ಗಹಸ್ತರಾಗಿ ಸಿದ್ಧವಾಗಿಯೆ ನಿಂತಿದ್ದಾರೆ.

ಹಿಂದುಸ್ತಾನದವರೂ ಪಾಕಿಸ್ತಾನಿಗಳಂತೆ ಧರ್ಮಾಂಧರಾಗಿ ಕಲಹಕ್ಕೆ ಸಿದ್ಧರಾಗಿ ಬ್ರಿಟಿಶರ ಭವಿಷ್ಯವನ್ನು ನಿಜವಾಗಿಸಬೇಕೆ? ಅಥವಾ ವಿಚಾರಪರರಾಗಿ ಶಾಂತಿಯನ್ನು ತಂದುಕೊಂಡು (ತಂದುಕೊಂಡು, ಏಕೆಂದರೆ ಅದು ಸ್ವಾಭಾವಿಕವಾಗಿ ಬರುವುದಿಲ್ಲ. ಪಾಕಿಸ್ತಾನಿಗಳ ಅತ್ಯಾಚಾರಗಳನ್ನು ಕೇಳಿ ಮೈಯುರಿದು, ನೆತ್ತರ ಕುದಿದು ಶಠಂ ಪ್ರತಿ ಶಾಠ್ಯಂ ಎಂಬಂತೆ ನಡೆಯಲೇಬೇಕೆಂಬ ಆವೇಶವುಂಟಾಗದವರು ಭಾರತದಲ್ಲಿ ಅಪರೂಪ. ಆದರೂ ತಾಳಿದವನೇ ಬಾಳಿಯಾನು; ತಾಳ್ಮೆಯಿರಲಿ; ಮುಯ್ಯಕ್ಕೆ ಮುಯ್ಯ ಬೇಡ; ಪ್ರೀತಿಸಲು ಕಲಿಯಿರಿ. ಶಾಂತಿಯಿಂದ ಆಗುವ ಹಿತಕಾರ್ಯವು ಶಸ್ತ್ರದಿಂದ ಕೈಗೂಡದು ಎಂದು ಮುಂತಾದ ಗಾಂಧೀಜಿಯವರ ಉಪದೇಶದಂತೆ) ನಡೆದುಕೊಳ್ಳಬೇಕೆ?

ಇವೆರಡರಲ್ಲಿ ಯಾವುದು ಕಲ್ಯಾಣಕಾರಕ? ಹಿಂದೂ ದೇಶದಲ್ಲಿ ಶಾಂತಿಯು ನೆಲೆಗೊಂಡು ಅದರ ಔದ್ಯೋಗಿಕ, ಆರ್ಥಿಕ ಏಳ್ಗೆಯಾಗುವದು ಬ್ರಿಟಿಶರಿಗೆ ಬೇಡವಾಗಿದೆ. ನಾಲ್ವತ್ತುಕೋಟಿ ಜನಸಂಖ್ಯೆಯ ರಾಷ್ಟ್ರವು ಸರ್ವಸಂಪನ್ನವಾಗಿ ಬಲಿಷ್ಠವಾಗಿ ಮೊದಲನೆಯ ತರಗತಿಯ ರಾಷ್ಟ್ರವಾಗಿ ಬೆಳೆದರೆ ಜಗತ್ತಿನಲ್ಲಿ ಬಿಳಿಯರಿಗೆ, ಆಂಗ್ಲೊ ಅಮೇರಿಕನ್‌ರಿಗೆ ತಾವೇ ಮಿಗಿಲೆಂದು ಮೆರೆಯಲು ದೊರೆಯಲಾರದು. ಇದು ಅವರ ಪ್ರತಿಷ್ಠೆಗೆ ಕುಂದು. ಜಗತ್ತಿನ ರಾಜಕಾರಣದ ಸೂತ್ರಗಳು ತಮ್ಮ ಕೈಯಿಂದ ಹಿಂದೂದೇಶದ ಕಡೆಗೆ ಹೋಗುವದನ್ನು ಅವರು ಸಹಿಸರು. ಚೀನ, ಹಿಂದುಸ್ತಾನದಂತಹ ರಾಷ್ಟ್ರಗಳು ಬಿಳಿಯರ ಅಭ್ಯುದಯಕ್ಕೆ ವಿಘ್ನವೆಂದು ಅವರು ಎಂದೊ ನಿರ್ಧರಿಸಿದ್ದಾರೆ. Yellow Peril ಎಂದು ಚೀನದ ಏಳ್ಗೆಯ ಗಂಡಾಂತರವನ್ನು ಕುರಿತು ಅವರು ಭವಿಷ್ಯವನ್ನು ನುಡಿದಿದ್ದಾರೆ.

ಈ ಕಾರಣದಿಂದಲೆ ಅಖಂಡ ಹಿಂದೂದೇಶವು ಶಾಂತವಾಗಿ ತನ್ನ ಏಳ್ಗೆಯನ್ನು ಮಾಡಿಕೊಳ್ಳದಂತೆ ಹಲವು ಕಾಲ್ತೊಡಕುಗಳನ್ನೂ ಒಡ್ಡಿದ್ದಾರೆ, ಪಾಕಿಸ್ತಾನದ ತೊಡಕನ್ನು ಹೇಗೊ ಬಗೆಹರಿಸಿಕೊಳ್ಳುವಷ್ಟರಲ್ಲಿ ಕಾಶ್ಮೀರದಲ್ಲಿ ಭೂತಗಳನ್ನು ಕುಣಿಸಲಾರಂಭಿಸಿದರು. ಹೈದರಾಬಾದಿನ ಆಟವು ಇನ್ನೂ ಮುಂದೆ ಇದ್ದೇ ಇದೆ. ಬ್ರಿಟಿಶರು ಹುದಿಗಿಟ್ಟಿದ್ದ ಎರಡು 'ಟೈಮ್‌ಬಾಂಬು'ಗಳು ಮಾತ್ರ ಬಹುತರ ಹುಸಿಯಾದುವು. ಒಂದು ಮಹಾತ್ಮಾಜೀಯವರ ಪ್ರಭಾವದಿಂದ; ಇನ್ನೊಂದು ಪಟೇಲರ ಹಂಚಿಕೆಗಳಿಂದ ಹಿಂದುಸ್ತಾನದಲ್ಲೆಲ್ಲ ಹಿಂದೂ- ಮುಸಲ್ಮಾನರ ದೊಂಬಿಗಳು ಆರಂಭವಾಗಿ ಈ ದೇಶದಲ್ಲೆಲ್ಲ ಅನಾಯಕತ್ವ, ಅರಾಜಕತ್ವವು ಉಂಟಾಗುವುದೆಂದು ಹಾರಯಿಸಿದ್ದರು.

ಇದು ಬ್ರಿಟಿಶರ ಬರಿ ಹಾರಯಿಕೆಯಾಗಿರದೆ, ಅದಕ್ಕೆ ಆವಶ್ಯಕವಾದ ಸಂಪೂರ್ಣ ಭೂಮಿಕೆಯನ್ನು ನಿರ್ಮಿಸಿದ್ದರು. ಬ್ರಿಟಿಶರು ಹೀಗೆ ನಮಗಾಗಿ ತೋಡಿಟ್ಟ ಗೋರಿಯಲ್ಲಿ (ಪಾಕಿಸ್ತಾನದ ಪಾರದಿಂದ ಎಚ್ಚತ್ತು) ಈ ಬಾರಿ ಬೀಳಲಿಲ್ಲ. ಅಥವಾ ಆ ಟೈಮು ಬಾಂಬನ್ನೇ ಜಾಣ್ಮೆಯಿಂದ ಹುಸಿಮಾಡಿದ್ದಾಯಿತು. ಇದು ಭಾರತದ ಭಾಗ್ಯ. ಇದು ಕೇವಲ ಮಹಾತ್ಮಾಜೀಯವರ ಪುಣ್ಯ. ಇನ್ನೊಂದು ಕುತ್ತ, ಸಂಸ್ಥಾನಗಳ ಉರಲು, ಹೈದರಾಬಾದನ್ನೊಂದು ಬಿಟ್ಟರೆ ಉಳಿದುವು ಸಾಮಾನ್ಯವಾಗಿ ಕೇಂದ್ರ ಸರಕಾರದೊಡನೆ ಸಮರಸವಾಗಿ ಅಥವಾ ಒಂದುಗೂಡಿ ನಡೆಯಲು ಒಪ್ಪಿಕೊಂಡಿವೆ. 'ಹಿಂದೂ ದೇಶದೊಳಗಿನ ರಾಜರು, ಮಹಾರಾಜರು, ನವಾಬರುಗಳೆಲ್ಲ ಸ್ವತಂತ್ರರು; ಹಿಂದುಸ್ತಾನದಲ್ಲಿ ಸೇರುವುದೂ ಬಿಡುವುದೂ ಅವರ ಇಷ್ಟ. ನಾವು ಅವರನ್ನು ಒತ್ತಾಯ ಪಡಿಸಲಾರೆವು' ಎಂದು ಬ್ರಿಟಿಶರು ಕುಟಿಲತಂತ್ರವನ್ನು ಹೂಡಿದ್ದರು. ಆದರೆ, ಹೈದರಾಬಾದಿನ ನಿಜಾಮರೊಬ್ಬರು ವಿವೇಕಿಗಳಾದರೆ ಹಿಂದೂ ದೇಶದ ಸುದೈವದಿಂದ ಆ ಕುತ್ತದೊಳಗಿಂದಲೂ ಪಾರದಂತಾಗುವುದು.

ನಮ್ಮ ದೇಶದಲ್ಲಿ ದೊಂಬಿ, ಯುದ್ಧಾದಿಗಳು ಎಡೆಬಿಡದೆ ನಡೆಯುವುದನ್ನು ಬ್ರಿಟಿಶರು ಮನಸಾ ಹಾರಯಿಸುತ್ತಾರೆ. ಏಕೆಂದರೆ, ಅದರಿಂದ ಅವರಿಗೆ ಎರಡು ತೆರನಾದ ಲಾಭವಿದೆ. ಜಾತಿ ಜಾತಿಗಳ ಅಂತಃಕಲಹಗಳು ಆರಂಭವಾದಲ್ಲಿ ಅಲ್ಪಸಂಖ್ಯಾಕರ ಹಿತ ಸಂರಕ್ಷಣೆಗೆಂದು ನೆವಮಾಡಿ ಬ್ರಿಟಿಶರಿಗೆ ಮರಳಿ ಇಲ್ಲಿಯ ರಾಜ್ಯಕಾರ್ಯ ಭಾರದಲ್ಲಿ ಕೈಹಾಕಲು ಅನುವು ದೊರೆಯುತ್ತದೆ. ಅಥವಾ ಒಂದಿಲ್ಲೊಂದು, ಪಕ್ಷದವರಿಗೆ ತಮ್ಮ ಸಹಾಯಕ್ಕಾಗಿ ಬ್ರಿಟಿಶರನ್ನು ಕರೆವ ಮೋಹವು ಉಂಟಾಗುವ ಸಂಭವವು ಇಲ್ಲದಿಲ್ಲ. ಹಿಂದುಗಳೂ ಮುಸಲ್ಮಾನರೂ ಕಾದಲಾರಂಭಿಸಿದಲ್ಲಿ ಪಾಕಿಸ್ತಾನವು ಅದರಲ್ಲಿ ಭಾಗವಹಿಸದೆ ಇರದು. ಬ್ರಿಟಿಶರಿಗೆ ಬೇಕಾದುದು ಇದಕ್ಕಿಂತ ಬೇರಾವುದೂ ಇಲ್ಲ. ಈ ಬಗೆಯ ಕಲಹ, ಕಾಳಗವು ಆರಂಭವಾದೊಡನೆ ಇಂಗ್ಲೆಂಡಿನತ್ತ ಸಾಗಿರುವ ಬ್ರಿಟಿಶ ಸೈನ್ಯದ ಹಡಗುಗಳು ಹಿಂದುಸ್ತಾನದ ಕಡೆಗೆ ಗಕ್ಕನೆ ತಿರುಗಿದುವೆ!

ಹಾಗಾದರೆ, ಹಿಂದುತ್ವದ ಆವೇಶದಲ್ಲಿ ತಲೆತಿರುಕರಂತೆ ವರ್ತಿಸಿ ದೊರೆತ ಭಾರತ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕೆ? ಅಥವಾ ಮುಸಲ್ಮಾನರ ನಿರ್ಮೂಲನಕ್ಕೆ, ಅದೂ ಅರ್ಧಮರ್ಧ-ಏಕೆಂದರೆ ಸಂಪೂರ್ಣ ನಿಃಶೇಷಮಾಡುವುದು ಅಸಾಧ್ಯವೆಂದು ಮೊದಲೆ ಅರಿತಿದ್ದೇವೆ-ಇಂತಹ ಅರೆಗೆಲಸಕ್ಕೆ ಕೈಯಿಕ್ಕಬೇಕೆ? ಆವುದು ಲೇಸು? ಆದುದರಿಂದ, ಕೈತೋರಿ ಅವಲಕ್ಷಣ ಮಾಡಿಕೊಳ್ಳುವದಕ್ಕಿಂತಲೂ ಮಹಾತ್ಮಾಜೀಯವರ ಧರ್ಮವಚನಗಳಿಗೆ ಮೊರೆಹೋಗುವುದೆ ಲೇಸಲ್ಲವೆ? 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್? ಮಹಾತ್ಮಾಜೀಯವರು ತಮ್ಮ ದೇಹವನ್ನು ಬಲಿಕೊಟ್ಟು ಹಲಕೆಲವು ಮುಸಲ್ಮಾನರನ್ನಾದರೂ ಸಂಪೂರ್ಣವಾಗಿ ಗೆದ್ದುಕೊಂಡಿದ್ದಾರೆ. ತಮ್ಮ ಸಂರಕ್ಷಣೆಗಾಗಿ ಆತ್ಮಾಹುತಿಯನ್ನು ಕೊಟ್ಟ ಮಹಾತ್ಮಾಜೀಯವರನ್ನು ನೆನೆದು ಅನೇಕ ಮುಸಲ್ಮಾನರು ಭಾರತ ನಿಷ್ಠರಾಗಿರುವುದು ತಮ್ಮ ಕರ್ತವ್ಯವೆಂದು ಬಗೆಯುತ್ತಲಿದ್ದಾರೆ; ಹೈದರಾಬಾದ್ ಕಾಶ್ಮೀರಗಳ ಪಾಕಿಸ್ತಾನವಾದಿ ಅತ್ಯಾಚಾರಿಗಳನ್ನು ನಿಷೇಧಿಸಲು ಮುಂದೆ ಬಂದಿದ್ದಾರೆ. ಹಿಂದುಸ್ತಾನದಲ್ಲಿಯೂ ಪಾಕಿಸ್ತಾನದಂತೆ ಊರೂರಿಗೂ ಜಾತೀಯ ಜಗಳಗಳಿಂದ ನೆತ್ತರದ ಕಾಲುವೆಗಳು ಹರಿಯುವುವೆಂದು (ತಮ್ಮ ಕುಟೀಲ ನೀತಿಗೆ ಯಶಸ್ಸು ಸಿಕ್ಕುವುದೆಂದು) ಬಾಯಿಬಿಟ್ಟುಕೊಂಡು ಕುಳಿತ ಬ್ರಿಟಿಶರಿಗೆ ಇದರಿಂದ ತುಂಬ ನಿರಾಶೆಯಾಗಿದ್ದರೆ ಸೋಜಿಗವಿಲ್ಲ. ಬ್ರಿಟಿಶ ಸೈನ್ಯಾಧಿಕಾರಿಗಳಿಂದ ಸಂಪಾದಿಸಿ ಹೂಳಿಟ್ಟ ಶಸ್ತ್ರಾಸ್ತ್ರಗಳು, ಮದ್ದು ಗುಂಡುಗಳು ಈಗ ದೇಶದಲ್ಲೆಲ್ಲ ಹಲವೆಡೆಗೆ ಹೊರಬೀಳುತ್ತಲಿವೆ. ಸಾವಿರಾರು ಭಾರತೀಯರ ಪ್ರಾಣಾಪಹಾರಕ್ಕೆ ಸಜ್ಜಾಗಿದ್ದ ಆ ಆಸುರೀಸಾಮಗ್ರಿಯು ಮಹಾತ್ಮಾಜೀಯವರ ಅಹಿಂಸೆಯ ಅಸ್ತ್ರದ ಮುಂದೆ ನಾಚಿ ನೆಲದೊಳಗೆ ಅಡಗಿತು! ಬಟ್ಟೆಬರೆಗಳ ವ್ಯಾಪಾರ ನಿಂತರೂ ಶಸ್ತ್ರಾಸ್ತ್ರಗಳಿಗಾಗಿ ಹಿಂದುಸ್ತಾನದಿಂದ ತಮ್ಮ ಕಡೆಗೆ ಹೊನ್ನಿನಹೊಳೆ ಹರಿಯುವುವೆಂದು ಎಣಿಕೆಹಾಕುತ್ತಿದ್ದ ಬ್ರಿಟಿಶ್ ಕಾರಖಾನೆದಾರರು ಒರಗುಮೋರೆ ಮಾಡಿಕೊಂಡು ಕುಳ್ಳಿರಬೇಕಾಯಿತು. ಇದಕ್ಕೆ ಪ್ರತಿಯಾಗಿ ಹಲವು ಮುಸಲ್ಮಾನ ಮುಂದಾಳುಗಳು ಕಾಶ್ಮೀರ, ಹೈದರಾಬಾದುಗಳ ಸಮಸ್ಯೆಗಳಲ್ಲಷ್ಟೇ

ಅಲ್ಲ, ಪಾಕಿಸ್ತಾನದ ಅನ್ಯಾಯಗಳನ್ನು ವಿರೋಧಿಸುವುದಕ್ಕೂ ತಾವು ಸಿದ್ಧರಿರುವುದಾಗಿ ಸಾರುತ್ತಿರುವುದು ಅದ್ಭುತವಾದ ಪವಾಡವೇ ಅಲ್ಲವೇ? ಈ ಪವಾಡದ ಕಾರಣಪುರುಷನ ಮಹಿಮೆ ಎಂತಹದು! ಭಾರತವನ್ನು ರಕ್ತಪಾತ, ಆರ್ಥಿಕ ದುರಂತದಿಂದ ಉಳಿಸಿದ ಆತನ ಉಪಕಾರಗಳನ್ನು ಎಷ್ಟೆಂದು ಹೇಳುವುದು!

'ಮುಸಲ್ಮಾನರನ್ನು ಸಂದೇಹದಿಂದ ನೋಡಬೇಡಿರಿ; ಅವರು ಅಜ್ಞಾನದಿಂದ ದ್ವೇಷಿಸಿದರೂ ಅವರನ್ನು ಪ್ರೀತಿಸಿ ಗೆದ್ದುಕೊಳ್ಳಿ......' ಎಂಬುದು ಮಹಾತ್ಮನ, ಧರ್ಮಾತ್ಮನ ಭೂಮಿಕೆಯಿಂದ ಸಂಪೂರ್ಣವಾಗಿ ಸರಿಯಾಗಿದೆ. ಆದರೆ, ರಾಜ್ಯದ ಆಡಳಿತವನ್ನು ದಕ್ಷತೆಯಿಂದ ಸಾಗಿಸಬೇಕಾದವನಿಗೆ ಬೆಳ್ಳಗಿದ್ದುದೆಲ್ಲ ಹಾಲೆಂದು ಗ್ರಹಿಸಲಿಕ್ಕಾದೀತೆ? ದೇಶಸಂರಕ್ಷಕ ಸೈನ್ಯದಲ್ಲಿ, ಶಾಂತಿರಕ್ಷಕ ಪೊಲೀಸಿನಲ್ಲಿ ಮುಸಲ್ಮಾನರನ್ನು ಬೇಕಾದಂತೆ ಬರಲು ತೆರೆದಿಡುವುದು ಕ್ಷೇಮಕರವೆ? ಅಯೋಧ್ಯಾಪ್ರಾಂತದ ಲೀಗಿನ ಮುಂದಾಳುಗಳಾದ ಖಲೀಕಝಿಲ್ ಝುಮಾನರೆಂಬವರು ಘಟನಾಸಮಿತಿಯಲ್ಲಿ ಭಾರತನಿಷ್ಠೆಯ ಪ್ರತಿಜ್ಞೆ ಮಾಡಿದರು. ಗಾಂಧಿಜೀಯವರ ಶಾಂತಿದೂತರಾಗಿ ಜಿನ್ನಾರ ಕಡೆಗೆ ಮಾತನಾಡಲು ಹೋದವರು ಪಾಕಿಸ್ತಾನದಿಂದ ಮರಳಲೇ ಇಲ್ಲ! ಅಂಚೆ, ರೈಲು, ಸೈನ್ಯ, ಪೋಲಿಸ ಅಧಿಕಾರಿಗಳಾಗಿದ್ದ ಕೆಲವರು ಪಾಕಿಸ್ತಾನಕ್ಕೆ ನೆರವಾಗಿ ಭಾರತ ದ್ರೋಹಿಗಳಾದ ಉದಾಹರಣಗಳುಂಟೆಂದು ವಾರ್ತೆಗಳಿವೆ. ಆದುದರಿಂದ, ಹಿಂದುಸ್ತಾನವು ಅನಿವಾರ್ಯವಾಗಿ ಪಾಕಿಸ್ತಾನದೊಡನೆ ಕಾದುವ ಸಮಯಬಂದರೆ ಆಗ ಮುಸಲ್ಮಾನರು ಪಂಚಮದಳದವರಾಗಿ, ನೆಲೆಸಿದ ನಾಡಿಗೇ ಕೇಡು ಬಗೆವವರಾಗಿ ನಡೆದುಕೊಳ್ಳಲಿಕ್ಕಿಲ್ಲವೆಂದು ನೆರೆನಂಬುವುದು ನ್ಯಾಯವಾದೀತೆ?

ಮುಸಲ್ಮಾನರೆಲ್ಲರೂ ಭಾರತ ದ್ರೋಹಿಗಳಾಗುವರೆಂದು ನಿರಪವಾದ ಸಿದ್ಧಾಂತ ಮಾಡುವುದೂ ಅನ್ಯಾಯ. ಆದರೆ, ಯಾರು ಭಾರತನಿಷ್ಠರು, ಯಾರು ಅಲ್ಲ, ಎಂಬುದನ್ನು ಗೊತ್ತುಹಚ್ಚುವ ಬಗೆ ಹೇಗೆ? ಹಿಂದೂ ದೇಶದ ಆಡಳಿತದ ಗುಟ್ಟುಗಳನ್ನು ಹಗೆಗಳಿಗೆ ತಿಳಿಸಲು ಒಬ್ಬ ಮುಸಲ್ಮಾನನು ಸಿದ್ಧನಾದರೂ ಸಾಕು. ಎಲ್ಲ ಮಹಮ್ಮದೀಯರು ಭಾರತ ದ್ರೋಹಿಗಳಾಗಬೇಕಾದ ಕಾರಣವಿಲ್ಲ. ಆದುದರಿಂದ, ಇನ್ನೂ ಕೆಲವು ವರ್ಷಗಳ ವರೆಗೆ ಹಿಂದುಸ್ತಾನದ ದಂಡಿನಲ್ಲಿ ಅಥವಾ ಆಡಳಿತದಲ್ಲಿ ಮೇಲಣ ಸ್ಥಳಗಳಿಗಂತೂ ತೀರ ನಂಬುಗೆಯವರೆಂದು ನಿಃಸಂದಿಗ್ಧವಾಗಿ ಗೊತ್ತಾದ ನಾಲ್ಕೆಂಟು ಜನರನ್ನು ಹೊರ್ತುಪಡಿಸಿ ಸಾಮಾನ್ಯವಾಗಿ ಮುಸಲ್ಮಾನರನ್ನು ಸೇರಿಸಿಕೊಳ್ಳದಿರುವುದೇ ಕ್ಷೇಮಕರವೆಂದು ಒಪ್ಪಲೆ ಬೇಕಷ್ಟೆ?

ಆದರೆ, ಹಿಟ್ಲರನು ಜ್ಯೂಗಳನ್ನು ಕಂಡಂತೆ ತೀರ ಸಂದೇಹದಿಂದ ಅವರೊಡನೆ ವರ್ತಿಸುವುದೂ ಅನಿಷ್ಟ. ಒಳ್ಳಿದರಾಗಿ ಭಾರತನಿಷ್ಠರಾಗಿ ನಡೆದುಕೊಂಡರೆ ನಿಮಗೆ ಅದರ ಪ್ರತಿಫಲವು ದೊರೆಯುತ್ತದೆ. ಅದರಲ್ಲಿ ತಮ್ಮ ಕಲ್ಯಾಣವಿದೆಯೆಂಬ ನಂಬುಗೆಯು ಹುಟ್ಟುವಂತೆ ಹಿಂದುಸಮಾಜದ, ಹಾಗೂ ನಮ್ಮ ಸರಕಾರಗಳ ನಡೆವಳಿ ಇರಬೇಕು. ಮುಸಲ್ಮಾನರು, ಭಾರತದೊಡನೆ ಸಮರಸವಾಗುವುದರಲ್ಲಿಯೆ ತಮ್ಮ ಹಿತವಿದೆಯೆಂದು ಮುಂಗಂಡು, ಆ ಬಗೆಯಾಗಿ ತಮ್ಮ ನಡೆ, ನುಡಿಗಳನ್ನು ತಿದ್ದಿಕೊಳ್ಳಲು ಆರಂಭಿಸಬೇಕು. ಧಾರ್ಮಿಕ ಅತಿವಾದದ ಮಬ್ಬು ತಲೆಗೇರದಂತೆ ಅವರ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಗಳಾಗಬೇಕು. ಶುಕ್ರವಾರಕ್ಕೆ ನಮಾಜಿಗಾಗಿ ಸೂಟಿಬಿಡುವುದು, ಅವರಿಗಾಗಿ ಬೇರೆ ಶಾಲೆಗಳನ್ನು ವಿದ್ಯಾಲಯಗಳನ್ನು ಸ್ಥಾಪಿಸುವುದು ಘಾತಕ; ಮಕ್ಕಾ, ಮದಿನಾ, ಪಾಕಿಸ್ತಾನಗಳ ವಿಷಯದಲ್ಲಿ ಇಲ್ಲದ ಆತ್ಮೀಯತೆಯ ಭಾವನೆಗಳು ಇನ್ನು ಮೇಲೆ ಬೇರುಸಹಿತ ನಷ್ಟವಾಗಬೇಕು. ತಮ್ಮ ಮೋಕ್ಷವು ಹಿಂದೂದೇಶದಲ್ಲಿಯೆ ಇದೆಯೆಂದು ಅವರು ನೆರೆನಂಬಬೇಕು. ಹಿಂದೂ ದೇಶದ ಹೊರಗೆ ಧಾರ್ಮಿಕ ಕೇಂದ್ರವು ಇರಕೂಡದು. ಧಾರ್ಮಿಕ ಸಹಿಷ್ಣುತೆಯ ಪ್ರತ್ಯಕ್ಷಪಾಠವೆಂದು ಅವರು ಹಿಂದೂಹಬ್ಬಗಳಲ್ಲಿ, ದೇವತೋತ್ಸವಗಳಲ್ಲಿ (ಹಿಂದುಗಳು ಮೋಹರಮ್ಮ, ಉರಸುಗಳಲ್ಲಿ ಭಾಗವಹಿಸುವಂತೆ) ಬಂದು ಭಕ್ತಿ, ವಿಶ್ವಾಸಗಳನ್ನು ವ್ಯಕ್ತಪಡಿಸುವ ವಾಡಿಕೆಯುಂಟಾಗಬೇಕು. ಈ ಕಾರಣಕ್ಕಾಗಿಯೆ ದೇವಾಲಯಗಳಲ್ಲಿ ಹರಿಜನಕ್ಕಷ್ಟೇ ಅಲ್ಲ, ಅಖಿಲ ಹಿಂದೂದೇಶಸ್ಥರಿಗೂ ಪ್ರವೇಶವಿರಬೇಕು. 'ಈಶ್ವರ ಅಲ್ಲಾ ತೇರೇ ನಾಮ್';

'ರಾಮ ರಹೀಮ ಒಂದೇ' ಎಂಬುದನ್ನು ಪ್ರತ್ಯಕ್ಷ ಆಚರಣೆಗಳಿಂದ ತೋರಬೇಕು. ಮಸೀದೆಯ ಎದುರು ಬಾರಿಸಕೂಡದು; ಎಂಬುದು ಅನ್ಯಾಯ; ಇದು ಧಾರ್ಮಿಕ ಹುಚ್ಚಿನ ಪೋಷಣೆಗೆ ಅವಕಾಶಕೊಟ್ಟಿದೆ. ಮುಸಲ್ಮಾನರು ತಾವಾಗಿಯೆ ಬ್ರಿಟಿಶರ ಕಾಲದ ಜಾತಿದ್ವೇಷಕ್ಕೆ ಪುಟಕೊಡುವ, ಇಂತಹ ಹುಚ್ಚಿನ ಹಕ್ಕುಗಳನ್ನು ಬಿಟ್ಟುಕೊಡಬೇಕು.

ಇವೆಲ್ಲ ಬದಲಾವಣೆಗಳಷ್ಟೇ ಇನ್ನೂ ಒಂದು ಹೆಚ್ಚಿನ ಮಹತ್ವದ ಮಾರ್ಪಾಟು ಆಗಬೇಕಾದುದೆಂದರೆ ಇಂದು ಹಿಂದೂವೆಂದು ಹೇಳಲ್ಪಡುವ ಜಾತಿಗಳೊಳಗಿನ ಒಕ್ಕಟ್ಟು. ಹೆರವರಿಗೆ ಒಳಗೆ ಬೆರಳು ಸೇರಿಸಲು ಎಲ್ಲಿಯೂ ಪದರು ಉಳಿಯದಂತೆ ಅದು ಭದ್ರವಾಗಿ ಬೆರೆಯಬೇಕು. ಸ್ಥಾನಿಕ ಸ್ವರಾಜ್ಯದ ಸಂಸ್ಥೆಗಳಲ್ಲಿ ಕೌನ್ಸಿಲುಗಳಲ್ಲಿ ಮತ್ತು ಇಂತಹ ಇನ್ನಿತರ ಕಡೆಗಳಲ್ಲಿ ಹಿಂದೂಗಳ ಒಳಬಣಗಳ ತಿಕ್ಕಾಟದಲ್ಲಿ ಮುಸಲ್ಮಾನ ಗುಂಪಿಗೆ ತನ್ನ ಕಾಲು ಚಾಚಲು ಚೆನ್ನಾಗಿ ಇಂಬುದೊರೆಯುತ್ತಿರುವುದನ್ನು ಊರೂರಿಗೂ ಮನಗಾಣಬಹುದಾಗಿದೆ. ಹೊರಗೆ ಹಿಂದೂ ಸಂಘಟನೆ, ಕಾಂಗ್ರೆಸ್‌ಪಕ್ಷದ ಅಧ್ವರ್ಯುಗಳಾಗಿದ್ದರೆ, ಮುನಿಸಿಪಾಲಿಟಿ ಪ್ರೆಸಿಡೆಂಟರಾಗಲು ಮತದೊರಕಿಸಿ ಪಾಕಿಸ್ತಾನ ವಾದಿಗಳೊಡನೆ ಸಹಕರಿಸಿದ ಉದಾಹರಣೆಗಳಿಗೆ ಕೊರೆತೆಯಿಲ್ಲ! ಸಾರ್ವಜನಿಕ ಜೀವನದಲ್ಲಿ ಹಿಂದುಗಳು ತಮ್ಮ ಒಳಜಾತಿಗಳನ್ನು ನೆನೆಪಿಟ್ಟುಕೊಂಡು ಕೆಲಸ ಮಾಡುತ್ತಿರುವ ವರೆಗೂ ಮುಸಲ್ಮಾನರ ಚೆಲ್ಲಾಟ ನಡೆಯತಕ್ಕದ್ದೇ. ಹೀಗೆ ತಮ್ಮ ಜಾತಿವಿಶಿಷ್ಟ ಹಕ್ಕುಗಳನ್ನು ಪಡೆಯಲು ಮುಸಲ್ಮಾನರು ಸವಿಗಲಿತರೆ, ಅವರ ಜಾತೀಯ ಭಾವನೆಯು ಹಿಂದುಸ್ತಾನದ ಸ್ವಾತಂತ್ರ್ಯಕ್ಕೆ ಗಂಡಾಂತರವನ್ನು ಉಂಟುಮಾಡದೆ ಇರಲಾರದು. ಏಕೆಂದರೆ, ಊರೂರಿಗೂ ನಾವು ಈ ಬಗೆಯಾಗಿ ಪಂಚಮದಳದವರನ್ನು ಪೋಷಿಸುವ ಪಾಪಮಾಡುತ್ತಿದ್ದೇವೆ. ಈ ಪಾಪವು ಹೆಚ್ಚಾದಂತೆ, ಪಾಕಿಸ್ತಾನದ ತರುಣರು ಕನವರಿಸುತ್ತಿರುವ ದಿಲ್ಲಿಯ ಸಿಂಹಾಸನಕ್ಕಾಗಿ ನಡೆವ ದಾಳಿಗಳಲ್ಲಿ ನಮ್ಮ ರಾಷ್ಟ್ರವು ಕುಸಿದು ಬೀಳುವುದು ಅಸಂಭವವಲ್ಲ.

ಹಿಂದೂವೆಂಬ ಒಳಜಾತಿಗಳಲ್ಲಿ ಸಾಮರಸ್ಯವು ಬೆಳೆದಂತೆ ಮುಸಲ್ಮಾನರು ತಾವಾಗಿಯೆ ಮೆತ್ತಗಾಗುವರು. ಬಹುಜನ ಸಮಾಜದೊಡನೆ ಬೆರೆಯಲು ಆಸೆಪಡುವರು. ತುರ್ಕೀ ಟೋಪಿ; ಶೇರವಾನೀ ಹಾಕಿ ತಮ್ಮ ಮುಸ್ಲಿಂತನವನ್ನು ತೋರ್ಪಡಿಸಿಕೊಂಡು ಬಹುಜನ ಸಮಾಜದ ಮನಸ್ಸಿಗೆ ನೋವನ್ನುಂಟುಮಾಡುವ ಸಾಹಸಕ್ಕೆ ಮನಸು ಮಾಡರು. ಹಿಂದೂಗಳ ಉತ್ಸವಾದಿಗಳಲ್ಲಿ ಸೇರಿ ಹಿಂದುವಾಗುವುದರಲ್ಲಿಯೆ ತಮ್ಮ ಅಭಿರುಚಿಯನ್ನು ವ್ಯಕ್ತಪಡಿಸಲಾರಂಭಿಸುವರು. ಆದರೆ, ಇದಕ್ಕೆ ಹಿಂದುಗಳೆಂಬವರಲ್ಲಿ ಒಂದುತನವು ಬೆಳೆಯಬೇಕು. ಹಿಂದುಗಳೆಂಬ ಒಂದು ಜಾತಿಯವರು ಇನ್ನೊಂದು ಜಾತಿಯವರ ವಿರುದ್ಧ ಮುಸಲ್ಮಾನರ ನೆರವನ್ನು ಕೋರುವುದು ಅಧಮತನ, ರಾಷ್ಟ್ರದ್ರೋಹವೆಂಬ ಭಾವನೆಯು ಸಮಾಜದಲ್ಲಿ ಪ್ರಬಲವಾದಷ್ಟು ಈ ಕೆಲಸವು ಬೇಗನೆ ಕೈಗೂಡುವುದು. ಮುಸಲ್ಮಾನರ ತೊಡಕು ಬಿಡಿಸುವ ಮಿಗಿಲಾದ ಹಂಚಿಕೆಯಿದು.

ಯಾವ ಕಾರ್ಯವನ್ನಾದರೂ ತಮ್ಮಿಂದ ಆರಂಭಿಸಬೇಕು, ಎಂಬುದು ಮಹಾತ್ಮರ ತತ್ವ. ಬ್ರಿಟಿಷರನ್ನು ದೂಷಿಸಿ ಫಲವೇನು? ಹಿಂದುಸ್ತಾನದಲ್ಲಿ ಸಿದ್ಧತೆ ಕಂಡರೆ ಅವರು ತಾವಾಗಿಯೆ ಹೊರಡುವರು. ಕಾರಣ ನಾವು ಮೊದಲು ಒಂದಾಗಬೇಕು; ಹೆರರಿಗೆ ಉಪದೇಶಕ್ಕೆ ಹೊರಡುವ ಮೊದಲು ಅದನ್ನು ತಾನು ಆಚರಣೆಯಲ್ಲಿ ತರಬೇಕೆಂಬ ಮಾತನ್ನು ಎಲ್ಲ ಕ್ಷೇತ್ರಗಳಲ್ಲೂ ಅನುಸರಿಸುವ ಗಾಂಧೀಜಿಯವರು, ಅದೇಕೊ ಹಿಂದೂ ಸಂಘಟನೆಯ ವಿಷಯದಲ್ಲಿ ಸಾಕಷ್ಟು ಹೆಚ್ಚಾಗಿ ಮನಸ್ಸು ಹಾಕಲಿಲ್ಲ. ಹರಿಜನೋದ್ಧಾರದ ಒಂದು ಮಾತು ಬಿಟ್ಟರೆ ಅವರು ಬೇರೆ ಯಾವ ಕಾರ್ಯಕ್ರಮವನ್ನೂ ಹಿಂದೂ ಸಂಘಟನೆಯ ವಿಷಯದಲ್ಲಿ ಜನತೆಯ ಮುಂದಿಡಲಿಲ್ಲ. ಬಹುತರವಾಗಿ, ಆಡದೆ ಮಾಡುವುದು ಉತ್ತಮವೆಂದು ಬಗೆದಿದ್ದರೇನೊ. ಏಕೆಂದರೆ ಆಶ್ರಮದಲ್ಲಿ ಅನುಷ್ಠಾನದಲ್ಲಿದ್ದ ಸಂಗತಿಗಳನ್ನು ಇನ್ನುಳಿದ ಜನಕ್ಕೂ ಮಾಡಲು ಸ್ಪಷ್ಟವಾಗಿ ನಿರ್ದೇಶಿಸಲಿಲ್ಲ. ಆದರೆ, ವೈಯಕ್ತಿಕ ಪ್ರಭಾವದಿಂದ ಎಷ್ಟಾಯಿತೋ ಅಷ್ಟೆ. ಇದಕ್ಕೆ ಇನ್ನೂ ಒಂದು ಕಾರಣವಿರುವ ಸಂಭವವಿದೆ. ಜನ್ಮದಿಂದ ವರ್ಣವೆಂಬುದು ಗಾಂಧೀಜಿಯವರ ಆರಂಭದ ನಂಬುಗೆಯಾಗಿತ್ತು. ಆದರಿಂದ ಜಾತಿಭೇದ ನಿರ್ಮೂಲನದ ಮಾತು ಹಲವು ಕಾಲದ ವರೆಗೆ ಅವರ ಕಾರ್ಯಕ್ಷೇತ್ರದಲ್ಲಿ ಒಳಪಟ್ಟಿರಲಿಕ್ಕಿಲ್ಲ.

ಸಮಾಜಶಾಸ್ತ್ರ ಅಥವಾ ರಾಜಕಾರಣಾದಿ ಬೇರೆ ಶಾಸ್ತ್ರಗಳನ್ನು ಆಳವಾಗಿ ಅಭ್ಯಾಸಮಾಡಿ ಬಳಿಕ ಅವರು ಕಾರ್ಯರಂಗಕ್ಕಿಳಿದವರಲ್ಲ. ಅವರು ಯಾವಾಗಲೂ ತಾನು ಒಬ್ಬ ಹಳ್ಳಿಗನೆಂದುಕೊಳ್ಳುತ್ತಿದ್ದುದರಲ್ಲಿ ಅವರ ಪ್ರಾಮಾಣಿಕತೆಯು ವ್ಯಕ್ತವಾಗುತ್ತದೆ. ಧರ್ಮಜಿಜ್ಞಾಸೆ, ಸತ್ಯದ ಸ್ವರೂಪವನ್ನು ಅರಿತುಕೊಳ್ಳಬೇಕೆಂಬ ಹಂಬಲವು ಅವರ ಜೀವನದ ಮುಖ್ಯವಾದ ಪ್ರಚೋದಕ ಶಕ್ತಿಯಾಗಿತ್ತು. ತ್ರಿಕರಣಪೂರ್ವಕವಾಗಿ ಪ್ರಾಮಾಣಿಕನಾಗಿದ್ದು, ಶುದ್ಧಭಾವದಿಂದ ಯಾವ ವಿಷಯದಲ್ಲಿ ಮನಸ್ಸು ಹಾಕಿದರೂ ಆ ವಿಷಯದಲ್ಲಿ ಆತನು ಸಾಮಾನ್ಯರಿಗೆ ಅಸಾಮಾನ್ಯವೆನಿಸುವಷ್ಟು ಅದ್ಭುತವಾದ ವಿಕಾಸವನ್ನು ಮಾಡಿಕೊಳ್ಳಬಲ್ಲನು. ಆ ವ್ಯಕ್ತಿಯ ಜೀವನದ ಯೋಗ್ಯತೆಯಂತೆ ಫಲವು ಇನ್ನೂ ವಿಶೇಷವಾಗುವುದು. ಒಂದೊಂದು ಶಾಸ್ತ್ರದೊಳಗಿನ ಪುಸ್ತಕ ಪಂಡಿತರು ಏನೇ ಕುಂದುಕೊರತೆಗಳನ್ನು ಎಣಿಸಿದರೂ, ಸತ್ಯದರ್ಶನದ ಪ್ರಯೋಗಗಳನ್ನು ನಡೆಸಿ ಮಹಾತ್ಮಾಜೀಯವರು ತಮ್ಮ ತಪಸ್ಸಿನಿಂದ, ಲೋಕವನ್ನು ಈ ಬಗೆಯಾಗಿ ಬೆರಗುಗೊಳಿಸಿದ್ದಾರೆ. ಏಕೆಂದರೆ, ಬರಿಯ ಓದಿನಿಂದ ಬಂದುದಕ್ಕಿಂತಲೂ ಸ್ವಾನುಭವದಿಂದ ಸಂಪಾದಿಸಿದ ಜ್ಞಾನಶಕ್ತಿಯ ಮಹಿಮೆಯ ಅಂತಹದು.

ಮಹಾತ್ಮಾಜೀಯವರ ಕಾರ್ಯವಿಸ್ತಾರವು ಹೆಚ್ಚಾದಂತೆ ಅವರಿಗೆ ಒಂದೊಂದು ಶಾಸ್ತ್ರದ ವಿಶೇಷಜ್ಞರ ಅಭ್ಯಾಸದ ಲಾಭವನ್ನು ಪಡೆಯುವುದೂ ಅವಶ್ಯವೆನಿಸಿರಬೇಕು. ಅವರ ನೆರವಿಗಾಗಿ ಹಲವು ವಿದ್ವಾಂಸರೂ, ಜ್ಞಾನಿಗಳೂ ಮುಂದೆ ಬಂದರು. ಸಮಾಜಶಾಸ್ತ್ರ, ರಾಜಕಾರಣಗಳಲ್ಲಿ ಇವರು ಈ ಬಗೆಯಾಗಿ ಮೊದಲಿನಿಂದಲೇ ಸಾಗಿದ್ದರೆ, ಅನಿವಾರ್ಯವಾಗಿ ಇವರಿಂದಾದ ಹಲಕೆಲವು ತಪ್ಪತಡೆಗಳು ಆಗದೆ ಇರಬಹುದಾಗಿತ್ತು. ದೇಶದ ಇನ್ನೂ ಹೆಚ್ಚಿನ ಪ್ರಗತಿಯಾಗುತ್ತಿತ್ತು.

ಭಾರತೀಯ ಸಮಾಜಶಾಸ್ತ್ರದಲ್ಲಿ ಬಲ್ಲಿದರಾದ ಡಾ. ಬಾಬು ಭಗವಾನದಾಸರು, ಜನ್ಮದಿಂದ ವರ್ಣಗಳಲ್ಲ; ಗುಣ-ಕರ್ಮದಿಂದಲೇ ನಿಜವಾದ ವರ್ಣಗಳೆಂದು ಪ್ರತಿಪಾದಿಸುತ್ತಿದ್ದುದು ಮಹಾತ್ಮಾಜೀಯವರಿಗೆ ಆರಂಭದಲ್ಲಿ ಮಾನ್ಯವಿದ್ದಿಲ್ಲ. ಬಳಿಕ ಸ್ವಾನುಭವದಿಂದ ಅವರು ಈ ತತ್ವಕ್ಕೇ ಬಂದರು. ಆದರೆ, ದೇಶದಲ್ಲಿ ಅದರ ಸಿದ್ಧಿಗೆ ತಮ್ಮ ಶಕ್ತಿಯನ್ನೆಲ್ಲ ಕೇಂದ್ರೀಕರಿಸಲಿಲ್ಲ. ಹಿಂದೂ-ಮುಸಲ್ಮಾನರ ಸಮಸ್ಯೆಗೆ ಕೈಯಿಕ್ಕಿದರು. ಈ ಕಾರಣದಿಂದ ಹಿಂದೂ ಎಂಬ ಸಮಾಜವೇ ಇನ್ನೂ ಅಸ್ತಿತ್ವದಲ್ಲಿ ಇಲ್ಲದಿರುವಾಗ ಕೇವಲ ಹಿಂದೂ-ಮುಸಲ್ಮಾನರ ತೊಡಕಿಗೆ ತಮ್ಮ ವಿಚಾರಗಳನ್ನೆಲ್ಲ ಮೀಸಲಿಟ್ಟುದು ಅಚಾತುರ್ಯವಾಯಿತು. ಜಾತಿಯ ಗೋಡೆಗಳನ್ನು ಕೆಡಹದೆ ಒಂದೊಂದು ಗೂಡು, ಗವಿಗಳಲ್ಲಿ ಸೇರಿಕೊಂಡಿರುವ ಈ ಜನ ಒಂದುಗೂಡುವುದೆ ಅಸಾಧ್ಯ. ನವಕಾಲಿ ಮೊದಲಾದ ಕಡೆಯಿಂದ ಮುಸಲ್ಮಾನರ ಕೈಯಿಂದ ಪಾರಾಗಿ ಬಂದವರೊಡನೆ ಅವರು ಬಹಿಷ್ಕೃತರು, ಪತಿತರೆಂಬಂತೆ ವರ್ತಿಸಬೇಡಿರೆಂದು ಪ್ರಾರ್ಥಿಸಬೇಕಾಗುತ್ತದೆ, ನಮ್ಮ ಜನಕ್ಕೆ! ಏಕೆ? ಜಾತಿಯ ಪಾವಿತ್ರ್ಯದ ಬಿಂಕದಲ್ಲಿ ನಮ್ಮವರನ್ನೇ ನಾವು ಮುಸಲ್ಮಾನ ಗುಂಪಿನಲ್ಲಿ ಹೋಗಿ ಆಶ್ರಯ ಪಡೆಯಲು ಈ ಕೃತಿಗಳಿಂದ ಒತ್ತಾಯಪಡಿಸಿದ್ದೇವೆ!

ಭಾರತದ ಏಳ್ಗೆಗೆ, ಮಾನವ ಕುಟುಂಬದ ಉದ್ಧಾರಕ್ಕೆ ಜಾತ್ಯತೀತ ಸಮಾಜವೇ ಅವಶ್ಯ ಎಂಬ ಮನವರಿಕೆಯಾಗಿ ಇದೀಗ ಮಹಾತ್ಮಾಜೀಯವರು ಅದರ ಕಾರ್ಯಾರಂಭವನ್ನು ಮಾಡಿದ್ದರು. ಆಶ್ರಮದ ಸಾಕ್ಷಾತ್ ಶಿಷ್ಯರೆಲ್ಲ ಸೇರಿ 'ಸರ್ವೋದಯ-ಸಮಾಜ'ವೆಂಬ ಹೆಸರಿನಲ್ಲಿ ಆ ಕಾರ್ಯವನ್ನು ಮುಂದುವರಿಸಲಿದ್ದಾರೆ. ಗಾಂಧೀಜಿಯವರು ಆತ್ಮಾಹುತಿಯನ್ನರ್ಪಿಸಿ ಲೋಕದ ಏಳ್ಗೆಗೆ ಜಾತ್ಯತೀತಭಾವದ ಆವಶ್ಯಕತೆಯನ್ನು ಎಲ್ಲರ ನಿದರ್ಶನಕ್ಕೆ ತಂದಿರುವರು. ಜಾತ್ಯಂಧತೆಯನ್ನು ಹೋಗಲಾಡಿಸಲೇಬೇಕೆಂದು ಈಗ ವ್ಯಾಸಪೀಠದಿಂದ ಪ್ರತಿಪಾದಿಸದವರೇ ವಿರಳ. ಈ ದೃಷ್ಟಿಯಿಂದ 'ಸರ್ವೋದಯ-ಸಮಾಜ'ದ ವಿಚಾರ ಪ್ರಚಾರಕ್ಕಿದು ಅತ್ಯುತ್ತಮ ಕಾಲವೆಂದು ತೋರದಿರದು. ಆದರೆ, ಇದೂ ಒಂದು ಹೊಸ ಜಾತಿಯಾಗದಿರಲಿ. ಆದರೂ ಈ ವಿಚಾರವು ಆಚಾರದಲ್ಲಿ ಬರಲು ಹಲವು ತೊಂದರೆಗಳಿವೆ. ಎಲ್ಲ ವರ್ಗದವರಿಗೂ ಅಧಿಕಾರವಾಣಿಯಿಂದ ಬುದ್ಧಿಯನ್ನು ಹೇಳುವ ಗುರುತ್ವದ ಸ್ಥಾನವು ತಪಃಪ್ರಭಾವದಿಂದ ಗಾಂಧಿಜೀಯವರಿಗೇ ಲಭಿಸಿತ್ತು. ಇಂದು ಆ ತೂಕದ ವ್ಯಕ್ತಿ, ಆ ತೂಕದ ವಿಚಾರ, ಆ ವಿಚಾರವನ್ನು ಲೋಕದ ಆಚಾರದಲ್ಲಿ ತಂದು ತೋರುವ ಪ್ರಭಾವವುಳ್ಳವರು ಅವರ

ಹಿಂದೆ ಯಾರೂ ಇಲ್ಲ. ಪ್ರತಿಯೊಂದು ವರ್ಗದವರಲ್ಲಿ ಜಾತೀಯತೆಯ ಮೂಲಕ ದೊರೆತ ಸವಲತ್ತು, ಹಕ್ಕು, ಬಾಧ್ಯತೆಗಳ ಸುಖವನ್ನು ಉಣ್ಣುತ್ತಿರುವವರು ಹಲಕೆಲವರು ಉಂಟೇ ಉಂಟು. ಜಾತ್ಯತೀತ ಸಮಾಜ ರಚನೆಯಾಗುವುದೆಂದರೆ ಅವರ ಈ ವಿಶೇಷ ಸುಖಸಾಧನೆಗೆ ಕೊಡಲಿಯ ಏಟು. ನರಿಯು ತಾನು ಸಾಯುವಾಗ ಲೋಕವೇ ಮುಳುಗುತ್ತಿದೆಯೆಂದು ಕೂಗಿಕೊಂಡಂತೆ ಈ ಜನ ತಮ್ಮ ತಮ್ಮ ಜಾತಿಯ ಹೆಸರಿನಲ್ಲಿ ತಮ್ಮವರಿಗೆಲ್ಲ ಅನರ್ಥವೊದಗುವುದೆಂದು ಗಲಾಟೆಯನ್ನೆಬ್ಬಿಸುವುದು ಸಹಜ.

ಆದರೆ, ಒಟ್ಟಿನಲ್ಲಿ ಲೋಕದ ಹಿತವಾಗಿ ತಮ್ಮ ರಾಷ್ಟ್ರೋನ್ನತಿಗೆ ಅದರಿಂದ ಸಹಾಯವಾಗುತ್ತಿದ್ದರೆ, ಜಾತೀಯತೆಯಿಂದ ತಮಗೆ ದೊರೆಯುತ್ತಲಿದ್ದ ವಿಶೇಷ ಸವಲತ್ತುಗಳನ್ನು ಬಿಟ್ಟುಕೊಡಬೇಕಂಬ ಮಾತನ್ನು ಜನದ ಮನಸಿನ ಮೇಲೆ ಬಿಂಬಿಸಲು ಮಹಾತ್ಮಾಜೀಯವರ ಆವಶ್ಯಕತೆಯಿದ್ದಿತು. ಜಪಾನಿನ ಸಮಾಜದಲ್ಲಿ ಶ್ರೇಷ್ಠರೆನಿಸಿಕೊಂಡ ರಾಜರು, ಸರದಾರರು, ಮೇಲಣ ಜಾತಿಕುಲದವರು ಮೊದಲಾದವರೆಲ್ಲ ತಮ್ಮ ರಾಷ್ಟ್ರದ ಒಕ್ಕಟ್ಟಿಗಾಗಿ, ಅದರ ಏಳ್ಗೆಗಾಗಿ ತಮ್ಮ ತಮ್ಮ ಮನೆತನಗಳಿಗೆ ನಡೆದುಕೊಂಡು ಬಂದ ವಿಶೇಷ ಹಕ್ಕುಗಳನ್ನು, ಅಂದು ತಾವಾಗಿಯೆ ತ್ಯಜಿಸಲಿಲ್ಲವೆ? ಅದರ ಫಲವಾಗಿಯೇ ಜಪಾನವು ಸ್ವತಂತ್ರದೇಶವೆಂದು ನಿನ್ನೆ ಮೊನ್ನೆಯ ವರೆಗೆ ಮೇಲ್ಮೆಯಿಂದ ಮೆರೆದಿತು, (ಚೀನದಂತಹ ಸ್ವಬಾಂಧವರ ದೇಶವನ್ನು ಸುಲಿವ ದುರ್ಬುದ್ಧಿಯುಂಟಾಗದೆ ಇದ್ದರೆ ಅದರ ಅಧಃಪಾತವಾಗುತ್ತಿದ್ದಿಲ್ಲ.) ಜಪಾನದ ಏಳ್ಗೆಗೆ ಕಾರಣವಾದ ಆ ಜನಗಳ ಅಂದಿನ ಆ ತ್ಯಾಗಬುದ್ಧಿಯು, ನಮ್ಮ ದೇಶದಲ್ಲಿ ವಿಶಿಷ್ಟ ಹಕ್ಕುಬಾಧ್ಯತೆಗಳನ್ನು ಅನುಭವಿಸುವ ಈ ಜನಗಳಲ್ಲೂ ಬೇಗನೆ ತಲೆದೋರ ಬಹುದೆ? ಜಾತೀಯ ದೃಷ್ಟಿಯಳಿದು ರಾಷ್ಟ್ರೀಯ ದೃಷ್ಟಿಯು ನೆಲೆಗೊಳ್ಳಬಹುದೆ?

ಜ್ಞಾನ ಅಥವಾ ಹಿರಿಮೆ ಜನ್ಮವನ್ನು ಅವಲಂಬಿಸಿದೆಯೆ?

ವಕೀಲನ ಮಗನು ವಕೀಲವೃತ್ತಿಯನ್ನೇ ಕೈಕೊಳ್ಳುವುದನ್ನು ನಿಶ್ಚಯಿಸಿದರೆ ಆತನಿಗೆ ತಂದೆಯ ಅನುಭವದ ಲಾಭವು ದೊರೆಯಬಲ್ಲದು. ತಂದೆಯ ಗ್ರಂಥಸಂಗ್ರಹ, ತಂದೆಯ ಕಕ್ಷಿಗಳು, ತಂದೆಯ ಕೀರ್ತಿ ಇವೆಲ್ಲವುಗಳ ಬೆಂಬಲವನ್ನೂ ಮಗನು ಪಡೆಯಬಲ್ಲನು. ತಂದೆಯ ವಕೀಲಿ ವ್ಯವಸಾಯದೊಳಗಿನ ಗುಟ್ಟಿನ ಮಾತುಕತೆಗಳು, ಅನೇಕ ಕಾನೂನಿನ ಸೂಕ್ಷ್ಮ ಸಂದಿಗ್ಧ ತೊಡಕುಗಳ ವಾದವಿವಾದ, ಚರ್ಚೆ ಮೊದಲಾದವುಗಳು ಚಿಕ್ಕಂದಿನಿಂದಲೇ ಕಿವಿಗೆ ಬಿದ್ದು ಅದರ ಲಾಭವು ಮುಂದೆ ಮಗನ ಉದ್ಯಮದಲ್ಲಿ ದೊರೆಯುತ್ತದೆ. ಮಕ್ಕಳು ತಂದೆಯ ವೃತ್ತಿಯನ್ನೇ ಅನುಕರಿಸುವದರಿಂದ ಒಂದು ತಲೆಮಾರಿನವರ ಅನುಭವ ಕೌಶಲ್ಯಗಳ ಲಾಭವು ಮುಂದಿನ ವರೆಗೆ ದೊರೆಯುತ್ತ ಆ ವಿಷಯದ ಜ್ಞಾನವು ಬೆಳವಣಿಗೆಯನ್ನು ಹೊಂದುವುದು. ದೇಶದ ಕಲಾಕೌಶಲ್ಯ, ಉದ್ಯೋಗಾಭಿವೃದ್ಧಿಗಳಿಗೆ ಕಾರಣವಾಗುವುದು.

ಕಮ್ಮಾರನ ಮಗ ಕಮ್ಮಾರ, ಬಡಿಗನ ಮಗನು ಬಡಿಗ, ವೈದ್ಯನ ಮಗನು ವೈದ್ಯನಾಗುವಲ್ಲಿ ಈ ಬಗೆಯ ಲಾಭವಿದೆ, ಜಾತಿಗಳು ಜನ್ಮದಿಂದ ದೃಢವಾಗುವದಕ್ಕೆ ಇದೇ ಮುಖ್ಯವಾದ ಕಾರಣವಾಗಿದೆ. ಡಾಕ್ಟರನ ಮಗನು ವಕೀಲನಾಗುವುದನ್ನು ನಿಶ್ಚಯಿಸಿದರೆ ತಂದೆಯ ಪರಂಪರೆಯ ಯಾವ ಬಗೆಯ ಲಾಭವೂ ಆತನಿಗೆ ದೊರೆಯಲಾರದು. ಓನಾಮಾಸಿಯಿಂದ ಎಲ್ಲವನ್ನೂ ಆತನೇ ಆರಂಭಿಸಬೇಕಾಗುವುದು. ತಂದೆಯ ಮನಸ್ಸಿನ ಒಲವುಗಳೇ ಮಕ್ಕಳಲ್ಲಿಯೂ ಬರುವುದು ನಿಶ್ಚಿತವಿದ್ದರೆ, ತಂದೆಯ ವೃತ್ತಿಯನ್ನೇ ಮಗನೂ ಅನುಸರಿಸಬೇಕೆಂಬ ನಿರ್ಬಂಧ ಅಥವಾ ರೂಢಿಯನ್ನು ನಡೆಸಿಕೊಂಡು ಹೋಗಲು ಅಡ್ಡಿಯಿದ್ದಿಲ್ಲ. ತಂದೆಯು ಚಿತ್ರಕಾರನಿದ್ದರೆ ಮಗನೂ ಚಿತ್ರಗಾರಿಕೆಯಲ್ಲಿಯೇ ಒಲವು ಇದ್ದವನು ಆಗುವನೆಂದು ಯಾರು ಹೇಳಬೇಕು? ತಂದೆ ಶಾಸ್ತ್ರಜ್ಞ; ಮಗನು ಸಂಗೀತದ ಪ್ರವೃತ್ತಿಯವನು. ತನ್ನಂತೆ ಮಗನೂ ಶಾಸ್ತ್ರವಿಶಾರದನಾಗಲೆಂದು ತಂದೆಯು ಒತ್ತಾಯಪಡಿಸಲು ಮಗನು ಮನೆಯಿಂದ ಓಡಿಹೋಗಿ ಸಂಗೀತದ ಬೆನ್ನು ಹತ್ತಿದ ಉದಾಹರಣಗಳುಂಟು. ಆತನು ಮುಂದೆ ಗಾಯನಕಲೆಯಲ್ಲಿ ಖ್ಯಾತಿಪಡೆದಾಗ, ತಾನು ಮೊದಲಿನಿಂದಲೇ ಆತನ ಒಲವಿನಂತೆ ಸಂಗೀತವನ್ನೇ ಕಲಿಸಿದ್ದರೆ, ಇನ್ನೂ ಎಷ್ಟು ಮೇಲ್ಮೆಯನ್ನು ಹೊಂದುತ್ತಿದ್ದನೋ; ಎಂದು ಮನಸಿನಲ್ಲಿಯೆ ವಿಷಾದಪಟ್ಟುದುಂಟು. ತಂದೆಯಂತೆಯೆ ಮಗನ ಒಲವೂ ಇದ್ದುದಾದರೆ ಅಂತಹ ಎಡೆಗಳಲ್ಲಿ ಪರಂಪರಾಗತ ಉದ್ಯೋಗಗಳನ್ನೆ ಮುಂದುವರಿಸುವುದಕ್ಕೆ ಅಡ್ಡಿಯಿಲ್ಲ. ಇಷ್ಟೇ ಅಲ್ಲ. ಅದರಲ್ಲಿಯೆ ವಿಶೇಷ ಲಾಭವಿದೆ; ಹಿತವಿದೆ. ಆದರೆ, ಎಲ್ಲಿ ತಂದೆ ಮಕ್ಕಳ ವೃತ್ತಿ, ಪ್ರವೃತ್ತಿಗಳಲ್ಲಿ ವ್ಯತ್ಯಾಸವು

ಕಂಡುಬರುತ್ತದೊ ಅಲ್ಲಿ ಪರಂಪರಾಗತವಾದ ಉದ್ಯೋಗಗಳನ್ನೇ ಸಾಗಿಸಿಕೊಂಡು ಹೋಗಬೇಕೆಂಬ ಒತ್ತಾಯವು ಇಷ್ಟವಲ್ಲ. ಅನಿಷ್ಟಕ್ಕೆ ಕಾರಣ.

ಒಲವು ಬದಲಾಗಲು ಎರಡು ಮುಖ್ಯ ಕಾರಣಗಳಿವೆ: ಆಂತರಿಕ ಕಾರಣವು ಒಂದು. ಆನುವಂಶಿಕ ಸಂಸ್ಕಾರವೆಂದೊಡನೆ ತಂದೆಯೊಬ್ಬನೆ ಅದರಲ್ಲಿ ಒಳಗೊಳ್ಳುವುದಿಲ್ಲ. ಆದುದರಿಂದ, ತಂದೆಯ ಒಲವೇ ಮಕ್ಕಳಲ್ಲೂ ಕಾಣಿಸಿಕೊಳ್ಳುವುದೆಂಬ ಗ್ರಹಿಕೆಯು ಹಲವೆಡೆಗೆ ತಪ್ಪೆಂದು ಅನುಭವಕ್ಕೆ ಬರುತ್ತದೆ. ತಂದೆಯ ಮತ್ತು ತಾಯಿಯ ಕಡೆಯ ಪರಿಣಾಮಗಳನ್ನು ಲೆಕ್ಕಕ್ಕೆ ಹಿಡಿಯಬೇಕಾಗುವುದು. ತಂದೆ ಗಣಿತಜ್ಞ; ತಾಯಿ ಕಲಾಕುಸುರಿಯಲ್ಲಿ ನಿಪುಣಳಾಗಿದ್ದ ಮನೆಯಲ್ಲಿ ಮಗನು ಎಷ್ಟೋ ಸಾರೆ ತಂದೆಗಿಂತ ತಾಯಿಯ ಕಡೆಗೇ ಹೆಚ್ಚು ಒಲಿದುದು ಕಂಡುಬರುವುದು. ಆದುದರಿಂದ, ತಂದೆಯಂತೆ ಮಗನೆಂಬುದು ತೀರ ಸ್ಥೂಲವಾದ ಹೇಳಿಕೆ. ಸೂಕ್ಷ್ಮ ಅಭ್ಯಾಸದಿಂದ ಕಂಡುಹಿಡಿದ ಶಾಸ್ತ್ರೀಯ ವಿಧಾನವಲ್ಲ. ಮಕ್ಕಳ ಒಲವು ತಂದೆಗಿಂತ ಬೇರೆಯಾಗಲು ಬಾಹ್ಯಪರಿಸ್ಥಿತಿಯೂ ಹಲವು ಬಾರಿ ವಿಶೇಷ ಕಾರಣವಾಗಿರುತ್ತದೆ. ವೈದಿಕ ವಿದ್ಯೆಯಲ್ಲಿ ಪ್ರಭುತ್ವ ಪಡೆದರೆ ಸಮಾಜದಲ್ಲಿ ವಿಶೇಷ ಪ್ರತಿಷ್ಠೆಯು ಒಂದು ಕಾಲಕ್ಕೆ ದೊರೆಯುತ್ತಿತ್ತು. ಆದರೆ, ಇಂಗ್ರೇಜಿಗೆ ಆ ಮಾನ-ಸನ್ಮಾನಗಳು ದೊರೆಯುವುವೆಂದು ಕಣ್ಣಾರೆ ಕಾಣುವಾಗ ಸಂಸ್ಕೃತದ ಅಧ್ಯಯನಕ್ಕೆ ಯಾವ ತರುಣನ ಮನಸು ಒಲಿದೀತು? ಈ ಕಾರಣಗಳಿಂದ ತಂದೆಯ ವೃತ್ತಿಯನ್ನೆ ಮಕ್ಕಳೂ ನಡೆಸಿಕೊಂಡು ಹೋಗಬೇಕೆಂಬ ನಿರ್ಬಂಧವು ನಿರುಪಯುಕ್ತವಾಗುತ್ತದೆ.

ಪರಂಪರಾಗತವಾದ ವೃತ್ತಿಗಳನ್ನು ತಲೆತಲಾಂತರಗಳಿಂದ ಹಾಗೆಯೆ ಸಾಗಿಸಿಕೊಂಡು ಹೋಗುವುದು ಲೇಸು-ಹೋಗಲೇಬೇಕೆಂಬ ಹಟವಾದದಲ್ಲಿ ಕೆಲವು ಬಾರಿ ಒಂದಿಷ್ಟು ಒಳಗಿನ ಸ್ವಾರ್ಥವೂ ಇದಕ್ಕೆ ಕಾರಣವಿರುತ್ತದೆ. ಸಮಾಜದಲ್ಲಿ ಯಾವ ಉದ್ಯಮಗಳಿಗೆ ಬೆಲೆಯಿದೆ, ಮಹತ್ವವಿದೆ, ಮನ್ನಣೆಯಿದೆಯೊ ಅಂತಹವುಗಳನ್ನು ಕೈಕೊಂಡವರೆ ಈ ಬಗೆಯ ಪ್ರತಿಪಾದನೆಯಲ್ಲಿ ವಿಶೇಷ ಆವೇಶವನ್ನು ತೋರುತ್ತಾರೆ. ಹಟವಾದಿಗಳಾಗುತ್ತಾರೆ. ಬೇರೆಯವರು ತಮ್ಮ ಉದ್ಯೋಗದಲ್ಲಿ ಸೇರಿ ಸ್ಪರ್ಧಿಸಬಾರದೆಂಬ ಒತ್ತಾಸೆಯು ಅವರಿಂದ ಈ ಬಗೆಯಾಗಿ ನುಡಿಸುತ್ತದೆ. ಏನೊ ಕಾರಣಾಂತರಗಳಿಂದ, ವಿಶಿಷ್ಟ ಕಾಲಪರಿಸ್ಥಿತಿಯ ಮೂಲಕ ತಮ್ಮ ತೊಂದರೆಗಳನ್ನು ನೀಗುವುದಕ್ಕಾಗಿ ಕಿರುಕುಳ ಕೆಲಸಗಳನ್ನು ಕೈಕೊಳ್ಳಬೇಕಾದವರು, ಹಾಗಾದರೆ, ಎಂದೂ ತಲೆಯೆತ್ತಲಾಗದೆ? ಸಾಮಾಜಿಕ ಹಿರಿಮೆಯ ಕಾರ್ಯಕಲಾಪಗಳನ್ನು ತಮ್ಮ ವೃತ್ತಿಯಾಗಿ ಆರಿಸಿಕೊಳ್ಳಲು ಇವರ ವಂಶಾನುವಂಶವೆಲ್ಲವೂ ಅಯೋಗ್ಯವೆಂದು ಕಟ್ಟಳೆಯಾಗುವುದು ಯೋಗ್ಯವೆ? ಸಮಾಜದಲ್ಲಿ ಅಸಂತೋಷದ ಕಿಡಿಯು ಏಳುವುದು ಇಲ್ಲಿಯೇ. ಇದುವೆ ಮೆಲ್ಲನೆ ಕೆಳಗಣಿಂದ ಹೊತ್ತುತ್ತ ಹೊತ್ತುತ್ತ ಮೇಲಂತಸ್ತುಗಳನ್ನು ಸುಟ್ಟು ಹಾಕುವುದು. ದೇಶದೇಶಗಳ ಇತಿಹಾಸದಲ್ಲಿ ಮನಗಂಡ ಮಾತಿದು. ಇಂತಹ ಸಾಮಾಜಿಕ ವಿಪ್ಲವಗಳ ಅನುಭವಗಳಿಂದ ಇನ್ನು ಮೇಲಾದರೂ ಎಚ್ಚತ್ತು ನಮ್ಮ ನಡೆವಳಿಯನ್ನು ತಿದ್ದಿಕೊಳ್ಳುವುದು ಕ್ಷೇಮಕರವಲ್ಲವೆ?

ಕೆಳಗಣ ಮಟ್ಟದಲ್ಲಿ ಇದ್ದವರು ಮೇಲೆ ಬರುವಾಗ ಅವರಲ್ಲಿದ್ದ ವಿಚಾರ ಸರಣಿಯು, ಆ ಸ್ಥಾನವನ್ನು ಆಕ್ರಮಿಸಿಕೊಂಡೊಡನೆ ಕೆಲಕಾಲದಲ್ಲಿಯೆ ಬದಲಾಗುತ್ತದೆ. ಕೆಳಮಟ್ಟದಿಂದ ತಾವು ಮೇಲೆ ಬರಬೇಕೆಂದು ಹಂಬಲಿಸುತ್ತಾರೆ. ಆ ಭರದಲ್ಲಿ ತಮ್ಮ ಮೇಲಣವರನ್ನು ಕೆಳಕ್ಕೆ ಎಳೆಯಬೇಕೆಂದೂ ಅನ್ಯಾಯದಿಂದ ಪ್ರಯತ್ನಿಸುವರು. ತಮ್ಮ ಕೆಳಮಟ್ಟದಲ್ಲಿದ್ದವರನ್ನು ಅದೇ ಕಾಲಕ್ಕೆ ಕಡೆಗಣಿಸುವರು! ಕೀಳ್ಗಳೆಯುವರು! ಇದು ನಿಂದ್ಯ. ತಾವು ಪಡೆದುಕೊಂಡ ಸ್ಥಾನಮಾನಗಳು ಸೂರ್ಯ-ಚಂದ್ರರಿರುವವರೆಗೂ ತನ್ನ ಮನೆತನಕ್ಕೇ ಉಳಿಯಬೇಕು; ತನ್ನ ಜಾತಿಗೇ ಸಲ್ಲಬೇಕು, ಎಂಬ ಆಸೆಯು ಚಿಗುರುತ್ತದೆ. ಆರಂಭದಲ್ಲಿ ತಾನು ಒಬ್ಬ ಪ್ರಜಾಪ್ರತಿನಿಧಿ ಅವರ ಸೇವಕನೆಂದು ಕೊಳ್ಳುತ್ತಲಿದ್ದ ನೆಪೋಲಿಯನ್‌ನು ಸೌರ್ವಭೌಮನಾಗಬಯಸಿದನು. ಕ್ರಾಮವೆಲ್ಲನು ತನ್ನ ಹಿಂದೆ ತನ್ನ ಮಗನು ರಾಜ್ಯರಕ್ಷಕನಾಗತಕ್ಕುದೆಂದು ಗೊತ್ತುಪಡಿಸಿದನು. ಇದು ಸಾಮಾನ್ಯವಾದ ಮನುಷ್ಯ ಸ್ವಭಾವ.

ಮೇಲಣ ಸ್ಥಾನ-ಮಾನಗಳನ್ನು ಪಡೆದು ಪದಸ್ಥಿಕೆಯಲ್ಲಿದ್ದವರು ತಮ್ಮ ಗದ್ದುಗೆಗೆ ಇನ್ನಾರ ಕಾಲು ಸೋಂಕಬಾರದೆಂದು ಕೆಲವು ಹಂಚಿಕೆಗಳನ್ನು ಮಾಡಿರುತ್ತಾರೆ. ತಮ್ಮದು ದೈವಾಯತ್ತವಾದ ಅಧಿಕಾರ (Divine

Right); ದೇವರಿಂದ ವರಪ್ರಸಾದಗಳನ್ನು ಹೊಂದಿ ಸಂಪಾದಿಸಿದ ಪಟ್ಟ, ಪದವಿ; ಪರಮೇಶ್ವರನ ಮುಖದಿಂದ ಹುಟ್ಟಿದ ಕುಲ; ಪರಮಾತ್ಮನು ಅವತಾರ ತಾಳಿದ ವಂಶ; ಬ್ರಹ್ಮನ ಮಾನಸ ಪುತ್ರನಿಂದಾದ ಸಂತತಿ; ತಾವು ಪರಶಿವನ ಜಡೆಯಿಂದ ಹುಟ್ಟಿದವರು; ಭೂಸುರರು, 'ಜಂಗಮೋ ಜಗದೀಶ್ವರಃ' ಎಂದರೆ ಭೂಲೋಕದ ಜಗದೀಶ್ವರರೇ ಆದ ಜಂಗಮರು, ಗುರುವರ್ಗದವರು; ಈ ತರದ ಶಬ್ದ ಸಮುಚ್ಚಯಗಳಲ್ಲಿ ಒಂದು ಬಗೆಯ ಜಾದೂ ಇದೆ. ಇವನ್ನು ಉಚ್ಚರಿಸಿದೊಡನೆ ಮುಗ್ಧಭಾವದ ಸಾಮಾನ್ಯ ಜನಗಳ ಮನಸ್ಸು ಹೆಚ್ಚಿನ ಯಾವ ವಿಚಾರ ಚರ್ಚೆಗೂ ಹೋಗದೆ ಆ ವಿಶಿಷ್ಟ ವಿಚಾರಸರಣಿಗೆ ತಲೆವಾಗುತ್ತದೆ; ಶರಣುಹೋಗುತ್ತದೆ. ಹಳೆಯ ಈ ಹಂಚಿಕೆಯನ್ನು ಆಧುನಿಕ ಪಕ್ಷಗಳು ತಮ್ಮ ಬಲಸಂವರ್ಧನೆಯಲ್ಲಿಯೂ ಬಹಳ ಬುದ್ಧಿವಂತಿಕೆಯಿಂದ ಉಪಯೋಗಿಸಿ ಕೊಳ್ಳುತ್ತಲಿದ್ದಾರೆ. ಒಂದೊಂದು ಪಕ್ಷದ ಜಯಜಯಕಾರಗಳು ಈ ಬಗೆಯ ಪರಿಣಾಮವನ್ನುಂಟುಮಾಡುವ ಇಂದಿನ ಅಮೋಘ ಸಾಧನವೆನಿಸಿದೆ. ಜಯಜಯಕಾರಗಳೊಡನೆ ಆಯಾಪಕ್ಷದ ಅಧ್ವರ್ಯುವಿನ ಪವಾಡಗಳು, ಪಕ್ಷದ ಹಿರಿಮೆಯ ದಂತಕಥೆಗಳು ಇವೆಲ್ಲವು ಹಳೆಯ ರೀತಿಯ ಹೊಸ ಅವತಾರಗಳೇ.

ಇದರೊಡನೆ ದೈವೀಕೋಪದ ಭೀತಿ, ಪಾರಲೌಕಿಕ ಶಿಕ್ಷೆಯ ಹೆದರಿಕೆಗಳನ್ನು ಹೇಳಿ ಕೆಳಗಣ ಘಟ್ಟದಲ್ಲಿರುವ ಜನಸಾಮಾನ್ಯರು, ಮೇಲಣ ಪದಸ್ಥಿಕೆಯವರನ್ನು ಕಂಡು ಅಳುಪದೆ; ಕೆರಳದೆ, ತಮ್ಮ ಪಾಲಿಗೆ ಬಂದ ಗಂಜಿರೊಟ್ಟಿಯೆ ಪಂಚಾಮೃತವೆಂದು ಬಗೆದು ಸಂತುಷ್ಟರಾಗಿರುವರಂತೆ ಮಾಡಿದ ಜಾಣ್ಮೆ ಅಭೂತಪೂರ್ವವಾಗಿದೆ! ಇವೆಲ್ಲ ಹಂಚಿಕೆಗಳ ಹಿಂದೆ ಬಗೆದು ನೋಡಿದರೆ ಕೆಲವು ಮಟ್ಟಿಗೆ ಸೂಕ್ಷ್ಮವಾದ ಸ್ವಾರ್ಥವು ಅವಿತುಕೊಂಡಿರುವುದು ಕಾಣಬರದೆ ಇರದು. ತಮ್ಮ ವಿಶಿಷ್ಟ ಜನ, ವರ್ಗ ಅಥವಾ ಪಕ್ಷದ ಪ್ರಭುತ್ವಕ್ಕೆ, ಸುಖಸಂಪತ್ತಿಗೆ ಯಾರೂ ಅಸೂಯೆಪಡದೆ ಎಲ್ಲವೂ ಯಥಾಸ್ಥಿತವಾಗಿ ಮುಂದೆ ನಡಕೊಂಡು ಹೋಗುವುದಕ್ಕಾಗಿ ಮಾಡಿಕೊಂಡ ತಂತ್ರವಿದು. ಸಮಾಜದಲ್ಲಿ ಪ್ರತಿಯೊಂದು ವ್ಯಕ್ತಿಗೂ ತನ್ನ ವಿಕಾಸಮಾಡಿಕೊಳ್ಳಲು ಅವಕಾಶವಿರಬೇಕು. ಒಂದು ಸಮಾಜದಲ್ಲಿ ಮುಂದೆ ಹೋದವರು, ಇನ್ನು ಆ ತಮ್ಮ ಸ್ಥಾನದಲ್ಲಿ ಬೇರೆಯವರು ಯಾರೂ ಬರದಂತೆ ಬೇಲಿಗಳನ್ನು ಹಾಕುವುದು, ಗೋಡೆಗಳನ್ನು ಕಟ್ಟುವುದು ಸಮಾಜದ ಏಳ್ಗೆಗೆ ವಿಘಾತಕ. ಏಕೆಂದರೆ, ಒಮ್ಮೆ ಹಿರಿಮೆ ಅಥವಾ ಮೇಲ್ಮೆಯನ್ನು ಪಡೆದವರ ಪೀಳಿಗೆಯಲ್ಲಿ ಮುಂದೆ ಎಲ್ಲರೂ ಅಷ್ಟೇ ಯೋಗ್ಯತೆಯವರು ಹುಟ್ಟುವರೆಂಬ ಸಿದ್ಧಾಂತವಿಲ್ಲ. ವಿಖ್ಯಾತರು ಜನ್ಮಿಸಿದ ಕುಲದಲ್ಲಿ ಮುಂದೆ ಕೆಲವು ತಲೆಮಾರಿನ ವರೆಗೆ ತೀರ ಸಾಮಾನ್ಯರೇ ಹುಟ್ಟುವುದು ವಾಡಿಕೆ. ಮಹಾಪುರುಷರು ಹುಟ್ಟಿದ ವಂಶದ ಸಂತಾನವು ನಷ್ಟವಾಗುವುದೆಂಬ ಲೋಕಾನುಭವದ ಹೇಳಿತವು ಒಂದುಂಟು. ಇದು ತೀರ ಸುಳ್ಳಲ್ಲ. ವಿಶೇಷ ಸಂಸ್ಕೃತಿಯ ವೃಕ್ಷವೂ ಸೃಷ್ಟಿಯ ಈ ನಿಯಮವನ್ನೇ ಅನುಸರಿಸುತ್ತಿರುವಂತೆ ಕಾಣುತ್ತದೆ. ಸಮಾಜದಲ್ಲಿ ಒಮ್ಮೆ ಮೇಲ್ಮೆ ಹೊಂದಿದವರು ಮುಂದೆಯೂ ಅವರೇ ಆ ಸ್ಥಾನವನ್ನು ಆಕ್ರಮಿಸಿಕೊಂಡಿರುವುದು ಈ ಕಾರಣದಿಂದಲೂ ಅನಿಷ್ಟ. ದೇಶದ ಏಳ್ಗೆಗೆ ಆತಂಕ.

ತನಗೆ ಉಪಕಾರಮಾಡಿದವರ ವಿಷಯದಲ್ಲಿ ಕೃತಜ್ಞತೆಯಿಂದ ತಲೆಯು ಬಾಗುವುದು; ಹೃದಯವು ಉಕ್ಕೇರುವುದು; ಅವರನ್ನು ನೆನೆದು, ಕೊಂಡಾಡುವುದರಲ್ಲಿ ಜೀವಕ್ಕೆ ಸಮಾಧಾನ; ಅವರಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸುವಲ್ಲಿ ಸಂತೋಷ; ಅವರ ಸೇವೆಗೆಯ್ವ ಸಂಧಿ ದೊರಕಿದಲ್ಲಿ ಧನ್ಯತೆ. ಉಪಕಾರದ ಪ್ರಮಾಣದಲ್ಲಿ ಈ ಭಾವವು ಹೆಚ್ಚು ಅಥವಾ ಕಡಿಮೆ ಉತ್ಕಟವಾಗಿರುತ್ತದೆ. ಈ ಕೃತಜ್ಞತಾ ಭಾವದಲ್ಲಿಯೆ ಮನುಷ್ಯತ್ವವಿದೆ. ಇನ್ನೊಬ್ಬರ ಸಹಾಯಾರ್ಥವಾಗಿ ಅಥವಾ ಕಲ್ಯಾಣಾರ್ಥವಾಗಿ ದುಡಿದು ಕಷ್ಟನಷ್ಟಗಳನ್ನು ಅನುಭವಿಸುವ ಜೀವಕ್ಕೆ, ಆ ಸಹಾಯವನ್ನು ಹೊಂದಿದವರ ಕಣ್ಣಲ್ಲಿ, ಮುಖದಲ್ಲಿ ಮಿಂಚುವ ಕೃತಜ್ಞತಾಸೂಚಕ ಭಾವನೆಯೆ ಒಂದು ನಿಜವಾದ ಪ್ರತಿಫಲ. ಇದಕ್ಕೆ ಹೊರತಾದ ಧನರೂಪದ ಬೆಲೆಯು ಬರಿ ವ್ಯಾಪಾರ. ಅದರಲ್ಲಿ ಆನಂದವಿಲ್ಲ; ದೈವೀಭಾವವಿಲ್ಲ; ಅದು ದೈವೀಸಂಪತ್ತು ಅಲ್ಲ. ಅದಕ್ಕೆ ವಿಪರೀತ; ಆಸುರೀದಾರಿ. ಕೋಟ್ಯನುಕೋಟಿ ಜನಸ್ತೋಮದೊಳಗಿಂದ ಹೊರಹೊಮ್ಮುತ್ತಿದ್ದ ಈ ದಿವ್ಯಭಾವನೆ ಮಹಾತ್ಮಾಜೀಯವರಿಗೆ ಅವರ ನಿರಾಶೆಯ ಪ್ರಸಂಗಗಳಲ್ಲಿ ಉಗ್ರತಪಸ್ಸಿನಲ್ಲಿ ಶಾಂತಿಯನ್ನೀವ ಸಂಗತಿಯಾಗಿರಬೇಕು. ಪಂಡಿತ ಜವಾಹರಲಾಲ ನೆಹರು,

ಪ್ರತಿಕ್ಷಣಕ್ಕೂ ಸುತ್ತುಮುತ್ತುಲಿರುವ ಚಿಂತಾಜನಕ ಸಮಸ್ಯೆಗಳಿಗೆ ಬೆಂದು ಬೇಗುದಿಗೊಂಡರೂ ಮತ್ತೆ ಉತ್ಸಾಹದಿಂದ ಲೋಕಸೇವೆಗೆ ಅವರನ್ನು ಅಣಿಮಾಡುತ್ತಿರುವ ಮಹಾಶಕ್ತಿಯು ಇದು. ಬೇರೆ ಯಾವ ಧನಕನಕಾದಿಗಳ ಲೋಭವಲ್ಲ; ಕೀರ್ತಿಕಾಂಕ್ಷೆಯಲ್ಲ. ಇವೆಲ್ಲವನ್ನೂ ಅವರು ಎಂದೋ ಪಡೆದು ಅವುಗಳ ಹೇಸಿಕೆಯೂ ಕೂಡ ಬಂದಿದೆ.

ಜನಗಳು ತಮ್ಮ ಉಪಕಾರಕರ್ತೃವನ್ನು ಎಂದೂ ಮರೆಯುವುದಿಲ್ಲ. ಮರೆಯಲಾಗದು. ಕೃತಜ್ಞತೆಗೆ ಅವರು ಎಂದೂ ಹೆರರು ಆಗಕೂಡದು. ಕೃತಘ್ನರಾದವರಿಗೆ ಏಳ್ಗೆಯ ಆಸೆಯೆ ಇಲ್ಲ. ಕೃತಜ್ಞತೆಯ ಲವಲೇಶವಿಲ್ಲದವರು ಮಾನವರಲ್ಲ; ಸಾಕ್ಷಾತ್ ರಾಕ್ಷಸರೇ ಸರಿ. ನೆರವಾದವರನ್ನು ನೆನೆಯುವರಿಗೆ ಮತ್ತೆ ಹೊತ್ತುಬಂದಾಗ ನೆರವಾಗಲು ಯಾರು ತಾನೆ ಮುಂದುವರಿದಾರು? ಕೃತಜ್ಞತೆಯು ಸಮಾಜಧಾರಣೆಗೆ ಕಾರಣವಾಗಿರುವ ಒಂದು ಅತ್ಯಂತ ಮಹತ್ವದ ಗುಣವಾಗಿದೆ.

ಕೃತಜ್ಞತೆಯ ದುರುಪಯೋಗಮಾಡಿಕೊಳ್ಳಬಾರದೆಂಬ ಪ್ರಜ್ಞೆಯು ಉಪಕಾರಕರ್ತನದಾಗಿರಬೇಕು. ಕೃಜ್ಞತೆಯಿಂದ ಗುರುದಕ್ಷಿಣೆಯನ್ನು ಕೇಳಬಂದಾಗ ಬಲಗೈಯ್ಯ ಹೆಬ್ಬೆರಳನ್ನೇ ಕೇಳಿದರೆ? ಧನಕನಕಾದಿ (ಹೆಂಡತಿಯವರೆಗಿನ) ಸರ್ವಸ್ವವನ್ನೂ ತಂದು ಅರ್ಪಿಸಲು ಒತ್ತಾಯಪಡಿಸುವ ಗುರುಮಠಗಳು ಇದ್ದರೆ? ಜನ್ಮಕೊಟ್ಟ ಉಪಕಾರಕ್ಕಾಗಿ ಹಿರಣ್ಯಕಶಿಪುವಿನಂತೆ ವೈಯಕ್ತಿಕ ವಿಚಾರ ಸ್ವಾತಂತ್ರ್ಯದ ಬಲಿದಾನ ಕೇಳಿದರೆ? ದೇಶದೊಳಗಿನ ಅರಾಜಕತ್ವವನ್ನು ಇಲ್ಲದಂತೆ ಮಾಡಿದ್ದಕ್ಕಾಗಿ, ಪರಕೀಯರ ಗಂಡಾಂತರದಿಂದ ರಾಷ್ಟ್ರವನ್ನು ಉಳಿಸಿದ್ದಕ್ಕಾಗಿ ಕ್ರಾಮವೆಲ್ಲ ಅಥವಾ ನೆಪೋಲಿಯನರಂತೆ ತಮ್ಮ ಮಕ್ಕಳಿಗೆ, ತಮ್ಮ ವಂಶಕ್ಕೇ ರಾಜ್ಯವು ನಡೆಯಬೇಕೆಂದು ಹಾರಯಿಸಿದರೆ? ದೇಶಹಿತಕ್ಕಾಗಿಯೆಂದು ತಲೆಯೆತ್ತಿದ ಪಕ್ಷಪಂಗಡಗಳು ಎಂತೆಂತೊ ತಮ್ಮ ಪಕ್ಷದ ಸಾಮರ್ಥ್ಯವನ್ನು ಬೆಳಸಿ, ಕೇವಲ ತಮ್ಮ ಕೈಯಲ್ಲಿಯೆ ಅಧಿಕಾರಿಗಳು ಉಳಿಯುವದಕ್ಕಾಗಿ ಹವಣಿಕೆ ಹಂಚಿಕೆ ನಡೆಸಿದರೆ? ಇಂತಹರ ಉಪಕಾರಗಳನ್ನು ನೆನೆದು, ಅವರಿಗೆ ತಲೆವಾಗುವುದು, ಅವರನ್ನು ಅನುಸರಿಸುವುದು ನ್ಯಾಯವಾದೀತೆ? ಪ್ರತಿಫಲದ ಆಸೆಯಿಂದ ಸೇವೆಮಾಡುತ್ತಿರುವರು, ನೆರವುಕೊಡುತ್ತಿರುವರು, ಎಂಬ ಅನುಭವವು ಬಂದಂತೆ ಅಲ್ಲಿ ಕೃತಜ್ಞತೆಯ ಭಾವನೆಯು ಮುರುಟಿ, ಸುರುಟಿ, ಕಂದಿ, ಕಮರಿ ಹೋಗುತ್ತದೆ.

ಕೃತಜ್ಞತೆಯ ಭಾವನೆಯನ್ನು ನಮ್ಮ ಸಮಾಜಧಾರಣೆಗೆ, ಸಾಮಾಜಿಕ ಸುಖಶಾಂತಿಗೆ, ಹಿಂದಿನವರು ಬಹಳ ಸೊಗಸಾಗಿ ಉಪಯೋಗಿಸಿಕೊಂಡಿದ್ದರು. ಅತಿಥಿಗೆ ಯಜಮಾನನು "ಈ ಮನೆ ತಮ್ಮದೆ ಇದೆ. ಸಂಕೋಚಪಟ್ಟುಕೊಳ್ಳಬಾರದು. ತಾವು ನಾಲ್ಕುದಿನ ಇದ್ದರೆ ನಮಗೆ ಆನಂದ;" ಎಂದು ನಯವಿನಯದ ಮಾತುಗಳಿಂದ ಪ್ರಾರ್ಥಿಸಿಕೊಳ್ಳುವುದು, ವಾಡಿಕೆ. ಆದರೆ, ಅತಿಥಿಯ ಭಾವನೆಯೆ ಒಂದು ಬಗೆ: ಇನ್ನೊಬ್ಬರಿಂದ ಸೇವೆಪಡೆಯುವುದು, ಅವರ ಅನ್ನಋಣ ಅಥವಾ ಯಾವುದೇ ಬಗೆಯ ಉಪಕಾರದ ಹಂಗಿನಲ್ಲಿರುವುದು ತನ್ನ ಸ್ವಾಭಿಮಾನಕ್ಕೆ ಕೇಡು; ಪುಣ್ಯನಾಶ. ಆದುದರಿಂದ, ತೀರ ಅನಿವಾರ್ಯವಲ್ಲದೆ ಯಾವ ನೆರವನ್ನೂ ಹೆರವರಿಂದ ಕೋರಬಾರದು, ಪಡೆಯಬಾರದು. ಇದು ತನ್ನ ವ್ರತವಾಗಿರಬೇಕು. ಈ ಬಗೆಯಾದ ಎರಡೂ ಬಗೆಯ ಶ್ರದ್ಧೆಗಳು ಜೀವಂತವಾಗಿರುವ ವರೆಗೆ ಸಮಾಜವು ತೂಕತಪ್ಪಿ ಹೊಯ್ದಾಡದೆ ಸುಖವಾಗಿ ಮುಂದೆ ಸಾಗಬಲ್ಲದು. ಇನ್ನೊಬ್ಬರಿಗೆ ನೆರವಾಗುವುದರಲ್ಲಿ ಪುಣ್ಯವಿದೆ; ಸೇವೆ ಮಾಡಿ ಅದನ್ನು ತಾನು ಪಡೆಯಬೇಕೆಂದು ಒಂದು ಪಕ್ಷದ ಹಂಬಲ; ಹೆರವರಿಂದ ನೆರವು ಪಡೆಯತಕ್ಕದ್ದಲ್ಲ; ಅದರಿಂದ ತನ್ನ ಪುಣ್ಯನಾಶ, ಕಾರಣ ಶಕ್ಯವಿದ್ದಷ್ಟೂ ತಾನು ಸ್ವಾವಲಂಬಿಯಾಗಿ ಬದುಕುವದರಲ್ಲಿಯೇ ಶ್ರೇಯಸ್ಸು ಎಂದು ಇನ್ನೊಂದು ಪಕ್ಷದವರ ತನ್ನ ಕಾಲಮೇಲೆ ತಾನು ನಿಲ್ಲುವ ಮನಸಾ ಪ್ರಯತ್ನ. ಈ ಬಗೆಯ ಬಾಳಿನಲ್ಲಿ ಶಬ್ದಾತೀತವಾದ ಒಂದು ಸುಖವಿದೆ. ಆನಂದವಿದೆ.

ಊರಿಗೆ ಬಂದ ಅತಿಥಿ ಅಭ್ಯಾಗತರನ್ನು ಹುಡುಕಿಕೊಂಡು ಬಂದು ಸತ್ಕರಿಸುವ ವ್ರತ ಗೃಹಸ್ಥಾಶ್ರಮಿಗಳದು. ಪರಾನ್ನಕ್ಕೆ ಬಾಯ್ಬಿಟ್ಟುಕೊಂಡಿರುವ ಚಪಲ ತನ್ನ ಜೀವಕ್ಕೆ ಅಂಟಿಕೊಳ್ಳದಂತೆ ವ್ರತಿಯಾಗಿರುವ ದೃಢನಿಶ್ಚಯ ಅತಿಥಿ ಅಭ್ಯಾಗತ ಯತಿಗಳದು. ಪ್ರತಿಫಲವನ್ನು ಕೇಳದೆ ಉಪಕಾರಮಾಡುವ ವ್ರತ ಒಬ್ಬರದು; ಕೊಡದೆ ಏನೂ ತಕ್ಕೊಳ್ಳಕೂಡದು; ಒಂದಿಲ್ಲೊಂದು ಬಗೆಯಿಂದಲಾದರೂ ಪ್ರತಿಫಲ ಸಲ್ಲಿಸಲೇಬೇಕೆಂಬ ಆಂತರಿಕ ಸಂಕಲ್ಪ

ಇನ್ನೊಬ್ಬರದು. ಇಂತಿಷ್ಟು ಸೇವೆಗೆ ಇಷ್ಟು ಹಣವೆಂಬ ಲೆಕ್ಕಾಚಾರದ ವ್ಯಾಪಾರೀ ವೃತ್ತಿಯ ಸಮಾಜರಚನೆಯಲ್ಲಿ ಕೃತಜ್ಞತೆಯ ಭಾವನೆಯು ಅಡಿಗಲ್ಲಾಗಿರುವ ಸಾಮಾಜಿಕ ನಡೆವಳಿಯೊಳಗಿನ ಸೊಗಸು ಎಂದೆಂದಿಗೂ ಬಾರದು. ಮೊದಲನೆಯದು ಮರದಿಂದ ಬಂದ ರಸಾಲಫಲ; ಎರಡನೆಯದು ವ್ಯಾಪಾರಕ್ಕಾಗಿ ತಂದು ಎಳಗಾಯಿ ಒತ್ತಿಮಾಡಿದ ಕೃತ್ರಿಮ ಹಣ್ಣು. ಪ್ರತಿಫಲದ ಆಸೆ, ತಾನು ಉಪಕಾರಮಾಡಿದ್ದೇನೆ, ಮಾಡುತ್ತಿದ್ದೇನೆಂಬ ಸೂಕ್ಷ್ಮವಾದ ಅರಿವು ಕೂಡ ಆ ಫಲದೊಳಗಿನ ರಸಾಲಮಾಧುರ್ಯವನ್ನು ಹಾಳುಮಾಡುವ ಹುಳು. ಪರೋಪಕಾರವೆಂದು ಜರಗುವ ಯಾವ ಕೆಲಸಕ್ಕೂ ಅಷ್ಟು ಬೆಲೆಯಿಲ್ಲ. ಮಾಡುವವನು ಅದನ್ನು ತನ್ನ ಅನಿವಾರ್ಯ ಕರ್ತವ್ಯವೆಂದು ನೆರವೇರಿಸುತ್ತಿರಬೇಕು. ಕರ್ತವ್ಯಪರಿಪಾಲನೆಯಲ್ಲಿ ಇನ್ನೊಬ್ಬರಿಗೆ ಆದ ಸಹಾಯಕ್ಕೆ ಅವರು ತಮಗೆ ಉಪಕಾರ ವಾಯಿತೆನ್ನುವರು. ಮಾಡಿದವನ ಪಾಲಿಗೆ ಅದು ತನ್ನ ಕರ್ತವ್ಯವೇ.

ಕರ್ತವ್ಯವನ್ನು ಮರೆತು ಕೃತಜ್ಞತೆಯನ್ನು ಮಾತ್ರ ಹಾರೈಸುವುದಾಗಲಿ, ಕರ್ತವ್ಯ ಮಾಡಿದ್ದಕ್ಕಾಗಿ ವ್ಯಕ್ತಪಡಿಸುವ ಕೃತಜ್ಞತೆಯನ್ನು ಸ್ವಾರ್ಥಕ್ಕಾಗಿ ಬಳಸುವುದಾಗಲಿ ಎರಡೂ ಆ ಮನುಷ್ಯನನ್ನು ಅಧಃಪಾತಕ್ಕೆ ಒಯ್ಯುತ್ತವೆ. ಶಿವಾಜಿಯು ತೋರಿದ ಶೌರ್ಯ, ಹಿಂದೂ ಜನತೆಗೆ ಮಾಡಿದ ಸಹಾಯಕ್ಕಾಗಿ ಅವಿಚಾರಿಗಳೂ ಅನಾಚಾರಿಗಳೂ ಆದ ಆತನ ವಂಶಜರು ಕೇವಲ, ಜನ್ಮದ ಹಕ್ಕಿನಿಂದಲೇ ರಾಜ್ಯೋಪಭೋಗಕ್ಕೆ ಅರ್ಹರಾಗುವರೆ? ರಾಜರು, ಜಹಗೀರದಾರರು, ಸಿರಿವಂತರು ಹೇಗೆ ಜನ್ಮದಿಂದಲೇ ಶ್ರೇಷ್ಠರಾಗುವುದಿಲ್ಲವೊ ಅದರಂತೆ ಬ್ರಾಹ್ಮಣ, ಜಂಗಮಾದಿ ಉಚ್ಚವರ್ಣ ದವರೆನಿಸುವ ಜಾತಿಯವರೂ ಕೇವಲ ಜನ್ಮದಿಂದಲೇ ತಮ್ಮ ಹಿರಿಮೆಯನ್ನು ಹೇಳುವಲ್ಲಿ ಹುರುಳಿಲ್ಲ. ಸಮಾಜಕ್ಕೆ ಇವರು ಒಂದು ಕಾಲದಲ್ಲಿ ಸೇವೆ ಸಲ್ಲಿಸಿರುವುದು ನಿಜ. ಆದರೆ, ಅದಕ್ಕಾಗಿ ವಂಶಾನುವಂಶ, ಯುಗಯುಗಾಂತರ ಗಳವರೆಗೂ ಉಳಿದ ಎಲ್ಲ ಸಮಾಜದವರೂ ಸೇವಕಭಾವದಿಂದ ಅವರೊಡನೆ ನಡೆದುಕೊಳ್ಳಬೇಕೆ? ದೇಶಸೇವಕ, ದೇಶಭಕ್ತನೆಂಬಂತೆ ಗುರುವರ್ಗ ಅಥವಾ ಬ್ರಾಹ್ಮಣವೆಂಬುದೂ ಒಂದು ವಿಶಿಷ್ಟಾರ್ಥಕ ಪದವಿ. ಬ್ರಹ್ಮಪದವಿಯು ಪಡೆಯತಕ್ಕ ಒಂದು ಸ್ಥಿತಿ. ಗೀತೆಯಲ್ಲಿ ಬ್ರಾಹ್ಮೀಸ್ಥಿತಿಯ ವರ್ಣನೆಯುಂಟು. ಆ ಸ್ಥಿತಿಯನ್ನು ಹೊಂದಿದವನು, ಹೊಂದಲು ಅನುದಿನವೂ ಸಾಧನದಲ್ಲಿದ್ದವನು ಬ್ರಾಹ್ಮಣನೆನಿಸುವನು. ಬ್ರಾಹ್ಮೀಸ್ಥಿತಿಯ ಪ್ರಾಪ್ತಿಯು ಜೀವನದೊಳಗಿನ ಶ್ರೇಷ್ಠವಾದ ಒಂದು ಧ್ಯೇಯವಾಗಿದೆ. ಇದೊಂದು ಪದವಿ.

ಪದವಿಯು ಹುಟ್ಟಿನಿಂದಲೇ ಯಾರಿಗಾದರೂ ಬಂದುದುಂಟೆ? ಇದು ಸಂಪಾದಿಸಬೇಕಾದುದು. ಜನ್ಮದೊಡನೆ ಬರತಕ್ಕುದಲ್ಲ. ವೇದಕಾಲದಲ್ಲಿಯೂ ಆ ಬಳಿಕ ಹಲವು ಶತಮಾನಗಳವರೆಗೂ ಬ್ರಾಹ್ಮಣ್ಯವು ಒಂದು ಗುರಿಯಾಗಿದ್ದಿತು. ಕೇವಲ ಹುಟ್ಟಿನಿಂದ ಇರಲಿಲ್ಲ. ಐತರೇಯ ಬ್ರಾಹ್ಮಣ, ವಾಯು ಪುರಾಣಾದಿಗಳಲ್ಲಿ ಇದಕ್ಕೆ ಆಧಾರಗಳಿವೆ.

ವಿಶ್ವಾಮಿತ್ರೋ ನರಪತಿರ್ಮಾಂಧಾತಾ ಸಂಸ್ಕೃತಿಃ ಕವಿಃ।
ವಾರ್ಧಾಶ್ವಃ ಪುರುಕುತ್ಸಶ್ಚ ಭಾಸ್ವಾನ್ ಗೃತ್ಸಮದಃ ಪ್ರಭುಃ।
ಆರ್ಷ್ಟಿಷೇಣೋಽಜಮೀಳಶ್ಚ ಭಾಗೋ ಗಾರ್ಗ್ಯಸ್ತಥೈವ ಚ।
ಕಕ್ಷಿವಾಂಶ್ಚ ವಿರೂಪಶ್ಚ ಮುದ್ಗಲೋ ಹರಿತಸ್ತಥಾ॥
ರಥೀತರಶ್ಚ ಕಣ್ವಶ್ಚ ವಿಷ್ಣುವೃದ್ಧಾದಯೋ ನೃಪಾಃ।
ಕ್ಷೇತ್ರೋಪೇತಾ ದ್ವಿಜಾಹ್ಯೇತೇ ತಪಸಾ ಋಷಿತಾಂ ಗತಾಃ॥ **- ವಾಯು ಪುರಾಣ**
ಇಂದ್ರೋ ವೈ ಬ್ರಾಹ್ಮಣಃ ಪುತ್ರಃ ಕ್ಷತ್ರಿಯಃ ಕರ್ಮಣೋಽಭವತ್॥

- ಮಹಾಭಾರತ ಶಾಂ. ೨೨-೧೧

ಕ್ಷತ್ರಿಯರಿದ್ದವರು ತಪಸ್ಸಿನಿಂದ ಋಷಿಗಳಾದ ಉದಾಹರಣಗಳೂ, ಬ್ರಾಹ್ಮಣಕುಲದಲ್ಲಿ ಹುಟ್ಟಿದವರು ಕರ್ಮದಿಂದ ಕ್ಷತ್ರಿಯತ್ವವನ್ನು ಪಡೆದುದೂ ಮೇಲಣ ಪೌರಾಣಿಕ ಉದಾಹರಣಗಳಿಂದ ನಿಶ್ಚಿತವಾಗಿ ತಿಳಿಯುತ್ತದೆ. ಪುರುಷಸೂಕ್ತದಲ್ಲಿ ಬಂದ ವರ್ಣನೆಯೂ ಗೀತೆಯಲ್ಲಿ ಹೇಳಿದ ಗುಣ-ಕರ್ಮಗಳಿಂದ ಚಾತುರ್ವರ್ಣ್ಯಗಳುಂಟಾದು

ವೆಂಬುದನ್ನೇ ಪುಷ್ಟೀಕರಿಸುತ್ತದೆ. ಜ್ಞಾನೋಪಾಸಕನಾಗಿ ಲೋಕಹಿತತತ್ಪರನಾದವನು ಬ್ರಾಹ್ಮಣನು; ತೋಳ್ಬಲದಿಂದ ಬಾಳುವವನು ಕ್ಷತ್ರಿಯನು; ಸಂಪದಭಿವೃದ್ಧಿಗಾಗಿ ಹೆಣಗುವವನು ವೈಶ್ಯನು; ಸೇವಾವೃತ್ತಿಯಿಂದ ಜೀವಿಸುವವನು ಶೂದ್ರನು. ಎಲ್ಲ ಸಮಾಜಗಳಲ್ಲಿ ಲೋಕದಲ್ಲೆಲ್ಲ ಕಾಣಿಸಿಕೊಳ್ಳುವ ಸನಾತನ ಧರ್ಮವಿದು. ಪುರುಷಸೂಕ್ತದಲ್ಲಿ ವರ್ಣಿಸಲ್ಪಟ್ಟ ಸಹಸ್ರಶೀರ್ಷ ಪುರುಷನು ಹಿಂದೂ ದೇಶದ ಮಟ್ಟಗಿನವನಲ್ಲ; ವಿಶ್ವಭರಿತನಲ್ಲದೆ ಮೇಲೆ ಮತ್ತೆ ದಶಾಂಗುಲ ಮಿಕ್ಕುಳಿದವನು! ಶ್ರಮವಿಭಾಗದ ತತ್ವದ ಮೇಲೆ ನಿಂತ ಈ ನಾಲ್ಕು ವಿಭಾಗಗಳು ಪ್ರಪಂಚದಲ್ಲಿ ಎಲ್ಲೆಲ್ಲೂ ಇವೆ. ಹಿಂದೆ ಇದ್ದುವು. ಮುಂದೆ ಉಳಿಯುವುವು. ಇದು ಕೇವಲ ಹಿಂದೂ ದೇಶದ ವೈಶಿಷ್ಟ್ಯವೆಂಬುದು ಒಣ ಹೆಮ್ಮೆಯ ಮಾತು. ಭಾರತದಲ್ಲಿ ಈಗ ಉಳಿದಿರುವ ವರ್ಣಾಶ್ರಮಗಳು ಮೂಲ ಆ ಶುದ್ಧರೂಪದಿಂದ ಅದೆಷ್ಟೋ ದೂರ ಹೋದ ಅವಶೇಷವು ಮಾತ್ರ. ಈ ವಿಕೃತಿಯೆ ನಮ್ಮ ವೈಶಿಷ್ಟ್ಯವೆಂಬುದಿದ್ದರೆ ಅದು ಅಕ್ಷರಶಃ ನಿಜ.

ದೇಶಸೇವಕ, ದೇಶಭಕ್ತ, ಕಮ್ಯುನಿಸ್ಟ ಮೊದಲಾದ ಪಂಥಗಳು ಲೋಕೋದ್ಧಾರದ ಸಲುವಾಗಿ ಮೊದಲು ಹೊರಡುವುವು. ಅದರಲ್ಲಿ ರಾಜಕೀಯ ಹಾಗೂ ಸಾಮಾಜಿಕ ಲಾಭಗಳು ಹೆಚ್ಚುಹೆಚ್ಚಾಗಿ ಕಾಣಿಸಿಕೊಳ್ಳಲಾರಂಭಿಸಿದಂತೆ ಆ ಹೆಸರನ್ನು ತಮಗೆ ಅಂಟಿಸಿಕೊಂಡು ಆ ಹೆಸರಿನ ಜೊತೆಗೆ ಅದರ ನಿದರ್ಶಕ ಬಾಹ್ಯಚಿಹ್ನಗಳನ್ನು ಎದ್ದುಕಾಣುವಂತೆ ಧರಿಸಿ ಮೆರೆವ ಒಂದು ಸಮಾಜವೇ ನಿರ್ಮಾಣವಾಗುತ್ತದೆ. ಮುಂದೆ ಅವರ ಮಕ್ಕಳು ತಮ್ಮ ತಂದೆಯ ಹೆಸರಿನ ಲಾಭ ಪಡೆದು ಮುಂದುವರೆಯಲು, ಸಮಾಜದಲ್ಲಿ ಪ್ರಭುತ್ವ ನಡಸಲು ಹವಣಿಸುತ್ತಾರೆ. ಬರುಬರುತ್ತ ಇದೊಂದು ಜನ್ಮದಿಂದ ನಿರ್ಣಯಿಸಲ್ಪಡುವ ಜಾತಿಯೆ ಆಗುವುದು. ಆದರೆ ಒಂದು ತಲೆಮಾರಿನ ವರೆಗೆ ಸಲ್ಲಬೇಕಾದ ಕೃತಜ್ಞತೆಯು, ಆನುವಂಶಿಕವಾಗಿ ಅಥವಾ ಆ ಪಕ್ಷವು ಬೇರೆ ಕಾಲಪರಿಸ್ಥಿತಿಯಲ್ಲಿ ನಿರುಪಯುಕ್ತವಾದರೂ ಮುಂದೆ ಹಾಗೆಯೇ ಸಲ್ಲುತ್ತಲೇ ಇರಬೇಕೆ, ಪೂಜಾರಿಗಳ ಉಂಬಳಿಯಂತೆ! ಇಂದು ಗುರುವರ್ಗ, ಬ್ರಾಹ್ಮಣಾದಿಗಳ ಸ್ಥಿತಿಯೂ ಹೀಗೆಯೆ ಉಂಟು. ನಿಜವಾದ ಬ್ರಾಹ್ಮಣನು ಯಾರು? ಗುರುವರ್ಗದವರು ಎಂತಹರಿರಬೇಕು?

> ಸತ್ಯಂ ಜ್ಞಾನಮಥಾದ್ರೋಹ ಅನೃಶ್ಯಂ ತಪೋಘೃಣಾ।
> ತಪಶ್ಚ ದೃಶ್ಯತೇ ಯತ್ರ ಸ ಬ್ರಾಹ್ಮಣ ಇತಿ ಸ್ಮೃತಃ।.
>
> - **ಶಾಂತಿಪರ್ವ. ೧೮೯-೪**

> ಜಿತೇಂದ್ರಿಯೋ ಧರ್ಮಪರಃ ಸ್ವಾಧ್ಯಾಯನಿರತಃ ಶುಚಿಃ।
> ಕಾಮಕ್ರೋಧೌ ವಶೌ ಯಸ್ಯ ತು ದೇವಾಃ ಬ್ರಾಹ್ಮಣಂ ವಿದುಃ॥
>
> - **ಮೋಕ್ಷಪರ್ವ ೨೪೫-೩೪**

> ಯಸ್ಯ, ಯಲ್ಲಕ್ಷಣಂ ಪ್ರೋಕ್ತಂ ಪುಂಸೋ ವರ್ಣಾಭಿವ್ಯಂಜಕಮ್।
> ಯದನ್ಯತ್ರಾಪಿ ದೃಶ್ಯೇತ ತತ್ತೇ್ನೈವ ವಿನಿರ್ದಿಶೇತ್॥
>
> - **ಭಾಗವತ ಸ್ಕಂದ ೭-೧೧**

> ಸ್ವಭಾವಃ ಕರ್ಮ ಚ ಶುಭಂ ಯತ್ರ ಶೂದ್ರೇsಪಿ ತಿಷ್ಠತಿ।
> ವಿಶಿಷ್ಟಃ ಸ ದ್ವಿಜಾತೇರ್ವೈ ವಿಜ್ಞೇಯ ಇತಿ ಮೇ ಮತಿಃ॥
>
> - **ಮಹಾಭಾ, ಅನುಶಾಸನಪರ್ವ. ೧೪೩**

> ಶೂದ್ರೋsಪ್ಯಾಗಮ ಸಂಪನ್ನೇ ದ್ವಿಜೋ ಭವತಿ ಸಂಸ್ಕೃತಃ॥
>
> - **ಮಹಾಭಾ, ಅನುಶಾಸನಪರ್ವ. ೧೪೩-೪೬**

> ಕರ್ಮಭಿಃ ಶುಚಿಭಿರ್ದೇವಿ ಶುದ್ಧಾತ್ಮಾ ವಿಜಿತೇಂದ್ರಿಯಃ।
> ಶೂದ್ರೋsಪಿ ದ್ವಿಜವತ್ ಸೇವ್ಯ ಇತಿ ಬ್ರಹ್ಮಾsಬ್ರವೀತ್ ಸ್ವಯಮ್॥
>
> - **ಅನುಶಾಸನಪರ್ವ. ೧೪೩-೪೮**

ನ ಯೋನಿರ್ನಾಪಿ ಸಂಸ್ಕಾರೋ ನ ಶ್ರುತಂ ನ ಚ ಸಂತತಿಃ।
ಕಾರಣಾನಿ ದ್ವಿಜತ್ವಸ್ಯ ವೃತ್ತಮೇವ ತು ಕಾರಣಮ್॥

- ಅನುಶಾಸನಪರ್ವ ೧೪೩-೫೦

ಸರ್ವೋsಯಂ ಬ್ರಾಹ್ಮಣೋ ಲೋಕೇ ವೃತ್ತೇ ನ ತು ವಿಧೀಯತೇ।
ವೃತ್ತೇ ಸ್ಥಿತಸ್ತು ಶೂದ್ರೋsಪಿ ಬ್ರಾಹ್ಮಣ ತ್ವಂ ನಿಯಶ್ಚತಿ॥

- ಅನಶಾಸನಪರ್ವ. ೧೪೩-೪೭

ನ ಕುಲಂ ವೃತ್ತಿ ಹೀನಸ್ಯ ಪ್ರಮಾಣಮಿತಮೇ ಸ್ಥಿತಿಃ।
ಅಂತೇಷ್ವಹಿ ಜಾತಾನಾಂ ವೃತ್ತಮೇವ ವಿಶಿಷ್ಯತೇ।.

- ಉದ್ಯೋಗಪರ್ವ. ೩೪-೪೧

ಶೂದ್ರೋsಪಿ ಶೀಲಸಂಪನ್ನೋ ಗುಣವಾನ್ ಬ್ರಾಹ್ಮಣೋsಭವೇತ್॥
ಬ್ರಾಹ್ಮಣೋsಪಿ ಕ್ರಿಯಾಹೀನಃ ಶೂದ್ರಾತ್ ಪ್ರತ್ಯವರೋ ಭವೇತ್॥

- ವನಪರ್ವ. ೧೮೦

ಸರ್ವತ್ರ ಸಮದರ್ಶೀ ಯಃ ಸಃ ಬ್ರಾಹ್ಮಣ ಇತಿ ಸ್ಮೃತಃ।

- ಶುಕ್ರನೀತಿ.

ಮೈತ್ರೋ ಬ್ರಾಹ್ಮಣ ಉಚ್ಯತೇ।

- ಮನುಸ್ಮೃತಿ ೨೮೭

ಚತ್ವಾರ ಏಕಸ್ಯ ಪಿತುಃ ಸುತಾಶ್ಚ
ತೇಷಾಂ ಸುತಾನಾಂ ಖಲು ಜಾತಿರೇ ಕಾ।
ಏವಂ ಪ್ರಜಾನಾಂ ಹಿ ಪಿತ್ರೈವ ಏಕ ಪಿತ್ರೇಕ ಭಾವಾತ್ ನ ಚ ಜಾತಿಭೇದಃ।

- ಭವಿಷ್ಯತ್ ಪುರಾಣ ೪೨-೪೫

ಪೌರುಷಕ್ಕೆ ಇಂಬುದೊರೆಯದಾಗುತ್ತಲೆ ದೈವವಾದವು ತಲೆದೋರುವುದು; ಇಲ್ಲವೆ ಆ ವ್ಯಕ್ತಿ ತಲೆತಿರುಕನಾದರೂ ಆಗುವನು. ಜನ್ಮದಿಂದ ವರ್ಣಗಳನ್ನು ಮಾಡಿ ವ್ಯಕ್ತಿಗಳ ಸ್ವಾಭಾವಿಕ ವಿಕಾಸಕ್ಕೆ ಸಂಪೂರ್ಣವಾಗಿ ತಡೆಹಾಕಿದಂತಾಯಿತು. ವ್ಯಕ್ತಿಗಳ ಗುಣವಿಕಾಸಕ್ಕೆ ಅವಕಾಶವಿಲ್ಲದೆ ಡಾ. ಅಂಬೇಡಕರಂತಹ ಧೀಮಂತರು ಅದೆಷ್ಟು ಜನ ಹಿಂದಕ್ಕೆ ನಿರ್ನಾಮವಾದರೊ ಯಾರು ಹೇಳಬೇಕು? ಅಂದಿನವರು ಪಾರಲೌಕಿಕ ಶಿಕ್ಷೆ ಅಥವಾ ದೈವೀಕೋಪದ ಭೀತಿಯಿಂದ, ಅಥವಾ ಸಾಮಾಜಿಕ ವಿರೋಧಕ್ಕೆ ಹೆದರಿ ಸುಮ್ಮನಿದ್ದರು; ದೈವವಾದಿಗಳಾದರು. ಆದರೆ, ಇಂದಿನ ವಾತಾವರಣದಲ್ಲಿ ಅವರೇ ತಲೆತಿರುಕರಂತಾಗುವುದು ಕಂಡುಬರುತ್ತದೆ. ಆ ರೌಸಿನಲ್ಲಿ ಯೋಗ್ಯಾಯೋಗ್ಯದ ವಿವೇಕವು ಅಳಿದು ಗೀತಾ ಉಪನಿಷತ್ತುಗಳನ್ನೂ ಸುಟ್ಟುಬಿಡಬೇಕೆಂಬ ಕ್ರೂರ ಆವೇಶದ ಕೂಗು ಕೇಳಬರುತ್ತಿದೆ.

ಪ್ರಗತಿಯ ಕಡೆಗೆ ಒಯ್ಯುವ ಯಾರ ದಾರಿಯನ್ನೂ ತಡೆಯಲಾಗದು. ಅದರಿಂದ ಒಬ್ಬರನ್ನು ತಡೆದು ನಿಲ್ಲಿಸುವವರಿಗೂ ಮುನ್ನಡೆಯಲಿಕ್ಕಾಗುವುದಿಲ್ಲ. ಒಬ್ಬರ ಹಾನಿಮಾಡುವಾಗ ತನಗೂ ಕೇಡಿಗೆ ಒಳಗಾಗಬೇಕಾಗುವುದು. ಜನ್ಮದಿಂದ ದೊರೆವ ಕುಲೀನತೆ, ದೊಡ್ಡಿತೆಗಿಂತ ತನ್ನ ಗುಣಶೀಲಗಳಿಂದ ಪಡೆದ ಕುಲೀನತೆ, ಹಿರಿಮೆಗಳು ಹೆಚ್ಚು ಪ್ರಶಂಸಾರ್ಹವಾಗಿವೆ. ಎರಡನೆಯದರಲ್ಲಿರುವ ಪೌರುಷಪ್ರಯತ್ನದ ಆನಂದದ ಸೊಗಸು ಮೊಲನೆಯದರಲ್ಲಿಲ್ಲ. ಮೊದಲನೆಯದು ಕೇವಲ ಹೆಮ್ಮೆ ಬಿಂಕವನ್ನು ಮಾತ್ರ ತರಬಲ್ಲುದು. ನದೀಮೂಲ, ಋಷಿಕುಲ ನೋಡಬಾರದೆಂಬುವರು. ಕುಲವು ಎಂತಹದಿದ್ದರೂ ಋಷಿಗಳು ಲೋಕಪೂಜ್ಯರಾಗಿಲ್ಲವೆ? ಇದು ಜನ್ಮದಿಂದ ಬಂದ ಹಿರಿಮೆಯಲ್ಲ. ಪೌರುಷದಿಂದ ಅರಸುಕುಲಗಳೆಂದು ಮೆರೆದ ಹಲವು ಅರಸುಮನೆತನಗಳ ಉಗಮವೂ ನದೀಮೂಲದಂತೆ ತೀರ ಕಿರುಕುಳವಿರುತ್ತದೆ. ಇಂಗ್ಲೆಂಡಿನ ನಾರ್ಮಂಡಿ ಅರಸುಮನೆತನದ ಮೂಲಪುರುಷನು ಅಜ್ಞಾತ ತಂದೆಯ ಮಗನಂತೆ!

ಪಿಲ್‌ಗ್ರಿಮ್ಸ ಪ್ರೊಗ್ರೆಸ್ ಬರೆದ ಬನಿಯನ್ ಕಲ್ಮೆಗಾರನ ಕೂಸು; ಕೋಲಂಬಸ್ ನೇಕಾರರ ಹುಡುಗ; ಕ್ರಾಮವೆಲ್ಲ ಕಲಾಲರ ಪೋರ; ಡೆಫೊಕಟಕರ ಶಿಶು; ಡೆಮಾಸ್ಥನಿಸ್ ಶಿಕ್ಕಲಿಗಾರ ಹಸುಳೆ; ಹೋಮರ ನೇಗಿಲ ಹೊಡೆವವನ ಮಗು; ಶೆಕ್ಸಪಿಯರ ಜಾಡರ ಪಿಳ್ಳೆ, ಸಾಕ್ರೆಟಿಸ್ ಉಪ್ಪಾರರ ಮನೆಯವ, ವಾಶಿಂಗ್ಟನ್‌ನ ತಂದೆ ಒಕ್ಕಲಿಗ; ಹೈದರನ ತಾತ ಶಿಪಾಯಿ; ಭಟ್ಟರ ಸಂತಾನ ಬಾಳಾಜಿ ವಿಶ್ವನಾಥ ಪೇಶವೆ, ಅಡಿಯಾಳಾಗಿದ್ದವರು ಸಿಂಧೇ, ಹೋಳಕರ ಮನೆತನದ ಮೊದಲಿಗರು; ನೆಪೋಲಿಯನ್ ಬಡ ವಕೀಲನ ಮಗ; ವಾಲ್ಮೀಕಿ ಬೇಡನಂತೆ, ಕೃಷ್ಣ ಗೋವಳ; ವ್ಯಾಸನ ತಾಯಿ ಅಂಬಿಗರವಳು. ತಂದೆಯಂತೆ ಮುಸಲಿನಿ ಕಂಬಾರನಾಗಬೇಕಿತ್ತು. ಸುಣ್ಣಬಣ್ಣ ಹಚ್ಚಿಹೊಟ್ಟೆ ಹೊ 'ಕೊಳ್ಳುತ್ತಿದ್ದ ಹಿಟ್ಲರ್ ಮೊದಲನೆಯ ಮಹಾಯುದ್ಧದಲ್ಲಿ ಒಬ್ಬ ಸಾಮಾನ್ಯ ಸೈನಿಕ. ಸ್ಟಾಲಿನ್ ಚರ್ಮಗಾರ; ವಿದ್ಯುವ್ಯಾಸಂಗವೆಂದರೇನೆಂಬುದನ್ನು ಅರಿಯದ ಲೈಡ ಜಾರ್ಜ; ಚಂದ್ರಗುಪ್ತ ದಾಸೀಪುತ್ರ; ಗಾಂಧಿಜೀ ಬನಿಯಾ; ಬಾಬು ಭಗವಾನದಾಸ ವೈಶ್ಯ; ಜ್ಞಾನಿ ಅರವಿಂದಬಾಬು ಶೂದ್ರ; ಪಾಂಡಿಚೇರಿ ಆಶ್ರಮದಲ್ಲಿ ಯೋಗಿಯೆನಿಸಿ ಪೂಜೆಗೊಂಬ ಮಿಸೆಸ್ ರಿಚರ್ಡ್ಸ ಒಬ್ಬ ಫ್ರೆಂಚ ಸಾಧಕನ ಹೆಂಡತಿ; ಸರ್ವಜ್ಞ ಕವಿ ಜನ್ಮ ಸಂದಿಗ್ಧ........

ಇಂತಹ ಉದಾಹರಣೆಗಳಿಗೆ ಲೆಕ್ಕವಿಲ್ಲ. ವಿದ್ಯೆ, ಗುಣ, ಶೀಲ, ಶೌರ್ಯಾದಿಗಳಿಂದ ಮೇಲ್ಮೆ ಪಡೆದು ನಾಡಿಗೆ ತಮ್ಮ ಕರ್ತವ್ಯದ, ಪೌರುಷದ ಕಾಣಿಕೆಯನ್ನು ಅರ್ಪಿಸಿದವರೇ ಯಾವುದೊಂದು ಮನೆತನದ ಸಂಸ್ಥಾಪಕರಾಗುತ್ತಾರೆ. ಅವರ ಹೆಸರಿನ ಲಾಭ ಪಡೆದು ಬದುಕುತ್ತಿರುವ ಛಾಯಾಜೀವಿಗಳು, ಮುಂದೆ ಮತ್ತೆ ಬೇರಾರನ್ನೂ-ತಮ್ಮ ಪೂರ್ವಜರಂತೆ, ಪೂರ್ವಜರ ಸಾಲಿಗೆ ನಿಲ್ಲುವಂತೆ ಮೇಲ್ಮೈಯನ್ನು ಹೊಂದಲು ಅಡ್ಡಿಯನ್ನುಂಟು ಮಾಡುವುದು ಕಾಣುತ್ತದೆ. ಇದು ಶುದ್ಧ ಅನೀತಿ; ಅನ್ಯಾಯ; ನಾಚಿಕೆಗೇಡು.

ಜಾತಿಗಳುಂಟಾಗುವುದು ಮುಖ್ಯವಾಗಿ ಕೆಳಗಣ ಆರು ಕಾರಣಗಳಿಂದ:

೧. ರಾಷ್ಟ್ರೀಯ ಜಾತಿ; ೨. ಉದ್ಯೋಗಮೂಲಕ ಜಾತಿ; ೩. ಸಂಪ್ರದಾಯ ಮೂಲಕ ಜಾತಿ; ೪. ಸಂಕರಮೂಲಕ ಜಾತಿ; ೫. ಸ್ಥಾನಾಂತರಮೂಲಕ ಜಾತಿ; ೬. ಭಿನ್ನಾಚಾರಮೂಲಕ ಜಾತಿ.

ಈಗಿನ ಯುಗವು ಮೊದಲನೆಯ ಪ್ರಕಾರದ ಎಂದರೆ ರಾಷ್ಟ್ರೀಯ ಜಾತಿಯನ್ನೊಂದೇ ಒಪ್ಪುವುದಕ್ಕೆ ಸಿದ್ಧವಿದೆ. ಹಿಂದೂ ದೇಶದಲ್ಲಿದ್ದವರು ಹಿಂದುಗಳು. ಇಂಗ್ಲೆಂಡಿನವರು ಇಂಗ್ಲಿಷರು; ಇದೇ ಮುಖ್ಯವಾದ ಈಗಿನ ಜಾತಿ. ರಾಷ್ಟ್ರೀಯ ಐಕ್ಯಕ್ಕೆ ಕಾರಣವಾಗುವಂತಹದು. ಇನ್ನುಳಿದುವು ಒಂದು ನಾಡಿನೊಳಗಿನ ರಾಷ್ಟ್ರೀಯ ಕುಲದೊಳಗಿನ ಉಪಜಾತಿಗಳು ಅಥವಾ ಉಪವರ್ಗಗಳು. ಒಬ್ಬರನ್ನು ಇನ್ನೊಬ್ಬರಿಂದ ಗುರುತಿಸಲಿಕ್ಕೆ ಗುಂಪುಗಳಿಗೆ ಬಳಕೆಯಲ್ಲಿ ಬರುವ ಹೆಸರಿನ ಪ್ರಕಾರಗಳು.

ಕೆಲವೊಂದು ಜಾತಿ, ಕುಲದವರು ಲೋಕದಲ್ಲಿ ತಾವೇ ಶ್ರೇಷ್ಠರು; ದೇವರ ವರಪ್ರಸಾದ ಪಡೆದವರೆಂಬಂತೆ ಆಢ್ಯತೆಯಿಂದ ವರ್ತಿಸುವುದೂ, ಸಮಾಜವು ಅದನ್ನು ದೈವಾಯತ್ತವೆಂದು ಒಪ್ಪಿಕೊಂಡು ನಡೆಯುವುದೂ ಕೇವಲ ತಿಳಿಗೇಡಿತನದ ಲಕ್ಷಣ. ಏಕೆಂದರೆ ನಡೆವಳಿ-ಶೀಲವೇ ಇಲ್ಲದ ಲೋಕಹಿತಕ್ಕಾಗಿ ಜೀವನವನ್ನು ಮುಡುಪಾಗಿ ಇರಿಸದ ಅಧಮರು, ಗುರುವರ್ಗದವರೆಂದು ಸುಮ್ಮನೆ ಪುರಾತನರ ಹೆಸರು ಹೇಳಿ ಜನಸಾಮಾನ್ಯರ ಮುಗ್ಧಭಾವದ ದುರ್ಲಾಭ ಪಡೆಯುತ್ತಿರುವರು. ಇಂತಹರ ಈ ಕೃತಿಗಳಿಂದಲೆ ಸಮಾಜವು ಅವನತಿಗೆ ಇಳಿದಿದೆ. ಕರ್ಮದಂತೆ ಫಲವೆಂಬುದು ನಿತ್ಯಸಿದ್ಧಾಂತ. ಇಂದು ನಮ್ಮ ದೇಶದಲ್ಲಿ ಜನ್ಮದಿಂದಿರುವ ವರ್ಣವ್ಯವಸ್ಥೆಯು ಹುರುಳು ಇಲ್ಲದ್ದಾಗಿದೆ. ಹೆರವರ ಆಳಾಗಿ ಬಾಳುವ, ಹೊಟ್ಟೆಯ ಪಾಡಿಗೆ ಬೇಕಾದ ಕೆಲಸಕ್ಕೆ ನಿಲ್ಲುವ ಜನಗಳ ಕುಲ, ಯಾವ ಕುಲ? ಪರಕೀಯ ಆಂಗ್ಲರ ಆಡಳಿತವನ್ನು ಇಲ್ಲಿ ದೃಢಗೊಳಿಸಲು ದೇಹಸವೆಸಿದವರ ಕುಲ, ಯಾವ ಕುಲ? ಬೆಳಗೂ ಬೈಗೂ ಸುಳ್ಳು ಕಾಗದಪತ್ರ ಮಾಡಿಸಿ, ಅಥವಾ ತಮ್ಮ ಬುದ್ಧಿವಂತಿಕೆಯನ್ನು ಮಾರಿ ನಿಜವಿದ್ದುದನ್ನು ಸುಳ್ಳು, ಸುಳ್ಳಿದ್ದುದನ್ನೂ ನಿಜವೆಂಬ ಮಾಟಮಾಡಿ ತೋರಿಸುವ ಬಾಯ್ಬಡಿಕ ಮೋಡಿಕಾರರ ಕುಲ, ಯಾವ ಕುಲ? ಕೈಚಳಕ, ಬಾಯ್ಚಳಕದಿಂದ ಸಮಾಜದ ದುಡ್ಡನ್ನು ಹೀರಿ ಸ್ವಾರ್ಥಸಾಧಿಸುತ್ತಿರುವ, ಶೀಲಭ್ರಷ್ಟರ ಕುಲ, ಯಾವ ಕುಲ?

ಏಕವರ್ಣಮಿದಂ ಪೂರ್ವಂ ವಿಶ್ವಮಾಸೀತ್ ಯುಧಿಷ್ಠಿರ।
ಕರ್ಮಕ್ರಿಯಾ ವಿಭೇದೇನ ಚಾತುರ್ವರ್ಣ್ಯಂ ಪ್ರತಿಷ್ಠಿತಮ್।.

- ಮಹಾಭಾರತ ವನಪರ್ವ ೧೮೦

ನ ವಿಶೇಷೋಽಸ್ತಿ ವರ್ಣಾನಾಂ ಸರ್ವಂ ಬ್ರಾಹ್ಮಮಿದಂ ಜಗತ್।
ಬ್ರಹ್ಮಣಾ ಪೂರ್ವಸೃಷ್ಟಂ ಹಿ ಕರ್ಮಭಿರ್ವರ್ಣತಾಂ ಗತಮ್॥

- ಮಹಾಭಾರತ. ಶಾಂತಿಪರ್ವ. ೧೮೬-೧೦

ಶ್ರೀ ವ್ಯಾಸರು ಹೇಳಿದ್ದೇ ನಿಜ. ಮೊದಲು ವರ್ಣಭೇದವೇ ಇದ್ದಿಲ್ಲ. ಒಂದೇ ವರ್ಣ. ಕರ್ಮ-ಕ್ರಿಯಾಭೇದದಿಂದ ಎಂದರೆ ಶ್ರಮವಿಭಾಗದ ತತ್ತ್ವಕ್ಕನುಸರಸಿ ಬ್ರಾಹ್ಮಣಾದಿ ವರ್ಣಗಳು ತಲೆಯೆತ್ತಿದುವು. ಈ ಜಗತ್ತೆಲ್ಲವೂ ಪರಮಾತ್ಮನ ಆವಾಸ. ಆದುದರಿಂದ ಆತನಿಂದ ನಿರ್ಮಿತವಾದ ಪ್ರಜೆಯೆಲ್ಲ ಅವನ ಸಂತತಿ. ಅವರವರ ಕೆಲಸಗಳಿಂದ ಅವರವರ ವರ್ಣಗಳು ಎಂದರೆ ಬಣಗಳು ಹುಟ್ಟಿದುವು. ಆದಕಾರಣ ಜನ್ಮದಿಂದ ವರ್ಣಗಳೆಂಬುದು ಆತ್ಮವಂಚನೆ; ಲೋಕವಂಚನೆ. ಗುಣ-ಕರ್ಮಕ್ಕನುಸರಿಸಿಯೇ ನಿಜವಾದ ಸ್ವಾರ್ಥವಾದ ವರ್ಣಗಳು. ಜನ್ಮದಿಂದ ಯಾರಿಗೂ ಹಿರಿಮೆ ಅಥವಾ ಅಂಟಿಕೊಳ್ಳತಕ್ಕದ್ದಲ್ಲ.

ಅಡಿಗೆಯುವಳಾಗುವುದೇ ಹೆಣ್ಣಿನ ಜೀವನದ ಹೆಗ್ಗುರಿಯೆ?

(ಪೂರ್ವ ಪಕ್ಷ)

ಹೆಂಗುಸರೆಂದರೆ 'ಗೃಹಸ್ವಾಮಿನಿಯರು' ಎಂಬ ಚೆಂದವಾದ ಹೆಸರಿನಿಂದ ಅವರನ್ನು ಅಡುಗೆಯ ಮನೆಯಲ್ಲಿ ಹೂಳಿಡುವ ಕಾಲವು ಮುಗಿದು ಹೋಯ್ತು. ಇನ್ನು ಮೇಲೆ ಸ್ತ್ರೀಯರು ಇಂತಹ ಸವಿಮಾತುಗಳಿಗೆ ಮರುಳಾಗಿ ತಮ್ಮ ಆತ್ಮನಾಶವನ್ನು ಮಾಡಿಕೊಳ್ಳಲಾರರೆಂದು ನಾನು ನಿಶ್ಚಿತವಾಗಿಯೂ ಹೇಳಬಲ್ಲೆ. ಹೆಂಗಸು ಮಕ್ಕಳನ್ನು ಹಡೆಯಬೇಕು; ಅಡುಗೆ ಮಾಡಬೇಕು ಎಂಬೆರಡೆ ಕೆಲಸಗಳು ಅವರ ಪಾಲಿನವು. ಇದರಲ್ಲಿಯೆ ಅವರ ಜೀವನದ ಇತಿಕರ್ತವ್ಯವುಂಟು ಎಂದು ಮುಂತಾಗಿ ಹೇಳುವವರೇ, ಇನ್ನೊಂದು ಪ್ರಸಂಗದಲ್ಲಿ 'ಹೆಂಗಸರ ಬುದ್ಧಿ ಅಡುಗೆಮನೆಯಲ್ಲಿ' ಎಂದೂ ಹೀಯಾಳಿಸಿ ನುಡಿಯುವರು! ನಮ್ಮ ಪಾಲಿನವೆಂದು ಹೇಳುವ ಮೇಲಿನ ಎರಡು ಕೆಲಸಗಳಲ್ಲಿ ಒಂದರ ಹೊಣೆಯನ್ನು ದೇವರೆ ನಮ್ಮ ಮೇಲೆ ಹೊರಿಸಿದ್ದಾನೆ, ಅಲ್ಲದೆ ಅದು ನಮ್ಮದೆ ಸ್ವಾಭಾವಿಕವಾದ ಕೆಲಸವೂ ಅಹುದು. ಜಗಳಗಂಟರೆಂದು ಹೆಂಗಸರಿಗೆ ಹೆಸರಿಡುವ ಗಂಡಸರು, ಹೊಡೆದಾಡಿ ಕಾದಾಡಿ ಜಗತ್ತನ್ನು ನಾಶಗೊಳಿಸುವ ಉದ್ಯೋಗದಲ್ಲಿ ಹೆಮ್ಮೆಯಿಂದ ಮುಂದುವರಿಯುತ್ತಿರುವರಾದರೂ ನಾವು ಮಾತ್ರ ಗಂಡಸರ ಈ ನಿಸರ್ಗವಿರುದ್ಧವಾದ ನಡೆವಳಿಯ ಅನುಕರಣಮಾಡದೆ, ಜಗತ್ತು ಅಜರಾಮರವಾಗಿರುವುದಕ್ಕೆ ನಮ್ಮ ಜೀವಗಳನ್ನೆ ಕುತ್ತಿಗೆ ಈಡುಮಾಡಿಕೊಳ್ಳುತ್ತಿರುತ್ತೇವೆ. ಆದುದರಿಂದ, ತನ್ನ ನಡೆಯೆ ಸರಿಯಿಲ್ಲದ ಒಬ್ಬರು ಮತ್ತೊಬ್ಬರಿಗೆ ಹೇಳುವ ಬುದ್ಧಿಯ ಮಾತುಗಳಿಗೆ ಏನು ಬೆಲೆ?

ಅಡುಗೆಯು ಬಹಳ ಪವಿತ್ರವಾದ ಕೆಲಸ; ಪರೋಪಕಾರದ ಕೆಲಸವೆಂದು ಗಂಡಸರು ಕೆಲರು ಆಗ ಈಗ ಉಸುರುತ್ತಿರುವುದುಂಟು. ನಿಜವಾಗಿಯೂ ಪವಿತ್ರಕಾರ್ಯವೆ ಇದಾಗಿದ್ದರೆ ಅವರೆ ಏಕೆ ಇದನ್ನು ಕೈಕೊಂಡು ತಮ್ಮ ಜನ್ಮಸಾರ್ಥಕ್ಯವನ್ನು ಮಾಡಿಕೊಳ್ಳುವುದಿಲ್ಲ? ಹಾಗೆ ನೋಡಿದರೆ ಪೂರ್ವಪರಂಪರಾಭಿಮಾನಿಗಳೂ ಸನಾತನಿಗಳೂ ಆದ ಸಜ್ಜನ ಪುರುಷರು ನಳ-ಭೀಮಸೇನ-ಪ್ರಣೀತ ಈ ವಿದ್ಯೆಯನ್ನು ಹೆಂಗುಸರ ಕೈಗೆ ಹೋಗಗೊಡುವುದು ಬಹಳ ಅನ್ಯಾಯ; ಅಪಮಾನ. ಮನೆಯಲ್ಲಿ ಸಾಲಿಗ್ರಾಮ ಪೂಜೆ, ವೇದಾಧ್ಯಯನಾದಿ ವಿಷಯಗಳನ್ನು ತಮ್ಮ ಕೈಯಲ್ಲಿಯೆ ಇಟ್ಟುಕೊಂಡಂತೆ ಅಡುಗೆಯ ಮಹಾಕಾರ್ಯದ ಅಧಿಕಾರವನ್ನಾದರೂ ತಮ್ಮ ಕಡೆಗೆ ಇಟ್ಟುಕೊಳ್ಳುವುದು ಯುಕ್ತವಾಗಿದೆ. ಸ್ವಯಂ-ಪಾಕ ವ್ರತವು ಬಹಳ ಶ್ರೇಷ್ಠವಾದುದೆಂದು ವೈದಿಕ ಧರ್ಮಾಭಿಮಾನಿಗಳಿಗೆ ಬೇರೆ ಹೇಳಬೇಕಾಗಿಲ್ಲ. ನಿಜವಾಗಿಯೂ 'ಬಲ್ಲವರು' ಗಂಡುಸರೇ. ಆದುದರಿಂದ ಗಂಡಸರೆಲ್ಲರೂ ಈ ಪ್ರಾಚೀನ ವ್ರತವನ್ನು ಕೈಕೊಂಡುದಾದರೆ ಪರಸೌಖ್ಯದ ಬಗ್ಗೆ ಏನು ನಿಶ್ಚಿತವಾಗಿ ಹೇಳಲಿ

ಕಾಗದಿದ್ದರೂ ಇಹಸೌಖ್ಯವು ಮಾತ್ರ ನಿಶ್ಚಿತವಾಗಿ ಲಭಿಸುವುದೆಂದು ನಾನು ಹೇಳಬಲ್ಲೆ. ಹೆಂಗಸರು ಸಹ ತಮ್ಮ ಅಡುಗೆಯ ಹಕ್ಕು ಹೋಯಿತೆಂದು ಸತ್ಯಾಗ್ರಹವನ್ನು ಆರಂಭಿಸಲಿಕ್ಕಿಲ್ಲವೆಂದೂ ನಾನು ಆಶ್ವಾಸನವನ್ನು ಕೊಡಬಲ್ಲೆ.

ಅಡುಗೆಮನೆಯೆಂದರೆ ನನ್ನ ಮೈಗಂತೂ ಮುಳ್ಳುಬರುವುದು. ನಮ್ಮ ಹೆಣ್ಣುಜಾತಿಯ ಬುದ್ಧಿವಂತಿಕೆ, ಕಲ್ಪನಾಶಕ್ತಿ ಪ್ರತಿಭೆಗಳೆಲ್ಲ ಒಲೆಯ ಮುಂದೆ ಕುಳಿತು ಕುಳಿತು ಸುಟ್ಟುಹೋಗಿವೆ; ನಮ್ಮ ಕಣ್ಣಲ್ಲಿ ಸೇರುವ ಅಲ್ಲಿಯ ಹೊಗೆಯಿಂದ ನಮ್ಮ ದೃಷ್ಟಿಯು ಮಂದವಾಗಿ ಹಿಂದುಮುಂದಿನದೇನೂ ತಿಳಿಯದಾಗಿದೆ. ನನಗಂತೂ ದಿನದಿನಕ್ಕೆ ಮನವರಿಕೆಯಾಗ ಹತ್ತಿದ ಮಾತೆಂದರೆ, ಹೆಂಗಸರು ಮನುಷ್ಯರಲ್ಲಿ ಎಣಿಸಲ್ಪಡಬೇಕಾಗಿದ್ದರೆ ಅವರು ಮೊದಲು ಅಡುಗೆಮನೆಯಿಂದ ಹೊರಬರಬೇಕು. ಅಥವಾ ಅದನ್ನೆ ಹೀಗೂ ಹೇಳಬಹುದು. ಅಡುಗೆಮನೆಯನ್ನು ಕೆಡವಿಬಿಡುವ ವರೆಗೆ ಹೆಂಗಸರ ಉದ್ಧಾರವಾಗಲಾರದು. ಕೆಲರು ಕೇಳಬಹುದು. ಅಡುಗೆಮನೆಯಿಲ್ಲದೆ ಇದ್ದರೆ ಜನಗಳು ಬದುಕುವುದಾದರೂ ಹೇಗೆ, ಎಂದು. ಅದಕ್ಕೆ ನಾನು ಪ್ರತಿಯಾಗಿ ಹೀಗೆ ಕೇಳಬಹುದು. ದೇಹಕ್ಕೆ ಹೊಟ್ಟೆ ಇದೆಯೆಂದು ಮನೆಮನೆಗೂ ಅಡುಗೆಮನೆ ಇರಬೇಕೆನ್ನುವ ಜನಗಳಲ್ಲಿ, ತಮಗೆ ತಲೆ (ಮನಸು) ಇದೆಯೆಂದು ಅದಕ್ಕಾಗಿ ಒಂದು ಪುಸ್ತಕ ಕೋಣೆಯನ್ನೂ ಇಟ್ಟುಕೊಂಡಿರುವವರೆಷ್ಟು ಮಂದಿ? ಮನೆಯಲ್ಲಿ ಗ್ರಂಥಸಂಗ್ರಹವು (ಅಭ್ಯಾಸದ ಕೋಣೆ) ಇಲ್ಲದಿದ್ದುದಕ್ಕೆ ಯಾವ ಜನಗಳು ತಾವು ದನಗಳಾಗಿಲ್ಲವೋ, ಅವರು ಮನೆಮನೆಗೆ ಅಡುಗೆಮನೆ ಇಲ್ಲದುದಕ್ಕೆ ಸಾಯುವೆವೆಂದು ಭಾವಿಸಿಕೊಳ್ಳುವುದಾದರೂ ಏಕೆ?

ನಮ್ಮ ಗಂಡಸರು ಎಷ್ಟೋ ಮಂದಿ ಸಾರ್ವಜನಿಕ ಗ್ರಂಥಸಂಗ್ರಹಾಲಯಗಳಿಂದ ತಮಗೆ ಬೇಕಾದ ಪುಸ್ತಕಗಳನ್ನು ತಂದು ತಮ್ಮ ಬುದ್ಧಿಯ ಹಸಿವನ್ನು ಹಿಂಗಿಸಿಕೊಳ್ಳುವುದಿಲ್ಲವೆ? ಹಾಗೆಯೆ ನಮ್ಮ ಹೊಟ್ಟೆಯ ಹಸಿವನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಸಾರ್ವಜನಿಕ ಪಾಕಗೃಹಗಳಿಂದಲೆ ಅಡುಗೆಯನ್ನು ತರಿಸಿ ಮಧ್ಯಾಹ್ನದ ಕೆಲಸವನ್ನು ಏಕೆ ಬಗೆಹರಿಸಿಕೊಳ್ಳಬಾರದು? ಇದು ಸಹಕಾರ, ಸಂಘಗಳ ಯುಗ. ಸಾವುಕಾರಿಕೆಯು ವ್ಯಕ್ತಿಶಃ ಇದ್ದುದು ಈಗ ಬ್ಯಾಂಕುಗಳಂತಹ ಸಂಸ್ಥೆಗಳ ಕೈಗೆ ಹೋಗಿದೆ. ಒಕ್ಕಲತನವು ಸಹ ಎಕರೆ, ಗುಂಠೆಯ ತುಂಡು, ಪಟ್ಟಿಗಳಿಗಿಂತ ಸಾಮೂಹಿಕ ರೀತಿಯಲ್ಲಿ ಸಾಗಿಸಲ್ಪಟ್ಟರೆ ಆಧುನಿಕ ಟ್ರಾಕ್ಟರ ಮೊದಲಾದ ಯಂತ್ರಸಾಧನಗಳ ಲಾಭವನ್ನು ಪಡೆದು ಇದಕ್ಕೂ ನೂರಾರು ಪಟ್ಟು ಹೆಚ್ಚು ಹುಟ್ಟುವಳಿಯನ್ನು ಮಾಡಿಕೊಳ್ಳಬಹುದೆಂದು ಮೊನ್ನಿನ ಬೆಳಗಾವಿ ಒಕ್ಕಲತನದ ಪ್ರದರ್ಶನದಿಂದ ಕಂಡುಕೊಂಡುದಾಯ್ತು. ಹಿಂದಕ್ಕೆ ಧಾರವಾಡದಲ್ಲಿ ನೀರನ್ನು ಮನೆಮನೆಗೆ ತಾವೇ ಪೂರೈಸಿಕೊಳ್ಳಬೇಕಾಗುತ್ತಿದ್ದುದರಿಂದ ಆಗುತ್ತಿದ್ದ ಕಷ್ಟವನ್ನು ದೇವರೆ ಬಲ್ಲ. ನನ್ನನ್ನು ಧಾರವಾಡಕ್ಕೆ ಕಳುಹಿ ಕೊಡುವುದಕ್ಕೆ ನಮ್ಮ ತಂದೆಯವರು ಸಿದ್ಧರಾಗಿದ್ದರೂ ತಾಯಿಗೆ ಅದು ಸ್ವಲ್ಪವೂ ಮನಸಿಗೆ ಬಾರದಿದ್ದುದಕ್ಕೆ ಕಾರಣವಾದರೂ ಏನು? ಆಯ್ತು; ಯಾವುದೇ ಮಹಾರಾಯರ ಪುಣ್ಯದಿಂದ ಕೆಲಗೆರೆಯ ರಾಡಿ ಅಂಬಲಿಯಂತಹ ನೀರೆ ಆಗಲೊಲ್ಲದೇಕೆ ಎಂಬುದಕ್ಕೆ ಕಾರಣಗಳು ನಮಗೆ ಸಹಜವಾಗಿ ದೊರೆಯಲಾರಂಭಿಸಿದುವು. ಧಾರವಾಡದಲ್ಲಿ ನೀರಿನ ಅರಬು ಇದ್ದಾಗ ಆ ಸುಡುಗಾಡ ನೀರನ್ನು-ಅಹುದು ಧಾರವಾಡದಲ್ಲಿ ಆಗ ಸುಡುಗಾಡ ನೀರೇ ಇದ್ದುವು; ಎಂದರೆ ಸ್ಮಶಾನದ ಹತ್ತರಿನ ಗಚ್ಚಿನ ಬಾವಿ ನೀರೇ ಎಲ್ಲರಿಗೂ- ತರುವುದಕ್ಕೆ ಎಷ್ಟೊಂದು ಜನರನ್ನು ನೀರು ಹೊರುವವರನ್ನು ಅರ್ಥಾತ್ ಬುದ್ಧಿಗೇಡಿಗಳನ್ನು ಮಾಡಬೇಕಾಗುತ್ತಿದ್ದಿತು! ನೀರು ಹೊರುವುದು ಎಷ್ಟೋ ಮಟ್ಟಿಗೆ ತಪ್ಪಿದ್ದರಿಂದ ಅಷ್ಟು ಜನರಿಗೆಲ್ಲ ಬೇರೆ ಹೆಚ್ಚಿನ ಉದ್ಯೋಗ ಮಾಡಿ ತಮ್ಮ ಉನ್ನತಿಯನ್ನು ಮಾಡಿಕೊಳ್ಳುವುದಕ್ಕೆ ಇಂಬು ದೊರೆತಂತಾಗಲಿಲ್ಲವೇ?

ಹಾಗೆ ಹೆಂಗಸರಿಗೆ ಅಡುಗೆ ತಪ್ಪಿದರೆ ಎಷ್ಟು ಸೊಗಸಾದೀತು! ಅಡುಗೆಮನೆಯಲ್ಲಿ ಸಿಕ್ಕಿಕೊಂಡು ಬಿದ್ದಿರುವುದರಿಂದ ಹಿಂದೂದೇಶದ ಅರ್ಧ ಜನಾಂಗವು ಸುಮ್ಮನೆ ಒಲೆಯ ಮುಂದೆ ಸುಟ್ಟುಕೊಳ್ಳುತ್ತ ಕುಳ್ಳಿರಬೇಕಾಗಿದೆ! ಸಾರ್ವಜನಿಕ ಅಡುಗೆಮನೆಗಳಾಗಿ, ಈಗ ಡೇರಿಯಿಂದ ಹಾಲು, ನಳದಿಂದ ನೀರು, ಲೈಬ್ರರಿಗಳಿಂದ ಪುಸ್ತಕಗಳು ಬರುವಂತೆ ಊಟವನ್ನೂ ತರಿಸಿಕೊಳ್ಳುವ ಅನುಕೂಲತೆಯು ಆದರೆ ಹೆಣ್ಣುಮಕ್ಕಳಿಗೆ

ತಮ್ಮ ಆತ್ಮವಿಕಾಸವನ್ನು ಮಾಡಿಕೊಳ್ಳಲು ಎಷ್ಟೊಂದು ಅನುವು ದೊರೆಯುವುದು! ಚಿತ್ರಕಲೆ, ಗ್ರಂಥಲೇಖನ, ಹೊಲಿಗೆ, ನೇಗಿ, ಶಿಶುಶಿಕ್ಷಣ, ವೈದ್ಯಕೀಯ ಮೊದಲಾದ ಹಲವು ಉಪಯುಕ್ತವಾದ ಕೆಲಸಗಳಲ್ಲಿ ಹೆಣ್ಣುಮಕ್ಕಳು ತಮ್ಮ ಆಯುಷ್ಯವನ್ನು ಸಾರ್ಥಕ ಮಾಡಿಕೊಳ್ಳಬಹುದು. ತಮ್ಮಲ್ಲಿರುವ ಒಂದು ಕಲೆ, ಒಂದು ವಿದ್ಯೆ, ಒಂದು ಕೌಶಲ್ಯವನ್ನು ಹೆಚ್ಚಿಸಿಕೊಂಡು ತಮಗೂ ಲೋಕಕ್ಕೂ ಕಲ್ಯಾಣವನ್ನು ಮಾಡಬಹುದು. ನಮ್ಮಲ್ಲಿ ಅಡುಗೆಯ ಮನೆಯಲ್ಲಿ ಕೊಳೆಯಬೇಕಾದುದರಿಂದ ಆದೆಷ್ಟು ಮ್ಯಾಡಂಕ್ಯುರಿ, ಮಿಸ್ ಫ್ಲಾರೆನ್ಸ ನಾಯಿಟಿಂಗೇಲ, ಮಿಸ್ ಎಡಿತ್ ಸಿಟವೆಲ್‌ರಂತಹರು ಮೊಗ್ಗಿನಲ್ಲಿಯೆ ಬಾಡಿ ಒಲೆಯ ಜಳಕ್ಕೆ ಕಮರಿ ಹೋಗಿರುವರೊ, ಹೋಗುತ್ತಲಿರುವರೊ ಹೇಳಲಾಸಲ್ಲ! ಆದಕಾರಣ ನಮ್ಮ ನಾಡಿನ ಬೌದ್ಧಿಕ ಶಕ್ತಿಯ ಅರ್ಧಭಾಗವು ವ್ಯರ್ಥವಾಗಿ ಹಾಳಾಗುತ್ತಿರುವುದನ್ನು ಉದ್ಧರಿಸಬೇಕಾಗಿದ್ದರೆ ಅಡುಗೆಮನೆಯೆಂಬ ಸೆರೆಮನೆಯನ್ನು ಮೊದಲು ನೆಲಸಮ ಮಾಡಬೇಕು.

ಅಡುಗೆಮನೆ ಹಾಳಾದರೆ ಇನ್ನೂ ಒಂದು ಬಗೆಯಿಂದ ಹಿತವಾಗತಕ್ಕುದಿದೆ. ದಿನದಿನಕ್ಕೂ ಶಾಸ್ತ್ರೀಯ ಜ್ಞಾನವು ಹೆಚ್ಚಾಗುತ್ತಲಿದೆ. ಒಂದು ಅಡುಗೆಯೆಂದರೆ, ಒಂದಿಷ್ಟು ಹಿಟ್ಟು ಬೇಳೆ ತಕ್ಕೊಂಡು ಅವನ್ನಿಷ್ಟು ಕುಚ್ಚಿಟ್ಟರೆ ಕೆಲಸವು ತೀರಲಿಲ್ಲ. ಅಡುಗೆಯಲ್ಲಿಯೂ ಅನೇಕ ಸುಧಾರಣೆಗಳು ಆಗಬೇಕಾಗಿವೆ. ಋತುಗಳಿಗೆ ಅನುಸರಿಸಿ, ಆರೋಗ್ಯಮಾನಕ್ಕನುಸರಿಸಿ ಅಡುಗೆಯಲ್ಲಿ ಕಾಲಕಾಲಕ್ಕೆ ತಕ್ಕ ವ್ಯತ್ಯಾಸಗಳನ್ನು ಮಾಡುವುದಕ್ಕೆ ಹೊಸ ಶಾಸ್ತ್ರೀಯ ಪದ್ಧತಿಯನ್ನು ಬಲ್ಲ ಮೇಲ್ವಿಚಾರಕರು ತಮ್ಮ ಕೈಕೆಳಗೆ ಬಲ್ಲವರನ್ನು ಕೆಲಸಕ್ಕೆ ನೇಮಿಸಿಕೊಂಡು ನಡೆಯಿಸಿದ ಸಾರ್ವಜನಿಕ ಪಾಕಶಾಲೆಯಷ್ಟು ಸ್ವಚ್ಛವಾದ ಸಶಾಸ್ತ್ರೀಯವಾದ ಊಟದ ಜೀನಸುಗಳು ಮನೆಯಲ್ಲಿ ಸಿದ್ಧವಾಗುವುದು ಸ್ವಲ್ಪ ಕಷ್ಟ. ಹೊಗೆಯ ಲವಲೇಶವೂ ಇಲ್ಲದ ಹೊಸಪದ್ಧತಿಯ ಒಲೆಯ ಮೇಲೆ ಮಾಡಲ್ಪಡುವ ಅಡುಗೆಗೆ ಸಾಮಾನ್ಯ ಮನೆಗಳಂತೆ ಹೊಗೆಸುತ್ತಿನ ವಾಸನೆ ಬರುವ ಸಂಭವವಿಲ್ಲ. ಆರೋಗ್ಯದ ನಿಯಮ, ಸ್ವಚ್ಛತೆಯ ಕಲ್ಪನೆಯೆ ಇಲ್ಲದೆ ಬೇಕಾದಂತಹ ಪಾತ್ರೆಗಳಲ್ಲಿ, ಬೇಕಾದ ಹಾಗೆ ಕೈ ಅದ್ದಿ ಮಾಡುವ ಅಡಿಗೆಗಿಂತ ಯಂತ್ರಗಳ ನೆರವಿನಿಂದಲೆ ಸಿದ್ಧವಾಗುವ ಪದಾರ್ಥಗಳು ಹೆಚ್ಚು ಶುಚಿಯಾಗಿರುವುದುಂಟು. ನಮ್ಮ ಜನಸಾಮಾನ್ಯರಿಗೆ ಪದಾರ್ಥಗಳನ್ನು ಹೆಚ್ಚು ಮಸಾಲೆ ಹಾಕಿ, ಅಥವಾ ಹೆಚ್ಚು ಸಿಹಿ ಮಾಡಿ ತಿನ್ನುವ ಚಟವಿದ್ದು ಇದರಿಂದ ಸುಮ್ಮನೆ ಅನಾರೋಗ್ಯಕ್ಕೆ ಗುರಿಯಾಗುತ್ತಲಿರುವರೆಂದು ಡಾಕ್ಟರುಗಳ ಅಭಿಪ್ರಾಯವಿದೆ. ಊರಿಗೊಂದು ಒಳ್ಳೆ ಪಾಕಶಾಲೆಯಿದ್ದು ಅದು ಶಾಸ್ತ್ರೀಯ ರೀತಿಯಿಂದಲೂ ರಾಷ್ಟ್ರೀಯ ಭಾವನೆಯಿಂದಲೂ ನಡೆಯಿಸಿದ್ದಾದರೆ ನಮ್ಮ ಜನರ ಆರೋಗ್ಯಾಭಿವೃದ್ಧಿಯಾಗಿ ಹಿಂದೂ ಜನರ ಆಯುರ್ಮಾನವೂ ಹೆಚ್ಚಾಗದಿರಲಾರದು.

ಆರ್ಥಿಕ ಸಂಕಷ್ಟದ ಈಗಿನ ಕಾಲದಲ್ಲಿ ಇನ್ನೂ ಒಂದು ದೃಷ್ಟಿಯಿಂದಲೂ ಈ ಸಾರ್ವಜನಿಕ ಅಡುಗೆ ಮನೆಗಳಾಗುವುದು ಅವಶ್ಯವೆಂದು ತೋರುತ್ತದೆ. ಒಂದು ಪದಾರ್ಥವನ್ನು ಸಣ್ಣ ಪ್ರಮಾಣದಲ್ಲಿ ಸಿದ್ಧಪಡಿಸಲು ಬರುವ ವೆಚ್ಚಕ್ಕಿಂತ ಅದನ್ನೇ ಬಹಳ ದೊಡ್ಡ ಪ್ರಮಾಣದಲ್ಲಿ ತಯಾರಿಸಿದರೆ ಎಷ್ಟೋ ಪ್ರಮಾಣದಿಂದ ವೆಚ್ಚವು ಕಡಿಮೆ ಬರುತ್ತದೆಂದು ಎಲ್ಲರ ಅನುಭವದ ಮಾತು. ಆದಕಾರಣ ಸಾರ್ವಜನಿಕ ಪಾಕಶಾಲೆಗಳು ಅಸ್ತಿತ್ವದಲ್ಲಿ ಬಂದರೆ ಬಡಬಗ್ಗರಿಗೆ ಈಗಿನಕ್ಕಿಂತಲೂ ಕಡಿಮೆ ವೆಚ್ಚದಿಂದ ಬದುಕುವುದಕ್ಕೆ ಅನುಕೂಲವಾಗುವುದಲ್ಲದೆ ಅವರ ಹೆಣ್ಣುಮಕ್ಕಳಿಗೆ ಬಿಡುವು ಹೆಚ್ಚು ದೊರೆತು ಅವರಿಗೆ ಬೇರೆ ಕೆಲಸಗಳನ್ನು ಕೈಕೊಂಡು ತಮ್ಮ ಹುಟ್ಟುವಳಿಯನ್ನು ಹೆಚ್ಚಿಸಿಕೊಳ್ಳಲು ಆಸ್ಪದವು ದೊರೆಯುವಂತಿದೆ. ಆದುದರಿಂದ ನಮ್ಮ ರಾಷ್ಟ್ರೀಯ ಸರಕಾರದ ಈ ಕಾಲದಲ್ಲಿ ನಮ್ಮ ಸೋದರಿಯರು ಮನೆಮನೆಗಳಲ್ಲಿ ಅಡುಗೆ ಮಾಡಲಾಗದೆಂಬರ್ಥದ ಒಂದು ಬಿಲ್ಲನ್ನು ತಂದು ಬೇಗನೆ ಹೊಸ ಕಾಯಿದೆ ಮಾಡಿಸಿಕೊಂಡು ನಮ್ಮ ನಾಡಿನ ಏಳ್ಗೆಗೆ ನೆರವಾಗಬೇಕೆಂದು ಬೇಡಿಕೊಳುತ್ತೇನೆ. -'ಓರ್ವ ನವಯುವತಿ'

ಹೆಣ್ಣಿನ ವ್ಯಕ್ತಿತ್ವದ ನಿಜವಾದ ವಿಕಾಸವು ತಾಯ್ತನದಲ್ಲಿದೆ

(ಉತ್ತರ)

'ಜಯಂತಿ'ಯ ಮೊದಲನೆಯ ಸಂಚಿಕೆಯಲ್ಲಿ ಬಂದ 'ಮನೆ ಮನೆಗೆ ಅಡುಗೆಯ ಮನೆಗಳು ಬೇಕೆ?' ಎಂಬ ವಿವಾದಾತ್ಮಕವಾದ ಲೇಖನದ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಸಂಪಾದಕರು ಕೇಳಿದರು. ನಾನೆಂದೆ: 'ಗಂಡಸರ ಅಭಿಪ್ರಾಯವನ್ನು ಕೇಳುವ ಕಾರಣವೆ ಇಲ್ಲ; ಏಕೆಂದರೆ ಯಾವ ಗಂಡಸು ತಾನೆ, ತನ್ನ ಹೆಂಡಂತಿಯ ಕೈಯ ಸವಿಯೂಟವನ್ನು ಉಣ್ಣಲು ಹಾತೊರೆಯಲಿಕ್ಕಿಲ್ಲ? ಹೆಂಗಸರ ಅಭಿಪ್ರಾಯಗಳೇನಾದರೂ ತಿಳಿದಿವೆಯೆ?' ಅಡುಗೆಯ ಕಾಟ ತಪ್ಪುವ ಸುವರ್ಣಯುಗವು ಬಂದರೆ ಎಷ್ಟೋ ಹೆಂಗಸರು ಹಿಗ್ಗದಿರಲಾರರು; ಆದುದರಿಂದ ಅಂತಹ ವಿಚಾರಗಳ ಪ್ರಚಾರಕ್ಕೆ ಆರಂಭವಾದುದನ್ನು ನೋಡಿ-ಜಯಂತಿ ಪತ್ರಿಕೆಯಲ್ಲಿ ಅಂತಹ ಲೇಖನವನ್ನೋದಿ ಹಿಗ್ಗಿದವರು ಹಲವರುಂಟು. ಅದರಂತೆ ಆ ಲೇಖನವನ್ನೋದಿ ಅಸಹ್ಯಪಟ್ಟವರೂ ಕಡಿಮೆ ಇಲ್ಲವೆಂದು ಸಂಪಾದಕ ಮಹಾಶಯರು ಹೇಳಿದರು.

ಆದರೆ, ಬಾಯಿಮಾತಿನಿಂದ ಮಾತ್ರ ವಿರೋಧವನ್ನು ವ್ಯಕ್ತಪಡಿಸಿದ ಮಹಿಳೆಯರು ಅದನ್ನು ಬರೆದು ಕಳುಹದೆ ಇದ್ದುದನ್ನು ನೋಡಿದರೆ, ಒಳಗೊಳಗೆ ಅವರೂ ಅಡುಗೆಮನೆಯ ಕಡುಹಗೆಗಳ ಕೂಟಕ್ಕೆ ಸೇರಿದವರೇ ಇರಬಹುದೇನೊ ಎಂಬ ಸಂದೇಹವುಂಟಾಗುತ್ತಲಿದೆ. ಈ ವಿಷಯದಲ್ಲಿ ಕೆಲವು ಹೆಣ್ಣುಮಕ್ಕಳು ತಮ್ಮ ತಮ್ಮೊಳಗೆ ಚರ್ಚಿನಡೆಸಿದಾಗಿನ ಒಂದು ದೃಶ್ಯವು ಒಮ್ಮೆ ಕಣ್ಣಿಗೆ ಬಿದ್ದಿತು. ಅಡುಗೆ ಮನೆಯ ಪಕ್ಷವನ್ನೆತ್ತಿ ಮಾತಾಡುವವರಿಗೆಲ್ಲ ಎದುರಾಳಿಯಾಗಿದ್ದವಳು ಆಡಿದ ಮಾತು ಎದೆಯಲ್ಲಿ ನೆಟ್ಟು ಬೆನ್ನಿನಿಂದ ಹೊರಬೀಳುವಂತಿದೆ; "ಏನಿರೇ, ನೀವೆಲ್ಲ ಅಡುಗೆಮನೆಯಲ್ಲಿ ಹುದುಗಿಕೊಳ್ಳಲು ಇಷ್ಟು ಆತುರಪಡುತ್ತಿದ್ದೀರಲ್ಲ. ಏತಕ್ಕೆ ಗೊತ್ತೆ? ಹೇಡಿತನ ಅಥವಾ ಗಂಡಸರ ಹೆದರಿಕೆಯಲ್ಲದೆ ಬೇರಾವ ಕಾರಣವೂ, ಇಲ್ಲ ಇದಕ್ಕೆ. ನಿಮ್ಮ ಮನಸ್ಸಿನ ಆಳವನ್ನು ನೀವೆ ಅರಿತಿಲ್ಲ; ನಿಮ್ಮ ಮನಸ್ಸಿನ ಅಂತರಾಳದಲ್ಲಿ ಹೊಕ್ಕು ನೋಡಿದರೆ, ನಿಮಗೂ ಅಡುಗೆಮನೆಯ ಹೊರಗೆ, ಹೊಗೆಯ ಲವಲೇಶವೂ ಇಲ್ಲದ, ಸ್ವಚ್ಛ ವಾತಾವರಣದ ಪ್ರೀತಿಯು ಇಲ್ಲದಿಲ್ಲ."

ಅಡುಗೆಮನೆಗಳು ಇರಲೇಕೂಡದೆಂದು 'ಒರ್ವ ನವಯುವತಿ'ಯು ಬರೆದ ಲೇಖನವನ್ನೋದಿ ಹೆಣ್ಣುಮಕ್ಕಳಿಗೆ ಕೆಲವರಿಗೆ ಬಂದ ಸಿಟ್ಟಿಗಿಂತಲೂ ಎಷ್ಟೊ ಗಂಡಸರಿಗೆ ಆದ ವಿಷಾದವು ಎಷ್ಟೊ ಪಟ್ಟು ಹೆಚ್ಚಾಗಿದೆ. 'ಅಡುಗೆಮನೆಯು ಹೋದರೆ ಧರ್ಮವೆ ಮುಳುಗುವುದು, ಆರ್ಯಸಂಸ್ಕೃತಿಯು ಹಾಳಾಗುವುದು' ಎಂದು ಮುಂತಾಗಿ ನಿಡುಸುಯ್ಯುವವರುಂಟು. ಆದರೆ, ಈ ಸಮಸ್ಯೆಯನ್ನು ನಾನು ಈ ಬಗೆಯ ಭಾವನಾತ್ಮಕ ದೃಷ್ಟಿಯಿಂದ

ನೋಡುವುದಿಲ್ಲ. ಗಂಡಸರೆ ಹೆಣ್ಣುಮಕ್ಕಳನ್ನು ಅಡುಗೆಯ ಮನೆಯಲ್ಲಿ ಕೊಳೆಹಾಕಿರುವರೆಂದು ಸ್ತ್ರೀವರ್ಗದ ಭಾವನೆಯಾಗಿ, ಅವರು ಅದನ್ನು ಕೆಡಹುವುದಕ್ಕೆ ಹೊರಟಿದ್ದರೆ ಅತ್ಯಗತ್ಯವಾಗಿ ನೆಲಸಮಮಾಡಿಬಿಡಲಿ. ನಿಜವಾಗಿ ನೋಡಿದರ ಮನೆಯನ್ನು (ಅದರಲ್ಲಿ ಅಡುಗೆಮನೆಯೂ ಉಂಟು) ಮೊದಲು ನಿಲ್ಲಿಸಿದವಳು ಸ್ತ್ರೀಯು. ಗಂಡಸು ನೆಲೆಯಾಗಿ ನಿಲ್ಲುವ ನೆಚ್ಚಿಕೆಯ ಪ್ರಾಣಿಯಲ್ಲ. ಹೂವಿನಿಂದ ಹೂವಿಗೆ ಅಲೆವ ತಿರುಗಲನು ಗಂಡಸು; ಅವನನ್ನು ತನ್ನ ಒಲವು ನಲಿವುಗಳ ಮಾಟದಿಂದ ಮನೆಯಲ್ಲಿ ಕಾಲುಕಟ್ಟಿ ನಿಲ್ಲಿಸಿದವಳು ಹೆಂಗಸು,...... ಎಂದು ಸಮಾಜಶಾಸ್ತ್ರಜ್ಞರ ಸಿದ್ಧಾಂತಕ್ಕೆ ಪ್ರಾಚೀನ ಸ್ಥಿತಿಗತಿಗಳ ಸಂಶೋಧಕರ ಬೆಂಬಲವೂ ಇದೆ. ಆದುದರಿಂದ, ಮನೆಯನ್ನು (ಅದರೊಡನೆ ಅಡುಗೆ ಮನೆಯನ್ನೂ) ಹುಟ್ಟಿಸಿದ ಶ್ರೇಯಸ್ಸು ಅಥವಾ ಅಪಶ್ರೇಯಸ್ಸೂ ಹೊಣೆಗಾರಿಕೆಯೂ ಹೆಣ್ಣುಮಕ್ಕಳ ಪಾಲಿಗೆ ಇದೆ. ಆಗ ಅಡುಗೆ ಮನೆಕಟ್ಟಿದವರೇ ಈಗ ಕೆಡುಹಲು ಹೊರಟ ಕಾರಣವೇನು ಮತ್ತೆ? ಇದಕ್ಕೆ ಎರಡು ಕಾರಣಗಳು: ಕ್ರಿಯೆಗೆ ಪ್ರತಿಕ್ರಿಯೆ ಎಂಬ ಅಬಾಧಿತವಾದ ಸಿದ್ಧಾಂತವನ್ನಿಲ್ಲಿ ಕಾಣಬಹುದು. ಮನುಷ್ಯನು ಒಮ್ಮೆ ಬಯಸುವನು; ಅದು ಕೈಗೆ ಬಂದೊಡನೆ ಅದರಲ್ಲಿ ಬೇಸರವುಂಟಾಗುವುದು. ಒಂದು ವ್ಯಾಪಾರವನ್ನೋ ಉದ್ಯೋಗವನ್ನೋ ಮೊದಲು ಹಮ್ಮುವನು; ಮೊದಮೊದಲು ಅದನ್ನೆ ಹಾಸಿ ಅದನ್ನೆ ಹೊದ್ದುಕೊಳ್ಳುವುದರಲ್ಲಿ ಹಿಗ್ಗುಗೊಳ್ಳುವ ಮಾನವನಿಗೆ ಮುಂದೆ 'ತಾನು ಇದರಲ್ಲಿ ಸಿಕ್ಕಿಬಿದ್ದಿರುವೆನು ಸೆರೆ ಸಿಕ್ಕಿರುವೆನು' ಎಂಬ ಸಂದೇಹವುಂಟಾಗಿ (ಕೆಲಮಟ್ಟಿಗೆ ಅದು ನಿಜವಿರುವುದುಂಟು) ಮೊದಲು ತಾವು ಹಮ್ಮಿದುದನ್ನೆ ಮುರಿದುಹಾಕಲು ಹಂಬಲಿಸುವನು; ಇದು ಮನುಷ್ಯ ಸ್ವಭಾವ. 'ನವಯುವತಿ'ಯರು ಅಡುಗೆಯ ಮನೆಗಳನ್ನು ನೆಲಸಮ ಮಾಡಹೊರಟುದು ಈ ಕಾರಣದಿಂದಲೂ ಇರಬಹುದು. ಅಥವಾ ಇನ್ನೊಂದು ಕಾರಣವಿದು: ಗೆಳೆತನದಲ್ಲಿ ಇಬ್ಬರು ಗೆಳೆಯರು ಒಬ್ಬರೊಬ್ಬರನ್ನು ಅನುಕರಿಸುವುದರಿಂದ, ಅವರ ಸ್ವಭಾವಗಳು ಅದಲುಬದಲಾದುದನ್ನು ಕಾಣುತ್ತೇವೆ. ಯಾರು ಯಾವುದನ್ನು ಧ್ಯಾನಿಸುವರೊ ಅದೆ ಅವರಾಗುವರು. ಗಂಡು-ಹೆಣ್ಣಿನ ಹಲವು ಕಾಲದ ಗೆಳೆತನ, ಪರಸ್ಪರ ಚಿಂತನ ಮತ್ತು ಸತತವಾದ ಸನ್ನಿಧಾನದಿಂದ ಎಷ್ಟೋ ಮಟ್ಟಿಗೆ ಅವಳ ಸ್ವಭಾವವು ಇವನಲ್ಲಿ, ಇವನ ಸ್ವಭಾವವು ಅವಳಲ್ಲಿ ಒಡಮೂಡಿದ್ದುದು ನಿಜ. ಇದರ ಫಲಿತವೆಂದರೆ: ಅಲೆದಾಟಕ್ಕೆ ಮೆಚ್ಚಿದ್ದ ಗಂಡು ಮನೆಯನ್ನು ಬಯಸುತ್ತಿದೆ: ಹುಟ್ಟಾ 'ಸ್ಥಿರೆ'ಯೆಂದು ಸಿದ್ಧವಾದ ಹೆಣ್ಣು ಮನೆಯಿಂದ ಹೊರಬಿದ್ದು ಹಾರಾಡಲು ಹಂಬಲಿಸುತ್ತಿದೆ. ಕೆಲವೊಂದು ಅನುಭವವು ಬರುವ ವರೆಗೆ ಎಂದರೆ ತಲೆಗೆ ಬಡೆಯುವ ವರೆಗೆ ಇದು ಅನಿವಾರ್ಯ.

'ಮನುಸ್ಮೃತಿಯಲ್ಲಿ ಹೇಳಿದೆ, ಆದುದರಿಂಧ ಹೆಣ್ಣೆಂಬುದು ಮನೆಯಲ್ಲಿಯೆ ತೊಡಕಿಕೊಂಡಿರಬೇಕು,' ಎಂದು ಎಷ್ಟು ಕಿರಿಚಿಕೊಂಡರೂ ಈಗಿನ ಓಘವು ಒಮ್ಮಲೆ ತಿರುಗುವುದು ಸಾಧ್ಯವಿಲ್ಲ. ಅದಕ್ಕೆ ಸ್ವಲ್ಪಕಾಲವು ಬೇಕು. ಅಷ್ಟರಲ್ಲಿ ಗಂಡಸೂ ತನ್ನ ಮಾತಿನ ರೀತಿಯನ್ನು ಬದಲಿಸಿಕೊಳ್ಳಲು ಕಲಿಯಬೇಕು. 'ಹೆಂಗಸು ಮನೆಯಲ್ಲಿ ಅಂಟಿಕೊಂಡಿರಬೇಕು' ಎಂದು ಹಟಹಿಡಿಯದೆ ಅಂಟಿಕೊಂಡಿರುವುದು ಸಾಕೆಂಬ ವಿಚಾರಕ್ಕೆ ಬರಬೇಕು. ಜಗತ್ಪ್ರವಾಹವು ನಡೆದಿರುವುದು ಯಾರ ಹೊರಗಣ ಕಟ್ಟುಕಟ್ಟಳೆಗಳಿಂದಲ್ಲ; ಸೃಷ್ಟಿಯು ಎಲ್ಲವನ್ನೂ ತನ್ನ ಅಂಕೆಯಲ್ಲಿಟ್ಟು ಕೊಂಡಿದೆ. ಮನುವಿನ ಆಜ್ಞೆಯನ್ನು ಉಲ್ಲಂಘಿಸಬಹುದು. ಆದರೆ ಮಾನವಧರ್ಮವನ್ನು ಮಾತ್ರ ಯಾರಿಂದಲೂ ಮೀರಿಹೋಗುವುದಕ್ಕಾಗಲಿಕ್ಕಿಲ್ಲ; ಏಕೆಂದರೆ ಅದು ಮಾನವನ ಮಾತಲ್ಲ, ಸೃಷ್ಟನಿಯಮ; ಶಾಶ್ವತವಾದ ಸನಾತನ ಸತ್ಯದ ಅವಜ್ಞೆಯನ್ನು ಮಾಡಿ ಬದುಕುವುದು ಸಾಧ್ಯವಿಲ್ಲ.

ಹೆರಿಗೆಯ ಹೊಣೆಯು ಎಲ್ಲಿಯ ವರೆಗೆ ಹೆಂಗಸಿನ ಮೇಲಿದೆಯೊ ಅಲ್ಲಿಯ ವರೆಗೆ ಹೆಂಗಸು, ಗಂಡಸಿನಂತೆ ಸಿಕ್ಕಲ್ಲಿ ಸಿಕ್ಕಂತೆ ಅಲೆದಾಡಲು ಆರಳು. ಮಕ್ಕಳನ್ನು ಪಡೆದು ಅವುಗಳನ್ನು ಲಾಲಿಸಿ ಪಾಲಿಸಿ, ತನ್ನ ಅಮೃತ ಹಸ್ತದಿಂದ ಮುಂಡಾಡಿ, ಪ್ರಪಂಚಕ್ಕೆಲ್ಲ ಚಿರಂಜೀವಿಯಾಗೆಂದು ಹರಸಿ ಅದನ್ನು ಸಾರ್ಥವಾಗಿ ಮಾಡುವ ತಪಃಸಾಮರ್ಥ್ಯವು ಹೆಣ್ಣಿನಲ್ಲಿದೆ. ಈ ಸಾಮರ್ಥ್ಯವನ್ನು ಸಂಪಾದಿಸಲು ಮಾಡಬೇಕಾದ ತಪಸ್ಸಿಗೆ ಅಲೆದಾಟವು ಬಾಧಕ. ತಪಸ್ವಿ ಎಂಬುದಕ್ಕೆ ಕಂನುಡಿಯಲ್ಲಿ 'ಕಿತ್ತಡಿ' ಎಂಬ ಮೇಳದ ಮಾತಿದೆ. ಕಿರಿದು ಅಡಿಯವರೆ ಕಿತ್ತಡಿ-ತಪಸ್ವಿ.

ಜಗತ್ತಿಗೆ ಅಮರತ್ವವನ್ನು ಸಂಪಾದಿಸಿಕೊಡುವ ಭಾಗ್ಯವು ಹೆಣ್ಣಿನ ಪಾಲಿಗಿದೆ. ಆದರೆ, ಕೆಲವೊಂದು ಸಂದರ್ಭದಲ್ಲಿ ಮನುಷ್ಯರ ಅಥವಾ ಪರಿಸ್ಥಿತಿಯ ತಪ್ಪಿನಿಂದ ಈ ಸೌಭಾಗ್ಯವೆ ಬಂಧನಕಾರಕವಾಗುವುದನ್ನು ನೋಡಿ, ಆಗುವ ತಪ್ಪನ್ನು ತಿದ್ದಿಕೊಳ್ಳುವುದಕ್ಕಷ್ಟೆ ಯತ್ನಿಸದೆ, ಮೂಲತಃ ತನ್ನ ಮೇಲಿದ್ದ ಹೊಣೆಯನ್ನೇ ತಪ್ಪಿಸಿಕೊಳ್ಳಲು ಹವಣಿಸುವುದು ಮಾತ್ರ ಆತ್ಮಘಾತವಾಗಿದೆ.

ಒರ್ವ 'ನವಯುವತಿ'ಯು ಅಡುಗೆಯ ಮನೆಯನ್ನು ಕೆಡುಹಬೇಕೆಂದು ಬರೆದುದು ಬಹಳ ಅರ್ಥಪೂರ್ಣವಾದ ಸಮಸ್ಯೆಯಾಗಿದೆ. ಅದು ಬರಿ ಅಡುಗೆಯ ಮನೆಯ ಮಾತಲ್ಲ. ಅಡುಗೆ ಮನೆಯೆಂಬುವಲ್ಲಿ ಸ್ತ್ರೀಯರ ಜೀವನದ ತೊಡಕುಗಳೆಲ್ಲವೂ ಸೇರಿಕೊಂಡಿವೆ. ಈಗ ಹೆಣ್ಣುಮಕ್ಕಳಿಗೆ ಮನೆ ಹಿಡಿದುಕೊಂಡಿರಬೇಕಾದುದು ಮುಖ್ಯವಾಗಿ ಅಡುಗೆಗಾಗಿ, ಹೊರಗೆ ಉಪನ್ಯಾಸಗಳು, ಪ್ರದರ್ಶನಗಳು, ಆಟ-ನೋಟಗಳು ಮೊದಲಾದ ಬೇಕಾದ ಹಿಗ್ಗು ಹೆಗ್ಗಳಿಕೆಯ ಪ್ರಸಂಗಗಳಿರಲಿ; ಸಂಜೆ-ಮುಂಜಾವಿನ ಅಡುಗೆಯ ನಿಮಿತ್ತದಿಂದ ಹೆಂಗಸು ಮನೆಯಲ್ಲಿರಬೇಕಾಗಿ, ಮೇಲ್ಕಾಣಿಸಿದ ಬಗೆಯ ಆನಂದೋತ್ಸವಗಳಿಗೆ ಅವರು ಎರವಾಗಬೇಕಾಗುತ್ತದೆ. ಇದು ಒಂದು ವ್ಯಾವಹಾರಿಕ ರೀತಿಯಲ್ಲಿ ಆಗಾಗ ಹೇಳುವ ದೊಡ್ಡ ಕಾರಣ. ಇದರೊಂದಿಗೆ ಅಷ್ಟು ಸ್ಪಷ್ಟವಾಗಿ ಆಡಲಿಕ್ಕೆ ಅಸಿಮಿಸಿಗೊಳ್ಳುವ ಬೇರೆ ಕೆಲವು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದೊಂದು ಚಿಳ್ಳೆಪಿಳ್ಳೆಗಳ ಜಂಜಡ. ಅಡುಗೆಮನೆ ಬೇಡವೆಂದರೆ ಅದರಲ್ಲಿ ಈ 'ಬ್ಯಾ ಪ್ಯಾಂ'ಗಳ ಗಲಾಟೆಯೂ ಬೇಡವೆಂಬ ಒಳಧ್ವನಿಯೂ ಕೇಳಬರುತ್ತಲಿದೆ. ಅದು ನಿಜ. ಏಕೆಂದರೆ : ಹೆಂಗಸು ಮನೆಯಲ್ಲಿ ಹೆಚ್ಚಾಗಿ ನಿಂತುಕೊಳ್ಳಬೇಕಾಗುತ್ತಿದ್ದುದು ಶಿಶುಸಂಗೋಪನದ ಹೊಣೆಯು ಅವಳ ಮೇಲಿದ್ದುದರಿಂದಲೆ. ಮನೆಯಲ್ಲಿರಬೇಕಾದ ಬಳಿಕ ಅಲ್ಲಿಯೆ ಇದ್ದುಕೊಂಡು (ಮಕ್ಕಳು ಮರಿಗಳನ್ನು ಆಡಿಸುತ್ತ) ಮಾಡಲು ಬರುವ ಗೃಹವ್ಯವಸ್ಥೆಯ ಅಧಿಕಾರವು ಅವಳ ಕಡೆಗೆ ಬರುವುದು ಕ್ರಮಪ್ರಾಪ್ತವಾಗಿದೆ. ಆದುದರಿಂದಲೆ ಅಡುಗೆ ಮನೆಯ ಒಡೆತನವು ಹೆಂಗಸಿನದೆಂಬ ರೂಢಿಯು ಅನಂತಕಾಲದಿಂದ ನಡೆದು ಬಂದಿದೆ.

ಗಂಡಸು ಈ ಪರಿಸ್ಥಿತಿಯ ಲಾಭಪಡೆದುಕೊಂಡು, ಹೆಂಗಸನ್ನು ಮನೆಯಲ್ಲಿ-ಅಡುಗೆ ಮನೆಯಲ್ಲಿಯೆ ತುರುಕಿಡುವುದಕ್ಕೆ ಹವಣಿಸಿದುದೂ ಸುಳ್ಳಲ್ಲ. ಅಂದಚೆಂದದ ಗರಿಗಳಿಗಾಗಿ ಬಂಧನಕ್ಕೊಳಗಾಗಬೇಕಾಗುವುದೆಂಬ ಅರಿವು ಉಂಟಾದರೆ, ನವಿಲು ತನ್ನ ಪುಚ್ಚಗಳನ್ನು ಒಂದರೆಗಳಿಗೆಯಾದರೂ ಇಟ್ಟುಕೊಳ್ಳಲು ಸಿದ್ಧವಾಗಲಿಕ್ಕಿಲ್ಲ. ಹೆಣ್ಣೂ ಮನುಷ್ಯ! ಮನುಷ್ಯನೆಂದರೆ ಬರಿ ಗಂಡುಸೆ ಅಲ್ಲ! ಹೆರಿಗೆಯ ಹೊಣೆಯು ಹೆಣ್ಣಿನ ಪಾಲಿಗೆ ಬಂದ ತಪ್ಪಿಗಾಗಿಯೆ ಅದು, ತನಗೆ ಮನೆಯೆಂಬ ಸೆರೆಯಲ್ಲಿ ಸಿಕ್ಕಿಬೀಳಬೇಕಾಗುವುದೆಂಬ ತಿಳಿವು ತಲೆದೋರಿದೊಡನೆಯೆ, ಅದರೊಳಗಿಂದ ಹೊರಬೀಳುವ ಎತ್ತುಗಡೆಯನ್ನು ನಡೆಯಿಸಿದ್ದರೆ ಸೋಜಿಗವೇನು? ಸಂತಾನ ನಿರೋಧದ ಕೃತ್ರಿಮ ಸಾಧನಗಳು ಸುಲಭವಾಗಿ, ಬೇಕಾದ ಹಾಗೆ ಸಿಕ್ಕಲಾರಂಭಿಸಿದ ಬಳಿಕ, ಹೆಣ್ಣಿನ ಈ ಪ್ರಯತ್ನಗಳಿಗೆ ಒಂದು ಬಗೆಯ ವಿಶೇಷ ಮೂರ್ತಸ್ವರೂಪವು ಬರಲಾರಂಭಿಸಿದೆ.

ಭೌತಿಕಶಾಸ್ತ್ರ ಸಂಶೋಧಕರು, ಹೆಣ್ಣುಮಕ್ಕಳಿಗೆ ಇನ್ನೂ ಒಂದು ಬಗೆಯಿಂದ ಈ ವಿಚಾರದಲ್ಲಿ ತಾವು ನೆರವಾಗುವೆವೆಂದು ಕನವರಿಸುತ್ತಲಿದ್ದಾರೆ; ಈ ಶಾಸ್ತ್ರಜ್ಞರಿಗೆ ನಮ್ಮ ಪೌರಾಣಿಕ ಕಥೆಗಳೇ ಈ ಬಗೆಯ ಸ್ಫೂರ್ತಿಯನ್ನು ಕೊಟ್ಟಿದ್ದರೆ ನಾನರಿಯೆ. ನಮ್ಮ ಪ್ರಾಚೀನರಾದ ದ್ರೋಣ, ಕೃಪ ಮೊದಲಾದವರಂತೆ ಅರ್ವಾಚೀನ ಕುಂಭ-ಸಂಭವರನ್ನು ನಿರ್ಮಿಸಬೇಕೆಂದು ಈ ಶಾಸ್ತ್ರಜ್ಞರ ಹಂಬಲ. ಕೆಲವೊಂದು ಔಷಧಿಗಳ ಯೋಗದಿಂದ ಗಂಡಸು ಕೂಡ ಮಗುವಿಗೆ ಮೊಲೆಯೂಡಿಸಲು ಸಮರ್ಥನಾಗುವನೆಂದೂ ಅದರಿಂದ ಹೆಣ್ಣುಮಕ್ಕಳ ಕೆಲವೊಂದು ಶ್ರಮವು ಉಳಿದು ಅವರಿಗೆ ಹೆಚ್ಚು ತೆರವು ದೊರೆತು, ಮನೆಯಿಂದ ಹೊರಬೀಳಲಿಕ್ಕೂ ಅಡುಗೆಮನೆಯ ಹೊರಗಿನ ಕೆಲಸಗಳಿಗೆ ಕೈಯಿಕ್ಕಲಿಕ್ಕೂ ಆಸ್ಪದವುಂಟಾದೀತೆಂದೂ ಒಂದು ಎಣಿಕೆಯಿದೆ. ಇವುಗಳ ಶಕ್ಯಾಶಕ್ಯತೆಗಳನ್ನು ಹೇಳುವುದು ನನ್ನ ಅಳಿವಿನ ಹೊರಗಣ ವಿಷಯ. ಒಂದು ವೇಳೆ ಇದೆಲ್ಲವು ಸಾಧ್ಯವೆಂದು ತಿಳಿದರೂ, ನನಗೆ ತಿಳಿದ ಮಟ್ಟಿಗೆ ಹೆಣ್ಣುಮಕ್ಕಳ ಹೊಣೆಯು ಕಡಿಮೆಯಾದೀತೆಂದು ಎನಿಸುವುದಿಲ್ಲ. ಪ್ರಾಣವಾಯು ಮತ್ತು ಜಲಜನಕವಾಯುಗಳ ಸಂಯೋಗದಿಂದ (ಪ್ರಾ+೨ಜ) ನೀರು ಉಂಟಾಗುವುದೆಂದು ಚೆನ್ನಾಗಿ ಸಿದ್ಧವಾಗಿದ್ದರೂ ನಮ್ಮ ವಿಜಾಪುರ ಜಿಲ್ಲೆಯ ನೀರಿನ ಅರಬು ಇನ್ನೂ ಹಿಂಗಿಲ್ಲ!

ಆದರೆ ಒಂದು ಮಾತಿಗಾಗಿ ಮಾತ್ರ ಹೆದರಬೇಕಾಗಿದೆ. ಸಂತಾನ ನಿರೋಧದ ಕೃತ್ರಿಮ ಉಪಾಯಗಳು, ಎರಡೂ ಮಗ್ಗಲು ಹದನಾದ ಶಸ್ತ್ರದಂತಿದ್ದು-ಅಯೋಗ್ಯ ರೀತಿಯಿಂದ ಉಪಯೋಗಿಸಿದರೆ ಹಿಡಿವವರಿಗೂ ಸಮಾಜಕ್ಕೂ ಕೂಡಿಯೆ ಅಪಾಯಕಾರಕವಾಗಿವೆ. 'ಗಂಡಸು ತನ್ನನ್ನು ಅನ್ಯಾಯದಿಂದ ಮನೆಯಲ್ಲಿ ಸೆರೆಹಿಡಿದಿಡುತ್ತಲಿದ್ದಾನೆ' ಎಂಬ ಭಾವನೆಯಾಗಿ ಹೆಂಗುಸು ಈಗ ಸ್ವಲ್ಪ ತೂಕತಪ್ಪಿ ಆಟ-ಮಾಟಗಳನ್ನು ನಡೆಯಿಸಿದ್ದಾಳೆಂದು (ಪಶ್ಚಿಮದಿಕ್ಕಿನಲ್ಲಿ ನೋಡಿದರೆ) ಎನಿಸುತ್ತಲಿದೆ. ಅದರ ಪರಿಣಾಮವೆ 'ಅಡುಗೆಮನೆಗಳನ್ನು ಕೆಡುಹಬೇಕು' ಎಂಬ ಕೂಗು. ಗಂಡಸು ಹೆಂಗಸನ್ನು ಇಲ್ಲದ ರಿಕ್ಕಿನಲ್ಲಿ ಹಿಡಿದಿಡಬೇಕೆಂದಿದ್ದ ಅವಿಚಾರದ ಫಲವಿದು. 'ಹೆಂಗಸರ ಬುದ್ಧಿ ಅಡುಗೆಮನೆಯಲ್ಲಿ.' 'ಬಳೆ ಹಾಕಿಕೊಂಡವಳು,' 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬಿವೆ ಮೊದಲಾದ, ಈಗ ಅಪಾರ್ಥದಾಯಕವಾಗಿರುವ ಮಾತುಗಳನ್ನು ಮರೆತುಬಿಡಬೇಕು. 'ಹೆಂಗಸು ಮನೆಹಿಡಿದುಕೊಂಡಿರಬೇಕು', 'ಅಡುಗೆಮನೆಯೆ ಅವಳ ಕಾರ್ಯಕ್ಷೇತ್ರ' ಎಂದು ಮುಂತಾಗಿ ಈರ್ಷೆಯನ್ನು ಹುಟ್ಟಿಸುವ ಮಾತುಗಳಿಂದ ಹೆಣ್ಣುಮಕ್ಕಳ ಸ್ವಾಭಿಮಾನಕ್ಕ ಸುಮ್ಮನೆ ಪೆಟ್ಟುಕೊಡುವುದೂ ಯುಕ್ತವಲ್ಲ.

ಹೆಂಗಸು ಅಡುಗೆಮನೆಯನ್ನು ತನ್ನ ಕೆಲಸಕ್ಕಾಗಿ ಆರಿಸಿಕೊಂಡುದು, ಪ್ರಪಂಚವು ಸುಸೂತ್ರವಾಗಿ ಸಾಗಲು ಇಬ್ಬರಿಗೂ ಅನುಕೂಲವೆಂದು, ಹೊರತು ಹೊರಗಿನ ಕೆಲಸಗಳನ್ನು ಅವಳು ಮಾಡಲೇಕೂಡದೆಂದಾಗಲಿ, ಮಾಡಲು ಅಸಮರ್ಥಳೆಂದಾಗಲಿ ಇದರ ಅರ್ಥವಲ್ಲ. ಅವಶ್ಯವೆನಿಸಿದರೆ, ಪ್ರಸಂಗಬಂದರೆ ಅವನ್ನೂ ಮಾಡುವ ಹಕ್ಕು ಅವಳಿಗಿಲ್ಲದಿಲ್ಲ. ಗಂಡಸು ಒತ್ತಾಯದಿಂದ ಇಂತಹದೇ ನಿನ್ನ ಕೆಲಸವೆಂದು ಆಕೆಗೆ ಬಲವಂತಪಡಿಸ ಹೋದರೆ, ಅದರ ಪ್ರತಿಕ್ರಿಯೆಯ ದುಷ್ಪರಿಣಾಮಗಳನ್ನವನು ಖಂಡಿತ ಅನುಭೋಗಿಸಬೇಕಾಗುವುದು; ನಮ್ಮ ನಾಡಿನಲ್ಲಿಯೂ ಅದರ ಸ್ವಲ್ಪಬಿಸಿಯು ತಾಕಲಾರಂಭಿಸಿದೆ. ಆದುದರಿಂದ, ಗಂಡಸು ತನ್ನ ಕೃತ್ರಿಮ ಬಂಧನಗಳನ್ನು ಹಾಕುವ ಗಡಿಬಿಡಿಗೆ ಹೋಗಲಾಗದು. ಸೃಷ್ಟಿಯ ಶಾಶ್ವತ ಬಂಧನಗಳ ಮೇರೆಯನ್ನು ಮೀರಿ ಬಾಳುವುದು ಯಾರಿಗೂ ಸಾಧ್ಯವಿಲ್ಲ. ಈ ಸನಾತನ ಧರ್ಮದಲ್ಲಿ ಶ್ರದ್ಧೆಯಿದ್ದವರು ಎಳ್ಳಷ್ಟೂ ಗಾಬರಿಯಾಗುವ ಕಾರಣವಿಲ್ಲ.

ಇಲ್ಲಿ ಇನ್ನೊಂದು ವಿಚಾರ: ಈಗಿನ ವಿಚಾರ ಪ್ರವಾಹವನ್ನು ಸ್ವಲ್ಪ ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ನಾವು ಅಪೇಕ್ಷಿಸುವ ರೀತಿಯಲ್ಲಿ ಅಡುಗೆಮನೆಯನ್ನು ಕಾಯ್ದಿಟ್ಟುಕೊಳ್ಳುವುದು ಸಾಧ್ಯವಿಲ್ಲ. ಪ್ರಪಂಚದ ಆರ್ಥಿಕ ಪರಿಸ್ಥಿತಿಯ ಒತ್ತಾಯದ ಮೂಲಕವಾಗಿ ಹೆಣ್ಣುಮಕ್ಕಳು ದುಡಿದು ಹೊಟ್ಟೆಹೊರಕೊಳ್ಳಬೇಕಾಗಿದೆ. ಹೊಟ್ಟೆಯ ಚಿಂತೆಯಿಲ್ಲದ ಸ್ವಲ್ಪ ಉಳ್ಳವರು ವಿದ್ಯಾಭಿರುಚಿಯಿಂದ ಓದುಬರೆಹಗಳನ್ನು ಕಲಿತು, ಒಂದಿಲ್ಲೊಂದು ಸಾರ್ವಜನಿಕ ಕೆಲಸದಲ್ಲಿ ಮನಸ್ಸುಹಾಕುವ ರೂಢಿಯು ಹೆಚ್ಚಾಗುತ್ತಲಿದೆ. ಅಲ್ಲದೆ, 'ಉಡುಪಿಯ ಕೃಷ್ಣಭವನ'ದ ಕೃಪೆಯಿಂದ ಮನೆಯ ಅಡಿಗೆಯು ಸಂಕ್ಷೇಪಕ್ಕೆ ಬರಲಾರಂಭಿಸಿದೆ. ಮನೆಗೆ ಅತಿಥಿ ಅಭ್ಯಾಗತರು ಬರುತ್ತಲೆ ಸಮೀಪದ 'ಶ್ರೀಕೃಷ್ಣ ಭವನ'ದಿಂದ ಬೇಕಾದ ತಿನಿಸನ್ನು ತರಿಸುವವರನ್ನು ಕಾಣಬಹುದು. ಹಬ್ಬಹುಣ್ಣಿಮೆಗಳಿಗೆ ಸಹ ಅಲ್ಲಿಂದಲೆ ಮುಖ್ಯ ಪಕ್ವಾನ್ನ ತರಿಸಿ ಅನ್ನ-ಸಾರು ಮನೆಯಲ್ಲಿ ಮಾಡುವ ಸಂಪ್ರದಾಯವಂತರೂ ಉಂಟು. ಹೀಗೆ ಅನೇಕ ಕಾರಣಗಳಿಂದ ಅಡುಗೆಮನೆಯು ನಮಗೆ ತಿಳಿಯದೆಯೆ ಸಣ್ಣ ಸಣ್ಣದಾಗುತ್ತ ನಡೆದಿದೆ.

ಆದರೆ, ಅದು ಸಂಪೂರ್ಣ ನಾಶವಾದೀತೆಂದು ತಿಳಿಯುವುದು ಮಾತ್ರ ಶುದ್ಧ ಭ್ರಾಂತಿ. ಎಷ್ಟೇ ಸಾರ್ವಜನಿಕ ಪಾಕಶಾಲೆಗಳಾಗಲಿ; 'ಶ್ರೀಕೃಷ್ಣ ಮಂದಿರ'ಗಳಾಗಲಿ; ಕೊನೆಗೆ ಅಡುಗೆಯ ಮೂಲೆಯಾದರೂ ಇಲ್ಲದಿರುವ ಮನೆಯು ದೊರೆಯಲಾರದು. ಇಲ್ಲಿ ಮನೆಯೆಂಬುದಕ್ಕೆ ಕುಟುಂಬಿಗಳ ಮನೆಯೆಂದರ್ಥ. ವ್ಯಕ್ತಿಗೊಂದು ಸ್ವಂತದ ರುಚಿಯೆಂಬುದು ಇದ್ದೇ ಇರುತ್ತದೆ. ಊಟದ ಅಂಗಡಿಗಳಲ್ಲಿ ಎಷ್ಟೇ ಸೊಗಸಾದ ಪದಾರ್ಥಗಳನ್ನೇ ಮಾಡಿರಲಿ; ಅದಕ್ಕೆ ಮನೆ ಅಡುಗೆಯ ಸವಿ ಬರಲಾರದು. ಮೇಲಾಗಿ ತನ್ನ ಅವರಿಗೆ ತಾನು ಸ್ವಂತದ ಕೈಯಿಂದ ಮಾಡಿಹಾಕಬೇಕೆಂಬ ಒಂದು ಔತ್ಸುಕ್ಯವು ಎಲ್ಲ ಪ್ರೇಮಜೀವಿಗಳಲ್ಲಿರುವುದುಂಟು. ಮನುಷ್ಯ ಸ್ವಭಾವದೊಳಗಿನ ಈ ಭಾಗವನ್ನು ನೆನಪಿಗೆ ತಂದುಕೊಂಡರೆ, ಅಡುಗೆಮನೆಗಳನ್ನು ಹುಡಿಗೂಡಿಸುವ ಕೆಲಸವೂ, ಪರಶುರಾಮನು ಇಪ್ಪತ್ತೊಂದು ಸಲ ನಿಃಕ್ಷತ್ರಿಯ ಪೃಥಿವಿಯನ್ನು ಮಾಡಿದ ಕಾರ್ಯವೂ (ಆದಾದ ಮೇಲೆಯೂ ಇಕ್ಷ್ವಾಕುವಂಶದ ಶ್ರೀರಾಮಚಂದ್ರನು ಹುಟ್ಟಿದನೆಂಬುದು ಗೊತ್ತಿರಲಿ) ಎರಡೂ ಒಂದೇ.

ಇಷ್ಟಾಗಿಯೂ ಅಡಿಗೆ ಮನೆಯನ್ನು ಕೆಡುಹಬೇಕೆಂದು ಎತ್ತುಗಡೆ ನಡೆಯಿಸಿದರೆ, ಕೆಡುಹುವವರ ಮೈಮೇಲೆಯೆ ಅದು ಬೀಳದಿರಲಾರದು. ಹೊಟ್ಟೆಯ ಪಾಡಿಗಾಗಿ ಕಾರಖಾನೆ, ಕಚೇರಿ ಮೊದಲಾದವುಗಳಲ್ಲಿ ಗಂಡಸಿನೊಡನೆ ಸ್ಪರ್ಧೆಮಾಡುತ್ತ ಅಲ್ಲಿ ಇಲ್ಲಿ ಅಲೆದಾಡುವುದರಲ್ಲಿ ಸ್ತ್ರೀಯರು ನಿಸರ್ಗದ ಮರ್ಯಾದೆಯನ್ನು ಮೀರಬೇಕಾಗುತ್ತದೆ. ಇದರ ದುಷ್ಪರಿಣಾಮಗಳು ಅವರ ಮೈ ಮತ್ತು ಮನಸ್ಸುಗಳ ಮೇಲೆ ಆಗಿ ಅವರ ಸ್ವಂತದ ಹಾನಿಯಾಗುವುದು; ನಾಡಿನ ಹಾನಿಯಾಗುವುದು. ಗಂಡಸು ತನ್ನ ದೃಷ್ಟಿಕೋನವನ್ನು ಬಲಿಸಿಕೊಂಡು ಸ್ವಲ್ಪ ವಿವೇಕಿಯಾಗಿ ವರ್ತಿಸಿದರೆ, ತಾವು ಹೊರಗೆ ಅಲೆದಾಡಿ ಒಬ್ಬರ ಆಳಾಗಿ ದುಡಿದು ತರುವುದರಲ್ಲಿ ಏನಾದರೂ ವಿಶೇಷ ಗೌರವವಿದೆಯೆಂದು ಹೆಂಗಸಿಗೂ ಎನಿಸಲಿಕ್ಕಿಲ್ಲ. ಗಂಡಿನ ತಪ್ಪು-ನಡೆವಳಿಯ ಮೂಲಕ ಹೆಣ್ಣಿನಲ್ಲಿ ಈ ಬಗೆಯ ಬುದ್ಧಿಯು ತಲೆದೋರಿದೆ. ಗಂಡು, ತಾನೆ ದುಡಿದು ತರತಕ್ಕವನು, ಸುಮ್ಮನೆ ಕುಳಿತು ತಿನ್ನುವ ಕೆಲಸಮಾಡುವುದು ಹೆಣ್ಣು ಎಂದು ಹೆಮ್ಮೆಪಟ್ಟುಕೊಳ್ಳುವುದರಿಂದ ಅಡಿಗಡಿಗೆ ಹೆಣ್ಣಿನ ಅಪಮಾನವಾಗುತ್ತಲಿದೆ; ಅದರಿಂದ ಹೊರಗಣಿಂದ ತಾನೂ ಗಳಿಸಿತಂದು, ಗಂಡಿನ ಹಂಗಿನೊಳಗಿಂದ ಪಾರಾಗಬೇಕೆಂಬ ಈರ್ಷಾಬುದ್ಧಿಯು ಹೆಣ್ಣಿನಲ್ಲಿ ಮೂಡುತ್ತಲಿದೆ.

ಬಾಳುವೆಯು ಸವಿಯಾಗಬೇಕಿದ್ದರೆ ಒಲವಿನವರು ಒಬ್ಬರೊಬ್ಬರ ಕಡೆಗೆ ವ್ಯಾಪಾರಿ ವೃತ್ತಿಯಿಂದ ನೋಡಲಾಗದು; ಅದರಿಂದ ಪ್ರೀತಿವಿಶ್ವಾಸಗಳು ಬೆಳೆಯಲಾರವು. ಪ್ರೀತಿ ವಿಶ್ವಾಸಗಳೆ ಸಂಸಾರಸೌಖ್ಯದ ತಳಹದಿ. ಅದುವೆ ಇಲ್ಲದಿದ್ದ ಬಾಳು ಬರಿಗೋಳು; ಸಂತೆಯೊಳಗಿನ ಭಂಡಾಟ. ಹೆಣ್ಣು ಏನೂ ಗಳಿಸದೆ ಮನೆಯಲ್ಲಿಯೆ ಇರುವುದೆಂದು ಆಕ್ಷೇಪಿಸುವ ಗಂಡು, ಸ್ವಲ್ಪ ಎಣಿಕೆಮಾಡಿ ನೋಡಲಿ, ಏನು ಕಾಣುವುದು? ಇಬ್ಬರೂ ದುಡಿಯುವುದಕ್ಕೆ ಹೋದರೆ ಮನೆಯಲ್ಲಿ ಅಡುಗೆಯವರಿಗೆ ಹಣ ತೆತ್ತಬೇಕಾಗುವದು. ಮಕ್ಕಳ ಆರೈಕೆ, ಉಪಚಾರಗಳಿಗಾಗಿ ಎಷ್ಟು ಹಣಕೊಟ್ಟು ಇಟ್ಟರೂ ದಾದಿಯು ತಾಯಿಗೆ ಸರಿದೊರೆಯಾಗಬಹುದೆ? ಆತ್ಮೀಯರೊಡನೆ ಕುಳಿತು ಉಂಡ ಊಟದ ಸವಿಯು, ಬಾಡಿಗೆಯ ಆಳಿನ ಕೈಯ ಬಡಿಸುವಿಕೆಯಲ್ಲಿ ದೊರೆತೀತೆ? ತಾಯಿಯ ಕರುಳು ಕಕ್ಕುಲತೆಗಳ ಸ್ವರ್ಗೀಯ ಆನಂದದ ಸ್ವಲ್ಪಾಂಶವನ್ನೂ ಅನುಭವಿಸದ ಮಕ್ಕಳು, ಮುಂದೆ ಮನುಷ್ಯರಾಗದೆ ರಕ್ಷಸರಾಗುವ ಹೆದರಿಕೆ ಇದೆ. ದಾದಿಯರು ತಾಯಂದಿರಿಗಿಂತಲೂ ಹೆಚ್ಚು ಶಿಶುಸಂಗೋಪನಾಶಾಸ್ತ್ರ, ಮಕ್ಕಳ ಮಾನಸಶಾಸ್ತ್ರ ಮೊದಲಾದವುಗಳಲ್ಲಿ ನಿಷ್ಣಾತರಾಗಿರಬಹುದು. ಆದರೆ, ಇದೆಲ್ಲವೂ ಬುದ್ಧಿ ಭಾವನೆ-ಹೃದಯವು ಇದೊಂದು ವಸ್ತುವೆ ಬೇರೆ. ಆ ತನ್ನತನವು ತಾಯಿಗಲ್ಲದೆ ಹೆರವರಿಗೆ ಬಾರದು. ಆದುದರಿಂದ ಈ ವಿಷಯದಲ್ಲಿ ತಂದೆಯೆಂಬುವವನು ತಾಯಿಗೆ ಎಷ್ಟು ಸಂಬಳವನ್ನು ಸಲ್ಲಿಸಿದರೂ ಅದು ಕಡಿಮೆಯೆ ಸರಿ. ತನ್ನ ಗೃಹಮಂತ್ರಿಯೆಂದು, ತನ್ನ ಸುಖದುಃಖ, ಅನುಕೂಲತೆ ಪ್ರತಿಕೂಲತೆಗಳಲ್ಲಿ ತನಗೆ ಹತ್ತರಿದ್ದು ನೆರವಾಗುವ ವ್ಯಕ್ತಿಯೆಂದು, ಗಂಡ ತನ್ನ ಹೆಣ್ಣಿಗೆ ಕೊಡತಕ್ಕ ಪ್ರತಿಫಲವೆಂದರೆ ಅವಳಿಗೆ ತನ್ನನ್ನೇ ಮೀಸಲ ಮುಡುಪಾಗಿರಿಸಿಕೊಳ್ಳುವುದಕ್ಕಿಂತ ಗುಲಗುಂಜಿತೂಕ ಕಡಿಮೆಯಾಗಿದ್ದುದು ಅದಾವುದೂ ನಡೆಯದು. ನಿಜಸ್ಥಿತಿಯು ಹೀಗಿರುವುದರಿಂದ ಗಂಡಿಗೆ ಇದು ತನ್ನದು, ಇದು ಹೆಣ್ಣಿನದೆಂಬ ತಾರತಮ್ಯವನ್ನು ಮಾಡುವುದಕ್ಕೆ ಬಾಯಿಯೇ ಇಲ್ಲ. ಮೇಲ್ಕಾಣಿಸಿದ ಬಗೆಯಿಂದ ಲೆಕ್ಕಮಾಡಿದರೂ ಹೆಣ್ಣಿಗೆ ಗಂಡು ಸಲ್ಲಿಸಬೇಕಾಗತಕ್ಕ ಹಣವು ಅವನ ಗಳಿಕೆಗಿಂತ ಸ್ವಲ್ಪವೂ ಕಡಿಮೆಯಾಗುವುದಿಲ್ಲ. ಆದುದರಿಂದ ಹೆಣ್ಣಿಗೆ 'ನೀವು ಮನೆ ಹಿಡಿದುಕೊಂಡು ಕೂರುವವರು' ಎಂದು ಮನಸ್ಸಿಗೆ ನೋವನ್ನುಂಟು ಮಾಡುವ ಮಾತನಾಡಿ, ಅವರಲ್ಲಿ ಮನೆಯನ್ನು ಕೆಡುಹಬೇಕೆಂಬ ಬುದ್ಧಿಯು ಅಂಕುರಿಸುವಂತೆ ನಡೆದುಕೊಳ್ಳುವುದು ಸರಿಯಲ್ಲ. ಮನೆಯಲ್ಲಿಯೆ ಸಾಕಷ್ಟು ಮರ್ಯಾದೆ ದೊರೆತರೆ ಯಾವ ಹೆಣ್ಣಿಗೆ ತಾನೆ ಮನೆಬಿಟ್ಟು ಹೋಗಬೇಕೆಂದೆನಿಸೀತು? ಆದುದರಿಂದಲೆ ಅವಳಿಗೆ ನಮ್ಮ ಹಿರಿಯರು 'ಗೃಹಲಕ್ಷ್ಮಿ' ಎಂದು ಕರೆಯುತ್ತಿದ್ದರು. ಮನೆಯ ವಿಶಿಷ್ಟ ಪರಿಸ್ಥಿತಿಯ ಮೂಲಕ ಹೆಣ್ಣುಮಕ್ಕಳಿಗೆ ಹೊರಗಿನ ಬೇರೆ ಏನಾದರೂ ಕೆಲಸ ಹಿಡಿಯಬೇಕೆಂಬ ಆವಶ್ಯಕತೆಯುಂಟಾಗಿದ್ದರೆ ಅದು ಒಂದು ಆಕಸ್ಮಿಕ ಕಾರಣದ ಮೂಲಕವಾಗಿದೆಯೆಂದೆ ತಿಳಿಯಬೇಕಲ್ಲದೆ, ಹೆಂಗಸರು ಮೊದಲು ನಿರುದ್ಯೋಗಿಗಳಾಗಿದ್ದರು. ಈಗ ಉದ್ಯೋಗಕ್ಕೆ ಹತ್ತಿದರೆಂಬ ವಿಚಾರದ ರೀತಿಯನ್ನು ಬದಲಿಸಿಕೊಳ್ಳಬೇಕು. ವ್ಯಾಪಾರ, ನೌಕರಿ ಮೊದಲಾದ ದಂದುಗಗಳ ಒತ್ತಾಯಕ್ಕಾಗಿ ತಾಯಿಯು ತೊಟ್ಟಿಲಿನ ದಾರವನ್ನು ಆಳಿನ ಕೈಯಲ್ಲಿ ಕೊಡುವ ರೂಢಿಯು ಹೆಚ್ಚಾದರೆ, ಅಥವಾ ಮಕ್ಕಳೆ ಬೇಸರವಾದರೆ ನಾಡಿನ ಅಳಿಗಾಲವು ತೀರ ಹತ್ತಿರಕ್ಕೆ ಬಂದಿತೆಂದು ತಿಳಿಯಲು ಅಡ್ಡಿಯಿಲ್ಲ.

ಮದುವೆಗಳ ವಿಚಾರ

ಬರಲಿರುವ ಸಮಾಜದ ಮದುವೆಯ ವಿಚಾರವೇನು?

ಗಾಳಿಯು ಯಾವ ದಿಕ್ಕಿಗೆ ಸುಳಿಯುತ್ತಿರುವುದೆಂಬುದನ್ನು ಸ್ಥೂಲವಾಗಿ ಒಳಗೊಳಗೆ ಎಲ್ಲರೂ ಬಲ್ಲರು. ಆದರೆ, ಅದನ್ನು ಶಬ್ದಗಳಿಂದ ಬಿಡಿಸಿ ಆಡಲು ಹಲವರಿಗೆ ಒಪ್ಪಿಗೆಯಾಗಲಿಕ್ಕಿಲ್ಲ! ತಾವು ಯಾರೊಡನೆ ಆಜನ್ಮ ಕಳೆಯತಕ್ಕದು ಎಂಬುದನ್ನು ನಿರ್ಧರಿಸುವ ಹಕ್ಕು ತಮ್ಮದು, ಎಂದು ತರುಣರು ಆಗ್ರಹಪಡುತ್ತಿದ್ದಾರೆ. ವರನ ಮಟ್ಟಿಗೆ ಈ ಹಕ್ಕು, 'ಸಾಮ್ರಾಜ್ಯಾಂತರ್ಗತ ಸ್ವರಾಜ್ಯದಷ್ಟು' ಬಹುತರವಾಗಿ ದೊರೆತಂತೆ ಆಗಿದೆ. ತರುಣನು ಹೆಣ್ಣು ನೋಡಿ ಒಪ್ಪಿಕೊಂಡ ಬಳಿಕ, ತಂದೆತಾಯಿಗಳು ಅದನ್ನು ನಿಶ್ಚಯಿಸುವರು; ಕಾಲಜ್ಞರಾದ ಹಿರಿಯರು, ಹೆಣ್ಣಿನ ಆಯ್ಕೆಯ ಸಂಪೂರ್ಣ ಸ್ವಾತಂತ್ರ್ಯವು ತನ್ನದೇ, ಎಂದು ಹಟ ಹಿಡಿವ ಪ್ರಸಂಗವು ಉಂಟಾಗದಂತೆ ಮಗನೊಡನೆ ಹಿತವಾಗಿ, ತಿಳುವಳಿಕೆಯಿಂದ ನಡಕೊಳ್ಳುವರು. ಆದರೆ, ಈ ವಿಚಾರದಲ್ಲಿ ತಂದೆ ಮಕ್ಕಳಲ್ಲಿ ವಧೂ ನಿರ್ಣಯದ ಬಗೆಗೆ ಒಪ್ಪಿಗೆ ಅಥವಾ ಒಪ್ಪಂದವಾಗದೆ ಕುಸುಕುಸು, ಘುಸುಘುಸುವಾಗಿ ಮನೆಗೋಡೆಯು ಬಿರಿತುದನ್ನು ಕಾಣುವ ಪ್ರಸಂಗಗಳು ಕಡಿಮೆಯಿಲ್ಲ.

ಕಂನಾಡಿನಲ್ಲಿ ವರಗಳೇ, 'ಸಾಮ್ರಾಜ್ಯಾಂತರ್ಗತ' ಸ್ವರಾಜ್ಯವನ್ನು ಇನ್ನೂ ಸಂಪೂರ್ಣ ಪಡೆಯದೆ ಇದ್ದಾಗ ಹೆಣ್ಣಿಗೆ 'ಸಂಸ್ಥಾನೀ ಸ್ವರಾಜ್ಯವೂ ದೂರವೇ. ಹೇಳಿಕೇಳಿ ಅದು 'ಕೊಡಗೂಸು'. ತನ್ನ ಆಜನ್ಮಸಖನ ಆಯ್ಕೆಯ ಹಕ್ಕು ತನ್ನದೇ ಎಂಬ ಮಾತು, ಇನ್ನೂ ಸ್ತ್ರೀಯರ ಡಿಬೇಟಿಂಗ್ ಕ್ಲಬ್ಬಿನ ವಿಷಯವಾಗಿದೆ! ಇದನ್ನು ಆಚಾರದಲ್ಲಿ ತಂದ ಚದುರೆಯರ ಸಂಖ್ಯೆ ಅತ್ಯಲ್ಪ. ಆದರೂ ಮಗಳನ್ನು ಕೇಳದೆ ಯಾವನೊಬ್ಬ ವರನನ್ನು ಗೊತ್ತುಪಡಿಸಿಬಿಡುವ ತಂದೆತಾಯ್ಗಳು ತಮ್ಮ ಹುಚ್ಚು ಸಾಹಸಕ್ಕಾಗಿ ಕೊನೆಗೆ ಮಿಡುಕಾಡುಬೇಕಾಗುವುದು. ಗಳಿಸಾಳಿಯಾಗದೆ ಮದುವೆಯಾಗುವುದು ತರುಣನಿಗೆ ಮಾನಗೇಡು. ತನ್ನ ಕೈಹಿಡಿದವಳ ಊಟಉಡಿಗೆಗೆ ಇನ್ನೊಬ್ಬರಿಗೆ ಕೈಯೊಡ್ಡಬೇಕಾಗುವ ಸ್ಥಿತಿಯಲ್ಲಿ ಮದುವೆಯಾಗಲು ಯಾವ ಸ್ವಾಭಿಮಾನಿಯಾದ ತರುಣನೂ ಒಪ್ಪಲಾರ. ಇದರಿಂದ ವರನ ಮದುವೆಯ ವಯಸ್ಸು ಕನಿಷ್ಠ ೨೪-೨೫ಕ್ಕೆ ಬಂದಿತು. ಮಗಳ ಮದುವೆ ಬೇಗನೆ ಮುಗಿಸಿಬಿಡಬೇಕೆಂಬ ಆತುರದ ಸಂಪ್ರದಾಯವಂತರಿಗೂ ಈ ಕಾರಣದಿಂದ ಕನ್ಯೆಯನ್ನು ೧೮-೨೦ ವರುಷಗಳ ವರೆಗೆ ಮನೆಯಲ್ಲಿ ಬೆಳೆಯಿಸದೆ ಬೇರೆ ದಾರಿ ಉಳಿದಿಲ್ಲ. ಇಷ್ಟು ವಯಸ್ಸಿನ ವರೆಗೆ ಸುಮ್ಮನೆ ಮನೆಯಲ್ಲಿರುವುದಕ್ಕಿಂತ, ಕಲಿತರೇನು ಕೇಡು? ಎಂದು ಅನುಕೂಲವಿದ್ದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣವೂ ದೊರೆಯುವುದು. ಸ್ತ್ರೀ ಶಿಕ್ಷಣಕ್ಕೆ ಮನಸಾ ಅನುಕೂಲವಿಲ್ಲದವರೂ ಪ್ರವಾಹಪತಿತರಾಗಿ ತಮ್ಮ ಕೊಡಗೂಸುಗಳಿಗೆ ವಿದ್ಯಾಭ್ಯಾಸ ಮಾಡಿಸ

ಬೇಕಾಗುವುದು. ಮದುವೆಯಾಗದೆ ಬೆಳೆದ ಹೆಣ್ಣನ್ನು ಮನೆಯಲ್ಲಿಟ್ಟುಕೊಂಡು ಕುಳ್ಳಿರಬೇಕಾಗಿದೆಯಲ್ಲ, ಎಂಬ ಉಮ್ಮಳದ ಎದೆನೋವಿನಿಂದ ಬಳಲುತ್ತಿರುವ ತಾಯ್ತಂದೆಗಳಿಲ್ಲದ ಊರಿಲ್ಲ.

ಹುಡುಗ, ಹುಡುಗೆಯರ ಮದುವೆಯ ವಯಸ್ಸು ಅನಿವಾರ್ಯವಾಗಿ ಮುಂದೆ ಹೋಗುತ್ತಲಿದೆ. ಅವರು ಪ್ರೌಢರಾಗಿ ಸ್ವಂತದ ಒಳಿತು-ಕೇಡುಗಳನ್ನು ತಿಳಿದುಕೊಳ್ಳುವ ವಯಸ್ಸಿನವರಾಗಿರುತ್ತಾರೆ. ಸ್ವಾವಲಂಬಿಗಳಾಗಿ ತಮ್ಮ ಕಾಲಮೇಲೆ ನಿಲ್ಲುವ ಸ್ಥಿತಿಗೆ ಬಂದಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಇವರ ಮದುವೆಯ ಸೂತ್ರಗಳು ಇನ್ನೂ ತಮ್ಮ ಕೈಯಲ್ಲಿಯೇ ಉಳಿಯಬೇಕೆಂದು ತಂದೆತಾಯ್ಗಳು ಹಂಬಲಿಸುವುದು ನಿಷ್ಕಾರಣ. ಹಲವೆಡೆಗಳಲ್ಲಿ ಮೇರೆ ಮೀರದ ವಾತ್ಸಲ್ಯ ಕಕ್ಕುಲತೆಯು ಇದಕ್ಕೆ ಕಾರಣವಾಗಿರುತ್ತದೆ. ನಮ್ಮ ನಾಡಿನ ಶಿಷ್ಟಾಚಾರಗಳಲ್ಲಿ ಇಷ್ಟವಾದ ಕೆಲವು ಮಾರ್ಪಾಡುಗಳು ಇನ್ನೂ ಆಗದೆ ಇದ್ದುದಕ್ಕೆ ಒಂದು ಮಹತ್ವದ ಕಾರಣವುಂಟು. ಸಹಜ ಸ್ವಾಭಾವಿಕವಾದ ವಾತಾವರಣದಲ್ಲಿ ಸ್ತ್ರೀ-ಪುರುಷರು ಒಬ್ಬರನ್ನೊಬ್ಬರನ್ನು ಕಾಣಲು, ಭೆಟ್ಟಿಯಾಗಲು ಸಾಮಾಜಿಕ ಸನ್ನಿವೇಶಗಳ ಏರ್ಪಾಟವು ಆಗುವ ತನಕ ಮದುವೆಗಳು ಸ್ವಯಂ-ವರಗಳಾಗುವುದಕ್ಕೆ ತುಂಬ ಆತಂಕಗಳಿವೆ.

ದಿನದಿನಕ್ಕೆ ಅವಿವಾಹಿತರ ಸಂಖ್ಯೆ ಬೆಳೆಯುತ್ತಿದೆ. ಮನದನ್ನ ಅಥವಾ ಮನದನ್ನೆ ದೊರೆಯದ್ದರಿಂದ, ಸರಿಯಾದ ಕೆಲಸ ಸಿಕ್ಕದೆ, ಸಂಬಳಗೇಡಿಯಾಗುವ ಭೀತಿಯಿಂದ ಅಥವಾ ತಮ್ಮ ಮನೆತನಕ್ಕೆ ತಕ್ಕವರ ಅಥವಾ ವಧು ದೊರೆಯದೆ ಮದುವೆ ಇಲ್ಲದವರು ಹಲವರು; ದಿಲ್ಲಿ, ಮುಂಬೈ, ಕಲಕತ್ತೆಗಳಂತಹ ಹಿರಿಯೂರುಗಳಲ್ಲಿ ನೌಕರನಾಗಿದ್ದು ಮನೆ ದೊರೆಯದ್ದಕ್ಕಾಗಿ ಅಥವಾ ಸಂಸಾರಿಗನಾಗಲು ಆ ಊರಿನ ಮಾನದಿಂದ ಸಾಕಷ್ಟು ವೇತನವಿಲ್ಲದ್ದರಿಂದ ಒದ್ದಾಟ ನಡೆದವರು ಕೆಲವರು. ಹೆಣ್ಣುಮಕ್ಕಳಲ್ಲಿ ಏನೂ ಕಲಿತಿಲ್ಲವೆಂಬ ಕಾರಣದಿಂದಲೇ ಕೆಲವರ ಮದುವೆಗೆ ತೊಂದರೆ! ತುಂಬ ಕಲಿತವಳೆಂದೂ ತೊಂದರೆ! ಯಾವುದಾಗಲಿ, ತಮ್ಮ ಜಾತಿಯ ಒಂದು ಗಂಡು ಆದರಾಯಿತು ಎಂದು ಕಣ್ಣುಮುಚ್ಚಿ ಮಗಳನ್ನು ನೂಕಿಬಿಡಲು ಸಿದ್ಧರಿಲ್ಲದ ತಾಯ್ತಂದೆಗಳಿಗೆ ವರದಕ್ಷಿಣೆಗೆ ಸಾಕಷ್ಟು ದುಡ್ಡಿಲ್ಲದೆ ಇದ್ದುದೇ ಒಂದು ಮಹತ್ಪಾಪ. ಸಕಾಲದಲ್ಲಿ ಸರಿಯಾದ ವರನು ಸಿಕ್ಕದೆ ನೌಕರಿಯಲ್ಲಿ ಸೇರಬೇಕಾದ ಸ್ತ್ರೀಯರ ವರ್ಗವೊಂದು. ದಾದಿಗಳು, ಕಾರಕೂನರು, ಅಧ್ಯಾಪಿಕೆಯರು, ಕಲೋಪಾಸಕರುಗಳಂತಹ ವೃದ್ಧಕುಮಾರಿಯರ ಪಂಗಡವು ಇಂದಿನ ಸಾಮಾಜಿಕ ಸ್ಥಿತಿಯ ಅನಿವಾರ್ಯವಾದ ಫಲ.

ಹೆಂಗೆಳೆಯರು ಸ್ವಾವಲಂಬಿಗಳಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದ ಬಳಿಕ ಗಂಡನೆಂಬ ತುಂಟನ ಕಾಟದಲ್ಲಿ ಏಕೆ ಸಿಲುಕಬೇಕು? ವ್ಯಕ್ತಿತ್ವ, ವೈಯಕ್ತಿಕ ಸ್ವಾತಂತ್ರ್ಯಕ್ಕೆ ಏಕೆ ಎರವಾಗಬೇಕು? ಎಂಬ ಭಾವವು ಅವರಲ್ಲಿ ಒಡಮೂಡುವುದು, ಮಾನವ ಸ್ವಭಾವಕ್ಕೆ ಹೊರತಾದುದಲ್ಲ. ಅವರು ಗಂಡನಿಗಿಂತಲೂ ಇಸಿಯನನ್ನು ಹಾರಯಿಸುವರು. ಇನ್ನುಮೇಲೆ ಹೆಣ್ಣುಮಕ್ಕಳಿಗೆ ಗಂಡಸರಂತೆ ಪಾಲಿನಹಕ್ಕು ಬರಲಿದೆ. ಆರ್ಥಿಕ ಸ್ವಾತಂತ್ರ್ಯವುಳ್ಳ ಪ್ರಮಿಳೆಯರಿಂದ ಸಮಾಜದಲ್ಲಿ ಸ್ವಯಂವರ ಪದ್ಧತಿಯು ಪ್ರಶಸ್ತವಾಗಿ ರೂಢವಾಗುವುದು. ಗಂಡನಾಗಿಯೇ ಹೆಣ್ಣನ್ನು ಆಳುವೆನೆಂಬ ಹಲವರ ಬಿಂಕವು ಮುಕ್ಕಾಗದೆ ಇರದು. ಹೆಣ್ಣಿನೊಡನೆ ಇನಿಯನಾಗಿ, ನಲ್ಲನಾಗಿ ಗೆಳೆತನದಿಂದ ಬಾಳುವ ಕಲೆಯನ್ನು ಅರಿತುಕೊಳ್ಳುವ ಆವಶ್ಯಕತೆಯು ಗಂಡಿನ ಒಗರಿನ ಒರಟನ್ನು ಹಣ್ಣಿಸದೆ ಇರದು.

ಅನಿವಾರ್ಯವಾಗಿ ಒಂದಿಲ್ಲೊಂದು ಕಾರಣಕ್ಕಾಗಿ ಅವಿವಾಹಿತರಾಗಿ ಉಳಿವ ಗಂಡು, ಹೆಣ್ಣುಗಳ ಸಂಖ್ಯೆ ಹೆಚ್ಚಾದಂತೆ ಇನ್ನೊಂದು ಬಗೆಯ ಸಾಮಾಜಿಕ ಅಸ್ವಾಸ್ಥ್ಯವು ತಲೆದೋರುವುದು. ಮದುವೆಯು ಮುಂದೆ ಬೀಳುತ್ತಿದ್ದರೂ ದೇಹಧರ್ಮಗಳ ಒತ್ತಾಯ ಬೆನ್ನು ಬಿಡದು. 'ಅನಿಚ್ಛನ್ನಪಿ' ಅವರು ಒಬ್ಬರನ್ನೊಬ್ಬರು ಹಾರಯಿಸವೆ ಇರರು. ಈ ಇಳಿದಾರಿಯಲ್ಲಿ ಜಾರದಂತೆ ನಮ್ಮ ಗೃಹಶಿಕ್ಷಣ, ಸಂಸ್ಕೃತಿ, ಸಂಪ್ರದಾಯಗಳು ಉಂಟು. ಆದರೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕಾಣಸಿಕೊಂಡಿರುವಂತೆ ಸ್ತ್ರೀಪುರುಷರ ನಡುವಿನ ಸಂಬಂಧದ (ಮದುವೆಯೆ?) ಪ್ರಕಾರಗಳೂ ಪ್ರಯೋಗಗಳೂ ಇಲ್ಲಿಯೂ ನಡೆಯತಕ್ಕುವೆ. ಶಿಷ್ಟರೆಂಬವರಿಂದ ಬಹಿರಂಗವಾಗಿ ಆಚರಿಸಲ್ಪಡುವ ವರೆಗೆ ಇವು ನಮ್ಮಲ್ಲಿ ಇನ್ನೂ ಬಂದಿಲ್ಲ (ಭ್ರಷ್ಟ ಬಿಳಿಯರ ಆಚರಣೆಯದು) ಎಂಬುದೇ ಸಾಮಾನ್ಯ ಜನರ ಲೆಕ್ಕಾಚಾ.

ಹದಿನೆಂಟು ವರುಷ ಮಿಕ್ಕಿದರೂ 'ಅಷ್ಟವರ್ಷಾ ಭವೇತ್ ಕನ್ಯಾ' ಎಂಬ ಮಂತ್ರವನ್ನೆ ಇಂದಿಗೂ ಹೇಳುವುದಿಲ್ಲವೆ? 'ಕರ್ಣ'ರ ಕತೆಗಳು ಕಿವಿಯಿಂದ ಕಿವಿಗೆ ಬರುತ್ತಿದ್ದರೂ ಅವು ಕೇಳಿಲ್ಲವೆಂಬಂತೆ ನಡೆವುದು ಶಿಷ್ಟಾಚಾರ. 'ಮದುವೆ ಬೇಡ; ಆದರೆ ಮಗುವಿನ ಹಂಬಲವಿದೆ. ಗಂಡಸಿನ ನೆಳಲಾಗಿ ಇರಲು ಮನಸು ಒಪ್ಪದು; ಆದರೂ ತಾಯ್ತನದ ಆನಂದವು ತನಗೆ ಬೇಕೇ ಬೇಕು' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ ಹಾಗೆ ನಡೆದುಕೊಂಬ ಚಿತ್ರಾಂಗನೆಯರನ್ನು ಕಾಣಲು ಬಹಳ ದಿನಗಳು ಬೇಕಾಗಲಿಕ್ಕಿಲ್ಲ. ಮನುಷ್ಯನ ಕೃತಕ ಕಟ್ಟಳೆಗಳನ್ನು ಕಡೆಗಣಿಸಿದರೂ ಸೃಷ್ಟಿಯ ಸನಾತನಧರ್ಮವನ್ನು ಮೀರಿ ಯಾರೂ ಬಾಳಲಾರರು.

ಮಾನವ ಹೃದಯವು ಸ್ವಾಭಾವಿಕ ಭಾವನೆಗಳ ಗೋರಿಯಾಗುವುದಕ್ಕಿಂತ ದಾರುಣವಾದ ದುರಂತವು ಬೇರೊಂದಿಲ್ಲ. ಸೃಷ್ಟಿಕ್ರಮದಲ್ಲಿ ಸ್ವಾಭಾವಿಕವಾದ ಭಾವನೆಗಳು ಅರಳಿ ಅಥವಾ ದಿವ್ಯಭಾವವನ್ನು ತಾಳಿ ಸಫಲವಾಗುವಂತೆ ಸಮಾಜದಲ್ಲಿ ಇಂಬು ಇಟ್ಟಿರಬೇಕು. ಅದರಲ್ಲಿ ವ್ಯಕ್ತಿಗೆ ವೈಯಕ್ತಿಕ ಜೀವನದ ಸಫಲತೆಯುಂಟು. ಸಾಮಾಜಿಕ ಸ್ವಾಸ್ಥ್ಯ ಮತ್ತು ವಿಕಾಸವುಂಟು. ತಪ್ಪು ತಡೆಗಳನ್ನು ತಿದ್ದಿಕೊಳ್ಳಲು ಅವಕಾಶವಿರುವಂತೆ ಇಂಬು ಇಟ್ಟು ಬರೆಯಬೇಕು; ಇಂಬು ಇಟ್ಟು ಮಾತಾಡಬೇಕು; ಇಂಬೇ ಮರ್ಯಾದೆ. ಇಂಬು ಇಲ್ಲದೆ ತೀರ ಹತ್ತಿಯಾಗಿ ಉಸಿರುಗಟ್ಟುವಂತೆ ರಿಕ್ಕಾಗಿ ಬಿಗಿಯಾದ ಬಂಧನಗಳು ಬಹಳ ಹೊತ್ತು ಬಾಳವು; ಬಾಳಗೊಡವು. ಇಂಬಿಲ್ಲದ ಸಮಾಜ ರಚನೆ ಇಂದಿನದು! ಒಂದು ಕಾಲಕ್ಕೆ ಭಾರತವು ಏಳ್ಗೆಯಲ್ಲಿದ್ದಿತು. ಆಗ ಎಲ್ಲ ಬಗೆಯ ಜನಗಳಿಗೂ ಬಾಳಲು ಇಂಬು ಇಟ್ಟು ಸಮಾಜ ಕಟ್ಟಿದ್ದರು. ಏನೋ ಅಚಾತುರ್ಯದಿಂದ ತಾಯಿಯಾದ ಕೊಡಗೂಸಿಗೆ ಆತ್ಮಹತ್ಯೆಮಾಡಿಕೊಂಬ ಹೊತ್ತು ಬರಲಾಗದು. ಮಹಾಭಾರತದ ಕೆಳಗಣ ವಾಕ್ಯಗಳಿಂದ ಪ್ರಾಚೀನ ಧರ್ಮಜ್ಞರು ಈ ಮಾತಿಗೂ ಇಂಬಿಟ್ಟಿದ್ದರೆಂಬುದನ್ನು ಮನಗಾಣಬಹುದು. ಶ್ರೀಕೃಷ್ಣನು ಕರ್ಣನಿಗೆ ಹೇಳಿದ ಮಾತಿದು:

> ಕಾನೀನಶ್ಚ ಸಹೋಢಶ್ಚ ಕನ್ಯಾಯಾಂ ಯಶ್ಚ ಜಾಯತೇ।
> ವೋಢಾರಂ ಪಿತರಂ ತಸ್ಯ ಪ್ರಾಹುಃ ಶಾಸ್ತ್ರವಿದೋ ಜನಾಃ॥
>
> – ಉದ್ಯೋಗಪರ್ವ ೧೪೩.೮

ಸ್ಮೃತಿಕಾರರು ಸೂಚಿಸಿದ ಮರ್ಯಾದೆಗಳನ್ನು ಮೀರಿ ಹಿಂದೂ ಸಮಾಜವು ಮರ್ಯಾದೆಗೇಡಾಗುತ್ತಲಿದೆ. ಹೆಣ್ಣುಮಕ್ಕಳ ವಿಚಾರದಲ್ಲಿ ಮುಸಲ್ಮಾನರ ಆಗಮನದ ತರುವಾಯ, ಹಿಂದೂ ಸಮಾಜವು ಅತ್ಯಂತ ಅನುದಾರ ರೀತಿಯಲ್ಲಿ ವರ್ತಿಸುತ್ತ ನಡೆದಿತು. ಗೌತಮಾದಿಗಳ ಅಭಿಪ್ರಾಯದಂತೆ ಸ್ತ್ರೀಯರು ಯಾವಾಗಲೂ ಪವಿತ್ರರು. ಬಲಾತ್ಕಾರದಿಂದ ಅವರ ಮಾನಭಂಗ ಮಾಡುವ ಪಾಪಿಯೆ ನಿಂದ್ಯನು; ಸ್ತ್ರೀಯನ್ನು ಅಪವಿತ್ರಳೆಂದೆಣಿಸದೆ ಸಂಸ್ಕಾರದಿಂದ ಮರಳಿ ಸ್ವೀಕರಿಸಲು ದೇವಲ, ಅತ್ರಿ, ವಸಿಷ್ಠಾದಿಗಳ ಸ್ಪಷ್ಟವಾದ ಆಜ್ಞೆಗಳಿವೆ.

> ಸ್ತ್ರೀಯಃ ಪವಿತ್ರಮತುಲಂ ನೈತಾ ದುಷ್ಯಂತಿ ಕರ್ಹಿಚಿತ್।
> ಮಾಸಿ ಮಾಸಿ ರಜ್ಯೋ ಹ್ಯಾಸಾಂ ದುರಿತಾನ್ಯಪಕರ್ಷತಿ॥
>
> – ಗೌತಮ ಸ್ಮೃತಿ. ೯. ೬೩

> ನ ಸ್ತ್ರೀ ದುಷ್ಯತಿ ಜಾರೇಣ..... ನಾಗ್ನಿರ್ದಹನ ಕರ್ಮಣಾ।
> (ಬಲತ್ಕಾರೋಪ ಭುಕ್ತಾ ವಾ ಚೌರಹಸ್ತಗತಾಪಿ ವಾ)
> ನ ತ್ಯಾಜ್ಯಾ ದೂಷಿತಾ ನಾರೀ ನಾಸ್ಯಾಸ್ತ್ಯಾಗೋ ವಿಧೀಯತೇ।
> ಪುಷ್ಪಕಾಲಮುಪಾಸೀತ ಋತು ಕಾಲೇನ ಶುದ್ಧ್ಯತಿ॥
>
> – ವಸಿಷ್ಠಸ್ಮೃತಿ ೧೭.೩ ಮತ್ತು ಅತ್ರಿಸ್ಮೃತಿ ೧೯೭. ೯೮

ವ್ಯಭಿಚಾರಾದೃತೌ ಶುದ್ಧಿಃ ಸ್ತ್ರೀಣಾಂ ಚೈವ ನ ಸಂಶಯಃ।
ಗರ್ಭೇ ಜಾತೇ ಪರಿತ್ಯಾಗೋ ನಾನ್ಯಥಾ ಮಮ ಭಾಷಿತಮ್।

- ಬೃಹದ್ಯಮ ಸ್ಮೃತಿ

ಅಸವರ್ಣೇನ ಯೋ ಗರ್ಭಃ ಸ್ತ್ರೀಣಾಂ ಯೋನೌ ನಿಷಿಚ್ಯತೇ।
ಅಶುದ್ಧಾ ಸಾ ಭವೇತ್ ನಾರೀ ಯಾವತ್ ಶಲ್ಯಂ ನ ಮುಂಚತಿ॥
ವಿನಿಃಸೃತೇ ತತಃ ಶಲ್ಯೇ ರಜಸೋ ವಾಽಪಿ ದರ್ಶನೇ।
ತದಾ ಸಾ ಶುದ್ಧ್ಯತೇ ನಾರೀ ವಿಮಲಂ ಕಾಂಚನಂ ತಥಾ॥

- ಅತ್ರಿಸ್ಮೃತಿ

ಬಲವದ್ದತ್ತಂ, ಬಲಾದ್ಭುಕ್ತಂ ಬಲಾದ್ಯಚ್ಚಾಪಿ ಲೇಖಿತಮ್।
ಸರ್ವಾನ್ ಬಲಕೃತಾನರ್ಥ ನಕೃತಾನ್ ಮನುರಬ್ರವೀತ್ ॥

- ಮನುಸ್ಮೃತಿ

ಇದರಂತೆ ಶಾಂತಿಪರ್ವದಲ್ಲಿ (೨೬೭.೩೮) ಹೇಳಿದೆ. ಒಬ್ಬ ಗಂಡನನ್ನು ಬಿಟ್ಟು ಇನ್ನೊಬ್ಬನ ಕೈ ಹಿಡಿವವಳಿಗೆ 'ಪುನರ್ಭೂ' ಎಂಬ ಹೆಸರುಂಟು. ಸ್ತ್ರೀಯ ತ್ಯಾಗ ಮಾಡತಕ್ಕದ್ದಲ್ಲ. ಹೆರವರಿಗೆ ಬಸುರಾಗಿದ್ದರೆ ಹೆರೆಯುತ್ತಲೆ ಅವಳು ಶುದ್ಧಳು. ಇಲ್ಲವಾದರೆ ಮುಟ್ಟಾದೊಡನೆ ಪವಿತ್ರಳು. ಏನು ಸುಟ್ಟರೂ ಅಗ್ನಿಯು ಪವಿತ್ರನೆ. ಎಲ್ಲಿ ಬಿದ್ದರೂ ಹೊನ್ನು ಅಶುದ್ಧವಾದೀತೆ? ಒತ್ತಾಯದಿಂದ ಒಪ್ಪಹಾಕಿಕೊಂಡು ಲೇಖವು ಹೇಗೆ ಸುಳ್ಳೋ ಹಾಗೆ ಬಲಾತ್ಕಾರದಿಂದಾದ ಭೋಗವು ಸುಳ್ಳು; ಆಗಿಲ್ಲವೆಂದೇ ಎಣಿಸಬೇಕಾಗಿ ಮನುಮಹರ್ಷಿಯ ಅಭಿಪ್ರಾಯ.

ಋಷಿಗಳ ಈ ಬಗೆಯ ದೃಷ್ಟಿಕೋನವೇ ಮಧ್ಯಕಾಲದಲ್ಲೂ ಉಳಿದಿದ್ದರೆ ಮುಸಲ್ಮಾನರ ಸಂಖ್ಯೆ ಇಷ್ಟು ಮಿತಿಮೀರಿ ಬೆಳೆಯುತ್ತಿದ್ದಿಲ್ಲ. ಹೆಣ್ಣುಮಕ್ಕಳು ಪುಕ್ಕರೂ, ಹೇಡಿಗಳೂ, ಆಗುತ್ತಿದ್ದಿಲ್ಲ. ಪಾವಿತ್ರ್ಯದ ಹುಚ್ಚು ಕಲ್ಪನೆಗಳ ಭೂತ ಬಡಿದವರಾಗಿ ಅವರನ್ನು ಹೇಡಿಗಳನ್ನಾಗಿ ಮಾಡಿದ ಪಾಪ ಗಂಡಸರ ತಲೆಯ ಮೇಲೆಯೆ ಇದೆ. ಅವರ ಈ ಕೃತಿಯಿಂದ ಹೆಂಗಸು ಹೇಡಿ ಅಬಲೆಯಾದಳು. ಗಂಡಸು ಊನ ಅರ್ಧಾಂಗನಾದನು.

ಹಿಂದೆ ಆದುದು ಆಯ್ತು. ಮಹಾತ್ಮಾಜೀಯವರು ಪ್ರಾಚೀನ ಋಷಿಗಳಷ್ಟೇ ಉದಾರ ಭಾವದಿಂದ ನವಕಾಲಿ ಮೊದಲಾದ ಕಡೆಯಲ್ಲಿ ಹೆಣ್ಣುಮಕ್ಕಳ ಪುನರುದ್ಧಾರ ಮಾಡಿದ್ದಾರೆ. ಶ್ರೀರಾಮಚಂದ್ರನ ದರ್ಶನದಿಂದ ಅಹಲ್ಯೆಯು ಮನುಷ್ಯಳಾಗಲಿಲ್ಲವೆ? ಮಧ್ಯಕಾಲದ ಗಂಡಸಿನ ಶಾಪದಿಂದ ಕಲ್ಲಾದ ಸ್ತ್ರೀಸಮಾಜವನ್ನು ಗಾಂಧೀಜಿಯವರು ಮರಳಿ ಮನುಷ್ಯಕೋಟಿಗೆ ತಂದಿರುವರು. ಗಂಡಸಿನೊಡನೆ ಸಮಾನಸ್ಕಂಧಳಾಗಿ ಮನೆಯ ಹಾಗೂ ಸಾರ್ವಜನಿಕ ಸೇವೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿದ್ದಾರೆ. ಮಾನವಕುಲದ ತಾಯಿಯಾಗಿ ಲೋಕಕ್ಕೆ ತ್ಯಾಗ, ಕರುಣೆ, ಪ್ರೀತಿ, ವಿಶ್ವಾಸ ಸೇವೆಗಳ ಪಾಠವನ್ನು ಕಲಿಸುತ್ತ ವ್ಯಕ್ತಿವೈಶಿಷ್ಟ್ಯವನ್ನು ವಿಕಾಸಪಡಿಸಿಕೊಳ್ಳಲು ಸ್ತ್ರೀಯರಿಗೆ ಮಾರ್ಗ ತೋರಿಸಿದ್ದಾರೆ.

ಹೊಸ ಹಿಂದೂ ಕಾನೂನಿಗೆ ಅನುಸರಸಿ ಹಿಂದೂ ಜಾತಿಯವರಲ್ಲಿ ಬೇಕಾದವರನ್ನು ಮದುವೆಯಾಗಬಹುದು; ಬೇಕಾದ ಜಾತಿಯ ಹುಡುಗ ದತ್ತು ತೆಗೆದುಕೊಳ್ಳಬಹುದು. ಮದುವೆಯ ಬಿಡುಗಡೆಗೂ, ಕೆಲವೊಂದು ವಿಶೇಷ ಕಾರಣಗಳಿಗಾಗಿ, ಅನುಮತಿಯಿದೆ. ಇವು ಪರಿಸ್ಥಿತಿಗೆ ತಕ್ಕ ಮಾರ್ಪಾಟಗಳೇ ಆಗಿವೆ. ಭಾರತದ ಒಳಜಾತಿಗಳಲ್ಲಿ ಐಕ್ಯ, ಸಮಾನ ಭಾವಗಳು ಬೆಳೆಯಲು ಮಿಶ್ರವಿವಾಹಗಳು ಆಗುಬೇಕಾದುದು ಅನಿವಾರ್ಯ. ಇನ್ನೊಂದು ಜಾತಿಯ ನಲ್ಲೆಯಲ್ಲಾದ ಸಂತತಿಯನ್ನು ಎಷ್ಟೇ ಆತ್ಮೀಯತೆಯಿಂದ ನಡೆಸಿಕೊಂಡರೂ ಪ್ರತ್ಯಕ್ಷ ಮಗನನ್ನಾಗಿ ತಕ್ಕೊಳ್ಳಲು ಇದ್ದ ಆತಂಕವು ಇನ್ನು ದೂರವಾಗಲಿದೆ. ಮದುವೆಯ ಜಾಲದಲ್ಲಿ ತಿಳಿಗೇಡಿತನದಿಂದ ಅಥವಾ ಮೋಸಹೋಗಿ ಸಿಕ್ಕುಬಿದ್ದೇವೆಂದು ಆಜನ್ಮ ಗೊಣಗುತ್ತ, ತಿಣಕುತ್ತ, ಗೃಹಕಲಹಗಳು ನಡೆಯದಿರಲೆಂದು ಬಿಡುಗಡೆಯ ಸೀಳುದಾರಿಯನ್ನು ಇಟ್ಟದ್ದು ಲೇಸಾಯ್ತು.

ಜಾತೀಯತೆಯು ಅಳಿಯಲು ಈಗಿನ ಮತ, ಧರ್ಮಕ್ಕನುಸರಿಸಿರುವ ಪಂಗಡಗಳು ಹಿಂದೆಬಿದ್ದು, ಸಾಂಸ್ಕೃತಿಕ ಸಂಬಂಧದ ಗುಂಪುಗಳು ತಲೆದೋರಬೇಕು. ವೈದ್ಯಕೀವೃತ್ತಿಯವರು ಅಧ್ಯಯನ ಅಧ್ಯಾಪನಗಳೇ ಮುಖ್ಯ ಹೋರೆಯಾಗಿರುವವರು, ಸಾಹಿತಿಗಳು, ಪ್ರತಿಕಾವ್ಯವಸಾಯದವರು, ವಕೀಲರು, ವರ್ತಕರು ಎಂದು ಮುಂತಾದವರ ಸಂಘಗಳು ಈಗ ಇಲ್ಲವೆಂತಲ್ಲ. ಆದರೆ, ಆ ಸದಸ್ಯರಲ್ಲಿ ಜಾತೀಯತೆಗೇ ಪ್ರಾಧಾನ್ಯವಿದ್ದು, ಅವರಲ್ಲಿ ಆತ್ಮೀಯತೆಯು ತೀರ ಕಡಿಮೆಯಿರುತ್ತದೆ. ಅವರ ಸಂಬಂಧಗಳು ಬೇರೂರಿ ಬೆಳೆಯುತ್ತಿರುವ ವೃಕ್ಷದ ಸ್ವರೂಪವನ್ನು ಇನ್ನೂ ತಾಳಿಲ್ಲ. ತಮ್ಮ ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲವೊಂದು ಕೆಲಸಕ್ಕಾಗಿ ಸೇರಿದವರು; ಆ ಕಾರ್ಯಕಲಾಪಗಳಲ್ಲಿ ಕೂಡ ಜಾತೀಯತೆಯ ದೃಷ್ಟಿಯು ನಷ್ಟವಾಗಿರುವುದಿಲ್ಲ. ಅಧ್ಯಕ್ಷ, ಕಾರ್ಯದರ್ಶಿಗಳ ಆಯ್ಕೆಯಲ್ಲಿ ಜಾತೀಯ ದೆವ್ವ ಮೈಮೇಲೆ ಬರುತ್ತದೆ. ಒಂದೊಂದು ವೃತ್ತಿಯ ಸಮಾನ ಸಂಸ್ಕೃತಿಯ ಮನೆತನಗಳಲ್ಲಿ ಅನ್ನ-ಕನ್ಯಾ ವ್ಯವಹಾರಗಳು ಆರಂಭವಾದಲ್ಲಿ ಈ ಸಂಘ-ಸಂಸ್ಥೆಗಳೊಳಗಿನ ಜಾತೀಯತೆಯು ಕ್ರಮವಾಗಿ ತನ್ನ ತಾನೇ ಹಿಮ್ಮೆಟ್ಟುವುದು. ಅಲ್ಲದೆ ಆಯಾ ಜ್ಞಾನಶಾಖೆ, ಉದ್ಯೋಗಾದಿಗಳ ಅಭಿವೃದ್ಧಿಯೂ ಆಗುವದು.

ಕಾಲೇಜಿನ ತರುಣರಲ್ಲಿ ಭಿನ್ನಮತದವರು ಒಡನಾಡಿಗಳಾಗಿ ಜೀವದ ಗೆಳೆಯರಾಗಿ ಬೆಳೆಯುತ್ತಾರೆ. ಆದರೆ, ಅವರವರ ಮನೆಯ ಜಾತೀಯ ಭಾವನೆಯು ಅವರ ಸ್ನೇಹವೃದ್ಧಿಗೆ ಮುಂದಿನ ಜೀವದನಲ್ಲಿ ಅಡ್ಡಿಯನ್ನುಂಟು, ಮಾಡುತ್ತಿರುತ್ತದೆ. ಇಂತಹ ಎಡರುಗಳಲ್ಲಿ ವೈವಾಹಿಕ ಬಂಧನದಿಂದ ನಾಡಿನ ಒಕ್ಕಟ್ಟಿಗೆ ಬಲಬರುತ್ತದೆ. ರಾಜಕೀಯ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವಾಗ ತೀರ ಆತ್ಮೀಯರಾಗಿ ಒಬ್ಬರೊಬ್ಬರೊಡನೆ ಗುಟ್ಟುಕೊಟ್ಟು ನಡೆಕೊಳ್ಳುವ ಭಿನ್ನಮತೀಯರು ಅಪರೂಪವಲ್ಲ. ವಿಚಾರದ ಮಟ್ಟದಲ್ಲಿ, ಸಾಮಾಜಿಕ ಸ್ಥಿತಿಗತಿಗಳಲ್ಲಿ, ಆರ್ಥಿಕ ಪರಿಸ್ಥಿತಿಯಲ್ಲಿ ಇಬ್ಬರು ಸಮಾನಸ್ಕಂಧರಾಗಿರುತ್ತಾರೆ. ಆದರೆ, ಜಾತಿಭೇದವು ಅವರ ಸಾಮರಸ್ಯಕ್ಕೆ ಅಡ್ಡಬರುತ್ತಿರುತ್ತದೆ. ಜಾತಿಯ ಅಡ್ಡಗೋಡೆಯನ್ನು ತೆಗೆದರೆ ಅವರು ಒಂದೆ ಮನೆಯವರಾಗುವರು. ಬರಲಿರುವ ಹಿಂದೂ ಕಾಯಿದೆಯು ಇವಕ್ಕೆಲ್ಲ ತುಂಬ ಪೋಷಕವಾಗಿದೆ. ಅಸಹಕಾರದ ಆಂದೋಲನದಲ್ಲಿ ಈ ಬಗೆಯಾದ ಹಲಕೆಲವು ಸಂಬಂಧಗಳು ಬಂದಿವೆ. ಗಾಂಧಿ-ಚಕ್ರವರ್ತಿ ಮನೆತನಗಳ ಬೀಗತನವು ಅವೆಲ್ಲವುಗಳ ಪ್ರಾತಿನಿಧಿಕವಾಗಿದೆ. ಬ್ರಾಹ್ಮಣ ಬ್ರಾಹ್ಮಣೇತರ ಐಕ್ಯದ ಮುಂಗುರುಹು ಇದು. ನೆಹರು-ಗಾಂಧಿಗಳ ವಿವಾಹವು ಭಾವೀ ಹಿಂದೂ ಸಮಾಜದ ಶುಭಸೂಚನೆ.

ಇದೆಲ್ಲವೂ ಸರಿಯಾಯ್ತು. ಎಲ್ಲ ಮುಸಲ್ಮಾನೇತರ ಭಾರತೀಯ ಸಮಾಜವೂ ಒಂದುಗೂಡಿ ಹಿಂದೂವೆನಿಸಬಹುದು (ವೈಯಕ್ತಿಕ ಧಾರ್ಮಿಕ ಸ್ವಾತಂತ್ರ್ಯವನ್ನಿಟ್ಟುಕೊಂಡು). ಆದರೆ, ಪಾಕಿಸ್ತಾನವು ಸ್ವತಂತ್ರ ರಾಷ್ಟ್ರವಾಗಿರುವ ವರೆಗೆ ಮುಸಲ್ಮಾನ ತೊಡಕು ಬೇಗನೆ ಬಿಟ್ಟೀತೆಂದು ತೋರುವುದಿಲ್ಲ. ಜರ್ಮನ್ ಯುವಕ ಅಥವಾ ಯುವತಿಯರೊಡನೆ ಇಂಗ್ಲೆಂಡ್, ಅಮೇರಿಕಾ, ರಶಿಯಾದಿ ರಾಷ್ಟ್ರದ ತರುಣ-ತರುಣಿಯರು ಮದುವೆಯಾಗುವುದು ಆಯಾ ರಾಷ್ಟ್ರಗಳ ದೃಷ್ಟಿಯಿಂದ ಬಾಧಕವೆಂದು ಎಣಿಸಲ್ಪಡುವುದಕ್ಕೆ ಯಾವ ಕಾರಣವೊ ಅದುವೆ ಹಿಂದೂ ಮತ್ತು ಮುಸ್ಲಿಂರಲ್ಲಿ ಈಗ ಉಂಟು. ವಿವಾಹ ವಿಚಾರದಲ್ಲಿ ಹಿಂದಕ್ಕೆ ಜಾತೀಯ ದೃಷ್ಟಿಯು ಮುಖ್ಯವಾಗಿದ್ದಂತೆ ಇನ್ನು ಮೇಲೆ ರಾಷ್ಟ್ರೀಯ ದೃಷ್ಟಿಗೆ ಪ್ರಥಮ ಸ್ಥಾನವು ಬರಲಿದೆ; ಅಲ್ಲ, ಬಂದೇ ಇದೆ. ಮೊನ್ನೆ ಕೇಂದ್ರಜಾನಪದದಲ್ಲಿ ಮಾನ್ಯಮಂತ್ರಿಗಳಿಗೆ ಸದಸ್ಯರೊಬ್ಬರು ಪ್ರಶ್ನೆ ಕೇಳಿದರು: ಪರದೇಶದವರನ್ನು ಮದುವೆ ಯಾದವರಿಗೆ ಸರಕಾರ ತಮ್ಮಲ್ಲಿ ಹೊರ(ಹಾಗೂ ಒಳ) ನಾಡಿನೊಳಗಿನ ವರಿಷ್ಠಾಧಿಕಾರದಲ್ಲಿ ನೇಮಿಸಲು ಆತಂಕಪಡುವುದಿಲ್ಲವೆ?

ಇಂತಹ ಮದುವೆಗಳಿಗೆ ಸರಕಾರವು ಅಷ್ಟು ಸಮ್ಮತಿಸುವುದಿಲ್ಲವೆಂದೂ ವಿಶೇಷ ಯೋಗ್ಯತೆಯಿದ್ದುದಕ್ಕಾಗಿ ತೀರ ಆವಶ್ಯಕವೆನಿಸದರೆ ಮಾತ್ರ ಇಂತಹರನ್ನು ಅಪವಾದವೆಂದು ತಮ್ಮ ನಿಯೋಗದಲ್ಲಿ ಇಟ್ಟುಕೊಳ್ಳಬಹುದಾಗಿಯೂ ಸರಕಾರದ ಪರವಾಗಿ ಉತ್ತರವು ದೊರೆತಿತು. ರಾಷ್ಟ್ರಹಿತಕ್ಕಾಗಿಯೆ ಮದುವೆಗಳ ನೋಂದಣೆ ಅವಶ್ಯ. ಕೇವಲ ಧಾರ್ಮಿಕವಿಧಿ ಮಾತ್ರ ಮಾಡಿಸತಕ್ಕವರು, ಎಂಬ ವಿಚಾರವು ಇನ್ನು ನಡೆಯದು. ಪರರಾಷ್ಟ್ರದ ಹೆಣ್ಣುಗಂಡಿನ

ಸಂಬಂಧಗಳು ತಮ್ಮ ನಾಡಿನಲ್ಲಿ ಎಷ್ಟಿವೆ ಎಂಬುದು ನಿಶ್ಚಿತವಾಗಿ ಗೊತ್ತಿದ್ದರೆ ಮಾತ್ರ ಸರಕಾರವು ಅವರ ವಿಷಯಕ್ಕೆ ಜಾಗರೂಕವಾಗಿರಲು ಸಾಧ್ಯ. ಪಾಕಿಸ್ತಾನವು ಸ್ವತಂತ್ರ. ಅದು ಪರರಾಷ್ಟ್ರವೆಂದು ಸಾರಲಾಗಿದೆ. ಹಾಗಾದರೆ, ಇಲ್ಲಿಯ ಮುಸ್ಲಿಮರು ಪಾಕಿಸ್ತಾನಿ ಮುಸಲ್ಮಾನರೊಡನೆ ಬೀಗತನ ಬೆಳೆಸುವುದು ಪರರಾಷ್ಟ್ರದೊಡನೆ ಸಂಬಂಧ ಮಾಡಿದಂತೆ ಎಂದು ಎಣಿಸಲೇ ಬೇಕಲ್ಲವೆ? ಈಗ ಇಲ್ಲಿಯ ಮುಸಲ್ಮಾನರ ಪರಿಸ್ಥಿತಿ ತ್ರಿಶಂಕುವಿನಂತಾಗಿದೆ. ದುರ್ದೈವದಿಂದ ಹಿಂದುಸ್ತಾನ- ಪಾಕಿಸ್ತಾನಗಳಲ್ಲಿ ಪ್ರತ್ಯಕ್ಷ ಯುದ್ಧವು ಆರಂಭವಾದರಂತೂ ಭಾರತದೊಳಗಿನ ಮಹಮ್ಮದೀಯರ ಸ್ಥಿತಿ ಇನ್ನೂ ವಿಚಿತ್ರವಾಗುವುದು. ಇಂತಹ ಅವಸ್ಥೆಯಲ್ಲಿ ಹಿಂದೂ-ಮುಸಲ್ಮಾನರಲ್ಲಿ ಮದುವೆಗಳು ತೀರ ಅನಿಷ್ಟ.

ಜಮಿಯತ್-ಉಲ್-ಉಲೇಮಾ, ಮೋಮೀನ ಮುಸ್ಲಿಂ ಮಹಾಸಭೆ ಮೊದಲಾದ ಸಂಸ್ಥೆಗಳೂ, ಸುಹರ್ವರ್ದಿ ಪ್ರಭೃತಿ ಒಂದು ಕಾಲಕ್ಕೆ ಲೀಗಿನ ಅತ್ಯಾಚಾರಿಗಳ ನೇತಾರರೂ ಆದ ಪ್ರಮುಖರೂ ಇನ್ನುಮೇಲಿ ಇಲ್ಲಿಯ ಮುಸಲ್ಮಾನರೆಲ್ಲ ಭಾರತನಿಷ್ಠರಾಗಿಯೇ ಉಳಿಯತಕ್ಕದ್ದೆಂದು ಪ್ರತಿಜ್ಞಾಪೂರ್ವಕವಾಗಿ ಹೇಳುತ್ತಿದ್ದಾರೆ. ನಿಜಾಮ ಪಾಕಿಸ್ತಾನ ಕೂಡ ಕಾದಬೇಕಾದಾಗ ತಾವು ಹಿಂದುಸ್ತಾನದ ಪಕ್ಷ ವಹಿಸತಕ್ಕವರೆಂದೂ ಮಾತನಾಡುತ್ತಿದ್ದಾರೆ. ಇವರಲ್ಲಿ ಎಲ್ಲರೂ ಸುಳ್ಳಾಡುವರೆಂಬುದು ಅನ್ಯಾಯ. ಆದರೂ ಕುರಾನಿನಲ್ಲಿ ಹೇಳಿದ್ದೆಲ್ಲ ಅಕ್ಷರಶಃ ಪಾಲಿಸಲ್ಪಡತಕ್ಕದ್ದೇ; ಅದು ತಮ್ಮ ಕರ್ತವ್ಯವೆಂದು ಎಲ್ಲಿಯ ವರೆಗೆ ನಂಬಿರುವರೊ, ಬೆಳಗೂ ಬೈಗೂ ಮಕ್ಕಾಮದೀನಾದತ್ತ ಕಣ್ಣಿಟ್ಟು ಇವರ ಪ್ರಾರ್ಥನೆಗಳು ಎಲ್ಲಿಯ ವರೆಗೆ ಅನುದಿನವೂ ಪ್ರತಿ ಮಶೀದಿಗಳಲ್ಲಿ ನಡೆಯುತ್ತಿವೆಯೊ, ತಮ್ಮ ನಡೆನುಡಿ ಉಡುಪುಗಳಲ್ಲಿ ಭಾರತೀಯತೆಗಿಂತ ತುರ್ಕಿ, ಅರಬ್ಬಿ, ಫಾರ್ಸಿಗಳ ಅಂಶವೇ ಹೆಚ್ಚು ಹೆಚ್ಚಾಗಿ ಇರಬೇಕೆಂಬ ಮನೀಷೆಯು ಉರ್ದು, ಹಿಂದುಸ್ತಾನಿ, ಫೈಜ, ಟೋಪಿ ಮೊದಲಾದ ತೆರನಾಗಿ ಎಲ್ಲಿಯ ವರೆಗೆ ವ್ಯಕ್ತವಾಗುತ್ತಿದೆಯೊ ಅಲ್ಲಿಯ ವರೆಗೆ ಮುಸಲ್ಮಾನರ ಧರ್ಮಾಂಧತೆಯು ಅಳಿದು ಅವರು ಸಂಪೂರ್ಣ ಭಾರತೀಯ ನಾಗರೀಕರಾದಾರೆಂದು ಗ್ರಹಿಸುವುದು ರಾಷ್ಟ್ರೀಯ ಗಂಡಾಂತರಕ್ಕೆ ಕಾರಣವಾಗದೆ ಇರದು. ಈ ಮಾತನ್ನು ದ್ವಿರುಕ್ತಿಯೆನಿಸಿದರೂ ಎಷ್ಟು ಬಾರಿ ಜನರ ಗಮನಕ್ಕೆ ತಂದರೂ ಕಡಿಮೆಯೆನಿಸುತ್ತದೆ.

ಪೋಪನಿಂದ ಪರ್ಲುಹರಕೊಂಡು ಯುರೋಪದೊಳಗಿನ ಕ್ರಿಸ್ತಿಧರ್ಮಗಳಲ್ಲಾದ ನವಪರಿವರ್ತನದಂತೆ ಹಿಂದುಸ್ತಾನದೊಳಗಿನ ಮಹಮ್ಮದೀಯರಲ್ಲೂ ಹೊಸ ಮಾರ್ಪಾಡು ಆಗುವದು ಅತ್ಯಾವಶ್ಯಕ. ತಮ್ಮ ಧರ್ಮಗ್ರಂಥದೊಳಗಿನ ಅತಿವಾದದ ಅವಿಚಾರದ ಅಂಶಗಳನ್ನು ತಾವು ಒಪ್ಪುವುದಿಲ್ಲವೆಂದು ಸಾರಿ, ಮೌ. ಆಜಾದರಂತಹರು ಆಧುನಿಕಾಲಕ್ಕೆ ತಕ್ಕಂತಹ ಹೊಸ ಕುರಾನಿನ ಸಂಗ್ರಹವನ್ನು ಸಿದ್ಧಪಡಿಸಿ ಪ್ರಚಾರದಲ್ಲಿ ತರುವ ಎದೆಗಾರಿಕೆಯನ್ನು ತೋರಿಸಬೇಕು. ಮಹಮ್ಮದೀಯ ಲೂಥರನೊಬ್ಬನು ಹುಟ್ಟಿ ಭಾತೀಯ ಮುಸ್ಲಿಂ ಪಥವನ್ನು ಸ್ಥಾಪಿಸಬೇಕು. ಅದು ತನ್ನ ವೈಶಿಷ್ಟ್ಯದಿಂದ ಪಾಕಿಸ್ತಾನಗಳಿಂದ ಭಿನ್ನ, ದೂರವೆಂಬುದು ಸಿದ್ಧವಾಗಬೇಕು. ಭಾರತೀಯ ಈ ಪಂಥವು ಪಾಕಿಸ್ತಾನಾದಿಗಳ ಮತಕ್ಕಿಂತ ಮಿಗಿಲಾದುದೆಂದೂ ಭಾರತದಲ್ಲಿ ಜನ್ಮ ತಾಳಿದ್ದು ತಮ್ಮ ಭಾಗ್ಯವೆಂದೂ ಮುಸಲ್ಮಾನ ಜನದಲ್ಲೆಲ್ಲ ಶ್ರದ್ಧೆಯು ಮೈಗೂಡುವ ವರೆಗೆ ಈ ಜನವನ್ನು ಹಿಂದುಸ್ತಾನದವರು ಸಂದೇಹದಿಂದ ನೋಡಿದರೆ ತಪ್ಪಲ್ಲ; ಭಾರತ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಈ ಸಂದೇಹ ದೃಷ್ಟಿಯು ಆವಶ್ಯಕ ಕರ್ತವ್ಯವೆಂದೇ ಹೇಳಬೇಕಾದೀತು.

ತಮ್ಮ ನಡೆನುಡಿಗಳಲ್ಲಿ ಭಾರತೀಯತೆಯನ್ನು ಹಿಂದೂತನವನ್ನು ತಂದುಕೊಳ್ಳದೆ, ಅದರಿಂದ ತಾವು ಬೇರೆಯೆ ಎಂಬಂತೆ ತೋರಿಸಿಕೊಳ್ಳುವುದು ಮುಸಲ್ಮಾನರಿಗೆ ಇನ್ನುಮೇಲೆ ತೊಂದರೆಗೆ ಕಾರಣವಾಗುವುದು. ಅದನ್ನು ತಪ್ಪಿಸಲು ಅನೇಕರು ಆರ್ಯಸಮಾಜಾದಿಗಳಿಂದ ಸಂಸ್ಕಾರಹೊಂದಿ ಹಿಂದೂಗಳಾಗಲು ಒಲವುವುಳ್ಳವರಾಗುವುದು ಸ್ವಾಭಾವಿಕ. ಹಿಂದು ಹೆಣ್ಣು ಅಥವಾ ಗಂಡು ಮುಸಲ್ಮಾನರೊಡನೆ ಪ್ರೀತಿಬಂಧನದಲ್ಲಿ ಸಿಲುಕಿದಾಗ ಅವರು ಮುಸಲ್ಮಾನರಾಗುವುದೇ ಈ ವರೆಗಿನ ವಾಡಿಕೆಯಾಗಿತ್ತು. ಏಕೆಂದರೆ ಹಿಂದೂ ಸಮಾಜವು ರಾಷ್ಟ್ರೀಯ ದೃಷ್ಟಿಯಿಂದ ಎಚ್ಚೆತ್ತಿದ್ದಿಲ್ಲ; ಇನ್ನು ಮೇಲೆ ಅಂತಹ ಪ್ರಸಂಗಗಳಲ್ಲಿ ಅವರು ಹಿಂದೂ ಪಂಗಡದಲ್ಲಿ ಸೇರಲು

ಬಯಸುವುದೇ ಅವರ ಬಾಳ್ವೆಗೆ ಹೆಚ್ಚು ಅನುಕೂಲವಾದೀತು. ಹಿಂದೂ ಸಮಾಜವು ಇಂತಹರನ್ನು ಅಳವಡಿಸಿಕೊಳ್ಳಲು ಆವಶ್ಯಕವಾದ ಇಂಬುವುಳ್ಳದ್ದೂ ಆಗುತ್ತಿದೆ.

ತಂದೆಯಿಂದ ಜಾತಿಯನ್ನು ನಿರ್ಧರಿಸುವುದಂತೂ ಈಗ ಆವಶ್ಯಕವೇ. ಆದರೆ, ಹಿಂದೂ ಸಮಾಜವು ಈ ವರೆಗೆ ಪರಧರ್ಮಿಗಳ ಎಂದರೆ (ಭಾರತದ ಹೊರಗಿನ ಮತಪ್ರಸಾರಕರ) ಮಾಯಾಜಾಲದಲ್ಲಿ ಸಿಲುಕಿ ಎಣಿಕೆಗೆ ಮೀರಿದ ಹಾನಿಗೆ ಒಳಗಾಗಿದೆ. ಈ ಹಾನಿಯು ತುಂಬಿ ಬರಬೇಕಾದರೆ, ಉತ್ತರ ಹಿಂದುಸ್ಥಾನದ ಪ್ರಸಿದ್ಧ ಮುಖಂಡ ಸನ್ಯಾಸಿಗಳೊಬ್ಬರು **ಪ್ರತಿಪಾದಿಸುವಂತೆ**, ಗಂಡಾಗಲಿ, ಹೆಣ್ಣಾಗಲಿ ಯಾವುದೊಂದು ಪಕ್ಷವು ಹಿಂದುವಾಗಿದ್ದರೂ ಆ ವಿವಾಹಿತರು ಹಿಂದುಗಳೆಂದೇ ಎಣಿಸಲ್ಪಡುವಂತೆ ಕಾನೂನು ಆಗಿ ಅದು ಬೇಗನೆ ಆಚಾರದಲ್ಲಿ ಬಂದಷ್ಟು ಒಳಿತು. ಈ ವರೆಗೆ ಹಿಂದೂಸಮಾಜವು ಎರಡೂ ಬದಿಯಿಂದಲೂ ಹಾನಿಗೆ ಗುರಿಯಾಗಿದೆ. ಹಿಂದುವೆಂಬುವವರು ಬೇಗನೆ ಎಚ್ಚತ್ತು ಈ ತಪ್ಪನ್ನು ತಿದ್ದಿಕೊಳ್ಳದೆ ಇದ್ದಲ್ಲಿ ನಮ್ಮ ಸಮಾಜದ ಮೇಲೆ ಗಂಡಾಂತರವು ಬರುತ್ತಿರುವ ದಾರಿಗಳನ್ನು ಇನ್ನು ನಾವೇ ತೆರೆದು ಇಟ್ಟಂತಾಗುವುದು. ಅನೇಕ ಮೂರ್ತಿಭಂಜಕರೂ ಭಾರತ ವಿಚ್ಛೇದಕರೂ ಜನ್ಮತಾಳಿ ಎದುರಾಳಿಗಳಾಗಿ ಹೊರಬಿದ್ದುದು ಈ ದಾರಿಯಿಂದಲೇ.

ಮಿಶ್ರವಿವಾಹಗಳೆಂದೊಡನೆ ಮನಸ್ಸಿಗೆ ಹೇಗೊ ಎನಿಸುವುದು. ಮಿಶ್ರವಿವಾಹಕ್ಕಾಗಿ ಮಿಶ್ರವಿವಾಹ ಮಾಡಬೇಕಿಲ್ಲ. ರಾಷ್ಟ್ರೀಯ ಐಕ್ಯಕ್ಕೆ, ಮಾನವನ ಉನ್ನತಿಗೆ ಸಹಾಯಕವಾಗುತ್ತಿದ್ದರೆ ಹೇಗೊ ಎನಿಸುವ ಮನೋಭಾವವನ್ನು ವಿವೇಕದಿಂದ ತಿದ್ದಿಕೊಳ್ಳುವುದು ವಿಚಾರಿಗಳ ಕರ್ತವ್ಯವಾಗಿದೆ. ಜಾತೀಯತೆಯಳಿದು ಭಾರತದ ಒಂದು ಜನಾಂಗ ನಿರ್ಮಾಣವಾಗಬೇಕಿದ್ದರೆ, ರಾಷ್ಟ್ರೀಯ ಸೈನ್ಯದ ಅಂತಃಶಕ್ತಿಯು ಜಾತಿಭೇದಗಳ ಮೂಲಕ ನಷ್ಟವಾಗಬಾರದಾಗಿದ್ದರೆ, ಎಂತಹ ಕಿರುಕುಳ ಮನೆತನದಲ್ಲಿ ಹುಟ್ಟಿದ್ದರೂ ಗುಣಕ್ಕೆ ಮನ್ನಣೆ ದೊರೆತು ವ್ಯಕ್ತಿಗಳೊಳಗಿನ ಮಾನವತೆಯ ವಿಕಾಸವಾಗಬೇಕಿದ್ದರೆ ವಿವಾಹಾದಿಗಳಲ್ಲಿ ವ್ಯಕ್ತಿಯ ಸಂಸ್ಕೃತಿಗೆ ಪ್ರಥಮಸ್ಥಾನವಿರಬೇಕು. ತನ್ನ ಶ್ರೇಷ್ಠಗುಣಗಳಿಂದ, ಪೌರುಷ, ಪ್ರಯತ್ನಗಳಂಥ ಯಾವ ಪದವಿಯನ್ನೂ ಪಡೆಯಲು ಎಲ್ಲರಿಗೆ ಅರ್ಹತೆಯಿರಬೇಕು. ಇದರಿಂದಲೇ ನಾಡಿನ ಏಳಿಗೆ. ಇದು ನಿಜವಿದ್ದರೆ ಕ್ರಮವಾಗಿ ಮಿಶ್ರವಿವಾಹಗಳು ಪ್ರಚಾರದಲ್ಲಿ ಬರಲೇಬೇಕೆಂಬುದನ್ನು ಒಪ್ಪಬೇಕಾಗುತ್ತದೆ. ಮೇಲಣ ಮೂಲಭೂತ ವಿಚಾರವೇ ತಪ್ಪಿದ್ದಲ್ಲಿ ತಿಳಿದವರು ಹಾಗೆ ಅದನ್ನು ಸಮಂಜಸವಾದ ರೀತಿಯಲ್ಲಿ (ಕೇವಲ ಶಬ್ದಪ್ರಮಾಣದಿಂದಲ್ಲ) ಸಿದ್ಧಪಡಿಸಬೇಕಾಗಿ ಬಿನ್ನಹ.

ಅಮೇರಿಕೆಯಲ್ಲಿ ಬೇರೆ ಬೇರೆ ದೇಶಗಳಿಂದ ಬಂದ ಜನರು ಅಲ್ಲಿ ನೆಲೆಗೊಂಡು ಅಲ್ಲಿಯ ನಾಗರಿಕರಾಗಿ ಒಬ್ಬರೊಡನೊಬ್ಬರು ಬೆರೆಯುತ್ತಿದ್ದಾರೆ. ಅಲ್ಲಿ ಮಿಶ್ರವಿವಾಹದ ಪ್ರಶ್ನೆಯು ಶಾಸ್ತ್ರೀಯ ಅಭ್ಯಾಸದ ಆವಶ್ಯಕತೆಯುಂಟಾಗಿದೆ. ಸಮಾನ ಸಂಸ್ಕೃತಿಯ, ತೀರ ಭಿನ್ನವಲ್ಲದ ಜನಾಂಗಗಳಲ್ಲಿ ಮದುವೆಗಳಾಗುವುದರಿಂದ ಹೊಸ ಪೀಳಿಗೆಯು ಉತ್ತಮಗೊಳ್ಳುವುದೆಂದು ಬಲ್ಲಿದರು ನಿರ್ಧರಿಸಿದ್ದಾರೆ.

> The mixture of elements, not too dissimilar, provided the social heritage is not unduly disturbed, is on the whole benificial. It results in the increase of vigour and energy in the offspring.
>
> -Mr. Cassel in Jenetics & Ugenics.
>
> Immigrants are desirable, who are of good blood, and undesirable who are of bad blood.
>
> -Duvenport.
>
> Inter-marriages of divers strains is important, both from point of view mentioned above, and on account of the increased vigour

resulting from the heterozynous conditions, but there are important limitations to the width of cross which are desirable.

-Heridity & Ugenics.

ಒಳ್ಳೆಯ ಮನೆತನಗಳಲ್ಲಿ ವಿವೇಕಯುಕ್ತರಾಗಿ ಸಂಯಮದಿಂದ ಮಿಶ್ರವಿವಾಹಗಳು ನಡೆದರೆ ಅದರಿಂದ ರಾಷ್ಟ್ರಕ್ಕೆ ಲಾಭವೇ ಇದೆ. ಮಾನವತೆಯ ವಿಕಾಸಕ್ಕೂ ಇದು ಸಹಕಾರಿ. ಮಹಾಭಾರತದಲ್ಲಿ ಕೃಷ್ಣ, ಭೀಮ, ಅರ್ಜುನಾದಿಗಳು ಮಿಶ್ರವಿವಾಹ ಮಾಡಿಕೊಂಡ ಉದಾಹರಣೆಗಳುಂಟು. ಆರ್ಯರು ಮತ್ತು ಯದು-ತುರ್ವ (ಹಟ್ಟಿಕಾರ) ಸಮ್ಮಿಶ್ರಣವೆ ಯಾದವರ ಕೌರವರ ಪೀಳಿಗೆಯು. ಇವರ ಮುಂದಿನ ರಾಷ್ಟ್ರಕೂಟ, ಚಲುಕ್ಯಾದಿ ಕಂನಾಡ ಅರಸು ಕುಲಗಳು. ಚಲುಕ್ಯ, ರಾಷ್ಟ್ರಕೂಟರು ಆಂಧ್ರ, ತಮಿಳು, ಲಾಟ, ವಂಗ ಮೊದಲಾದ ದೇಶದ ಕನ್ನೆಯರನ್ನು ಮದುವೆಯಾದುದುಂಟು.

Continued inbreading in a small society is certainly prejudicial. Probably alternate periods of fusion with immigrants and stabilising the results, give a nation the best chance of producing a fine type of men and women.

-Dean Inge.

ನಮ್ಮ ದೇಶದಲ್ಲಿ ಕೆಲವು ತೀರ ಸಣ್ಣಸಣ್ಣ ಜಾತಿಯ ಗುಂಪುಗಳಾಗಿವೆ. ಅವರಲ್ಲಿ ಹಲವರಿಗೆ ಮದುವೆಯಾಗದೆಯೆ ಉಳಿಯಬೇಕಾಗುತ್ತಿದೆ. ಇಲ್ಲವೆ ತೀರ ಹತ್ತಿರದಲ್ಲಿ ಎರಡು ಮೂರೇ ಮನೆತನಗಳಲ್ಲಿ ರಕ್ತಸಂಬಂಧವು ಮತ್ತೆ ಮತ್ತೆ ತಿರುಗುತ್ತಿರುತ್ತದೆ. ಇದು ಒಳ್ಳೆಯ ವಂಶೋತ್ಪತ್ತಿಗೆ ಹಾನಿಕರವೆಂದು ಆಧುನಿಕ ಶಾಸ್ತ್ರಗಳು ಸಪ್ರಮಾಣವಾಗಿ ಕಂಡುಹಿಡಿದಿವೆ. ಪ್ರಾಚೀನರ ಬೆಂಬಲವೂ ಇದಕ್ಕುಂಟು. ಈ ಕಾರಣದಿಂದಲೇ ಮಾತುಲಕನ್ಯಾದಿ ವಿವಾಹಗಳು ನಿಷಿದ್ಧ. ಇಂತಹ ಸಂದರ್ಭಗಳಲ್ಲಿ ಸಾಧಾರಣವಾಗಿ ತಮ್ಮ ಸಮಾನ ಇನ್ನೊಂದು ಜಾತಿಯವರೊಡನೆ ರಕ್ತಸಂಬಂಧ ಬೆಳೆಸುವಲ್ಲಿ ಎರಡು ಪಂಗಡಗಳಿಗೂ ಲಾಭವಿದೆ. ಸುಸಂತಾನದ ಆಶೆಯಿದೆ. ದನಗಳ ತಳಿ, ನಾಯಿಯ ಪೀಳಿಗೆಯು ಉತ್ಕೃಷವಾಗಿರಬೇಕೆಂದು ಎಚ್ಚರಪಡುವೆವು. ಆದರೆ, ಮಾನವ ಸಂತಾನದ ಅಭಿವೃದ್ಧಿಗಾಗಿ ಅಷ್ಟು ಶಾಸ್ತ್ರಶುದ್ಧವಾದ ಗಮನವನ್ನು ಕೊಡಲು ಸಾಧ್ಯವಾಗದಾಗಿದೆ. ಶಾರೀರಿಕ ಆರೋಗ್ಯ, ಬುದ್ಧಿ-ಹೃದಯಗಳ ಸಂಸ್ಕಾರಗಳನ್ನೇ ಕೇವಲ ಲೆಕ್ಕಿಸಿ ಮಾನವರ ಮದುವೆಗಳಾಗುವುದಕ್ಕೆ ಹಲವಾರು ತೊಂದರೆಗಳಿವೆ. ದೇಶ, ಧರ್ಮ, ಭಾಷೆ, ಆಚಾರಾದಿ ಸಂಗತಿಗಳ ವಿಚಾರವು ಇಲ್ಲಿ ಅಡಿಗಡಿಗೆ ನಡುವೆ ಬರುತ್ತದೆ. ಇದನ್ನು ಶಕ್ಯವಿದ್ದಷ್ಟೂ ಕಡಿಮೆ ಮಾಡುವ ದಿಕ್ಕಿನಲ್ಲಿ ಮುಂದುವರೆಯುವುದು ವಿಚಾರಿಗಳ ಕೆಲಸವಾಗಿದೆ.

ನಾಗರಿಕತೆಯನ್ನು ಅಳೆಯಬಹುದು. ಆದರೆ, ಸಾಂಸ್ಕೃತಿಕ ದೃಷ್ಟಿಯಿಂದ ಯಾರು ಎಷ್ಟು ಎತ್ತರದವರೆಂದು ಹೇಳಲು ಬಾಹ್ಯಸಾಧನಗಳಿಲ್ಲ. ಕೀಳ್ದಾರಿಗೆ ಹೋಗುವ ಅಪೇಕ್ಷೆ ಯಾರಿಗೆ ತಾನೆ ಇದ್ದೀತು? ಪ್ರತಿಯೊಬ್ಬರೂ ತಮ್ಮ ತಮ್ಮ ಏಳ್ಗೆಯ ದೃಷ್ಟಿಯಿಂದಲೇ ಮುಂದಡಿಯಿಡುವರೆಂಬುದು ಒಂದು ಸಾಮಾನ್ಯ ಗೃಹೀತ ಸಿದ್ಧಾಂತ. ಆದುದರಿಂದ, ಸಂಸ್ಕೃತಿಯ ಸಮಾನ ಮಟ್ಟದಲ್ಲಿ ಇರುವವರ ಆಪ್ತ-ಬಾಂಧವ್ಯಗಳು ಬೆಳೆದು ಭಾರತದಲ್ಲಿ ಐಕ್ಯವೂ ಸಾಂಸ್ಕೃತಿಕ ವಿಕಾಸವೂ ಭರದಿಂದ ಆಗುವುದಕ್ಕೆ ಇಂಬು ದೊರೆಯುವುದು. ಆತ್ಮವಿಕಾಸ, ಸಂತಾನ-ಸುಸಂವರ್ಧನದಲ್ಲಿ ಮದುವೆಯ ಸಾಫಲ್ಯ. ಆದರೆ, ತಾರುಣ್ಯದ ಆಕರ್ಷಣದಲ್ಲಿ ಹಿಂದುಮುಂದಿನ ಯಾವ ವಿಚಾರಕ್ಕೆ ಎಡೆಗೊಡದೆ ದುಡುಕಿ ಮುಂದೆ ಪಶ್ಚಾತ್ತಾಪಕ್ಕೊಳಗಾಗುವುದುಂಟು. ಅಂತರ್ಜಾತೀಯ ವಿವಾಹಗಳಲ್ಲಿ ಮನೆಮನೆಗಳ ಸಂಪ್ರದಾಯ ಭಿನ್ನತೆಯ ತಿಕ್ಕಾಟ; ಅಂತರ್‌ಪ್ರಾಂತೀಯ ವಿವಾಹಗಳಲ್ಲಿ ಆಚಾರಭೇದಗಳಲ್ಲದೆ, ಭಾಷಾಭೇದವೊಂದು ಹೆಚ್ಚಿನ ತೊಡಕು. ಕೇವಲ ಪೂರ್ವ ಸಂಪ್ರದಾಯದಂತೆಯೇ ಆಗುತ್ತಿರುವ ಮದುವೆಗಳಲ್ಲೂ ಗಂಡಾಂತರಗಳು ಕಡಿಮೆಯಿಲ್ಲ. ಹಾಗೆ ಆಗಿರುವ, ಆಗುತ್ತಿರುವ ಮದುವೆಗಳಲ್ಲಿ ದಾಂಪತ್ಯಸುಖದ

ಅಭಾವವೂ ಆಭಾಸವೂ ಅನುಭವಕ್ಕೆ ಬರುತ್ತಿದ್ದರೂ ಅದು ಶಿಷ್ಟಸಂಪ್ರದಾಯವಾಗಿಬಿಟ್ಟಿದೆ. ಹೊಸ ಬಗೆಯ ಹಾದಿಯಲ್ಲಿ ಹೊರಟವರ ಮೇಲೆ ಇದನ್ನು ರೂಢಿಸುವ ಹೊಣೆಗಾರಿಕೆಯುಂಟೆಂಬುದನ್ನು ಅವರು ಮರೆಯಲಾಗದು. ಮದುವೆಯೆಂದರೆ ಸಾಮರಸ್ಯಯೋಗದ ಸಿದ್ಧಿಗಾಗಿ ವ್ರತಿಗಳಾಗಿ ಆ ಸಾಧನದ ಸಂಕಲ್ಪಬದ್ಧವಾದ ಗಂಡು-ಹೆಣ್ಣು. ತಮ್ಮೊಳಗಿನ ಮಾನವತೆಯನ್ನೂ ದೈವೀಭಾವವನ್ನು ವಿಕಾಸಗೊಳಿಸಿಕೊಳ್ಳಲು ಪೋಷಕವಾದ ಆಚಾರಗಳನ್ನು ಭಿನ್ನಸಂಪ್ರದಾಯಗಳೊಳಗಿಂದಲೂ ಸ್ವೀಕರಿಸಲು ಇಬ್ಬರ ಮನಸ್ಸು ಸಿದ್ಧವಿರಬೇಕು. ಭಾರತಹಿತವೇ ತಮ್ಮ ಗುರಿಯಾಗಿದ್ದರೂ ತಾವು ನೆಲಸಿದ ಪ್ರಾಂತದ ಮುಖಾಂತರವಾಗಿಯೆ ಸೇವೆಯನ್ನು ಸಲ್ಲಿಸಿ ಆ ಗುರಿಯನ್ನು ಸಾಧಿಸುವುದು ಸರಿಯಾದ ಮಾರ್ಗ. ಮನೆಯಲ್ಲಿ ಗಂಡನ ಭಾಷೆಯೊ, ಹೆಂಡತಿಯ ಭಾಷೆಯೊ ಎಂಬ ತಿಕ್ಕಾಟದಲ್ಲಿ ಕೆಲವು ದಂಪತಿಗಳು ಹಿಂದೀ ಅಥವಾ ಇಂಗ್ರೇಜಿಗೆ ಮಾರಿಕೊಂಡುದು ಕಂಡುಬರುತ್ತದೆ. ಇದರಿಂದ ಅವರು, ತಾವು ನೆಲಸಿದ ಪ್ರಾಂತಕ್ಕೆ ಕೇಡುಬಗೆಯುವರು. ಅವರ ಹಾಗೂ ಅವರ ಸಂತಾನದ ವಿಚಾರ, ಸೇವೆಯ ಲಾಭವು ಆ ಪ್ರಾಂತಕ್ಕೆ ದೊರೆಯುವುದಿಲ್ಲ. ಇಷ್ಟೇ ಅಲ್ಲ, ಆ ದಂಪತಿಗಳೂ ಆ ಪ್ರಾಂತದ ಜೀವನದೊಡನೆ ಸಮರಸರಾಗದೆ ಸಾಮಾಜಿಕ ಸಂಬಂಧ-ಸಂಪರ್ಕಗಳಿಂದ ದೊರೆಯ ತಕ್ಕ ಅನುಪಮ ಆನಂದಕ್ಕೆ ಎರವಾಗುವರು. ಅವರೂ ಅವರ ಮಕ್ಕಳೂ ಸಮಾಜಬಾಹಿರರಂತೆ, ವಲಸೆಗೆ ಬಂದ ಅನಾಥರಂತೆ, ಕರುಣಾಸ್ಪದರಾಗಿ ತೋರುತ್ತಾರೆ. ಪ್ರಾಂತದ ಭಾಷೆಗೆ ಮನ್ನಣೆ ಕೊಡದ ತಪ್ಪಿಗಾಗಿ ದೊರೆವ ಪ್ರಾಯಶ್ಚಿತ್ತವದು. ವಯಸ್ಸಿನ ವೈಷಮ್ಯದಂತೆ, ಆರ್ಥಿಕ ವೈಷಮ್ಯವೂ ವೈವಾಹಿಕ ಸೌಖ್ಯಕ್ಕೆ ಬಾಧಕ. ಸಾಂಸ್ಕೃತಿಕ ಮಟ್ಟದಲ್ಲಿರುವ ವ್ಯತ್ಯಾಸವೂ ಕಡಿಮೆ ಇದ್ದಷ್ಟು ಹಿತಕರ.

ವಿವಾಹಗಳಿಂದಲೆ ಐಕ್ಯವು ಸಾಧಿಸುವುದೆಂಬ ನಿಶ್ಚಿತವಿಲ್ಲದಿದ್ದರೂ ಅದು ಅತ್ಯಂತ ನಿಕಟಸಂಬಂಧಕ್ಕೆ ಒಂದು ಹಾದಿಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ನಿಕಟಸಂಬಂಧಗಳು ಐಕ್ಯಕ್ಕೆ ಪೂರ್ವಪೀಠಿಕೆ. ಆದ ಕಾರಣ ಈಗಿರುವಷ್ಟಾದರೂ ಭಾರತವು ಅಖಂಡವಾಗಿ ಉಳಿಯಬೇಕೆಂದು ತ್ರಿಕರಣ ಪೂರ್ವಕವಾಗಿ ಹಂಬಲಿಸುವವರು, ದೇಹದ ಅಂಗಾಂಗಗಳಲ್ಲಿ ನಿಕಟ ಸಜೀವ ಸಂಬಂಧವಿರುವಂತೆ, ಜಾತಿಪಂಗಡಗಳಲ್ಲಿ, ಪ್ರಾಂತ-ಪ್ರಾಂತಗಳಲ್ಲಿ ಸಾಮರಸ್ಯವು ಉಂಟಾಗುವಂತೆ ನಮ್ಮ ನಡೆನುಡಿಗಳಲ್ಲಿ ಅಗತ್ಯವಾದ ಮಾರ್ಪಾಡುಗಳನ್ನು ಮಾಡಿಕೊಳ್ಳುವ ಮನಸ್ಸಿನ ಸಿದ್ಧತೆ ನಮ್ಮಲ್ಲಿದೆಯೆ?

ಸಂಕ್ರಮಣ

ಸಂಕ್ರಾಂತಿಯ ಮುಖ ಒಂದು ದಿಕ್ಕಿಗೆ; ಅವಳು ನಡೆದುದು ಇನ್ನೊಂದು ದಿಕ್ಕಿಗೆ, ಎಂಬ ಸೋಜಿಗವೆನಿಸುವ ವರ್ಣನೆಯು ಜ್ಯೋತಿಷಿಗಳಿಂದ ಕೇಳದೊರೆಯುತ್ತದೆ. ಪಂಚಾಂಗದಲ್ಲಿ ಓದಲು ಸಿಕ್ಕುತ್ತದೆ. ಸಂಕ್ರಾಂತಿಯ ನೈಜವರ್ಣನೆಯದು. ಸಂಕ್ರಮಣಾವಸ್ಥೆಯಲ್ಲಿ ಲೋಕದ ನಡೆವಳಿಯೆ ಹಾಗಿರುತ್ತದೆ. ಜನಕಾಲ ಪರಿಸ್ಥಿತಿಯ ಒತ್ತಾಯದಲ್ಲಿ ಸಿಕ್ಕು ಮುಂದೆ ಸಾಗಿರುತ್ತಾರೆ. ಆದರೆ, ಅವರ ಕಣ್ಣು ಎಡೆಬಿಡದೆ ಭೂತಕಾಲದ ಮೇಲೆ! ನಿತ್ಯ ಸಂಕ್ರಮಣದಲ್ಲಿ ಬೆನ್ನ ಕಡೆಗೆ ಸ್ವಲ್ಪ ಹೊರಳಿದ ಮುಖವು, ಮಹಾಸಂಕ್ರಾತಿಯಲ್ಲಿ ತೀರ ವಿಪರೀತವಾಗಿರುತ್ತದೆ. ಸಂಪೂರ್ಣ ವಿರುದ್ಧ ದಿಕ್ಕಿಗೆ!

ಈಗ ನಮ್ಮಲ್ಲಿಯೇ ನೋಡಿ: ನಾವಿದ್ದುದು ೨೦ನೆಯ ಶತಮಾನದ ಮಧ್ಯದಲ್ಲಿ; ಆದರೆ, ಕೆಲವರ ಕಣ್ಣು ಕ್ರಿಸ್ತಶಕದ ೬೦೦೦ ವರುಷಗಳ ಹಿಂದಿನ ಹರಪ್ಪಾ ಮೋಹೇಂಜೊದಾರೊ ಸಂಸ್ಕೃತಿಯಲ್ಲಿ ನಟ್ಟಿವೆ; ಕೆಲವರವು ವೇದಕಾಲದಲ್ಲಿ ಹೊರಳಾಡುತ್ತಿವೆ; ಕೆಲವರವು ಬುದ್ಧ-ಮಹಾವೀರರಲ್ಲಿ ಸೆರೆಸಿಕ್ಕಿವೆ. ಕೆಲವರವು ಪೈಗಂಬರನನ್ನು ಕಾಣಲು ಹಲಬುತ್ತಿವೆ. ಹಲವರವು ೮, ೧೨, ೧೪ನೆಯ ಶತಮಾನಗಳಲ್ಲಾದ ತಮ್ಮ ತಮ್ಮ ಮತಾಚಾರ್ಯರ ಹೆಜ್ಜೆಗಳನ್ನು ಹುಡುಕುತ್ತಿವೆ. ನೆಟ್ಟದೃಷ್ಟಿ ಒಂದು ದಿಕ್ಕಿನಲ್ಲಾದರೆ, ಇವರು ತುಳಿಯುತ್ತಿರುವ ದಾರಿ ಆಧುನಿಕ ನಾಗರಿಕತೆಯದು!

ಸೃಷ್ಟಿಕ್ರಮದಲ್ಲಿ, ಬೆನ್ನಿಗೆ ಮುಖ ತಿರುವಲು ಅವಕಾಶವೆ ಇಲ್ಲ. ಆವಶ್ಯಕವಿದ್ದಲ್ಲಿ ಎಡಬಲಕ್ಕೆ ಸ್ವಲ್ಪ ತಿರುಗಿ ನೋಡಬಹುದು; ಅಷ್ಟೆ. ಒಂದು ದಿಕ್ಕಿಗೆ ನೋಡುತ್ತ ಇನ್ನೊಂದು ದಿಕ್ಕಿಗೆ ನಡೆವವರು ಎಡಹಿ ಬೀಳುವರೆಂದು ಹೇಳಲು ಯಾವ ಜ್ಯೋತಿಷಿಯೂ ಬೇಕಾಗಿಲ್ಲ. ಅಡಿಗಡಿಗೆ ಭಾರತೀಯರು ಮುಗ್ಗರಿಸುತ್ತ ಕುಪ್ಪಳಿಸುತ್ತಿರುವ ಕಾರಣವನ್ನು ಇಲ್ಲಿ ಕಂಡುಕೊಳ್ಳಬಹುದು. ಸಂಕ್ರಮಣದಲ್ಲಿ ಮೂಗಿನ ನೇರಕ್ಕೆ ನೋಡುವವರಿಗೆ ಮುಂದಿನ ದಾರಿಯು ಸರಿಯಾಗಿ ತಿಳಿದೀತು. ಭೂತದಲ್ಲಿ ದೃಷ್ಟಿನೆಟ್ಟವರು ಭವಿಷ್ಯದತ್ತ ಸರಿಯಾಗಿ ಸಾಗಲಾರರು. ಮನುಷ್ಯರಿಗೆ ಹಿಂಬದಿಗೆ ಕಣ್ಣಿಲ್ಲ; ಮುಂಬದಿಗಿವೆ. ಮುನ್ನೋಟಕ್ಕೆ, ಮುನ್ನಡೆಗಾಗಿ ಇವೆ. ಎರಡು ಕಡೆಗೆ ಸಿಲುಕಿ, ಬುದ್ಧಿ-ಹೃದಯಗಳ ಕಾಳಗದ ಕಣವಾದ ಮನುಷ್ಯನು ನರಗುಂದಿದವನಾಗುವನು. ಪೌರುಷಹೀನನಾಗುವನು. ಹಳೆಯ ಒಂದು ಕಾಲದ ವಿಚಾರಗಳಲ್ಲಿ ಆಸಕ್ತಿ, ಶ್ರದ್ಧೆ; ಇಂದಿನ ಜೀವನದಲ್ಲಿ ಅನಿವಾರ್ಯವಾಗಿ ಇರಬೇಕಾದ ಪ್ರಸಂಗ. ಇಂತಹ ಜನಗಳು ಭೂತವ್ಯಕ್ತಿಗಳೇ ಸರಿ. ಇಂದಿನ ಅವರ ಬಾಳು ಭೂತದ ಕೇವಲ ಛಾಯೆ. ಇಂತಹರು ಇಂದಿನ ಜೀವನದಲ್ಲಿ ಆಗಾಗ ಹೊಸ-ಹಳೆಯ ತಿಕ್ಕಾಟದಲ್ಲಿ ತೊಳಲುತ್ತಾರೆ. ಆಡುವುದೊಂದು ಮಾಡುವುದೊಂದು ಇಂತಹ ಪ್ರಸಂಗಗಳು ಅನಿವಾರ್ಯವಾಗಿ ತಲೆದೋರುತ್ತವೆ. ಕೆಲವನ್ನಿಲ್ಲಿ ಉದಾಹರಿಸಬಹುದು.

ರಾಷ್ಟ್ರಧರ್ಮ ಮತ್ತು ಜಾತಿಧರ್ಮದಲ್ಲಿ ಪ್ರಧಾನವಾವುದು, ಗೌಣವಾವುದೆಂಬ ನಿರ್ಣಯವಿಲ್ಲದುದಕ್ಕಾಗಿ ಆಗುವ ಆಂತರಿಕ ಘರ್ಷಣವು ತುಂಬ ತಾಪದಾಯಕವಾಗಿದೆ. ಕಾಂಗ್ರೆಸ್ಸಿನಲ್ಲಿ ಕೆಲಸ ಮಾಡಬೇಕೆಂಬ ಹುಮ್ಮಸ; ಆದರೆ ಅಸ್ಪೃಶ್ಯೋದ್ಧಾರದ ಚಳವಳಿ ತಮ್ಮ ಪೂರ್ವಪರಂಪರೆಗೆ ವಿರುದ್ಧ! ಸ್ವರಾಜ್ಯಸಿದ್ಧಿಗಾಗಿ ಸೆರೆಮನೆಗೆ ಹೋಗಿ ರಾಷ್ಟ್ರಸೇವೆ ಸಲ್ಲಿಸಿದ ಆತ್ಮತೃಪ್ತಿ; ಆದರೆ ಪಂಚಗವ್ಯಾದಿ ಪ್ರಾಯಶ್ಚಿತ್ತ ಪಡೆಯದಿದ್ದರೆ ಪಾಪವು ತಟ್ಟೀತೆಂಬ ಪುಕ್ಕು! ಹಳ್ಳಿಹಳ್ಳಿಗಳಲ್ಲಿ ಗ್ರಾಮಸೇವೆಗೆಯ್ಯುವಾಗ, ಸರಾಜ್ಯಾಶ್ರಮದಲ್ಲಿ ಶಿಕ್ಷೆಯನ್ನುವನು ಭವಿಸುವಾಗ ಸೋದರರಕಿಂತಲೂ ಆತ್ಮೀಯರಾದ ಕೆಲವು ಗೆಳೆಯರಾಗಿದ್ದಾರೆ; ಅವರ ಶಿಕ್ಷಣ ಹೃದಯಸಂಸ್ಕಾರ ತನಗಿಂತ ಎಳ್ಳಷ್ಟೂ ಕಡಿಮೆಯಿಲ್ಲ. ಹೊರಗೆ ಅವರೊಡನೆ ಸಹಪಂಕ್ತಿಯಲ್ಲಿ ಉಂಡು ತಣಿದವನಿಗೆ ಮನೆಯಲ್ಲಿ ಬರುತ್ತಲೆ ಅಡ್ಡಪಂಕ್ತಿ! ಭಾಷಣ-ಲೇಖನಗಳಿಂದ ಜಾತೀಯತೆಯನ್ನು ಹಳಿದು ರಾಷ್ಟ್ರೀಯತೆಯ ಮೇಲ್ಮೆಯನ್ನು ಕೊಂಡಾಡುವುದು; ಸಂಘ-ಸಂಸ್ಥೆಗಳ ಆಯ್ಕೆ, ಅಧಿಕಾರ ಸ್ಥಾನ ಪಡೆವ ಸಂಧಿ ಬರುತ್ತಲೆ ಲಿಂಗ, ಜನಿವಾರಗಳನ್ನು ಮುಂದೆ ಮಾಡಿ ಕೆಲಸ ಸಾಧಿಸುವುದು!

ಹೀಗಾಗುವುದಕ್ಕೆ ಕಾರಣಗಳೆರಡು: ಒಂದು ಸ್ವಾರ್ಥ, ಇನ್ನೊಂದು ಧರ್ಮಶ್ರದ್ಧೆ. ಧರ್ಮದ ಸೋಗಿನಲ್ಲಿ ಸ್ವಾರ್ಥವು ತನ್ನ ಕಾಯಕ ಸಾಧಿಸುತ್ತಿರುವಾಗ ಅದರ ದುಷ್ಪರಿಣಾಮಗಳು ಇನ್ನೂ ಭೀಕರ. ತಾನು ಸ್ವಾರ್ಥಕ್ಕಾಗಿ ಹೀಗೆ ಮಾಡುತ್ತಿದ್ದೇನೆಂಬ ಅರಿವು ದೃಢವಾದ ಹಾಗೆ ಆ ಕೆಲಸದ ಸೊಗಸು ಕಡಿಮೆಯಾಗುತ್ತದೆ. ಆದುದರಿಂದ ಸ್ವಾರ್ಥ ಯಾವಾಗಲೂ ಧರ್ಮ, ಪರೋಪಕಾರಗಳ ವೇಷದಲ್ಲಿ ಮಾನವನನ್ನು ತನ್ನ ಇಷ್ಟದಂತೆ ಕುಣಿಸುತ್ತದೆ. ಸಜ್ಜನರು ಕೂಡ ಸ್ವಾರ್ಥಿಗಳಾಗುವುದು ಈ ಬಗೆಯಿಂದಲೆ. ತಾವು ಮಾಡುತ್ತಿರುವುದು ಕೇವಲ ಮುಖ್ಯವಾಗಿ ಸ್ವಾರ್ಥ; ಅದರೊಡನೆ ಸ್ವಲ್ಪ ಪರೋಪಕಾರವೂ ಘಟಿಸುವುದಲ್ಲ, ಅಷ್ಟಾದರೂ ಕಡಿಮೆಯೆ? ಎಂಬ ನರಿಗಳುಂಟು. ಇಂತಹರನ್ನು ಹುಡುಕಿ ಹೊರಗೆ ಹಾಕುವ ತತ್ಪರತೆಯಿರದ ಸಮಾಜವು ಆತ್ಮಹಾನಿಯನ್ನು ಮಾಡಿಕೊಳ್ಳುತ್ತದೆ.

ಧರ್ಮದ ನಿಜಸ್ವರೂಪವನ್ನು ಗ್ರಹಿಸಲಿಕ್ಕಾಗದೆ ಹಳೆ, ಹೊಸದರ ಎಳೆದಾಟದಲ್ಲಿ ನುಗ್ಗಾಗುವವರ ಪಂಗಡ. ರೂಢಿ, ಸಂಪ್ರದಾಯಗಳಿಗೇ ಧರ್ಮವೆಂದು ಈ ಜನದ ನಂಬುಗೆ! ಅದು ಧರ್ಮದ ಬಾಹ್ಯರೂಪ; ದೇಹ-ದೇಹವು ಅನಿತ್ಯ. ಕಾಲಕಾಲಕ್ಕೆ ಬದಲಾಗುವುದು ಅನಿವಾರ್ಯ. ಧರ್ಮದ ಜೀವಾಳವು ಬೇರೆಯಿದೆ. 'ಯತೋಽಭ್ಯುದಯ ನಿಃಶ್ರೇಯಸಃ ಸಿದ್ಧಿಃ ಸ ಧರ್ಮಃ' ಮನುಷ್ಯನ ಏಳ್ಗೆಗೆ ಕಾರಣವಾಗತಕ್ಕಂತಹದೇ ಧರ್ಮ. ಧರ್ಮವನ್ನಾಚರಿಸಿ ಅಧೋಗತಿಗೆ ಹೋದುದುಂಟೆ? 'ಧಾರಣಾತ್ ಧರ್ಮಮಿತ್ಯಾಹುಃ' ಸಮಾಜಸುಧಾರಣೆಗೆ ಕಾರಣವಾಗುವಂತಹದೇ ಧರ್ಮ. ಸಮಾಜದ ಒಡಕು, ಕೆಡುಕಿಗೆ ಕಾರಣವಾಗುವುದೆಲ್ಲವೂ ಅಧರ್ಮ.

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯ ನಿಗ್ರಹಃ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ।

– ಮನುಸ್ಮೃತಿ

ಇದು ಧರ್ಮದ ತಿರುಳು. ಜೀವಾಳ. ಈ ಗುಣಗಳನ್ನು ಅಳವಡಿಸಿಕೊಳ್ಳುವುದೇ ನಿಜವಾದ ಧರ್ಮ. ಇದಿಲ್ಲದೆ ನಾಮ, ಮುದ್ರೆ, ಲಿಂಗ, ಜನಿವಾರ, ಗಡ್ಡಗಳೆಲ್ಲವೂ ಡಂಭಾಚಾರ. ಅಭಯವೃತ್ತಿ, ದಯೆ, ಆರ್ಜವ, ಜ್ಞಾನ, ದಾನ, ದಮ ಮೊದಲಾದ ಗುಣಗಳ ಸಂಪತ್ತನ್ನು ಪಡೆಯುವುದರಲ್ಲಿಯೆ ಧರ್ಮಸಾಧನೆಯಲ್ಲದೆ, ಇದಕ್ಕೆ ಹೊರತಾದ ಆಚಾರ, ರೂಢಿ, ಸಂಪ್ರದಾಯಗಳೆಲ್ಲವೂ ನಿರ್ಜೀವ. ಈ ಜೀವಾಳಕ್ಕೇ ಸನಾತನ ಧರ್ಮವೆಂಬ ಹೆಸರು. ಇದುವೆ ನಿತ್ಯ ನೂತನ. ಮೂಲದಲ್ಲಿ ಎಲ್ಲ ಧರ್ಮಗಳೂ ಒಂದು; ಧರ್ಮ-ಧರ್ಮಗಳಲ್ಲಿ ದ್ವೇಷ ಅಸೂಯಾದಿ ಭಾವಗಳು ಇರಲಾರವು; ಯಾವ ಧರ್ಮ ಪಂಥದವರಾಗಲಿ, ಅವರು ನಿಜವಾದ ಧರ್ಮವಂತರಾಗಿದ್ದರೆ ಅವರಲ್ಲಿ ಕಲಹಗಳು ಉಂಟಾಗಲಾರವು. ಒಂದುಗೂಡಿ ಪ್ರೀತಿಯಿಂದ ಅವರು ಇರಬಲ್ಲರು,' ಎಂದು ಗಾಂಧೀಜಿಯವರು ಆಗಾಗ ಹೇಳುತ್ತಿದ್ದುದು ಧರ್ಮದ ಈ ವ್ಯಾಖ್ಯೆಯನ್ನು ನೆನೆದುಕೊಂಡೇ. ರೂಢಿ, ಸಂಪ್ರದಾಯಗಳೇ ನಿಜವಾದ ಧರ್ಮವೆಂದರೆ ಯಾವ ಎರಡು ಭಿನ್ನ ಧರ್ಮಗಳು ಹೋಗಲಿ, ಒಂದೇ ಧರ್ಮದ ಉಪಪಂಥಗಳು ಕೂಡ ಕೂಡಿ ನಡೆಯಲಾರವು.

ಧರ್ಮಗಳು ಮೂಲದಲ್ಲಿ ಒಂದೇ ಎಂದು ಸಾರುತ್ತಿದ್ದ ಗಾಂಧೀಜಿಯವರು, ಅದರ ಜೊತೆಗೆ ಇನ್ನೊಂದು ಮಾತನ್ನೂ ವಿಶದಗೊಳಿಸುತ್ತ ಬಂದಿದ್ದರೆ ಅವರು ಹಾರಯಿಸುತ್ತಿದ್ದ ಸುಪರಿಣಾಮಗಳು ಬೇಗನೆ ಕಂಡುಬರ ಬಹುದಾಗಿತ್ತು. ಗೀತಾ, ಉಪನಿಷತ್ತು, ಖುರಾನಾದಿ ಗ್ರಂಥಗಳಿಂದ ಆಯ್ದು ಉತ್ತಮೋತ್ತಮ ಭಾಗಗಳನ್ನು ಅವರು ಸಾರ್ವಜನಿಕವಾಗಿ ಪಠನ ಮಾಡುತ್ತಿದ್ದರು. ಇಂತಹ ಉತ್ತಮವಾದ ಭಾಗಗಳನ್ನಷ್ಟೇ ಆ ಗ್ರಂಥಗಳಿಂದ ಆಯ್ದುಕೊಳ್ಳಬೇಕಲ್ಲದೆ, ಯಾವ ಇಡೀ ಗ್ರಂಥವೂ ಅಮರ ಉಕ್ತಿಗಳಿಂದ ಕೂಡಿರುವುದಿಲ್ಲವೆಂಬ ವಾಸ್ತವ ಸಂಗತಿಯನ್ನು ಅವರು ಜನಸಾಮಾನ್ಯರಿಗೆಲ್ಲ ಸಾರಿ ಹೇಳುವುದು ಅವಶ್ಯವಿತ್ತು. ಮಹಾತ್ಮಾಜೀಯವರ ಬಾಯಿಂದ ಬಂದಿದ್ದರೆ ಈ ಅಪ್ರಿಯ ಸತ್ಯವು ಅಷ್ಟು ಕಟುವೆನಿಸುತ್ತಿದ್ದಿಲ್ಲ. ಅದರಿಂದ ಇಷ್ಟ ಪರಿಣಾಮವೂ ಆಗದೆ ಇರುತ್ತಿದ್ದಿಲ್ಲ.

ಗಾಂಧೀಜಿ ಖುರಾನನ್ನು ಹೊಗಳುತ್ತಾರೆ. ಆದುದರಿಂದ ಇಡೀ ಖುರಾನವು ಅಮರತತ್ವಗಳ ಗ್ರಂಥವೆಂದು ಸಾಮಾನ್ಯ ಜನ ನಂಬಿ ಬಿಡುವುದು. ಮುಸಲ್ಮಾನಿ ಧರ್ಮದಲ್ಲಿ ನಂಬುಗೆ ಇಲ್ಲದ ಕಾಫೀರರ ಕೊಲೆಮಾಡಲು ಪ್ರಚೋದಿಸುವ ಕೆಲವು ವಚನಗಳು ಖುರಾನಿನಲ್ಲೇ ಇವೆಯಂತೆ. ಅವನ್ನು ಭಾಷಾಂತರಿಸಿ ಗಾಂಧೀಜಿಯವರ ನಿದರ್ಶನಕ್ಕೂ ತರಲಾಯಿತೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಒಂದು ವಿಶಿಷ್ಟಕಾಲದಲ್ಲಿ ಮೈದೋರಿದ ಧರ್ಮಗ್ರಂಥಗಳೊಳಗಿನ ಎಲ್ಲಿ ವಚನಗಳು ಎಲ್ಲ ಕಾಲದಲ್ಲೂ ಸರಿ ಹೋಗಲಾರವು. ತಿರುಳಿನಂತಿರುವ ಕೆಲವೊಂದು ಭಾಗವು ಮಾತ್ರ ಸಾರ್ವಕಾಲಿಕವಾಗಿರುತ್ತದೆ, ಎಂದು ಮಹಾತ್ಮಾಜಿಯವರು ಪ್ರಾಮುಖ್ಯತೆಯಿಂದ ಮೇಲಿಂದ ಮೇಲೆ ಹೇಳುತ್ತ ಬಂದಿದ್ದರೆ ಚೆನ್ನಾಗುತ್ತಿತ್ತು.

ಅಮರ ಗಂಗೆಯಾದರೂ ಹರಿವ ನೆಲದ ಮಣ್ಣಿನ ಗುಣ ಅದರಲ್ಲಿ ಸೇರತಕ್ಕುದೇ. ದಿವ್ಯ ದೈವೀ ಸಂದೇಶವಾದರೂ, ಅದು ಯಾವ ದೇಹದ ಮೂಲಕವಾಗಿ ವ್ಯಕವಾಗುವುದೋ, ಆ ದೇಹವು ಬೆಳೆದ ದೇಶ-ಕಾಲ-ಪರಿಸ್ಥಿತಿಯ ಪರಿಣಾಮಗಳು ಆ ಸಂದೇಶದ ಶಬ್ದಯೋಜನೆಯಲ್ಲಿ, ವಿಚಾರದ ರೀತಿಯಲ್ಲಿ ಆಗತಕ್ಕುದು ಅನಿವಾರ್ಯ. ಭಕ್ತಿಯ ಆವೇಶದಲ್ಲಿ ಭಾವಿಕರಿಗೆ ಈ ಮಾತಿನ ಅರಿವು ಉಳಿಯುವುದಿಲ್ಲ. ಧರ್ಮಗ್ರಂಥದಲ್ಲಿ ಕಾಣಿಸಿಕೊಂಡಿರುವ ಚ-ವೈ-ತು-ಹಿಗಳಲ್ಲೂ ಅಗಾಧವಾದ ಅರ್ಥವನ್ನು ತುಂಬಿಸುವರು. ವಿಶಿಷ್ಟ ಕಾಲದ ಹಿನ್ನೆಲೆಯಲ್ಲಿಯೆ ಕೆಲವು ಮಾತುಗಳಿಗೆ ಅರ್ಥವಾಗುತ್ತಿದ್ದರೂ ಅವು ಸನಾತನ ಸೂಕ್ತಿಗಳೆಂದು ಜನ ಭ್ರಮಿಸಿದೆ. ಮನುಧರ್ಮಶಾಸ್ತ್ರದಲ್ಲಿ ಮೇಲೆ ಉಲ್ಲೇಖಿಸಿದ ಧರ್ಮದ ವ್ಯಾಖ್ಯೆಯು ಶಾಶ್ವತ ವಚನ; ಆದರೆ 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ;' ಅಥವಾ ದ್ವಿಜರ ಹೊರತು ವೇದಾಧಿಕಾರ ಬೇರಾರಿಗೂ ಇಲ್ಲ; ವೇದ ಕೇಳಿದರೆ ಅವರ ಕಿವಿಯಲ್ಲಿ ಕಾದ ಶೀಸದ ರಸ ಸುರುವಬೇಕು, ಎಂಬೀ ಬಗೆಯ ಸ್ಮೃತಿ ವಚನಗಳು ಸಾರ್ವಕಾಲಿಕವಾಗಲಾರವು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ದ್ವಿಜರೆಂದು ಕರೆಯಲ್ಪಡುತ್ತಿದ್ದು ಅವರೆಲ್ಲ ಒಂದಾಗಿ ಶೂದ್ರರನ್ನು ಬಹಿಷ್ಕರಿಸಿದ್ದರು. ಆದರೆ, ಕಾಲಕ್ರಮದಲ್ಲಿ ಅದೂರ ದೃಷ್ಟಿಯ ಬ್ರಾಹ್ಮಣರು ಅಚಾತುರ್ಯದಿಂದ ಎಲ್ಲರನ್ನೂ ಶೂದ್ರರೆಂದು ಬಗೆಯಲಾರಂಭಿಸಿ ತಾವೇ ಏಕಾಕಿಗಳಾದರು. ಅಂದಿನ ಕೃತಿ ಅವರ ಇಂದಿನ ಪಾಡಿಗೆ ಬೀಜಾರೋಹಣ. ಎಲ್ಲರೊಡನೆ ಕೂಡಿ ನಡೆವುದನ್ನು ಮರೆತು ಮಡಿವಂತಿಕೆಯಲ್ಲಿ ಸಿಡಿದು ದೂರ ನಿಂತರು. ಇದರ ಅನಿಷ್ಟ ಫಲಗಳನ್ನು ಅನುಭವಿಸುವ ಕಾಲವು ಆರಂಭವಾಗಿದೆ. ಕಹಿಯನ್ನು ಅನುಭವಿಸುತ್ತಿರುವಾಗ ಇದಕ್ಕೆ ಕಾರಣವಾದ ಮನು ವಚನವು ಶ್ಲಾಘ್ಯವೆಂದು ಹೇಳುವುದು ಯುಕ್ತವಾದೀತೆ?

ಇಂತಹ ಕಾಲಿಕ ವಚನಗಳನ್ನು ಕಾಲಕಾಲಕ್ಕೆ ತಿದ್ದಿಕೊಳ್ಳುತ್ತ ಹೋಗುವುದು ಒಳಿತು. ವೇದಕಾಲದ ಯಜ್ಞದ ಸ್ವರೂಪವು ಉಪನಿಷತ್ತು, ಗೀತೆಯ ಕಾಲಕ್ಕೆ ಮಾರ್ಪಟ್ಟಿದೆ. ಜ್ಞಾನಯಜ್ಞ, ತಪೋಯಜ್ಞ, ದಾನಯಜ್ಞಗಳು ಅಗ್ನಿಯಲ್ಲಿ ಹವಿಸ್ಸನ್ನೂ ಸುರುವಿ ಆಹುತಿ ಕೊಡುವ ಯಜ್ಞದ ಸ್ಥಾನದಲ್ಲಿ ಬಂದಿಲ್ಲವೆ? ಧರ್ಮದ ಮೂಲತತ್ವಗಳನ್ನು ನೆನೆದು ಅದರ ಬಾಹ್ಯಸ್ವರೂಪವಾದ ರೂಢಿ, ಸಂಪ್ರದಾಯಾದಿ ನಡೆವಳಿಗಳನ್ನು ಕಾಲಕಾಲಕ್ಕೆ ಮಾರ್ಪಡಿಸಿ ಕೊಳ್ಳದೆ ಇದ್ದರೆ ಆ ಧರ್ಮಪಂಥವು ಅವ್ಯವಹಾರವಾಗುತ್ತದೆ. ಎಲ್ಲ ಧರ್ಮಗಳಲ್ಲಿಯೂ ಇಂತಹ ಕಾಲಿಕ ಭಾಗವು

ಇದ್ದೇ ಇರುತ್ತದೆ. ಅದನ್ನು ಆಯಾ ಮತೀಯರು ಬಿಚ್ಚುಮನಸ್ಸಿನಿಂದ ಒಪ್ಪಿಕೊಳ್ಳಲು ಸಿದ್ಧರಾಗುವ ವರೆಗೆ ಧರ್ಮ-ಧರ್ಮಗಳಲ್ಲಿ ಹೊಡೆದಾಟವೆ ಹೊಡೆದಾಟ! ಶಾಲೆ-ಕಾಲೇಜಿನಲ್ಲಿ ಧಾರ್ಮಿಕ ಶಿಕ್ಷಣದ ಮಾತು ಬೇಡವೆಂಬುದಕ್ಕೂ ಇದೇ ಕಾರಣ. ಕಾಲಿಕ ಭಾಗವನ್ನು ಒಪ್ಪಿಕೊಂಡು ಅದನ್ನು ಕಡೆಗಣಿಸಿ ಸಾರ್ವಕಾಲಿಕ ಶಾಶ್ವತ ಅಂಶಗಳನ್ನು ಸ್ವೀಕರಿಸುತ್ತ ಸಾಗಿದರೆ ಬೇಕಾದಷ್ಟು ಧರ್ಮ ಪಂಥಗಳಿದ್ದರೂ ಕಲಹಕ್ಕೆ ಕಾರಣವಿಲ್ಲ. 'ದ್ಯಾವಾ ಭೂಮಿರ್ ಜನಯನ್ದೇವ ಏಕಃ' ಎಂದು ಅನುದಿನವೂ ಉದ್ಘೋಷಿಸುವವರು ಎಲ್ಲರನ್ನೂ ದೇವರ ಮಕ್ಕಳೆಂದು ಬಗೆದು ಬಂಧುಭಾವದಿಂದ ಬಾಳಲು ಹಿಂಜರಿಯಬೇಕೆ? 'ದಯೆಯೆ ಧರ್ಮದ ಮೂಲವಯ್ಯ' ಎಂಬವರು ವಿಶಿಷ್ಟ ಲಾಂಛನಗಳನ್ನು ಧರಿಸದೆ ಬೇರೆ ಮತದವರನ್ನು ಹಳಿಯಬೇಕೆ? ದೂರೀಕರಿಸಬೇಕೆ? ಜನಿವಾರದ ನಗೆಯಾಡಿ, ಲಿಂಗಧಾರಣೆಯ ಹಟಹಿಡಿಯುವುದೂ ನಗೆಗೇಡು ಅಲ್ಲವೆ? 'ದಯೆದೋರಿರಿ'; 'ಎಲ್ಲರನ್ನೂ ಸಮಾನ ಬಗೆಯಿರಿ' ಎಂದು ಉಪದೇಶಿಸುವಾಗ ಹಿಂದಿನವರ ಕಣ್ಣೆದುರು ಕೇವಲ ತಮ್ಮ ಮತದವರಷ್ಟೇ ಇರುತ್ತಿದ್ದರು. ತಮ್ಮ ಧರ್ಮದ ಪರಿಘದಲ್ಲಿ ಬಾರದೆ ಇದ್ದವರ ಗಣನೆಯೆ ಇರುತ್ತಿದ್ದಿಲ್ಲ. ನಮ್ಮ 'ಜಗದ್ಗುರು'ಗಳ ಜಗತ್ತಿನ ವಿಸ್ತಾರವೆಷ್ಟು? ಆಯಾ ಮತೀಯರು ಹಬ್ಬಿಕೊಂಡಿರುವ ಪ್ರದೇಶವಷ್ಟೆ ತಾನೆ! ಬಸವಣ್ಣನವರು ಅಸ್ಪೃಶ್ಯತೆಯ ಸೂತಕವನ್ನು ಹೋಗಲಾಡಿಸಿದ್ದು ನಿಜ. ಆದರೆ, ಎಷ್ಟರ ಮಟ್ಟಿಗೆ? ಲಿಂಗಧಾರಣ ಮಾಡಿ ಶಿವಶರಣರಾದವರು ಜಾತಿಸೂತಕದಿಂದ ಮುಕ್ತರೆಂದು ಉಪದೇಶಿಸಿದರು. ಇಲ್ಲಿ ಒಂದು ವಿಶಿಷ್ಟ ಮತವಿಚಾರವು ಹಿನ್ನೆಲೆಯಾಗಿದೆ. ಮಹಾತ್ಮಾಜಿಯವರು ಅಸ್ಪೃಶ್ಯತೆಯನ್ನು ತೊಡೆಯಲು ಹೇಳಿದ ಕಾರಣಗಳು ಇದಕ್ಕಿಂತ ಭಿನ್ನವಾಗಿವೆ. ಮಾನವರೆಲ್ಲ ಒಂದು. ಅವರಲ್ಲಿ ಜನ್ಮದಿಂದ ಮೇಲು ಕೀಳೆಣಿಸಿ ಸ್ಪೃಶ್ಯಾಸ್ಪೃಶ್ಯತೆಯ ಮಾತನ್ನು ತರಲಾಗದೆಂದು ಮಹಾತ್ಮಾಜಿಯವರು ಯುಗಧರ್ಮಕ್ಕನುಸಾರವಾಗಿ ಉಪದೇಶದ ರೀತಿಯಲ್ಲಿ ವ್ಯತ್ಯಾಸ ವಾಗುವುದೆಂಬದಕ್ಕೆ ಇದು ದೃಷ್ಟಾಂತ.

ಲಿಂಗ ಕಟ್ಟಿಕೊಳ್ಳಬೇಕು; ಜನಿವಾರ ಧರಿಸಬೇಕು; ಗಡ್ಡ ಇಡಬೇಕು..... ಇಂತಹ ಕಾಲಿಕ ಸಂಗತಿಗಳನ್ನು ಸಾಣಿಸಿ, ಸಣ್ಣಿಸಿ ಸಾರ್ವಕಾಲಿಕವಾಗಿ ನಿಲ್ಲುವ ವಿಚಾರಗಳನ್ನಷ್ಟೇ ಸ್ವೀಕರಿಸತಕ್ಕದ್ದು. ಎರಡರ ಮಿಶ್ರಣವಿಲ್ಲದ ಮತ, ಧರ್ಮಗಳೇ ಇಲ್ಲ. ಇದನ್ನು ಎಲ್ಲರೂ ಒಪ್ಪುವ ವರೆಗೆ ಧಾರ್ಮಿಕ ಮತದ್ವೇಷಗಳು ತಗ್ಗಲಾರವು. ಆದಕಾರಣ, ಮೇಲಣ ವಿಚಾರವನ್ನು ಎಷ್ಟು ವ್ಯಾಸಪೀಠಗಳಿಂದ ತಿಳಿಸಿ ಹೇಳಿದರೂ ಕಡಿಮೆ. ಎಷ್ಟು ಲೇಖನಗಳಲ್ಲಿ ವಿಶದೀಕರಿಸಿದರೂ ಕಡಿಮೆ. ಜನಗಳಿಗೆ ಈ ಮಾತು ಬಿಂಬಿಸಿದಷ್ಟೂ ಭಿನ್ನ ಮತೀಯರಲ್ಲಿ ಐಕ್ಯವು ದೃಢವಾಗುವುದು. ಯಾವ ಮತದಲ್ಲಿ ಒಳ್ಳೆಯದಿದ್ದರೂ ಅದನ್ನು ಸ್ವೀಕರಿಸಲು ಮನಸ್ಸು ಸಿದ್ಧವಾಗುವುದು.

ಭವ್ಯವಾಗಿ ನಿಲ್ಲಿಸಿದ ಮತ, ಧರ್ಮಗಳ ಮಹಾಮಂದಿರಗಳು ಕುಸಿದು ಬೀಳುವುದೇಕೆ? ಗೋಡೆಯ ಇಟ್ಟಿಗೆಗಳಲ್ಲಿ ಗಾಳಿ-ಮಳೆಗಳ ಆಘಾತಕ್ಕೆ ತಡೆಯದೆ ಕೆಲವು, ಸವೆದು ಸಣ್ಣಾಗಿ ಗೋಡೆಯು ಉಳಿದ ಭಾರಕ್ಕೆ ಬಿರಿಯುವುದು. ಕಟ್ಟಡವು ಸಡಿಲುವುದು, ಬೆಚ್ಚಗೆ ಇರಬೇಕೆಂದು ಕಟ್ಟಿರುವ ಪುರಾಣ ಮತ-ಮಂದಿರಗಳ ಪಾಡು ಈಗ ಹೀಗೆಯೇ ಆಗಿದೆ. ಆದರೂ ಅದು ಬಿದ್ದಿಲ್ಲವೆಂಬ ಭ್ರಾಂತಿಯಲ್ಲಿ ಇರುವ ಪ್ರಯತ್ನವೇ ನಡೆದಿದೆ! ಇಂದಿನ ಪರಿಸ್ಥಿತಿಯಲ್ಲಿ ಮತ ನಿಯಮಗಳಂತೆ ಸಂಪ್ರದಾಯಗಳನ್ನೂ ನಡೆಸಿಕೊಂಡು ತನ್ನ ಜೀವಮಾನವನ್ನು ಕಳೆಯುವುದು ಶಕ್ಯವಿಲ್ಲ; ಅವುಗಳಲ್ಲಿ ಅಗತ್ಯವಾದ ಕೆಲವು ಮಾರ್ಪಾಟುಗಳು ಆಗಲೇಬೇಕೆಂದು ಎನಿಸುತ್ತಿದ್ದರೂ ಧೈರ್ಯವಾಗಿ ಹಾಗೆ ಹೇಳುವುದಕ್ಕೆ ಯಾರ ಬಾಯಿಯೂ ಬಾರದು! ಕಲಿಯುಗ. ಹೀಗೆ ಆಗತಕ್ಕದ್ದೇ ಎಂದು ಹೇಗೊ ಸಮಾಧಾನ ತಂದುಕೊಂಡು ಆಭಾಸದ ಜೀವನದಲ್ಲಿಯೇ ಕಾಲ ಕಳೆಯುತ್ತಿರುವರು! ಜಾತಿಭೇದದ ಕಟ್ಟುಗಳು ಸಡಿಲುತ್ತಿವೆ. ಏಕೆ? ಕಲಿಯುಗ ಬಂತು; ಧರ್ಮ ಹಾಳಾಯ್ತು ಎಂಬುದು ಸ್ಥೂಲವಾದ ಮುಗ್ಧಮಾತು. ಮನೋವೃತ್ತಿಯಲ್ಲಿ ಈಗ ಆದ ವ್ಯತ್ಯಾಸವೆ ಇದಕ್ಕೆ ಮುಖ್ಯ ಕಾರಣ. ಮೊದಲಿನಷ್ಟು ಅಥವಾ ಮೊದಲಿನ ರೀತಿಯಲ್ಲಿ ಪಾರಲೌಕಿಕ ಭೀತಿ ಉಳಿದಿಲ್ಲ. ಆಧುನಿಕ ಭೌತಶಾಸ್ತ್ರದ ಸಂಶೋಧನ, ಜಾಗತಿಕ ಧರ್ಮಶಾಸ್ತ್ರ, ಇತಿಹಾಸ, ಪುರಾಣಾದಿಗಳ ತುಲನಾತ್ಮಕ ಅಭ್ಯಾಸ. ಮಾನವವಂಶವಿಜ್ಞಾನ, ಸಮಾಜಶಾಸ್ತ್ರಗಳ ಬೆಳವಣಿಗೆ, ಆಧುನಿಕ ನಾಗರಿತೆಯ ಒತ್ತಡ ಇತ್ಯಾದಿ ಬೇರೆ ಕಾರಣಗಳೂ ಹಳೆಯ ಧಾರ್ಮಿಕ ರೂಢಿ-ಸಂಪ್ರದಾಯಗಳ ಮೇಲೆ ಬಲವಾದ ಆಘಾತಮಾಡುತ್ತಿವೆ.

ಧಾರ್ಮಿಕ ಶ್ರದ್ಧೆಯಿಂದ ಜಾತಿಗಳು ಬೆಳೆದಿಲ್ಲ. ಬದುಕಲು ಸೌಕರ್ಯಗಳು ಹೆಚ್ಚು ಹೆಚ್ಚು ದೊರೆಯ ಲಾರಂಭಿಸಿದಂತೆ ಒಂದೊಂದು ಮತದ ಪ್ರಸಾರವು ಆದುದನ್ನು ಇತಿಹಾಸವು ಹೇಳುತ್ತದೆ. ಕಾಂಗ್ರೆಸು ಅಧಿಕಾರಾರೂಢ ವಾಗುತ್ತಲೆ ಗಾಂಧೀಟೊಪ್ಪಿಗೆಗಳು ಸಾರ್ವತ್ರಿಕವಾಗತೊಡಗಿದವು. ಆ ಮೊದಲು ಗಾಂಧೀಪಂಥಿಗಳನ್ನು ಕಂಡು ಅವ್ಯವಹಾರಿ ಗಳೆಂದು ಗೇಲಿ, ಇವರಿಗೆ ದೂರದಿಂದಲೇ ಶರಣು ಮಾಡುತ್ತಿದ್ದವರು. ಈ ಜನವನ್ನು ಹುಡುಕಿಕೊಂಡು ಬರುತ್ತಿರುವರು. ಉತ್ತರಾದಿಮತದ ಮೋತೀಚೂರಿನ ಸಮಾರಂಭಕ್ಕೆ ಮೋತಿ ಮೇಲಿನ ಭಸ್ಮ ಒರಿಸಿಕೊಂಡು ಊಟಕ್ಕೆ ಹೋದ ಬ್ರಾಹ್ಮಣರುಂಟು. ಕಲ್ಯಾಣದಲ್ಲಿ ನಡೆಯುತ್ತಿದ್ದ ಗಣಾರಾಧನೆಗೆ ಬದನೆಕಾಯಿಗಳನ್ನು ಲಿಂಗವೆಂಬಂತೆ ಧರಿಸಿಬಂದ ಭಕ್ತರಿದ್ದಂತೆ ಬಸವಣ್ಣನವರು ಈ ಗುಟ್ಟನ್ನು ಅರಿತು ಬದನೆಕಾಯಿಗಳು ಲಿಂಗಗಳಾಗುವಂತೆ ಪವಾಡ ಮಾಡಿದರಂತೆ. ಪವಾಡದ ಮಾತು ಅದಂತಿರಲಿ. ಬದುಕಿಗೆ ಅನಕೂಲ ದೊರೆತಂತೆ, ಬದುಕು ದೊರೆಯಹತ್ತಿದಂತೆ-ಬದುಕಿಗಾಗಿ ಜನ ಯಾವುದೊಂದು ಮತಕ್ಕೂ ಮುಕ್ಕುರವರು; ಎಂಬುದು ಮೇಲಣ ಸಂಗತಿಗಳಿಂದ ಸಿದ್ಧವಾಗುತ್ತದೆ.

ತಮ್ಮ ತಮ್ಮ ಜಾತಿ, ಮತಪ್ರಸಾರದ ಗಡಿಬಿಡಿ ಏತಕ್ಕಾಗಿ? ಸ್ವರ್ಗದೊಳಗಿನ 'ಸೀಟು ರಿಝರ್ವ' ಆಗುವುದೆಂದೆ? ಅಥವಾ ತಮ್ಮ ಜಾತಿಯ ಮತಗಳ ಬಲದಿಂದ ಇಹದೊಳಗಿನ ಸ್ಥಾನಮಾನಗಳನ್ನು ನಿಶ್ಚಿತಮಾಡಿಕೊಳ್ಳುವ ಲೋಭದಿಂದೇ? ಬ್ರಾಹ್ಮಣ ಸಂಘ, ಲಿಂಗಾಯುತ ಶಿಕ್ಷಣ ಸಂಸ್ಥೆ, ಇಸ್ಲಾಂ ಸಮಿತಿಗಳಂತಹ ಧಾರ್ಮಿಕ ಹೆಸರಿನ ಸಂಸ್ಥೆಗಳಿಂದ ತಮ್ಮ ಸಮಾಜಕ್ಕೆ ಪಾರಲೌಕಿಕ ಆನಂದವು ದೊರೆಯಲೆಂದು ಕಾರ್ಯವೇನಾದರೂ ಸಾಗಿದೆಯೆ? ದುಡ್ಡು, ನೌಕರಿ ಮೆಂಬರಶಿಪ್ಪು, ಮಂತ್ರಿಪದಗಳ ಮೇಲೆಯೆ ಇವರ ಎಲ್ಲ ಕಣ್ಣು ಇದೆಯೆ? ಇದೆಲ್ಲವೂ ಧರ್ಮದ ಹೆಸರಿನಲ್ಲಿ ನಡೆದ ವ್ಯಭಿಚಾರವಲ್ಲವೆ? ಅನ್ಯಾಯವಾಗಿ ಜಾತಿಧರ್ಮದ ಹೆಸರನ್ನು ಬಳಸದೆ, ಸಮಾಜದಲ್ಲಿ ಸಾಂಸ್ಕೃತಿಕ, ಆರ್ಥಿಕ, ಔದ್ಯೋಗಿಕ ಗುಂಪುಗಳಾಗಿ ಅದಕ್ಕನುಗುಣವಾದ ಹೆಸರುಗಳನ್ನು ಇಟ್ಟುಕೊಳ್ಳುವುದೇ ಪ್ರಾಮಾಣಿಕ ರೀತಿಯಲ್ಲವೆ? ಐಹಿಕ ಚಟುವಟಿಕೆಗಳಲ್ಲಿ ಜಾತಿ, ಧರ್ಮಗಳ, ಹೆಸರನ್ನು ಉಪಯೋಗಿಸಿಕೊಳ್ಳುವುದು ಶುದ್ಧ ಅಪ್ರಾಮಾಣಿಕತನ; ಅಧರ್ಮ, ಅನಾಚಾರ. ಈ ಬಗೆಯ ಅನಾಚರವೇ ಆಚಾರ, ಧರ್ಮ ಎಂದು ಬಗೆವವರೆಗೆ ಭಾರತಕ್ಕೆ ಸ್ವಾತಂತ್ರ್ಯವು ಒಗ್ಗಲಾರದು. ನಿಶ್ಚಿತವಾಗಿ ಕೈಯ್ಗೆ ಬಂದ ತುತ್ತು ಬಾಯ್ಗೆ ಬಾರದೆ ಹೋದೀತು?

ಅಧ್ಯಾತ್ಮ, ಅನುಭಾವವೆಂಬುದು ಕೇವಲ ವೈಯಕ್ತಿಕ. ಸತಿ-ಪತಿ ಭಾವದಂತೆ, ಜೀವ-ಶಿವ ಅಥವಾ ನರ-ನಾರಾಯಣರ ಸಂಬಂಧದಂತೆ-ಏಕಾಂತಿಕ. ಸಾರ್ವಜನಿಕ ವ್ಯಾಪಾರದಲ್ಲಿ ಇದರ ಪಾವಿತ್ರ್ಯವುಳಿಯದು. ಸಮಾಜಧರ್ಮವು ಮಾತ್ರ ಸಾಮೂಹಿಕ. ಸಮಷ್ಟಿಯಾದುದು ಸಮಾಜ. ಯಾವುದೊಂದೆ ಜಾತಿ, ಪಂಗಡವು ಸಮಾಜವಾಗಲಾರದು. ಕೈ ಕಾಲು ಅಥವಾ ತಲೆ ಇದು ಅಂಗ. ಅಂಗಾಂಗಳೆಲ್ಲ ಸಮ್ಯಗ್ರೀತಿಯಲ್ಲಿ ಸಹಕರಿಸಿ ಒಂದಾಗಿದ್ದಾಗಲೆ ಅದು ಸಜೀವ ದೇಹವೆನಿಸುವುದು. ಕೇವಲ ಒಂದು ಬಗೆಯ ವರೆಗೆ ಮಾತ್ರ ಬೆಲೆಯಿದ್ದಲ್ಲಿ ಸಹಸ್ರಶೀರ್ಷ ಪುರುಷನ ಭಗ್ನಮೂರ್ತಿಯದು. ಮುಖ, ಬಾಹು, ಊರು, ಪಾದ ಮೊದಲಾದ ಅಂಗಾಂಗಳೆಲ್ಲ ಒಂದುಗೂಡಿದ ವಿರಾಟ್ ರೂಪವೇ ಪೂಜಾರ್ಹವಾದುದು. ಭಗ್ನ ಭಿನ್ನಮೂರ್ತಿ ಪೂಜಿಸಲಾಗದೆಂದು ಧರ್ಮಜ್ಞರ ಆಜ್ಞೆಯಿದೆ. ಬ್ರಾಹ್ಮಣ, ಲಿಂಗವಂತ, ಜೈನ, ರೆಡ್ಡಿ, ಕುರುಬಾದಿ ಒಂದೊಂದೇ ಅಂಗಗಳು ತಮ್ಮ ತಮ್ಮ ಪ್ರತಿಷ್ಠೆಗೇ ಹೋರಾಡಿ ಇಡೀ ದೇಹದ ಸ್ವಾಸ್ಥ್ಯ-ಸೌಖ್ಯವನ್ನು ಮರೆತುವು. ಅಂಗಾಂಗಗಳು ಕಾದಾಡಿ ತಮ್ಮ ತಮ್ಮಲ್ಲಿ ಅಸಹಕಾರವನ್ನು ಆರಂಭಿಸಿದಲ್ಲಿ ದೇಹದ ಗತಿ ಏನಾಗಬೇಕೊ ಜಾತೀಯ ಕಲಹಗಳಿಂದ ಅದುವೆ ಭಾರತದ ಹಣೇಬರಹವಾಗಿದೆ. ಧರ್ಮದ ಹೆಸರಿನಲ್ಲಿ ನಡೆದ ಜಾತೀಯ ಸ್ವಾರ್ಥದ ಕೃತಿಗಳೆಲ್ಲ ಭಾರತವನ್ನು ಪಾರತಂತ್ರ್ಯದ ಪಾತಾಳಕ್ಕೆ ಇಳಿಸುವ ಪಾಪಾಚರಣೆಯಾಗಿವೆ.

ಸಮಾಜದ ಹಿನ್ನೆಲೆಯಿಲ್ಲದೆ ವ್ಯಕ್ತಿಗೆ ಅಸ್ತಿತ್ವವಿಲ್ಲ. ವ್ಯಕ್ತಿಯು ಒಂದು ಶೂನ್ಯವಿದ್ದಂತೆ. ಸಮಾಜವು ಅದರ ಹಿಂದಿನ ಅಂಕೆ. ಅಂಕೆಯ ಬೆಲೆಯಿಂದ ಶೂನ್ಯಕ್ಕೆ ಮಹತ್ವ. ಸ್ವತಃ ವ್ಯಕ್ತಿಯು ಯಾವಾಗಲೂ ಅತ್ಯಲ್ಪ. ಸಮಾಜ

ದೊಡನೆ ಬರುವ ಸಂಬಂಧದೊಡನೆ ಇವನ ವಿಕಾಸವು ಅವಲಂಬಿಸಿರುತ್ತದೆ. ವ್ಯಕ್ತಿಯು ಸುಖ, ಆನಂದ, ಅಭಿವೃದ್ಧಿಗಳೆಲ್ಲವೂ ಸಾಪೇಕ್ಷವಾಗಿವೆ. ಆದುದರಿಂದ ಸಮಾಜವನ್ನು ಕಡೆಗಣಿಸುವವನು ಆತ್ಮಹಾನಿ ಮಾಡಿಕೊಳ್ಳುತ್ತಾನೆ. ತಮ್ಮ ಜಾತಿಮತಗಳನ್ನಷ್ಟೇ ಸಮಾಜವೆಂದು ಬಗೆದ ಸಂಕುಚಿತ ವಿಚಾರಿಯ ಆನಂದವೂ ಅಭಿವೃದ್ಧಿಯೂ ಅಷ್ಟೇ ಸಂಕೋಚಗೊಳ್ಳುತ್ತದೆ. ಇನ್ನೊಬ್ಬರೊಡನಾಟದಲ್ಲಿಯೆ ವ್ಯಕ್ತಿಯ ಅಂತರಂಗದೊಳಗಿನ ಗುಣಾವಗುಣಗಳ ಆವಿಷ್ಕರಣವಾಗಿ ಅವನಿಗೆ ತನ್ನ ಸ್ವರೂಪಜ್ಞಾನವಾಗುವುದು. ವಿಷಯದಿಂದ ದೂರವಿರುವ ವರೆಗೆ ಎಲ್ಲರೂ ಸಜ್ಜನರೇ, ಸಾಧುಗಳೇ, ಆದರೆ ಅವರು ನಿಜವಾದ ಸಾಧುಗಳೋ? ಅವರ ಆತ್ಮಾನುಭವದ ಮಾತು ಬರಿಯ ಶಬ್ದಜಾಲ. ಲೋಕದಲ್ಲಿದ್ದು ಲೋಕದ ಒಡನಾಟದಲ್ಲಿ ಬಂದ ಅನುಭವದಿಂದಾದ ವಿಕಾಸವೆ ನಿಜವಾದ ಆತ್ಮವಿಕಾಸ.

'ಪಾದೋಸ್ಯ ವಿಶ್ವಾಭೂತಾನಿ' ಭೂತಮಾತ್ರಗಳ ರೂಪದಲ್ಲಿ ಕಾಣಿಸಿಕೊಳ್ಳುವ ಪರಮ ಆತ್ಮಶಕ್ತಿಯನ್ನು ಮರೆತು ನಿರ್ಜೀವ ಮೂರ್ತಿಪೂಜೆಯಲ್ಲಿ ತೊಡಗುವುದು ಅದೊಂದು ಮುದುಮಕ್ಕಳ ಬೊಂಬೆಯಾಟ. ನಿಜವಾದ ದೇವಪೂಜೆಯು ಯಾವುದೆಂಬ ಬಗೆಗೆ ಆದ್ಯರ ಸೂಕ್ತವಚನಗಳಿವೆ. 'ದೇಹವೆ ದೇಗುಲ'ವೆಂದೂ ಅಂತರಂಗದಲ್ಲಿ ಪರಮಾತ್ಮನು ನೆಲಸಿರುವನೆಂದೂ ಬಸವಣ್ಣನವರ ಅನುಭಾವ. 'ಸರ್ವಸ್ಯೈಯ ಜನಸ್ಯಾಸ್ಯ ವಿಷ್ಣುಃ ಅಭ್ಯಂತರೇ ಸ್ಥಿತಃ। ತಂ ಪರಿತ್ಯಜ್ಯ ಯೇ ಯಾಂತಿ ಬಹಿರ್ ವಿಷ್ಣುಂ ನರಾಧಮಾಃ॥ ಎಂದು ಪುರಾಣದ ಆದೇಶ. ಲೋಕಸೇವೆಯೆ ಈಶಸೇವೆ. ಸಮಾಜವೆ 'ಸಹಸ್ರಶೀರ್ಷ ಪುರುಷನು'. ಅದರ ಆರಾಧನೆಯಲ್ಲಿಯೇ ಭೂಮಾಸುಖದ ಅನುಭಾವ ಬರಬೇಕು. ಇದುವೆ ವಿಶ್ವತೋಮುಖನಾದ ಪರಮಾತ್ಮನ ಸೇವೆಯ ವಿಶ್ವಧರ್ಮ.

ಇದು ಬರಲಿರುವ ಸಮಾಜ ಧರ್ಮವು. ಆತ್ಮವಿಕಾಸದ ಹಳೆಯ ದಾರಿಯಿಂದ ಇದು ಸ್ವಲ್ಪ ಬೇರೆಯಾಗಿದೆ. ತಾನು-ತನ್ನ ಕುಟುಂಬ-ತನ್ನ ಜಾತಿ; ಕೊನೆಗೆ ಸ್ವರ್ಗ; ಅಥವಾ ಮೋಕ್ಷ; ಈ ಹಳೆಯ ದಾರಿಯಲ್ಲಿ ರಾಷ್ಟ್ರವು ಎಲ್ಲಿಯೂ ಹತ್ತುವುದಿಲ್ಲ! ಆದುದರಿಂದ, ರಾಷ್ಟ್ರೀಯ ಸ್ವಾತಂತ್ರ್ಯವು ನಮಗೆ ಈ ವರೆಗೆ ಬೆಟ್ಟಿಯಾಗಲೇ ಇಲ್ಲ. ರಾಷ್ಟ್ರಕ್ಕೆ ಪ್ರದಕ್ಷಿಣೆಗೆಯ್ದು 'ವಸುಧೈವ ಕುಟುಂಬ'ದ ಗುರಿಯನ್ನು ಮುಟ್ಟುವುದು', ಇಂದಿನ ಯಾತ್ರಾಕ್ರಮ. ಆದುದರಿಂದ ಇನ್ನು ಮುಂದೆ ಜಾತಿವಿಶಿಷ್ಟ, ಧರ್ಮಕ್ಕೆ ಕರೆದೊಯ್ವ ಅಡ್ಡಹಾದಿಯನ್ನು ಬಿಟ್ಟು ರಾಷ್ಟ್ರದ ಮುಖಾಂತರವಾಗಿ ಮಾನವಲೋಕದ ಸೇವೆಯಲ್ಲಿ, ಪರಮಾತ್ಮನ, ವಿರಾಟ್‌ರೂಪದ ಆರಾಧನೆಯಲ್ಲಿ ಭಾಗವಹಿಸುವ ಮಹದಾನಂದದತ್ತ ತೆರಳುವುದು ಕಾಲೋಚಿತವಾದ ಶ್ರೇಯಃಮಾರ್ಗವಾಗಿದೆ.

ರಾಷ್ಟ್ರೀಯತ್ವವು ಇಂದಿನ ಯುಗಧರ್ಮ. ಆದರೆ, ರಾಷ್ಟ್ರಾಭಿಮಾನವು ಘೋರ ಮಹಾಯುದ್ಧಗಳಿಗೆ ಕಾರಣ ವಾಗುತ್ತಿರುವುದು ಸುಳ್ಳಲ್ಲ. ಈ ಕಾರಣದಿಂದ ಯಾವುದೇ ಭೌಗೋಲಿಕ ಹೆಮ್ಮೆ ಅನಿಷ್ಟವೆಂದೂ ಪ್ರಾದೇಶಿಕ ಅಭಿಮಾನವು ಇರಲೇಕೂಡದೆಂದೂ ಪ್ರತಿಪಾದಿಸುವ ವಿಶ್ವಬಂಧುತ್ವ ಪಂಥಿಗಳು ಕೆಲವರುಂಟು. ವಿಶ್ವಬಂಧುತ್ವವು ಕೊನೆಯ ಗುರಿ; ನಿಜ. ಆದರೆ, ಆ ಕೊನೆಯನ್ನು ಮುಟ್ಟಲು ನಡುವಿನ ಕೆಲವು ಮೆಟ್ಟಲುಗಳಿವೆ. ಅವನ್ನು ಮರೆತರೆ ಕಾಲುಜಾರಿ ಬೀಳುವಲ್ಲಿ ಸಂದೇಹವಿಲ್ಲ. ಸ್ವಾರ್ಥತ್ಯಾಗದ ಉಪದೇಶ ಕೆಲವೆಡೆಗಳಲ್ಲಿ ನಿರರ್ಥಕವಾಗುತ್ತದೆ. ಯಾರಲ್ಲೀ ಸ್ವ-ಅರ್ಥ'ವೇ ಇಲ್ಲವೊ ಅವರು ತ್ಯಾಗ ಮಾಡುವ 'ಅರ್ಥ'ವೇನು? ಧನ, ವಿದ್ಯೆ, ತೇಜಸ್ಸಿನ ಸಂಪಾದನೆಯಿಲ್ಲದೆ ತ್ಯಾಗದ ಮಾತು ಬಾಲಿಶ. ಇಂತಹ 'ಸ್ವಾರ್ಥತ್ಯಾಗಿ'ಗಳು ಆತ್ಮವಂಚಕರೊ, ಪರವಂಚಕರೊ, ಎಬಡರೊ, ಎಗ್ಗರೊ ಆದ ಪರಾವಲಂಬಿಗಳಾಗುವರು. ಈ ಬಗೆಯ ಪರೋಪಕಾರಿಗಳ ಪಿಡುಗು ಸಮಾಜದ ನೈತಿಕ ಮಟ್ಟವನ್ನು ಕೆಳಕ್ಕೆ ತರುವುದು. ಅಭಿಮಾನ, ಅಹಂಕಾರತ್ಯಾಗದ ದುಷ್ಪರಿಣಾಮಗಳೂ ಇದೇ ತೆರನಾಗಿವೆ. ಸ್ವ-ಅಭಿಮಾನವಿಲ್ಲದವನ ಆತ್ಮವಿಶ್ವಾಸವು ಕ್ಷೀಣವಾಗುವುದು; ಮನಸು ದುರ್ಬಲವಾಗುವುದು. ದುರ್ಬಲ ಮನಸಿನವರು ಪರಾವಲಂಬನದಲ್ಲಿ ಸಮಾಧಾನತಾಳುವರು. ಈ ಕಾರಣದಿಂದ ಸ್ವ-ಅರ್ಥ, ಸ್ವ-ಅಭಿಮಾನ, ತನ್ನತನದಲ್ಲಿ ವಿಶ್ವಾಸವು ವ್ಯಕ್ತಿಯೊಳಗಿನ ಗುಣವಿಕಾಸಕ್ಕೆ ಮೂಲಾಧಾರ. ಅದನ್ನೆ ಕತ್ತರಿಸುವುದು ಆತ್ಮನಾಶ. ಸ್ವ-ಅರ್ಥದಿಂದ ಸ್ವಾರ್ಥ, ಅಭಿಮಾನದಿಂದ ಅಹಂಕಾರ ದೂರವಿಲ್ಲ. ಅಹಂಕಾರ, ಸ್ವಾರ್ಥಗಳೇ ಲೋಕಹಾನಿಗೆ

ಕಾರಣವೆಂಬುದು ಸರಿ. ಬೆಂಕೆ, ಮಿಂಚುಗಳಿಂದ ಲೋಕದ ಹಾನಿಯಾಗುವುದನ್ನು ಎಲ್ಲರೂ ಬಲ್ಲರಾದರೂ ಜಾಣ್ಮೆಯಿಂದ ಅದನ್ನೆ ಲಾಭಕರವಾಗುವಂತೆ ಯೋಜಿಸಿಕೊಂಡಿಲ್ಲವೆ? ಅಹಂಕಾರದ ಪೋಷಣೆಯಿಂದ ಕಲಹ, ಕಾಳಗಗಳು ತಲೆದೋರುವುದಾದರೆ ಅಹಂಕಾರವು ಕಮರಿದಲ್ಲಿ ಹೇಡಿತನ, ನಿಷ್ಕ್ರಿಯತೆಗಳು ಆವರಿಸುವುವು.

ಜೀವದ ವಿಕಾಸಕ್ಕೆ ದೇಹವು ಹೇಗೆ ಅನಿವಾರ್ಯವೊ ಹಾಗೆ ಮಾನವ ಕುಟುಂಬದ ಸೇವೆಗೆ ರಾಷ್ಟ್ರವೆಂಬುದು ದುರ್‌ನಿವಾರ್ಯ. ಮೋಕ್ಷಸಂಪಾದನೆಯ ಗಡಿಬಿಡಿಯಲ್ಲಿ ದೇಹವನ್ನು ಕೀಳ್ಗಳೆದು ದೇಹನಾಶ ಮಾಡಿಕೊಳ್ಳುವ ದಾರಿಯಲ್ಲಿ ನಡೆವ ವೇದಾಂತಿಗಳು, ಭಕ್ತರು ಉಂಟು. ಯೋಗ್ಯವಾದ ರಾಷ್ಟ್ರಾಭಿಮಾನವನ್ನೂ ಬೇಡವೆಂಬ ವಿಶ್ವಬಂಧುತ್ವವಾದಿಗಳೂ ಆ ಸಾಲಿನವರೇ. ಅಗಾಧವಾದ ಮಾನವ ಕುಟುಂಬದ ಹೆಸರಿನಲ್ಲಿ ಆಗಬೇಕಾದ ಸೇವೆಯನ್ನು ತಾನು ನಿಂತಿರುವ ನೆಲ, ಜನ, ಭಾಷೆ, ಸಂಸ್ಕೃತಿಗಳ ಮೂಲಕವಾಗಿಯೆ ಸಲ್ಲಿಸಬೇಕಷ್ಟೆ? ಯಾವ ಮಹಾಕಾರ್ಯವಾಗಲಿ, ತನ್ನಿಂದ-ತನ್ನ ಸುತ್ತಲಿಂದಲೆ ಆರಂಭವಾಗಬೇಕಷ್ಟೆ? ಕಾಲ ಕೆಳಗಿನ ನೆಲವನ್ನು ಮರೆತು ವಿಶ್ವದ ಮಾತನಾಡುವುದು ಬರಿಯ ಆಭಾಸ; ತಾಯಿಯಾಗಲು ಒಲ್ಲದವಳ ಪುತ್ರವಾತ್ಸಲ್ಯದಂತೆ.

ಭಾರತವು ಜಾಗತಿಕರಂಗದಲ್ಲಿ ತನ್ನ ಸ್ಥಾನ-ಮಾನಗಳನ್ನು ಕಾಯ್ದುಕೊಂಡು ಮುಂದುವರೆಯಬೇಕಾದರೆ ಹೊಸ ಬಗೆಯ ಸಮಾಜರಚನೆಯಾಗಲೆಬೇಕು. ಉಳಿದ ರಾಷ್ಟ್ರಗಳೆಲ್ಲ ಆರ್ಥಿಕ ದೃಷ್ಟಿಯಿಂದ ನಿಯೋಜಿತ-ಸಮಾಜಗಳು (Planned Society) ಅಸ್ತಿತ್ವದಲ್ಲಿ ಬರತೊಡಗಿವೆ. ಇದಿಲ್ಲದೆ ಔದ್ಯೋಗಿಕ ಅಭಿವೃದ್ಧಿಯೆ ಅಸಾಧ್ಯ. ಎಲ್ಲ ಉದ್ಯೋಗಗಳ ರಾಷ್ಟ್ರೀಕರಣವಾಗಿ ದೇಶದಲ್ಲಿ ಈಗಿರುವ ಆರ್ಥಿಕ ವೈಷಮ್ಯವು ಬೇಗನೆ ನಷ್ಟವಾದಷ್ಟು ಲೇಸು. ಧನ ಅಥವಾ ಅಧಿಕಾರಲೋಭಿಗಳಾದ ಕೆಲವು ಜನರೇ ತಮ್ಮ ಸ್ವಾರ್ಥಸಾಧನೆಗಾಗಿ ಅಜ್ಞರಾದ ಸಾಮಾನ್ಯ ಜನರ ತಲೆಯಲ್ಲಿ ಧಾರ್ಮಿಕ ಅಥವಾ ಜಾತಿಯ ಗಾಳಿಯನ್ನು ತುಂಬಿ ತಮ್ಮ ಕಾಯಕ ಸಾಧಿಸಲು ಅವರನ್ನು ಉಪಯೋಗಿಸಿಕೊಳ್ಳುತ್ತಲಿದ್ದಾರೆ. ಒಳಹೊಕ್ಕು ನೋಡಿದಲ್ಲಿ ಇಂದಿನ ಲೌಕಿಕ ವ್ಯವಹಾರಗಳಲ್ಲಿ ಜಾತಿ, ಧರ್ಮದ ಮಾತಿಗೆ ಅವಕಾಶವೇ ಇಲ್ಲ. ಮೋಟಾರ ಯುನಿಯನ್, ಗಿರಣಿ ಕಾಮಗಾರ ಸಂಘ, ಸಿಂಪಿಗರ ಕೂಟ, ಬರಹಗಾರರ ಬಳಗ, ಅರಳೆ ವರ್ತಕರ ಸಮಿತಿ ಎಂದು ಮುಂತಾದ ಸಂಸ್ಥೆಗಳ ವ್ಯವಹಾರಗಳ ಅಭಿವೃದ್ಧಿಗೆ ಧರ್ಮ ಅಥವಾ ಜಾತಿಯ ಆವಶ್ಯಕತೆಯೇನಾದರೂ ಇದೆಯೆ? ಆದರೆ ಸದಸ್ಯ, ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧ್ಯಕ್ಷರಂತಹ ಸ್ಥಾನಗಳನ್ನು ಆಕ್ರಮಿಸಲು-ಸ್ವಾರ್ಥ ಸಾಧಿಸಲು ಜಾತಿಯ ಭೂತದ ವೇತಾಳಮಂತ್ರವನ್ನು ಉಪಯೋಗಿಸುವ ಸುಡುಗಾಡಸಿದ್ಧರು ನಮ್ಮ ಜೀವನದ ಎಲ್ಲ ರಂಗಗಳಲ್ಲೂ ಮಾಟ, ಮೋಸಗಳ ಕಾಯಕ ನಡೆಸಿದ್ದಾರೆ. ಜಾತಿಯ ಹೆಸರಿನಲ್ಲಿ ಅಧಿಕಾರಸ್ಥಾನಗಳನ್ನು ಆಕ್ರಮಿಸುವರು; ಸಿರಿವಂತರಾಗುವರು. ಸಿರಿವಂತಿಕೆಯನ್ನು ಇವರು ತಮ್ಮ ಜಾತಿಯ ಬಡವರಿಗಾಗಿ, ಯಾರ ಮತಗಳ ಬೆಂಬಲದಿಂದ ಇವರು ಮುಂದೆ ಬಂದರೊ ಅವರಿಗೆ ಹಂಚಿದ ಉದಾಹರಣೆಗಳು ಯಾವ ಜಾತಿಯಲ್ಲಾದರೂ ಉಂಟೆ? ಅಧಿಕಾರ, ಸಿರಿವಂತಿಕೆ ಬಂದೊಡನೆ ಇವರ ಕಣ್ಣು ತಿರುಗುವುವು. 'ಧೃತ-ರಾಷ್ಟ್ರ'ರಾಗುವರು. ಒಂದೊಂದು ಸ್ಥಾನವನ್ನಾಕ್ರಮಿಸಿ, ರಾಷ್ಟ್ರೀಯ ಶಕ್ತಿಯನ್ನು ಧಾರಣಮಾಡಿ ದುರುಪಯೋಗ ಮಾಡುವರು.

ಪುಣ್ಯಮಾಡಿ ಮೇಲಣ ಜಾತಿಯವರಾಗಿ, ಸಿರಿವಂತರಾಗಿ ಹುಟ್ಟುತ್ತಾರೆಂಬ ವಿಚಾರದ ಬುಡ ಸಡಿಲಿದೆ. ಆಚಾರಹೀನರೆಂದು ಹೇಳುವ ಬಿಳಿಯರು ರಾಜ್ಯವೈಭವವನ್ನೂ ಲೋಕದಲ್ಲಿ ಪ್ರಶಸ್ತಿಯನ್ನೂ ಪಡೆದು, ನಮ್ಮಲ್ಲಿ 'ಪವಿತ್ರ ಕುಲ'ದವರೆಂಬ ಹೆಮ್ಮೆಯವರನ್ನು ತಮ್ಮ ಅಡಿಯಾಳಾಗಿರಿಸಿರುವರು. ರಾಜಕೀಯ, ಸಾಮಾಜಿಕ ಪರಿಸ್ಥಿತಿಯು ಕೆಲವೊಂದು ವಿಶಿಷ್ಟಜನಗಳ ಮೇಲ್ಮೆಗೆ ಅಥವಾ ಕೀಳ್ಮೆಗೆ ಕಾರಣವಾಗುತ್ತದೆ. ಅವರು 'ಭೂ-ದೇವರು' ಆಗುತ್ತಾರೆ. ಪುರೋಹಿತ ವರ್ಗವು ಒಂದು ಕಾಲಕ್ಕೆ ಭೂ-ದೇವರು; ಐ.ಸಿ.ಎಸ್. ನವರು ಮೊನ್ನೆ ತಾನೆ ಭೂದೇವರಿದ್ದರು. ಅವರು ತೇಜೋಹೀನರಾಗಿ ರಾಜಕೀಯ ಪಕ್ಷದ ಹಿರಿಯಾಳುಗಳು ಇದೀಗ ಭೂದೇವತೆಗಳಂತೆ ಮೆರೆಯುತ್ತಲಿದ್ದಾರೆ. ಹಿಂದಿನ ಜನ್ಮದ ವಿಚಾರವನ್ನು ತರುವುದೇ ಆದರೆ ಇಂದಿನ ಪುಣ್ಯವಂತ ಜಾತಿಗಳೇ ಬೇರೆ! ಹಾಗಾದರೆ ನಿನ್ನೆಯವು ಈಗ ಪಾಪ ಮಾಡಿದವರವೊ?

ಪುನರ್ಜನ್ಮವೆಂಬುದು ಇಲ್ಲವೆಂತಲ್ಲ. ಆದರೆ ಪಾಪ-ಪುಣ್ಯದ ನಮ್ಮ ತಿಳುವಳಿಕೆ ಸರಿಯಾಗಿಲ್ಲವೆಂದು ಇದರ ಅರ್ಥ. ಕಾಲೋಚಿತ ಸನ್ಮಾರ್ಗದಲ್ಲಿ ನಡೆದವರಿಗೆ ಒಳ್ಳೆಯ ಫಲವು ದೊರೆಯುವುದು ಲೆಕ್ಕಾಚಾರ. ಆದರೆ, ಇಂತಹ ಜಾತಿಗಳೇ ಪುಣ್ಯವಂತರವೆಂಬ ಸಿದ್ಧಾಂತ ನಿರಾಧಾರ. ವ್ಯಕ್ತಿಯ ಶೀಲ ಅವನ ದೈವ. ಇಲ್ಲವಾದರೆ ಪುಣ್ಯವಂತರವು ಎಂಬ ಜಾತಿಗಳು ಬೀಳಲು ಕಾರಣವೇನು? ಜಾತಿಯ ಶೇರುಗಳ ಬೆಲೆ ಕಾಲಕಾಲಕ್ಕೆ ಬದಲಾಗುವುದು ಸ್ವರ್ಗದಲ್ಲೊ? ಭೂಲೋಕದಲ್ಲೊ?

ಜಾತಿಯ ಮೇಲ್ಮೆ ಅಥವಾ ಕೀಳ್ಮೆಗೆ ಪಾರಲೌಕಿಕ ಸಂಬಂಧವೇನೂ ಇಲ್ಲವೆಂಬುದು ಸ್ಪಷ್ಟವಾಗಿ ರುವುದಾದರೂ ಆರ್ಥಿಕ ದೃಷ್ಟಿಯಿಂದ ಸಮಾಜವನ್ನು ಸಂಘಟಿಸುವುದಕ್ಕೆ ತೊಡಕು ಎಲ್ಲಿ? ರಾಷ್ಟ್ರೀಯತೆಗಿಂತ ಜಾತಿ ಮತವೆ ಮಿಗಿಲೆಂಬ ಮೂಢಭಾವದ ಸೆರೆಯೊಳಗಿಂದ ನಮ್ಮ ನಾಡಿನ ಜನಗಳ ಮನಸು ಇನ್ನೂ ಮುಕ್ತವಾಗಿಲ್ಲ. ತಿಳುವಳಿಕೆಯುಂಟಾಗಿ ಈ ದಿಕ್ಕಿನಲ್ಲಿ ಸ್ವಲ್ಪ ಮುಂದಡಿಯಿಡಬೇಕೆನ್ನುವವರಿಗೆ ಇನ್ನೂ ಕೆಲವು ತೊಂದರೆಗಳಿವೆ. ತನ್ನದಲ್ಲದ ಇನ್ನೊಂದು ಜಾತಿ ಮತದವರ ಗೆಳೆತನ, ಅಭಿಮಾನ ಇದ್ದವನನ್ನು ಆತನ ಜಾತಿಬಂಧುಗಳು ದೂರವೆಣಿಸುವರು. ಆತನಿಗೆ ತನ್ನವರೆಂಬವರ ಸಹಕಾರ ಸಹಾನುಭೂತಿಗಳಿಗೆ ಎರವಾಗ ಬೇಕಾಗುವುದು. ಹೊಸದಾಗಿ ಸ್ನೇಹ ಮಾಡಿದ, ಅಥವಾ ಪಂಗಡದಲ್ಲಿ ಸೇರಿದವರಲ್ಲಿ ಒಬ್ಬಿಬ್ಬರು ಆತ್ಮೀಯತೆಯಿಂದ ನಡೆಸಿಕೊಂಡರೂ ಮಿಕ್ಕ ಜನ ಆತನನ್ನು ಸಂದೇಹದಿಂದ ಕಾಣುವರು. ಸ್ಥಾನ ಮಾನಗಳ ಲಾಭದ ಪ್ರಸಂಗ ಗಳಿದ್ದಾಗಲಂತೂ ಆ ಹೊಸಬನನ್ನು (ತಮ್ಮವನಲ್ಲವೆಂದು) ಲೆಕ್ಕಕ್ಕೇ ಹಿಡಿಯುವುದಿಲ್ಲ! ಈ ಪರಿಸ್ಥಿತಿಯಲ್ಲಿ ಮುನ್ನಡೆವವನು ಕೇವಲ ತತ್ವನಿಷ್ಠನಾಗಿದ್ದರೆ ಮಾತ್ರ ತನ್ನ ನಿಶ್ಚಿತಮಾರ್ಗದಿಂದ ಕದಲುವುದಿಲ್ಲ. ಕೊನೆಗೆ ತಮ್ಮ ಜಾತಿಯವರೇ ತನಗೆ ಗತಿಯೆಂದು ಸಾಮಾನ್ಯರು ಗೊಣಗಬೇಕಾಗುವುದು. ಕೆಲವರಂತೂ ಇಂತಹ ಕಹಿ ಅನುಭವದಿಂದ ತಲೆತಿರುಕ ಜಾತಿವಾದಿಗಳಾಗುವುದೂ ಉಂಟು. ಇಂತಿವೆಲ್ಲ ತೊಡಕು ತೊಂದರೆಗಳೊಳಗಿಂದ ಸಂ-ಕ್ರಮಣ ಮಾಡುತ್ತ ರಾಷ್ಟ್ರೀಯ ಸಮಾಜವು ತಲೆಯೆತ್ತಬೇಕಾಗಿದೆ.

ಇಲ್ಲಿ ಇನ್ನೊಂದು ಗಂಡಾಂತರ. ಜಾತೀಯ ವಜ್ರಪಂಜರದೊಳಗಿಂದ ಬಿಡುಗಡೆ ಹೊಂದಿ ರಾಷ್ಟ್ರೀಯ ನಿಯೋಜಿತ ಸಮಾಜರಚನೆಯಲ್ಲಿ ದೇಶವು ರಾಜಕೀಯ ಪಕ್ಷದ ಲೋಹಮುಷ್ಟಿಯಲ್ಲಿ ಸಿಕ್ಕು, ಒರಲುವ ಹೊತ್ತು ಬರುವುದು. ಸೃಷ್ಟಿಯಲ್ಲಿ ಎರಡು ಶಕ್ತಿಗಳಿವೆ. ಆಕರ್ಷಣ ಮತ್ತು ಪ್ರತಿಸಾರಣ. ಆಕರ್ಷಣದಿಂದ ಕೇಂದ್ರೀಕರಣ ವಾಗುವುದಾದರೆ, ಪ್ರತಿಸಾರಣದಿಂದ ವಸ್ತುಗಳು ದೂರ ಹೋಗುವುವು. ಇವೆರಡೂ ಶಕ್ತಿಗಳು ಸರಿಯಾಗಿ ಕೆಲಸಮಾಡುತ್ತಿದ್ದಾಗಲೆ ಸೃಷ್ಟಿಯು ಯಥಾಕ್ರಮದಲ್ಲಿ ಸಾಗುವುದು. ಸಾಮಾಜಿಕ ರಚನೆಯಲ್ಲಿಯೂ ಇದೇ ತತ್ವವನ್ನು ಅವಲಂಬಿಸಬೇಕು. 'ಇಝಂ'ಗಳ ಗಾಳಿಬಡಿದು ಅತಿವಾದಿಗಳಾದ ಅವಿವೇಕಿಗಳಿಂದ, ಸಮಾಜದ ತೂಕ ತಪ್ಪುವ ಹೊತ್ತಿನಲ್ಲಿ ಅದನ್ನು ಎಚ್ಚರಿಸಿ ಸರಿದಾರಿಗೆ ತರುವ ಸಾಮರ್ಥ್ಯವನ್ನು ಸಮಾಜವು ತನ್ನಲ್ಲಿ ಉಳಿಸಿಕೊಳ್ಳಬೇಕಾಗಿದ್ದರೆ ವೈಯಕ್ತಿಕ ವಿಚಾರ ಸ್ವಾತಂತ್ರ್ಯಕ್ಕೂ ಸಾಕಷ್ಟು ಇಂಬು ಇರಲೇಬೇಕು. ನಿಯೋಜಿತ ಸಮಾಜ ರಚನೆಯೆಂದು ಎಲ್ಲರನ್ನೂ ತಮ್ಮ ಯೋಜನೆಗೆ ಬಿಟ್ಟೇಹಿಡಿಯುವ ಒತ್ತಾಯವು ಇರಕೂಡದು. ಸತ್ಯದ ಗುತ್ತಿಗೆ ತಮ್ಮದೊಂದೇ ಪಕ್ಷಕ್ಕೆ ಇದ್ದಂತೆ ಆವೇಶ ತಾಳಿ ಉಳಿದವರನ್ನು ಅಸಡ್ಡೆಯಿಂದ ನಡೆಸಿಕೊಳ್ಳುವುದು ಅನ್ಯಾಯ, ಅನೀತಿಯೆಂದು ಎಣಿಸಲ್ಪಡಬೇಕು. ಮೂರು ಲೋಕವು ಎದುರಿಸಿದರೂ ತಮ್ಮ ಅಂತರಂಗದಲ್ಲಿ ಸರಿಯೆನಿಸಿದ-ಅನ್ಯಾಯ, ಅನೀತಿಯೆಂದು ಮನವರಿಕೆಯಾದ ಮಾತಿಗೆ ತಲೆವಾಗದೆ ಏಕಾಕಿಯಾದರೂ ಮನಃಪೂತ ಮಾರ್ಗದಿಂದ ಮುಂದೆ ಸಾಗಲು ಸಿದ್ಧರಿರುವ ವ್ಯಕ್ತಿಗಳು ಕಾಲಕಾಲಕ್ಕೆ ಜನ್ಮ ತಾಳುವ ದೇಶವೇ ಜೀವಂತ ಸಮಾಜವುಳ್ಳ ರಾಷ್ಟ್ರವೆನಿಸುವುದು.

ಜನಸಾಮಾನ್ಯರನ್ನು ಕಣ್‌ಗಟ್ಟವರನ್ನಾಗಿಟ್ಟು ಅವರು ತಮ್ಮನ್ನೆ ಅವಲಂಬಿಸಿಕೊಂಡಿರುವಂತೆ ಹಂಚಿಕೆಯನ್ನು ಮಾಡುವುದು, ಹೀನ ನೇತಾರರವಾಡಿಕೆ. ನಿಜವಾದ ಜ್ಞಾನದಿಂದ ಅವರನ್ನು ದೂರವಿರಿಸಿ, ಸುಳ್ಳು ಅಥವಾ ವಿಕೃತ ಸುದ್ದಿ, ಸಂಗತಿಗಳನ್ನು ತಲೆಯಲ್ಲಿ ತುಂಬಿ ಅವರ ಕಣ್‌ಗೆಡಿಸುವರು; ಹೆದರಿಕೆಯಲ್ಲಿಡುವರು. ಪರಲೋಕದ

ಹೆದರಿಕೆ; ದೈವದ ಹೆದರಿಕೆ; ನರಕದ ಹೆದರಿಕೆ; ಇನ್ನೊಂದು ಜಾತಿಯವರ ಹೆದರಿಕೆ; ಪರಪಕ್ಷದ ಹೆದರಿಕೆ; ಇಂತಹ ಹೆದರಿಕೆಗಳಿಂದ ಗಾಬರಿಯಾಗಿ ವಿಕೃತ ಸಂಗತಿ, ಅಸತ್ಯ ವಾರ್ತೆಗಳಿಂದ ಇನ್ನಿಷ್ಟು ದಿಙ್ಮೂಢವಾದ ಅನುಯಾಯಿ ವರ್ಗವು ಕುಂಯ್ ಎನ್ನದೆ ತಮ್ಮ ಬೆಂಬತ್ತಿಕೊಂಡಿರುವಂತೆ ಪ್ರಚಾರಗಳು ನಡೆಯುವುವು. ಈಗಂತೂ ಪ್ರಚಾರದ ಸಾಧನಗಳು ತಲೆ ಹುಚ್ಚೆದ್ದು ಹೋಗುವಷ್ಟಾಗಿವೆ.

ಇವೆಲ್ಲವುಗಳೊಳಗಿಂದಲೂ ಪಾರಾಗಿ ವಿಚಾರಸ್ವಾತಂತ್ರವನ್ನು ಕಾಯ್ದು ಕೊಳ್ಳುವುದು, ಒಂದು ಯೋಗವೇ ಆಗಿದೆ. ಸತ್ಯವು ಅನಂತವೆಂಬ ದೃಢಶ್ರದ್ಧೆಯು ಭಾರತೀಯರದು. 'ಸಹಸ್ರ ಶೀರ್ಷಃ ಪುರುಷಃ.... ಅತ್ಯತಿಷ್ಠದ್ದ ಶಾಂಗುಲಮ್.' ಇದು ಅವರ ನಿತ್ಯ ಧ್ಯಾನಮಂತ್ರ. ಇದರಲ್ಲಿಯೆ ಅವರ ಉದ್ಧಾರದ ಮಾರ್ಗವಿದೆ. ಸತ್ಯವು ಅನಂತವಾಗಿರುವುದರಿಂದ ಸತ್ಯದ ಗುತ್ತಿಗೆ ಯಾವನೊಬ್ಬನಿಗೆ ಇಲ್ಲವೆಂಬುದು ನಿಶ್ಚಿತ. ಆದುದರಿಂದ, ಎಷ್ಟು ಜನರು, ಎಷ್ಟು ವಿಧದಿಂದ ಅದನ್ನು ಕಂಡು ಅರುಹಿದರೂ ಅದು ಸ್ವಾಗತಾರ್ಹವೇ. ಮುಸಲ್ಮಾನ, ಕ್ರಿಸ್ತಿ ಧರ್ಮಗಳಂತೆ ಒಂದು ವ್ಯಕ್ತಿಯ ಅಭಿಪ್ರಾಯವೇ ಸರ್ವಸ್ವವಾದ ತತ್ವಜ್ಞಾನವಲ್ಲ, ನಮ್ಮದು. ಯುಗಯುಗಗಳಿಂದ ಲೋಕದ ಅನೇಕಾನೇಕ ಮಹಾನುಭಾವರ ಅನುಭವದ ಸಾರವು ಸಂಗ್ರಹವಾಗುತ್ತಲಿದೆ ಭಾರತದಲ್ಲಿ. ಮುಸಲ್ಮಾನರ ಆಗಮನದ ತರುವಾಯ ವಿಶಿಷ್ಟಮತದ ಒಂದೊಂದು ಮಠಗಳು ಸಮಾಜವನ್ನು ತುಂಡರಿಸಿ ಆಳಲಾರಂಭಿಸಿದ್ದುದು ಅದರಿಂದ ಗೊತ್ತಾಗುತ್ತದೆ. ಆ ಮೊದಲು ಇಂತಹ ಮಠ, ಪೀಠಗಳು ದೊರೆಯುವುದಿಲ್ಲ. ನಮ್ಮ ಆಚಾರ್ಯರು ಹೇಳಿದ ಅರ್ಥವೇ ಸರಿ ಉಳಿದವರಿಗೆ ಎಂಬೀ ಬಗೆಯ ವಾದಸರಣಿ ಮುಸಲ್ಮಾನರ ಆಗಮನದ ಇದುವೆ. ಆಧುನಿಕ ರಾಜಕೀಯ ಪಂಗಡಗಳ

ಬೌದ್ಧಿಕ ಸಾತಂತ್ರ್ಯವು ಪುರಾತನದಿಂದಲೂ ಭಾರತ ಸಂಸ್ಕೃತಿಯ ವೈಶಿಷ್ಟ್ಯ. ಮಧ್ಯಕಾಲದಲ್ಲಿ ಭಕ್ತಿಮಾರ್ಗದ ಅತಿವಾದಿಗಳು ಬುದ್ಧಿಯನ್ನು ನಿಂದಿಸಿ, ಅದನ್ನು ಕೊಲ್ಲಲು ಉಪದೇಶಿಸಿದರು. ಭಾರತೀಯರು ಕಣ್ಣುಗುಡರಾದರು.

ತಸ್ಮಾತ್ ಕೌಂತೇಯ ವಿದುಷಾ ಧರ್ಮಾಧರ್ಮ ವಿನಿಶ್ಚಯೇ।
ಬುದ್ಧಿಮಾಸ್ಥಾಯ ಲೋಕೇಸ್ಮಿನ್ ವರ್ತಿತವ್ಯಂ ಕೃತಾತ್ಮನಾ॥

ಶಾಂತಿ ಪರ್ವ; ೧೪೧ ೧೦೨

ಯಸ್ಯ ನಾಸ್ತಿ ನಿಜಾ ಪ್ರಜ್ಞಾ ಕೇವಲಂ ತು ಬಹುಶ್ರುತಃ।
ನ ಸ ಜಾನಾತಿ ಶಾಸ್ತ್ರಾರ್ಥಂ ದರ್ವೀ ಸೂಪರಸಾನಿವ॥ **ಸಭಾಪರ್ವ**

ಕೇವಲಂ ಶಾಸ್ತ್ರಮಾಶ್ರಿತ್ಯ ನ ಕರ್ತವ್ಯೋ ವಿನಿರ್ಣಯಃ।
ಯುಕ್ತಿಹೀನೇ ವಿಚಾರೇ ತು ಧರ್ಮಹಾನಿಃ ಪ್ರಜಾಯತೇ। **ಬೃಹಸ್ಪತಿ ಸ್ಮೃತಿ**

ಶ್ರೀ ಕೃಷ್ಣನು ಅರ್ಜುನನಿಗೆ 'ಬುದ್ಧಿಯೋಗ' ವನ್ನು ಹೇಳಿಕೊಟ್ಟನು. ಗಾಯತ್ರೀ ಉಪಾಸನೆ, ಸೂರ್ಯೋಪಾಸನೆ, ಅಗ್ನಿಯ ಆರಾಧನೆ ಇವೆಲ್ಲವೂ ಧೀಶಕ್ತಿಯ ಪ್ರಚೋದನೆಗಾಗಿಯೇ ಇವೆ. 'ಧಿಯೋ ಯೋ ನಃ ಪ್ರಚೋದಯಾತ್' ಎಂಬುದು ನಿತ್ಯ ಪ್ರಾರ್ಥನೆಯಲ್ಲವೆ? ಜ್ಞಾನಸೂರ್ಯನ ಉಪಾಸನೆಯಿಂದ ಧೀಶಕ್ತಿಯನ್ನು ಒಲಿಸಿಕೊಳ್ಳುತ್ತಿರುವ ವರೆಗೆ ಲೋಕದ ನೇತೃತ್ವವು ಭಾರತದ ಕಡೆಗೆ ಇತ್ತು. ಬುದ್ಧಿಯ ಆಧಾರದಿಂದಲೆ ಮುನ್ನಡೆಯು ಸಾಧ್ಯ. ತಿಳಿಗೇಡಿಯೂ ಯುಕ್ತಾಯುಕ್ತ ವಿಚಾರಮಾಡಲು ಅಸಮರ್ಥನೂ ಸಂಸಾರದಲ್ಲಿ ಹಾನಿಗೆ ಈಡಾಗುವನು.

ಭೀತಿಯಂತೆ, ಪರಂಪರಾಪ್ರಿಯತೆಯೂ ವಿಚಾರ ಸ್ವಾತಂತ್ರ್ಯದ ವೈರಿ. ರೂಢಿಗೆ ಹೂಡಿದ ಜನವು ರೂಢಿಯ ನೊಗವನ್ನು ಬಿಚ್ಚಿದೊಡನೆ ಗಾಬರಿಗೊಳ್ಳುವುದು. ಯಾವ ದಿಕ್ಕಿನಲ್ಲಿ ನಡೆಯಬೇಕೆಂಬುದು ತಿಳಿಯದೆ ಬೆದರುವುದು. ವಿಚಾರದ ಭಾಗಕ್ಕಿಂತ ಯಾಂತ್ರಿಕ ಕ್ರಿಯೆಗಳನ್ನು ನಿರ್ವಹಿಸುವುದು ಸುಲಭವೆನಿಸಿ ವಿಚಾರದ ಗುತ್ತಿಗೆಯನ್ನು ಬೇರೆಯವರಿಗೆ ಒಪ್ಪಿಸುವುದು. ಹಿರಿಯರೊ, ಗುರುಗಳೊ, ಮಹರ್ಷಿಗಳೊ ಮುಂದಾಳುಗಳೊ ಎಂಬ ಒಂದಿಲ್ಲೊಂದು ಹೆಸರಿನಲ್ಲಿ ಕೆಲವರು ಸಾಮಾನ್ಯ ಜನಗಳನ್ನು ಆಳುವರು. ಆದರೆ, ಯಾರೇ ಆಗಲಿ ಮಾನವದೇಹಧಾರಿಗಳೆಲ್ಲರೂ ಅಪೂರ್ಣರು. ಯಾರನ್ನು ಯಾರೂ ಆಳಲರ್ಹರಲ್ಲ. ಯಾರೂ ಯಾರ ನೆರಳಿನಂತಾಗಿ

ಹಿಂಬಾಲಿಗಳಾಗಬಾರದು. ಈ ವಿಷಯದಲ್ಲಿ ತೈತ್ತರೀಯ ಉಪನಿಷತ್ತಿನ ಆದೇಶವು ಸ್ಪಷ್ಟವಿದೆ. 'ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ' 'ಯಾನ್ಯಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ' ಹಿರಿಯರಾದವರ ಸತ್ಕೃತಿಗಳನ್ನು ಮಾತ್ರ ಸ್ವೀಕರಿಸಬೇಕು; ಎಂದು ಈ ಮಹರ್ಷಿಯು ಹೇಳಿರುವುದರಿಂದ ಹಿರಿಯರಾದವರ ಕಿರುಕುಳ ಕೃತಿಗಳೂ ಇರುತ್ತವೆಂದು ಒಪ್ಪಿಕೊಂಡಂತೆಯೆ ಸರಿ. ಆದರೆ, ಗುರುವು ಲಂಡಪಂಜಿ ಯನ್ನುಟ್ಟಿದ್ದರೆ ಶಿಷ್ಯರೂ ಹಾಗೆಯೆ ಬಟ್ಟೆಯನ್ನು ಹಾಕಿಕೊಳ್ಳುವುದು ರೂಢಿ. ಹಳೆಯದರೊಳಗಿನ ಒಳ್ಳೆಯ ಸಂಗತಿಗಳನ್ನು ಹೆಕ್ಕಿಕೊಂಡು ಮತ್ತೆ ಕಾಲೋಚಿತ ಹೊಸತೊಂದು ಹಾದಿಯನ್ನು ಕಂಡುಹಿಡಿಯುವ ಸಾಮರ್ಥ್ಯವು ವಿಚಾರ ಸ್ವಾತಂತ್ರ್ಯದಿಂದ ಮಾತ್ರ ಬರಬಲ್ಲದು. ರೂಢಿಮೂಢತೆ, ಸಂಪ್ರದಾಯ ಶರಣತೆಗಳು ಪ್ರಗತಿಗೆ ಅಡ್ಡಿ.

ಹದಿನೆಂಟು ಅಧ್ಯಾಯಗಳಲ್ಲಿ ತತ್ತ್ವಬೋಧಮಾಡಿ ಶ್ರೀಕೃಷ್ಣನು ಕೊನೆಗೆ ಅರ್ಜುನನಿಗೆ ವಿಜ್ಞಾಪಿಸಿದ್ದೇನು?

'ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾಕುರು' ೧೮; ೩;

ನಾನು ಗುರು, ನೀನು ಶಿಷ್ಯ. ಕಾರಣ ನಾನು ಹೇಳಿದ್ದೆಲ್ಲ ಚಚುಬಿಡದೆ ಅನುಸರಿಸು ಎಂದೊ? ಅಲ್ಲಲ್ಲ. ಎಲ್ಲವನ್ನೂ 'ಸಂಪೂರ್ಣವಾಗಿ ಮೊದಲು ವಿಮರ್ಶಿಸು'. ಬಳಿಕ ಅಂತಃಕರಣಸಾಕ್ಷಿಯಾಗಿ ನಿನ್ನ ಅಭಿಪ್ರಾಯದಂತೆ ನಡೆ ಎಂದು ನರನಿಗೆ ಗೀತೆಯ ಸಂದೇಶ. ನನ್ನ ಬಿನ್ನಹವಾದರೂ ಓದುಗರಲ್ಲಿ ಇದಕ್ಕಿಂತ ಬೇರೆಯಿಲ್ಲ.

ಅಗ್ನೇನಯ ಸುಪಥಾ ರಾಯೇ ಅಸ್ಮಾನ್.....!

– [illegible]

ಸಮಾಜ ದರ್ಶನ

ಓದುಗರಲ್ಲಿ ಬಿನ್ನಹ

ಏಪ್ರಿಲ್ ತಿಂಗಳಲ್ಲಿಯೇ ಪ್ರಕಟವಾಗಬೇಕಾಗಿದ್ದ ಪುಸ್ತಕವು ಈಗ ಪ್ರಕಟವಾಗುತ್ತಲಿದೆ. ಪರಿಸ್ಥಿತಿಯ ಪರಿಣಾಮವು ಎಲ್ಲ ಕಾರ್ಯಗಳ ಮೇಲೆ ಆಗುತ್ತಿದೆ. ಅಪರಿಹಾರ್ಯ ಕಾರಣಗಳ ಮೂಲಕ ಆಗುವ ಕಾರ್ಯಗಳು ಹೊತ್ತಿಗೆ ಆಗದಿರುವುದು ಇಂದಿನ ಜೀವನವಾಗಿದೆ. ಈ ವಿಷಮ ಪರಿಸ್ಥಿತಿಯೇ ಪುಸ್ತಕ ವಿಲಂಬಕ್ಕೆ ಕಾರಣವಾಗಿ ವಾಚಕರಿಗೆ ತೊಂದರೆಯಾದುದಕ್ಕಾಗಿ ಕ್ಷಮೆಯನ್ನು ಯಾಚಿಸುತ್ತೇನೆ.

'ಸಮಾಜ ದರ್ಶನ'ವೆಂಬ ಪುಸ್ತಕವು ಈಗ ಪ್ರಕಟವಾಗುತ್ತಲಿದೆ. ಇದನ್ನು ಬರೆದವರು ಗೆಳೆಯರಾದ ಶ್ರೀಮಾನ್ ಶಂ. ಬಾ. ಜೋಶಿಯವರು. ಶಂ. ಬಾ. ಜೋಶಿಯವರು ಲೇಖಕ ವರ್ಗದಲ್ಲಿ ಈಗಾಗಲೇ ಹೆಸರುಗಳಿಸಿದ್ದಾರೆ. ಅವರು ಸಾಂಪ್ರದಾಯ ಶರಣರಲ್ಲ; ಸ್ವತಂತ್ರ ವಿಚಾರಿಗಳು; ಅಭ್ಯಾಸಿಗಳು; ಸಮಾಜ ಸುಧಾರಕರು. ಸಮಾಜವು ಜಾಡ್ಯವನ್ನು ತೊರೆದು ವಿಚಾರಪರವಾಗಿ ಮುಂದರಿಯಬೇಕೆಂಬುದೇ ಅವರ ಹೆಬ್ಬಯಕೆ. ಅವರ ಎಲ್ಲ ಬರೆಹಗಳಲ್ಲಿ ಈ ಬಯಕೆಯು ಒಡಮೂಡಿದುದನ್ನು ವಾಚಕರು ಈಗಾಗಲೇ ಬಲ್ಲರು. ಈ ದೃಷ್ಟಿಯಿಂದ ಪುಸ್ತಕದ ಮಹತ್ವವು ಹೆಚ್ಚಾಗಿದೆ. ಇದರಲ್ಲಿ ವಿವೇಚಿಸಿದ ಎಲ್ಲ ಸಿದ್ಧಾಂತಗಳು ವಾಚಕರಿಗೆ ಮಾನ್ಯವಾಗಬೇಕೆಂದಿಲ್ಲ. ಎಲ್ಲ ಬಗೆಯ ವಿಚಾರಗಳಿಗೆ ಇಂಬುಗೊಟ್ಟು ವಾಚಕರಿಗೆ ಸತ್ಯವನ್ನು ಹಲವು ಬಗೆಯಿಂದ ತಿಳಿದುಕೊಳ್ಳಲು ಅವಕಾಶವನ್ನು ಕಲ್ಪಿಸುವುದೇ ಈ ಹತ್ತುವರ್ಷಗಳಲ್ಲಿ ಮಿಂಚಿನಬಳ್ಳಿಯ ಧೋರಣವಾಗಿದೆ. ಈ ಪುಸ್ತಕವು ಅಂತಹದೊಂದು ಮಾದರಿ.

ಈ ಪುಸ್ತಕವನ್ನು ವಾಚಕರು ಓದಿ, ಸಮಾಜದ ಬಗೆಗೆ ವಿಚಾರಪರರಾದರೆ ಸಾರ್ಥಕವಾಯಿತೆಂದು ನಾನು ಬಗೆಯುತ್ತೇನೆ. ಭಾರತದ ಪುನರ್ನಿರ್ಮಾಣದ ಈ ಕಾಲದಲ್ಲಿ ಎಲ್ಲ ವಿಚಾರ ಪ್ರವಾಹಗಳನ್ನರಿತು ಯಾವ ಸ್ಥಿರ ಹಾಗೂ ಸತ್ಯ ಸಿದ್ಧಾಂತಗಳ ಮೇಲೆ ಸಮಾಜರಚನೆಯನ್ನು ಮಾಡಬೇಕೆಂಬುದೇ ಇಂದಿನ ನಮ್ಮ ಸಮಸ್ಯೆಯಾಗಿದೆ. ಸನಾತನಿಗಳ ದೈವೀದೃಷ್ಟಿಯೂ, ಆಧುನಿಕರ ಭೌತಿಕದೃಷ್ಟಿಯೂ ಸಮ್ಮಿಲಿತವಾಗುವಂತೆ ಮುಂದಿನ ನಮ್ಮ ಜೀವನವನ್ನು ರೂಪಗೊಳಿಸುವ ಹವಣಿಕೆಯಲ್ಲಿ ಭಾರತೀಯರ ಅಂತಃಕರಣಗಳು ಇಂದು ಆತುರಗೊಂಡಿವೆ. ಇಂತಹ ಸಮಯದಲ್ಲಿ ಸಮಾಜದರ್ಶನವು ಪ್ರಕಟವಾಗುತ್ತಲಿದೆ. ಈ ಬರೆಹವು ಕನ್ನಡ ಜನಾಂಗಕ್ಕೆ ವಿಚಾರಪರರಾಗಲು ಒಂದು ಸಾಧನವಾಗುವದೆಂದು ನಾನು ಬಗೆಯುತ್ತೇನೆ.

ಈ ವಿಷಯವಾಗಿ ಲೇಖಕರ ವಿಚಾರಗಳು ಈ ಪುಸ್ತಕದಲ್ಲಿ ಪೂರ್ಣಪ್ರಕಟವಾಗಿಲ್ಲ. ಇನ್ನೊಂದು ಭಾಗದಲ್ಲಿ ಇದರ ಪೂರ್ಣತೆಯಾಗುವುದಿದೆ. ಸಂಕಲ್ಪಕ್ಕಿಂತಲೂ ಗ್ರಂಥವು ಹೆಚ್ಚು ಬೆಳೆದುದರಿಂದ ಅದರಲ್ಲಿ ಎರಡು ಭಾಗಗಳನ್ನು

ಮಾಡಲಾಗಿದೆ. ಪೂರ್ಣ ವಿವೇಚನೆಯನ್ನು ಓದದೆ ಸಿದ್ಧಾಂತದ ಬಗೆಗೆ ನಿಶ್ಚಿತ ಅಭಿಪ್ರಾಯವನ್ನು ಮಾಡಿಕೊಳ್ಳುವುದು ಯೋಗ್ಯವಾಗಲಿಕ್ಕಿಲ್ಲ. ಶ್ರೀಮಾನ್ ಶಂ. ಬಾ. ಜೋಶಿಯವರು ತಮ್ಮ, ಅಭ್ಯಾಸದ ಅನುಭವದ ಲಾಭವನ್ನು ಗ್ರಂಥರೂಪವಾಗಿ ಮಿಂಚಿನಬಳ್ಳಿಗೆ ಒದಗಿಸಿಕೊಟ್ಟುದಕ್ಕಾಗಿ ನಾವು ತುಂಬ ಆಭಾರಿಯಾಗಿದ್ದೇವೆ.

ಧಾರವಾಡ
೨೦ನೆಯ ಮೇ ೧೯೪೯

ಬುರ್ಲಿ ಬಿಂದುಮಾಧವ

ಅರಿಕೆ

ಓದಿ ಅರಿತುಕೊಂಡುದನ್ನೂ ಜೀವನದಲ್ಲಿ ಕಂಡುಕೊಂಡುದನ್ನೂ ಸಂಗ್ರಹಿಸಿ ಕೆಲವಂಶವನ್ನು ಇಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಪ್ರತಿದಿನದ ಮಾತುಕತೆಯಲ್ಲಿ 'ಸಮಾಜ'ದ ಹೆಸರು ಕಿವಿಗೆ ಬೀಳದ ಸುಶಿಕ್ಷಿತರೇ ದೊರೆಯಲಾರರು. ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಆಂದೋಲನದ ಈ ದಿನಗಳಲ್ಲಿ ಸಮಾಜವನ್ನು ಕುರಿತು ಆಸ್ಥೆಯುಂಟಾಗದ ಮಾನವರು ವಿರಳ. ಆದರೆ-ಎದ್ದರೆ, ಕುಳಿತರೆ, ಸಮಾಜ, ಸಮಾಜವೆಂದು ಮಾತನಾಡುತ್ತಿದ್ದರೂ ಸಮಾಜ ಎಂದರೇನು? ಎಂದು ಪ್ರಶ್ನೆ ಕೇಳಿದರೆ ದಿಗಿಲೇ! ನನಗಿದ್ದ ಈ ದಿಗಿಲನ್ನು ಕಡಿಮೆ ಮಾಡಿಕೊಳ್ಳುವ ಪ್ರಯತ್ನದಲ್ಲಿ ಸಂಪಾದಿಸಿದುದನ್ನು ಇನ್ನುಳಿದವರಿಗೂ ಅದರ ಉಪಯೋಗವು ಆಗುತ್ತಿದ್ದರೆ ಆಗಲಿ, ಎಂಬ ಭಾವನೆಯಿಂದಲೂ ಇದರಲ್ಲಿ ಸಿದ್ಧರೂ ತಜ್ಞರೂ ಆದವರಿಂದ ಹೆಚ್ಚಿನ ವಿಚಾರ, ವಿಮರ್ಶೆಗಳಿಗೆ ಆರಂಭವಾಗಿ ನನಗೂ ಅವರಿಂದ ನೆರವು ದೊರೆತೀತೆಂದೂ ಇದನ್ನು ಬರೆಯಲು ಮನಸ್ಸು ಮಾಡಿದ್ದಾಗಿದೆ.

ಮೊದಲನೆಯ ಅಧ್ಯಾಯವು ಬರಿಯ ಪೀಠಿಕೆಯಾಯ್ತು. ಎರಡನೆಯದರಲ್ಲಿ ಸುಮ್ಮನೆ ನಾಲ್ಕುಮಾತು ಎತ್ತಿ, ಮೂರನೆಯ ಅಧ್ಯಾಯದಿಂದ ವಿವೇಚನೆಗೆ ಆರಂಭವಾಗುವುದು. ನಾಲ್ಕನೆಯದರಲ್ಲಿ ವ್ಯಕ್ತಿ ಮತ್ತು ಸಮಾಜದ ಸಂಬಂಧಗಳ ವಿವರಣೆಯಾಗುವುದರಲ್ಲಿಯೆ ಪುಸ್ತಕದ ಪರಿಮಿತಿ ಮುಗಿದುದಕ್ಕಾಗಿ ನಿಲ್ಲಿಸಬೇಕಾಯ್ತು. ಸಂಸ್ಥೆ, ಸಮಿತಿ, ಮತ್ತು ಸಂಘಗಳನ್ನು ಕುರಿತ ಮಹತ್ವದ ಚರ್ಚೆಯನ್ನೂ ಸಮಾಜದ ಇನ್ನುಳಿದ ಹಲವು ಅಂಶಗಳ ವಿವರಣೆಯನ್ನೂ ಮುಂದಿನ ಪ್ರಕಟನೆಯಲ್ಲಿ ಓದಿಕೊಳ್ಳಬೇಕಾಗಿ ಬಿನ್ನಹ.

ಅಚ್ಚಿನಲ್ಲಿರುವಾಗ ಇದನ್ನೋದಿ ಉಪಯುಕ್ತ ಸೂಚನೆಗಳನ್ನು ಕೊಟ್ಟ ಶ್ರೀಗಳಾದ ಹೋಳಿಕಟ್ಟಿ, ಗೋ.ವೆಂ. ಚುಳಕಿ, ಆರ್.ವಿ. ಕುಲಕರ್ಣಿ, ಮುದಗಲ್ಲ ಮೊದಲಾದ ಮಿತ್ರರಿಗೆ ಅಭಿವಂದನೆ. ಕೆಲವರು ಬಹಳ ಸಂಕ್ಷಿಪ್ತವಾಯಿತೆಂದು ತಿಳಿಸಿದರು. ಆದರೆ, ವಿಸ್ತಾರವಾಗಿ ಬರೆದ ಹಿರಿಯ ಹೊತ್ತಗೆಗಳ ಬೆಲೆ ಸಾಮಾನ್ಯರಿಗೆ ನಿಲುಕದ್ದಾಗುವದು. ಅಲ್ಲದೆ, ಸಂಕ್ಷೇಪವೆಂದರೂ ಅರ್ಧಕ್ಕೆ ನಿಲ್ಲಿಸಬೇಕಾಗುತ್ತದೆ. ಕಾಲೇಜಿನ ತರುಣ ಮಿತ್ರರೊಬ್ಬರು ಇದರಲ್ಲಿಯ ಪುರಾಣಗಳ ದೃಷ್ಟಾಂತಗಳನ್ನು ಕುರಿತು ಆಕ್ಷೇಪಿಸಿ, ಕೇವಲ ಆಧುನಿಕವಾಗಿಯೆ ಏಕೆ ಬರೆಯುವದಿಲ್ಲವೆಂದು ಪ್ರಶ್ನಿಸಿದರು. ಇನ್ನೊಬ್ಬ ಹಳೆಯ ಮಿತ್ರರು ಭಾರತೀಯ ದೃಷ್ಟಿಯೇ ಇದರಲ್ಲಿ ಇಲ್ಲವೆಂದು ಹೇಳಿದರು. ಸತ್ಯಕ್ಕೆ ಬೆಲೆಯನ್ನು ಕೊಟ್ಟವನು ಯಾವುದೊಂದೇ ಪಕ್ಷ ವಹಿಸಿ ಬರೆಯುವದಕ್ಕೆ ಅಸಮರ್ಥನಾಗುತ್ತಾನೆ. ಈ ಕಾರಣದಿಂದ ನವಮತವಾದಿಗಳಿಗೆ ಹಾಗೂ ಸನಾತನಾಭಿಮಾನಿಗಳಿಗೆ ಇಬ್ಬರಿಗೂ ನನ್ನ ಬರೆವಣಿಗೆಯಿಂದ ತೃಪ್ತಿಯುಂಟಾಗ ದಿರುವುದು ಸ್ವಾಭಾವಿಕವಾಗಿದೆ.

ಇದನ್ನು ಬರೆವಾಗ ಕಣ್ಣೆದುರು ಇರಿಸಿಕೊಂಡ ವಾಚಕವರ್ಗಕ್ಕೆ ಬೇಸರವಾಗಬಾರದೆಂದು, ಶಾಸ್ತ್ರೀಯ ಗಂಭೀರಚರ್ಚೆಯನ್ನು ಶಕ್ಯವಿದ್ದಷ್ಟು ಸುಲಭಮಾಡಲು ಪ್ರಯತ್ನಪಟ್ಟಿದೆ. ಆದರೆ, ಬರಿ ಹರಟೆಯೆ ಆಗದಂತೆ ಮಿಶ್ರಪದ್ಧತಿಯನ್ನು ಉಪಯೋಗಿಸಿ ವಿಷಯವನ್ನು ವಿವರಿಸಲಾಗಿದೆ.

ಲೇಖಕ

"ಸಮಾಜ" ಎಂಬುದು ಉಂಟೆ?

ಸಮಾಜ, ಸಮಾಜ ಎಂಬ ಮಾತು ಅಡಿಗಡಿಗೆ ಕೇಳಬರುತ್ತದೆ. ಆದರೆ, ಸಮಾಜವೆಂಬುದು ಎಲ್ಲಿದೆ? ಸಮಾಜವೆಂಬುದು ಉಂಟೆ? ಎಲ್ಲಿ ನೋಡಿದರಲ್ಲಿ ವ್ಯಕ್ತಿಗಳು ಇರುವರೇ ಹೊರತು ಸಮಾಜವೆಂಬುದು ಕಾಣದೊರೆಯದು.

ಯಾವುದೇ ಬಗೆಯ ಕೆಲಸವನ್ನಾಗಲಿ, ಈಗ ಸಮಾಜದ ಹೆಸರಿನಲ್ಲಿ ಆರಂಭಿಸುವುದು ಒಂದು ಫ್ಯಾಶನ್ ಆಗಿದೆ; ಗೌರವದ್ದೆಂದು ಎಣಿಸಲ್ಪಡುತ್ತಿದೆ. ಸ್ವಲ್ಪ ಒಳಹೊಕ್ಕು ನಿಟ್ಟಿಸಿದರೆ ಇದೆಲ್ಲವೂ ಮಂಕುಯೆಂದೇ ಕಂಡುಬಾರದೆ ಇರದು. ಸಮಾಜಸೇವೆ, ದೇಶಸೇವೆ, ಸಾರ್ವಜನಿಕಕಾರ್ಯ ಎಂಬೀ ಬಗೆಯಾಗಿ ಮಾತನಾಡುವವರಲ್ಲಿ ಎರಡು ವರ್ಗಗಳಿವೆ: ಕೆಲವರು ಆತ್ಮವಂಚಕರು; ಹಲವರು ಪರವಂಚಕರು. ಮೊದಲನೆಯ ಬಗೆಯವರು ಪ್ರಾಮಾಣಿಕರು; ಪ್ರಾಮಾಣಿಕತೆಯ ಉಬ್ಬಿನಲ್ಲಿ ಹಾನಿಗೆ ಈಡಾದರೂ ಗಮನಿಸದೆ ತಮಗೆ ತಾವೇ ಮಂಕುಹಿಡಿಸಿಕೊಂಡವರು. ಎರಡನೆಯ ಬಗೆಯವರು ತಮ್ಮ ಸ್ವಾರ್ಥ-ಪ್ರತಿಷ್ಠೆಗಳನ್ನು ಬೆಳಸಿಕೊಳ್ಳಲು ಸಮಾಜಸೇವೆ, ಪರೋಪಕಾರಾದಿ ಬಣ್ಣದ ಮಾತುಗಳನ್ನಾಡಿ ಜನರನ್ನು ಮರುಳುಗೊಳಿಸಿ, ಕೊನೆಯ ವರೆಗೆ ಅವರು ತಮ್ಮ ಅನುಯಾಯಿ ಗಳಾಗಿರುವಂತೆ ಹೆರವರಿಗೇ ಮಂಕುಹಿಡಿಸುವವರು. ಮೊದಲನೆಯವರು, ತ್ಯಾಗ ಸೇವೆಯ ಹೆಸರಿನಲ್ಲಿ ತಾವೇ ಆಜನ್ಮ ಸುಟ್ಟು ಸುಣ್ಣವಾಗಿ ತಮ್ಮ ಮನೆಮಾರು ಹಾಳು ಮಾಡಿಕೊಂಡು ಇನ್ನೊಬ್ಬರ ಮನೆ ಬೆಳಗ ಹೊರಟವರು. ಎರಡನೆಯವರು, ಜನರಿಗೆ ತ್ಯಾಗಮಾಡಹೇಳಿ ಅದರ ಫಲವನ್ನು ತಾವು ಪಡೆಯುತ್ತಾರೆ. ಸತ್ಯಭಾಮೆಯ ಹಿತ್ತಿಲಲ್ಲಿ ಪಾರಿಜಾತದ ಗಿಡ; ರುಕ್ಮಿಣಿಯ ಹಿತ್ತಿಲಲ್ಲಿ ಅದರ ಹೂವು. ನೀರು ಹಾಕುವವಳು ಅವಳು; ನರುಗಂಪ ಸೊಗಸು ರುಕ್ಮಿಣಿಗೆ! ಸೇವೆಯಿಂದ ಜೀವನವು ಪವಿತ್ರವಾಗುವುದೆಂದು ಉಪದೇಶಿಸಿ ತಾವು ಹೂಡಿದ ಕೆಲಸದಲ್ಲಿ ಅಥವಾ ಸಂಸ್ಥೆಯಲ್ಲಿ ಇಲ್ಲವೆ ಆಶ್ರಮ-ಮಠದಲ್ಲಿ ಅಂತಹ ಸೇವಾಕಾರ್ಯಕ್ಕೆ ಆ ಜನಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಅವರ ಮೇಲೆ ಮಹೋಪಕಾರ ಮಾಡುತ್ತಾರೆ!

ಈ ತೆರನಾದ ಕೆಲವೊಂದು ಅನುಭವದಿಂದ ನೊಂದುಬೆಂದವರು, "ಎಲ್ಲಿದೆ ಪರೋಪಕಾರ? ಎಲ್ಲಿದೆ ಸಮಾಜಕಾರ್ಯ? ಎಲ್ಲವೂ ಸ್ವಾರ್ಥ; ವ್ಯಕ್ತಿಗಳ ಚೆನ್ನಾಟ; ವ್ಯಕ್ತಿಗಳ ಚೆಲ್ಲಾಟ. 'ಸಮಾಜ' ಎಂಬುದು ಭ್ರಾಂತಿ; ಮಾಯಾಜಾಲ. ನೆಲೆತಿಳಿಯದೆ ಮೋಸಹೋಗಿ ಈ ಶಬ್ದವನ್ನು ಬಳಸುವ ಅರೆಮರುಳರು ಕೆಲವರು; ಮೋಡಿಕಾರನಂತೆ ತಿಳಿದೂ ತಿಳಿದೂ ಮಾಟ ಮಾಡುವುದಕ್ಕಾಗಿಯೇ ಈ ಶಬ್ದಜಾಲವನ್ನು ಬೀಸುವ ತಂತ್ರಗಾರರು ಹಲವರು," ಎಂದು ನಿಡುಸುಯ್ಯುವುದು ಕೇಳಬರುತ್ತದೆ.

ವ್ಯಕ್ತಿಯೆಂಬುದೆ ನಿಜ; ಸಮಾಜ ಕಾಲ್ಪನಿಕ. ತನ್ನ ಪಾಡಿಗಾಗಿ ಮಾಡಿದ್ದನ್ನೂ ಮಾಡುವುದನ್ನೂ ದೇವರ ಹೆಸರಿನಲ್ಲಿ ಮುಡಿಪಿಡುವಂತೆಯೆ ಸಮಾಜದ ಹೆಸರನ್ನು ಜನಗಳು ಉಪಯೋಗಿಸಿಕೊಳ್ಳುತ್ತಾರೆ. ತಮ್ಮ ನಾಲಗೆಯ ಸವಿಗಾಗಿ ಮಾಡಿದ (ಹಬ್ಬದ) ಅಡುಗೆಯನ್ನು ನಿಮಿತ್ತಕ್ಕೆ ದೇವರ ಮುಂದೊಡ್ಡಿ ತಾವೇ ತಿಂಬುದು ವಾಡಿಕೆ. ಮಹಾಕಾರ್ಯದ ಮೆರುಗನ್ನು ಕೊಟ್ಟು ತಮ್ಮ ಕೆಲಸ ಸಾಧಿಸಿಕೊಳ್ಳುವ ಜನದ ಬುದ್ಧಿವಂತಿಕೆ ಇದು! ಊರು ಉಪಕಾರವರಿಯದು; ಹೆಣ ಶೃಂಗಾರವರಿಯದು. ಸಮಾಜವೆಂಬುದು ಇದ್ದರೂ ಅದೊಂದು ಹೆಣಕ್ಕೆ ಸಮಾನ, ಎಂಬ ಅನುಭವವೇ ಈ ಲೋಕೋಕ್ತಿಯಲ್ಲಿ ಅಡಕವಾಗಿಲ್ಲವೇ? ನಾಡ-ನುಡಿಗಳು ನಾಡಿನ ಜನಗಳ ಅನುಭವದ ಸಾರವು ತಾನೆ? ಹಾಗಾದರೆ ಈ ಬಗೆಯಾದ ಗಾದೆಯ ಹಿನ್ನೆಲೆಯೇನು? ಊರು-ಸಮಾಜ ಎಂಬುವು ಕಲ್ಪನಾಗಮ್ಯ-ಅವ್ಯಕ್ತ-ಅಪ್ರತ್ಯಕ್ಷ ವಿಷಯ. ಒಂದು ಬಗೆಯಿಂದ ನಿರ್ಜೀವವಾಗಿದ್ದಂತೆ. ಜೀವಂತ ಒಂದು ವ್ಯಕ್ತಿಗೆ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಆ ವ್ಯಕ್ತಿಯಿಂದ ಏನಾದರೂ ನೆರವನ್ನು ಕೋರಬಹುದು. ಆದರೆ, ಊರಿಗೆ ಅಥವಾ ದೇಶಕ್ಕೇ ಸಹಾಯ ಮಾಡಹೊರಟವರ ಲೆಕ್ಕ ಯಾರಿಗೂ ಹತ್ತುವುದು ಕಷ್ಟ. ಇಂತಹರು ಯಾರೂ ದಿಕ್ಕಿಲ್ಲದವರಾಗಿ ಕೂಳು-ಕೂಳು, ನೀರು-ನೀರೆಂದು ಸಾವುದೇ ಹೆಚ್ಚು. ಹೆಚ್ಚಾದರೆ, ಇಂತಹರಲ್ಲಿ ಒಬ್ಬಿಬ್ಬರ ಪುಣ್ಯಾತ್ಮರ ಪಾಲಿಗೆ ಲೋಕಮಾನ್ಯತೆಯ ಮಹಾತ್ಮ್ಯವು ಬಂದರೂ ಇವರನ್ನು ಜನ ಬಾಯ್ತುಂಬ ಹೊಗಳಿ, ಕೃತಿಯ ಹೊತ್ತು ಬರುತ್ತಲೆ ನೆರವಾಗದಲೆ ದೂರ ಹೋಗುತ್ತಾರೆ. ಅವರಿಗಾಗಿ ತಾವು ದುಡಿಯಬೇಕು, ಕೃತಜ್ಞರಾಗಿರಬೇಕು ಎಂಬ ಆಂತರಿಕ ಒತ್ತಾಯವು ಅಷ್ಟು ಬಲವಂತವಾಗಿರುವುದಿಲ್ಲ. ಪ್ರತ್ಯಕ್ಷ ತನಗೇ ಅನ್ನ-ವಸ್ತ್ರ ಕೊಟ್ಟು ಅಥವಾ ಸಂಕಟ ಸಮಯದಲ್ಲಿ ನೆರವಾದ ವ್ಯಕ್ತಿಯ ಹಂಗನ್ನೆ ನೆನೆಯಲು ತಪ್ಪಿಕೊಂಬ ಆಸಾಮಿಗಳಿರುವಾಗ ಅಪ್ರತ್ಯಕ್ಷ ಉಪಕಾರಿಯ ಪಾಡೇನು?

ಸಮಾಜವೆಂಬುದು ಕೃತ್ರಿಮ. ನಿಜವಾಗಿ ನೋಡಿದರೆ ಗಂಡು-ಹೆಣ್ಣು, ಬಳಿಕ ಮಕ್ಕಳು. ಆಯ್ತು; ಇಷ್ಟೇ, ಸ್ವಾಭಾವಿಕವಾದ ಒಂದು ಕುಟುಂಬ. ಇದಕ್ಕೆ ಮಿಕ್ಕಿದುದೆಲ್ಲ ಕೃತ್ರಿಮ. ಮಾನವ ಕುಟುಂಬ ಇತ್ಯಾದಿ ಮಾತುಗಳೆಲ್ಲ ಕೇವಲ ಆಭಾಸ. ಬುಡವಿಲ್ಲದುವು. ಮನೆಯ ಹೊರಗಿನ ಬಾಂಧವ್ಯವೆಲ್ಲ ಬಲವಂತದ ಮಾಘಸ್ನಾನ. ಜೀವನದ ಒತ್ತಾಯದ ಮೂಲಕ ಉಂಟಾದುದು. ಒಳಗಣಿಂದ ಬಂದುದಲ್ಲ; ಹೊರಗಣ ಲೇಪ. ಬದುಕಿಕೊಂಡಿರಲು ಅಥವಾ ತನ್ನ ಕೆಲಸ ಸಾಧಿಸಲು ಮಾನವನು ಮಾಡು ನಲುಮೆಯ, ಒಲುಮೆಯ ನಟನೆ. ಆದುದರಿಂದ, ಕೇವಲ ತೋರಿಕೆಯದು; ತಾತ್ಕಾಲಿಕ. ಸಮಾಜದಲ್ಲಿ ಅಥವಾ ಮನೆಯ ಹೊರಗೆ ಉಂಟಾದ, ಅಥವಾ ತೋರಿಬರುವ ಸ್ನೇಹ-ಋಣಾನುಬಂಧಗಳೆಲ್ಲವೂ ಸಿನೆಮಾ ಸೃಷ್ಟಿಯಂತೆ ಹೊರನೋಟಕ್ಕೆ ತುಂಬ ಮೋಹಕ ವಾಗಿದ್ದರೂ ಒಳಗೆ ಏನೂ ಹುರುಳಿಲ್ಲದುವು. ಕಾಂಚನಮೃಗದ ಬೆಂಬಳಿಸಿ ಹೋದಂತೆ ಹೊರಗಿನ ಹೆಸರಿಗೆ ಹರಿದಾಡಿ ಕೆಟ್ಟೆನೆಂದು ಸಿಡಿಮಿಡಿಗೊಳ್ಳುತ್ತ, ಮಿಡುಕುತ್ತ, ಮಮ್ಮಲನೆ ಮರಗುತ್ತ ಕೊನೆಗೆ ತನ್ನ ಮನೆಯನ್ನೇ ಹುಡುಕಿಕೊಂಡು ಮರಳಿದವರ ಕತೆಗಳಿಂದ ಸಮಾಜವೆಂಬುದು ಹುರುಳಿಲ್ಲದ ಮಾತೆಂದು ಮನವರಿಕೆ ಯಾಗುವಂತಿದೆ. ಸಾರ್ವಜನಿಕ ಸೇವೆಯೆಂದು ಹೊರಟು ಈ ತೆರನಾದ ಅನುಭವವು ಬಾರದ ಸರಳ ಸ್ವಭಾವದ ಸಜ್ಜನರೇ ವಿರಳ. ಇದಕ್ಕೆ ಹೊರತಾಗಿದ್ದವರಲ್ಲಿ ಕೆಲವರು 'ಬಿದ್ದರೇನಾಯ್ತು? ಮೀಸೆಗೆ ಮಣ್ಣು ಹತ್ತಿತೆ'? ಎಂದು ತಮ್ಮ ಸೋಲನ್ನೇ ಒಪ್ಪದ ಜಿಗುಟು ಜನ, ಅಥವಾ ಪರೋಪಕಾರ, ಸಾರ್ವಜನಿಕ ಸೇವೆಯ ಉದ್ಯೋಗದಿಂದ ಬದುಕುವವರೂ ಬದುಕುಮಾಡುವವರೂ ತಮ್ಮ ತಮ್ಮ ಕಟು ಅನುಭವವನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದು ಶಕ್ಯವೇ? ನ್ಯಾಯವೆ?

ಈ ಮಟ್ಟದಲ್ಲಿ ಆರಂಭವಾದ 'ಪಾಡಿನ' ಗತಿ ಏನು? ಅಪಗತಿ. ಇದು ವಿ-ರಾಗದ ಪಾಡು. 'ಯಾರಿಗೆ ಯಾರೋ ಪುರಂದರ ವಿಠಲಾ'! ಎಂಬುದೇ ಇದರ ಪಲ್ಲವಿ. ಯಾರೊಡನೆಯೂ ಮೇಳವಿಲ್ಲ. ಆದುದರಿಂದ ಇದರ ತಾಳವೊ? ಬೇತಾಳ. ಅಲ್ಲಿಯೆ ಲಯ. ಇದು ನಿರಾಶೆಯ ಸ್ಥಾಯೀಭಾವದಲ್ಲಿ ತಲೆದೋರಿದ ವಿರಸದ ಸೂರು, ನಿಟ್ಟುಸಿರು. ಮಾನವ-ಜೀವನದ ವಿಷಯದಲ್ಲಿ ಸರಿಯಾದ ಕಲ್ಪನೆಯಿಲ್ಲದ್ದರಿಂದ ಮೇಲಣ ಬಗೆಯ ಉದ್ಗಾರಗಳು ಹಲವರ ಬಾಯಿಂದ ಹೊರಬೀಳುವುದುಂಟು. ವಿಚಾರದೋಷ ಅಥವಾ ಸಂಸ್ಕಾರವಿಹೀನತೆಯ

ಇಂತಹ ಮನೋವೃತ್ತಿಯ ಮೂಲ ಕಾರಣ. ಉದಾಹರಣಾರ್ಥವಾಗಿ, ಸಮಾಜವು ಕೃತ್ರಿಮ; ಕುಟುಂಬವು ಸ್ವಾಭಾವಿಕ ಎಂಬ ಅಭಿಪ್ರಾಯವನ್ನೇ ವಿಮರ್ಶಿಸಬಹುದು. ಕುಟುಂಬದಲ್ಲಾದರೂ ಸ್ವಾಭಾವಿಕತೆ ಏನಿದೆ? ಅದನ್ನೂ ಮಾಯೆಯೆಂದು ಹೇಳುವ ಭಗವದ್ಭಕ್ತರು ಉಂಟಲ್ಲ! ತಾಯ್ತಂದೆಗಳು ಮಕ್ಕಳನ್ನು ತಮ್ಮ ಜೀವಜೀವಾಳವೆಂದು ಬಗೆಯುತ್ತಿರಬಹುದು. ಆದರೆ, ಮಕ್ಕಳ ಎಳೆತವು ದೊಡ್ಡವರಾದ ಹಾಗೆ ಎತ್ತಕಡೆಗೆ? ತಮ್ಮ ನಲ್ಲೆಯತ್ತ! ಮಕ್ಕಳತ್ತ! ಮದುವೆನಿಂದೊಡನೆ ಮಕ್ಕಳು ತಮ್ಮ ಸ್ವತಂತ್ರ ಸಂಸಾರ ಹೂಡಬಯಸುವರು. ಮನೆತನಗಳು ಬೇರೆಯಾಗುವವು. ಮುಪ್ಪಿನ ಕಾಲಕ್ಕೆ ಮಕ್ಕಳು ತಮ್ಮನ್ನು ಮರೆತರೆಂದು ಹಲಬುವ ತಾಯ್ತಂದೆಗಳು ಎಷ್ಟಿಲ್ಲ?

ಇನ್ನುಳಿಯಿತು, ಗಂಡ-ಹೆಂಡತಿಯ ಸಂಬಂಧ. ಇದಲ್ಲಾದರೂ ಸ್ಥೈರ್ಯವೆಲ್ಲಿದೆ? ಕೇವಲ ಲೌಕಿಕ ಅಪಕೀರ್ತಿಯ ಹೆದರಿಕೆ ಅಥವಾ ರೂಢಿಯ ಒತ್ತಾಯವೇ ಅನೇಕ ಕುಟುಂಬಗಳನ್ನು ಸಿಡಿಯಗೊಡದೆ ಒಡೆಯಗೊಡದೆ ಉಳಿಸಿದೆ. ಅನಿವಾರ್ಯವಾದ ನಿರ್ಗತಿಕ ಪರಿಸ್ಥಿತಿಯ ಮೂಲಕವಾಗಿಯೋ, ಧಾರ್ಮಿಕ ಇಲ್ಲವೆ ಪಾರಲೌಕಿಕ ಭೀತಿಯಿಂದಲೋ ಮನೆಮನೆಗಳಲ್ಲಿ ಗಂಡು-ಹೆಣ್ಣು ಒಗೆತನ ನಡೆಸಿವೆಯಲ್ಲದೆ, ಒಲುಮೆಯಿಂದ ನಲುಮೆಯಿಂದ ಒಂದುಗೂಡಿವೆಯೆಂಬುದು ಕಷ್ಟ.

ಹೀಗಾದಲ್ಲಿ ಕೊನೆಗೆ .... ಏನು?

ಕೊನೆಗೆ - ನಾನು ಒಬ್ಬನೇ! .... ನಾನು ಒಬ್ಬನೇ?

ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಅನುಭವದ ವಚನವೊಂದು ನೆನೆಪಿಗೆ ಬರುತ್ತದೆ: ಲೋಕದಲ್ಲಿ ನನಗೆ ಎಲ್ಲರೂ ಗೆಳೆಯರೆ ಅಲ್ಲವಾದರೆ ಯಾರೂ ಅಲ್ಲ. ಬಾಳಿನಲ್ಲಿ ಸತ್ಯದೊಡನೆ ನಡೆಸಿದ ಪ್ರಯೋಗಗಳಲ್ಲಿ ಮಹಾತ್ಮರಿಗೂ ಮನವರಿಕೆಯಾದ ಮಾತಿದು. ಆತ್ಮಚರಿತ್ರೆಯಲ್ಲಿ ಈ ಸಂಗತಿಯನ್ನು ಉಲ್ಲೇಖಿಸಿದ್ದಾರೆ. ಹಾಗಾದರೆ ಈ ವಚನದ ಅರ್ಥವೇನು? ಈ ಲೋಕದಲ್ಲಿ ನಾನು ಒಬ್ಬನೇ, ಎಂದೊ? ಗಾಂಧೀಜಿಯವರ ನಡೆವಳಿಯು ಇದನ್ನು ಪುಷ್ಟೀಕರಿಸುವುದೆಂದು ಹೇಳಬಹುದೊ?

ಮನೆಯಲ್ಲಾಗಲಿ, ಮನೆಯ ಹೊರಗಾಗಲಿ, ತಮ್ಮ ಅಪೇಕ್ಷೆಗಳನ್ನು ವಾಸ್ತವವಾಗಿ ಲೆಕ್ಕಿಸಿ ಪ್ರಮಾಣಬದ್ಧವಾಗಿ ಇರಿಸಿಕೊಳ್ಳಲು ಆಗದ ವ್ಯಕ್ತಿಗಳಿಗೆ ಜೀವನದಲ್ಲಿ ಅಡಿಗಡಿಗೂ ನಿರಾಶೆಯು ಭೆಟ್ಟಿಯಾಗದೆ ಇದ್ದರೆ ಸೋಜಿಗ. ಮಕ್ಕಳು ತಮ್ಮನ್ನು ಕಡೆಗಣಿಸಿ, ಹೆಂಡಿರು-ಮಕ್ಕಳಲ್ಲಿ ಮೈಮರೆತರೆಂದು ಗೊಣಗುವ ತಾಯ್ತಂದೆಗಳು ಸೃಷ್ಟಿಕ್ರಮವನ್ನು ಒಂದರಗಳಿಗೆ ಅವಲೋಕಿಸಬೇಕು. ಮನುಷ್ಯೇತರ ಪ್ರಾಣಿಗಳಲ್ಲಿ ಕಾಣುವ ರೀತಿ ಯಾವುದು? ಮನುಷ್ಯನೂ ಒಂದು ಪ್ರಾಣಿಯೇ. ಆದರೆ, ವಿಚಾರ-ಸಂಸ್ಕಾರಗಳಿಂದ ಸಂಸ್ಕೃತಿಯನ್ನು ಹೆಚ್ಚಿಸಿಕೊಂಡಿದ್ದಾನೆ. ಮಕ್ಕಳು ಆ ಸಂಸ್ಕೃತಿಯನ್ನು ಪಡೆದುಕೊಂಡು ತಾವು ಪಶುಗಳಿಗಿಂತಲೂ ಸುಧಾರಿಸಿದವರೆಂದು ಕೃತಿಯಿಂದ ಸಿದ್ಧಪಡಿಸಬೇಕಿತ್ತು. ಆದರೆ, ಆ ಸಂಸ್ಕೃತಿಯನ್ನು ಅವರು ಪಡೆದುಕೊಂಬುವುದಕ್ಕೆ ಅಥವಾ ತಾಯ್ತಂದೆಗಳು ಅವರಿಗೆ ಕೊಡುವದಕ್ಕೆ ಅಸಮರ್ಥರಾದುದು ಇದರಿಂದ ಸಿದ್ಧವಾಗುತ್ತದೆ. ತಪ್ಪಿನ ಪ್ರಾಯಶ್ಚಿತ್ತವಿದು ಅಥವಾ ಮಕ್ಕಳಿಂದ ಮಿತಿಗಿಂತಲೂ ಹೆಚ್ಚಿನ ಅಪೇಕ್ಷೆಪಡುವುದು, ಅನೇಕ ತಾಯ್ತಂದೆಗಳು ತಮ್ಮ ಹಕ್ಕು ಎಂದೇ ಬಗೆದಿರುತ್ತಾರೆ. ಗಂಡಿಗೆ ಹೆಣ್ಣಿನ ಆಕರ್ಷಣ; ಹೆಣ್ಣಿಗೆ ಮಕ್ಕಳ ಹುಚ್ಚು; ಇದು ಸೃಷ್ಟಿಕ್ರಮ. ಇದಕ್ಕೆ ವಿಪರೀತವಾಗದಂತೆ ಏನನ್ನು ಹಾರೈಸಲಿಕ್ಕಾದೀತೊ ಅಷ್ಟೇ ಲೇಸು. ಇದನ್ನು ಮೀರಿ ಮಾಡಬಯಸುವ ಕಸರತ್ತು ಅಸ್ವಾಭಾವಿಕ. ಅದು ಸಹಜ ಮಧುರ ಕಾರ್ಯವೆನಿಸಲಾರದು. ಇಂತಹ ಸಂದರ್ಭಗಳಲ್ಲಿ ನಿರಾಶೆಯು ನಿಶ್ಚಿತ.

ನಿರಾಶೆಯ ಪರಮಾವಧಿಯಾಗಿ, 'ನಾನು ಒಬ್ಬನೇ' ಎಂಬ ನಿರ್ಧಾರಕ್ಕೆ ಬಂದ ವ್ಯಕ್ತಿಗಳಲ್ಲಿ ಎರಡು ಅಂದಗಳಿವೆ. ಬಡತನದಲ್ಲಿ ಸಿಲುಕಿದವರಾಗಿದ್ದರೆ ಇಂತಹರ ಬಾಳಿನ ಬಗೆಯು ವೈರಾಗ್ಯಪರವಾಗಿ ಬೆಳೆದು ಅವರು ದೈವವಾದಿಗಳಾಗುವರು. ಇಂತಹರು ಓಡಿಹೋಗಿ ಕಾಡುಸೇರಬಹುದು. ಆತ್ಮಹತ್ಯೆ ಮಾಡಿಕೊಳ್ಳಬಹುದು. ಅಥವಾ ಸನ್ಯಾಸಿಗಳಾಗಿ ಅಲೆಯಬಹುದು. ಹಾಗೆ ಅಲೆಯುತ್ತಿರುವಾಗಲೆ ದೈವಯೋಗದಿಂದ 'ಲಂಗೋಟಿ

ಸಂಸ್ಕಾರಕ್ಕೆ' ಆರಂಭವಾಗಿ ಹಿರಿಯ ಮಠಗಳನ್ನು ಕಟ್ಟಿ ಒಂದು ದಿಕ್ಕಿನಲ್ಲಾದ ಮುಖಭಂಗವನ್ನು ಇನ್ನೊಂದು ದಿಕ್ಕಿನಲ್ಲಿ, ಆಧ್ಯಾತ್ಮದ ಹೆಸರಿನಲ್ಲಿ ಬಡ್ಡಿ ಸಹಿತ ತುಂಬಿಕೊಳ್ಳಬಹುದು. ಇದು ಒಂದು ಬಗೆ.

ಇನ್ನೊಂದು ಬಗೆಯವರಲ್ಲಿ ಸಂಪಾದನಾಶಕ್ತಿಯು ಚೆನ್ನಾಗಿರುತ್ತದೆ. ಇಂತಹರಲ್ಲಿ ವೈರಾಗ್ಯಭಾವವು ವಿಶೇಷ ತಲೆಯೆತ್ತುವುದಿಲ್ಲ. ಹಲವು ಬಗೆಯ ಕಟು ಅನುಭವಗಳಿಂದ ಮನದಲ್ಲಿ ವಜ್ರಲಿಖಿತವಾದ 'ಸಂಸಾರದಲ್ಲಿ ಯಾರಿಗೆ ಯಾರೂ ಅಲ್ಲ. ನನಗೆ ನಾನೇ' ಕಹಿ ನೆನೆಹನ್ನು ಮಾತ್ರ ಮರೆಯಲು ಅವರು ಎಂದೂ ಸಮರ್ಥರಾಗುವುದಿಲ್ಲ. ಇವರ ವೈಭವದೊಂದಿಗೆ ಸುತ್ತಲೂ ಬೆಳೆಯುತ್ತಿರುವ ಬಳಗಕ್ಕೆ 'ಗಂಟಿರುವನಕ ನೆಂಟರು' ಎಂದು ನಿಷ್ಠುರವಾಗಿ ನುಡಿಯುವುದಕ್ಕೂ ಹೇಸರು. ವಿಪರೀತ ದೈನ್ಯಾವಸ್ಥೆಯ ವಿಷಮ ಪರಿಸ್ಥಿತಿಯಲ್ಲಿ ಮೂಡಿದ 'ನಾನು ಒಬ್ಬನೇ' ಎಂಬ ಭಾವವು ದೈವವುಳ್ಳವರಾದ ಮೇಲೆ 'ನಾನೇ ಒಬ್ಬನು' ಎಂದು ಮಾರ್ಪಡಲು ತಡವಾಗುವುದಿಲ್ಲ.

ಶಕ್ತಿವಂತರಲ್ಲಿ 'ನಾನೇ ಒಬ್ಬನು' ಎಂಬ ಭಾವವು ದೃಢವಾಗಿ ಬಲಿತುಕೊಂಡಂತೆ ಆಸುರೀವೃತ್ತಿಯ ಕೇಡಾಳಿಗಳಾಗುವುದು ಖಚಿತ. ಲೋಕದ ಎಲ್ಲ ಸೂತ್ರಗಳೂ ತಮ್ಮ ಕೈಯಲ್ಲಿಯೇ ಬರಬೇಕೆಂಬ ಲೋಭವು ಬೇಗನೆ ಇವರನ್ನು ಕವಿಯುವುದು. ಇದರಿಂದ ಬೆಳೆಯುವ ಪೀಳಿಗೆಯೊಳಗಿನ ಗುಣಿಗಳಿಗೆ ಇಂತಹರ ಅಹಂಕಾರ, ಆಢ್ಯತೆಗಳಿಂದ ಹಲವು ಬಗೆಯಾದ ಅಡೆತಡೆಗಳುಂಟಾಗುವವು. ಇಂತಹ ಹೆಮ್ಮೆಯನ್ನು ತಗ್ಗಿಸದೆ ಸುಮ್ಮನಿದ್ದಲ್ಲಿ ಇವರು ತಮ್ಮ ಇಷ್ಟಸಿದ್ಧಿಗಾಗಿ ಬೇಕಾದ ಅಧಮ ಉಪಾಯಗಳನ್ನೂ ಉಪಯೋಗಿಸಿ ಲೋಕಕಂಟಕರಾಗುವರು. 'ನಾನು ಒಬ್ಬನೇ' ಎಂಬ ನಿರಾಶೆಯು ಆವರಿಸಲು ಸಾಮಾನ್ಯ ಕೆಲವು ಕಾರಣಗಳಿವೆ: ಹೆರವರ ಮೇಲೆ ಆವಶ್ಯಕತೆಗಿಂತ ಹೆಚ್ಚು ನೆಮ್ಮಿ ಬಾಳುವ ಪ್ರಸಂಗವು ಬಂದಾಗ ಅಥವಾ ತಂದುಕೊಂಡಾಗ ಆ ಜನಗಳು ಕಾರಣಾಂತರದಿಂದ ಸರಿದು ಬದಿಗಾಗುತ್ತಲೆ, ಈಗ ತನ್ನ ಕಾಲಮೇಲೆ ತಾನು ನಿಲ್ಲದೆ ಗತಿಯಿಲ್ಲವೆಂಬ ಕಠೋರ ಸತ್ಯದ ಮನವರಿಕೆಯಾಗುವುದು. ತನ್ನ ವೈಯಕ್ತಿಕ ಯೋಗ್ಯತಾ ವಿಶೇಷದಿಂದ ಅಥವಾ ಕೈಗೊಂಡ ಕಾರ್ಯದ ಹಿರಿಮೆ ಹೆಚ್ಚಳದ ಮೂಲಕ ಜನರ ಸಹಕಾರವನ್ನು ಪಡೆದು ತನ್ನ ಕೆಲಸವನ್ನು ಹಗುರು ಮಾಡಿಕೊಳ್ಳುವ ಹದವನ್ನು ಅರಿಯದವರಿಗೆ ಮೇಲಣ ತೆರನಾದ ನಿರಾಶೆಯು ತಪ್ಪಿದ್ದಲ್ಲ. ದೇಶಕಾರ್ಯ, ಸಾಹಿತ್ಯಸೇವೆ, ಧರ್ಮಕಾರ್ಯಾದಿ ಬಣಗುಮಾತಿನ ಆಟಹೂಡಿ, ಐಂದ್ರಜಾಲಿಕ ವಿದ್ಯೆಯಿಂದ ಆಶೆ ಆಮಿಷಗಳನ್ನು ಒಡ್ಡಿ, ಜನಗಳನ್ನು ತಮ್ಮ ಬಲೆಯಲ್ಲಿ ಹಿಡಿಯುವ ಹೊಂಚು ಬಹಳ ದಿನಗಳ ವರೆಗೆ ಸಾಗುವುದು ಶಕ್ಯವಿಲ್ಲ. ಯಾವನ ಬಳಿಯಲ್ಲಾದರೂ 'ನಾನೇ ಒಬ್ಬ; ನನ್ನಿಂದಲೇ ಇದೆಲ್ಲ', ಎಂಬೀ ತೆರನಾದ ಮಾತಿನ ನಾತವು ಬರುತ್ತಲೆ ಹತ್ತಿರದವರ ಉಸಿರುಗಟ್ಟುವುದು. ಆರಂಭಕ್ಕೆ 'ನಿಮ್ಮಲ್ಲಿ ನಾನು ಒಬ್ಬ'ನೆಂದು ನಂಬಿಸಿ, ಕೆಲಸವು ಊರ್ಜಿತ ಸ್ಥಿತಿಗೆ ಬಂದಂತೆ, 'ಇದನೆಲ್ಲ ಮಾಡಿದವ ನಾನೇ ಒಬ್ಬ' ಎಂಬಂತೆ ಹತ್ತಿರದವರ ತಲೆಮೆಟ್ಟಿ ನಿಂತು ನಂಬಿಸಿ ತಿಂಬವರ ನೆರಳಿಗೆ ನಿಲ್ಲಲಿಕ್ಕೂ ಜನ ಹೇಸಿಕೊಳ್ಳುವರು.

ಆದುದರಿಂದ, 'ನಾನು ಒಬ್ಬನೇ' ಎಂಬ ಉಗ್ರಕಠೋರ ಅನುಭವಕ್ಕೆ ಲೋಕವು ವಿಶೇಷ ಕಾರಣವಲ್ಲ; ಆಯಾ ವ್ಯಕ್ತಿಗಳ ಪ್ರಮಾಣ ಮೀರಿದ ಅಪೇಕ್ಷೆಗಳು, ಅವರ ಹದಗೇಡಿ ನಡೆವಳಿ ಇವೆ ಮುಖ್ಯ ಕಾರಣ. ಆದರು, 'ನಾನು ಒಬ್ಬನೇ' ಅಥವಾ 'ನಾನೇ ಒಬ್ಬನು' ಎಂಬುದು ಸತ್ಯವೆ? ಯುಕ್ತವೆ? ಸಂಸಾರವೆಂಬುದಿದು ನಾಲ್ಕು ದಿನದ ಸಂತೆ;' 'ಸಂಗಡ ಯಾರೂ ಬಾಹೋರಿಲ್ಲ;' ಆದುದರಿಂದ 'ಆತ್ಮಾರ್ಥೇ ಪೃಥಿವೀಂ ತ್ಯಜೇತ್.' ಸರಿ; ಪೃಥ್ವಿಯನ್ನು ತ್ಯಜಿಸಿ ಹೋಗೋದೆಲ್ಲಿ? ದೇಹತ್ಯಾಗ ಮಾಡಿದ್ದಲ್ಲದೆ ಪೃಥ್ವಿಯನ್ನು ಬಿಟ್ಟು ಕದಲಲು ಸಾಧ್ಯವೇ ಇಲ್ಲ. ಆದುದರಿಂದ, ಈ ದಾರಿಯಲ್ಲಿ ಹೊರಟವರಿಗೆ ಜಲಾಶಯ, ವಿಷ ಇಲ್ಲವೆ ಹಗ್ಗವೇ ಯಮನ ಮೊದಲು ಗತಿ. ಆದರೆ, ಜೀವತೊರೆವುದಕ್ಕೂ ಎದೆಗಾರಿಕೆ ಬೇಕಾಗುತ್ತದೆ. ಸತ್ತಿಲ್ಲವೆಂದು ಬದುಕಿರುವ ಈ ಜನ, ಬೇಗ ಭೂಭಾರ ಕಡಿಮೆ ಮಾಡದೆ ಹೇಡಿತನದಿಂದ ನೆಲದ ಆಶ್ರಯ ಪಡೆಯುವರು; ನಿಂತ ನೆಲವನ್ನೇ ಹಿಯಾಳಿಸುತ್ತ ದಿನ ನೂಕುವರು. ಇದು ನ್ಯಾಯವೆ? ಧರ್ಮವೆ? ಉಂಟಾದ ನಿರಾಶೆಗೆ ಯಾರೊ ಕೆಲರು ಕಾರಣರಾಗಿರುತ್ತಾರೆ.

ಹಾಗಿರುವಾಗ, ನಿರಾಶೆಯ ಭರದಲ್ಲಿ ಕಣ್‌ಗೆಟ್ಟು ಲೋಕವೇ ನೀಚವೆಂದು ತೆಗಳುವುದು ಸಭ್ಯತೆಗೆ ಶೋಭಿಸುವುದೆ? ತನ್ನ ಕಣ್‌ಕೆಟ್ಟು ಕಾಣದಾಯ್ತೆಂದು ಲೋಕವೆಲ್ಲ ಅಂಧಕಾರಮಯವಾಯ್ತೆಂದು ಕಿರಚುವವನ ತಲೆ ಸಮನಾಗಿದೆಯೆನ್ನಲಾದೀತೆ?

ವಿಷಾದದ ಪರಮಾವಧಿಯಲ್ಲಿ ವ್ಯಕ್ತಿಯು ಭಾವಿಸಿಕೊಳ್ಳುವಷ್ಟು ಅದು ಏಕಾಕಿ-ಎಂದರೆ ಬೇರೆ ಯಾರಿಗೂ ಯಾವುದಕ್ಕೂ ಸಂಬಂಧವಿಲ್ಲದ, ಒಂದೇ ಒಂದು ಆತ್ಯಂತಿಕ ಭಿನ್ನವಸ್ತುವಾಗಿದೆಯೆ? ಒಬ್ಬರೆ ಇದ್ದರೆ ಸಮಾಧಾನವೆ? ಯಾರ ಕಾಟವೂ ಬೇಡ, ಎಂದು ದೂರ ದೂರ-ಬಹುದೂರ ಹೋಗಿ ಏಕಾಂತ ಸೇರಿದರೂ ತನ್ನೊಳಗೆ ತಾನು ಇನ್ನೂ ಒಂದರೊಡನೆ ಸಹ-ಗಮನ ಮಾಡುವ ಶಕ್ತಿಯಿಲ್ಲದೆ ಕಟ್ಟೇಕಾಂತವನ್ನು ಸೇರಿಯೂ ವ್ಯರ್ಥ. ಎರಡರ ಹಿನ್ನೆಲೆಯಲ್ಲಿ ಅಖಂಡವಾಗಿ ಸಾಕ್ಷಿಭೂತವಾಗಿರುವ ಮೂರನೆಯದರ ಅರಿವು, ಅನುಭಾವ ವುಂಟಾಗುವನ್ನಕ್ಕರ ಏಕಾಂತದ ಆನಂದವು, ಸ್ವಾನುಭವ ಸುಖರಸಾಯನವು ದೊರೆಯದು. ಹಾಗಾದರೆ, ಯಾರೂ ಬೇಡವೆಂಬುದು ಬರಿಯ ಭ್ರಮೆಯಲ್ಲವೆ? ತನ್ನೊಳಗೆ ತಾನು ಹೊಂದಿಕೆ ಮಾಡಿಕೊಳ್ಳಲಿಕ್ಕಾಗದವನು ಉಳಿದವ ರೊಡನೆಯೂ ಹಾಗೆಯೆ ಸರಿ; ಆತನಿಗೆ ಅಡವಿಯಲ್ಲಿದ್ದರೂ ಏಕಾಂತವಿಲ್ಲ. ಅಂತರಂಗದಲ್ಲಿ ಮೇಳವಿದ್ದವನು ಸಂತೆಯಲ್ಲಿದ್ದರೂ ಏಕಾಂತವನ್ನು ಅನುಭವಿಸಬಲ್ಲನು. ನೆರೆಹೊರೆಯವರ ಮೇಲೆ ಮುನಿದು, ಸೆಡವಿನಿಂದ, ಹೆಮ್ಮೆಯ ಬಿಂಕದಿಂದ, ಜುಗುಪ್ಸೆಯಿಂದ ದೂರ ಸಿಡಿವವರು, ಇನ್ನುಳಿದವರೊಡನೆ ಹೊಂದಿಸಿಕೊಳ್ಳಲಿಕ್ಕಾಗದೆ ಇರುವ ತಮ್ಮ ಅಯೋಗ್ಯತೆಯ ಪ್ರದರ್ಶನವನ್ನೆ ಮಾಡುತ್ತಾರೆ. ಏಕಾಂತದ ಆನಂದಕ್ಕಾಗಿ ಇವರು ಬೇರೆಯಾಗಿ ನಿಂತಿರುವುದಿಲ್ಲ. ಏಕಾಂತದ ಆನಂದಕ್ಕಾಗಿ ಸಮ್ಯಗಂತರದಲ್ಲಿದ್ದವನು ತನ್ನಲ್ಲಿ ಲೋಕವನ್ನೆ ಕಾಣಬಲ್ಲವನಾಗಿರುತ್ತಾನೆ. ಈ ಕಾರಣದಿಂದ ತಾನು ಒಬ್ಬನೇ ಎಂಬುದು ಅಲ್ಪವಿಚಾರದ, ಸಂಕುಚಿತ ಮನದ, ತನ್ನನೆಲೆ ತನಗರಿಯದ ಅಲ್ಪರ ಕುತ್ತುಸಿರು; ನಿಟ್ಟುಸಿರು.

ವ್ಯಕ್ತಿಯು ತನ್ನ ಭಾವ-ಬುದ್ಧಿಗಳನ್ನು ವಿಕಾಸಪಡಿಸಿಕೊಂಡು ಪ್ರೀತಿಯ ತನ್ಮಯತೆಯಿಂದ ತನ್ನಿಂದ ಬೇರೆಯೆನಿಸುವ ಹಲವಾರು ವ್ಯಕ್ತಿ-ವಸ್ತುಗಳೊಡನೆ ಒಂದಾಗಿ ತಾದಾತ್ಮ್ಯವನ್ನೂ-ಅಭಿನ್ನತೆಯ ಅನುಭವವನ್ನೂ ಪಡೆಯಬಲ್ಲನು. ತನ್ನಲ್ಲಿರುವ ಈ ಸಹಜ-ಶಕ್ತಿಯನ್ನು ವ್ಯಕ್ತಿಯು ಆತ್ಮವಿಕಾಸಕ್ಕಾಗಿ ಸರಿಯಾಗಿ ಉಪಯೋಗಿಸಿಕೊಳ್ಳುವ ಹದವನ್ನು ಅರಿತುಕೊಳ್ಳದೆ ಇದ್ದರೆ ಅದು ಆತನ ದುರ್ದೈವ. ಮಾನವನು ಭಾವ-ಬುದ್ಧಿಗಳ ಯೋಗದಿಂದ ತನ್ನ ಜೀವಾಳದ ಅಂಶವನ್ನೇ ಇನ್ನೊಂದರಲ್ಲಿ ಎರೆಯಬಲ್ಲನು. ಈ 'ಎರಕ'ಕ್ಕೆ ಪ್ರೀತಿ ಎಂಬ ಹೆಸರು. ಈ ಬಗೆಯಾಗಿ ವ್ಯಕ್ತಿಯ ಆತ್ಮವು ಹಿಗ್ಗಲು ಹಂಬಲಿಸುತ್ತದೆ. ಹಿಗ್ಗುವಲ್ಲಿ-ಹಿರಿದಾಗುವಲ್ಲಿಯೇ ಅದಕ್ಕೆ ಹಿಗ್ಗು (ಆನಂದ) ಉಂಟು. 'ಭೂಮಾ ವೈ ಸುಖಂ' ಎಂಬುದು, 'ಹಿಗ್ಗು' ಎಂಬ ಕಂನುಡಿಯ ಆಳವಾದ ಅರ್ಥಕ್ಕೆ ಸಂಸ್ಕೃತ ಭಾಷ್ಯ.

ನಲ್ಲೆಯ ಹಿಗ್ಗಿಗಾಗಿ ನಲ್ಲನು ಯಾವ ತ್ಯಾಗಕ್ಕೂ ಸಿದ್ಧನಾಗುವನು; ಆ ಕಷ್ಟವು ಕಷ್ಟವೆನಿಸದು. ಪ್ರೇಮಿಗಾಗಿ ಮಾಡುವ ಶ್ರಮದಲ್ಲಿ ಆನಂದದ ಅನುಭವವು ಬರುವುದು. ಮಕ್ಕಳು ಉಂಡರೆ ತಾಯಿಗೆ ತಾನು ಉಂಡಷ್ಟು ಸಂತೋಷವೇಕೆ? ತನ್ನ ಮೆಚ್ಚಿನ ಪೆನ್ನು ನಿರ್ಜೀವ ವಸ್ತು ನೋಡಿದರೆ- ಕಳೆದರೆ ತನ್ನ ದೇಹದ ಒಂದು ಅಂಶವೇ ಹೋದಷ್ಟು ವ್ಯಥೆಯೆ? ಒಬ್ಬರಿಗೆ ಬಿದ್ದು ಪೆಟ್ಟಿನ ನೋವು ಇನ್ನೊಬ್ಬರಿಗೆ ಆಗುವುದು ವಿಚಿತ್ರವಲ್ಲವೆ? ಗಾಂಧೀಜಿ ಮಡಿದರೆ ಲೋಕಕ್ಕೆಲ್ಲ ಕಣ್ಣೀರೆ! ಗಾಂಧೀಜಿಯು ಮಹಾ- ಆತ್ಮನಾಗಿ ಆತ್ಮವಿಕಾಸಗೊಳಿಸಿಕೊಂಡು ಲೋಕದೊಡನೆ ಸಮರಸರಾಗುತ್ತಿದ್ದರೆಂಬುದರ ಪ್ರತ್ಯಕ್ಷ ಪ್ರಮಾಣವೇ ಅಲ್ಲವೋ ಇದು? ಯಾರ ತಪಸ್ಸಿನ (ಪ್ರಯತ್ನದ) ಸಾಮರ್ಥ್ಯವು ಎಷ್ಟೋ ಅಷ್ಟು ಅವರು ತಮ್ಮ ಆತ್ಮವನ್ನು ಹಿಗ್ಗಿಸಬಲ್ಲರು; ಮಹತ್ತಾಗಿಸಬಲ್ಲರು. ಈ ಅನುಭಾವವು ಪುಟ ಗೊಂಡಂತೆ ಆಗಲೆ 'ಸಮಾಜ' ಎಂಬುದರ ವಿರಾಟ್ ಸ್ವರೂಪವು ಕಣ್ಣೆದುರು ನಿಲ್ಲುವುದು. ಕುಟುಂಬವು ಸಮಾಜದ ಪ್ರಾಥಮಿಕ ರೂಪ; ವ್ಯಕ್ತಿಯ ವಿಕಾಸದೊಳಗಿನ ಮೊದಲ ಘಟ್ಟ. ಹಿಗ್ಗು-ಕುಗ್ಗು ವ್ಯಕ್ತಿಯ ಹುಟ್ಟುಗುಣ. ಅದರ ಪ್ರತ್ಯಕ್ಷ ಅನುಭವವು ಲೋಕಸಂಬಂಧದಲ್ಲಿ ಬರುವುದು. ಇಂತಹ ಹಲವು ಬಗೆಯ ಸೂಕ್ಷ್ಮ ಸಂಬಂಧಗಳಿಂದ ಹೆಣೆದುಕೊಂಡ ತಮ್ಮತನದ ವಾತಾವರಣವುಳ್ಳ ಸುಸಂಬದ್ಧ ಗುಂಪಿಗೆ 'ಸಮಾಜ'ವೆಂಬ ಹೆಸರು.

ಕುಟುಂಬ ಅಥವಾ ಕುಲ, ಮತ್ತು ಸಮಾಜ ಎಂಬ ಪದಗಳು ಸಮಾಜಶಾಸ್ತ್ರದ ಚರ್ಚೆಯಲ್ಲಿ ವಿಶಿಷ್ಟಾರ್ಥದಲ್ಲಿ ಉಪಯೋಗಿಸಲ್ಪಡುತ್ತವೆ. ಒಂದು ಪ್ರದೇಶದಲ್ಲಿ ವ್ಯಾಪಿಸಿರುವ ಮನೆತನಗಳು ಸೇರಿ ಕುಟುಂಬವೆನಿಸುವುದು. ಓಣಿ, ಕೇರಿ, ಹಳ್ಳಿ, ದೇಶಗಳಷ್ಟು ಕುಟುಂಬವು ವಿಸ್ತಾರವಾಗಬಲ್ಲದು. ಮಾನವ ಕುಟುಂಬವೆ ಇದರ ಪರಮೋಚ್ಚ ವಿಕಾಸವು. ಆದರೆ ಬಳಗ ಎಂಬ ಅರ್ಥದಲ್ಲಿಯೆ ಕುಟುಂಬವೆಂಬುದು ಹೆಚ್ಚು ಉಚಿತ. ಊಟ-ಉಡಿಗೆ ವಿವಾಹಾದಿಗಳಿಂದ ಬೆಳೆಯುತ್ತಿರುವ ಬಳಗವೇ ನಿಜವಾದ ಕುಟುಂಬವಾಗಬಲ್ಲದು. ಕುಟುಂಬ ಅಥವಾ ಕುಲವು ಸ್ಥೂಲ; ಅದು ಬಳಗ. ಆಂತರಿಕ ಸಂಬಂಧಗಳೇ ಅಲ್ಲಿ ಮುಖ್ಯ. ಆದರೆ, ಸಮಾಜದಲ್ಲಿ ಆಂತರಿಕ ಸಂಬಂಧಗಳಿಗಿಂತ ಬಾಹ್ಯ ವ್ಯಾವಹಾರಿಕ ಕಾರಣಗಳು ಅದರ ಸ್ಥೈರ್ಯಕ್ಕೆ ಕಾರಣವಾಗಿರುತ್ತವೆ. ಮಾನವ ಕುಟುಂಬ ಅಥವಾ ಕುಲ; ಅದರಲ್ಲಿ ಯುರೋಪೀಯ ಸಮಾಜ; ಅಮೇರಿಕೆಯ ಸಮಾಜ; ಭಾರತೀಯ ಸಮಾಜ ಮುಂ. ಇದರಂತೆ ಧಾರ್ಮಿಕ, ರಾಜಕೀಯ, ಅಥವಾ ಜಾತೀಯ ಸಮಾಜಗಳೆಂದೂ ಹೇಳಲವಕಾಶವಿದೆ. ಇಡೀ ಮಾನವ ಸಮಾಜವೆಂದರೂ ಆಗಬಹುದಾಗಿದೆ. ಆದರೆ, ಅದು ಇನ್ನೂ ನಿರ್ಮಾಣವಾಗಬೇಕಾಗಿದೆ. ಕುಟುಂಬ ಅಥವಾ ಕುಲದ ಸಂಬಂಧಗಳು ಹುಟ್ಟಿನಿಂದಲೆ ಬಂದುವು. ಸಮಾಜದುವು, ನಮ್ಮ ನಡೆವಳಿಯಿಂದ, ಸಂಸ್ಕೃತಿಯಿಂದ ನಿರ್ಮಾಣ ಮಾಡಿಕೊಂಡಂತಹವು. ಆದುದರಿಂದ, ಕುಟುಂಬವು ಹುಟ್ಟಿನಿಂದ ಬಂದುದು. ಸಮಾಜವು ನಾವು ಮಾಡಿಕೊಂಡುದು.

ಭಾರತದಲ್ಲಿ 'ಸಮಾಜ' ಎಂಬುದು ಇನ್ನೂ ನಿರ್ಮಾಣವಾಗಬೇಕಾಗಿದೆ. ಆದುದರಿಂದಲೇ ನಮ್ಮ ದೇಶದಲ್ಲಿ ಸಾಮಾಜಿಕತೆ ಇನ್ನೂ ತೀರ ಪ್ರಾಥಮಿಕ ಸ್ಥಿತಿಯಲ್ಲಿದೆ. ನಮ್ಮಲ್ಲಿ ಜಾತಿಗಳು ಬೆಳೆದುವು; ಧರ್ಮಗಳು ವಿಕಾಸಗೊಂಡುವು ರಾಜ್ಯಗಳು ಪ್ರವರ್ಧಮಾನ ಸ್ಥಿತಿಗೆ ಬಂದುವು. ಆದರೆ 'ಸಮಾಜ' ಎಂಬುದು ಆರೋಗ್ಯಕರವಾಗಿ ಬೆಳೆಯಲೆ ಇಲ್ಲ. ಏಕೆಂದರೆ ಅದು ಹಾಗೆ ಬೆಳೆಯಲು 'ಆವಶ್ಯಕವಾದ ವಾತಾವರಣವು, ಈವರೆಗೆ ಇಲ್ಲಿ ಸಿಕ್ಕಲೇ ಇಲ್ಲ. "ಆದುದರಿಂದ ಸಮಾಜದ ಸರಿಯಾದ ಅರಿವು ನಮ್ಮಲ್ಲಿ ಬಹುಜನರಿಗೆ ಇಲ್ಲ. ಪರಲೋಕ-ಸಾಧನವೇ ಜೀವನದ ಹಿರಿಗುರಿಯಾದ ಭಾರತೀಯರು, ನಿರ್ಮೋಹವಿಲ್ಲದೆ ಎಷ್ಟೋ ಅಷ್ಟಕ್ಕಿಂತ ಹೆಚ್ಚು ಗಮನ ಈ ಲೌಕಿಕ ವ್ಯವಹಾರಗಳಿಗೆ ಕೊಡದೆ ಇದ್ದರೆ ಸೋಜಿಗವಿಲ್ಲ. ಮುಂದಿನ ಊರಿಗೆ ಹೊರಟ ಯಾತ್ರಿಕರು ಧರ್ಮಶಾಲೆಯಲ್ಲಿ ತಂಗುವಂತೆ, ನಮ್ಮವರ ಈ ಲೋಕದ ಜೀವನ ಯಾತ್ರೆ; ಇಲ್ಲಿಯ ಇರುವು. ಹೊಟ್ಟೆ ಕೇಳುವುದಿಲ್ಲ- ಅದಕ್ಕಾಗಿ ಹೇಗೊ ದುಡಿಯುವುದು; ಜೀವ ಕೇಳುವುದಿಲ್ಲ-ಅಂತೂ ಮದುವೆಯಾಗುವುದು; ಮದುವೆಯಾದ ತಪ್ಪಿಗೆ ಮಕ್ಕಳು ಗಂಟು ಬೀಳುವುವು. ಅಷ್ಟರೊಳಗೆ ಈ ಮಾಯಾ ಸಂಸಾರದೊಳಗಿಂದ ಅಥವಾ ಸಂಸಾರ ಮಾಯೆಯೊಳಗಿಂದ ಒಮ್ಮೆ ಪಾರಾಗಿ ಮುಕ್ತಿಯ ದಾರಿಯನ್ನು ಹಿಡಿವ ಅವಸರವೇ ಅವಸರ! 'ಸಮಾಜ' ಎಂಬುದರ ಆವಶ್ಯಕತೆ ನಮ್ಮ ಜೀವನದ ದಾರಿಯಲ್ಲಿ ಎಲ್ಲಿಯಾದರೂ ಉಂಟೆ? ಈ ಕಾರಣದಿಂದಲೆ ಭಾರತೀಯ ಸಮಾಜ ಅಥವಾ ಹಿಂದೂ ಸಮಾಜವೆಂಬುದು ಕೂಡ ಇನ್ನೂ ಬಾಲ್ಯಾವಸ್ಥೆಯನ್ನು ಮೀರಿ ಮುಂದೆ ಬೆಳೆದಿಲ್ಲ.

ಸಮಾಜ ಮತ್ತು (ಜಾತಿ) ಧರ್ಮದ ಕಲ್ಪನೆಗಳು ಒಂದರೊಳಗೊಂದು ಬೆರೆತುಕೊಂಡೇ ಬೆಳೆದು ಬಂದುದರಿಂದ ಈಗಿನ ಕಾಲಕ್ಕೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗಿದೆ. ಕಾಶ್ಮೀರದಿಂದ ರಾಮೇಶ್ವರದವರೆಗೆ ಪ್ರವಾಸ ಮಾಡುವ ಸಂಪ್ರದಾಯ ಬಹಳ ಪೂರ್ವಕಾಲದಿಂದಲೂ ಕಂಡುಬರುವುದು. ಆದರೆ, ಅದು ಯಾತಕ್ಕಾಗಿ? ಕೈಲಾಸದ ಆಶೆಯಿಂದ; ಸಾಮಾಜಿಕ ಕಾರ್ಯಕ್ಕಾಗಿ ಅಲ್ಲ. ಗುಡಿ-ಗುಂಡಾರಗಳನ್ನು ಕಟ್ಟಿ, ಛತ್ರಗಳನ್ನಿಟ್ಟು ಅಗಣಿತ ದಾನಕೊಟ್ಟವರುಂಟು; ಈಗಲೂ ಅನ್ನದಾನಿಗಳೆನಿಸಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುತ್ತಿದ್ದಾರೆ. ಯಾತಕ್ಕಾಗಿ? ತಮ್ಮ ಜಾತಿಯವರ ಸಲುವಾಗಿ-(ಭಾರತೀಯ) ಸಮಾಜಕ್ಕಾಗಿ ಅಲ್ಲ.

ಕುಟುಂಬ--------➤ ಸಮಾಜ--------➤ (ದೇಶ)-------➤ ಮಾನವ್ಯ.

ಇಂತಿದು ಇಲ್ಲಿಯ ಬಾಳಿನ ನೇರವಾದ ದಾರಿ. ಆದರೆ,

ಸತ್ತಮೇಲಿನ ಸ್ವರ್ಗ, (ಮೋಕ್ಷ, ಕೈಲಾಸ ಅಥವಾ ವೈಕುಂಠ)

ಕುಟುಂಬ---------➤ ಜಾತಿ (ಧರ್ಮ)

ಹೀಗೆ ಜಾತಿಧರ್ಮದಿಂದ ಫಕ್ಕನೆ ಸ್ವರ್ಗದ ಲೆಕ್ಕವೇ. ಆ ದಾರಿಯಿಂದ ಹೊರಟಲ್ಲಿ ದೇಶ, ಸಮಾಜ ಇವಾವುವೂ ಸಾಲವಾಗಿ ಸಿಕ್ಕುವುದಿಲ್ಲ. ಭಾರತದ (ಅಥವಾ ಮಾನವ ಕುಟುಂಬದ) ಹೊಟ್ಟೆಯಲ್ಲಿ ಹಲವು ಜಾತಿ (ಧರ್ಮ)ಗಳ ಬೇರೆ ಬೇರೆ ಗಂಟುಗಳು ಬೆಳೆದು ನಿಂತಿವೆ. ಇವುಗಳು ಪ್ರತಿಯೊಂದೂ ಸುಸಂಬದ್ಧವಾಗಿ ಏಕಜೀವವಾಗಿ ಹೊಂದಿಕೊಂಡು ಕಾರ್ಯ ಮಾಡುತ್ತಿದ್ದರೆ, ಅದೊಂದು ಮಾತೇ ಬೇರೆ. ಆದರೆ, ಇವುಗಳು ಪ್ರತಿಯೊಂದೂ ಒಂದೊಂದು ಸ್ವತಂತ್ರ (ಲೋಕ)! ಆದುದರಿಂದ ಭಾರತದಲ್ಲಿ 'ಸಮಾಜ' ಎಂಬುದು ಉಂಟೆ? ಎಂಬ ಪ್ರಶ್ನೆ ಇನ್ನೂ ಒಂದು ಬಗೆಯಾಗಿ ತಲೆದೋರುತ್ತದೆ.

ಸಮಾಜ-ವಿಚಾರ

ಸಮಾಜದ ರಚನೆ ಮತ್ತು ಅದರ ಸ್ವರೂಪವನ್ನು ಕುರಿತು ಪ್ರತಿಯೊಂದು ಸ್ವತಂತ್ರ ರಾಷ್ಟ್ರದಲ್ಲಿಯೂ ಅಲ್ಲಿಯ ವಿದ್ವಾಂಸರು ತುಂಬ ಆಳವಾದ ಅಭ್ಯಾಸಮಾಡಿ ಗ್ರಂಥಗಳನ್ನು ಪ್ರಕಟಿಸುತ್ತಿದ್ದಾರೆ. ಅವೆಲ್ಲವುಗಳ ಸಾರವು ನಮ್ಮ ಭಾಷೆಯಲ್ಲಿ ಎಂದು ಬರುವುದೊ! ಕೆಲವೊಂದು ಸ್ಥೂಲಪರಿಚಯದಿಂದಲೆ ಈಗ ಎಂತೊ ಸಮಾಧಾನಪಟ್ಟುಕೊಳ್ಳಬೇಕಾಗಿದೆ. ನಿಜವಾಗಿ ಇದಿಷ್ಟೇ ಸಾಲದು; ಯಾರಾದರೂ ತಮ್ಮ ಹೆಚ್ಚಿನ ಅಭ್ಯಾಸ, ಸಂಶೋಧನಗಳ ಲಾಭವನ್ನು ಜನಕ್ಕೆ ಮಾಡಿಕೊಟ್ಟರೆ, ನಾಡಿನ ವಿಚಾರ ವಿಕಾಸದ ಕಾರ್ಯಕ್ಕೆ ನೆರವಾದ ಶ್ರೇಯಸ್ಸು ಸಲ್ಲುವುದು. ಪರಿಭಾಷೆಯು ನಿಶ್ಚಿತವಾಗಿ ಗೊತ್ತಾಗುವ ವರೆಗೆ ಇದರ ಶಾಸ್ತ್ರೀಯ ವಿವೇಚನವು ಅಷ್ಟು ಸಮಾಧಾನಕರವಾಗಿ, ವಿಸ್ತೃತವಾಗಿ ಆಗುವುದು ತೊಂದರೆಯದಾಗಿದೆ. ಸಮಾಜದೊಳಗಣ ಪಂಗಡಗಳನ್ನು ಹಲವರು ಹಲವು ತೆರನಾಗಿ ವರ್ಗೀಕರಿಸಿದ್ದಾರೆ. ಸಮಾಜದ ವಿಸ್ತಾರವು ಬಹಳ ಸೂಕ್ಷ್ಮ ಮತ್ತು ಗಹನವಾಗಿರುವುದರಿಂದ ಎಲ್ಲವನ್ನೂ ಸಮರ್ಪಕವಾಗಿ ಅಳವಡಿಸಿ ಹೇಳುವುದಕ್ಕೆ ತೊಂದರೆಗಳಿವೆ. ಆದರೂ ಸ್ಥೂಲವಾಗಿ ಎರಡು ದೊಡ್ಡಗುಂಪುಗಳನ್ನು ಮಾಡಿ ಕೆಲವನ್ನು ಸಂಸ್ಥೆಗಳೆಂದೂ ಕೆಲವನ್ನು ಸಂಘ ಸಮಿತಿಗಳೆಂದೂ ಕರೆಯಬಹುದು.

ಸಂಸ್ಥೆಗಳೆಂದರೆ, ತಲೆಮಾರಿನಿಂದ ತಲೆಮಾರಿಗೆ ಸ್ಥಿರವಾಗಿ ಉಳಿದುಕೊಂಡು ಬಂದುವು. ಉದಾಹರಣಾರ್ಥವಾಗಿ ವಿವಾಹ ಸಂಸ್ಥೆ; ಜಾತಿ-ಸಂಸ್ಥೆ; ಮುಂ. ಸಂಘ ಸಮಿತಿಗಳೆಂದರೆ, ಯಾವುದೊಂದು ವಿಶಿಷ್ಟ ಉದ್ದೇಶವನ್ನು ಇಟ್ಟುಕೊಂಡು ಅದರ ಸಾಧನೆಗಾಗಿ ರಚಿಸಿದವುಗಳು. ಕುಟುಂಬವು ಸ್ವಾಭಾವಿಕವಾದುದು. ಹೃದಯಬಂಧನವು ಅದರ ಸ್ಥಿರತೆಗೆ ಕಾರಣವಾಗಿರುತ್ತದೆ. ಎಲ್ಲರಿಗೂ ಸಾಮಾನ್ಯವಾದ ಒಂದು ಸಂಕಲ್ಪವು ಅದರ ಜೀವನದ ಆಳದಲ್ಲಿ ಹುದುಗಿದ್ದುದು ಗೋಚರವಾಗುತ್ತದೆ. ಅದಕ್ಕೊಂದು ತನ್ನದೇ ಆದ ವಾತಾವರಣವಿರುತ್ತದೆ.

ಆದರೆ, ಸಮಿತಿಯು ಕೃತ್ರಿಮ. ಯಾವುದೊ ಮಾತನ್ನು ನೆನೆದು ಅಥವಾ ಒಂದು ಗುರಿಯನ್ನಿಟ್ಟುಕೊಂಡು ಕೂಡಿದ ಗುಂಪು ಇದು. ಉದ್ದೇಶಪೂರ್ವಕವಾಗಿ ಸೇರುವುದುಂಟು. ಧ್ಯೇಯ ಸಾಧನೆಗಾಗಿ, ಬುದ್ಧಿ ಪುರಸ್ಸರವಾಗಿ ನಿರ್ಣಯಗಳನ್ನು ಕೈಕೊಂಡು ಕೆಲಸಕ್ಕೆ ತೊಡಗುವುದು ವಾಡಿಕೆ. ಕುಟುಂಬವು ಸಜೀವ ವ್ಯಕ್ತಿಯಂತೆ; ಸಹಜ-ಸ್ವಾಭಾವಿಕ ರೀತಿಯಲ್ಲಿ ಅಂತಃಪ್ರೇರಣೆಯಿಂದಲೆ ಕಾರ್ಯಪ್ರವೃತ್ತವಾಗುವುದು ವಾಡಿಕೆ. ಸಮಿತಿಯು ಯಾಂತ್ರಿಕ. ಅಲ್ಲಿ ಸಹಜತೆ ಕಡಿಮೆ; ಹಕ್ಕುಬಾಧ್ಯತೆಗಳ ಆಸಕ್ತಿ-ಆಕಾಂಕ್ಷೆಗಳು ಜನರನ್ನು ಎಳೆದು ತರುವುವು. ಇಲ್ಲಿ ತಮ್ಮದನ್ನು ಸಾಧಿಸಲು ಈರ್ಷೆ-ಸ್ಪರ್ಧೆಗಳಿಂದ ವ್ಯಾಪಾರ, ಹೋರಾಟ ನಡೆಯುವುದು.

ಕುಟುಂಬ ಮತ್ತು ಸಂಸ್ಥೆಗಳು ಒಂದು ನಾಡಿನ ದೃಷ್ಟಿಕೋನವನ್ನು ಸೂಚಿಸುವುವು. ಸಮಿತಿಗಳು ಆ ನಾಡಿನ ಆಕಾಂಕ್ಷೆ-ಆಸಕ್ತಿಯು ಯಾತರಲ್ಲಿ ಎಂಬುದನ್ನು ಧ್ವನಿತಮಾಡುವುವು. ಎಲ್ಲರಿಗೂ ಸಮಾನ-ಸಾಮಾನ್ಯ ಆಸಕ್ತಿಯಿದ್ದಲ್ಲಿಯೆ ಸಮಾಜವು ಭದ್ರವಾಗಿ ಉಳಿಯಬಲ್ಲದು. ಒಂದೊಂದು ಪಂಗಡದ ಭಿನ್ನಭಿನ್ನ ಆಸಕ್ತಿಗಳಿದ್ದಲ್ಲಿ ಸಾಮಾನ್ಯ ಸಂಕಲ್ಪವು ನಿಷ್ಪನ್ನವಾಗಲಾರದು. ಸಾಮಾನ್ಯ ಸಂಕಲ್ಪ ಅಥವಾ ಕ್ರತುಶಕ್ತಿಯು ಇಲ್ಲದ ಜನಗಳ ಗುಂಪು ನೆರವಿಯಲ್ಲದೆ ಸಮಾಜವಲ್ಲ. ಮೇಲ್ಕಾಣಿಸಿದ ಎಲ್ಲ ಅಂದದ ಪಂಗಡಗಳನ್ನೂ ಒಳಗೊಂಡ ಸಮ್ಯಕ್ ರೂಪಕ್ಕೇ ಸಮಾಜವೆಂಬ ಹೆಸರು. ಇದರೊಳಗಿನ ಯಾವುದೊಂದು ಅಂಶವು ಅಥವಾ ಅಂಗವು (ಇಡೀ) ಸಮಾಜವೆಂಬ ಹೆಸರಿಗೆ ಅನರ್ಹವಾಗಿದೆ.

ಸಮಾಜವನ್ನು ಇನ್ನೂ ಒಂದು ಅಂದದಿಂದ ವರ್ಗೀಕರಿಸುವುದುಂಟು.

ಗುಂಪುಗಳು

- ಪ್ರತ್ಯಕ್ಷ ಸ್ಥೂಲ (ವೈಯಕ್ತಿಕ) ಸಂಬಂಧ ಬರುವಂತಹವು
  - ಬಳಗದಂತಹ ಸ್ಥಿರ ರೂಪದ ಸಂಬಂಧ ಉದಾ: ಮನೆತನ, ನೆರೆ ಹೊರೆಯ ಆಪ್ತ ಬಾಂಧವ್ಯದಂತಹ ಪ್ರಾಥಮಿಕ ಕೌಟುಂಬಿಕ ಸಂಬಂಧಗಳು
  - ತಾತ್ಪೂರ್ತಿಕ ಸಂಬಂಧ ಉದಾ: ಸಂತೆ, ಜಾತ್ರೆ, ಯಾತ್ರೆ, ಪ್ರವಾಸ, ಅಥವಾ ಏನೊಂದು ನಿಮಿತ್ತದಿಂದ ಸೇರಿದ ಗುಂಪುಗಳಲ್ಲಿ ಬರುವ ಸಂಬಂಧ
- ಅಪ್ರತ್ಯಕ್ಷ ಅಥವಾ ಸೂಕ್ಷ್ಮ ಸಂಬಂಧವುಳ್ಳುವು
  - ಮೇಲುಮಟ್ಟದ ಬಾಳಿನಲ್ಲಿ ಉಂಟಾಗುವ ಸ್ಥಿರರೂಪದ ಸಂಬಂಧ. ಉದಾ: ನಾಗರಿಕ, ರಾಷ್ಟ್ರೀಯ, ಸಾಂಸ್ಕೃತಿಕ, ರಾಜಕೀಯ ಕೂಟದ ಸಂಬಂಧಗಳು
  - ವಿಶಿಷ್ಟ ಕಾರ್ಯ ಅಥವಾ ಕಾರಣಗಳಿಗಾಗಿ ಬರುವ ಸಂಬಂಧ. ಉದಾ: ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ, ಕಲಾ ಸಮಿತಿಗಳ ಮೂಲಕ ಉಂಟಾಗುವ ಸಂಬಂಧಗಳು.

ಇನ್ನೂ ಕೆಲವು ಗುಂಪುಗಳೆನಿಸಬಹುದಾದ ವರ್ಗಗಳು

'ಸಾರ್ವಜನಿಕರು'; '(ಊರ) ಹಿರಿಯರು'; 'ದೈವದವರು'; ಆಟಪಾಟ ಅಥವಾ ಸಮಾಜ ಸುಧಾರಣೆಗಳಂತಹ ನಿಮಿತ್ತದ ಎಲ್ಲರಿಗೂ ಸಾಮಾನ್ಯ ಆಸಕ್ತಿಯಿರುವ ಗುಂಪುಗಳು : 'ಆಟಗಾರರು', 'ಸುಧಾರಕರು', 'ಸನಾತನಿಗಳು' ಮುಂತಾದವುಗಳು.

೧. ಬಾಹ್ಯಕಾರಣದಿಂದ ಉಂಟಾದ ವರ್ಗಗಳು ಅಥವಾ ವಿಭಾಗಗಳು

ಬಂಡವಾಳಗಾರಿಕೆ, ಜಮೀನ್ದಾರಿ; ಜಹಗೀರದಾರಿ, ಸಂಸ್ಥಾನಿ; ಅಥವಾ ಸಾಂಸ್ಕೃತಿಕ (ಇಸ್ಲಾಂ, ಬೌದ್ಧ, ಕ್ರಿಸ್ತ ಮುಂತಾದ) ಪ್ರದೇಶಗಳು.

ಇವೆಲ್ಲ ವರ್ಗಗಳ ಜನಗಳ ವ್ಯವಹಾರ, ಸಂಬಂಧಗಳು ಹಾಸು ಹೊಕ್ಕಾಗಿ ನಡುವೆ ಯಾವ ಉಕ್ಕಿನ ಗೋಡೆಗಳ ತಡೆಯಿಲ್ಲದೆ ನಡೆಯುತ್ತಿದ್ದರೆ ಮಾತ್ರ ಆ ಸಮಾಜವು ಸಜೀವವಾಗಿದ್ದುಕೊಂಡು ಬಾಳಬಲ್ಲದು; ಬೆಳೆಯಬಲ್ಲದು. ದೇಹದೊಳಗಿನ ರಕ್ತಸಂಚಲನವು ಅಂಗಾಂಗಗಳಲ್ಲಿ ಆಗುತ್ತಿದ್ದರೇ ಆ ಶರೀರದಲ್ಲಿ ಪ್ರಾಣವು ಉಳಿದು ಜೀವನ ವ್ಯಾಪಾರವು ನಡೆಯುವುದು. ಒಂದೊಂದು ಪಂಗಡಗಳ ವ್ಯವಹಾರಗಳು ಆಯಾ ಪಂಗಡಗಳ ಮಟ್ಟಿಗೇ ಉಳಿದಲ್ಲಿ, ಅಂಗಾಂಗಗಳ ಜೀವಂತ ಸಂಬಂಧವು ತಪ್ಪಿ ಹೋದಂತೆಯೇ ಸರಿ. ಧಾರ್ಮಿಕ ಪಂಗಡಗಳು,

ಜನ್ಮದಿಂದ ಬಂದ ಜಾತಿಗಳು, ರಾಜಕೀಯ ಪಕ್ಷಗಳು, ಆರ್ಥಿಕ-ಔದ್ಯೋಗಿಕ ವರ್ಗಗಳು, ಕಲಾವಂತರ ತಂಡ, ಇವೆಲ್ಲ ಸ್ವತಂತ್ರ ಲೋಕಗಳೇ ಆಗಿರುವ ಪ್ರದೇಶವು ರಾಷ್ಟ್ರವಾಗಿ ತಲೆಯೆತ್ತಿ ಮೆರೆಯಲು ಸಾಧ್ಯವಿಲ್ಲ. ಒಂದು ಕುಟುಂಬವಾಗಲು ಇರುವ ಅಡ್ಡಿ ಆತಂಕಗಳು ದೂರವಾಗದೆ ಜೀವಂತ ಸಮಾಜವು ನಿರ್ಮಾಣವಾಗಲಾರದು; ಜೀವಂತ ಸಮಾಜವು ಇಲ್ಲದ ರಾಷ್ಟ್ರವು ಭೌಗೋಲಿಕ ಪ್ರದೇಶವೆ ಹೊರತು ಪ್ರತ್ಯಕ್ಷ ರಾಷ್ಟ್ರವೆಂಬ ಗೌರವಕ್ಕೆ ಅಪಾತ್ರವೆಂದು ಸಿದ್ಧವಾಗಲು ಬಹಳ ಕಾಲ ಬೇಕಾಗಿಲ್ಲ.

೨. **ಸುಖಜೀವನದ ಕಲ್ಪನೆ:-** ತ್ಯಾಗದಲ್ಲಿಯೇ ಸುಖವಿದೆ, ಎಂದು ನೆಮ್ಮಿದವರ ಇರುವು ಬೇರೆ; ಪ್ರತಿಯೊಂದು ಇಂದ್ರಿಯ ತೃಪ್ತಿಯಲ್ಲಿಯೇ ಜೀವನದ ಸೊಗಸುಂಟೆಂದು ನೆರೆನೆಮ್ಮಿದವರ ನಡೆವಳಿ ಬೇರೆ. ಒಂದೊಂದು ನೆಚ್ಚಿಕೆಯವರ ನಡೆವಳಿ ಬೇರೆ ಬೇರೆಯಾದರೆ ಸೋಜಿಗವೇನು?

೩. **ಆರೋಗ್ಯಸಾಧನೆಯ ರೀತಿ:-** ನೈಸರ್ಗಿಕ ಉಪಚಾರಗಳೇ ಮಿಗಿಲೆಂದು ಭಾವಿಸಿದವರು, ಪಟ್ಟಣಿಗರ ಬಾಳಿನಿಂದ ಹೇಸಿಕೊಂಡು ದೂರವಿರುವರು; ಆಧುನಿಕ ಶಾಸ್ತ್ರೀಯ ಶೋಧಗಳ ಲಾಭ ಪಡೆದು ಆರೋಗ್ಯಸುಖ ಬಯಸುವವರು ಪಟ್ಟಣವನ್ನೇ ಹಾರಯಿಸುವರು.

೪. **ನಾಗರಿಕತೆಯ ಹೆಚ್ಚಳ:-** ಪಟ್ಟಣಗಳ ಬೆಳೆವಣಿಗೆಯೆ ಇದಕ್ಕೆ ಕಾರಣ; ರಾಜಧಾನಿ ಸ್ಥಾನ, ಅಥವಾ ಔದ್ಯೋಗಿಕ ಕೇಂದ್ರವಾಗಿ ಇಲ್ಲವೆ ಬೇರೊಂದು ಕಾರಣದಿಂದ ನವನಾಗರಿಕತೆಯ ಆಗರವೆನಿಸಿದ ಪಟ್ಟಣಗಳ ಹೆಚ್ಚಳದಿಂದ ಸಮಾಜದ ಜೀವನ ರೀತಿಯಲ್ಲಿ ವ್ಯತ್ಯಾಸವಾಗುವುದು.

೫. **ರೂಢಿ ಪಲ್ಲಟ:-** ಮೊದಲಿನ ಜಾತಿ, ಬಗೆ, ಅಥವಾ ಕುಲಗಳು ಬುಡಮೇಲು ಆಗುವುದರಿಂದ ಹೊಸ ವರ್ಗಗಳು ಮೇಲಕ್ಕೆ ಬರುವವು. ಹಳಬರು ಮೂಲೆಗುಂಪಾಗುವರು.

೬. **ಪ್ರಜಾಸಂಸ್ಥೆಗಳ ನಿರ್ಮಾಣ:** ಲೋಕ ಪ್ರಾತಿನಿಧಿಕ ಸಮಿತಿ, ಸಂಸ್ಥೆಗಳು ತಲೆಯೆತ್ತಿದಂತೆ ಹಳೆಯ ಏಕತಂತ್ರಾಧಿಕಾರದ ಸಮಿತಿ, ಸಂಸ್ಥೆಗಳು ನಿರ್ಜೀವವಾಗುವುವು; ರಾಜರ ಬದಲು 'ಜಾನಪದ'ಗಳು ಮುಂದೆ ಬರುವವು. ವಿವಾಹ ಸಂಸ್ಥೆಯ ಸ್ವರೂಪವು ಮಾರ್ಪಡುವುದು, ಸ್ವಯಂ-ವರಗಳ ಪ್ರತಿಷ್ಠೆ ಬೆಳೆಯುವುದು. ಸಂಯುಕ್ತ ಕುಟುಂಬ ಪದ್ಧತಿ, ಜಮೀನ್ದಾರಿ ಪದ್ಧತಿಗಳು ಹಿಂದೆ ಬೀಳುವುವು. ಚರ್ಚೆ, ವಿಚಾರ ವಿನಿಮಯದಿಂದ ನಿರ್ಣಯ ಮಾಡಿಕೊಳ್ಳುವ ಪ್ರವೃತ್ತಿ ಹೆಚ್ಚಿ, ಬುದ್ಧಿವಾದಕ್ಕೆ ಪ್ರಾಶಸ್ತ್ಯವುಂಟಾಗುವುದು. ಸರ್ವಾಧಿಕಾರಿತ್ವ, ಏಕತಂತ್ರದ ಬಗೆಗೆ ಜುಗುಪ್ಸೆ ಹೆಚ್ಚುವುದು. ಇನ್ನೊಬ್ಬರ ಕೈಗೊಂಬೆಯಾಗಿರುವುದು ತಮ್ಮ ಮನುಷ್ಯತ್ವಕ್ಕೆ ಅಪಮಾನವೆಂಬ ಭಾವವು ಸಮಾಜದಲ್ಲಿ ಬಲಿಯುವುದು.

೭. **ಸ್ವಾತಂತ್ರ್ಯೋದಯ:-** ಪರದಾಸ್ಯದಲ್ಲಿರಬೇಕಾದಾಗ ಅನಿವಾರ್ಯವಾಗಿ ಬಂದ ಕೆಲವು ರೂಢಿಗಳು ಬದಲಾಗುವುವು. ದಾಸ್ಯಭಾವದ ಮಹಿಮೆ ತಗ್ಗುವುದು. ದಾಸ್ಯಭಾವದಿಂದ ಹಿಂದಕ್ಕೆ ಇದ್ದ ಲಾಭಗಳು ಈಗ ದೊರೆಯದೆ, ದಾಸನೆಂದು ಅವಮಾನ ಹೊಂದಬೇಕಾದುದರಿಂದ ದಾಸ್ಯತ್ವದ ಬಿರುದು ಬಿಡುವಲ್ಲಿಯೆ ಗೌರವ. 'ತವದಾಸೋಽಹಂ' ಎಂಬ ವೃತ್ತಿ ನಷ್ಟವಾಗಿ ಸ್ವಾಭಿಮಾನ ಜಾಗ್ರತಿಯಾಗುವುದು. ದಾಸೋಹದವರ ಸಮಾಜವು ಕಿರುಕುಳರದೆಂದು ಭಾವನೆಯಾಗುವುದು.

೮. **ಸ್ತ್ರೀ ಸ್ವಾತಂತ್ರ್ಯ:-** 'ಮನುಷ್ಯ' ಎಂದರೆ ಗಂಡಸು ಮಾತ್ರ ಎಂದೇ ಭಾವನೆ ನಡೆದುಕೊಂಡು ಬಂದಿದೆ. ಮನುಷ್ಯನು ಎಂಬಲ್ಲಿ ಅದು ಸ್ಪಷ್ಟವಾಗುತ್ತದೆ. 'ಹೆಂಗಸರಿಗೆ ಆತ್ಮವಿಲ್ಲ' ಎಂಬ ಪುರಾತನ ವಚನಗಳೂ ಉಂಟು. ಹೆಣ್ಣನ್ನು ಲೆಕ್ಕಕ್ಕೆ ಹಿಡಿಯದೆ ಈವರೆಗಿನ ಎಲ್ಲ ಸಮಾಜದ ರಚನೆಯಿತ್ತು. ಇನ್ನು ಹೆಣ್ಣು ತನ್ನ ಹಕ್ಕನ್ನು ಪಡೆದುಕೊಳ್ಳಲು ಮುಂದೆ ಬರುತ್ತಲೆ, ಕುಟುಂಬ ಸಂಸ್ಥೆ, ಸಾರ್ವಜನಿಕ ಸಂಸ್ಥೆ, ಸಮಿತಿಗಳ ರಚನೆಗಳಲ್ಲಿ ಬದಲಾವಣೆಯಾಗುವುದು ಅನಿವಾರ್ಯ. ಭಾಷೆಯ ರೀತಿಯಲ್ಲಿ ಕೂಡ, ಮಾರ್ಪಾಟು ಆಗಲೇಬೇಕು. 'ಬಳೆ ಇಟ್ಟುಕೊಳ್ಳುವುದು' ಹೇಡಿತನದ ಲಕ್ಷಣವೆಂಬ ಪಡೆನುಡಿ ಬದಲಾಗದೆ ಇದ್ದರೆ ಹೆಣ್ಣು ಮಕ್ಕಳು ಬಳೆ ಹಾಕಿಕೊಳ್ಳುವುದನ್ನು ಬಿಡುವುದಾಗಿ ಸಾರಬಹುದು!

೯. ಧಾರ್ಮಿಕ ವಿಚಾರದಲ್ಲಿ ಪರಿವರ್ತನ:- ಶಿಕ್ಷಣ, ಪ್ರವಾಹ, ಭಿನ್ನ ಧರ್ಮ-ಸಂಸ್ಕೃತಿಯ ಜನಾಂಗಗಳ ಸಂಪರ್ಕ ಮೊದಲಾದ ಕಾರಣಗಳಿಂದ ಸಮಾಜದ ದೃಷ್ಟಿಕೋನದಲ್ಲಿ ಬದಲಾವಣೆಯಾಗುವುದುಂಟು. ತುಲನಾತ್ಮಕ ಅಭ್ಯಾಸದಲ್ಲಿ ಧಾರ್ಮಿಕ ವಿಚಾರಗಳ ವಿಷಯಕ್ಕೆ ಹೊಸದೃಷ್ಟಿಯು ಪ್ರಾಪ್ತವಾಗುವುದು. ಪರಿಸ್ಥಿತಿಯ ಒತ್ತಾಯದಿಂದ ತಮ್ಮ ಹಳೆಯ ಆಚಾರಗಳು ಆಧುನಿಕ ಯುಗಕ್ಕೆ ನಿರುಪಯುಕ್ತವಾಗಿವೆಯೆಂಬ ಅನುಭವವು ಅಡಿಗಡಿಗೆ ಬರುವುದು. ಇಂತಹ ಸಂದರ್ಭಗಳಲ್ಲಿ ಧಾರ್ಮಿಕ ನಡೆವಳಿಕೆಯು ಎಂದಿನಂತೆ ಇದ್ದಕ್ಕಿದ್ದ ಹಾಗೆಯೆ ಉಳಿಯುವುದು ಅಶಕ್ಯವಾಗುವುದು. ಕಲಿಯುಗಾದಿ ನಿಮಿತ್ತಗಳನ್ನು ಮುಂದೆ ಮಾಡಿ ಸನಾತನಿಗಳಿಗೂ ಕೂಡ ಬದಲಾವಣೆಗೆ ತಲೆವಾಗಲೇಬೇಕಾಗುತ್ತದೆ!

ಸಮಾಜ ಸ್ವಾಸ್ಥ್ಯವು ಕೆಡಬಾರದಾಗಿದ್ದರೆ ಸಮಾಜದೊಳಗೆ ಪ್ರತಿಯೊಂದು ವ್ಯಕ್ತಿಗೂ ತನ್ನ ಇಷ್ಟದಂತೆ ತನ್ನ ಏಳ್ಗೆಯನ್ನು ಮಾಡಿಕೊಂಬ ಸ್ವಾತಂತ್ರ್ಯವಿರಬೇಕು. ಜನ್ಮಮೂಲಕ ಅಥವಾ ಸಂಪತ್ತಿನ ಮೂಲಕ ಯಾವ ತೊಡಕು ತೊಂದರೆಗಳನ್ನೂ ಒಡ್ಡಲಾಗದು. ಗುಣಕ್ಕೇ ಮನ್ನಣೆಯಿರಬೇಕು. ಅಸ್ವಾಭಾವಿಕವಾದ ವಿಶೇಷ ಹಕ್ಕುಗಳನ್ನು ಪಡೆದುಕೊಂಡ ಪಂಗಡಗಳು ಉಳಿದ ವರ್ಗಗಳ ಅಸೂಯೆಗೆ ಆಮಂತ್ರಣ ಕೊಡುತ್ತವೆ. ಸಮಾಜವು ತನ್ನದೇ ಆದ ಒಂದು ವಿಶಿಷ್ಟ ವಾತಾವರಣವನ್ನು ನಿರ್ಮಿಸಿಕೊಂಡಿರುತ್ತದೆ. ಸಮಾಜದೊಳಗಿನ ಒಂದೊಂದು ವರ್ಗ, ಸಂಸ್ಥೆ, ಸಮಿತಿಗಳೂ ಈ ವಾತಾವರಣ ನಿರ್ಮಾಣಕ್ಕೆ ಪೋಷಕವಾಗಿರುತ್ತವೆ. ರೂಢಿ, ಸಂಪ್ರದಾಯಗಳು, ನೈತಿಕ ಕಲ್ಪನೆಗಳು, ಧಾರ್ಮಿಕ ವಿಚಾರಗಳು ಪುರಾಣ ಕತೆಗಳು, ಕಲಾ-ಸಾಹಿತ್ಯ, ಶಾಸ್ತ್ರ, ಇಂತಿವೆಲ್ಲವೂ-ಇವು ಯಾವುದೇ ಪಂಗಡ ಪಕ್ಷ, ಪಂಥದುವು ಇದ್ದರೂ ಅವೆಲ್ಲವು ಏಕಮುಖವಾಗಿ ಸಾಮಾಜಿಕ ಒಕ್ಕಟ್ಟಿನ ವಾತಾವರಣದ ಏಕತಾನತೆಗೆ ಸಹಕಾರಿಯಾಗಿರಬೇಕಲ್ಲದೆ ಪರಸ್ಪರ ವಿರೋಧಕ, ಮಾರಕವಾಗಿರಬಾರದು. ಹಿಂದೂ-ಇಸ್ಲಾಮದ ಮತವಿಚಾರ, ನಾರಸಿಂಹ-ಶರಭಾವತಾರದ ಕಥೆಗಳು, ವೈದಿಕ-ಬೌದ್ಧಾದಿಗಳ ದೃಷ್ಟಿಕೋನ ಇಂತಹ ಹಾವು-ಮುಂಗಲಿಗಳ ಮನೋಭಾವವು ವ್ಯಕ್ತವಾಗುತ್ತಲಿದ್ದ ಈ ವರೆಗಿನ ಈ ಹಿನ್ನೆಲೆಯಲ್ಲಿ ಅಖಂಡ, ಅವಿಭಾಜ್ಯ, ಏಕಜೀವ ಒಂದು ಸಮಾಜವು ತಲೆಯೆತ್ತುವದು ಹೇಗೆ ತಾನೆ ಸಾಧ್ಯ? ಒಂದು ಕುಟುಂಬವಾಗಿ ಬೆಳೆಯಲು ಅಡ್ಡಬರುವ ನಡುವಿನ ಎಲ್ಲ ಅಡೆತಡೆಗಳನ್ನೂ ನಿರ್ಮೂಲಗೊಳಿಸದೆ ಯಾವ ಜನವೂ ಒಂದು ಸಮಾಜವೆಂಬ ಮರ್ಯಾದೆಗೆ ತಕ್ಕುದಾಗಲಾರದು. ಒಂದು ಕುಟುಂಬವಾಗಿ ವಿಕಾಸವಾಗಲು ಪಚನವಾಗದೆ ಉಳಿದ ಪಕ್ಷ, ಪಂಗಡ ಜನವು 'ಸಲ್ಲ'; ಅದು ಒಡಲಲ್ಲಿ ಬೆಳೆವ ಗಂಟು. ಶಸ್ತ್ರಕ್ರಿಯೆಯಿಂದ ಅದನ್ನು ಕತ್ತರಿಸಿಯಾದರೂ ಹೊರದೆಗೆಯಬೇಕು. ಇಲ್ಲವೆ ಅರಗಿಸಿಕೊಳ್ಳಲು ಆವಶ್ಯಕವಾದ ಔಷಧೋಪಚಾರಗಳನ್ನಾದರೂ ಕೂಡಲೆ ಕೈಕೊಳ್ಳಬೇಕು. ದುರ್ಲಕ್ಷ ಮಾಡಿದರೆ ಆರಂಭದಲ್ಲಿ ಉಗುರಿನಿಂದ ಹೋಗುವುದಕ್ಕೆ ಶಸ್ತ್ರವನ್ನು ಉಪಯೋಗಿಸುವ ಪ್ರಸಂಗವು ಬರುವುದು. ಇಲ್ಲವಾದರೆ ಅದು ಜೀವದ ಮೇಲಣ ಗಂಡಾಂತರವಾಗುವುದು ನಿಶ್ಚಿತ.

ಸಮಾಜದ ಕಲ್ಪನೆಯು ಮಾನವರಿಗೆ ಅತಿಪುರಾತನ ಕಾಲದಿಂದಲೇ ಹೊಳೆದಿದ್ದರೂ ಶಾಸ್ತ್ರೀಯ ಪದ್ಧತಿಯಿಂದ ಅದರ ಆಳವಾದ ಸಂಶೋಧನೆ ಮತ್ತು ಅಭ್ಯಾಸಕ್ಕೆ ಆರಂಭವಾಗಿ ಬಹಳ ಕಾಲವು ಸಂದಿಲ್ಲ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಈ ಶಾಸ್ತ್ರವು ತಲೆದೋರಿತೆನ್ನಬಹುದು. ಇದರ ಉಗಮವು ಮೊದಲು ಫ್ರಾನ್ಸದಲ್ಲಾಯಿತು. ಇಂಗ್ಲಿಷ ಜರ್ಮನ್ ಧೀಮಂತರು ಈ ಶಾಸ್ತ್ರದ ವಿಕಾಸಕ್ಕೆ ನೆರವಾದರು. ಈಗ ಅಮೇರಿಕೆಯಲ್ಲಿ ಈ ವಿಷಯದ ವಿಶೇಷ ಆಸ್ಥೆಯು ಕಂಡುಬರುತ್ತದೆ. ಈ ವಿಷಯವು 'ಶಾಸ್ತ್ರ'ವೇ ಎಂಬ ಬಗೆಗೆ ಹಲವರು ಸಂದೇಹಪಟ್ಟುಕೊಂಡು ಆಯ್ತು. ಈಗ ಸಮಾಜಶಾಸ್ತ್ರದ ಅಧಿಕಾರವನ್ನು ಒಪ್ಪಿಕೊಂಡರೂ ಇದರ ಕ್ಷೇತ್ರವು ಎಷ್ಟು ಎಂಬ ಬಗೆಗೆ ವಾದವಿದೆ. ಸಮಾಜಶಾಸ್ತ್ರವು ಬಳಸಿಕೊಳ್ಳದ ಅಥವಾ ಸಮಾಜದ ಶಾಸ್ತ್ರದೊಡನೆ ಸಂಬಂಧಬಾರದ ಶಾಸ್ತ್ರವಿಲ್ಲ. ಮನುಷ್ಯಶಾಸ್ತ್ರವು (Anthropology) ಬೆಳಕುಕೊಡದಿದ್ದರೆ ಸಮಾಜಶಾಸ್ತ್ರದ ಪ್ರಗತಿಯೇ ಸಾಧ್ಯವಿದ್ದಿಲ್ಲ. ಇತಿಹಾಸ- ಭೂಗೋಲಗಳಂತೂ ಮುಖ್ಯಾಧಾರ. ಮನುಷ್ಯ ಶಾಸ್ತ್ರವು ಕೈಬಿಟ್ಟೊಡನೆ ಇತಿಹಾಸದ ನೆರವನ್ನು ಕೋರಬೇಕಾಗುವದು. ಪುರಾಣಕತೆ, ಲೋಕಕಥೆ, ಲೋಕಗೀತ, ಭಾಷಾಶಾಸ್ತ್ರ, ಧರ್ಮಶಾಸ್ತ್ರ, ನೀತಿಶಾಸ್ತ್ರ,

ತತ್ವಜ್ಞಾನಗಳ ನೆರವಂತೂ ಸರಿಯೆ; ಭೌತಶಾಸ್ತ್ರದ ಸಿದ್ಧಾಂತಗಳ ಉಪಕಾರಗಳೂ ಅಷ್ಟಿಷ್ಟಲ್ಲ. ಡಾರ್ವಿನನ ವಿಕಾಸವಾದವು ಸಮಾಜ ಶಾಸ್ತ್ರದ ವಿಕಾಸಕ್ಕೂ ಕಾರಣವಾಗಿದೆ. ಐನ್ಸಟನ್‌ನ ಸಾಪೇಕ್ಷ ಸಿದ್ಧಾಂತದ ಪರಿಣಾಮಗಳೂ ಮಹತ್ವದವುಗಳಾಗಿವೆ. ಜೀವನ ರೀತಿಯ ಮೇಲೆ ಪರಿಣಾಮ ಮಾಡುವ ಪ್ರತಿಯೊಂದು ಹೊಸ ಸಂಶೋಧನವೂ ಸಮಾಜಶಾಸ್ತ್ರಕ್ಕೆ ತನ್ನನ್ನು ಲೆಕ್ಕಿಸಲು ಬಂದು ವರದಿಯನ್ನು ಕೊಡುತ್ತದೆ. ಇವಲ್ಲದೆ, ಇತ್ತೀಚೆಗೆ ಅರ್ಥಶಾಸ್ತ್ರವೇ ಸಮಾಜಶಾಸ್ತ್ರದ ಮುಖ್ಯಾಂಗವಾದಂತಾಗಿತ್ತು. ಆದರೆ, ಮಾನಸ ಶಾಸ್ತ್ರದ ಆಗಮನದಿಂದ ಅರ್ಥಶಾಸ್ತ್ರದ ಮಹತ್ವವು ಪೂರ್ಣ ಕಡಿಮೆಯಾಗದಾದರೂ ಅದರ ಹೆಮ್ಮೆ ಸ್ವಲ್ಪ ಕುಗ್ಗಿದಂತಾಗಿದೆ. ಮಾನವನು ಮನಸ್ಸಿನ ಕೈಬೊಂಬೆ. ಆದುದರಿಂದ ಮಾನಸಶಾಸ್ತ್ರಕ್ಕೆ ಇರುವ ಗೌರವವೇ ಅದೊಂದು ಬೇರೆ.

ಸಮಾಜದ ಭದ್ರತೆಯ ಉಪಾಯಗಳನ್ನು ಕಂಡುಹಿಡಿವ ಹಲವಾರು ಪ್ರಯತ್ನಗಳಾಗಿವೆ ಅವೆಲ್ಲವುಗಳ ಇತಿಹಾಸವು ಸ್ವತಂತ್ರವಾದ ಒಂದು ಮನೋರಂಜಕ ಗ್ರಂಥವೆ ಆದೀತು ಮನುಷ್ಯನು ಸ್ವಾರ್ಥಪರಾಯಣನು. ಆತನ ಸ್ವಾರ್ಥೀಭಾವವೇ ಎಲ್ಲ ದುಃಖಗಳಿಗೂ ಮೂಲ; ಸ್ವಾರ್ಥದ ತ್ಯಾಗ ಮಾಡಿ ಪಾರಲೌಕಿಕ ದೃಷ್ಟಿಯವನಾದರೆ ಸಮಾಜದಲ್ಲಿ ಸುಖ-ಶಾಂತಿಗಳು ನೆಲೆಸುವುವು, ಎಂಬ ವಿಚಾರವು ಲೋಕವನ್ನು ಹಲವು ದಿನಗಳ ವರೆಗೆ ಆಳಿತು. ಆಹಾರ-ನಿದ್ರಾ-ಭಯ-ಮೈಥುನಗಳು ಪಶುವಿಗೂ ಉಂಟು; ಮನುಷ್ಯನಿಗೂ ಉಂಟು. ಮನುಷ್ಯನ ಮಹಿಮೆ ಯಾತರಲ್ಲಿ? ಇವನ್ನೂ ಅಲ್ಲಗಳೆವಲ್ಲಿ ತಾನೆ? ಈ ಅತಿವಾದವು ತಲೆಗೇರಿ ಉಪವಾಸದ ಮಹಾತ್ಮ್ಯೆ ಬಂತು. ಶಾರೀರಿಕ ಕಷ್ಟಗಳನ್ನು ಅನುಭವಿಸುವುದು, ಮುಳ್ಳಹಾಸಿಗೆಯ ಮೇಲೆ ಮಲಗುವುದು ಮೊದಲಾದ ಪ್ರಕಾರಗಳು ಪ್ರಶಸ್ತವೆಂದು ಗ್ರಹಿಕೆಯಾಯ್ತು. ನಾರಿಯೆ ಹೆಮ್ಮಾರಿ. ಸಂಸಾರ ಮಾಯಾಪಾಶಗಳ ಮೂಲಸ್ಥಾನ. ಆದರಿಂದ ಭಿಕ್ಷು-ಭಿಕ್ಷುಣಿಗಳ ಯೋಗ-ಯೋಗಿನಿಯರುಗಳ ಸಂತಾನವು ಅಭಿವೃದ್ಧಿಗೆ ಬಂದಿತು. ತನ್ನ ಮೇರೆ ಮೀರಿ ಪಾರಲೌಕಿಕಭಾವನೆಯೂ ಅಸ್ವಾಭಾವಿಕವಾಗಿ ಜನರನ್ನು ಬಿಗಿಹಿಡಿದು ಇಡಲಾರದು. ಧರ್ಮದ ಹೆಸರಿನಲ್ಲಿಯೆ ಅಧಾರ್ಮಿಕ, ಅನೀತಿಯ ಕೃತ್ಯಗಳು ಆರಂಭವಾಗುವುವು ಎಂಬ ಅನುಭವವು ಜನರ ಕಣ್ತೆರೆದಿತು. ಯುರೋಪಿನಲ್ಲಿ ಧಾರ್ಮಿಕ ವಿಚಾರಪಲ್ಲಟದ ಆಂದೋಲನವು ತಲೆಯೆತ್ತಿತ್ತು. ರಾಜರ ಅನ್ಯಾಯದ ಆಳಿಕೆಗೆ ಕಸಿವಿಸಿಗೊಂಡು, ಸ್ವಾತಂತ್ರ್ಯ, ಸಮತೆ, ಬಂಧುಭಾವದ ಉದ್ಘೋಷದೊಡನೆ (೧೭೮೭) ರಲ್ಲಿ ಫ್ರಾನ್ಸ್ ರಾಜ್ಯಕ್ರಾಂತಿಯಾಯ್ತು. ವಾಲ್ಟರ್ ರೂಸೋನಂತಹರ ಲೇಖನಗಳಿಂದ 'ಸಮಾಜ'ದ ವಿಚಾರವು ಪ್ರಾಮುಖ್ಯತೆಯನ್ನು ಪಡೆಯಿತು. ರಾಜ್ಯ ರಾಜರಿಗಾಗಿ ಅಲ್ಲ; ಜನತೆಯ ರಾಜ್ಯ. ಜನರು ಬುದ್ಧಿಪೂರ್ವಕವಾಗಿ ತಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನು ಪರಿಮಿತಗೊಳಿಸಿ 'ಸಮಾಜ'ಕ್ಕೆ ಅರ್ಪಿಸಿದ್ದಾರೆ. ಆ ಸಮಾಜವು ರಾಜ್ಯದ ಒಡೆತನಕ್ಕೆ ಅಧಿಕಾರಿ. ಎಂಬೀ ತೆರನಾದ ವಿಚಾರ ಪ್ರಣಾಲಿಯು ಮುಂದೆ ಬಂದಿತು. ಹೊಸ ವಿಚಾರ ಸರಣಿಯಿಂದ ಹೊಸ ಯುಗದ ಉದಯವಾಯಿತು.

ಭೌತಿಕ ಸಂಶೋಧನೆಗಳಿಂದ ವಿಚಾರಕ್ರಾಂತಿಗೆ ಇನ್ನಿಷ್ಟು ಪುಟ ದೊರೆತಿತು. ಧಾರ್ಮಿಕ ವಿಚಾರ ಶೃಂಖಲೆಗಳಿಂದ ಮುಕ್ತವಾದ ವಿಚಾರಶಕ್ತಿಯು ತನ್ನ ಪ್ರಭಾವವನ್ನು ಬೀರಿತು. ಬುದ್ಧಿವಾದಿಗಳು ವಿವಿಧ ಜ್ಞಾನಶಾಖೆಗಳಲ್ಲಿ ಅಭೂತಪೂರ್ವ ಹೊಸ ಶೋಧಗಳನ್ನು ಮಾಡಿದರು. ಉಗಿಯ ಯಂತ್ರಗಳು ಆರಂಭವಾಗಿ ಔದ್ಯೋಗಿಕ ಕ್ರಾಂತಿಯಾಯಿತು. ಸಮಾಜದಲ್ಲಿ ಹೊಸ ವರ್ಗಕಲಹಕ್ಕೆ ಮೊದಲಾಯ್ತು. ಸಮಾಜದ ಜುಟ್ಟುಗಳು ಸಿರಿವಂತರ, ಬಂಡವಳಗಾರರ ಕೈಗೆ ಬಂದುವು. ಆರ್ಥಿಕ ಪರಿಸ್ಥಿತಿಯೆ ಜೀವನಕ್ಕೆ ಮೂಲಾಧಾರವೆಂಬ ಸಿದ್ಧಾಂತವು ಮುಂದೆ ಬಂತು. ಭೌತಶಾಸ್ತ್ರದ ಸಂಶೋಧನಗಳಿಂದ ಬುದ್ಧಿವಾದಿಗಳ ಆತ್ಮವಿಶ್ವಾಸವು ಮುಗಿಲಿಗೆ ಮುಟ್ಟಿತು. ನಿರೀಶ್ವರವಾದವು ಪ್ರಾಶಸ್ತ್ಯವನ್ನು ಪಡೆದಿತು. ಬೈಬಲಿನಲ್ಲಿ ಹೇಳಿದ ಸೃಷ್ಟಿಯ ಉತ್ಪತ್ತಿ-ಸ್ಥಿತಿ-ಲಯಾದಿಗಳ ವಿಚಾರಗಳೆಲ್ಲ ಕೇವಲ ಕಟ್ಟುಕತೆಗಳೆಂದು ಶಾಸ್ತ್ರೀಯ ಶೋಧಗಳಿಂಧ ಮನವರಿಕೆಯಾಯಿತು. ಜಬ್ರಾಲ್ಟರಿನ ಆಚೆಗೆ ಮುಗಿಲು ಕಡಲಿಗೆ ಅಂಟಿದೆ; ನೆಲವೇ ಇಲ್ಲವೆಂಬ ಗ್ರಹಿಕೆಯು ಕೋಲಂಬಸನ ಕಡಲಪಯಣದಿಂದ ನಿರಾಧಾರವೆಂದು ಸಿದ್ಧವಾಯಿತು. ಪೃಥ್ವಿಯ ಸುತ್ತ ಸೂರ್ಯನು ತಿರುಗುತ್ತಿರುವನೆಂಬ ಕ್ರೈಸ್ತ ಮಠಪತಿಗಳ ಹಠವಾದವು ತಿಳಿಗೇಡಿತನದ ಪರಮಾವಧಿಯೆಂದು ಕಂಡುಬಂತು. ಭೌತಶಾಸ್ತ್ರಗಳ ಸಹಾಯದಿಂದ ಪ್ರತಿಸೃಷ್ಟಿಯನ್ನೇ ನಿರ್ಮಿಸಬಹುದೆಂಬ

ಸ್ಫೂರ್ತಿ ಉತ್ಸಾಹಗಳು ಸಂಶೋಧಕ ವರ್ಗದಲ್ಲಿ ಉಂಟಾದವು. ಜೀವವೂ ಭೌತಶರೀರದ ಒಂದು ಅಂಶ. ಮನಸ್ಸು ಅಥವಾ ಬುದ್ಧಿಗೆ ಸ್ವತಂತ್ರ ಸ್ಥಾನವಿಲ್ಲ. ಈ ಶರೀರದಲ್ಲಿರುವಾಗ ಎಷ್ಟು ವಿವಿಧ ಭೋಗವಿಲಾಸಾದಿ ಅನುಭವಗಳನ್ನು ಪಡೆಯಲು ಸಾಧ್ಯವೋ ಅದೆ ಒಂದು ಗುರಿ; ಎಂಬ ಈ ವಿಚಾರಕ್ಕೆ ಫ್ರಾಯಿಡನ ಮಾನಸಶಾಸ್ತ್ರದ ಸಂಶೋಧನಗಳಿಂದ ಇನ್ನಿಷ್ಟು ಕಳೆಕಟ್ಟಿತು. ಲೈಂಗಿಕ ಆಕರ್ಷಣವೇ ಎಲ್ಲ ಕರ್ಮ-ಪ್ರವೃತ್ತಿಯ ಮೂಲ. ಲೈಂಗಿಕ ಆಕಾಂಕ್ಷೆಗಳನ್ನು ಒಳಗೊಳಗೇ ದಬ್ಬಿ ಬಿಗಿದಿಡುವದರಿಂದ ಮಾನವನ ಜೀವನದಲ್ಲಿ ಕಗ್ಗತ್ತಲು ಕವಿಯುತ್ತದೆ, ಎಂಬೀ ಬಗೆಯ ವಿಚಾರಗಳ ಪ್ರಚಾರದಿಂದ ಸಂಯಮವು ಅಸ್ವಾಭಾವಿಕವಾದ ಕಾರ್ಯವೆಂಬ ಭಾವನೆಯು ಬಲಿತು ಕಾಮುಕತೆ, ವಿಲಾಸಕ್ಕೆ ಪರಮಾವಧಿ ಉಕ್ಕುಬಂತು. ಸಾಮಾಜಿಕ ಸಂಬಂಧ, ನೀತಿ ನಿಯಮಾದಿಗಳಲ್ಲಿ, ನಡೆವಳಿಗಳಲ್ಲಿ, ಉಡುಪುತೊಡಪು, ಊಟ-ಉಡಿಗೆ ಮೊದಲಾದವುಗಳಲ್ಲಿ ಈ ದೃಷ್ಟಿಯಿಂದ ವಿಪರೀತ ಮಾರ್ಪಾಟುಗಳಾದವು.

ಭೌತಿಕಶಾಸ್ತ್ರಗಳ ಸಹಾಯದಿಂದ ಔದ್ಯೋಗಿಕ ಕಾರಖಾನೆಗಳ ಹೊಸ ಹೊಸ ಪ್ರಕಾರಗಳು-ತಾಂತ್ರಿಕ ಶೋಧಗಳಾಗುವುವು. ಹೊಸ ತಂತ್ರಗಳ ಶೋಧಗಳ ಸಹಾಯದಿಂದ ಆರ್ಥಿಕ ಸುಸ್ಥಿತಿ ಪ್ರಾಪ್ತವಾಗುವದು, ಆರ್ಥಿಕ ಸ್ಥಿತಿಯ ಮೇಲೆಯೇ ಎಲ್ಲ ಸಾಮಾಜಿಕ ಸಂಬಂಧಗಳೂ ಅವಲಂಬಿಸಿವೆ ಎಂದು ಮಾರ್ಕ್ಸನ ಮಹಾಸಿದ್ಧಾಂತ. ಧನವೇ ಸಮಾಜದ ಅಡಿಗಲ್ಲು ಎಂದು ಮಹಾಗ್ರಂಥ ಬರೆದು ಸಿದ್ಧಮಾಡಿದನು. ಆ ಕಾಲದ ನಿರೀಶ್ವರವಾದದ ಮನಃಪ್ರವೃತ್ತಿಯು, ಆತನ ಸಿದ್ಧಾಂತವು ನಿಜವೆಂದೆನಿಸುವುದಕ್ಕೆ ಇನ್ನಿಷ್ಟು ಸಹಾಯಕವಾಯಿತು. ನಿರೀಶ್ವರವಾದದ ಹಿನ್ನೆಲೆಯಲ್ಲಿ ಆ ಸಿದ್ಧಾಂತವು ಉಜ್ವಲವಾಗಿ ಕಾಣಬಲ್ಲದು.

ನೆಪೋಲಿಯನನ ಅಳಿಗಾಲದ ನಂತರ ಯುರೋಪಕ್ಕೆ ಲಭಿಸಿದ ಶಾಂತಿಯ ಕಾಲದಲ್ಲಿ ೧೯೧೪ರ ವರೆಗೂ ಅದು ಐಹಿಕ ಸುಖದ ಪರಮಾವಧಿಯನ್ನು ಅನುಭವಿಸಿತು. ನಿರೀಶ್ವರವಾದೀ ಸುಖವಾದದಿಂದ ಆ ವಿಲಾಸದ ಆಸ್ವಾದನದಲ್ಲಿ ಯಾವ ಕೊರತೆಯೂ ಎನಿಸಲು ಕಾರಣವಿದ್ದಿಲ್ಲ, ಜೀವನ ಕಲಹದಲ್ಲಿ ಬಲಶಾಲಿಯಾದವನೇ ಬಾಳಬಲ್ಲನು; ಎಂಬ ಸಿದ್ಧಾಂತವು ಡಾರ್ವಿನನ ಸಂಶೋಧನದ ನಂತರ ಯುರೋಪದ ಜೀವನಸೂತ್ರವಾಗಿತ್ತು. ಭೌತಿಕ ಸಂಶೋಧನಗಳ ನೆರವಿನಿಂದ ತಾಂತ್ರಿಕ ನೈಪುಣ್ಯವನ್ನು ಸಂಪಾದಿಸಿ ಬಲಶಾಲಿಯಾಗತಕ್ಕದ್ದು. ಬಲಶಾಲಿಯಾಗಿ ಸಾಮ್ರಾಜ್ಯಗಳನ್ನು ಸ್ಥಾಪಿಸಿ ಶಕ್ಯವಿದ್ದಷ್ಟು ಹೆಚ್ಚಿನದರಲ್ಲಿ ಹೆಚ್ಚಿನ ಸುಖವನ್ನು ಪಡೆಯತಕ್ಕದ್ದು. ಇದು ಯುರೋಪಿಯ ರಾಷ್ಟ್ರಗಳ ಗುರಿಯಾಯಿತು. ಆರಂಭದಲ್ಲಿ ಈ ತತ್ವಪ್ರಣಾಲಿಯೊಳಗಿನ ದೋಷವು ಯಾರ ಗಮನಕ್ಕೂ ಬರಲಿಲ್ಲ. ಬಲಿಷ್ಠರಾಗುವ ಬಗೆಗೆ ಇಂಗ್ಲೆಂಡ್, ಫ್ರಾನ್ಸ, ಜರ್ಮನಿ, ರಶಿಯಗಳಲ್ಲಿ ಸ್ಪರ್ಧೆ ನಡೆದಿತು. ಅದರ ಫಲವೇ ೧೯೧೪ರ ಘನಘೋರ ಸಂಗ್ರಾಮ!

ಸಮಾಜವು ಯಾವತತ್ವದ ಮೇಲೆ ನಿಂತಿದೆ? ಅಥವಾ ಯಾವ ತತ್ವಗಳ ಆಧಾರದ ಮೇಲೆ ನಿಂತರೆ ಲೇಸು? ಎಂಬ ಬಗೆಗೆ ನಡೆದ ಸಂಶೋಧನಗಳು ಸಾಮಾಜಿಕ ಸ್ವಾಸ್ಥ್ಯಕ್ಕೂ, ಸಮಾಜ ಸೌಖ್ಯಕ್ಕೂ ಕಾರಣವಾಗಬಲ್ಲವೆಂದು ಈ ದಾರಿಯಲ್ಲಿ ಅನೇಕ ದ್ರಷ್ಟಾರರೂ, ವಿದ್ವಾಂಸರೂ ಪರಿಶ್ರಮಪಡುತ್ತಲಿದ್ದಾರೆ. ದುಡ್ಡೇ ಎಲ್ಲಕ್ಕೂ ಮೂಲ; ಬಲಶಾಲಿಯೆ ಬಾಳಬಲ್ಲ; ಎಂಬವುಗಳ ಜೊತೆಗೆ ಇನ್ನೂ ಕೆಲವು ವಿಚಾರಗಳೂ ಮುಂದೆ ಬಂದುವು. ಹುಟ್ಟಿದಾಗ ಯಾರೂ ದುಡ್ಡು, ಹೊಲ, ಮನೆ ಕಟ್ಟಿಕೊಂಡು ಬಂದಿರುವುದಿಲ್ಲ. ಸಾಯುವಾಗ ಒಯ್ಯುವುದಿಲ್ಲ. ಕೆಲವರಲ್ಲಿ ಸಂಪತ್ತು ಕೂಡಿಬಿದ್ದು ಸಮಾಜದಲ್ಲಿ ಉಳಿದವರಿಗೆ ಹೊಟ್ಟೆಗಿಲ್ಲದೆ ಬಳಲಬೇಕಾಗುತ್ತದೆ. ಆದಕಾರಣ ದೇಶದಲ್ಲಿಯ ಸಂಪತ್ತನ್ನು ಎಲ್ಲರಿಗೂ ಸಮಾನವಾಗಿ ಹಂಚಿದರೆ ಸಮಾಜ ಸ್ವಾಸ್ಥ್ಯವು ಉಳಿದು ಲೋಕವು ಸುಖಿಯಾಗುವುದು, ಎಂಬ ವಿಚಾರವು ಪ್ರಬಲವಾಗಿ ಇಂದು ಇದು ಲೋಕವನ್ನೆಲ್ಲ ಮೋಹಿಸಿದೆ. ಈ ತತ್ವಗಳು ನಿಜವಾಗಿಯೂ ಅನುಸರಣೀಯವೆಂಬಲ್ಲಿ ಸಂದೇಹವೇ ಇಲ್ಲ. ಆದರೆ, ಯುರೋಪದೊಳಗಿನ ಇದರ ಮೂಲ ಪ್ರತಿಪಾದಕರೂ, ಅದರ ಇಂದಿನ ಪ್ರಚಾರಕರೂ ಮುಖ್ಯವಾಗಿ ಸಾಧನ ಶುದ್ಧಿಯ ವಿಷಯದಲ್ಲಿ ವಿವೇಕವನ್ನು ಇಟ್ಟಿಲ್ಲವಾದ್ದರಿಂದ ಈ ತತ್ವವು ಲೋಕದ ಅಶಾಂತಿಗೆ ಕಾರಣವಾಗುತ್ತಿದ್ದುದೇ ಕಂಡುಬರುತ್ತಲಿದೆ.

ಆದರೆ ಗಾಂಧಿಜೀವರಿಂದ ಸ್ಫೂರ್ತಿಹೊಂದಿದ ಜಯಪ್ರಕಾಶ ನಾರಾಯಣರ ಪಂಗಡವು ಈ ಮಾತಿಗೆ ಅಪವಾದವಾಗಿದೆ. ಸಾಧನಶುದ್ಧಿಯ ಆವಶ್ಯಕತೆಯ ಮನವರಿಕೆಯಾಗಿ ಅವರು ಈ ತತ್ವವನ್ನು ಈಗ ಸಾರಿ ಸಾರಿ ಹೇಳುತ್ತಲಿದ್ದಾರೆ.

ಜಾತಿ-ಜನಾಂಗಗಳ ಅಭ್ಯಾಸಿಗಳಲ್ಲಿ ಕೆಲವರು ಇದಕ್ಕೆ ಬೇರೆ ವಿಚಾರದತ್ತ ಸಾಗಿದ್ದು ಕಂಡುಬರುತ್ತದೆ. ಮಾನವವಂಶಗಳಲ್ಲಿ ಎಲ್ಲವೂ ಸಮಾನವಾದ ಶಕ್ತಿಸಾಮರ್ಥ್ಯಗಳನ್ನು ಪಡೆದುದಾಗಿಲ್ಲ. ಕೆಲವು ತೀರ ಪ್ರಾಥಮಿಕ ಸ್ಥಿತಿಯಲ್ಲಿವೆ. ಕೆಲ್ಸ್ಟ್ರು, ಕೇವಲ ಭಾವನಾಪ್ರಧಾನವಾಗಿವೆ. ಅವರಲ್ಲಿ ವಿಚಾರ ಶಕ್ತಿಯು ಕಡಿಮೆ. ಇಂತೀ ಬಗೆಯಾದ ವಿಭೇದಗಳಿಗೆ ಎರಡು ತೆರನಾದ ಕಾರಣಗಳುಂಟು: ಮೂಲಬೀಜದಲ್ಲಿಯೆ ಭೇದವಿದ್ದುದು. ಮಂಗಗಳಿಂದ ಮನುಷ್ಯನಾದುದು ನಿಜ. ಆದರೆ, ಯುರೋಪದ ಬಿಳಿ ಜನಾಂಗಕ್ಕೆ ಜನ್ಮಕೊಟ್ಟ ಮಂಗಗಳ ತಳಿಯು ಬೇರೆ; ನಿಗ್ರೋಗಳಂತಹ ಕುಲದ ಮೂಲಪುರುಷರು ಹುಟ್ಟಿದ ಮಂಗಗಳ ಜಾತಿ ಬೇರೆ. ಇದರಂತೆ ಆಯಾ ಜನಾಂಗಗಳು ಎಂತಹವು ಎಂಬುದು, ಅವು ವಾಸಿಸುವ ಭೂಮಿ (ಎತ್ತರವೊ, ತಗ್ಗೊ, ಪರ್ವತ ಪ್ರದೇಶವೊ, ಸಮುದ್ರ ತೀರವೊ), ಅಲ್ಲಿಯ ಹವಾಮಾನ, ಕಟಿಬಂಧ, ಮಳೆ, ಬೆಳೆವ ಸಸ್ಯಾದಿಗಳು, ಆಹಾರ ವಿಹಾರಾದಿಗಳು ಇವೇ ಮೊದಲಾದ ಸಂಗತಿಗಳನ್ನೂ ಅವಲಂಬಿಸಿರುತ್ತದೆ. ಶೀತಕಟಿಬಂಧದಲ್ಲಿ ಬೆಳೆದವರು ಬಲಿಷ್ಠರು, ಉಷ್ಣವಲಯದ ಜನರ ಶರೀರವು ದುರ್ಬಲ, ಎಂದು ಮುಂತಾದ ಕಾರಣಗಳನ್ನು ತೋರಿಸಿ ಕೆಲವು ರಾಷ್ಟ್ರದ ಜನರು ಈ ಲೋಕದಲ್ಲಿ ಒಡೆತನವನ್ನು ನಡೆಸುವುದಕ್ಕಾಗಿಯೆ ಹುಟ್ಟಿದ್ದಾರೆ; ಇನ್ನು ಕೆಲವು ದೇಶದ ಜನಗಳು ದಾಸರಾಗಿ ದುಡಿಯವುದರಿಂದಲೇ ಅವರು ಬಾಳಿಬದುಕಬಲ್ಲರು; ಸೃಷ್ಟಿರಚನೆಯಲ್ಲಿ ಅವರಿಗೆ ಇದಕ್ಕಿಂತ ಬೇರೆಯಾದ ಸ್ಥಾನವಿಲ್ಲ; ಎಂದು ಪ್ರತಿಪಾದಿಸಿದ್ದುಂಟು.

ಈಗ ಗಣಿತಶಾಸ್ತ್ರದ ಮಹಿಮೆಯು ಬೆಳೆಯುತ್ತಲಿದೆ. ಸಂಖ್ಯಾಶಾಸ್ತ್ರದ ಬೆಂಬಲವಿಲ್ಲದ ಯಾವ ಸಿದ್ಧಾಂತವೂ ಬಲ್ಲಿದರ ಒಪ್ಪಿಗೆಯನ್ನು ಪಡೆಯಲಾರದು, ಆಧುನಿಕ ಯಂತ್ರಯುಗವನ್ನೇ ಮೂದಲಿಸಿ ಅದರ ಮರ್ಯಾದೆಗೆ ಕೇಡುತಂದ ಖಾದಿಗೂ, ತನ್ನಿಂದಲೇ ನಿಜವಾದ ಲೋಕಕಲ್ಯಾಣವಾಗಬಲ್ಲುದೆಂದು ಸಿದ್ಧಪಡಿಸಲು ಸಂಖ್ಯಾಶಾಸ್ತ್ರದ ನೆರವನ್ನು ಕೋರಬೇಕಾಗುತ್ತದೆ. ಸಂಖ್ಯಾಶಾಸ್ತ್ರ-ಗಣಿತಶಾಸ್ತ್ರದಲ್ಲಿ ಸಂದಿಗ್ಧತೆಗೆ ಎಡೆಯಿಲ್ಲ ತತ್ವಜ್ಞಾನ, ತತ್ವಜ್ಞಾನಕ್ಕಿಂತಲೂ ಸಾಹಿತ್ಯ, ಸಾಹಿತ್ಯಕ್ಕಿಂತಲೂ ಸಂಗೀತ ಇವುಗಳಲ್ಲಿ ಗಣಿತದಂತೆ ನಿಶ್ಚಿತವಾದ ಗೆರೆಕೊರೆದು ಮಾತು ಇಲ್ಲ. ಅರ್ಥದಲ್ಲಿ ತರಲತೆ, ವ್ಯಂಗ್ಯ, ಧ್ವನಿ ಹೆಚ್ಚುಹೆಚ್ಚಾಗುತ್ತ ಹೋಗುವುದು. ಬರ್‌ಟರಾಂಡ ರಸೆಲ್ಲನು ಮೊದಲು ತತ್ವಜ್ಞಾನದಲ್ಲಿ ಆಸಕ್ತಿಯಿದ್ದ ಜಿಜ್ಞಾಸು. ಆದರೆ ಗಣಿತದಿಂದಲೇ ಸತ್ಯದ ನಿಶ್ಚಿತ ಜ್ಞಾನವು ಸಾಧ್ಯವೆಂದು ಆ ಶಾಸ್ತ್ರದಲ್ಲಿ ಪ್ರವೇಶಿಸಿದನು. ಕೊನೆಗೆ, ಗಣಿತದಿಂದಲೂ ಸತ್ಯದ ನೆಲೆಹತ್ತುವದು ಕಷ್ಟವೆಂಬ ಅನುಭವವು ಬಂದಿತೆಂದು ಒಂದೆಡೆಗೆ ಅತನು ಒಪ್ಪಿಕೊಂಡಿದ್ದಾನೆ. ಸತ್ಯವನ್ನು ಅರಿಯಲು ಎಲ್ಲ ಶಾಸ್ತ್ರಗಳ ನೆರವೂ ಅತ್ಯಗತ್ಯ. ಆದರೆ, ತಮ್ಮ ಒಂದು ಉಪಾಯದಿಂದಲೇ ಲೋಕದ ದುಃಖಗಳೆಲ್ಲ ಪರಿಹಾರವಾಗುವುದು. ಉಳಿದವುಗಳೆಲ್ಲ ನಿರರ್ಥಕ ಎಂದು ಹುಮ್ಮಸಗೊಂಡ ಒಂದೊಂದು ಸಿದ್ಧಾಂತದ ಅತಿವಾದಿಗಳೂ ಅವರ ಏಕಾಂತಿಕ ಭಕ್ತರೂ ತಮ್ಮ ನಡೆನುಡಿಗಳಿಂದ ಹಲಕೆಲವು ಬಾರಿ ಸಮಾಜದ ತೂಕತಪ್ಪಿಸುವುದುಂಟು. ಸಮಾಜದೊಳಗಿನ ವೈಷಮ್ಯ-ದೋಷನಿವಾರಣೆಗೆ ಅವರಿಂದ ಆರಂಭದಲ್ಲಿ ನೆರವು ದೊರೆಯುವುದು; ಅಥವಾ ದೊರೆತಂತೆ ಸಮಾಧಾನಪಟ್ಟುಕೊಳ್ಳುವಷ್ಟರಲ್ಲಿ ಅವರ ವಿಚಾರ ಸರಣಿಯಲ್ಲಿ ಮೊದಲು ಅಜ್ಞಾತವಾಗಿದ್ದ ಕುಂದುಕೊರತೆಗಳು ಕಂಡುಬಂದಂತೆ ಆ ವಿಚಾರದ ಅತಿರೇಕದ ಭಾವನೆಯ ಉಕ್ಕು ತಗ್ಗುವುದು ಸಮಾಜವು ಆ ವಿಚಾರವನ್ನೂ ಪಚನ ಮಾಡಿಕೊಂಡು ಮುಂದೆ ಸಾಗುವದು.

ಸಮಾಜವೆಂದರೆ ಜೀವಂತ ಜನರ ಸಂಸ್ಥೆ. ಹಿಗ್ಗು-ತಗ್ಗು ಜೀವಂತತನದ ಕುರುಹು. ಹಿಗ್ಗು-ಕುಗ್ಗು ಎಂದರೆ ಮಾರ್ಪಾಟು; ಬದಲಾವಣೆ ಅದು ಏಳ್ಗೆಯಾಗಿರಬಹುದು; ಅಥವಾ ಇಳಿಗೆಯಾಗಿರಬಹುದು. ಮಾರ್ಪಾಟವು ಜೀವಂತತನದ ಸೂಚಕವಾಗಿದೆ. ಸಮಾಜವು ತಿಳಿದೊ ತಿಳಿಯದೆಯೊ ಯಾವಾಗಲೂ ಮಾರ್ಪಡುತ್ತಿರುವುದುಂಟು

ಆದರೆ, ಕೆಲರು ತಾವು (ತಮ್ಮ ಜಾತಿ ಪಂಗಡವು) ಸನಾತನವಾಗಿ ಏನೂ ಬದಲಾಗದೆ ಬಂದಿರುವವೆಂಬ ಭ್ರಾಂತಿಯಲ್ಲಿರುವರು. ಮಾರ್ಪಾಟದ ಕೆಲವು ಕಾರಣಗಳನ್ನಿಲ್ಲಿ ಅರಿತುಕೊಳ್ಳಬಹುದು.

೧. ಶಿಕ್ಷಣದಲ್ಲಿ ವ್ಯತ್ಯಾಸ:- ವೇದ, ಪುರಾಣಗಳ ಅಧ್ಯಯನದಿಂದ ತಮ್ಮ ಆದರ್ಶಗಳನ್ನು ಕಂಡುಕೊಂಡವರ ಬಾಳಿನ ರೀತಿಗೂ, ಪಶ್ಚಿಮ ದೇಶಗಳ ವಿಚಾರಗಳನ್ನು ಅಭ್ಯಾಸಮಾಡಿ ಜೀವನದ ಅರ್ಥವನ್ನು ತಿಳಿದುಕೊಂಡವರ ನಡೆವಳಿಯ ರೀತಿಗೂ ಹೊಂದಿಕೆಯಿಲ್ಲದ್ದನ್ನೇ ಊರೂರಿಗೂ ಕಾಣದೊರೆಯುತ್ತದೆ. ಯುರೋಪ, ಅಮೇರಿಕೆಗಳಲ್ಲಿ ಸಮಾಜಶಾಸ್ತ್ರದ ವಿಕಾಸವು ಅತಿಭರದಿಂದ ವಿವಿಧ ರೀತಿಯಲ್ಲಿ ಸಾಗಿರಲು ಈ ವಿಷಯಕ್ಕೆ ಹಿಂದುಸ್ಥಾನದ ಪ್ರತಿಕ್ರಿಯೆಗಳೇನು?

ಪಶ್ಚಿಮ ದೇಶಗಳ ಎಲ್ಲ ಬಗೆಯ ತಾಂತ್ರಿಕ ಪ್ರಗತಿ, ಆರ್ಥಿಕ ಉನ್ನತಿ, ಸಾಮಾಜಿಕ ಅಭ್ಯುದಯದ ಕಾಲಕ್ಕೆ ಭಾರತವು ಇನ್ನೂ ತನ್ನ ಯೋಗನಿದ್ರೆಯನ್ನು ಪೂರ್ಣ ಮುಗಿಸಿರಲಿಲ್ಲ. ಪಾರತಂತ್ರ್ಯದ ಪಾಶಗಳಿಂದ ಮುಕ್ತವಾಗಿದ್ದಿಲ್ಲ. ಸಮಾಜವು ಜೀವಂತವಿದ್ದರೆ ತಾನೆ, ರಾಷ್ಟ್ರಕ್ಕೆ ಸ್ವಾತಂತ್ರ್ಯ? ಅಖಂಡ ಏಕಾತ್ಮಕ ಸಮಾಜವು ಭಾರತದಲ್ಲಿ ತಲೆಯೆತ್ತದಂತೆ ಬ್ರಿಟಿಶ ಆಡಳಿತಗಾರರು ಏನು ಮಾಡಬೇಕೊ ಅದೆಲ್ಲವನ್ನೂ ಮಾಡಿದ್ದರು. ಭಾರತದಲ್ಲಿ ನಾಲ್ವತ್ತುಕೋಟಿ ಜನಗಳಿದ್ದುದೇನೊ ನಿಜ. ಆದರೆ, ಎಷ್ಟು ಜನಗಳೊ ಅಷ್ಟು ಸ್ವತಂತ್ರಲೋಕಗಳು; ಒಬ್ಬರೊಬ್ಬರ ಹತ್ತಿರ ಇರಬೇಕಾದುದು ಅನಿವಾರ್ಯವೆಂದು, ಒಬ್ಬರೊಬ್ಬರ ನೆರೆಯಲ್ಲಿ ವಾಸವಾಗಿರುವರು ಇಷ್ಟೆ. ಪ್ರಯಾಣದೊಳಗೆ ರೈಲಿನಲ್ಲಿ ಅಥವಾ ಮೋಟಾರಿನಲ್ಲಿ ತೊಡೆ ಸೋಂಕಿ ಕುಳ್ಳಿರಬೇಕಾಗುವುದೆಂದು ಅವರೇನು ಆಪ್ತ-ಬಾಂಧವರಾಗಬಲ್ಲರೆ? ಕೆಲವರು ಕೈಲಾಸ ಲೋಕದವರು; ಕೆಲವರು ವೈಕುಂಠ ಲೋಕದವರು; ಕೆಲವರ ಪಂಚಪ್ರಾಣಗಳು ಮಕ್ಕಾದಲ್ಲಿ. ಇಂತಹರ ಓಣಿ ಕೇರಿಗಳೂ ಬೇರೆ ಬೇರೆಯೆ, ಅವರವರ ಸಮಾಜವೇ(?) ಬೇರೆ; ಅವರವರ ದೈವ(ತ), ದೈವದವರೂ ಬೇರೆ. ಒಂದೊಂದು ಜಾತಿಯವರ ಕಾನೂನುಗಳೂ ಬೇರೆ. ಇಷ್ಟೇ ಅಲ್ಲ; ಸತ್ತಬಳಿಕ ಸೇರುವ ಸುಡುಗಾಡೊ ಹುಗಿವ ಕಾಡೊ ಅದು ಕೂಡ ಬೇರೆ! ಇದೇನು ಏಕಾತ್ಮಕ ಅಖಂಡ ಸಮಾಜದ ಲಕ್ಷಣವೆ?

ಈ ಬಗೆಯಾಗಿ ಸಮಾಜವು ಛಿನ್ನವಿಚ್ಛಿನ್ನವಾಗಲಿಕ್ಕೆ ಬ್ರಿಟಿಶರೇ ಕಾರಣರೆಂದು ಹೇಳುವುದು ಸಂಪೂರ್ಣ ಸತ್ಯವೆನಿಸದು. ಅವರು ಬಂದಾಗ ಹೇಗಿತ್ತೊ, ಹಾಗೆಯೆ ಇರುವಂತೆ ಅದಕ್ಕೂ ಸ್ವಲ್ಪ ಹೆಚ್ಚಾಗಿಯೆ ಅಸಂಬದ್ಧವಾಗುವಂತೆ ಹಂಚಿಕೆಗಳನ್ನು ಹೂಡಿದರು; ಹೊರತು ಅಖಂಡ, ಏಕಾತ್ಮಕವಾಗಿದ್ದುದನ್ನು ಬ್ರಿಟಿಶರು ತುಂಡರಿಸಿ ವಿಭಾಗಿಸಿದರೆಂಬುದು ತೀರ ಸುಳ್ಳು. ಅಖಂಡ, ಏಕಾತ್ಮಕ ಸಮಾಜವು ಇದ್ದುದಾಗಿದ್ದರೆ ಬ್ರಿಟಿಶರಿಗೆ ಭಾರತದಲ್ಲಿ ಕಾಲೂರಿ ನಿಲ್ಲುವುದೇ ಸಾಧ್ಯವಿಲ್ಲ. ಬ್ರಿಟಿಶರಿಗೆ ಏಕೆ, ಮುಸಲ್ಮಾನರಿಗೂ ಕೂಡ ಭಾರತದಲ್ಲಿ ಪ್ರವೇಶ ದೊರೆಯುವುದೇ ದುಸ್ತರವಾಗುತ್ತಿತ್ತು.

ಭಾರತೀಯರಲ್ಲಿ ಅಖಂಡ ಏಕಾತ್ಮಕ ಸಮಾಜದ ಕಲ್ಪನೆಯು ವೇದಕಾಲದಷ್ಟು ಪುರಾತನವಾಗಿದೆ. ಆದರೇನು? ಋಗ್ವೇದದ 'ಪುರುಷ' ಸೂಕ್ತದಲ್ಲಿ ಹಾಡಿದ್ದನ್ನೇ ಇಂದಿನವರೆಗೂ ಮತ್ತೆ ಮತ್ತೆ ಹೆಚ್ಚು-ಅಲ್ಲ; ಕಡಿಮೆ ಮಾಡುತ್ತ ಹೇಳುತ್ತ ಬಂದಿದ್ದೇವೆ. ಹಾಡಿದ್ದನ್ನೇ ಹಾಡುವ ದಾಸರಿಗಿಂತಲೂ ಹೆಚ್ಚಿನ ಬೆಲೆಯೇನು ಇಂತಹರಿಗೆ ಲೋಕದಲ್ಲಿ? ಜಗದ್ರಂಗದಲ್ಲಿ ಬಂದಿರುವ ಬೆಲೆಯೇ ಇದಕ್ಕೆ ಪ್ರಮಾಣ. ಇಂದು ಸುಧಾರಿಸಿದುವೆಂದು ಹೆಮ್ಮೆಪಡುವ ನಾಡುಗಳಲ್ಲಿ ಜನ ಇನ್ನೂ ಕಾಡಾಡಿಗಳಾಗಿದ್ದರು. ಕ್ರಿಸ್ತಾಬ್ದದ ಮೊದಲು ನಾಲ್ಕುಸಾವಿರ ವರುಷ; ಅಷ್ಟು ಪ್ರಾಚೀನ ಕಾಲದಲ್ಲಿ ಭಾರತೀಯರಿಗೆ ಹೊಳೆದ 'ಸಮಾಜ' ವಿಚಾರವು ಅಪೂರ್ವವಾಗಿದೆ. ಕೌತುಕಾಸ್ಪದವಾಗಿದೆ. ಅಂದಿನವರ ಪ್ರತಿಭೆ, ಮೇಧಾಶಕ್ತಿಯ ತೇಜಸ್ಸಿನ ನಿದರ್ಶನವದು. ಸಮಾಜವನ್ನು ಅನಂತ 'ಪುರುಷ'ನಿಗೆ ಹೋಲಿಸಿದ್ದುದು ತುಂಬ ಉಚಿತವಾಗಿದೆ. ಸಮಾಜ ಪುರುಷನಿಗೆ ಅನಂತತಲೆ; ಅನಂತಕಣ್ಣು; ಅನಂತಕಾಲು....; ಎಂಬುದೆ 'ಸಹಸ್ರ ಶೀರ್ಷಃ ಪುರುಷಃ' ಎಂಬ ವರ್ಣನೆ. ಈ ಅನಂತ, ಅವ್ಯಕ್ತ (ಸಮಾಜ) ಪುರುಷನು ಚಾತುರ್ವರ್ಣ್ಯದ ರೂಪದಲ್ಲಿ ನಿಶ್ಚಿತರೂಪದಿಂದ ಕಾಣಿಸಿಕೊಳ್ಳುತ್ತಾನೆ. ಚಾತುರ್ವರ್ಣ್ಯವು ಶ್ರಮವಿಭಾಗದ ತತ್ವವನ್ನವಲಂಬಿಸಿದೆಯಲ್ಲದೆ

ಜನ್ಮವನ್ನು ಸರ್ವಥಾ ಅಲ್ಲ. 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ-ಕರ್ಮವಿಭಾಗಶಃ' ಎಂಬ ಗೀತಾವಚನದಿಂದಲೂ ಈ ಮಾತಿಗೆ ಪುಷ್ಟಿದೊರೆಯುತ್ತದೆ. ಭಾರತದಲ್ಲಿಯೆ ಮಾತ್ರವಲ್ಲ; ಲೋಕದೊಳಗಿನ ಯಾವ ಸಮಾಜವೇ ಆಗಲಿ, ಶ್ರಮವಿಭಾಗದ ತತ್ವದ ಮೇರೆಗೆ ಸ್ಥೂಲವಾಗಿ ನಾಲ್ಕು ವಿಭಾಗಗಳಲ್ಲಿ ವರ್ಗೀಕರಿಸಬಹುದಾಗಿದೆ ಆದುದರಿಂದ ಚಾತುರ್ವರ್ಣ್ಯವು ಕೇವಲ ಭಾರತೀಯರ ವೈಶಿಷ್ಟ್ಯವೆಂಬುದು ಒಣ ಹೆಮ್ಮೆ. ಮೂಲ ಉದ್ದೇಶವನ್ನು ಕಡೆಗಣಿಸಿ ಜನ್ಮದಿಂದ ವರ್ಣಗಳನ್ನು ನಿಶ್ಚಯಿಸುವ ಪ್ರವಾಹಪತಿತ ಕರ್ಮವು ಮಾತ್ರ ಭಾರತೀಯರ ವೈಶಿಷ್ಟ್ಯ. ಅದರ ಮೂಲ ಉಜ್ಜಲ ರೂಪವನ್ನು ಮಸುಳಿಸಿದ್ದು ಭಾರತೀಯರ ಕರ್ಮ.

ಪುರುಷಸೂಕ್ತದ ಈ ಕಲ್ಪನೆಯ ಬೆಳಕಿನಲ್ಲಿಯೆ ಪುರಾಣಗಳು ಇನ್ನೂ ಸ್ವಲ್ಪ ಮುಂದುವರಿದು ಒಂದು ಹೊಸ ಬಗೆಯ ರೂಪಕವನ್ನು ಚಿತ್ರಿಸಿವೆ. ಅದೂ ಇಷ್ಟೇ ಮನೋಹರವಾಗಿದೆ. ಅನಂತನ ನಾಭಿಕಮಲದಿಂದ ಚತುರ್ಮುಖ ಬ್ರಹ್ಮನು ಜನ್ಮತಾಳುವನು. ಬಳಿಕ ವ್ಯಕ್ತಸೃಷ್ಟಿಗೆ ಆರಂಭವಾಗುವುದು. ವೇದಗಳಲ್ಲಿ ನಾಭಿಯಿಂದ ಬ್ರಹ್ಮನು ಹುಟ್ಟಿದ ವರ್ಣನೆಯು ದೊರೆಯುವುದಿಲ್ಲ. ಪುರುಷಸೂಕ್ತವಂತೂ ಅನಂತನ ವರ್ಣನೆಯೆಂಬಲ್ಲಿ ಸಂದೇಹವೇ ಇಲ್ಲ. ಸಹಸ್ರಶೀರ್ಷ ಪುರುಷನಿಂದ ಜನ್ಮತಾಳಿದುವೆಂದು ಪುರುಷಸೂಕ್ತದಲ್ಲಿ ವರ್ಣಿಸಿದ ಚಾತುರ್ವರ್ಣ್ಯಗಳನ್ನೇ, 'ಅನಂತನ' ಚಿತ್ರಶಿಲ್ಪಿಯು ಆತನ ನಾಭಿಕಮಲದಲ್ಲಿ ಚತುರ್ಮುಖ ಬ್ರಹ್ಮನನ್ನು ಕಲ್ಪಿಸಿ ತನ್ನ ಪ್ರತಿಭೆಯ ಹೊಚ್ಚ ಹೊಸತನವನ್ನು ಮನಗಾಣಿಸಿಕೊಟ್ಟಿದ್ದಾನೆ. ಇಲ್ಲಿ 'ನಾಭಿ' ಎಂದರೆ (ಮನುಷ್ಯನ) ಹೊಕ್ಕಳು ಎಂದು ಯಾರಾದರೂ ಗ್ರಹಿಸಿದರೆ ಅದು ಅವರ ಅಲ್ಪಬುದ್ಧಿಯ ಲಕ್ಷಣ; 'ನಾಭಿ' ಎಂದರೆ ಕೇಂದ್ರ ಎಂದರ್ಥ. 'ಅರಾ ಇವ ರಥ ನಾಭೌ' ಎಂಬ ಉಪನಿಷದ್ವಾಕ್ಯದಲ್ಲಿ ಈ ಅರ್ಥವನ್ನು ಮನಗಾಣಬಹುದು. ಅನಂತ (ಸಮಾಜ) ಪುರುಷನ ನಾಭಿಯಿಂದ (ಎಂದರೆ ಮಧ್ಯದೊಳಗಿಂದ) ನಾಲ್ಕು ವರ್ಣಗಳು ವ್ಯಕ್ತವಾಗುವುವು. ಸಂಸಾರ-ವ್ಯವಹಾರಗಳಿಗೆ-ಎಂದರೆ ವ್ಯಕ್ತಸೃಷ್ಟಿಗೆ ಇಲ್ಲಿಂದಲೇ ಆರಂಭ.

ಕಂನಾಡವರಲ್ಲಿ ಸಮಾಜಕ್ಕೆ 'ದೈವದವರು' ಎಂದು ಹೇಳುವ ವಾಡಿಕೆಯುಂಟು. ಅದು ಅತ್ಯಂತ ಅರ್ಥಪೂರ್ಣವಾಗಿದೆ. ಇಲ್ಲಿ ದೈವ, ಎಂದರೆ 'ವಿಧಿ'; 'ದೈವದವರು' ಎಂದರೆ ವಿಧಿಸುವವರು; ತಪ್ಪು ಒಪ್ಪುಗಳನ್ನು ನಿರ್ಧರಿಸಿ ವ್ಯಕ್ತಿಗಳ ಹಣೆಬರೆಹ ಬರೆವವರು. ಪಂಚಮುಖ ಪರಮೇಶ್ವರ. (ಪಾಂಚಾಂಮುಖೀ ಪರಮೇಶ್ವರ ಎಂಬ ಗಾದೆ ಮುರ್‍ಹಾಟಿಯಲ್ಲುಂಟು). ಊರ ಪಂಚರು ಆ ಊರ ಈಶ್ವರರೇ; ಈಶನೆಂದರೆ ಆಳುವವನು. ರಾಜನು ಈಶ್ವರಾಂಶನೆಂಬ ಭಾವನೆಯಲ್ಲಿ ಈ ಅರ್ಥವೇ ಅಡಗಿದೆ. (ಅದು ಪೂರ್ಣ ಅಡಗಿ ಕಾಣದಾದುದು, ನಾವು ಕಣ್ಣು ಕಳೆದುಕೊಂಡ ಕಾಲದ ನಿದರ್ಶನ). ರಾಜನು ಈಶನೆಂಬುದು, 'ನಾವಿಷ್ಣುಃ ಪೃಥಿವೀ ಪತಿಃ', ಎಂದು ಉಸುರುವುದು; ಸಮಾಜಕ್ಕೆ 'ದೈವದವರು,'- ದೇವರೆಂದು ಬಗೆಯುವುದು; ಇದೆಲ್ಲ ಈ ಯುಗದಲ್ಲಿ ಹೇಗೆ ತಾನೆ ಸಮರ್ಥನೀಯ? ರಾಜನೇ ದೇವರೆಂದು ಗ್ರಹಿಕೆಯಾಗಿ ಜನ ವಿರೋಧಿಸದೆ ಅರಸರ ಅನಾಚಾರಗಳನ್ನು ಸಹಿಸಿಕೊಂಡರು; ಆದರಿಂದ ಜನರ ಹಾನಿಯಾಯ್ತು. ರಾಜಸಂಸ್ಥೆಯೂ ಅಧೋಗತಿಗೆ ಇಳಿದಿತು. ದೈವದವರ ಕಟ್ಟು ಕಟ್ಟಲೆಗಳೆಂದರೆ ಅದೊಂದು ಸಮಾಜ-ಪುರುಷನಿಗೆ ಹಾಕಿದ ಉಕ್ಕಿನ ಪಂಜರವಾಗಿ ಪರಿಣಮಿಸಿ ಜೀವನ ವಿಕಾಸವೆ ಕಟ್ಟಾಯಿತು. ರೂಢಿ-ಸಂಪ್ರದಾಯಗಳು ಪ್ರಗತಿಪಥದಲ್ಲಿ ಕಾಲ್ತೊಡಕಾದುವು. ಇದನ್ನು ತಿಳಿದೂ ತಿಳಿದೂ ಮತ್ತೆ ಸಮಾಜಕ್ಕೆ 'ದೈವ'ವೆಂದು ಭಾವಿಸುವುದು ಯುಕ್ತವಾದೀತೆ?

ಅಲ್ಲದೆ, ಹಿಂದಿನ ಅಧ್ಯಾಯದ ಆರಂಭದಲ್ಲಿ ಎತ್ತಿದ ಪ್ರಶ್ನೆಗೆ ಇನ್ನೂ ಪೂರ್ಣ ಉತ್ತರವು ದೊರೆತಂತಾಗಿಲ್ಲ. ಆ ಪ್ರಶ್ನೆಯಲ್ಲಿ ಎರಡು ಭಾಗಗಳಿದ್ದುವು: ಸಮಾಜವೆಂಬುದು ಉಂಟೆ, ಸ್ವಾರ್ಥಿಗಳಾದ ವ್ಯಕ್ತಿಗಳ ಆಟ ಇದೆಲ್ಲ; ಇದರಲ್ಲಿ ಸಮಾಜವು ಉಂಟು, ಎಂಬುದು ಒಪ್ಪಿಗೆಯಾದರೂ, ಸ್ವಾರ್ಥಿಗಳಿಂದ ತುಂಬಿದ ಈ ಸಮಾಜಕ್ಕೆ 'ದೈವ' ಜನತಾ ಜನಾರ್ಧನ, ಪಂಚಮುಖ ಪರಮೇಶ್ವರನ ಎಂದು ಮುಂತಾಗಿ ಗ್ರಹಿಸಿರುವುದು ಸಮಂಜಸವೆ? ಎಂಬೀ ಈ ಪ್ರಶ್ನೆಯು ಹಾಗೆಯೆ ಉಳಿದಿದೆ.

ಆಧುನಿಕ ಯಂತ್ರಯುಗದಲ್ಲಿ ದೇವರ ಸ್ವತಂತ್ರವಾದ ಬಿಡಾರವು ಎಲ್ಲಿಯೂ ದೊರೆಯದೆ ನಿರಾಶರಾದ ಹಲವರು ಸಮಾಜಕ್ಕೆ ದೇವರೆಂದು ಕರೆದು ತಮ್ಮ ಜೀವಕ್ಕೆ ಸ್ವಲ್ಪ ಸಮಾಧಾನ ತಂದುಕೊಳ್ಳುತ್ತಾರೆ. ಮುಗಿಲಲ್ಲಿ ಎಷ್ಟು ಎತ್ತರಕ್ಕೆ ಹೋದರೂ ಕೈಲಾಸ-ವೈಕುಂಠ ಒಂದೂ ಕಾಣಲಿಲ್ಲ. ಎಷ್ಟು ಸಾಗರಪರ್ಯಟನ ಮಾಡಿದರೂ 'ಕಡಲಶಯನ ಶೇಷಶಾಯಿ'ಯ ಸುಳಿವು ಹತ್ತಲಿಲ್ಲ. ನೆಲ ಅಗಿದು ಒಳಹೊಕ್ಕು ನೋಡಿದರೂ ಲಾವಾರಸದ ಭೀಕರ ಉಷ್ಣತೆ; ಪಾತಾಳಲೋಕ ದೊರೆಯಲಿಲ್ಲ. ಅಣುಬಗೆದು ನೋಡಿದರೂ ಕಂಭದಲ್ಲಿ ಕಂಡ ನರಸಿಂಹನ ಛಾಯೆಯು ಕೂಡ ಗೋಚರಿಸಲಿಲ್ಲ. ಅದರಿಂದ, ದೇವರ ಕಲ್ಪನೆಯನ್ನೇ ಬದಲಿಸಿಕೊಳ್ಳದೆ ಗತಿಯಿರಲಿಲ್ಲ. ಈ ತೆರನಾಗಿ ಆಧುನಿಕರಲ್ಲೂ ಹಲಕೆಲರು ಸಮಾಜಕ್ಕೆ ದೇವರೆಂದು ಹೇಳಹತ್ತಿದರು. ಮಂಗನಿಂದಾದ ಮಾನವ; ಈತನ ಮೂಲಗುಣ ಮಂಗಾಟವೆಂದಂತಾಯಿತು. ಆದಕಾರಣ ಇವನ ಮಂಗ-ತತ್ವಜ್ಞಾನದಲ್ಲಿ ಕಿಳ್ಳಿ, ಕಿಡಿಗೇಡಿತನ, ಪೋಲಿತನದ ಮಂಡನವೆ ಇರಬೇಕಷ್ಟೆ? ಮಂಗವಿಚಾರಗಳು ಮೋಹಕವಾಗಿ ಕಾಣಲು ಅವಕ್ಕೆ ಸದ್ವಿಚಾರದ ಮೆರುಗುಕೊಡುವಲ್ಲಿಯೆ ಈತನ ಪ್ರತಿಭೆಯ ವೈಖರಿ. ಬಣ್ಣಬಳಿದು ಅಂದವಾಗಿ ಕಾಣುವ ಕಿಟ್ಟದ ಬೊಂಬೆಯಂತೆಯೆ, ಮಾನವನ ನಡೆನುಡಿ! ಪೂರ್ವಭಾಗವನ್ನು ಒಪ್ಪಿದರೂ ಈ ಕೊನೆಯ ಮಾತನ್ನು ಸರಿಯೆಂದು ಗ್ರಹಿಸಲು ಯಾರ ಮನಸ್ಸಿಗೂ ಸಂತೋಷವೆನಿಸುವಂತೆ ಕಾಣುವುದಿಲ್ಲ. ಏಕೆ? ಫ್ರಾಯಿಡ್ ಮೊದಲಾದ ಕೆಲವು ಮನೋವಿಜ್ಞಾನಿಗಳು ಮಾನವನ ನೆಲೆ ಕಂಡು ಹೇಳುವ ಮಾತುಗಳೂ ಮಂಗಮತವನ್ನು ನಿರಾಕರಿಸುವುದಿಲ್ಲ. ಸ್ವಾರ್ಥ, ಅಹಂಕಾರ, ಕಾಮುಕತೆ...ಇಂತಿವು ಮೂಲಭೂತ ಗುಣಗಳು. ಇವುಗಳನ್ನು ಶಕ್ಯವಿದ್ದಷ್ಟು ಉದಾತ್ತಮಟ್ಟಕ್ಕೆ ಒಯ್ಯುವುದೇ ಮಾನವ್ಯದ ಗುರಿ ಎಂದು ಈ ಪಥದ ವಾದ. ಆದರೆ, ಏನೆಂದರೂ ಮಾನವನು ಬಣ್ಣಬಳಿದ ಕಿಟ್ಟದ ಬೊಂಬೆಯೆಂಬುದೇ ನಿಜವಷ್ಟೇ? ಲೋಕಸ್ವಭಾವವು ನಾಯಬಾಲ, ಎಂಬ ಒಂದು ವಚನವಿದೆ. ಅದು ನಿಜವೆಂದಂತಾಯಿತು!

ಈ ತತ್ವವು ನಿಜವಾದರೆ, ಅನಾಚಾರವು ಅಪರಾಧವಲ್ಲ. ಏಕೆಂದರೆ ಅದು ಮಾನವನ ಹುಟ್ಟುಗುಣವಾದ ಮಂಗತನದ ಸಹಜ ಪ್ರವೃತ್ತಿ. ಈ ಕಾರಣದಿಂದಲೆ ನವಮತವಾದಿಗಳು ತಮ್ಮ ಪದಪಟ್ಟಿಯೊಳಗಿಂದ ಅನಾಚಾರ-ಅನೀತಿ ಎಂಬೀ ತೆರದ ಮಾತುಗಳನ್ನು ತೆಗೆದುಹಾಕಿದ್ದಾರೆ. ಆದುದರಿಂದ, ಈ ಪಂಥದವರನ್ನು ಅಧಾರ್ಮಿಕರು, ಅನಾಚಾರಿಗಳು ಎಂದು ಕರೆವುದು ತಪ್ಪು. ಅವರು ತತ್ವಪ್ರಣಾಲಿಗೆ ಅನುಸರಿಸಿಯೆ ನಡೆದುಕೊಳ್ಳುತ್ತಿದ್ದಾರೆ. ಈಗ ಮುಖ್ಯ ಪ್ರಶ್ನೆಯಿರುವುದು ಇದು: ಮನುಷ್ಯನು ಮೂಲತಃ ಸತ್‌ಪ್ರವೃತ್ತಿಯವನೆ? ದುಷ್‌ಪ್ರವೃತ್ತಿಯವನೆ? ದುಷ್‌ಪ್ರವೃತ್ತಿಯವನೇ ಆಗಿದ್ದರೆ ಆತನನ್ನು ತಿದ್ದುವ ಪ್ರಯತ್ನಗಳು ವ್ಯರ್ಥವಲ್ಲವೆ? ಇದ್ದಿಲು ಪ್ರಯತ್ನದಿಂದ ವಜ್ರವಾಗಬಲ್ಲುದು, ಎಂದು ಒಂದು ಬಗೆಯವರು ಹೇಳಿದರೆ, ಏನು ಮಾಡಿದರೇನು ಇದ್ದಿಲು ಇದ್ದಿಲೇ, ಎಷ್ಟು ತೊಳೆದರೂ ಅದರ ಕಪ್ಪು ಹೋಗದು. ಉಪಮಾದಿಗಳಿಂದ ಇಂತಹ ಮಾತುಗಳು ಸಿದ್ಧವಾಗಲಾರವು. ಅವುಗಳಿಂದ ತಾತ್ವಿಕ ಚರ್ಚೆಯಲ್ಲಿ ತೊಂದರೆಯೆ ಹೆಚ್ಚುವುದು. ಸತ್‌ಪ್ರವೃತ್ತಿಯೇ ಮೂಲಭೂತವೆಂದು ಗ್ರಹಿಸದೆ ಇದ್ದರೆ, ಯುದ್ಧದಂತಹ ಘೋರ ಅನರ್ಥಗಳನ್ನು ಇಲ್ಲದಂತೆ ಮಾಡುವ ಹಂಬಲವು ವಿವೇಕದ್ದೆನಿಸಬಲ್ಲದೊ? ಇಂದು ಯಾವುದಕ್ಕೆ ವಿವೇಕವೆನ್ನುವರೊ ಅದೇ ಅವಿವೇಕ; ಏಕೆಂದರೆ ವಿವೇಕ ಅಸ್ವಾಭಾವಿಕ, ಕೃತ್ರಿಮ. ಅವಿವೇಕವೆ ಸಹಜಗುಣ. ಕಾರಣ ಅವಿವೇಕವೇ ವಿವೇಕವೆಂದು ಬಗೆಯುವುದು ವಾಸ್ತವವಾಗುವುದು. ಒಂದು ವೇಳೆ ಈ ಮಾತು ನಿಜವಾದರೆ, ಸಮಾಜಸೇವೆಯೆಂದರೆ ಯಾರ ಸೇವೆ? ಯಾತಕ್ಕಾಗಿ? ಜನತಾಜನಾರ್ದನ ಸೇವೆ, ದೇಶಸೇವೆಯೆ ಈಶಸೇವೆಯೆಂದು ಮೋಸಗೊಳಿಸಿಕೊಂಬುದು ಯೋಗ್ಯವೆ?

ಜನಸಮಾಜವು ನಾಯಬಾಲ; ಅಥವಾ ಸ್ವಾರ್ಥಾದಿ ಹೀನಭಾವಗಳೇ ಮೂಲಭೂತವೆಂದು ಸಾರುವವರು, ಒಂದರಗಳಿಗೆ, ತಾವು ಯಾವಾಗಲೂ ಹೀನಪ್ರವೃತ್ತಿಯವರೋ, ದುಷ್ಟತನವೇ ತಮ್ಮ ಮೂಲ ಸ್ವಭಾವವೊ? ಎಂದೆಂಬುದನ್ನು ಸ್ವಲ್ಪ ವಿಮರ್ಶಿಸಿಕೊಳ್ಳಬಾರದೇಕೆ? ನೀಚನೆಂದು ವಿಖ್ಯಾತನಾದವನ ಹತ್ತಿರಕ್ಕೆ ಹೋಗಿ, ಆತನ ಅಂತರಾಳವನ್ನೂ ಪರೀಕ್ಷಿಸಬಹುದು. ತಾನು ಮೂಲತಃ ದುಷ್ಟನಲ್ಲ; ತನ್ನ ಪರಿಸ್ಥಿತಿಯಲ್ಲಿ ತನಗೆ ಹಾಗೆ ಆಗದೆ

ಗತ್ಯಂತರವಿಲ್ಲದಾಗಿದೆಯೆಂದೇ ಆತನು ಹೇಳುವುದು ಕೇಳಬಂದೀತು. ಆದರೆ, ನವಮತವಾದೀ ನೀತ್ಯತೀತವಾದಕ್ಕೆ ಮೇಲಣ ವಿವರಣೆಯಲ್ಲಿ ಧ್ವನಿತವಾಗುವ ಪಶ್ಚಾತ್ತಾಪದ ದನಿಯೂ ಸಮ್ಮತವಿಲ್ಲ. ಅನಾಚಾರ ಅಥವಾ ದುಷ್ಟತನವೆಂದು ಹೆಸರಿಡುವುದು, ಬಳಿಕ ಮಿಡುಕುವುದು ಏತಕ್ಕೆ? 'ಇದು ಮನುಷ್ಯ ಸ್ವಭಾವ; ಹಾಗೆ ಆಗತಕ್ಕುದೇ' ಎಂದು ಬಿಟ್ಟರೆ ಪಶ್ಚಾತ್ತಾಪದ ಒರಗುಮೋರೆ ಮಾಡುವ ತೊಂದರೆಯೂ ಇಲ್ಲ. ಏನನ್ನೂ ಮಾಡುವುದು; 'ಬದುಕಲಿಕ್ಕೆ ಮಾಡಲೇಬೇಕು;' ಅಥವಾ 'ಇದು ಮನುಷ್ಯ ಸ್ವಭಾವ' ಹೀಗೆ ನಡೆಯತಕ್ಕದ್ದೇ' ಎಂದು ಸಮಾಧಾನ ಹಚ್ಚಿಕೊಂಡು ಹಕ್ಕಿಯಹಾಗೆ ನಗುತ್ತ ಕೆಲೆಯುತ್ತ ಜೀವನ ಸೌಖ್ಯವನ್ನು ಹೀರುವುದರಲ್ಲಿ ಆಸಕ್ತರಾಗಿತಕ್ಕದ್ದು; ಎಂದು ಪ್ರತಿಪಾದಿಸುವ ಬುದ್ಧಿವಂತರೂ ಉಂಟು. ಆದರೆ, ಇವರ ಈ ವಿಚಾರಸರಣಿಯಿಂದ ಸಮಾಜ ಸ್ವಾಸ್ಥ್ಯವು ಸ್ಥಿರವಾಗಿ ಉಳಿದೀತೆ? ಈ ತತ್ವವಿಧಾನವು ಸಮಾಜವನ್ನು ತೂಕತಪ್ಪಗೊಡದೆ ಮುಂದೆ ನಡಸೀತೆ? ಅಥವಾ ಸಮಾಜ ಸ್ವಾಸ್ಥ್ಯ, ಲೋಕಶಾಂತಿ ಎನ್ನುವುದೇ ಭ್ರಾಂತಿಯೆ? ಎಂಬುದನ್ನು ಸ್ಪಷ್ಟೀಕರಿಸುವ ಕೃಪೆಮಾಡಬಹುದೇ?

ಸುಮ್ಮನೆ ಕಿಡಿಗೇಡಿ ಕೆಲಸ ಅಥವಾ ಅನ್ಯಾಯ ಮಾಡುತ್ತಿರುವಲ್ಲಿಯೆ ಸಂತೋಷಗೊಳ್ಳುತ್ತಿರುವವರ ಸಂಖ್ಯೆಯೆಷ್ಟು ಸಮಾಜದಲ್ಲಿ? ಯಾರ ಹೊರಗಿನ ಹೆದರಿಕೆಗೆ ಅಲ್ಲ; (ಹೊರಗೆ ಪ್ರತಿಷ್ಠೆಯ ಭ್ರಾಂತಿಯಿಂದ ತನ್ನ ಕೃತ್ಯದ ಮಂಡನ ಮಾಡುವಂತೆ ತೋರಿಸುತ್ತಿದ್ದರೂ) ಮನಸ್ಸು 'ಹೀಗೆ ನೀನು ಮಾಡದೆ ಇದ್ದರೆ ಲೇಸಿತ್ತು' ಎಂದು ಒಳಗೊಳಗೇ ಕೊರೆಯುವುದಲ್ಲ! ಇದೇನು? ಕೆಟ್ಟಕೆಲಸವು ಇದು, ಎಂದು ತಿಳಿದೂ ತಿಳಿದೂ ಅದನ್ನು ಮಾಡುತ್ತಿರುವಲ್ಲಿ ಯಾರಿಗೂ ಸಂತೋಷವಾಗಲಾರದು. ಆದುದರಿಂದಲೆ, ಹೀನಕಾರ್ಯಕ್ಕೆ ಸತ್ಕಾರ್ಯ ಎಂಬ (ಅಥವಾ ಹುಟ್ಟುಗುಣವೆಂಬ) ಆಧುನಿಕ ತತ್ವಜ್ಞಾನದ ಬಣ್ಣಬಳಿದು ಅದು ನುಣ್ಣಗೆ ಕಾಣುವಂತೆ ಮಾಡುವ ಆವಶ್ಯಕತೆಯುಂಟಾಗುತ್ತದೆ. ಈ ಆವಶ್ಯಕತೆಯ ಅರ್ಥವೇನು? ಮಾನವನಲ್ಲಿ ಬುದ್ಧಿವಾದ, ಮಂಡನಾದಿ ವಿವರಣೆಗಳು ಯಾತಕ್ಕಾಗಿ? ಯಾರಿಗಾಗಿ? ಯಾವುದೇ ಒಂದು ಅಂತರ್‌ಮನದ ಸಮಾಧಾನಕ್ಕಾಗಿಯೆ ಅಲ್ಲವೆ? ಆ ಅಂತರಾಳದ-ಗುಹಾನಿಹಿತ ವಸ್ತುವೇ 'ಸತ್'. ಅದು ನಮ್ಮನ್ನಾಳುತ್ತದೆ; ನಮ್ಮ ಕೃತ್ಯಗಳ 'ಜವಾಬು' ಕೇಳುತ್ತದೆ. ಅದನ್ನು ಸಮಾಧಾನಪಡಿಸದೆ ಮಾಡುವ ಯಾವ ಕೃತ್ಯವೂ ಸಾತತ್ಯದಿಂದ ಸಾಗಲಾರದು. ಅದನ್ನು ಸಮಾಧಾನ ಪಡಿಸುವ ಕಷ್ಟಗಳಿಗೆ ಹೆದರಿ ಹಲವರು ಅದನ್ನು ಅಲ್ಲದ ಮಾತಿನ ಮಾಯಾಜಾಲ ಹಮ್ಮಿ ಮೋಸಗೊಳಿಸುತ್ತಾರೆ. ಇದೇ ಆತ್ಮವಂಚನೆ. ಆತ್ಮವಂಚಕನು ಲೋಕವಂಚಕನೆಂದೇ ಈವರೆಗಿನ ಇತಿಹಾಸವು ಸಾರುತ್ತದೆ.

ಸತ್‌ಪ್ರವೃತ್ತಿಯು ಮಾನವನ ಸಾರ. ಇದರ ಆಧಾರದ ಮೇಲೆಯೆ ಬಾಳಿನಲ್ಲಿ ಸುಖದ ಆಶೆ. ಇದನ್ನೇ ಅಲ್ಲಗಳೆದರೆ ಸುಖದಲ್ಲಿ ಆಸ್ಥೆಯೆ ಉಳಿಯುವುದಿಲ್ಲ. ಸತ್ಪ್ರವೃತ್ತಿಗೊಪ್ಪಿಗೆಯಾಗದ ಸುಖ ಸುಖವಾಗದೆ ದುಃಖವೆನಿಸುವುದು. ಆದುದರಿಂದ, ಜೀವನದ ಆಸ್ಥೆಯೆಂದರೂ ಸತ್ಪ್ರವೃತ್ತಿಯೇ ಸರಿ. ಸಂಸಾರದಲ್ಲಿ ಈ ಮೂಲ ಸತ್‌ಪ್ರವೃತ್ತಿಯೇ ನಷ್ಟವಾದ ಸಂದೇಹವು ಸೋಂಕಿದರೂ ಸಾಕು; ಜೀವವು ಕಮರಿದಂತೆ ಎನಿಸುವುದು. ಕಗ್ಗತ್ತಲೆಯು ಕವಿದ ಅನುಭವವುಂಟಾಗುವುದು. ನಿರಾಶೆಯಿಂದುಂಟಾದ ಈ ಕಳವಳದಲ್ಲಿ ಬದುಕು ಸಾಕೆಂದೆನಿಸಿ ಸಾಯುವುದೇ ಲೇಸೆನಿಸುವುದು. ಆದುದರಿಂದ ಸತ್‌ಪ್ರವೃತ್ತಿಯೆ ಜೀವನದ ಉಗಮಸ್ಥಾನ. ಜೀವನಗಂಗೆಯು ಉಗಮದಲ್ಲಿಯೆ ಬತ್ತಿದರೆ, ಅಥವಾ ನೀರು ಕದಡಿ ರಾಡಿಯಾದರೆ ಮುಂದೆ ಲೋಕದಲ್ಲಿ ಅನಾಹುತಗಳಾಗುವುದು ಏನಾಶ್ಚರ್ಯ?

ಮಾನವನಲ್ಲಿರುವ ದಿವ್ಯಾಂಶವಿದು. ಇದು ಕೆಲವರಲ್ಲಿ ಹೊಳೆಹೊಳೆದು ತೊಳಗಿ ಬೆಳಗುತ್ತಿರುವುದನ್ನು ಮನಗಾಣಬಹುದು. ಇನ್ನು ಹಲವರಲ್ಲಿ ಮಂದಮಂದವಾಗಿ ಹೊನ್ನೆಯ ಹುಳದಂತೆ ಆಗ ಈಗ ಮಿನುಗಿ ಮರೆಯಾಗುತ್ತಿರುವುದು ಕಂಡುಬರುತ್ತದೆ. ಇನ್ನು ಹಲವರಲ್ಲಿ 'ಶಿಲೆಯೊಳಗಿನ ಅಗ್ನಿಯಂತೆ' ಇದೆಯೆಂದರೆ ಇದೆ; ಇಲ್ಲವೆಂಬುದೇ ನೈಜವೆಂಬುವ ಅವಸ್ಥೆಯಲ್ಲಿ ಗುಪ್ತ-ಸುಪ್ತವಾಗಿರುವುದುಂಟು. ಅದು ಮತ್ತೆ ಚೇತನಗೊಂಡಾಗ ಅವಿವೇಕಿಗಳೆಂದು ತೋರುತ್ತಿದ್ದವರು ವಿವೇಕಿಗಳಾಗುವರು; ದುಷ್ಟರೆಂದು ಹೆಸರಾದವರೂ ಸಜ್ಜನರೆನಿಸಿ ಬಾಳುವರು.

ಮಾನವ ಕುಟುಂಬದೊಳಗಿನ ಈ ದೈವೀಭಾವದ ಸಮ್ಯಕ್ ಸ್ವರೂಪವನ್ನೇ 'ಸಹಸ್ರಶೀರ್ಷಃ ಪುರುಷಃ' ಎಂದು ಋಗ್ವೇದದ ರಮ್ಯವಾದ ಒಂದು ರೂಪಕದಲ್ಲಿ ವರ್ಣಿಸಲಾಗಿದೆ. ಅನಂತ ತಲೆ, ಕಣ್ಣು, ಕೈಕಾಲುಗಳುಳ್ಳ

ಈ ಸತ್-ಪುರುಷನನ್ನು ಮಾನವ ಕೋಟಿಯಲ್ಲಲ್ಲದೆ ವಿಶ್ವವೆಲ್ಲವನ್ನೂ ವ್ಯಾಪಿಸಿ ಮಿಕ್ಕಿನಿಂತಿದ್ದಾನೆಂದು ಅಲ್ಲಿ ವರ್ಣಿಸಿದೆ. ಮಾನವ ಪ್ರಾಣಿಯಲ್ಲಿ ಹುದುಗಿಕೊಂಡಿರುವ ಈ ಸತ್ ಪ್ರವೃತ್ತಿಯ ಅತ್ಯಂತ ಅಲ್ಪಾಂಶಪ ಆಧಾರಕ್ಕೆ ವೇದದ ರೂಪಕದಲ್ಲಿ ವರ್ಣಿಸಿದಂತಹ ಅಗಾಧವಾದ ವಿರಾಟ್ ಹಿನ್ನೆಲೆಯ ಬಲವಿದ್ದಲ್ಲದೆ, ಅದು ಪ್ರಪಂಚದೊಳಗಿನ ಎಂತಹ ಘೋರ ಹಾಲಾಹಲ ವಿಷದ ದಳ್ಳುರಿಯಿಂದಲೂ ಸುಟ್ಟುಬೂದಿಯಾಗದೆ ಉಳಿದು ವಿಕಾಸಗೊಳ್ಳುತ್ತಲಿರುವ ಸಂಭವವುಂಟೆ? ಈ ತೆರನಾಗಿ ಅದು ಹಿಂದೆ ಇದ್ದಿತು, ಮುಂದೆಯೂ ಉಳಿಯುವುದು (ಯದ್ ಭೂತಂ, ಯಚ್ಚ ಭವ್ಯಂ), ಎಂಬ ನಿಷ್ಠೆಯನ್ನು ವಿಚಾರ ವಿಮರ್ಶೆಗಳಿಂದ ಅಚ್ಚಳಿಯದೆ ಉಳಿಸಿಕೊಂಡವರೇ ಸಮಾಜದಲ್ಲಿ ಅಸನ್ಮಾರ್ಗಿಗಳಾಗದೆ, ಯಾವ ಸಂಕಟಗಳಿಂದಲೂ ಅದಿರದೆ ಸತ್‌ಪ್ರವೃತ್ತಿಯ ಅನುಸಂಧಾನದಲ್ಲಿಯೇ ತಮ್ಮ ಅಡಿಗಳನ್ನಿಕ್ಕುತ್ತ ಮುನ್ನಡೆಯಬಲ್ಲರು. ಮಾನವಕುಟುಂಬದ ಮೂಲಾಧಾರ ಅಥವಾ ಸಮಾಜದ ಆಧಾರ ಸ್ತಂಭವೇ ಈ ವಿರಾಟ್ ಪುರುಷ. 'ಸತ್'ದ ಅನಂತರೂಪ. ಆದುದರಿಂದ, ದೇವಸೇವೆಯೆಂದರೇ ಸಮಾಜಸೇವೆ. ದೇಶಸೇವೆಯೇ ಈಶಸೇವೆ. 'ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಮ್' ಸಮಾಜ ಕಲ್ಯಾಣಮಾಡಿ ಲೋಕವನ್ನು ಆನಂದಗೊಳಿಸುವುದಕ್ಕಿಂತಲೂ ಹೆಚ್ಚಿನ ದೇವಪೂಜೆ, ವ್ರತ-ನೋಹಿ, ತೀರ್ಥ-ಯಾತ್ರೆ ಒಂದೂ ಇಲ್ಲ. ಈ ಕಾರಣದಿಂದಲೇ 'ಲೋಕಹಿತೇ ರತ'ನಾಗಿರಲು ನರನಿಗೆ ಗೀತೆಯ ಆದೇಶವಿದೆ.

ಮನುಷ್ಯನು ಅಜ್ಞಾನಮೂಲಕವಾಗಿ ಅನ್ಯಾಯಕ್ಕೆ ಪ್ರವೃತ್ತನಾಗುವನು. ಅಥವಾ ಅಲ್ಲದ ಕೆಲಸವೆಂದು ತಿಳಿದರೂ ಸಂಯಮಗುಂದಿ, ಮೈಗಳ್ಳ ಇಲ್ಲವೆ ಜೀವಗಳ್ಳನಾಗಿಯೂ ಅಡ್ಡದಾರಿಯಲ್ಲಿ ಅಡಿಯಿಡುವನು. ತಿಳುವಳಿಕೆಯು ಬಂದೊಡನೆಯೆ ಒಳ್ಳಡೆಯವನಾಗುವನೆಂದು ಹೇಳಲಿಕ್ಕಾಗದು. ಆದರೂ 'ಒಳದನಿ'ಯ ಕತ್ತುಹಿಸುಕದೆ ಇದ್ದರೆ ಅಡ್ಡದಾರಿಯಲ್ಲಿಯೆ ಹೆಚ್ಚು ಕಾಲನಿಲ್ಲುವುದು ಸಾಧ್ಯವಿಲ್ಲ. ಒಳದನಿಯ ಕತ್ತುಹಿಸುಕುವುದಕ್ಕೆ ಕೆಲಬಾರಿ ಮಂಗಬುದ್ಧಿ ನೆರವಾಗುವುದು; ರೂಢಿ-ಪರಂಪರೆಗಳ ಊರಲೂ (ಸ್ವತಂತ್ರ ವಿಚಾರಶಕ್ತಿಯ) ಜೀವಹಿಂಡಲು ಸಾಕು. ದೇಶ, ಧರ್ಮಗಳ ಹೆಸರಿನಲ್ಲಿ-ಪರೋಪಕಾರದ ಹೆಸರಿನಲ್ಲಿ ಮಾಡುವ ಅಥವಾ ಮಾಡಿಕೊಂಬ ವಂಚನೆಯೂ ಅಗಾಧವಾಗಿದೆ. ಕುಟುಂಬ ಹಿತಕ್ಕಾಗಿ ಅನ್ಯಾಯ ಮಾಡುವವರು, ಸಂಸ್ಥೆ ಸಮಿತಿಗಳ ಏಳ್ಗೆಗಾಗಿ ಠಕ್ಕು ಠೌಳಿಗಳನ್ನು ಕೈಕೊಳ್ಳುವವರು, ಲಂಚ ದೊರಕಿಸಿ ಅಥವಾ ಕಳ್ಳಗತ್ತಿನಿಂದ ಹಣಕೂಡಿಸಿ ಮಠ-ಸಂಸ್ಥೆ-ಆಶ್ರಮಾದಿಗಳನ್ನು ಕಟ್ಟುವವರು, ಅಪಪ್ರಚಾರ ಕೊಲೆ ಸುಲಿಗೆಗಳಿಂದ ನಾಡಿನ ಏಳ್ಗೆಯನ್ನು ಹಾರಯಿಸುವವರೂ ಉಂಟು! ಇಂತಿವೆಲ್ಲ ಕಾರಣಗಳಿಂದ ಸಮಾಜದಲ್ಲಿ ಅನ್ಯಾಯ, ಕ್ರೂರತನ, ಕಪಟವು ತುಂಬಿಕೊಂಡಿರುವ ಅನುಭವವು ಬರುವುದೂ ಸುಳ್ಳಲ್ಲ. ಇಂತಹ ಕಟುಅನುಭವಗಳ ಸಂದರ್ಭದಲ್ಲಿಯೂ ಲೋಕದ ಮೂಲಭೂತ ಸತ್‌ಪ್ರವೃತ್ತಿಯಲ್ಲಿ ಅಚಲವಾದ ನಿಷ್ಠೆಯು ಇದ್ದುದಾದರೆ ಲೋಕದ ಕುಂದುಕೊರತೆ, ಅನಾಚಾರಗಳನ್ನು ಕಂಡು ಉಂಟಾಗುವ ರೋಷ, ಜುಗುಪ್ಸೆಯ ಬದಲು ಕರುಣೆಯು ತಲೆದೋರುವುದು. ವಿರೋಧಿಗೆ, ಪ್ರತಿಯಾಗಿ ತಾನು ಹೀನಕೃತ್ಯವನ್ನೆಸಗಬೇಕೆಂಬ ಚಪಲವು ಮಾಯವಾಗಿ ಸಂಯಮದಿಂದ ಆ ಮೂಲ ಸತ್‌ಪ್ರವೃತ್ತಿಯನ್ನು ತನ್ನಲ್ಲಿ ಉಜ್ವಲಗೊಳಿಸಿಕೊಂಡು ಇನ್ನೊಬ್ಬರಲ್ಲೂ ಅದನ್ನು ಜಾಗೃತಗೊಳಿಸುವ ಪ್ರಯತ್ನಮಾಡಬಲ್ಲನು. ಸೈನಿಕರು ಹಾಗೂ ಪೊಲೀಸರುಗಳ ಆವಶ್ಯಕತೆಯಿರುವ ವರೆಗೆ ಮಾನವನು ದುಷ್ಟವೃತ್ತಿಯವನೆಂದು ವಾದಿಸಬಹುದಾದರೂ ಲೋಕಸಂಖ್ಯೆಯ ಮಾನದಿಂದ ಸೈನಿಕರ ಪೊಲೀಸರ ಸಂಖ್ಯೆ ಎಷ್ಟು ಅಲ್ಪ, ಎಂಬುದನ್ನೂ ಮರೆಯಲಾಗದು. ಒಳಗಣ ಸತ್‌ಪ್ರವೃತ್ತಿಯ ಒತ್ತಾಯವೇ ಒಟ್ಟಿನಲ್ಲಿ ಆಗಾಗ ಪ್ರಭಾವಿಯಾಗುತ್ತಿರುವುದರಿಂದಲೇ ಸಂಸಾರಚಕ್ರವು ಸುಸೂತ್ರವಾಗಿ ಸಾಗಿದೆಯಲ್ಲದೆ, ಹೊರಗಣ ಒತ್ತಾಯದಿಂದಲ್ಲ ಇಲ್ಲವಾದರೆ ಮನೆಮನೆಗೂ ಪೊಲೀಸರನ್ನು ನಿಲ್ಲಿಸುವ ಆವಶ್ಯಕತೆ ಉಂಟಾಗಬೇಕಿತ್ತಲ್ಲವೆ? ಮನೆಯಲ್ಲಿ, ಗೆಳೆಯರಲ್ಲಿ, ತಮ್ಮ ಗುಂಪಿನಲ್ಲಿ ಸಜ್ಜನರಾಗಿರುವವರೆ, ಹೊರಗೆ ತಾಳುವ ಅವರ ಉಗ್ರಸ್ವರೂಪನ್ನು ಕಂಡಾಗ ಅವರೇ ಇವರೊ? ಎಂಬ ಸಂದೇಹವುಂಟಾಗುತ್ತದೆ. ಈರ್ಷೆಯಲ್ಲಿ ಎರಡು ಬಣಗಳು, ಎರಡು ದೇಶಗಳು ಕಲಹ ಯುದ್ಧವೆಂಬ ಅಧಮ ರಾಕ್ಷಸೀ ಕೃತ್ಯಗಳಿಗೆ ಸಿದ್ಧರಾಗುವುದು ಇದೇ ತೆರನಾಗಿ!

ಅಂತೂ ಸಮಾಜದ ಉಗ್ರರೂಪವು ಒಂದುಂಟು. ಅಂತರ್ಯದಲ್ಲಿ ಶಿವಸ್ವರೂಪವಿದ್ದುದೂ ಸತ್ಯ. ಯೋಗಿ ಶಿವನು ಒಂದೊಂದು ವೇಳೆ ಬಾಲವತ್, ಪಿಶಾಚವತ್ ಅಥವಾ ಉನ್ಮತ್ತವತ್ ಆಗಿ ವಿಹರಿಸುವನೆಂದು ಇರುವ ಪೌರಾಣಿಕ ಸಂಕೇತವು ಮಾನವ ಸಮೂಹದ ಪ್ರತೀಕದ ದ್ಯೋತಕವಾಗಿರಲಿಕ್ಕಿಲ್ಲವಷ್ಟೆ? ಉಪನಿಷತ್ತಿನ ಭಾಷೆಯಲ್ಲಿ ಹೇಳಬಹುದಾದರೆ, ಮೊದಲನೆಯದು ಅ-ಸಂಭೂತಿ. ಇದರ ಉಪಾಸನೆಯಿಂದ ಅಮೃತತ್ವದ ಆನಂದವು ಪ್ರಾಪ್ತವಾಗುತ್ತದೆ. ಎರಡನೆಯದು ಸಂಭೂತಿ. ಇದನ್ನು ಒಲಿಸಿಕೊಂಡವರು ಸಂಸಾರದೊಳಗಿಂದ ಸುಖದಿಂದ ಪಾರಾಗುತ್ತಾರೆ. ಆದರೆ ಬರಿ ಈ ಸಂ-ಭೂತದ ಬೆಂಬತ್ತಿದವರು ನಿಜಾನಂದಕ್ಕೆ ಅಥವಾ ಸದಾನಂದಕ್ಕೆ ಎರವಾಗುತ್ತಾರೆ. ಕೇವಲ ಯಾವುದೊಂದನ್ನೇ ಆರಾಧಿಸುವುದು ನೆಲೆಯಿಲ್ಲದ ಕಗ್ಗತ್ತಲೆಯ ದಾರಿ!

ಸಮಾಜ ವಿಕಾಸ

ಸಮಾಜ ವಿಕಾಸವೆಂದರೇನು? ಸಸ್ಯಾದಿಗಳ ವಿಕಾಸವೆಂದರೆ ಅರ್ಥವಾಗಬಲ್ಲದು. ವ್ಯಕ್ತಿಯ ವಿಕಾಸವೆಂದರೂ ಅರ್ಥವಾಗುವುದು. ಆದರೆ, ಸಮಾಜ ವಿಕಾಸಕ್ಕೆ ಅರ್ಥವೇನು? ಸಮಾಜದಲ್ಲಿ ಕಾಲಗತಿಯಂತೆ ಪರಿವರ್ತನಗಳು ಆಗುತ್ತಿರುವುದೇನೊ ನಿಜ. ಆದರೆ, ಅದು ನಿಶ್ಚಿತವಾಗಿ ವಿಕಾಸದ ದಾರಿಯಲ್ಲಿಯೆ ಹೊರಟಿದೆಯೆ? ಹಾಗಾದರೆ ಅದರ ಪರಿಣತ ಸ್ಥಿತಿಯು ಯಾವುದು?

ಬೃಹದಾರಣ್ಯಕದ ಯಜ್ಞವಲ್ಕ್ಯನ ವಿಚಾರಸರಣಿಯಂತೆ ಲೋಕವು ದಿನದಿನಕ್ಕೂ ಉತ್ತಮಗೊಳ್ಳುತ್ತಲೆ ಹೋಗಬೇಕು. ಏಕೆಂದರೆ ಆತ್ಮವು ತನ್ನ ಹಿಂದಿನ ಅನುಭವದಿಂದ ಬರುಬರುತ್ತ ಪರಿಣತಿ ಸ್ಥಿತಿಯನ್ನೈದುವುದೆಂದು ಆತನ ಸಿದ್ಧಾಂತ (೪ ೪. ೩-೫). ಆದರೆ, ಪುರಾಣಗಳ ಯುಗಚತುಷ್ಟಯದ ಕಲ್ಪನೆಯು ಯಾಜ್ಞವಲ್ಕ್ಯರ ವಿಚಾರಕ್ಕೆ ವಿರೋಧವಾಗಿದೆ. ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳು ಅನುಕ್ರಮವಾಗಿ ಬರುವುವು. ಮೊದಲನೆಯದು ಪರಿಪೂರ್ಣತೆಯ ಪರಮಾವಧಿ ಬಳಿಕ ಕ್ರಮವಾಗಿ ಕೆಳಕೆಳ ಮಟ್ಟಕ್ಕೆ ಬರುತ್ತ ಕಲಿಯುಗದ ಕೊನೆಗೆ ಪ್ರಳಯ! ಉಪನಿಷತ್ತು ಅಂದರೆ ಶ್ರುತಿಗೂ ಪುರಾಣಕ್ಕೂ ಇಂತಿದು ವಿರೋಧ! ಕ್ರಿಸ್ತಾಬ್ದದ ಆರಂಭದ ಸುಮಾರಿಗೆ ಇದರ ಜೊತೆಗೆ ಅವತಾರದ ಕಲ್ಪನೆ ಬೇರೆ ತಲೆಯೆತ್ತಿತು! ಪ್ರತಿಯುಗಕ್ಕೂ ಒಂದು ಅವತಾರವಾಗಬೇಕು. ಆ ಅವತಾರಗಳಿಂದಲೇ ಜನರ ಉದ್ಧಾರ! ಕೆಸರಲ್ಲಿ ಸಿಕ್ಕ ಕೋಣದಂತೆ ಒರಲುತ್ತ ಇರುವ ಜನಕ್ಕೆ ಗಜೇಂದ್ರ ಮೋಕ್ಷದಂತೆ ಪರಮಾತ್ಮನು ಬಂದು ಮೇಲೆತ್ತಿ ಮುಕ್ತಿಕೊಡುವನೆಂಬ ಗ್ರಹಿಕೆಯನ್ನು ಜನತೆಯಲ್ಲಿ ಹಬ್ಬಿಸಿದ್ದಾಯ್ತು! ಭಾರತದ ಜನ, ಪುರಾಣಕತೆಗಳ ಸೆಳವಿನಲ್ಲಿ ಸಿಕ್ಕು ದಿಕ್ಕುಗಾಣದಾಗಿ ದಿನಾಲು ಪ್ರಳಯದ ದಾರಿಯನ್ನು ಎದುರು ನೋಡುತ್ತ ಬೆಕ್ಕಸಗೊಂಡುದೂ ಆಯಿತು!

ಯೂರೋಪಿನಲ್ಲಿಯೂ ಜಗಚ್ಚಕ್ರವು ತಿರುಗುವ ಕ್ರಮದ ಬಗೆಗೆ ಏನೇನೊ ಕಲ್ಪನೆಗಳು ನಡೆದು ಬಂದಿದ್ದುವು. ಆದರೆ, ಭೌತಶಾಸ್ತ್ರದ ಶೋಧಗಳಿಂದ ಅದರಲ್ಲಿಯೂ ಡಾರ್ವಿನನ ವಿಕಾಸವಾದದ ಸಂಶೋಧನೆಯಿಂದ ಲೋಕದ ವಿಚಾರದಲ್ಲಿ ವಿಲಕ್ಷಣವಾದ ಕ್ರಾಂತಿಯಾಯ್ತು. ಡಾರ್ವಿನನು ಪ್ರಾಣಿಗಳ ದೇಹದ ವಿಕಾಸದ ಕ್ರಮವನ್ನು ಕಂಡುಹಿಡಿದನು. ಏಕಾಣುಜೀವಿಯಿಂದ ಮನುಷ್ಯನ ವರೆಗೆ ದೇಹರಚನೆಯಲ್ಲಿ ಆದ ಕ್ರಮವಾದ ಮಾರ್ಪಾಟಗಳನ್ನು ಸಪ್ರಮಾಣವಾಗಿ ಸಿದ್ಧಪಡಿಸಿದನು. ಆದರೆ, ಪ್ರಾಣಿಶರೀರರಚನಾಕ್ರಮದ ವಿಕಾಸವನ್ನು ಕುರಿತು ಡಾರ್ವಿನನ ಸಿದ್ಧಾಂತವು ಜೀವನದ ಪ್ರತಿಯೊಂದು ವಿಚಾರದಲ್ಲೂ ಅನ್ವಯಿಸುವುದೆಂದು ತೋರಿಸುವ ಹಲವು ಪ್ರಯತ್ನಗಳಿಗೆ ಆರಂಭವಾಯಿತು. ಮಾನವ ಸಮಾಜದ ವಿಕಾಸ ಕ್ರಮವನ್ನು ಕುರಿತ ಅನೇಕ ಗ್ರಂಥಗಳು ಬರೆಯಲ್ಪಟ್ಟುವು. (ಕಾಡಾಡಿತನದಿಂದ ನಾಗರಿಕನಾಗುವವರೆಗಿನ ಮಾನವನ ವಿಕಾಸದ ಬಗೆಯನ್ನು ಕುರಿತು ವಿವರಣೆಯ ಒಂದು

ಗ್ರಂಥವು ಮಿಂಚಿನ ಬಳ್ಳಿಯಲ್ಲಿ ಪ್ರಕಟವಾಗಿದೆ. ಸಮಾಜವಿಕಾಸ ಕ್ರಮ: ಬರೆದವರು ಶ್ರೀ ನೆಗಳೂರು ಶ್ರೀನಿವಾಸರಾಯರು - ಅನ್ನಸಂಚಯಕ್ಕಾಗಿ ಅಲೆದಾಡುವ ಬೇಟೆಗಾರಿಕೆಯಿಂದ ದನಗಾರಿಕೆ, ದನಗಾರಿಕೆಯಿಂದ ಒಕ್ಕಲತನ, ಒಕ್ಕಲತನದಿಂದ ವ್ಯಾಪಾರೋದ್ಯೋಗದ ನಾಗರಿಕತೆಯ ವರೆಗಿನ ವಿಕಾಸಕ್ರಮವನ್ನು ಈ ಗ್ರಂಥ ಸಪ್ರಮಾಣವಾಗಿ ಮನಂಬುಗುವಂತೆ ವಿಶದಪಡಿಸಿವೆ.) ಆದರೆ ಇನ್ನು ಮುಂದಿನ ವಿಕಾಸದ ಮಟ್ಟವು ಆವುದು? ಕಳೆದ ಮಹಾಯುದ್ಧದಂತಹ ಪ್ರಳಯಕಾರಕ ಘಟನೆಗಳನ್ನು ನೆನೆದರೆ ಮಾನವನ ವಿಕಾಸವೇ ನಡೆದಿದೆಯೆಂದು ಧೈರ್ಯವಾಗಿ ಹೇಳಬಹುದೆ?

ಜಗತ್ತಿನ ವಿನಾಶವು ಯಾವ ಕ್ಷಣಕ್ಕೆ ಬಂದೀತೆಂಬ ನಿಶ್ಚಿತವಿಲ್ಲ; ನಾಶವು ಮಾತ್ರ ತಪ್ಪಿಲ್ಲವೆಂದು ಅನೇಕ ಭೌತಶಾಸ್ತ್ರಜ್ಞರು ಭವಿಷ್ಯ ನುಡಿಯುತ್ತಿದ್ದಾರೆ. ಸೂರ್ಯನ ಉಷ್ಣತೆಯು ಕಡಿಮೆಯಾಗಿ, ಇಲ್ಲವೆ ಪೃಥ್ವಿಯ ಒಡಲೊಳಗಿನ ಕಾವು ಇನ್ನೂ ಆರಿಹೋಗಿ, ಅಥವಾ ಧೂಮಕೇತುವಿನ ಅನಾಹುತವೂ ಬಂದು ಪೃಥ್ವಿಗೆ ಅಪ್ಪಳಿಸಿ, ಕದಾಚಿತ್ ಅಣುಬಾಂಬಿನಂತಹ ಮಾನವನ ಅವಿವೇಕದ ಕೃತಿಯಿಂದಲೂ ಲೋಕನಾಶವಾಗುವ ಸಂಬಂಧವನ್ನು ಸಾರುತ್ತಿದ್ದಾರೆ. ಕೆಲವು ಗಣಿತಜ್ಞರು ಲೆಕ್ಕಹಾಕಿ ಸೂರ್ಯನ ಉಷ್ಣತೆಯೆಲ್ಲ ಎಂದು ತೀರುವುದು, ನೆಲದೊಡಲೊಳಗಣ ಬಿಸಿಯು ಎಷ್ಟನೆಯ ಇಸವಿಗೆ ಆರುವುದು ಎಂಬುದನ್ನು ಬರೆದಿಟ್ಟಿದ್ದಾರೆ. 'ಇನ್ನು ಸೂರ್ಯನು ಚಂದ್ರನಾಗುವನು, ಪೃಥ್ವಿಯ ಮೇಲೆ ಹಿಮವು ಕವಿದು ಪ್ರಳವಾಗುವದೆಂದು ೧೮೯೬ರ ಸುಮಾರಿಗೆ ಕೆಲವು ಲೆಕ್ಕಿಗರು ಗಂಟು ಮೂಟೆಕಟ್ಟಿ ಕೊನೆಯ ದಿನದ ದಾರಿನೋಡಿದರಂತೆ!

ಇತಿಹಾಸಜ್ಞರಲ್ಲಿ ಬಹುಶಃ ಅನೇಕರಿಗೆ ವಿಕಾಸವಾದದಲ್ಲಿ ಅಷ್ಟು ಶ್ರದ್ಧೆಯಿಲ್ಲ. ಒಂದೊಂದು ದೇಶದ ಐತಿಹಾಸಿಕ ಕರುಣ ಕತೆಗಳನ್ನು ರೋಮಾಂಚಕಾರಿ ಕಾದಂಬರಿಗಳೂ ಸಪ್ಪೆಯೆನಿಸುವಂತಹ ರುದ್ರಗಂಭೀರದುರಂತ ಚಿತ್ರಗಳನ್ನು ಬಲ್ಲವರು, ವಿಕಾಸವು ಎಂದರೆ ಲೋಕದಲ್ಲಿ ಪ್ರಗತಿಯೇ ನಡೆದಿದೆಯೆಂದು ಹೇಳುವ ಸಾಹಸಕ್ಕೆ ಮನಸ್ಸುಮಾಡರು. ಹಿಂದುಸ್ತಾನ, ಚೀನ, ಇಜಿಪ್ತ, ಬಾಬಿಲೋನ, ಅಸೀರಿಯಾಗಳ ಪ್ರಾಚೀನ ಸಾಂಸ್ಕೃತಿಕ ವೈಭವದ ಬಗೆಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆ ವೈಭವ ಕಾಲದ ತರುವಾಯ ಈ ದೇಶಗಳು ಅವನತಿಯ ಚಕ್ರದಲ್ಲಿ ಸಿಕ್ಕು ನುಗ್ಗಾಗುತ್ತಿರುವುದನ್ನೂ ಯಾರೂ ಅಲ್ಲಗಳೆಯಲಿಕ್ಕಾಗುವುದಿಲ್ಲ. ಹಾಗಾದರೆ ಮಾನವಕ್ರಮವಾದ ವಿಕಾಸದ ಸಿದ್ಧಾಂತವು ಎಲ್ಲಿ ಹೋಯ್ತು? ಭಾರತದ ಇತಿಹಾಸದಲ್ಲಿಯೆ ಗುಪ್ತಕಾಲದ ನಂತರ ಭಾರತ ಸ್ವಾತಂತ್ರ್ಯವೂ ಗುಪ್ತವಾಯಿತು. ಆ ಕಾಳರಾತ್ರಿಯು ತೀರಿ ಸ್ವಾತಂತ್ರ್ಯದ ನಸುಕು ಹರಿಯಲು ಇಪ್ಪತ್ತನೆಯ ಶತಮಾನದ ಮಧ್ಯಕಾಲವು ಕಳೆಯಿತು. ಮಾನವಸಮಾಜಕ್ಕೆ ವಿಕಾಸವಾದದ ಸಿದ್ಧಾಂತವನ್ನು ಅನ್ವಯಿಸುವುದಾದರೆ ಈ ಕಾಳರಾತ್ರಿಗೂ ಭಾರತದ ವಿಕಾಸಕಾಲವೆನ್ನಬೇಕಾದೀತು. ಕರಿದಕ್ಕೆ ಬಿಳಿದು ಎಂದು ಹೇಳುವ ಅನವಸ್ಥಾಪ್ರಸಂಗ!

ಕೈಸರಲಿಂಗ, ಸ್ಪೆಂಗ್ಲರ ಪ್ರಭೃತಿಗಳು ಈ ಮತದ ಅಧ್ವರ್ಯುಗಳು. ಸ್ಪೆಂಗ್ಲರನೆಂಬ ಪ್ರಕಾಂಡ ಪಂಡಿತನು ಪಶ್ಚಿಮದೇಶದ ಇಳಿಗಾಲವನು ಕುರಿತ ಒಂದು ಮಹತ್ವದ ಗ್ರಂಥ ಬರೆದು, ಲೋಕದ ಎದುರು ತನ್ನ ಸಿದ್ಧಾಂತವನ್ನು ಮಂಡಿಸಿದ್ದಾನೆ. ತನ್ನ ಮತಸ್ಥಾಪನೆಗೆ ಈತನು ಬಳಸದ ಜ್ಞಾನಶಾಖೆಯೆ ಇಲ್ಲ. ತನ್ನ ಮಹಾಗ್ರಂಥದಲ್ಲಿ ಯುಗಚಕ್ರದ ಸಿದ್ಧಾಂತವನ್ನು ವಿಶದಪಡಿಸಿದ್ದಾನೆ. ವಸಂತ, ಗ್ರೀಷ್ಮ, ಶರತ್ ಮತ್ತು ಹೇಮಂತ ಎಂಬ ಋತುಗಳಂತೆ ಮಾನವ ಕುಲವು ನಾಲ್ಕು ಯುಗಚಕ್ರದೊಳಗಿಂದ ಹಾಯುತ್ತದೆ. ಮೊದಲನೆಯದು ಅಂತರ್‌ಜ್ಞಾನದ ಯುಗ; ವೇದಕಾಲ. ಎರಡನೆಯದು ಬೌದ್ಧಿಕಯುಗ; ಆರಣ್ಯಕ, ಬ್ರಾಹ್ಮಣಗಳ ಕಾಲ. ಮೂರನೆಯದು ಸ್ಥಿತಿಯ ಕಾಲ; ಸೂತ್ರರಚನಾಕಾಲ; ನಾಲ್ಕನೆಯದು ಭೌತವಾದ; ಭೋಗ ಪ್ರವೃತ್ತಿಯ ಕೊನೆಗಾಲ; ಸಾಂಖ್ಯಾದಿ ತತ್ವಗಳ ಪ್ರಚಾರವಾಗುವುದು. ಪಾಶ್ಚಿಮಾತ್ಯ ದೇಶಗಳಲ್ಲಿ ಭೌತವಾದವು ಮಿತಿಮೀರಿ ಕೊನೆಗಾಲವು ಸಮೀಪಿಸಿದೆಯೆಂದು ಈತನು ಸಿದ್ಧಾಂತಮಾಡಿದ. ಸ್ವಲ್ಪ ದಿನಗಳಲ್ಲಿಯೆ ೧೯೧೪ರ ಮಹಾಯುದ್ಧವು ಆರಂಭವಾಯ್ತು! ಈತನ ಸಿದ್ಧಾಂತಕ್ಕೆ ಯುರೋಪದಲ್ಲಿ ವಿಲಕ್ಷಣ ಮಹತ್ವವು ಪ್ರಾಪ್ತವಾಯಿತು. ಸ್ಪೆಂಗ್ಲರನ ಯುಗಚಕ್ರದ ಸಿದ್ಧಾಂತವು ಪುರಾಣಕತೆಗಳ ಚತುರ್ಯುಗದ ವಿಚಾರಕ್ಕೆ ತುಂಬ ಹೋಲುತ್ತದೆ. ಈ ವಿಚಾರ ಸರಣಿಯಂತೆ ದೈವವಾದಕ್ಕೆ ಪಟ್ಟವು ದೊರೆಯುವುದು. ಹಣೇಬರಹ ತಪ್ಪಿಸಿಕೊಳ್ಳಲಿಕ್ಕಾಗುವುದಿಲ್ಲವೆಂಬ ಸಿದ್ಧಾಂತವು ಪುಷ್ಟಿಗೊಳ್ಳುವುದು. ಎಲ್ಲವೂ ಮೊದಲೇ ನಿಶ್ಚಿತವಾಗಿದೆ. ಚಚು

ಬಿಡದಂತೆ ಎಲ್ಲವೂ ಒದಗುವುದು. ನಾನು ಮಾಡುವೆನೆಂಬುದು ಶುದ್ಧಭ್ರಾಂತಿ. ವಿಶ್ವಚಕ್ರವು ಎತ್ತ ಒಯ್ಯುವುದೊ ಅತ್ತ ಸಾಗುವುದೊಂದೇ ತಮ್ಮ ಕೆಲಸವೆಂಬ ನಿರ್ಗತಿಕವೃತ್ತಿಗೆ ಪ್ರೋತ್ಸಾಹ ದೊರೆಯುತ್ತದೆ. ಇಂತೀ ನಿಯತಿವಾದದ ಕೈಯಲ್ಲಿ ಸಿಕ್ಕುಬೀಳುವುದು ಈ ದಾರಿಯಿಂದ ಅನಿವಾರ್ಯ.

ಡಾರ್ವಿನ್‌ನ ವಿಕಾಸವಾದವು ಪ್ರಾಣಿಗಳ ದೇಹವಿಕಾಸಕ್ರಮದ ಮಟ್ಟಿಗೆ ಮಾತ್ರ. ಮಾನವಸಮಾಜಕ್ಕೂ, ಅವರ ಮನೋವ್ಯಾಪಾರಕ್ಕೂ ಈ ಸಿದ್ಧಾಂತವು ಸರಿಹೋಗದು. ಆದುದರಿಂದ, ಉಳಿದೆಡೆಗಳಲ್ಲಿ ಅದನ್ನು ಬಳಸುವುದು ಅಸಮಂಜಸವೆಂದು ಕೆಲವು ಶಾಸ್ತ್ರಜ್ಞರು ವಾದಿಸಿದ್ದಾರೆ. ಟಿಂಡಾಲ ಹಕ್ಸಲೆಯು ವಿಕಾಸವಾದದ ದಾರ್ಶನಿಕರಲ್ಲೊಬ್ಬನು. ಈ ವಿಷಯದಲ್ಲಿ ಮಹತ್ವದ ಶೋಧನೆ ಮಾಡಿದ ಶ್ರೇಯಸ್ಸು ಆತನಿಗಿದೆ. ಆದರೆ, ವಿಕಾಸವಾದವೆಂದರೆ ಪ್ರಗತಿಯೇ ಎಂದು ಬಗೆಯಕೂಡದೆಂದು ಈತನ ಮತ. ಮಾನವರ ನೈತಿಕ ಅಧಃಪತನವನ್ನು ಕಂಡು ಸಿಡಿಮಿಡಿಗೊಂಡು ಈತನ ಬಾಯಿಯಿಂದ ಕೊನೆಕೊನೆಗೆ ತೀರ ಕಟುವಾದ ಅಭಿಪ್ರಾಯಗಳು ಹೊರಬಿದ್ದಿವೆ. 'ಮಾನವನಲ್ಲಾಗುತ್ತಿರುವ ವಿಕಾಸವೆಂದರೆ ವಿಶ್ವದ ಸಹಜ ವ್ಯಾಪಾರಕ್ಕೆ ಆತಂಕ. ಉಳಿದ ಪಶುಗಳಿಗಿಂತ ಮಾನವ ಒಂದು ವಿಪರೀತ. ಮಹಾಪಶು. ಏಕೆಂದರೆ ಈತನು ತನ್ನ ಅಕೃತ್ಯಗಳಿಗೆ ಬುದ್ಧಿಯ ಬೆಂಬಲ ಬೇರೆ ಪಡೆಯುತ್ತಾನೆ! (ಅನಾಚಾರಗಳ ಆಗರವಾಗಿ) ವಿಕಾಸವಾಗುತ್ತಿರುವ ಈ ಲೋಕವು ಯಾವುದೊಂದು ಧೂಮಕೇತುವಿನ ಆಘಾತಕ್ಕೆ ಏಕೆ ಒಳಗಾಗಲೊಲ್ಲದೋ! ಹಕ್ಸಲೆಯೊಡನೆ ದನಿಗೂಡಿಸುವ ಜನಗಳಿಲ್ಲದ ದೇಶವೇ ದೊರೆಯಲಿಕ್ಕಿಲ್ಲ. ರೂಸೋನ ಮತದಂತೆಯೂ ಆಧುನಿಕ ಪ್ರಗತಿಯು ಲೋಕವಿನಾಶಕಾರಿಯಾಗಿದೆ. ಹೊಸ ಹೊಸ ಶಾಸ್ತ್ರೀಯ ಸಂಶೋಧನಗಳಿಂದ ಅನೈಸರ್ಗಿಕತೆ ಬೆಳೆಯುತ್ತಿದೆ. ಸೃಷ್ಟಿಯ ವ್ಯಾಪಾರಗಳಿಗೆ ವಿರೋಧಿಸುವ ನಾಗರಿಕತೆಯು ಅನಾಗರಿಕತೆಯೇ ಸರಿ; ಎಂದು ಆತನ ಮತ. ಹಳ್ಳಿಗೂ ಅಲ್ಲ; ಬೇಗ ಕಾಡಿಗೇ ಮರಳಿರೆಂದು ಆತನ ಸಂದೇಶ. ಆದರೆ, ಕಾಡಿನಲ್ಲಾದರೂ ಆದರ್ಶ ಸಮಾಜವಿದೆಯೆಂಬ ರೂಸೋನ ಗ್ರಹಿಕೆ ಸಮರ್ಪಕವೆ? ರೂಸೋನ ಈ ಭಾವನೆಯು ತೀರ ನಿರಾಧಾರವಾದುದೂ ಕೇವಲ ಕಾಲ್ಪನಿಕವೂ ಆಗಿದೆ ಎಂದು ಆಫ್ರಿಕಾ, ಅಮೇರಿಕಾ, ಏಶಿಯಾ, ಆಸ್ಟ್ರೇಲಿಯಾ ಮೊದಲಾದ ಕಡೆಯ ಅರಣ್ಯನಿವಾಸಿ ತಂಡಗಳನ್ನು ಸಂದರ್ಶಿಸಿ, ಅವರಲ್ಲಿದ್ದುಕೊಂಡು, ಅವರ ಸ್ಥಿತಿಗತಿಗಳ ಸಂಪೂರ್ಣ ಅಭ್ಯಾಸಮಾಡಿದ ಒಬ್ಬರಲ್ಲ, ಇಬ್ಬರಲ್ಲ, ಎಲ್ಲ ಪ್ರವಾಸಿಗಳೂ ಒಕ್ಕೊರಲಿನಿಂದ ಹೇಳಿದ್ದಾರೆ. ಆದರ್ಶಸಮಾಜ, ಸಾಮಾಜಿಕ ಪ್ರಗತಿ ಅಥವಾ ವಿಕಾಸವೆಂಬುದು ಕೇವಲ ಕಾಲ್ಪನಿಕ, ಅಥವಾ ಅದೊಂದು ಭ್ರಮ; ಎಂದು ಸಮಾಜಶಾಸ್ತ್ರಜ್ಞರಲ್ಲಿ ಅನೇಕರ ಅಭಿಪ್ರಾಯವಿದೆ. ಮಾನವಶಾಸ್ತ್ರದ (Anthropology) ಸಂಶೋಧಕರ ಬೆಂಬಲವೂ ಇದಕ್ಕುಂಟು. ಪರಿವರ್ತನವೆಂಬರ್ಥದಲ್ಲಿ 'ಪ್ರಗತಿ' ಶಬ್ದವನ್ನು ಬಳಸುತ್ತಿದ್ದರೆ ಆಕ್ಷೇಪಣೆಯಿಲ್ಲ. ಆದರೆ, ವಿಕಾಸ ಅಥವಾ ಪ್ರಗತಿಯೆಂದರೆ ಪೂರ್ಣತೆಯ ಕಡೆಗೆ ಮುನ್ನಡೆಯೆಂಬ ಅಭಿಪ್ರಾಯವಿದ್ದರೆ ಅದು ಆಯುಕ್ತವೆಂದು ಇವರ ಮತ. ಏಕೆಂದರೆ ನಾಗರಿಕರೆನಿಸಿಕೊಂಬವರಲ್ಲಿಯೂ ದುರ್ಮಿಳವಾಗಿರುವ ಪ್ರೀತಿ, ವಿಶ್ವಾಸ, ತ್ಯಾಗಬುದ್ಧಿ ಇವು ಹಲವು ಕಾಡಾಡಿ ತಂಡಗಳಲ್ಲಿ ಇನ್ನೂ ಜೀವಂತವಾಗಿವೆ. ಇಂದು ಮಾನವರ ಬುದ್ಧಿ ವಿಕಾಸವಾಗಿದೆಯೆಂದು ಕೆಲರು ವಾದಿಸಬಹುದು. ಆದರೆ, ಪ್ರಾಥಮಿಕ ಸ್ಥಿತಿಯ ಮಾನವರಲ್ಲಿರುವ ಚಿತ್ರಕಶಕ್ತಿ, ಭಾವಸಾಮರ್ಥ್ಯವು ಬುದ್ಧಿಜೀವಿಗಳಲ್ಲಿ ಇಲ್ಲದಾಗುತ್ತದೆ. ಮಾನವನು ಒಂದನ್ನು ಗಳಿಸುವಷ್ಟರಲ್ಲಿ ಇನ್ನೊಂದನ್ನು ಕಳೆದುಕೊಳ್ಳುತ್ತಿದ್ದಾನೆ. ಮಹಾಕೋಶಗಳನ್ನು ರಚಿಸಿದ್ದಾನೆ. ಅಚ್ಚುಕೂಟಗಳ ಶೋಧದಿಂದ ಗ್ರಂಥಗಳು ಪ್ರಕಟವಾಗಿ ಬೇಕಾದಾಗ ಓದಲು ದೊರೆಯುವಂತಾಗಿದೆ. ಸರಿ; ಆದರೆ 'ಪುಸ್ತಕೇಷು ಚ ಯಾ ವಿದ್ಯಾ, ಪರಹಸ್ತಗತಂ ಧನಂ' ಏನು ಪ್ರಯೋಜನ? ಹಿಂದಿನವರ ಅಗಾಧ ಸ್ಮರಣಶಕ್ತಿ ಇಂದಿನವರಿಗಿದೆಯೆ? ತಲೆಯೊಳಗಿಂದ ಹೋಯ್ತು; ಪುಸ್ತಕದಲ್ಲಿ ಉಳಿಯಿತು! ಇದೇ ರೀತಿ ಇನ್ನುಳಿದ ವಿಷಯಗಳಲ್ಲೂ! ಇದೇನು ಪ್ರಗತಿಯೆ? ಒಂದನ್ನು ಕಳೆದುಕೊಂಡು ಇನ್ನೊಂದನ್ನು ದೊರಕಿಸಿದರೆ ಇದಕ್ಕೆ ವಿಕಾಸವೆನ್ನಲಾದೀತೆ? ಆದರೂ ಸಮಾಜವು ಪರಿಪೂರ್ಣತೆಯ ಕಡೆಗೇ ಸಾಗಿದೆ; ವಿಕಾಸಗೊಳ್ಳುತ್ತಲಿದೆಯೆಂದು ಪ್ರತಿಪಾದಿಸುವ ತಜ್ಞರೂ, ಸಮಾಜ-ಶಾಸ್ತ್ರಜ್ಞರೂ ಸ್ವಲ್ಪ ಜನರಿಲ್ಲ. ಅಲ್ಪರೂ ಅಲ್ಲ. ಉಪನಿಷತ್‌ಕಾಲದ ಮಹರ್ಷಿಗಳಿಗೂ ಈ ವಿಚಾರವು ಅಲ್ಪ ಸ್ವಲ್ಪ ಹೊಳೆಯದೆ ಇರಲಿಲ್ಲ. ಆದರೆ, ೩-೪ ಸಾವಿರ ವರುಷಗಳ ಹಿಂದಿನ ಬೂಜು (ಬುರುಸು) ಕಟ್ಟಿದ ಆ ಗ್ರಂಥಗಳೊಳಗಿನ ಮಾತು ಏತಕ್ಕೆ?

ಯುರೋಪಿನ ಸಂಸ್ಕೃತಿಯ ಆದಿಗುರು ಪ್ಲೇಟೋನ ಪ್ರತಿಭೆಯು ಪ್ರಜಾಪ್ರಭುತ್ವದ ಆದರ್ಶ ಚಿತ್ರವನ್ನು ಕಲ್ಪಿಸಿಕೊಳ್ಳದೆ ಇರಲಿಲ್ಲ. ಬಳಿಕ ಸಮಾಜವು ಎತ್ತಸಾಗಿದೆ, ಅಥವಾ ಸಾಗಬೇಕು; ಎಂಬುದರ ಸೂಚಕವಾಗಿ ಆದರ್ಶ ಕಲ್ಪನಾರಾಜ್ಯದ ವಿಚಾರವು ವಿಚಾರವಂತರ ತಲೆಯಲ್ಲಿ ಬೇರೂರಿಕೊಂಡಂತೆಯೆ ಆಯ್ತು. ರೂಸೋನಿಂದ ಆದರ್ಶ ಸಮಾಜದ ವಿಚಾರಕ್ಕೆ ಹೊಸದಾಗಿ ಪುಟದೊರಕಿತು. ಆತನ ವಿಚಾರದಿಂದ ಪ್ರಚೋದಿತನಾದ ಜರ್ಮನ್ ತತ್ವಜ್ಞ ಹೆಗೆಲ್ಲನು (೧೮೦೦) ಇತಿಹಾಸದ ಮೀಮಾಂಸೆಯನ್ನು ಮಾಡುವಾಗ ಅದನ್ನು ತರ್ಕಶುದ್ಧವಾಗಿ ವಿಶದೀಕರಿಸುವ ಪ್ರಯತ್ನಪಟ್ಟನು. ವಿಶ್ವಸಂಚಾಲಕ ಶಕ್ತಿಯ ಪ್ರೇರಣೆಯಿಂದ ಲೋಕವಿಕಾಸವು ಆಗುತ್ತಲಿದೆ; ಎಂಬ ಈತನ ಪರಿಣಾಮಕಾರಿಯಾದ ವಿವೇಚನೆಯ ಪ್ರಭಾವವು ಜಗತ್ತಿನ ಅನೇಕ ವಿದ್ವಾಂಸರನ್ನು ಮೋಹಿಸಿತು. ಕಾರ್ಲ ಮಾರ್ಕ್ಸನು (೧೮೪೫) ಹೆಗೆಲ್ಲನಿಂದ ಸ್ಫೂರ್ತಿಗೊಂಡನಾದರೂ ಒಂದು ಮುಖ್ಯ ವಿಚಾರದಲ್ಲಿ ಆತನಿಂದ ಭಿನ್ನನಾದನು. ಮಾರ್ಕ್ಸನ ಪರಿಸ್ಥಿತಿ ಮತ್ತು ಕಟು ಅನುಭವಗಳು ಆತನನ್ನು ನಿರೀಶ್ವರವಾದದತ್ತ ಸೆಳೆದುವು. ಆದರೂ ಇತಿಹಾಸದ ತಾತ್ವಿಕ ವಿವೇಚನೆಯಲ್ಲಿ ಹೆಗೆಲ್ಲನನ್ನು ಅನುಸರಿಸಿದ್ದೇ ಕಂಡುಬರುತ್ತದೆ. ಲೋಕ ವಿಕಾಸವು ಅನಿವಾರ್ಯವೆಂದು ಮಾರ್ಕ್ಸನ ನಿಶ್ಚಿತ ಸಿದ್ಧಾಂತವಿದೆ.

ಆದರೆ, ನಿರೀಶ್ವರವಾದಿಗಳು ಕ್ರಮವಾದ ಲೋಕವಿಕಾಸವು ಶಾಶ್ವತ ಸಿದ್ಧಾಂತವೆಂದು ಪ್ರತಿಪಾದಿಸುವುದು ಅಸಂಬದ್ಧವಾಗಿದೆ. ಲೋಕವನ್ನು ನಡುವೆ ನಾಶವಾಗಗೊಡದೆ ಪ್ರಗತಿಯ ದಾರಿಯಲ್ಲಿ ಸರಿಯಾಗಿ ನಡೆಸಿಕೊಂಡು ಹೋಗುವ ಹೊಣೆಯನ್ನು ಹೊತ್ತವರು ಯಾರಾದರೂ ಇರುವರೆಂದು ಗ್ರಹಿಸದೆ, ಲೋಕವಿಕಾಸವು ನಿಶ್ಚಿತವೆಂದು ಎದೆತಟ್ಟಿ ಹೇಳುವುದು ಸಾಹಸದ ಮಾತಲ್ಲವೆ? ನಡುವೆ ಥಕ್ಕನೆ ಪೃಥ್ವಿಯು ಯಾವುದೊಂದು ಬಾಲಚಿಕ್ಕೆಯ ಆಘಾತಕ್ಕೆ ಸಿಕ್ಕು ಪುಡಿಪುಡಿಯಾಗಲಿಕ್ಕಿಲ್ಲೆಂದು ಹೇಳಲು ಏನು ಆಧಾರ? ಜೋತಿರ್ವಿದರು ಆಗಾಗ ಇಂತಹ ಗಂಡಾಂತರಗಳನ್ನು ಇಂತಹ ಅಸಂಖ್ಯ ಸಂಕಟಗಳನ್ನು ದಿನಾಲು ಎದುರಿಸಬೇಕಾಗುತ್ತಿರುವಾಗ ಪೃಥ್ವಿಯ ಪ್ರಳಯವು ಯಾವ ಕ್ಷಣಕ್ಕೆ ಎಳಸೀತೆಂದು ಹೇಳಲಿಕ್ಕಾಗುವುದಿಲ್ಲ; ಎಂದು ಆಧುನಿಕ ಸರ್ವಶಾಸ್ತ್ರಜ್ಞರಾದ ಸೂಕ್ಷವಿಚಾರವಂತರೆಂದು ವಿಖ್ಯಾತರಾದ ಬರ್‌ಟರಾಂಡ ರಸೆಲ್ಲರ ಮತವಿಧೆ. ನಿಶ್ಚಿತವಾಗಿಯೂ ಲೋಕದ ವಿಕಾಸವು ಆಗುತ್ತಲೆ ಇದೆಯೆಂದು ನೆಮ್ಮುವುದಾದರೆ ಈಶಶಕ್ತಿಯು ಉಂಟೆಂದು ಗ್ರಹಿಸಲೇಬೇಕಾಗುತ್ತದೆ. ಆದರೆ ಮಾರ್ಕ್ಸನಿಗೆ ಮಾತ್ರ ತನ್ನ ಅಭಿಪ್ರಾಯದೊಳಗಿನ ಈ ವಿಸಂಗತಿಯ ಅರಿವು ಇದ್ದಿಲ್ಲ.

ದೇವರು ಉಂಟೊ ಇಲ್ಲವೊ ಎಂಬ ತೊಡಕಿನಲ್ಲಿ ಸಿಕ್ಕುಬೀಳುವುದು ಏತಕ್ಕೆ? ಕಣ್ಣಿಗೆ ಕಾಣದ ವಸ್ತುವಿನ ವಿಚಾರ ಅಪ್ರಸ್ತುತ. ಅದು ತಿಳಿಯದ ಅಥವಾ ಬಗೆಹರಿಯದ ವಿಷಯ. ದೇವರು ಇರಲಿ ಅಥವಾ ಬಿಡಲಿ, ಸಮಾಜ ವಿಕಾಸವಾಗುತ್ತಿರುವುದು ಮಾತ್ರ ಅನುಭವಗಮ್ಯವಾದ ತರ್ಕಶುದ್ಧ ಸಿದ್ಧಾಂತವೆಂದು ಹರ್‌ಬರ್ಟ್ ಸ್ಪೆನ್ಸರನು ಬಹುವಿಧವಾಗಿ ತನ್ನ ವಿಚಾರವನ್ನು ಮಂಡಿಸಿದ್ದಾನೆ. ಸ್ವಲ್ಪ ಕಾಲ ಮುಂಚೆ ಆಗಿಹೋದ ಕೊಮ್ಟೆ (೧೮೪೫) ಎಂಬ ಫ್ರೆಂಚ್ ಸಮಾಜಶಾಸ್ತ್ರಜ್ಞನಿಂದ ಸ್ಪೆನ್ಸರನು ಈ ವಿಚಾರದಲ್ಲಿ ಬೆಳಕು ಪಡೆದಿದ್ದನು. ಆದರೆ, ಡಾರ್ವಿನನು ಪ್ರಾಣಿಶಾಸ್ತ್ರದ ಸಂಶೋಧನೆಯಿಂದ ತನ್ನ ಸಿದ್ಧಾಂತವನ್ನು ಪ್ರತಿಪಾದಿಸುವ ಮೊದಲೇ ಸ್ಪೆನ್ಸರನು ತಾತ್ವಿಕ ದೃಷ್ಟಿಯಿಂದ ವಿಕಾಸವಾದದ ವಿಚಾರವನ್ನು ಮುಂಗಂಡು ವಿವರಿಸಿದ್ದನು. ತನ್ನ ವಿಚಾರಗಳನ್ನು ಪ್ರಚಾರಕೀ ಪದ್ಧತಿಯಲ್ಲಿ ತುಂಬ ಅರಳಿಸಿ ಸೊಗಸಾಗಿ ಬರೆವ ಕಲೆಯು ಸ್ಪೆನ್ಸರನಿಗೆ ಬಹಳ ಚೆನ್ನಾಗಿ ಸಾಧಿಸಿತ್ತು. ಜಗತ್ತಿನ ಎಲ್ಲ ದೇಶಗಳಲ್ಲೂ ಹಲವು ಅನುಯಾಯಿಗಳು ದೊರೆತರು. ಸಮಾಜವು ಪರಿಪೂರ್ಣತೆಯ ಶಿಖರಕ್ಕೆ ಮುಟ್ಟುವ ಒಂದು ದಿನವು ಬರಲಿದೆ, ಬಂದೇ ಬರುವುದು ಎಂದು ಹಲವರು ನಿಶ್ಚಿತವಾಗಿ ನೆಮ್ಮಿದರು.

ಆದರೆ, ಇಷ್ಟರಲ್ಲಿ, ವಿಕಾಸವಾದಿಗಳಲ್ಲಿ ಇನ್ನೊಂದು ಸಶಕ್ತಪಂಥವು ತಲೆಯೆತ್ತಿತು. ಡಾರ್ವಿನನ ಸಮಕಾಲೀನನಾದ ಗಾಲ್ಟನ್ (೧೮೬೫) ಎಂಬವನು ವಿಕಾಸವಾದದೊಡನೆ ಸುಪ್ರಜಾನಿರ್ಮಾಣದ ವಿಚಾರವನ್ನು ಜನರೆದುರಿಗೆ ಇಟ್ಟನು. ಆದರೆ, ಇದಕ್ಕೂ ಮೊದಲೆ ಮಾಲಥೂಸನು ಇನ್ನೊಂದು ದೃಷ್ಟಿಯಿಂದ ಈ ವಿಚಾರದ ಕಡೆಗೆ ಜನರ ಗಮನವನ್ನು ಸೆಳೆದಿದ್ದನು (೧೮೦೩). ರೂಸೋ, ಗೋಡ್ವಿನ್ ಪ್ರಭೃತಿಗಳು ಆದರ್ಶ ಸಮಾಜದ

ಭಾವನಾತ್ಮಕ ಚಿತ್ರಗಳನ್ನು ಜನರೆದುರು ಹಿಡಿದು ಸಮಾಜವನ್ನು ಕಾಲ್ಪನಿಕ ಭ್ರಾಂತಿಯಲ್ಲಿ ನೂಕುತ್ತಿದ್ದಾರೆಂದು ಕಂಡು ಬಂದು, ಆ ತಪ್ಪುಭಾವನೆಯನ್ನು ತಿದ್ದುವುದು ತನ್ನ ಕರ್ತವ್ಯವೆಂದು ಬಗೆದು ಮಾಲಥೂಸನು ತನ್ನ ಪ್ರತಿವಿಚಾರವನ್ನು ಹಲವು ಆಧಾರಗಳೊಂದಿಗೆ ಗ್ರಂಥರೂಪದಲ್ಲಿ ಪ್ರಕಟಿಸಿದನು. ಲೋಕನಿಂದೆಯನ್ನು ಲೆಕ್ಕಿಸದೆ ಸತ್ಯಪಕ್ಷಪಾತಿಯಾಗಿ ತನ್ನ ಮತವನ್ನು ಮಂಡಿಸುವ ಎದೆಗಾರಿಕೆಯನ್ನು ತೋರಿದನು. ಹುಟ್ಟಿದ ಮಕ್ಕಳನ್ನು ಚೆನ್ನಾಗಿ ಜೋಪಾನಮಾಡಿ ಅವರನ್ನು ಸರಿಯಾಗಿ ತರಬೇತುಗೊಳಿಸಲು ಆವಶ್ಯಕವಾದ ಆರ್ಥಿಕ ಪರಿಸ್ಥಿತಿಯಿಲ್ಲದವರ ಸಂತತಿ-ನಿರ್ಮಾಣ-ಕ್ರಿಯೆಯು ಅವ್ಯಾಹತವಾಗಿ ಸಾಗಿದರೆ, ಆದರ್ಶಸಮಾಜ, ಸಮಾಜವಿಕಾಸ ಎಂಬಿವೆಲ್ಲವೂ ಕನಸಿನ ರಾಜ್ಯಗಳೇ ಸರಿ. ಸಮಾಜದಲ್ಲಿ ಧನವಂತರಿಗಿಂತಲೂ ದರಿದ್ರರಿಗೆ ಮಕ್ಕಳು ಹೆಚ್ಚು. ಇದೇ ಕ್ರಮವು ಅನಿರ್ಬಂಧವಾಗಿ ಸಾಗಿದಲ್ಲಿ ಸಮಾಜದ ಅಭಿವೃದ್ಧಿಯ ಬದಲು ಅವನತಿಯೇ ನಿಶ್ಚಿತ. ಈ ಜೀವನಕಲಹದಲ್ಲಿ ಪ್ರಗತಿಗೆ ಆರ್ಥಿಕ ಅನುಕೂಲತೆಯು ಮೊದಲು ಬೇಕು; ಎಂದು ಮುಂತಾಗಿ ಅರ್ಥಶಾಸ್ತ್ರದ ಬೆಂಬಲದಿಂದ ಸುಪ್ರಜಾನಿರ್ಮಾಣಕ್ಕೆ ಆವಶ್ಯಕ ಸಂಗತಿಯನ್ನು ಮಾಲಥೂಸನು ವಿವರಿಸಿದ್ದನು. 'ಜೀವನಕಲಹ' ಎಂಬ ಪದಪ್ರಯೋಗವನ್ನು ಡಾರ್ವಿನನು ಮಾಲ್ಥೂಸನಿಂದಲೇ ಎತ್ತಿಕೊಂಡದ್ದು. ಜೀವನ ಕಲಹದಲ್ಲಿ ಬಲಿಷ್ಠರೇ ಬಾಳಬಲ್ಲರು. ಅಯೋಗ್ಯರು ಅಳಿಯಲೇ ಬೇಕು, ಎಂದು ಡಾರ್ವಿನನು ತನ್ನ ವಿಕಾಸವಾದದ ಪ್ರತಿಪಾದನೆಯಲ್ಲಿ ಸ್ಪಷ್ಟೀಕರಿಸಿದನು. ಮೆಂಡೆಲ್ಲನ ಸಂಶೋಧನಗಳಿಂದ ಆನುವಂಶಿಕ ಸಂಸ್ಕಾರಗಳ ಕೆಲವು ನಿಶ್ಚಿತ ನಿಯಮಗಳು ಗೊತ್ತಾದುವು.

ಗಿಡಗಳ ಕಸಿ (ಕಲಮ) ಮಾಡುವುದರಿಂದ ಇಷ್ಟವಾದ ಹೊಸಜಾತಿಯನ್ನು ಸೇರ್ಪಡಿಸಿಕೊಳ್ಳಲು ಸಾಧ್ಯವಾಗಿದೆ. ಶಾಸ್ತ್ರೀಯ ರೀತಿಯಿಂದ ಸಂಗೋಪನಮಾಡಿ ಯೋಗ್ಯವಾದ ಹೆಣ್ಣುಗಂಡಿನ ಕೂಟದಿಂದ ದನ ಹಾಗೂ ಬೇರೆ ಪ್ರಾಣಿಗಳಲ್ಲಿ ತಮಗೆ ಎಂತಹದು ಬೇಕೊ ಅಂತಹ ತಳಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಸಾಧ್ಯವಾಗಿದೆ. ಇದೇ ತೆರನಾಗಿ ಇನ್ನು ಶ್ರೇಷ್ಠ ಮಾನವ ಕುಲವನ್ನು ನಿರ್ಮಾಣ ಮಾಡಲು ಶಕ್ಯವಿದೆ; ಎಂದು ಹುಮ್ಮಸಗೊಂಡು ಗಾಲ್ಟನನು ತನ್ನ ಮತಪ್ರತಿಪಾದನೆಗೆ ಆರಂಭಿಸಿದನು(೧೮೩೫). ಜರ್ಮನಿಯ ನೀಟ್ಸೆಯು ತನ್ನ ತೇಜೋವಾಣಿಯಿಂದ 'ಬಲಂ ಉಪಾಸ್ವ' ಎಂದು ಪ್ರಚೋದನೆಗೆ ಆರಂಭಿಸಿದನು(೧೮೮೨). ವಿಕಾಸವಾದದ ಸಿದ್ಧಾಂತಕ್ಕನುಸರಿಸಿ ಇನ್ನು ಅತಿಮಾನವನ (Superman) ಯುಗವು ಬರುವುದು ನಿಶ್ಚಿತ. ದಯಾ, ಕರುಣೆಯಂತಹ ಕೆಲವು ಆತ್ಮಹಾನಿಕರವಾದ ಭಾವನೆಗಳಿಗೆ ಇಂಬುಗೊಟ್ಟು ಮಾನವ ಸಂತತಿಯು ತನ್ನ ಪ್ರಗತಿಗೆ ತಾನೇ ಬಾಧೆಯನ್ನು ತರುತ್ತಲಿದೆ. ಮಾನವಕುಲದ ಏಳ್ಗೆಯಲ್ಲಿ ದೃಷ್ಟಿಯನ್ನಿಟ್ಟು ನಿರ್ದಾಕ್ಷಿಣ್ಯವೃತ್ತಿ ಪ್ರಸಂಗ ಬಂದಲ್ಲಿ ಕಠೋರತೆ, ಕ್ರೂರತೆಯನ್ನು ಸ್ವೀಕರಿಸಬೇಕು. ಅಯೋಗ್ಯರಾದವರ ಸಂತಾನ ವೃದ್ಧಿಯಾಗದಂತೆ ಉಪಾಯಗಳನ್ನು ಕೈಕೊಂಬುವುದು ಅಭಿವೃದ್ಧಿಯನ್ನು ಹಾರಯಿಸುವ ಸಮಾಜದ ಕರ್ತವ್ಯವೇ ಆಗಿದೆ. ತೋಟಿಗನು ಹುಳಹತ್ತಿದ ಸಸಿಯನ್ನು ಉಳಿಯಗೊಡುವನೆ? ದಯೆ-ಕರುಣೆಯ ಹೆಸರಿನಲ್ಲಿ ಅಂಗಹೀನರನ್ನೂ, ರೋಗಿಗಳನ್ನೂ, ಹುಚ್ಚರನ್ನೂ, ತಲೆತಿರುಕ ತಿಳಿಗೇಡಿಗಳನ್ನು ಉಳಿಯಗೊಡುವುದು, ಅವರ ತಳಿಬೆಳೆಯಗೊಡುವುದು ಅನ್ಯಾಯ; ಇದೇ ಅನೀತಿ. ಅತಿಮಾನವರ ಆಗಮನಕ್ಕೆ ಅಂತಕವನ್ನುಂಟುಮಾಡುವ ಎಲ್ಲ ಬಗೆಯ ಅಯೋಗ್ಯರ ಹುಟ್ಟಡಗಿಸುವ ಕೆಲಸವು ಲೋಕಕಲ್ಯಾಣಕಾರಕ ಕಾರ್ಯವೇ ಆಗಿದೆ. ಶಸ್ತ್ರಕ್ರಿಯೆಯಿಂದ ನಪುಂಸಕರನ್ನು ಮಾಡಿ, ಇಲ್ಲವೆ ಸಂತತಿಯನ್ನು ಪರಿಮಿತಿಗೊಳಿಸಿ ಮಾನವಲೋಕವನ್ನು ಅಧಃಪಾತದಿಂದ ಉಳಿಸುವುದು ಸರಕಾರದ ಕರ್ತವ್ಯವಾಗಿದೆ ಎಂಬ ನೀಟ್ಸೆ, ವೀರಪೂಜಕ ಕರ್ಲಾಯಿಲ್‌ರ ಓಜಸ್ವೀ ಪ್ರಚಾರದ ಪರಿಣಾಮದಿಂದ ವಾತಾವರಣದಲ್ಲಿ ವಿದ್ಯುತ್ ಸಂಚಾರವಾದಂತಾಯ್ತು. ಜರ್ಮನಿಯಲ್ಲಂತೂ ನವಚೈತನ್ಯವು ನರನರಗಳಲ್ಲಿ ಸಂಚರಿಸಹತ್ತಿತು. ಶಕ್ತಿಪೂಜೆಯ ಫಲವಾಗಿ ಜರ್ಮನಿಯಲ್ಲಿ ಪ್ರಚಂಡ ವೀರ್ಯವು ಕಾಣಿಸಿಕೊಂಡಿತು. ಕೈಸರ್ ಮತ್ತು ಹಿಟ್ಲರರು ಅದರ ವ್ಯಕ್ತ ಪ್ರತೀಕ.

ವಿಕಾಸವಾದದ ಆಧಾರದಿಂದ ಬಲಿಷ್ಠರೇ ಬದುಕಬಲ್ಲರು; 'ಬಲಂ ಉಪಾಸ್ವ' ಎಂಬ ತತ್ವದ ಪ್ರಚಾರ, ಸುಪ್ರಜಾನಿರ್ಮಾಣಶಾಸ್ತ್ರದ ಉದಯ. ಇವೆಲ್ಲ ಕಾರಣಗಳಿಂದ ಜನಾಂಗದಲ್ಲಿ ಶ್ರೇಷ್ಠ-ಕನಿಷ್ಠವೆಂಬ ದ್ವೈತಭಾವಕ್ಕೆ

ಪುಷ್ಟಿದೊರಕಿತು. ಜನಾಂಗವಾದವು ತಲೆಯೆತ್ತಿತು. ಬಿಳಿಯರೇ ಶ್ರೇಷ್ಠರು. ಆರ್ಯ (ಜರ್ಮನ) ಜನಾಂಗವೇ ಶುದ್ಧ ವೀರ್ಯದ ಹುಟ್ಟುಹಿರಿಮೆಯುಳ್ಳ ಕುಲ. ಕುಲೀನರಾದ ಇವರಿಗೆ ಮಾನವ ಲೋಕವನ್ನು ಆಳುವ ದೇವದತ್ತ ಹಕ್ಕು ಉಂಟು; ಎಂದು ಮುಂತಾದ ಅನುಕೂಲಸಿಂಧುವಿನ ಪ್ರಚಾರಕ್ಕೆ ಯುರೋಪಿಯನರಿಗೆ ಎಡೆದೊರೆತಿತು. ಬಿಳಿಯರು ಏಶಿಯಾದ ಜಗತ್ತಿನ ಎಲ್ಲ ಭಾಗಗಳಲ್ಲಿ ಹೋಗಿ ನೆಲೆಸಿ, ಅಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿ ಮೊದಲೆ ಮೆರೆಯುತ್ತಲಿದ್ದರು. ಅವರ ಆ ಪರಾಕ್ರಮಕ್ಕೆ ನಿಸರ್ಗದ ಬೆಂಬಲವೂ ಉಂಟೆಂಬ ತತ್ವದ ಪ್ರಚಾರಮಾಡಿ, ಪರರನ್ನು ಆಕ್ರಮಿಸುವುದು ಅನ್ಯಾಯವಲ್ಲವೆಂದು ಸಿದ್ಧಪಡಿಸಲಾಯಿತು. ಆಫ್ರಿಕಾ, ಆಸ್ಟ್ರೇಲಿಯಾ, ಅಮೇರಿಕಾ ಮೊದಲಾದ ಕಡೆಗೆ ಕಾಲುಚಾಚಿ, ಅಲ್ಲಿಯ ಮೂಲನಿವಾಸಿಗಳನ್ನು ಬೇಟೆಯಾಡಿ ನಾಶಮಾಡುವುದಕ್ಕೂ ಶಾಸ್ತ್ರಾಧಾರವು ದೊರೆತಿತು. ಬಿಳಿಯರು ಯುರೋಪಿನ ತಮ್ಮ ಮನೆಮಾರುಗಳನ್ನು ತೊರೆದು ಸಾವಿರಾರು ಮೈಲು ಪ್ರವಾಸ ಮಾಡಿ, ಪ್ರಯಾಸಪಟ್ಟುಕೊಂಡು ಬಂದು, ಭಾರತಾದಿ ದೇಶಗಳಲ್ಲಿ ಅಲ್ಲಿಯ ಜನರ ಉದ್ಧಾರಕ್ಕಾಗಿಯೇ ರಾಜ್ಯಮಾಡುತ್ತಿರುವರೆಂದು ತಿಳಿಗೇಡಿಗಳಾದ ದೇಸಿಗರಿಗೆ ಬಿಂಬಿಸಿ ಬ್ರಿಟಿಶರೂ ಬಿಳಿಯರೂ ಆಕ್ರಮಣಶೀಲರೆಂಬ ತಪ್ಪು ಭಾವನೆಗೆ ಎಡೆಗೊಡಬಾರದೆಂದು ಉಪದೇಶಿಸಲಾಗುತ್ತಿತ್ತು.

ಸುಪ್ರಜಾನಿರ್ಮಾಣ ಶಾಸ್ತ್ರದ ನೆರವಿನಿಂದ, ಆದರ್ಶರಾದ ಶ್ರೇಷ್ಠ ಮಾನವರನ್ನು ನಿರ್ಮಾಣ ಮಾಡುವ ತಂತ್ರವು ನಿಶ್ಚಿತವಾಗಿ ಗೊತ್ತಾಗುವುದೆಂಬ ಆಶಾವಾದವು ಹಲವರಲ್ಲಿ ದೃಢವಾಯಿತು. ಸೌಂದರ್ಯ, ಆರೋಗ್ಯ, ಬುದ್ಧಿ, ಶಕ್ತಿಗಳೆಲ್ಲವೂ ಒಂದೆಡೆಗೆ ಸಮನ್ವಯಗೊಂಡಿರುವ ಮಾನವ ಸಮಾಜವು ಇನ್ನು ಬೇಗನೆ ಕಾಣಿಸಿಕೊಳ್ಳುವುದೆಂದು ಕನಸು ಕಂಡವರೂ ಉಂಟು. ಆದರೆ, ಮನಸ್ಸು ಅಥವಾ ಬುದ್ಧಿಯಾಗಲಿ, ಶಾರೀರಿಕ ಗುಣಗಳಾಗಲಿ ಮುಂದಿನ ಸಂತಾನಕ್ಕೆ ನಿಶ್ಚಿತವಾಗಿಯೂ ಎಷ್ಟರ ಮಟ್ಟಿಗೆ ಬರುವುವು ಎಂಬುದರ ಲೆಕ್ಕವು ಇನ್ನೂ ಸರಿಯಾಗಿ ಗೊತ್ತಾಗಿಲ್ಲ. ಈ ವಿಷಯದಲ್ಲಿ ಜಾರ್ಜ್ ಬನಾರ್ಡ್ ಶಾನ ಒಂದು ಸಂವಾದ ಸುಪ್ರಸಿದ್ಧವಿದೆ. ಶಾನ ಅದ್ಭುತ ಪ್ರತಿಭೆಗೆ ಮೋಹಿತಳಾದ ಓರ್ವ ಫ್ರೆಂಚ ರಮಣಿಯು ಆತನಿಗೆ ಕಾಗದ ಬರೆದು ತನ್ನನ್ನು ಮದುವೆಯಾಗಲು ಕೇಳಿಕೊಂಡಳು. ನೀವು ಪ್ರತಿಭಾಶಾಲಿ. ನಾನು ಲೋಕೋತ್ತರ ಸುಂದರಿ. ನಿಮ್ಮಿಬ್ಬರ ಸಮಾಗಮದಿಂದ ಚೆಲುವು ಮತ್ತು ಚದುರು ಒಂದೆಡೆಯಲ್ಲಿ ಮೈಗೊಂಡ ಆದರ್ಶ ಶ್ರೇಷ್ಠಸಂತಾನವು ಲೋಕಕ್ಕೆ ದೊರೆಯುವುದು. ಶ್ರೇಷ್ಠ ಜನಾಂಗದ ಆಗಮನದ ವಿಚಾರದಲ್ಲಿ ಇರುವ ನಿನ್ನ ಕನಸು ನನಸಾದೀತೆಂದು ಬಿನ್ನವಿಸಿಕೊಂಡಳು. ಶಾನು ತನ್ನ ಲೋಕವಿಲಕ್ಷಣ ರೀತಿಯಲ್ಲಿ ಅವಳಿಗೆ ಕೊಟ್ಟ ಉತ್ತರವು ಮನನೀಯವಾಗಿದೆ. ನಿನ್ನ ಬಯಕೆಯೇನೊ ಸರಿ; ಆದರೆ, ನನ್ನ ರೂಪವಿಹೀನ ಶರೀರ ಮತ್ತು ನಿನ್ನ ಬುದ್ಧಿವಿಹೀನ ತಲೆ ಜೊತೆಗೂಡಿದ ಶಿಶುವು ಹುಟ್ಟಲಿಕ್ಕಿಲ್ಲವೆಂದು ಯಾರು ಆಶ್ವಾಸನಕೊಡಬಲ್ಲರು?' ಗಂಡುಹೆಣ್ಣಿನ ಗುಣಾವಗುಣಗಳಲ್ಲಿ ಮುಂದಿನ ಪೀಳಿಗೆಯಲ್ಲಿ ಇಂತಹವೇ ಬಂದು ಸೇರುವುವೆಂಬ ನಿಶ್ಚಿತಿಯಿಲ್ಲ. ಅವು ಬೇಕಾದ ಪ್ರಮಾಣದಲ್ಲಿ ಬೆರೆತುಕೊಳ್ಳುವುವು. ಮನುಷ್ಯೇತರ ಪ್ರಾಣಿಗಳಲ್ಲಿ ತಮಗೆ ಬೇಡವಾದ ಗುಣರೂಪಗಳ ಮರಿಗಳನ್ನು ನಾಶಮಾಡಿ ಅವುಗಳ ತಳಿ ಬೆಳೆಯದಂತೆ ಮಾಡಲು ಸಾಧ್ಯವಿದೆ. ಮಾನವ ಸಮಾಜದಲ್ಲಿ ಇದಕ್ಕೆ ಅವಕಾಶವಿಲ್ಲ.

ಸುಪ್ರಜಾಜನನಕ್ಕೆ ತಕ್ಕವರೆಂಬ ಕಾರಣದಿಂದಲೇ ಆದರ್ಶ ದೇಹಶಕ್ತಿ ಮತ್ತು ಧೀಶಕ್ತಿಯ ಭಿನ್ನಲಿಂಗದ ಎರಡು ಆಸಾಮಿಗಳನ್ನು ಯಾವುದೇ ಪ್ರದೇಶದಿಂದ ಶೋಧಿಸಿತಂದು ಅಂತಹರ ಸಂತಾನಾಭಿವೃದ್ಧಿಯನ್ನು ಮಾಡಬೇಕೆಂದರೆ, ಮಾನವನ ಮನಸ್ಸು-ಆತನ ಪೂರ್ವ ಸಂಸ್ಕಾರಾದಿಗಳು ಈ ಬಗೆಯ ಕೂಟಕ್ಕೆ ಅಡ್ಡಬರುತ್ತವೆ. ಅಮೇರಿಕೆಯ ತಜ್ಞರು ಹುಡುಕಿದ 'ಕುಂಭಸಂಭವ'ರ ಯೋಜನೆಯಿಂದ ಮೇಲಣ ತೊಂದರೆಯು ಕೆಲಮಟ್ಟಿಗೆ ದೂರವಾಗುವಂತಿದೆ. ಆದರ್ಶಪುರುಷರಿಂದ ವೀರ್ಯದಾನವನ್ನು ಪಡೆದು ಅದನ್ನು ನಳಿಕೆಗಳಲ್ಲಿ ಸಂಗ್ರಹಿಸಿ ಕಾದಿಡುವುದು, ಆಧುನಿಕ ಸಂಶೋಧನಗಳಿಂದ ಶಕ್ಯವಾಗಿದೆ. (ಇದೇ ತೆರನಾಗಿ ರಕ್ತವನ್ನು ಸಂಗ್ರಹಿಸಿ ಇಡಲಾಗುತ್ತಿದೆ) ಈ ವೀರ್ಯವನ್ನು ತಕ್ಕ ಸ್ತ್ರೀಯರಿಗೆ ನೀಡಿದರೆ ಇಷ್ಟ ಸಂತತಿಯನ್ನು ಪಡೆಯುವುದು ಅಸಾಧ್ಯವಲ್ಲ. (ಪರ)ಪುರುಷನ ಗಸಣಿಯಿಲ್ಲದೆ ಸ್ತ್ರೀಯು ನಿರಾತಂಕವಾಗಿ ಸಂತಾನಕ್ಕಾಗಿ ಆದರ್ಶ ವೀರ್ಯವನ್ನು ಧಾರಣಮಾಡುವ ಅನುಕೂಲತೆಗಳು

ಸಿದ್ಧವಾಗಿವೆ. ರಾಷ್ಟ್ರೀಯ ಉನ್ನತಿಯ ದೃಷ್ಟಿಯಿಂದ ಅಥವಾ ಮಾನವ ಕೋಟಿಯ ಕಲ್ಯಾಣಕ್ಕಾಗಿ ಆದರ್ಶ 'ಕುಂಭಸಂಭವ'ರನ್ನು ಬೆಳೆಯಿಸುವ ಮಹಾಯೋಜನೆಯನ್ನೊಂದು ಯಾವುದೇ ರಾಷ್ಟ್ರೀಯ ಸರಕಾರವು ಇನ್ನು ಮುಂದೆ ಕೈಕೊಳ್ಳುವುದು ತೀರ ಅಸಂಭವವಲ್ಲ. ಉದಾತ್ತ ಧ್ಯೇಯದತ್ತ ಗಮನಕೊಟ್ಟು ವಿಚಾರಿಗಳಾದ ಅನೇಕ ಹೆಂಗಳೆಯರು ಲೋಕೋದ್ಧಾರಕ್ಕಾಗಿ ಈ ತೆರನಾದ ತಾಯ್ತನದ ಹೊಣೆಯನ್ನು ಹೊರಲು ಸ್ವಾರ್ಥತ್ಯಾಗ ಪೂರ್ವಕವಾಗಿ ಸಿದ್ಧರಾಗಲೂಬಹುದು. ಮಾನವ ಸಮಾಜದ ಪ್ರಗತಿಗಾಗಿ ಹೆರಿಗೆಯ ಕಷ್ಟಗಳನ್ನು ಆನಂದದಿಂದ ಸ್ವಾಗತಿಸಲು ಮುಂದೆ ಬಂದ ತ್ಯಾಗವೀರ ಮಹಿಳೆಯರಿಗೆ ರಾಷ್ಟ್ರೀಯ ಸರಕಾರವು ಶಿಶುಸಂಗೋಪನದ ಎಲ್ಲ ಬಗೆಯ ಸೌಕರ್ಯಗಳನ್ನು ಒದಗಿಸಿಕೊಡಬಹುದು. ಈ ಬಗೆಯಾಗಿ ಶ್ರೇಷ್ಠ ಮಾನವ ಸಮಾಜವೆಂದೂ ನಿರ್ಮಾಣವಾಗುವುದು ಅಶಕ್ಯವೇ? ಆದರೆ ಇಲ್ಲಿ ಎರಡು ಬಗೆಯ ಸಂದೇಹಗಳು ತಲೆದೋರುತ್ತವೆ. ವಿಖ್ಯಾತ ಪ್ರಾಣಿಶಾಸ್ತ್ರಜ್ಞರಾದ ಜೆ.ಬಿ.ಎಸ್. ಹಾಲ್ಡೆನ್ ಮೊದಲಾದವರ ಸಂಶೋಧನೆಯಿಂದ ಒಂದೇ ಬಗೆಯ ಪ್ರಾಣಿವರ್ಗದಲ್ಲಿ ಜನ್ಮದೂಡನೆಯೆ ಕೆಲವೊಂದು ವ್ಯತ್ಯಾಸಗಳು ಹುಟ್ಟಿಕೊಂಡು ಬರುತ್ತವೆಂದು ಸಿದ್ಧವಾಗಿದೆ; (ಮಾನವರ ಜೀವಶಕ್ತಿಯ ಮೂಲಭೂತ ಯೋಗ್ಯತೆಯು ಸರಿಸಮಾನವಾಗಿದೆ); ಎಂದು ತಾತ್ವಿಕವಾಗಿ ಗ್ರಹಿಸಿದರೂ, ಸಂಸಾರದಲ್ಲಿ ಅದು (ಜೀವವು) ವ್ಯಕ್ತವಾಗುವಾಗ ಅದಕ್ಕೆ ಹಲವು ಅಡೆತಡೆಗಳನ್ನು ಅನಿವಾರ್ಯವಾಗಿ ಎದುರಿಸಬೇಕಾಗುತ್ತದೆ ಎಷ್ಟೇ ಆದರ್ಶದೇಹವೆಂದರೂ ಅವರವರ ತಾಯ್ತಂದೆಗಳ ಭಿನ್ನಭಿನ್ನ ಆನುವಂಶಿಕ ಸಂಸ್ಕಾರಗಳು ವ್ಯಕ್ತಿವ್ಯಕ್ತಿಗಳಲ್ಲಿ ಅಸಮಾನತೆಗೆ ಜನ್ಮಕೊಡುತ್ತವೆ. ಎಲ್ಲರ ಆನುವಂಶಿಕ ಸಂಸ್ಕಾರಗಳು ಒಂದೇ ತೆರನಾದುವು ಇಲ್ಲದಿರುವದರಿಂದ, ಇರುವುದು ಅಶಕ್ಯವಾಗಿರುವುದರಿಂದ ವ್ಯಕ್ತಿ ವ್ಯಕ್ತಿಗಳಲ್ಲಿರುವ ತಾರತಮ್ಯವು ಎಂದೂ ಸಮೂಲ ನಾಶವಾಗಲಾರದು. ರೂಪು-ಗುಣ-ಬುದ್ಧಿಗಳಲ್ಲಿ ಸಮತಾವಾದವು ಡಾನಕ್ವಿಗ್ ಝೋಟತನವೇ ಸರಿ. ಯಾವುದೊ ಒಂದು ಚುಚ್ಚುಮದ್ದಿನಿಂದ ಎಲ್ಲರಿಗೂ ಸಮಾನ ರೂಪ-ಗುಣ-ಬುದ್ಧಿಗಳು ಪ್ರಾಪ್ತವಾಗುವಂತಹ ಔಷಧಿಯು ಸಿದ್ಧವಾಯ್ತೆಂದು ಒಂದರೆಗಳಿಗೆ ಕಲ್ಪಿಸುವ. ಸ್ವಾರ್ಥವೇ ಲೋಕದ ಮೂಲ ಸ್ವಭಾವವೆಂಬ ತತ್ತ್ವಜ್ಞಾನವು ಊರ್ಜಿತ ಸ್ಥಿತಿಯಲ್ಲಿರುವ ವರೆಗೆ ಈ ಬಗೆಯ ಶ್ರೇಷ್ಠಶಕ್ತಿಯ ಹೊಸ ಜನಾಂಗದಿಂದ ಲೋಕವಿಕಾಸದ ದಾರಿ ಸುಖಕರವಾಗಲಾರದು.

ಇತಿಹಾಸ-ಭೂಗೋಲ ಶಾಸ್ತ್ರದ ಸಂಶೋಧಕರಿಂದ ತಾರತಮ್ಯವಾದಕ್ಕೆ ಶಾಸ್ತ್ರೀಯ ಸ್ವರೂಪವು ಪ್ರಾಪ್ತವಾಗಿ ಇನ್ನೊಂದು ದಿಕ್ಕಿನಿಂದ ಶ್ರೇಷ್ಠಜನಾಂಗದ ವಿಚಾರಕ್ಕೆ ಪುಷ್ಟಿದೊರೆತಿತು. ಅಲ್ಲಲ್ಲಿಯ ಹವಾಮಾನ ಭೂಗುಣಕ್ಕೆ ಅನುಸರಿಸಿ ಒಂದೊಂದೆಡೆಯ ಪ್ರಾಣಿವನಸ್ಪತಿಗಳ ರಚನೆಯಿರುತ್ತದೆ. ಮಾನವ ಪ್ರಾಣಿಯೂ ಸೃಷ್ಟಿಯ ಅಂಗ. ಆದುದರಿಂದ ಒಂದೊಂದು ಪ್ರದೇಶದ ಜನಾಂಗಗಳ ಗುಣ ಸ್ವಭಾವಗಳು ಅಲ್ಲಿಯ ವಾತಾವರಣ ಆಹಾರಾದಿಗಳಿಂದ ನಿಶ್ಚಿತವಾಗಿಬಿಡುತ್ತವೆ. ತಂಪುನಾಡಿನ ಬಿಳಿಯ ಜನಾಂಗವು ಪುಷ್ಟ ಹಾಗೂ ಬಲಿಷ್ಠ; ಸೆಕೆನಾಡಿನವರು ಕರಿಯರು; ಕುಳ್ಳರು; ಕಿರುಕುಳರು. ಇವರ ದೇಹದಂತೆ ಮನಸೂ ಬುದ್ಧಿಯೂ ದುರ್ಬಲ........; ಎಂಬೀ ವಿಚಾರಗಳ ಗಾಳಿಯೆದ್ದಿತು. ಹೊಸ ಬಗೆಯ ದೈವವಾದವು ಲೋಕವನ್ನು ಆವರಿಸಿ, ಬಿಳಿಯರ ಹುಮ್ಮಸ್ಸು ಹಿಗ್ಗಿಗೆ ಕಾರಣವಾಯ್ತು. ಬಿಳಿಯರಲ್ಲದವರಲ್ಲಿ ನಿರಾಶೆ ನಿರುತ್ಸಾಹವನ್ನು ಹುಟ್ಟಿಸಿತು. ಮಾನವ ಜನಾಂಗದ ವಿಕಾಸ ಎಂಬುದರ ಅರ್ಥವು ಬಿಳಿಯರ ಏಳ್ಗೆ, ಎಂಬ ಗ್ರಹಿಕೆಯು ವ್ಯಾಪಿಸಿತು.

'ಸಾಕ್ಷಾತ್ ಶ್ರೀವಿಷ್ಣುವಿನ ಅವತಾರನೆನಿಸಿದ ಶ್ರೀರಾಮಚಂದ್ರನಿಗೆ ಸೀತೆಯನ್ನು ಮರಳಿ ಪಡೆವಲ್ಲಿ ಕಪಿಕುಲವು ನೆರವಾಯ್ತು. ಶ್ರೀ ಭಗವಂತನ ಕೃಪೆಗೆ ಪಾತ್ರರಾದ ಮಾನವರಿಗೆ ಲೋಕವನ್ನಾಳುವ ವರವನ್ನು ಶ್ರೀರಾಮಚಂದ್ರನು ಅನುಗ್ರಹಿಸಿದನು. ಬ್ರಿಟಿಶರಿಗೆ (ಬಿಳಿಯರಿಗೆ) ಭಾರತದ ಒಡೆತನವು ಈ ಕಾರಣದಿಂದಲೇ ದೊರೆತಿದೆ;" ಎಂದು ಹೇಳುವ ಭವಿಷ್ಯೋತ್ತರ ಪುರಾಣದ ವಾಕ್ಯಗಳೂ ಬೆಳಕಿಗೆ ಬಂದವು! ತ್ರಿಕಾಲದರ್ಶಿಗಳೂ ಅಪರೋಕ್ಷಜ್ಞಾನಿಗಳೂ ಆದ ಭಾರತೀಯ ಋಷಿವರರಿಂದ ಬಂದ ವೇದ ಪುರಾಣಾದಿಗಳಲ್ಲಿ ಯುರೋಪ, ಅಮೇರಿಕೆಯು ಮಾಡಿದ ಮತ್ತು ಮಾಡುವ ಯಾವುದೇ ಬಗೆಯ ಸಂಶೋಧನ ಹೊಸ ವಿಚಾರ ತತ್ವಗಳಿಗೆ ಆಧಾರವು ದೊರೆಯದೆ ಇರುವ ಸಂಭವವೇ ಇಲ್ಲ. ಕೆಲವಕ್ಕೆ ಆಧಾರ ಇನ್ನೂ ದೊರೆತಿಲ್ಲವಾದರೆ ಅದು ನಮ್ಮ ಜನಗಳ ಅಜ್ಞಾನ ಅಥವಾ

'ಅನಂತೋ ವೈ ವೇದಾಃ;' ಕೆಲವು ವೇದಗಳು ಕಳೆದುಹೋಗಿವೆ. ಅವು ಬಿಳಿಯರಿಗೆ ದೊರೆತಿರಲಿಕ್ಕೆ ಸಾಕು. ಇಲ್ಲವಾದರೆ ಅವರ ಜ್ಞಾನವು ಇಷ್ಟು ಅಭಿವೃದ್ಧಿ ಹೊಂದುತ್ತಿದ್ದಿಲ್ಲ. ಪೂರ್ಣಸತ್ಯವನ್ನು ಆಕಲನಮಾಡಿ ಸಾಕ್ಷಾತ್ಕರಿಸಿಕೊಂಬುವ ಸಾಮರ್ಥ್ಯವುಳ್ಳ ಆ ಪರಿಪೂರ್ಣ ಯುಗದಲ್ಲಿ ನಮ್ಮ ಆ ಗ್ರಂಥಗಳು ನಿರ್ಮಾಣವಾಗಿವೆ. ಕೃತಯುಗದ ಅಂತಹ ಆ ಪೂರ್ಣ ಜ್ಞಾನಿಗಳಾದ ಋಷಿಗಳ ಕುಲ ಹಿಂದೆ ಆಗಿಲ್ಲ; ಮುಂದೆ ಆಗುವಂತಿಲ್ಲ; ಎಂಬ ಇನ್ನೊಂದು ಬಗೆಯ ಜನಾಂಗವಾದ, ಮಾನವರ ಪರಿಣತ ಸ್ಥಿತಿಯ ಗ್ರಹಿಕೆಯು ಹಿಂದೂ ದೇಶದಲ್ಲಿ ತಲೆತಲಾಂತರಗಳಿಂದ ಸಾಗಿಬಂದುದು ಗೋಚವಾಗುತ್ತದೆ. ಈ ಬಗೆಯ ನೆಮ್ಮುಗೆಯು ಪಾರತಂತ್ರ್ಯದ ಘೋರವಾದ ಅಂಧಃಕಾರದೊಳಗಿಂದ ದಾರಿ ಸಾಗುವಾಗ ಭಾರತೀಯರಿಗೆ ಸ್ವತ್ವವನ್ನು ಕಾಯ್ದುಕೊಳ್ಳಲು ಉಪಯುಕ್ತವಾದುದೂ ನಿಜ. ಈ ಪ್ರಕಾರದ ಆತ್ಮವಿಶ್ವಾಸದ ಹುಚ್ಚು ಇದ್ದಿಲ್ಲವಾಗಿದ್ದರೆ ಮಹಮ್ಮದೀಯರ ಆಘಾತಕ್ಕೆ ಒಳಗಾಗಿ ಅಂತಹ ಭಯಾನಕ ಸಂಕಟಕ್ಕೀಡಾದ ಹಿಂದುತ್ವವು ಇಂದು ಜೀವದಿಂದ ಉಳಿಯುತ್ತಿದ್ದಿಲ್ಲ. ಬ್ರಿಟಿಶರ ಆಡಳಿತದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಆಕರ್ಷಣಕ್ಕೂ ಪೂರ್ಣ ಬಗ್ಗದಿರಲು ಜನದೊಳಗಿನ ಈ ಬಗೆಯ ನೆಚ್ಚಿಕೆಯೆ ಮುಖ್ಯ ಕಾರಣ.

ಈವರೆಗೆ ವಿವರಿಸಿದ ಮೇರೆಗೆ ಲೋಕದಲ್ಲಿ ಪ್ರಗತಿವಾದದ ಕ್ರಿಯೆ ಪ್ರತಿಕ್ರಿಯೆಗಳು ನಡೆದಿರಲು, ಥಿಯಾಸಫಿಯವರು ತಮ್ಮ ರೀತಿಯಲ್ಲಿ ಈ ವಿಚಾರದ ಬೆಳವಣಿಗೆಗೆ ತಮ್ಮ ಒಂದು ಕಾಣಿಕೆಯನ್ನು ಸಲ್ಲಿಸಿದರು. ಮಾನವರ ಪ್ರಗತಿಯ ಇನ್ನು ಮುಂದಿನ ಘಟ್ಟವೆಂದರೆ, ದೇವಮಾನವ ಸಮಾಜದ ಉದಯ, ಎಂದು ಆ್ಯನಿಬೆಸಂಟ್ ಅವರು ತಮ್ಮ ದಿವ್ಯಸಂದೇಶವನ್ನು ಅರುಹಿದರು. ಋಷಿಗಳ ಅವತಾರವಾಗಲಿದೆ. ಮೈತ್ರೇಯ ಮುನಿಯು ಕೃಷ್ಣಮೂರ್ತಿಯೆಂಬ ಬಾಲಕನಲ್ಲಿ ಪ್ರವೇಶಿಸಲಿದ್ದಾನೆ. ಈ ಬಾಲಕನೇ ಸತ್ಯದ್ರಷ್ಟಾರನಾಗಿ ನಾಳಿನ ಯುಗದ ನೇತಾರನಾಗುವನೆಂದು ಸಾರಿದರು. ಲೋಕವು ಕೃಷ್ಣಮೂರ್ತಿಯ ದಿವ್ಯಾಗಮನವನ್ನು ಉತ್ಸುಕತೆಯಿಂದ ಎದುರು ನೋಡಲಾರಂಭಿಸಿತು. ಸತ್ಯದ ಸಾಕ್ಷಾತ್ಕಾರವನ್ನು ಪಡೆವ ದೇವಮಾನವರ ಸಂಘ ನಿರ್ಮಾಣದ ಪೂರ್ವ ಸಿದ್ಧತೆಯೂ ಆಯ್ತು. ಆದರೆ, ಕೃಷ್ಣಮೂರ್ತಿಯವರು ಮುಂದೆ ತಮ್ಮ ಅಮೋಘ ವಿಚಾರದಿಂದ ಮಾಡಿದ ಪವಾಡವೇ ಬೇರೆ! ಲಕ್ಷಾವಧಿ ರೂಪಾಯಿಗಳ ವಾರ್ಷಿಕ ಉತ್ಪನ್ನಬರುವ ಆಸ್ತಿಯ ವೈಭವವನ್ನೂ ಯುರೋಪ, ಅಮೇರಿಕಾ ಆಸ್ಟ್ರೇಲಿಯಾದಿ ಪಶ್ಚಿಮಾತ್ಯ ದೇಶದ ಮಹಾ ಮಹಾ ವ್ಯಕ್ತಿಗಳಿಂದ ಶಿಷ್ಯರೆಂದು ದೊರೆಯುತ್ತಿದ್ದ ಪಾದಸೇವೆಯ ಸೌಭಾಗ್ಯವನ್ನೂ ಕಾಲಕಸಕ್ಕಿಂತ ಕಡಿಮೆಯೆಂಬಂತೆ ಎಲ್ಲದಕ್ಕೂ ತ್ಯಾಗಪತ್ರವನ್ನು ಬರೆದುಕೊಟ್ಟರು. ಸತ್ಯದ ಗುತ್ತಿಗೆಯು ಒಂದು ವ್ಯಕ್ತಿಗೆ ದೊರೆತಿದೆ, ಒಂದು ವ್ಯಕ್ತಿಯ ಕೈಗೆ ಸಿಕ್ಕಿದೆಯೆಂದು ಬಗೆಯುವುದು ಸತ್ಯದ ಅಪಲಾಪ; ಸತ್ಯದ ಅಪಮಾನ. ಯಾವ ಪಕ್ಷದ ಪಕ್ಷಪಾತವೂ ಸತ್ಯಕ್ಕೆ ಇಲ್ಲ. ವ್ಯಕ್ತಿಗಳು ತಮ್ಮ ಪರಿಶ್ರಮದಿಂದ ಸದಾ ಸತ್ಯದ ಅನುಸಂಧಾನದಲ್ಲಿದ್ದು ಅದನ್ನು ಅರಿತುಕೊಳ್ಳಲು ಸಾಧನ ನಡೆಸಬೇಕಲ್ಲದೆ ಅದಕ್ಕಾಗಿ ಪಕ್ಷ-ಪಂಥಗಳನ್ನು ಕಟ್ಟುವುದೆಂದರೆ ಸತ್ಯದಿಂದ ದೂರ ಹೊರಟಂತೆಯೆ ಸರಿ. ಶ್ರೀಕೃಷ್ಣಜೀಯವರು ಈ ತೆರನಾಗಿ ತಮ್ಮ ಅಭಿಪ್ರಾಯವನ್ನು ಲೋಕದ ಮುಂದಿಟ್ಟು, ಡಾ. ಆ್ಯನಿಬೆಸೆಂಟ್ ಅವರು ಹೊಳಹು ಹಾಕಿದ ಸತ್ಯದರ್ಶಿಗಳ, ಆಗಾಮಿ ದೇವಮಾನವರ ಸಂಘವನ್ನು ನಿಲ್ಲಿಸಿಬಿಟ್ಟರು. ಅಥವಾ ಅವರಿಂದ ತಾವು ಮುಕ್ತರಾದರೆಂದರೂ ಸರಿ.

ಥಿಯಾಸಫಿಯವರಿಂದ ಚಾಲನೆ ದೊರೆತು ಬಳಿಕ ಅರ್ಧಕ್ಕೆ ನಿಂತ ದೇವಮಾನವ ಉದಯದ ವಿಚಾರವು, ಮುಂದೆ ಶ್ರೀ ಅರವಿಂದರಲ್ಲಿ ಪ್ರಕರ್ಷಗೊಂಡು ವಿಶೇಷ ರೀತಿಯಲ್ಲಿ ಅಭಿವ್ಯಕ್ತವಾಗಿದೆ ಇಷ್ಟೇ ಅಲ್ಲ, ಯೂರೋಪದಲ್ಲಿ ತಲೆದೋರಿದ ಮಾನವ ವಿಕಾಸದ ಅನೇಕ ವಿಚಾರ ಪ್ರಣಾಲಿಗಳನ್ನೂ ಶ್ರೀ ಅರವಿಂದರು ತಮ್ಮ ಲೇಖನಗಳಲ್ಲಿ ಬಳಸಿದ್ದುಂಟು. ೧೯೦೫-೬ರ ರಾಷ್ಟ್ರೀಯ ಆಂದೋಲನದ ಕಾಲಕ್ಕೆ ಶ್ರೀ ಅರವಿಂದರು 'ಕರ್ಮಯೋಗಿ' ಎಂಬ ವಾರಪತ್ರಿಕೆಯ ಸಂಪಾದಕರಾಗಿದ್ದರು. ಆಗಿನ ಚಳವಳಿಯಲ್ಲಿ ಬಂಗಾಳ ಪ್ರಾಂತವು ಅಗ್ರಸ್ಥಾನದಲ್ಲಿತ್ತು. ಬಂಗಾಳದಿಂದಲೇ ಭಾರತಕ್ಕೆ ಸ್ವರಾಜ್ಯವು ದೊರೆಯತಕ್ಕುದೆಂದು ದೇವರ ಸಂಕಲ್ಪವಿದೆ ಎಂದು ಶ್ರೀ ಅರವಿಂದರು ಒಂದು ಸ್ಫೂರ್ತಿದಾಯಕ ಪ್ರಚೋದಕ ಲೇಖನದಲ್ಲಿ ಹೇಳಿದ್ದಾರೆ! 'ಭಾರತೀಯರಿಂದಲೇ ಮಾನವ ಕುಟುಂಬದ

ಉದ್ಧಾರ; ಹಿಂದೂ ಸಂಸ್ಕೃತಿಯು ಜಗತ್ತಿನಲ್ಲಿ ಶ್ರೇಷ್ಠ; ಇದರ ಪ್ರಸಾರದಿಂದಲೇ ಲೋಕದಲ್ಲಿ ಶಾಂತಿ ಸುಖವು ಬಂದೀತು;' ಈ ತೆರನಾದ ಉದ್ಗಾರಗಳು ಅನೇಕರ ಬಾಯಲ್ಲಿ ಈಗ ಕೇಳಬರುತ್ತವೆ. ಇವೆಲ್ಲವೂ ಜನಾಂಗದ ಮೇಲ್ಮೆಯ ಹೆಮ್ಮೆಯ ಮಾತುಗಳು. ಜರ್ಮನಿಯ ಹೆಗೆಲ್‌ನ ವಿಚಾರಕ್ಕೂ ಇಟಲಿಯ ಆಧುನಿಕ ತತ್ತ್ವಜ್ಞ ಬೆನೆಡಿಟೊ ಕ್ರೊಚೆ ಎಂಬಾತನ ವಿಚಾರಕ್ಕೂ ಹೊರವಲಯದಲ್ಲಿ ಸ್ಥೂಲವಾದ ಹೋಲಿಕೆಯಿದೆ. ಆದರೂ ಕ್ರೋಚೆಯ ಪ್ರತಿಪಾದನಾಪದ್ಧತಿಯು ನಿರ್ಣಯಕ್ಕೆ ಬಂದ ರೀತಿ ಬೇರೆ. ಶ್ರೀ ಅರವಿಂದರು ತಮ್ಮ ತತ್ತ್ವಜ್ಞಾನದಲ್ಲಿ ಹೆಗೆಲ್‌ನಿಂದ ಕ್ರೊಚೆಯ ವರೆಗಿನ ಎಲ್ಲ ವಿಚಾರಗಳನ್ನೂ ಅಳವಡಿಸಿಕೊಂಡಿದ್ದಾರೆ.

ವಿಕಾಸವೇ ವಿಶ್ವದ ಗುರಿ. ವ್ಯಕ್ತಿಯ ಇಚ್ಛೆ ಇರಲಿ, ಇಲ್ಲದಿರಲಿ; ಈಶಪ್ರೇರಣೆಯಿಂದ ವಿಶ್ವವಿಕಾಸವು ಅವ್ಯಾಹತವಾಗಿ ನಡೆದಿದೆ ಮುಂದೆಯೂ ನಡೆಯುವುದು. ಇದನ್ನರಿತು ವ್ಯಕ್ತಿಯು ಸ್ವಯಂಪ್ರಜ್ಞೆಯಿಂದ ವಿಶ್ವ ಸಂಚಾಲಕ ಶಕ್ತಿಯ ಗುರಿಗೆ ಪೋಷಕವಾಗಿ ತನ್ನ ನಡೆವಳಿಯನ್ನು ತಿದ್ದಿಕೊಂಡರೆ ಸರಿ. ಅದುವೆ ಯೋಗ್ಯವೆನಿಸುವುದು. ಇದಕ್ಕೆ ವಿಪರೀತವಾಗಿ ನಡೆದರೆ ಅವನು ತನ್ನ ಹಾನಿಗೇ ಕಾರಣನಾಗುವನು. ವಿಶ್ವಶಕ್ತಿಯು ಒತ್ತಾಯದಿಂದ ಅವನನ್ನು ಶಿಕ್ಷಿಸಿ ದಾರಿಗೆ ತರುವುದೆಂದು ಶ್ರೀ ಅರವಿಂದರ ಅಭಿಪ್ರಾಯ. ವಿಕಾಸಕ್ರಮದಲ್ಲಿ ಮಾನವನು ಬುದ್ಧಿಯ ಪಾತಳಿಗೆ ಬಂದು ನಿಂತಿದ್ದಾನೆ. ಬುದ್ಧಿಯು ಪೃಥಕ್ಕರಣಶೀಲ. ಸತ್ಯಜ್ಞಾನಕ್ಕೆ ನಿರುಪಯುಕ್ತ. ವ್ಯವಸಾಯಾತ್ಮಿಕಾಬುದ್ಧಿಯ ಆಚೆಗೆ ಅತೀಂದ್ರಿಯ ಶಕ್ತಿಯಿದೆ ಅದನ್ನು ಪಡೆದುಕೊಂಡರೆ ಅಂತರ್‌ಜ್ಞಾನದಿಂದ ಸತ್ಯವನ್ನು ಪ್ರತ್ಯಕ್ಷ ಕಾಣುವ ಸಾಮರ್ಥ್ಯವುಂಟಾಗುವುದು. ಹಿಂದಿನ ಋಷಿಗಳಲ್ಲಿ ಈ ಶಕ್ತಿಯಿತ್ತು ಅದು ಕ್ವಚಿತ್ತಾಗಿ ಕೆಲವರಿಗೆ ಮಾತ್ರ ಲಭಿಸಿತ್ತು. ಮಾನವ ವಿಕಾಸವು ದೈವೀಸಂಕಲ್ಪ. ಅದಕ್ಕನುಸರಿಸಿ ಮಾನವಲೋಕದ ಕ್ಷಿತಿಜದ ಮೇಲೆ ಇದೀಗ ಅದು ಮೂಡಿ ಮಿನುಗಲಾರಂಭಿಸಿದೆ. ಅದನ್ನು ಲೋಕಕಲ್ಯಾಣಕ್ಕಾಗಿ ಭೂಮಿಗೆ ತಂದು ಮಾನವರಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವುದೇ ತಮ್ಮ ತಪಸ್ಸಿನ ಧ್ಯೇಯ ಎಂದು ಶ್ರೀ ಅರವಿಂದರೂ ಅವರ ಪರವಾಗಿ ಅವರ ಹಲವು ಶಿಷ್ಯರೂ ಸಾರುತ್ತಲಿದ್ದಾರೆ.

ಸಮಾಜವಿಕಾಸ ಮೀಮಾಂಸೆಯನ್ನು ಕುರಿತು ಶ್ರೀ ಅರವಿಂದರು ಆರ್ಯದಲ್ಲಿ ಒಂದು ಲೇಖಮಾಲೆಯನ್ನು ಬರೆದಿದ್ದಾರೆ. ಅದರಲ್ಲಿ ಸ್ಪೆಂಗ್ಲರನ ಪ್ರತಿಪಾದನೆಯ ಅಗಾಧತೆ ಅಥವಾ ವಿವಿಧತೆಯು ಇಲ್ಲವಾದರೂ ಭಾರತೀಯತ್ವದ ಅಭಿಮಾನದಿಂದ ನಮ್ಮ ಪೂರ್ವಜರ ವಿಚಾರಗಳನ್ನು ಆಧುನಿಕ ರೀತಿಯಿಂದ ಪುಷ್ಟೀಕರಿಸಿ, ಕೌಶಲ್ಯದಿಂದ ಅವುಗಳ ಸಮರ್ಪಕತೆಯನ್ನು ಸಿದ್ಧಪಡಿಸಿದ್ದು ಆರ್ಯದೊಳಗಿನ ಈ ಬಗೆಯ ವಿಚಾರಗಳು ಹಿಂದೀಯರಿಗೆ ವಿಶೇಷ ಸತ್ಯವೆನಿಸುವಂತಿವೆ. ಹಾಗಾದರೆ ಸತ್ಯದಲ್ಲಿ ಹಿಂದೀಯರ ಸತ್ಯ ಯೂರೋಪೀಯರ ಸತ್ಯ ಎಂದು ಮುಂತಾಗಿ ಜಾತಿ-ಮತ-ದೇಶಗಳಿಗೊಂದೊಂದು ಸತ್ಯವು ಬೇರೆಬೇರೆಯುಂಟೆ?

ಕಳೆದ ಎರಡೂ ಮಹಾ ಯುದ್ಧಗಳ ಆಸುರೀಪ್ರಕಾರಗಳನ್ನೂ ಅವುಗಳಲ್ಲಿ ವಿಜಯ ಸಂಪಾದಿಸಿದ ಬಗೆಗಳನ್ನೂ ನೋಡಿದವರಿಗೆ ಇಂತಹ ಕೃತ್ಯಗಳನ್ನು ದೇವರೇ ಹಿಂದೆ ನಿಂತು ಮಾಡಿಸುತ್ತಿದ್ದಾನೆ; 'ಸತ್ಯಮೇವ ಜಯತೇ' ಎಂಬೀ ಬಗೆಯಾದ ಮಾತುಗಳನ್ನು ಪ್ರಾಮಾಣಿಕವಾಗಿ ಎಷ್ಟರ ಮಟ್ಟಿಗೆ ಮತ್ತು ಯಾವ ಅರ್ಥದಿಂದ ನೆಮ್ಮಬೇಕೊ ತಿಳಿಯದಾಗುತ್ತದೆ. 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ;' ಆಗ ತಾನು ಅವತಾರ ತಾಳುವೆನೆಂದು ಭಗವಂತನು ವಚನಕೊಟ್ಟಿಲ್ಲವೆ? ಪಾಂಡವರಿಗಾಗಿ ಕೃಷ್ಣಾವತಾರ ಆಗಲಿಲ್ಲವೇ? ಶರಣರ ಉದ್ಧಾರ ಮಾಡಿಲ್ಲವೆ? ಪಾಪ ಹೆಚ್ಚಾದಾಗ ದೇವರು ಬರುವವನಲ್ಲ; ಕಾರಣ ಪಾಪ ಹೆಚ್ಚು ಮಾಡಿರೆಂದು ಹೇಳುವ ಮಹಾಮಹಿಮರೂ ಆಗದೆ ಇಲ್ಲ! ಸಾಮಾನ್ಯವಾಗಿ ಮಾನವನು ಪುಕ್ಕನೂ ಮೈಗಳ್ಳ ಜೀವಗಳ್ಳನೂ ಆಗಿರುವುದರಿಂದ ತನ್ನ ಈ ಕೊರತೆಯಿಂದಾಗುವ ಮನಸ್ತಾಪವನ್ನು ಕಡಿಮೆ ಮಾಡಿಕೊಳ್ಳಲು ಕೆಲವೊಂದು ಭ್ರಾಂತಿಯಲ್ಲಿರಲು ಹಂಬಲಿಸುತ್ತಾನೆ. ಭ್ರಮೆಯಲ್ಲಿದ್ದು ಆತ್ಮವಂಚನೆ ಮಾಡಿಕೊಳ್ಳುವಲ್ಲಿ ಆತನಿಗೆ ತೃಪ್ತಿ! ಈ ಬಗೆಯ ತೃಪ್ತಿಗೇ ಸಂಭ್ರಮವೆಂಬ ಹೆಸರು. ಮಾನವನು ಸಂಭ್ರಮಿ.

ಎಲ್ಲವನ್ನೂ ದೇವರು ಮಾಡಿಸುತ್ತಾನೆ, ಎಂದರೆ ಮಾನವನಿಗೆ ಸಂಭ್ರಮ. ವಿಕಾಸವಾಗುತ್ತಲಿದೆ; ಪ್ರಗತಿಯು ನಿಶ್ಚಿತ; ನಮ್ಮ ಉದ್ಧಾರಕ್ಕಾಗಿ ದೇವರು ಸಿದ್ಧನಾಗಿ ನಿಂತಿದ್ದಾನೆ; ಎಂಬ ಭ್ರಮೆಯು ಅಧಃಪಾತದ ಹೆದರಿಕೆಯಿಂದ

ತಪ್ಪಿಸಿಕೊಳ್ಳಲು ಬಹಳ ಚೆನ್ನಾದ ಹಂಚಿಕೆ. ಅಂತರಾತ್ಮನ ಕೂರಲಗಿನ ಆಘಾತಗಳ ಆಂತರಿಕ ವೇದನೆಗಳಿಂದ ಪಾರಾಗಲು ದೈವವಾದ ಅಥವಾ ನಿಯತಿವಾದವು ಒಂದು ವಜ್ರಕವಚವೆ ಆಗಿದೆ. ಹಣೇಬರೆಹ ಅಥವಾ ದೈವದಲ್ಲಿದ್ದುದನ್ನು ತಪ್ಪಿಸುವವರಾರು? ಆದಕಾರಣ (ಸತ್ಕೃತ್ಯ?) ದುಷ್ಕೃತ್ಯದ ಹೊಣೆ ಮಾನವನ ಮೇಲೆ ಎಳ್ಳಷ್ಟೂ ಉಳಿಯವುದಿಲ್ಲ. ಒಳ್ಳೆಯದಾಯ್ತು, ನಾ ಮಾಡಿದೆ; ಕೆಟ್ಟುದು ಒದಗಿತೊ, ಅದರ ಹೊಣೆ ದೈವದ ಮೇಲೆ; ಇದು ಮಾನವರ ಸಾಮಾನ್ಯ ರೀತಿ.

ಆದರೆ, ಆಧುನಿಕ ಶಾಸ್ತ್ರೀಯ ಸಂಶೋಧನಗಳಿಂದ ಪೌರಾಣಿಕ ದೇವರ ಕಲ್ಪನೆಗಳೆಲ್ಲ ಕವಿಕಲ್ಪನೆಯೆಂಬ ಮಾತು ನಿದರ್ಶನಕ್ಕೆ ಬಂದಿದೆ. ಅವುಗಳಲ್ಲಿ ಏನೊಂದು ಸಂಕೇತಾರ್ಥವು ಅಡಕವಾಗಿದೆಯೆಂದು ಮನವರಿಕೆಯಾಗದೆ ಅವನ್ನು ಇದ್ದಕ್ಕಿದ್ದಂತೆ ನೆಚ್ಚಲು ಬುದ್ಧಿಯನ್ನು ಕುರುಡು ಮಾಡಿಕೊಳ್ಳಬೇಕಾಗುತ್ತದೆ. ಆಧುನಿಕ ಸಂಶೋಧನಗಳು ಹಳೆಯ ದೇವರ ತೇಜೋಭಂಗ ಮಾಡಿವೆ. ಮನುಷ್ಯನ ಮರ್ಯಾದೆಗೆ ಕೇಡುತಂದಿವೆ. ಹಿಂದಿನ ತಲೆಮಾರಿನವರ ದೇವರ ಕಲ್ಪನೆಯೆ ಅಗಾಧವಾಗಿತ್ತು. ಮನೆಯೊಳಗಿನ ಪ್ರತಿಯೊಂದು ಕೆಲಸದಲ್ಲೂ ತನ್ನ ಮಾತು ನಡೆಸುವ ಹಟವಿದ್ದ ಆಗ್ರಹೀ ಯಜಮಾನನಂತೆ, ಆಡಳಿತೆಯ ಬೇಕಾದ ವ್ಯವಹಾರವನ್ನು ತನ್ನ ಮನಬಂದಂತೆ ಅಲ್ಲಟ-ಪಲ್ಲಟಮಾಡಿ ತನ್ನ ಅಧಿಕಾರ ದರ್ಪವನ್ನು ಲೋಕಕ್ಕೆ ಪ್ರದರ್ಶಿಸಿಕೊಂಬ ಚಪಲವಿದ್ದ ರಾಜ್ಯಾಧಿಕಾರಿಯಂತೆ, ಅಥವಾ ಊರ (ಅಥವಾ ನಾಡಿನ) ಯಾವ ಚಟುವಟಿಕೆಯೆ ಇರಲಿ, ಅದರಲ್ಲಿ ತನ್ನ ಮಾತು ನಡೆಯಲೇಬೇಕು, ಅದರ ಸೂತ್ರಗಳು ತನ್ನ ಕೈಯಲ್ಲಿಯೇ ಇರಬೇಕೆಂದು ಲವಲವಿಸುವ ದೇ-ಭಗಳಂತೆ, ನಮ್ಮ ದೇವರು(?) ಒಬ್ಬ ಅಧಿಕ ಪ್ರಸಂಗೀ ಪಾರುಪತ್ಯಗಾರನಂತೆ ವಿಘ್ನಕರ್ತೃವಾಗಿ, ಜನರನ್ನು ಹೆದರಿಸಿಕೊಂಡು, ವಿಘ್ನಹರ್ತವೆಂಬ ಆಶೆತೋರಿಸಿ, ಹಣ್ಣುಕಾಯಿಗಳ ಲಂಚತಿಂದು, ನಮ್ಮ ಪ್ರತಿಯೊಂದು ಜೀವನರಂಗದಲ್ಲಿಯೂ ಬಿಟ್ಟೂಬಿಡದೆ ಉಪದ್ರವ ಕೊಡುತ್ತಿದ್ದುದನ್ನೊ, ಕಿಳ್ಳಿಮಾಡುತ್ತಿದ್ದುದನ್ನೊ ಅಥವಾ ಕೊಳ್ಳೆಹೊಡೆಯುತ್ತಿದ್ದುದನ್ನೊ ಪುರಾಣಕತೆಗಳಿಂದ ಮನಗಾಣಬಹುದು. ಇಂತಹ ಕತೆಗಳಿಂದ ತುಂಬಿದ ಭಾಗವತ ಪುರಾಣ, ಶರಣಲೀಲಾಮೃತ, ಸಂತಚರಿತ್ರೆ ಮೊದಲಾದವುಗಳ ಕೆಲವೊಂದು ಭಾಗವನ್ನು ಓದುವಾಗ ವಿಮರ್ಶಾಶಕ್ತಿಯನ್ನು ಕೊಂದುಕೊಂಡಲ್ಲದೆ, ಅಥವಾ ಅವುಗಳ ಮೇಲೆ ಆಧ್ಯಾತ್ಮಿಕ ಅರ್ಥದ ಹೊದಿಕೆಯನ್ನು ಹಾಕದೆ ಮೂಲರೂಪದಲ್ಲಿಯೆ ಆ ವಿಪರೀತ ವೃತ್ತಾಂತಗಳನ್ನು ಇದ್ದಕ್ಕಿದ್ದ ಹಾಗೆಯೆ ಕಿವಿಯುವುದು ಮಹಾಪ್ರಯಾಸವೇ ಸರಿ.

ತಾವು ಬ್ರಹ್ಮನ ಮಾನಸಪುತ್ರರಾದ ಮಹರ್ಷಿಗಳ ವಂಶಜರೆಂದು ಕಲ್ಪಿಸಿಕೊಂಡು ಶ್ರೀಶ್ರೀಶ್ರೀ ಆದಿನಾರಾಯಣ ----➤ ಆತನ ಮಗ ಬ್ರಹ್ಮ.. ಎಂಬೀ ತೆರನಾಗಿ ತಮ್ಮ ಪೀಳಿಗೆಯನ್ನು ಪ್ರಾರಂಭಿಸಿಕೊಳ್ಳುವ ಹಕ್ಕು ತಮಗೆ ಮಾತ್ರ ಉಂಟು ಎಂದು ಕೊಬ್ಬಿ ಕೊನೆಯುತ್ತಲಿದ್ದ ಜನಗಳಿಗೆ ಡಾರ್ವಿನನ ಶೋಧದಿಂದ ತೀರ ಮುಖಭಂಗವಾಗಿರಲಿಕ್ಕೆ ಸಾಕು. ಮಾನವರೆಲ್ಲ ಮಂಗನ ಮಕ್ಕಳು, ಎಂದು ಗ್ರಂಥವನ್ನು ಬರೆದು ತಮ್ಮ ಮಾನಗೇಡು ಮಾಡಿದನೆಂದು ಡಾರ್ವಿನನ ಮೇಲೆ ನಮ್ಮ ಮಠಪತಿಗಳು ಕೋರ್ಟಿನಲ್ಲಿ ವ್ಯಾಜ್ಯ ಹೂಡಬೇಕಾಗಿತ್ತು. ಹೂಡಲಿಲ್ಲ; ಇದು ಅವರ ಸೌಜನ್ಯಕ್ಕೆ, ವೈರಾಗ್ಯವೃತ್ತಿಗೆ ಒಪ್ಪುವಂತಹ ಮಾತಾಗಿದೆ. ತಾನು ಮಾಡಿದ ಕಟ್ಟು-ಕಟ್ಟಳೆಗಳನ್ನು ತಾನೇ ಮುರಿವವನು ವಿವೇಕಿಯೆ? ಸಮಂಜಸನೆ? ವಿಚಾರಿಯೆ? ನ್ಯಾಯಿಯೆ? ಹಾಗಾದರೆ ಅತ್ಯಂತ ನ್ಯಾಯನಿಷ್ಠನೆಂದೂ ಜ್ಞಾನನಿಧಿಯೆಂದೂ ಬಗೆದ ದೇವರು, ತಾನೇ ರಚಿಸಿದ ವಿಶ್ವವ್ಯಾಪಾರದ ನಿಯಮಗಳಿಗೆ ವಿಪರೀತವಾಗಿ ನಡೆದುಕೊಳ್ಳುವನೆಂದು ಭಾವಿಸುವುದು ಯುಕ್ತವೆ? ಹಾಗೆ ವಿಪರೀತ ವೃತ್ತಿಯನ್ನು ದೇವರಲ್ಲಿ ಕಲ್ಪಿಸುವುದು, ನಮ್ಮ ಮನೋವೃತ್ತಿಯ ಪ್ರತಿಬಿಂಬವೆ ಆಗಿಲಿಕ್ಕಿಲ್ಲವೆ? ಆದುದರಿಂದ ವಿಶ್ವವ್ಯಾಪಾರಗಳಿಗೆ ವಿರೋಧವಾಗಿ ನಡೆವ ವ್ಯಕ್ತಿಯು ಎಷ್ಟೇ ಮಹಾಮಹಿಮೆಯುಳ್ಳುದುದಾಗಿದ್ದರೂ ಅದು ಪರಮಾತ್ಮನಾಗಿರಲಾರದು; ಅದು ಪ್ರಯತ್ನಪೂರ್ವಕವಾಗಿ ಅತಿಮಾನುಷ ಶಕ್ತಿಯನ್ನು ಸಂಪಾದಿಸಿದ ಸುರಾಸುರರಲ್ಲಿ ಒಂದು ಪ್ರಾಣಿಯಾಗಿರಬೇಕು. ನಿಜವಾದ ವಿಶ್ವಪಿತನನ್ನು ಮರೆತಲ್ಲದೆ ಇಂತಹರನ್ನು ದೇವರೆಂದು ಒಪ್ಪಲು ವಿವೇಕವು ಎಂದೂ ಸಿದ್ಧವಾಗದು.

ಈ ಕಾರಣದಿಂದ ನಮ್ಮ ಅನುದಿನದ ವ್ಯಾಪಾರದಲ್ಲಿ ಸೃಷ್ಟಿಕರ್ತನನ್ನು ತಂದು ಆತನಿಗೆ ಕಲಂಕವನ್ನು ಹಚ್ಚದಿರುವುದೇ ಲೇಸು. ದುಡಿ-ಪಡೆ ಎಂಬುದು ಸೃಷ್ಟಿಯ ನಿಯಮ ಗೀತೆಯ 'ಯದಾ ಯದಾ ಹಿ ಧರ್ಮಸ್ಯ.....'

ಎಂಬ ಶ್ಲೋಕವೇ ಜನಕ್ಕೆ ಬೇಗ ನೆನಪಾಗುತ್ತದೆ. ದೇವರು ಅವತಾರ ತಾಳಿ ಉದ್ಧರಿಸುವನೆಂದು ಬಗೆದು ಆತನ ಮೇಲೆಯೇ ಕೈಯೂರಿ ಕುಳಿತುಕೊಳ್ಳುವ ಪ್ರವೃತ್ತಿಯು ನಮ್ಮ ಮೈಗಳ್ಳತನದ ದ್ಯೋತಕ 'ಉದ್ಧರೇತ್ ಆತ್ಮನಾತ್ಮಾನಂ...' ನಿನ್ನ ಏಳ್ಗೆ ನಿನ್ನ ಕೈಯಲ್ಲಿದೆ; ನಿನ್ನ ಗೆಳೆಯನು ನೀನೆ; ನಿನ್ನ ಹಗೆಯೂ ನೀನೆ; ಎಂಬುದು ಮಾನವನ ಉದ್ಧಾರಕಮಂತ್ರ 'ನ ಋತೇ ಶ್ರಾಂತಸ್ಯ ಸಖ್ಯಾಯ ದೇವಾಃ' ದುಡಿದು ದಣಿಯದವರಿಗೆ ದೇವರ ನೆರವು ಎಂದೂ ದೊರೆಯದು; ಎಂದೇ ಎಂದಿನಿಂದಲೂ ಜ್ಞಾನಿಗಳು ಹೇಳುತ್ತ ಬಂದಿದ್ದಾರೆ. ವಿಕಾಸವಾದವೆಂದರೆ ಸುಧಾರಣೆ, ಪೂರ್ಣತೆಯತ್ತ ಪ್ರಗತಿ ಎಂಬರ್ಥವಿದ್ದರೆ, ವಿಕಾಸದಲ್ಲಿ ನೆಚ್ಚಿಗೆ ಇದ್ದರೆ ವಿಶ್ವಸಂರಕ್ಷಕ ಈಶಶಕ್ತಿಯೊಂದು ಇದೆಯೆಂದು ಒಪ್ಪಿಕೊಳ್ಳಬೇಕಾಗುತ್ತದೆಂಬುದು ನಿಜ. ವಿಶ್ವಸಂಚಾಲಕ ಶಕ್ತಿಯಲ್ಲಿ ಶ್ರದ್ಧೆಯಿಲ್ಲದವರು ಸಮಾಜದ ವಿಕಾಸವೇ ಆಗುತ್ತದೆಯೆಂದು ಹೇಳುವುದು ಅಸಂಗತ. ಸಂರಕ್ಷಕ ಶಕ್ತಿಯಿಲ್ಲವಾದರೆ ಲೋಕವು ಪ್ರಗತಿಪಥದಲ್ಲಿಯೇ ಸಾಗೀತೆಂಬ ಭರವಸೆಯೇನು? ಅದು ಏಳಲೂಬಹುದು; ಬೀಳಲೂ ಬಹುದು. ಸಂರಕ್ಷಕಶಕ್ತಿಯುಂಟೆಂದೂ ಅದು ವಿಶ್ವವನ್ನು ಪ್ರಗತಿಪಥದಲ್ಲಿ ನಡೆಸಿದೆಯೆಂದೂ ಶ್ರದ್ಧೆವಹಿಸಿದರೂ ಆ ಶಕ್ತಿಯು ತನ್ನ ಕಟ್ಟಳೆಗಳನ್ನು (ವಿಶ್ವವ್ಯಾಪಾರದ ನಿಯಮಗಳನ್ನು) ತಾನೇ ಅಲ್ಲಗಳೆಯುವುದೆಂದು ಬಗೆಯುವ ಕಾರಣವಿಲ್ಲ. 'ಅಧ್ಯಕ್ಷ'ನಾಗಿದ್ದುಕೊಂಡು ಲೋಕದಿಂದಲೇ ಎಲ್ಲವೂ ಸಾಗುವಂತೆ ಏರ್ಪಾಟುವಿದ್ದುದನ್ನು ವಿಶ್ವವ್ಯಾಪಾರದ ಸೂಕ್ಷ್ಮ ನಿರೀಕ್ಷಣೆಯಿಂದ ಕಂಡುಕೊಳ್ಳಬಹುದು. ಆದುದರಿಂದ, ನಮ್ಮ ಕರ್ಮಕ್ಕೆ ನಾವೇ ಹೊಣೆ ಎಂಬುದು ಶಾಶ್ವತ ಸಿದ್ಧಾಂತ.

ಈ ಲೋಕದಲ್ಲಿ ಮಾನವನ ಸಂಸ್ಕೃತಿವಿಕಾಸದ ಕಾರ್ಯವು ಅಖಂಡವಾಗಿ ಅಲ್ಲದಿದ್ದರೂ ಒಂದು ಕ್ರಮದಲ್ಲಿ ಅದು ಸಾಗಿಯೇ ಇದೆ; ಎಂಬುದನ್ನು ಅಮೋಘವಾದ ರೀತಿಯಲ್ಲಿ ವಿಶದೀಕರಿಸಿ ಮನವರಿಕೆ ಮಾಡಿಕೊಡುವಲ್ಲಿ ಅತ್ಯಾಧುನಿಕನಾದ ಟಾಯಿನ್‌ಬಿಯು ದೇವರ ಹೆಸರನ್ನು ಎಲ್ಲಿಯೂ ಎತ್ತಿಲ್ಲ. ಅದರ ಸ್ಥಾಪನೆಗೆ ದೇವರ ಹೆಸರಿನ ಉಪಯೋಗವನ್ನು ಅನಾವಶ್ಯಕವಾಗಿ ಎಲ್ಲಿಯೂ ಮಾಡಿಕೊಂಡಿಲ್ಲವೆಂದು ಹೇಳಿದರೆ ಯಾರಿಗೂ ಸೋಜಿಗವೆನಿಸುವ ಕಾರಣವೇ ಇಲ್ಲ. ಏಕೆಂದರೆ ದೇವರ ಹೆಸರನ್ನು ತಕ್ಕೊಳ್ಳದೇ ಇರುವುದು ಅಷ್ಟೇ ಏಕೆ, ದೇವರೇ ಇಲ್ಲವೆಂದ ಔದ್ಧತ್ಯದಿಂದ ಪ್ರತಿಪಾದಿಸುವುದು ಆಧುನಿಕತೆಯ ಲಕ್ಷಣ; ಸುಶಿಕ್ಷಿತತನದ ಕುರುಹು. ಇಂದು ಇದೇ ಫ್ಯಾಶನ್ನು. ಆದುದರಿಂದ, ಇತಿಹಾಸಶಾಸ್ತ್ರದ ಗಾಢವಾದ ಅಭ್ಯಾಸಿಯಾದ ಟಾಯಿನ್‌ಬಿಯ ಅನಂತಕಾಲದ ಜಾಗತಿಕ ಘಟನೆಗಳಲ್ಲಿ, ಮಾನವರ ಕರ್ಮದ ಕಥೆಯ ಪೃಥಕ್ಕರಣ ವಿಮರ್ಶಾದಿಗಳಲ್ಲಿ ಇಂತಿದು ದೇವರ ಕೈವಾಡ ಎಂದು ಹೇಳುವ ಆವಶ್ಯಕಯೆನಿಸದೆ ಇದ್ದರೆ ಆಶ್ಚರ್ಯವಿಲ್ಲ.

ಆದರೆ, ಮೂರು-ನಾಲ್ಕು ಸಾವಿರ ವರುಷಗಳ ಹಿಂದೆ! ಅದೂ ಭರತಖಂಡದಲ್ಲಿ! ದೇವರ ಹೆಸರನ್ನೇ ಎತ್ತದೆ ವಿಕಾಸದ ಸಿದ್ಧಾಂತವನ್ನು ಪ್ರತಿಪಾದಿಸಿದ್ದುಂಟು! ಹಲವು ರಾಯರು ಇದನ್ನು ಕಟ್ಟುಕತೆಯೆಂದು ತಿರಸ್ಕರಿಸಲಿಕ್ಕೂ ಸಂಕೋಚಪಡಲಿಕ್ಕಿಲ್ಲ. ಆತನ ಹೆಸರು ಯಾಜ್ಞವಲ್ಕ್ಯ; ಆತನನ್ನು ಋಷಿಯೆಂದು ಬೇರೆ ಹೇಳುತ್ತಾರೆ! ಆತ್ಮನ ವಿಕಾಸದ ಸಿದ್ಧಾಂತವನ್ನು ವಿವರಿಸುವಾಗ ಯಾಜ್ಞವಲ್ಕ್ಯನು ಸೊನ್ನಗಾರನ ದೃಷ್ಟಾಂತವನ್ನು ಹೇಳಿದ್ದಾನೆ. ಸೊನ್ನಗಾರನು ಒಮ್ಮೆ ಮಾಡಿದ ಅಲಂಕಾರವನ್ನು ಮರಳಿ ಇನ್ನೊಮ್ಮೆ ಮಾಡುವಾಗ ಆತನಿಗೆ ಹಿಂದಿನ ಅನುಭವದ ಬೆಳಕು ದೊರೆಯಲೇಬೇಕಲ್ಲವೆ? ಆದಕಾರಣ ಆತನಿಂದ 'ನವತರಂ, ಕಲ್ಯಾಣತರಂ' ಕೃತಿಯಾಗುವುದು ಸ್ವಾಭಾವಿಕ. ಅದರಂತೆ ಆತ್ಮಕ್ಕೂ ನಿನ್ನೆಯ ಅನುಭವವು ಇಂದು, ಇಂದಿನ ಅನುಭವವು ನಾಳೆಗೆ ವಿಕಾಸಕ್ಕೆ ಸಹಕಾರಿಯಾಗುತ್ತದೆ. ಈ ತರ್ಕಪದ್ಧತಿಯು ಅತ್ಯಾಧುನಿಕ ಬುದ್ಧಿವಾದಿಯ ವಿಚಾರಸರಣಿಯೆಂದು ಸಂದೇಹಪಟ್ಟುಕೊಳ್ಳುವಷ್ಟು ನೂತನವಾಗಿಲ್ಲವೆ?

ಮಾನವರ ವಿಕಾಸವಾಗುತ್ತಿರುವುದು ನಿಶ್ಚಿತವೆಂದು ಸಾಮಾನ್ಯವಾಗಿ ಎಲ್ಲ ಶಾಸ್ತ್ರಜ್ಞರೂ ಒಪ್ಪುತ್ತಾರೆ. ಒಂದು ಶಿಖರವನ್ನು ಮುಟ್ಟಲು ಪರ್ವತವನ್ನು ಕ್ರಮಿಸುತ್ತಿರುವಾಗ ಕೆಲವು ಬಾರಿ ಇಳುಕಲು ಬಂದರೂ ಒಟ್ಟಿನಲ್ಲಿ ಏರಿಕೆಯಲ್ಲಿರುವುದೇ ನಿಜ. ಮಾನವ ಸಮಾಜದ ವಿಕಾಸಕ್ರಮವೂ ಇದೇ ತೆರನಾಗಿದೆ. ಜಾಗತಿಕ ದೃಷ್ಟಿಯಿಂದ ವಿಚಾರಿಸಿದಲ್ಲಿ ವ್ಯಕ್ತಿಗಳ ಅಥವಾ ಕೆಲವು ರಾಷ್ಟ್ರಗಳ ವೈಯ್ಯಕ್ತಿಕ ಏರು ಇಳುವಿನ ಲೆಕ್ಕವು ತೀರ ಅಲ್ಪ. ಇಡೀ

ಮಾನವ ಕುಟುಂಬದ ಲೆಕ್ಕವೇ ಲೆಕ್ಕ. ಆ ದೃಷ್ಟಿಯಿಂದ ಒಟ್ಟಿನಲ್ಲಿ ಲೋಕದ ಪ್ರಗತಿಯೇ ಉಂಟೆಂದು ಒಪ್ಪಬೇಕಾಗುತ್ತದೆ.

ಆದರೆ, ಉಪಮಾದಿ ಅಲಂಕಾರಗಳಿಂದ ಅಂದಗೊಳಿಸಿದ ವಿಷಯವು ತಿಳಿಯಲು ಸುಲಭವಾಗುವದಾದರೂ (ಅರ್ಥದ) ನಿಜಸ್ವರೂಪವು ಕಾಣದೆ ಹೋಗಿ ಅಲಂಕಾರಗಳ ಹೊಳಪಿನಿಂದ ಬೇರೊಂದು (ಅರ್ಥದ) ಭ್ರಾಂತಿ ನಿರ್ಮಾಣವಾಗುವ ಹೆದರಿಕೆಯೆ ಹೆಚ್ಚು. 'ಒಂದು ಶಿಖರವನ್ನು ಮುಟ್ಟಲು.....' ಎನ್ನುವಲ್ಲಿ, ಪ್ರಗತಿಯಿಂದ ಸಂಸ್ಕೃತಿಯ ಒಂದು ಪರಮ ಉಚ್ಚಸ್ಥಿತಿಗೆ ನಾವು ಹೋಗಲಿರುವೆವೆಂಬ ಗ್ರಹಿಕೆಯಾಗುವ ಸಂಭವವಿದೆ. ಆದರೆ, ಈ ಬಗೆಯ ಪರಿಪೂರ್ಣತೆಯ 'ಸ್ಥಿತಿ'ಯು ಮತ್ತು ಪ್ರ-'ಗತಿ' ಇವೆರಡೂ ಪರಸ್ಪರ ವಿಸಂಗತ! ಪ್ರಗತಿಯು ಯಾವಾಗಲೂ ಸಾಪೇಕ್ಷ ಸತ್ಯ. (Relative). 'ನಾವು ಸುಧಾರಿಸಿದವರು;' ಅಥವಾ 'ನಮ್ಮ ಪ್ರಗತಿಯಾಗಿದೆ, ಎಂಬುದು ನಿರಪೇಕ್ಷ ಸತ್ಯ (Absolute truth) ಅಲ್ಲ. ಸಮಾಜವು ಯಾವಾಗಲೂ ಗತಿಶೀಲ. ಗಚ್ಛತಿ ಇತಿ ಜಗತ್. ಗತಿಯಲ್ಲಿರುವಂತಹದು-ಸ್ಥಿತಿಯನ್ನು ಅರಿಯದ್ದು, ಎಂದೇ ಇದು ಜಗತ್ತು. ಒಂದು ಸ್ಥಿತಿಯನ್ನು ಕಲ್ಪಿಸುವುದು ಅಜ್ಞಾನ. ಆಜನ್ಮವೂ ಗತಿಯಲ್ಲಿಯೇ ಇರಲು ಎಂದರೆ ಒಂದೇ ಸವನೆ ಪಯಣ ಬೆಳಿಸಲು- ದುಡಿಯುತ್ತಿರಲು ಬೇಸರುವ ಮಾನವನ ಮೈಗಳ್ಳತನವು, ಸ್ಥಿತಿಯನ್ನು ಕಲ್ಪಿಸಿಕೊಳ್ಳಲು ಹಂಬಲಿಸುತ್ತದೆ. ದುಡಿಮೆ ಒಲ್ಲದ ಮಾನವರ ಜೀವಗಳ್ಳತನದ ಲಕ್ಷಣವಿದು. ಅವರು ಭೂತದಲ್ಲಿ ಅಥವಾ ಭವಿಷ್ಯತ್ತಿನಲ್ಲಿ ಹೆಚ್ಚಾಗಿ ಭೂತದಲ್ಲಿಯೇ ಪರಿಪೂರ್ಣತೆಯ ಒಂದು ಸ್ಥಿತಿಯು ಭೂಲೋಕದಲ್ಲಿ ಒಮ್ಮೆ ಇದ್ದಿತೆಂದು ನೆರೆನೆಮ್ಮುತ್ತಾರೆ. ಗ್ರಂಥಗಳಿಗೂ ಕಾಲಸ್ಥಿತಿಗೂ ವ್ಯಕ್ತಿ(ಗಳಿ)ಗೂ ಪರಿಪೂರ್ಣತೆಯನ್ನು ಆರೋಪಿಸುತ್ತಾರೆ! ಆದರೆ ಇದು ಅವಾಸ್ತವ

ಬದುಕಿರುವ ವರೆಗೂ ನಡೆಯುವುದೂ ನಡೆಯುವುದೆ. ನಡೆಯು ನಿಂತೊಡನೆ ಸಾವು. ಭೂಲೋಕದಲ್ಲಿ ಪರಿಪೂರ್ಣತೆ-ಸ್ಥಿತಿ ಎಂಬುದೇ ಇಲ್ಲ. ಪೂರ್ಣತೆಯ ವಿಚಾರವು ಕೇವಲ ಆದರ್ಶ(ಸತ್ಯ). ಪ್ರಗತಿಯ ಒಂದು ಘಟ್ಟವು ಮುಗಿದೊಡನೆ ಹೊಸ ಘಟ್ಟವು ಕ್ಷಿತಿಜದ ಮೇಲೆ ಕಣ್ಣೆದುರಿಗೆ ಬಂದೇ ಬಿಡುತ್ತದೆ. ಇಂತು ಪರಿಪೂರ್ಣತೆಯು ಯಾವಾಗಲೂ ಕ್ಷಿತಿಜದಲ್ಲಿ-ಕಣ್ಣೆದುರಿಗೇ; ಅಂತಲೇ ಅದು ಆದರ್ಶ ಅಗ್ನಿ ವಿದ್ಯೆ; ಸೌಂದರ್ಯ ವಿಚಾರ. ಇಲ್ಲಿ ಅನಂತತ್ವದ ಅನುಭವವು ಬರುವುದು. ಅನಂತತ್ವವನ್ನು ಒಪ್ಪಿಕೊಳ್ಳದೆ ಪ್ರಗತಿಯು ಅರ್ಥವಿಹೀನ. ಈ 'ಜಗತ್ತಿ'ನಲ್ಲಿ (ಅದು ಗತಿಯುಕ್ತವಾಗಿರುವುದರಿಂದ) ಯಾವುದಕ್ಕೂ ಪರಿಪೂರ್ಣತೆಯಿಲ್ಲ; ಎಲ್ಲವೂ ಸಾಪೇಕ್ಷ. ಜಗದ್ರಚನೆಯು ಇದಕ್ಕನುಸರಿಸಿಯೇ ಇದೆ. ಈ ಮರ್ಮವನ್ನರಿಯದವರು ಲೋಕವು ಅಪೂರ್ಣವೂ ಕೊರತೆಯುಳ್ಳದೂ ಎಂದು ಗೊಣಗುತ್ತಾರೆ. ಹೀಗಿದೆ ಎಂದೇ ಅದು ನಡೆದಿದೆ- 'ಜಗತ್' ಎನಿಸಿದೆ. ಪೂರ್ಣತೆಯು ಕೈಗೂಡುವಂತಿದ್ದರೆ ಆ ಕ್ಷಣಕ್ಕೇ ಅದರ ಕೊನೆಯು ನಿಶ್ಚಿತ. ಕೊನೆ-ಗೊನೆಗಳು ಒಂದೇ, ಎಂಬ ಕಂನಾಡವರ ಅನುಭೂತಿಯ ಸಾಕ್ಷಿ ಅವರ ಈ ಪದಪ್ರಯೋಗ. ಹಣ್ಣು ಪೂರ್ಣವಾಗಿ ಕಳೆದಿದೆಯೆಂದರೆ ಕೊಳೆಯುವುದಕ್ಕೆ ಆರಂಭವಾಗಿದೆ ಎಂದೇ ಅರ್ಥವಲ್ಲವೆ? ಯಾವುದೇ ಬಗೆಯ 'ಪೂರ್ಣತೆ' ಎಂದೊಡನೆ ನಮ್ಮ ಜನ ಹೆದರುತ್ತಿದ್ದಂತೆ ಕೆಲವೊಂದು ಸಂಪ್ರದಾಯಗಳಿಂದ ತಿಳಿದುಬರುತ್ತದೆ. ಅತ್ಯಂತ ರಮಣೀಯ ಮೂರ್ತಿಯನ್ನು ಅಥವಾ ಅಂದವಾದ ಕೆತ್ತನೆಯ ಬೆಡಗಿನ ಕೆಲಸವನ್ನು ಮಾಡಿದ ಶಿಲ್ಪಿಯು ಜನದ 'ದೃಷ್ಟಿಯನ್ನು ತೆಗೆ'ಯುವದಕ್ಕಾಗಿ ಅದರಲ್ಲಿ ಎಲ್ಲಿಯಾದರೂ ಒಂದು ಕುಂದಕವನ್ನು ಇರಿಸುತ್ತಿದ್ದನು. ಈ ಕುಂದಕ ಅಥವಾ 'ದೃಷ್ಟಿ'ಯು ಆ ಕೆಲಸವು ಇನ್ನೂ ಅಪೂರ್ಣವಿದೆಯೆಂದು ಒಪ್ಪಿಗೆಯೆ ಸರಿ. ಯೌವನಸ್ಥರಾದ ಮದುಮಕ್ಕಳ ಮೈಸಿರಿಗೆ ದೃಷ್ಟಿತಾಗಬಾರದೆಂದು ಅವರ ಗಲ್ಲಕ್ಕೆ ಕಪ್ಪುಬಟ್ಟು ಇಡುವ ರೂಢಿಯಿದೆ. ಒಂದು ಮನೆತನದ ಮಹಾವಿಭವಕ್ಕೆ ಕಾರಣರಾದ ವಿಭೂತಿಗಳು ಆ ಮನೆತನದ ಕೊನೆಯ ಸೂಚಕವೆಂದು ಒಂದು ಗ್ರಹಿಕೆಯಿದೆ.

ಪೂರ್ಣತೆಯ ಆದರ್ಶದಲ್ಲಿ ಶ್ರದ್ಧೆಯಿಂದ ದೃಷ್ಟಿಯನ್ನು ಸ್ಥಿರಗೊಳಿಸಿ, ತನ್ನ ಅನುದಿನದ ನಡೆವಳಿಯಲ್ಲಿ ಅಪೂರ್ಣತೆಯ ಅರಿಮೆಯು ಇರುವಲ್ಲಿಯೇ ಮಾನವರ ಕ್ಷೇಮವಿದೆ. ಅಪೂರ್ಣತೆಯ ಮೂಲಕವಾಗಿಯೆ ಈ ಲೋಕದಲ್ಲಿ ಎಲ್ಲ ವಸ್ತುಗಳೂ ಒಂದಕ್ಕೊಂದು ಪೂರಕವಾಗಿ ಪೋಷಕವಾಗಿ ಇರಬಲ್ಲುವಾಗಿವೆ. ಒಬ್ಬರಿಗೆ

ಇನ್ನೊಬ್ಬರ ಆವಶ್ಯಕತೆಯಿದೆ. ಇದರಿಂದಲೇ ಜನ ಬದುಕಿಕೊಂಡಿದೆ. ಸಾಮಾಜಿಕ ಭಾವನೆ ಜನಹೃದಯದಲ್ಲಿ ಸ್ಥಿರವಾಗಿ ಉಳಿದಿದೆ. ಸಮಾಜವು ದೃಢವಾಗಿ ಶಾಶ್ವತವೆನಿಸಿದೆ. ಏನೊಂದು ಕಾರಣದಿಂದ ತಾನು 'ಪೂರ್ಣ'ನೆಂಬ ಭ್ರಾಂತಿಯು ಸ್ವಲ್ಪ ತಲೆಯೆತ್ತಿದರೂ ಸಾಕು. ಆ ವ್ಯಕ್ತಿಯ ತಲೆ ತಿರುಗುವುದು; ಅನರ್ಥಗಳಿಗೆ ಆರಂಭವಾಗುವುದು. 'ಅಹಂ ಬ್ರಹ್ಮಾಸ್ಮಿ' ಎಂಬ ಕೊಬ್ಬು ಆಸುರೀವೃತ್ತಿಗೆ ಒಯ್ಯುವುದೆಂದು ಹೇಳುವುದು ಈ ಅರ್ಥದಲ್ಲಿ ತೀರ ಸರಿ. ಧನ-ಮಾನ, ಪಟ್ಟ-ಪದವಿಗಳ ಗಾಳಿ ಸೋಂಕುತ್ತಲೆ ಕಣ್ಣು ನೆತ್ತಿಗೇರಿ, ಸಂಗಡಿಗರಾಗಿದ್ದ ಸ್ನೇಹಿತರೂ ಕಾಣದಾಗುವರು. ಇಂತಹರು ರಾಜ, ಒಡೆಯ, ಗುರು, ಮಹಾರಾಜ, ಸರ್ವಾಧಿಕಾರಿ ಎಂಬಿವೇ ಮೊದಲಾದ ಒಂದಿಲ್ಲೊಂದು ಬಗೆಯ ಕೇಂದ್ರಸ್ಥಾನವನ್ನು ಸಂಪಾದಿಸಿ, ಬಳಿಕ ಲೋಕಕಂಟಕರಾದುದನ್ನು ಇತಿಹಾಸವು ಹೇಳುತ್ತದೆ. ಈ ಲೋಕಾನುಭವವಿದ್ದವರು ಜಗತ್ತು ಅಪೂರ್ಣವಿದ್ದುದೇ ಲೇಸವಾಗಿದೆಯೆಂದು ಒಪ್ಪಿಕೊಳ್ಳದೆ ಇರಲಾರರು. ಜಗತ್ತಿನ ಅಪೂರ್ಣತೆಯಿಂದ (ದೇವರು ಇದ್ದಾನೆಂದು ಗ್ರಹಿಸಿದರೂ) ಅದರ ನಿರ್ಮಾತೃವು ಅನನುಭವಿಯಾದ ಅಪೂರ್ಣನೇ ಆಗಿರಬೇಕೆಂದು ಪರಿಹಾಸ ಮಾಡುವ ಬುದ್ಧಿವಂತರಿದ್ದಾರೆ. ಆದರೆ, ಪೂರ್ಣತೆಯ ಅನರ್ಥಪರಂಪರೆಗಳ ತೊಡಕು ಇವರ ಸೂಕ್ಷ್ಮಬುದ್ಧಿಗೆ ಇನ್ನೂ ನಿಲುಕಿದಂತೆ ತೋರುವದಿಲ್ಲ.

ಅನಂತ-ಗುಣ-ಪೂರ್ಣವಾದ ಆದರ್ಶದ ನೆನಹಿನಲ್ಲಿ ಮಾನವ ಸಮಾಜವು ವಿಕಾಸದತ್ತ ಸಾಗಬೇಕೆಂಬುದು ಗುರಿ ತಿಳಿದೂ ತಿಳಿಯದೆಯೂ ಈ ದಾರಿಯತ್ತ ಮಾನವರು ಹೊರಟಿರುವುದೂ ನಿಜ. ಆದರೆ, ಈ ಬಗೆಯ ವಿಕಾಸಕ್ಕಾಗಿ ಉಪಯೋಗಿಸುವ ಸಾಧನಗಳ ಶುದ್ಧಿಯ ಆವಶ್ಯಕತೆಯನ್ನು ಮಾತ್ರ ಗಾಂಧೀಜಿಯವರಷ್ಟು ಒತ್ತಿ ಹೇಳಿದವರು ಬೇರಿನ್ನಾರಿಲ್ಲ. End justifies the means ಗೆಲ್ಲುವುದಕ್ಕೆ ಉಪಯುಕ್ತವಾದ ಸಾಧನಗಳೆಲ್ಲ ಪವಿತ್ರವೇ, ಎಂದು ಬಗೆದು, ಲೋಕಕಲ್ಯಾಣಕ್ಕೆ ಹೊರಟ ಮಹನೀಯರಿಗೆ ಹಲವು ಕಾಲ ತಮ್ಮ ಮೂಲಭೂತ ತಪ್ಪು ತಿಳಿಯಲೇ ಇಲ್ಲ. ಮಾನವನು ಕೇವಲ ಸ್ವಾರ್ಥಿ. ಸ್ವಾರ್ಥಸಾಧನೆಗೆ ಅಡ್ಡಿಯಾಗಬಾರದೆಂದು ಪರೋಪಕಾರಾದಿ ವಿಚಾರಗಳು ತಲೆಯೆತ್ತಿವೆ. Enlightened self interest ತನಗೇ ಕೇಡು ಆಗಬಾರದೆಂದು ಸ್ವಾರ್ಥಭಾವಕ್ಕೆ ಉದಾತ್ತರೂಪವನ್ನು ಕೊಡುವ ಆವಶ್ಯಕತೆಯನ್ನು ಪ್ರತಿಪಾದಿಸುವುದುಂಟು. ಈ ತತ್ವವೂ ಕೇಡಿಗೆ ಸಂಚಕಾರ. ಏಕೆಂದರೆ ಸ್ವಾರ್ಥವೇ ಮೂಲಸ್ವಭಾವವೆಂದ ಬಳಿಕ, ಅದು ಸ್ವಾಭಾವಿಕವಾಯ್ತು. ಪರೋಪಕಾರವೇ ಅಪವಾದ; ಅಸ್ವಾಭಾವಿಕ ಕಾರ್ಯವೆಂದು ಹಾಗಾಗುವುದು. Greatest good of the greatest number ಎಂಬ ತತ್ವವು ಜೀವನ ಗುರಿಯಾಗಿರಬೇಕೆಂದ ಮಿಲ್ ಮೊದಲಾದವರು ಪ್ರತಿಪಾದಿಸಿದರು. ಸರಿ; ಆದರೆ ಇದನ್ನು ಪರಮಾರ್ಥದಲ್ಲಿ ಒಪ್ಪಿಕೊಂಡರೂ End justifies the means ಎಂಬ ವಿಚಾರವು ತಪ್ಪು ಎಂದು ಒಪ್ಪಿಕೊಳ್ಳುವ ವರೆಗೆ ಮಾನವ ಸಮಾಜಕ್ಕೆ ಗಂಡಾಂತರವು ಎಂದೂ ತಪ್ಪಿಲ್ಲ. ಯುದ್ಧದಿಂದ ಲೋಕಕಲ್ಯಾಣ ಮಾಡಹೊರಟ ಅಶ್ವಮೇಧಾದಿ ಭಾರತೀಯ ರಣಸಂಗ್ರಾಮಗಳಿಂದ ಆದ ಅನಾಹುತವಂತೂ ಹಳೆಯ ಕತೆಯಾಯ್ತು. ಇತ್ತೀಚಿನ ಯೂರೋಪಿಯ ಯುದ್ಧಗಳಿಂದಲೂ ಈ ಮಾತಿನ ಮನವರಿಕೆಯಾಗುವಂತಿದೆ.

ಬಡವರ ದುಃಖಗಳಿಂದ ತಲ್ಲಣಗೊಂಡು ಕಳವಳಿಸಿ ಮಾರ್ಕ್ಸನು ಸಮತಾವಾದವನ್ನು ಪ್ರತಿಪಾದಿಸಿದನು. ಆದರೆ, ವರ್ಗಕಲಹದ ಉಪದೇಶವು ಅವನ ಉದಾತ್ತ ತತ್ವದ ವಿಕಾಸಕ್ಕೂ ಪ್ರಚಾರಕ್ಕೂ ವಿಪರೀತ ಆತಂಕಗಳನ್ನು ಉಂಟುಮಾಡಿದೆ. ಮಾರ್ಕ್ಸನು ಸಾಧನಶುದ್ಧಿಗೆ ಏನೂ ಬೆಲೆಯನ್ನೇ ಕೊಟ್ಟಿಲ್ಲ. ಬಡವರ ಕಲ್ಯಾಣದ ಹೆಸರಿನಲ್ಲಿ ಯಾವ ಅನ್ಯಾಯವೂ ನ್ಯಾಯವೇ! ಎಂತಹ ಕ್ರೂರಕೃತ್ಯವೂ ಪವಿತ್ರವೇ! ಮಾನವ ಕುಟುಂಬದ ಅನಿವಾರ್ಯದ ವಿಭಾಗವೆಂದು ರಾಷ್ಟ್ರವನ್ನೂ ತನ್ಮೂಲಕ ಮಾನವಹಿತ-ಪ್ರವೃತ್ತಕ ರಾಷ್ಟ್ರೀಯತ್ವವನ್ನೂ ಒಪ್ಪುವ ಗಾಂಧೀಜಿಯಂತಹರಿಗೂ 'ರಾಷ್ಟ್ರೀಯ ವೃತ್ತಿ'ಯವರೆಂದು ಆರೋಪಿಸುವ ಸಮತಾವಾದೀ ರಾಯರುಂಟು! ಪ್ರಾದೇಶಿಕ ಅಭಿಮಾನ, ರಾಷ್ಟ್ರೀಯತ್ವ ಎಂದೊಡನೆ ತಲೆಶೂಲೆ; ಆದರೆ ವರ್ಗಕಲಹವು ಒಪ್ಪಿಗೆ! ಸಾಧನಶುದ್ಧಿಗೆ ಮಹತ್ವವಿಲ್ಲ. ಬಡವರ ಉದ್ಧಾರದ ಹೆಸರಿನಲ್ಲಿ ಶ್ರೀಮಂತರೆಂಬವರ ದ್ವೇಷವು ದ್ವೇಷವಲ್ಲವೋ? ಕೂಲಿಕಾರರ ಓತದ ಕೃತಿಗಳ ನಿಮಿತ್ತದಿಂದ ಆ ಜನದೊಳಗೆ ದ್ವೇಷ ಅಸೂಯಾದಿ ಭಾವನೆಗಳಿಗೆ ಧೂಪಹಾಕಿ, ಅವರ ಮೈ

ಮರೆಯಿಸಿ ಕುಣಿಯಹಚ್ಚುವುದು ಯಾವ ನೀತಿ? ದೊಡ್ಡ ದೊಡ್ಡ ಕಾರಖಾನೆಗಳಿಂದ ಲಕ್ಷಾವಧಿ ಕೂಲಿಕಾರರು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಎರವಾಗುವ ಹೊತ್ತು ಬಂದಿದೆ. ಆದಕಾರಣ, ವಿಕೇಂದ್ರೀಕರಣದ ಉಪಾಯವನ್ನು ಗಾಂಧೀಜಿ ಹೇಳಿದರು. ವೈಯ್ಯಕ್ತಿಕ ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲದ ಸಮತಾವಾದವು ಲೋಕವಿಕಾಸಕ್ಕೆ ಸಹಕಾರಿ ಯಾಗಲಾರದು.

ಸಮತಾವಾದವಾಗಲಿ ಅಥವಾ ಅಂಥ ಬೇರೆ ಯಾವುದೇ ತತ್ವವಾಗಲಿ ಯಾರ ಸಲುವಾಗಿ? ಸಮಾಜ ವೆಂದರೇನು? ಅಉ ವ್ಯಕ್ತಿಗಳ ಹೊರತಾಗಿ ಮುಂದೆ ಉಂಟೇ? ಅಥವಾ ಸಮಾಜ ಇಲ್ಲವೆ ರಾಷ್ಟ್ರವು ತಾತ್ವಿಕ; ವ್ಯಕ್ತಿಯೇ ವಾಸ್ತ . ವ್ಯಕ್ತಿಯನ್ನೇ ಮರೆತ ಅಥವಾ ಕಡೆಗಣಿಸಿದ ಯಾವ ಉದಾತ್ತ ತತ್ವವೂ ಹೆಚ್ಚು ದಿನ ವ್ಯವಹಾರ್ಯವೆನಿಸಿ ಬಾಳದು. ಆದರ್ಶಸಮಾಜ ರಚನೆಯ ಮಬ್ಬಿನಲ್ಲಿ ವ್ಯಕ್ತಿಯ ವೈಶಿಷ್ಟ್ಯಗಳನ್ನೇ ಲೆಕ್ಕಿಸದೆ, ವ್ಯಕ್ತಿಗಳನ್ನು ಕೇವಲ ಯಂತ್ರಸ್ವರೂಪಕ್ಕೆ ಇಳಿಸುತ್ತಿರುವ ಎಲ್ಲ ವಾದಗಳೂ ವಿವಾದಾಸ್ಪದಗಳೇ. ಆದುದರಿಂದಲೇ ವಾದ-ಇಝಂ ಎಂಬುದು ಹುಚ್ಚುರೋಗ. ಇದರಿಂದ ತಲೆಕೆಡಿಸಿಕೊಂಡವರಿಗೆ ತಾರತಮ್ಯವು ಉಳಿಯುವುದಿಲ್ಲ. ಅತಿವಾದಿಗಳಾಗಿ ತಮ್ಮ ತಮ್ಮ ಸಂಘಟನೆಯ ಆವೇಶದಲ್ಲಿ ವ್ಯಕ್ತಿಗಳ ವ್ಯಕ್ತಿತ್ವವನ್ನು ನಾಶಮಾಡುತ್ತಿದ್ದಾರೆ.

ವ್ಯಕ್ತಿಯು ಅಗಾಧ, ಅದ್ಭುತಶಕ್ತಿಯ ಆಗರವಾಗಿದೆ. 'ಅತಿಪರಿಚಯಾತ್ ಅವಜ್ಞಾ'! ವ್ಯಕ್ತಿವ್ಯಕ್ತಿಗಳಲ್ಲಿ ಹುದುಗಿರುವ ಆ ದಿವ್ಯ ಚೈತನ್ಯ ಶಕ್ತಿಯು ಎಂತಹ ಅಪೂರ್ವ ವಸ್ತು! ಲೋಕ, ರಾಷ್ಟ್ರ ಅಥವಾ ಸಮಾಜವೆಂಬ ಹೆಸರಿನಲ್ಲಿ ಸಲ್ಲಿಸುವ ಪೂಜೆ ಯಾರಿಗೆ? ಅದು ಮಾನವ ಹೃದಯ ಗುಹಾನಿಹಿತ, ಈ ಚೈತನ್ಯದ ಆರಾಧನೆಯು ತಾನೆ? ಈ ಜೀವನ ದೇವತೆಯನ್ನೇ ಮರೆತು, ವರ್ಗಕಲಹ-ಜಾತಿದ್ವೇಷ-ಜನಾಂಗಗಳಲ್ಲಿ ಮತ್ಸರ-ರಾಷ್ಟ್ರಗಳಲ್ಲಿ ಆಕ್ರಮಿಕ ಭಾವನೆಯ ವಿಷಬೀಜಗಳನ್ನು ಬಿತ್ತುವ 'ವಾದ'ಗಳು ಸಮಾಜವಿಕಾಸಕ್ಕೆ ಪೋಷಕವಾಗಲಾರವು. ಚೇತನಶಕ್ತಿ ಅಥವಾ ಚಿತ್‌ಶಕ್ತಿಗೆ ಸ್ವತಂತ್ರವಾದ ಅಸ್ತಿತ್ವವನ್ನು ಒಪ್ಪಿಕೊಳ್ಳದೆ ನಡೆದ ವಿಶ್ವಶಾಂತಿಯ ಎಲ್ಲ ಪ್ರಯತ್ನಗಳೂ ಬೂದಿಯಲ್ಲಿಯ ಹೋಮ. ಮಾನವೇಂದ್ರರಾಯರು ಅನುಭವದಿಂದ ಮುಪ್ಪಾಗಿ, ಇತ್ತೀಚಿಗೆ ವ್ಯಕ್ತಿಗೆ ಪ್ರಾಶಸ್ತ್ಯವನ್ನು ಕೊಡುವ 'ನವಮಾನವತಾವಾದ'ದ ಯೋಗಿಗಳಾಗಿರುವುದು ಕೇಳ ಬರುತ್ತದೆ. ಆದರೆ, ಮಾನವನೊಳಗಿನ ಅನಂತಶಕ್ತಿಯ ದಿವ್ಯಾಂಶವನ್ನು ನಿಃಸಂದಿಗ್ಧ ರೀತಿಯಲ್ಲಿ ಒಪ್ಪಿಕೊಳ್ಳುವ ಭೌತವಾದದ ಬಲೆಯೊಳಗಿಂದ ಅವರ ಬುದ್ಧಿಯು ಇನ್ನೂ ಮುಕ್ತವಾಗಿಲ್ಲ.

'ಮಾನವ' ಎಂಬ ಪ್ರಬಂಧದಲ್ಲಿ ಮ್ಯಾಕ್ಸಿಂ ಗಾರ್ಕಿಯು ಜನಸಾಮಾನ್ಯರಿಗೂ, ಸಾಹಿತಿಗಳಿಗೂ ಒಂದು ಪ್ರಾರ್ಥನೆಯನ್ನು ಮಾಡಿದ್ದಾನೆ. ಮಾನವನನ್ನು 'ಶೂನ್ಯ'ನೆಂದು ಬಗೆಯಬೇಡಿ; ಮಾನವನನ್ನು ನೋಡಿ ಆಶ್ಚರ್ಯಯುಕ್ತರಾಗಲು ಕಲಿಯಿರಿ; ಎಂದು ಆತನ ವಿಜ್ಞಾಪನೆ. ಮಾನವರಲ್ಲಿ ಅಡಕವಾಗಿರಲು ಅದ್ಭುತ ಶಕ್ತಿಯನ್ನು ಮರೆತು ಲೋಕವು ಹಾನಿಗೀಡಾಗುತ್ತಲಿದೆಯೆಂದು ಆತನು ಮಿಡುಕಿದ್ದಾನೆ. ಮಾನವನೊಳಗಿನ ಕೀಳ್ಮೆಯನ್ನೇ ನೆನೆದು, ಅಂತಹ ಚಿತ್ರಗಳನ್ನೇ ಬರೆದು, ತಮ್ಮ ಅಂತರಂಗವನ್ನೂ ಲೋಕದ ಅಂತಃಕರಣವನ್ನೂ ಅಪವಿತ್ರಗೊಳಿಸಿ, ಕಲುಷಿತಮಾಡುವ ಜನರನ್ನೂ ಸಾಹಿತಿಗಳನ್ನೂ ಗಾರ್ಕಿಯು ಮಹಾರೋಗಿಗಳೆಂದು ಕರೆದಿದ್ದಾನೆ. ಪತಿತರೆನಿಸುವವರಲ್ಲಿಯೂ ಅಡಗಿರುವ ಮಹಿಮೆಯನ್ನು ಬಹಿರಂಗಪಡಿಸಿ, ಲೋಕಕ್ಕೆ ಬೆಳಕಿನ ದಾರಿಯನ್ನು ತೋರಲು ಗಾರ್ಕಿಯು ಬಿನ್ನವಿಸಿದ್ದಾನೆ. ಆದರೆ, ಗಾರ್ಕಿಯ ಈ ವಿಚಾರಗಳು ರಶಿಯನ್ ಕಮ್ಯುನಿಸ್ಟ ತತ್ವಜ್ಞಾನದ ಅಥವಾ ಬೇರೆ ಯಾವುದೇ ಏಕಾಂಗಿ ವಾದಗಳ ಚೌಕಟ್ಟಿನಲ್ಲಿ ಸರಿಹೋಗುವುದು ದುಸ್ತರ. ಏಕೆಂದರೆ ಗಾರ್ಕಿಯ ಈ ವಿಚಾರಗಳು ಜನರನ್ನು ಭೌತವಾದದಿಂದ ದೂರ ಒಯ್ಯುತ್ತವೆ. ಮಾನವನೊಳಗಿನ ಚಿತ್‌ಶಕ್ತಿಯನ್ನು ಆದರಿಸಲು, ಗೌರವಿಸಲು, ಪೂಜಿಸಲು ಒತ್ತಾಯಪಡಿಸುತ್ತವೆ. 'ಚಿತ್'ದ ಉಪಾಸನೆಯೆ ಜೀವನಸಾರಸರ್ವಸ್ವವೆಂದು ಒಪ್ಪಿಕೊಂಡಲ್ಲಿ ವ್ಯಕ್ತಿಯ ಜೀವನಕ್ಕೆ ಬೆಲೆ ಬರುವುದು. ಪಕ್ಷವನ್ನು ಬಲಿಷ್ಠಮಾಡುವುದಕ್ಕಾಗಿ ಜನರಲ್ಲಿ ಪಕ್ಷಾಭಿಮಾನ ಆವೇಶ ತುಂಬಿ, ಅವರಿಗೆ ಉಳಿದ ಪಕ್ಷದೊಳಗಿನ ಗುಣಾಂಶವೇ ತಿಳಿಯದಂತೆ, ಹೆರವರ ಬಗೆಗೆ ಬರಿಯ ದುರ್ಭಾವನೆಗಳೇ ಉಂಟಾಗುವಂತೆ ಮಾಡುವುದು ಅನ್ಯಾಯ, ಅನೀತಿ ಎಂದು ಹೇಳಬೇಕಾಗುತ್ತದೆ.

ರಶಿಯದ ಕ್ರೊಪೊಟ್‌ಕಿನ್‌ನ (೧೯೦೦) ಸ್ವಯಂಶಾಶ್ವತ ವ್ಯಕ್ತಿ ಮಹಾತ್ಮ್ಯೆಯ ಅ-ನಾಯಕತ್ವವಾದವು ಮಾನವನೊಳಗಿನ ದಿವ್ಯಶಕ್ತಿಗೆ ಪ್ರಾಶಸ್ತ್ಯವನ್ನು ಕೊಡುವುದೇ ಆಗಿದೆ. ಸಾಮಾಜಿಕ ಹೊಣೆಗಳನ್ನು ತುಚ್ಛ ಮಾಡದೆ ವ್ಯಕ್ತಿಯು ತನ್ನ ಜೀವನವನ್ನು ಈ ಬಗೆಯಲ್ಲಿ ಅರಳಿಸಿಕೊಳ್ಳಬಹುದಾದರೂ ಇಡೀ ಸಮಾಜವೇ ಅಥವಾ ಬಹುಸಂಖ್ಯಾಕರು ಈ ವೃತ್ತಿಯವರಾದಾರೆಂದೆಣಿಸುವುದು ಅಸ್ವಾಭಾವಿಕ. ಹಾಗೆ ಒತ್ತಾಯಪಡಿಸಿದರೆ ಕೃತ್ರಿಮತೆ ತಲೆಯೆತ್ತುತ್ತದೆ. ವಿಕಾಸವಾಗುತ್ತಿರುವುದು ನಿಜ. ಆದರೆ, ಅದು ಆಗುವ ಕ್ರಮವಾವುದು? ತನ್ನ ತಾನೆ ಆಗುವುದೆಂಬುದು ಹುಸಿ. ಮನುಷ್ಯೇತರ ಪ್ರಾಣಿಗಳಲ್ಲಿ ವಿಕಾಸದ ಒಲವು ವಿನಾಶದ ಕಡೆಗೇ ಇದೆ. ಹುಲಿ-ಸಿಂಹಗಳ ಕುಲವು ಕಣ್ಮರೆಯಾಗುತ್ತಲಿದೆ. ಗುಡ್ಡದಂತಹ ಗಾತ್ರದ ಸರೀಸೃಪ ಮಹಾವಂಶಗಳ ತಳಿಯು ಹಲ್ಲಿಯಂತಾಗಿರುವುದು. ಮಾನವನೊ? ವಿಕಾಸಗೊಳ್ಳುತ್ತಿರುವುದೇ ನಿಜವಿದ್ದರೆ ಅದು ಕೇವಲ ತನ್ನ ಧೀಶಕ್ತಿಯಿಂದ, ಚಿತ್‌ಶಕ್ತಿಯ ಬಲದಿಂದ ಮಾತ್ರವಲ್ಲದೆ ತನ್ನತಾನೆ ಸುಧಾರಣೆ ಹೊಂದುತ್ತಲಿದ್ದಾನೆಂಬುದು ನಿರಾಧಾರವಾದ ವಿಧಾನ. ಲಂಡನ್ ಸ್ಕೂಲ್ ಆಫ್ ಎಕೊನೊಮಿಕ್ಸದ ಡೈರೆಕ್ಟರರಾದ ಮಿ. ಕಾರ್ ಸ್ಯಾಂಡರ್ಸರು ಹಾಲ್ಡೆನ್ನರ ಮಾತುಗಳನ್ನೇ ಎತ್ತಿಬರೆದ ವಿಚಾರವು ಮನನೀಯವಾಗಿದೆ:

> The course of evolution has generally been downwards. The majority of species have degenerated or become extinct or what is perhaps worse, have gradually lost many of their functions. The ancestors of oysters and barnaches had heads. Snakes have lost their limbs and penguins their power of flight. Man may just as easily lose his intelligence.... If, as appears to be the case at present in Europe and North America, the less intelligent of our species continue to breed more rapidly than the able, we shall probably go the way of dodo and the kiwi...........It seems to me altogether probable, says T.B. S. Haldane in another place that man will take his course unless he takes conscious control of his evolution within the next few thousand years'. All that need be said by way of comment is that 'hundreds' would be more appropriate than 'thousands'.

- Evolution. Edited by R. G. DeBeer
1938, p. 125

Conscious control of self ಅಗತ್ಯ. ತನ್ನ ತಾನೇ ವಿಕಾಸವಾಗುವದೆಂಬ ವಿಚಾರವು ನಿರಾಧಾರ. ಸಾಗಿದತ್ತ ಸಾಗಲಿ, ನಾವು ಹೀಗೆ ನಡೆಯುವವರೇ. ತಿದ್ದಿಕೊಳ್ಳುವವರಲ್ಲ; 'ಸೆಲ್ಫ್‌ಕಂಟ್ರೋಲ್' ಎಂದು ಸಂಯಮ ನಿಯಮ ನಮಗೆ ಹೇಳಬೇಡಿ. ಭೋಗಕ್ಕಾಗಿ ಜೀವ ಜನ್ಮತಾಳಿದೆ; ಸಾಯುವುದರೊಳಗಾಗಿ ಶಕ್ಯವಿದ್ದಷ್ಟು ವಿಲಾಸ, ವಿಹಾರ ಮಾಡುವುದೇ ಗುರಿ. ಇನ್ನೊಬ್ಬರು ತಮಗೆ ಅಡ್ಡಿಮಾಡಬಾರದೆಂದು ಎಷ್ಟೋ ಅಷ್ಟು ಸಜ್ಜನಿಕೆ ಸಾಕು; ಎಂಬ ಹೀನಭೌತವಾದದಿಂದ ಮಾನವರ ಪ್ರಗತಿಯ ಆಸೆಯಿಲ್ಲ. ಮೂಲಭೂತ ಸತ್‌ಪ್ರವೃತ್ತಿಯು ಜೀವಧಾರಣೆಗೆ, ಶರೀರ ಧರ್ಮಕ್ಕಾಗಿ ಸಂಕುಚಿತ ಸ್ವಾರ್ಥವು ತಲೆಯೆತ್ತುತ್ತದೆ. ಹಲವು ಜೀವಗಳೊಡನೆ ತನ್ಮಯತೆಯಲ್ಲಿಯೇ ಅದಕ್ಕೆ ಮಹಾನಂದ, ನಿಜಾನಂದ, ಎಂಬ ದೃಷ್ಟಿಯು ದೃಢವಾದಲ್ಲದೆ Conscious control of self ಯಾತಕ್ಕೆ? ಈ ಪದಸಮುಚ್ಚಯಕ್ಕೆ ವಿಶೇಷ ಅರ್ಥವೆ ಉಳಿಯುವುದಿಲ್ಲ. ಸ್ವಾರ್ಥಸಾಧನೆಗಾಗಿಯೆ

Conscious control of self ಇದ್ದರೆ, ಅದು ಹುಲಿ-ಹಾವುಗಳಿಗಿಂತಲೂ ಭೀಕರ ಪ್ರಾಣಿ. ಮನುಷ್ಯರೂಪೀ ಕ್ರೂರಮೃಗ ಸಂಯಮ, ದೂರದೃಷ್ಟಿ, ಸವಿಮಾತಿನ ಸಾಧನಗಳಿಂದ ಸಮಾಜದಲ್ಲಿ ತಮ್ಮ ಸ್ವಾರ್ಥದ ಚೆಲ್ಲಾಟ ನಡೆಸಿದ ನರಪಶುಗಳನ್ನು ಜೀವನದ ಎಲ್ಲ ರಂಗಗಳಲ್ಲಿಯೂ ನೋಡುತ್ತೇವೆ. ಧರ್ಮ, ರಾಜಕಾರಣ, ಸಾಹಿತ್ಯ ಮೊದಲಾದೆಡೆಗಳಲ್ಲಿ ಇಂತಹರಿಂದ ಪವಿತ್ರವಾದ ಜೀವನಗಂಗೆಯ ನೀರು ರಾಡಿ-ಬಗ್ಗಡವಾಗಿದೆ. ಆದಕಾರಣ Conscious control of selfದ ಹಿಂದಿನ ಮನೋಭೂಮಿಕೆಯು ಮೂಲದಲ್ಲಿ ಸತ್ ಪ್ರವೃತ್ತಿಯಾಗಿರಲೇ ಬೇಕಲ್ಲವೆ? ಇಲ್ಲಸಾದರೆ ಲೋಕ ವಿನಾಶಕ್ಕೆ-ವಿನಾಶದ ಕಡೆಗಿನ ವಿಕಾಸಕ್ಕೆ ಕಾರ್‌ಸಾಂಡರ್ಸರು ಹೇಳುವಂತೆ ಸಾವಿರ ವರ್ಷಗಳ ಆವಶ್ಯಕತೆಯೂ ಬೇಡ. ನೂರು ವರ್ಷ ಸಾಕು; ಇತ್ತ ಅಣುಬಾಂಬು, ಕರಾಳ ಕೆನ್ನಾಲಗೆಗಳನ್ನು ಚಾಚಿ, ನೂರು ವರುಷಗಳಾದರೂ ಏತಕ್ಕೆ, ತಾನು ಕ್ಷಣಾರ್ಧದಲ್ಲಿ ಲೋಕವನ್ನು 'ಪೂರ್ಣ' ಮಾಡಿ ಬಿಡುವೆನೆಂದು ಕೊಕ್ಕರಿಸಿ ನಕ್ಕು ನುಡಿಯುತ್ತಲಿದೆ!

ತಂಡಗಳ ಕಾಲವು ಆಯ್ತು; ಮತಗಳ ಯುಗವು ಮುಗಿಯಿತು; ರಾಜ-ಸಮ್ರಾಜರ ಅವತಾರವು ತೀರಿತು; ಬಂಡವಾಳಗಾರಿಕೆಯ ಅವಸಾನ ಕಾಲವು ಬಂತು. ರಾಷ್ಟ್ರ-ರಾಷ್ಟ್ರಗಳ ನಡುವಿನ ಅಭೇದ್ಯ ಮೇರೆಗಳು ನೆಲಸಮವಾಗಿ, ಮಾನವ ಕುಟುಂಬವು ಒಂದುಗೂಡುವುದರ ಕಡೆಗೆ ವಿಕಾಸವು ನಡೆದಿರುವಲ್ಲಿ ಸಂದೇಹವಿಲ್ಲ. ಯಾವ ದೇಶವೂ ಇಂದು ತನ್ನಷ್ಟಕ್ಕೆ ತಾನು ಉಳಿಯುವೆನೆಂಬ ವಿಚಾರವು ಅವಿಚಾರವೆನಿಸದೆ ಇರಲಾರದು. 'ನಾವು ವೈಭವ ಶಿಖರದಲ್ಲಿದ್ದೇವೆ; ನಮಗೆ ಕಂಗಾಲ ಯೂರೋಪಿಯ ರಾಷ್ಟ್ರಗಳ ಕೋಲಾಹಲದ ಗೌಜಿ ಏತಕ್ಕೆ' ಎಂದು ಅಮೇರಿಕೆಯು ಕೆಲವು ಬಾರಿ ದೂರಸರಿದು ನಿಲ್ಲಬಯಸಿತು. ಆದರೆ, ಅದು ಅಸಾಧ್ಯವೆನಿಸಿ ಜಾಗತಿಕ ವ್ಯವಹಾರಗಳಲ್ಲಿ ತನ್ನ ಸ್ಥಾನ-ಮಾನಗಳನ್ನು ಕಾಯ್ದುಕೊಳ್ಳಲು ಹಲವು ಆಟಗಳನ್ನು ಅದು ಆಡುತ್ತಲಿದೆ. ಏರಿಕೆಯಲ್ಲಿದ್ದಾಗ ಹಿಂದಕ್ಕೆ ಜಾಗತಿಕ ಅಗ್ರಪೂಜೆಯನ್ನು ಪಡೆವ ಕಾಲದಲ್ಲಿ ಭಾರತವು ತನ್ನ ಗಡಿಗಳನ್ನು ಮುಚ್ಚಿಕೊಂಡಿತು. ಕೆಳಮಟ್ಟದಲ್ಲಿರುವ ಹೊರನಾಡುಗಳಿಗೆ ಹೋಗಿ ತನ್ನ ದೇಶಬಾಂಧವರು ಕೆಡಬಾರದೆಂಬ ಆದರ ಉದ್ದೇಶವಿರಬಹುದು. ಸಮುದ್ರಯಾನವನ್ನೆ ಬಹಿಷ್ಕರಿಸಿತು. ಸಿಂಧುದೇಶ ದಾಟಿದರೆ ಪ್ರಾಯಶ್ಚಿತ್ತವೆಂದು ಸಾರಿತು. ಆದರೆ, ಹೊರಗಿನವರು ಒಳನುಗ್ಗುವುದು ತಪ್ಪಲಿಲ್ಲ. ಸಿಂಧೂದೇಶವೂ ಅಪವಿತ್ರವಾಯ್ತು. ತಾವು ಪವಿತ್ರರು; ಹೊರಜಗತ್ತಿನ ಸಂಪರ್ಕದಿಂದ ನಮ್ಮ ಮಡಿ ಹಾಳಾಗುತ್ತದೆ; ಎಂದು ತಮ್ಮಷ್ಟಕ್ಕೆ ತಾವು ಇರಬಯಸಿದ ಭಾರತೀಯರ ಪಾಡು ನಾಯಪಾಡಾದುದನ್ನು ಹಿಂದಿನ ಇತಿಹಾಸವು ಹೇಳುತ್ತದೆ. ಆದುದರಿಂದ ಇಂದು ಲೋಕದಲ್ಲಿ ಗೌರವದಿಂದ ಬದುಕಲಿಚ್ಛಿಸುವವರೆಲ್ಲ ಜಾಗತಿಕ ದೃಷ್ಟಿಯವರಾಗಲೇಬೇಕು. ಅದಕ್ಕನುಗುಣವಾಗಿ ತಮ್ಮ ಆಚಾರ-ವಿಚಾರಗಳನ್ನು ಮಾರ್ಪಡಿಸಿಕೊಳ್ಳಲೇಬೇಕು. ಇನ್ನು ಮೇಲೆ ಒಂದು ಜಗತ್ತು; ನಾವೆಲ್ಲ ಅಭಿನ್ನ ಮಾನವ ಜನಾಂಗವೆಂಬ ಭಾವವು ಎಲ್ಲರಲ್ಲಿ ದೃಢವಾಗಬೇಕು. ಸಾಮಾಜಿಕ ವಿಕಾಸವು ಈಗ ಈ ಮಟ್ಟದಲ್ಲಿ ಕೆಲಸಮಾಡುತ್ತಲಿದೆ.

ಕಳೆದ ಮೊದಲನೆಯ ಮಹಾಯುದ್ಧದ ನಂತರ ರಾಷ್ಟ್ರಸಂಘದ ವಿಚಾರವು ಮೂರ್ತಸ್ವರೂಪವನ್ನು ತಾಳಿತು. ಆದರೆ, ಅದರಲ್ಲಿ ರಾಷ್ಟ್ರಗಳ ವೈಯುಕ್ತಿಕ ಸ್ವಾರ್ಥವು ಹಿಮ್ಮೆಟ್ಟಿದ್ದಿಲ್ಲ. ತತ್‌ಪರಿಣಾಮದಿಂದ ಎರಡನೆಯ ಮಹಾಯುದ್ಧವಾಯ್ತು. ಇನ್ನೊಂದು ಸಂಯುಕ್ತ ರಾಷ್ಟ್ರಸಂಘವು ತಲೆಯೆತ್ತಿತು. ಆದರೆ ಇದರಿಂದಲೂ ವಿಶ್ವಶಾಂತಿಗೆ ಸಹಾಯವಾದೀತೆಂದು ತೋರುವುದಿಲ್ಲ. ಮಲಿನೊವಿಸ್ಕಿ ಮೊದಲಾದ ಸಮಾಜಶಾಸ್ತ್ರಜ್ಞರು ಜಾಗತಿಕ ಸರಕಾರದ ಸ್ಥಾಪನೆಯಾಗಬೇಕೆಂದು ಸೂಚಿಸಿದ್ದಾರೆ. ಲಾಸ್ಕಿ ಪ್ರಭೃತಿಗಳು ವಿಶ್ವಶಾಂತಿಯ ಯೋಜನೆಗಳನ್ನು ಹೇಳುತ್ತಲಿದ್ದಾರೆ. ಆದರೂ ಮೂರನೆಯ ಮಹಾಯುದ್ಧವನ್ನು ತಡೆಯುವುದು ಶಕ್ಯವಾಗುವಂತೆ ತೋರುವುದಿಲ್ಲ. ಇನ್ನು ಮುಂದಿನ ಒಂದೆರಡು ದಶಕಗಳಲ್ಲಿ ಆ ನಿಟ್ಟಿನಲ್ಲಿ ಪ್ರಯೋಗಗಳು ನಡೆಯಲಿವೆ. ಯಾವುದೇ ಜ್ಞಾನವು ಪ್ರಯೋಗಗಳಿಂದ ಮೊದಲೆ ಮಾಡಿ ನೋಡಿ ಕಲಿಯುವುದರಿಂದ ಮಾತ್ರ ಬರುವುದು. ತ್ರಿಕಾಲಜ್ಞಾನ, ಅಂತರ್‌ಜ್ಞಾನ ಅಥವಾ ಅಪರೋಕ್ಷಜ್ಞಾನ ಎಂಬುವೆಲ್ಲ ಬಾಲಿಶ ಮಾತುಗಳು. ಯಾರೂ ಪೂರ್ಣರಿಲ್ಲ. ಯಾರಿಗೂ ಜ್ಞಾನದ ಗುತ್ತಿಗೆ

ದೊರೆತಿಲ್ಲ. ಜ್ಞಾನವು ಅನಂತ. ಕಾಲಕಾಲಕ್ಕೆ ಹೊಸ ಹೊಸ ಬೆಳಕನ್ನು ಕಾಣುತ್ತ ಮುಂದುವರಿಯುವುದೂ ಪ್ರಯೋಗ ನಡೆಸುವುದೂ ಮಾನವರ ಕರ್ತವ್ಯವು.

ಇಂದಿನದೊ ಜಾಗತಿಕ ಚಟುವಟಿಕೆಗಳ ಕಾಲ. ಜಾತೀಯತೆ ಅಥವಾ ರಾಷ್ಟ್ರೀಯತೆಯು ಗೌಣವಾಗುತ್ತಲಿವೆ. ರಾಷ್ಟ್ರರಾಷ್ಟ್ರಗಳಲ್ಲಿ ಬಲ್ಲರೆಲ್ಲರ ಸಹಾನುಭೂತಿ, ಸಹಕಾರಗಳ ಆವಶ್ಯಕತೆಯುಂಟಾಗಿದೆ. ಜಾಗತಿಕ ಸಂಘ ಸಂಸ್ಥೆಗಳು ಸ್ಥಾಪಿತವಾಗುತ್ತಲಿವೆ. ಇಂದಿನಷ್ಟು ದೊಡ್ಡ ಪ್ರಮಾಣದಲ್ಲಿ ಜಾಗತಿಕ ಅರಿವು ಸಮಾಜದಲ್ಲಿ ಹಿಂದೆ ಎಂದೂ ಇರಲಿಲ್ಲ. ಪ್ರಾಣಿ ಶಾಸ್ತ್ರಜ್ಞನಾದ ಹಾಲ್ಡೆನ್ನನು Conscious Contro। of self ಎಂದು ಹೇಳುವನಾದರೆ, ಸಮಾಜಶಾಸ್ತ್ರಜ್ಞನಾದ ಜೇನ್ಸಬರ್ಗನು Conscious self directing ಎಂದು ಇನ್ನು ಮುಂದಿನ ದಾರಿಯನ್ನು ಸೂಚಿಸುವನು. ಕಂನಾಡ ವಚನಕಾರರು 'ತನ್ನ ಅರಿವೇ ಗುರು' ಎಂದು ವ್ಯಕ್ತವಡಿಸಿರುವರು. ಇಲ್ಲಿ ಅರಿವು Consciousness ಯಾತರದು? ತನ್ನ ಸ್ವಾರ್ಥದ್ದೇ? ಅಲ್ಲ; ಈ ಅರಿವು ಮಾನವ ಕುಟುಂಬದ್ದು; ಲೋಕಕಲ್ಯಾಣದ್ದು; ಅರ್ಥಾತ್ ಸತ್ಯದ್ದು. ಏಕೆಂದರೆ ಸತ್ಯದಿಂದ ಹೊರತಾದ ಕಲ್ಯಾಣವೇ ಆಗಲಾರದು. Greatest good of the greatest number ಎನ್ನುವುದನ್ನು ಭಾರತೀಯರು ಸ್ವಲ್ಪ ತಿದ್ದಿಹೇಳಿರುವ ರೀತಿ ಹೀಗಿದೆ. 'ಯದ್ಭೂತಹಿತಂ ಅತ್ಯಂತಂ ಏತತ್ ಸತ್ಯಂ ಮತಂ ಮಮ' ಸತ್ಯವೇ ಕಲ್ಯಾಣವು ಹೇಗೋ, ಹಾಗೆ ಕಲ್ಯಾಣವೇ ಸತ್ಯ. ಆದರೆ, ಗುರಿ ಅತ್ಯಂತ ಕಲ್ಯಾಣವಾಗಿರಬೇಕು. ಪ್ರೇಯವಲ್ಲ; ಶ್ರೇಯ. ಶುಚಿಯಾದ ಸಾಧನಗಳಿಂದ ಎಂದರೆ ಸತ್‌ಮಾರ್ಗದಿಂದ ಸಾಧಿಸಿದ, ಹೆಚ್ಚುಕಾಲ ಹೆಚ್ಚು ಜನರಿಗೆ ಉಪಕಾರವಾಗಬಹುದಾದ ಸುಖವೇ ಕಲ್ಯಾಣ. ಅದೇ ಶ್ರೇಯಸ್ಸು ತನ್ನರಿವನ್ನೇ ಗುರುವಾಗಿಟ್ಟುಕೊಂಡು ಅತ್ಯಂತ ಲೋಕಕಲ್ಯಾಣದ ದಾರಿಯಲ್ಲಿ ಎಂದರೆ ಸತ್‌ಮಾರ್ಗದಲ್ಲಿ ಬೆಳಕಿನಿಂದ ಬೆಳಕಿಗೆ ಸಾಗುತ್ತ ಮುನ್ನಡೆವಲ್ಲಿಯೇ ಮಾನವ ಸಮಾಜದ ವಿಕಾಸವಿದೆ.

ವ್ಯಕ್ತಿ ಮತ್ತು ಸಮಾಜ

ವ್ಯಕ್ತವಾಗಿ ಇರುವದರಿಂದ ಅದು ವ್ಯಕ್ತಿ. ವ್ಯಕ್ತವಾಗಿ ಎಂದರೆ ಸ್ಪಷ್ಟವಾಗಿ ಕಾಣುತ್ತಿರುವದೆಂದು ಇದರ ಭಾವ. ಉಳಿದವುಗಳಿಂದ ಬೇರೆಯಾಗಿ ಇಲ್ಲದ್ದು, ಕಾಣುವ ಗುಣವನ್ನು ಕಳೆದುಕೊಳ್ಳುತ್ತಿದೆ. ತೋರವಾಗಿ(ಎಂದರೆ ದೋರ-ಥೋರ-ಡೋರ) ಇರುವಂತಹದು ಜನರ ಕಣ್ಣಿಗೆ ಸಹಜವಾಗಿ ತೋರಬಲ್ಲದು. ಅಲ್ಪವಾದುದು ಅಡಗಿಹೋಗುವುದು. ತೋರವಾಗಿ ಎದ್ದು ಕಾಣುವುದೇ ಕಣ್ಣಸೆಳೆಯುವುದು. ಆದುದರಿಂದ, ತನ್ನದೇ ಆದ ಅಂದವನ್ನುಳ್ಳ ವಸ್ತು ವ್ಯಕ್ತಿ ಅಥವಾ ವ್ಯಕ್ತಿತ್ವವನ್ನುಳ್ಳದು ವ್ಯಕ್ತಿ. ಹಾಗಾದರೆ ವ್ಯಕ್ತಿತ್ವವೆಂದರೇನು? ವ್ಯಕ್ತಿತ್ವವೆಂದರೆ ತನ್ನತನ. ತನ್ನದೇ ಆದ ಭಾವ-ಸ್ವಭಾವ, ಇದೇ ವೈಶಿಷ್ಟ್ಯ. ಉಳಿದವರಿಂದ ಬೇರ್ಪಡಿಸುವ ಗುಣವಿಶೇಷ. ವಿಶೇಷ ಗುಣವಿಲ್ಲದ್ದು ವ್ಯಕ್ತಿಯೆನಿಸದು.

ಎಲ್ಲರಂತೆ ಇದ್ದೂ ಎಲ್ಲರಿಂದ ವಿಂಗಡವಾಗಿ ತೋರುವ ವಿಶೇಷಾಂಶವು, ಕೆಲವೊಂದು ಪ್ರಮಾಣದಲ್ಲಿ ಪ್ರತಿಯೊಂದು ವಸ್ತು-ಜಾತದಲ್ಲಿ ಇದ್ದೇ ಇರುತ್ತದೆ. ಗಿಡಗಳು ಎನ್ನುವುದರಿಂದ ಅರಿಕೆಗೆ ಬರುವ ಬೇರು, ಬಡ್ಡಿ, ಎಲೆ ಮೊದಲಾದ ಸಾಮಾನ್ಯ ಸಂಗತಿಗಳನ್ನು ಬಿಟ್ಟರೂ ಮಾವಿನ ಠೀವಿಯೆ ಬೇರೆ. ಆಲದ ಹರಹೆ ಬೇರೆ; ಹಲಸಿನ ನಿಲುವೆ ಒಂದು, ಬಕುಳದ ರೀತಿಯೆ ಒಂದು. ಒಂದೊಂದು ಗಿಡದ ಪಾಂಗು ಬೇರೆ. ಬೇರೆ ಒಂದರಂತೆ ಇನ್ನೊಂದಿಲ್ಲ. ಸ್ಪಷ್ಟ ಪದಾರ್ಥಗಳ ಬಗೆಯೇ ಇಂತು ವಿವಿಧ.

ವಸ್ತುಜಾತಗಳ ಹೊರಮೈಯಲ್ಲಂತೂ ಸರಿಯೇ. ಪ್ರಾಣಿಗಳ ಒಳಗೂ ವೈಶಿಷ್ಟ್ಯವಿರುವುದು ಅನುಭವಕ್ಕೆ ಬರುತ್ತದೆ. ಒಂದೊಂದು ಬಗೆಯ ಕುದುರೆ, ನಾಯಿಗಳ ಸ್ವಭಾವವು ಒಂದೊಂದು ತೆರ. ಮೇಲ್ಮಟ್ಟದ ಪ್ರಾಣಿಗಳಲ್ಲಿ ಇನ್ನೂ ವಿಶೇಷ. ಮನುಷ್ಯರೇ ಇದಕ್ಕೆ ಉತ್ತಮ ನಿದರ್ಶನ. ಮನುಷ್ಯರೆಲ್ಲರೂ ಕಣ್ಣು-ಮೂಗಿನವರೇ ಆದರೂ ಒಬ್ಬರಂತೆ ಇನ್ನೊಬ್ಬರ ಕಣ್ಣಿಲ್ಲ. ಮೂಗಿಲ್ಲ! ಉಳಿದುವುಗಳಂತೆ ಹೊರಗಣ ರೂಪ-ಆಕಾರ-ಬಣ್ಣಗಳ ವೈಶಿಷ್ಟ್ಯದ ಮೂಲಕ ಇವರಿಗೆ ವ್ಯಕ್ತಿ ಎಂಬುದು ಉಚಿತವಾಗಿರುವಂತೆ, ಒಳಗಣ ಗುಣವಿಶೇಷಗಳಿಂದಲೂ ಇವರಿಗೆ 'ವ್ಯಕ್ತಿ' ಎಂಬುದು ಪ್ರತಿಯೊಬ್ಬರಿಗೂ ಸಲ್ಲುವುದು. ಆದಕಾರಣ ಸಂಪೂರ್ಣ 'ವ್ಯಕ್ತಿ'ಗಳು ಮಾನವರೇ. ಮೀನಾಕ್ಷಿ, ವಿಶಾಲಾಕ್ಷಿ, ಕಮಲಾಕ್ಷಿ, ಮದಿರಾಕ್ಷಿ, ಕಾಮಾಕ್ಷಿ, ಹರಿಣಾಕ್ಷಿ ಎಂದು ಮುಂತಾಗಿ ಕಣ್ಣ ಸೊಬಗಿನಿಂದ ಕೆಲವರು ವ್ಯಕ್ತಿಗಳಾಗಿರಬಹುದು. ಉಷ್ಟ್ರಗತಿ, ಹಂಸಗಮನ, ಗಜಗಮನ ಎಂದು ಮುಂತಾದ ನಡಿಗೆಗಳಿಂದಲೂ ಕೆಲವರು ವ್ಯಕ್ತಿಗಳೆನಿಸುತ್ತಿರಬಹುದು. ಸುರೂಪ ಕುರೂಪಗಳಿಂದ ವ್ಯಕ್ತಿತ್ವವು ಬರುವುದಾದರೆ ಸುಗುಣ-ದುರ್ಗುಣಗಳಿಂದ ವ್ಯಕ್ತಿತ್ವವನ್ನು ಸಂಪಾದಿಸಬಹುದಾಗಿದೆ.

ಅನಾಯಾಸವಾಗಿ ಬಂದುದರಲ್ಲಿ ವ್ಯಕ್ತಿಯ ಹಿರಿಮೆಯೇನು? ಸ್ವಶ್ರಮದಿಂದ ಸಂಪಾದಿಸಿದುದಕ್ಕೆ ಬೆಲೆ ಹೆಚ್ಚು ಅಲ್ಲವೆ? ಆದಕಾರಣ ಪ್ರಕೃತಿದತ್ತ ಸುರೂಪ-ಕುರೂಪದ ಬಾಹ್ಯ ವ್ಯಕ್ತಿತ್ವಕ್ಕಿಂತ ಸ್ವಂತದ ಪರಿಶ್ರಮ, ಸಂಸ್ಕೃತಿ ಸೂಚಕವಾದ ಆಂತರಿಕ ವ್ಯಕ್ತಿತ್ವದ ಮಹಿಮೆಯೇ ಅಪೂರ್ವ, ಲೋಕವಂದ್ಯರಾದ ಸಾಕ್ರೆಟೀಸ, ಗಾಂಧೀಜಿಯವರೆ ಇದಕ್ಕೆ ದೃಷ್ಟಾಂತ. ಇವರನ್ನು ಸುರೂಪಿಗಳೆಂದು ಹೇಳುವುದು ಅರಸಿಕತನವೆನಿಸದೆ ಇರದು. ಆದರೂ ಇವರು ತಮ್ಮತ್ತ ಲೋಕವನ್ನಾಕರ್ಷಿಸಿದ್ದು ಹೇಗೆ? ಮನದ ಚೆಲುವಿನಿಂದಲೇ ಅಲ್ಲವೆ? ಮೈಯ ಚೆಲುವು ವಯೋಮಾನದಂತೆ ಬಾಡುತ್ತದೆ. ಮನದ ಚೆಲುವು ವಯೋವೃದ್ಧಿಯಾದಂತೆ ಅಭಿವೃದ್ಧಿಯನ್ನು ಹೊಂದಬಲ್ಲದು, ಹಾಗೆ ಸರಿಯಾಗಿ ನಡಕೊಂಡಲ್ಲಿ ಮಾತ್ರ. ಹೊರಗಣದು ಹೆಚ್ಚಾಗಿ ಪೂರ್ವಾರ್ಜಿತ; ಒಳಗಣದು ಮುಖ್ಯವಾಗಿ ಸ್ವಾರ್ಜಿತ. ಇಪ್ಪತ್ತರ ಒಳಗಣ ಮೈಮನಗಳು ಹಿಗ್ಗುತ್ತಿರುವಲ್ಲಿ ವ್ಯಕ್ತಿಗೆ ಶ್ರೇಯಸ್ಸು ವಿಶೇಷವಿಲ್ಲ. ನಾಲ್ವತ್ತರ ಮುಂದಣ ವಯಸ್ಸಿನ ಮೊಗದಲ್ಲಿ ಕಾಣುವ ಸಂತಸ, ಸುಹಾಸದ ಹೊಳಪು ಆ ವ್ಯಕ್ತಿಯ ನಿಷ್ಕಲ್ಮಷ ಮನದ ಸಾಕ್ಷಿ. ಈ ಅಂದದ ವೈಶಿಷ್ಟ್ಯವನ್ನು ಸಂಪಾದಿಸಲಿಕ್ಕೆ ವ್ಯಕ್ತಿಯು ಅವಿಶ್ರಾಂತ ಪರಿಶ್ರಮ ಪಡಬೇಕಾಗುತ್ತದೆ. ಸಾಧನೆ ಇಡಬೇಕಾಗುತ್ತದೆ. ಇದುವೇ ತಪಸ್ಸು; ಎಂದರೆ ಕಾಯುವುದು. ಈ ತೇಜಸ್ಸು ಕಾಯ್ದ ಫಲ. ಕಾಯುವುದಕ್ಕೆ ತಾಳ್ಮೆ ಬೇಕು, ತಾಳಿದುದೇ ಬಾಳುವುದು.

ಪ್ರದರ್ಶನ ಪ್ರೀತಿಯಿಲ್ಲದ ಮಾನವರೇ ವಿರಳ. ಚಿಗುರಿ ಹೊರಹೊಮ್ಮಬೇಕೆಂಬ ಹಂಬಲವು ಅಂತಃಶಕ್ತಿಯ ಆರೋಗ್ಯದ ಲಕ್ಷಣ, ಸಾಕಾಗೋದು ಸಾವು ಸಮೀಪಿಸಿದ ಕುರುಹು; ಅನಾರೋಗ್ಯದ ಸೂಚನೆ. ಲೋಕಕ್ಕೆ ತಾನು ತೋರಬೇಕು - ಘೋರನಾಗಬೇಕು ದೋರನಾಗಬೇಕು ದೊರೆಯಾಗಿ ಮೆರೆಯಬೇಕೆಂಬ ಆಕಾಂಕ್ಷೆಯು ಮಾನವ ಜೀವಿಯಲ್ಲಿ ಹುಟ್ಟಿನಿಂದಲೆ ಅಂಕುರರೂಪದಲ್ಲಿರುತ್ತದೆ. ಇದೇ ಮಹತ್ವಾಕಾಂಕ್ಷೆ. ಮಹತ್ತಿನ ಆಕಾಂಕ್ಷೆ. ಜೀವವನ್ನು ಧಾರಣಮಾಡಿರುವ ದೇಹ ಮತ್ತು ದೇಹವು ಬೆಳೆವ ನೆಲ ಹಾಗು ಸನ್ನಿವೇಶಗಳಿಗೆ ಅನುಗುಣವಾಗಿ ಮಹತ್ವಾಕಾಂಕ್ಷೆಯು ರೂಪಗೊಳ್ಳುವುದು; ಹಿರಿದು ಕಿರಿದಾಗುವುದು ಮಾನವರಲ್ಲಿ ವೈಯಕ್ತಿಕ ವೈಶಿಷ್ಟ್ಯಕ್ಕೆ ಕಾರಣವಾಗುವ ಗುಣವಿದು.

ಈ ಸಂದರ್ಭದಲ್ಲಿಯೆ ಮಾನವನಿಗೆ 'ಸಮಾಜ'ದ ಅಸ್ತಿತ್ವದ ಅನುಭವವು ಬರುವುದು. ಸಾಮಾನ್ಯರು ಅಸಾಮಾನ್ಯರಾಗಲು ಯಾರ ಮೆಚ್ಚಿಕೆಯನ್ನು ಹಾರೈಸುವರೊ ಅದುವೆ 'ಸಮಾಜ'. ಅಥವಾ ವ್ಯಕ್ತಿಗಳು ಯಾರಿಂದ ಹೆಸರು ಪಡೆಯಬೇಕೆಂಬ ಉತ್ಕಟ ಆಕಾಂಕ್ಷೆಯಿಂದ ಹೆಣಗುವರೊ ಅದು ಸಮಾಜ. ಅವ್ಯಕ್ತವಾಗಿದ್ದೂ ಅದು ವ್ಯಕ್ತಿಗಳನ್ನು ಆಳುತ್ತದೆ. ಕೃತಿಗಳಿಗೆ ಅನುಗುಣವಾಗಿ ವ್ಯಕ್ತಿಗಳಿಗೆ ಹೆಸರು ಬರುತ್ತದೆ. ತಾಯ್ತಂದೆಗಳು ತೊಟ್ಟಿಲಲ್ಲಿ ಇಟ್ಟ ಹೆಸರು ಬೇರೆ; ಮಾನವರು ಮನದಲ್ಲಿ ಆಶಿಸುವ ಹೆಸರು ಬೇರೆ. ಸಮಾಜವು ಬಹಿರಂಗವಾಗಿ ಕೊಟ್ಟ ಹೆಸರು ಬೇರೆ. ಇವುಗಳಲ್ಲಿ ಕೊನೆಯ ಎರಡರಲ್ಲಿ ಮೇಳವಿದ್ದರೂ ಆ ವ್ಯಕ್ತಿಯು ತನ್ನ ಸಿದ್ಧಿಯನ್ನು ಪಡೆದಿತ್ತೆಂದು ಹೇಳಬಹುದು. 'ಮೋಹನ' ಎಂದು ತಾಯ್ತಂದೆಗಳು ತಮ್ಮ ಇಷ್ಟದಂತೆ ಕರೆಯುತ್ತಿರಬಹುದು. ಹೆತ್ತವರಿಗೆ ಹೆಗ್ಗಣವೂ ಮುದ್ದು. ಆದರೆ ತಾನು ನಿಜವಾಗಿಯೂ ಲೋಕಮೋಹಕನಾಗಬೇಕೆಂದು ಆ ವ್ಯಕ್ತಿಯು ಕನವರಿಸುತ್ತಲೂ ಇರಬಹುದು. ಆದರೆ ಕೊನೆಯ ಪರೀಕ್ಷೆಯಲ್ಲಿ ಲೋಕ-ಸಮಾಜದಿಂದಲೂ 'ಮೋಹನ'ನೆಂದೇ ಹೆಸರು ಹೊಂದುವ ಭಾಗ್ಯವು ಕೋಟಿಕೋಟಿಗಳಲ್ಲಿ ಏಸು ಜನಕ್ಕೆ? 'ಪರೀಕ್ಷಕರ ಕಣ್ಣಲ್ಲಿ ಮಣ್ಣೆರಚಬೇಕೆಂಬ ವಿದ್ಯಾರ್ಥಿಗಳ ಚಪಲ ನಿಂದ್ಯ. ಸರಿಯಾಗಿ ಅಭ್ಯಾಸ ಮಾಡಿ ಪ್ರಾಮಾಣಿಕ ರೀತಿಯಿಂದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದರಲ್ಲಿಯೇ ಅವರ ಕಲ್ಯಾಣವಿದೆ. ಪರೀಕ್ಷಕರ ಕಣ್ಣಿಗೆ ಇಂಗು ಹಚ್ಚಿ ಎಂತೋ ಪಾಸಾಗಿ ಪದವಿಗಳನ್ನು ಪಡೆದ ಮಾತ್ರಕ್ಕೆ ನಿಜವಾದ ವಿದ್ಯೆ ಬಂದಂತಾಗಲಿಲ್ಲ. ಆದಕಾರಣ, ಅಭ್ಯಾಸದ ಪರಿಶ್ರಮಗಳಿಗೆ ಬೇಸರಿಯದೆ ಚೆನ್ನಾಗಿ ದುಡಿದು ಅದರ ಸತ್ಫಲಗಳನ್ನು ಸವಿವಲ್ಲಿ ಇರುವ ಆನಂದ, ಸಮಾಧಾನ ಬೇರೆ ಯಾತಕ್ಕೂ ಬಾರದು.......' ಎಂದು ಮುಂತಾಗಿ ಶಾಲೆಗಳಲ್ಲಿ ಶಿಕ್ಷಕರೂ, ಮನೆಗಳಲ್ಲಿ ಪಾಲಕರೂ, ಊರಲ್ಲಿ ನಾಗರಿಕರೂ ವ್ಯಾಸಪೀಠದಲ್ಲಿ ಮುಂದಾಳುಗಳೂ ಏಕಕಂಠದಿಂದ ಉಪದೇಶಗೆಯ್ಯುವುದುಂಟು. ಆದರೆ, ಈ ಪ್ರವಚನಕಾರರಲ್ಲಿಯೆ ಹಲರು,

ತಾವು ಶಿಷ್ಟರು, ವಿಶಿಷ್ಟರು, ಮಹಾವ್ಯಕ್ತಿಗಳು ಎಂದೆನಿಸಿಕೊಂಬ ಹವ್ಯಾಸದಿಂದ ವಿದ್ಯಾರ್ಥಿಗಳು ಪರೀಕ್ಷಕರೊಡನೆ ಆಡುವ ಆಟವನ್ನೇ ಇವರೂ ಸಮಾಜದೊಡನೆ ಹೂಡುವುದುಂಟು. ಪರೀಕ್ಷೆಯ ಪ್ರಶ್ನೆಗಳನ್ನು ಮುಂದಾಗಿಯೆ ಕಂಡುಹಿಡಿವ ಮಾಟವನ್ನು ಬಲ್ಲ ವಿದ್ಯಾರ್ಥಿಗಳು ಕೆಲವರಿದ್ದರೆ, ಸತ್ತ ಮತದಾರರನ್ನು ಚುನಾವಣೆಗಟ್ಟೆಗೆ ತಂದು ಮತಪಡೆವ ಮಾಂತ್ರಿಕನ ಸಾಮರ್ಥ್ಯವುಳ್ಳ ಹಿರಿಯರೆಂಬವರು ಹಲರು! ಯಾರಿಂದಲೊ ಬರೆಯಿಸಿ ತಮ್ಮ ಹೆಸರಿನಲ್ಲಿ ಪ್ರಕಟಿಸುವ ಚಪಲ! ಬೇರೆ ಗ್ರಂಥಗಳಿಂದ ಎತ್ತಿಕೊಂಡು ತಮ್ಮ ಪ್ರತಿಭೆಯ ಫಲವೆಂದು ಹೇಳುವ ಚಪಲ! ಪ್ರಸಿದ್ಧಿಯನ್ನು ಪಡೆಯುವುದಕ್ಕಾಗಿ ಸುಳ್ಳು ನಟನೆ ಮಾಡುವ ಚಪಲ! ಅಧಿಕಾರ, ಪದವಿ, ಪಟ್ಟಗಳನ್ನು ದೊರಕಿಸಲು ಸನಿಹದ್ದೆಂದು ಅಡ್ಡದಾರಿಯಿಂದ ಬೇಗ ಸಾಗುವ ಚಪಲ! ಜೀವನದ ಒಂದೊಂದು ರಂಗದಲ್ಲಿಯೂ ಹಲವೊಂದು ಬಗೆಯ ಚಪಲಗಳು, ವಿಶಿಷ್ಟತೆಯನ್ನುಳ್ಳ ವಿಶೇಷ ವ್ಯಕ್ತಿಯೆಂದೆನಿಸಿಕೊಳ್ಳಲು, ನಾನಾ ಸೋಗಿನಲ್ಲಿ ಆಟಮಟದ ಕೈಚಳಕ, ಬಾಯ್‌ಚಳಕಗಳನ್ನು ಹಿರಿಯರಿಂದಲೆ ಮಾಡಿಸುತ್ತಿವೆ! ಹಿರಿಯಕ್ಕನ ಚಾಳಿ ಮನೆಮಂದಿಗೆ. ಅಥವಾ ಗುರುವಿನಂತೆ ಶಿಷ್ಯರು. ತರುಣರಿಗೆ ನಾಡಿನ ಹಿರಿಯರೆ ಅಲ್ಲವೆ ಮೇಲ್ಪಂಕ್ತಿ? ತರುಣ ಜನಾಂಗದ ನೈತಿಕ ಮಟ್ಟವು ಅವರ ಹಿಂದಿನ ತಲೆಮಾರಿನ ಹಿರಿಯರಿಗಿಂತ ವಿಶೇಷ ಕೀಳು ಇಲ್ಲವೆ ಮೇಲು ಆಗಿರಲಾರದು. ಅಥವಾ ವಿಶೇಷ ವ್ಯತ್ಯಾಸವೇ ಇದ್ದುದಾಗಿದ್ದರೆ ಆ ಬಗೆಯ ಪ್ರತಿಕ್ರಿಯೆಗೆ ಆ ಕಾಲದ ಹಿರಿಯರೇ ಪರ್ಯಾಯದಿಂದ ಕಾರಣರು.

ವ್ಯಕ್ತಿಯೆನಿಸಿಕೊಂಬ ಮಹತ್ವಾಕಾಂಕ್ಷೆಯು ರಾಜಮಾರ್ಗದಿಂದ ಕೈಗೂಡದೆ ಇದ್ದರೆ, ಅದು ವಕ್ರಮಾರ್ಗವನ್ನು ಅನುಸರಿಸುತ್ತದೆ. ಮನೆತನದ ಹಿರಿಯರಲ್ಲಿ ಸತ್‌ಪ್ರವೃತ್ತಿಯು ಜಾಗೃತ ಸ್ಥಿತಿಯಲ್ಲಿದ್ದ ಪ್ರಮಾಣದಲ್ಲಿ ಮಕ್ಕಳು ನೇರವಾದ ದಾರಿಯಿಂದ ಸಾಗುವರು. ಸಮಾಜದಲ್ಲಿ ಸತ್ ಪ್ರವೃತ್ತಿಯು ಊರ್ಜಿತದಲ್ಲಿರುವ ಪ್ರಮಾಣದಲ್ಲಿ ಮನೆತನಗಳೂ ಸಂಘ ಸಮಿತಿಗಳೂ ಗೌಣಸಾಧನಗಳನ್ನು ಉಪಯೋಗಿಸಲು ಮನಸು ಮಾಡವು. ಸಮಾಜವು ಆದರ್ಶವೆಂದು ಭಾವಿಸಿದ ವ್ಯಕ್ತಿಗಳ ಹಾಗೂ ಅದೇ ಸಮಾಜದೊಳಗಿನ ತೀರ ಕೆಳಮಟ್ಟದ ಹೀನಪ್ರವೃತ್ತಿಯವರೆಂದು ಹೆಸರಾದ ತಿರಸ್ಕೃತ ಸಮಾಜದೊಳಗಿನ ಕೀಳುವ್ಯಕ್ತಿಗಳ, ಇವೆರಡೂ ಬಗೆಯವರು-ಹೊರಗೆ ಬಾಯ್‌ಮಾತಿನಲ್ಲಿ ಆಡುವ, ಅಲ್ಲ-ಅಂತರಾಳದಲ್ಲಿ ಹುದುಗಿಸಿಕೊಂಡು ಅನುಸರಿಸುತ್ತಿರುವ ನೈತಿಕಶ್ರದ್ಧೆಯ ಬೇರೀಜಿನ ಸರಾಸರಿಯೇ ಸಾಮಾಜಿಕ ಸತ್‌ಪ್ರವೃತ್ತಿಯ ಜಾಗೃತ ಸ್ಥಿತಿ. ಸತ್ಯವು ಅನಂತವಾಗಿದ್ದರೂ ಆಯಾ ಸಮಾಜದ ಪಾಲಿನ ಸತ್ಯದ ಪರಿಮಿತಿಯು ಇಷ್ಟೇ. 'ಸತ್ಯಮೇವ ಜಯತೇ' ಎಂಬುದು ಪರಮ ಅರ್ಥದಲ್ಲಿ ವಾಸ್ತವವಲ್ಲ. ಸಮಾಜದಲ್ಲಿರುವ ಸತ್ಯದ ಅರಿವಿನ ಉದ್ದಗಲಗಳಲ್ಲಿ ಹಿಡಿಸಲಾರದ ಹೊಸಸತ್ಯಕ್ಕೆ ಆ ಕಾಲದಲ್ಲಿಯೆ ಅಥವಾ ಆಗಲೇ ಗೆಲುವು ದೊರೆಯುವುದು ಎಂತೊ! ಭೂಲೋಕದಲ್ಲಿ ಆಧಾರವಿಲ್ಲದ-ಜನತೆಯ ಮನೋಬುದ್ಧಿಗಳಲ್ಲಿ ಪ್ರವೇಶ ದೊರೆತು ಇಂಬುಗೊಳ್ಳದ ಸತ್ಯವು, ಇನ್ನೂ ಉದಯಿಸಲಿರುವ ಮಹಾನಕ್ಷತ್ರದಂತೆ; ಅದರ ಕಿರಣಗಳು ಲೋಕದ ಕಣ್ಣಿಗೆ ಇನ್ನೂ ನಿಲುಕುವುದಿಲ್ಲ. ಸಾಮಾಜಿಕ ನೀತಿ-ಅನೀತಿಗಳನ್ನು ತೂಗಿ ನಿರ್ಣಯಿಸುವಾಗ ಆಯಾ ಕಾಲದಲ್ಲಿ ಬಳಕೆಯಲ್ಲಿದ್ದ ತೂಕ-ಮಾಪುಗಳನ್ನು ಉಪಯೋಗಿಸುವುದು ನ್ಯಾಯ. ಸಾರ್ವಕಾಲಿಕವಾದ ಸತ್ಯದ ಕೋಷ್ಟಕಕ್ಕೆ ಅಲ್ಲಿ ನಿರುಪಯುಕ್ತತೆ ಹಾಗೆ ಮಾಡುವುದು ಅನ್ಯಾಯ.

ಸಮಾಜವು ಮನಸಾ ಒಪ್ಪಿಕೊಂಡ ಸತ್ಯದ-ನ್ಯಾಯ ನೀತಿಯ ಮೇರೆ ಮೀರಿ ನಡೆದು ಬಾಳಲು ಯಾವ ಕುಟುಂಬಸ್ಥನೂ ಧೈರ್ಯಮಾಡಲಾರ. ಸಮಾಜದ ಇಚ್ಛಾಶಕ್ತಿಯ ಮುಂದೆ ಸರಕಾರವೂ ತಲೆವಾಗಬೇಕಾಗುವುದು. ಸಮಾಜಕ್ಕೆ ಸಮ್ಮತವಿಲ್ಲದ ಕಾಯಿದೆಗಳು, ಕಾಯಿದೆ ಪುಸ್ತಕಗಳಲ್ಲಿಯೇ ಉಳಿಯುವುವು. ಸರಕಾರಕ್ಕಿಂತಲೂ ಸಮಾಜದ ಈಶಶಕ್ತಿಯು ವಿಶೇಷ ಪ್ರಭಾವಶಾಲಿಯೆಂಬುದನ್ನು ಇಲ್ಲಿ ಮನಗಾಣಬಹುದು. ಆದರೆ, ತಾವು ಕಂಡ ಅಥವಾ ಬಗೆದು ಭಾವಿಸಿಕೊಂಡ ಸತ್ಯದ ಒರೆಗಲ್ಲಿಗೆ ಸಮಾಜದ ಕೆಲವೊಂದು ರೀತಿ-ನೀತಿಗಳು ಸರಿಹೋಗುತ್ತಿದ್ದಿಲ್ಲವಾದರೆ, ಅಂತಹರು ತಮ್ಮ ವಿಚಾರಗಳನ್ನು ಜನರೆದುರಿಗೆ ಮಂಡಿಸಿ ಸಮಾಜದಲ್ಲಿ ತಮ್ಮ ಸತ್ಯದ ಹೊಸ ಅರಿವನ್ನು ತಂದು ಕೊಡುವುದು ಅವರ ಕರ್ತವ್ಯವಾಗಿದೆ. ಇದು ಮಹಾವ್ಯಕ್ತಿಗಳ ದಾರಿ. ಇವರು

ಸಮಾಜದ ಪುರಸ್ಕಾರ ಅಥವಾ ತಿರಸ್ಕಾರಗಳನ್ನು ಲೆಕ್ಕಿಸದೆ ತಮ್ಮದೇ ಆದ ದಾರಿಯಲ್ಲಿ ಮುಂದುವರಿಯುತ್ತಾರೆ. ನಿಜವಾದ ಲೋಕಕಲ್ಯಾಣಕ್ಕಾಗಿ ತಾವು ಮನಗಂಡುದನ್ನು ಹೆದರಿ ಹೇಳದೆ ಇದ್ದರೆ ಸತ್ಯಕ್ಕೆ ಅನ್ಯಾಯ ಮಾಡಿದಂತಾಗುವುದೆಂಬ ಆಂತರಿಕ ಒತ್ತಾಯದ ಮೂಲಕವಾಗಿ ಇವರು ಸಮಾಜದ ಕೋಪಕ್ಕೆ ಗುರಿಯಾಗಲಿಕ್ಕೂ ಸಿದ್ಧರಾಗುತ್ತಾರೆ. ಪ್ರವಾಹದ ಎದುರು ಈಜುವ-ಸಂಕಟಕ್ಕೆ ಆಹ್ವಾನಿಸುವ ದಾರಿಯಿದು. ವ್ಯಕ್ತಿಯ ಸತ್ವಪರೀಕ್ಷೆಯಾಗಿ ಅದಕ್ಕೆ ತಕ್ಕಂತೆ ಅದರ ಬೆಳಕು ಹೊರಬೀಳುವುದು.

ಸಾಮಾನ್ಯರಿಗೂ ಇಷ್ಟು ಎದೆಗಾರಿಕೆ ಎಲ್ಲಿ? ಸಾಹಸದ ಕಷ್ಟನಷ್ಟಗಳಂತೂ ಮೊದಲು ಬೇಡ. ಇಂತಹರು ಪಾಪ, ತಮ್ಮ ಉಪಜೀವನದ ಸುಲಭಮಾರ್ಗವನ್ನು ಕಂಡುಕೊಂಡು, ಪರಸಿಯ ಕೂಡ ಜಾತ್ರೆಯೆಂಬಂತೆ ಹೊರಡುವರು. ಗಾಳಿಬೀಸಿದತ್ತ ತಿರುಗುವುದು ಇವರ ಸ್ವಭಾವ. ಆದರೆ, ಇನ್ನು ಕೆಲರು ಈ ವರ್ಗದಲ್ಲಿಯೆ ಸೇರಿಕೊಂಡಿದ್ದರೂ ಅವರ ಕೊಂಬು ಇನ್ನೂ ಮುರಿದಿರುವುದಿಲ್ಲ. ಒಳಗೊಳಗೆ ಅತೃಪ್ತ ಮಹತ್ವಾಕಾಂಕ್ಷೆಗಳು ಹಾಗೆಯೆ ಕುದಿಯುತ್ತಿರುತ್ತವೆ. ಪರಿಸ್ಥಿತಿಗೆ ಬೈಯುತ್ತ, ದೈವಕ್ಕೆ ಶಪಿಸುತ್ತ, ತಮ್ಮ ಹೇಡಿತನಕ್ಕಾಗಿ ಸಮಾಜಕ್ಕೆ, ಸಮಾಜದೊಳಗಿನ ಇನ್ನಾರಿಗೂ ಹರಿಹಾಯ್ದು ತೆಗಳುತ್ತ-ಬೊಗಳುತ್ತ ಕಾಲಹರಣ ಮಾಡುತ್ತಿರುತ್ತಾರೆ. ಇಂತಹರಲ್ಲಿ ಸ್ವಲ್ಪ ಚುರುಕಾಗಿದ್ದವರು ಸಂಧಿಸಾಧಿಸಿ 'ಏನಕೇನ ಪ್ರಕಾರೇಣ' ತಮ್ಮ, ಕಾಲು ಚಾಚಲು ಹವಣಿಸುವರು, ಕೈಸಾಧಿಸುವುದೇ ನೋಡುವರು. ಪಂಕ್ತಿಯಲ್ಲಿ ಬಡಿಸುವುದಕ್ಕೆಂದು ನಿಂತು, ತಮ್ಮ ಹಾಗೂ ತಮ್ಮವರ ಎಲೆಯ ಮೇಲೆ ಸಾರ್ವಜನಿಕ ತುಪ್ಪ ಸುರುವಿ ಉಪಕಾರಕರ್ತರೆಂದು ಹೆಸರಾಗುವರು. ವ್ಯಕ್ತಿತ್ವಕ್ಕಾಗಿ ವ್ಯಕ್ತಿತ್ವವನ್ನು ಪಡೆವ ಹುಚ್ಚು ಹಲವರಿಗೆ. ನಗರಸಭೆಯ ಸದಸ್ಯ, ಸಂಘ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ ಅಥವಾ ಇಂತಹ ಇನ್ನು ಯಾವುದಾದರೂ ಗೌರವದ ಸ್ಥಳಗಳನ್ನು ಅಕ್ರಮಿಸುವ ಪರಾಕ್ರಮಿ ವ್ಯಕ್ತಿಗಳಿವರು. ತಾವು ಸ್ವೀಕರಿಸಬೇಕೆಂದಿರುವ ಸ್ಥಾನದಲ್ಲಿ ನಿಂತು, ತಮ್ಮಿಂದ ಆ ಸ್ಥಾನದ ಗೌರವಕ್ಕೆ ಸರಿಯಾದ ಕೆಲಸ ಮಾಡಲು ಸಾಧ್ಯವೆ? ಅಂತಹ ಯೋಗ್ಯತೆಯಿದೆಯೆ? ಆ ಯೋಗ್ಯತೆಯನ್ನು ತಂದುಕೊಳ್ಳಲು ಪ್ರಯತ್ನ ನಡೆದಿದೆಯೆ? ಎಂಬೀ ತೆರನಾಗಿ ಆತ್ಮ ನಿರೀಕ್ಷಣೆಗೆ ಇವರ ಮನಸ್ಸು ಸಿದ್ಧವಿರುವುದಿಲ್ಲ. ಒಳಗೆ ಹುರುಳಿಲ್ಲವೆಂದು ತಿಳಿದಿದ್ದರೂ ಪ್ರತಿಷ್ಠಿತ ವ್ಯಕ್ತಿಯೆನಿಸಿಕೊಂಬ ಆಶೆಬುರುಕತನದಿಂದ ಸಮಾಜದೊಳಗಿನ ಆಯಕಟ್ಟಿನ ಮೆಟ್ಟುಗಳನ್ನು ವಶಪಡಿಸಿಕೊಳ್ಳುವ ಹೊಂಚುಹಾಕುತ್ತಾರೆ. ಪ್ರಾಸಾದ ಶಿಖರದ ಮೇಲೆ ಕುಳಿತರೂ ಕಾಗೆಯು ಗರುಡವೆನಿಸಲಾರದೆಂದು ಸುಭಾಷಿತಕಾರನು ನಕ್ಕಿದ್ದರೂ ಈ ನಗೆಯ ಕೊಂಕು ತಿಳಿಯುವಷ್ಟು ಸಜ್ಜನಿಕೆಯು ಈ ವರ್ಗದಲ್ಲಿ ಜೀವಂತವಿದ್ದರೆ, ಅವರು ತಮ್ಮ ಮರ್ಯಾದೆಯನ್ನು ಬಿಟ್ಟು ಹೊರಗೆ ಬರಲು ಎಂದೂ ಇಷ್ಟಪಡುತ್ತಿದ್ದಿಲ್ಲ. ಪರರ ಆಕ್ರಮಣ ಮಾಡುವುದೇ ಪರಾಕ್ರಮವೆಂದು ಇವರ ಗ್ರಹಿಕೆಯಾಗಿರುತ್ತದೆ.

ಬೂಟು-ಸೂಟಿನಿಂದ ಬೆಲೆ ಬರುತ್ತಿದ್ದರೆ ಅದನ್ನು ಧರಿಸುವರು; ಖಾದಿ ಹಾಕಿಕೊಂಡಲ್ಲಿ ಮನ್ನಣೆಯಿದ್ದರೆ ಅದೂ ಸರಿಯೇ. ಹೆಸರಿನ ಹಿಂದು ಮುಂದಿನ ಪದಗಳಿಗೆ ಮಹತ್ವವಿದ್ದರೆ ಅದನ್ನು ಪಡೆದುಕೊಳ್ಳಲಿಕ್ಕೆ ಏನುಬಿದ್ದರೂ ಕೊಡಲು ಸಿದ್ಧ. ರಾವಸಾಹೇಬ, ರಾವಬಹಾದ್ದೂರ ಬೇಡವಾದರೆ ಅವನ್ನು ಎಸೆದು ದೇ. ಭ. ರ ಸಾಲಿನಲ್ಲಿ ಸೇರಲು ಸಂಕೋಚವಿಲ್ಲ. ದೇಭ ಇದು 'ದೇಶಭಕ್ತ' ಎಂಬುದರ ಸಂಕ್ಷೇಪವಲ್ಲ; 'ದೇಶಭಕ್ಷಕ' ಎಂಬುದರ ಸಂಕೇತವೆಂದು ಟೀಕೆ ಬಂದರೆ, ಆಗಲಿ; ಇನ್ನು ಅಧಿಕಾರದಲ್ಲಿ ಬರುವ ಪಕ್ಷವಾವುದು? ಭಾಯಿ, ಸಾಥಿ, ಅಥವಾ ಕಾಮ್ರೇಡ ಏನೆಂದರೂ ಸಮ್ಮತ. ಯಾವ ಪದಸಮುಚ್ಚಯಗಳಿಂದ ಜನ ಮೆಚ್ಚಿ ಮಂಕುಗೊಳ್ಳಬಹುದೊ ಅವುಗಳನ್ನು ನಾಮಾಭಿಧಾನದ ಮುಂದೆ ಅಥವಾ ಹಿಂದೆ ಜೋಡಿಸಲು ಯಾವ ಕ್ಷಣಕ್ಕೂ ಒಪ್ಪಿಗೆ. ಇದರೊಡನೆ ಬ್ಯಾಂಕ್‌ಶಿಲ್ಕಿನ ಕಾಗದಗಳಷ್ಟು ಸೇರಿದರೆ ಆ ವ್ಯಕ್ತಿವೈಶಿಷ್ಟ್ಯವೇ ಒಂದು. ವ್ಯವಹಾರದ ಪೇಟೆಯಲ್ಲಿ ತಮ್ಮ ಬೆಲೆಯನ್ನು ಹೆಚ್ಚಿಸಿಕೊಳ್ಳಲು ಜೀವವು ಬಗೆಬಗೆಯಾದ ಹಂಚಿಕೆಗಳನ್ನು ಹುಡುಕಿಕೊಳ್ಳುತ್ತದೆ. ಇಂಗ್ಲಂಡ ರಿಟರ್ನ್‌ಡ್ ಎಂದರೆ ಜನ ಬುದ್ಧಿವಂತನೆಂದು ಬಗೆಯುವರೊ? ಅಮೇರಿಕೆಯಿಂದ ಮರಳಿದವನೆಂದರೆ ಮೆಚ್ಚಿಕೊಳ್ಳುವರೊ? ಅಥವಾ ರಶಿಯಾದ ಲೆನಿನ್, ಸ್ಟಾಲಿನ್‌ರ ಗುಟ್ಟನ್ನು ಅರಿತವನೆಂದರೆ ಬೇಗ ಬೆಪ್ಪಾಗುವರೊ? ಕವಿ, ಸಾಹಿತಿ,

ಕಲಾವಿದ, ಸಂಶೋಧಕ, ತತ್ವಜ್ಞಾನಿ, ರಾಜಕಾರಣಿ, ಭಕ್ತ, ಶರಣ, ದಾಸ-ಯಾವ ವೇಷದಿಂದ ದುಡ್ಡು ದೊರೆತು ಗೌರವ ಸಿಕ್ಕುವುದೊ ಜೀವನ-ನೌಕೆಯ ವಿಜಯಯಾತ್ರೆಯು ವಿಜೃಂಭಣೆಯಿಂದ ಜರುಗುವುದೊ ಆ ದಾರಿ ಇವರದು.

ವ್ಯಕ್ತಿತ್ವವನ್ನು ಪಡೆವ ಮಹತ್ವಾಕಾಂಕ್ಷೆಯಿಂದ ಮುನ್ನುಗ್ಗಲ್ಪಡುತ್ತಿರುವ ಪ್ರತಿಯೊಬ್ಬರೂ ಸಾಮಾನ್ಯವಾಗಿ ಇಂತಹ ಸುಳಿಯಲ್ಲಿ ಸ್ಥೂಲ ಅಥವಾ ಸೂಕ್ಷ್ಮರೂಪದಲ್ಲಿ ಒಮ್ಮೆಯಾದರೂ ಸಿಲುಕಿಕೊಳ್ಳುವರಾದರೂ ಪ್ರಾಮಾಣಿಕರಿದ್ದವರು ಕೈಕೊಂಡ ಕೆಲಸಕ್ಕೆ ಆವಶ್ಯಕವಾದ ಜ್ಞಾನಶಕ್ತಿಗಳನ್ನು ಬೇಗನೆ ಗಳಿಸಿಕೊಂಡು ತಮ್ಮ ಅರ್ಹತೆಯನ್ನು ಕಾರ್ಯರೂಪದಿಂದ ಲೋಕನಿದರ್ಶನಕ್ಕೆ ತಂದುಕೊಡುವರು. ವ್ಯಕ್ತಿತ್ವವನ್ನು ಪಡೆವ ಹಂಬಲವು ತಿಳಿವಳಿಕೆ ಬಂದಂತೆ ಅಳಿಯುವುದು. ಕೇವಲ ವ್ಯಕ್ತಿತ್ವಕ್ಕಾಗಿ ಒದ್ದಾಟ, ಶುದ್ಧ ಡಂಭಾಚಾರ; ತನ್ನ ಯೋಗ್ಯತೆಯನ್ನು ತೂಗಿಕೊಂಡು ಅದಕ್ಕೆ ತಕ್ಕಂತಹ ಲೋಕಹಿತದ ಯಾವುದೊಂದು ಕೆಲಸವನ್ನು ನೆರವೇರಿಸುವುದಕ್ಕಾಗಿ ತತ್ವನಿಷ್ಠೆಯಿಂದ ಕಾರ್ಯಪ್ರವೃತ್ತರಾದ ಪ್ರಾಮಾಣಿಕರಿಗೆ ವ್ಯಕ್ತಿತ್ವವು ತನ್ನ ತಾನೆ ಅನುಸರಿಸುವುದು. ಏನಾದರೂ ಮಾಡಿ ಹೆಸರು ಗಳಿಸುವ ರೀತಿ ಅವರಿಗೆ ಒಗ್ಗದು. ಹೆಸರು ಗಳಿಸುವ ಗಡಿಬಿಡಿಯ ಜನರು ತಮ್ಮ ಹೆಸರು ಕೆಡಿಸಿಕೊಳ್ಳುವಲ್ಲಿ ಸಂದೇಹವೇ ಇಲ್ಲ. ಇಷ್ಟೇ ಅಲ್ಲ; ಇವರ ಕೈಕೊಂಡ ಕೆಲಸವೂ ಹಸಗೆಡುವುದು. ಇಂತಹರು ಸಮಾಜದ ಅವನತಿಗೆ ಕಾರಣರಾಗುತ್ತಾರೆ. ಯೋಗ್ಯತೆ ಇಲ್ಲದೆ ಅಥವಾ ಅದನ್ನು ಮೀರಿ, ಹೆಸರಿನ ಹುಚ್ಚಿನಿಂದಲೇ ಮುಂದೆ ಬಂದು ಮೆರೆದಾಡುವವರನ್ನೂ ಆದರ್ಶರೆಂದು ಯಾವ ಸಮಾಜವು ತನ್ನ ತಲೆಯ ಮೇಲಿರಿಸಿಕೊಳ್ಳುವುದೊ ಅದು ತನ್ನ ಅಧಃಪಾತದ ಪೂರ್ವಸಿದ್ಧತೆಯನ್ನೇ ನಡೆಸುತ್ತದೆ. ಎರಡನೆಯ ಬಾಜೀರಾಯನಂತಹನು ರಾಜನಾಗುವುದು; ಸಮಾಜವು ಅದನ್ನು ವಿರೋಧಿಸದೆ ತೆಪ್ಪಗಿರುವುದು; ಇಂತಹ ಕೃತಿಗಳ ಘೋರ ಪರಿಣಾಮವನ್ನು ಅನುಭವಿಸಿರುವ ಭಾರತವೂ ಅದರ ಪ್ರಾಂತಗಳೂ ಮತ್ತೆ ಅದೇ ದಾರಿಯಲ್ಲಿ ಹೊರಟರೆ ಅದರಂತಹ ದುರ್ದೈವವು ಬೇರೊಂದಿಲ್ಲ. ತತ್ವಾನುಸಂಧಾನದಿಂದ ಜೀವನಪಥದಲ್ಲಿ ಮುಂದುವರಿಸುತ್ತಿರುವ ಪರಿಶುದ್ಧಚಿತ್ತರ ವ್ಯಕ್ತಿತ್ವಕ್ಕೆ ಒಂದು ತೇಜೋವಲಯವು ತನ್ನತಾನೆ ಹಿಂಬಾಲಿಸುವುದನ್ನು ಎಲ್ಲರೂ ಬಲ್ಲರು. ಆದರೆ, ಅಷ್ಟು ಕಷ್ಟ ಯಾರು ಎದುರಿಸಬೇಕು? ತೊಂದರೆಗಳನ್ನು ಅನುಭವಿಸಿಯೂ ನಡೆಸುವ ಲೋಕಹಿತಕಾರಕ ಕೃತಿಗಳಿಂದ ಇವರ ವ್ಯಕ್ತಿತ್ವವು ಬೆಳಗುವುದು. ಇವರ ಹೆಸರು ದೇವಕೋಟಿಗೆ ಸೇರುವುದು. ದೇವರಿಗೆ ನೆರಳು ಇರುವುದಿಲ್ಲವೆಂದು ಹೇಳುವ ವಾಡಿಕೆಯನ್ನು ಇಲ್ಲಿ ನೆನೆದುಕೊಳ್ಳಬಹುದು. ಇವರ ನಾಮಸ್ಮರಣೆಯು ಆಯಾ ತತ್ವಾಭಿಮಾನಿ ಸಾಧಕರಿಗೆ ತಾರಕಮಂತ್ರವಾಗುವುದು.

ತತ್ವನಿಷ್ಠರೇ ನಿಜವಾದ ಆಸ್ತಿಕರು. ತಾವು ಕಂಡ ಸತ್ಯದಲ್ಲಿ ನಿಷ್ಠೆಯುಳ್ಳವರಾಗಿ, ಲೋಕಹಿತಕ್ಕಾಗಿ ಅದರ ಅನುಷ್ಠಾನದಲ್ಲಿಯೇ ಆನಂದಗೊಳ್ಳುವುದು ಇವರ ಸ್ವಭಾವ. ಈ ಬಗೆಯವರಲ್ಲಿ ಕೆಲರು ದೇವರೆಂಬ ವಿಶಿಷ್ಟರೂಪ ಆಕಾರದ ವಸ್ತುವಿನಲ್ಲಿ ನೆಮ್ಮಿಕೊಂಡಿರಲಿಕ್ಕಿಲ್ಲ. ಆದರೂ ಅವರು ಆಸ್ತಿಕರೇ. ಸತ್ಯವೇ ದೇವರು. ಆದುದರಿಂದ ತಾವು ಅರಿತು ಸತ್ಯದಲ್ಲಿ ಶ್ರದ್ಧೆಯಿಟ್ಟು, ಯಾರ ವಿರೋಧವನ್ನೂ ಗಮನಿಸದೆ ಅದರಂತೆ ನಡೆವ ಪ್ರಾಮಾಣಿಕರು ಆಸ್ತಿಕರಲ್ಲದೆ ಇದ್ದರೆ, ಶಿವ-ವಿಷ್ಣು ಮೊದಲಾದ ದೇವರ ಭಕ್ತರೆಂದೆನಿಸಿ, ನಾಮ-ಮುದ್ರೆ-ವಿಭೂತಿಗಳನ್ನು ಬಡಿದುಕೊಂಡು, ಒಳಗೊಂದು ಹೊರಗೊಂದು ತೆರನಾಗಿ ವರ್ತಿಸುವ ವಂಚಕರು ಆಸ್ತಿಕರೊ? ಧನ, ಮಾನ ಅಥವಾ ಕೀರ್ತಿಗಾಗಿ, ಪದವಿ-ಪಟ್ಟಗಳನ್ನು ಪಡೆಯುವುದಕ್ಕಾಗಿ ಬೇಕಾದ ಸಾಧನಗಳನ್ನು ಉಪಯೋಗಿಸಿಕೊಳ್ಳಲು ಹೇಸದ ಸಂಧಿಸಾಧಕರು ಎಷ್ಟೋ ದೇವತಾರ್ಚನೆ, ಸ್ವಾಮಿಪೂಜೆಗಳನ್ನು ನಡಸುತ್ತಿದ್ದರೂ ಅಥವಾ ಆಧುನಿಕ ಪ್ರಕಾರದ ಧಾರ್ಮಿಕ ಸೋಗುಗಳನ್ನು ಹಾಕುತ್ತಿದ್ದರೂ ಅವರು ಶುದ್ಧ ನಾಸ್ತಿಕರೇ ಸರಿ. ಇವರು ದೇವರು, ಧರ್ಮ, ಪರೋಪಕಾರಗಳ ಲಾಭವನ್ನು ತಮ್ಮ ಕ್ಷುದ್ರ ಸ್ವಾರ್ಥಸಾಧನೆಗಾಗಿ ಮಾಡಿಕೊಳ್ಳುವರು. ದೇವರನ್ನೂ ವಂಚಿಸುವ ಹಂಚಿಕೆಗಾರರು. ಏಕೆಂದರೆ ದೇವಕಾರ್ಯಕ್ಕೆ (ಎಂದರೆ ಸತ್ಯಪ್ರವೃತ್ತಿಯ ಅಭಿವೃದ್ಧಿಗೆ) ಇವರು ನೆರವಾಗುವ ಬದಲು ದೇವರನ್ನೆ ಕೆಲಸಕ್ಕೆ ಬಳಸುವರು!

ಕೈಕೊಂಡ ಕಾರ್ಯದ ಅಂತರ್ಗತ ಹಿರಿಮೆಯನ್ನು ಮನಗಂಡು ಶ್ರದ್ಧೆಯಿಂದ ಅದರಲ್ಲಿ ತೊಡಗುವವರೆ, (ಆ ಕಾರ್ಯದಲ್ಲಿ ಸತ್ವವು 'ಅಸ್ತಿ' ಎಂಬ ನೆಚ್ಚಿಕೆಯ) ಆಸ್ತಿಕರು. ಒಳಗೆ ಹುರುಳಿದೆಯೆಂಬು ಎಲ್ಲಿಯೂ ಮನವರಿಕೆಯಾಗಿಲ್ಲ; ಅರ್ಥವಿಹೀನ, ನಿಷ್ಪ್ರಯೋಜಕವೆಂದು ಒಪ್ಪಿಕೊಳ್ಳುತ್ತಿದ್ದೂ ಯಾವುದೊಂದು ಕಾರ್ಯದಲ್ಲಿ ಕೇವಲ ದುಡ್ಡಿಗಾಗಿ ಅಥವಾ ಪ್ರತಿಷ್ಠೆ ಪಡೆಯುವುದಕ್ಕಾಗಿಯೇ ಯಾರು ಸೇರುವರೊ (ನ ಅಸ್ತಿ ಎಂಬವರಾದ್ದರಿಂದ) ನಿಜವಾಗಿಯೂ ಇವರು ನಾಸ್ತಿಕರೇ. ಒಳಗಿನ ಬೆಳಕಿನ ಭಕ್ತರು ಆಸ್ತಿಕರು. ಹೊರಗಿನ ಹೊಳಪಿಗೆ ಮರುಳಾದವರು ನಾಸ್ತಿಕರು. ಒಳಬೆಳಕಿನ ಸತ್ವಪೂಜಕರು ಸ್ವಯಂ ಪ್ರಕಾಶದ ವ್ಯಕ್ತಿಗಳಾಗುತ್ತಾರೆ. ಹೊರಮಿಂಚಿಗೆ ಮನಸೋತವರು ದೀಪದ ಹುಳದಂತೆ ದುರಾಶೆಯ ಕಿಚ್ಚಿನಲ್ಲಿ ಬೆಂದು ಬೆಂಡಾಗುವರು. ಮೊದಲನೆಯವರು ಮುಟ್ಟಿದ ವಸ್ತುವಿಗೆ ಹೊನ್ನಬೆಲೆ ಬಂದರೆ, ಎರಡನೆಯವರು ಹೊನ್ನಿನಿಂದ ತಮ್ಮ ಬೆಲೆಯನ್ನು ಹೆಚ್ಚಿಸಿಕೊಳ್ಳಲು ಹಂಬಲಿಸುತ್ತಾರೆ. ಮೊದಲನೆಯವರು ಪರಿಸ್ಥಿತಿಯ ನಿರ್ಮಾತೃಗಳಾದರೆ ಎರಡನೆಯವರು ಪರಿಸ್ಥಿತಿಯ ಕುನ್ನಿಗಳು. ಮೊದಲನೆಯವರು ತಮಗೆ, ಅಂತರಾಳದಲ್ಲಿ ಸತ್ಯವೆನಿಸಿದ್ದು ನಿಷ್ಠುರ ಸತ್ಯವಾದರೂ ಸಮಾಜದ ಹಿತಕ್ಕಾಗಿ ಹೇಳಲು ಹಿಂಜರಿಯದ ನೈತಿಕ ಧೈರ್ಯಶಾಲಿಗಳಾದರೆ, ಎರಡನೆಯವರು ಅಂತಃಸಾಕ್ಷಿಯ ಕಣ್ಣುಕಳೆದು ತಮ್ಮ ಕೆಲಸ ಸಾಧಿಸಲು ಏನನ್ನೂ ಮಾಡಲು ಹಿಂಜರಿಯದ ಅವಿವೇಕಿ ಸಾಹಸಿಗಳು.

ಸಮಾಜದ ಇವೆರಡೂ ಶಕ್ತಿಗಳ ಸಮೀಪದಲ್ಲಿ 'ಎಂದುದನೆ ಎಂದು ಬಾಳ್ವ' ವ್ಯಕ್ತಿಗಳು ಹಲವೊಂದು ಎಂದುದನೆ ಎಂದು ಬಾಳ್ವಲ್ಲಿ ಯಾರಿಗೂ ನಿಜವಾದ ಆನಂದವಿಲ್ಲ. ಆದರು, ಈ ಪ್ರಸಂಗವು ಏಕೆ ಬರುತ್ತದೆ? ಜೀವನವು ಸುಸೂತ್ರವಾಗಿ ಸಾಗಲೆಂದು; ಧನಾಶೆಯಿಂದ; ಕೆಲವೊಂದು ಕಾರ್ಯಸಾಧನೆಗಾಗಿ ಧನಾಶೆಯಿಂದ; ಗುಣಕ್ಕೆ ಮೆಚ್ಚಿ; ಪ್ರಭಾವಕ್ಕೆ ಮಾರುವೋಗಿ; ಮರುಳಾಗಿ; ಅವರು ಪರಿಪೂರ್ಣರೆಂಬ ಭ್ರಾಂತಿಯಲ್ಲಿ ತಿಳಿಗೇಡಿತನದ ಮೂಲಕ; ಏರುದಾರಿಯ ಕಷ್ಟಕ್ಕೆ ಹೆದರಿ; ಪ್ರವಾಹಪತಿತರಾಗಿ; ರೂಢಿ ಸಂಪ್ರದಾಯಗಳ ಚಕ್ರದಲ್ಲಿ ಸಿಲುಕಿ; ನರಕದ ಭೀತಿಯಿಂದ; ಸ್ವತಂತ್ರ ವಿಚಾರ ಹೊಳೆಯದ್ದಕ್ಕೆ; ನಿರ್ಗತಿಕರಾಗಿ......ಇಂತಹ ಜನ ತಮ್ಮ ಸ್ವತ್ವವನ್ನು ಕಳೆದುಕೊಳ್ಳುತ್ತಾರೆ; ಅಂದಗೇಡಿಗಳಾಗುತ್ತಾರೆ; ಬೆಳಕು ಕಳೆಗುಂದಿ ನಿಸ್ತೇಜರಾಗುತ್ತಾರೆ; ಪರಪ್ರತ್ಯಯನೇಯ ಬುದ್ಧಿಗಳಾಗುವರು. ಮೊದಲು ಇವರೊಳಗಿನ ಸ್ವಂತಬುದ್ಧಿಯ ಎದುರು ಹಲವಾರು ಶಂಕೆಗಳು ಬಂದು ನಿಲ್ಲುತ್ತವೆ. ಎಂದುದನೆ ಎನ್ನದಿರಲು, ಪ್ರಾಮಾಣಿಕವಾದ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಲು ಆದೇಶಿಸುತ್ತವೆ. ತಲೆದೋರಿದ ಪ್ರಾಮಾಣಿಕ ಮತಗಳನ್ನು ಬಚ್ಚಿಡುವ ಚಟವು ಅಂಟಿಕೊಂಡಂತೆ ವ್ಯಕ್ತಿಯಲ್ಲಿ ಸ್ವಂತದ ದೃಷ್ಟಿ ವೈಶಿಷ್ಟ್ಯವು ಬೇಗನೆ ಲುಪ್ತವಾಗುವುದು. ಒರತೆಯ ನೀರನ್ನು ಬಳಸದೆ ಇದ್ದರೆ ಅದರ ಶಲೆ (ಊಟೆ)ಯು ದಿಕ್ಕು ಬದಲಿಸುವುದು; ಬಾವಿ ಬತ್ತುವುದು. ಗವಲ-ಎತ್ತಿನಂತೆ ಎಂದುದಕ್ಕೆ ತಲೆ ಅಲ್ಲಾಡಿಸುವ ಸ್ವಭಾವವು ಮೈಗೂಡಿತೆಂದರೆ ಆ ಬೆಳಕಿನ ಬಂಜೆತನದ ಬಾಳಿನಲ್ಲಿ ಆಶಂಕೆಗಳ ಬಾಧೆಯಿಲ್ಲ. ಸ್ವತಂತ್ರ ವಿಚಾರದ ಜನನದ ಬೇನೆತಿನ್ನುವ ಸಂಕಷ್ಟಗಳಿಲ್ಲ. 'ಹೌದು ಸಾರ್;' 'ಆಗಲಿ ಸಾರ್;' 'ಮಹಾಪ್ರಸಾದ'; 'ಮಹಾಸ್ವಾಮಿ ದಿವ್ಯ ಚಿತ್ತ;' 'ಜೀ ಹಾಂ;' 'ಹಾಂ ಜೀ;' ಎಂದು ಮೃದುಮಧುರ ದೀನಸ್ವರದಿಂದ ಉಸಿರಲಿಕ್ಕೆ ಅಥವಾ ಯಾವುದಾದರೊಂದು ಪಂಥದ ಇಲ್ಲವೆ ವ್ಯಕ್ತಿಯ ವಿಶೇಷ ನಾಮೋಚ್ಚಾರಮಾಡಿ 'ಜೈ ಝ್ಯು' ಎಂದು ಘರ್ಜಿಸಲಿಕ್ಕೆ ಕಲಿತರಾಯಿತು. ಜೀವನದಲ್ಲಿ ಮಧ್ಯಾಹ್ನ ಚಿಂತೆ ದೂರವಾಗುವುದು. ಪ್ರಾಮಾಣಿಕ ಕೆಲಸಗಾರ, ನೆಮ್ಮಿ ನಿಷ್ಠೆಯಿಂದ ನೆಳಲಿಂತೆ ಹಿಂಬಾಲಿಸುವವ, ಪಂಥಾಭಿಮಾನಿ, ಆಚಾರಶೀಲ, ಸಭ್ಯ....... ಎಂದು ಮೊದಲಾದ ವಿಶೇಷಣಗಳೂ ಹೊಗಳಿಕೆಗಳೂ ದೊರೆತು ಇವರ ಬಾಳಿನೊಳಗಿನ ಸಪ್ಪೆತನವು ಅದೆಷ್ಟೋ ಕಡಿಮೆಯಾಗುವುದು. ತನ್ನ ವಿಶಿಷ್ಟದಾರಿಯ ಹೊರತು ಇನ್ನೊಂದು ಕಡೆಗೆ ಮನಸ್ಸು ಸೆಳೆಯಲ್ಪಡಬಾರದೆಂಬುದಕ್ಕೆ ಒಂದು ಹಂಚಿಕೆಯಿದೆ; ತಮ್ಮ ಗುಣಾವಗುಣಗಳಿಗಿಂತ ಇನ್ನೊಬ್ಬರ ಕುಂದುಗಳನ್ನು ಯಾವಾಗಲೂ ನೆನೆಯಬೇಕು. ಜಗತ್ತಿನಲ್ಲಿ ಇನ್ನುಳಿದ ಪಂಥ ಅಥವಾ ಮಹಾವ್ಯಕ್ತಿಗಳಿಗಿಂತಲೂ ತಾನು ಅನುಸರಿಸುತ್ತಿರುವುದೇ ಒಂದು ಅಗಾಧ ಮಹಿಮೆಯುಳ್ಳ ಪರಮಕಲ್ಯಾಣಕಾರಿಯೆಂಬ ಹೆಮ್ಮೆಯನ್ನು ವಿಪರೀತವಾಗಿ ಹೆಚ್ಚಿಸಿಕೊಂಡಷ್ಟೂ ಬುದ್ಧಿಯು ಸ್ತಿಮಿತಕ್ಕೆ ಬರುತ್ತದೆ. ಮುಗ್ಧಭಾವವು ಬೆಳೆದು ಭಕ್ತಿಯು

ದೃಢವಾಗುವುದು. ಯಾರಾದರೂ ತಮ್ಮ ವಿಚಾರಕ್ಕೆ ಅಲ್ಲಸಲ್ಲವೆಂದರೆ ಪಿತ್ತ ಪ್ರಕೋಪವಾಗಿ, ಶಾಂತವಿಚಾರ ವಿನಿಮಯದಲ್ಲಿ ಇನ್ನೊಬ್ಬರ ಹೆಚ್ಚಿನ ವಿಚಾರಸರಣಿಗೆ ಬಲಿಬೀಳುವ ಮೋಹದ ಪ್ರಸಂಗವೇ ಪ್ರಾಪ್ತವಾಗುವುದಿಲ್ಲ. ಜೀವದ ಅಶಕ್ತ ಪರಿಸ್ಥಿತಿಯಲ್ಲಿ ಅಸಂತೋಷದ ಅಗ್ನಿಯಿಂದ ಸತ್ವವು ಪುಟಗೊಳ್ಳುವ ಬದಲು ಸುಟ್ಟು ಹೋಗುವ ಭೀತಿಯೆ ಇದ್ದಾಗ, ಅಂತಹ ಗಂಡಾಂತರದೊಳಗಿಂದ ಪಾರಾಗಲು ಸಿದ್ಧೌಷಧಿಯಿದು. ವ್ಯಕ್ತಿಗಳೂ ಪಕ್ಷಪಂಥಗಳೂ ಎಂತೂ ಬದುಕಿಕೊಂಡಿರುವದಕ್ಕಾಗಿ ಈ ಉಪಾಯವನ್ನು ಧಾರಾಳವಾಗಿ ಉಪಯೋಗಿಸುವುದುಂಟು.

ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಜೀವವು 'ಎಂದುದನೆ ಎಂದು ಬಾಳುವ' ಈ ವೇಷ ತಾಳಬೇಕಾಗಿ ಬಂದಿದ್ದರೂ ಎಂತಹ ಅವಸ್ಥೆಯಲ್ಲಿಯೂ ತನ್ನತನವನ್ನು ವ್ಯಕ್ತಪಡಿಸುವುದು ಅದರ ಹುಟ್ಟುಗುಣವಾಗಿದೆ. ಕಾಯಕದ ಸ್ಥೂಲ ಸ್ವರೂಪವು ಒಂದೇ ಮಾದರಿಯೆನಿಸಿದರೂ ಅದರಲ್ಲಿ ವೈಯಕ್ತಿಕವಾದ ಹಲವು ಸೂಕ್ಷ್ಮ ಪ್ರಕಾರಗಳು ಗೋಚರವಾಗದೆ ಇರುವುದಿಲ್ಲ.

ವ್ಯಕ್ತಿತ್ವವು ಜೀವಂತತನದ ಲಕ್ಷಣವೆಂದು ಅರಿತ ಹಲವರು ತಾವು ಜೀವಂತವಾಗಿದ್ದೇವೆಂಬುದನ್ನು ಸ್ಥಾಪಿಸಲಿಕ್ಕೆ ಏನಾದರೊಂದು ತಮ್ಮ ವೈಶಿಷ್ಟ್ಯವನ್ನು ಪ್ರದರ್ಶಿಸಲು ಸದಾ ಸರ್ವಕಾಲ ಹಾರಾಟ-ಹೋರಾಟ ಹಾರೈಸುತ್ತಾರೆ. ಸಮಾಜದ ಚಿತ್ತವನ್ನು ತಮ್ಮತ್ತ ಸೆಳೆದುಕೊಳ್ಳಲು ಇಂತಹವರು ಯೋಜಿಸುವ ಎಷ್ಟೋ ಹಂಚಿಕೆಗಳು ಕುತೂಹಲಜನಕವಾಗಿರುತ್ತವೆ. ವೈಚಿತ್ರ್ಯ ವಿಕ್ಷಿಪ್ತ ರೀತಿ ಕೃತಿಗಳಿಂದ ಜನರ ಮನದಲ್ಲಿ ತಮಗೊಂದು ಸ್ಥಾನವನ್ನು ಕಲ್ಪಿಸಿಕೊಳ್ಳಬಯಸುವ ಜೀವದ ಹವಣಿಕೆಯಿದ್ದು, 'ಮುರಾರೇಃ ತೃತೀಯಃ ಪಂಥಃ' ಎಂಬ ಲೋಕೋಕ್ತಿಯು ಇಂತಹರಿಗೆ ಸರಿಹೋಗುತ್ತದೆ. ಸಮಾಜದಲ್ಲಿ ಇದು ಅನಿವಾರ್ಯ. 'ಊರಿನದು ಒಂದಾದರೆ ಊಡುಕನದೇ ಒಂದು;' ಎಂದು ಪರಿಹಾಸಮಾಡಿದಲ್ಲಿ ಸ್ವತಂತ್ರಕೃತಿಗಳಿಗೆ ಕೇರುಹಾಕಿದಂತಾಗಿ ಗತಾನುಗತಿಕತ್ವಕ್ಕೇ ಗೌರವ ಕೊಟ್ಟಂತಾಗುವುದು. ನಾಡಿನ ಮುನ್ನಡೆಗೆ ತಡೆಯನ್ನೊಡ್ಡಿದಂತಾಗುವ ಸಂಭವವಿದೆ. ಆರಂಭದಲ್ಲಿ ತೃತೀಯ ಪಂಥವೆನಿಸಿಕೊಳ್ಳದ ಸ್ವತಂತ್ರ ವಿಚಾರವಿಲ್ಲ. ಹೊಸಪಕ್ಷವಿಲ್ಲ. ಶಂಕರ, ಮಧ್ವ, ಅಲ್ಲಮಾದಿಗಳೂ ಆಯಾ ಕಾಲದ ತೃತೀಯಪಂಥಿಗಳೇ. ಆದರೆ, ತೃತೀಯಪಂಥಗಳೆಲ್ಲವೂ ವಿಚಾರವಂತರ ಸುವಿಚಾರದ ಮಾರ್ಗಗಳೇ ಎಂದು ಸಾಧಿಸುವುದೂ ಏಕಪಕ್ಷೀಯ ವಿಚಾರವಾದೀತು; ಉಭಯ ದೃಷ್ಟಿಯ ತೂಕದ ಮಾತಾಗದು. ಕೇವಲ ನಾವೀನ್ಯಕ್ಕಾಗಿ ನವೀನತೆಯನ್ನಾಶ್ರಯಿಸಿವುದು ಹಿತಕರ್ರವಲ್ಲ; ಕ್ಷೇಮಕರವೂ ಅಲ್ಲ; ಪ್ರಾಮಾಣಿಕ ಮತಭೇದಕ್ಕಾಗಿ, ತಾನು ಕಂಡ ಸತ್ಯದ ಇನ್ನೊಂದು ಅಂಶವನ್ನು ಲೋಕ ನಿದರ್ಶನಕ್ಕೆ ತಂದುಕೊಡುವುದಕ್ಕಾಗಿ, ಸೌಂದರ್ಯದ ಇನ್ನೊಂದು ಅಂದವನ್ನು ಎಂದರೆ ಬಗೆಯನ್ನು ರೂಢಿಸಿ ಜೀವನದ ಸೊಗಸನ್ನು ಹೆಚ್ಚಿಸುವುದಕ್ಕಾಗಿ ಅಥವಾ ಕುರೂಪತೆ ಇಲ್ಲವೆ ಅನ್ಯಾಯಗಳನ್ನು ಸಹಿಸದೆ, ಇಂತಹ ಯಾವುದೇ ಕಾರಣಕ್ಕಾಗಿ ತೃತೀಯ ಪಥವನ್ನು ಆರಂಭಿಸಿದ ವ್ಯಕ್ತಿಯು-ಯಶಸ್ವಿಯಾಗಲಿ, ಆಗದಿರಲಿ, ಸಮಾಜದಿಂದ ಮನ್ನಣೆ ದೊರೆಯಲಿ, ದೊರೆಯದಿರಲಿ ಅದು-ಅಭಿನಂದನಾರ್ಹವಾಗಿದೆ. ಆದರೆ, ಕೇವಲ ಈರ್ಷೆ, ಅಸೂಯೆಗಳಿಂದ, ಸ್ವಾರ್ಥಸ್ಪರ್ಧೆಗಳಿಂದ, ತಮಗೆ ಸ್ಥಾನ-ಮಾನಗಳು ದೊರೆಯದ್ದಕ್ಕೆ, ಖ್ಯಾತಿ ಕಾಮುಕತೆಯಿಂದ, ಅಹಂಕಾರದ ಆವೇಗ ಉದ್ವೇಗದಿಂದ ಪ್ರಚೋದಿತವಾದ ತೃತೀಯ ಪಂಥಿಯು ಸಮಾಜದ ಗಗನಾಂಗಣದಲ್ಲಿ ಮೂಡಿದ ಬಾಲಚಿಕ್ಕೆ. ಸಮಾಜದಲ್ಲಿ ಆಗಾಮಿ ಅಶಾಂತಿಯ ಪೂರ್ವಸೂಚನೆ.

ಹೊಸ ಹಾದಿಯ ವ್ಯಕ್ತಿಗೆ, ತೃತೀಯಪಂಥಿಯೆಂದು ಒಮ್ಮೆಲೆ ತಲೆ ಕುಕ್ಕುವುದು ಅನುಚಿತ. ಸತ್ಯವು ಅನಂತ ಸ್ವರೂಪ. ಇದ್ದುದಕ್ಕೆ ಅಂಟಿಕೊಂಡಿದ್ದರೆ ಅನಂತತ್ವದ ಅರಿವು ಕೂಡ ಹಾರಿಹೋಗುವುದು. ಬಗೆಬಗೆಯ ಹೊಸ ಹೊಸ ಪ್ರಯೋಗಗಳು ನಡೆಯುತ್ತಿದ್ದಾಗಲೇ ಸತ್ಯಾಸತ್ಯದ ನಿರ್ಣಯವಾಗಿ ಪ್ರಗತಿಯ ದಾರಿಯು ದೊರೆಯುವ ಆಶೆ. ಆದುದರಿಂದ ಹೊಸಬಗೆಯ ಪ್ರಯತ್ನಗಳನ್ನು ತಿರಸ್ಕರಿಸುವ, ಬಹಿಷ್ಕರಿಸುವ ಸಮಾಜವು ತನ್ನ ಏಳ್ಗೆಯನ್ನು ತಾನೇ ನಿಲ್ಲಿಸಿಕೊಳ್ಳುತ್ತದೆ. ಇದು ಅಕೃತ್ಯ, ಕೊನರುವ ಕುಡಿಯನ್ನೇ ಚಿವುಟಿದಂತೆ. ಆತ್ಮ ಘಾತಕ, ಸಮಾಜದ ವಿಕಸನಶಕ್ತಿಯನ್ನೇ ನಷ್ಟಪಡಿಸಿದಂತೆ. ತೃತೀಯ ಪಂಥಿಗಳು ಮುಂದೆ ಬರಲಿ. ಆದರೆ ತಮ್ಮ ನಾವೀನ್ಯ ಪೂರ್ಣ

ಕೃತಿಯು ಸಮಾಜದ ಧಾರಣೆ, ಪೋಷಣೆ, ಅಥವಾ ಉತ್ಕರ್ಷಕ್ಕೆ ಹೇಗೆ ಸಹಾಯವಾಗಬಲ್ಲದೆಂಬುದನ್ನು ನಡೆವಳಿಯಿಂದ ಮನಗಾಣಿಸಿ ಕೊಡಲಿ, ಟೀಕೆಗಳು ಬೇಡವೆಂಬುದು ತಮ್ಮ ಪಕ್ಷದ ಅಂತರ್ಗತ ಅಶಕ್ತತೆಯ ಸೂಚಕ. ಯಾರ ವಿರೋಧವೇ ಇಲ್ಲದೆ ಜಯಶೀಲರಾದವರ (?) ಯೋಗ್ಯತೆಯು ಸಂದೇಹಾಸ್ಪದವಾದುದು. ವಿರೋಧವು ಎಷ್ಟು ಬಲಿಷ್ಠವೊ ಅಷ್ಟು ಆ ಗೆಲುವಿನ ಮೆರಗು ಹೆಚ್ಚು.

ಇನ್ನೊಂದು ದೃಷ್ಟಿಯಿಂದ ವಿಚಾರಿಸಿದರೆ ಯಾರು ತೃತೀಯ ಪಂಥಿಗಳಲ್ಲ? ಎಷ್ಟು ವ್ಯಕ್ತಿಗಳೊ ಅಷ್ಟು ಪ್ರಕೃತಿಗಳು. ಒಬ್ಬೊಬ್ಬರ ಸ್ವಭಾವ ಒಂದೊಂದು. ಇದು ವ್ಯಕ್ತಿಯ ಅವಿಭಾಜ್ಯ, ಅವಿಚ್ಛಿನ್ನ ಅಂಶ. ವ್ಯಕ್ತಿಯ ತಿರುಳು. ಅದುವೆ ಪುರುಳು (ಹುರುಳು); ಎಂದರೆ ಸಂಪತ್ತು. 'ಅರ್ಥ'. ಸ್ವಂತದ ಅರ್ಥವಿಲ್ಲದ್ದು -ಸ್ವ-ಅರ್ಥವಿಹೀನವಾದುದು. ಬರಿದೋ-ಬರಿದು. ಬಂಜೆ ಜಳ್ಳು. ಬಂದ ಗಾಳಿಗೆ ಹಾರಿಹೋಗುವಷ್ಟು ಹಗುರು. ಬಡವಿಲ್ಲದ ಪ್ರಾಣಿ.

'ನಾನು' ಎಂಬ ಅರಿವು ಮಾನವರಿಗೆ ಹುಟ್ಟಿದೊಡನೆಯೆ ಬಂದಿರುತ್ತದೆ. ಈ ಅರಿವು ಇಲ್ಲದ ನಾನು ಏನು? ಅಂತಹ 'ನಾನು' ಇದ್ದದ್ದೂ ಇಲ್ಲದ್ದೂ ಒಂದೇ. ಆದಕಾರಣ ಅರಿವು (ಚಿತ್) ನಾನು;- ನಾನೇ ಅರಿವು, ಎಂದರೂ ತಪ್ಪಲ್ಲ. ಲೋಕದಲ್ಲಿ ಇದರ ಬೆಲೆ ಯಾತಕ್ಕೆ ಬಂದೀತು? ಇದು ಏನು ಕೊಟ್ಟರೆ ದೊರೆತೀತು? ಜೀವನದ ಜೀವನವಿದು. ಇದರಿಂದಲೇ ಉಳಿದೆಲ್ಲ ವಸ್ತುಜಾತಗಳಿಗೆ ಬೆಲೆ. ಇದಿಲ್ಲದ ಬಾಳು ಶೂನ್ಯ. ಆದುದರಿಂದಲೆ 'ತೊರೆದು ಜೀವಿಸಬಹುದೆ ನಿನ್ನ' ಎಂದು ಕನಕದಾಸರು ನುಡಿದುದು (ಪರಮ ಅರ್ಥದಲ್ಲಿ ಅಲ್ಲವಾದರೂ) ಸಾಮಾನ್ಯಾರ್ಥದಲ್ಲಿ ಸಂಪೂರ್ಣ ಸತ್ಯವಾಗಿದೆ. 'ನಾನು' ಎಂಬ ಅರಿವನ್ನು ಉಳಿಸಿಕೊಂಡಲ್ಲದೆ ಬಾಳು ಹಾಳು., 'ಸ್ವ' ದ ಅರ್ಥವೇನೆಂದು ತಿಳಿಯದಿದ್ದರೂ ಸ್ವಾರ್ಥವಿಲ್ಲದ ಪ್ರಾಣಿಯಿಲ್ಲ., 'ನಾನು' ಎಂಬ ಅರಿವು ವ್ಯಕ್ತಿಯ ವೈಶಿಷ್ಟ್ಯಕ್ಕೆ ಕಾರಣವಾಗುತ್ತದೆ. ವ್ಯಕ್ತಿಯ ವೈಶಿಷ್ಟ್ಯವು ಅದರ ಅರ್ಥ. ಅಥವಾ 'ಈ ಅರ್ಥವು ತನ್ನದು' ಎಂದು ನಿರ್ಧರಿಸಿ ವ್ಯಕ್ತಿಯು ತನಗೆ ವೈಶಿಷ್ಟ್ಯವನ್ನು ತಂದುಕೊಂಡಿರುತ್ತದೆ. ಈ ಅರ್ಥವೇ ಸ್ವಾರ್ಥವೂ ಅಹುದು.

ಕೇವಲ ತಮ್ಮ ತಮ್ಮ ವೈಶಿಷ್ಟ್ಯಗಳನ್ನೇ ನೆನೆದುಕೊಳ್ಳುತ್ತಲಿರುವ ವ್ಯಕ್ತಿಗಳು ಸ್ವಾರ್ಥಿಗಳು. ಇಂತಹ ಶಿಷ್ಟರೂ ವಿಶಿಷ್ಟರೂ ಬಹುಸಂಖ್ಯಾಕರಾಗಿರುವ-ಮೇಲ್ಪಂಕ್ತಿಯಾಗಿರುವ ಸಮಾಜವು ಅತ್ಯಂತ ವಿಸ್ಖಲಿತವಾಗಿರುತ್ತದೆ. ತಮ್ಮ ತಮ್ಮ ಪ್ರತಿಷ್ಠೆ, ವೈಶಿಷ್ಟ್ಯಗಳೇ ಪ್ರಾಮುಖ್ಯವಾಗಿರುವ ವ್ಯಕ್ತಿಗಳೂ ಗುಂಪುಗಳೂ ಸಂಘ-ಸಂಸ್ಥೆಗಳೂ ಇರುವ ನಾಡು, ಪರರ ಆಕ್ರಮಣವಾಗದೆ ಇರುವ ವರೆಗೆ ಸ್ವತಂತ್ರ. ತಮ್ಮ ತಮ್ಮ ಗೌರವವನ್ನು ಹೆಚ್ಚಿಸಿಕೊಳ್ಳಲು ಇವರು ಯಾವುದಕ್ಕೂ ಸಿದ್ಧರು. ಒಳಗಿನ ಅರ್ಥಕ್ಕೆ ಬೆಲೆಕೊಡದೆ ಹೊರಗಿನ ಅರ್ಥಕ್ಕೆ ಮರುಳಾಗಿ ಅದರ ಬೆಂಬತ್ತುವುದರಿಂದ, ತಪ್ಪು ಅರ್ಥವನ್ನು ಅನುಸರಿಸುವುದರಿಂದ ಇದೆಲ್ಲ ಅನರ್ಥ!

ತನ್ನತನದ ಅರಿವು ಸ್ವಾರ್ಥಕ್ಕೆ ಒಯ್ಯುತ್ತದೆ. ಆದಕಾರಣ ಸ್ವಾರ್ಥ, ವಂಚನೆ ಮೊದಲಾದವುಗಳಿಗೆಲ್ಲ ಮೂಲ ಕಾರಣವಾದ ಅರಿವು ಮತ್ತು ಬುದ್ಧಿಯನ್ನೇ ನಷ್ಟಪಡಿಸಬೇಕೆಂದು ಉಪದೇಶಿಸುವ ತತ್ವಜ್ಞಾನವೊಂದಿದೆ; ಬಯ್ಯುವುದೆಂದು ನಾಲಗೆ ಕೊಯ್ದು ಕೊಂಬುದು! ಚಾಡಿಕೇಳುವುದೆಂದು ಕಿವಿಯಲ್ಲಿ ಕಾಯ್ದೆಣ್ಣೆ ಹಾಕಿಕೊಂಬುವುದು! ಹೆಣ್ಣ ಚೆಲುವಿಗೆ ಆಸೆ ಪಡುವುದೆಂದು ಕಣ್ಣು ಕಳೆದುಕೊಂಬುದು! ಬೆಂಕೆಯು ಮೈ ಕೈ ಸುಡುವುದು, ಮನೆ ಸುಡುವುದೆಂದು ಬೆಂಕೆಯೇ ಇರಕೂಡದೆಂಬುದು! ಇದೇನು ವಿವೇಕವೇ? ಅಯೋಗ್ಯರ ಅವಿವೇಕದ ಕೃತ್ಯ. ವಿವೇಕದಿಂದ ಯೋಗ್ಯರೀತಿಯಲ್ಲಿ ಉಪಯೋಗಿಸಿಕೊಂಡರೆ ಬೆಂಕಿಯು ಅಮೃತಸದೃಶ ಪಕ್ವಾನ್ನಗಳನ್ನು ಸಿದ್ಧಪಡಿಸುವುದು. ಲೋಕಕ್ಕೆ ಬೆಳಕು ಕೊಡುವುದು. ಅರಿವು, ಬುದ್ಧಿಗಳ ರೀತಿಯೂ ಹೀಗೆಯೆ ಇದೆ. ಅರಿವಿನಿಂದಲೆ ಮನುಷ್ಯತ್ವ, ಪಶುವಿನಿಂದ ಭಿನ್ನತ್ವ. ಆ ಅರಿವು ಕಳೆದುಕೊಳ್ಳುವುದೇ?

ತಾನು ಇದ್ದೇನೆ; ಎಂಬ ಅರಿವು ಇಲ್ಲದರ ಬಾಳಿನಲ್ಲಿ ಜೀವನಾನಂದವನ್ನು (ಅರಿವಿನೊಡಗೂಡಿ) ಅನುಭವಿಸುವ ಶಕ್ತಿಯು ಮಂದವಾಗುತ್ತದೆ. (ಭಾವಾವೇಶದ, ಭಾವನಿರ್ಭರದ) ನೆನಹಿನಲ್ಲಿ ಇರುವ ಆನಂದದ ಸೊಗಸು, ಪ್ರತ್ಯಕ್ಷ ಆ ಘಟನೆಯ ಕಾಲದಲ್ಲಿ ಇರುವುದಿಲ್ಲ. ಕಾವ್ಯ, ನಾಟಕ, ಕಥೆ, ಕಾದಂಬರಿ, ನಾಟ್ಯ, ಚಿತ್ರ,

ಮೂರ್ತಿಗಳನ್ನು ಕಾಣುವಾಗ ಆಗುವ ರಸಸ್ಪರ್ಶದ ಆನಂದಾನುಭವವು ಪ್ರತ್ಯಕ್ಷ ಸಾಂಸಾರಿಕ ಪ್ರಸಂಗದಲ್ಲಿ ಬಾರದು. ಸಾಂಸಾರಿಕ ಘಟನೆಗಳ ಆಗುಹೋಗಿನ ಕಾಲದ ಕದಡಿದ ಮನಸ್ಸಿನ ಹೊಯ್ದಾಟದಲ್ಲಿ ಅರಿವು ತಳಕ್ಕೆ ಉಳಿಯುವುದು. ಒದಗುತ್ತಿರುವುದರ ಮೇಲೆ ಅರಿವಿನ ನಿಯಂತ್ರಣವು ಇಲ್ಲದಾಗುವುದು. ಈ ನಿರ್ವಿಣ್ಣ ಸ್ಥಿತಿಯಲ್ಲಿ ಅರಿವು ಮರವಟ್ಟು ಜ್ಞಾನಸಂವೇದನಾಶಕ್ತಿಯು ಬಧಿರವಾಗುವುದು. ಈ ಅವಸ್ಥೆಯಲ್ಲಿ ಪಶುವಿಗೂ ಮನುಷ್ಯನಿಗೂ ವಿಶೇಷ ಅಭ್ಯಂತರವು ಉಳಿಯುವುದಿಲ್ಲ. ಒದಗಿದ್ದಕ್ಕೆ ಸಾಕ್ಷಿಯೆ ಇಲ್ಲದ ಘಟನೆ ಆಯಿತೆಂಬುದು ಸಂಶಯಾಸ್ಪದ ವಾಗುತ್ತದೆ. ಕಲಾ-ಸಾಹಿತ್ಯದ ಘಟನೆಗಳ ರಸಾನುಭೂತಿಗೆ ಹಿನ್ನೆಲೆಯಲ್ಲಿ ಜಾಗ್ರತ ಸಾಕ್ಷಿಯು ಇರುವುದರಿಂದ ಇತರ ಆನಂದದ (ದುಃಖ ವಿಸ್ಮಯಾದಿಗಳ) ಸೊಗಸಿನಲ್ಲಿ ಒಂದು ವಿಶೇಷವಿದೆ. ಸಂಪ್ರಜ್ಞಾತ ಸಮಾಧಿ ಸೌಖ್ಯದ ಅಪೂರ್ವವಾದ ಆನಂದವು ಸೋಂಕುವುದೆಂದೇ ಸಾಹಿತ್ಯ ಕಲೆಗಳಲ್ಲಿ ಲೋಕಕ್ಕೆ ಇಷ್ಟೊಂದು ಹುಚ್ಚು; ಆಸಕ್ತಿ. ಸಾಹಿತ್ಯ ಕಲಾ-ಕೃತಿಗಳು ರಸನಿಮಿಷದ ಸ್ಮಾರಕ; ಅರಿವಿನ ಹಿರಿಮೆ; ಇದು ನೆನಹಿನಲ್ಲಿ-ಅರಿವಿನಲ್ಲಿ ಇರುವ ಈ ಅಪೂರ್ವ ಸಾಮರ್ಥ್ಯವನ್ನು ಬಳಸಿಕೊಂಡು ತಿಳುವಳಿಕೆ ಬಂದ ಮೇಲಾದರೂ ಇಡೀ ಜೀವನವು ಆನಂದದ ಕಲಾಕೃತಿಯಾಗುವಂತೆ ಮಾನವನು ಏಕೆ ಪ್ರಯತ್ನಪಡುತ್ತಿರಲಿಕ್ಕಿಲ್ಲ? ಈ ದಾರಿಯಲ್ಲಿರುವ ತಡೆಗಳೇನು?

ಮಾನವನಿಗೆ ಇಸ್ನುಳಿದವರೊಡನೆ ಸುತ್ತಲಿನ ವ್ಯಕ್ತಿ ವಸ್ತುಗಳೊಡನೆ ಬರುವ ಸಂಬಂಧ-ಸಂಪರ್ಕ, ಅರೆದಾಟ-ತಿಕ್ಕಾಟದ ಅರಿವು ಪುಟಗೊಳ್ಳುವುದು; ದೃಢವಾಗುವುದು. ಸಮಾಜದೊಡನೆ ಬರುವ ಸಂಬಂಧವು ಎಷ್ಟು ವಿಶಾಲವೊ ಅಷ್ಟು ವ್ಯಕ್ತಿಯ ತಿಳುವಳಿಕೆಯು ಬೆಳೆಯಲು ದೊಡ್ಡಕ್ಷೇತ್ರವು ದೊರೆಯುವುದು. ಎಷ್ಟೇ ಚುರುಕುಬುದ್ಧಿ ವಿಶೇಷ ಪ್ರತಿಭೆಯಿದ್ದರೂ ವ್ಯಕ್ತಿಯು ಹೊರಗೆ ವಿಶಾಲ ಕ್ಷೇತ್ರದಲ್ಲಿ ಪ್ರವೇಶಿಸಲಿಲ್ಲವಾದರೆ ಅದರ ವಿಕಾಸವಾಗದೆ ಬೆಳೆಯುಳ್ಳುದಾದರೂ ಬೀಳುಭೂಮಿಯಂತೆ ಅದರ ಹಾಡು ಆಗುವುದು. ಸಂಧಿಯನ್ನು ದೊರಕಿಸಿಕೊಂಡು ಮುಂದುವರಿದ ಸಾಮಾನ್ಯನೂ ಮನೆಯಲ್ಲಿ (ತನ್ನ ಊರು ಅಥವಾ ಸಂಕುಚಿತ ಕ್ಷೇತ್ರದಲ್ಲಿ) ಉಳಿದ ಅಸಾಮಾನ್ಯನಿಗಿಂತ ಹೆಚ್ಚು ಬೆಳವಣಿಗೆಯನ್ನು ಹೊಂದುವನು. ಸಮಾಜದೊಡನೆ ಬರುವ ಸಂಬಂಧದಲ್ಲಿಯೇ ಮಾನವರ ಅರಿವು ಹಿಗ್ಗುಗೊಳ್ಳುತ್ತದೆ. ಶತಮಾನ ಶತಮಾನಗಳಿಂದ ಅವ್ಯಾಹತವಾಗಿ ಸಂಗ್ರಹಿಸಿದ ಜ್ಞಾನದ ನಿಕ್ಷೇಪವನ್ನು ಸಮಾಜವು ವ್ಯಕ್ತಿಯ ಕೈಗೆ ಒಪ್ಪಿಸುತ್ತದೆ. ರೂಢಿ-ಸಂಪ್ರದಾಯಗಳು, ಜಾನಪದ ಗೀತ-ಕಥೆ-ಗಾದೆಗಳು, ಕಲೆ-ಸಾಹಿತ್ಯ-ಶಾಸ್ತ್ರಗ್ರಂಥಗಳು ಮೊದಲಾದವುಗಳ ರೂಪದಲ್ಲಿ ಸಮಾಜದ ಅನಂತಕಾಲದ ಜ್ಞಾನನಿಧಿಯು ಪೀಳಿಗೆಯಿಂದ ಪೀಳಿಗೆಗೆ ಸಾಗಿಬರುತ್ತದೆ. ಇದರಲ್ಲಿ ಎಲ್ಲವೂ ಅಮೌಲಿಕವೆಂದು ಬಗೆಯುವುದು ಹೇಗೆ ಅಯುಕ್ತವೊ ಹಾಗೆ ಎಲ್ಲವೂ ನಿರುಪಯುಕ್ತವೆಂಬುದು ಅಸಮಂಜಸ. ಹಿಂದಿನಿಂದ ಬಂದುದನ್ನು ಸ್ವೀಕರಿಸಿ, ಪರೀಕ್ಷಿಸಿ, ಬಳಿಕ ಪರಿಷ್ಕಾರಗೊಳಿಸಿ, ಮುಂದೆ ಮತ್ತೆ ಅದಕ್ಕೆ ಯಥಾಶಕ್ತಿ, ತನ್ನ ಕಾಣಿಕೆಯನ್ನು ಕೂಡಿಸಿ, ಮುಂದಣರ ಕೈಗೆ ಒಪ್ಪಿಸಲ್ಪಡಬೇಕು. ಮಾನವನಿಗೆ ತನ್ನ ವ್ಯಕ್ತಿತ್ವವನ್ನು ಪಡೆದುಕೊಳ್ಳಲು ಸಮಾಜವು ಇಂತು ಮುದಲನ್ನು (ಬಂಡವಾಳ) ಒದಗಿಸುತ್ತದೆ.

ಸಮಾಜದಿಂದ ಈ ನೆರವನ್ನು ಪಡೆಯದ ಮಾನವನು ಪ್ರಾಥಮಿಕ ಅವಸ್ಥೆಯಲ್ಲಿಯೆ ಉಳಿಯುವನು. ಸಮಾಜದಿಂದ ಸಂಸ್ಕಾರ ಹೊಂದದ ಬುದ್ಧಿ, ಸ್ಫೂರ್ತಿ, ಪ್ರತಿಭೆಗಳೆಲ್ಲ ಎಷ್ಟೇ ಬೆಲೆಯುಳ್ಳವಿದ್ದರೂ ಸಾಣೆ ಹಿಡಿಯದ ವಜ್ರ, ಲೋಕದೊಳಗಿನ ಶ್ರೇಷ್ಠರ ಶ್ರೇಷ್ಠತೆಗೆ, ಮಹಾಮಹಿಮರ ಮಹಿಮೆಗೆ ಸಮಾಜವೇ ಮೂಲಾಧಾರ, ಪಶುತ್ವದಿಂದ ಮನುಷ್ಯತ್ವವನ್ನು ಪಡೆಯುತ್ತಿರುವುದು ಸಮಾಜದ ಕೃಪೆಯಿಂದ. ಆದಕಾರಣ ಸಮಾಜದ ಋಣವನ್ನು ತೀರಿಸಲು ಶಕ್ಯವಿದ್ದ ಎಲ್ಲ ಬಗೆಗಳಿಂದಲು ನೆರವಾಗುವುದೂ ಪ್ರಯತ್ನಿಸುವುದೂ ವ್ಯಕ್ತಿಯ ಕರ್ತವ್ಯವಾಗಿದೆ. ಹುಟ್ಟಿದೊಡನೆ ಓಡಿಹೋಗಿ ಯಾರ ಸಂಪರ್ಕವೂ ಇರದೆ ಅಡವಿಯಲ್ಲಿಯೆ ಬೆಳೆದಿದ್ದರೆ, ಶಂಕರನು ಶಂಕರಾಚಾರ್ಯನಾಗುವುದು ಅಂತಿರಲಿ, ಶಂಕರನೆಂಬುವನು ಇದ್ದ ಸುದ್ದಿಯೂ ಪ್ರಪಂಚಕ್ಕೆ, ತಿಳಿಯುತ್ತಿದ್ದಿಲ್ಲ. ಶಂಕರ-ಮಧ್ವ-ಬಸವ-ಪುರಂದರಾದಿ ವಿಭೂತಿಗಳು ಕೂಡ ಸಮಾಜದ ಹಂಗಿಗರು. ಸಮಾಜದಿಂದ ಉಪಕಾರ ಹೊಂದಿದವರು ಸಮಾಜಕ್ಕೆ ಚಿರಋಣಿಗಳು. ಯಾರಿಂದ ಉಪಕಾರವಾಗಿದೆಯೊ ಅವರನ್ನು ಕಡೆಗಣಿಸುವುದು,

ತಿರಸ್ಕರಿಸುವುದು- ನಡುವೇ ಅವರ ಕೈಬಿಡುವುದು ಕೃತಘ್ನತನವೆನಿಸುವುದು. ಆದುದರಿಂದ ಶಂಕರ-ಮಧ್ವ-ಪುರಂದರಾದಿಗಳು ಯಾರೇ ಆಗಲಿ, ಜನರಿಗೆ ಸಮಾಜದಿಂದ ದೂರಸರಿದು ಓಡಿಹೋಗಲು ಎಂದೂ ಉಪದೇಶಿಸಲಾರರು. ಕ್ವಚಿತ್ ಪ್ರಸಂಗದಲ್ಲಿ ಅವರ ಹೇಳಿಕೆಯಲ್ಲಿ ಅಂತಹ ಮಾತುಗಳು ಇವೆಯೆಂದು ಎನಿಸಿದರೆ, ಅದರ ಅರ್ಥವು ಬೇರೆ ಎಂದು ಗ್ರಹಿಸಬೇಕು. ಇಲ್ಲವಾದರೆ ಆ ಮಹಾಮಹಿಮರಿಗೆ ಅನ್ಯಾಯ ಮಾಡಿದಂತಾದೀತು. ಒಂದು ವೇಳೆ, 'ಆ ಮಹಾಪುರುಷರು ಸಂಸಾರದಿಂದ ಓಡಿಹೋಗುವುದಕ್ಕ ಉಪದೇಶಿಸಿದ್ದೇ ನಿಜ;' ಎಂದು ತಜ್ಞರ ಅಭಿಪ್ರಾಯವಿದ್ದರೆ, 'ಆ ಉಪದೇಶದಲ್ಲಿ ಸ್ವಲ್ಪ ಕೊರತೆಯಿದೆ. ಅಂದಿನವರ ದಾರಿ ಇಂದಿನವರಿಗೆ ಏತಕ್ಕೆ'? ಎಂದು ವಿನಯದಿಂದ ನಮಸ್ಕರಿಸಿ, ಅವರಲ್ಲಿ ಉಪಯುಕ್ತವಿದ್ದುದನ್ನು ಸ್ವೀಕರಿಸಿ ಮುನ್ನಡೆಯಬೇಕು. ಹುಟ್ಟಿನಿಂದ ಸಾಯುವ ವರೆಗೆ ನಾನಾತೆರದ ಉಪಕಾರಗಳನ್ನು ಮಾಡಿಸಿದ ಸಮಾಜವನ್ನು ತನ್ನ ಮಕ್ಕಳು ಮರಿಗಳೆಲ್ಲ ಮೈಮರೆತು, ಕ್ಷುದ್ರ ಐಹಿಕ ಸ್ವಾರ್ಥದಿಂದ ಅಂಧರಾದವರೂ ಅಥವಾ ಪಾರಲೌಕಿಕ ಅಧ್ಯಾತ್ಮವೃತ್ತಿಯಲ್ಲಿ ಹೊರಗಿನ ಲೋಕವನ್ನು ಮರೆತು ಅದನ್ನು ಕಡೆಗಣಿಸುವವರೂ ಇಬ್ಬರೂ ಸಾಮಾಜಿಕ ದೃಷ್ಟಿಯಿಂದ ಮಹಾಪರಾಧಿಗಳೇ. ಈ ಪಾತಕಕ್ಕೆ ಪ್ರಾಯಶ್ಚಿತ್ತವಿಲ್ಲ. ಇಂತಹ ವ್ಯಕ್ತಿಗಳಿಗೆ ಉತ್ತೇಜನವಿರುವ ವಾತಾವರಣವುಳ್ಳ ಸಮಾಜಕ್ಕೆ ಅವನತ ಸ್ಥಿತಿಯೆ ಗತಿ.

ಸಮಾಜ ಇಲ್ಲವಾದರೆ ಆತ್ಮೋದ್ಧಾರ, ಆತ್ಮವಿಕಾಸಾದಿ ಮಾತುಗಳಿಗೆ ಏನು ಅರ್ಥ? ಪಶುತ್ವದಿಂದ ಮೇಲೆತ್ತಿ ಮಾನವನಿಗೆ ಮಾನವತ್ವವನ್ನು ಕೊಡುವುವೆಂದು ಹೇಳುವ ನಾಗರಿಕತೆ, ಸಂಸ್ಕೃತಿಗಳು ಸಮಾಜದ ಆಧಾರದಿಂದಲೇ ಉಳಿದುಕೊಂಡು ಹೆಚ್ಚಳವನ್ನು ಹೊಂದುತ್ತಿರುವುವಲ್ಲವೆ? 'ಜನನಿಯಾ ಕೊಡು ಎಂದು, ಜಗದೀಶ, ಬೇಡುವೆನೆ? ಜನನಿ ಏನಿತ್ತಳೊ ಪ್ರಲ್ಹಾದಗೆ........! ತಾಯಿಯಂತಹ ನಿಸ್ವಾರ್ಥ ಪ್ರೇಮದ ಮೂರ್ತಿಯನ್ನು ಕುರಿತೇ ಈ ಹಾಡು ಎಂದ ಬಳಿಕ ತಂದೆ, ಮಕ್ಕಳು, ಗೆಳೆಯರು, ನೆರೆಹೊರೆಯವರು, ಊರು-ಕೇರಿ, ದೇಶ-ಕೋಶಗಳ ಮಾತು ಏತಕ್ಕೆ? ಇಂತು ಲೋಕದ ಮೊರೆಯೇ ಬೇಡವೆಂದು ಒರಲುವ ಜೀವಾತ್ಮವು ನಿರೋಗಿಯೆಂದು ಬಗೆಯಲಿಕ್ಕಾದೀತೆ? ಹಿಗ್ಗುವುದು ಆರೋಗ್ಯ ಜೀವದ ಲಕ್ಷಣ. ಹಿಗ್ಗುವ ಬದಲು ಕುಗ್ಗುತ್ತಲಿರುವ, ಕೊರಗುತ್ತಲಿರುವ, ಕಿರಚುತ್ತಲಿರುವ ನರಪ್ರಾಣಿಯು ನಾಮಸ್ಮರಣದಲ್ಲಿ ಎಷ್ಟೇ ತೊಡಗಿದ್ದರೂ ಅದರ ಆತ್ಮ ವಿಕಾಸವಾಗಿದೆ, ಅಥವಾ ಆಗುತ್ತಲಿದೆಯೆಂಬುದು ತೀರ ವಿಪರೀತ. ಲೋಕಮಧ್ಯದಲ್ಲಿ ನಿಂತು ಅಗ್ನಿದಿವ್ಯದೊಳಗಿಂದ ಹಾಯ್ದು, ಸತ್ವಪರೀಕ್ಷೆಯನ್ನು ಮಾಡಿಕೊಳ್ಳಲಿಕ್ಕಾಗದೆ, ಓಡಿಹೋಗಿ ಅಡವಿ, ಆಶ್ರಮ, ಮಠ ಅಥವಾ ಮನೆಯಲ್ಲಿ ಹುದುಗಿಕೊಂಡು ಕುಳಿತು ತಮಗೆ ಆತ್ಮಸಿದ್ಧಿಯಾಗಿದೆಯೆಂದು ಲಂಗೋಟಿ ಸಂಸಾರವನ್ನು ಮರಳಿ ಆರಂಭಿಸುವರು. ತಮ್ಮ ಅತೃಪ್ತ ಕಾಮನೆಗಳನ್ನು ಮಠದ ಸಂಸಾರಹೂಡಿ ತೃಪ್ತಪಡಿಸಿಕೊಳ್ಳುವರು. ಆಮಿಷದಿಂದ ದೂರವಿರುವ ವರೆಗೆ ಎಲ್ಲರೂ ಸಂಯಮಿಗಳೇ ಯೋಗಿಗಳೇ. ಆದಕಾರಣ ವೇದಾಂತದ ಒರೆಗಲ್ಲು ಸಮಾಜ. ಅಲ್ಲಿ ಬಹಿರಂಗವಾಗಿ ನಿಂತು ನಡಸುವ ಆಚರಣೆಯಲ್ಲಿ ಕಾಣಿಸಿಕೊಳ್ಳದ ವೇದಾಂತ ಬರಿ ಬಾಯ್ ಪ್ರಸಾದ.

ಯಾವ ದಿಕ್ಕಿನಿಂದ ವಿಚಾರಿಸಿದರೂ ಮಾನವನಿಗೆ ಸಮಾಜವೇ ತಂದೆ; ಜ್ಞಾನ ಮತ್ತು ಸಂಸ್ಕೃತಿಯನ್ನಿತ್ತು ನೂತನ ಜನ್ಮವನ್ನು ಅದು ಈಯುತ್ತದೆ. ಸಮಾಜವೇ ತಾಯಿ; ಅನ್ನ ನೀರನಿತ್ತು ಅದು ಪಾಲನಪೋಷಣ ಮಾಡುತ್ತದೆ. ಸಮಾಜವೇ ಬಂಧುಬಳಗ; ಜನ್ಮವಿತ್ತ ತಾಯ್ತಂದೆಗಳು ಕಳೆದರೂ ಕರುಣೆಯಿಂದ ಅದು ಸಾಕಿ ಸಲಹುವುದು. ಸಮಾಜವೇ ಗುರು; ಶಿಕ್ಷಿಸಿ ಬೋಧಿಸುವ ಅಧಿಕಾರಿ; ಜ್ಞಾನನಿಧಿಯನ್ನು ಕೊಟ್ಟು ಕಾಲಪುರುಷನಿಂದ ನಮ್ಮ ಕೃತಿಗಳನ್ನು ನಿರ್ದಾಕ್ಷಿಣ್ಯವಾಗಿ ಪರೀಕ್ಷಿಸಿ ನಮ್ಮ ಯೋಗ್ಯತೆಯನ್ನು ತಿಳಿಯಪಡಿಸುತ್ತದೆ. ಈ ಕಾರಣದಿಂದ ವ್ಯಕ್ತಿಯ ಉದ್ಗಮವಿಕಾಸಗಳು ಸಂಪೂರ್ಣವಾಗಿ ಯಾವುದನ್ನು ಅವಲಂಬಿಸಿವೆಯೊ ಆ ಸಮಾಜವೇ ಮಾನವರ ಪರಮ ಆರಾಧ್ಯ ದೈವತ. ಅದೇ ಮೊದಲು; ಅದೇ ಕೊನೆ; ಮಾನವನು ಪಡೆದುಕೊಳ್ಳಬೇಕೆಂಬ ಯಾವ ಪರಮ ಸಿದ್ಧಿಯೂ ಅದರ ಮುಖಾಂತರವಾಗಿಯೆ ಇರಬೇಕಲ್ಲದೆ, ಅದನ್ನು ಒದ್ದು, ಅದಕ್ಕೆ ಬೆನ್ನು ತೋರಿಸಿ ಹೋಗುವ ದಾರಿ, ಅಡ್ಡದಾರಿ. ಸಮಾಜದ ಧಾರಣೆ-ಪೋಷಣೆ-ಸ್ಥಿತಿಗೆ ಕಾರಣವಾಗುವ ರೀತಿಯಲ್ಲಿ ಶಕ್ತಿಗಳನ್ನು

ವಿನಿಯೋಗಿಸುವಲ್ಲಿಯೇ ಮಾನವನ ಉಚ್ಚ ಸಂಸ್ಕೃತಿಯು ಪರಿಣಾಮಗೊಳ್ಳುವುದು. 'ಧಾರಣಾತ್ ಧರ್ಮ ಇತ್ಯಾಹುಃ' ಸಮಾಜಧಾರಣೆಗೆ ಕಾರಣವಾಗುವ ಕೃತಿಯೇ ಧರ್ಮ. ಇದಕ್ಕೆ ಹೊರತಾದುದೆಲ್ಲ ಅಧರ್ಮ.

ವ್ಯಕ್ತಿಗಳ ಸಮಷ್ಟಿರೂಪವೇ ಸಮಾಜ. 'ಸಮಷ್ಟಿ' ಎಂದು ಬ್ರಹ್ಮನಿಗೂ ಹೆಸರು. ವಿದ್ಯಾರಣ್ಯರು ಪಂಚದಶಿಯಲ್ಲಿ ಸಮಷ್ಟಿ ಶಬ್ದವನ್ನು ಬ್ರಹ್ಮನೆಂಬ ಅರ್ಥದಲ್ಲಿ ಬಳಸಿದ್ದಾರೆ (೧.೨೫) ಬ್ರಹ್ಮನಿಗೆ ಹಿರಣ್ಯಗರ್ಭ ನೆಂದೂ ಹೆಸರು. 'ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್' ಎಂದು ಶ್ರುತಿ. ಹಿರಣ್ಯವೆಂದರೆ 'ಅರ್ಥ;' ಪುರುಳು (ಹುರುಳು) ಮಾನವನ ಸಾರ; ಆತನಲ್ಲಿರುವ ಚಿತ್ ಅಥವಾ ಚೈತನ್ಯ ಶಕ್ತಿ. ಇದುವೆ ಆತನಲ್ಲಿರುವ ಹಿರಣ್ಯಾಂಶ; ಪುರುಳು; ಆದುದರಿಂದ ಸಮಷ್ಟಿ ಸ್ವರೂಪನಾದ ಬ್ರಹ್ಮನು ಹಿರಣ್ಯಗರ್ಭನು; ಎಂದರೆ ಚೈತನ್ಯಪೂರ್ಣನೆಂದು ಅರ್ಥ. In him we live, move and have our being ಎಂಬ ಯುರೋಪೀಯ ಅನುಭಾವಿಗಳ ವಚನವು ಭಾರತೀಯರ ದರ್ಶನವನ್ನು ಪುಷ್ಟೀಕರಿಸುತ್ತದೆ. ಮಾನವನು ಹಿರಣ್ಯಗರ್ಭನ ಅಂಶ. ಹಿರಣ್ಯಾಂಶನಾದ ವ್ಯಕ್ತಿಯ ಬೆಲೆಯೂ ಅಮೌಲಿಕವೆಂದು ಬೇರೆ ಹೇಳಬೇಕಾಗಿಲ್ಲ. ಆದಕಾರಣ ಚೈತನ್ಯವೇ ಲೋಕದ ಉಪಾಸ್ಯ.

ಚೈತನ್ಯವು ವಿವಿಧ ಅನಂತ ಶಕ್ತಿಯ ಆಗರವಾಗಿದೆ. ವಿಶ್ವದಲ್ಲಿ ಇದು ನಾನಾ ವಿಧದಲ್ಲಿ ಹೊರಹೊಮ್ಮುತ್ತಿದೆ. ಬರಿ ಮಾನವರನ್ನೇ ನಿರೀಕ್ಷಿಸಿದರೂ ಅದೆಷ್ಟು ವೈವಿಧ್ಯ! ಮಾನವರಲ್ಲಿ ಹುದುಗಿರುವ ಈ ಶಕ್ತಿ ವಿಶೇಷಗಳೇ ಪ್ರತಿಯೊಂದು ವ್ಯಕ್ತಿಯ ತಿರುಳು-ಹುರುಳು. ಚೈತನ್ಯಶಕ್ತಿಯ ನೆಲೆಯನ್ನು ಕಂಡುಹಿಡಿಯಲು ಎಲ್ಲ ಶಾಸ್ತ್ರಗಳೂ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿವೆ. ಆದರೆ, ಅದರ ಗುಟ್ಟು ಇನ್ನೂ ತಿಳಿಯದಾಗಿದೆ. ರಾಜಕಾರಣ- ಸಮಾಜ ಕಾರಣಾದಿಗಳು, ವ್ಯಾಪಾರ-ಉದ್ಯೋಗ-ಶಿಕ್ಷಣ- ಕಲೆ-ಸಾಹಿತ್ಯಾದಿಗಳು ಹಗಲಿರುಳು ತೊಳಲುತ್ತಿರುವುದು ಯಾರ ಸೇವೆಗಾಗಿ? ಆರೋಗ್ಯ ಶಾಸ್ತ್ರ, ಯೋಗಶಾಸ್ತ್ರ, ಧರ್ಮಶಾಸ್ತ್ರ ಇವುಗಳು ಇದರ ಅಭಿವೃದ್ಧಿಗಾಗಿಯೆ ಅನುದಿನವೂ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲಿವೆ.

ಆದರೆ, ಮದುಮಗನನ್ನು ಬಿಟ್ಟೇ ಮದುವೆಗೆ ಹೊರಟಂತಾಗುತ್ತಿದೆ. ಮಾನವರ ಚಟುವಟಿಕೆಗಳ ರೀತಿ ಹಲವು ಬಾರಿ! ಹಿತ್ತಲ ಸೊಪ್ಪು ಮದ್ದು ಅಲ್ಲ(?)! ತಮ್ಮಲ್ಲಿಯೇ ಅಳವಟ್ಟಿರುವ ಈ 'ಅರ್ಥ'ವನ್ನು ಮರೆತು ಹೊರಗಿನ ಅರ್ಥಕ್ಕಾಗಿ ಹಂಬಲಿಸಿ ಹರಿದಾಡುವರಲಾ ಮಾನವರು! ಏನಿದು ವಿಪರೀತವೃತ್ತ! ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಪರಿಸಗಲ್ಲು ಎಂದು ಮುಂತಾಗಿ ಕವಿಸಂಕೇತದ ಆ ಮಹಾವಸ್ತುವು ಮಾನವ ಹೃದಯ ಗುಹೆಯಲ್ಲಿಯೇ ಅಡಗಿದೆ. ಆವುದರ ಕೃಪಾ-ಪ್ರಸಾದದಿಂದ ಇಂದಿನ ಎಲ್ಲ ಶಾಸ್ತ್ರ-ಸಾಹಿತ್ಯ-ಕಲೆಗಳು ಅದ್ಭುತರಮ್ಯವಾಗಿ ವಿಕಾಸಗೊಳ್ಳುತ್ತಲಿವೆಯೊ ಆ ಮೂಲವಸ್ತುವನ್ನು, ಚಿತ್-ಶಕ್ತಿಯನ್ನೇ ಆದರಿಸದಿರುವುದೇ? ಅದರ ಸ್ವಂತಂತ್ರ ಸ್ಥಾನಮಾನವನ್ನು ಒಪ್ಪಿಕೊಳ್ಳದಿರುವುದೇ? ಏನನ್ಯಾಯ! ಈ ಅನ್ಯಾಯದ-ದುಷ್ಕೃತ್ಯದ ಫಲವೇ ಈ ಎಲ್ಲ ಸಾಮಾಜಿಕ, ರಾಜಕೀಯ ಅಶಾಂತಿ ಚೈತನ್ಯ. ಅದುವೇ ಬೆಳಕು; ಬೆಳಕಿನ ಬೆಳಕು. ಕಂಕುಳಲ್ಲಿ ಕೂಸನ್ನಿರಿಸಿಕೊಂಡು ಊರೆಲ್ಲ ಹುಡುಕುವ ಮುಗ್ಧೆಯಂತಾಗಿದೆ ನಮ್ಮ ಇಂದಿನ ನಡೆವಳಿ. ಬೆಳಕಿನ ಬೆಳಕನ್ನೆ ಮರೆತುದರಿಂದ ಹೊರಗೆಲ್ಲ ಲೋಕದಲ್ಲಿ ಕಾಳ್ಗತ್ತಲೆಯು ವ್ಯಾಪಿಸಿದ ಅನುಭವವು ಬಂದರೆ ಏನಾಶ್ಚರ್ಯ? ಯಾರಿಗಾಗಿ, ಯಾತಕ್ಕಾಗಿ ಈ ಕರ್ಮಪ್ರವೃತ್ತಿ? ದೇಹಕ್ಕಾಗಿ? ದೇಹಕ್ಕೆ ಬೆಲೆ, ಚೈತನ್ಯವುಂಟೆಂದು ಆ ಚೈತನ್ಯವನ್ನೇ ಮರೆತು ದೇಹಪುಷ್ಟಿಯ ಸಂಭ್ರಮವು ನಡೆದರೆ! ಸವಾರನಿಗಿಂತ ಕುದುರೆಯ ಆರೋಗ್ಯ-ರಕ್ಷಣೆಗೆ ಪ್ರಥಮ ಸ್ಥಾನವನ್ನು ಕೊಟ್ಟಂತೆ! ಚೈತನ್ಯವನ್ನು ತೇಜಸ್ವಿಯಾಗಿ ಉಳಿಸಿಕೊಂಡು ಅಭಿವೃದ್ಧಿಗೊಳಿಸುವುದಕ್ಕಾಗಿ ದೇಹಸೇವೆ; ಬರಿಮೈಯ ಕೊಬ್ಬು; ಮನುಷ್ಯತ್ವಕ್ಕೇ ಅವಮಾನ; ಚೈತನ್ಯವನ್ನು ಮಂದವಾಗಿಸುವ ಯಾವ ಕೃತ್ಯವೂ ಅಕೃತ್ಯ; ನೀಚಕೃತ್ಯ; ಅಧರ್ಮ. ಚೈತನ್ಯವಿಕಾಸಕ್ಕೆ ಕಾರಣವಾಗುವ ರೀತಿನೀತಿಗಳೇ ಸನಾತನಧರ್ಮ; ಸದ್ಧರ್ಮ, ಕುಟುಂಬ, ರಾಷ್ಟ್ರ, ಸಮಾಜಗಳೆಲ್ಲವೂ ಚೈತನ್ಯದ ಮಹಾಸನ್ನಿಧಾನವೆಂದು ಅವು ಪೂಜ್ಯ; ಸೇವ್ಯ. ಚೈತನ್ಯವನ್ನು ಕಡೆಗಣಿಸಿ ಬೆಳೆದ ಕುಟುಂಬ, ಭೌತಿಕ ವಸ್ತುಪ್ರಪಂಚದ ಹುಚ್ಚಿನಿಂದ ಕಲಹದ ಆಗರವಾಗುತ್ತದೆ. ಚೈತನ್ಯವನ್ನು ಮರೆತು ಶಬ್ದಪ್ರಮಾಣವನ್ನೆ ಆದರಿಸ ಹೊರಟ ಸಂಘ-ಸಂಸ್ಥೆ,

ರಾಷ್ಟ್ರ-ಸಮಾಜಗಳು ನಿರ್ಜೀವವಾಗಲು ಅಥವಾ ಕಾಳಗದ ಕಣವಾಗಲು ಹೆಚ್ಚು ಅವಧಿ ಬೇಕಾಗಿಲ್ಲ. ಕುಟುಂಬ-ರಾಷ್ಟ್ರ-ಸಮಾಜ ಯಾವ ಹೆಸರಿನಲ್ಲಾಗಲಿ ಚೈತನ್ಯದ ಪೋಷಣೆ, ಚೈತನ್ಯದ ವಿಕಾಸವಲ್ಲದೆ ಉಳಿದುದೆಲ್ಲವೂ ಗೌಣ ಅಥವಾ ಆನುಷಂಗಿಕ; ತತ್‌ಪ್ರೀತ್ಯರ್ಥ. ಲೋಕದ ಚೈತನ್ಯದಲ್ಲಿ ಭಿನ್ನ ಭೇದಗಳಿಲ್ಲ; ಅದೆಲ್ಲವೂ ಒಂದು. ಆ ಮಹಾಚೈತನ್ಯದ ನೆನಹಿನಿಂದ ವ್ಯಕ್ತಿಗಳಿಗೆ. ಎಂದರೆ, ಅವರಲ್ಲಿ ಕಾಣಿಸಿಕೊಳ್ಳುವ ಚೇತನಾಂಶ ಆದರಿಸಬೇಕು; ಬೆಲೆಕೊಡಬೇಕು. ಹಿಗ್ಗುಗೊಳ್ಳಲು ನೆರವಾಗಬೇಕು. ಎಲ್ಲ ಮಾನವ ಪ್ರಯತ್ನಗಳ ಇತ್ಯರ್ಥವಿದು. ಇಲ್ಲಿಯೆ ಸಾರ್ಥಕತೆ.

ಸಮಾಜವೆಂಬುದು ಚೈತನ್ಯಸಾಗರ. ವ್ಯಕ್ತಿ ಚೇತನಾಂಶ. ಎತ್ತ ಪ್ರವಹಿಸಿದರೂ ಎಲ್ಲ ನದಿಗಳೂ ಸಾಗರವನ್ನೇ ಸೇರುವಂತೆ, ವ್ಯಕ್ತಿಯ ಮೋಕ್ಷ ಸಮಾಜದಲ್ಲಿ. ವ್ಯಕ್ತಿ ಮತ್ತು ಸಮಾಜದೊಳಗಿನ ನಿತ್ಯ ಸಂಬಂಧವಿದು. ಅಲ್ಲಿಂದಲೇ ಜೀವನ ಪಡೆದು, ಅದರಲ್ಲಿಯೇ ವಿಲೀನವಾಗುವುದು.

ಈ ಸನಾತನ ನಿತ್ಯನೂತನ ಚೈತನ್ಯವನ್ನು ದಿನಾಲು ಒಮ್ಮೆಯಾದರೂ ಅವಲೋಕಿಸಿ, ತನ್ಮಯತೆಯಿಂದ ತಲೆವಾಗದೆ ಇರುವ ಮಾನವರು ಬೇಗನೆಯೆ ಮನುಷ್ಯತ್ವಕ್ಕೆ ಎರವಾಗುತ್ತಾರೆ. ಏಕೆಂದರೆ: ಇದನ್ನು (ಚೈತನ್ಯ) ಮರೆತವನು ತಾನು ಯಾವ ಊರಿಗೆ ಹೊರಟಿರುವೆನು ಅಥವಾ ತನ್ನ ಊರಾವುದೆಂಬುದನ್ನೇ ಮರೆತು ಪ್ರವಾಸ ಬೆಳೆಸುತ್ತಿರುವ ಪ್ರವಾಸಿಯಂತೆ, ಸುತ್ತುತ್ತಿರುವನಾದರೂ ತನ್ನ ನಿಲುವು ಯಾವುದೆಂಬುದನ್ನರಿಯನು. ಆಶ್ಚರ್ಯಪಡುವ ಶಕ್ತಿಯಲ್ಲಿ ಸ್ಫೂರ್ತಿಯ ಉಗಮವಿದೆ. ಸ್ಫೂರ್ತಿಯೆಂದರೆ ಚೈತನ್ಯದ ಉಕ್ಕು; ಹೊರಹೊಮ್ಮುವ ಚೈತನ್ಯ. ಆಶ್ಚರ್ಯ ಎಂದರೇನು? ಆಃ! ಆಹಾ! ಎಂಬ ಚರ್‍ಯೆ. ಚರ್‍ಯೆ ನಡೆವಳಿ. ಹಾಃ! ಆಃ! ಎಂಬ ಆನಂದೋರ್ಮಿಗಳಿಂದ ನವಿರೇಳುವಾಗಣ ಹಿಗ್ಗಿನ ಸುಖವನ್ನು ಬಲ್ಲವರೇ ಬಲ್ಲರು. ಆಃ ಚರ್‍ಯೆಯನ್ನು ಹೊಂದುವ ಸಾಮರ್ಥ್ಯವನ್ನು-ಅಂತಹ ಮನಃಸ್ಥಿತಿಯನ್ನು ಕಳೆದುಕೊಂಡಂತಹನಿಗಿಂತ ದುರ್ದೈವಿ ಬೇರೊಬ್ಬನಿಲ್ಲ. ತನ್ನ ಒಳಗಣ ಅಥವಾ ನೆರೆಹೊರೆಯವರ ಇಲ್ಲವೆ ಲೋಕದೊಳಗಣ ಮಹಾವಿಭೂತಿಗಳ ಅನಂತಶಕ್ತಿಯ ಚೈತನ್ಯ ಜ್ಯೋತಿಯನ್ನು ನೆನೆನೆನೆದು ಆಃ ಚರ್‍ಯಯುಕ್ತರಾಗಲು ಕಲಿಯಬೇಕು. ಇದ ಅನುದಿನದ ಸಾಧನವನ್ನಿಡಬೇಕು. ಸೃಷ್ಟವಸ್ತುಗಳಲ್ಲಿರುವ ಸಹಜ ಸೌಂದರ್ಯವನ್ನು ಕಂಡು ಅಥವಾ ಸ್ಮರಿಸಿ ಆಃ ಚರ್‍ಯಗೊಳ್ಳುವ ಶಕ್ತಿಯು ಎಳೆಯತನದಲ್ಲಿ ವಿಶೇಷವಾಗಿರುತ್ತದೆ. ಈ ಶಕ್ತಿಯು ತಿಳುವಳಿಕೆ ಹೆಚ್ಚಾದಂತೆ ಪರಿಷ್ಕಾರಹೊಂದಿ ಇನ್ನೂ ಪುಟಗೊಳ್ಳಬೇಕು. ಬಾಳಿನೊಳಗಿನ ಸೋಜಿಗಗೊಂಬ ಹೃದಯಭಾವವೇ ನಷ್ಟವಾಗುತ್ತಿದ್ದರೆ ಆ ವ್ಯಕ್ತಿಯ ಜೀವನದ ರೀತಿಯಲ್ಲಿ ಅಥವಾ ವಿಚಾರದ ಪದ್ಧತಿಯಲ್ಲಿ ಎಲ್ಲಿಯೋ ಭಯಾವಹವಾದ ದೋಷವು ತಲೆಯೆತ್ತಿಕೊಂಡಿದೆಯೆಂದು ನಿಶ್ಚಿತವಾಗಿ ತಿಳಿಯಬೇಕು.

ಯಾವುದಕ್ಕೆ ಎಷ್ಟು ಬೆಲೆಯೆಂಬುದನ್ನು ನಿರ್ಧರಿಸುವ ಹದವು ತಿಳಿಯದೆ ಅಥವಾ ಪೇಟೆಯ ಸುಳ್ಳು ಬೆಲೆಯ ಉಬ್ಬಿದ ಅಂಕಿಗಳನ್ನೆ ನೆಮ್ಮಿ ಜೀವನವನ್ನು ಹಸಗೆಡಿಸಿಕೊಳ್ಳುವ ಜನರೇ ಹೆಚ್ಚು. ದಿನದಲ್ಲಿ ಒಂದರೆಗಳಿಗೆಯಾದರೂ ಆಃ-ಚರ್‍ಯದ ತನ್ಮಯತೆ ಇಲ್ಲದೆಯಂತೂ ಜೀವಕ್ಕೆ ಸಮಾಧಾನವಿಲ್ಲ. ತಪ್ಪುಹಾದಿಯಿಂದ ಹೊರಡುವುದರಿಂದ ಸಹ-ಜತೆಯೊಳಗಿನ ಸೌಂದರ್‍ಯವನ್ನು ಕಂಡು ಹಿಗ್ಗುಗೊಂಬ ಶಕ್ತಿಯು ಕುಂದಿದಂತಾಗಿದೆ. ಇಂತಹ ಹೊತ್ತಿನಲ್ಲಿ ಆಃ ಚರ್ಯಕ್ಕಾಗಿ ಕೃತ್ರಿಮ ಸಾಧನಗಳನ್ನು ಉಪಯೋಗಿಸುವ ಮೋಹವು ಉಂಟಾಗುವುದು. ಸಿನೇಮಾ, ರೇಡಿಯೋ, ವ್ಯಾಸಪೀಠ, ರಂಗಭೂಮಿ, ನೈಟ್‌ಕ್ಲಬ್, ಪತ್ತೇದಾರಿ ಕಾದಂಬರಿ, ರೋಮಾಂಚಕಾರಿ ಉತ್ತಾನ ಶೃಂಗಾರದ ಕಥೆ ಮತ್ತು ಕವಿತೆ, ಮದ್ಯ, ಮದಿರಾಕ್ಷಿ.......... ಇಂತಹ ಸಾಧನಗಳಿಂದ ಎಂತೂ ಮೈಮರೆಯಲು ಒದ್ದಾಟವು ನಡೆಯುವುದು. ರಸಿಕತೆ, ಸಂಸ್ಕೃತಿಯನ್ನು ಹೆಚ್ಚಿಸಿಕೊಂಡವರಿಗೆ ಸಹಜ ಆಃ ಚರ್‍ಯದ ತನ್ಮಯತೆಯಿಂದ ಪ್ರಾಪ್ತವಾಗುವ ಆನಂದದ ಶಾಂತಿಯು ಮೇಲಿನ ಕೃತ್ರಿಮ ಸಾಧನಗಳಿಂದ ಎಂದೂ ದೊರೆಯದು. ಕಜ್ಜೀ ತುರಿಸಿಕೊಂಡು ಸುಖಬಟ್ಟಂತೆ; ಕೆರೆದುಕೊಂಬಾಗ ಸಮಾಧಾನವೆನಿಸಿದರೂ ಮುಂದಿನ ಕ್ಷಣದಲ್ಲಿಯೇ ಶಾಂತಿಯ ಬದಲು ಒಳಗಣ ಹುರಿಹುರಿ, ಕುರಕುರಿಯ ದುಃಖವು ಇನ್ನಿಷ್ಟು ಒತ್ತರಿಸುವದು. ಇವೆರಡೂ ಸುಖಾನಂದಗಳ ಜಾತಿಯೇ ಬೇರೆ.

ಅನಂತ-ನಿತ್ಯ-ಶಕ್ತಿಯ ಅಗಾಧತೆಯ ಅರಿವು ಉಂಟಾದವರ ಹೆಮ್ಮೆ-ಬಿಮ್ಮುಗಳೆಲ್ಲ ಮಾಯವಾಗುವವು. ಆಃ ಚರ್ಯಾನಂದದ ನೆನಹಿನಿಂದ ಪ್ರಶಾಂತ ಮನಸ್ಕರಾಗಿ ಆ ತಿಳಿ-ಬೆಳಕಿನಲ್ಲಿ ತಮ್ಮ ಜೀವನವನ್ನು ಬೆಳಗಿಸುವ ವ್ಯಕ್ತಿಗಳು ಸಮಾಜದ ನಿಜವಾದ ಸಮತೆಗೆ, ಸಮತ್ವಕ್ಕೆ ಕಾರಣರಾಗುತ್ತಾರೆ. ಒಳಗಣ ಈ ಬಗೆಯ ಸಮತ್ವಕ್ಕೆ ಪ್ರಾಧಾನ್ಯವನ್ನು ಕೊಡದ ಹೊರಗಿನ ಸಮತಾವಾದವು, ವಾದಕ್ಕೆ ಎಂದರೆ ಜಗಳಕ್ಕೇ ಆಹ್ವಾನವೀಯುವುದು ವ್ಯಕ್ತಿಯು ಶೂನ್ಯವೆಂದು ಬಗೆಯದೆ, ಅದರೊಳಗಿನ ಅದ್ಭುತಶಕ್ತಿಯನ್ನು ಆದರಿಸಲಿಕ್ಕೆ ಗಾರ್ಕಿಯು ಉಪದೇಶಿಸಿರುವನಾದರೂ, ಪಕ್ಷದ ಶಿಸ್ತಿನ ಹೆಸರಿನಲ್ಲಿ ಇಂದಿನ ರಾಜಕೀಯ ಭಂಡಾಟದೊಳಗೆ ವ್ಯಕ್ತಿಗೆ ಬೆಲೆಯೇ ಇಲ್ಲದಾಗಿದೆ! ಪಕ್ಷದ ಮುಂದೆ ವ್ಯಕ್ತಿಯು ಶೂನ್ಯ! ವಿವೇಕ ಶಕ್ತಿಯನ್ನು ಬಲಿಕೊಡದೆ ಪಕ್ಷಾಭಿನಿವೇಶವೇ ಉಂಟಾಗಲಾರದು! ಪಕ್ಷದಲ್ಲಿ 'ಶೂನ್ಯ' ವ್ಯಕ್ತಿಗಳು ಇದ್ದಷ್ಟು ಆ ಪಕ್ಷದ ಸಾಮರ್ಥ್ಯವು ಹೆಚ್ಚು. ಏಕೆಂದರೆ ಆ ಪಕ್ಷವು ಇಂತಹರನ್ನು ಪಕ್ಷದ ಕೆಲಸ ಸಾಧಿಸಲು ಬೇಕಾದಂತಹ ಕೆಲಸಕ್ಕೂ ಉಪಯೋಗಿಸಬಲ್ಲದು. ವ್ಯಕ್ತಿತ್ವವುಳ್ಳವರು ಹೀಗೆ ಒಬ್ಬರ ಕೈಗೊಂಬೆಗಳೆಂದೂ ಆಗಲಾರರು. ಚೈತನ್ಯಶಕ್ತಿಯು ನಿತ್ಯನೂತನ. ನವೋನವತೆಯು ಅದರ ಮೂಲಭೂತಗುಣ. ಆದಕಾರಣ, ಜೀವಂತವಾಗಿ ಉಳಿಯಬೇಕೆಂಬ ಹಂಬಲದ ವ್ಯಕ್ತಿಯು ಯಾವುದೇ ಪಕ್ಷದ ಯಾಂತ್ರಿಕ ಸಾಧನವಾಗಲು ತನ್ನ ನವೋನವತೆಯನ್ನು ಕಳೆದುಕೊಳ್ಳಲು ಸಿದ್ಧವಾಗಲಾರದು. ಸತ್ಕಾರ್ಯದಲ್ಲಿ ತೊಡಗಿದ ಎಲ್ಲ ಪಕ್ಷಗಳೂ ಅವರ ಪಕ್ಷ. ಪಕ್ಷಪಾತವು ಅವರಿಗೆ ಸರಿಬಾರದು. ಅವರು ಒಟ್ಟು ಸಮಾಜದ ಪಕ್ಷಪಾತಿಗಳು. ಯಾವುದೊಂದೇ ಪಕ್ಷವೆಂದರೆ, ಸಮಾಜವಲ್ಲ. ಸಮಾಜದ ವೈವಿಧ್ಯವನ್ನು ನಷ್ಟಗೊಳಿಸಿ, ಒಂದೇ ಪಕ್ಷಕಟ್ಟುವ ಹವ್ಯಾಸದವರು, ಇಡೀ ಸಮಾಜವನ್ನು ಒಂದೇ ಪಕ್ಷ ಮಾಡಬೇಕೆಂಬುವರು ಸಮಾಜದ ವೈರಿಗಳು. ಏಕೆಂದರೆ ಒಂದೇ ಆಗಿರುವುದು ಅಂದಗೇಡು. ವಿವಿಧತೆಯಲ್ಲಿ ಸೌಂದರ್ಯವಿದೆ. ವೈವಿಧ್ಯಪೂರ್ಣವಲ್ಲದ್ದು ಸಮಷ್ಟಿಯಲ್ಲ; ಸಮಸ್ತರನ್ನು ಒಳಗೊಂಬುದು ಸಮಾಜ. ಆದಕಾರಣ, ನಿಜವಾದ ಸಾಮಾಜಿಕ ವೃತ್ತಿಯ ಸಾಂಸ್ಕೃತಿಕ ವ್ಯಕ್ತಿಯು ಪಕ್ಷಾತೀತ. ಇದ್ದರೆ, ಎಲ್ಲ ಪಕ್ಷಗಳು ಆತನವು. ಅಲ್ಲವಾದರೆ ಯಾವುದೂ ಆತನ ಪಕ್ಷವಲ್ಲ. ಏಕೆಂದರೆ ಸತ್ಯವು ಏಕಪಕ್ಷೀಯವಲ್ಲ.

ಯಾವ ಚೈತನ್ಯದ ಸ್ವಲ್ಪಮಾತ್ರ ಸ್ಪರ್ಶದಿಂದ ಅಗಾಧ ಪ್ರತಿಭೆಯ ಮಹಾಕವಿಗಳೂ ಲೋಕವಿಖ್ಯಾತರಾದ ವಿಜ್ಞಾನಿಗಳೂ ಮನಸ್ಸನ್ನು ಸೂರೆಗೊಂಬ ವಾದಿವಾಂಗ್ಮಿಗಳೂ ಅತುಲ ವೀರ ಸಾಸಿಗರೂ ನಾನಾ ತರದ ಶಕ್ತಿಯುತರಾದ ಮಹಾಮಹಿಮರಾದ ವಿಭೂತಿಗಳೂ ಕಾಣಿಸಿಕೊಳ್ಳುವರೊ ಆ ಚೈತನ್ಯದ ಒಂದಂಶವೆ ಅಳವಟ್ಟಿರುವ ವ್ಯಕ್ತಿಯೂ ವಂದ್ಯವಾಗಿದೆ.

'ಓಂ ನಮೋ ಮಹದ್ಭ್ಯೋ, ನಮೋ ಅರ್ಭಕೇಭ್ಯೋ,
ನಮೋ ಯುವಭ್ಯೋ, ನಮ ಆಶಿನೇಭ್ಯಃ'

ಹಿರಿಯರು, ಕಿರಿಯರು, ತರುಣರು, ಅಶನಾರ್ಥಿಗಳು ಎಂಬ ವ್ಯಕ್ತಿಮಾತ್ರರಿಗೂ ನಮೋ ನಮೋ ಎಂದು ವಂದಿಸುವಲ್ಲಿ ಚೈತನ್ಯದ ಉಪಾಸನೆಯೇ ಇದೆ. ಕುಮಾರಪೂಜೆ, ಕುಮಾರಿಪೂಜೆ, ದಾಂಪತ್ಯ ಪೂಜೆ ಮೊದಲಾದ ಬಗೆಯ ಸಂತರ್ಪಣ-ಸಮಾರಾಧನಗಳ ಮೂಲೋದ್ದೇಶವು ಚೈತನ್ಯದ ಹಿಗ್ಗಿಗಾಗಿ ಮಾಡುವ ಸಾಧನವಲ್ಲದೆ ಬರಿಯ ತಂಡುಲ ಧ್ವಂಸ ಅನ್ನಯಜ್ಞವಲ್ಲ. ಈ ಚೈತನ್ಯಕ್ಕೇ ಮುಖ್ಯವಾದ ಗಮನಕೊಟ್ಟಲ್ಲಿ ಅದರ ಅಂತಃಶಕ್ತಿಯ ಸ್ಮರಣಮಾತ್ರದಿಂದ ಮಾನವವ್ಯಕ್ತಿಗಳ ವಿಷಯದಲ್ಲಿ ಅವರ ದೇಹಗುಣಗಳ ನೆನಪಾಗಿ ಅಥವಾ ದೇಹಗುಣಗಳ ಕ್ರಿಯೆಗೆ ಪ್ರತಿಕ್ರಿಯೆಯೆಂದು ತಲೆದೋರುವ ಅನಾದರ, ಜುಗುಪ್ಸೆಯೆಲ್ಲವೂ ಮೆಲ್ಲನೆ ಇಲ್ಲದಾಗುವುದು. ಎಂತಹ ಸಾಮಾನ್ಯ ವ್ಯಕ್ತಿಯಿದ್ದರೂ ಅದರಲ್ಲಿ ಕೆಲವೊಂದು ಗುಣವಿಶೇಷವು ಇದ್ದೇ ಇರುತ್ತದೆ; ಏಕೆಂದರೆ ಚೈತನ್ಯ ಶಕ್ತಿಯು ಗುಣವಿಹೀನವಲ್ಲ; ಅನಂತಗುಣಯುತ. ಯಾವ ವ್ಯಕ್ತಿಯಲ್ಲಿ ಯಾವ ಗುಣಾಂಶವು ಕಾಣಿಸಿಕೊಳ್ಳುತ್ತಿರುವುದೆಂಬುದನ್ನು ಕೌತುಕದಿಂದ ಕಂಡುಹಿಡಿವ ತಾಳ್ಮೆಬೇಕು. ಆದರ ಭಾವಬೇಕು. ಸ್ವಾರ್ಥ ಕಾರ್ಯಸಾಧಿಸಲು 'ಪೊಲಿಸಿ' ಎಂದು ಮಾತಿನಲ್ಲಿ ಹಾಲೂ ಜೇನೂ ಸುರಿಸುವ ಚತುರ ವ್ಯವಹಾರಿಗಳ

ಧೂರ್ತ ಧೋರಣದ ಆದರವು ಭಯಾವಹವಾದುದು; ವ್ಯಕ್ತಿಗಳಲ್ಲಿ ಅಡಕವಾಗಿರುವ ಅಮರ ಚೈತನ್ಯಶಕ್ತಿಯ ಅದ್ಭುತತೆಯನ್ನು ನೆನೆದು ಹೊರಹೊಮ್ಮುವ ಆದರ, ಪ್ರೀತಿ, ವಿನಯಗಳಲ್ಲಿರುವ ಮಾಧುರ್ಯವು ಕೃತ್ರಿಮವಾದ ಅತಿವಿನಯದಲ್ಲಿ ಎಂದೂ ಇರಲಾರದು. ಅತಿ ಪರಿಚಯದಿಂದ ಮನಸ್ಸು ಬಧಿರವಾಗಿ, ಅದ್ಭುತತೆ, ಆಶ್ಚರ್ಯ, ಕೌತುಕ, ಆದರಾದಿ ಭಾವಗಳಿಗೆ ಎರವಾಗುತ್ತದೆ. ಆದುದರಿಂದ ತಿಳಿದವರು ಕಾಲಕಾಲಕ್ಕೆ ತಕ್ಕ ಉಪಾಯಗಳಿಂದ ಮನಸ್ಸನ್ನು ಆವರಿಸುವ ಹಾವಸೆಯ ಈ ಪಾಚಿಯನ್ನು ತೊಡೆದುಹಾಕಬೇಕು.

ಸಮಾಜವೆಂಬುದು ಒಂದು ಕಲಾಮಂದಿರ. ಅದರಲ್ಲಿರುವ ವಿಧವಿಧದ ಚಿತ್ರಗಳೂ ಮೂರ್ತಿಗಳೂ ಎಲ್ಲ ಮಾನವ ವ್ಯಕ್ತಿಗಳು. ಕೆಲವೊಂದು ಮೂರ್ತಿಚಿತ್ರಗಳನ್ನು ಒಂದೊಂದು ವಿಶಿಷ್ಟ ಮರ್ಯಾದೆಯಿಟ್ಟು ಕಾಣಬೇಕಿರುತ್ತದೆ. ಈ ಮರ್ಯಾದೆಯು ಸರಿಯಾಗಿ ಸಾಧಿಸದೆ ಇದ್ದರೆ ವ್ಯಕ್ತಿಗತ ಸೌಂದರ್ಯವು ಮನಸ್ಸಿಗೆ ಹಿಡಿಯುವುದಿಲ್ಲ. ಈ ವ್ಯಕ್ತಿಗಳು ಅಂದಗೇಡಿಗಳಾಗಿ ಕಾಣಲು ಇದೊಂದು ಮುಖ್ಯವಾದ ಕಾರಣ. ಮರ್ಯಾದೆಯನ್ನು ಇಟ್ಟು ನೋಡುವ ಹದವು ತಿಳಿದರೆ, ಲೋಕದಲ್ಲಿ ಅಸೌಂದರ್ಯವೆಂಬುದೇ ಇಲ್ಲ. ಒಂದೊಂದು ವ್ಯಕ್ತಿಯ ಚೆಲುವು ಒಂದೊಂದು ವಿಶಿಷ್ಟ ನಿಲುಮೆಯಲ್ಲಿ ಎದ್ದು ಕಾಣುವುದು. ಹೊರಗೆ ಸಾಮಾನ್ಯವಾಗಿ ಕುರೂಪಿಯಾಗಿ ತೋರುವ ಸಿನೆಮಾ ನಟನಟಿಯರನ್ನು ಜಾಣರಾದ ಫೋಟೋಗ್ರಾಫರರು ವಿಶಿಷ್ಟ ಮಗ್ಗುಲಿನಿಂದ ಅವರ ಭಾವಚಿತ್ರಗಳನ್ನು ಮೂಡಿಸಿಕೊಂಡು, ಆಕರ್ಷಕವಾಗುವಂತೆ ಮಾಡುತ್ತಾರೆ. ಆದಕಾರಣ ಮರ್ಯಾದೆಯನ್ನು ಇಟ್ಟು ನೋಡುವುದು ಅಗತ್ಯವಾಗಿರುವಂತೆ, ವಿಶಿಷ್ಟ ನಿಲುಮೆಯಲ್ಲಿ ಕಾಣುವುದೂ ಮಹತ್ವದ ಸಂಗತಿಯಾಗಿದೆ. ಹೃದಯದಿಂದ ಅನ್ಯರ ವಿಷಯಕ ದುರ್ಭಾವದ ಕೊಳೆಯನ್ನು ಹೋಗಲಾಡಿಸಿಕೊಳ್ಳಲು, ವ್ಯಕ್ತಿಗಳಲ್ಲಿರುವ ಕುರೂಪತೆಯನ್ನು ಮರೆಯಲು ರಸಿಕರಾದವರು ಇವರೆಡೂ ಉಪಾಯಗಳನ್ನು ಅವಲಂಬಿಸುವರು. ಮೂರ್ತಿ, ಚಿತ್ರಗಳಂತೆ ವ್ಯಕ್ತಿಗಳು ನಿರ್ಜೀವವಸ್ತುಗಳಲ್ಲ. ಮೂರ್ತಿ, ಚಿತ್ರಗಳನ್ನು ಸರಿಯಾದ ಎತ್ತರ, ಬೆಳಕು, ಅಂತರ ಮತ್ತು ಹಿನ್ನೆಲೆಗಳನ್ನು ನೋಡಿಕೊಂಡು ಹೊಂದಿಕೆಯಾಗುವ ರೀತಿಯಲ್ಲಿ ಬೇರೆಯವರು ಇಡುವ ಅಥವಾ ಹಚ್ಚುವ ಆವಶ್ಯಕತೆಯಿರುವಂತೆ ವ್ಯಕ್ತಿಗಳಿಗೆ ಇಲ್ಲ. ವ್ಯಕ್ತಿಯು ತಾನೇ ತನ್ನ ಹಿನ್ನೆಲೆ ಸ್ಥಾನ ಮರ್ಯಾದೆಗಳನ್ನು ನಿರ್ಧರಿಸಿಕೊಂಡು ನಿಂತು ಸಮಾಜ ಮಂದಿರದ ಅಂದವನ್ನು ಅಭಿವೃದ್ಧಿಗೊಳಿಸಲು ನೆರವಾಗುವುದು ಕರ್ತವ್ಯವಾಗಿರುತ್ತದೆ. ಜನಗಳಲ್ಲಿ ಮರ್ಮಜ್ಞತೆ, ಅಭಿರುಚಿ ಸಾಕಷ್ಟಿಲ್ಲದಿದ್ದಲ್ಲಿ ಬೆಲೆ ಗೊತ್ತಿಲ್ಲದೆ, ಮೂಲೆಯಲ್ಲಿರಿಸಬೇಕಾದುವು ಮೇಲೆ, ಮೇಲಿರಬೇಕಾದುವು ಮೂಲೆಯಲ್ಲಿ ಬೀಳುವವು. ಆದರೆ, ತಮ್ಮ ಅಂದವನ್ನೇ ಅರಿತುಕೊಳ್ಳದ ಅಂದಗೇಡಿಗಳಿಂದ ಸಮಾಜದ ಸೌಂದರ್ಯದ ಹಾನಿಯಾಗುತ್ತದೆ. ತಮ್ಮ ನಿಲುಮೆ ಯಾವುದು ಎಂಬುದನ್ನು ನಿರ್ಧರಿಸಿಕೊಳ್ಳದೆ ಅಲ್ಲದ ಸ್ಥಾನದಲ್ಲಿ ಕಾಲಿಟ್ಟು ತಾವೂ ಸಂಕಟಪಡುತ್ತಾರೆ. ಇನ್ನು ಉಳಿದವರ ತೊಂದರೆಗೂ ಕಾರಣರಾಗುತ್ತಾರೆ. ಕೊನೆಗೆ ಅವರ ನಿರಾಶೆಯ ಕುತ್ತಿಸಿರು, ನಿಟ್ಟುಸಿರಿನ ಬೀದಿಮಾತುಗಳಿಂದ ಸಮಾಜದ ಪವಿತ್ರವಾಗಿರಬೇಕಾದ ವಾತಾವರಣವು ಅಪವಿತ್ರ ದೂಷಿತವಾಗುತ್ತದೆ. ಒರಗುಮೋರೆ, ಗಂಟುಮೋರೆ, ರೊಚ್ಚಿನ ಮೋರೆ, ಅಥವಾ ನಿರಾಶೆಯ ನಿಃಸತ್ವ ಸಪ್ಪೆಮೋರೆಗಳಿಂದ ನೋಡುವವರ ಹೃದಯಕ್ಕೆ ಬರೆಯೆಳೆದಂತೆ ದುಃಖವಾಗುತ್ತದೆ. ತಮ್ಮಿಂದ ಈ ಬಗೆಯ ಸಾಮಾಜಿಕ ಅನ್ಯಾಯವಾಗುತ್ತದೆಂದು ಅನೇಕರು ಅರಿಯರು. ತಮ್ಮ ಕೊರತೆ, ಕಷ್ಟಗಳನ್ನು ಮರೆತು, ಇನ್ನುಳಿದವರ ಆನಂದದಲ್ಲಿ ಭಾಗಿಗಳಾಗಿ ನಕ್ಕು ಕೆಲೆದು ಹಿಗ್ಗಿನಿಂದ ಇರುವ ಪ್ರಯತ್ನಪಡಲು ಕಲಿಯದೆ ಇರುವುದು ವ್ಯಕ್ತಿಗಳ ಅಸಂಸ್ಕೃತಿಯ ಕುರುಹು.

ತನ್ನ ಅಂದವೆಲ್ಲಿದೆ? ತನ್ನ ಅರ್ಥವೇನು? ತನ್ನಲ್ಲಿರುವ ನಿಸರ್ಗದತ್ತ ಶಕ್ತಿಗಳು ಯಾವುವು? ಅವನ್ನು ತನಗೂ ಸಮಾಜಕ್ಕೂ ಉಪಯುಕ್ತವಾಗುವಂತೆ ಎಂತು ಬೆಳೆಸಿಕೊಳ್ಳಬೇಕು? ಎಂಬ ವಿಚಾರವು ಬೇಗನೆ ತಿಳಿದಷ್ಟು ವ್ಯಕ್ತಿಯ ಹಿತವಿದೆ. ಜ್ಞಾನ ಮತ್ತು ಕ್ರಿಯೆಗಳು ವ್ಯಕ್ತಿವಿಕಾಸಕ್ಕೆ ಮಹತ್ವದ ಸಾಧನಗಳು. ಜ್ಞಾನವು ಕ್ರಿಯೆಯಲ್ಲಿ ಪರಿಣಮಿಸುವುದು. ಕ್ರಿಯೆಯಿಂದ ಅನುಭವ ಬಂದು, ಅನುಭವದಿಂದ ಜ್ಞಾನಪ್ರಾಪ್ತವಾಗುವುದು. ಕ್ರಿಯೆಯಲ್ಲಿ ರೂಪಾಂತರವಾಗದ ಜ್ಞಾನವು ಜ್ಞಾನವಲ್ಲ. ಜ್ಞಾನದಲ್ಲಿ ಪರಿಣಾಮಗೊಳ್ಳದ ಕ್ರಿಯೆ ಕ್ರಿಯೆಯಲ್ಲ. ಜ್ಞಾನ ಮತ್ತು

ಕ್ರಿಯೆಗಳು ಒಂದರೊಳಗೊಂದು ಮಾರ್ಪಡುತ್ತಿರುವುದೆ ಜೀವಂತ ವ್ಯಕ್ತಿಯ ಲಕ್ಷಣ. ಅವನೆ 'ಕ್ರಿಯಾವಂತ'. ಆಡುವುದಕ್ಕೂ ಮಾಡುವುದಕ್ಕೂ ಅಸಂಬದ್ಧತೆಯು ಆತನಲ್ಲಿ ಇರುವದಿಲ್ಲ. 'ನಾನು' (ಇದ್ದೇನೆ) ಎಂಬ ಅರಿವಿನಿಂದೊಡಗೂಡಿ ಮಾಡುತ್ತಿರುವ ಕೆಲಸದಿಂದ ಅರಿವಿನ ಕ್ಷೇತ್ರವು ವಿಶಾಲವಾಗಿ ವಿಚಾರವು ಬೆಳೆಯುವುದು. ವಿಚಾರವೇ ಪ್ರಗತಿಯ ಮುಖ್ಯ ಸಾಧನ. ವಿಚಾರವೆಂದರೆ ಪ್ರಗತಿ. ವಿಚಾರವೆಂದರೆ ಬರಿಯ ಕಲ್ಪನೆಯಲ್ಲ. ಇದು ಸರಿ ಎಂದು ಮನವರಿಕೆಯಾದ ಮಾತು. ಮನದಲ್ಲಿ ಸಂಪೂರ್ಣ ಒಪ್ಪಿಗೆಯನ್ನು ಪಡೆದ ಮಾತು ವ್ಯಕ್ತಿಯನ್ನು ಸುಮ್ಮನೆ ಇದ್ದಲ್ಲಿಯೆ ನಿಲ್ಲಗೊಡುವುದಿಲ್ಲ. ವಿಚಾರವು ಆಚಾರಕ್ಕೆ ಹಚ್ಚುತ್ತದೆ. ಕೃತಿಯನ್ನು ಮಾಡಲು ಮನದಲ್ಲಿ ಸೂಕ್ಷ್ಮವಾಗಿ ಒತ್ತಾಯ ಪಡಿಸುವ ಕಲ್ಪನೆಯೆ ವಿಚಾರ. ವಿಚಾರವು ವ್ಯಕ್ತಿಗೆ ಗತಿದಾಯಕ ಶಕ್ತಿ. ಅವ್ಯಕ್ತ ವಿಚಾರದ ವ್ಯಕ್ತರೂಪವೇ ಆಚಾರ. ವಿಚಾರವೆಂದರೆ ಪ್ರಗತಿ; ವಿಚಾರವೆಂದರೆ ಮುನ್ನಡೆ. ವಿಚಾರವಂತರು ಇದ್ದಲ್ಲಿಯೇ ಬಿದ್ದುಕೊಂಡಿರಬೇಕೆಂಬ ಸ್ಥಿತಿಪ್ರಿಯರಾಗಿರಲಾರರು. ಪ್ರಗತಿಯಲ್ಲಿ ಆಸಕ್ತಿಯನ್ನು ನಿಃಸಂದಿಗ್ಧ ರೀತಿಯಲ್ಲಿ ವ್ಯಕ್ತಪಡಿಸುವ ಈ ಪದಗಳು (ಸು) ಸಂಸ್ಕೃತರ ಪ್ರಾಗತಿಕ ಮನೋವೃತ್ತಿಯ ನಿದರ್ಶಕವಾಗಿಲ್ಲವೇ?

ವೈಶಿಷ್ಟ್ಯಪೂರ್ಣವಾದುದೆಂದೇ ಅದು ವ್ಯರ್ಥಿ. ಆದರೆ, ವೈಶಿಷ್ಟ್ಯಕ್ಕೂ ವಿಚಾರಕ್ಕೂ ಎಣ್ಣೆ-ಸೀಗೆ! ವಿಚಾರವು ವೈಶಿಷ್ಟ್ಯವನ್ನು ಕಡಿಮೆ ಮಾಡುತ್ತದೆ; ತೊಳೆದೂ ಬಿಡುತ್ತದೆ! ದಿವ್ಯಜ್ಞಾನಿಗಳಿಗೆ ತಮ್ಮ ವ್ಯಕ್ತಿವೈಶಿಷ್ಟ್ಯವನ್ನು ಮನಸಾ ಉಳಿಸಿಕೊಂಡು ಅದನ್ನು ಜನರೆದುರು ಪ್ರದರ್ಶಿಸುವಲ್ಲಿ ಅಷ್ಟು ಸಂತೋಷವಿಲ್ಲ. ಶ್ರುತಿಗಳ ದ್ರಷ್ಟಾರರು, ಸ್ಮೃತಿಗಳ ಲೇಖಕರು, ಮಹಾಕಾವ್ಯಗಳ ನಿರ್ಮಾತೃಗಳು ಯಾರೂ ತಮ್ಮ ವ್ಯಕ್ತಿತ್ವದ ಪ್ರದರ್ಶನಕ್ಕೆ ಪ್ರವೃತ್ತರಾದುದು ಕಂಡುಬರುವುದಿಲ್ಲ. ಅವರನ್ನು ಕಲ್ಪನೆಯಿಂದಲೇ ಚಿತ್ರಿಸಿಕೊಳ್ಳಬೇಕು, ಇಂದು! ಭಾರತೀಯ ಸಂಸ್ಕೃತಿಯಲ್ಲಿ ಮುಖ್ಯವಾಗಿ ಅಧ್ಯಾತ್ಮಕ್ಕೇ ಪ್ರಾಧಾನ್ಯವಿದ್ದುದರಿಂದ ಅದರ ವಿಚಾರಪ್ರಣಾಲಿಯಲ್ಲಿ ವ್ಯಕ್ತಿತ್ವಕ್ಕೆ ಇಂಬು ಇದ್ದಿಲ್ಲ. ವ್ಯಕ್ತಿತ್ವವನ್ನು ಕೊಂದುಬಿಟ್ಟರೆ, ವೈಶಿಷ್ಟ್ಯಕ್ಕೆ ಮಹತ್ವವು ಇಲ್ಲದಾದರೆ ಸಾಮಾನ್ಯರಿಗೆ ತಾನು ಬೆಳೆಯಬೇಕೆಂಬುದರೊಳಗಿನ ಆಸ್ಥೆಯು ಕುಗ್ಗುತ್ತದೆ. ತಾನು, ತನ್ನದು ಎಂಬ ಭಾವವೂ ಸ್ಪರ್ಧೆಯೂ ವ್ಯಕ್ತಿವಿಕಾಸಕ್ಕೆ ಆವಶ್ಯಕವಾದ ಕಾವು ಕೊಡುವುವು. ಆದರೆ, ವಿಚಾರವು ವಿಕಾಸವಾದಂತೆ 'ತಾನು' ಎಂಬ ಭಾವದ ಟೊಳ್ಳುತನದ ಮನವರಿಕೆಯಾಗಿ ವೈಶಿಷ್ಟ್ಯದ ಆಕಾಂಕ್ಷೆಯು ಉಳಿಯದಾಗುವುದು.

ಈ ಎರಡು ಶಕ್ತಿಗಳ ಸಂಘರ್ಷಣವು ತನ್ನಲ್ಲಿ ನಡೆದುದು ವ್ಯಕ್ತಿಗೆ ಅನೇಕ ಬಾರಿ ಅನುಭವಕ್ಕೆ ಬರುತ್ತದೆ. ವಿಚಾರವು ವ್ಯಕ್ತಿಗೆ ಮುನ್ನಡೆಯಲು ಒಳಗಣ್ಣಿಂದೆ ಚುಚ್ಚುತ್ತಿರುತ್ತದೆ. ಆದರೆ, ಸ್ವಾರ್ಥ, ವೈಶಿಷ್ಟ್ಯಗಳು ಆತನನ್ನು ಇದ್ದಲ್ಲಿಯೇ ಉಳಿಯಲು ಬಿಗಿದು ಹಿಡಿಯುತ್ತವೆ. ಸ್ವ-ಅರ್ಥದ ವಿಶಾಲವಾದ ಅರ್ಥ, ಅನುಭವಗಳು ಹಿರಿಮೆ ಹೆಚ್ಚಳದ ಕಲ್ಪನಾಚಿತ್ರಗಳನ್ನು ವ್ಯಕ್ತಿಯ ಮುಂದೆ ಹಿಡಿದು ಅತ್ತಕಡೆಗೆ ಅದನ್ನು ಆಕರ್ಷಿಸುತ್ತವೆ. ಆದರೆ, ಹೀಗೆ ಹೆಚ್ಚಳಗೊಳ್ಳುವಲ್ಲಿ 'ತನ್ನದು' ಎಂಬುದೇ ಉಳಿಯದೆ ಎಲ್ಲರಲ್ಲಿ ತಾನು ಬೆರೆತುಹೋಗುವ ಭೀತಿಯನ್ನೂ ಸ್ವಾರ್ಥ-ವೈಶಿಷ್ಟ್ಯಗಳು ಮುಂದೊಡ್ಡುವುವು. ಈ ದ್ವಂದ್ವದಲ್ಲಿ ಸಾಮಾನ್ಯ ವ್ಯಕ್ತಿಯು ನುಗ್ಗುನುಸಿಯಾಗುತ್ತದೆ. ಸ್ವಾರ್ಥಕ್ಕೆ ಬಾಧೆಬರುವುದನ್ನು ಕಂಡು ವ್ಯಕ್ತಿಭಾವವು ಜಾಗೃತವಾಗಿ 'ಸ್ವ' ದ ಅರ್ಥವು ವಿಸ್ತೃತವಾಗುವುದನ್ನು ವಿಚಾರವನ್ನು ವಿರೋಧಿಸಲು ಅಣಿಯಾಗುವುದು. ಆದುದರಿಂದ ವೈಶಿಷ್ಟ್ಯಕ್ಕೆ ಪ್ರಾಧಾನ್ಯವೀಯುವ ವ್ಯಕ್ತಿಯು ವಿಚಾರದ ವೈರಿ. ವಿಚಾರವನ್ನು ಅಲ್ಲ; ಕಲ್ಪನೆಗಳನ್ನು ತನ್ನ ಸ್ವಾರ್ಥ ವೈಶಿಷ್ಟ್ಯಗಳ ಮಂಡನೆಗೆ ಉಪಯೋಗಿಸುವನೇ ಹೊರತು (ಶುದ್ಧ) ಜ್ಞಾನ ಜಿಜ್ಞಾಸುವಾಗಿ ಪ್ರ-ಗತಿಗಾಗಿ ಅಲ್ಲ.

ವ್ಯಕ್ತಿತ್ವವು ಸ್ಥಿತಿಯ ಸೂಚಕವಾಗಿದೆ. ವ್ಯಕ್ತಿತ್ವ, ವೈಶಿಷ್ಟ್ಯ, ಸ್ವಾರ್ಥ, ಸ್ವಭಾವ ಇವೆಲ್ಲವುಗಳಲ್ಲಿ ಸ್ಥಿತಿಸ್ಥಾಪಕ ಗುಣವುಂಟು. ಆದರೆ, ವಿಚಾರವು ಸ್ಥಿತಿಗೆ ವಿರೋಧಿ! ವಿಚಾರದ ಬೆಂಬತ್ತಿದರೆ ಅಜ್ಞಾತ ಹೊಸ ಪರಿಸ್ಥಿತಿಗೆ ಕೊಂಡೊಯ್ಯುದು ನಿಶ್ಚಿತ. ವಿಚಾರ ಎಂದರೆ ಮುನ್ನಡೆಯಲ್ಲಿ ಈ ಗಂಡಾಂತರವು ಯಾವಾಗಲೂ ಇದ್ದೇ ಇದೆ. ಒಂದು ಸ್ಥಿತಿಯಲ್ಲಿ ಇದ್ದವರು, ಅಥವಾ ಒಂದು ಸ್ಥಿತಿಗೆ ಬಂದವರು-ಎಂದರೆ 'ಸ್ಥಿತಿವಂತ'ರು ಅಜ್ಞಾತ ಪರಿಸ್ಥಿತಿಗೆ ಒಯ್ಯುವ ಬುದ್ಧಿಗೂ ವಿಚಾರಕ್ಕೂ ಯಾವಾಗಲೂ ಹೆದರುವರು. ಸ್ವತಂತ್ರವಿಚಾರ, ನವೀನ ದೃಷ್ಟಿಗಳನ್ನು

ವಿರೋಧಿಸುವವರು. ಹೀಗೆ ವ್ಯಕ್ತಿಯ ಸ್ಥಿರ ಮತ್ತು ಚರಬಿಂದುಗಳಲ್ಲಿ-ವೈಶಿಷ್ಟ್ಯ, ಸ್ವಭಾವ, ಸ್ವಾರ್ಥಗಳು ಒಂದೆಡೆಗೆ ಮತ್ತು ವಿಚಾರ, ಸೌಂದರ್ಯಗಳು ಇನ್ನೊಂದೆಡೆಗೆ. ಇವೆರಡರ ಎಳೆದಾಟವು ನಡೆದದ್ದೂ ನಡೆದದ್ದೆ! ಇವೆರಡರಲ್ಲಿ ಯಾವುದಕ್ಕೆ ಗೆಲುವೊ ಅದರ ಮೇಲೆ ಮಾನವನ ಬೆಲೆ, ಆತನ ಸಮಾಜದ ಬೆಲೆ ಅವಲಂಬಿಸಿದೆ.

ಸ್ಥಿರಬಿಂದುವಿನ ಆಧಾರ ನೆಲ. ಭೂಮಿಯಲ್ಲಿ ಬೇರ್ವರಿದು ದೃಢವಾಗಬೇಕೆಂಬುದು ಇದರ ಸ್ವಭಾವ. ಚರಬಿಂದುವಿನ ಗತಿ ಮುಗಿಲಿನತ್ತ. ಸುತ್ತು ಮುತ್ತು ಹಬ್ಬುವುದು, ಮುಂದುವರಿಯುವುದು ಇದರ ಸ್ವಬಾವ. ಒಂದರದು ಅಧೋಗತಿ; ಇನ್ನೊಂದರದು ಊರ್ಧ್ವಗತಿ. ತನ್ನತನವನ್ನು ಉಳಿಸಿಕೊಳ್ಳಲು ವ್ಯಕ್ತಿತ್ವವು ನೆರವಾಗುತ್ತದೆ. ಹೀಗೆ ಹಲವರೊಡನೆ ಬೆರೆತು, ವಿಶಾಲವಾದ ಅನುಭವಾನಂದ ಹೊಂದಲು ವಿಚಾರವು ಸಹಕಾರಿಯಾಗುತ್ತದೆ. ವ್ಯಕ್ತಿತ್ವದಲ್ಲಿ ಭೂ-ತತ್ವವಿದ್ದರೆ, ವಿಚಾರದಲ್ಲಿ ಆಕಾಶತತ್ವವಿದೆ. ಮೊದಲನೆಯದು ಅನ್ನಮಯಕೋಶಸ್ಥಜೀವ; ಎರಡನೆಯದು ಮನೋಮಯಕೋಶಸ್ಥ ಚೈತನ್ಯ. ಮೊದಲನೆಯದು ವ್ಯಕ್ತಿ; ಎರಡನೆಯದು 'ಪುರುಷ'.

ವಿಕಾಸಗೊಂಡ ವ್ಯಕ್ತಿಯೆ 'ಪುರುಷ'*. 'ಪುರುಷ' ಶಬ್ದವು ಋಗ್ವೇದ ಕಾಲದಷ್ಟು ಪ್ರಾಚೀನ! ಅಂದಿನಿಂದಲೂ ಈ ವಿಶಾಲಾರ್ಥವು ಅದರಲ್ಲಿ ಅಭಿಪ್ರೇತವಾಗಿದೆ. ವ್ಯಕ್ತಿತ್ವಕ್ಕೆ ಮಿತಿಯಿದೆ. ವೈಶಿಷ್ಟ್ಯವು ಏಕಾಂಗಿಕತೆಯ ಸೂಚಕ. ವ್ಯಕ್ತಿ ಎರಡನ್ನು ಅರಿಯದು. ವ್ಯಕ್ತಿಗೆ ಅನ್ನವೇ ದೇವರು. ಪುರುಷ, ಮನಸ್ಸಿನ ಉಪಾಸಕ, ಮನಸ್ಸು ಬಹುಮುಖ; ಅನಂತಮುಖ. ಉಪಾಸ್ಯದ ಗುಣ ಉಪಾಸಕನಲ್ಲೂ ಬರುವುದು ನಿತ್ಯನಿಯಮ. ಆದಕಾರಣ, ಪುರುಷ ಬಹುಸ್ವರೂಪಿ; ಅನಂತರೂಪಿ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ಬಿಡಲರಿಯದು. ಆದರಿಂದ ಅದು ಇನ್ನೊಬ್ಬರೊಡನೆ ಬೆರೆಯಲೂ ಆರದು. ಆದರೆ, ಪುರುಷ ಸರ್ವರೂಪಿ. ಆದುದರಿಂದ ಅವರಂತಾಗಿ ಯಾರೊಡನೆಯೂ ಕೂಡಬಲ್ಲ. ಈ ಕಾರಣ ವ್ಯಕ್ತಿ ವಿಶಿಷ್ಟಲಿಂಗಿ; ಪುರುಷ ಸರ್ವಲಿಂಗಿಯಾಗಿಯೂ ಅ-ಲಿಂಗಿ. ಅಲಿಂಗಿ ಎಂದ ಮಾತ್ರಕ್ಕೆ ಪೌರುಷವಿಹೀನ ನಪುಂಸಕವಲ್ಲ; ಸರ್ವಶಕ್ತವೆಂಬುದರ ಸೂಚಕ. ವಿಶ್ವರೂಪ ತಾಳುವ ಸಾಮರ್ಥ್ಯವು ನಪುಂಸಕರಿಗೆ ಸಾಧ್ಯವೆ? ಅಭಿಮಾನ, ಅಹಂಕಾರ ವ್ಯಕ್ತಿಯ ಗುಣ. ತಾನು, ತನ್ನ ವೈಶಿಷ್ಟ್ಯ ಎಂಬ ಅಭಿಮಾನ, ಅಹಂಕಾರವಿಲ್ಲದೆ ವ್ಯಕ್ತಿತ್ವವು ಉಳಿಯಲಾರದು. ಅಹಂಕಾರದ ಅಭಿಮಾನ ದೇವತೆ

---

* ಪುರುಷನು ಎಂದರೆ ಗಂಡಸು ಎಂಬ ಅರ್ಥವು ಧ್ವನಿತವಾಗುತ್ತದೆ. ಮನುಷ್ಯನು ಮಾನವನು. ಪುರುಷನು ಕೇವಲ ಗಂಡಸರೆಂದೇ ಬಗೆಯುವುದು ಅನ್ಯಾಯ. ಹೆಂಗಸರಿಗೆ ಅಪಮಾನ. ಏಕೆಂದರೆ ಮನುಷ್ಯನು ಎನ್ನುವುದರಿಂದ ಹೆಂಗಸರು ಮನುಷ್ಯರಲ್ಲವೆಂದರ್ಥವಾಗುವ ಹಾಗಿದೆ. ಪುರುಷನು ಎನ್ನುವುದರಿಂದ ಹೆಂಗಸರು ಪೌರುಷ ಎಂದರೆ ಸತ್ವವಿಹೀನರೆಂಬ ಕಲ್ಪನೆಯಾಗುವುದು. ಸ್ತ್ರೀಯರು ಯಾವಾಗಲೂ ಅನ್ನಮಯ ಕೋಶದಲ್ಲಿಯೇ ಇರತಕ್ಕ ಗೃಹಣಿಯರು. ಮನೋಮಯ ಕೋಶದ ವಿಕಾಸವು ಅವರಲ್ಲಿ ಆಗುವುದಿಲ್ಲ ಎಂಬ ಗ್ರಹಿಕೆಗಳಿಗೆ ಒಂದು ಕಾಲಕ್ಕೆ ಆಸ್ಪದವಿತ್ತು. ಆದರೆ, ಈಗ ಯುಗಪಲ್ಲಟವಾಗಿದೆ. ಈಗ ಧೀಮಂತರಾದ ಸತ್ವಶಾಲಿಗಳಾದ ಹೆಂಗೆಳೆಯರು ತಮ್ಮ ಪೌರುಷದಿಂದ ಖ್ಯಾತಿಯನ್ನು ಸಂಪಾದಿಸುತ್ತಿದ್ದಾರೆ. ಇಂತಹ ಕಾಲದಲ್ಲಿ ಮನುಷ್ಯನು, ಪುರುಷನು ಎಂಬ ಮಾತಿನ ರೀತಿ ಇನ್ನೂ ಬದಲಾಗದಿರುವುದು, ಭಾಷೆಯಲ್ಲಿ ಔಚಿತ್ಯಕ್ಕೆ ಗಮನಕೊಡದಿರುವ ಜನಗಳೆಂಬ ಆರೋಪಕ್ಕೆ ಆಸ್ಪದವನ್ನು ಕೊಡದೆ ಇರದು. ಭಾಷೆಯೊಳಗಿನ ಕೊರತೆಗಳನ್ನು ಕಡಿಮೆ ಮಾಡಿಕೊಳ್ಳುವ ಪ್ರಯತ್ನಗಳು ನಡೆಯದಿರುವುದು, ಆ ಭಾಷೆಯನ್ನಾಡುವ ಜನರಲ್ಲಿ ವಿಚಾರಿಗಳ ಅಭಾವವಿರುವುದರ ಕುರುಹು 'ನು' ಪುಲ್ಲಿಂಗ ವಾಚಕ; 'ಳು' ಸ್ತ್ರೀಲಿಂಗ ವಾಚಕ; ಹಾಗಾದರೆ ಇವೆರಡರ ನಡುವಣ 'ಲು' ವು. ಸ್ತ್ರೀ ಉಭಯಲಿಂಗ ಸೂಚಕವೆಂದು ಗ್ರಹಿಸಲು ಬಾಧಕವೇನು? ಶಿಕ್ಷಕ, ಅಧ್ಯಕ್ಷ ಮೊದಲಾದ ಕಡೆಗಳಲ್ಲಿ ಅಡಿಗಡಿಗೆ ಬರುವ ತೊಂದರೆಯೂ ಇಲ್ಲವಾಗುವುದು. ಪುರುಷಲು, ಅಧ್ಯಕ್ಷಲು, ಶಿಕ್ಷಕಲು ಎಂದರೆ ಗಂಡಸು ಅಥವಾ ಹೆಂಗಸು ಎಂಬ ಉಭಯಾರ್ಥವೂ ಅಲ್ಲಿ ಸೂಚಿತವಿದೆಯೆಂಬ ಸಂಕೇತವು ಮಾನ್ಯವಾದಲ್ಲಿ ಭಾಷೆಯಲ್ಲಿ ಅರ್ಥವಾಹಕ ಶಕ್ತಿಯನ್ನು ಸ್ವಲ್ಪ ಹೆಚ್ಚಿಸಿದಂತಾಗುವುದು. ಆದರೆ ತಮಗಾದ ಅನ್ಯಾಯವನ್ನು ವಿರೋಧಿಸಿ, ಭಾಷೆಯಲ್ಲಿ ತಕ್ಕ ಮಾರ್ಪಾಡುಗಳನ್ನು ಸೂಚಿಸಿ, ಅವನ್ನು ಬಳಕೆಯಲ್ಲಿ ತರುವ ಪೌರುಷವನ್ನು ವ್ಯಕ್ತಪಡಿಸತಕ್ಕ ಹಕ್ಕು ಹೆಣ್ಣು ಮಕ್ಕಳದು ತಾನೆ? ಆದರೂ ಹೀಗೆ ಮಾಡಬಹುದೆಂದು ಸೂಚಿಸಲು ನನ್ನೊಳಗಿನ ಪುರುಷ ಹೇಳುತ್ತಿದ್ದರೆ, ನನ್ನೊಳಗಿನ ವ್ಯಕ್ತಿ ಅವರ ಹಕ್ಕನ್ನು ಕಸಿದುಕೊಂಡ ಆಕ್ಷೇಪಣೆಗೆ ಗುರಿಯಾಗದಿರಲು ವಿಧಿಸುತ್ತಿದೆ.

'ಲಿಂಗ'. ವಿಶಿಷ್ಟಲಿಂಗಿ ಎಂಬ ಅರಿವಿನಲ್ಲಿ ಹುದುಗಿಕೊಂಡಿರುವವರೆಲ್ಲ ಎಂದೆಂದೂ ವ್ಯಕ್ತಿಗಳೇ. ಪುರುಷನು ಸೂಜ್ಞ; ನಿರಹಂಕಾರಿ. ಅಥವಾ ನಿರಹಂಕಾರಿಯಲ್ಲದವನು ಪುರುಷನಲ್ಲ. ಈ ಕಾರಣದಿಂದ ಪುರುಷನಿಗೆ ವೈಶಿಷ್ಟ್ಯವಿಲ್ಲ. ವಿಶಿಷ್ಟಲಿಂಗವಿಲ್ಲ ಬಹುರೂಪಿ; ಸರ್ವರೂಪಿ; ಅನಂತಸ್ವರೂಪಿ, ಅನ್ನಮಯ ದೇಹದ ವ್ಯಕ್ತಿಭೋಗಿ, ಇದರದೊ ಶರೀರತೃಪ್ತಿ. ಆದುದರಿಂದ ಅಧೋರೇತ. ಮನೋಮಯ ಶರೀರಿ ಪುರುಷ. ದೃಷ್ಟಿ ವಿನ್ಯಾಸದಿಂದಲೇ ತೃಪ್ತ. ಮನಸ್ತೃಪ್ತ. ಆದಕಾರಣ ಊರ್ಧ್ವರೇತ.

ಸಮಾಜದೊಡನೆ ಬರುವ ಸಂಬಂಧದಲ್ಲಿ ಅ-ಖಂಡವಾಗಿರುವ ವ್ಯಕ್ತಿಯು ನಾನಾ ಮುಖವಾಗಿ ಹೆಚ್ಚುವುದಕ್ಕೆ ಆರಂಭವಾಗುವುದು. ಹೆಚ್ಚುವ ಕ್ರಿಯೆಯನ್ನು ಒಂದು ನಿಟ್ಟಿನಿಂದ ನಿರೀಕ್ಷಿಸಿದರೆ ಹೆಚ್ಚಾಗು ಎಂದರೆ ಅಭಿವೃದ್ಧಿ ಹೊಂದು, ವಿಕಾಸವಾಗು, ವಿಸ್ತಾರವಾಗು ಎಂಬ ಅರ್ಥದ ಅನುಭವ ಬರುವುದು; ಇನ್ನೊಂದು ನಿಟ್ಟಿನಿಂದ ನೋಡಿದರೆ ಹೆಚ್ಚುವುದು ಹೆಚ್ಚಲ್ಪಡುತ್ತದೆ. ಹೆಚ್ಚಲ್ಪಡದೆ, ಖಂಡವಾಗದೆ ಅಖಂಡವಾಗಿಯೆ ಉಳಿಯುವ ವಸ್ತುವಿಗೆ ಹೆಚ್ಚಿತೆಂದು ಹೇಳುವುದು ತಪ್ಪು. ಆದುದರಿಂದ, ಹೆಚ್ಚು ಎಂಬುದಕ್ಕೆ ಮೊದಲಿನ ಹಿರಿದಾಗು ಎಂಬುದಕ್ಕೆ ತೀರ ವಿಪರೀತವಾದ ಕಿರಿದಾಗು ಎಂಬ ಅರ್ಥವಿದ್ದುದೂ ಕಂಡುಬರುವುದು! ಒಂದರಲ್ಲಿಯೇ ಪರಸ್ಪರ ವಿರುದ್ಧಾರ್ಥ! ಅದು ಹೆಚ್ಚಿತು, ಎಂದರೆ ವೃದ್ಧಿ ಹೊಂದಿತು ಎಂಬರ್ಥದೊಡನೆ ತುಂಡಾಯ್ತು ಎಂಬ ಭಾವವೂ ಅದರಲ್ಲುಂಟು. ವಾಸ್ತವತೆಯ, ಸತ್ಯಾಂಶದ ಎರಡೂ ಬದಿಗಳ, ಕಂನಾಡವರ ಅನುಭಾವವನ್ನು ಇಲ್ಲಿ ಮನಗಾಣಬಹುದು. ಸಮಾಜದೊಡನೆ ಬರುವ ಸಂಪರ್ಕದಲ್ಲಿ ವ್ಯಕ್ತಿತ್ವವು ಹೆಚ್ಚುವುದು. ಸ್ವಾರ್ಥವು ತುಂಡರಿಸಲ್ಪಟ್ಟು 'ಸ್ವ'ದ ಅರ್ಥವು ವಿಸ್ತಾರವಾಗುವುದು. ವ್ಯಕ್ತಿಯು ವಿಕಾಸಗೊಳ್ಳುವುದು. ತಾನೇತಾನಾಗಿ ಇದ್ದವ್ಯಕ್ತಿಯು ಗೆಳೆತನದ ಪ್ರೀತಿಯಿಂದ ಹಿಗ್ಗಿ ಹಲವರೊಡನೆ ಒಂದಾಗಲು ಕಲಿಯುವುದು. ಕೈಹಿಡಿದವರೊಡನೆ ತನ್ಮಯತೆಯ ಅನುಭವಗೊಳ್ಳುವುದು. ಸೇವಕ, ಒಡೆಯ, ನಾಗರಿಕ, ಧಾರ್ಮಿಕ, ಸುಧಾರಕ, ಸನಾತನಿ, ದೇಶಾಭಿಮಾನಿ, ಮಾನವ್ಯದ ಉಪಾಸಕ ಎಂಬಿವೇ ಮೊದಲಾದ ನಿಲುಮೆಗಳಲ್ಲಿ ವ್ಯಕ್ತಿಯು ವಿಕಾಸಗೊಂಡ ಹಾಗೆ ಪೌರುಷದ ಸಾಕ್ಷಾತ್ಕಾರವಾಗುವುದು. ಇಂತಹ ಪೌರುಷವನ್ನುಳ್ಳವರೇ ಪುರುಷರು. ಹುಟ್ಟಿನೊಡನೆ ನಾನು (ಇದ್ದೇನೆ) ಎಂಬ ಅರಿವು ಮಾತ್ರ ಬರುವುದು. ಸಮಾಜ ಸಂಪರ್ಕದಿಂದ ನಾನು ಎಂಬುದರ ವಿಸ್ತಾರವು ಎಷ್ಟು, ಅದರ ಅರ್ಥವೇನೆಂಬುದು ಪೌರುಷದಲ್ಲಿ ಅನುಭವಕ್ಕೆ ಬಂದು, ವ್ಯಕ್ತಿಯು ಪುರುಷವಾಗುವಲ್ಲಿ ಹಿಗ್ಗುಗೊಳ್ಳುವುದು.

ಮಾನವರಲ್ಲಿ ಕಾಣಿಸಿಕೊಳ್ಳುವ ಚೈತನ್ಯವು ಅನಂತಶಕ್ತಿಯ ಅಂಶ. ಅದು ವಿಕಾಸಗೊಳ್ಳಲು ಅರಿವಿನಿಂದೊಡಗೂಡಿದ ಸಾಮಾಜಿಕ ಸಂಬಂಧಗಳೇ ಮುಖ್ಯವಾದ ಸಾಧನ. ಈ ಸಾಧನವನ್ನು ಸರಿಯಾಗಿ ಉಪಯೋಗಿಸಿಕೊಳ್ಳದವರ ಅಂತಃಶಕ್ತಿಗಳು ಅವು ಮೂಲದಲ್ಲಿ ಎಷ್ಟೇ ಅಗಾಧವಾದ ಸಾಮರ್ಥ್ಯಯುಕ್ತವಾಗಿರ ಬಹುದಾದರೂ ಸುಪ್ತಸ್ಥಿತಿಯಲ್ಲಿಯೇ ಉಳಿಯುತ್ತವೆ. ಬರಿ ನಾನು (ಇದ್ದೇನೆ) ಎಂಬುದರ ಮಿಕ್ಕಿ ಆ ಅರಿವಿನ ಪ್ರಗತಿಯಾಗಲಾರದು. ಅಂತರ್ ಜ್ಞಾನ, ಕಣ್ಣು ಮುಚ್ಚಿ ಎಲ್ಲವನ್ನೂ ಅರಿವಶಕ್ತಿ ಮುಂತಾದವುಗಳನ್ನು ಮನೆ-ಮಠ-ಆಶ್ರಮಾದಿಗಳಲ್ಲಿ ಕಟ್ಟೇಕಾಂತದೊಳಗೆ ಒಬ್ಬರೇ ಕುಳಿತು ಪಡೆದುಕೊಳ್ಳಲು ಸಾಧ್ಯವೆಂದು ಕೆಲವರ ಗ್ರಹಿಕೆಯಾಗಿದೆ. ಸಾಮಾಜಿಕ ಸಂಪರ್ಕದಿಂದಲ್ಲದೆ ಈ ಶಕ್ತಿಗಳು ಬೆಳೆಯುವುದು ಅಸಂಭವ. ಈಗ ಎಷ್ಟೇ ಏಕಾಂತದಲ್ಲಿದ್ದರೂ ಪೂರ್ವಾಶ್ರಮದಲ್ಲಿ ಅವರು ಸಂಗ್ರಹಿಸಿದ, ಅಥವಾ ಪ್ರಾಪ್ತವಾದ (ಸಾಮಾಜಿಕ ಸಂಬಂಧದಿಂದ ಬಂದ)ಜ್ಞಾನವು ಅವರಲ್ಲಿ ಇರುತ್ತದೆ. ಏಕಾಂತದಲ್ಲಿದ್ದೂ ಗ್ರಂಥರೂಪದಲ್ಲಿ ಸಮಾಜದ (ಜ್ಞಾನ) ಲಾಭವನ್ನು ಹೊಂದುತ್ತಿರುತ್ತಾರೆ. ಶಿಷ್ಯಾದಿಗಳ ಸಂಬಂಧದಿಂದ ಅವರಲ್ಲಿರುವ ವಿಚಾರಶಕ್ತಿಗೆ ಚಾಲನೆ ದೊರೆಯುತ್ತಿರುತ್ತದೆ. ಇವಾವ ಅನುಕೂಲತೆಗಳನ್ನೂ ಪಡೆಯದೆ ಹುಟ್ಟಿನಿಂದ ಅಡವಿಯಲ್ಲಿಯೆ ಇದ್ದು ಬಿಟ್ಟರೆ ಭಾಷೆ (ಮಾತು) ಬರುವುದು ಕೂಡ ಸಾಧ್ಯವಿಲ್ಲ. ಮಾನವನ ಮನೋವಿಕಾಸಕ್ಕೆ ಸಮಾಜಿಕ ಸಂಪರ್ಕವೇ ಮುಖ್ಯ ಸಾಧನ.

ಪ್ರತಿಯೊಂದು ವ್ಯಕ್ತಿಯೂ ಒಂದೊಂದು 'ಯ+ಕ್ಷಃ'; ಎಂದರೆ ಅಜ್ಞಾತ ದಿವ್ಯಶಕ್ತಿ. ಆ ವ್ಯಕ್ತಿಯಲ್ಲಿರುವ 'ಅರ್ಥ'ದ ಬೆಲೆಯು ಅದರ ಸಾಮಾಜಿಕ ವ್ಯವಹಾರಗಳಲ್ಲಿ ಅನುಭವಕ್ಕೆ ಬರುವುದು. 'ಯ'ದ ಬೆಲೆಯು ಆ

ವ್ಯಕ್ತಿಯ ಪ್ರಯತ್ನ. 'ಕ್ಷ'ದ ಬೆಲೆಯು ಅದು ಬೆಳೆವ ಸಾಮಾಜಿಕ ಸನ್ನಿವೇಶ. ಆದುದರಿಂದ ಯ+ಕ್ಷ (ವ್ಯಕ್ತಿ)=ಸ್ವಪ್ರಯತ್ನ +ಸಾಮಾಜಿಕ ಸನ್ನಿವೇಶ. ಸ್ವಪ್ರಯತ್ನಗಳು ಎಂತಹವು, ಮತ್ತು ಎಂತಹ ಸಾಮಾಜಿಕ ಪರಿಸ್ಥಿತಿಯನ್ನು ಎದುರಿಸಬೇಕಾಯ್ತು (ಸಾಮಾಜಿಕ ಎಂಬುದರಲ್ಲಿ ಮನೆತನದ ಆವರಣವೂ ಒಳಗೊಳ್ಳುವುದು), ಎಂಬ ಸಂಗತಿಗಳು ತಿಳಿದರೆ ವ್ಯಕ್ತಿಯ ಬೆಲೆಯನ್ನು ನಿರ್ಧರಿಸಬಹುದಾಗಿದೆ. 'ಸೈಕೊ-ಡೈನಾಮಿಕ್ಸ್' ಎಂಬುದು ಈಗ ಈ ದಿಕ್ಕಿನಲ್ಲಿ ವಿವಿಧ ಪ್ರಯೋಗಗಳನ್ನು ನಡೆಸಿದೆ. ಪ್ರತಿಯೊಂದು ವ್ಯಕ್ತಿಯ ಸ್ವಪ್ರಯತ್ನದ ರೀತಿ ಮತ್ತು ಯೋಗ್ಯತೆಗಳಲ್ಲಿ ವ್ಯತ್ಯಾಸವಾಗುವುದು ಅನಿವಾರ್ಯ. ಅದರಂತೆ, ಅದು ಎದುರಿಸಬೇಕಾದ ವಾತಾವರಣ (ಆನುವಂಶಿಕ ಸಂಸ್ಕಾರ; ತಂದೆ, ತಾಯಿ, ಬಳಗದವರ ಸಾಂಸ್ಕೃತಿಕ ಮಟ್ಟ; ಹೊರಗಣ ಅದರ ಜಾತಿಮತದ ವಿಚಾರಗಳು; ದೇಶದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿ. ಜಾಗತಿಕ ಘಟನೆ ಮುಂ). ಒಂದೊಂದು ವ್ಯಕ್ತಿಗೂ ಬೇರೆ ಬೇರೆಯಾಗಿರುತ್ತದೆ. ಆದಕಾರಣ, ವ್ಯಕ್ತಿ ವ್ಯಕ್ತಿಗಳ ಬೆಲೆ ಭಿನ್ನ. ಎಲ್ಲರ ಬೆಲೆ ಸಮಾನ ಬಗೆಯುವುದು ಅಶಾಸ್ತ್ರೀಯ, ಅವ್ಯವಹಾರ್ಯ. ತಾನು ಪರಮೋನ್ನತಿಯನ್ನೈದಬೇಕೆಂದು ಕಲ್ಪಿಸಿಕೊಂಬ ಗುರಿಯೂ ಕೂಡ ಸ್ಥೂಲವಾಗಿ ಒಂದೇ ಎನಿಸಿದರೂ ಸೂಕ್ಷ್ಮದಲ್ಲಿ ವ್ಯಕ್ತಿವ್ಯಕ್ತಿಗೂ ಭಿನ್ನವಾಗುವುದು. ಆದಕಾರಣ, ಸಮತಾವಾದವು ಕೇವಲ ಆದರ್ಶವಲ್ಲದೆ ವ್ಯವಹಾರವಲ್ಲ. ಆದರ ಧ್ವನ್ಯಾರ್ಥಕ್ಕೆ ಮಹತ್ವವೇ ಹೊರತು, ಶಬ್ದಶಃ ಅರ್ಥಮಾಡಿದಲ್ಲಿ ವಾಸ್ತವತೆಯ ಬಂಡೆಗಲ್ಲ ಮೇಲೆ ಆ ವಿಚಾರದ ಹಡಗವು ಅಪ್ಪಳಿಸಿ ಕಷ್ಟಕ್ಕೀಡಾಗಬೇಕಾಗುವುದು ನಿಶ್ಚಿತ. ಮಾಯಾ ಅದ್ವೈತದ ತತ್ವಜ್ಞಾನವಿದ್ದಂತೆ 'ಭಾವಾದ್ವೈತಂ ಸದಾ ಕುರ್ಯಾತ್ ಕ್ರಿಯಾದ್ವೈತಂ ನ ಕದಾಚನ' ಎಂಬ ಈ ಮಾರ್ಗದವರ ಅನುಭವದ ಲಾಭವನ್ನು ರಾಜಕೀಯ ಸಾಮಾಜಿಕ ಅದ್ವೈತಿಗಳೂ ಪಡೆಯಬಹುದಾಗಿದೆ. ಮತ್ತೆ ಆ ಹಿಂದಿನ ತಪ್ಪೇ ಮುಂದೆ ಆಗಲಿಕ್ಕಿಲ್ಲ.

ದೇಹರಚನೆಯ ಭಿನ್ನತೆಯ ಮೂಲಕವಾಗಿ ಮತ್ತು ಅದು ಎದುರಿಸಬೇಕಾಗಿ ಬಂದ ಪರಿಸ್ಥಿತಿಯ ವ್ಯತ್ಯಾಸದ ಮೂಲಕವಾಗಿ ಚೈತನ್ಯಶಕ್ತಿಯು ಲೋಕದಲ್ಲಿ ಕಾಣಿಸಿಕೊಳ್ಳುವಾಗ ತರತಮ ಸ್ವರೂಪದಲ್ಲಿ ಅನುಭವಕ್ಕೆ ಬರುವುದು ಅನಿವಾರ್ಯವಾದರೂ ಇವೆಲ್ಲ ಚೈತನ್ಯಗಳ ಮೂಲವು ಒಂದೇ ಅನಂತಶಕ್ತಿಯಾಗಿದೆಯೆಂಬಲ್ಲಿ ಸಂದೇಹವಿಲ್ಲ 'ಭೂತಸ್ಯ ಜಾತಃ ಪತಿಃ ಏಕ ಆಸೀತ್' ಎಂಬುದನ್ನು ಆಧುನಿಕ ಮಾನಸಶಾಸ್ತ್ರೀಯ ಸಂಶೋಧನಗಳೂ ಇನ್ನೊಂದು ತೆರನಾಗಿ ಪುಷ್ಟೀಕರಿಸುತ್ತವೆ. ಕಳೆದ ಮಹಾಯುದ್ಧದ ಕಾಲಕ್ಕೆ ವೈಮಾನಿಕರು ಗಂಡಾಂತರ ಕಾಲದಲ್ಲಿ ಹೇಗೆ ವರ್ತಿಸಬಹುದೆಂಬ ವಿಚಾರದಲ್ಲಿ ಸಂಶೋಧನಮಾಡಲು ಇಂಗ್ಲೆಂಡಿನ ಮಾನಸಶಾಸ್ತ್ರಜ್ಞರ ಒಂದು ಸಮಿತಿಯನ್ನು ಅಲ್ಲಿಯ ಸರಕಾರವು ನೇಮಿಸಿತು. ಅವರು ಬೇರೆ ಬೇರೆ ಕುತ್ತುಗಳನ್ನು ಎದುರಿಸುವಾಗಿನ ಹಲವು ಪ್ರತ್ಯಕ್ಷ ಸಂಗತಿಗಳನ್ನು ನಿರೀಕ್ಷಿಸಿ ಒಂದು ವರದಿಯನ್ನು ಸಿದ್ಧಪಡಿಸಿದರು. ದಿನದ ಸಾಮಾನ್ಯ ವ್ಯವಹಾರಗಳಲ್ಲಿ ವ್ಯಕ್ತಿ ವ್ಯಕ್ತಿಗಳಲ್ಲಿ ತುಂಬ ವೈಶಿಷ್ಟ್ಯ, ಭಿನ್ನತೆಗಳು ಗೋಚರವಾಗುವುದು ನಿಜ. ಆದರೆ, ಸಂಕಟಕಾಲದಲ್ಲಿ ಮನುಷ್ಯನು ಅತಿಮಾನವನಾಗಿ ನಡೆದುಕೊಳ್ಳುತ್ತಾನೆ. ಆಗ ಆತನೊಳಗಿನ ಸುಪ್ತಚೇತವು ಜಾಗೃತವಾಗಿ ಆತನಲ್ಲಿ ಇಂತಹ ಗುಣಗಳು ಇರಬಹುದೆಂಬ ಕಲ್ಪನೆಯು ಕೂಡ ಎಂದೂ ಆಗದೆ ಇರುವಂತಹ ಅಸಾಮಾನ್ಯ ಗುಣಗಳು ಅನುಭವಕ್ಕೆ ಬರುತ್ತವೆ. ಪ್ರೀತಿ, ಸ್ವಾರ್ಥತ್ಯಾಗ, ಧೈರ್ಯ, ಪ್ರಸಂಗಾವಧಾನ, ಇಷ್ಟಸಿದ್ಧಿಗಾಗಿ ದೇಹವನ್ನು ತೂರಿಬಿಡುವ ದಾರ್ಢ್ಯ, ಇಂಥ ಬಗೆಬಗೆಯ ಅಗಾಧ, ಅದ್ಭುತ ಸಾಮರ್ಥ್ಯವು ಒಬ್ಬೊಬ್ಬರಲ್ಲೂ ಅಂತರಾಳದ ಆಳದಲ್ಲಿ ಎಲ್ಲೊ ಇದ್ದುದರ ಮನವರಿಕೆಯಾಗುತ್ತದೆಂಬುದನ್ನು ಸೋದಾಹರಣವಾಗಿ ಆ ವರದಿಯಲ್ಲಿ ಹೇಳಲಾಗಿದೆ. ಸಂಕಟದಲ್ಲಿದ್ದಾಗ ಸಬ್‌ಮರೀನ, ವಿಮಾನಗಳಲ್ಲಿರುವ ಕೆಲಸಗಾರರು ಪುಕ್ಕತನವರಿಯರು. ವ್ಯಕ್ತಿತ್ವವನ್ನು ಮರೆತು ಒಂದು ವ್ಯಕ್ತಿಯಂತೆ ವರ್ತಿಸುವರು! ಅಲ್ಡಸ್ ಹಕ್ಸಲೆಯು ಹಾರ್ಪರ ಜರ್ನಲ್ಲಿನಲ್ಲಿ ಪ್ರಕಟವಾದ ಈ ವರದಿಯನ್ನು 'ಸನಾತನ ತತ್ವವಿಚಾರ'ವೆಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಮಾಲೆಯೊಳಗಿನ ಹೂಗಳನ್ನೆಲ್ಲ ಒಂದೆಡೆಗೆ ಅಂದವಾಗಿ ಹಿಡಿದಿರುವ ಒಳಗಣ ದಾರವು ಹೇಗೆ ಒಂದೆಯೋ ಹಾಗೆ ಮಾನವ ಸಮಾಜವನ್ನು ಸುಸಂಬದ್ಧವಾಗಿ ಇರಿಸುವ ಆಂತರಿಕ ಚೈತನ್ಯದ ಸತ್‌ಪ್ರವೃತ್ತಿಯ ಸೂತ್ರವು ಎಲ್ಲರಲ್ಲೂ ಒಂದೇ ಆಗಿದೆ. ಸಮತ್ವವು ಆಂತರ್ಯದ ಅನುಭವ ಪಡೆವಲ್ಲೇ ಉಂಟು.

ವ್ಯಕ್ತಿಯ ತಿಳುವಳಿಕೆಯ ಮಟ್ಟವು, ಅದು ಸಮಾಜದಿಂದ ಪಡೆದುಕೊಂಡ ಜ್ಞಾನದ ಬಗೆಯನ್ನು ಅವಲಂಬಿಸಿದೆ. ಹುಟ್ಟಿನಿಂದ-ಅದೇಕೆ ಹುಟ್ಟಿನ ಮೊದಲಿನಿಂದಲೂ ವ್ಯಕ್ತಿಯ ಜೀವನದ ಮೇಲೆ ಸಂಸ್ಕಾರಗಳು ಆಗಲಾರಂಭಿಸುವುವು. ತಾಯ್ತಂದೆ, ಬಳಗದವರು, ಗುರುಹಿರಿಯರು, ಶತ್ರುಗಳು ಮಿತ್ರರು ಎಲ್ಲರಿಂದಲೂ ಅನೇಕ ಸಂಗತಿಗಳನ್ನು ವ್ಯಕ್ತಿಯು ತಿಳಿದೊ, ತಿಳಿಯದೊ ಚಿಕ್ಕಂದಿನಿಂದಲೇ ಎತ್ತಿಕೊಳ್ಳುತ್ತಿರುತ್ತದೆ. ಜಾನಪದಗಳು, ಕಥೆಗಳು, ಗಾದೆಗಳು, ರೂಢಿ-ಸಂಪ್ರದಾಯಗಳು, ಶಾಸ್ತ್ರ, ಸಾಹಿತ್ಯ, ಕಲೆ ಮೊದಲಾದ ರೂಪದಿಂದ ಸಮಾಜವು ಅನಂತಕಾಲದಿಂದ, ಕೂಡಿಟ್ಟ ನಿಕ್ಷೇಪದ ಲಾಭವು ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಲ್ಲಿ ವ್ಯಕ್ತಿಗೆ ವಿಶಿಷ್ಟರೀತಿಯಲ್ಲಿ ದೊರೆಯುತ್ತವೆ. ಇದರ ಜೊತೆಗೆ ಜೀವನದಲ್ಲಿ ಅನುದಿನದ ಅನುಭವಗಳು ಅರಿವಿನ ರೂಪತಾಳಿ ವ್ಯಕ್ತಿಯ ಚೈತನ್ಯದಲ್ಲಿ ಇಂಬುಗೊಳ್ಳುತ್ತದೆ. ಇವೆಲ್ಲವುಗಳ ಸಮ್ಯಕ್ ಪರಿಣಾಮವು ಒಂದು ವ್ಯಕ್ತಿಯ ವಿಚಾರ; ಸದಸದ್ವಿವೇಕ. ತಿಳಿವು-ಎಲ್ಲ. ತನ್ನ ಜೀವನದೃಷ್ಟಿಯು ಈ ವಿಶಿಷ್ಟ ರೀತಿಯಲ್ಲಿಯೇ ಏಕೆ ಮಾರ್ಪಟ್ಟಿತೆಂಬುದನ್ನು ಮೇಲಣ ಒಂದೊಂದು ಸಂಗತಿಯನ್ನೂ ಬಿಡಿ ಬಿಡಿಸಿ ಕಾಲಕಾಲಕ್ಕೆ ಯಾವ ಯಾವ ಮಾತಿನ ಪರಿಣಾಮವು ಎಷ್ಟೆಷ್ಟು ಆಗಿದೆಯೆಂಬುದನ್ನು ತಾಳ್ಮೆಯುಳ್ಳವರು ನಿಧಾನಿಸಿಕೊಳ್ಳಬಹುದು. ಇಂತಹ ವಿಮರ್ಶೆಯಿಂದ ತಮ್ಮ ಹೆಚ್ಚಿನ ವಿಕಾಸದ ಮುಂದಿನ ದಾರಿಯನ್ನು ಕಂಡುಕೊಳ್ಳಬಹುದು. ಆತ್ಮ ನಿರೀಕ್ಷಣೆಗೆ ಸ್ವಲ್ಪವೂ ಬಿಡುವೇ ಇಲ್ಲದಷ್ಟು ವೇಗದಿಂದ ಜೀವನ ಪಥದಲ್ಲಿ ಓಡುತ್ತಿರುವವರಿಗೆ ಎಡಹಿ ಬೀಳುವ ವರೆಗೆ ಆತ್ಮ ನಿರೀಕ್ಷಣೆಯ ಆವಶ್ಯಕತೆಯೆನಿಸದು.

ಅದೇನೆ ಇರಲಿ; ಇಂತು ಸಮ್ಯಕ್‌ಪರಿಣಾಮಗೊಂಡ ಜ್ಞಾನವೆ ವ್ಯಕ್ತಿಯ ಅಂತರಂಗದ ಅರಿವು. ವ್ಯಕ್ತಿಯು ಯಾವುದೊಂದು ಕೆಲಸಕ್ಕೆ ತೊಡಗುವಾಗ ತನ್ನೊಳಗಿನ ಅರಿವಿನ ಹಳೆಯ ಅನುಭವ-ವಿಚಾರಗಳ ಸಲಹೆ ಕೇಳುವನು; ಹಿಂದಿನ ಅರಿವು ಇಂದು ಮಾರ್ಗದರ್ಶಕ. ವಿವೇಕ, ಪ್ರಜ್ಞೆ, ಸತ್‌ಪ್ರವೃತ್ತಿ ಎಂದು ಇದಕ್ಕೆ ವಿವಿಧವಾದ ಹೆಸರುಗಳಿವೆ. ಬೇರೊಂದು ಸ್ವತಂತ್ರ ಸದಸದ್ವಿವೇಕವೆಂಬ ದೇವತೆ ಅಥವಾ ಅಂತರ್ಯಾಮಿ (ಶ್ರೀಹರಿ), ಒಂದು ಈಶಕ್ತಿಯುಂಟೆಂದು ಹೇಳುವುದು ಕಾವ್ಯಮಯ ಆಲಂಕಾರಿಕ ರೀತಿಯೆ ಹೊರತು ವಾಸ್ತವ ಸತ್ಯವಲ್ಲ. ದೇವತೆಯೇ ಆಗಿದ್ದರೆ ಎಲ್ಲ ಕಾಲದಲ್ಲಿ, ಎಲ್ಲ ದೇಶಗಳ ಎಲ್ಲ ಸಮಾಜಗಳಲ್ಲಿ ಮಾನವರಿಗೆ ಆ ದೇವತೆಯಿಂದ ಒಂದೇ ಬಗೆಯಾದ ಆದೇಶಗಳು, ಸಂದೇಶ-ಸೂಚನೆಗಳು ದೊರೆಯಬೇಕಾಗಿತ್ತು. ಆದರೆ, ಲೋಕದಲ್ಲಿ ಇದಕ್ಕೆ ವಿಪರೀತವಾದ ಅನುಭವವಿದೆ. ತ್ಯಾಗ, ಸತ್ಯ, ಪ್ರೀತಿ, ಎಂಬೀ ಮೊದಲಾದ ಗುಣಗಳು- ಸತ್‌ಪ್ರವೃತ್ತಿಯೇ ಚೈತನ್ಯದ ಮೂಲ ಸ್ವಭಾವವೆಂಬುದು ನಿಜವಿದ್ದರೂ ಆಯಾ ದೇಶ-ಕಾಲದಲ್ಲಿರುವ ಸಮಾಜದ ವಿಚಾರ ಅಭಿರುಚಿಗಳ ಸಾಂಸ್ಕೃತಿಕ ಮಟ್ಟವನ್ನು ಮೀರಿ ಅದು ಎಂದೂ ವ್ಯಕ್ತವಾಗುವುದಿಲ್ಲ. ಮಹಾವ್ಯಕ್ತಿಗಳಲ್ಲಿ ಇಪ್ಪತ್ತು ಮೂವತ್ತು ವರುಷಗಳ ಮುಂದಡಿಯವರು ಕೆಲರು ಹೊರಡುವರು; ಅಷ್ಟೇ. ಅದೂ ಕಾಲಪ್ರವಾಹದಲ್ಲಿ ಅನಿವಾರ್ಯವಾಗಿರುವ ರೀತಿಯಲ್ಲಿಯೆ ಸುಮಾರಾಗಿ ೨+೨ =೪ ಇಂತಹ ಸಾರ್ವಕಾಲಿಕ ಮಾತು ಹೇಳುವುದು ಬೇರೆ. ಆದರೆ, ವಾಸ್ತವ ವ್ಯವಹಾರದ ಸಂಗತಿಗಳಲ್ಲಿ ಐವತ್ತು ವರುಷದವರೆಗಿನವೇ ಮಸಮಸಕಾಗಿ ಸ್ಥೂಲವಾಗಿ ಕಾಣುವವೆಂಬುದು ಅನುಭವವಿರುವಾಗ ಅದಕ್ಕೂ ಮುಂದಿನ ಮಾತು ಏತಕ್ಕೆ? ಅಂತರ್ಯಾಮಿ ಅಥವಾ ಒಳಗಿನ ಸಹಜ ಸಂಯಮ ಶಕ್ತಿ ಮತ್ತು ದೃಷ್ಟಿಯು ಚೈತನ್ಯದಲ್ಲಿ ಹುಟ್ಟಿನೊಡನೆಯೆ ಬಂದಿರುವುದಾದರೂ ಅದೊಂದು ಸ್ವತಂತ್ರ ದೇವತೆಯೆಂದು ಗ್ರಹಿಸುವುದು ಶಾಸ್ತ್ರೀಯ ವಿಚಾರವಲ್ಲ, ಭಾವನಾತ್ಮಕ ಉಕ್ತಿ.

ಆದಕಾರಣ, ವಿವೇಕಶಕ್ತಿಯು ದೇವತೆಯಲ್ಲ; ಅದು ಪ್ರತಿಯೊಂದು ವ್ಯಕ್ತಿಗತ ನಿರ್ಣಯಸಾಮರ್ಥ್ಯ. ವ್ಯಕ್ತಿಯು ಬೆಳೆದ ಸನ್ನಿವೇಶ, ಪಡೆದುಕೊಂಡ ಜ್ಞಾನದ ಯೋಗ್ಯತೆಯಂತೆ ಆಯಾವ್ಯಕ್ತಿಯ ನಿರ್ಣಯಗಳ ಮಟ್ಟವು ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಸಮಾಜದ ಮುಖಾಂತರವಾಗಿ ಪಡೆದುಕೊಂಡ ಅನುಭವವೆ ಜ್ಞಾನ. ಇದೇ ಚೈತನ್ಯದ ಭಾಗವಾಗಿ ಅರಿವು ಎನಿಸುವುದು. ಆದುದರಿಂದ, ಅರಿವಿನ, ರೂಪತಾಳಿ ಸಮಾಜವೇ ಸೂಕ್ಷ್ಮ ರೂಪದಲ್ಲಿ ವ್ಯಕ್ತಿಗಳ ಅಂತರಂಗದಲ್ಲಿ ಪ್ರವೇಶ ಪಡೆಯುತ್ತದೆಂದು ಹೇಳಿದರೆ ತಪ್ಪಲ್ಲ. ಪ್ರತಿಯೊಂದು ವ್ಯವಹಾರದಲ್ಲಿಯೂ ಕೇಳಿದಾಗ ಇದು ನಮಗೆ ದಾರಿ ತೋರುವುದು; ಬೇಕು-ಬೇಡ, ಒಳಿತು-ಕೆಡಕುಗಳನ್ನು

ಸೂಚಿಸುವುದು. ನಾವು ಬೆಳೆದು ಬಂದ ಸಮಾಜದ ಮಟ್ಟ ಹಾಗೂ ಪಡೆದುಕೊಂಡ ವಿಶ್ವದ ವಿಚಾರ-ಅನುಭವಗಳ ಬೇರೀಜಿನ ಸರಾಸರಿಗಿಂತ ಹಿರಿದು ಈ ಅರಿವು ಇರಲಾರದು. ಈ ಕಾರಣದಿಂದ ಸಮಾಜದ ಮಟ್ಟವು ಬೆಳೆಯದೆ ವ್ಯಕ್ತಿಗಳ ವಿಶೇಷ ವಿಕಾಸವಾಗಲಾರದು; ಆದರೂ ವ್ಯಕ್ತಿಗಳು, ವ್ಯಕ್ತಿಶಃ ಪ್ರಯತ್ನದಿಂದ ತಾವಿರುವ ಸಮಾಜದ ಹೊರಗೂ ತಮ್ಮ ದೃಷ್ಟಿಯನ್ನು ಚೆಲ್ಲಿ, ಪ್ರವಾಸ ಅನುಭವ-ಮನನ-ನಿಧಿಧ್ಯಾಸಗಳಿಂದ ತಮ್ಮ ವಿಚಾರದ ಕ್ಷೇತ್ರಗಳನ್ನು ಹಿಗ್ಗಿಸಿಕೊಳ್ಳಬಲ್ಲರು, ಮಹಾಪುರುಷರೂ ಜ್ಞಾನಿಗಳೂ ಈ ವರ್ಗಕ್ಕೆ ಸೇರುತ್ತಾರೆ. ಇಂತಹರ ಪ್ರಯತ್ನಗಳಿಂದ ಸಮಾಜದ ಅರಿವಿನ ಉದ್ದಗಲಳತೆಗಳು ಎಷ್ಟೋ ವಿಸ್ತಾರವಾಗುತ್ತವೆ. ಇಂತು ಸಮಾಜದಿಂದ ವ್ಯಕ್ತಿ, ವ್ಯಕ್ತಿಗಳಿಂದ ಸಮಾಜ, ಪರಸ್ಪರ ಸಹಾಯ ಪೋಷಣೆಗಳನ್ನು ಹೊಂದಿ ಲಾಭ ಪಡೆಯುವುದುಂಟು. 'ಪರಸ್ಪರಂ ಭಾವಯಂತಃ ಶ್ರೇಯಃ ಪರಂ'. ಆದುದರಿಂದ ಸಮಾಜವನ್ನು ತೆಗಳುವ ಅಥವಾ ಬಿಟ್ಟೋಡುವ ವ್ಯಕ್ತಿಯು ಆತ್ಮ ಘಾತಕಿ. ವ್ಯಕ್ತಿಗೆ ಬೆಲೆಕೊಡದೆ ಶೂನ್ಯದಂತೆ ನಡೆಸಿಕೊಂಬ ಸಮಾಜ ತನ್ನ ಪ್ರಾಣ ತಾನೇ ಹರಣಮಾಡುತ್ತಿರುವ ಮಹಾಪಾತಕಿ.

ಪ್ರಜ್ಞೆ ಅಥವಾ ಅರಿವು ನಿಚ್ಚಳವಾಗಿ ತಲೆದೋರಿದಂತೆ ಅಂತರಾಳದಲ್ಲಿ ಎರಡರ ಅನುಭವವು ಬರುವುದು. ಈ ಎರಡರ ಅನುಭವವೇ ಬಾರದಿದ್ದವನು ಎಗ್ಗ-ಏಕ. ಇವರು ಏಕಾಂಗಿಗಳು. ಎತ್ತ ಒಲಿಯುವರೊ ಅತ್ತಲೇ. ಇನ್ನೊಂದು ಬದಿಯ ತೂಕಹಿಡಿವ ವಿಚಾರವು ಇವರಲ್ಲಿ ಉದಯವಾಗಿರುವುದಿಲ್ಲ ಅಥವಾ ಅದು ಇನ್ನೂ ಹಸುಕು ಇರುವಾಗಲೆ ಚಿವುಟಿ ಒಳಬೆಳಕಿಗೆ ಎರವಾಗುತ್ತಾರೆ. ಒಳಗಣ್ಣು ಕಳೆದುಕೊಂಡ ಇವರು ಒಕ್ಕಣ್ಣೆಗಳಾಗಿ ವಸ್ತುಗಳ ಇನ್ನೊಂದು ಮಗ್ಗಲು ನೋಡುವುದಕ್ಕೆ ಅಸಮರ್ಥರಾಗುತ್ತಾರೆ. ಆದರೆ ಒಂದೇ ಮಗ್ಗಲು ಇರುವ ವಸ್ತುವೇ ಇಲ್ಲ. ಲೋಕದಲ್ಲಿ ಆದಕಾರಣ ಒಂದಕ್ಕಿಂತ ಹೆಚ್ಚು ಮಗ್ಗಲುಗಳನ್ನು ನೋಡಲು ಆರದ ವ್ಯಕ್ತಿ ಏಕಾಂಗಿ; ಒಕ್ಕಣ್ಣೆ, ಇಂತಹರು ಜೀವವಿದ್ದರೂ ನಿರ್ಜೀವರು. ಏಕೆಂದರೆ ಇವರ ಕ್ರಿಯೆಗಳು ಜ್ಞಾನರೂಪದಲ್ಲಿ ಪರಿಣಮಿಸುವುದಿಲ್ಲ. ಸಮಾಜದಿಂದ ಅದರ ಅನುಭವ ನಿಧಿಯನ್ನು (ಶಾಸ್ತ್ರ, ಸಾಹಿತ್ಯ, ಕಲೆ ಮುಂ) ಪಡೆದುಕೊಂಡು ಚೇತನದಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಯಂತ್ರವತ್ ಕ್ರಿಯೆಗಳನ್ನು ಮಾಡುವವರ ಬಗೆಯು ಹೀಗೆ ಬರಿದು. ಜೀವನ ಸೂತ್ರಗಳನ್ನು ಹೊರಗಿನ ಯಾವುದೊ ವ್ಯಕ್ತಿಗೆ ಒಪ್ಪಿಸಿ, ಅವರ ಕೈಗೊಂಬೆಗಳಾಗಿ ವರ್ತಿಸುವವರ, ಅಥವಾ ಪೆಚ್ಚುಗಳಾಗಿಯೆ ಜನ್ಮತಾಳಿದ ಮಬ್ಬುಗಳ ಬದುಕಿನ ರೀತಿಯಿದು.

ಒಳಗೂ ಹೊರಗೂ ಒಂದೇ ತೆರನಾಗಿ ಜೀವಿಸುವುದು, ಎರಡಿಲ್ಲದ ಬಾಳಿನವರಾಗಿ ಬದುಕು ಮಾಡುವುದು ಜೀವನದ ಪರಮ ಸಾಧ್ಯ. ನಿಜ, ಹೊರಗಿನದಕ್ಕೆ ಒಳಗಿನದು (ಎಂದರೆ ಜ್ಞಾನ) ಸರಿಹೊಂದಿರಬೇಕೆ? ಅಥವಾ ಒಳಗಿನದಕ್ಕೆ ಹೊರಗಿನದು ಹೊಂದಿಕೆಯಾಗಿರಬೇಕೆ? ಇವೆರಡರ ತೂಕಹಿಡಿವಲ್ಲಿ ವ್ಯಕ್ತಿಯ ಯೋಗ್ಯತೆ, ವ್ಯಕ್ತಿತ್ವವು ವ್ಯಕ್ತವಾಗುತ್ತದೆ. ದಿನಾಲು ಹೊರಗಿನ ವಾತಾವರಣವು ಬದಲಾಗುತ್ತಲೆ ಇರುತ್ತದೆ. ಬದಲಾದ ವಾತಾವರಣಕ್ಕೆ ಕೆಲಬಾರಿ ಒಳಗಿನ ಬಾಳು ಒಗ್ಗುವುದಿಲ್ಲ. ಹೊರಗಣ ವಾತಾವರಣಕ್ಕಿಂತ ಒಳಗಣ ಅರಿವು ಹೆಚ್ಚು ವೇಗದಿಂದ ಪಲ್ಲಟಗೊಳ್ಳುವ ಸ್ವಭಾವವುಳ್ಳದ್ದು. ಕ್ಷಣಕ್ಷಣಕ್ಕೂ ಬರುವ ಅನುಭವ, ಜ್ಞಾನಕ್ಕನುಸರಿಸಿ ಒಳಗಣ ಠೀವಿ ಮಾರ್ಪಡುವುದರಿಂದ ಹೊರಗಣ ಪರಿಸ್ಥಿತಿಯು ಅದಕ್ಕೆ ಒಪ್ಪಿಗೆಯಾಗುವುದಿಲ್ಲ. ಹೊರಗಿನ ಬಾಳಿಗೆ ಬೆಲೆಕೊಡುವವರು ವ್ಯವಹಾರಿಗಳಾಗುತ್ತಾರೆ. ಒಳಗಿನ ಇರವಿಗೆ ಮಹತ್ವವನ್ನೀವವರು ಆದರ್ಶವಾದಿಗಳೆನಿಸುತ್ತಾರೆ. 'ವ್ಯಕ್ತಿ' ವ್ಯವಹಾರಿ; 'ಪುರುಷ' ಆದರ್ಶವಾದಿ. ಒಳಹೊರಗಣ ತಿಕ್ಕಾಟವಿಲ್ಲದೆ ನಿಜವಾದ ಜೀವನವೆ ಅಸಾಧ್ಯ. ಆದುದರಿಂದ ಈ ಗಸಣಿಗೆ ಬೇಸತ್ತು, ಇವುಗಳಲ್ಲಿ ಯಾವುದಾದರೂ ಒಂದರ ಪರಿಲು (ಸಂಬಂಧ) ಹರಿದುಕೊಂಡು ಕೋಟಲೆಯೊಳಗಿಂದ ಪಾರಾಗಬಯಸುವವರೇ ಬಹಳ. ಇದು 'ಅರ್ಧಾಂಗ' ಜೀವನ. ಹದವನ್ನು ಅರಿತು ಎರಡರ ಸಮತೂಕವನ್ನು ಸಾಧಿಸುವ ಯೋಗವೇ ಲೋಕಕ್ಕೆ ಉಪಕಾರಿ, ಸಮಾಜಕ್ಕೆ ಹಿತಕಾರಿ.

ಸಾಕ್ಷಿಯ ಅರಿವಿಲ್ಲದ ಕೃತಿಯಲ್ಲಿ ಸೊಗಸು ಇಲ್ಲ. ಸಾಕ್ಷಿಯ ಅರಿವಿನಿಂದ ಮಾಡುವ ಕೃತಿಯು ಅಧರ್ಮವಲ್ಲ. ಏಕೆಂದರೆ: ಸಮಾಜದ ತಿಳಿವಳಿಕೆಯ ಮಟ್ಟಕ್ಕೆ ಬಾರದ ಅಥವಾ ಸಮಾಜದವರ ಸತ್ಯದ ಕಲ್ಪನೆಗೆ ವಿಪರೀತವಾದ ಕೃತಿಗೆ ವಿಪರೀತವಾಗಿ ಅಂತಃಸಾಕ್ಷಿಯು ತನ್ನ ಒಪ್ಪಿಗೆಯನ್ನು ಎಂದೂ ಕೊಡಲಾರದು. ಏಕೆಂದರೆ ಸಾಕ್ಷಿ-ಅರಿವು

ಜ್ಞಾನರೂಪ-ತಾಳಿದ ಸಮಾಜದ ಸಾರರೂಪ. ಸಾಕ್ಷಿಯಿಲ್ಲದೆ ಜರುಗುವ ಕೃತಿ, ಪಶುಗಳ ಮಟ್ಟದ್ದು. ಅದು ಮಾನವ ಕೃತಿಯಲ್ಲ. ವಿಚಾರವಂತರ ಕೃತಿಯಂತೂ ಮೊದಲೇ ಅಲ್ಲ. ಆದಕಾರಣ ಅಂತಃಸಾಕ್ಷಿಯಾದ ಅರಿವನ್ನು ಎರಡರ ತೊಂದರೆಯೆ ಬೇಡವೆಂದು ಕೊಂದುಕೊಳ್ಳುವುದು ಅಥವಾ ಮೂರ್ಚ್ಛಿತವಾಗುವ ಸ್ಥಿತಿಯಲ್ಲಿಡುವುದು ಅನ್ಯಾಯ. ಇದೇ ಅನೀತಿ. ಸಾಕ್ಷಿಯಿಲ್ಲದ ವ್ಯವಹಾರ ಅನೀತಿ. Secrecy is sin ಎಂದು ಗಾಂಧೀಜಿಯ ಮಹಾವಾಕ್ಯವಿದೆ. ಸಾಕ್ಷಿಯಾದ ಅರಿವು ಸಮಾಜದ ಸೂಕ್ಷ್ಮರೂಪವೆಂದು ಮೇಲೆ ವಿವರಿಸಿದ್ದಾಗಿದೆ. ಅಂತಃಸಾಕ್ಷಿಯ ಮನ್ನಣೆ ಪಡೆದ ಕೃತಿಯೆ ಪವಿತ್ರ. ಅನುಭವ ಹಾಗೂ ಸಮಾಜದ ಜ್ಞಾನನಿಕ್ಷೇಪ. ಇವೆರಡನ್ನು ಅರಗಿಸಿಕೊಂಡ ತಿಳಿವೆ ಅರಿವು. ಇದು ತೋರುವ ದಾರಿಯಲ್ಲಿ ನಡೆಯಲು ತುಂಬ ಎದೆಗಾರಿಕೆ ಬೇಕು. ತ್ಯಾಗಬೇಕು.

'ಕ್ಷುರಸ್ಯಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಃ ತತ್ ಕವಯೋ ವದಂತಿ'.

ಖಡ್ಗಧಾರೆಯ ಮೇಲಣ ಕಷ್ಟಕರವಾದ ದಾರಿ. ಈ ಕಷ್ಟವೇ ಬೇಡವೆಂದು ಅರಿವನ್ನು ಕೊಂದುಕೊಂಡು ಯಾವನಾದರೊಬ್ಬ ನೇತಾರನೊ, ಗುರುವೊ, ಕೊನೆಗೆ ಫಲಜ್ಯೋತಿಷವೊ, ಶಕುನವೊ ಒಂದಕ್ಕೆ ಶರಣುಹೋಗಿ ದೈನ್ಯದಿಂದ ಬಾಳಲು ನರಪ್ರಾಣಿಯು ಒಪ್ಪಿಕೊಳ್ಳುವುದು.

ಮಾನವರ ಬಾಳಿನ ಬಗೆಯನ್ನು ಮುಂಡಕೋಪನಿಷತ್ತಿನಲ್ಲಿ ಒಂದು ಸೊಗಸಾದ ರೂಪಕದಿಂದ ವಿವರಿಸಿದ್ದುಂಟು. ಒಂದು ಮರದಲ್ಲಿ ಎರಡು ಗೆಡೆವಕ್ಕಿಗಳು ಕುಳಿತಿವೆ. ಅವುಗಳಲ್ಲಿ ಒಂದು ಹಣ್ಣು ಸವಿಯುತ್ತದೆ. ಇನ್ನೊಂದು ತಾನು ತಿನ್ನದೆ (ತಿನ್ನುವ ಹಕ್ಕಿಯನ್ನು ಬರಿ) ನೋಡುತ್ತಲಿದೆ (೩-೧). ತಿನ್ನದಿರುವ ಹಕ್ಕಿಯೆ ಸಾಕ್ಷಿ, ನೋಡುವ ಕೆಲಸವು ಮಾತ್ರ ಇದರದು. ಮೇಲು ನೋಟದವರ ಕಡೆಗೆ ಒಡೆತನವಷ್ಟೆ? ಫಲಭೋಗದಲ್ಲಿ ತೊಡಗಿದ ಹಕ್ಕಿಗೆ ಈ ವೈಷಮ್ಯ! ತಾನು ಒಡೆಯನಲ್ಲ; ತನ್ನನ್ನು ಒಬ್ಬರು ನೋಡುತ್ತಲಿದ್ದಾರೆ! ಅವರ ಕಣ್ಣಳತೆಯಲ್ಲಿದ್ದು ತಾನು ಎಲ್ಲವನ್ನೂ ಮಾಡಬೇಕೆ? ಅಯ್ಯೋ ಇದೇನು ಕಷ್ಟ! ಪರಾವಲಂಬನ! (ಅನೀಶಯಾ ಶೋಚತಿ) ಎಂದು ಮಿಡುಕುವುದಾಗಿ ಮುಂಡಕದ ಋಷಿಯು ಮಾಡಿದ ಮನೋವಿಶ್ಲೇಷಣವು ತುಂಬ ಸಮರ್ಪಕವಾಗಿದೆ. ಸಾಕ್ಷಿಯಾದ ಅರಿವು ತಿನ್ನದೇ ಸುಮ್ಮನಿರುವುದಾದರೂ ಒಳಿತು ಕೆಡುಕೆಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸದೆ ಮೌನವಾಗಿರುವುದಿಲ್ಲ. ಅದರಿಂದ ತಿನ್ನುವ ಹಕ್ಕಿಗೆ ಫಲಭೋಗದಲ್ಲಿ ತುಂಬ ಆತಂಕವಾಗುವುದು. ಅದನ್ನು ತಿನ್ನಬೇಡ; ಇದನ್ನು ಇಂತಹದನ್ನೇ ತಿನ್ನು; ಹಾಗೆ ಬೇಡ; ಈ ಬಗೆಯಾಗಿಯೆ ತಿನ್ನು; ಎಂದು ಮೊದಲಾಗಿ ವಿಧಿಸುವುದು ಈ ತೆರನಾದ ಸಂಯಮ, ನಿಯಮಗಳಿಗೆ ಒಳಗಾಗಿ ಇರಲು-ಜ್ಞಾನಕ್ಕೆ ಒಳಗಾಗಿ ನಡೆಯಲು ದೇಹಬುದ್ಧಿಯು ಗೊಣಗುವುದು; ಒಪ್ಪದಾಗುವುದು. ವ್ಯಕ್ತಿಯ ಸತ್ವಪರೀಕ್ಷೆಯು ಇಲ್ಲಿಯೆ.

ವ್ಯಕ್ತಿಯು ಪುರುಷಾಕಾರವನ್ನು ಹೊಂದಲು ಆ ತೆರನಾಗಿ ವಿಕಾಸಗೊಳ್ಳುವಾಗಿನ ಮಹಾವಿಘ್ನವು ಇಲ್ಲಿಯೆ ತಲೆದೋರುತ್ತದೆ. ಮಾನವನಿಗೆ, ತಾನು ತಿನ್ನುತ್ತಿದ್ದೇನೆ; ಆನಂದವನ್ನು ಅನುಭವಿಸುತ್ತಲಿದ್ದೇನೆ, ಎಂಬ ನೆನಹಿನ-ಅರಿವಿನ ಸೊಗಸಂತೂ ಬೇಕು. ಅದಿಲ್ಲದೆ ಸುಮ್ಮನೆ ಆದ ಉಪಭೋಗದಲ್ಲಿ ಅಷ್ಟು ಆನಂದವಿಲ್ಲ. ಅಲಂಕಾರಗಳನ್ನು ಧರಿಸಿ ಕೋಣೆಯಲ್ಲಿಯೆ ಇರಲು ಮನಸ್ಸು ಒಪ್ಪದು. ತಾನು ತಿಂದುದನ್ನು, ತಾನು ಅಲಂಕೃತನಾದುದನ್ನು, ತಾನು ವೈಭವದಿಂದ ಮೆರೆಯುತ್ತಲಿದ್ದುದನ್ನು ಯಾರೂ ನೋಡುವವರೇ ಇದ್ದಿಲ್ಲವಾದರೆ ಜೀವವು ಆನಂದದ ಬದಲು ದುಃಖಿಸುವುದು! 'ಸಾಕ್ಷಿ'ಯ ಆವಶ್ಯಕತೆಯಂತೂ ಇದೆ. ಆದರೆ, ಇವರಿಗೆ ಮೂಕ ಸಾಕ್ಷಿಬೇಕು! ಅದೆಂತು ಸಾಧ್ಯ? ನೋಡಬಂದ ಜನ ಆಡಿಕೊಳ್ಳತಕ್ಕುದೇ' ಅದು ಅದರ ಸ್ವಭಾವ. ಅದು ಆಡಿಕೊಂಬುದು ನಿಜವಾದ ವಿವೇಕಿಗೆ ಲಾಭಕರವೇ. ಏಕೆಂದರೆ ಅವರ ವಿಮರ್ಶೆ, ಟೀಕೆ, ಉದ್ಗಾರಗಳಿಂದ ವ್ಯಕ್ತಿಯ ವಿಚಾರಗಳಿಗೆ ಪ್ರಚೋದನೆ ದೊರೆಯುತ್ತದೆ. ಸದಭಿರುಚಿಯು ಜಾಗ್ರತವಾಗುತ್ತದೆ. ಸಾಕ್ಷಿ ಮೂಕವಿದ್ದಲ್ಲಿ ಸುಧಾರಣೆಗೆ ಇಂಬಿಲ್ಲ. ಸುಧಾರಣೆಯ ಆಸೆಯೇ ಇಲ್ಲ. ವ್ಯಕ್ತಿಗೆ ಜೀವನಾನಂದವನ್ನು ಉಪಭೋಗಿಸಲು ಅಂತಃಸಾಕ್ಷಿಯಂತೂ ಬೇಕೆನಿಸುತ್ತದೆ. ಆದರೆ, ಅದರ ವಿಮರ್ಶೆ, ಟೀಕೆಗಳ ಚುಚ್ಚುವಿಕೆ ಮಾತ್ರಬೇಡ! ಸಲ್ಲದ ಹಣ್ಣಿಗೆ ಬಾಯಿ ಹಾಕಿ ತಿನ್ನಬಯಸಿದಾಗ ಅಥವಾ ತಿನ್ನುವಾಗ ಅಂತಃಸಾಕ್ಷಿಯ ಕೂರಲಗಿನ ನುಡಿಗಳ ವೇದನೆಗೆ ಜೀವವು ಕಸಿವಿಸಿಗೊಳ್ಳುವ ಸಂದರ್ಭದಲ್ಲಿ ಈ ಅರಿವು, ಜ್ಞಾನವು ನಂಜಿನಂತಾದುದರ ಅನುಭವವು ಬರುವುದು.

Ignorance is bliss; ಅಜ್ಞಾನವೇ ಅಮೃತ; ತಿಳಿವು ಏತಕ್ಕೆ ಬಂತು? ಎಂದು ಮಿಡುಕುವ ಹೊತ್ತು ವ್ಯಕ್ತಿಗೆ ಬರುವುದು. ಇದು ಪ್ರಾಮಾಣಿಕರಾದ ಮೊದ್ದರ ರೀತಿಯಾಯಿತು. ಚುರುಕು ಬುದ್ಧಿಯವರು ಮಂಗತತ್ವಜ್ಞಾನದ ಸಹಾಯವನ್ನು ಪಡೆದು ತಮ್ಮ ಕೃತಿಗಳ ಮಂಡನಮಾಡಿಕೊಳ್ಳುವರು.ಈ ಚಟವನ್ನು ಬಿಟ್ಟುಕೊಡುವ ವರೆಗೂ ಇಂಥ ವ್ಯಕ್ತಿಗಳ ಪ್ರಗತಿಯ ಆಶೆಯಿಲ್ಲ.

ಸಮಾಜದೊಡನೆ ಬರುವ ಸಂಬಂಧದಲ್ಲಿ ವ್ಯಕ್ತಿಯು ನಾನಾಮುಖವಾಗಿ ಬೆಳೆಯುವಾಗ ಮುನ್ನೆಚ್ಚರಿಕೆ ಯಿಲ್ಲದಿದ್ದಲ್ಲಿ ಇನ್ನೊಂದು ತೊಂದರೆಯು ತಲೆದೋರುತ್ತದೆ. ವಿಕಾಸಗೊಳ್ಳುತ್ತಿರುವ ನಾನಾ ಮುಖದ ಜೀವನವನ್ನು ಆಂತರಿಕವಾಗಿ ಒಂದು ಶ್ರುತಿಗೆ ಸರಿಹೊಂದಿಸುವ ಸತ್ ಪ್ರವೃತ್ತಿಯ ಬಂಧನವು ಇಲ್ಲವಾದರೆ ಅವುಗಳಲ್ಲಿ ಅಸಂಬದ್ಧತೆಯು ಕಾಣಿಸಿಕೊಂಬುದು ಅನಿವಾರ್ಯ; ಪೂರ್ವವಯಸ್ಸಿನಲ್ಲಿ ಮನೆಯವರಿಂದಾದ ಮದುವೆ ಒಂದು; ಪ್ರೌಢ ವಯಸ್ಸಿನಲ್ಲಿ ಧನ-ಸ್ಥಾನ-ಮಾನಗಳನ್ನು ಕಂಡು ಮೆಚ್ಚಿ ಒಲಿದು ಹತ್ತಿರ ಸುಳಿಯುತ್ತಿರುವವರು ಬೇರೆ. ಪ್ರಾಮಾಣಿಕತೆಯಿದ್ದರೆ ಇವೆರಡೂ ಮುಖಗಳಲ್ಲಿ ಕಾಣಿಸಿಕೊಂಬ ಸಂಯಮಯುಕ್ತ ಉಲ್ಲಾಸವೇ ಬೇರೆ. ಆದರೆ, ಮನೆಯ ಸಂಬಂಧವೇ ಬೇರೆ, ಹೊರಗಿನ ಸಂಬಂಧವೇ ಬೇರೆ. ದೈಹಿಕ ಆರ್ತತೆಯ ತೃಪ್ತಿಯಾದರೂ ಅಲ್ಲಿ, ಮನದ ಹಸಿವು ತಣಿಯಲಿಲ್ಲ. ಬೌದ್ಧಿಕ ಜೀವನದಲ್ಲಿ ಸಹಭಾಗಿಯಾಗಿ ನಲಿವವರೊಡಗೂಡುವ ಸಂತಸವು ಈ ಜೀವಕ್ಕೆ ಬೇಡವೇ? ಎಂಬೀ ತೆರನಾದ ಭೃಂಗವೃತ್ತಿಯ ಮಾತಿನ ಮೋಡಿಯಿಂದ ಆತ್ಮವಂಚನೆಗೆ, ಆರಂಭವಾಗುವುದು. ಭೃಂಗವಿಲಾಸಕ್ಕೆ ಸವಿಗಲಿತ ಇಂತಹರ ನಾಲಗೆಯ ಚಾಪಲ್ಯದ ಚೌಚೌ (ಸವಿ)-ಅಂತಹ ವಾಕ್‌ಝುರಿ-ಗಾರುಡಿವಿದ್ಯೆ, ಇದರ ಒನಪು ಒಯ್ಯಾರದ ಆಕರ್ಷಣವೇ ಬೇರೆ. ಇವರು ಎಷ್ಟು ಮುಖದಲ್ಲಿ ಬೆಳೆದಿರುವರೋ ಅಷ್ಟು ಮುಖಗಳೇ ಬೇರೆ. ಸನಾತನ ಧರ್ಮಪ್ರವೃತ್ತಕ ಸಭೆಯ ಅಧ್ಯಕ್ಷ, ಹರಿಜನೋದ್ಧಾರ ಮಂಡಲದ ಕಾರ್ಯದರ್ಶಿ, ಸರ್ವೋದಯ ಸಮಾಜದ ಕೋಶಾಧ್ಯಕ್ಷ x x x ಮತದ ವಿದ್ಯಾರ್ಥಿ ನಿಲಯದ ಉಪಾಧ್ಯಕ್ಷ, ಜಾಗತಿಕ ಯುದ್ಧವಿರೋಧಿ ಮಂಡಲದ ಸದಸ್ಯ, ಪ್ರಾಂತಿಕ ಸೈನಿಕ ಸಂಗ್ರಹ ಕೇಂದ್ರದ ಮೇಲ್ವಿಚಾರಕ ಇತ್ಯಾದಿ ಇತ್ಯಾದಿ. ಒಂದಕ್ಕೆ ಇನ್ನೊಂದರ ಸಂಬಂಧವಿರಬೇಕೆಂಬುದರ ಬಂಧನವು ಇವರಿಗೆ ಮಾನ್ಯವಿಲ್ಲ. ಅನಿರ್ಬಂಧ ಸ್ವಾತಂತ್ರ್ಯವೇ ಇವರ ಜೀವನದ ಗುರಿ! ಒಂದು ಬಗೆಯ ಬುದ್ಧಿಭ್ರಮೆ ಅಥವಾ ಬೌದ್ಧಿಕ ವ್ಯಭಿಚಾರದಿಂದ ಅಂತಃಸಾಕ್ಷಿಗೆ ಮಂಕುಹಿಡಿಸದೆ ಇವರ ಇಂಥ ಚೆಲ್ಲಾಟಗಳು ನಡೆಯಲಾರವು. (ಸಾಕ್ಷಿ) ಪುರುಷನು ತನ್ನ ಕೈಗೊಂಬೆಯಾಗಿರಬೇಕು; ತನ್ನ ಇಚ್ಛೆಗೆ ಪುಷ್ಟೀಕರಿಸುತ್ತ ಅನುಸರಿಸಿಕೊಂಡಿರಬೇಕೆಂಬ ವ್ಯಾಮೋಹದ 'ಕ್ಲಿಯೋಪಾತ್ರಾ', ಈ ವ್ಯಕ್ತಿಗಳು!

ಬುದ್ಧಿಯು ಸ್ವಾರ್ಥದ ತೊತ್ತು ಆದಲ್ಲಿ, ಮುಂದಿನ ಅನಾಹುತಗಳಿಗೆಲ್ಲ ಅದುವೆ ಸಂಚಕಾರ. ಅಣುಬಾಂಬುಗಳ ನಿರ್ಮಿತಿಯೇ ಇದಕ್ಕೆ ನಿದರ್ಶನ. ಈ ಕಾರಣದಿಂದ ಬೌದ್ಧಿಕ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ ಅತ್ಯಗತ್ಯ. ಯಾವುದೊಂದು ಪಕ್ಷ ಪಂಗಡಕ್ಕೆ, ಮತಧರ್ಮಕ್ಕೆ ಮಾರಿಕೊಂಡ ಅಥವಾ ಮಾರುವೋದ ಬುದ್ಧಿಯು ತನ್ನ ಸ್ವಾತಂತ್ರ್ಯಕ್ಕೆ ಎರವಾಗುತ್ತದೆ. ಸತ್ಯದ ಹೊರತು ಬೇರಾವುದಕ್ಕೂ ಶರಣೆನ್ನಲಾರೆ ಎಂಬ ಪ್ರತಿಜ್ಞೆಯಿಲ್ಲದ ಬುದ್ಧಿ ತನ್ನ ತೇಜಸ್ಸನ್ನು ಕಳೆದುಕೊಳ್ಳತ್ತದೆ. ಅನುಕೂಲ ಸಂಗತಿಗಳನ್ನಷ್ಟೇ ನೋಡುವ ಚಟವು ವ್ಯಕ್ತಿಯ ದೃಷ್ಟಿಯನ್ನು ಸಂಕೋಚಗೊಳಿಸುತ್ತದೆ. ಚೈತನ್ಯಶಕ್ತಿಯ ಎದುರು ಯುವುದೊಂದು ಘಟನೆಯ ಪೂರ್ವೋತ್ತರಗಳನ್ನೆಲ್ಲ ಹೇಡಿತನದಿಂದ ಮರೆಮಾಜದೆ ಬಿಚ್ಚಿಡುವ ಧೈರ್ಯವಿದ್ದವರ ಬುದ್ಧಿಯು ಪ್ರಗಲ್ಭವಾಗುತ್ತ ಹೋಗುವುದು. ಇಂತಹರಿಗೆ ಸ್ವತಂತ್ರ ವಿಚಾರ, ತತ್ವಗಳ ದರ್ಶನವಾಗಿ ಮುಂದಿನ ಹಾದಿಯು ನಿಶ್ಚಿತವಾಗಿ ಕಾಣುವುದು. ಈ ದಾರಿಯಲ್ಲಿ ಅರಿಯದಲೆ ಆದ ತಪ್ಪು ತಪ್ಪಲ್ಲ. ಸತ್ಯಜ್ಞಾನಕ್ಕಾಗಿ ಮಾಡುತ್ತಿರುವ ಪ್ರಯೋಗವದು. ಅದರಿಂದ ಬುದ್ದಿಗಲಿತು ತಿದ್ದಿಕೊಂಡು ಮುನ್ನಡೆಪವರಿಗೆ, ಆದ ತಪ್ಪೂ ಪ್ರಗತಿಗೆ ಸಾಧಕವಾಗುವುದು. ಆದಕಾರಣ ಅಜ್ಞಾನದಿಂದ ಆದ ಪ್ರಾಮಾಣಿಕ ತಪ್ಪುತಪ್ಪಲ್ಲ. ತಪ್ಪೆಂದು ತಿಳಿದಿದ್ದೂ ಮತ್ತೆ ಅದರಲ್ಲಿಯೇ ಬಿದ್ದುಕೊಂಡಿರುವುದು ತಪ್ಪು. ಅಧರ್ಮ. ಇದೇ ಅನೀತಿ.

'ಹಣ್ಣು ತಿನ್ನುವ ಹಕ್ಕಿಯು, ತನ್ನ ಈಶಶಕ್ತಿಗೆ ಎಂದರೆ ಪ್ರಭುತ್ವಕ್ಕೆ ಎರವಾಗಬೇಕಾದುದಕ್ಕೆ ಮಿಡುಕುತ್ತಿದೆ;' ಎಂದು ಮುಂಡಕೋಪನಿಷತ್ತಿನ ಋಷಿಯು ಹೇಳಿದ ಮಾತು ಬಹಳೇ ಮಾರ್ಮಿಕವಾಗಿದೆ. ಫಲಭೋಗಿಯು ಪ್ರಭುವಲ್ಲ. ಅರಿವು ಎಂದರೆ ಜ್ಞಾನದಲ್ಲಿ ಪ್ರಭುಶಕ್ತಿಯಿದೆ. ಆದುದರಿಂದಲೇ ಸಾಕ್ಷಿಗೆ ಪ್ರಭು, ಈಶ, ಅಧ್ಯಕ್ಷ ಎಂದು ಉಪನಿಷತ್ತು, ಗೀತೆಯಲ್ಲಿ ವರ್ಣಿಸಿದ್ದುಂಟು. ಭೋಗೇಚ್ಛೆಯು ವಿಚಾರ ಸ್ವಾತಂತ್ರ್ಯಕ್ಕೆ ಮಾರಕ. ವಿಚಾರ ಸ್ವಾತಂತ್ರ್ಯವಿಲ್ಲದವರು ಬದ್ಧರು. ಬದ್ಧರು ಪ್ರಭುಗಳಲ್ಲ. ಅವರು ಆಸಕ್ತಿಯ ಮೂಲಕವಾಗಿ ಸಿಕ್ಕುಬಿದ್ದಿರುತ್ತಾರೆ. ಈ ಕಾರಣದಿಂದ ಜ್ಞಾನಶಕ್ತಿಯು ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಆಸಕ್ತಿರಹಿತವಾಗಿರಬೇಕು. ತನ್ನ ಗುಣದೋಷಗಳೆರಡನ್ನೂ ಅರಿವ ತಾಟಸ್ಥ್ಯವು ತಿಳುವಳಿಕೆಯುಳ್ಳವರ ಲಕ್ಷಣ. ಪಕ್ಷಪಾತ, ಪಕ್ಷಾಭಿಮಾನಿಗಳಿಗೆ ತಮ್ಮ ಗುಣ ಇನ್ನೊಬ್ಬರ ಅವಗುಣ ಮಾತ್ರ ಕಾಣುವುವು. ಕುಂದುಕೊರತೆಯಿಲ್ಲದ ವಸ್ತುವಿಲ್ಲ. ಆದುದರಿಂದ, ತನ್ನಲ್ಲಿ, ತನ್ನ ಪಕ್ಷದಲ್ಲಿ ಗುಣದೊಡನೆ ದೋಷಗಳು, ಕೊರತೆಗಳು ಯಾವುವು ಉಂಟೆಂಬುದನ್ನು ಅರಿತು ಹೇಳುವ ಸಮತ್ವಬುದ್ಧಿಯನ್ನು ಪಡೆದುಕೊಳ್ಳದ ವ್ಯಕ್ತಿ, ಸಮಾಜದ ಸಮತೂಕವನ್ನುಳಿಸಿಕೊಳ್ಳಲಾರದು. ಪಕ್ಷಾಭಿಮಾನದ ಆವೇಶದಿಂದ ಒಕ್ಕಣ್ಣಿಗಳಾದ ವ್ಯಕ್ತಿಗಳೇ ಬಹಳ.

ದೇಹವು ಜಡ. ಬುದ್ಧಿಯು ತರಲ. ಬುದ್ಧಿಯೊಡನೆ ಓಡಲು ದೇಹಕ್ಕೆ ಸಾಧ್ಯವೆ? ಅನೇಕ ಬಾರಿ ಅನಿವಾರ್ಯದ ಹಲವು ಕಾರಣಗಳಿಗಾಗಿ ವ್ಯಕ್ತಿಯು ಕೆಲವೊಂದು ಪರಿಸ್ಥಿತಿಯಲ್ಲಿ ಸಿಕ್ಕುಬೀಳುತ್ತದೆ. ಸ್ವಲ್ಪ ಕಾಲಾವಧಿಯ ನಂತರ ಭ್ರಮನಿರಸನವಾಗಿ, ತಾನು ಬಂದು ಸೇರಿಕೊಂಡಿರುವ ಕೆಲಸ, ಪಕ್ಷ ಅಥವಾ ಮತ ಇಲ್ಲವೆ ಇಂತಹ ಇನ್ನೂ ಬೇರೆ ಸಂಗತಿಯಲ್ಲಿ ತೊಡಗಿಕೊಂಡಾಗ ಅಲ್ಲಿಂದ ಬಿಡುಗಡೆಹೊಂದಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ವ್ಯಕ್ತಿಯು ಏನು ಮಾಡುವುದಕ್ಕಾದೀತು? ಭೀಷ್ಮಾಚಾರ್ಯರ ಚರಿತ್ರೆಯು ಇಲ್ಲಿ ಉತ್ತಮವಾದ ಮಾದರಿ. ಕೌರವ ಪಕ್ಷದಲ್ಲಿ ಇರಬೇಕಾದುದು ಕ್ರಮಪ್ರಾಪ್ತವಾದ ಅನಿವಾರ್ಯ ಕರ್ಮವಾಗಿತ್ತು. ಆದರೂ ಅವರು ತಮ್ಮ ಬೌದ್ಧಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಿಲ್ಲ. ಕ್ರಮಪ್ರಾಪ್ತವಾದ ಕರ್ತವ್ಯದಿಂದಲೂ ಹಿಂದೆಗೆಯಲಿಲ್ಲ. ಆ ಕರ್ತವ್ಯದಲ್ಲಿ ಪ್ರಾಯಶ್ಚಿತ್ತವೆಂದು ಮರಣವನ್ನೂ ಶಾಂತವಾಗಿ ಬರಮಾಡಿಕೊಂಡರು. ಅನ್ನದ ಋಣಕ್ಕಾಗಿ ಬುದ್ಧಿಯನ್ನು ಮಾರಿಕೊಂಡು, ಅದರ ಸ್ವಾತಂತ್ರ್ಯವನ್ನು ಕಳೆದುಕೊಂಡು, ಅಸತ್ಯವನ್ನು ಸತ್ಯವೆಂದು ಪ್ರತಿಪಾದಿಸುವ ಮಂಕುತನದಿಂದ ಆ ವ್ಯಕ್ತಿಯು ತನ್ನ ಹಾನಿಯನ್ನಲ್ಲದೆ ಸಮಾಜಕ್ಕೂ ಕೇಡನ್ನು ತರುವುದು. ಪ್ರಾಮಾಣಿಕವಾಗಿ ಅಂತರಾಳದಲ್ಲಿ ಎನಿಸಿದ್ದನ್ನು ಅವಶ್ಯವಿದ್ದಲ್ಲಿ ಆಡುವ ನೈತಿಕ ಧೈರ್ಯವನ್ನು ಕಳಕೊಂಡ ವ್ಯಕ್ತಿಯು, ಸಮಾಜದಲ್ಲಿ ಸುಳ್ಳು ವಾತಾವರಣವು ಹಬ್ಬಿಕೊಂಡಿರಲು ನೆರವಾಗುವ ಪಾಪವನ್ನು ಮಾಡುತ್ತಿರುತ್ತದೆ.

ಪ್ರಾಮಾಣಿಕವಾಗಿ ನಡೆಯುವ ಸಂಪೂರ್ಣ ಪ್ರಯತ್ನವಿದ್ದಾಗಲೂ ತತ್ತ್ವನಿಷ್ಠ ವ್ಯಕ್ತಿಯ ಜೀವನದಲ್ಲಿ ಅನಿವಾರ್ಯವಾದ ಒಂದು ವಿರೋಧಾಭಾಸವನ್ನು ಎದುರಿಸುವ ಹೊತ್ತು ಬಾರದೆ ಹೋಗದು. ಜಗತ್ತು ಬರಿ ಸರಳ ಪಾತಳಿಯಲ್ಲ; ವೃತ್ತಾಕಾರ ಗೋಲಕ. ಜೀವನಕ್ರಮದಲ್ಲೂ ದಾರಿ, ಜನರು ಎಣಿಸಿದಷ್ಟು ನೇರವಾಗಿಲ್ಲ. ವರ್ತುಲಾಕಾರದಲ್ಲಿ ಸುತ್ತಿ ಸುತ್ತಿಕೊಂಡು ಹೊರಟಂತಿದೆ. ಇದರಿಂದ ವಕ್ರವಲಯದಲ್ಲಿ ಪರಸ್ಪರ ಎರಡು ವಿಪರೀತ ದಿಕ್ಕಿನ ತುದಿಗಳು ಒಂದಕ್ಕೊಂದು ಸಮೀಪಿಸುತ್ತವೆ. ವ್ಯಕ್ತಿಗಳಿಗೆ ಸಂಕಟಕ್ಕೀಡುಮಾಡುತ್ತವೆ! ಅಹಿಂಸೆಯೇ ಜೀವನದ ಪರಮಸಾಧನೆ ಎಂದರು ಗಾಂಧಿಜೀ. ಅಹಿಂಸೆಯ ವಿಪರೀತ ಬಿಂದು ಯುದ್ಧ. ಕಾಶ್ಮೀರ ಯುದ್ಧಚಕ್ರ ಬಂತು. ಶಸ್ತ್ರದಿಂದ ಎದುರಿಸಲು ತಮ್ಮ ಶಿಷ್ಯರಿಗೆ ಅನುಮತಿಸಬೇಕಾಯಿತು. ಬೇಡಿದ್ದನ್ನೀವ ದಾನಿ ಎಂದು ಬಿರುದು ಹೊತ್ತ ಕರ್ಣ, ಹರಿಶ್ಚಂದ್ರರ ಕಥೆ ಸುಪ್ರಸಿದ್ಧವಿದೆ. ಕ್ಷತ್ರಕರ್ಮದಿಂದ ನಿವೃತ್ತನಾಗಿ ಬ್ರಹ್ಮಋಷಿಯಾದ ವಿಶ್ವಾಮಿತ್ರನಿಗೆ ರಾಮನನ್ನು ಕರೆದೊಯ್ದು ರಾಕ್ಷಸರನ್ನು ಸಂಹರಿಸಬೇಕಾಯ್ತು. ತತ್ತ್ವಜಿಜ್ಞಾಸುಗಳಾಗಿ ಸತ್ಯಸಾಕ್ಷಾತ್ಕಾರಕ್ಕಾಗಿ ಆಶ್ರಮ ಸ್ವೀಕರಿಸಿ ಏಕಾಂತದಲ್ಲಿ ನಿಂತವರ ಸೇವೆಗೆ ಹೆಣ್ಣು ಧಾವಿಸುವುದು, ವಿರಕ್ತ ಸಂಸಾರದ ಸೂತ್ರಧಾರೆಯಾಗುವುದು. ಇಂಗ್ಲೆಂಡಿನ ಸಂಪ್ರದಾಯವಾದೀ ಚರ್ಚಿಲ್ ಪ್ರಭೃತಿಗಳಿಗೆ ರಸಿಯಾ ಎಂದರೆ ಆಗದು. ಆ ಚರ್ಚಿಲ್ಲನಿಗೇ ಸ್ಟಾಲಿನ್ನನೊಡನೆ ಕೂಡಿ ಕೆಲಸಮಾಡುವ ಹೊತ್ತು ಬಂತು. ಸಾಮ್ಯವಾದದ ಧ್ವಜವನ್ನೆತ್ತಿರುವ ಕೆಂಪುಬಾವುಟದ

ರಶಿಯಾ ಸುತ್ತಲಿನ ಸಣ್ಣಪುಟ್ಟ ರಾಷ್ಟ್ರಗಳನ್ನು ಬಾಹುಪಾಶದಲ್ಲಿರಿಸಿಕೊಂಡು ಸಾಮ್ರಾಜ್ಯವಾದಿಗಳಂತೆ ವರ್ತಿಸುವ ಪ್ರಸಂಗ ಬಂದಿದೆ. ಸಂಹಾರಕ ಶಸ್ತ್ರಾಸ್ತ್ರಗಳ ಸಂಶೋಧಕರಿಗೆ ಒಬ್ಬರಿಗೆ ೧೫,೦೦೦, ಇನ್ನೊಬ್ಬರಿಗೆ ೨೦,೦೦೦. ಇಂತಹ ಹಲವಾರು ಸುವರ್ಣನಾಣ್ಯಗಳ ಪಾರಿತೋಷಿಕದ ಆಮಿಷಗಳನ್ನು ಮುಂದೊಡ್ಡಬೇಕಾಗಿದೆ! ಆಮಿಷದಲ್ಲಿಯೂ ಸಮತೆಯಿಲ್ಲ. ಸಮತೆಯ ಸ್ಥಾಪನೆಗೆ ವೈಷಮ್ಯ ದ್ವೇಷಾಸೂಯೆಗಳ ಪ್ರಚಾರ! ವರ್ಗಕಲಹಕ್ಕೆ ಉತ್ತೇಜನ! ಇಂತಿದು ಪ್ರತಿಜ್ಞೆಯ ತೀರ ವಿರುದ್ಧವಾಗಿ ನಡೆವ ಪರಿಸ್ಥಿತಿಯನ್ನು ಜೀವನದಲ್ಲಿ ಒಂದು ಬಾರಿಯಾದರೂ ಅನುಭವಿಸಬೇಕಾಗದ ವ್ಯಕ್ತಿಯೆ ದೊರೆಯಲಿಕ್ಕಿಲ್ಲ. ಮೂಗಿನ ನೇರಕ್ಕೆ ನಡೆದರೆ ಕರ್ಣ-ಹರಿಶ್ಚಂದ್ರರ ಗತಿ ನಿಶ್ಚಿತ. ಏಕಮಾರ್ಗಿ ಏಗ್ಗರ ರೀತಿಯೆನಿಸುವುದು. ವೈಯಕ್ತಿಕ ಸ್ವಾರ್ಥಕ್ಕಾಗಿ ಅಲ್ಲ. ದೇವರಾಣೆ ಮಾಡಿ ಕೇವಲ ಸಾಮಾಜಿಕ ಕಲ್ಯಾಣಕ್ಕಾಗಿಯೇ ಸ್ವಲ್ಪಕಾಲ ಅನಿವಾರ್ಯವಾದ ವಿರೋಧಾಭಾಸದ ಈ ವಿಪರೀತ ಗತಿಯಲ್ಲಿ ಕ್ರಮಿಸುವ ಹೊತ್ತು ಬರುವುದು. ಈ ಸುಳಿಯೊಳಗಿಂದ ಹಾಯ್ದು ಪಾರಾಗಿ ಮತ್ತೆ ಸರಲ ಮಾರ್ಗಕ್ಕೆ ಬಂದು ಸೇರುವ ಯೋಗವು ಬಹಳ ಗಹನವೂ ಸೂಕ್ಷ್ಮವೂ ಆಗಿದೆ. ಜೀವನ ಸಂಗೀತದೊಳಗಿನ ಪರಮ ಕಷ್ಟದ ಕೆಲಸವಿದು. ವಿರುದ್ಧ ಸ್ವರಗಳ ಛಾಯೆಗಾಣಿಸಿ ಮೂಲತತ್ವಾನುಸಂಧಾನಕ್ಕೆ ಚ್ಯುತಿಯಿಲ್ಲದೆ ಹಾಡು ಮುಗಿಸುವುದು ಅಸಾಮಾನ್ಯ ಕೃತಿ. ಮಹಾಭಾರತದಲ್ಲಿ ಇಂತಹ ಸೂಕ್ಷ್ಮಧರ್ಮದ ಅನೇಕ ಪ್ರಸಂಗಗಳನ್ನು ಬಹಳ ಕುಶಲತೆಯಿಂದ ಚಿತ್ರಿಸಿದ್ದುಂಟು. ಸ್ವಾರ್ಥೀ ಲುಚ್ಚರು, ಕಾರಸ್ಥಾನಿಗಳೆಂಬ ಅಪವಾದಕ್ಕೆ ಆಸ್ಪದ ದೊರೆಯದಂತೆ ತನ್ನ ನಡೆವಳಿಯನ್ನು ಮೇಲುಮಟ್ಟದಲ್ಲಿ ಪವಿತ್ರವಾಗಿ ಉಳಿಸಿಕೊಂಬ ದಾರ್ಢ್ಯವಿಲ್ಲದವರು ಕಪಟನಾಟಕಿಗಳಾಗಿ ಸಮಾಜಕಂಟಕರೆನಿಸುವರು. ಪಶ್ಚಾತ್ತಾಪ ಪೂರ್ವಕವಾಗಿ ಅನುಸರಿಸಬೇಕಾದ ಅನಿವಾರ್ಯವಾದ ಗೌಣಮಾರ್ಗ. ಆದರೆ, ಅನಿವಾರ್ಯವೆಂದು ನ್ಯಾಯವಲ್ಲ. ಬಾಳಿನಲ್ಲಿ ಈ ಬಗೆಯ ಕಾರಸ್ಥಾನಗಳೇ; ಜೀವನದ ಯೋಜನೆಯ ಮಹತ್ವದ ಭಾಗವಾಗಿರುವ ವ್ಯಕ್ತಿಯು ಸಮಾಜದಲ್ಲಿ ಪ್ಲೇಗಿನ ಜಂತುವಿದ್ದಂತೆ; ಬಹಿಷ್ಕಾರಾರ್ಹ.

ಕುರುಡತನಕ್ಕಾಗಿಯೆ ದಿನಾಲು ನಾಲ್ಕು ದುಡ್ಡು ಸಿಕ್ಕುತ್ತಿರುವವರಿಗೆ ದೇವರು ಪ್ರತ್ಯಕ್ಷನಾಗಿ ನಿಮಗೆ ಪೂರ್ಣ ದೃಷ್ಟಿಯನ್ನು ಕೊಡುತ್ತೇನೆಂದು ವರವನ್ನು ನೀಡಹೋದರೆ, ಕುರುಡರಿಗೆ ಸಂತೋಷವಾದಿತೇ? ದುಃಖವಾದೀತೇ? ಕಣ್ಣು ಕಾಣಹತ್ತಿದರೆ ಈಗಿನಂತೆ ಕರುಣೆಯಿಂದ ಜನ ದುಡ್ಡು ಕೊಟ್ಟೀತೇ! ಆದುದರಿಂದ, ಅವರು 'ಪರಮಾತ್ಮನೇ, ಕಣ್ಣು ಕಾಣದಿರುವ ವರವನ್ನೇ ನೀಡು;' ಎಂದು ಪ್ರಾರ್ಥಿಸಿಕೊಳ್ಳುವುದೇ ಸಹಜವಷ್ಟೆ? ಒಂದು ಬಗೆಯಾದ ವ್ಯಕ್ತಿತ್ವವನ್ನು ಪಡೆದುಕೊಂಡವರು, ಒಂದು ಪಕ್ಷ, ಮತ, ಅಥವಾ ಪಂಥದಲ್ಲಿ ಇಂಬನ್ನು ಹುಡುಕಿಕೊಂಡವರು ತಮ್ಮ ಇರುವಿನೊಳಗಿನ ಕುಂದುಕೊರತೆಗಳನ್ನು ಕಾಣುವ ಸಾಮರ್ಥ್ಯವನ್ನು ಹೇಗೆ ಮತ್ತು ಏಕೆ ಕಳೆದುಕೊಳ್ಳುವರೆಂಬುದು ಮೇಲಣ ದೃಷ್ಟಾಂತದಿಂದ ಬಹಳ ಚೆನ್ನಾಗಿ ತಿಳಿಯುವಂತಿದೆ. ಮಾನವನಿಗೆ ಜ್ಞಾನವು ಪ್ರತ್ಯಕ್ಷವಾಗಲು ಸಿದ್ಧವಿದೆ. ಅರಿವು ಅನಂತವಾಗಿ ವಿಕಾಸಗೊಳ್ಳಲು ಆಸ್ಪದವಿದೆ. ಆದರೆ ಅದೆಲ್ಲವನ್ನು ಸ್ವೀಕರಿಸಿ ಅರಗಿಸಿಕೊಳ್ಳಲು ವ್ಯಕ್ತಿಗೆ ಆಗುವುದಿಲ್ಲ. ಜ್ಞಾನವು ಮಾನವರನ್ನು ಆವರಿಸಿಕೊಂಡಿದೆ. ಸುತ್ತು ಮುತ್ತಲಿಂದ ಅದು ಒಳನುಗ್ಗಲು ಸಂಧಿಯನ್ನು ಹುಡುಕುತ್ತಿದೆ. ಆದರೆ ವ್ಯಕ್ತಿಯು ತನ್ನೊಳಗೆ ತನಗೆ ಅನವಶ್ಯಕವಾದ ಜ್ಞಾನವು ಪ್ರವೇಶಿಸದಂತೆ ತಡೆಗಳನ್ನು ಒಡ್ಡುತ್ತಾನೆ. ಬದಿಯ ಬೆಳಕು ಒಳಗೆ ಬರದಂತೆ, ಟಾಂಗದ ಕುದುರೆಯ ಹಾಗೆ ಕಣ್ಣುಮುಚ್ಚಕಗಳನ್ನು ಧರಿಸುತ್ತಾನೆ.

ಇಂತಿವೆಲ್ಲ ಕಾರಣಗಳಿಂದ ಸಮಾಜದಲ್ಲಿ ಜ್ಞಾನಪ್ರಸಾರವು ಅಥವಾ ಅರಿವಿನ ವಿಕಾಸವು ಸಾಕಷ್ಟು ವೇಗವಾಗಿ ಬೇಗನೆ ಆಗುವುದಿಲ್ಲ. ಸಮಾಜ ಪರಿವರ್ತನ, ವಿಕಾಸವು ಅತ್ಯಂತ ಸಾವಕಾಶವಾಗಿ ಜರುಗುವುದು ಅನಿವಾರ್ಯ. ಆದುದರಿಂದ, ಪರಿಪೂರ್ಣರು ಯಾರೂ ಇಲ್ಲ. ತಮ್ಮ ತಮ್ಮ ಇತಿಮಿತಿಗಳ ಅರಿವನ್ನು ಜಾಗೃತವಾಗಿ ಉಳಿಸಿಕೊಳ್ಳುತ್ತಿರಬೇಕು. ಒಳಗಿನ ಅರಿವು ಜಾಗೃತವಾಗಿದ್ದಲ್ಲಿ, ಸಾಕ್ಷಿಯನ್ನು ಭ್ರಮಿಷ್ಟನನ್ನಾಗಿಸದಿದ್ದಲ್ಲಿ ಮಾತ್ರ ಇದು ಸಾಧ್ಯ. ವ್ಯವಹಾರದೊಳಗಿನ ಪ್ರತಿಯೊಂದು ನಿರ್ಣಯದಲ್ಲಿಯೂ ತನ್ನ ಅಂತಃಸಾಕ್ಷಿಯ ನಿರ್ಣಯಕ್ಕೆ ಕಿವಿಗೊಡದೆ ಮುಂದಡಿಯಿಡಕೂಡದು. ತನ್ನ ಪರಿಸ್ಥಿತಿ, ಯೋಗ್ಯತೆಗಳು ತನಗೆ ಗೊತ್ತಿರುವಂತೆ ಬೇರೆಯವರಿಗೆ ಇರಲಾರವು. ಶಕ್ಯವಿದ್ದಷ್ಟು ಹೊರಗಿನ ಎಲ್ಲ ಸಲಹೆ ಸೂಚನೆಗಳನ್ನು ಪಡೆದುಕೊಳ್ಳುವುದು ಅವಶ್ಯ. ಆದರೆ

ಕೊನೆಯ ನಿರ್ಣಯಾಧಿಕಾರ ತನ್ನ ಸಾಕ್ಷಿ ಪ್ರಭುವಿನದಲ್ಲದೆ ಬೇರೆ ಯಾರಿಗೂ ಇಲ್ಲ. ನಿರ್ಣಯವು ಕೆಲವು ಬಾರಿ ತಪ್ಪಬಹುದು. ತಪ್ಪಿದ್ದಕ್ಕೆ ಆಗತಕ್ಕ ಶಿಕ್ಷೆಗೆ ತಲೆವಾಗುವ ಮಾನಸಿಕ ಸಿದ್ಧತೆಯಿರಬೇಕು, ಅನುಭವಿಸಬೇಕು. ಈ ಕ್ರಮದಲ್ಲಿ ಸಾಗುವಾತನಿಗೆ ಸರಿಯಾದ ನಿರ್ಣಯಶಕ್ತಿಯು ಸ್ವಾಭಾವಿಕವಾಗಿ ತಾನೇ ಬರುವುದು. ಆದುದರಿಂದ ಯಾವ ಪ್ರಸಂಗದಲ್ಲಿಯೇ ಆಗಲಿ, ಯಾವ ಕಾರಣಕ್ಕೆ ಆಗಲಿ, ಅಂತಃಸಾಕ್ಷಿಯನ್ನು ಮೂಲೆಗುಂಪಾಗಿಸಕೂಡದು. ಅದರ ಟೀಕೆಗೆ ಹೆದರಿ ಗಾಬರಿಗೊಂಡು ಅದರ ಬಾಯಿ ಮುಚ್ಚಿಸಕೂಡದು. ಓಡಿಹೋಗಿ ಸಂತೆಯ ಗಲಾಟೆಗಳಲ್ಲಿ, ಸಿನೆಮಾ ರೇಡಿಯೋಗಳ ಕೂಗಾಟದಲ್ಲಿ ಅಥವಾ ಉನ್ಮಾದಕ ಅವಸ್ಥೆಯನ್ನು ತಂದುಕೊಂಡು ಅಲ್ಲಿ ಮನಸ್ಸನ್ನು ತೊಡಗಿಸಿ ಒಳಗಿನ ಟೀಕೆಯನ್ನು ತಪ್ಪಿಸಿಕೊಳ್ಳುವುದು ಹೇಡಿತನ. ಅಂತಹ ಸಂದರ್ಭದಲ್ಲಿ ಸ್ವ-ಸ್ಥವಾಗಿದ್ದುಕೊಂಡು ಎಲ್ಲ ಟೀಕೆಯನ್ನು ಕೇಳಿಕೊಂಡು ಅದರಿಂದ ಕಲಿಯಬೇಕಾದ ಪಾಠವನ್ನು ಅವಶ್ಯವಾಗಿ ಗ್ರಹಿಸಬೇಕು.

ವ್ಯಕ್ತಿಗೆ ಸರಿಹೋಗುವ ಈ ಮಾತು ಸಮಾಜಕ್ಕೂ ಸಲ್ಲುವುದು. ಅಂತಃಸಾಕ್ಷಿಯನ್ನು ಕೊಂದುಕೊಂಡ ಅರ್ಧಾಂಗರು ಮುಂದುಗಾಣದೆ ಸರ್ವಾಧಿಕಾರಿಯಂತಹ ಯಾವುದೊಂದು ಹೊರಗಿನ ವಸ್ತುವಿಗೆ ನೇತುಬಿದ್ದು ಹಿಂಡಿನೊಳಗಿನ ಕುರಿಗಳಂತಾಗಿ ಬಾಳಲು ಒಪ್ಪಿಕೊಳ್ಳುವ ಹೊತ್ತು ಬರುತ್ತದೆ. ಒಳಗಿನ ವಿಮರ್ಶಕಶಕ್ತಿಯನ್ನು ಜೀವಂತವಾಗಿ ಉಳಿಸಿಕೊಂಡರೆ ಇಂತಹ ಪ್ರಸಂಗವು ಬರುವುದಿಲ್ಲ. ಒಳಗಿನ ವಿಮರ್ಶಕಶಕ್ತಿಗೆ ಹೊರಗಿನ ಆಗು-ಹೋಗುಗಳ ನೆರವನ್ನು ಒದಗಿಸಿಕೊಡಬೇಕು. ಅದ್ಯ ಯಾವತ್ ವಿಚಾರಗಳನ್ನೂ ಶಕ್ಯವಿದ್ದಷ್ಟು ಪ್ರಯತ್ನ ಪೂರ್ವಕವಾಗಿ ಅರಿತುಕೊಳ್ಳಬೇಕು. ಇದರಿಂದ ಸ್ವತಂತ್ರ ವಿಚಾರಶಕ್ತಿಯು ಪುಟಗೊಳ್ಳುತ್ತದೆ. ಎದುರುಪಕ್ಷವು ಇಲ್ಲೆಂದು ಗ್ರಹಿಸುವುದು ವ್ಯಕ್ತಿಯ ಪುಕ್ಕತನದ ದ್ಯೋತಕ. ಎದುರುಪಕ್ಷದ ಆಕ್ಷೇಪಣೆಗಳಿಗೆ ಬೆಲೆಯಿಲ್ಲವೆಂದು ಬಗೆದರೆ, ಅದು ಲೋಕದೊಳಗಿನ ಚೈತನ್ಯ ಶಕ್ತಿಯ ಅನಾದರ. ಇದು ಎಂದಿಗೂ ಕೂಡದು. ಇನ್ನೊಂದು ಪಕ್ಷದ ಆಕ್ಷೇಪಗಳನ್ನು ಲೆಕ್ಕಕ್ಕೆ ಹಿಡಿದು ತನ್ನ ವಿಚಾರಗಳನ್ನು ದೃಢಪಡಿಸಿಕೊಳ್ಳಬೇಕು. ಆಕ್ಷೇಪಗಳಿಗೆ ಸಕಾರಣವಾದ ಸಮಂಜಸ ಉತ್ತರವು ತನ್ನಲ್ಲಿ ಇಲ್ಲದಿದ್ದರೆ ತನ್ನ ವಿಚಾರದ ಆ ಭಾಗವು ಭದ್ರವಲ್ಲವೆಂದು ನಿಶ್ಚಯಿಸಿ ಅದನ್ನು ತಿದ್ದಿಕೊಳ್ಳುವ ಶಾಂತಪ್ರಯತ್ನಗಳು ನಡೆಯಬೇಕು. ಇದಕ್ಕೆ ಪ್ರತಿಯಾಗಿ ಆಗ್ರಹಿಯಾಗಿ ಸಿಡುಕಿನ ಸ್ವಭಾವವು ತಲೆ ಎತ್ತಿದ್ದರೆ, ಅದು ಶಾರೀರಿಕ ಹಾಗು ಮಾನಸಿಕ ಅಶಕ್ತತನದ ಲಕ್ಷಣ. ಇಂತು ಮನಃಸಾಕ್ಷಿಯಾಗಿ ತನಗೆ ಒಪ್ಪಿಗೆಯಾಗದಿದ್ದುದನ್ನು ಹಣಕ್ಕಾಗಿ ಅಥವಾ ಲೋಕರಂಜನೆಗಾಗಿ ಆಡುವುದೂ ಮಾಡುವುದೂ ಮೋಸ.

ವಿಮರ್ಶೆಯ ಬಗೆಯು ತಿಳಿಯದ್ದಕ್ಕೆ ವ್ಯಕ್ತಿಯ ವಿಕಾಸಕ್ಕೆ ಹಿರಿದಾದ ತಡೆಯುಂಟಾಗುತ್ತದೆ. ಬೆಯ್‌ಗಳು, ಸಿಡುಕಿನ ನುಡಿ, ಅಥವಾ ಮಮ್ಮಲನೆ ಮರಗುವುದು ಇದೆಲ್ಲ ವಿಮರ್ಶೆಯಲ್ಲ. ವಿಚಾರವಿನಿಮಯದಲ್ಲಾಗಲಿ, ಆತ್ಮವಿಚಾರದಲ್ಲಾಗಲಿ ಬೆಳಕಿನ ಮಾತಿರಬೇಕಲ್ಲದೆ ಬೆಂಕಿಯ ಮಾತಿನಿಂದ ಬರಿ ಮನಸ್ತಾಪವು ಮಾತ್ರ ಆಗುವುದು. ಒಳಗಣ ನೋವಿಗೆ ಹಣೆಹಣೆ ಬಡಿದುಕೊಂಬುದು ಅಥವಾ ಆರ್‌ಭಟೆಯನ್ನು ಪ್ರದರ್ಶಿಸುವುದು ಪ್ರಾಥಮಿಕ ಸ್ಥಿತಿಯ ಕುರುಹು. ಸಾಮಾಜಿಕ ಟೀಕೆಯಲ್ಲೂ ಇದು ನಿಜ. ಮಾತಿನ ಮಥನದಿಂದ ಬರಿ ವಾದಕ್ಕಿಂತ ಬೆಳಕಿನ ಹೊಸವಿಚಾರವು ಉದಿಸಬೇಕು. ವಿಚಾರಕ್ಕೆ ಪ್ರತಿವಿಚಾರವನ್ನು ಹೇಳಬೇಕಾದಲ್ಲಿ ಕೆಲರು ಉಪಹಾಸದ ಸಾಧನವನ್ನು ಉಪಯೋಗಿಸುವರು. ಇದು ಅಪ್ರಶಸ್ತ, ಆದರೆ ಹಾಸ್ಯಕ್ಕೂ ನಿಶ್ಚಿತವಾದ ಒಂದು ಸ್ಥಾನವಿದೆ. ತನ್ನ ಎಗ್ಗತನ, ತನ್ನ ಕೊರತೆಯನ್ನು ಕಂಡು ತಾನೇ ನಗಲಿಕ್ಕೆ ಆಗದವನು ಅಸಂಸ್ಕೃತನು, ಅರಸಿಕನು. ಇನ್ನೊಬ್ಬರಿಗೆ ನಗುವುದಕ್ಕೆ ಸಂಸ್ಕೃತಿ ಬೇಡ. ಅದು ಕುಹಕತನದ ಲಕ್ಷಣವೂ ಆಗಬಲ್ಲುದು. ಆದರೆ, ಇನ್ನೊಬ್ಬರೊಡನೆ ನಕ್ಕು ನಗಿಸಲು ಬರುವುದು ಮಿಗಿಲಾದ ಗುಣ. ವಿನೋದೀ ವಿಚಾರದ ಗಣ್ಯವಾದ ರಾಷ್ಟ್ರೀಯ ಪ್ರಮುಖ ಪತ್ರಿಕೆಯು ಇಲ್ಲದಿರುವ ಸಮಾಜಕ್ಕೆ ಆತ್ಮ ವಿಮರ್ಶಾಸಾಮರ್ಥ್ಯವು ಇನ್ನೂ ಬಾರದಿರುವ ಲಕ್ಷಣ. ಆ ಸಮಾಜವು ಪ್ರಾಥಮಿಕ ಸ್ಥಿತಿಯಲ್ಲಿಯೆ ಇದೆಯೆಂದು ತಿಳಿಯಬೇಕು. ಸಾಮಾನ್ಯ ವ್ಯಕ್ತಿಗಳ ಮಾತು ಆ ಸಮಾಜದ ಸಾಂಸ್ಕೃತಿಕ ತರಗತಿಯನ್ನು ವ್ಯಕ್ತಪಡಿಸುತ್ತದೆ. ಮಾತುಮಾತಿಗೆ ಬೈಗಳು, ಆಣೆ, ಶಾಪ, ಅಕ್ಕಸವು ಕಾಣಿಸಿಕೊಳ್ಳುವುದು ಅನಾಗರಿಕತೆಯ

ಲಕ್ಷಣ. ಉಡುಪು ತೊಡಪು ಹೇಗೆ ವ್ಯಕ್ತಿಯ ಅಂತರಂಗದ ಬಾಹ್ಯ ಪ್ರದರ್ಶನವೆನ್ನಬಹುದೊ ಹಾಗೆಯೇ ಮಾತು, ಶೈಲಿ, ಭಾಷೆಯ ವಿಸ್ತಾರ, ಕಲಾ-ಸಾಹಿತ್ಯದ ಮಟ್ಟ ಮತ್ತು ಶೈಲಿಗಳು ಆಯಾ ಸಮಾಜದ ಅಂತರಂಗದ ಬಾಹ್ಯ ಪ್ರತೀಕ.

ವ್ಯಕ್ತಿಗೂ ಸಮಾಜಕ್ಕೂ ಇಂತು ಅಭೇದ ಸಂಬಂಧವಿದೆ. ಸಮಾಜವು ಜ್ಞಾನಸ್ವರೂಪದಲ್ಲಿ ಸೂಕ್ಷ್ಮರೂಪ ದಿಂದ ವ್ಯಕ್ತಿಯ ಚೈತನ್ಯದಲ್ಲಿ ಇಂಬುಗೊಂಡು ಅವನ ಅಂತಃಸಾಕ್ಷಿಯಾಗುತ್ತದೆ. ಹೀಗೆ ವ್ಯಕ್ತಿಯು ಸಮಾಜವನ್ನೂ ಸಮಾಜವು ವ್ಯಕ್ತಿಯನ್ನೂ ಧಾರಣಮಾಡುತ್ತವೆ. ಒಂದರೊಂದರ ವಿಕಾಸಕ್ಕೆ ಕಾರಣವಾಗಿರುತ್ತವೆ. ಆದಕಾರಣ ಎರಡೂ ಅಪೂರ್ಣವೆಂದು ಒಪ್ಪಿಕೊಂಡಂತೆಯೆ ಸರಿ. ಇನ್ನೂ ವಿಕಾಸವಾಗುತ್ತಲೆ ಇರುವುದು ಪರಿಪೂರ್ಣ ವಾಗಿರಲಾರದು. ಪೂರ್ಣತೆಯೆನಿಸುತ್ತಿದ್ದರೆ ಅದು ಕೇವಲ ಸಾಪೇಕ್ಷ; ನಿರಪೇಕ್ಷ ಪೂರ್ಣತೆಯಲ್ಲ. ಆದಕಾರಣ, ವ್ಯಕ್ತಿ ಮತ್ತು ಸಮಾಜಗಳಿಗಿಂತ ಹಿರಿದಾದ, ಮಿಗಿಲಾದ, ಸ್ವಯಂಪೂರ್ಣವಾದ-ನಿರಪೇಕ್ಷ; ನಿರಂತರ ಅನಂತವಾದ ಒಂದನ್ನು ದೃಢವಾಗಿ ನೆರೆನೆಮ್ಮದೆ ವ್ಯಕ್ತಿ ಅಥವಾ ಸಮಾಜವು ಪೂರ್ಣವಾಗಿ ವಿಕಾಸಗೊಳ್ಳಬೇಕೆಂಬ ಆಶೆಗೆ ಆಧಾರವೇ ಉಳಿಯುವುದಿಲ್ಲ. ಬರಿ ಸಮಾಜಸೇವೆ, ಮಾನವ್ಯಸೇವೆ ಎಂಬ ಸೊಲ್ಲು ಅರ್ಥವಿಹೀನ. ಕುರುಡರು ಕುರುಡರಿಗೆ ದಾರಿತೋರಬಲ್ಲರೆ!

ವ್ಯಕ್ತಿಗೆ ಆತನ ಅರಿವು ಆಧಾರ; ಈ ಅರಿವಿಗೆ ಸಮಾಜವು ಆಶ್ರಯ. ಸಮಾಜಕ್ಕೆ ಅನಂತ-ಗುಣ-ಪೂರ್ಣ-ಸ್ವಯಂಜ್ಯೋತಿ ಆದರ್ಶ. ಬಾಹ್ಯ ಪರಿಸ್ಥಿತಿ, ಸ್ವಾರ್ಥಭಾವ ಇವುಗಳಲ್ಲಿಯೆ ನೀತಿಯ ಉದಯ. ಸೌಂದರ್ಯದ ಉಗಮವೆಂದು ಬಗೆದರೆ ನಿರಪೇಕ್ಷ ಪ್ರೇಮ, ಶುದ್ಧ ಪರೋಪಕಾರಾದಿ ಭಾವನೆಗಳಿಗೆ ಅಸ್ತಿತ್ವವೇ ಇಲ್ಲ. ಬರ್‌ಟ್ರೆಂಡ್ ರಸೆಲ್ಲನಿಗೆ ಅನಂತ ಗುಣಪೂರ್ಣಶಕ್ತಿಯ ಸ್ವತಂತ್ರ ಅಸ್ತಿತ್ವವು ಮಾನ್ಯವಿಲ್ಲವಾದರೂ ಫ್ರಾಯಿಡನ ಕಾಮಸಿದ್ಧಾಂತವು ಸಂಪೂರ್ಣ ಒಪ್ಪಿಗೆಯಿಲ್ಲ. ಮಾತೃಪ್ರೇಮದಂತಹ ಕೆಲವು ಗುಣಗಳ ಆಗಮ್ಯತೆಯು ಆತನಿಗೂ ಮಾನ್ಯವಿದೆ. ಇವು ಕೇವಲ ಲೈಂಗಿಕ ಪ್ರವೃತ್ತಿಯೆಂಬುದು ಅತಿವಾದವೆಂದು ಆತನ ಮತವಿದೆ. ಪ್ರೇಮವನ್ನು ಆ ಕೋಟಿಯಲ್ಲಿ ಆತನು ಎಣಿಸಿದ್ದಾನೆ.

> Nietzsche despises universal love; I feel the motive power to
> all that desire as regards the world

ಎಂದು ಪ್ರೀತಿಯೆ ಎಲ್ಲಕ್ಕೂ ಮೂಲವೆಂದು ರಸೆಲ್ಲನ ಅಭಿಪ್ರಾಯವಿದೆ. ಅರಿವು ವಿಶ್ವಪ್ರೇಮದಲ್ಲಿ ಪರಿಣಾಮಗೊಳ್ಳುವುದರಲ್ಲಿಯೆ ಜೀವಿತದ ಸಾರ್ಥಕ್ಯವಿದೆ. ಆದರೆ, ವ್ಯಕ್ತಿ ಮತ್ತು ಸಮಾಜಗಳು ಒಂದರೊಂದರ ಆಶ್ರಯದಲ್ಲಿ ಪ್ರೇಮಬಂಧನದಿಂದ ಬದ್ಧವಾಗಿ ಸತತ ಅರಳುತ್ತಲಿವೆಯೆಂಬುದಕ್ಕೆ ಸ್ವಯಂಪೂರ್ಣವಾದ ಅನಂತಶಕ್ತಿಯೊಂದನ್ನು ಲೆಕ್ಕಿಸುವುದು ಅನಿವಾರ್ಯವಾಗುವುದಿಲ್ಲವೇ?

ಮಾನವನ ಎಲ್ಲ ಶಕ್ತಿಯ ಕೇಂದ್ರ ಸಮಾಜ. ಸಮಾಜದ ಎಲ್ಲ ಸಾಮರ್ಥ್ಯದ ಉಗಮವು ಅನಂತ-ಗುಣ-ಪೂರ್ಣ-ಸ್ವಯಂ ಪ್ರಕಾಶ. ವ್ಯಕ್ತಿಯ ಮಟ್ಟಿಗೇ ವಿಚಾರಿಸುವಾಗ ಮಾಡಿದ ಪೃಥಕ್ಕರಣದಿಂದ ಮುಗಿಲಿನತ್ತ ಹಬ್ಬುವ ಒಂದು ಬಿಂದು, ನೆಲದತ್ತ ಪಸರಿಸುವ ಇನ್ನೊಂದು ಬಿಂದುವು ನಮಗೆ ಗೋಚರವಾಗಿದ್ದುವು. ಈಗ ಮೇಲಿನಿಂದ ಕೆಳಗಡೆಗೆ ಚಿಗಿವ ಮರದಂತೆ ಒಂದು ಚಿತ್ರವು ಕಣ್ಣೆದುರು ನಿಲ್ಲುವುದು. ಎಲ್ಲ ಶಕ್ತಿಯ ಆಗರ ಸ್ವಯಂಪ್ರಕಾಶ. ಅಲ್ಲಿಂದ ಸಮಾಜ-ಚತುರ್ಮುಖ, ಬಳಿಕ ವ್ಯಕ್ತಿ ಚೇತನ. 'ಊರ್ಧ್ವಮೂಲಂ ಅಧಃಶಾಖಂ ಅಶ್ವತ್ಥಂ ಪ್ರಾಹುಃ ಅವ್ಯಯಮ್' ಎಂದು ಗೀತೆಯು ವರ್ಣಿಸಿದ ಮುಗಿಲತ್ತಣಿಂದ ನೆಲದ ಕಡೆಗೆ ಚಿಗಿವ ಶಾಶ್ವತ ವೃಕ್ಷವಿದು.

ಪ್ರಾಣಿಗಳಲ್ಲಿರುವ ದೇಹಿಯು ಮಾನವ ವ್ಯಕ್ತಿಯಲ್ಲಿ ಕ್ಷೇತ್ರಜ್ಞವೆನಿಸುವುದು. ಗೀತೆಯಲ್ಲಿ ದೇಹಿ ಮತ್ತು ಕ್ಷೇತ್ರಜ್ಞವೆಂಬ ಎರಡೂ ಪಾರಿಭಾಷಿಕ ಪದಗಳು ಬಂದಿವೆ. ಆದರೆ, ಅವುಗಳ ಅರ್ಥದಲ್ಲಿರುವ ಸೂಕ್ಷ್ಮಭೇದವನ್ನು ಗಮನಿಸಿ ವಿವರಿಸಿದ್ದು ಕಂಡುಬರುವದಿಲ್ಲ. ದೇಹಿಯು ಅರಿವಿನಿಂದೊಡಗೂಡಿದಾಗ ಕ್ಷೇತ್ರಜ್ಞವೆಂಬ ಹೆಸರಿಗೆ

ಅರ್ಹ. ಆದಕಾರಣ ಮಾನವ ದೇಹದಲ್ಲಿ, ತಾನು ಎಂಬ ಪ್ರಜ್ಞೆ (ಅರಿವು) ಜಾಗೃತವಿರುವುದರಿಂದ ಅದು ಕ್ಷೇತ್ರಜ್ಞ. ಗೀತೆಯು ಹೇಳುವ ಮೂರು ಪುರುಷರ ಅರ್ಥವನ್ನೂ ಆದರ ಔಚಿತ್ಯವನ್ನೂ ಸಾಮಾಜಿಕ-ಮಾನಸಶಾಸ್ತ್ರ ದೃಷ್ಟಿಯಿಂದ ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ. ಕ್ಷರಪುರುಷ ವ್ಯಕ್ತಿ; ಅಕ್ಷರ ಪುರುಷ ಸಮಾಜ; (ವ್ಯಕ್ತಿಯ ಅಂತರಾಳದಲ್ಲಿ ಅನುಭವಕ್ಕೆ ಬರುವ, ಮುಂಡಕದ ಋಷಿಯು ವರ್ಣಿಸಿದ, ಹಣ್ಣು ತಿನ್ನದೆ ಸಾಕ್ಷಿಯಾಗಿರುವ ಹಕ್ಕಿ ಅಕ್ಷರಪುರುಷ. ಏಕೆಂದರೆ, ಇದು ಸಮಾಜದ ಸೂಕ್ಷ್ಮರೂಪ;) ಇವೆರಡಕ್ಕೂ ಆಧಾರವಾಗಿ ಎರಡನ್ನೂ ಅಂಕೆಯಲ್ಲಿರಿಸಿಕೊಂಡಿರುವ ಮಹಾಂತಪ್ರಭು, ಸಾಕ್ಷಿ, ಅನುಮಂತೃವಾಗಿ ಗುಹಾಂತರಾಳದ ಆಳದಲ್ಲಿರುವ ಸರ್ವ-ಗುಣ-ಪೂರ್ಣ-ಅನಂತ. ಅಲ್ಲಮಪ್ರಭುವಿನ ಆರಾಧ್ಯ ದೈವತ ಗುಹೇಶ್ವರ.

> ಒಂದು ತಾಳಮರದ ಮೇಲೆ ಮೂರು ರತ್ನವಿಹುದನ್ನು ನಾ ಬಲ್ಲೆ. ಒಂದು ರತ್ನ ಉತ್ಪತ್ತಿ-ಸ್ಥಿತಿ-ಲಯಕ್ಕೆ ಒಳಗು. ಒಂದು ಹದಿನಾಲ್ಕು ಭುವನಕ್ಕೆ ಬೆಲೆಯಾಯಿತ್ತು. ಇನ್ನೊಂದು ರತ್ನಕ್ಕೆ ಬೆಲೆಯಿಲ್ಲವೆಂದು ಗುಹೇಶ್ವರ ಲಿಂಗೈಕ್ಯರು 'ನಿಃಶಬ್ದಂ ಬ್ರಹ್ಮ ಉಚ್ಯತೇ' ಎಂಬರು.

ಅಲ್ಲಮ ಪ್ರಭುವು ಈ ವಚನದಲ್ಲಿ 'ನಾ ಬಲ್ಲೆ' ಎಂದು ಇತ್ತ ಸಾಕ್ಷಿಯು ಬಹಳ ಮಹತ್ವದ್ದಾಗಿದೆ. ಕೆಲರು ವ್ಯಕ್ತಿಯು ಆತ್ಮವಾದೊಡನೆ ಪರಮಾತ್ಮವೆಂದು ಪರಿಗಣಿಸಿ ನಡುವಣ ಸಾಮಾಜಿಕ ಆತ್ಮವನ್ನು ಮರೆತುಬಿಡುತ್ತಾರೆ. ಮಹತ್ವದ ನಡುವಣ ಸಂಗತಿಯನ್ನು ಎಣಿಕೆಗೆ ಹಿಡಿಯದ್ದರಿಂದ ನಮ್ಮ ಲೆಕ್ಕವೆಲ್ಲ ತಪ್ಪಿಹೋಗಿ, ಈ ವರೆಗೆ ಹಾನಿಗೆ ಈಡಾಗಿದ್ದೇವೆ. ವ್ಯಕ್ತಿಗೆ ಸಮಾಜವೇ ಆಧಾರ, ವ್ಯಕ್ತಿಯ ಆತ್ಮಕ್ಕೆ ಸಾಮಾಜಿಕ ಆತ್ಮವೇ ಭರ್ತೃ Sustenance; ಅನುಮಂತೃ, ಪ್ರಭು. ಇದರ ಆಡಳಿತಕ್ಕೆ ವ್ಯಕ್ತಿಯು ಒಳಪಟ್ಟಿದೆ. ಸಮಾಜ ಪುರುಷನು ಗುಹೇಶ್ವರನ ಅಧಿಕಾರಕ್ಕೆ ಒಳಪಟ್ಟಿದ್ದಾನೆ. ಈ ತಾರತಮ್ಯವನ್ನು ಮೀರಿನಡೆದರೆ ಆಗುವ ಘೋರಶಿಕ್ಷೆಯನ್ನು ನಮ್ಮ ದೇಶವು ಈವರೆಗೆ ಅನುಭವಿಸಿದೆ. ಸಾಮಾಜಿಕ ಆತ್ಮವನ್ನು ಕಡೆಗಣಿಸಿ ಓಡಿಹೋಗುವ ವಿರಕ್ತಿಯ ಹುಚ್ಚು ಇದೆಲ್ಲ ಕಷ್ಟಪರಂಪರೆಗಳನ್ನು ತಂದಿದೆ. ಅಲ್ಲಮಪ್ರಭುವಿನ ತೇಜಸ್ವೀ ಭಾಷೆಯಲ್ಲಿ ಹೇಳುವುದಾದರೆ:

> 'ತಮ್ಮ ತಾವು ಕೆಟ್ಟ ಕೇಡಿಂಗೆ ಬೆರಗಾದೆ! ಮಿಥ್ಯವನೆ ಹಿಡಿದು ಮಿಥ್ಯವನೆ ಪೂಜಿಸಿ ಮರ್ತ್ಯಲೋಕದ ಭಕ್ತರೆಲ್ಲರು ವ್ಯರ್ಥವಾದರಲಾ!' 'ಕಣ್ಣು ಕಳೆದು ಕೊಂಡು ಹೊಟ್ಟೆಸೀಳಿ ಮಗನ ಬಾಣಸವಮಾಡಿ ಕೈಲಾಸಪುರಕೆ ಹೋದವರೆಲ್ಲ ಭಕ್ತರೆ!.........ಅಸುರ ಕರ್ಮಿಗಳು!............. ನರಲೋಕದ ನರಗುರಿಗಳೆಲ್ಲ ಅಸುರ ಸಂಸಾರಕ್ಕೊಳಗಾದವರು!'

ವ್ಯಕ್ತಿಗಳು 'ಸಕಲ-ಜೀವ-ಸ್ನೇಹ' ಭಾವದವರಾಗಿ (ಪ್ರಭುಲಿಂಗಲೀಲೆ) ಸಮಾಜದ ಮುಖಾಂತರವಾಗಿ ತಮ್ಮ ಪ್ರೀತಿಯ ತ್ಯಾಗ, ಸೇವೆಗಳ ಮೂಲಕ ಅನಂತನ ಉಪಾಸನೆ ಮಾಡಿ ಜೀವನದಲ್ಲಿ ಕೃತಾರ್ಥರಾಗುವುದೆ ಶ್ರೇಯೋಮಾರ್ಗ.

ಶುಭಾಃ ತೇ ಪಂಥಾನಃ

ಮಕ್ಕಳ ಒಡಪುಗಳು

ಪ್ರಸ್ತಾವನೆ

(೧೯೪೦ರ ಮೊದಲ ಮುದ್ರಣಕ್ಕೆ ಬರೆದದ್ದು)

'ಏನು ಮಾಡುವುದು? ಹುಡುಗರಿಗೆ ಪ್ರಬಂಧಗಳನ್ನೆ ಬರೆಯಲು ಬರುವುದಿಲ್ಲವಲ್ಲ!....' ಎಂದು ಮುಂತಾಗಿ ತಮ್ಮತಮ್ಮೊಳಗೆ ಗುಸುಗುಸು ಮಾತನಾಡಿಕೊಳ್ಳದ ಶಿಕ್ಷಕರೆ ಇಲ್ಲ. ನಾನೂ ಒಬ್ಬ ಶಿಕ್ಷಕ. ಆದುದರಿಂದ ಈ ಬಗೆಯ ಮಾತಿಗೆ ಹೊರತಾಗಿರುವೆನೆಂದಲ್ಲ. ಆದರೂ ಈ ಬಗೆಯ ಉದ್ಗಾರಗಳು ಹೊರಡುವಾಗ ಅಥವಾ ಹೊರಟುದನ್ನು ಕೇಳುವಾಗ ನನಗೇ ಒಂದು ಬಗೆಯ ಸಂಕೋಚವುಂಟಾಗುತ್ತದೆ. ಮನಸ್ಸು ಮುದುಡಿಕೊಳ್ಳುತ್ತದೆ. ಏಕೆಂದರೆ ಇದರಲ್ಲಿ ಮುಖ್ಯ ತಪ್ಪುಗಾರರು ವಿದ್ಯಾರ್ಥಿಗಳಲ್ಲ. ಅವರಿಗೆ ಅನುಸರಿಸಲು ಅಂದಅಂದದ ಮಾದರಿಗಳೇ ಕಣ್ಣಮುಂದೆ ಇಲ್ಲದಿರಲು ವಿದ್ಯಾರ್ಥಿಗಳಾದರೂ ಏನು ಮಾಡಬೇಕು? ಅಲ್ಲದೆ ಗಡ್ಡಕ್ಕೆ ಬೆಂಕಿ ಹತ್ತಿದಾಗಲೆ ಬಾವಿಯ ಚಿಂತೆಯಿಂದ ಏನು ಪ್ರಯೋಜನ? ಮೇಲಣ ಇಯತ್ತೆಗಳಲ್ಲಿ ಪ್ರಬಂಧ ರಚನೆಯ ಹದವು ತಿಳಿಯಬೇಕಾದರೆ ಅದರ ಪೂರ್ವಸಿದ್ಧತೆಯು ಕೆಳಗಣ ಇಯತ್ತೆಗಳಿಂದಲೇ ಆರಂಭವಾಗಬೇಕಲ್ಲವೆ? ಈ ಪೂರ್ವಸಿದ್ಧತೆಯು ಹಲವು ಬಗೆಯದಾಗಿದ್ದು ಅದರಲ್ಲಿ ಚಿಕ್ಕಂದಿನ ಒಡಪು ಮತ್ತು ಗಾದೆಗಳ ಅಭ್ಯಾಸವೂ ಒಂದು ಮಹತ್ವದ ಸಾಧನವಾಗಿದೆ.

ಒಳ್ಳೆಯ ಪ್ರಬಂಧಗಳನ್ನು ಬರೆಯಲು ಅವಶ್ಯವಿರುವ ಸಂಗತಿಗಳು ಎರಡು: ವಿಚಾರ ಮತ್ತು ಭಾಷೆ. ವಿಚಾರದ ವಿಕಾಸಕ್ಕಾಗಿ ವಾಚನ, ನಿರೀಕ್ಷಣ, ತುಲನಾತ್ಮಕ ಅಭ್ಯಾಸಗಳು ಹೆಚ್ಚಾಗಬೇಕು. ಒಳ್ಳೆಯ ಭಾಷಾಶೈಲಿಗಾಗಿ ಹಲವು ಬಗೆಯ ಮಾತಿನ ಮಾದರಿಗಳು ಕಣ್ಣೆದುರಿಗಿರಬೇಕು; ಬಾಯಿಗೆ ಬರುತ್ತಿರಬೇಕು. ಭಾಷೆ ಮತ್ತು ವಿಚಾರಗಳ ಸುಂದರ ಸಂಗಮವಾಗಿರುವ ಉದಾತ್ತ ಮನೋಹರವಾದ ಸಣ್ಣಸಣ್ಣ ಭಾಗಗಳನ್ನು ಸಾಹಿತ್ಯದೊಳಗಿಂದ ಆಯ್ದು ವಿದ್ಯಾರ್ಥಿಗಳಿಂದ ಗಟ್ಟಿಮಾಡಿಸಿಕೊಳ್ಳಬೇಕು. ಇದೆಲ್ಲವೂ ಮೇಲಣ ಇಯತ್ತೆಗಳ ಮಾತಾಯಿತು. ಹ್ಯಾಸ್ಕೂಲಿನ ಆರಂಭದ ಇಯತ್ತೆಗಳಲ್ಲಿ ಮತ್ತು ಪ್ರಾಥಮಿಕ ೩, ೪ನೆಯ ಇಯತ್ತೆಗಳಲ್ಲಿ ಈ ಕೆಲಸವನ್ನು ಗಾದೆ ಮತ್ತು ಒಡಪುಗಳಿಂದ ಬಹುಮಟ್ಟಿಗೆ ಮಾಡಿಸಿಕೊಳ್ಳಬಹುದಾಗಿದೆ. ಇದರಲ್ಲಿಯೆ ಮತ್ತೆ, ಒಡಪುಗಳಿಗಿಂತ ಗಾದೆಗಳು ತಿಳಿಯುವುದಕ್ಕೆ ವಿದ್ಯಾರ್ಥಿಗಳು ಸ್ವಲ್ಪ ಹೆಚ್ಚು ಪ್ರೌಢರಾಗಿರಬೇಕು.

ಗಾದೆಗಳಿಗಿಂತಲೂ ಒಡಪುಗಳು ಮಕ್ಕಳ ಮನಸ್ಸನ್ನು ಮೊದಲು ಸೆಳೆಯುತ್ತವೆ. ಸುಮಾರು ೮ ರಿಂದ ೧೨ ವಯಸ್ಸಿನ ಮಕ್ಕಳು ಕಲೆತು ಕೆಲವಾಗ-ಕೆಳೆವಾಗ ಒಬ್ಬರೊಬ್ಬರಿಗೆ ಒಡಪುಗಳ ತೊಡಕನ್ನು ಹಾಕಿ, ಸರಸಸಲ್ಲಾಪಗಳನ್ನು ನಡೆಸುವುದುಂಟು. ಗಾದೆಗಳು ಈ ವಯಸ್ಸಿನ ಬಾಲರಿಗೆ ಅಷ್ಟು ಹಿಡಿಯುವುದಿಲ್ಲ. ಗಾದೆಗಳು, ವಚನಗಳು, ಹುರುಳಿನ ನುಡಿಗಳು (Aphorisms) ಇವುಗಳಲ್ಲಿ ಅಡಕವಾಗಿರುವ ಆಳವಾದ ಅರ್ಥವು ತಿಳಿಯಬೇಕಾಗಿದ್ದರ,

ಮತ್ತು ಅದರ ಯುಕ್ತಾಯುಕ್ತತೆಯ ಖಂಡನ-ಮಂಡನಗಳ ನಿಮಿತ್ತದಿಂದ ವಿದ್ಯಾರ್ಥಿಗಳ ವಿಚಾರಶಕ್ತಿಗೆ ಚಾಲನೆ ಕೊಡಬೇಕಾಗಿದ್ದರೆ ಅವರು ಸ್ವಲ್ಪಾದರೂ ತಿಳುವಳಿಕೆ ಬೆಳೆದವರಾಗಿರಬೇಕು.

೮ ರಿಂದ ೧೨ ರ ವರೆಗಿನ ವಯಸ್ಸಿನ ಮಕ್ಕಳಲ್ಲಿ ಒಡಪುಗಳ ಹುಚ್ಚು ಎಷ್ಟಿರುವುದೆಂಬುದನ್ನು ಅನುಭವಿಕರಾದ ತಾಯ್ತಂದೆಗಳಿಗೆ ಬೇರೆ ಹೇಳಬೇಕಾಗಿಲ್ಲ. ಹಿರಿಯರಿಂದ ಹೊಸ ಒಡಪುಗಳನ್ನು ಕಲಿತು, ತಮ್ಮ ಸರಿಕರಿಗೆ ಆ ತೊಡಕಿನಲ್ಲಿ ಹಿಡಿದು ತಮ್ಮ ಬುದ್ಧಿವಂತಿಕೆಯನ್ನು ತೋರ್ಪಡಿಸಬೇಕೆಂಬ ಹಂಬಲವಿಲ್ಲದ ಹುಡುಗನಿಲ್ಲ, ಹುಡುಗೆಯಿಲ್ಲ. ನಾಲ್ಕು ಮಕ್ಕಳು ಸೇರಿ ಒಡಪುಗಳ ಏರಾಟವನ್ನು ನಡೆಯಿಸಿದುವೆಂದರೆ ಅವಕ್ಕೆ ಹಸಿವು ನೀರಡಿಕೆಗಳ ಅರಿವು ಕೂಡ ಉಳಿಯುವುದಿಲ್ಲ; ಒಡಪುಗಳೆಂದರೆ ಅಷ್ಟು ಅಚ್ಚು ಮೆಚ್ಚು ಮಕ್ಕಳಿಗೆ! ಹೊಸ ಹೊಸ ಒಡಪುಗಳನ್ನು ಕಲೆಹಾಕಿ ನಾಳೆ ತಾನು ಗೆಲ್ಲಬೇಕು, ತಾನು ಮಿಗಿಲೆನಿಸಬೇಕು, ಎಂಬ ಹುಮ್ಮಸದಿಂದ ಅವ್ವನ ಬಳಿಗೆ ಬಂದು, ಹೆಚ್ಚುಹೆಚ್ಚಿನ ಒಡಪುಗಳನ್ನು ತನಗೆ ಹೇಳಿಕೊಡೆಂದು ಮಗುವು ಕಲಿಯುವ ಲವಲವಿಕೆಯುಳ್ಳುದಾದಾಗ, ತಾಯಿಯು ತನ್ನ ಬಂಡವಾಳವು ತೀರಿತೆಂದು ಉಸಿರುತ್ತಲೆ ಆ ಕಂದಮ್ಮನಿಗಾಗುವ ನಿರಾಶೆಯ ದುಃಖವು ಅನಿತು ಇನಿತಲ್ಲ. ಆ ಮಗುವಿನ ಮೋರೆಯು ಕಂದಿ ಕುಂದಿ ಬೆಂದ ಬದನೆಕಾಯಂತಾಗುವುದು!

ಒಲವನ್ನು ನೋಡಿ ಕಲಿಸಬೇಕು, ಎಂಬ ಶಿಕ್ಷಣಶಾಸ್ತ್ರದ ತತ್ತ್ವವನ್ನು ಗಿಳಿಪಾಠ ಹೇಳುವ ನಾವು, ಮಕ್ಕಳಲ್ಲಿ ಒಡಪುಗಳ ಕಡೆಗೆ ಇರುವ ಈ ಸ್ವಾಭಾವಿಕವಾದ ಎಳತದ ಲಾಭವನ್ನು ಇನ್ನೂ ಪಡೆದಿಲ್ಲ. ಕನ್ನಡದ ಶಿಕ್ಷಣಕ್ರಮದಲ್ಲಿ ಒಡಪುಗಳನ್ನು ಉಪಯೋಗಿಸಿಕೊಂಡುದು ಕಂಡುಬರುವುದಿಲ್ಲ. ಮಕ್ಕಳ ಪಠ್ಯಪುಸ್ತಕಗಳಲ್ಲಿ ಒಡಪುಗಳಿಗೆ ಎಡೆಯಿಲ್ಲ. (ಬಾಲಸಾಹಿತ್ಯಮಂಡಲದ ಮೊದಲನೆಯ ಪುಸ್ತಕವೊಂದು ಮಾತ್ರ ಇದಕ್ಕೆ ಅಪವಾದವೆಂದು ಹೇಳಬಹುದು).

* * *

ಒಡಪುಗಳಿಂದಲೆ ಸಾಹಿತ್ಯವು ಆರಂಭವಾಗಿ ಒಡಪುಗಳಲ್ಲಿಯೆ ಅದರ ಕೊನೆ-ಅದರ ಗೊನೆ, ಎಂದೂ ಒಂದು ಬಗೆಯಿಂದ ಹೇಳಬಹುದಾಗಿದೆ. ಒಡಪುಗಳನ್ನರಿಯದ ಜನಾಂಗವಿಲ್ಲ; ಒಡಪುಗಳಿಲ್ಲದ ಭಾಷೆಯಿಲ್ಲ. ಬಾಲ ಭಾವದ ಒಡನಾಟಗಳಲ್ಲಿ ಒಡಪುಗಳಿಗಿರುವ ನಿಶ್ಚಿತ ಸ್ಥಾನವನ್ನು ಕಂಡು, ಮಾನವ ಸಮಾಜದ ಬಾಲ್ಯಾವಸ್ಥೆಯೆ ಒಡಪುಗಳ ಹುಟ್ಟಿಗೆ ಕಾರಣವೆಂದು ಕೆಲವರ ಅಭಿಪ್ರಾಯ. ಆದರೆ ಇದು ಸಂಪೂರ್ಣ ಸತ್ಯವಲ್ಲ. ಮುಗ್ಧಬಾಲರ ಎಳೆಮಾತಿನಲ್ಲಿ ಒಡಪುಗಳಿರುವಂತೆ ಪರಿಣತಪ್ರಜ್ಞರ ಮಹಾವಾಕ್ಯಗಳೂ ಅಂದಚೆಂದದ ಒಡಪಿನ ನುಡಿಗಳಾಗಿರುವುದು ಅನುಭವಕ್ಕೆ ಬರುತ್ತದೆ.

ಬಯಲಿಗಿದ್ದುದನ್ನು ಬಚ್ಚಿಟ್ಟು ಕಣ್ಣುಮುಚ್ಚಾಲೆಯಾಟವನ್ನು ಆಡುವ ಮನೋಭಾವವು ಮಕ್ಕಳ ಒಡಪುಗಳಲ್ಲಿ ಕಾಣಬರುತ್ತದೆ. ಇದು ಹುಡುಗರ ಆಟ. ಹುಡುಗಾಟ-ವಿನೋದ. ವಿನೋದಕ್ಕಾಗಿ -ಸುಖ-ಸಂಕಥಾ ವಿನೋದಕ್ಕಾಗಿ ಇವು ಹುಟ್ಟಿದುವು. ಸಾಹಿತ್ಯಸೃಷ್ಟಿಯ ಉಗಮಸ್ಥಾನವು ಇದೊ ಇಲ್ಲಿಯೆ. ಈ ತೆರನಾದ ಒಡಪು, ಸಾಹಿತ್ಯದ ಚಿಗುರು; ಎಳೆದಳಿರು. ಆದರೆ, ಸಾಹಿತ್ಯದ ಕೊನೆಯಲ್ಲಿರುವ ಒಡಪುಗಳ ಬಗೆಯೆ ಬೇರೆ. ಅವು ಬರಿಯ ಆಟಕ್ಕಾಗಿ ಹುಟ್ಟಿದುವಲ್ಲ; ಆಟದಲ್ಲಿ ಹೇಳಿದುವೂ ಅಲ್ಲ, ಆಳವಾದ ಅನುಭವದ ತಿರುಳಿನ ನುಡಿಗಳವು. ಆತ್ಯಂತಿಕ ಸತ್ಯದ ಪರಮ ಸ್ವರೂಪವನ್ನು ಯಥಾರ್ಥವಾಗಿ ವರ್ಣಿಸಲು ಅವಶ್ಯವಾದ ಅ-ನಿವಾರ್ಯವಾದ ವಚನಗಳವು.ಇದುವೆ ಸಾಹಿತ್ಯಸೃಷ್ಟಿಯ ಚರಮಸೀಮೆ (ಉದಾ: ವೇದ, ಉಪನಿಷತ್ತುಗಳ ಹಲವು ಮಂತ್ರಗಳು); ಇದುವೆ ಕಲೆಯ ಪರಮಾವಧಿ (ಉದಾ: ದೇವತಾಮೂರ್ತಿನಿರ್ಮಾಣ ಮುಂತಾದ ಒಡಪಿನಂದದ ಕೆಲಸ); ಏಕೆಂದರೆ ಸ್ವಯಂ ಸತ್ಯವೆಂಬುದೆ ಒಂದು ಒಡಪವಾಗಿದೆ. 'ಸತ್ಯಸ್ಯಾಪಿ ಹಿತಂ ಮುಖಂ'; ಸತ್ಯವು ಸ್ವಯಂವ್ಯಕ್ತವಾಗಿರುತ್ತದೆಂಬುದು ನಿಜವಿದ್ದರೂ ಎಲ್ಲರಿಗೂ ಅಲ್ಲ; 'ತಿಳಿ' ಗಣ್ಣಿನವರಿಗೆ; ಕೊನೆಯ ಈ ಒಡಪನ್ನು ಒಡೆವ ಜಾಣ್ಮೆಯಿದ್ದವರಿಗೆ.

'ಮೂರು ಕಣ್ಣುಂಟು, ಮುಕ್ಕಣ್ಣನಲ್ಲ; ನಾರುಡುಗೆಯುಂಟು, ತಾಪಸಿಯಲ್ಲ; ಬಾನಂಗಳದಲ್ಲುಂಟಾದರೂ ಹಕ್ಕಿಯಲ್ಲ, ಎಂದು ಮುಂತಾಗಿ ತೆಂಗಿನಕಾಯನ್ನು ಬಣ್ಣಿಸಿದುದು ಹುಡುಗರ ನಗೆಯಾಟದ ಮಾತು. ಆದರೆ 'ಸಹಸ್ರಶೀರ್ಷಃ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' ಎಂಬುದು ಕವಿಯೂ ದೃಷ್ಟಾರನೂ ಆದ ವೈದಿಕ ಋಷಿಯ

ಅನುಭಾವದ ನಿರ್ವಚನ, ಮುಂಡಕೋಪನಿಷತ್ತಿನಲ್ಲಿ ಬಂದಿರುವ 'ದ್ವಾಸುಪರ್ಣಾಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ....' ಎಂಬ ಸತ್ಯಸಾಕ್ಷಾತ್ಕಾರದ ವರ್ಣನೆಯೆ ಒಂದು ಸೊಗಸಾದ ಒಡಪು ಆಗಿ ಪರಿಣಮಿಸಿದೆ. ಒಳಗಣ್ಣಿಗೆ ಹೊಳೆಹೊಳೆವ ಶಾಶ್ವತ ಸತ್ಯವನ್ನು ಹೊರಗಣ್ಣಿಗೂ ಕಾಣುವಂತೆ ರೂಪ ಆಕಾರಗಳಿಂದ ಚಿತ್ರಿಸಬೇಕೆಂಬ ಪ್ರಯತ್ನದಲ್ಲಿ ಬ್ರಹ್ಮ, ಅರ್ಧನಾರೀ ನಟೇಶ್ವರ, ಲಕ್ಷ್ಮಿ ಮೊದಲಾದ ದೇವತಾ ಮೂರ್ತಿಗಳು. ಅನಿವಾರ್ಯವಾಗಿ ಒಡಪಿನಂದದಲ್ಲಿ ರೂಪಗೊಂಡಿರುವವು.

ಶರಣರು ಮತ್ತು ದಾಸರ ವಚನ ಮತ್ತು ಹಾಡುಗಳಲ್ಲಿ ಇದೇ ಬಗೆಯ ಸೊಗಸಾದ ಎಷ್ಟೋ ಒಡಪುಗಳುಂಟು. ಗುಗ್ಗುಳ (ಶ್ರೀವೀರಭದ್ರನದೊಂದು ಪೂಜಾಪದ್ಧತಿ)ದಲ್ಲಿ ಹೇಳುವ ವಚನಗಳಿಗೆ ಒಡಪುಗಳೆಂದೇ ಹೆಸರುಂಟು. ಆದರೂ ವಚನಗಳೆಲ್ಲವೂ ಒಡಪುಗಳಲ್ಲ. ಅಲ್ಲಮಪ್ರಭುವಿನಲ್ಲಿ ಮಾತ್ರ ಒಡಪಿನಂದವಿಲ್ಲದ ವಚನಗಳು ಬಹಳ ಕಡಿಮೆ. ದಾಸರಲ್ಲಿ ಕನಕನ 'ಮುಂಡಿಗೆ'ಗಳು ಸುಪ್ರಸಿದ್ಧ. ಒಡಪುಗಳು ಹುರುಳಿಲ್ಲದ ಮಾತಿನ ಕಗ್ಗಂಟುಗಳಾಗಲಾಗದು; ಬರಿಯೆ ಶಬ್ದಗಳ ಜಂಜಾಲವಾಗಿರಬಾರದು. ಸತ್ಯಸಾಕ್ಷಾತ್ಕಾರದಿಂದುಂಟಾದ ಸ್ಫೂರ್ತಿಯಲ್ಲಿ ಅಂತಃಕರಣದಿಂದ ಹೊರಹೊಮ್ಮಿದ ಮಾತು ಒಡಪಿನಂತೆ ಕಾಣಿಸಿಕೊಂಡರೂ ಅದು ಸಹಜಮನೋಹರವಾಗಿರುವುದು ನಿಶ್ಚಿತ. ಆದರೆ, ಎಷ್ಟೋ ಒಡಪುಗಳು, ಅರ್ಥವನ್ನು ಬುದ್ಧಿಪುರಸ್ಸರವಾಗಿ ಬಚ್ಚಿಡುವುದಕ್ಕಾಗಿಯೆ ಬರೆದಂತೆ ಇರುವವು. ಇಂತಹವುಗಳಿಗೆ ಸಾಹಿತ್ಯದ ಗೊನೆಯೆನ್ನಲಾಗದು. ಇವು ಸಾಹಿತ್ಯದ ಕೊನೆ ಎಂದರೆ ಸಾವು. ತಿಣುತಿಣುಕಿ ಬರೆದ ಒಡಪಿನ ಎಷ್ಟೋ ವಚನಗಳೂ, ಕವಿತೆಗಳೂ, ಹಾಡುಗಳೂ ನಮ್ಮ ಹಿಂದಿನ ಸಾಹಿತ್ಯದಲ್ಲುಂಟು.

ಕಂಡುದಕ್ಕಿಂತಲೂ ಕಾಣದಿದ್ದುದರ ಹಂಬಲ ಹೆಚ್ಚು ಮಾನವನಿಗೆ. ಇರುವುದಕ್ಕಿಂತಲೂ ಬರುವುದರ ಎಣಿಕೆಯೇ ಎಣಿಕೆ ಜನಗಳಿಗೆ. ಈ ಸ್ವಭಾವವವು ಒಂದು ಬಗೆಯಿಂದ ಮಾನವನ ಪ್ರಗತಿಗೆ ಕಾರಣವಾಗಿದೆ. ನಮ್ಮ ಜ್ಞಾನಕ್ಷೇತ್ರವು ವಿಸ್ತೀರ್ಣವಾದುದೂ ಇದರಿಂದಲೆ. ಎಲ್ಲ ಹೊಸ ಶೋಧಗಳ ಉಗಮವು ಇಲ್ಲಿಯೆ ಇದೆ. ಮಕ್ಕಳ ಒಡಪುಗಳ ಕಣ್ಣ ಮುಚ್ಚಾಟದಲ್ಲಿ ಈ ಭಾವನೆ ಮನೆಮಾಡಿಕೊಂಡಿದೆ. ಒಡಪುಗಳನ್ನು ಕೇಳುವುದು, ಅವುಗಳ ಅರ್ಥವನ್ನು ಬಿಡಿಸಿಹೇಳುವುದಕ್ಕೆ ಪ್ರಯತ್ನಿಸುವುದು ಇದರಲ್ಲಿ ಮಕ್ಕಳಿಗೆ ಒಂದು ಹಿಡಿಸಲಾರದ ಹಿಗ್ಗು.

ಏಕೆ ಹಿಗ್ಗೊ? ಮಕ್ಕಳು ಅದನ್ನು ಸಂಪೂರ್ಣವಾಗಿ ಅರಿಯವು. ಒಡಪುಗಳಿಗೆ ಮಕ್ಕಳು ಮನಸೋತುದಂತೂ ನಿಜ, ಹೇಗೂ ಒಡಪುಗಳ ಕಡೆಗೆ ಮಕ್ಕಳ ಸ್ವಾಭಾವಿಕವಾದ ಒಲವು. ಇಂತಹ ಈ ಸ್ವಾಭಾವಿಕ ಒಲವಿನ ಲಾಭವನ್ನೆ ಪಡೆದು, ಒಡಪುಗಳ ನಿಮಿತ್ತದಿಂದ, ಮಕ್ಕಳಲ್ಲಿ ಸುಪ್ತಸ್ಥಿತಿಯಲ್ಲಿರುವ ಕೆಲವು ಒಳ್ಳೊಳ್ಳೆಯ ಗುಣಗಳು ಚೇತರಿಸಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ಎಷ್ಟು ಒಳ್ಳಿತ್ತಾದೀತು! ಒಡಪುಗಳಲ್ಲಿ ಅಡಗಿರುವ ಅರ್ಥವನ್ನು ಒಡೆದು ನೋಡಬೇಕೆಂಬ ಕುತೂಹಲದಲ್ಲಿಯೆ ಆರಂಭದ ಆಕರ್ಷಣವು ಅಡಕವಾಗಿದೆ. ಒಂದು ಒಡಪಿನ ಗುಟ್ಟನ್ನು ಅರಿತುಕೊಳ್ಳಲು ಹಲವು ಬಗೆಯಾಗಿ ಅರೆದು ನೋಡಬೇಕಾಗುವುದು; ಒರೆದು ನೋಡಬೇಕಾಗುವುದು. ಪ್ರೌಢರಾದಾಗ ಯಾವುದೊಂದು ಹೊಸಸಂಗತಿಯ ಸತ್ಯಾಸತ್ಯತೆಯನ್ನು ನಿರ್ಧರಿಸಲು ನಡೆಯಿಸಬೇಕಾದ ತುಲನಾತ್ಮಕ ವಿಚಾರ, ವಿಮರ್ಶೆಗಳ ಆರಂಭದ ಪಾಠಗಳು, ಚಿಕ್ಕಂದಿನ ಈ ಒಡಪುಗಳ ರಹಸ್ಯಭೇದನ ಸಮಯದಲ್ಲಿ ಹುಡುಗರಿಗೆ ದೊರೆಯುತ್ತಿರುತ್ತವೆ. ಒಂದು ಒಡಪಿನ ಉತ್ತರವನ್ನು ಕಂಡುಹಿಡಿಯುವಾಗ ಮಕ್ಕಳ ಕುತೂಹಲವು ಕೆರಳುತ್ತದೆ. ಕುತೂಹಲ-ಜಿಜ್ಞಾಸೆ-ಲವಲವಿಕೆಯೆ ಎಲ್ಲ ತಿಳಿವಿನ ತಾಯಿ. ಅಕಾಲದಲ್ಲಿ ಲವಲವಿಕೆಯು ಕಡಿಮೆಯಾಗುವುದು ಪ್ರಾಣಪುರುಷನ ಅನಾರೋಗ್ಯದ ಲಕ್ಷಣ. ಮಕ್ಕಳ ಕುತೂಹಲವನ್ನು ಜಾಗ್ರತಗೊಳಿಸುವ ಸಾಮರ್ಥ್ಯವು ಒಡಪುಗಳಲ್ಲಿ ಬೇಕಾದಷ್ಟಿದೆ. ಒಡಪುಗಳ ಉತ್ತರವನ್ನು ಕಂಡುಹಿಡಿವ ಪ್ರಯತ್ನದಲ್ಲಿ ಹುಡುಗರಲ್ಲಿ ಸಂಶೋಧಕಶಕ್ತಿಯೂ ಮೆಲ್ಲನೆ ತಲೆದೋರುವುದು; ಸೂಕ್ಷ್ಮ ನಿರೀಕ್ಷಣ, ತುಲನಾತ್ಮಕ ವಿಚಾರಗಳ ಆವಶ್ಯಕತೆಯೂ ಉಂಟಾಗುವುದು. ಉದಾಹರಣೆಗಾಗಿ 'ಮಾಟನ್ನ ಮಗು ಮನೆ ಕಾಯುವುದು' ಎಂಬ ಒಡಪನ್ನೆ ತಕ್ಕೊಳ್ಳಬಹುದು. ಈ 'ಮಾಟನ್ನ ಮಗು' ಆವುದು? ಎಂಬುದನ್ನರಿಯಲು ಹುಡುಗರಿಗೆ ಹಲವು ದಿಕ್ಕಿನಲ್ಲಿ

ಹೊಕ್ಕು ಸ್ವಲ್ಪ ಎದೆಗಾರಿಕೆಯಿಂದಲೆ, ತಮಗೆ ತೋಚುವ ಬೇರೆ ಬೇರೆ ಸಂಗತಿಗಳಲ್ಲಿ ಟೊಳ್ಳು ಯಾವುದು, ಗಟ್ಟಿ ಯಾವುದು ಎಂಬುದನ್ನು ನಿಶ್ಚಯಿಸಿಕೊಳ್ಳಲು ಮನಸಿನ ತಕ್ಕಡಿಯಲ್ಲಿಟ್ಟು ತೂಕ ಮಾಡಬೇಕಾಗುವುದು; ತಮಗೆ ಬೇಕಾಗಿರುವ ಉತ್ತರಕ್ಕೆ ತನಗೆ ಹೊಳೆಯುವ ಸಂಗತಿಯು ಸರಿಹೋಗುವುದೆ ಎಂಬುದನ್ನು ವಿಮರ್ಶಿಸಬೇಕಾಗುವುದು. ಈ ಮನಸ್ಸಿನ ತಿಕ್ಕಾಟದಲ್ಲಿ ವಿಚಾರಶಕ್ತಿಯು ಚೇತರಿಸಿಕೊಂಡು ಏಳುವುದು. ತನ್ನ ಒಡಪಿನ ಉತ್ತರಕ್ಕೆ ಅಲ್ಪಸ್ವಲ್ಪ ಹೋಲಿಕೆಯಾಗುವ ಹಲವು ಬಗೆಯ ದೃಶ್ಯಗಳನ್ನು ಕಲ್ಪಿಸಿಕೊಂಡು ಕಣ್ಣೆದುರಿಗೆ ಆ ಚಿತ್ರಗಳನ್ನು ನಿಲ್ಲಿಸಿಕೊಳ್ಳ ಬೇಕಾಗುವುದರಿಂದ ಕಲ್ಪನಾಶಕ್ತಿಯು ಕುಡಿವರಿದು ಹಬ್ಬಬೇಕಾಗುವುದು. 'ಮನೆ ಕಾಯುವ ಮಾಟನ್ನ ಮಗು' ಯಾರು? ಪುಟ್ಟದೊಂದು ಪೋರನಾಗಿರಬಹುದೆ? ಉಂಹುಂ. ಒಡಪುಗಳಲ್ಲಿ ಇದ್ದುದನ್ನು ಇದ್ದಂತೆ-ಇಷ್ಟು ಬಿಚ್ಚುಮಾತಿನಲ್ಲಿ ಹೇಳಿರುವ ಸಂಭವವುಂಟೆ? ಹಾಗಾದರೆ ಇನ್ನೇನಿರಬಹುದು? ಮಾಟನ್ನ ನಾಯಿಯೆ? ಅದು ಅಸಂಭವ. ಏಕೆಂದರೆ ಎಲ್ಲ ನಾಯಿಗಳೂ ಮಾಟಾಗಿರುವವೆಂಬ ನಿಶ್ಚಯವಿಲ್ಲ. ಹಾ-ಗಾ-ದ-ರೆ-, ಓ! ಸರಿ, 'ಕೀಲಿ'.

ಕಲ್ಪನಾಶಕ್ತಿಯೆ ಕವಿತ್ವದ ತಾಯಿ, ಭಾವನಾಶಕ್ತಿ ಇಲ್ಲವೆ ಚಿತ್ರಕಶಕ್ತಿಯೆಂದೂ ಇದನ್ನು ಕರೆವುದುಂಟು. ಇಂಗ್ಲಿಷಿನ 'Imagination' ಎಂಬುದರ ಪ್ರತಿಶಬ್ದಗಳಿವು. ಒಡಪುಗಳ ನೆಪದಿಂದ ಮಕ್ಕಳ ಮನಃಶಕ್ತಿಯೊಳಗಣ ಈ ವಿಶಿಷ್ಟ ಸಾಮರ್ಥ್ಯವನ್ನು ಕೊನರಿ ಪಡಲುವಡಿವಂತೆ ಮಾಡಿಕೊಳ್ಳುವುದು ಜಾಣರಾದ ತಾಯಿತಂದೆಗಳ ಕೈಯಲ್ಲಿದೆ; ಉಪಾಧ್ಯಾಯರ ಕೈಯಲ್ಲಿದೆ. ಕೆಲವು ಒಡಪುಗಳನ್ನು ಕಲಿತುಕೊಂಡ ಬಳಿಕ ಹುಡುಗರು ಅಂತಹ ಬೇರೆ ಹೊಸ ಒಡಪುಗಳನ್ನು ತಾವೇ ಕಟ್ಟಿ ಹೇಳಲು ಹವಣಿಸುವುದುಂಟು. ಬಾಲಕರ ಈ ಬಗೆಯ ಒಲವಿನ ಲಾಭ ಪಡೆದು ಅವರಿಗೆ ಒಂದು ಧಾಟಿಯಲ್ಲಿ, ಒಂದು ಛಂದದಲ್ಲಿ ಮಾತುಗಳನ್ನು ಹೊಂದಿಕೆಯಾಗುವಂತೆ ಹೆಣೆಯುವುದಕ್ಕೆ ಪ್ರೋತ್ಸಾಹಿಸಬೇಕು. ಈ ತೆರನಾಗಿ ಕವಿತೆಯ ರಾಜ್ಯದಲ್ಲಿ ಪ್ರವೇಶ ದೊರೆಯುವುದಕ್ಕಾಗಿ ಮಾಡಿದ ಪ್ರಯತ್ನದ ಫಲವಾಗಿ ಕೊನೆಗೆ ಒಳ್ಳೆಯ ಗದ್ಯಶೈಲಿಯ ಕೆಲವೊಂದು ಪರಿಚಯವಾದರೂ ಆಗದೆ ಇರಲಾರದು.

ಪ್ರೌಢರಾದಂತೆ ನಮ್ಮೊಳಗಣ ಈ ಭಾವನಾಶಕ್ತಿಯು, ಸಕಾಲದಲ್ಲಿ ಸರಿಯಾಗಿ ಪೋಷಣೆಯಿಲ್ಲದು ದರಿಂದಲೂ, ಮೇಲಾಗಿ ಲೋಕವ್ಯವಹಾರದೊಳಗಿನ ಕಠೋರವಾದ ವಸ್ತು-ಸ್ಥಿತಿಯ ಉಗ್ರವಾದ ಆಘಾತ ಗಳಿಂದಲೂ ನುಚ್ಚುನುರಿಯಾಗಿ ಹೋಗುವುದುಂಟು. ಮಕ್ಕಳಿಗೆ, ಭಾವನಾಶಕ್ತಿಯ ಅರುಣೋದಯ ಕಾಲದ ಹೂಬಿಸಿಲಿನಲ್ಲಿ (ವಯಸ್ಕರಿಗೆ ನಂಬುಗೆ ನೆಚ್ಚಿಕೆಯಿಲ್ಲದುದೆಂದೂ ಮಾಟ-ಮೋಸಗಳಿಂದ ತುಂಬಿದುದೆಂದೂ ಕಾಣುವ ನೀರಸವಾದ) ಜಗತ್ತೇ 'ರಾಗರಸದಿಂದ ತುಂಬಿರ್ಪ' ರಮ್ಯವಾದ ಒಂದು ಆಡುಂಬೊಲ; ಹಿಗ್ಗಿನ ಬುಗ್ಗೆ; ನಲವಿನ ನೆಲೆವೀಡು; ನಂಬುಗೆ ನೆಚ್ಚಿಕೆಯ ತಾಯ್ನಾಡು. ತಾಯಿ-ಮಕ್ಕಳ ಪ್ರೀತಿ ವಿಶ್ವಾಸಗಳ ಅಮೃತಮಯ ವಾತಾವರಣದಿಂದ ತುಂಬಿದ ಆ ಬಾಲಲೋಕದಲ್ಲಿ ಅವಿಶ್ವಾಸದ ಹಾಲಾಹಲದ ದುರ್ಗಂಧಕ್ಕೆ ಎಲ್ಲಿಯೂ ಇಂಬಿಲ್ಲ. ಮಕ್ಕಳು ಒಲವಿನ ಒಡನಾಡಿಗಳೊಡನೆ ಕೂಡಿ ನಲಿದಾಡುವ ಆ ಸುವರ್ಣ ಮುಹೂರ್ತದಲ್ಲಿ ಸ್ವರ್ಗವೇ ಭೂಲೋಕಕ್ಕೆ ಅವತರಿಸಿರುತ್ತದೆ: ಕಾಮಧೇನು, ಕಲ್ಪವೃಕ್ಷಗಳು ಇವರ ಕ್ರೀಡಾಂಗಣದಲ್ಲಿ ಬಂದು ನೆಲೆಸಿರುತ್ತವೆ; ಸಂಜೀವನಶಕ್ತಿಯು ಇವರ ತುದಿನಾಲಗೆಯಲ್ಲಿರುವ ಅಮೋಘವಾದ ಸಿದ್ಧಮಂತ್ರ. ಮಕ್ಕಳ ಆಟದಲ್ಲಿ ಮಣ್ಣು, ಮರದಿಂದ ಮಾಡಿದ ಬೊಂಬೆ ಮಾತನಾಡಬಲ್ಲುದು. ಬೊಂಬೆ-ಬೊಂಬೆಗಳು ಮದುವೆ ಮಾಡಿಕೊಳ್ಳುವುವು. ಕಲ್ಲ ಹಸವು ಬೇಕಾದಷ್ಟು ಹಾಲು ಕರೆಯಬಲ್ಲುದು. ಮದುವೆಗೆ ಬಂದ ಬೀಗರು ಬಿಜ್ಜರು ಪಂಚಪಕ್ವಾನ್ನಗಳನ್ನುಂಡು ತಣಿದು ತೇಗುವರು. ನೀರು ತುಪ್ಪವಾಗುವುದು; ಮಣ್ಣು ಹೊನ್ನಾಗುವುದು. ತಮ್ಮ ಭಾವನಾಶಕ್ತಿಯ ಬಲದಿಂದ ಪ್ರತಿಸೃಷ್ಟಿಯನ್ನೇ ನಿರ್ಮಿಸುವ ಅಪರಬ್ರಹ್ಮಸ್ವರೂಪಿಗಳಾದ ಮಕ್ಕಳ ಈ ರಾಜ್ಯದಲ್ಲಿ ಅವರು ಬಯಸುವುದೊಂದೇ ತಡ; ಅದು ಆಗಲೆ ಸಿದ್ಧ! ಅಂತಹ ವಾಕ್ಸಿದ್ಧಿಯು ಇವರಿಗೆ. ಆದರೆ, ವಯಸ್ಸು ಹೆಚ್ಚಾದಂತೆ ಚಿಕ್ಕಂದಿನ ಈ ಬಗೆಯ ನಿರುಪಮವಾದ ದೈವೀ ಆನಂದಕ್ಕೆ ನಾವು ಎರವಾಗುತ್ತೇವೆ. ಫಲ-ನಿರಪೇಕ್ಷವಾದ ಆ ಸ್ವರ್ಗೀಯ ಆನಂದವನ್ನು ಅನುಭವಿಸುವುದಕ್ಕೆ ಅಸಮರ್ಥರಾಗುತ್ತೇವೆ. ತಿಳಿಗೇಡಿಗಳೆನಿಸುವ ಎಳೆಯ ಮಕ್ಕಳೊಡನೆ

ಸರಸಸಲ್ಲಾಪಗಳನ್ನು ನಡಿಸಬಲ್ಲ ಮಣ್ಣು, ಕಲ್ಲು (ಬೊಂಬೆಗಳು) ವ್ಯವಹಾರಜ್ಞರೆನಿಸುವ ವಯಸ್ಕರೊಡನೆ ಮೌನ ತಾಳುತ್ತವೆ! ಸರಳ ಮನಸಿನ ಮಕ್ಕಳ ರಾಜ್ಯದಲ್ಲಿ ನಿರ್ಜೀವ ವಸ್ತುಗಳೂ ಜೀವ ತಾಳುತ್ತವೆ; ವಕ್ರವಿಚಾರದ ಹಿರಿಯರ ಆಡಳಿತದಲ್ಲಿ ಜೀವಂತ ಪ್ರಾಣಿಗಳೂ ನಿರ್ಜೀವಿ ಯಂತ್ರಗಳಂತೆ ಬಾಳಬೇಕಾಗುತ್ತದೆ. ಲೋಕಕ್ಕೆ ಬುದ್ಧಿಶಕ್ತಿಯು ಸ್ವಲ್ಪ ಕಡಿಮೆಯಿದ್ದರೆ ಅಷ್ಟು ಕೇಡು ಆಗಲಿಕ್ಕಿಲ್ಲ; ಆಗಿಲ್ಲ. ಆದರೆ, ಭಾವನಾಶಕ್ತಿಯ ಲೋಪದಿಂದ ಅಪಾರವಾದ ಹಾನಿಯಾಗಿದೆ; ಆಗುತ್ತಲಿದೆ. ಭಾವುಕನು ಹೆರವರನ್ನು ತನ್ನಂತೆ ಬಗೆಯಬಲ್ಲನು. ಬರಿ ಬುದ್ಧಿವಂತನು ಹೆರವರ ಸುಖದುಃಖಗಳನ್ನು ಆತ್ಮೀಯತೆಯಿಂದ ಅರಿತುಕೊಳ್ಳಲು ಅಸಮರ್ಥನಾಗಿರುತ್ತಾನೆ. ಬುದ್ಧಿಯು ಪೃಥಕ್ಕರಣಮಾರ್ಗದಿಂದ ಮನುಷ್ಯನನ್ನು ಸತ್ಯದ ಹತ್ತಿರ ಒಯ್ಯುತ್ತದೆ. ಭಾವನೆಯು ಸಮ್ಯಕ್‌ದೃಷ್ಟಿಯಿಂದ ಸತ್ಯದ ಅನುಭಾವವನ್ನು ನೀಡುತ್ತದೆ. ಬುದ್ಧಿಯು ಬಿಡಿಸುವುದು; ಭಾವನೆ ಬೆರಸುವುದು. ಬುದ್ಧಿ ದುಃಖವನ್ನು ದೂರಮಾಡಿದರೆ ಭಾವನೆ ಸುಖವನ್ನೇ ಕೊಡುವುದು. ಬಾಲರಿಗೆ ವಿಶ್ವವನ್ನೆಲ್ಲ ಸುಮಧುರವಾಗಿ ತೋರಬಲ್ಲ ಆ ಭಾವನಾಶಕ್ತಿಯ ಹೊರಲೇಪದಿಂದ ಸಿದ್ಧವಾದ ಒಡಪುಗಳು - ಒಳವಿಷಯವು ಎಷ್ಟೇ ಕಿರುಕುಳವಾಗಿದ್ದರೂ-ಬಹಳ ಸ್ವಾರಸ್ಯವುಳ್ಳವು ಗಳಾಗಿರುತ್ತವೆ. ಒಡಪುಗಳಲ್ಲಿಯೂ ಕಾಲಿಲ್ಲದುವು ಹಾರಾಡಬಲ್ಲುವು. ಬಾಯಿಯಿಲ್ಲದುವು ಮಾತನಾಡಬಲ್ಲುವು. ತೂತು ಕಣ್ಣಾಗುವುವು. ಅಷ್ಟೆ ಏಕೆ? ಬೇಕಾದ ವಸ್ತುವು ಬೇಕಾದ ರೂಪ ಆಕಾರವನ್ನು ತಾಳಬಹುದು; 'ಕೆಂದೆತ್ತು ಕೆರೆಯಲ್ಲಿ ಈಜುವುದು' ಎಂಬಲ್ಲಿ ಕರಿವ ಕಡಬು ಕೆಂದ ಎತ್ತು ಆಯ್ತು. ಕಡಾಯಿ ಕೆರೆಯಾಯ್ತು. ಅದರ ತೇಲಾಟವು ಈಜಾಟವಾಗಿ ಪರಿಣಮಿಸಿತು. 'ಅಡವಿಯೊಳಗಿರೊ ಗಿಡ ಗೋವಿಂದಾ' ನಿನಗಾರಿಟ್ಟರೊ ಸಾದಿನ ಬಟ್ಟು?' ಗುಂಜಿ ಮತ್ತು ಅದರ ಮೇಲಣ ಕಪ್ಪು ಚುಕ್ಕೆ; ಆಯ್ತುದೆ. ಇಷ್ಟೇ ವಸ್ತು. ಅದಕ್ಕೆ ಜೀವಕಳೆ ತುಂಬಿ ಹೇಳುವ ಬಗೆ ಎಷ್ಟು ಸರಸವಾಗಿದೆ! ಇಂತಹ ರೂಪಕಾದಿ ಅಲಂಕಾರಗಳ ಆಗರವೇ ಆಗಿವೆ ಒಡಪುಗಳಿವು? ಕಲ್ಪನಾ ಚಮತ್ಕೃತಿ ಇಲ್ಲದ ಒಡಪೇ ದೊರೆಯದು. ಅಥವಾ ಚಮತ್ಕೃತಿ ಇಲ್ಲದೆ ಒಡಪೇ ಆಗದು. ರೂಪಕವು ಒಡಪಿನ ಒಡಲು; ವಿರೋಧಾಭಾಸವು ಅದರ ಉಸಿರು. ಶ್ಲೇಷವು ಆ ಉಸುರಿನ ಕಂಪು. 'ನೀ ಹೇಳೋದೂ ಅಲ್ಲ; ನಾ ತರೋದೂ ಅಲ್ಲ; ದುಡ್ಡು ಕೊಟ್ಟರೆ ಪೇಟೆಯಲ್ಲಿ ಸಿಕ್ಕೋದೂ ಅಲ್ಲ' ಈ 'ಅಲ್ಲ'ದ ಸವಿ, ಬಲ್ಲವನೆ ಬಲ್ಲ. ಅರ್ಥ ಹೊಳೆಯದೆ ಸವಿ ಗೊತ್ತಾಗದಿದ್ದರೆ ಕಾರಕಾರವಾಗಿ ಕೆರಳಲೂಬಹುದು. 'ಕಟ್ಟಿರುವೆ ಕರುವ ಹಾಕಿ, ಎಂಟು ಮಗಿ ಹಾಲ ಹಿಂಡಿ, ರೆಂಟೆ ಕುಂಟೆಯಿಂದ ಬೆಣ್ಣೆಯ ತೆಗೆಯಲು ವಿಜಾಪುರದವರು ಇದೇನು ಸೋಜಿಗವೆಂದು ತಗಣಿಗೆ ಮುಗುದಾಣ ಹಾಕಿಕೊಂಡು ನೋಡಬಂದರಂತೆ!' ಇದರೊಳಗಿನ ಚಮತ್ಕೃತಿಯು ಎಷ್ಟು ಚಿತ್ತಾಕರ್ಷಕವಾಗಿದೆ! ಈ ಒಡಪವನ್ನು ಕಟ್ಟಿದವನಿಗೂ ಈ ಕಲ್ಪನಾ ವೈಚಿತ್ರ್ಯದ ಆತ್ಮವಿಶ್ವಾಸವಿದೆ. ಅದನ್ನು ಆತನು 'ತಗಣಿಗೆ ಮುಗುದಾಣ ಹಾಕಿ ನೋಡಬಂದರು' ಎಂಬ ಮಾತಿನಿಂದ ಹೊರಪಡಿಸಿದ್ದಾನೆ. 'ಕಟ್ಟಿರುವ ಕರುವ ಹಾಕುವುದೇನು? ಕರುವ ಹಾಕಿದರೂ ಕಡಿದು ಇರುವೆಯಂತಹ ಒಂದು ಹುಳು, ಹಸುವಿಗೂ ಅಸಾಧ್ಯವಾದಷ್ಟು ಎಂಟು ಮಗಿ ಹಾಲು ಹಿಂಡುವುದೇನು? ಆ ಹಾಲಿನ ಬೆಣ್ಣೆ ಮುದ್ದೆಯನ್ನು ರೆಂಟೆಕುಂಟೆಯಿಂದ ತೆಗೆಯುವುದೇನು? ಎಲ್ಲವೂ ಅದ್ಭುತರಮ್ಯ! ಸೃಷ್ಟಿಯಲ್ಲಿ ಎಂದೂ ಕಂಡು ಕೇಳದಿರುವ ಸೋಜಿಗದ ಆಗು (ಘಟನೆ) ಇದ್ದು; ಇಂತಹ ಸೋಜಿಗದ ಆಗನ್ನು ನೋಡುವುದಕ್ಕೆ ಹೋಗುವ ಬಗೆಯು ಅಷ್ಟೇ 'ಸೋಜಿಗದ್ದಾಗಿದೆ! ತಗಣಿಗೆ ಮುಗುದಾಣ ಹಾಕಿಕೊಂಡು ಹೊರಟರಂತೆ! ಹೇಗಿದೆ ಮಾತಿಗೆ ಮರುಮಾತು! ಮೊದಲನೆಯದು ಸರಿ ಇದ್ದರೆ, ಎರಡನೆಯದೂ ಸರಿ. ಮೊದಲನೆಯದು ಹುಡುಗರ ಆಟವಾಗಿದ್ದರೆ, ಎರಡನೆಯದೂ ಹುಡುಗಾಟ, ತೂಕಕ್ಕೆ ತೂಕ. ಒಟ್ಟಿನಲ್ಲಿ ಈ ಒಡಪು ಇದರ ಉತ್ತರವಾದ ಜೇನಿನಷ್ಟೇ ಸವಿಯಾಗಿಲ್ಲವೆ? ಇಂತಹ ಸೊಗಸಾದ ಒಡಪುಗಳ ಪರಿಚಯದಿಂದ ಬಾಲಕರ ಭಾವನಾಶಕ್ತಿಯು ಜಾಗ್ರತವಾಗಿ, ಅದು ಪರಿಪೋಷಿತವಾಗುವುದಕ್ಕೆ ಸಹಾಯವಾಗುವುದೆಂದು ಬೇರೆ ಹೇಳಬೇಕೆ? ಆದರೆ, ಇತ್ತೀಚಿಗೆ (ಶಾಲೆಯಲ್ಲಂತೂ ಎಂದೂ ಇಲ್ಲ!) ಮನೆಯಲ್ಲಿ, ಮಂದೆಯಲ್ಲಿ ಒಡಪುಗಳಿಗಿದ್ದ ಮೊದಲಿನ ಸ್ಥಾನವೂ ಇಲ್ಲದಾಗುತ್ತಿರುವುದರಿಂದ, ಈ ಒಡಪುಗಳಂತಹ ಏನಾದರೊಂದು ಉಪಾಯದಿಂದ

ಪೋಷಿಸದಿದ್ದರೆ, ಮಕ್ಕಳಲ್ಲಿರುವ ಭಾವನಾಶಕ್ತಿಯ ಅಂಕುರಗಳು ಸುರುಟಿಮುರುಟಿ ಹೋಗುವ ಹೆದರಿಕೆಯುಂಟಾಗಿದೆ.

ಮಾತುಮಾತಿಗೂ ಹೊಚ್ಚ ಹೊಸ ಬಗೆಯಿಂದ ಒಡಪುಗಳಲ್ಲಿ ವ್ಯಕ್ತವಾಗುತ್ತಲಿರುವ ಬಾಲ-ಪ್ರತಿಭೆಯು ಕೌತುಕಾಸ್ಪದವಾಗಿದೆ. 'ಬಂಗಾರದ ಗುಬ್ಬಿ ಬಾಲದಿಂದ ನೀರು ಕುಡಿಯುವುದು' ಎಂಬಲ್ಲಿ ದೀಪವನ್ನು, ಬಂಗಾರದ ಗುಬ್ಬಿಯೆಂದು ಭಾವಿಸಿದ್ದುದೂ, ಬತ್ತಿಯಿಂದ ಎಣ್ಣೆಯುಣ್ಣುವುದನ್ನು, ಬಾಲದಿಂದ ನೀರು ಕುಡಿಯುವುದೆಂದು ಕಲ್ಪಿಸಿದ್ದುದೂ ಎಷ್ಟು ಅಂದವಾಗಿದೆ! ಒಂದು ಸಾಮಾನ್ಯ ಸಂಗತಿಯನ್ನೆ ಭಾವನೆಯ ಪಟ್ಟಕ (Prizem) ದೊಳಗಿಂದ ನೋಡಿದರೆ ಎಷ್ಟು ಮನೋಹರವಾಗಿ ಕಾಣಬಲ್ಲುದೆಂಬುದಕ್ಕೆ ಒಡಪುಗಳೆ ಸಾಕ್ಷಿ. ಈಗ ತೆಂಗಿನಕಾಯನ್ನೆ ನೋಡಿ; ಎಷ್ಟು ಬಗೆಬಗೆಯಿಂದ ಅದು ಕಾಣಿಸಿಕೊಳ್ಳುವುದೆಂಬುದಕ್ಕೆ ತೆಂಗಿನಕಾಯ ಒಡಪುಗಳೆ ಸಾಕ್ಷಿ. ಒಂದೆರಡು ಮಾದರಿಗಳನ್ನು ನೋಡಬಹುದಿಲ್ಲಿ: 'ಕಪ್ಪೆ ಕಲಕದ ಬಾವಿ, ಏಡಿ ಮುಳುಗದ ಬಾವಿ, ಆಗಸದ ಬಾವಿ, ಆರಬಾವಿ' ಎಂಬುದು ಒಂದು ಒಡಪು. ಏಡಿಕಪ್ಪೆಗಳಂತಹ ಜಲಚರಗಳ ವಸತಿಯಿಂದ ಹೊಲಸಾಗದಿರುವ ಸ್ವಚ್ಛವಾದ ನೀರಿನ, ಆಕಾಶದ ಅಂತರಾಳದಲ್ಲಿರುವುದರಿಂದ ಮಣ್ಣು ಸಹ ಸೋಂಕದಿರುವ ಅಚ್ಚ ತಿಳಿನೀರಿನ 'ಅರಸು' (ಎಂದರೆ ಶ್ರೇಷ್ಠವಾದ ಬಾವಿಯು ಅದಾವುದೆಂದು ಇಲ್ಲಿ ಸೋಜಿಗ, ಕೌತುಕಗಳಿಂದ ಪ್ರಶ್ನಿಸಿದ್ದುಂಟು. 'ಮೀನು ಮುಟ್ಟದ ವಾರಿಯನು ದಾನವರ ವೈರಿ ತಾ ಮಾನವರಿಗಾಗಿ ಎತ್ತಿ ಹಿಡಿದಿಹನು; ಎಂಬುದು ಇನ್ನೊಂದು. ಭೂಲೋಕದ ನೀರು ನಿಜವಾಗಿ ಮಡಿ ನೀರು ಅಲ್ಲ; ಮೊಸಲದ ನೀರೂ ಅಲ್ಲ. ಏಕೆಂದರೆ ನೆಲದ ಮೇಲಣ ಬಾವಿಗಳಲ್ಲಿ ಕಪ್ಪೆ, ಏಡಿ, ಮೀನುಗಳು ಎಂಜಲಿಲ್ಲದ ನೀರೆ ದೊರೆಯದು, ಆದುದರಿಂದ ಪರಮಾತ್ಮನು 'ಮಾನವರಿಗಾಗಿ ಮೀನು (ಕೂಡ) ಮುಟ್ಟದ (ಮಡಿ) ನೀರನ್ನು ಎತ್ತಿ ಹಿಡಿದಿಹ'ನಂತೆ! 'ಎತ್ತಿ' ಹಿಡಿದುದರ ಕಾರಣವೇನಿರಬಹುದು? ದಾನವರು ತಕ್ಕೊಳ್ಳಬಹುದೆಂದೊ? ಹಾಗಿಲ್ಲದಿದ್ದರೆ 'ದಾನವರ ವೈರಿ, ಮಾನವರಿಗಾಗಿ ಹಿಡಿದಿಹನು' ಎಂಬ ಮಾತಿನ ಔಚಿತ್ಯವೇನು? ಇಂತಹ ಒಡಪುಗಳು ಇನ್ನೂ ಹಲವಿವೆ. ಒಡಪುಗಳಿಗೆ ಎಟಕದ ವಸ್ತುವೆ ಇಲ್ಲ. ಹೆಣ್ಣು-ಗಂಡು ಎಂಬ ಭೇದ ಭಾವವಿಲ್ಲ; ಮೇಲು-ಕೀಳು ಎಂಬ ಕ್ಷುದ್ರವಿಚಾರವಿಲ್ಲ. ಚರಾಚರ ಎಲ್ಲ ವಸ್ತುಗಳನ್ನು ಕುರಿತೂ ಒಡಪುಗಳುಂಟು. ಕಸದ ಪೊರಕೆಯಿಂದ ಸೂರ್ಯಚಂದ್ರರ ವರೆಗಿನ ಎಲ್ಲ ವಿಷಯಗಳ ಮೇಲೂ ಒಡಪುಗಳನ್ನು ಕಟ್ಟಿದ್ದುಂಟು; ಕಟ್ಟುವುದುಂಟು, ಇಂತೀ ಬಗೆಯಾಗಿ ಜಗತ್ತನ್ನು ನವೋನವ ಕಾವ್ಯಮಯ ದೃಷ್ಟಿಯಿಂದ ನೋಡುವ ಸಾಮರ್ಥ್ಯವುಳ್ಳ ಈ ಪ್ರತಿಭೆಯು ಅಭಿನಂದನೀಯವೂ ಅನುಕರಣೀಯವೂ ಆಗಿಲ್ಲವೆ?

ಒಳ್ಳೆಯ ಒಡಪುಗಳಲ್ಲಿ ಕಲ್ಪನಾಚಮತ್ಕೃತಿಯೊಂದೇ ಅಲ್ಲ; ನುಡಿಯ ಬೆಡಗೂ ಮನಸ್ಸನ್ನು ಸೆಳೆಯುವಂತಹದಾಗಿರುತ್ತದೆ. ಕೇವಲ ಕಲ್ಪನಾ ಚಮತ್ಕೃತಿಯೆ ಜೀವಾಳವಾಗಿರುವ ಒಡಪುಗಳೂ ಉಂಟು. ಅರ್ಥಕ್ಕೇ ಪ್ರಾಧಾನ್ಯವನ್ನಿತ್ತು ಒಡಪುಗಳನ್ನು ಕಟ್ಟಿ ಹೇಳುವುದುಂಟು. ಆದರೆ, ಅರ್ಥದೊಡನೆ, ಹೊಂದಿಕೆಯ ಮಾತುಗಳೂ ಇದ್ದರೆ ಒಡಪುಗಳ ಸೊಗಸು ಹೆಚ್ಚು. ಮಾತಿನ ಹೊಂದಿಕೆ ಇಲ್ಲದ, ಕಿವಿಗೆ ಇಂಪಾಗದ, ನುಡಿಗಡಣದಲ್ಲಿ ತಾಳ-ಮೇಳವಿಲ್ಲದ ಒಡಪನ್ನು ಕೇಳುವಾಗ ಮನಸ್ಸಿಗೆ ಅಷ್ಟು ಹಿತವೆನಿಸುವುದಿಲ್ಲ. 'ಕಚ್ಚಿದರೆ ಕಚ್ಚುವುದು ಕಿಚ್ಚಲ್ಲ, ಚೇಳಲ್ಲ' (ಮೆಣಸು) ಎಂಬ ಒಡಪಿನಲ್ಲಿ ಅರ್ಥವೈಚಿತ್ರ್ಯವು ವ್ಯಕ್ತವಾಗುತ್ತಿರುವಂತೆ, ಅನುಪ್ರಾಸದ ಮೂಲಕ ಮಾತಿನ ಜೋಡಣೆಯೂ ಚೆನ್ನಾಗಿ ಸಾಧಿಸಿದೆ. 'ಅಕಟಕ, ವಿಕಟಕ, ನಾಟಕ, ಚೋಟಕ, ನಿನ್ನ ನೋಡಿ ನನ್ನ ಜೀವ ಚುಟೂ ಚುಟೂ' ಎಂಬ ಒಡಪದಲ್ಲಿ ಅರ್ಥಚಮತ್ಕೃತಿಯ ಕೊರತೆಯಿದ್ದರೂ, ಶಬ್ದ-ಧ್ವನಿಯ ಮೂಲಕವಾಗಿಯೆ ಒಡಪು ಚಿತ್ತಾಕರ್ಷಕವಾಗುವಂತೆ. ಅರ್ಥವು ಹೊರಹೊಮ್ಮುವಂತೆ, ಮಾತುಗಳನ್ನು ನಿರರ್ಥಕವಾದರೂ, ಅರ್ಥಪೂರ್ಣವಾಗುವಂತೆ ಪೋಣಿಸಿದ್ದಾನೆ. 'ಅಕಟಕ......ಚೋಟಕ' ಎಂಬುವು ಯಾವ ಕೋಶಗಳಲ್ಲಿ ಏನೂ ಅರ್ಥವು ದೊರೆಯದ ಶಬ್ದಗಳಾದರೂ, ಹುಣಸೆಕಾಯ ಸವಿನೋಡಬೇಕು ಎಂದು ಹಾತೊರೆವ ಜೀವದ ಹಂಬಲವನ್ನು-'ಕಟಿಪಿಟಿ'ಯನ್ನು 'ಕಿಟಿಕಿಟಿ'ಯನ್ನು ವ್ಯಕ್ತಪಡಿಸುವ ಸಾಮರ್ಥ್ಯವು, ಮನಸಿನ ಆತುರವನ್ನು ಸ್ಪಷ್ಟಪಡಿಸುವ ಧ್ವನಿ. ಆ 'ಅಕಟಕ ವಿಕಟಕ....ಚುಟೂ ಚುಟೂ' ಎಂಬ ಮಾತಿನಲ್ಲಿ ಇದೆ

ಚಿಕ್ಕಂದು ಅಂದದ ಚೆಂದದ ಒಡಪುಗಳನ್ನು ಕಲಿತಿದ್ದರೆ, ಮಕ್ಕಳಿಗೆ ಶೈಲಿ ಎಂದರೆ ಏನು ಎಂಬುದರ ಅಲ್ಪಸ್ವಲ್ಪಾದರೂ. ಅರಿವು ಉಂಟಾಗುವುದಕ್ಕೆ ಇದರಿಂದ ಅನುಕೂಲವಾಗುವುದು. ಹಲವು ಒಡಪುಗಳಲ್ಲಿ ಕಾಣಬರುವ ಅನುಪ್ರಾಸಯುಕ್ತವಾದ ಶೈಲಿಯ ವೈಶಿಷ್ಟ್ಯವು ಅಭ್ಯಸನೀಯವಾಗಿದೆ. ವಚನಶೈಲಿಯ ಬಿಗುಪು ಅಥವಾ ಹುರಿಕಟ್ಟು ಒಡಪುಗಳಲ್ಲಿಲ್ಲವಾದರೂ, ಬಳಕೆಯ ಮಾತಿನ ಸೆಡಿಲನ್ನೂ ಅದರಲ್ಲಿ ಕಾಣಲು ಸಿಕ್ಕಲಾರದು. ಅಥವಾ ಅಂತಹ ಸಡಿಲು ಮಾತಿನ ಒಡಪು, ಒಳ್ಳೆಯ ಒಡಪುಗಳ ಸಾಲಿನಲ್ಲಿ ನಿಲ್ಲಲಾರದು. ತಾಳಗತಿಗೆ ಹೊಂದಿಕೆಯಾಗದ ಅಥವಾ ಚೆಂದಗೇಡಿ ಮಾತುಗಳಿಂದಾದ ಒಡಪನ್ನು ಕೇಳುವಲ್ಲಿಯೂ, ನೆನಪಿಡುವಲ್ಲಿಯೂ ಸೊಗಸೆನಿಸದು. ಛಂದೋಬದ್ಧವಾದ ಒಡಪುಗಳು (ಕಾಲನೊಡನೆ ಹೋರಾಡಿ) ನೂರಾರು ವರುಷಗಳಿಂದ ಬಾಳಿ ಬದುಕಿವೆ. ಹಾಡಿನ ರೂಪದಲ್ಲಿರುವ ಒಡಪುಗಳು ಕೆಲವಿವೆ. ಬೆಡಗಿನ ನುಡಿಯ ಸರ್ವಜ್ಞನ ತ್ರಿಪದಿಗಳಂತೂ ಸುಪ್ರಸಿದ್ಧ ದ್ವಿಪದಿ, ಚೌಪದಿ, ಸಾಂಗತ್ಯ ರೂಪದ ಒಡಪುಗಳೂ ಹಲವು ಉಂಟು.

ಈ ತೆರನಾಗಿ ಒಡಪುಗಳಿಂದ ರೂಪಕ, ವಿರೋಧಾಭಾಸ, ಶ್ಲೇಷ, ಅನುಪ್ರಾಸಾದಿ ಚಮತ್ಕೃತಿಯ ಮೂಲಕ ಮನಸ್ಸಿಗೆ ಸುಖ; ಹುದುಗಿಕೊಂಡಿರುವ ಅರ್ಥವನ್ನು ಹುಡುಕಿ ನೋಡುವಲ್ಲಿ ಬುದ್ಧಿಗೆ ಅನ್ನ; ಅಂದಚೆಂದದ ಬೆಡಗಿನ ನುಡಿಗಳ ಹೊಂದಿಕೆಯ ಮಾತುಗಳನ್ನು ಕೇಳುವಲ್ಲಿ ಕಿವಿಗೆ ಇಂಪು ಉಂಟು. ಅಲ್ಲದೆ, ಒಡಪುಗಳಲ್ಲೆಲ್ಲ ಒಂದು ಬಗೆಯ ತಿಳಿನಗೆಯು ಹೊರಸೂಸುತ್ತಿರುವುದು ಕಂಡುಬರುವುದು. ಏಕೆಂದರೆ: ಸರಸ ಸಲ್ಲಾಪದ ವಿನೋದಭಾವದಲ್ಲಿಯೆ ಒಡಪುಗಳ ಹುಟ್ಟು ಇದೆ. ಒಡಪುಗಳೆಂದರೆ 'ನಗೆಯ ಹುತ್ತು' ಅಲ್ಲವಾದರೂ ನಗೆಯ ತಿಳಿನೀರಿನ ಒರತೆಗಳೆಂಬಲ್ಲಿ ಏನೂ ಸಂದೇಹವಿಲ್ಲ; ಖೊಳ್ಳನೆಯ ನಗೆಯು ಇಲ್ಲವಾದರೂ ನಗೆಯ ಮುಗಳು ಪ್ರತಿ ಒಡಪಿನಲ್ಲುಂಟು. ಒಳ್ಳೆಯ ಒಡಪುಗಳೆಂದರೆ ರಸಿಕ ಮನೋವೃತ್ತಿಯ ಸುಹಾಸ; ರಸಿಕರ 'ರಸನಿಮಿಷ'. ಆದುದರಿಂದ, ಸುಹಾಸ್ಯದ ಮಂದಗಂಧವು ಒಡಪು ಒಡಪುಗಳಲ್ಲೆಲ್ಲ ಇಡಿಗಿಕೊಂಡಿದ್ದರೆ ಸೋಜಿಗವಲ್ಲ. ಇಂತಿವೆಲ್ಲ ಕಾರಣಗಳಿಂದಲೆ ಮಕ್ಕಳಿಗೆ ಮಾತ್ರವಲ್ಲ, ಜನಸಾಮಾನ್ಯರಿಗೆಲ್ಲ ಒಡಪುಗಳೆಂದರೆ ಇಷ್ಟೊಂದು ಅಚ್ಚು ಮೆಚ್ಚು; ಅಲ್ಲ-ಹುಚ್ಚು.

ಬುದ್ಧಿಯು ಪ್ರಗಲ್ಭವಾದ ಬಳಿಕ ಸವಿಯತಕ್ಕ ಸಾಹಿತ್ಯಾನಂದದ ಮೊದಲ ಗುಟುಕುಗಳು ಮಕ್ಕಳ ಈ ಒಡಪುಗಳಲ್ಲಿ ಅಡಕವಾಗಿವೆ. ಸಾಹಿತ್ಯಾನಂದವೆ ಭೂಲೋಕದ ಅಮೃತ. 'ಹೆಣ್ಣು, ಹೊನ್ನು, ಮಣ್ಣು'ಗಳ ಸವಿಗೆ ಮನಸೋತು ತಾಳತಪ್ಪಿ ಹುಚ್ಚರಾದವರನ್ನು ದಾರಿಗೆ ಹಚ್ಚುವ ಸಾಮರ್ಥ್ಯವು ಸಾಹಿತ್ಯವೊಂದರಲ್ಲಿಯೆ ಇದೆ. ಹೆಣ್ಣು, ಹೊನ್ನು, ಮಣ್ಣುಗಳ ಹಿಗ್ಗು ಸಾಂತ; ಸಾಹಿತ್ಯಾನಂದವು ಅನಂತ. ಮೊದಲನೆಯದು ಸಾಪೇಕ್ಷ; ಎರಡನೆಯದು ನಿರಪೇಕ್ಷ. ನಿರಪೇಕ್ಷ ಆನಂದದ ಪರಮ ಸ್ವರೂಪವೆ ಸ್ವಾನಂದ; ಕೇವಲಾನಂದ; ಕೈವಲ್ಯಾನಂದ. ಫಲ-ನಿರಪೇಕ್ಷವಾದ ಆನಂದವನ್ನು ಅನುಭವಿಸುವ ಸಾಮರ್ಥ್ಯವು ಕಡಿಮೆಯಾದ ಹಾಗೆ ಮಾನವನು ಹೆಚ್ಚು ಹೆಚ್ಚು ಕೀಳಿಗೆ ಇಳಿಯುತ್ತಾನೆ. ಕುಟುಂಬದಲ್ಲಿ, ಸಮಾಜದಲ್ಲಿ, ದೇಶದಲ್ಲಿ ಸುಖ-ಶಾಂತಿಗಳು ನೆಲೆಸಬೇಕಾದರೆ ಫಲ-ನಿರಪೇಕ್ಷವಾದ, ಸ್ವಯಂ-ಪೂರ್ಣವಾದ, ತನ್ನತಾನೆ ದೊರೆವ ಆನಂದವನ್ನು ಅನುಭವಿಸುವ ಸಾಮರ್ಥ್ಯವು ಪ್ರತಿಯೊಬ್ಬರಲ್ಲಿಯೂ ಬೆಳೆಯಬೇಕು. ಇದು ವ್ಯಾಪಾರದ ಯುಗ. ಬಣಂಜಗಳ ಆನಂದವೊಂದೇ ಗೊತ್ತು ನಮಗೆ. 'ಮಾತಿನ' ಆನಂದಕ್ಕೆ ಮನಸಿಲ್ಲ; ಹಣವೆಂದರೆ ಹೆಣವೂ ಬಾಯಿ ತೆರೆಯುವುದು. 'ಮಾತು ಜ್ಯೋತಿರ್ಲಿಂಗ' ವೆಂದು ಅಲ್ಲಮಪ್ರಭುಗಳ ಆತ್ಮಸಾಕ್ಷಾತ್ಕಾರ. ಆದರೆ, ಇಂದು ಅವರ ಭಕ್ತರೆಲ್ಲ ಶರಣು ಹೋಗುತ್ತಿರುವ 'ಲಿಂಗವು' ಅದಾವುದು? ಬ್ರಾಹ್ಮಣ್ಯದ ಅಭಿಮಾನವಿದ್ದರೂ ಇಂದಿನ ಹಾರುವರ ಪಾಲಿಗೆ ಸಂಕುಚಿತ ಸ್ವಾರ್ಥವೆ ಅವರ 'ಪರಬ್ರಹ್ಮ.' 'ಮಾತು' ಎಂಬ ಜ್ಯೋತಿಯು-'ಶಿವ-ಶಕ್ತಿ'ಯು ಕಣ್ಮರೆಯಾಗಿ, ತಿಳಿಗೇಡಿತನದ ಕಗ್ಗತ್ತಲೆಯಲ್ಲಿ ಹೊರಳಾಡುತ್ತಲಿದ್ದೇವೆ. ಹೆಣ್ಣು ಹೊನ್ನಿನ ಕನವರಿಕೆ ನಡೆದಿದೆ. ಮೈಸೊಗದ ಮುಂದೆ ಮಾತಿನ ಸೊಗವು ಬೇಡವಾಗಿದೆ. ಸಾಪೇಕ್ಷ ಆನಂದದ ಹೊರತು. ಅದಕ್ಕೂ ಮೇಲಣ ತರಗತಿಯ ನಿರಪೇಕ್ಷ ಆನಂದದ ಅರಿವು ಮಾಯವಾಗಿದೆ. ಸೃಷ್ಟಿಸೌಂದರ್ಯ, ಸಾಹಿತ್ಯ, ಕಲೆ, ಮಕ್ಕಳೊಡನಾಟಗಳಲ್ಲಿ ಅನುಭವಕ್ಕೆ ಬರುವ ಆನಂದವು ಫಲಾಶಾ-ರಹಿತವಾದ ನಿರಪೇಕ್ಷ

ಆನಂದದ ಜಾತಿಗೆ ಸೇರಿದ್ದುದು. ಇಂತಹ ಆನಂದದ ಒಂದಂಶವು ಒಡಪುಗಳಲ್ಲಿಯೂ ಅಡಕವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಒಡಪುಗಳಿಂದ ದೊರೆವ ಆನಂದವನ್ನು ಜನರು ಅತಿ ಪ್ರಾಚೀನ ಕಾಲದಿಂದಲೂ ಅನುಭವಿಸುತ್ತ ಬಂದಿದ್ದಾರೆ. ವೇದ-ಉಪನಿಷತ್ತುಗಳೊಳಗಿನ ಒಡೆಪುಗಳು ಇದಕ್ಕೆ ದೃಷ್ಟಾಂತ. ಇತಿಹಾಸಕಾಲದ ಇಂತಹ ಉದಾಹರಣೆಗಳಿಗೆ ಭೋಜ-ಕಾಲಿದಾಸ, ಅಕಬರ-ಬೀರಬಲ್ಲ, ಕೃಷ್ಣದೇವರಾಯ-ತೆನ್ನಾಲಿ ರಾಮಕೃಷ್ಣಾದಿಗಳ ಹೆಸರಿನಲ್ಲಿ ಊರೂರಿಗೆ ಕೇಳಬರುವ ಹಲವು ಒಡಪುಗಳಿವೆ ಕಥೆಗಳಿವೆ. ಅಭಿನವ ಪಂಪ ಮತ್ತು ಕಂತಿ ಎಂಬ ಇವರಿಬ್ಬರಲ್ಲಿ ಸಮಸ್ಯಾಪೂರ್ತಿಯ ಸೆಣಸಾಟವು ನಡೆಯುತ್ತಿದ್ದಿತೆಂದು ದಂತಕಥೆಯಿದೆ. ಒಡಪುಗಳಿದ್ದ ಜನಮನವನ್ನು ಸೂರೆಗೊಂಬ ಅದ್ಭುತ ಸಾಮರ್ಥ್ಯವು ಈಗಲಾದರೂ ಎಳ್ಳಷ್ಟು ಕಡಿಮೆಯಾಗಿಲ್ಲ, ಆದರೆ, ಯುಗಕ್ಕೆ ತಕ್ಕಂತೆ ಅವರ ಕೆಲವೊಂದು ಪ್ರಕಾರಗಳು ಹೊಸ ರೂಪವನ್ನು ತಾಳುತ್ತಲಿವೆ.

ಒಡಪುಗಳಲ್ಲಿ ಹಲವು ಪ್ರಕಾರಗಳಿವೆ. ಕೂಟಪ್ರಶ್ನೆಗಳು. ಸಮಸ್ಯಾಪೂರ್ತಿಯ ವಾಕ್ಯಾಂಶಗಳು, ಅಂಕಿಸಂಖ್ಯೆಯ ತೊಡಕುಗಳು, ಶಬ್ದ ಸಂಯೋಜನೆಯ ಚಕ್ರಬಂಧಗಳು ಇವೆ ಮೊದಲಾದುವುಗಳೆಲ್ಲವು ಒಡಪುಗಳಲ್ಲಿಯೆ ಅಳವಡುವವಾದರೂ ಮೊದಲಿನವೆರಡನ್ನು ಬಿಟ್ಟು, ಉಳಿದುವು ಸಾಹಿತ್ಯಕ್ಷೇತ್ರದ ಹೊರಗಿನವು. ಅಂಕಿಸಂಖ್ಯೆಯ ತೊಡಕಿನಲ್ಲಿ ಲೆಕ್ಕವಾದರೂ ಇದೆ. ಶಬ್ದ-ಸಂಯೋಜನೆಯ ಚಕ್ರಬಂಧಗಳಿಂದ ಜ್ಞಾನಾನಂದವಂತೂ ಅಷ್ಟಕ್ಕಷ್ಟೆ. ಅಲ್ಲದೆ, ಇತ್ತೀಚೆಗೆ ಈ ಚಕ್ರದ ಸೆಳವಿನ ಸುಳಿಯಲ್ಲಿ ಸಿಲುಕಿ ಸಾವಿರಾರು ಜನರು ಅಪರಿಮಿತ ಅರ್ಥ ಹಾನಿಗೆ ಈಡಾಗುತ್ತಲಿದ್ದಾರೆ. ಒಡಪಿನಲ್ಲಿ ಸುಖ-ಸಂಕಥಾ-ವಿನೋದದಿಂದ ದೊರೆಯ ತಕ್ಕ ನಿರಪೇಕ್ಷ ಆನಂದದ ಒಂದು ಕಣವೂ ಈ ಚಕ್ರಬಂಧ ಸ್ಪರ್ಧೆಗಳಲ್ಲಿಲ್ಲ. ಆದುದರಿಂದ ಇದು ಒಂದು ಜೂಜು; ದುರ್ವ್ಯಸನ; ಕೀಳು ಕೆಲಸ ಎಂದು, ಸಮಾಜದವರು ಬೇಗನೆ ಎಚ್ಚತ್ತು ತಿರಸ್ಕರಿಸದಿದ್ದರೆ ಅನೇಕ ಕುಟುಂಬಗಳು ಆರ್ಥಿಕವಿಪತ್ತಿಗೆ ಒಳಗಾಗದೆ ಇರಲಾರವು.

ಎಷ್ಟೋ ಕಾಲದಿಂದ ಮಕ್ಕಳ ಹಿಗ್ಗಿಗೆ ಕಾರಣವಾದ ಒಡಪುಗಳಲ್ಲಿ ಕೆಲವನ್ನು ಇಲ್ಲಿ ಕಲೆಹಾಕಿದ್ದಾಗಿದೆ. ನಮ್ಮ ನಾಡಿನ ಊರೂರಿಗೂ ದೊರೆವ ಸಾವಿರಾರು ಒಡಪುಗಳನ್ನೆಲ್ಲ ಸಂಗ್ರಹಿಸಿ ಅಚ್ಚುಹಾಕಿಸುವುದು, ಆರ್ಥಿಕ ದೃಷ್ಟಿಯಿಂದ ನನ್ನ ಅಳವು ಮೀರಿದುದು. ನನ್ನ ವಿದ್ಯಾರ್ಥಿ, ವಿದ್ಯಾರ್ಥಿನಿಯರ ನೆರವಿನಿಂದ ಕೂಡಿಸಿದ ಪುಲಿಗೆರೆಯ ನಾಡಿನ ಹಲವು ಒಡಪುಗಳ ಜೊತೆಗೆ, ಪಂಪನ ಬನವಾಸಿದೇಶ, ರನ್ನ ಮುದುವೊಳಲ ಸೀಮೆಯ ಗೆಳೆಯರಿಂದ ದೊರೆತುವುಗಳನ್ನೂ ಕೆಲವು ಸೇರಿಸಿದ್ದೇನೆ. ಕೊಪಣ ಕಲಬುರ್ಗಿಯ ನಾಡಿನ ಒಡಪುಗಳೂ ಇದರಲ್ಲುಂಟು. ಮೈಸೂರು ಮತ್ತು ಮಂಗಳೂರು ಕಡೆಯ ಒಡಪುಗಳೂ ಇದರಲ್ಲಿ ಇಲ್ಲದಿಲ್ಲ. ಬೇರೆ ಬೇರೆ ಕಡೆಯ ಒಡಪುಗಳನ್ನು ಒಂದೆಡೆಗೆ ಕೂಡಿಸಿ ನೋಡುವಾಗ ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಒಂದೇ ತೆರನಾಗಿದ್ದುದು ಅನುಭವಕ್ಕೆ ಬಂದಿತು. ಕರ್ಣಾಟಕದ ಬೇರೆ ಬೇರೆ ಭಾಗಗಳ ಹಳ್ಳಿಯ ಹಾಡು, ಗರತಿಯ ಹಾಡುಗಳ ಸಂಗ್ರಹಗಳು ಪ್ರಸಿದ್ಧವಾದಾಗಲೂ ಇದೇ ಸಂಗತಿಯು ನಿದರ್ಶನಕ್ಕೆ ಬಂದಿತು. ಇಂದು ಕನ್ನಾಡು ತುಂಡು ತುಂಡಾಗಿರುವುದಾದರೂ, ಅನಂತಕಾಲದಿಂದ ಇದರ ಅಣುರೇಣುಗಳಲ್ಲಿ ಒಂದೇ ಬಗೆಯ ಜೀವನಶಕ್ತಿಯು ಹರಿದಾಡುತ್ತಲಿದೆಯೆಂಬ ಮಾತಿನ ಮನವರಿಕೆಯಾಗದೆ ಇರದು.

ಈಗ ಇಲ್ಲಿ ಸಂಗ್ರಹಿಸಿದುವುಗಳಲ್ಲಿ ವರ್ಣನಾತ್ಮಕವಾಗಿರುವ ಸಣ್ಣ ಒಡಪುಗಳು ಕೆಲವಿವೆ. ಉದಾ: 'ಹಾದಿಯ ಪೋರ ಹಾಡುತ ಹೊರಟಾನೆ'; (ದನದ ಕೊರಳ ಗಂಟೆ). ಇನ್ನು ಕೆಲವು ಇದಕ್ಕೂ ಸಲ್ಪ ಹೆಚ್ಚು ದೊಡ್ಡವಾದುವು. ಉದಾ: ಅಂಗಳಲ್ಲಿ ಒಂದು ತಿಂಗಳ ಗಿಡಿಹುಟ್ಟಿ, ತಿಂಗಳಿಗೆ ಒಂದು ಕಾಯಿ ಬಿಡುವುದು; (ಚಂದ್ರಮ). 'ಮರದಲ್ಲಿ ಮರ ಹುಟ್ಟಿ, ಮರಚಕ್ರ ಕಾಯಾಗಿ, ತಿನ್ನಬಾರದ ಹಣ್ಣು ಬಲು ಸವಿ'; (ಕೂಸು) ಈ ಬಗೆಯ ಪ್ರತಿಪದವೂ ಸಾರ್ಥವಾಗಿರುವ ಒಡಪುಗಳಂತೆ, 'ಅರಕಟ್ಟು, ಮರಕಟ್ಟು' ಮರಕ್ಕೆ ಮೂವತ್ತು ಕಟ್ಟು ಪಗಡಿಕಟ್ಟು....... ಹೇಳದವರಿಗೆ ಹೆಡೆಮುಡಿಗಟ್ಟು, ಎಂಬೀ ಬಗೆಯ ಅತಿಶಯ ಅಥವಾ ಅಧಿಕ್ಯಾರ್ಥದ

ದ್ವಿರುಕ್ತಿಯ ಮಾತುಗಳಿದ್ದ ಒಡಪುಗಳೂ ಕೆಲವು ಉಂಟು. 'ತಿನ್ನಬಾರದ ಹಣ್ಣು ಬಲು ಸವಿ' ಎಷ್ಟೊಂದು ಸೊಗಸಾದವಿರೋಧಾಭಾಸ! ಈ ಬಗೆಯ ವಿರೋಧಾಭಾಸಗೊಳೊಂದಿಗೆ ರೂಪಕಾದಿ ಅಲಂಕಾರಗಳು ಬೆರತುಕೊಂಡ ಸೊಬಗಿನ ಒಡಪುಗಳು ಹಲವಿವೆ. 'ನಾರಿ, ನೀ ನೀರಿಗೆ ಹೋಗಬೇಡ; ನೀರಲ್ಲಿ ಕಾಲಿಡಬೇಡ; ನೀರು ತರದೆ ಮನೆಗೆ ಬರಬೇಡ' ಇಲ್ಲಿ ತೆಂಗಿನಕಾಯನ್ನು ನಾರಿಯೆಂದು ಸಂಬೋಧಿಸಿದ್ದುದು ಮನೋಹರವಾಗಿದೆ; ನೀರಿಗೆ ಹೋಗದೆಯೆ ನೀರು ತರುವ ವಿಚಿತ್ರ ನಾರಿಯಿವಳು! ರೂಪಕದ ಗೋಜಿಗೆ ಹೋಗದೆ ಇದ್ದುದನ್ನೆ ಎದ್ದು ಕಾಣುವಂತೆ ಸೋಜಿಗದಿಂದ ಹೇಳುವ ಚಮತ್ಕೃತಿಯ ಒಡಪುಗಳು ಕೆಲವುಂಟು. 'ಕುಣಿಯಲ್ಲಿದ್ದರೂ ಹೆಣವು ತಾನಲ್ಲ'; (ಜಾಡ), 'ಕೈ ಹಿಡಿವನಾದರೂ ಗಂಡನಲ್ಲ'; (ಬಳೆಗಾರ). ಮೇಲಣ ಯಾವ ಜಾತಿಗೂ ಒಳಪಡದ, 'ಸಂದಿಯಲಿ ಸಂದಿ ಯಾವ ಸಂದಿ?' (ಅಲಸಂದಿ), ಎಂಬೀ ಮಾದರಿಯ ಎರಡು ಮೂರು ಒಡಪುಗಳೂ ಬಂದಿವೆ. ಪದರುಮಾತಿನಿಂದ ಹೇಳಿದ-ಶ್ಲೇಷಾರ್ಥವುಳ್ಳ ಒಡಪುಗಳು ಹಲವಿವೆ. 'ಒಬ್ಬನು ಹಣ ಕೇಳಲು ಬಂದ; ಇನ್ನೊಬ್ಬನು ತುಪ್ಪ ಕೇಳಲು ಬಂದ, ಇಬ್ಬರಿಗೂ ಒಂದೇ ಮಾತಿನಿಂದ ಮರಳಿ ಕಳುಹಿದನು. ಹಾಗಾದರೆ ಆ ಉತ್ತರವು ಆವುದು?' 'ಕಾಸಿಲ್ಲ'. ಇಂತಹ ಒಡಪುಗಳ ಉತ್ತದಲ್ಲಿ ಮಾತ್ರ ಸೊಗಸಿದೆ. ಕೇಳುವ ಮಾತಿನಲ್ಲಿ ಒಡಪಿನ ಅಂದವಿಲ್ಲ. ಆದುದರಿಂದ ಇವುಗಳನ್ನು ಹೆಚ್ಚಾಗಿ ಕೊಟ್ಟಿಲ್ಲ.

ಒಡಪುಗಳನ್ನು ಹೇಳಿ ಕೇಳುವ ಕಾಲ ಹಿಂದಾಯ್ತು; ಇಂದು ಅವನ್ನು ಯಾರು ಕೇಳಬೇಕು? ಎಂದು ಉಸುರುವವರೂ ಕೆಲರುಂಟು. ಸ್ಯಾನ್ಸಿನ ಯುಗವು ತಲೆದೋರಿತು; ಇನ್ನು ಕಾವ್ಯಗಳಲ್ಲಿ ಕವಿತ್ವಶಕ್ತಿಯು ಕಣ್ಮರೆಯಾಗುವುದೇ ನಿಶ್ಚಿತವೆಂದು ಮಾಡಿದ ಭವಿಷ್ಯದಷ್ಟೆ ಮೇಲಣ ಮಾತೂ ಹುರುಳಿಲ್ಲದುದಾಗಿದೆ. ಕಾಲಕಾಲಕ್ಕೆ ಹೊಸಹೊಸ ಒಡಪುಗಳು ಈಗಲೂ ತಲೆದೋರುತ್ತಿರುವುದನ್ನು ನೋಡಿದರೆ, ಒಡಪುಗಳ ವಿಷಯಕ್ಕಿರುವ ಜನಸಾಮಾನ್ಯರ ಅಕ್ಕರವು ಇನ್ನೂ ಅಚ್ಚಳಿಯದೆ ಉಳಿದಿದೆಯೆಂದೇ ಹೇಳಬೇಕಾಗುತ್ತದೆ. ಉದಾ: ಒಂಟಿ ಗಾಲಿ. ಚಕ್ಕಡಿಯಲ್ಲ; ಕುಂಬಾರ ತಿಗರಿಯಲ್ಲ; ಎಳೆಹೊರಡುವುದು, ಗಿರಣಿಯಲ್ಲ'; (ರಾಟಿ). ನನ್ನ ಗೆಳೆಯನೊಬ್ಬನು ಜಂಬುಕಂಡಿಯಿಂದ ಕಳುಹಿದ ಒಡಪುಗಳಲ್ಲಿ 'ಜಂತ್ರದ ಮಂತ್ರಾ ಹೇಳ್ಯಾನ; ಸ್ವಾತಂತ್ರ್ಯದ ಬೆನ್ನು ಹತ್ಯಾನ'; 'ರಾಟಿ ತಿರುವಿ ರಾಜ್ಯಾ ಗಳಿಸ್ಯಾನ'; (ಗಾಂಧಿ) ಎಂಬುವೂ ಉಂಟು. ಶ್ರೀಮಾನ್ ದೇವುಡು ನರಸಿಂಹ ಶಾಸ್ತ್ರಿಗಳು 'ಕರ್ನಾಟಕ ಸಂಸ್ಕೃತಿ' ಎಂಬ ತಮ್ಮ ಗ್ರಂಥದಲ್ಲಿ 'ಒಗಟ'ಗಳ ವಿಚಾರದಲ್ಲಿ ಬರೆವಾಗ ಆಧುನಿಕ ಕಾಲದ ಟೆಲಿಫೋನಿನ ಮೇಲಿನ ಒಂದು ಒಡಪವನ್ನು ಕೊಟ್ಟಿದ್ದಾರೆ. ಉದಾ: ಬಾಯಿಯಿಲ್ಲದ ಬಳ್ಳಿ ಬಾರಿಬಾರಿಗೂ ಮಾತಾಡುತ್ತದೆ.

ಹಳ್ಳಿಯ ಹಾಡು, ಗಾದೆಮಾತು ಮೊದಲಾದುವುಗಳ ಸಂಗ್ರಹಗಳು ಅಚ್ಚಾಗುತ್ತಿರುವ ಈ ಕಾಲದಲ್ಲಿ ನಮ್ಮ ನಾಡಿನ ಒಡಪುಗಳೂ ಬೆಳಕು ಕಾಣುವುದು ಅಗತ್ಯವಾಗಿದೆ. ಮಕ್ಕಳ ಮಾಸಪತ್ರಿಕೆಗಳಲ್ಲಿ ಕೆಲವು ಈಗಾಗಲೆ ಪ್ರಕಟವಾಗಿರುವುವಾದರೂ ಇವು ಪುಸ್ತಕ ರೂಪದಲ್ಲಿ ಹೊರಬರುತ್ತಿರುವುದು ಇದೆ ಮೊದಲು.

ಒಡಪುಗಳಿಗೆ ಒಗಟುಗಳೆಂದು ಪರಿಪಾಠವೂ ಉಂಟು. ಭಾಷೆಯಲ್ಲಿ ಸ್ವಲ್ಪವೂ ಅರ್ಥಭೇದವಿಲ್ಲದೆ, ಒಂದೇ ಬಗೆಯಾದ ಅರ್ಥದಲ್ಲಿ ಬಳಸುವ ಶಬ್ದಗಳು ಒಂದಕ್ಕಿಂತ ಹೆಚ್ಚಾಗಿದ್ದರೂ ಅವೆಲ್ಲ ವ್ಯರ್ಥ. ಏಕೆಂದರೆ ಒಂದಿದ್ದರೂ ಅಷ್ಟೆ; ಹಲವಿದ್ದರೂ ಅಷ್ಟೆ. ಆದರೆ, ಸುದೈವದಿಂದ ಒಡಪು ಮತ್ತು ಒಗಟು ಇವೆರಡರಲ್ಲಿ ಸೂಕ್ಷ್ಮ ಅರ್ಥ ವ್ಯತ್ಯಾಸವುಂಟು. 'ಒಡಪು' ಎಂದರೆ ಒಡೆದು ಬಿಡಿಸಿ, ಬಿಚ್ಚಿ ಅರ್ಥವನ್ನು ಅರಿತುಕೊಳ್ಳಬೇಕಾಗುವಂತಹದು; 'ಒಗಟು' ಎಂಬುದು ಕನ್ನಡ ಶಬ್ದವೆಂದು ಹೇಳಲಿಕ್ಕಾಗುವುದಿಲ್ಲ. ಇದು ಪ್ರಾಕೃತದಿಂದ ಬಂದ ಪದವಾಗಿರಬೇಕು. ಮರಾಠಿಯಲ್ಲಿ 'ಉಖಾಣಾ', ಮತ್ತು ಗುಜರಾತಿಯಲ್ಲಿ 'ಉಖಾಣು' ಎಂಬ ಇದೇ ಅರ್ಥದ ಶಬ್ದಗಳಿವೆ. ವರ್ಣಿಸು, ಹೇಳು, ಮಾತನಾಡು ಎಂಬುದು ಈ ಶಬ್ದಕ್ಕಿರುವ ಅರ್ಥ. ಕನ್ನಡದಲ್ಲಿ ರೂಢಿಯಲ್ಲಿರುವ ಒಕ್ಕಣೆ, ಒಕ್ಕಣಿಸು ಎಂಬ ಶಬ್ದಗಳು ಒಗಟೆ-ಉಖಾಣಾ ಎಂಬುದರ ಬಳಗದುವೆಂದು ತೋರುತ್ತದೆ. ಗಂಡ, ಹೆಂಡಿರು ಒಬ್ಬರೊಬ್ಬರನ್ನು ಒಕ್ಕಣಿಸಿ ಹೇಳುವ ಮಾತು ಒಗಟು. ಒಗಟವು ಒಡಪಿನಿಂದ ಭಿನ್ನ. ಒಡಪು ತೊಡಗಿನ

ಜಾತಿಗೆ ಸೇರಿದುದು; ಗೂಢ, ಗುಹ್ಯಾರ್ಥವನ್ನುಳ್ಳುದು ಒಡಪು. ಹಳ್ಳಿಗರ ಬಳಕೆಯ ಮಾತಿನಲ್ಲಿ 'ಒಡಪು' ಶಬ್ದವು ಇಂದಿಗೂ ಜೀವಂತವಾಗಿದೆ. ಇದು ಇಂದು ಸಿದ್ಧಪಡಿಸಿಕೊಂಡ ಹೊಸ ಶಬ್ದವಲ್ಲ ಒಗಟು ಮತ್ತು ಒಡಪುಗಳಲ್ಲಿ ಈ ಬಗೆಯಾದ ಅರ್ಥಭೇದವನ್ನಿಟ್ಟು ಅವನ್ನು ಬಳಸಿದಲ್ಲಿ ಮಾತಿನ ಔಚಿತ್ಯವೂ ಹೆಚ್ಚಾಗುವುದು.

ಇಲ್ಲಿ ಒಟ್ಟರಿಸಿದ ಒಡಪುಗಳೆಲ್ಲ ಪುರಾತನಕಾಲದಿಂದ ಬಂದುವೆಂದು ಹೇಳುವುದು ಕಷ್ಟ. ಆದರೂ ಇದರಲ್ಲಿ ಹಲವು ೨೦೦-೩೦೦ ವರುಷಗಳಿಗಿಂತಲೂ ಹಳೆಯವಾಗಿವೆ. ಸರ್ವಜ್ಞನಿಂದ (೧೬ನೆಯ ಶತಮಾನ) ಮೊದಲು ಒಡಪುಗಳನ್ನು ಸಂಗ್ರಹಿಸಿದವರು ಯಾರೂ ಇದ್ದಂತೆ ಕಾಣುವುದಿಲ್ಲ. ಆಯಾಕಾಲದಲ್ಲಿ ಬಳಕೆಯಲ್ಲಿ ಬಂದ ಒಡಪುಗಳನ್ನು ಬರೆದಿಡುವ ಸಂಪ್ರದಾಯವಿಲ್ಲದುದರಿಂದ ಸೊಗಸಾದ ಎಷ್ಟೊ ಒಡಪುಗಳಿಗೆ ನಾವು ಎರವಾಗಿದ್ದೇವೆ. ಈ ಬಗಯ ಕೊರತೆಯನ್ನು ಸ್ವಲ್ಪಾಂಶದಿಂದಾದರೂ ಹೋಗಲಾಡಿಸಬೇಕೆಂಬುದೆ ಈ ಪ್ರಯತ್ನದ ಗುರಿ. ಈ ಅಲ್ಪ ಪ್ರಯತ್ನವು ಸವಿಯೆನಿಸಿದರೆ ಇದರ ಇನ್ನೊಂದು ಭಾಗವನ್ನು ಪ್ರಕಟಿಸಿಬೇಕೆಂಬ ಎಣಿಕೆಯುಂಟು.

ಸಾಧನಕೆರೆ, ಧಾರವಾಡ
೧೫-೦೫-೧೯೪೦

ಶಂ. ಬಾ. ಜೋಶಿ

ಮಕ್ಕಳು ಒಡಪುಗಳನ್ನು ಏಕೆ ಓದಬೇಕು?

(೧೯೬೬ರ ಮುದ್ರಣಕ್ಕೆ ಬರೆದದ್ದು)

ಬಾಲಕರ ಸುಪ್ತ ಪ್ರತಿಭೆಯನ್ನು ಚೇತರಿಸುತ್ತದೆ. ಅವರ ಕಲ್ಪನಾಶಕ್ತಿ, ಚಿತ್ರಶಕ್ತಿಗಳಿಗೆ ಚಾಲನೆ ಸಿಕ್ಕುತ್ತದೆ. ಸೂಕ್ಷ್ಮ ನಿರೀಕ್ಷಣ ಸಾಮರ್ಥ್ಯ, ವಿಚಾರ ವಿಮರ್ಶಾಬುದ್ಧಿ ಬೆಳೆಯುತ್ತದೆ. ಸಾಹಿತ್ಯದ ನಿರಪೇಕ್ಷೆ ಆನಂದವನ್ನು ಅನುಭವಿಸುವ ಆರಂಭದ ಪಾಠಗಳು ದೊರೆಯುತ್ತವೆ. ಒಳ್ಳೆಯ ಭಾಷಾಶೈಲಿ, ತೂಕದ ಮಾತು, ಪದೌಚಿತ್ಯ, ಶಬ್ದಾಲಂಕಾರ, ಅರ್ಥಾಲಂಕಾರಗಳ ಅರಿವು ತಲೆದೋರುತ್ತದೆ. ವಾಚ್ಯಾರ್ಥ, ಗುಹ್ಯಾರ್ಥ, ವ್ಯಂಗ್ಯ, ವಿರೋಧಾಭಾಸಾದಿ ಮಾತಿನ ಸ್ವಾರಸ್ಯದ ಸುಖವು ಉಂಟಾಗುತ್ತದೆ. ನೇರವಾದ ಮಾತಿಗೆ ಮೀರಿದ ಸತ್ಯವು ಒಡಪಿನ ರೂಪ ತಾಳುತ್ತಿರುತ್ತದೆ.

ಆದುದರಿಂದ ಮುಂದಿನ ಆಯುಷ್ಯದಲ್ಲಿ ಮಕ್ಕಳಿಗೆ ಸತ್ಯದ ಜ್ಞಾನ - ವಾಗಬೇಕೆಂದು ಹಾರೈಸುವವರು ತಮ್ಮ ಮಕ್ಕಳಿಗೆ ಒಡಪುಗಳ ಗುಟ್ಟನ್ನು ತಿಳಿಸಿಕೊಡುವುದು ಕರ್ತವ್ಯವಾಗಿದೆ. ಅಲ್ಲಮಪ್ರಭುಗಳು, ಕನಕದಾಸರು ಮೊದಲಾದ ಶರಣರ, ದಾಸರುಗಳ ಒಡಪಿನ ವಚನ, ಮುಂಡಿಗೆಗಳೂ, ವೇದ, ಉಪನಿಷತ್ತುಗಳೂ, ಶ್ರುತಿವಚನಗಳೂ ('ಸಹಸ್ರ ಶೀಃರ್ಷ ಪುರುಷಃ', 'ದ್ವಾಸುಪರ್ಣಾ ಸಯುಜಾ ಸಖಾಯಾ॥) ಒಡಪುಗಳೇ ಆಗಿವೆ. ಇವನ್ನು ತಿಳಿಯದೆ ಜನ್ಮಕ್ಕೆ ಸಾರ್ಥಕ್ಯವಿಲ್ಲ. ಈ ಕಾರಣದಿಂದಲೂ ಒಡಪಿನ ಸವಿಯನ್ನು ಉಂಡು ಆನಂದಪಡುವುದಕ್ಕೆ ಚಿಕ್ಕಂದಿನಿಂದಲೆ ಕಲಿತಿರುವುದು ಲೇಸಲ್ಲವೆ?

ಕಾರ್ತಿಕ ಶು। ೫
ಪಂಪದಿನ

ಶಂ. ಬಾ. ಜೋಶಿ

ಒಡಪುಗಳು

೧ ಓಣೆಯಲ್ಲಿ ಓಣಿ, ಯಾವ ಓಣಿ?
೨ ಸಂದಿಯಲ್ಲಿ ಸಂದಿ, ಅದಾವ ಸಂದಿ?
೩ ಆತಿದೆ, ಬಾತಿದೆ, ನೇತಿದೆ.
೪ ಹಾದೀ ಪೋರ ಹಾಡುತ್ತ ಹೋಗುವುದು.
೫ ಹಾದೀಲಿ ಹೊರಟಾಗ ಚಾಡಿಯನು ಹೇಳುವುದು.
೬ ಅಂಗಳ ತುಂಬ ಇಂಗಳ ಗೂಟ.
೭ ಕೆಂದೆತ್ತಿಗೆ ಒಂದೇ ಕಣ್ಣು.
೮ ಕೆಂಪು ಮಾಣಿಗೆ ಒಂದೇ ಕಣ್ಣು.
೯ ದುಗ್ಗಾಣಿ ಮೂಳಿಗೆ ದುಡ್ಡಿನ ಚಂದ್ರ.
೧೦ ಅಡವಿಯಲ್ಲಿರೋ ಗಿಡಗೋವಿಂದ! ನಿನಗಾರಿಟ್ಟರೊ ಸಾದಿನ ಬಟ್ಟು ?
೧೧ ಗಿಡದ ತುಂಬ ಮಸೀಕೆಂಡ.
೧೨ ಹೊಟ್ಟೆಡುಮುಕನು ಹೊಲಕ್ಕೆ ಹೋಗುವನು.
೧೩ ಆನೇ ಹೊಟ್ಟೇಲಿ ಅರುವತ್ತು ಮಕ್ಕಳು.
೧೪ ಮಾಟನ್ನ ಮಗು ಮನೆ ಕಾಯುವುದು.
೧೫ ಗುದಗವ್ವ ಹುದಲಲ್ಲಿ ಸಿಲುಕಿದ್ದಾಳೆ.
೧೬ ಹಚ್ಚನ್ನ ತೋಟದಲ್ಲಿ ಬೆಳ್ಳಿಯ ಗೂಟ.
೧೭ ಒಂದು ಕಾಯಿಯಲಿ ಮೂರು ಬೇಳೆ.
೧೮ ಸುತ್ತಲೂ ಬೇಲಿ ನಡುವೆ ಕೀಲಿ.
೧೯ ಕರಿಯ ಹೊಲದಲ್ಲಿ ಕುರಿ ಮೇಯುವವು
೨೦ ಗಚ್ಚಿನ ಗುಡಿಗೆ ಎತ್ತಲೂ ಬಾಗಿಲಿಲ್ಲ.
೨೧ ಗಿಡ್ಡ ಗಿಡಕ್ಕೆ ಗಿಳಿ ಮುಕುರಿವೆ.

೨೨ ಹುಟ್ಟುತ್ತಲೇ ಮಗ ಹುರಿಗೆಜ್ಜೆ ಕಟ್ಟಿರುವ.
೨೩ ಈಟs ಗೂಡಿಯಾಗ ಇಟಪ್ಪ ಕೂತಾನೆ
೨೪ ಹುಲ್ಲಲ್ಲಿ ಹುಲಿ ಮಲಗಿದೆ.
೨೫ ಅಂಗಿ ಕಳಿ ಬಾವಿಗೆ ಇಳಿ.
೨೬ ಗಿಡ್ಡ ಮಗ ಗುಡ್ಡವೇರುವುದು.
೨೭ ಗಿಡ್ಡಪೋರನು ಸಡ್ಡು ಹೊಡೆವನು.
೨೮ ಗಿಡ್ಡ ಹುಡುಗ (ಪೋರ) ಅಡ್ಡಬಿದ್ದಿದೆ.
೨೯ ಕರಿಯ ಹೊಲದಲ್ಲಿ ಸೂಜಿ ಬಿದ್ದಿದೆ.
೩೦ ಗುಡ್ಡದ ಹಿಂದೆ ಗುಂಡುಕಲ್ಲು ಅಂಟಿದೆ.
೩೧ ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ.
೩೨ ಹಸಿರು ಮರಕ್ಕೆ ಕುಡುಗೋಲು ಕಟ್ಟಿದೆ.
೩೩ ಹಸಿರು ಗಿಡಕ್ಕೆ ಗಿಳಿ ನೇತಾಡುತ್ತಿದೆ.
೩೪ ಕೆಂದೆತ್ತು ಕೆರೆಯಲ್ಲಿ ಈಜುವುದು.
೩೫ ಅಂತಪ್ಪನ ಕುದುರೆ ನಿಂತು ಉಚ್ಚೆ ಹೊಯ್ಯುವುದು.
೩೬ ಬಾಲ ಮುಂದಾಗಿ ಹುತ್ತ ಸೇರುವುದು.
೩೭ ಚಿಕ್ಕ ಮನೆಗೆ ಚಿನ್ನದ ಬೀಗ.
೩೮ ಚಿಕ್ಕ ಮನೆಯಲ್ಲಿ ಚಿಕ್ಕಿ ತುಂಬಿವೆ.
೩೯ ಹಗ್ಗ ಹಾಸಿದೆ ಗೂಳಿ ಮಲಗಿದೆ.
೪೦ ಮಲೆನಾಡ ಎಮ್ಮೆಗೆ ಮೈತುಂಬ ಕಣ್ಣು.
೪೧ ಮಲೆನಾಡ ಎಮ್ಮೆಗೆ ಮೈತುಂಬ ಮುಳ್ಳು.
೪೨ ಮುದಿ ಅಜ್ಜಿಯ ಮೈ ಮುಳ್ಳುಮುಳ್ಳು.
೪೩ ಅಟ್ಟಂ ಅಟ್ಟಂ ಅರಣ್ಯದಲ್ಲಿ ಚಿಟಗುಬ್ಬಿ ತಲೆ ಒಡೆಯಿತು.
೪೪ ಚಿನ್ನದ ಕರಡಿಗೆಯಲ್ಲಿ ಬೆಳ್ಳಿಯ ಲಿಂಗ.
೪೫ ಬೆಳ್ಳಿಯ ದಿಂಬು ಚಿನ್ನದ ಗವುಸು.
೪೬ ಕುಕ್ಕಿಯೊಳು ಕುಡಿವಾಳೆಯೆಲೆ.
೪೭ ಹಸಿರು ಕೊಡದ ತುಂಬ ಸಿಹಿನೀರು.
೪೮ ಅರಸುಮಕ್ಕಳಿಗೆ ಅರತಲೆ ಕುಲಾಯಿ.
೪೯ ಎರಡು ಕೆರೆಗೆ ಒಂದೇ ಏರಿ.
೫೦ ಕಾಸಿನ ಕುದುರೆಗೆ ಬಾಲದಲಿ ಕಡಿವಾಣ.
೫೧ ಬಂಗಾರದ ಗುಬ್ಬಿ ಬಾಲದಲಿ ನೀರು ಕುಡಿಯುವುದು.
೫೨ ಬಾಗಿಲಿಕ್ಕಿ ಭಾಗವತರು ಆಡುವರು.
೫೩ ಜುಟ್ಟ ಬಿಟ್ಟುಕೊಂಡು ರೊಟ್ಟಿಗೆ ಬಂದಾನೆ.
೫೪ ಅವ್ವ ಕಿವಿ ಹರಿಕೆ, ಮಗ ಹೊಟ್ಟೆಡುಬ್ಬಣ್ಣ.

೫೫ ಎಲೆ ಚಚ್ಚೆ ಪಚ್ಚೆ, ಕಾಯಿ ಮಕ್ಕು ಮುರುಟು, ಹೂವು ಹೊಚ್ಚ ಹೊನ್ನು.

೫೬ ಎಲ, ಎಲ ಶ್ರೀನಿವಾಸ, ನಿನ್ನ ತಲೆಯ ಮೇಲೆ ಪುಟ್ಟ ಕಸ, ನಿನ್ನ ಪೊಟ್ಟೆಯೊಡೆದರೆ ಪಾದರಸ.

೫೭ ಇದಿರಿದಿರಂಗಡಿ, ಬಿದಿರಿನ ಚಾವಡಿ, ಒದರುತ್ತ ಬಂದನು ಬೈರಾಗಿ

೫೮ ಅಲ್ಲಿ ಬುಳುಬುಳು ಇಲ್ಲಿ ಬುಳುಬುಳು, ಕಲ್ಯಾಣದ ತನಕ ಬುಳುಬುಳು.

೫೯ ಇರುಳು ಬರುತ್ತಲೆ ಹಾಡುತ ಬರುವರು ಐಯ್ನೋರು.

೬೦ ಮಲೆನಾಡ ಕೋಣಕ್ಕೆ ಮುಗದಾಣ ಹಾಕ ಹೋದರೆ ಇರಿಯ ಬರುವುದು.

೬೧ ಕೋಣೆಗೆ ಕೊತವಾಲ, ಓಣಿಗೆ ವಜೀರ.

೬೨ ಜಂತೆಗೆ ಜಮಾದಾರ, ಕೋಣೆಗೆ ಹೊನಿಗ, ಕಟ್ಟೆಗೆ ಕಟ್ಟಾಣಿ ಸರ.

೬೩ ಕಪ್ಪತ ಗುಡ್ಡದಲ್ಲಿ ಇಪ್ಪತ್ತು ಕುರಿ ಕೊಯ್ದರೂ ಚಿಪ್ಪಿನಷ್ಟು ನೆತ್ತರವಿಲ್ಲ.

೬೪ ಹಚ್ಚನ್ನ ಹಕ್ಕಿ ಪುಚ್ಚ ತೆಗೆದು ಕಲ್ಲು ಮೇಲಿಟ್ಟು ಕಾರವ ಅರೆದರು.

೬೫ ಲಾಲ ಮಗ ಲೋಲ ಮಗ, ಥೈಯಂ ಥೈಯಾರೆ.

೬೬ ಜಂಬುನೇರಿಳೆ ಹಣ್ಣು ಜರಜರದು ಬೀಳುವುವು, ನಾಲ್ಕು ಬಾವಿಯ ನೀರು ಒಂದೆ.

೬೭ ಅಕಟಕ, ವಿಕಟಕ, ನಾಟಕ, ಚೋಟಕ, ನಿನ್ನ ನೋಡಿ ನನ್ನ ಜೀವ ಚುಟೂ ಚುಟೂ.

೬೮ ನಿನ್ನ ಸಿಟ್ಟಿಗೆ ಬೆಂಕಿ ಬೀಳಲಿ, ನನ್ನ ಬೆರಳು ಮುಕಿಡೆ.

೬೯ ನಾನು ತಂದೆನು ನಿನ್ನ, ನೀನೇಕೆ ನೋಡುವೆಯೆನ್ನ? ನಾನೇನು ಮಾಡುವೆ ನಿನ್ನ?

೭೦ ಅsಟ ಅದ, ಈಟs ಅದ ಎಲ್ಲಿರ ಮೊದಲು ಊಟಾ ಮಾಡತದ.

೭೧ 'ಈರಾ ಈರಾ, ಎಲ್ಲಿ ಹೋಗಿದ್ದೆ?' 'ನಾ ನೋಡ ಹೋಗಿದ್ದೆ; ಅವರಾಡುತ್ತಿದ್ದರು, ಅವರು ಅಳಹತ್ತಿದರು, ನಾನೋಡಿ ಬಂದೆ.'

೭೨ ಅಗುಳಿಯ ಮೇಲೆ ಜಿಗಳೆಪ್ಪ ಕುಳಿತಿರುವನು, ಬಂದವರಿಗೆಲ್ಲ ಬೆಂಕಿಯ ಕೊಡುವನು.

೭೩ ಸಂದಿಗೊಂದಿಯ ಬೊಂಬೆ, ಸರಪಳಿಯ ಬೊಂಬೆ, ಸರಸರ ಬಂದು ಉರುಪು ಕೊಟ್ಟೋಡುವುದು.

೭೪ ಬಾಗಿಲ ಸಂದಿಯಲಿ ಚಿಕ್ಕಮ್ಮ ಕುಳಿತು ಬಂದವರಿಗೆಲ್ಲ ಬೆಂಕಿ ಕೊಡುವಳು.

೭೫ ಘಾತಕ ರಂಡೆ, ಏತಕ್ಕೆ ಬಂದೆ? ಆಡುವ ಹುಡುಗರ ಅಳಿಸಲು ಬಂದೆ.

೭೬ ಅಂಗೈಯಷ್ಟು ಗುಡಿಯಲ್ಲಿ ರಂಗಾಚಾರು ಪುರಾಣ ಹೇಳುವರು.

೭೭ ಚಿಕ್ಕಮಠದಲ್ಲಿ ಕೆಂಪಯ್ಯನವರ ನಿತ್ಯಪಾಠ ನಡೆದಿದೆ.

೭೮ ಕೆಂದು ಕುದುರೆಯ ಮೇಲೆ ಕರೆ ತಡೆ (ಥಡಿ) ಒಬ್ಬನು ಏರುವನು ಒಬ್ಬನು ಇಳಿಯುವನು.

೭೯ ಕರಿಯ ಕಲ್ಲ ಮೇಲೆ ಬಿಳಿಯ ರಂಗವಲ್ಲಿ ಹಾಕಿ ಪಾತ್ರದಾಕೆ ತಕ್ಕತ್ತೈ ಮಾಡತಾಳೆ.

೮೦ ಒಬ್ಬನ್ನ ಹಾಕಿದ್ದೆ, ಒಬ್ಬನ್ನ ನೂಕಿದ್ದೆ ಒಬ್ಬನ್ನ ನೋಡಿ ನಗುತ್ತಿದ್ದೆ (ನಂದರ ಭೀಮೇಶ ಕೃಷ್ಣನ ಕೃಪೆಯು ಘನವಾಗಿ)

೮೧ ಒಬ್ಬನ್ನ ಸುಟ್ಟಿದ್ದೆ; ಒಬ್ಬನ್ನ ಅಟ್ಟಿದ್ದೆ; ಒಬ್ಬನ್ನ ಮೂಗಮೂಗರಿದು ಅಬ್ಬರಿದು ಬಣ್ಣ ಸವರಿದ್ದೆ.

೮೨ ಹಳ್ಳದ ದಂಡೆಯ ಪೋರಿ ಉಟ್ಟಾಳ ಹಳದಿ ಸೀರಿ; ಪೇಟೇಲಿ ಬರತಾಳ ಓಡಿ; ಕರಿವಳು ಕೈಮಾಡಿ.

೮೩ ಕರಿಯ ಸೀರೆಯನುಡುತಿ, ಕಾಲುಂಗರನಿಡುತಿ, ಸರ್ರನೆ ಹೋಗಿ ಭರ್ರನೆ ಬರುತಿ.

೮೪ ಬಾ ಬಾ ಎನ್ನುವಳು, ಮನ್ನಿಸಿ ಕರೆವಳು, ರೊಕ್ಕ ಕೊಡುವಳು, ಕಸವಿಸಿಬಡುವಳು.

೮೫ ನಡು ಸಣ್ಣ, ನಾಗವರ್ಣ, ಹಿಡಿಯ ಹೋದರೆ ಕಡಿಯಬರುವಳು.

೮೬ ಸೋಮಿ; ಸೋಮಿ ಮಗಳು ಬುದ್ಧಿವಂತೆ; ಬೇಶಾಗಿದ್ದಾಳೆ. ಸುಕಬಡುತಾಳೆ, ಸನಿಹದಲ್ಲಿದ್ದಾಳೆ, ಆಯಿತಾ ಬರತಾಳೆ.

೮೭ ಅಂತಪ್ಪನವರ ಮಗಳು ಎಂತಹ ಚೆಲುವೆ! ತೊಗಲ ತೊಟ್ಟಲಲ್ಲಿ ತೂಗಾಡತಾಳೆ.

೮೮ ರಂಗಾಚಾರರ ಹೆಂಡತಿ ರಂಗೂಬಾಯಿ ರಾಗಾ ಮಾಡುತ ರಂಗವಲ್ಲಿ ಹಾಕುವಳು.

೮೯ ಅಂಡಂಡಲೆಯುತ, ಮೈ ಕೈ ತಿರುವುತ, ಪಂಡಿತರಾಯಾ!.... ಇವಳ ಹೆಸರೇನೋ,. ಕೆಸರೊಳಗಣ ಕಮಲಾಕ್ಷಿ

೯೦ ಅಗೀತಾ ತಗೀತಾ ರಾಮಾರಗುತ; ಹಳ್ಳಕ್ಕೆ ಹೋಗಿ ತೊಳಕೊಂಡು ಬರತಾರ.

೯೧ ಹಾರಿದರೆ ಹನುಮಂತ, ಕೂಗಿದರೆ ರಾವಣನು, ಕುಳಿತಲ್ಲಿ ಮುನಿರಾಯ.

೯೨ ಕೆರೆಯಲ್ಲಿ ಖೇಕರಿಸುವುದು, ಗುಡಿಯಲ್ಲಿ ಗುಡುಗುವುದು, ಬಣವಿಯಲ್ಲಿ ಬಡಬಡಿಸುವುದು.

೯೩ ಅಂಗೈಯಷ್ಟು ಗದ್ದೆ, ಮುತ್ತಿನರಾಸಿ, ಐವರು ಆಡುವರು, ಇಬ್ಬರು ನೋಡುವರು.

೯೪ ಹಂಚಿನಾಳ ಅಚ್ಚಿಯಬಚಿ ತೋಟದಪಟ್ಟಿ ಕೃಷ್ಣಾಚಾರಿ, ಎಂದೆಂದೂ ಅಚ್ಚುಮೆಚ್ಚು.

೯೫ ಗೋಡೆ ಗುಮ್ಮಣ್ಣ, ಹಾರೋ ತಿಮ್ಮಣ್ಣ, ಅಂಟೋ ವೆಂಕಣ್ಣ.

೯೬ ಕುಕನೂರ ಕುಂಬಾರ, ಸವಣೂರ ಪಿಂಜಾರ, ಗಂಗಾವತಿ ಗಾಣಗಿತ್ತಿ-ಮೂವರೂ ಸೇರಿ ಒಂದೆಡೆಯಲ್ಲಿ ಬಾಳುವೆ ಮಾಡುವರು.

೯೭ ನೋಡುವವರಿಬ್ಬರು, ಮಾಡುವವರೈವರು, ತಿಂಬುವವರು ಮೂವತ್ತೆರಡು ಮಂದಿ.

೯೮ ಅಪ್ಪ ಆಕಾಶಕ್ಕೆ, ಅಜ್ಜಿ ಪಾತಾಳಕ್ಕೆ, ಮಗಳು ಮದುವೆಗೆ, ಮಗ ವ್ಯಾಪಾರಕ್ಕೆ.

೯೯ ಅರವಿಗೆ ಆರು ಕಣ್ಣು, ಮರವಿಗೆ ಮೂರು ಕಣ್ಣು, ಕೆಂದೆತ್ತಿಗೆ ಒಂದೇ ಕಣ್ಣು.

೧೦೦ ಗದಾನಗುದುಗೆಯರು ಅವರಿಬ್ಬರು, ಹುಳಕ ಟೊಳಕೆಯರು ಅವರಿಬ್ಬರು, ಚೆಂದನ್ನ ಚೆಲುವೆಯರವರಿಬ್ಬರು.

೧೦೧ ಕಲ್ಲಗುಮಟ, ಮರಜಿಗಟ, ಹಂಗನ ಗರಿ, ಮಂಗನ ಕಿವಿ.

೧೦೨ ನಾರು ತಾ; ಬೇರು ತಾ; ನಾರಿಯ ತೋಳು ತಾ; ಹಂಗನ ಗರಿ ತಾ; ಮಂಗನ ಕಿವಿ ತಾ.

೧೦೩ ಅರಕಟ್ಟು ಮರಕಟ್ಟು, ಮರಕೆ ಮೂವತ್ತುಕಟ್ಟು, ಪಂಚಾಂಗ ಕಟ್ಟು, ಪಗಡೆ ಕಟ್ಟು, ಹೇಳದವರಿಗೆ ಹೆಡಮುಡಿ ಕಟ್ಟು.

೧೦೪ ಏಳುನೂರು, ಎಂಟನೂರು, ಗದಗಿನೂರು, ನಿನ್ನ ನಂಟು ಇದ್ದಲ್ಲಿ ಕೇಳಿಕೊಂಡು ಬಾ, ಎಂಟು ದಿನದ ಅವಧಿ ನಿನಗೆ.

೧೦೫ ಎಲೆಗೊಂದು ಕಾಯಿ, ತಲೆಗೊಂದು ಕಾಯಿ, ಜಾಣಗೊಂದು ಕಾಯಿ, ಜಗದೀಶಗೊಂದು ಕಾಯಿ.

೧೦೬ ಹಡಗದಂತಹ ಎಮ್ಮೆ, ಹೆಡಿಗೆಯಂತಹ ಕೆಚ್ಚಲು; ಹಾಲು ಅಳೆದು ಮಾರುವುದು, ಶಗಣೆ ತೂಗಿ ಮಾರುವುದು.

೧೦೭ ಕಾಲು ಮೇಲಕೆ ಮಾಡಿ ನೀರು ಕುಡಿವವನೆ, ಮೂಗಿನವ ಬರುತಾನೆ ನೀ ಬೇಗ ಸಾಗೋ; 'ನಿನಗಿದನಾರು ಹೇಳಿದರು ತಲೆಯಿಲ್ಲದವನೇ?' 'ನನಗೊಬ್ಬ ಹೇಳಿದನು. ಒಂದೇ ನಾಲಿಗೆಯವನು.'

೧೦೮ ಕಂಬ ಕಂಬದ ಮೇಲೆ, ದಿಂಬ ದಿಂಬದ ಮೇಲೆ, ನಾಗಲೋಟೆಯ ಮೇಲೆ, ಎರಡು ಗೊಂಬೆಗಳು ಕುಣಿಯುತ್ತಿವೆ.

೧೦೯ ದಣಪೆ; ದಣಪೆಯ ಮೇಲೆ ಕೊಳಗ; ಕೊಳಗದ ಮೇಲೆ ಶಿದ್ದೆ; ಶಿದ್ದೆಯ ಮೇಲೆ ಗುಡ್ಡೆ; ಗುಡ್ಡೆಯ ಮೇಲೆ ಹುಲ್ಲು; ಹುಲ್ಲಿನಲ್ಲಿ ಹುಳು.

೧೧೦ ಅಡಕಂಬ, ನಡುಮಡಕೆ, ಕಡೆಕಡಿಕೆ, ಮೇಲೆ ಹುಲ್ಲು.

೧೧೧ ಅಂಕುಬಂಕಾದ ಆಲದ ಮರ, ಅದರ ಮೇಲೆ ಕಂಚಿನ ಫಲ; ಅದರ ಮೇಲೆ ಮಲ್ಲಿಗೆ ರಾಶಿ.

೧೧೨ ಅಯ್ಯಯ್ಯ ಭಾವ, ಮೆಯೆಲ್ಲ ಬೂದಿ, ತಲೆಯ ಮೇಲೆ ಛಪ್ಪರ, ಕೈಯಲ್ಲಿ ಖರ್ಪರ.

೧೧೩ ಅಂಗೈಯಷ್ಟು ಗದ್ದೆ, ಗದ್ದೆಯೊಳಗೆ ನೀರು, ನೀರಿನಲ್ಲಿ ಬೇರು, ಬೇರಿನ ತುದಿಗೆ ಬೆಂಕಿ.

೧೧೪ ಅಕ್ಕಕ್ಕ! ಬಾವಿ ನೋಡು, ಬಾವಿಯೊಳಗಿನ ನೀರ ನೋಡು, ನೀರೊಳಗಿನ ಬಳ್ಳಿ ನೋಡು, ಬಳ್ಳಿಗೊಂದು ಹೂವ ನೋಡು.

೧೧೫ ಅಕ್ಕಕ್ಕ! ಮರನೋಡು, ಮರದ ಮೇಲಣ ಕಾಯನೋಡು, ತಿಂದವರ ಬಾಯ ನೋಡು.

೧೧೬ ಆನೆಯ ಮೇಲೆ ಅಂಬಾರಿ; ಕುದುರೆಯ ಮೇಲೆ ನೌಬತ್ತು; (ಒಡಪು) ಹೇಳಿದವರಿಗೆ ಸಂಪತ್ತು.

೧೧೭ ಅಂಗೈಯ ಲಿಂಗಕ್ಕೆ ಬಾಯಲಿ ಮೂಗು, ಶಂಬುವಿಲಾಸಗೆ ಕೈಯಲಿ ಮೂಗು; ಉತ್ತಮ ರತ್ನಗೆ ಮತ್ತೊಂದು ಮೂಗು; ಮೂಗಿನ ಮೇಲೊಂದು ಅದ್ಭುತದ ಮೂಗು.

೧೧೮ ಅಕ್ಕಕ್ಕ ಊರ ನೋಡು, ಊರ ಮೇಲಣ ತೇರ ನೋಡು, ತೇರ ಮೇಲಣ ಬೊಂಬೆ ನೋಡು, ಬೊಂಬೆ ಮೇಲಣ ಸಿಂಬೆ ನೋಡು; ಸಿಂಬೆ ಮೇಲಣ ಬುಟ್ಟಿನೋಡು; ಬುಟ್ಟಿಯೊಳಗಣ ಕಸ ನೋಡು; ಕಸದೊಳಗಣ ಗುಲಗುಂಜಿನೋಡು.

೧೧೯ ಪುಂಡರಿ ನಾರಪ್ಪ ಈಳಿಗೇರಿಗೆ ಹೋಗಿ ಮೂಗು ಕೊಯ್ಸಿಕೊಂಡು, ಕಲ್ಲುಗಡಿಗೆ ಠಾಣೆ ಹಾಕಿ, ಎಣ್ಣೆಪ್ಪನಾಯಕರ ರೊಟ್ಟಿನಾಯಕರರೊಟ್ಟುಗೂಡಿ ಹಲ್ಲವನ ಹಾದೀ ಕೇಳಿ ಗಳಗನಾಥದಲ್ಲಿ ಗಳುಂ ಎಂದ.

೧೨೦ ಹಲಗೇರಿ ದಾಟಿ ನಾಲಗೇರಿ ಸುತ್ತಿ ಗಳಗನಾಥನಲ್ಲಿ ಗುಳುಂ ಆಯ್ತು.

೧೨೧ ಹಾಲು ಉಕ್ಕಿದರೆ ನೀರು ಹಾಕುವರು; ನೀರು ಉಕ್ಕಿದರೆ ಏನು ಹಾಕುವದು?

೧೨೨ ಹದಿನಾರೆತ್ತಿನ ಹಣೆಪಟ್ಟಿ, ಮನೆ ಮಾಡುವ ಗರತಿ, ಶೃಂಗಾರದೊಳಗಿನ ಭಂಗಾರ.

೧೨೩ ಮಂಜಪ್ಪನಾಯಕರ ಮುಂಬಾಗಿಲಲ್ಲಿ ಕಸ್ತೂರಿಯಂತಹ ಗಿಡ; ಆ ಗಿಡಕ್ಕೆ ಹೊವಾದರೆ ಲೋಕವೆಲ್ಲ ಹಾಳು.

೧೨೪ ನರಗುಂದ ನವಿಲುಗುಂದದ ಹೆಣ್ಣು; ಅದರ ನಿರಿಯಲ್ಲಿ ಅರವತ್ತು ಕಣ್ಣು; ಅದನ್ನು ಕಂಡು ಹಿಡಿದವರಿಗೆ ಹಿಡಿಹೊನ್ನು,

೧೨೫ ಹಸಿರು ಚಿಟ್ಟಿಯಲಿ ಅವಲಕ್ಕಿ.

೧೨೬ ನಗೀ ಬಂದು ನಾಲ್ಕು ದಿನವಾಯ್ತು; ನೆಂಟರು ಬಂದು ಎಂಟು ದಿನವಾಯ್ತು; ನಾ ಕೆಟ್ಟು ಹೋಗುತೇನೆ, ನಮ್ಮವರನ್ನು ಕರೆಯಿರಿ.

೧೨೭ ಇಬ್ಬರು ಹೆಂಡಿರಕಾಯಿ; ಕೂಸು ಮಲಗೋ ಕಾಯಿ; ತಾಯಿ ತಮ್ಮನ ಕಾಯಿ.

೧೨೮ ಹಸಿರು ಸೀರೆ ಉಟ್ಟಾಳ; ಹಳದಿ ಕುಪ್ಪಸ ತೊಟ್ಟಾಳ: ಹತ್ತಿರ ಹೋದರೆ ಕರಕ್ಕನೆ ಪರಚುವಳು.

೧೨೯ ಅಂಕಾಡೊಂಕಾ ಅ; ಅದರ ತಮ್ಮ ಸು; ಕರಿಗಂಡು ಮೆ.

೧೩೦ ಸ್ವರ್ಗದಿಂದ ಬಂದ ಹಣ್ಣು ಕೊಟ್ಟಾಗ ಇತ್ತು; ಇಟ್ಟಾಗ ಇಲ್ಲ.

೧೩೧ ಮುತ್ತಿನಂಥ ಮಗು ಮುಳ್ಳಿನಲ್ಲಿ ಬಿದ್ದಾನೆ.

೧೩೨ ಒಳಗೆ ಹಸ(ನ), ಮೇಲೆ ಕಸ.

೧೩೩ ಸೂರ್ಯನ ಎದುರಿನಲಿ ನಡೆವನಾದರೂ ನೆರಳಿಲ್ಲವಾತನಿಗೆ.

೧೩೪ ಸುತ್ತುವುದು ಲೋಕವನು, ಬಳಲಿಕೆಯ ಬೇಸರವನ್ನೆಳ್ಳನಿತು ಅರಿಯದಲೆ.

೧೩೫ ಪಕ್ಕವಿಲ್ಲದೆ ಹಾರುವುದು; ಕಾಲಿಲ್ಲದಲೆ ಅಲೆಯುವುದು; ಹಿಡಿದಿಡುವೆನೆಂಬವನ ಅರೆಮರುಳನೆನ್ನುವುದು.

೧೩೬ ಹೊಟ್ಟೆತುಂಬ ಉಂಡು, ಹೊಟ್ಟೆಯ ಮೇಲೆ ಮಣ್ಣು ಹಾಕಿಕೊಳ್ಳುವುದು.

೧೩೭ ನಾ ಜಪ್ಪಿಸುವೆ ನಿನ್ನ; ನೀ ತಪ್ಪಿಸುವೆ ನನ್ನ!

೧೩೮ ಹೊರಗೆ ಚಿನ್ನ: ಒಳಗೆ ಬೆಳ್ಳಿ.

೧೩೯ ಸಾವಿರ ಮಕ್ಕಳಿಗೆ ಒಂದೇ ಉಡುದಾರ.

೧೪೦ ನೆಲ ನೆಕ್ಕವುದಾದರೂ ನಾಲಗೆಯಲ್ಲ.

೧೪೧ ಕೈ ಹಿಡಿವನಾದರೂ ಗಂಡನಲ್ಲ, ಕುಣಿಯಲ್ಲಿದ್ದರೂ ಹೆಣನಲ್ಲ, ಅರಿವೆ ಹರಿದವನಾದರೂ ಹುಚ್ಚನಲ್ಲ.

೧೪೨ ಕಚ್ಚಿದರೆ ಕಚ್ಚುವುದು ಕಿಚ್ಚಲ್ಲ; ಚೇಳಲ್ಲ.

೧೪೩ ಸುಟ್ಟ ಹೆಣ ಸುಡುವರು.

೧೪೪ ದುಡ್ಡು ಕೊಟ್ಟು ತರುವುದು; ಮುಂದಿಟ್ಟುಕೊಂಡು ಅಳುವುದು.

೧೪೫ ಥಳಸದ ಅಕ್ಕಿ; ಕಾಸದ ತುಪ್ಪ; ಹಳಸದ ಹಣ್ಣು; ಹೊಟ್ಟು ಇಲ್ಲದ ರಾಶಿ; ನಿದ್ರೆಯಿಲ್ಲದ ನೀರೆ.

೧೪೬ ತಾತಾಗಿಂಡಿ; ತಾಮ್ರ ಗಿಂಡಿ; ಕೆತ್ತಿಸಿ ನೋಡಿದರೆ ಮುತ್ತಿನ ಗಿಂಡಿ.

೧೪೭ ತಾತಾ ಗಿಂಡಿ; ತವರದ ಗಿಂಡಿ; ನೀರಲ್ಲಿಟ್ಟರೂ ಮುಳುಗದ ಗಿಂಡಿ.

೧೪೮ ಅಂತಪ್ಪನ ಹಿತ್ತಿಲಲ್ಲಿ ಇಂಥಿಂಥಾ ಬದನೆಕಾಯಿ, ತುಂಬು ಇಲ್ಲ; ತೊಗಟೆ ಇಲ್ಲ.

೧೪೯ ತಾಳಗಿಂಡಿ, ತಳತಳ ಗಿಂಡಿ, ಮುಚ್ಚಳ ತೆರೆದರೆ ಮುನ್ನೂರು ಗಿಂಡಿ.

೧೫೦ ಅಲಕ್ ಮಲಕ್ ಜಲಕ್ ತೋಟ; ಹೊಕ್ಕು ನೋಡಿದರೆ ಹೂವಿನ ತೋಟ.

೧೫೧ ಅಲಕ್ ಮಲಕ್, ಚಿಲಕ್; ಚಿತ್ತರ ಹಾಕಲು ಬಹುದು, ಅಳಿಸಲು ಬಾರದು.

೧೫೨ ನಾರೀ ನೀ ನೀರಿಗೆ ಹೋಗಬೇಡ, ನೀರಲ್ಲಿ ಕಾಲಿಡಬೇಡ, ನೀರಿಲ್ಲದಲೆ ಮನೆಗೆ ಬರಬೇಡ.

೧೫೩ ಏತ ಹೊಡೆಯುವಂತಿಲ್ಲ, ಕೊಡ ಮುಳುಗ್ಗಿಸುವಂತಿಲ್ಲ, ಬರಿಗೊಡ ತಕ್ಕೊಂಡು ಬರುವಂತಿಲ್ಲ.

೧೫೪ ಕಪ್ಪೆ ಕಲಕದ ಬಾವಿ, ಏಡಿ ಮುಳುಗದ ಬಾವಿ, ಆಗಸದ ಬಾವಿ, ಅರಬಾವಿ.

೧೫೫ ತಂದೆ ಜಟಾಧಾರಿ, ಮಗ ತೀರ್ಥವಾಸಿ, ಅವ್ವ ಕುಲನಾಶಕಿ.

೧೫೬ ಅಡುಪು ಮುಡುಪು, ಶಂಖ ತೀರ್ಥ, ಕೆಳಗೂ ಮೇಲೂ ಮುಗಿಲು, ನಡುವೆ ನೀರು

೧೫೭ ನಾಡೆಲ್ಲ ಅಲೆದು ಬಂದು ದೇವರೆದುರು ನೀರು ಹೊಯ್ಯುವುದು,

೧೫೮ ಜಡೆಯುಂಟು ಜಂಗಮನಲ್ಲ; ಹೆಡೆಯುಂಟು ಮಾಶೇಷನಲ್ಲ; ಮೂರು ಕಣ್ಣುಂಟು ಮುಕ್ಕಣ್ಣನಲ್ಲ.

೧೫೯ ಮೀನು ಮುಟ್ಟದ ವಾರಿಯನು, ದಾನವರ ವೈರಿ ತಾ(ನು) ಮಾನವರಿಗಾಗಿ ಹಿಡಿದಿಹನು.

೧೬೦ ಮೂರು ಕಾಲಲಿ ನಿಂತು ಗೀರಿ ತಿಂಬುದು ಮರನ, ಆರಾರಿ ನೀರು ಕುಡಿವುದನು ಬಲ್ಲವರೆ ಹೇಳಿ.

೧೬೧ ಕೊಬ್ಬಿದ ಕೋಣ, ಐವತ್ತು ಮುಗದಾಣ, ಡೊಣ್ಣೆಯಿಂದ ಹೊಡೆದರೆ ಡರ್ ಡರ್ ಎಂಬುವುದು.

೧೬೨ ಈಟ ಕುಡಿಕಿಯಲ್ಲಿ ಅನ್ನವ ಮಾಡಿದರೆ ಬೀಗರುಂಡು ಬಿಜ್ಜರುಂಡು ಇನ್ನೂ ಉಳಿದಿದೆ.

೧೬೩ ತಲೆಯಿಲ್ಲದ ಕೋಣ ಬತ್ತ ಮೇಯುವುದು.

೧೬೪ ಸರಕಾರದ ಕಟ್ಟೆಯ ಮೇಲೆ ಹೆಬ್ಬಾವು ಬಿದ್ದಿದೆ, ಹಿಡಿದು ಕೊಟ್ಟವರಿಗೆ ಹಿಡಿಹೊನ್ನು.

೧೬೫ ಅಂಗಡಿ, ಅಂಗಡಿ, ಅರುವತ್ತು ಅಂಗಡಿ! ದಿಟ್ಟಿಸಿ ನೋಡಿದರೆ ಅದೇ ಅಂಗಡಿ.

೧೬೬ ಹೋಗುವಾಗ ಹೂವಿನ ತೋಟ, ಬರವಾಗ ಬರಿತೋಟ.

೧೬೭ ನಿನಗೆ ಪಾಡು ಇಲ್ಲದಿದ್ದರೆ ಪಾವಶೇರು ತಾ; ನೆಟ್ಟಗಿದ್ದರೆ ನವಟಾಕು ತಾ.

೧೬೮ ನಾ ಹೇಳುವುದೂ ಅಲ್ಲ, ನೀ ತರುವುದೂ ಅಲ್ಲ, ದುಡ್ಡುಕೊಟ್ಟರೆ ಪೇಟೆಯಲ್ಲಿ ಸಿಕ್ಕುವುದೂ ಅಲ್ಲ.

೧೬೯ ಕೊಡದೊಳಗೆ ಕುಂಬಳಕಾಯಿ ಬೆಳೆದಿದೆ, ಪಾರು ಮಾಡು ಪರಮೇಶ್ವರನೇ.

೧೭೦ ಅತ್ತೆಯ ಹಸೆಯನು ಸುತ್ತಲಾರೆ, ಮುತ್ತಿನ ಚೆಂಡೆ ಹೆಕ್ಕಲಾರೆ.

೧೭೧ ಅವ್ವನ ಸೀರೆ ಮಡಿಚಲಾರೆ, ಅಪ್ಪನ ಹರಳುಗಳ ಎಣಿಸಲಾರೆ.

೧೭೨ ಅಂಕುಡೊಂಕಿನ ಬಾವಿ, ಶಂಕಚಕ್ರದ ಬಾವಿ, ಹೊಕ್ಕು ನೋಡಿದರೆ ಮುಕ್ಕು ನೀರಿಲ್ಲ.

೧೭೩ 'ಕೆಂಪು ಮೋರೆಯ ಹಂಪಣ್ಣ ನೀನೆಂದು ಬರುವೆ?' ಹಂಪೆಯ ಜಾತ್ರೆಗೆ ಬಂದರೆ ಬಂದೆ, ಕಾರಹುಣ್ಣಿವೆಗೆ ಖಾಂ ಖಾಂ ಬರುವೆ.

೧೭೪ ಎಲೊ ಎಲೊ ವಾಸದೇವಾ, ನೆಲದೊಳಗೆ ಏನು ಸುದ್ದಿ? ಕೊಕ್ಕುಂಟು ಕುಕ್ಕಲಾರೆ, ಪಕ್ಕವುಂಟು ಹಾರಲಾರೆ.

೧೭೫ ಗದಗದ ನಡುಗುವುದು ಕಂಡೆ, ಗದುಗಿನ ಪೇಟೆಯ ಕಂಡೆ, ಚೆಂಡು ಕುಯ್ಯುವ ಕಂಡೆ, ನೆತ್ತರವು ಮಾತ್ರ ತಟಕೂ ಇಲ್ಲ.

೧೭೬ ಅಂಬೋಲಿ ಬೆಟ್ಟಕ್ಕೆ ಹೋಗಿ, ತಂಬೋರಿ ಕಾಯಿ ತಂದರೆ, ಕೊಂಬೋರುಂಟು, ತಿಂಬೋರಿಲ್ಲ.

೧೭೭ ದೊಪ್ಪನೆ ಬಿತ್ತು ಅಪ್ಪೇಕಾಯಿ, ಹೆಕ್ಕೋರುಂಟು, ಹೊಡೆಯೋರು (ತಿಂಬೋರು) ಇಲ್ಲ.

೧೭೮ ಅಂಗಡಿಯಲ್ಲಿಟ್ಟು ಮಾರೋದಲ್ಲ, ತಕ್ಕಡಿಯಲ್ಲಿಟ್ಟು ತೂಗೋದಲ್ಲ; ಅದು ಇರದಿದ್ದರೆ ನಡೆಯೋದಲ್ಲ.

೧೭೯ ಕತ್ತುಂಟು ಕಾಲಿಲ್ಲ. ತೋಳುಂಟು ಬೆರಳಿಲ್ಲ; ದಡವುಂಟು ಕಾಲಿಲ್ಲ.

೧೮೦ ಕರವುಂಟು, ಕಾಲಿಲ್ಲ, ಸಿರಹರಿದ ಮುಂಡ; ನರದಿಂದ ಬಿಗಿದಿರುವ ಆರುತುಂಡು.

೧೮೧ ಕೈಯುಂಟು, ಕಾಲಿಲ್ಲ, ಸಿರವರಿದ ಮುಂಡ; ಮೈಯಲ್ಲಿ ನವಗಾಯ ಒಂಬತ್ತು ತುಂಡ, ಓಡಿ ಬಂದೊಯ್ಯನೆ ಹೆಗಲೇರಿ ಕೊಂಡ; ಕೈಯ ಬಿಸುಟಿದರೆ ತಾ ಮುದುಡಿಕೊಂಡ.

೧೮೨ ಮೊಗ್ಗರಳಿ ಹೂವಾಗಿ ಪುಷ್ಪ ತಾನಲ್ಲ, ಹಿಗ್ಗಲಿಸಿ ನೋಡಿದರೆ ಪರಿಮಳವೇ ಇಲ್ಲ.

೧೮೩ ಹತ್ತು ಶಿರವುಂಟು, ದಶಕಂಠನಲ್ಲ; ಬಾಲವೊಂದುಂಟು ಭುಜಂಗನಲ್ಲ, ಕಿರೀಟವುಂಟಾದರೂ ಕಿರೀಟಿಯೂ ಅಲ್ಲ.

೧೮೪ ಸರಸರನೆ ಹರಿಯುವುದು ಹಾವಲ್ಲ; ಗಡಗಡ ನಡೆಯುವುದು ಬಂಡಿಯಲ್ಲ, ಕೊರಳಲ್ಲಿ ಉಪವೀತವುಂಟು ಹಾರುವನಲ್ಲ.

೧೮೫ ಅಡ್ಡ ಹಾರುವುದು ಅಡಪಕ್ಷಿಯಲ್ಲ, ಅದಕ್ಕೆರಡು ಕೊಂಬುಂಟು ಬಸವನಲ್ಲ; ಅದಕ್ಕೊಂದು ಬಾಲವಿದೆ ಹನುಮನಲ್ಲ.

೧೮೬ ಕಾಲಿಲ್ಲ ಕೊಂಬುಂಟು, ಬಾಲದಾ ಪಕ್ಷಿಯದು, ಮೇಲೆ ಹಾರಿದರೂ ಹದ್ದು ತಾನಲ್ಲ.

೧೮೭ ಕೋಟೆ ಕೋಟೆ ಕೊತ್ತಳವುಂಟು, ಪಟ್ಟಣವು ತಾನಲ್ಲ; ನೀಟ ಬಾಗಿಲವುಂಟು ಅಗಸೆಯಲ್ಲ, ಮಾಟದ ಬಸವನುಂಟು ಗುಡಿಯೂ ಅಲ್ಲ. ಆಟದಿಂ ಪೂಜಿಪರು ಕನ್ನಿಕೆಯರೆಲ್ಲ.

೧೮೮ ಕಡಿದರೆ ಕಚ್ಚು ಆಗುವುದಿಲ್ಲ, ಹಿಡಿದರೆ ಮುಟಿಕೆಯಾಗುವುದಿಲ್ಲ.

೧೮೯ ಕಡಿದರೆ ಕಚ್ಚಾಗುವುದಿಲ್ಲ, ಹಿಡಿದರೆ ಮುಕ್ಕಾಗುವುದಿಲ್ಲ.

೧೯೦ ಹಿಡಿದರೆ ಹಿಡಿತುಂಬ, ಬಿಟ್ಟರೆ ಮನೆತುಂಬ.

೧೯೧ ಗುಜ್ಜರ ಎಮ್ಮೆ ಹೆಜ್ಜೆಯಿಲ್ಲದೆ ನಡೆಯುವುದು.

೧೯೨ ಹಾಸಿಗೆ ಹಾಸಿದೆ ಮಲಗುವರೇ ಇಲ್ಲ; ಕುದುರೆ ನಿಂತಿದೆ ಕೂರುವರೆ ಇಲ್ಲ.

೧೯೩ ಸೊಂಡೆ ಮೂಗಪ್ಪಾ; ತಲೀಲೆ ನೀರು ಕುಡಿಯಪ್ಪಾ.

೧೯೪ ಜಂತ್ರದ ಮಂತ್ರದಿಂದ ಸ್ವಾತಂತ್ರ್ಯ ಗಳಿಸಲು ಉಪದೇಶಿಸಿದ ಋಷಿ ಯಾರು?

೧೯೫ ಜಗಳವಿಲ್ಲ; ತೋಟೆಯಿಲ್ಲ; ಹೊಡಿತಾನೆ; ಒದೀತಾನೆ. ಬೇನೆಯಿಲ್ಲ ಬೇಸರವಿಲ್ಲ ನೆಳ್ಳತಾನೆ ತಿಣುಕತಾನೆ.

೧೯೬ ನೆಳ್ಳಾಗೆ ಇರೋದಲ್ಲ, ಬಿಸಲಾಗ ನಿಲ್ಲೋದಲ್ಲಾ, ಹತ್ತಿರ ಹೋದರೆ ಏನೂ ಇಲ್ಲ.

೧೯೭ ಅಕ್ಕಿಗೆ ಅಗುಳಿಲ್ಲ, ತುಪ್ಪಕೆ ನಾತಿಲ್ಲ, ಮಕ್ಕಳ ತಾಯಿಗೆ ಮೊಲೆಯೇ ಇಲ್ಲ.

೧೯೮ ಯಾತರ ಮನೆ, ದೋಸೆ ಮನೆ, ತುಪ್ಪವ ಕೊಡುವ ತವರು ಮನೆ.

೧೯೯ ಸುಂಕದ ಮನೆ, ಸೊಬಗಿನ ಮನೆ, ಬಂದವರನ್ನೆಲ್ಲ ಸುಲಿಯೋ ಮನೆ.

೨೦೦ ಬಾಯಿಲ್ಲದ ಬಳ್ಳಿ, ಬಾರಿಬಾರಿಗೂ ಮಾತಾಡುವುದು.

೨೦೧ ರಾಜ್ಯದಾಗಿಲ್ಲ, ರಾಜನ ಅಂಗಡಿಯಲ್ಲಿಲ್ಲ, ತಿಂದರೊಂದೂ ಬೀಜವಿಲ್ಲ.

೨೦೨ ಸೆರೆಗಿಲ್ಲದ ಸೆಲ್ಲೆ, ಬೀಜವಿಲ್ಲದೆ ಪಲ್ಲೆ, ನೆಚ್ಚಿ ನಿಲ್ಲದ ಹೆಂಗಸು, ನಿಧಾನವಿಲ್ಲದ ಗಂಡಸು.

೨೦೩ ನಾ ಸರದಾರ, ನೀ ಸಾವಕಾರ, ನಾ ಕ್ವಾಟ್ಯಾಗ, ನೀ ಪ್ಯಾಟ್ಯಾಗ. ನಾ ಜಪ್ಪಿಸತೇನಿ. ನೀ ತಪ್ಪಿಸತೀದಿ.

೨೦೪ 'ಅಕ್ಕಕ್ಕ ಇವ ನೋಡೆ, ಎಂಥಾ ಚೆಲುವ' 'ಚೆಲುವಾದರೇನೆ, ಮೈಯೆಲ್ಲ ಕಪ್ಪು!' 'ಕಪ್ಪಾದರೇನೆ, ರಾಜ್ಯವೆಲ್ಲ ಅವನ ಕೈಯಲ್ಲಿ!' 'ರಾಜ್ಯವಾಳಿದರೇನೆ, ನೀರು ತಾಗಿದರೆ ನಿರ್ವಿಣ್ಣನಾಗತಾನೆ!'

೨೦೫ ಕಳ್ಳ ಪಶು, ಹುಲ್ಲು ಕೊಟ್ಟರೆ ಹಾಲು ಕೊಡದು! ಕಲ್ಲು ಕುಟ್ಟಿದರೆ ಕರೆಯುವುದು!

೨೦೬ ಸುಣ್ಣದ ಗುಡಿಯ ಸುತ್ತಲಾರೆ, ಬಣ್ಣದ ಬಡಿಗೆಯ ಹಿಡಿಯಲಾರೆ, ಹವಳ ಮತ್ತು ಮುತ್ತು ಎಣಿಸಲಾರೆ. ನೆಗ್ಗಿಲ ಮುಳ್ಳು ತುಳಿಯಲಾರೆ.

೨೦೭ ಒಂದು ಗೋದಿ ತಂದು ಕಡಬು ಮಾಡಿ, ಅಟ್ಟದ ಮೇಲೆ ಇಟ್ಟರೆ ಅಟ್ಟ ಕಡಕೊಂಡು ಬಿತ್ತು. ವಿಜಾಪುರದಲ್ಲಿ ಇದೇನು ಸುದ್ದಿಯೆಂದು ತಗಣೆಗೆ ಮುಗದಾಣ ಹಾಕಿಕೊಂಡು ನೋಡಬಂದರಂತೆ!

೨೦೮ ಕಟ್ಟಿರುವೆ ಕರುವ ಹಾಕಿ, ಎಂಟು ಮಗ್ಗಿ ಹಾಲ ಹಿಂಡಿ, ರೆಂಟೆ ಕುಂಟೆಯಿಂದ ಬೆಣ್ಣೆಯ ತೆಗೆಯಲು ವಿಜಾಪುರದವರು ಇದೇನು ಸೋಜಿಗವೆಂದು ತಗಣೆಗೆ ಮುಗದಾಣ ಹಾಕಿಕೊಂಡು ನೋಡಬಂದರಂತೆ! (ಕೇವಲ ಶ್ಲೇಷಾರ್ಥವನ್ನವಲಂಬಿಸಿದ ಹಲವು ಒಡಪುಗಳುಂಟು. ಅಂತಹವುಗಳಲ್ಲಿ ಮಾದರಿಗಾಗಿ ಕೆಲವನ್ನು ಮಾತ್ರ ಇಲ್ಲಿ ಕೊಡಲಾಗಿದೆ).

೨೦೯ ಹಳ್ಳದ ದಂಡೆಯಲ್ಲಿ ಇಳಿದುಕೊಂಡಿದ್ದ ಒಬ್ಬನು ಉಣ್ಣುವಾಗ ಹಳ್ಳ ಬಂದರೆ ಆತನು ಏನು ಏನು ಮಾಡಬೇಕು?

೨೧೦ ನಾನು ಮೂರಕ್ಕರಗಳ ಸುವಾಸನೆಯ ಗಿಡ. ಇದರ ಮೊದಲ ಮತ್ತು ಕೊನೆಯ ಎರಡಕ್ಕರಗಳಿಂದ ಪಶು ಎಂಬರ್ಥವಾಗುವುದು. ಎರಡು ಮೂರನೆಯ ಅಕ್ಕರಗಳಿಂದ ತೋಟವೆಂದಾಗುವುದು.

೨೧೧ ಹೂ ಬೇಕೆಂದು ಬಂದವನೊಬ್ಬ. ಅಳ್ಳು ಬೇಕೆಂದು ಬಂದವನೊಬ್ಬ. ಒಂದು ಉತ್ತರವನ್ನು ಹೇಳಿದೊಡನೆ ಅವರಿಬ್ಬರೂ ಹಿಂದಿರುಗಿದರು. ಆ ಉತ್ತರವು ಆವುದು?

೨೧೨ ಒಬ್ಬನಿಗೆ ಬೆಣ್ಣೆಯ ಧಾರಣೆ ಬೇಕಿತ್ತು. ಇನ್ನೊಬ್ಬನಿಗೆ ಮಂಗಳೂರ ದಾರಿ ತಿಳಿಯಬೇಕಿತ್ತು. ಮೊದಲನೆಯವನಿಗೆ ಬೇಕಾದುದು ದೊರೆತು, ಎರಡನೆಯವನಿಗೆ ನಿರಾಸೆಗೊಳಿಸಿದ ಉತ್ತರವು ಅದಾವುದು?

೨೧೩ ಕುದುರೆ ಮತ್ತು ತಕ್ಕಡಿಯನ್ನು ಬೇಡಲು ಬಂದ ಇಬ್ಬರಿಗೂ ಮರಳಿ ಕಳುಹಿಸಿದ ಒಂದೇ ಮಾತಿನ ಉತ್ತರವು ಅದಾವುದು?

೨೧೪ ಕಡೆದೊಡೆಯಲ್ ಹರನಾಮಂ
ನಡುದೊಡೆಯಲ್ ಹವಿಯ ನಾಮಮಾದ್ಯಕ್ಷರಮಂ
ತೊಡೆಯಲ್ಕೆ ರವಿಯ ನಾಮಂ
ಕಡೆಯಿಂದೋದಲ್ಕೆ ವಿರಹ ಕೇಳೆಲೆ ಪಂಪಾ ॥

(ಕಂತಿ-ಅಭಿನವ ಪಂಪರ ಒಡಪು)

ಸರಸ ಸಲ್ಲಾಪಗಳಲ್ಲಿ ಈ ಒಡಪುಗಳನ್ನು ಹಾಡಿನ ರೂಪದಿಂದಲೂ ಹೇಳುವುದುಂಟು. ನಲ್ಲನಲ್ಲೆಯರು ಈ ಒಡಪುಗಳನ್ನು ಹೇಳುತ್ತಿದ್ದರೆ ಪದ್ಯದ ಕೊನೆಗೆ 'ಜಾಣೆ' 'ಜಾಣ' ಎಂದು ಸಂಬೋಧಿಸುವ ವಾಡಿಕೆಯಿದೆ. ಕೃಷ್ಣ-ಸತ್ಯಭಾಮೆಯರ ಬಾಯಿಂದ ಈ ಬಗೆಯ ಒಡಪುಗಳನ್ನು ಹೇಳಿಸಿದ ಕೆಲವು ಹಾಡುಗಳೂ ಉಂಟು; ಹೈದರಾಬಾದಿನ ನೃಪತುಂಗ ವಿದ್ಯಾಲಯದ ಶ್ರೀ ನಾಯಕ ಸ್ವಾಮಿರಾಯರ ಸಂಗ್ರಹದಿಂದ ದೊರೆತ ಒಂದು ಹಾಡಿದು

೨೧೫ ಒಂಟಿ ಕಾಲಿಲೆ ನಿಲ್ಲೋದು
ಮಂಟಪ ಸುತ್ತೋದು,
ಸ್ವಾಮಿ ಶಂಕರನ ವರವೀಲೆ ಬೆಳೆಯೋದು,
ನಾರೀ ನೀ ಬಲ್ಲರೆ ಹೇಳ! ಈ ಒಡಪ
ಪೋರೀ ನೀಬಲ್ಲರೆ ಹೇಳ.

ಒಂಟಿಗಾಲಿಲೆ ನಿಲ್ಲೋದು
ಮಂಟಪವ ಸುತ್ತೋದು
ಸ್ವಾಮಿ ಶಂಕರನ ವರವೀಲೆ ಬೆಳೆಯೋದು
ಜೋಳದ ದಂಟಲ್ಲೇನೋ । ಜಾಣರ ಜಾಣ ।
ಜೋಳದ ದಂಟಲ್ಲೇನೋ ।

೨೧೬ ಎರಡು ಕಾಲೀಲೆ ನಿಲ್ಲೋದು
ಅಂಗಳಕೆ ಹಾರೋದು
ತನ್ನ ಮಕ್ಕಳನ ಬಯಲಿಗೆ ಕರೆಯೋದು
ನಾರೀ ನೀ ಬಲ್ಲರೆ ಹೇಳ । ಈ ಒಡಪ
ಪೋರಿ ನೀ ಬಲ್ಲರೆ ಹೇಳ.

....
....
....
ಕೋಳಿಯ ಪಿಳ್ಳೆಲ್ಲೇನೋ, ಜಾಣರ ಜಾಣ ।
ಕೋಳಿಯ ಪಿಳ್ಳೆಲ್ಲೇನೊ.॥

೨೧೭ ಮೂರು ಕಾಲಲಿ ನಿಲ್ಲೋದು
ಒಣ ಮರ ಸುತ್ತೋದು
ಬಾಯಾರಿದ್ದಾಂಗ ತಾ ನೀರ ಕುಡಿಯೋದು
ನಾರಿ ನೀ ಬಲ್ಲರೆ ಹೇಳ । ಈ ಒಡಪವ ।
ಪೋರಿ ನೀ ಬಲ್ಲರೆ ಹೇಳ.

....
....
....
ಸಾಣೆಯ ಕಲ್ಲಲ್ಲೇನೋ.........
....

ಇದೇ ಬಗೆಯಾಗಿ ಇನ್ನೂ ಬೇರೆ ಬೇರೆ ಒಡಪುಗಳನ್ನು ಸೇರಿಸಿ ಹಾಡನ್ನು ಸಾಕಾಗುವಷ್ಟರ ವರೆಗೂ ಬೆಳೆಸಿಕೊಳ್ಳಬಹುದು.

ಈವರೆಗಿನ ಒಡಪುಗಳ ಬಗೆಯ ಹಲವು ಸಂಸ್ಕೃತದಲ್ಲಿಯೂ ದೊರೆಯುವುವಾದರೂ ಇವೆಲ್ಲವೂ ಸಂಸ್ಕೃತದಿಂದಲೇ ಬಂದವು ಎಂದು ಹೇಳುವುದು ಸಾಹಸವಾಗದಿರದು. 'ಸಮಸ್ಯಾಪೂರ್ತಿ'ಯ ಒಂದು ವೈಶಿಷ್ಟ್ಯವು ಮಾತ್ರ ಕೇವಲ ಸಂಸ್ಕೃತದ್ದೆ ಎಂದೆನಿಸುವಂತಿದೆ. ಈ ಬಗೆಯ ಒಡಪುಗಳ ಸಂಖ್ಯೆಯು ಸಂಸ್ಕೃತದಷ್ಟು ಕನ್ನಡದಲಿಲ್ಲ. ಭೋಜ-ಕಾಲಿದಾಸರ ಹೆಸರಿನಲ್ಲಿರುವ ಸಮಸ್ಯಾಪೂರ್ತಿಯ ನೂರಾರು ತೊಡಕುಗಳು ಸುಪ್ರಸಿದ್ಧವಾಗಿವೆ. ಕನ್ನಡದಲ್ಲಿಯೂ ಹಿಂದಕ್ಕೆ ಈ ತೆರನಾದ ಸಮಸ್ಯಾಪೂರ್ತಿಯ ತೊಡಕುಗಳು ಬಳಕೆಯಲ್ಲಿದ್ದುವೆಂದು ಕಂತಿ, (ಅಭಿನವ) ಪಂಪರ ಒಡಪಿನಿಂದ ಗೊತ್ತಾಗುವಂತಿದೆ.

ಈ ಬಗೆಯ ಒಡಪಿನಲ್ಲಿ ಎದುರಾಳಿಯನ್ನು ಬೆರಗುಗೊಳಿಸುವಂತಹ ವಿಚಿತ್ರವಾದ ಅರ್ಥವು ತೋರುತ್ತಿರುವ ಕೊನೆಯ ಒಂದು ಸಾಲನ್ನು ಕೊಟ್ಟು ಆ ತೊಡಕನ್ನು ಬಿಡಿಸ ಹೇಳುವುದುಂಟು. ಪ್ರಬಂಧ ರಚನೆಯಲ್ಲಿ ಇದು ತೀರ ಕೊನೆಯಮೆಟ್ಟು. ಈ ಮೊದಲು ಕೊಟ್ಟಿರುವ ಒಡಪುಗಳಿಂದ ಒಳ್ಳೆಯ ಅಂದದ ಚಂದದ ನುಡಿಗಳಲ್ಲಿ (ಸಾಧ್ಯವಾದರೆ ತಾಲಬದ್ಧವಾಗಿ ಒಂದು ದಾಟಿಯಲ್ಲಿ) ಪದ್ಯಗಳ ಸಮಿಸಮೀಪದ ವಾಕ್ಯ ರಚನೆಯ ಶಿಕ್ಷಣವು ದೊರೆಯುವುದು. ಈ ಸಮಸ್ಯಾಪೂರ್ತಿಯಲ್ಲಿ ಎದುರಾಳಿಯು ಹಾಕಿದ ವಿರೋಧಾಭಾಸಾತ್ಮಕವಾದ ತೊಡಕಿಗೆ ಸಹಜ ಮನೋಹರವಾದ ಅರ್ಥವಾಗುವಂತೆ ಒಂದು ಪ್ರಸಂಗವನ್ನೇ ಕಲ್ಪಿಸಿಕೊಂಡು ಚಿತ್ರಿಸಬೇಕಾಗುವುದು. ಈ ಬಗೆಯ ನಗೆಯಾಟದಲ್ಲಿ ಹಲವೆಡೆ ಪ್ರತಿಭಾಶಕ್ತಿಯ ಲೀಲಾವಿಲಾಸವನ್ನು ನೋಡಿ ಬಗೆಯು ಹಿಗ್ಗದಿರಲಾರದು.

೨೧೮ ಕಂತಿಯು ಅಭಿನವ ಪಂಪನಿಗೆ ಹಾಕಿದ ತೊಡಕು. 'ದನವಂ ಕಡಿಕಡಿದು ಬಸದಿಗೆಟೆಯುತ್ತಿರ್ದರ್' ॥
(ಅಹಿಂಸಾ ಪರಮೋ ಧರ್ಮಃ ಎಂಬ ಹಿರಿಬಿರುದಿನ ಜೈನರ ಪವಿತ್ರ ದೇವಾಲಯಗಳು - ಬಸದಿಗಳು. ಅಲ್ಲಿ ದನವಂ ಕಡಿಕಡಿದು ಎಳೆದುಹಾಕುವದೆಂದರೇನು?) ಜೈನ ಧರ್ಮದಲ್ಲಿ ಅತ್ಯಂತ ಶ್ರದ್ಧೆಯುಳ್ಳ ಅಭಿನವ ಪಂಪನಿಗೆ ಮತ್ತೆ ಈ ತೊಡಕು! ಪ್ರತಿಭಾಶಾಲಿಯಾದ ಅಬಿನವ ಪಂಪನೂ ಲೀಲೆಯಿಂದ ಕಂತಿಯ ತೊಡಕನ್ನು ಬಿಡಿಸಿ ಹೀಗೆ ಉತ್ತರವನ್ನಿತ್ತನು.

ವನದೊಳಗೆ ಪುಟ್ಟಿ ಬೆಳೆಯುತೆ
ತನಿಗಂಪಂ ಪತ್ತುದೆಸೆಗೆ ಬೀರುತ್ತಿರ್ಪಾ ॥
ಘನಸುರುಚಿರ ಸಚ್ಚಂ-
ದನವಂ ಕಡಿಕಡಿದು ಬಸದಿಗೆ ಠಿಯುತಿರ್ದರ್

ಉತ್ತರಗಳು

೧. ಬೋಗೋಣಿ. ೨ ಅಲಸಂದಿ. ೩ ನೆಲಅಗಳಿ, ಕಣಜ, ನೆಲವು ೪, ೫ ದನದ ಕೊರಳ ಗಂಟೆ. ೬ ಚಿಕ್ಕೆಗಳು. ೭, ೮, ೯, ೧೦ ಗುಂಜೆ. ೧೧ ನೇರಿಲೆ ಹಣ್ಣು. ೧೨ ತತ್ರಾಣಿ. ೧೩ ಕುಳ್ಳಬಾನ, ೧೪ ಕೀಲಿ (ಬೀಗ). ೧೫ ಗುಂಡುಕಲ್ಲು (ರುಬ್ಬುಕಲ್ಲು). ೧೬ ಮೂಲಂಗಿ. ೧೭ ಔಡಲಕಾಯಿ. ೧೮ ಒಡ್ಯಾಣ, ಪಟ್ಟಿ. ೧೯ ಹೇನು. ೨೦ ತತ್ತಿ. ೨೧, ೨೨, ೨೩ ಹಸಿರು ಕಡಲೆಕಾಯಿ. ೨೪ ಅಡಿಯಲ್ಲಿರುವ ಮಾವಿನಹಣ್ಣು. ೨೫ ಬಾಳೆಹಣ್ಣು.

೨೬ ನುಸಿ. ೨೭ ಬಾರಕೋಲು. ೨೮ ಹೊಸ್ತಿಲು. ೨೯ ಬೈತಲೆ. ೩೦ ಸುತ್ತುತುರುಬು. ೩೧ ಮಲ್ಲಿಗೆ ಹೂವು, ೩೨ ನಾಗರಕಾಯಿ. ೩೩ ಮಾವಿನಕಾಯಿ. ೩೪ ಕರಿದಕಡುಬು. ೩೫ ಹರನಾಳಿಗೆ. ೩೬ ೩೭ ಮೂಗುತಿ, ನತ್ತು. ೩೮ ಹಲ್ಲು. ೩೯ ಕುಂಬಳಬಳ್ಳಿ ಮತ್ತು ಕಾಯಿ. ೪೦ ಹೊರಸು. ೪೧, ೪೨ ಹಲಸು. ೪೩ ಹತ್ತಿತೊಳೆ, ೪೪ ಹಲಸಿನ ತೊಳೆ, ಬಾಳೆಹಣ್ಣು. ೪೫ ಬಾಳೆಯ ಹಣ್ಣು. ೪೬ ನಾಲಗೆ. ೪೭ (ಮೂಲ) ತೆಂಗಿನಕಾಯಿ. ೪೮ ಉಗುರು (?). ಮೂಗು. ೪೯, ೫೦ ಸೂಜಿ.

೫೧ ದೀಪ. ೫೨ ಹುರಿವಾಗಿನ ಗಡಗಡೆಯೊಳಗಿನ ಅರಳು. ೫೩ ನೀರುಳ್ಳಿ. ೫೪ ಕಲ್ಲಂಗಡಿ. ೫೫ ಹಾಗಲಕಾಯಿ. ೫೬ ತೆಂಗಿನಕಾಯಿ. ೫೭ ಗುಂಗೀಹುಳ. ೫೮ ಆಡಿನ ಹಿಕ್ಕಿ. ೫೯, ೬೦ ಸೊಳ್ಳೆ, ಗುಂಗಾಡು. ೬೧ ಬಡಿಗೆ, ನಾಯಿ. ೬೨ ಇಲ್ಲಣ, ಹಲ್ಲಿ, ಕೆರ. ೬೩ ಹಲಸಿನ ಹಣ್ಣು. ೬೪ ಕೋತ್ತಂಬರಿ. ೬೫ ಒಣ ಮೆಣಸಿನಕಾಯಿ, ಕುಟ್ಟೋದು. ೬೬, ಆಕಳು (ಎಮ್ಮೆ) ಮೊಲೆಗಳು. ೬೭ (ಪಾಡ) ನಾಗರಕಾಯಿ. ೬೮ ಚವಳೀಕಾಯಿ. ೬೯ ಕನ್ನಡಿ. ೭೦ ನೊಣ. ೭೧, ೭೨, ೭೩, ೭೪, ೭೫ ಚೇಳು.

೭೬, ೭೭ ನಾಲಗೆ. ೭೮ ಬೆಂಕಿ, ಹಂಚು; ರೊಟ್ಟಿ. ೭೯, ಕಡಗೋಲು. ೮೦ ಹೆಳಲುಹಾಕಿ, ಬಾಗಿಲುನೂಕಿ, ಕನ್ನಡಿನೋಡಿ. ೮೧ ಸುಣ್ಣ, ಅಡಿಕೆ, ಎಲೆ. ೮೨ ಕೇದಿಗೆ ಹೊಡೆ. ೮೩ ಒನಕೆ. ೮೪ ಬಳೆ ಇಡಿಸಿಕೊಂಬುವಳು. ೮೫. ಕಡಜೀರಿಗೆ ಹುಳು. ೮೬ ಸೋಮವಾರದಿಂದ ಆದಿತ್ಯವಾರದ ವರೆಗಿನ ವಾರಗಳ ಹೆಸರು. ೮೭ ಬೆಂಡೋಲೆ. ೮೮ ಬೀಸುಕಲ್ಲು. ೮೯ ಎಂಜಲು ಗೋಮ ಮಾಡುವ ಗರತಿ ೯೦ ಗಜ್ಜರಿ. ೯೧, ೯೨ ಕಪ್ಪೆ, ಗಂಟೆ, ನಾಯಿ. ೯೩ ತಟ್ಟೆ, ಅನ್ನ, ಬೆರಲು, ಕಣ್ಣು, (ಉಣ್ಣುವಾಗ). ೯೪ ರೊಟ್ಟಿ, ನೀರುಳ್ಳಿ (ಕೃಷ್ಣಗಡ್ಡೆ). ೯೫ ತಿಗಣೆ, ಚಿಕ್ಕಾಡು, ಉಣ್ಣೆ. ೯೬ ಪಣತಿ, ಬತ್ತಿ, ಎಣ್ಣೆ (ದೀಪ). ೯೭ ಕಣ್ಣು, ಬೆರಲು, ಹಲ್ಲು. ೯೮ ಅಡಕೆ. ೯೯ ನೆಲವು, ತೆಂಗು, ಗುಂಜಿ. ೧೦೦ ಕಡುಬು, ದೋಸೆ, ಹೋಳಿಗೆ.

೧೦೧ ತೆಂಗು, ಅಂಟು, ನವಿಲುಗರಿ, ಕೊಬ್ಬರಿ ಬಟ್ಟಲು. ೧೦೨ ಬಜಿ, ಬಾಳದ ಬೇರು, ಕುಪ್ಪಸ, ನವಿಲುಗರಿ, ಕೊಬ್ಬರಿ. ೧೦೩ ತೇರು. ೧೦೪ ಹೊಟ್ಟಿನ ಜಲ್ಲಿ ೧೦೫ ಉಪ್ಪಿನಕಾಯಿ, ಸೀಗೇಕಾಯಿ, ತಂಬೋರಿಕಾಯಿ, ತೆಂಗಿನಕಾಯಿ. ೧೦೬ ಹುಟ್ಟು,ಜೇನು, ಮೇಣ. ೧೦೭ ಆಡು, ಆನೆ, ಎಡಿ, ಗಂಟೆ. ೧೦೮ ಕಣ್ಣು. ೧೦೯ ಧಡ, ಕುತ್ತಿಗೆಚೆಂಡು, ಕೂದಲು, ಹೇನು. ೧೧೦ ಕಾಲು, ಧಡ, ತಲೆ, ಕೂದಲು. ೧೧೧ ಅಡ್ಡಣಿಗೆ, ತಳಿಗೆ, ಅನ್ನ. ೧೧೨ ಪಡವಲಕಾಯಿ. ೧೧೩, ೧೧೪ ದೀಪ. ೧೧೫ ಕೂಸು. ೧೧೬ ಮೊಬ್ಬೆ. ೧೧೭ ತಾಯಿಯ ಮಡಲಲ್ಲಿಟ್ಟುಕೊಂಡು ಮುದ್ದಾಡುವ ಕೂಸು. ೧೧೮ ಗುಡಗುಡಿ, ಅದರ ಸಿಂಬಿ, ತಂಬಾಕದ ಪುಡಿ ಮತ್ತು ಬೆಂಕಿ. ೧೧೯ ಪುಂಡಿಪಲ್ಲೆ. ೧೨೦ ತಿಂಬುವ ಬಗೆ. ೧೨೧ ಹರಗೋಲು. ೧೨೨ ಹಲ್ಲುಪುಡಿ, ಕಸಪೊರಿಕೆ, ಗುಳ್ಳುದಾಳಿ. ೧೨೩ ಕಣ್ಣು. ೧೨೪ ನವಿಲು. ೧೨೫ ಸವತೆಕಾಯಿ..

೧೨೬ ಬಿಡಿಸುವ ಸಮಯದ ಹತ್ತಿಯ ಹೊಲ. ೧೨೭ ಸವತೆ ಕಾಯಿ, ತೊಟ್ಟಿಲಕಾಯಿ, ಮಾವಿನಕಾಯಿ. ೧೨೮ ಗೋರಂಟಿಗೆಯ ಗಿಡ. ೧೨೯ ಅರಿಸಿನ, ಸುಂಠಿ, ಮೆಣಸು, ೧೩೦ ಆಲಿಕಲ್ಲು (ಆಣೆಕಲ್ಲು), ೧೩೧ ಕುಸು(ಂ)ಬೆ. ೧೩೨ ತೆಂಗು. ೧೩೩, ೧೩೪, ೧೩೫ ಗಾಳಿ. ೧೩೬ ಕಾಳು ತುಂಬಿದ ಹಗೆ. ೧೩೭ ಬೆಕ್ಕು, ಇಲಿ. ೧೩೮ ಬಾಳೆಹಣ್ಣು. ೧೩೯, ೧೪೦ ಕಸಪೊರಕೆ. ೧೪೧ ಬಳೆಗಾರ, ಹಟಗಾರ (ಜಾಡ), ಸಿಂಪಿಗ, ೧೪೨ ಮೆಣಸು. ೧೪೩ ಇದ್ದಲು. ೧೪೪ ನೀರುಳ್ಳಿ. ೧೪೫ ಯಾಲಕ್ಕಿ, ಜೇನು, ಹುಣಸೆ, ಮುತ್ತು, ನದಿ. ೧೪೬ ದಾಳಿಂಬ ೧೪೭, ೧೪೮ ಬೆಣ್ಣೆ. ೧೪೯ ಸೇವಂತಿಗೆಯ ಹೂವು. ೧೫೦ ಸರಪಳಿ.

೧೫೧ ಹಚ್ಚಿಬಟ್ಟು. ೧೫೨, ೧೫೩, ೧೫೪, ೧೫೫೫, ೧೫೬, ೧೫೭, ೧೫೮, ೧೫೯ ತೆಂಗಿನಕಾಯಿ. ೧೬೦ ಸಾಣೆಕಲ್ಲು, ಗಂಧದ ಕೊರಡು. ೧೬೧ ನಗಾರಿ. ೧೬೨ ವೀಳ್ಯದ ಸಲುವಾಗಿ ಇರುವ ಸುಣ್ಣ. ೧೬೩ ಒಡೆಕಲ್ಲು. ೧೬೪ ಬಿಸಿಲು. ೧೬೫ ಪುಸ್ತಕದ ಅಂಗಡಿ. ೧೬೬ ಹತ್ತಿಯ ಹೊಲ. ೧೬೭, ೧೬೮ ಅಲ್ಲ. ೧೬೯ ಬಸುರಿ. ೧೭೦, ೧೭೧ ಮುಗಿಲು; ಚಿಕ್ಕೆ. ೧೭೨ ಕಿವಿ. ೧೭೩ ಮಾವಿನಹಣ್ಣು. ೧೭೪ ಅಲ್ಲ. ೧೭೫ ಜೋಳದ ತೆನೆ ಕುಯ್ಯುವುದು.

೧೭೬ ಹವಳ. ೧೭೭ ಕಾಸರ್ಕನಕಾಯಿ. ೧೭೮ ಬೆಂಕಿ. ೧೭೯, ೧೮೦ ಅಂಗಿ. ೧೮೧ ಚತ್ತರಿಗೆ. ೧೮೨, ೧೮೩ ಹೀರೇಕಾಯಿ. ೧೮೪ ಹಗ್ಗ, ಗಡಗಡೆ, ಉಕ್ಕಡದ ಕೊಡ. ೧೮೫, ೧೮೬, ಗಾಳಿಪಟ. ೧೮೭ ದೀವಳಿಗೆಯಲ್ಲಿ ಹೆಣ್ಣಮಕ್ಕಳ ಕೋಟೆ. ೧೮೮, ೧೮೯ ನೀರು. ೧೯೦ ದೀಪದ ಬೆಳಕು. ೧೯೧ ಹರಿಗೋಲು. ೧೯೨ ನದಿ, ಬಿಸಿಲ್ಗುದುರೆ. ೧೯೩ ಚಹಾದ ಕಿಟ್ಲಿ. ೧೯೪ ಮಹಾತ್ಮಾ ಗಾಂಧಿ ೧೯೫ ಅಗಸ. ೧೯೬ ಬಿಸಿಲ್ಗುದರೆ. ೧೯೭ ಯಾಲಕ್ಕಿ, ಜೇನು, ಹೇಂಟೆ (ಹೆಣ್ಣು. ಕೋಳಿ) ೧೯೮ ಜೇನು. ೧೯೯ ಸುಂಕದ ಕಟ್ಟೆ. ೨೦೦ ಟೆಲಿಫೋನು

೨೦೧ ಆಲಿಕಲ್ಲು (ಅಣೆಕಲ್ಲು). ೨೦೨ ಬಿಸಿಲು, ಶಾವಿಪಲ್ಲೆ, ೨೦೩ ಬೆಕ್ಕು, ಇಲಿ. ೨೦೪ (ರಾಯದ) ಕಾಗದ. ೨೦೫ ಕಳ್ಳಿ. ೨೦೬ ಮುಗಿಲು, ಮಿಂಚು (ಸಿಡಿಲು) ಚುಕ್ಕೆ, ಚೇಳು. ೨೦೭ ಕೆಂಡ. ೨೦೮ ಜೇನು. ೨೦೯ ಉಗುಳಬೇಕು. ೨೧೦ ದವನ. ೨೧೧ ಅರಳಿಲ್ಲ. ೨೧೨ ನಾಕಾಣೆ. ೨೧೩ ದಂಡಿಗೆ ಹೋಗಿದೆ. ೨೧೪ ಹರವಿ.

ಸೌಂದರ್ಯ ವಿಚಾರ

ಪ್ರಸ್ತಾವನೆ

ಕಲಾಕೃತಿಯಲ್ಲಿ 'ಸೌಂದರ್ಯ'ವು ಪ್ರಮಾಣ-ಪರಿಮಾಣಕ್ಕೆ ಬದ್ಧವಾಗಿರುತ್ತದೆ. ಮಾನವ ಜೀವನದಲ್ಲಿ ಈ 'ಪ್ರಮಾಣ'ವು 'ಪ್ರಾಮಾಣಿಕತೆ'ಯಾಗಿ ಜೀವನಕ್ಕೆ ಅರ್ಥವನ್ನೊದಗಿಸುತ್ತದೆ. ಕಲಾಕೃತಿಯಲ್ಲಿ ಸೌಂದರ್ಯವು 'ಇಡಿ-ಬಿಡಿ'ಗಳಲ್ಲಿರುವ ಸಾಮರಸ್ಯಕ್ಕೆ ಸಂಬಂಧಪಟ್ಟಿರುತ್ತದೆ. ಅದುವೇ ಮಾನವಜೀವನದಲ್ಲಿ 'ಆಚಾರ-ವಿಚಾರ'ಗಳಲ್ಲಿಯ ಸಾಮರಸ್ಯ, ಏಕರೂಪತೆಯಲ್ಲಿ ಹುದುಗಿರುತ್ತದೆ.

ಕಣ್ಣಿಗೆ ಅಂದವಾದುದು, ಕರ್ಣಗಳಿಗೆ ಮಧುರವಾದುದು, ಇಂದ್ರಿಯಗಳಿಗೆ ಆಪ್ಯಾಯಮಾನವಾದುದು, ಸೌಂದರ್ಯವೆಂದು ಸಾಮಾನ್ಯವಾಗಿ ಬಗೆಯಲಾಗುತ್ತದೆ. ಆದರೆ, ಸೌಂದರ್ಯದ ನೆಲೆ-ಬೆಲೆ ಬಹಳ ಆಳವಾದುದು, ಗಂಭೀರವಾದುದು. ಜೀವನದಲ್ಲಿಯ ನಿತ್ಯನ್ಯೂನತೆಯೇ ಸೌಂದರ್ಯ. ಜೀವನ ವಿಶ್ವದಲ್ಲಿಯ ಈ ನಿತ್ಯನೂತನತೆಯನ್ನು ಪ್ರತಿಭೆ ಗುರುತಿಸಿ, ಅದನ್ನು ನವನವೋನ್ಮೇಷಶಾಲಿನಿಯಾಗಿ ನವನವೋಲ್ಲೇಖಶಾಲಿನಿಯಾಗಿ ಅಭಿವ್ಯಕ್ತಿಸುತ್ತಿರುತ್ತದೆ. ಜೀವನ ಇದೊಂದು ಬತ್ತಲಾಗದ ಕ್ಷಯಗಣಿ. ಪ್ರತಿಭೆ ಈ ಖಣಿಯ ಸಿರಿ-ಸಂಪತ್ತನ್ನು ಅನ್ವೇಷಿಸುವ, ಹೊರದೆಗೆದು ಸೂರೆಗೈಯುವ ಮಹಾನ್‌ಶಕ್ತಿ. ಈ ಪ್ರಕ್ರಿಯೆ ನಿರಂತರವಾದುದು. ಜೀವನಸೃಷ್ಟಿ ಮತ್ತು ಮಾನವ ಪ್ರತಿಭೆಗಳ ಈ ಪ್ರಕ್ರಿಯೆ ಮಾನವೇತಿಹಾಸದ ವಸ್ತುವಾಗಿದೆ. ಅದುವೇ ಮಾನವಜೀವನಕ್ಕೆ ಸೌಂದರ್ಯವನ್ನಿತ್ತಿದೆ. ನಿತ್ಯ ನೂತನತೆಯನ್ನು ಒದಗಿಸಿದೆ.

ಸೌಂದರ್ಯದ ಉಪಾಸನೆ ಎಂದರೆ ಸ್ತ್ರೈಣರಲ್ಲಿ, ಕಲಾವಂತರೆನಿಸುವವರಲ್ಲಿ ಕಾಣುವ 'ರಸಿಕತೆ' ಎಂದು ಅದನ್ನು ಸಂಕುಚಿತಾರ್ಥದಲ್ಲಿ ಬಗೆಯಲಾಗುತ್ತದೆ. ಆದರೆ, ಸೌಂದರ್ಯದ ಉಪಾಸನೆ ಹಾಗಿಲ್ಲ. ಸೌಂದರ್ಯೋಪಾಸನೆ ಸಾಹಸಿಗರ ಕೆಲಸ. ಜೀವನ ವಿಶ್ವದ ರಹಸ್ಯಗಳನ್ನು ಭೇದಿಸಿ, ಅದರ ಕಾಣ್ಕೆಗಳನ್ನು ಒದಗಿಸುವುದೇ ನಿಜವಾದ ಸೌಂದರ್ಯೋಪಾಸನೆ. ಈ ಹಿನ್ನೆಲೆಯಲ್ಲಿ ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್, ಅಲ್ಬರ್ಟ ಐನ್‌ಸ್ಟೀನ್, ಬರ್ಟ್ರಾಂಡ್ ರಸೆಲ್, ಗಾಂಧೀಜಿ, ಡಾ॥ ಶಂ. ಬಾ. ಜೋಶಿ ಮುಂತಾದವರು ನಿಜವಾದ ಸೌಂದರ್ಯೋಪಾಸಕರು. ಮಾನವ ಜೀವನಸ್ಥ ಸೌಂದರ್ಯವನ್ನು ನಮ್ಮ ಅರಿಕೆಗೆ ತಂದ ಮಹಾಮಹಿಮರು, ನಿನ್ನೆಗಿಂತ ಇಂದು 'ಅಂದ'ವಾಗುವಂತೆ, ಇಂದು ಇದ್ದುದು ಬರಲಿರುವ 'ನಾಳೆ'ಗಳಲ್ಲಿ ಮತ್ತಷ್ಟು 'ಅಂದ-ಚೆಂದ' ವಾಗುವಂತೆ, ಅರ್ಥಪೂರ್ಣವಾಗುವಂತೆ ಜೀವನಸ್ಥ ಸೌಂದರ್ಯವನ್ನು ಮನುಕುಲಕ್ಕೆ ಅರುಹಿದ ಈ ಮಹಾಮಹಿಮರ ಸೌಂದರ್ಯೋಪಾಸನೆ ನಮಗೆಲ್ಲ ದಾರಿದೀಪ.

ಕನ್ನಾಡಿನ ಧೀಮಂತ ಸಂಶೋಧಕ-ಸಾಹಿತಿ ಡಾ॥ ಶಂ ಬಾ. ಜೋಶಿ. ಅವರು ನಮ್ಮ ಜೀವನದಲ್ಲಿಯ ಓರೆ-ಕೋರೆಗಳನ್ನು ತಿದ್ದಿ ನಮ್ಮ ಜೀವನವನ್ನು ಸುಂದರವಾಗಿ ನಿರ್ಮಿಸಲು ಹೆಣಗಿದ, ಶ್ರಮಿಸಿದ ಸೀಮಾ-ಪುರುಷರು.

೧೯೪೯ರಷ್ಟು ಹಿಂದೆಯೇ ಅವರ ವಿಚಾರ ಪ್ರಣಾಲಿಯ ಬೀಜರೂಪದ ದರ್ಶನ ಈ ಕಿರುಹೊತ್ತಿಗೆಯಲ್ಲಿ ಕಾಣಸಿಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಡಾ।। ಶಂ. ಬಾ. ಜೋಶಿ ಅವರು ಮಾಡಿದ ಈ ಭಾಷಣವು ಮೌಲಿಕ ವಿಚಾರಗಳ ಅನರ್ಘ್ಯರತ್ನಗಳ ಗಣಿಯಾಗಿದೆ. ಆದುದರಿಂದ 'ಮಾನವ ಧರ್ಮ ಪ್ರತಿಷ್ಠಾನ'ವು ಪ್ರಸ್ತುತ ಪುಸ್ತಿಕೆಯ ಮರುಮುದ್ರಣ ಮಾಡಿ ಸಾಹಿತ್ಯಾಸಕ್ತರ, ಜೀವನ ವಿಶ್ವದ ಸೌಂದರ್ಯೋಪಾಸಕರ ಕೈಯಲ್ಲಿ ಈ ಕೃತಿಯನ್ನಿಡುವಲ್ಲಿ ಹೆಮ್ಮೆ ಪಡುತ್ತದೆ.

ಕೃತಿಯ ಮುದ್ರಣದಲ್ಲಿ ಸಹಕರಿಸಿದ, ಪ್ರತಿಷ್ಠಾನದ ಅಧ್ಯಕ್ಷರಾದ ಡಾ।। ನಿಂಗಣ್ಣಾ ಸಣ್ಣಕ್ಕಿ ಮತ್ತು ಪ್ರಿ. ಜ್ಯೋತಿ ಹೊಸೂರ, ಶ್ರೀಮತಿ ವಿಮಲ ಡಿಸ್ಕಳಕರ ಅವರಿಗೆ ಕೃತಜ್ಞತೆಗಳು. ಕೃತಿ ಮುದ್ರಿಸುವಲ್ಲಿ ಸಹಕರಿಸಿದ ಗದುಗಿನ ತ್ವರಿತ ಮುದ್ರಣಾಲಯದ ಶ್ರೀ ಫ. ಶಿ. ಭಾಂಡಗೆ ಅವರಿಗೆ ನಾನು ಚಿರಋಣಿ.

೧-೨-೧೯೯೨

ಭಾಸ್ಕರ ಪತ್ತಾರ
ರಾಯಬಾಗ

ಸೌಂದರ್ಯ ವಿಚಾರ

ನೀವು ಒಲವುದೋರಿ ನನ್ನನ್ನು ಈ ಸ್ಥಾನದಲ್ಲಿ ಕುಳ್ಳಿರಿಸಿ ಗೌರವಿಸಿದುದಕ್ಕಾಗಿ ನಿಮಗೆ ನಾನು ಕೃತಜ್ಞನಾಗಿದ್ದೇನೆ. ಯಾವ ಮಂತ್ರಮಾಟಗಳಿಲ್ಲದೆ ದೊರೆತ ಸಹಜ ಫಲದ ಮಾಧರ್‍ಯ, ಆನಂದ ಬೇರೆ ಯಾವುದಕ್ಕೂ ಇಲ್ಲ. ಅದನ್ನು ಸವಿವ ಸುಸಂಧಿಯನ್ನು ಒದಗಿಸಿಕೊಟ್ಟ ನಿಮಗೆ ನನ್ನ ಅಭಿವಂದನೆಗಳು.

ಕೆಯ್ಕೊಂಡ ಕೆಲಸದೊಳಗಣ ಸೊಬಗೇ ನನ್ನನ್ನು ಸೂರೆಗೊಂಡಿರುವುದರಿಂದ ಹೊರಗಣ ಯಾವ ಆಕರ್ಷಣಗಳೂ ನನ್ನನ್ನು ತಮ್ಮತ್ತ ಸೆಳೆಯಲು ಅಷ್ಟು ಸಮರ್ಥವಾಗಿಲ್ಲ. ಏಕಾಂತದ ಮನನ-ನಿಧಿಧ್ಯಾಸಗಳಲ್ಲಿ ಬಗೆಗಣ್ಣಿಗೆ ಕಾಣುವ ಜೀವನ ದೇವತೆಯ ಅಂದವೊಂದು ನಾನಾ ತೆರದ ಲೋಕಮಧ್ಯದಲ್ಲಿ ತೆರೆದ ಕಣ್ಣಿಗೆ ಕಾಣುವ ಅಂದವಿನ್ನೊಂದು. ಈ ಅಂದಗಳಿಗೆ ಕೊನೆಯಿಲ್ಲ. ಅಂದವೆಂದರೆ ಬಹು ವಿಧ; ಬಗೆ ಬಗೆ. ಅಂದ ಆ ಅಂದದ ಚೆಲುವನ್ನು ಕಂಡುಂಡು ತಣಿಯಬೇಕೆಂಬ ಹಂಬಲವೆ ಮುಖ್ಯವಾಗಿ ನನ್ನನ್ನು ನಿಮ್ಮ ಮಧ್ಯದಲ್ಲೂ ತಂದು ನಿಲ್ಲಿಸಿದೆ. ನನ್ನ ಕೋಣೆಯಲ್ಲಿ ತಿಳಿಯದ ಹಲವು ಮಾತುಗಳು, ಇಂತಹ ಎಡೆಗಳಲ್ಲಿ ಹಲಕೆಲವು ಬಾರಿ ನನಗೆ ತಟ್ಟನೆ ಹೊಳೆಹೊಳೆದು ನನ್ನ ತೊಡಕುಗಳನ್ನು ಬಿಡಿಸಿಕೊಳ್ಳಲು ಸಹಾಯವಾಗಿದೆ. ಅಂತಹ ಅಮರ ಪವಿತ್ರವಾದ ಕ್ಷಣವು ನನಗೆ ಇಂದು ಇಲ್ಲಿಯೂ ಲಭಿಸೀತೆಂದು ಹಾರಯಿಸಿದ್ದೇನೆ. ಆದುದರಿಂದ, ನನಗೆ ಗೌರವದ ಮೋಹಕ್ಕಿಂತಲೂ ಈ ಆಕರ್ಷಣವೇ ಬಲವಾದುದು. ಆದರೆ, ಆ ಸಿದ್ಧಿ ಒಂದು ಯೋಗ-ಯೋಗಾಯೋಗ; ಲೆಕ್ಕಕ್ಕೆ ನಿಲ್ಲುಕದ್ದು. ಏಕೆಂದರೆ ಅಂದ, ಚೆಂದ ಅಥವಾ ಚೆಲುವು ನಮ್ಮ ಮೇಲೆ ಒಲಿದಲ್ಲದೆ ಯಾರಿಗೂ ದೊರೆವ ವಸ್ತುವಲ್ಲ. ನಯವಿನಯದಿಂದ ಅದನ್ನು ಅರಸುತ್ತಿರುವುದು ನಮ್ಮ ಕರ್ತವ್ಯ. ಅದು ಕಾಣಿಸಿಕೊಂಡ ಕ್ಷಣವೇ ಜೀವಿತದ ಪರಮಭಾಗ್ಯ.

ಲೋಕವೆಲ್ಲವೂ ತಿಳಿದೊ ತಿಳಿಯದೆಯೊ ಚೆಲುವನ್ನು ಬೆನ್ನಟ್ಟಿಕೊಂಡು ನಡೆದಿದೆ. ಕೆಲರ ಪಾಲಿಗೆ ಚೆಲುವು ಕಾಂಚನ-ಮೃಗ. ಅದನ್ನು ಬೇಟೆಯಾಡಿ ಹಿಡಿದು ತರಬಹುದೆಂದು ಅವರ ಎಣಿಕೆ. ಹಣದಿಂದ ಅದನ್ನು ಕೊಳ್ಳಬಹುದೆಂಬ ಭ್ರಾಂತಿಬೇರೆ. ಅದನ್ನು ಬೆನ್ನಟ್ಟಿಕೊಂಡು ಧಾವಿಸಿ, ದಣಿದು, ಕಾಂಚನಮೃಗವು ಮಾಯಾವಿ ಯೆಂದೂ, ಅದು ತಮ್ಮನ್ನು ಅಡ್ಡ ದಾರಿಗೆ ಒಯ್ದಿತೆಂದೂ ಮಿಡುಕುವ ಹೊತ್ತು ಅವರಿಗೆ ತಪ್ಪಿದ್ದಲ್ಲ. ಚೆಲುವಿನ ನೆಲೆ ತಿಳಿಯದೆ ಆಳದಲ್ಲಿ ಬಿದ್ದವರು ಹಲವರು. ಜೀವನದಲ್ಲಿ ಅಲ್ಪಸ್ವಲ್ಪ ಆದರೂ ಚೆಲುವಿನ ಅನುಭಾವವು ದೊರೆಯದಿದ್ದವರೆ ದೊರೆಯಲಾರರು. ಅದು ಒಮ್ಮೆಲೆ-ಫಕ್ ಎನೆ, ಮಿನುಗಿ-ಮಿಂಚಿ-ಹೊಳೆದು ಕಣ್ಣಸೆಳೆದು ಮಾಯವಾಗುವುದು. ಮನಸ್ಸನ್ನು ಕದಡಿಸಿ ಹುಚ್ಚು ಹಿಡಿಸುವುದು. ಆದರೆ, ಇದರ ಹೊಲಬನರಿಯದವರು ಹೊನ್ನು-ಹೆಣ್ಣು-ಮಣ್ಣು ಅಥವಾ ಕೀರ್ತಿಯಂತಹ ಯಾವುದೊಂದು ಭೌತವಸ್ತುವಿನಲ್ಲಿ ಕಂಡ ಹೊರಮಿಂಚನ್ನೇ

ಚೆಲುವೆಂದು ಭ್ರಮಿಸಿ ಅಂದಗೇಡಿಗಳಾಗಿ ಬಾಳನ್ನು ಬರಡು ಮಾಡಿಕೊಳ್ಳುವರು. ಆದರೆ, ಚೆಲುವು ನಮ್ಮನ್ನು ಸೆರೆ ಹಿಡಿಯಲು ಮಾಡುವ ಬೇಟವದು. ಶಾಸ್ತ್ರಗಳು ವಸ್ತುಗಳನ್ನು ಪೃಥಕ್ಕರಿಸಿ ಒಳಗೆ ಅಡಕವಾದ ಚೆಲುವಿನ ಆಳವನ್ನು ಅಳೆಯಲು ಹೊರಟಿವೆ. ಸಾಹಿತ್ಯ ಕಲೆಗಳು ಪ್ರತಿಸೃಷ್ಟಿಯನ್ನೆ ಸೃಜಿಸಿ ಚೆಲುವಿನ ಹಲವಂದವನ್ನು ಲೋಕಕ್ಕೆ ಪ್ರದರ್ಶಿಸಲು ಹೆಣಗುತ್ತಲಿದೆ.

ಹಾಗಾದರೆ ಚೆಲುವಿನ ಹದವೇನು? ಅದರ ಬಗೆಯಾವುದು? ಚೆಲುವನ್ನು ಸ್ಥೂಲವಾಗಿ ಮೂರು ಅಂದಗಳಲ್ಲಿ ವಿಭಾಗಿಸಬಹುದು.

೧. ಸಮ್ಯಕ್ ಭೋಗದಲ್ಲಿ ಅನುಭವಕ್ಕೆ ಬರುವ ಚೆಲುವು;

೨. ರೀತಿ ಅಥವಾ ಆಕಾರದಲ್ಲಿ ಅಡಕವಾದ ಚೆಲುವು;

೩. ಅರ್ಥದಲ್ಲಿ ಅಭಿವ್ಯಕ್ತವಾಗುವ ಚೆಲುವು.

ಇವುಗಳಲ್ಲಿ ಕ್ರಮವಾಗಿ ಒಂದರಿಂದ ಮುಂದಿನದು ಮಿಗಿಲಾದುದಾಗಿದೆ. ಪ್ರಾಥಮಿಕ ಸ್ಥಿತಿಯಲ್ಲಿ ಸುಖದ ಮೂಲಕ ಸೌಂದರ್ಯಾನುಭವದ ಅರಿವು ತಲೆದೋರುತ್ತದೆ. ಇವುಗಳಲ್ಲಿ ಸ್ಪರ್ಶಸುಖದ ನಿಮಿತ್ತದಿಂದ ಬಂದ ಸೌಂದರ್ಯಾನುಭವವು ತೀರ ಆರಂಭದ್ದು. ಒಂದೇ ಕಾಲಕ್ಕೆ ಹಲವರಿಗೆ ಸೌಂದರ್ಯಾನುಭೂತಿಯುಂಟಾಗಲು ಇದರಲ್ಲಿ ಎಡೆಯಿಲ್ಲ. ನಾಲಗೆ ಮತ್ತು ಮೂಗುಗಳ ಕ್ಷೇತ್ರವೂ ಪರಿಮಿತವೇ. ಕಣ್ಣು , ಕಣ್ಣಿಗಿಂತ ಕಿವಿಯ ಕ್ಷೇತ್ರವಿಸ್ತಾರ ವಿಶಾಲವಾದುದು. ಆದುದರಿಂದ ಇವುಗಳಿಂದಾಗುವ ಚೆಲುವಿನ ಅರಿವು ಕ್ರಮವಾಗಿ ಹೆಚ್ಚು ಹೆಚ್ಚಿನ ತರಗತಿಯದಾಗಿದೆ.

ಯಾವುದೇ ನಿಮಿತ್ತದಿಂದ ಕಂಡ ಸೌಂದರ್ಯದ ದಿವ್ಯವಾದ ಆ ಸ್ವಲ್ಪ ದರ್ಶನದಿಂದಲೆ ಮಾನವನು ಕ್ಷಣಕಾಲ ಬೆಪ್ಪಾಗಿ (?) ತನ್ನನ್ನು ತಾನು ಮರೆತು ಬಿಡುವನು; ಮೈಮರೆತು ಯಾವ ಲಾಭ ಹಾನಿಗಳ ಎಗ್ಗಿಲ್ಲದೆ ಅದನ್ನು ಹುಡುಕಿಕೊಂಡು ಹೊರಡುವನು. ಎದೆ ಕದಡಿಸುವ ಈ ಭಾವ ನಿರ್ಭರತೆಯ ಅರ್ಥವನ್ನು ಆಕಲನ ಮಾಡುವ ಸಾಮರ್ಥ್ಯವಿಲ್ಲದವರು ತೂಕವನ್ನು ಹಿಡಿದುಕೊಳ್ಳಲಿಕ್ಕಾಗದೆ ಈ ದಾರಿಯಲ್ಲಿ ನಡುವೇ ಕಾಲುಜಾರಿ ಬೀಳುವರು. ಭೋಗದಲ್ಲಿ ಬಂದ ಸೌಂದರ್ಯಾನುಭವದಿಂದ ಪ್ರಮತ್ತರಾದವರಿಗೆ ಸೌಂದರ್ಯದ ಪರಮೋದಾತ್ತರೂಪವು ಸಂಯಮದ ಮೂಲಕವಾಗಿಯೆ ಅನುಭವಕ್ಕೆ ಬರಬಲ್ಲದು ಎಂಬ ಅರಿವು ಅಥವಾ ವಿವೇಕವು ಉಳಿಯುವುದಿಲ್ಲ. ಈ ವಿವೇಕೋದಯವಾಗುವಂತೆ ಲೋಕಕ್ಕೆ ನೆರವಾಗುವುದು ಸೌಂದರ್ಯಸಾಕ್ಷಾತ್ಕಾರಕ್ಕೆ ಸಹಾಯವನ್ನೀಯುವುದು ಇದುವೆ ಸಾಹಿತ್ಯ ಮತ್ತು ಕಲೆಯ ಗುರಿಯಾಗಿದೆ.

ಸೌಂದರ್ಯ ಅಥವಾ ಚೆಲುವು ಎಂಬುದೆಲ್ಲವೂ ಕಾಲ್ಪನಿಕ, ಕೇವಲ ಭ್ರಾಂತಿ ಎಂಬೊಂದು ಮತವಿದೆ. ಭ್ರಮೆಯಲ್ಲಿ ಸೌಂದರ್ಯವಿದೆ, ಎಂದು ಹೇಳುವುದು ಅಂಶತಃ ನಿಜವಾದರೂ ಭ್ರಮೆಯೆ ಸೌಂದರ್ಯವಲ್ಲ. ಭ್ರಮೆಯಲ್ಲಿ ಸೌಂದರ್ಯವು ಕಾಣಿಸಿಕೊಳ್ಳುವುದು; ಭಾಸವಾಗುವುದು. ಇದು ನಿಜವಿದ್ದರೆ ಸೌಂದರ್ಯದ ಸ್ವತಂತ್ರ ಅಸ್ತಿತ್ವವನ್ನು ಒಪ್ಪಿಕೊಳ್ಳಬೇಕಾಗುತ್ತದೆ. 'ಈ ಕಾದಂಬರಿ ಸುಂದರವಾಗಿಲ್ಲ' ಎನ್ನುವಾಗ ಸುಂದರ ಕಾದಂಬರಿ ಇದೆ ಎಂಬುದನ್ನು ಗೃಹೀತ ಹಿಡಿಯದೆ ಮೇಲಣ ವಾಕ್ಯವೆ ನಿರರ್ಥಕವಾಗುವುದು. ಸುಂದರ ಎಂಬುದಕ್ಕೆ ಇಲ್ಲಿ ಪರಿಪೂರ್ಣ ಎಂಬರ್ಥ. ಅಪೂರ್ಣತೆಯ ಮೂಲಕ ಪೂರ್ಣತೆಯ ಅರಿವು ಉಂಟಾಗುತ್ತದೆ. ಕೈಯಿಂದ ಮುಟ್ಟಿ, ತಟ್ಟಿ ನೋಡಲು ಸಿಕ್ಕದೆ ಇದ್ದ ಮಾತ್ರಕ್ಕೆ ಪೂರ ಅಥವಾ ಪರಿಪೂರ್ಣದ ಅಸ್ತಿತ್ವವೇ ಇಲ್ಲವೆನ್ನುವುದು ತಿಳಿವಿನ ಅಪಮಾನ. ಹೃದಯ ಬುದ್ಧಿಗಳು ಸೌಂದರ್ಯಾನುಭೂತಿಯ ಆನಂದವನ್ನು ಅನುಭವಿಸುತ್ತಿದ್ದರೂ ಬಾಹ್ಯೇಂದ್ರಿಯಗಳಿಗೆ ಕಾಣದ್ದೆಂಬ ಮಾತ್ರದಿಂದ ಸೌಂದರ್ಯ ಪರಿಪೂರ್ಣತೆಯೆಂಬುದೇ ಕಾಲ್ಪನಿಕವೆಂಬುದು ಅಸಮಂಜಸ. ಭಾವಗಮ್ಯ ಎಂಬರ್ಥದಲ್ಲಿ 'ಕಾಲ್ಪನಿಕ'ವೆಂಬ ಮಾತು ಇದ್ದರೆ ಅದು ನಿಜ. ಆದರೆ ಭ್ರಾಂತಿ, ಸುಳ್ಳು ಎಂಬರ್ಥದಲ್ಲಿ ಮಾತ್ರ ಸುಳ್ಳು.

ಏಕೆಂದರೆ : ಸತ್ಯದಿಂದ ದೂರವಾದಷ್ಟು ಸೌಂದರ್ಯವು ಹಸಗೆಡುತ್ತದೆ. ಒಳಗೆ ಪ್ರಮಾಣಬದ್ಧವಾಗಿದ್ದು ಹೊರಗಣ ವಸ್ತುಗಳೊಡನೆ ಹೊಂದಿಕೆಯಾಗಿರುವಲ್ಲಿಯೆ ಸೌಂದರ್ಯ ಪ್ರತೀತಿಯಾಗುತ್ತದೆ. ಒಂದು ನಾಟಕ ಅಥವಾ

ಕಾದಂಬರಿಯೊಳಗಿನ ಒಂದೊಂದು ಪಾತ್ರವೂ ತನ್ನಷ್ಟಕ್ಕೆ ತಾನು ಸುಸಂಗತವಾಗಿರಬಹುದು. ಆದರೆ ಇನ್ನುಳಿದುವುಗಳೊಡನೆ ಬರುವ ಸಂಬಂಧದಲ್ಲಿ ತಾಳಮೇಳವಿಲ್ಲದೆ ಇದ್ದರೆ ಆ ಕೃತಿಯ ಹದಕೆಡುವುದು. ಗಾಯಕನ ಹಾಡು ರಸಭಾವೋಪೇತವಾಗಿರಬಹುದು; ಬದಿಯ ಮದ್ದಳೆಯವನೊಡನೆ ಆತನ, ಅಥವಾ ಆತನೊಡನೆ ಮದ್ದಳೆಯವನ ಹೊಂದಿಕೆಯಿಲ್ಲದಲ್ಲಿ ವಿರಸವಾಗುವುದು. ಹೇಳುವ ಹಾಡೂ ನುಡಿಸುವ ಮದ್ದಳೆಯೂ ಪರಸ್ಪರ ಪೋಷಕ ಪ್ರೋತ್ಸಾಹಕವಾಗಿರಬಹುದು. ಆದರೆ ಕುಳಿತ ಜನದ ಮನಸು, ಆ ಪ್ರಸಂಗ ಇವು ಅವರು ಆರಂಭಿಸಿದ ರಾಗಕ್ಕೆ ಅನುಕೂಲವಲ್ಲವಾಗಿದ್ದಲ್ಲಿ ಸೌಂದರ್ಯ ಹಾನಿಯಾಗುವುದು. ಒಳ-ಹೊರಗಣ ಸುಸಂಗತಿಯಲ್ಲಿ ಸೌಂದರ್ಯವುಂಟು.

ಒಳಗೆ ಪ್ರಮಾಣ ಬದ್ಧವಾಗಿರದ್ದು ಅ-ಪ್ರಾಮಾಣಿಕ. ಅಪ್ರಾಮಾಣಿಕವೆಂಬುದು ಆಸತ್ಯದ ಇನ್ನೊಂದು ಹೆಸರು. ಹೊರಗಣ ವಸ್ತುಗಳೊಡನೆ ಹೊಂದಿಗೆಯಿಲ್ಲದ್ದು ಎಂದರೆ ಅ-ವಾಸ್ತವ; ಅವಾಸ್ತವವೆಂದರೆ ಸುಳ್ಳು. ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯವೆಂಬ ಮಹಾವಾಕ್ಯವು ಈ ಅರ್ಥದಿಂದಲೇ ತ್ರಿಕಾಲಾಬಾಧಿತ ಸತ್ಯ. ಕೂಳು ಕೂಳೆಂದು ಜನಸಾಮಾನ್ಯರೆಲ್ಲ ಒರಲುತ್ತಿರುವಾಗ ಎಲ್ಲಿಯ ಸತ್ಯ? ಎಲ್ಲಿಯ ಸೌಂದರ್ಯ? 'ಅನ್ನಂ ಬ್ರಹ್ಮೇತಿ ವ್ಯಜಾನಾತ್' ಎಂಬುದೇ ಇಂದಿನ ಮಹಾಮಂತ್ರವಾಗಬೇಕು. ಈ ಮಂತ್ರಸಿದ್ಧಿಯಾದ ಬಳಿಕ ಸತ್ಯಸೌಂದರ್ಯಾದಿಗಳ ಮುಂದಿನ ಎಲ್ಲ ಮಾತು, ಎಂದು ಹೇಳುವ ಮಾತು ಅವಾಸ್ತವವೆಂದು ಹೇಳಲಾರೆ. ಆದರೂ ಈ ಜಾಹೀರಾತಿನ ಯುಗದಲ್ಲಿ ಎಲ್ಲ ಸಮಸ್ಯೆಗಳೂ ಅತಿರಂಜಿತವಾಗಿ ಅತಿಶಯದ, ಅತಿವಾದದ ರೂಪ ತಾಳಿ ಜನಗಳನ್ನು ತಮ್ಮತ್ತ ಸೆಳೆಯಲು ಕೈಚಳಕ ಬಾಯ್ ಚಳಕ ನಡೆಸಿರುವಲ್ಲಿ 'ದರಿದ್ರ ನಾರಾಯಣನ' ಪ್ರಶ್ನೆಯಾದರೂ ಇದಕ್ಕೆ ಅಪವಾದವಾಗಿ ಹೇಗಿರಬಲ್ಲದು?

ಸತ್ಯ-ಸೌಂದರ್ಯಗಳು ಸಾಪೇಕ್ಷ ಪ್ರಶ್ನೆಗಳಲ್ಲ. ಇವು ಹೊರಗಣ ಯಾವ ಸಂಗತಿಗಳನ್ನೂ ಅಪೇಕ್ಷಿಸಿ ಇಲ್ಲ. ಸ್ವಯಂ-ಭೂ ಇವು. 'ಇರುವುದು' ಸೌಂದರ್ಯ (ಸತ್ಯ); ತೋರುವುದು ಸೌಂದರ್ಯವಲ್ಲ; ಮಾಯೆ ತೋರುವುದಕ್ಕೆ ಸಿರಿವಂತಿಕೆ ಬೇಕಾಗಿರಬಹುದು; ಆದರೆ ಅದು ಮೋಸ. ಇರುವುದಕ್ಕೆ ವಿಚಾರ, ವಿವೇಕ, ಭಾವುಕತನದ ಬಂಡವಾಳವೇ ಸಾಕು. ಆದುದರಿಂದ ಜೀವನವೇ ಸೌಂದರ್ಯ. ಸೌಂದರ್ಯದ ಕಣ್ಣು ಅರಳಿದಲ್ಲಿ ಲೋಕದೊಳಗಿನ ಕುರೂಪತೆ (ಅನ್ಯಾಯ, ಅನೀತಿ, ಕ್ರೂರತನ) ಅದೆಷ್ಟೋ ಕಡಿಮೆಯಾದೀತು.

ರುಥ್ ಬಂಝೆಲ್ ಎಂಬ ಸಂಶೋಧಕನು ತನ್ನ ನಿರೀಕ್ಷಣೆಯಲ್ಲಿ ಬಂದ ಅನುಭವಗಳಿಂದ ಕೊನೆಗೆ ಹೀಗೆ ಸಿದ್ಧಾಂತ ಮಾಡಿದ್ದಾನೆ.

> Among all existing groups there is none, however rude into culture, that does not have some characteristic form of art..... And no people, however harrassed by economic need, is without some form of literary art. All people tell tales, presumably for the pleasure of telling them, all people sing songs and dance; and all people have more are less elaborate patterns of behaviour for public performances. All these activities besides servidng their purpose in the economic or social life of the group, give pleasure by their intrinsic qualities.

ಎಂತಹ ಕಾಡಾಡಿಗಳೇ ಆಗಿರಲಿ, ಅವರು ಎಂತಹ ಆರ್ಥಿಕ ವಿಪರೀತ ಪರಿಸ್ಥಿತಿಯಲ್ಲಿಯೇ ಇರಲಿ, ಜಗತ್ತಿನ ಎಲ್ಲ ಭಾಗದಲ್ಲೂ ಜನಾಂಗಗಳು ಕಥೆ, ಕುಣಿತ, ಹಾಡು ಚಿತ್ರ ಮೊದಲಾದುವುಗಳ ಮುಖಾಂತರ

ಸೌಂದರ್ಯದರ್ಶನದಿಂದ ಜೀವನದೊಳಗಿನ ತಮ್ಮ ದುಃಖಗಳನ್ನು ಕಳೆದುಕೊಂಡು ಸುಖಿಗಳಾಗಲು ಹವಣಿಸುತ್ತಿರುವುದು ಕಂಡುಬರುತ್ತದೆ.

ಸೌಂದರ್ಯಾಭಿರುಚಿಯಂತಹ ಲೋಕೋದ್ಧಾರಕ ಶಕ್ತಿಯು ಬೇರೊಂದಿಲ್ಲ. ಸೌಂದರ್ಯಾಕರ್ಷಣಕ್ಕೆ ಒಳಗಾಗದ ಮಾನವನಿಲ್ಲ. ಈ ಸೆಳೆತಕ್ಕೆ ಒಮ್ಮೆ ಒಳಗಾದ ಬಳಿಕ ಆಗುವ ಮಾನವನ ಮನಸ್ಥಿತಿಯನ್ನು ಕಾಳಿದಾಸನು ವಿಕ್ರಮೋರ್ವಶೀಯದಲ್ಲಿ ಚೆನ್ನಾಗಿ ಚಿತ್ರಿಸಿದ್ದಾನೆ. ಸೌಂದರ್ಯ ಮೋಹಿತನಾದವನಿಗೆ ಸಿರಿ-ಸಂಪತ್ತು-ರಾಜವೈಭವಾದಿಗಳೇತರಲ್ಲೂ ತನ್ನ ಇಷ್ಟ ವಸ್ತುವಿನ ಹೊರತು ಸೊಗಸೆನಿಸುವುದಿಲ್ಲ. ಈ ಕಾರಣದಿಂದ ಕಾಲಕಾಲಕ್ಕೆ ನಿಜವಾದ ಚೆಲುವಿನ ಅರಿವನ್ನುಂಟು ಮಾಡುವ, ಸೌಂದರ್ಯ (ಸತ್ಯ)ದ ದರ್ಶನ ಮಾಡಿಸುವ ಸಾಹಿತಿಗಳೂ ಕಲಾವಿದರೂ ಜನ್ಮತಾಳುವ ನಾಡಿಗೆ ಇಳಿಗಾಲದ ಹೆದರಿಕೆಯಿಲ್ಲ. ಅಳಿಗಾಲದ ಭೀತಿಯೆ ಇಲ್ಲ. ಇಂಗ್ಲಂಡಿನ ಜನರಿಗೆ ಶೆಕ್ಸಪಿಯರ (ಗ್ರಂಥ) ಬೇಕೊ, ಹಿಂದೂಸ್ತಾನದ ಸಾಮ್ರಾಜ್ಯ ಬೇಕೊ ಎಂದು ಕೇಳಿದರೆ ಸಾಮ್ರಾಜ್ಯವು ಹಾಳಾಗಲಿ, ಆದರೆ ಶೆಕ್ಸಪಿಯರನು ತಮಗಿರಲಿ ಎಂದು ಹೇಳುವರಾಗಿ ಲೋಕೋಕ್ತಿಯಾಗಿದೆ.

ಸಾಹಿತ್ಯ-ಕಲಾಕೃತಿಗಳೇ ನಾಡಿನ ಕಣ್ಣು ಯಾವುದಾದರೂ ದೇಶವು ಕಣ್‌ಗೆಟ್ಟು ಅವನತ ಸ್ಥಿತಿಯಲ್ಲಿದ್ದರೆ ಆ ಜನಗಳ ಸಾಹಿತ್ಯ-ಕಲೆಯ ಮಟ್ಟವೆ ಅಷ್ಟು; ಅದರಲ್ಲಿ ಅಂತಹ ವಿಶೇಷ ದೋಷಗಳು ಏನಾದರೂ ಅಡಗಿಕೊಂಡಿರಲೇಬೇಕೆಂಬಲ್ಲಿ ಸಂದೇಹವಿಲ್ಲ. ಆದುದರಿಂದ, ಸಾಹಿತಿಗಳ ಮತ್ತು ಕಲಾವಿದರ ಹೊಣೆ ಎಷ್ಟು ಹಿರಿದಾದುದೂ ಪವಿತ್ರವಾದುದೂ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅವರಿಗೇ ಸರಿಯಾದ ಸೌಂದರ್ಯ ದರ್ಶನವಾಗದಿದ್ದಲ್ಲಿ ಅವರು ಹೇಳುವುದೇನು? ಕುರುಡನೇ ದಾರಿತೋರುವನಾದರೆ ಹಳ್ಳದಲ್ಲಿ ಬೀಳುವುದೇನಾಶ್ಚರ್ಯ?

ಹೊಸತನವಿಲ್ಲದಲ್ಲಿ ಸೌಂದರ್ಯವಿಲ್ಲ. ಮಾಡಿದ್ದೇ ಮಾಡುವುದು, ಆಡಿದ್ದೇ ಆಡುವುದು ಸೌಂದರ್ಯಕ್ಕೆ ಕುಂದು. ಚಿಗುರುವುದು ಜೀವಂತತನದ ಕುರುಹು. ಒಳಗಣ ಜೀವಶಕ್ತಿ ಹೊಚ್ಚ ಹೊಸತಾಗಿ ಹೊರಗೆ ಚಿಗಿ (ಜಿಗಿ)ಯುವುದು. ಅದುವೆ ಚಿಗುರು. ಚಿಗುರು ಬಿಡದಾಗುತ್ತಲೆ ಬಳವಿ ನಿಂತಂತೆ. ಇಳಿಗಾಲವು ತಲೆದೋರಿದ ಲಕ್ಷಣವದು. ಹೊಸತನವನ್ನು ಕಳೆದುಕೊಂಡುದೇ ಮುಪ್ಪು ಹಣೆಯಿಕ್ಕಿದ ಕುರುಹು. ಯಾರಿಗೆ ಜಿಜ್ಞಾಸೆ ಇಲ್ಲ, ನವೀನತೆ ಸೇರುವುದಿಲ್ಲ. ಅವರಿಗೆ ಸಾವು ಸಮೀಪಿಸಿದೆ ಎಂದು ನಿಶ್ಚಿತವಾಗಿ ತಿಳಿಯಬೇಕು. ರೂಢಿ-ಸಂಪ್ರದಾಯಗಳು ನವೀನತೆಯ ವೈರಿಗಳು. ನವೋನವತೆಯು ಸೌಂದರ್ಯದ ಒಂದು ಮಹತ್ವದ ಅಂಗವಾದುದರಿಂದ ರೂಢಿ-ಸಂಪ್ರದಾಯಗಳೆಂದರೆ ಸೌಂದರ್ಯ ವಿಕಾಸಕ್ಕೆ ಅಡ್ಡಿಯೆಂದು ಹೇಳಬೇಕಾಗುತ್ತದೆ. ರೂಢಿಯ ಶೃಂಖಲೆಗಳಿಂದ ಬದ್ಧವಾದ ಸಮಾಜವು ಅಂದಗೆಟ್ಟು ಬರಡಾಗುವುಧು. ಚಟ, ರೂಢಿಯೆಂದರೆ ಯಾಂತ್ರಿಕ ಕೃತಿ. ಯಾಂತ್ರಿಕ ಕೃತಿಯಲ್ಲಿ ನವೀನತೆಯಿರುವುದಿಲ್ಲ. ನವೀನತೆ ನಷ್ಟವಾಯಿತೆಂದರೆ ಜೀವಶಕ್ತಿ ಬಧಿರವಾಗುವುದು. ಜೀವಶಕ್ತಿ ಬಧಿರವಾಗುವುದೆಂದರೆ ಅದು ಸಾವಿನ ಇನ್ನೊಂದು ಬಗೆ.

'ಈ ಮಹಾಗ್ರಂಥಕ್ಕೆ ಮಿಕ್ಕಿದುದು ಯಾವುದೂ ಇಲ್ಲ'; 'ಈ ಮಹಾಮಹಿಮರ ಮಾತೆ ಮಾತು' ಎಂಬೀ ತೆರನಾಗಿ ಯಾವ ದೇಶವು ತನ್ನ ಮುಂದಿನ ಪೀಳಿಗೆಯವರ ಬೆಳೆಗೆಗೆ (ಅದಕ್ಕಿಂತ ಹೆಚ್ಚು ಎತ್ತರ ಬೆಳೆಯದಂತೆ) ರೂಢಿಯ ಅಡ್ಡಿಯನ್ನೊಡ್ಡುವುದೊ, ಅದು ತನ್ನ ಗೋರಿಯನ್ನು ತಾನೆ ಅಗೆದಿಟ್ಟುಕೊಂಡಂತೆಯೆ ಸರಿ. ಯಾವುದಾದರೂ ಒಂದು ವ್ಯಕ್ತಿಗೆ ಅಥವಾ ಗ್ರಂಥಕ್ಕೆ ಸರ್ವಜ್ಞತೆಯ ಪದವಿಗೇರಿಸಿ ನಾಡಿನ ಅಂದಿನ ಮತ್ತು ಮುಂದಿನ ಎಲ್ಲ ಪ್ರತಿಭಾ ಶಕ್ತಿಯನ್ನೂ ಕುಮರಿಸಿಬಿಡುವ ಅನ್ಯಾಯಕ್ಕಿಂತ ಹೆಚ್ಚಿನ ಮಹಾಪಾತಕವು ಬೇರಾವುದಾದರೂ ಇದ್ದೀತೆ? ಈ ಬಗೆಯ ಸೌಂದರ್ಯನಾಶದಲ್ಲಿಯೆ ರಾಷ್ಟ್ರದ ಅಧಃಪಾತ ಕಾರಣಗಳು ಹುದುಗಿಕೊಂಡಿವೆ.

ಚೆಲುವು ಅಂದಅಂದವಾಗಿದೆ. ಅದು ಎಂದರೆ ಬಗೆ. ಎಲ್ಲವೂ ಒಂದೇ ಒಂದು ತೆರನಾದಲ್ಲಿ ಓಕರಿಕೆ ಬಾರದಿರದು. ವೈವಿಧ್ಯದ ಹೊಂದಿಕೆಯಲ್ಲಿ ಸೌಂದರ್ಯವಿದೆ. ಭಿನ್ನಭಿನ್ನ ಬಣ್ಣಗಳ ಜೋಡಣೆಯಲ್ಲಿ ಚೆಲುವು ಹೊರಹೊಮ್ಮುವುದು. ಭಿನ್ನ ಸ್ವರಮೇಳದಲ್ಲಿ ರಾಗವು ಸಿದ್ಧವಾಗುವುದು. ಭಿನ್ನತೆಗೆ ಇಂಬಿಲ್ಲದಲ್ಲಿ ಸೌಂದರ್ಯವು ಸುಳಿಯಲಾರದು. ವಿಚಾರ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯಗಳಿಲ್ಲದ ನಾಡಿನ ಸಾಹಿತ್ಯದಲ್ಲಿ ಸೌಂದರ್ಯದ ಅಭಾವವು

ಕ್ರಮಪ್ರಾಪ್ತವಾದ ಸಂಗತಿಯೆ ಆಗಿದೆ. ಅನುಕರಣಶೀಲರು ಅಂದಗೇಡಿಗಳಾಗುತ್ತಾರೆ. ತಮ್ಮ ಆತ್ಮತೇಜಸ್ಸಿಗೆ ಎರವಾಗುತ್ತಾರೆ. ಅಂತರ್ಗತ ಸೌಂದರ್ಯದ-ಆತ್ಮಶಕ್ತಿಯ ಅನುಭವ ಪಡೆಯುವುದಕ್ಕೆ ಅಸಮರ್ಥರಾದವರು ಇಲ್ಲವೆ ಮೈಗಳ್ಳರೂ ಜೀವಗಳ್ಳರೂ ಅಂಧಾನುಕರಣದ ರೂಪದಲ್ಲಿ ಆತ್ಮಹತ್ಯಕ್ಕೆ ಮನಸ್ಸು ಮಾಡುತ್ತಾರೆ. ಸೌಂದರ್ಯದಲ್ಲಿ ಸ್ವಾತಂತ್ರ್ಯವು ಅಡಕವಾಗಿದೆ. ಆದುದರಿಂದ ಸ್ವಾತಂತ್ರ್ಯವಿಲ್ಲದಲ್ಲಿ ಸೌಂದರ್ಯಕ್ಕೇ ಕೇಡು. ತಾನು ಸ್ವತಂತ್ರವಾಗಿ ಬಾಳಿ ಉಳಿದವರಿಗೂ ಸ್ವತಂತ್ರವಾಗಿರಗೊಡುವುದೇ ಅಂದವಾದ ಬಾಳಿನ ಬಗೆ. ಆತ್ಮವಿಶ್ವಾಸವು ಅಳಿದು ಪರಾವಲಂಬನಕ್ಕೆ ಕಾರಣವಾಗುವ ಉಪಕಾರ, ಉಪಕಾರವಲ್ಲ; ಅಪಕಾರ, ಉಪ-ಕಾರವು ಸ್ವಲ್ಪ(ಕಾಲದ) ಕೆಲಸ. ಅನುಗಾಲವೂ ಉಪಕಾರವೆಂಬುದು ಅಬದ್ಧ; ಆತ್ಮ-ಸೌಂದರ್ಯ-ನಾಶಕರ 'ಉದ್ಧರೇತ್ ಆತ್ಮನಾತ್ಮಾನಮ್' ಎಂದು ಗೀತೆಯ ಸಂದೇಶ.

'ಏತದ್' ವಿಮೃಶ್ಯ ಅಶೇಷೇಣ ಯಥೇಚ್ಛಸಿ ತಥಾ ಕುರು,'

ಎಂದು ಆಜ್ಞಾಪಿಸಿದರೂ ಶ್ರೀಕೃಷ್ಣನ ಮೇಲೆಯೆ ಎಲ್ಲ ಭಾರ ಹಾಕಿದ ಅರ್ಜುನನು ಕೊನೆಗೆ ಎಂತಹ ದುರವಸ್ಥೆಗೆ ಈಡಾಗಬೇಕಾಯ್ತೆಂಬುದನ್ನು ಭಾರತದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾಗಿದೆ. ಶ್ರೀಕೃಷ್ಣನು ಮಡಿದ ಕೂಡಲೆ ಅರ್ಜುನನ ಹೌಹಾರಿದ. ಎದೆಗೆಟ್ಟು ಮುಂದುಗಾಣದವನಾದನು. ತನಗೆ ಅತ್ಯಂತ ಪೂಜ್ಯನೂ, ವಿಶ್ವಾಸದ ನೇತಾರನೂ ಆದ ಶ್ರೀಕೃಷ್ಣನ ಹೆಂಡಂದಿರನ್ನು ಕೊಂಡೊಯ್ವ ಕೊಳ್ಳೆಗಾರರನ್ನು ಅಡ್ಡಗಟ್ಟುವುದಕ್ಕೂ ಅರ್ಜುನನು ಅಸಮರ್ಥನಾದನು. ತನ್ನ ಕಣ್ಣಮುಂದೆ ನಡೆದ ಅತ್ಯಾಚಾರಗಳನ್ನು ನೋಡಿ ನೋಡಿಯೂ ಕೈಲಾಗದೆ ಹೇಡಿಯಂತೆ ಸುಮ್ಮನಿರಬೇಕಾಯ್ತು! ತನ್ನನ್ನು ತಾನು ಅವಲಂಬಿಸದೆ ಯಾವನೊಬ್ಬ ಮಹಾಗುರುವಿಗೆ ಅಥವಾ ಸರ್ವಾಧಿಕಾರಿಗೆ ಸರ್ವಸ್ವವನ್ನರ್ಪಿಸಿ ಅವರ ನೆಳಲಾಗಿ ಬಾಳುವುದರ ಘೋರ ದುರಂತವು ಎಂತಹುದು ಎಂಬುದನ್ನು ಸ್ಪಷ್ಟಪಡಿಸುವುದೇ ಶ್ರೀ ವ್ಯಾಸರ ಗುರಿಯಿರಬೇಕು.

ಸ್ವತಂತ್ರವಾದ ಒಂದಕ್ಕಿಂತ ಹೆಚ್ಚು ಸಂಗತಿಗಳ ತಾಳಮೇಳದಲ್ಲಿ, ಒಂದಿಕೆಯ ಹೊಂದಿಕೆಯಲ್ಲಿ, ಸಮ್ಯಕ್-ಯೋಗದಲ್ಲಿಯೆ ಸೌಂದರ್ಯವು ಒಡಮೂಡುತ್ತದೆ. 'ಸಮತ್ವಂ ಯೋಗಂ ಉಚ್ಯತೇ' ಎಂಬಲ್ಲಿ ಸಮತ್ವವೆಂದರೆ ಒಮ್ಮೇಳ (Harmony) ಎಂಬ ಅರ್ಥವೆ ಹೊರತು ಭಿನ್ನಭಾವಗಳ ಆತ್ಯಂತಿಕ ನಾಶವಲ್ಲ. ಲೋಕಕಲ್ಯಾಣದ ಮಹಾಶ್ರುತಿಗೆ ಹೊಂದಿಕೆಯಾಗುವಂತೆ ರಾಗದ್ವೇಷಾದಿಗಳನ್ನು ಮೇಳವಿಸುವುದು ಯೋಗ. ಇವುಗಳ ಆತ್ಯಂತಿಕ ನಾಶದಿಂದ ಮಾನವನು ನಿರ್ವೀರ್ಯನಾಗುವನು; ನಿಸ್ತೇಜನಾಗುವನು. ತೇಜೋನಾಶವಾದಲ್ಲಿ ಸೌಂದರ್ಯವೆಲ್ಲಿಯದು? ಏಕತಾರೆಯಿಂದ ವೀಣೆಯ ರಮಣೀಯ ಸಂಗೀತವು ಹೊರಹೊಮ್ಮೀತೆ? ಎಂದೂ ಎಲ್ಲಿಯೂ ಒಂದುಗೂಡದ ಆತ್ಯಂತಿಕ ಭೇದವು ಅಪಶ್ರುತಿ; ವಿನಾಶಕಾರಿ ಪೋಷಕ, ಪೂರಕವಾದ ಭಿನ್ನಭೇದಗಳು ಸೌಂದರ್ಯಸಾಧಕ; ಆನಂದದಾಯಕ.

ವಿಭಿನ್ನತೆಗಳು ಎಷ್ಟು ಹೆಚ್ಚೋ, ಎಷ್ಟು ಬಲಿಷ್ಠವೊ, ಅವುಗಳ ಸಮನ್ವಯದಲ್ಲುಂಟಾಗುವ ಸೌಂದರ್ಯವೂ ಅಷ್ಟು ವರಿಷ್ಠವೂ ಘನಿಷ್ಠವೂ ಆಗಿ ಪುಟಗೊಳ್ಳುವುದು. ವಿರೋಧೀ ಶಕ್ತಿಗಳ ಆಘಾತ-ಪ್ರತ್ಯಾಘಾತ ಗಳಿಂದೊಡಡಿದ್ದಲ್ಲದೆ ಯಾವ ನಾಟಕವಾಗಲಿ, ಕಾದಂಬರಿಯಾಗಲಿ ಸೌಂದರ್ಯಸಂಪನ್ನವಾಗಲಾರದು. ಚಿತ್ರಕಲೆಯ ಸುಳುವುಗಳಲ್ಲಿ, ವರ್ಣರಚನೆಯಲ್ಲಿ ಹಿನ್ನೆಲೆಯ ನಿರ್ಮಾಣದಲ್ಲಿ, ವ್ಯಕ್ತಿ ಚಿತ್ರಣದಲ್ಲಿ ಸೌಂದರ್ಯವು ಪ್ರಸ್ಫುಟವಾಗಿ ಎದ್ದು ಕಾಣಲು ಇದೇ ಹಂಚಿಕೆಯನ್ನು ಮಾಡಿದ್ದಾಗಿರುತ್ತದೆ. ಪರಸ್ಪರ ವಿರೋಧಿಯೆನಿಸಬಹುದಾದ ಸಾಂಖ್ಯ-ಯೋಗ-ಕರ್ಮ-ಜ್ಞಾನ-ಭಕ್ತಿಗಳಂತಹ ವಿಭಿನ್ನ ಮಾರ್ಗಗಳ ಸಮನ್ವಯದಲ್ಲಿಯೇ ಗೀತೆಯ ಬುದ್ಧಿಯೋಗದ ಭವ್ಯತೆಯು ಅಡಕವಾಗಿದೆ. ಲೋಕಮೋಹಕವಾದ ದಿವ್ಯಗ್ರಂಥವೆಂದು ಹೆಸರಾಗಿದೆ.

ಕ್ರಿಸ್ತಶಕದ ೫-೬ನೆಯ ಶತಕಗಳ ನಂತರ ಭಾರತದ ಸ್ವಾತಂತ್ರಸೂರ್ಯನು ಅಸ್ತಾಚಲವನ್ನೈದಿದನು. ಸುಮಾರು ೧೩-೧೪ ನೂರು ವರುಷಗಳ ಕಾಳರಾತ್ರಿಯಲ್ಲಿ ಭಾರತವು ತೊಳಲಿ ಬಳಲಿತು. ನಡನಡುವೆ ಬೆಳುದಿಂಗಳ ಕಾಲವು ಕೆಲವೊಂದು ವಾಡಿಕೆಯಂತೆ ಬಂದಿತೆಂಬುದು ನಿಜವಿದ್ದರೂ ಒಟ್ಟಿನಲ್ಲಿ ಕತ್ತಲೆಯ ಮಬ್ಬಿನಲ್ಲಿ ಜನಗಳ

ದೃಷ್ಟಿಯೂ ಮಸುಳಿಸಿ (ಗೀತೆಯ ಕಾಲದ) ಸೌಂದರ್ಯದ ಮಹೋನ್ನತ ರೂಪವು ಅವರ ಕಣ್ಣಳತೆಗೆ ನಿಲುಕದೆ ಹೋಯ್ತು. ಅತ್ತಿತ್ತ ನೋಡಿದರೆ, ಆಕರ್ಷಕ್ಕೆ ಒಳಗಾದೇನೆಂಬ ಪುಕ್ಕು ಜನಕ್ಕೆ. ಅದಕ್ಕಾಗಿ ಕಣ್ಣು ಕಳೆದುಕೊಳ್ಳುವ ಉಪದೇಶ ಮಾಡುವ ಗುರುಗಳೂ ತತ್ವಜ್ಞಾನಿಗಳೂ ಈ ಕಾಲದ ಸಮಾಜದ ನೇತಾರರಾದರು! ಹೆಂಡತಿಯ ಕಣ್ಣು ಕಳೆದು ಅವಳನ್ನು ಗಂಡನ ಕೈಗೊಪ್ಪಿಸಿ ಅವಳ ವ್ಯಕ್ತಿತ್ವವನ್ನೆ ನಷ್ಟಪಡಿಸಿದ್ದಾಯ್ತು. ಮಕ್ಕಳ ಹಾಗೂ ತರುಣರ ವಿಚಾರ ಸ್ವಾತಂತ್ರ್ಯವನ್ನು ಹರಣಮಾಡಿ ತಂದೆ ಅಥವಾ ಗುರುವಿನ ಗೆರೆದಾಟದಂತೆ ವಿಧಿಸಲಾಯ್ತು. ಗುರುವರ್ಗ, ಪುರೋಹಿತವರ್ಗದ ಮಾತೇ ವೇದವಚನವಾಯಿತು. ವಿಪ್ರನವಾಕ್ಯ ಜನಾರ್ದನನ ವಾಕ್ಯ; ಇವನೇ ಭೂದೇವರು! ಜಂಗಮನೇ ಜಗದೀಶ್ವರ! 'ರಾಜಾ ಪ್ರತ್ಯಕ್ಷ ದೇವತಾ'! ರೂಢಿಯು ಬಲಿಷ್ಠವಾಗಿ ತಾನೆ ತಾನಾಗಿ ಜನಜೀವನವನ್ನೆಲ್ಲ ಮುಸುಕಿಕೊಂಡಿತು. ರೂಢಿಯೆಂದರೆ ಸೌಂದರ್ಯದ ಗೋರಿ; ಮರಣದ ಇನ್ನೊಂದು ರೂಪ.

ಜೀವವು ಅಳಿಯುವುದೊ ಉಳಿಯುವುದೊ ಎಂಬೀ ತೆರನಾದ ಗಂಡಾಂತರದಲ್ಲಿ ಸಿಲುಕಿದಾಗ ವಿಚಾರ ಸ್ವಾತಂತ್ರ್ಯವು ಸಮಾಜಕ್ಕೆ ಪಚನವಾಗುವ ಮಾತಲ್ಲ. ಆದುದರಿಂದ, ಭಾರತ-ಸಮಾಜವು ಈ ಸಂಧಿಕಾಲದಲ್ಲಿ ಕುತ್ತದೊಳಗಿಂದ ಪಾರಾಗುವುದಕ್ಕಾಗಿ ಪುರಾತನರ ವಚನಗಳಲ್ಲಿ ನೆರೆನೆಮ್ಮಿ ಶಬ್ದಪ್ರಮಾಣಕ್ಕೇ ಪ್ರಥಮಸ್ಥಾನವನ್ನು ಕೊಟ್ಟಿತು. ಹಿರಿಯರ ಸರ್ವಾಧಿಕಾರಿತ್ವಕ್ಕೇ ಒಪ್ಪಿಕೊಂಡು ಜೀವನದ ಎಲ್ಲ ಅಂಗಗಳನ್ನು ಆ ಬಗೆಯಾಗಿ ಮಾರ್ಪಾಟುಗೊಳಿಸಿತು. ಇದರಿಂದ ಕೆಲವೊಂದು ಲಾಭಗಳಾಗಿದ್ದರೂ ಹೇಳಕೂಡದಷ್ಟು ಹಾನಿಯಾದುದೂ ಉಂಟು. ಈ ಕಾಲದಲ್ಲಿ ಮನೋಬುದ್ಧಿಗಳಿಗೆ ಅಂಟಿಕೊಂಡಿರುವ ಹೀನಸಂಸ್ಕಾರಗಳಿಂದ ಸಮಾಜವನ್ನು ಉದ್ಧರಿಸುವ ಮಹಾಕಾರ್ಯವು, ಸ್ವಾತಂತ್ರ್ಯಸೂರ್ಯನು ಮತ್ತೆ ಉದಿತೋದಿತನಾಗಿರುವ ಈ ಸಮಯದಲ್ಲಿ ಪ್ರತಿಯೊಬ್ಬ ವಿಚಾರವಂತರ ಆದ್ಯಕರ್ತವ್ಯವಾಗಿದೆ. ಜಡ್ಡಿನ ಕಾಲದಲ್ಲಿ ಸಮಾಜಕ್ಕೆ ಬಂದ ಕುರೂಪತೆ, ವಿರೂಪತೆಯನ್ನು ಹೋಗಲಾಡಿಸಲು ಜೀವನ ಸೌಂದರ್ಯವನ್ನು ಅಭಿವೃದ್ಧಿಗೊಳಿಸುವುದೇ ಮಿಗಿಲಾದ ಉಪಾಯವಲ್ಲವೇ?

ಒಂದು ಪರಿಣತ ಸ್ಥಿತಿಯು ಪ್ರಾಪ್ತವಾಗುತ್ತಲೆ ಅದರಲ್ಲೇ ಸಂತೃಪ್ತಿಗೊಂಡು ಅದಕ್ಕೇ ಅಂಟಿಕೊಂಡು ಇರಲು ಹಂಬಲಿಸಿದರೆ ಅದು ಅವನತಿಗೆ ಕಾರಣವಾಗದೆ ಇರದು. ಉತ್ತಮ ಸ್ಥಿತಿಯೆಂದು ಒಂದು ಮಟ್ಟದಲ್ಲಿ ಹೆಚ್ಚು ಕಾಲ ಇರಬಯಸಿದರೂ ಮೈಮನಗಳು ಮರವಟ್ಟು (ಬಧಿರವಾಗಿ) ಆನಂದಾನುಭವಕ್ಕೆ ಅಸಮರ್ಥವಾಗುತ್ತವೆ. ನಿತ್ಯನೂತನ ಆನಂದವಿಲ್ಲದಲ್ಲಿ ಸೌಂದರ್ಯವು ಲೋಪವಾಗುವುದು. ಜೀವಂತ ವಸ್ತುವಿಗೆ 'ಸ್ಥಿತಿ'ಗೊತ್ತಿಲ್ಲ. ಗತಿಯು ಜೀವದ ಸ್ವಭಾವ. ಪ್ರಕೃತಿಯಲ್ಲಿ ಕಾಣಿಸಿಕೊಳ್ಳುವ ಜೀವವು ಏರುತ್ತಲಾದರೂ ಇರಬೇಕು; ಇಲ್ಲವೆ ಇಳಿಯುತ್ತಲಾದರೂ ಇರಬೇಕು. 'ಸ್ಥಿತಿ' ಎಂಬುದು ಕ್ಷಣಮಾತ್ರ; ನಿನ್ನೆ-ನಾಳೆಗಳ ಸಂದುಕಟ್ಟಿನಲ್ಲಿ ಇಂದು ಎಂಬುದು ಮೂಡಿ ಮಾಯವಾಗುವಂತೆ, ಒಂದಡಿಯು ನಿನ್ನೆಯೆಲ್ಲಿದ್ದರೂ ನಾಳೆಯಲ್ಲಿಡುವುದಕ್ಕಾಗಿ ಮತ್ತೊಂದಡಿಯನ್ನು ಮುಂದಿಡಲು ಅಣಿಯಾಗಲೇಬೇಕು. ಇವೆರಡರ ನಡುವಿನ ಅವಕಾಶದಲ್ಲಿ 'ಇಂದು' ಎಂಬುದು ಕಾಣಿಸಿ ಕಣ್ಮರೆಯಾಗುವುದು. 'ಇಂದು' ಬಹಳ ಚೆಂದವಾಗಿದೆಯೆಂದು ನಾವು ಅಲ್ಲಿಯೆ ತಂಗಿ ಸುಖನಿದ್ರೆಯನ್ನು ಬಯಸಿದರೂ ಕಾಲಪ್ರವಾಹವು ನಮ್ಮ ಸಲುವಾಗಿ ಒಂದು ಕ್ಷಣಕಾಲವೂ ಸ್ಥಿರವಾಗಿ ನಿಲ್ಲುವುದಿಲ್ಲ. ಕಣ್ಣು ಮುಚ್ಚಿ ಕಾಲವು ನಿಂತಿದೆಯೆಂದು ಭ್ರಮಿಸಿದರೆ ಅದು ನಮ್ಮ ಆತ್ಮವಂಚನೆ.

'ಪೂರ್ಣ' ಎಂಬುದು ಒಂದೇ ಇಲ್ಲ; ಅಥವಾ ಒಂದೇ ತೆರನಾದುದಲ್ಲವೆಂದರೆ ಹೆಚ್ಚು ಚೆಂದ. ಪೂರ್ಣಗಳಲ್ಲಿ ಬಗೆ ಬಗೆಗಳಿವೆ. ಇವೆಲ್ಲವೂ ಆ ಮಹಾಪೂರ್ಣದ ಅಂಶಗಳು. ಮಹಾ-ಪೂರ್ಣವೆಂಬುದು ಅನಂತ. ಸೌಂದರ್ಯವು ಅನಂತ (ಗುಣಪೂರ್ಣ). ಅಜ್ಞಾತ ಭವಿಷ್ಯದಲ್ಲಿ ಎದೆಗಾರಿಕೆಯಿಂದ ಮುನ್ನುಗ್ಗಬಲ್ಲ ಸಾಸಿಗನಾದ ಚಿರಪಥಿಕನೇ ನಿಜವಾದ ಸೌಂದರ್ಯೋಪಾಸಕನಾಗಬಲ್ಲನು. ಒಂದು ಘಟ್ಟವಾಗುತ್ತಲೆ ಮತ್ತೆ ಮುಂದಿನ ಘಟ್ಟದ ಬೆಡಗನ್ನು ಕಾಣಲು ಆತನ ಕಣ್ಮನಗಳು ಯಾವಾಗಲೂ ಹಸಿದು ಹಂಬಲಿಸಿರುತ್ತವೆ. ಜೀವದೊಳಗಿನ ಅನಂತಗುಣಪರಿಪೂರ್ಣ ಸೌಂದರ್ಯಶಕ್ತಿಯಲ್ಲಿ ಶ್ರದ್ಧೆಯಿದ್ದ ಯೋಗಿ ಯಾಜ್ಞ್ಯವಲ್ಕ್ಯರು 'ಅನ್ಯತ್ ನವತರಂ ಕಲ್ಯಾಣತರಂ ರೂಪಂ ತನುತೇ'

ಎಂದು ಒಡನುಡಿದುದು ಯಥಾರ್ಥ. ಸೌಂದರ್ಯದ ಅನಂತತ್ವದಲ್ಲಿ ಶ್ರದ್ಧೆಯಿಲ್ಲದವರು ಇಂದು ಮತ್ತು ನಾಳೆಗಳಲ್ಲಿ ಮತ್ತೆ ನಿನ್ನೆಯನ್ನೇ ತಂದು ಬೆರಸುವರು. ಅದನ್ನೇ ಕನವರಿಸುವರು; ಅದುವೆ ಮತ್ತೆ ಮರಳುವುದೆಂದು ಹಾರಯಿಸಿ ಎದುರು ನೋಡುವರು. ನಾಳೆಯ ಹೊಸತನದಲ್ಲಿ ನೆಚ್ಚಿಕೆಯಿಲ್ಲದವರೇ ನಾಸ್ತಿಕರು. ಮತ್ತೆ ರಾಮನೆ ಬರಬೇಕು; ಕೃಷ್ಣನೆ ಹುಟ್ಟಬೇಕು; ಬಸವನೆ ಬರಬೇಕು-ಬರುವನು ಎಂದು ಭೂತದಲ್ಲಿ ನೆಮ್ಮಿರುವುದು ಅನಂತಪರಿಪೂರ್ಣದ ನವೋನವತೆಯಲ್ಲಿರುವ ಸಂದೇಹವನ್ನು ವ್ಯಕ್ತಪಡಿಸುತ್ತದೆ. ಸೌಂದರ್ಯದ ಅನಂತತ್ವವನ್ನು ಸ್ವಲ್ಪಾಂಶದಿಂದಾದರೂ ಮನಗಂಡವನು ನಿನ್ನೆಗಿಂತಲೂ ಇಂದು, ಇಂದಿಗಿಂತಲೂ ನಾಳೆ ದಿವ್ಯವೂ ಭವ್ಯವೂ ಆಗಿಯೇ ತೀರುವುದೆಂಬ ವಿಚಾರದಿಂದ ಕದಲಲು ಎಂದೂ ಸಿದ್ಧನಾಗಲಾರನು. ಪ್ರಯೋಗದಲ್ಲಿ ಕೆಲಬಾರಿ ತಪ್ಪುತಡೆಗಳಾದರೂ ನಿನ್ನೆಯ ಅನುಭವವು ಇಂದು, ಇಂದಿನ ಅನುಭವವು ನಾಳೆ ಮಾರ್ಗದರ್ಶಕವಾಗಿ ಮಾನವಕುಲವು ಉನ್ನತೋನ್ನತ ಸ್ಥಿತಿಗೆ ಸಾಗುವಲ್ಲಿ ಸಂದೇಹವೆ ಇಲ್ಲ.

ಸೌಂದರ್ಯೋಪಾಸಕನಿಗೆ ರಸಿಕನೆಂದು ಹೆಸರು. ಇವನೆ ಭಾವುಕನು. ಔಚಿತ್ಯದ ಎಚ್ಚರವು ಜಾಗ್ರತವಾಗಿದ್ದವನೆ ರಸಿಕನಾಗಬಲ್ಲ. ಸೌಂದರ್ಯೋಪಾಸನೆ, ರಸಿಕತೆ, ಔಚಿತ್ಯ ಇವು ಸಂಸ್ಕೃತಿಯ ಜೀವಾಳ ನಾಗರಿಕತೆಯು ವಿಮಾನ ಗತಿಯಿಂದ ಗರಿಮೂಡಿದ ಗಾಳಿಯಂತೆ ವಿಚಿತ್ರ ವೇಗದಿಂದ ಮುನ್ನಡೆದಿದೆ. ಆದರೆ, ಆ ಪ್ರಮಾಣದಲ್ಲಿ ಸಂಸ್ಕೃತಿಯ ಪ್ರಸಾರವು ಜನಗಳಲ್ಲಿ ಆಗಿಲ್ಲ. ಈ ಕಾರಣದಿಂದಲೆ ಲೋಕದಲ್ಲಿ ಈ ವೈಷಮ್ಯ; ಈ ಅಂದಗೇಡು. ರಸಿಕನು ಭಾವುಕನಾದ್ದರಿಂದ ಪರರ ಸುಖದುಃಖಗಳನ್ನರಿತು ಅವರೊಡನೆ ಅಂದವಾಗಿ ಹೊಂದಿಕೊಂಡಿರಲು ಆವಶ್ಯಕವಾದ ತ್ಯಾಗಕ್ಕೆ ಸಿದ್ಧನಾಗುತ್ತಾನೆ. ಏಕೆಂದರೆ, ಜೀವನದ ಯಾವ ಅಂಗದ ಅಸೌಂದರ್ಯ ಅಥವಾ ಕುರೂಪತೆಯೂ ಅವನಿಗೆ ಸಹನವಾಗುವುದಿಲ್ಲ. ಆ ಕುರೂಪತೆಯನ್ನು ಹಿಂಗಿಸಿ ಸೌಂದರ್ಯಾಭಿವೃದ್ಧಿಯಾಗುವುದಕ್ಕಾಗಿ ತಮ್ಮ ಜೀವನವನ್ನು ಮುಡುಪಿಡುವುದಕ್ಕೂ ರಸಿಕರು ಹಿಂದೆಗೆಯರು. ಮಹಾತ್ಮಾಗಾಂಧಿಜೀಯವರ ಸೌಂದರ್ಯೋಪಾಸನೆ ರಸಿಕತೆಗಳು ಲೋಕಕ್ಕೆ ಆದರ್ಶವಾಗಿವೆ. ಗಾಂಧಿಜೀಗೆ 'ರಸಿಕ'ರೆಂದುದನ್ನು ಕೇಳಿ ಕೆಲರು ಸೋಜಿಗಗೊಳ್ಳ ಬಹುದು. ಸ್ತ್ರೈಣರಿಗೂ ಕಲಾವಂತರಿಗೂ ರಸಿಕರೆಂಬ ವಾಡಿಕೆಯಾಗಿ ಆ ಶಬ್ದದ ಪಾವಿತ್ರ್ಯವೂ ಅರ್ಥದ ಆಳವೂ ಕಡಿಮೆಯಾಗಿದೆ. ಕವಿತಾ ಲೇಖನಕ್ಕೆ ಸ್ಫೂರ್ತಿಪಡೆಯಲು ಕಥೆ-ಕಾದಂಬರಿಗಳಿಗಾಗಿ ವಸ್ತುದೊರಕಿಸಲು, ಇನ್ನೊರ್ವ ಅಂಗನೆಯೊಡನೆ ವಿಲಾಸನಡೆಸುವ ಸಾಹಿತಿಗಳುಂಟು. ಆದರೆ ಅದನ್ನು ಸಹಿಸದೆ ಮುನಿದ ಮಡದಿಯನ್ನು ಒಂಟಿಗಾಲಮೇಲೆ ನಿಲ್ಲಿಸಿ ಗೋಳಿಡಿಸುತ್ತಿದ್ದರೂ ಜನಜಂಗುಳಿಯು ಹುಚ್ಚೆದ್ದು ಕುಣಿವಂತೆ 'ಕೃತಿ' ರಚಿಸುವವನು ರಸಿಕನೋ? ಅಥವಾ ಲೋಕದ ದುಃಖಗಳನ್ನು ಕಂಡು ಕಳವಳವಾಗಿ ಅದರ ನಿವಾರಣೆಗಾಗಿ ದೇಹ-ಬುದ್ಧಿಗಳನ್ನು ಚಂದನದಂತೆ ತೇವವನು ರಸಿಕನೊ? ರಸಿಕ ಶಬ್ದದಲ್ಲಾದ ಅರ್ಥಸಂಕೋಚವು ನಮ್ಮ ಜನದಲ್ಲಾದ ದೃಷ್ಟಿ ಸಂಕೋಚದ ಅಭಿರುಚಿಯ ವಿಕೃತಿಯ ನಿದರ್ಶಕವಾಗಿದೆ.

ಸೌಂದರ್ಯದ ಸ್ಪರ್ಶವನ್ನರಿಯದ ಜೀವ ಜೀವಂತವಾಗಿದ್ದರೂ ಮರಣವನ್ನು ಅನುಭವಿಸುತ್ತದೆ. ಸೌಂದರ್ಯ (ಜೀವನ)ಕ್ಕಾಗಿ ಬಂದ ಮರಣ ಅಮರಪದವಿಯನ್ನೀಯುತ್ತದೆ. ಸೌಂದರ್ಯವಿಲ್ಲದ ಸ್ವಾತಂತ್ರ್ಯ ಸ್ವೇಚ್ಛಾಚಾರ; ಸೌಂದರ್ಯಯುಕ್ತವಾದ ಬಂಧ(ನ) ಶ್ರೇಷ್ಠ ಸಾಹಿತ್ಯಕೃತಿ; ಉದಾತ್ತ ನೀತಿಯ ನಡೆವಳಿ. ಸೌಂದರ್ಯದಲ್ಲಿ ಸಂಯಮವಿದ್ದರೂ ಬರಿ ಸಂಯಮವು ನೀರಸತೆಯ ಕಡೆಗೆ ಒಯ್ಯುವ ಹೆದರಿಕೆಯೇ ಹೆಚ್ಚು. ಸೌಂದರ್ಯವು ಬಂಧುರವೆಂದು ಬಂಧನವು ಸುಂದರವೆಂಬುದು ವಿಪರೀತ. ಸೌಂದರ್ಯವಿಲ್ಲದ ನಾಜೂಕು, ಕೋಮಲತೆ ಅಶಕ್ತತೆ; ಸಪ್ಪೆ. ಸೌಂದರ್ಯಯುಕ್ತ ಹುಮ್ಮಸ, ಹುಂಬತನ ಪೌರುಷ. ಸೌಂದರ್ಯವಿಲ್ಲದ ಬೃಹತ್, ಬರಿ ಬಾವು. ಸೌಂದರ್ಯಯುಕ್ತ ಕಲ್ಲಕಣವೂ ರತ್ನವೆನಿಸುವುದು. ಚೆಲುವು ಒಲಿದಲ್ಲದೆ ಆವುದೂ ಚೆಂದವಲ್ಲ. ಒಂದು ಕಾಲದಲ್ಲಿ ಸೌಂದರ್ಯವಾಹಕಗಳಾಗಿದ್ದ ಶಬ್ದ, ಸಂಕೇತ, ಆಕೃತಿಗಳೂ ಕಾಲಾಂತರದಲ್ಲಿ ವಿಕೃತವಾಗಿ ಸೌಂದರ್ಯಕ್ಕೆ ಎರವಾಗುತ್ತವೆ. ವಿಶ್ವದ ಚೆಲುವೆಲ್ಲವೂ ಸಾಪೇಕ್ಷ. ಆ ಮಹಾಸೌಂದರ್ಯದ ಅಪೇಕ್ಷೆಯಿಂದಲೇ ಇವಕ್ಕೆಲ್ಲ ಬೆಲೆ. ಸೌಂದರ್ಯವನ್ನು ಉಪೇಕ್ಷಿಸಿದಲ್ಲಿ ಬದಕೆಲ್ಲ ಕಸಕ್ಕಿಂತ ಕಡೆ.

ಮಹಾಪೂರ್ಣ ಅಥವಾ ದಿವ್ಯಸೌಂದರ್ಯವನ್ನು ಬಗೆದು ಭಾವಿಸಲು, ಕೊನೆಗೆ ಅದರ ಅರಿವು ತೀವ್ರವಾಗಲು ಈ ಲೋಕದ ಅಪೂರ್ಣತೆ, ಕೊರತೆಗಳು ತುಂಬ ಸಹಕಾರಿಗಳಾಗಿವೆ. ಇಲ್ಲಿಯ ಕುಂದುಕೊರತೆಗಳನ್ನು ಕಂಡು ಅದನ್ನು (ತತ್) ಅಲ್ಲಗಳೆದರೆ ಜೀವನಕ್ಕೆ ಅರ್ಥವೆ ಉಳಿಯುವುದಿಲ್ಲ. ಒಳಿತು-ಕೆಡಕು, ನೀತಿ-ಅನೀತಿ ಎಂಬೀ ಮಾತಿಗೆ ಎಡೆಯೆ ಇಲ್ಲದಾಗುವುದು. ನಮ್ಮಂತರಂಗದಲ್ಲಿ ಅಂಶತಃ ಆದರೂ ಸೌಂದರ್ಯದ ಅರಿವು ತಲೆದೋರಿದಾಗಲೆ ಇದು ಹೊಲಬು, ಇದು ಹೊಲ್ಲ ಎಂಬ ವಿವೇಕೋದಯವಾಗುವುದು. ಸಂಸ್ಕೃತಿಯ ಉಗಮವು ಇಲ್ಲಿಂದಲೇ. ಯಾವ ಜನಾಂಗದ ಸೌಂದರ್ಯದ ಭಾವನೆಯು ಎಷ್ಟು ಉದಾತ್ತವೊ ಅಷ್ಟು ಅವರ ಸಂಸ್ಕೃತಿಯು ಮೇಲು ಮಟ್ಟಿನದ್ದಾಗಿರುತ್ತದೆ. ಕಥೆ ಅಥವಾ ನಾಟಕದಲ್ಲಿ ಮುಖ್ಯಪಾತ್ರವನ್ನು ಪ್ರತ್ಯಕ್ಷವಾಗಿ ಎಲ್ಲಿಯೂ ವರ್ಣಿಸದೆ ಉಳಿದ ಪಾತ್ರಗಳ ನಡೆನುಡಿಗಳ ಮೂಲಕವಾಗಿಯೇ ಆ ನಾಯಕನ ಚಿತ್ರವು ಕಣ್ಣೆದುರು ಬಂದುನಿಲ್ಲುವಂತೆ ಮಾಡುವ ಕೃತಿರಚನೆಯ ಒಂದು ರೀತಿಯುಂಟು. ಮಹಾಪೂರ್ಣದ ದಿವ್ಯ ಸೌಂದರ್ಯದ ಅರಿವು ಉಂಟಾಗಲು ಸೃಷ್ಟಿರಚನೆಯಲ್ಲಿ ಈ ಬಗೆಯ ಹಂಚಿಕೆಯೊಂದು ಅಡಕವಾಗಿದೆ. ಅದನ್ನು ಜನದ ಗಮನಕ್ಕೆ ತಂದುಕೊಟ್ಟು ಲೋಕದ ದೃಷ್ಟಿಯು ಸೌಂದರ್ಯದಲ್ಲಿ ಸ್ಥಿರಗೊಳ್ಳುವಂತೆ ಮಾಡುವುದು ಸಾಹಿತ್ಯದ ಹಿರಿಗುರಿ, ಕಲೆಯ ಕರ್ತವ್ಯ.

'ಪರಂ ದೃಷ್ಟ್ವಾ ನಿವರ್ತತೇ'. ಶ್ರೇಷ್ಠವನ್ನು ಕಂಡುಂಡ ಬಳಿಕ ಕನಿಷ್ಠದಲ್ಲಿ ಮನಸು ಹಿಗ್ಗುಗೊಳ್ಳುವುದಿಲ್ಲ; ಆಗ ಕೀಳ್ಮೆಗೆ ಮನಸ್ಸು ಒಪ್ಪದು. ನಿಜವಾದ ಸೌಂದರ್ಯದ ಅರಿವು ಜಾಗೃತವಿದ್ದುದಾದರೆ ಆ ಜನವು ತಮ್ಮ ಕೆಲಬಲದಲ್ಲಿ ಅನ್ಯಾಯ, ಅನೀತಿ, ಕ್ರೂರತನಗಳನ್ನು ಎಂದಿಗೂ ನಡೆಯಗೊಡದು. ಒಳಹೊರಗಣ ಪ್ರಾಮಾಣಿಕತನ, ಸುಸಂಬಂಧ್ಧತೆಯನ್ನು ಕಾಯ್ದುಕೊಂಡು ಜೀವನದಲ್ಲಿ ಸೌಂದರ್ಯವನ್ನು ಅಳವಡಿಸಿ ಆನಂದದಿಂದ ಒಬ್ಬರೊಬ್ಬರೊಡನೆ ನಕ್ಕುನಗಿಸುತ್ತ ಭೂಲೋಕದಲ್ಲಿಯೆ ಸ್ವರ್ಗಸುಖವನ್ನು ಅನುಭವಿಸುವುದು. ಒಳಹೊರಗಣ ಇರವಿನಲ್ಲಿ ವೈಪರೀತ್ಯವು ತೋರಿದೊಡನೆ ಹತ್ತರಿನ ಜನ ನಕ್ಕೀತೆಂಬ ವಿಚಾರವೂ ರಸಿಕರ ತೂಕ ತಪ್ಪಿಗೊಡುವುದಿಲ್ಲ. ಜನವು ನಗುವುದನ್ನು ಮರೆತರೆ ನಾಡಿಗೆ ಕೇಡುಗಾಲ ಬಂದಿತೆಂದೇ ಬಗೆಯಬೇಕು. ನಗುವುದು ಕಿರುಕುಳರ ಲಕ್ಷಣವೆಂದು ನಮ್ಮ ಜನ ಎಣಿಸಿದ ಒಂದು ಕಾಲವಾಯ್ತು. ಶಸ್ತ್ರದಿಂದಲೂ ಆ್ಯಟಂಬಾಂಬಿನಿಂದಲೂ ಆಗದ ಕೆಲಸ ನಗುವಿನಿಂದಾಗಬಲ್ಲದು. ಆದರೆ, ಸಾಕಷ್ಟು ಜನ ಉಚಿತ ರೀತಿಯಲ್ಲಿ ನಗಲು ಸಿದ್ಧರಾಗಬೇಕು. ನಗುವುದರ ಹೆದರಿಕೆ ತಪ್ಪಿದ್ದರಿಂದ ಗುರುವರ್ಗದವರು ಅನಾಚಾರಿಗಳಾಗುವರು; ಅಧಿಕಾರಿಗಳು ಅನ್ಯಾಯಿಗಳಾಗುವರು; ಸ್ವಾರ್ಥವು ತಲೆಯೆತ್ತಿ ಮೆರೆಯುವುದು. ಸೌಂದರ್ಯದ ಸರಿಯಾದ ಕಲ್ಪನೆಯಿದ್ದವರು ಆನಂದದಿಂದ ನಕ್ಕು ನಗಿಸಿ ಜನರನ್ನು ಹಿಗ್ಗಿಸುವರು. ವಿಡಂಬನದ ಹಾಸ್ಯದ ಚಾಟಿಯ ಏಟುಕೊಟ್ಟು ಸ್ವಾರ್ಥದಲ್ಲಿ ಮೈಮರೆತವರಿಗೆ ಎಚ್ಚರಿಸುವರು. ಸೌಂದರ್ಯಕ್ಕಾಗಿ ಸೇರುವ ಸೆರೆಮನೆ ಅರಮನೆಯೆನಿಸುವುದು. ಸೌಂದರ್ಯವಿಲ್ಲದ ಅರಮನೆ ಸೆರೆಮನೆಯಾಗುವುದು. ಸೌಂದರ್ಯವಿಲ್ಲದ ಪ್ರಜಾಪ್ರಭುತ್ವ ಸರ್ವಾಧಿಕಾರಿತ್ವದಲ್ಲಿ ಪರಿಣಮಿಸುವುದು.

ನಿಜವಾದ ಬಂಗಾರವನ್ನೆ ಅರಿಯದ್ದರಿಂದ ಹಿತ್ತಾಳೆಗೆ ಹೊನ್ನೊಂದು ಗ್ರಹಿಸಿದಂತಾಗಿದೆ. ಇಂದು ನಮ್ಮ ಜನದ ಬಾಳು, ಬಾಳಿನಲ್ಲಿ ನಿಜವಾದ ಬೆಲೆಗಳಾವುವು? ಯಾತರ ಮಹತ್ವವೆಷ್ಟು ಎಂಬುದರ ತಾರತಮ್ಯವನ್ನು ಯಾವುದರ ಮೂಲಕವಾಗಿ ನಿರ್ಧರಿಸಬೇಕೋ ಆ ಮೂಲ ಸು-ವರ್ಣವನ್ನೆ ಮರೆತಿದ್ದೇವೆ. ಆದುದರಿಂದ ಯಾವ ಕು-ವರ್ಣವೂ ಸು-ವರ್ಣವೆಂದೇ ಗ್ರಹಿಕೆಯಾಗಲು ಆಸ್ಪದವಾಗಿದೆ. ಆದುದರಿಂದ ಬಾಳಿನಲ್ಲಿ ಬೆಲೆಗಳು ಪ್ರಮಾಣಬದ್ಧವಾಗಲು ಸು-ವರ್ಣದ, ಸೌಂದರ್ಯದ ಅರಿವನ್ನು ಜನಕ್ಕೆ ತಂದುಕೊಡುವುದೇ ತಿಳಿದವರ ಮೊದಲ ಕೆಲಸವಲ್ಲವೆ?

ಗೆಳೆಯರೆ, ಕಂನಾಡ ನಂದನವನವೆಂದು ಹೆಸರಾಂತ ನಾಡಿನ ಭಾಗವಾದ ನಿಮ್ಮ ಈ ಜಿಲ್ಲೆಯಲ್ಲಿ ಸೇರಿರುವ ಈ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ಸೌಂದರ್ಯವನ್ನು ಕುರಿತಲ್ಲದೆ ಬೇರಿನ್ನಾವ ವಿಷಯದ ಮಾತೆತ್ತುವುದು ಉಚಿತವಾದೀತು? ಮಾತನಾಡುವುದರಿಂದ ನಮ್ಮ ಕೊರತೆ ತಿಳಿಯುತ್ತವೆ. ಪರಿಪೂರ್ಣದ ಆಕಲನಮಾಡಲು ಹಂಬಲಿಸುವವನು ಹೇಳುತ್ತಿರಬೇಕು. (ಬರೆಯುತ್ತಿರಬೇಕು). ಕುಂದುಕೊರತೆಗಳನ್ನು ಕಂಡು

ಕೊಳ್ಳುತ್ತಿರಬೇಕು. ಸೌಂದರ್ಯವು ಹೇಳಿ ತಿಳಿಯದು. ಅದು ಬಗೆದು ಭಾವಿಸುವ ವಿಷಯ; ಆಂತರಿಕ ಅನುಭವ. ಸೌಂದರ್ಯದರ್ಶನದಿಂದ ಸಂಕಲ್ಪ (ವಿಕಲ್ಪ)ಗಳು ನಾಶಹೊಂದುತ್ತವೆ. ಸೌಂದರ್ಯದ ಲಹರಿ ಸೋಂಕುತ್ತಲೆ ಮನಸು ತತ್-ಮಯವಾಗುತ್ತದೆ. 'ಭಿದ್ಯತೇ ಹೃದಯ ಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ'. ಆಗ ಮಾತಿಗೆ ಮೀರಿದ ಆನಂದವನ್ನು ಅನುಭವಿಸಲು ಮೌನವೇ ಸಾಧನ. ನಿಜ. ಇಂದು ಆಂತರಿಕ ಅನುಭವ, ಅಂತರಂಗದ ವಸ್ತುವಾಗಿರುವಂತೆ ಹೊರಗೂ ಎಲ್ಲೆಲ್ಲೂ ಉಂಟು, ಹಾಗಿಲ್ಲವಾದರೆ ಒಬ್ಬರ ಆನಂದ ಇನ್ನೊಬ್ಬರಿಗೆ ದೊರೆಯದಾಗಿತ್ತು.

ಎಲ್ಲೆಲ್ಲೂ ಮೂಡಿ, ಮಿಂಚಿ ಹೊರಸೂಸುತ್ತಿರುವ ಆ ಸೌಂದರ್ಯವು ಅಂದಅಂದದಲ್ಲಿ ನಮ್ಮ ಅಂತರಂಗದೊಳಗೂ ಬೆಳಗಿ ನಮ್ಮನ್ನು ಪವಿತ್ರಗೊಳಿಸಲಿ. ಮಾನವ ಕುಲವನ್ನು ಮೇಲೆತ್ತಲಿ.

ಚೆಲವು ನಮಗೊಲಿಯಲಿ.

ದಾರಿಯ ಬುತ್ತಿ

ಅರಿಕೆ

ನಿಂತ ನೀರು, ಕಟ್ಟಿದ ಬುತ್ತಿ ಕೊನೆಯತನಕ ಸಾಲವು. ಎಂದು ಹೇಳುವರು. ಆದರೆ, ಈಗ ನೀಡಿರುವ ಬುತ್ತಿಯು ತಿಂದಷ್ಟೂ ಹೆಚ್ಚಾಗುವಂತಹುದು. ಇದು ದ್ರೌಪದಿಯ ಅಕ್ಷಯ ಪಾತ್ರೆಯ ಈ ಬುತ್ತಿ ಜ್ಞಾನಸೂರ್ಯನ ವರವೆಂದು ಹೇಳಿದರೆ ತಪ್ಪಾಗದು; ಈ ಬುತ್ತಿಯು ಹತ್ತಿರವಿದ್ದರೆ ತಮ್ಮ ಜೀವನದಲ್ಲಿ ಗಂಟು ಬೀಳುವ ಬೇಕಾದಂತಹ ದುರ್ವಾಸರನ್ನೂ ತಣಿಸಿ-ದಣಿಸಿ ಕಳುಹಿಸಬಹುದು.

ಸುಭಾಷಿತವನ್ನು ಅಮೃತಕ್ಕೆ ಹೋಲಿಸಿದ್ದಾರೆ. ಸುಭಾಷಿತವು ಭೂಲೋಕಕ್ಕೆ ಬಂದೊಡನೆ ಅಮೃತವು ಸ್ವರ್ಗವಾಸಿಯಾಯಿತಂತೆ. ಅದು ಒಳ್ಳಿತ್ತೇ ಆಯ್ತು. ಏಕೆಂದರೆ, ಆ ಅಮೃತಪಾನದಿಂದ ದೇಹವನ್ನು ಅಮರವಾಗಿದ್ದರೇನು. ಮನದ ನಂಜು ಮಾಯವಾಗದ ತನಕ? ಕೇವಲ ದೇಹವನ್ನು ಅಮರ ಮಾಡುವ ಅಮೃತವು ಒಳಿತಿಗಿಂತ, ಲೋಕದ ಕೇಡಿಗೇ ಕಾರಣವಾಗಬಹುದು. ಇದಕ್ಕಿಂತಲೂ ಸುಭಾಷಿತಾಮೃತವೇ ಸಾವಿರ ಪಾಲಿಗೆ ಮಿಗಿಲಾದುದು, ಏಕೆಂದರೆ ಇದು ಮನಸಿನ ಕೊಳೆಯನ್ನು ತೊಲೆದು ಜೀವನಾಮೃತದ ಸವಿಯನ್ನುಣಿಸುತ್ತಿದೆ.

ನಮ್ಮಲ್ಲಿ ಪುರಾತನ ಕಾಲದಿಂದಲೂ ನಡೆದು ಬಂದಿರುವ ಹಲವು ಬಗೆಯ ಅಮೃತ ವಚನಗಳಿವೆ. ಇದು ಇನ್ನೂ ಒಂದು ಜಾತಿ. ಅದರ ಸವಿಯನ್ನು ಬಲ್ಲ ರಸಿಕರು. ಇದರ ರುಚಿ-ವಿಶೇಷವನ್ನೂ ಕಂಡುಹಿಡಿಯದೆ ಇರಲಾರರು. ಈ ಬುತ್ತಿಗೆ ಉಪಯೋಗಿಸಿದುದು ಮುಖ್ಯವಾಗಿ ಸ್ಪೇನಿನ ಅಕ್ಕಿ; ಕನ್ನಡದ ಕೆನೆಮೊಸರು. ಇದನ್ನು ಮೆಲ್ಲು ಸವಿಯಾಗಿದೆಯೆ, ಇಲ್ಲವೆ; ಎಂಬುದನ್ನು ಹೇಳುವ ಅಧಿಕಾರವು ರಸಜ್ಞರಾದ ಸವಿಗಾರರದು.

ಮೂಲ ಸ್ಪೇನಿನ ಈ ಪುಸ್ತಕವು. The Art of Wordly Wisdom ಎಂಬ ಹೆಸರಿನಲ್ಲಿ ಇಂಗ್ಲೀಷಿನ ರೂಪ ತಾಳಿತು. ವ್ಯವಹಾರ ಜ್ಞಾನದ ಉಪದೇಶವುಳ್ಳ ಇಂತಹ ಅಪೂರ್ವ ಪುಸ್ತಕವು ತಮ್ಮಲ್ಲಿ ಇಲ್ಲವೆಂದು ಶೋಪೆನ್ ಹೊರನು: ಇದನ್ನು ಜರ್ಮನ್ ಭಾಷೆಗೆ ತಿರುಗಿಸಿಕೊಂಡನಂತೆ. ಯುರೋಪಿನ ಯಾವ ಬಾಷೆಯಲ್ಲಿಯೂ ಈ ಬಗೆಯಾಗಿ ಲೌಕಿಕಜ್ಞಾನವನ್ನು ತಿಳಿಯಾಗಿ ಸೂತ್ರಬದ್ಧವಾಗಿ ಹೇಳುವ ಬೇರೆ ಪುಸ್ತಕವೇ ಇಲ್ಲವೆಂದು ಹೇಳುತ್ತಾರೆ. ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಇದರೊಳಗಿನ ವಿಚಾರಗಳು; ಪ್ರಬಂಧ ಉಪನ್ಯಾಸಾದಿಗಳಲ್ಲಿ ಬಳಸಲಿಕ್ಕೂ ತಮ್ಮ ದೃಷ್ಟಿಕೋನವನ್ನು ಸರಿಪಡಿಸಿಕೊಳ್ಳಲಿಕ್ಕೂ ಸಹಾಯವಾಗಬಹುದು. ಸಾಮಾನ್ಯ ಸಂಸಾರಿಗಳಿಗೆ ಇದರಲ್ಲಿಯ ಎಷ್ಟೋ ಸೂತ್ರಗಳು ಜೀವನದಲ್ಲಿ ಮಾರ್ಗದರ್ಶಕವಾಗಬಹುದು. ವಿಮರ್ಶಕರಿಗೂ ತಾತ್ವಿಕರಿಗೂ ಇದರಲ್ಲಿಯ ಹಲಕೆಲವು ಮಾತುಗಳು ಮತ್ತೆ ಹಲವು ಹೊಸ ವಿಚಾರಗಳ ಕಾರಂಜಿಯನ್ನೇ ಹೊಮ್ಮಿಸುವುದಕ್ಕೆ ಕಾರಣವಾಗುಬಹುದು. ಇಂತು ಈ ಹೊತ್ತಿಗೆ ಎಲ್ಲ ಮಟ್ಟದ ಜನಕ್ಕೂ ಬಾಳಿನ ಹಾದಿಯ ಬುತ್ತಿಯಾಗುವುದೆಂದು ಎಣಿಸಿದ್ದೇನೆ.

ದಾರವಾಡ - ೮ **ಡಾ|| ಶಂ. ಬಾ. ಜೋಶಿ.**

ಸಂಪಾದನೆ

'ಇಂದಿನ ಬಾಲಕರೇ ಭಾವೀ ಭಾರತದ ನಿರ್ಮಾಪಕರು'. ಎಂಬ ಘೋಷಣೆ ಅತಿಪ್ರಿಯವಾಗುತ್ತಿರುವ ಸಂದರ್ಭವೇ ನಮ್ಮ ಬದುಕಿನ ಬಗೆಗಿನ ಕೆಲವು ಭ್ರಾಮಕ ಅಥವಾ ಅಸಂಗತ ಅಂಶಗಳನ್ನು ನಿರ್ಮಾಣ ಮಾಡಿತೋರಿಸುವಂತಿದೆ. ಈ ಒಂದು ವಾಕ್ಯದ ಹೊಗಳಿಕೆಯಿಂದ ಯುವ ಪೀಳಿಗೆಯು ಮಾರುಹೋಗಿ ಬೇರೊಬ್ಬರ ಕೈಗೊಂಬೆಯಾಗಿ ವರ್ತಿಸುತ್ತಿರುವುದು ಸಾಮಾನ್ಯ ಸಂಗತಿಗಳಾಗಿವೆ. ಇಂಥವರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ರಾಜಕಾರಣಿಗಳಾಗಲಿ, ಇತರೆ ಯಾರೇ ಆಗಲಿ, ತರುಣವರ್ಗದ ವೈಚಾರಿಕ ಹಕ್ಕನ್ನು ಅವರಿಂದ ಮೊದಲು ಕದಿಯುತ್ತಾರೆ. ಇದಕ್ಕೆ ಕೊನೆ ಇಲ್ಲವೇ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿದೆ.

ಇಂಥ ಅಸಂಗತ ಅಂಶಗಳ ಜೊತೆಯಲ್ಲಿ ಬದುಕನ್ನು ವಿಶಾಲವಾಗಿ ಅರ್ಥವಿಸಿಕೊಂಡು "ಸಮಾನೀವ ಆಕೂತಿಃ, ಸಮಾನ ಹೃದಯಾನಿ ವಃ, ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ" ಆಗುವುದು ಎಂದು; ಎಂಬ ಪ್ರಶ್ನೆ ಧುತ್ತನೆ ಮೈದಾಳಿ ನಿಲ್ಲುತ್ತದೆ. ಈ ದಿಕ್ಕಿನಲ್ಲಿ ಪ್ರಜ್ಞಾಪ್ರಚೋದಕವಾದ ನಿಲುವುಗಳು ನಮ್ಮ ಜನರಿಗೆ ಬೇಕಾಗಿವೆ. ಈ ದಿಕ್ಕಿನಲ್ಲಿ ಪ್ರಜ್ಞಾಪ್ರಚೋದಕವಾದ ನಿಲುವುಗಳು ನಮ್ಮ ಜನರಿಗೆ ಬೇಕಾಗಿವೆ. ಈ ಪ್ರಕಾಶನದ ಬೆರವಣಿಗೆಯೂ ಕೂಡ ಇಂಥ ಅಂಶದ ಮೇಲೆಯೇ ನಿರ್ಮಾಣಗೊಂಡಿದೆ. ಆ ದಿಕ್ಕಿನಲ್ಲಿ ಅಳಿಲು ಸೇವೆ ಮಾಡುತ್ತಿದೆ, ಮಾಡುತ್ತದೆ.

ನನ್ನ ಪ್ರಕಾಶನದ ಮೂರನೇ ಕೃತಿಯಾದ ಇದನ್ನು ಶಂ. ಬಾ. ಜೋಶಿ ಅವರು ಯಾವ ಮುಚ್ಚುಮರೆ ಇಲ್ಲದೆ ಕೇಳಿದೊಡನೆ ಪ್ರಕಟಿಸಲು ಅನುಮತಿ ನೀಡಿದ್ದಾರೆ. ಇದು ನನ್ನ ಪಾಲಿನ ಭಾಗ್ಯವೆಂದು ಪರಿಗಣಿಸಿದ್ದೇನೆ. ಇದಕ್ಕೆ ಬ್ಲರ್ಬ್ ಬರೆದುಕೊಟ್ಟ ಜಿ. ಎಸ್. ಎಂ. ಅವರನ್ನು ಅಭಿನಂದಿಸುತ್ತೇನೆ.

ಇಂಥ ಕೃತಿಗಳ ಪ್ರಕಟಣೆಯಲ್ಲಿ ನನ್ನೊಡನೆ ಪರೋಕ್ಷ-ಅಪರೋಕ್ಷವಾಗಿ ಸಹಕರಿಸುತ್ತಿರುವ ಜಿ. ಕೃಷ್ಣಮೂರ್ತಿ, ತಿಮ್ಮಯ್ಯ, ಕುಂ. ವೀ, ರಾಮಚಂದ್ರ ಉಡುಪ, ಎನ್. ಪಿ. ಶಂಕರ್ ಇಂಥ ವೈಚಾರಿಕ ಬಳಗದವರನ್ನು ಮರೆಯಲಾರೆ.

ಈ 'ದಾರಿಯ ಬುತ್ತಿ' ಪ್ರಕಟಣೆಗೆ ಎಲ್ಲಿಲ್ಲದ ಉತ್ಸಾಹತೋರಿ, ಸೌಜನ್ಯದಿಂದ ನನ್ನೊಡನೆ ಸಹಕರಿಸಿದ ಜಿ. ಶೇಷಗಿರಿ ಆಚಾರ್ಯರನ್ನು ಸ್ಮರಿಸದೆ ಇರಲಾರೆ. ಕಾಲಕಾಲಕ್ಕೆ ಅವರು ನೀಡುತ್ತ ಬಂದ ಧೈರ್ಯ, ಉತ್ಸಾಹ, ಇಂಥ ಹೊತ್ತಗೆಗಳನ್ನು ತರುವುದಕ್ಕೆ ಜೀವಮೂಡಿದೆ.

ಅಂದವಾಗಿ ಮುದ್ರಿಸಿಕೊಟ್ಟ ಮುದ್ರಣಾಲಯದ ಬಳಗದವರನ್ನು ನಾನು ಹೇಗೆ ಮರೆಯಲಿ?

ನೆಲಮಂಗಲ **ಮಲ್ಲೇಪುರಂ ಜಿ. ವೆಂಕಟೇಶ**

೧-೯-೧೯೭೮

ನಿನ್ನ ನೆಲೆ ನೋಡು

ನಿನ್ನ ಬುದ್ಧಿವಂತಿಕೆ, ನಿನ್ನ ವಿವೇಕ, ನಿನ್ನ ಆಳವು, ನಿನ್ನ ಒಲವುಗಳು ನಿನಗೆ ಗೊತ್ತಿರಲಿ. ನಿನ್ನ ಒಡೆಯನು ನೀನಾಗಬೇಕಿದ್ದರೆ, ನಿನ್ನನ್ನು ನೀನು ಅರಿ. ಇಂದು ಆಳಾಗಿರುವ ನೀನು ಅರಿತೊಡನೆ ಅರಸನಾಗುವೆ. ಮೋರೆ ನೋಡುವ ಕನ್ನಡಿಗಳಿವೆ; ಇದರೆ ಮನಸ್ಸಿಗೆ ಕನ್ನಡಿಗಳಿಲ್ಲ. ವಿಮರ್ಶಾಯುಕ್ತ ವಿಚಾರವು ಮನಸ್ಸಿನ ಕನ್ನಡಿಯಿದ್ದಂತೆ. ಇದರ ನೆರವಿನಿಂದ ನಿನ್ನ ಅಂತರಂಗವನ್ನು ಅರಿತುಕೊ. ಆತ್ಮದರ್ಶನವನ್ನು ಪಡೆ. ಈ ಕನ್ನಡಿಯಿಂದ ಕಂಡ ನಿನ್ನ ಕುಂದುಕೊರತೆಗಳನ್ನು ಹೋಗಲಾಡಿಸಿಕೊಂಡು ಪರಿಪೂರ್ಣನಾಗಲು ಹವಣಿಸು. ನಿನ್ನ ಬುದ್ಧಿಶಕ್ತಿಯನ್ನು ಆಗಾಗ ಒರೆಗೆ ಹಚ್ಚಿ, ಪರೀಕ್ಷಿಸು. ಕಾರ್ಯಶಕ್ತಿಯನ್ನು ಕೆಲಸ ಕೈಕೊಂಡು ಅಳೆ. ಸಮಯಗಳನ್ನು ತಂದುಕೊಂಡು ಧೈರ್ಯದ ಅಳವನ್ನು ಅರಿ. ಎಲ್ಲ ಹೊತ್ತಿನಲ್ಲಿಯೂ ನಿನ್ನ ತಲೆ ತಣ್ಣಗಿಟ್ಟು ತಿಳಿದು ನೋಡು. ಇಂತು ಬಲ್ಲಿದನೂ ಬಲವಂತನೂ ಆದ ಬಲ್ಲಾಳಾಗು. ಇದುವೆ ನಿನ್ನ ಗೆಲುವಿನ ಹೆದ್ದಾರಿ.

ನಡೆವಳಿಗೆ ಪುಟಗೊಡುವ ಬಗೆ

ನಿನಗೆ ಗೊತ್ತಿರಲಿ. ಇದಕ್ಕೆ ಪ್ರಕೃತಿ ಮತ್ತು ಸಂಸ್ಕೃತಿಗಳೆರಡರ ಲಾಭವನ್ನು ಪಡೆ. ಪ್ರತಿ ಏಳು ವರ್ಷಗಳಿಗೊಮ್ಮೆ ಸ್ವಭಾವವು ಬದಲಾಗುವುದೆಂದು ಹೇಳುತ್ತಾರೆ. ಈ ಮಾರ್ಪಾಟವು ಹಿತಕರವಾಗಿರಲಿ: ನಿನ್ನ ಸರಸ ಸಜ್ಜನಿಕೆಯ ಉದಾತ್ತತೆಗೆ ಕಾರಣವಾಗಲಿ. ಮೊದಲನೆಯ ಬದಲಾವಣೆಯ ತರುವಾಯ ಬುದ್ಧಿಯು ತಲೆದೋರುವುದು. ಮುಂದಿನ ಪ್ರತಿಯೊಂದು ಪುಟವೂ ನಿನ್ನ ನಡೆವಳಿಕೆ ಅಂದ ಅಂದದ ಹೊಸ ಮೆರಗು ತರಲಿ. ನಿನ್ನ ಹತ್ತಿ ಹೊಂದಿದವರ ಹೊಳಪಿಗೂ ಕಾರಣವಾಗಲಿ. ವಾಸಸ್ಥಾನ, ಉದ್ಯೋಗ ಅಥವಾ ಅಧಿಕಾರವು ಬದಲಾದಂತೆ ಹಲವರ ನಡೆವಳಿಯು ಮಾರ್ಪಡುವುದು. ಮಾರ್ಪಾಟವು ಆರಂಭದಲ್ಲಿ ಸೂಕ್ಷ್ಮ ಪ್ರಮಾಣದಲ್ಲಿದ್ದರೂ ಕ್ರಮಕ್ರಮವಾಗಿ ಅದು ಸುಸ್ಪಷ್ಟವಾಗಿ ಸಂಪೂರ್ಣ ಪರಿವರ್ತನವಾದುದು ಕಂಡುಬರುವುದು. ಇಪ್ಪತ್ತನೆಯ ವಯಸ್ಸಿನಲ್ಲಿ ಮಾನವನು ಒಂದು ನವಿಲಿನಂತೆ ಬಣ್ಣ ಬಣ್ಣದ ಭಾವನೆಗಳ ಗರಿಗೆದರಿ ಕುಣಿಯುತ್ತಿರುತ್ತಾನೆ. ಮೂವತ್ತರಲ್ಲಿ ಸಿಂಹನಂತೆ ಹೆಂಡಿರು-ಮಕ್ಕಳ ಮೇಲೆ (ಕರ್ತೃತ್ವಶಾಲಿಯಾಗಿದ್ದರೆ ಇನ್ನೂ ಹೆಚ್ಚು ಜನಗಳ ಮೇಲೆ) ಗುಡುಗುವನು. ನಾಲ್ವತ್ತರಲ್ಲಿ ಲೋಕದ ಕಹಿ ಅನುಭವಗಳಿಂದ ಹೇಸಿಕೊಂಡು 'ಒಂಟೆ'ಯಾಗಿ ಸಾಗುವನು. ಐವತ್ತಕ್ಕೆ ನಂಜುಂಡನ ಆದರ್ಶವನ್ನು ಮರೆತರೆ ತಾನೇ ನಂಜಿನ ನಾಲಗೆಯವನು (ಹಾವು) ಆಗುವನು. ಅರುವತ್ತಕ್ಕೆ ಈ ಬಗೆಯ ಸ್ವಭಾವಕ್ಕಾಗಿ ಇವನನ್ನು ಬಲ್ಲವರೂ ಕಡೆಗಣಿಸುವುದರಿಂದ ಬೀದಿಯ ಬೀಡಾಡಿ ನಾಯಾಗುವನು. ಎಪ್ಪತ್ತಕ್ಕೆ ಎಲ್ಲರನ್ನೂ ಅಣಕಿಸುವ ಕೋತಿ, ಎಂಬತ್ತಕ್ಕೆ ಇಂತಹರ ಬಾಳು ಬರಿದೇ ಬರಿದು; ಸತ್ತರೆ ಅಳುವವರೂ ಇಲ್ಲ.

ತಾಳು

ತಾಳಿದವನೇ ಬಾಳುವವನು. ತಾಳ್ಮೆ ಇಲ್ಲದೆ ಸೈರಣೆಯಿಲ್ಲ; ಸೈರಣೆಯಿಲ್ಲದೆ ಸೈಪು (ಶಾಂತಿ) ಇಲ್ಲ; ಸೈಪು ಇಲ್ಲದವನಿಗೆ ಸುಖವಿಲ್ಲ; ಸಂತೋಷವಂತೂ ಮೊದಲೇ ಇಲ್ಲ. ಸುಖ-ಸಂತೋಷಗಳನ್ನರಿಯದ ಬಾಳು ಬಾಳೆ? ಹಾಳು.

ಕಾಯು

ಬಾಳಿಗೆ ಕಾವು ಬೇಕು; ಕಾಯಲೂ ಬೇಕು. ಕಾವು ಹೆಚ್ಚಾದರೆ ಕಮರುವುದು. ತಂಪು ಹೆಚ್ಚಾದರೆ ಮುರುಟುವುದು. ಜೀವನದಲ್ಲಿ ಕಾವು-ತಂಪುಗಳ ಹದವನ್ನು ಸಾಧಿಸಬಲ್ಲವನೆ ಬದುಕಬಲ್ಲ; ಬಾಳಿ ಬೆಳೆಯಬಲ್ಲ. 'ಕಾಯುವುದೇ' ತಪಸ್ಸು ಎಂಬ ಮಾತಿಗಿಂತ 'ಕಾಯಬೇಕು' ಎಂಬುದು ಹೆಚ್ಚು ಹುರುಳುಳ್ಳ ನುಡಿ. ಕಾರ್ಯಸಿದ್ಧಿಗೆ ತಪ ಎಂದರೆ ಕಾವು ಬೇಕು. ಅಲ್ಲದೆ ಯೋಗ್ಯ ಸಮಯದವರೆಗೆ ಕಾಯಲೂಬೇಕು. ಕಾವಿನಲ್ಲಿ ಹುಮ್ಮಸವಿದೆ. ಕಾಯುವಲ್ಲಿ ಶಾಂತಿಯಿದೆ. ತಾಳ್ಮೆಯಿಲ್ಲದವನು ಕಾಯಲಾರನು. ಕಾಯದೆ ಫಲದೊರೆಯದು (ಕಾಯಾಗದು).

ತಡೆ

ಗಡಿಬಿಡಿ ಬೇಡ. ಗಡಿಬಿಡಿ-ಅವಸರ-ಕಸಿವಿಸಿಗಳು ಕೊನೆಗಾಲದ ಅವಲಕ್ಷಣಗಳು. ಗಡಿಬಿಡಿ ಮನೋವಿಕೃತಿಯ ಹೆಗ್ಗುರುತು. ತಾಳ್ಮೆಯಿಂದೊಡಗೂಡಿದ ಉದಾರ ಹೃದಯವೇ ತಡೆಯಬಲ್ಲದು. ಅಸಹನೆಯು ಅನುದಾರತೆಯ ಕುರುಹು. ಸಿಡುಕಿನವರು ತಡೆಯಲಾರರು; ತಡೆಯಲು ತಂಗಬೇಕು. ತಂಪುಬೇಕು. ಸಡಿಲಿದ್ದರೆ ತಡೆವುದೇನು? ತಡವುದಕ್ಕೆ ಬಿಗುವುಬೇಕು. ಬಿಗುವು ಇದ್ದರೆ ಬೀಳುವ ಭಯವಿಲ್ಲ. ಸುಸಂಧಿಗಳ ಕೇಂದ್ರವು ಕೈವಶವಾಗುವದಕ್ಕೆ ಕಾಲದ ಪರಿಮಿತಿಯೊಳಗಿಂದ ಹೊರಬೀಳಬೇಕು. ತಿಳುವಳಿಕೆಯಿಂದ ತಡೆಯುವುದು, ಎಂದರೆ ಶಕ್ತಿ ಸಂಗ್ರಹಿಸುವುದು; ಗುರಿಯನ್ನು ನಿರ್ಧರಿಸುವುದು; ಸಾಧನಗಳನ್ನು ಸರಿಪಡಿಸಿಕೊಳ್ಳುವುದು. ರಾಜದಂಡಕ್ಕಿಂತಲೂ ಕಾಲನ ಕೈಯು ಹೆಚ್ಚು ಬಲಶಾಲಿ; ಏನನ್ನೂ ಎಸಗಬಲ್ಲದು. ದೇವರು ಎಂತೆಂತಹರಿಗೊ ಬುದ್ಧಿ ಕಲಿಸುವದು ಹೇಗೆ? ಕಾಲನ ಕೈಯಿಂದಲೇ. ಕಾಲನ ಬೆಂಬಲದಿಂದ ಈ ಲೋಕದಲ್ಲಿ ಬೇಕಾದವರನ್ನು ಹಣ್ಣಿಗೆ ತರಬಲ್ಲೆನೆಂದು ಓರ್ವ ತತ್ವಜ್ಞನು ಹೇಳಿದುದು ಅರ್ಥಪೂರ್ಣವಾಗಿದೆ. ಕಾಯ್ದವನಿಗೇ ಭಾಗ್ಯದೇವಿಯು ವರಿಸುವಳು.

ನೋವಿನ ಬೆಲೆ

ಅಮೌಲಿಕ, ನೋವು ಅರಿವಿನ ಮೂಲ. ಅದೇಕೆ, ನೋವೇ ಅರಿವು. ನೋವಿಲ್ಲದವನ ಅರಿವು ಕಿರಿದು; ಹಿಗ್ಗು ಬರಿದು. ನೋವಿನ ನೆಲೆ ಎಷ್ಟೊ ಅಷ್ಟೆ ನಮ್ಮ ಹಿಗ್ಗಿನ ಆಳ. ಆವುದೇ ಸುಖಾನುಭವಕ್ಕೆ ದುಃಖಾನುಭವದ ಹಿನ್ನೆಲೆಬೇಕು. ಕಾರಣ, ನೋವು ಇರಲಿ; ಆದರೆ ಗಾಯ ಮಾತ್ರ ಬೇಡ. ಏಕೆಂದರೆ ನೋವು, ಗಾಯದಂತೆ ಜೀವ ಹೀರುವುದಿಲ್ಲ; ಜೀವನದ ದಾರಿ ತೋರುವುದು. ನೋಂಪು ಎಂದರೆ ವ್ರತ. ನೋವುಳ್ಳವನೆ ವ್ರತಿ-ನೋಹಿ. ನೋವು ನಮ್ಮನ್ನು ಸ್ವೈರಾಚಾರದಿಂದ ದೂರವಿರಿಸುವುದು; ಉದ್ಧರಿಸುವುದು. ಅದಕ್ಕಾಗಿಯೇ ಕುಂತಿಯು ಕೃಷ್ಣನಲ್ಲಿ ನೋವು ಬೇಡಿದಳು. ನೋವು ಮನುಷ್ಯನ ಪರಿಪಕ್ವತೆಗೆ ಕಾರಣ. ಮಾಯಲಾರದ ಗಾಯಗೊಂಡ ಮನಸ್ಸು ಕಠೋರವಾಗಿ, ಕಹಿಯಾಗಿ ಪರಿಣಮಿಸುವುದಾದರೂ, ನೊಂದು ಬೆಂದು ಹಣ್ಣಾದ ಹೃದಯದ ಸವಿಯು ಅಪೂರ್ವ. ಬೆಂದ ಅನ್ನದ ರುಚಿ ಬೇಯದುದಕ್ಕೆ ಬಂದೀತೇ? ಬೆಂದುದೇ 'ಪಕ್ವಾನ್ನ'. ಅನ್ನವು ಬೇಯುವುದು ಬೆಂಕಿಯಿಂದ: ಜೀವನದ ಪಕ್ವತೆ ನೋವಿನಿಂದ.

ಗುಟ್ಟಿನ ಗುಟ್ಟು

ಬಿಚ್ಚು ಮಾತನ್ನು ಯಾರೂ ಮೆಚ್ಚರು, ಎಂದೇ ವ್ಯಂಗ್ಯ ಸರಣಿ ಎಂಬುದು ಸರಸ. ಮುಸುಕು ಸೊಗಸನ್ನು ಹೆಚ್ಚಿಸುವುದು. ಬತ್ತಲೆ ಹೇಸಿಕೆ. ಹೊಸ ಸಂಗತಿಗಳು ಮನಸೆಳೆವ ಕಾರಣವೇನು? ಅದರ ಗುಟ್ಟು ಇನ್ನೂ ರಟ್ಟಾಗಿಲ್ಲವೆಂದೇ. ಕೃತಿಯ ನಾವೀನ್ಯವು ಅದರ-ಕೌತುಕಗಳನ್ನು ಹೆಚ್ಚಿಸುತ್ತದೆ. ಎಲೆ ತೆರೆದು (ತೋರಿ) ಆಡುವ

ಆಟದ ಸ್ವಾರಸ್ಯವು ಹಾಳಾಗುವದು. ನೀವು ಗಣ್ಯರಾಗಿರುವಾಗಲಂತೂ ಒಂದು ತುಟಿಯಿರುವಾಗಿನ ಬೆಲೆ, ತುಟಿ ಎರಡಾದ ಬಳಿಕ ನಿಶ್ಚಿತವಿಲ್ಲ. ಕೆಲಸಗಳು ಕಂಡೂ ಕಾಣದಂತೆಯೂ ಇರಲಿ. ಕೃತಿಯಲ್ಲಿ ಸ್ವಲ್ಪ ರಹಸ್ಯವೂ ಬೆರೆತಿರಲಿ. ಗಿಡವು ತನ್ನ ಬೇರುಗಳನ್ನು ಬಚ್ಚಿಡುತ್ತದೆ. ದೇವರು ಅಂತರ್ಯಾಮಿಯಾಗಿದ್ದಾನೆ. ಮಾತಾಳಿಗಿಂತ ಮೌನಿ ಮಿಗಿಲಾದವನು. ವಿಚಾರಯುಕ್ತವಾದ ಮೌನವು ಆತ್ಮೋನ್ನತಿಯ ಒಂದು ಮಹಾಸಾಧನೆ. ಪ್ರಕಟಣೆಗಳೂ, ಪ್ರತಿಜ್ಞೆಗಳೂ ಬರಿ ಬಾಯ್ಮಾತೆಂದು ಟೀಕೆಗೇ ಅವಕಾಶವನ್ನು ಕಲ್ಪಿಸುವುವು. ಆದುದರಿಂದ ಗೊತ್ತುವಳಿ (ಠರಾವು)ಗಳಿಗೆ ಬೆಲೆ ಕಡಿಮೆ. ಇವು ನಡೆವಳಿಯಲ್ಲಿ ಬರದಿದ್ದರೆ ಇಮ್ಮಡಿ ದುರ್ದೈವ! ಆಸಕಾರಣ ಗುಟ್ಟಿನ ಗುಟ್ಟು ಗೊತ್ತಿರಲಿ. ಗುಟ್ಟು ದೇವರ ದಾರಿ. ದೇವರ ಕೃತಿಯು ರಹಸ್ಯಮಯವಾಗಿರುವುದರಿಂದಲೇ ಲೋಕಕ್ಕೆ ಇನಿತೊಂದು ಸೋಜಿಗ; ಇಷ್ಟೊಂದು ಆದರ. ಈ ಪರಿ ಕೌತುಕ.

ನಾಡ ನಡೆ-ನುಡಿಗಳ ಕೊರತೆಗಳನ್ನು ಅರಿತು ಅವನ್ನು ದೂರಮಾಡು

ನೆಲದ ಗುಣ ನೀರಿಗೆ; ನಾಡ ಗುಣ ಜನರಿಗೆ. ಜನಗಳು ಆವುದೊಂದು ದೇಶಸ್ಥರಾದೊಡನೆ ಅಲ್ಲಿಯ ಗುಣಾವಗುಣಗಳೂ ಅವರ ಮೈಗೂಡುವುವು. ಕೆಲವರಿಗೆ ಇನ್ನೂ ವಿಶೇಷ ಪ್ರಮಾಣದಲ್ಲಿ ಅಂಟಿಕೊಳ್ಳುವುವು. ಈ ಭೂಮಂಡಲದಲ್ಲಿ ಇನ್ನೊಂದು ನಾಡಿನವರಿಂದ ಹೆಸರಿಡಿಸಿಕೊಳ್ಳದ ದೇಶವೇ ಇಲ್ಲ. ಎಷ್ಟೇ ಸುಸಂಸ್ಕೃತವಾಗಿರಲಿ, ನಾಗರಿಕತೆ ಬೆಳೆದಿರಲಿ. ಒಂದಿಲ್ಲೊಂದು ಬಗೆಯ ಕೆಲವೊಂದು ಕುಂದು ಕೊರತೆಗಳು ಇಲ್ಲದ ದೇಶವೇ ದೊರೆಯದು. ತನ್ನ ನಾಡಿನ ಅವಗುಣಗಳನ್ನು ಅರಿತು ಅವನ್ನು ದೂರಮಾಡಿಕೊಂಬುದು ಜಾಣ್ಮೆ; ಕೊನೆಗೆ ಅವುಗಳು ತಲೆಯೆತ್ತದಂತೆ ಎಚ್ಚರಪಡುವುದೂ ಬುದ್ಧಿವಂತಿಕೆಯ ಕುರುಹಾಗಿದೆ. ಇದರಂತೆ ಕುಟುಂಬದ ಕುಂದುಕೊರತೆಗಳಿರುತ್ತವೆ; ಕೈಕೊಂಬ ಉದ್ಯೋಗ, ಅಧಿಕಾರ ಅಥವಾ ಆಯಾ ವಯೋಮಾನದ ಹಲವು ಅನಿವಾರ್ಯ ದೋಷಗಳಿರುತ್ತವೆ. ಇವೆಲ್ಲವೂ ಒಬ್ಬನಲ್ಲಿಯೇ ಒಟ್ಟುಗೂಡಿದರೆ, ಆತನು ಮುಂಗಂಡು ಅವನ್ನು ನಿವಾರಿಸಿಕೊಳ್ಳಲು ಹೆಣಗದಿದ್ದರೆ, ಅಂತಹ ಅವಗುಣ ಪರಿಪೂರ್ಣವಾದ ಬೇರೊಂದು ವ್ಯಕ್ತಿಯನ್ನು ಕಾಣುವುದೇ ಅಸಂಭವವು.

ಗೆಳೆಯರು ಗುರುಗಳು

ಗೆಳೆಯರ ಸರಸ ಸಲ್ಲಾಪಗಳು ಜ್ಞಾನದ ಗರುಡಿಯಾಗಲಿ, ಸಂವಾದಗಳು ಸಂಸ್ಕೃತಿಯನ್ನು ಹೆಚ್ಚಿಸಲಿ. ಇಂತು ಗೆಳೆಯರು ಒಬ್ಬರೊಬ್ಬರಿಗೆ ಗುರುಗಳಾಗಲಿ. ನಕ್ಕು ಕಲೆವ ಗೆಳೆತನದ ಸುಖ-ಸಂಕಥಾ-ವಿನೋದಗಳು, ಅಧ್ಯಯನದ ಫಲವನ್ನು ಕೊಡುವಂತಹವಾಗಲಿ, ಬುದ್ಧಿವಂತರು ಕೊಟ್ಟು-ಕೊಂಬುವಲ್ಲಿ 'ಹಿಗ್ಗು'ತ್ತಾರೆ. ತಾವು ಆಡುವಾಗ ಉಳಿದ ಗೆಳೆಯರಿಂದ ಸೈಯೆನಿಸಿಕೊಳ್ಳುವರು. ಅವರಿಗೆ ಕಿವಿಗೊಟ್ಟಾಗ ತಿಳುವಳಿಕೆಯನ್ನು ಪಡೆಯುವರು.

ಕೃತಿಯ ರೀತಿಗಳನ್ನು ಬದಲಿಸು

ಯಾವಾಗಲೂ ನೀನು ಒಂದೇ ರೀತಿಯಿಂದ ನಡೆಯಬೇಕು. ನಿನ್ನ ವಿರೋಧಿಯೊಬ್ಬನಿದ್ದರಂತೂ ತೀರಿತು. ನೀನು ಬೇರೆ ಬೇರೆ ರೀತಿಗಳನ್ನು ಉಪಯೋಗಿಸುವುದರಿಂದ ಅವನು ದಿಗಿಲುಗೊಳ್ಳುವನು. ಮೊದಲ ಹುರುಪಿನಲ್ಲಿಯೇ ಯಾವುದನ್ನೂ ಮಾಡಬೇಡ. ನೀನು ಒಂದೇ ತೆರನಾಗಿ ನಡೆದುಕೊಳ್ಳುವುದನ್ನು ಅವನು ತಿಳಿದುಕೊಂಡು, ಮುಂಗಂಡು, ನಿನ್ನ ಯೋಜನೆಗಳನ್ನು ವ್ಯರ್ಥಗೊಳಿಸಬಹುದು. ಸರಳವಾಗಿ ಹಾರುವ ಪಕ್ಷಿಯನ್ನು ಪಕ್ಕಕ್ಕೆ ಹೊಡೆವುದು ಸುಲಭ. ಆದರೆ, ವಿವಿಧ ರೀತಿಯಿಂದ ಹಾರುವುದನ್ನು ಹಾಗೆ ಹೊಡೆಯಲು ಬರುವುದಿಲ್ಲ. ಯಾವಾಗಲೂ ಪುನರ್ವಿಚಾರ ಮಾಡಿಯೂ ಆಚರಿಸಬೇಡ. ನಿನ್ನ ಯೋಜನೆಯನ್ನು ವಿರೋಧಿಗಳು ಎರಡನೆಯ ಬಾರಿ ಪರಿಶೀಲಿಸಿ ನೋಡಿ ತಿಳಿದುಕೊಳ್ಳಬಹುದು. ನಿನ್ನ ವೈರಿಯು ಯಾವಾಗಲೂ ಜಾಗರೂಕತೆಯಿಂದ ಕಾಯುತ್ತಿರುವನು. ಅವನು ಬಲೆಯಲ್ಲಿ ಸಿಕ್ಕದಿರುವುದಕ್ಕೆ ಬಹಳೇ ಕುಶಲತೆಯು ಬೇಕು. ಪ್ರತಿ ಆಟಗಾರನು, ಸ್ಪರ್ಧಿಯು ನಿರೀಕ್ಷಿಸುವ ರೀತಿಯಲ್ಲಿಯೇ ಎಂದೂ ಆಟವಾಡುವುದಿಲ್ಲ. ತನಗೆ ಬೇಕಾದಂತೆ ಆಡುವುದರಲ್ಲಿಯೂ ಅವನಿಗೆ ಸ್ವಲ್ಪ ಕೈಬಿಗಿ ಹಿಡಿಯಬೇಕಾಗುವುದು.

ಜ್ಞಾನ ಮತ್ತು ಸದುದ್ದೇಶ

ಇವೆರಡೂ ಇದ್ದರೇ ಅವ್ಯಾಹತ ಯಶಸ್ಸು ನಿಶ್ಚಿತ. ದುರಿಚ್ಛೆಗಳಿಂದ ಕೂಡಿದ ಚುರುಕು ಬುದ್ಧಿಯು ಯಾವಾಗಲೂ ಒಂದು ಮಹಾ ವೇತಾಳ. ದುರಿಚ್ಛೆಯು ಎಲ್ಲ ಶ್ರೇಷ್ಠತೆಯನ್ನು ವಿಷದಿಂದ ಮುಚ್ಚಿಬಿಡುತ್ತದೆ. ಅದಕ್ಕೆ ಬುದ್ಧಿಯು ಸಹಕಾರಿಯಾದರೆ ವಿನಾಶದ ಕೆಲಸವು ಇನ್ನೂ ಸ್ವಲ್ಪ ಹೆಚ್ಚು ಸುಂದರ ರೀತಿಯಲ್ಲಿ ಸಾಗುವುದು. ದುರಿಚ್ಛೆಯು ಸ್ವಲ್ಪ ಕಾಲ ಯಶಸ್ವಿಯಾದಂತೆ ಎನಿಸಿದರೂ ಅದು ಕೊನೆಗೆ ವಿನಾಶಕ್ಕೆ ಒಯ್ಯುವುದು ನಿಶ್ಚಿತ. ತಿಳುವಳಿಕೆಯಿಲ್ಲದ ಜ್ಞಾನವು ಇಮ್ಮಡಿ ಮೂರ್ಖತನ.

ಸರಿಯಾದ ನಿರ್ಣಯ

ಕೆಲವರು ಹುಟ್ಟಾಗ ಬುದ್ಧಿವಂತರಾಗಿರುವರು. ಮತ್ತು ಸ್ವಾಭಾವಿಕವಾಗಿಯೂ ದೊರೆತ ಈ ಆರ್ದ ಅನುಕೂಲತೆಯಿಂದ ಅವರು ತಮ್ಮ ಅಭ್ಯಾಸವನ್ನು ಪ್ರಾರಂಭಿಸುವರು. ವಯಸ್ಸು ಮತ್ತು ಅನುಭವಗಳು ಹೆಚ್ಚಾದಂತೆ ಅವರ ದೃಷ್ಟಿಯು ಹೆಚ್ಚು ತಿಳಿಯಾಗುವುದು. ಮತ್ತು ಸರಿಯಾದ ನಿರ್ಣಯಗಳನ್ನು ಮಾಡುವುದಕ್ಕೆ ಅವರು ಸಮರ್ಥರಾಗುತ್ತಾರೆ. ವಿವೇಕವನ್ನು ಅಡ್ಡದಾರಿಗೆ ಹಚ್ಚುವ ಭ್ರಾಂತಿಯುತವಾದ ಸಂಗತಿಗಳಿಂದ ದೂರವಾಗಿರುವುದಕ್ಕೆ ಅಪೇಕ್ಷಿಸುತ್ತಾರೆ. ಸರಿಯಾದ ನಿರ್ಣಯವು ರಾಜತಂತ್ರದಲ್ಲಿ ಅತಿ ಮಹತ್ವದ್ದಾಗಿರುವುದರಿಂದ ಅಲ್ಲಿಯಂತೂ ಅವರು ಬಹಳ ಜಾಗರೂಕರಾಗಿರುತ್ತಾರೆ. ಇಂಥ ಜನರು ದೇಶದ ಪ್ರಮುಖ ಮುಂದಾಳುಗಳಾಗುವುದಕ್ಕೂ, ಅಧಿಕಾರದ ಸೂತ್ರಗಳನ್ನು ವಹಿಸುವುದಕ್ಕೂ ಅರ್ಹರಾಗಿರುತ್ತಾರೆ.

ಕೀರ್ತಿ ಮತ್ತು ದೈವ

ಒಂದು ಚಂಚಲವಾದರೆ ಮತ್ತೊಂದು ನಿಶ್ಚಲ. ಮೊದಲನೆಯದು ಐಹಿಕ: ಎರಡನೆಯದು ಪಾರಮಾರ್ಥಿಕ. ಒಂದು ದ್ವೇಷದ ವಿರುದ್ಧ ಕವಚ; ಮತ್ತೊಂದು ಮರೆವಿನ ವಿರುದ್ಧ ಸಂರಕ್ಷಣೆ. ದೈವವನ್ನು ಹಾರೈಸುತ್ತೇವೆ. ಕೆಲ ಸಾರೆ ಇದರ ಸಹಾಯವನ್ನು ಪಡೆಯುವೆವು. ಆದರೆ ಕೀರ್ತಿಯನ್ನು ಗಳಿಸಬೇಕಾಗುವುದು. ಕೀರ್ತಿಯ ಹಂಬಲವು ಮಾನವನ ಉದಾತ್ತ ಗುಣಗಳಲ್ಲಿಯೇ ತಲೆದೋರುವುದು. ಕೀರ್ತಿಯು ಎಂದೂ-ಇಂದು, ಹಿಂದು, ಮುಂದು-ಅಸುರರ ತಂಗಿ. ಅದರ ಕೆಲ ಯಾವಾಗಲೂ ಅತಿರೇಕ ಅಥವಾ ಅಸಾಮಾನ್ಯ. ಅದು ಅಮಾನುಷ ಅಥವಾ ಅತಿಮಾನುಷ. ಲೋಕಸಂಹಾರಕರಾದ ದಾನವರನ್ನು ಇಲ್ಲವೆ ಪ್ರತಿಭಾವಂತರಾದ ಮಹಾನುಭಾವರನ್ನು ನಿರ್ಮಿಸಬಲ್ಲುದು.

ಹಗುರು ಬಾಯಿಯವರು

ಇವರು ತಮಗೂ ಹೆರವರಿಗೂ ಕೂಡಿಯೇ ತಾಪದಾಯಕ. ಎಲ್ಲಿಯೇ ಇರಲಿ. ಯಾವಾಗಲೂ ಬಾಯಿಗೆ ಒಂದು ವಿಷಯವು ಬೇಕು. ಬಾಯಿಮಾಡದೆ, ಹರಿಹಾಯದೆ, ಹೀಯಾಳಿಸದೆ ಇಲ್ಲವೆ ವಿರೋಧಿಸದೆ ಒಂದು ಮಾತನ್ನೂ ಹೋಗಗೊಡರು. ತಾವು ಯಮಧರ್ಮನ ಅವತಾರವೆಂದು ಭಾವಿಸಿಯೊ ಏನೋ, ಈ ಕೋಣರು ಯಾರೂ ಕೇಳುವ ಮೊದಲೆ, ಯಾವುದೊಂದರ ತೀರ್ಪು ಹೇಳಿಬಿಡುವರು. ಯಾರ ಒಳಿತನ್ನೂ ಮಾಡಿ ಅರಿಯದ ಈ ಪ್ರಾಣಿಗಳು ಹೆರವರ ಹುಳುಕುಗಳನ್ನು ಹುಡುಕಿ ಅವುಗಳ ಮೇಲೆ ತಮ್ಮ ಕೆಂಡ ನಾಲಗೆಯಿಂದ ಬರೆಯನ್ನು ಎಳೆಯಲು ಅಣಿಯಾಗುತ್ತಾರೆ. ಇಂತಹರ ನೆರೆಯಲ್ಲಿರುವ ಹೊತ್ತು ಬಂದು ದುರ್ದೈವಿಯ ಸಹನೆಯು ಯಾವಾಗ ಮೇರೆ ಮೀರುವುದೋ ಹೇಳಲಿಕ್ಕಾಗದು. ಇಂತಹವರಿಗೆ ನರಪಶುಗಳೆಂದರೆ ಪಶುಗಳ ಅಪಮಾನ ಮಾಡಿದ ದೋಷಕ್ಕೆ ಪಕ್ಕಾಗಬೇಕಾಗುವುದು.

ನಾಲಗೆಯು ಕುಲವನ್ನು ಅರುಹುವುದು

ಎಲುವಿಲ್ಲದ ನಾಲಗೆ, ಬೇಕಾದತ್ತ ಹೊರಳುವುದು, ಬೇಕಾದಷ್ಟು ಗಳಪುವುದು. ಹಲ್ಲಿನ ಪಂಜರವನ್ನು ಸ್ವಲ್ಪ ಸಡಿಲಿಸಿದರೆ ಆಯ್ತು; ಬೇಕಾದಂತಹರ ಮೇಲೆ ಏರಿಹೋಗುವುದು. ಆಗ ಅದನ್ನು ತಡೆವುದೂ ಅಸಾಧ್ಯ.

ದೇಹದ ಆರೋಗ್ಯವನ್ನು ನಾಡಿಯಿಂದ ತಿಳಿಯಬಹುದು. ಜೀವಾತ್ಮನ ಯೋಗ್ಯತೆಯನ್ನು ನಾಲಗೆಯಿಂದ ಹೇಳಬಹುದು. ನಾಲಗೆಯೆಂಬ ನಾಡಿಯಿಂದ ಹೃದಯಾಂತರಾಳದೊಳಗಿನ ಎಲ್ಲ ಚಲನವಲನಗಳೂ ಗೊತ್ತಾಗುತ್ತವೆ. ಮುನಿಗಳು ಮೌನದಿಂದ ತಮ್ಮ ಬೆಲೆಯನ್ನು ಹೆಚ್ಚಿಸಿಕೊಳ್ಳುತ್ತಾರೆ. ನಾಲಗೆಯ ಮೇಲೆ ಕಣ್ಣಿಟ್ಟೆ. ಆದುದರಿಂದ ಕಣ್ಣಿನ ಕೈಯಲ್ಲಿ ನಾಲಗೆಯಿರಲಿ. ಕಣ್ಣು ಮುಚ್ಚಿ ನಾಲಗೆ ಹರಿಬಿಡುವುದು ಆತ್ಮಘಾತ. ಸಾಮಾನ್ಯವಾಗಿ ಈಗಿರುವ ಎರಡು ಕಣ್ಣುಗಳ ಮೇಲೊಂದು ಹಣೆಗಣ್ಣು (ಒಳಗಣ್ಣು) ಉಂಟು. ಅದುವೆ ತೃತೀಯ ನೇತ್ರ. ನಾಲಗೆಯ ಮೇಲಣ ಒಡೆತನವಿಲ್ಲದವನು ಇದನ್ನು ಪಡೆಯಲಾರನು. (ಮೌನಿ) ಯೋಗಿಯ ಭಾಗ್ಯವಿದು. ಆತನೇ ಮುಕ್ಕಣ್ಣನು; ಜ್ಞಾನಿ.

ಕಲಿಯಲು ಬದುಕು-ಬದುಕಲೂ ಕಲಿ

ಬರಿ ವಿಚಾರವೇ ಬಾಳಿನಲ್ಲಿ ಸಾಲದು; ಆಚಾರವೂ ಬೇಕು ನೆಗಳ್ತೆ (ಕೃತಿ) ಇಲ್ಲದ ಎಣಿಕೆಯು ಅರ್ಧಾಂಗ; ಎರಡೂ ಕೂಡಿದಾಗ ಪೂರ್ಣ. ದೂರಿನ ವಿಚಾರ ನಡೆಸಿದವರಿಗೆ ತಮ್ಮ ಅಡಿಯಲ್ಲಿದ್ದುದನ್ನು ಅರಿತುಕೊಳ್ಳಲು ಬಿಡುವೇ ಇರುವುದಿಲ್ಲ. ತಜ್ಞರಿಗೆ, ಜ್ಞಾನಿಗಳಿಗೆ ವ್ಯವಹಾರಜ್ಞಾನವಿರುವುದಿಲ್ಲವೆಂದು ಸಾಮಾನ್ಯ ಜನಗಳ ಆರೋಪವಿದೆ. ಈ ತೆರನಾಗಿ ಸಾಮಾನ್ಯರಿಂದ ನಗಿಸಿಕೊಳ್ಳದಂತೆ ಬಾಳುವುದು ಬಲ್ಲವರಿಗೆ ಅಸಾಧ್ಯವೇ? ಜ್ಞಾನಕ್ಕಾಗಿ ಇರುವ ಜೀವನವು ಪವಿತ್ರವೆಂಬುದು ನಿಜ; ಆದರೆ ಜೀವನದ ಹದವು ತಿಳಿಯದ ಜ್ಞಾನವೂ ನಿಷ್ಪ್ರಯೋಜಕ.

ಬೇಡುವುದರ ಕೀಲ

ಗೊತ್ತಿಲ್ಲದವರು ಅಡಿಗಡಿಗೆ ನಿರಾಶರಾಗಬೇಕಾಗುವುದು. ಕೆಲರಿಗೆ ಹೆಚ್ಚು ಕೇಳು; ಕೆಲರಿಗೆ ಸುಮ್ಮನೆ ನಿಮಿತ್ತಕ್ಕೆ ಮಾತ್ರ. ಏಕೆಂದರೆ ಮೊದಲನೆಯವರು ಕಡಿಮೆ ಕೊಟ್ಟು ಅರಿಯರು. ಎರಡನೆಯವರು ಕಾಸು ಬಿಚ್ಚಿ ಅರಿಯರು. ಇವರದು ಯಾವಾಗಲೂ ಎಂಜಲದ ಕೈ. 'ಇಲ್ಲ'ವೆಂದು ಹೇಳಿ ಅಭ್ಯಾಸ, ಇವರಿಗೆ. ಇಂತಹರಿಂದ ಸಂಪಾದಿಸುವುದಕ್ಕೆ ತುಂಬ ಚಾತುರ್ಯಬೇಕು, ಇಂತಹರು ಹಿಗ್ಗಿನಲ್ಲಿ ಪ್ರಸನ್ನರಾಗಿರುವ ಕಾಲವು ಆವುದೆಂಬುದನ್ನು ಸರಿಯಾಗಿ ತಿಳಿದಿರು. ಆಗ ಒಡ್ಡಿದ ಕೈ ಬರಿಗೈಯಾಗುವ ಸಂಭವವಿಲ್ಲ. (ಆದರೆ ಈ ಹಂಚಿಕೆಯನ್ನು ಆತನು ಹೊಂಚು ಎಂದು ಎಣಿಸಬಾರದು ಮಾತ್ರ) ಏಕೆಂದರೆ ತ್ಯಾಗವಿಲ್ಲದೆ ಯಾವ ಭೋಗದ ಸೌಖ್ಯವೂ ಅಸಾಧ್ಯ. ಆದುದರಿಂದ ತ್ಯಾಗವೇ ಭೋಗ, ಭೋಗವೇ ತ್ಯಾಗ. ಹಿಗ್ಗಿನಲ್ಲಿ ಅಂತರಂಗದಿಂದ ಹೊರಹೊಮ್ಮುವ ಆನಂದವು ಲೋಕವನ್ನು ಸೃಷ್ಟಿಸುವುದು, ಸಂರಕ್ಷಿಸುವುದು: ಹಿಗ್ಗಿ, ಒಂದು ಹಲವಾಯ್ತು; ಹಲವು ಒಂದಾಯ್ತೆಂಬುದು. ಅನುಭಾವ ಮೊದಲು. ನೀನು ಹೊತ್ತಿನಲ್ಲಿ ಒಂದಿಲ್ಲೊಂದು ಬಗೆಯಿಂದ ಅನುಕೂಲನಾಗು; ನೆರವಾಗು; ಕೈನೀಡು. ಅವನು ಕೀಳನಲ್ಲದಿದ್ದರೆ ನೀನು ಕೇಳಿದಾಗ ಇಲ್ಲವೆನ್ನಲು ಆತನ ನಾಲಗೆ ಏಳದು.

ಕೊಡುಗೆಯ ಬಗೆ

ತಿರುಗಿಬರಲಾರದಷ್ಟು ಎಂದೂ ಕೊಡಬೇಡ. ಏಕೆಂದರೆ ಮಿತಿಗಿಂತ ಹೆಚ್ಚುಕೊಟ್ಟರೆ ಹದಗೆಡುವುದು. ತನ್ನಿಂದ ಇನ್ನು ತೀರಿಸುವುದು ಸಾಧ್ಯವಿಲ್ಲವೆಂದು ಕಂಡೊಡನೆ ಅವನು ಮೋರೆ ತಪ್ಪಿಸುವನು. ಹೆಚ್ಚುಕೊಟ್ಟು ಒಬ್ಬರನ್ನು ಕಳಕೊಳ್ಳುವುದು ಯಾವ ಜಾಣ್ಮೆ? ಕೆಲರಂತೂ ಆಜನ್ಮ ಸಾಲಿಗರೆನಿಸಿಕೊಂಬುದನ್ನು ತಪ್ಪಿಸಿಕೊಳ್ಳಲು ಹಗೆಗಳಾಗಿ ಪರಿಣಮಿಸುವರು! ಹೊಳೆದಾಟಿದ ಮೇಲೆ ಅಂಬಿಗನ ಅವಶ್ಯಕತೆ ಉಳಿಯುವುದಿಲ್ಲ. ಒಬ್ಬರಿಗೆ ಹೊರಲಾರದ ಉಪಕಾರ ಮಾಡಿ ಅವರಿಗೆ ಯಾವಾಗಲೂ ತಮ್ಮೆದುರು ತಲೆತಗ್ಗಿಸಿಕೊಂಡಿರುವ ಪ್ರಸಂಗವನ್ನೇಕೆ ತರಬೇಕು? ನೀಡುವ ನೆರವು, ಕೊಡ-ಕೊಂಬುವವರಿಬ್ಬರಿಗೂ ತೊಂದರೆಯಾಗದಂತಹದು ಆಗಿದ್ದರೆ ಅದರಲ್ಲಿ ಇಬ್ಬರಿಗೂ ಹಿತ; ಆನಂದ.

ಸುದೈವಿಯಾಗುವ ಆಕಾಂಕ್ಷೆ

ಇಲ್ಲದವರಾರು? ಆದರೆ ದೈವವನ್ನು ಒಲಿಸಿಕೊಂಬ ಹದವನ್ನು ತಿಳಿದವರು ಸ್ವಲ್ಪ ಜನ. ಸುದೈವಿಗಳೆಂದು ಹೆಸರಾದವರಲ್ಲಿ ಯಾರ ಕೆಲಸಗಳೇ ಆಗಲಿ, ಫಕ್ಕನೆ ಕೈಗೂಡಿದುದು ಕ್ವಚಿತ್. ಮನ ಮುಟ್ಟಿ ದುಡಿಯುವುದರಿಂದಲೇ ಅವು ಸಾಧ್ಯವಾದವು. ಹಲರು, 'ದೈವದ ಬಾಗಿಲವು ಎಂದು ತೆರೆಯುವುದೋ' ಎಂದು ಹಂಬಲಿಸುತ್ತ ಕಾಲಹರಣ ಮಾಡುವರು. ಇನ್ನು ಕೆಲರು ಒಳ್ಳೆಯ ಕೆಲಸಕ್ಕೆ ಗೆಲುವಾಗಬೇಕೆಂಬ ಶ್ರದ್ಧೆಯಿಂದ ಮುನ್ನುಗುತ್ತಾರೆ. ಮತ್ತು ತಾವು ವಿಚಾರಪೂರ್ವಕವಾಗಿ ತೋರಿದ ಧೈರ್ಯದಿಂದ ಲಾಭ ಪಡೆಯುತ್ತಾರೆ. ಇಂತು ಅವರು ತಮ್ಮ ಆತ್ಮವಿಶ್ವಾಸಾದಿ ಸದ್ಗುಣ ಮತ್ತು ಎದೆಗಾರಿಕೆಯಿಂದ ವಿಜಯಲಕ್ಷ್ಮಿಯನ್ನು ಆರಾಧಿಸಿ, ಅವಳ ಕೃಪೆಗೆ ಪಾತ್ರರಾಗುತ್ತಾರೆ. ಆದರೆ ಇದನ್ನೇ ಆಲಂಕಾರಿಕ ಭಾಷೆಯನ್ನು ಬಿಟ್ಟು ತಾತ್ವಿಕ ರೀತಿಯಿಂದ-ಯಥಾರ್ಥವಾಗಿ ಹೇಳಬೇಕಾದರೆ: ಶೀಲ (ಸದ್ಗುಣ) ಮತ್ತು ಸುದ್ಧವಾದ ಅಂತಃಪ್ರೇರಣೆಗಳ ಹೊರತು, ಹೆಚ್ಚಿನ ಬೇರೆ ಯಾವ ಮಾರ್ಗದರ್ಶಕನೂ ಈ ಲೋಕದಲ್ಲಿ ಇಲ್ಲ. ಜ್ಞಾನವೆಂದರೇ ಸುದೈವ. ಅಜ್ಞಾನವೆಂದರೇ ದುರ್ದೈವ.

ಜ್ಞಾನ ಮತ್ತು ಧೈರ್ಯ

ಇವೇ ದೊಡ್ಡತೆಯ ಹಾಗೂ ಹಿರಿಮೆಯ ಅಡಿಗಲ್ಲು. ಇವೇ ಮಾನವನಿಗೆ ಎಂದೂ ಕೆಳಗೆ ಬೀಳಗೊಡದೆ. ಅಮರತ್ವವನ್ನೂ ಈಯಬಲ್ಲವು. ಪ್ರತಿಯೊಬ್ಬರ ಆಳವು ಅವರ ತಿಳುವಿನಷ್ಟೇ. ಆಳವಿದ್ದವರೆ ಹಿರಿಯಾಳಾಗಬಲ್ಲರು. ಬೆಳಕು ಇಲ್ಲದ ಭೂಲೋಕವೂ, ತಿಳಿವು ಇಲ್ಲದ ಮಾನವನೂ ಒಂದೇ. ಬುದ್ಧಿ ಮತ್ತು ಬಲಗಳೆಂದರೆ ಮಾನವನ ಕಣ್ಣು ಮತ್ತು ಕೈಗಳಿದ್ದಂತೆ. ತಿಳಿವು ಇಲ್ಲದ ಎದೆಗಾರಿಕೆ ಹುಂಬತನ; ಎದೆಗಾರಿಕೆ ಇಲ್ಲದ ತಿಳಿವು ಹೆಳವ.

ಸಮತ್ವಂ ಯೋಗಮುಚ್ಯತೇ

ಯೋಗವೆಂದರೆ ಸಮತ್ವ; ಸುವರ್ಣ-ಮಧ್ಯ; ತೂಕ; ಹದ; ಹಿಡಿತ; ಹವಣ; ಕೀಲ; ರಸಜ್ಞತೆ. ಸ್ವಲ್ಪ ಹೆಚ್ಚಾದರೆ ಏರುಗಾವು. ಕೊಂಚ ಕಡಿಮೆಯಾದರೆ ಇಳಿಗಾವು. ಪಾಕದ ಹವಣು ಬಲ್ಲವನೇ ಬಲ್ಲ. ಅವನೇ ಯೋಗಿ: ರಸಿಕ. ಭೋಗವು ಹೆಚ್ಚಾದರೆ ರೋಗಕ್ಕೆ ಔತಣ; ಕಡಿಮೆಯಾದರೆ ಆಭಾಸದ ಅಸಮಾಧಾನ. ಸಂಗೀತದ ಸೂಕ್ಷ್ಮ ಆಲಾಪನೆಗಳು ಕೊನೆಗೆ ಕಿವಿಗೆ ನಿಲುಕದೆ ಹೋಗುವುವು. ತಿಳಿವು ಆಳವಾದಂತೆ ಅದರ ನೆಲೆ ಗೊತ್ತಾಗುವುದೂ ಕಷ್ಟ. ಅವನ್ನು, ಕರೆವ ಬದಲು ಹಿಂಡಿದರೆ, ಹೊರಡುವುದು ಹಾಲಲ್ಲ; ನೆತ್ತರ. ದೈವ ಮತ್ತು ಪೌರುಷಗಳ ಸಮನ್ವಯವೇ ಯೋಗ.

ದೀರ್ಘಾಯುಷ್ಯದ ಗುಟ್ಟು

ಹಸಿಯದೆ ಉಣಬೇಡ: ಹಸಿದು ಉಣದಿರಬೇಡ, ಎಂಬುದು ನಿಜವಾದರೂ, ಅಲ್ಪಾಯುಷ್ಯಕ್ಕೆ ಬೇರೆ ಎರಡು ಮುಖ್ಯ ಕಾರಣಗಳಿವೆ. ಒಂದು ಅಜ್ಞಾನ, ಇನ್ನೊಂದು ಅನೀತಿ. ಬದುಕುವ ಬಗೆ ಗೊತ್ತಿಲ್ಲದ ತಿಳಿಗೇಡಿಗಳು ಹಲರು: ಬಾಯಿಕಟ್ಟಿ, ಕೈ ಬಿಗಿದು ಹೆಚ್ಚು ದಿನ ಬಾಳುವುದರಲ್ಲೇನು ಸೊಗಸು? - ಎಂಬ ದುಂದುಗಾರರು ಕೆಲರು. ಸದಾಚಾರಕ್ಕೆ ಸುಖವು ನಿಶ್ಚಿತವಿದ್ದಂತೆ, ದುರಾಚಾರಕ್ಕೆ ದುಃಖವೂ ಕಟ್ಟಿಟ್ಟದ್ದೇ. ಸಂಯಮದ ಚುಕ್ಕಾಣಿಯನ್ನು ಬಿಸುಟಿ, ಪ್ರಪಂಚದಲ್ಲಿ ಪ್ರವಾಹಪತಿತರಾಗಿ ಹೊರಟಿರುವವರು ಮುಳುಗುವುದರಲ್ಲಿ ಏನು ಸಂದೇಹ? ಸಜ್ಜನಿಕೆಗೆ ಸಾವು ಇಲ್ಲ. ಒಳ್ಳಿಡೆಯ ಮೂಲಕವಾಗಿ ಆತ್ಮದ ಅಮರತ್ವದ ಅಂಶವು ದೇಹಕ್ಕೂ ದೊರೆಯುವುದು. ಸುಚರಿತರ ಆಶೆ-ಆಕಾಂಕ್ಷೆಗಳು, ಅವರ ಕೃತಿಗಳು ಮಾತ್ರವಲ್ಲ, ಅವರ ಜೀವಮಾನವೂ ದೀರ್ಘಕಾಲದ ವರೆಗೆ ತಾಳಿ ಬಾಳುವುದು.

ಪಾಡನ್ನು ಅರಿ, ಹಣ್ಣನ್ನು ಉಣ್ಣು

ಬಿತ್ತು, ಮೊಳೆ, ಚಿಗುರು, ಹೂ, ಮಿಡಿ, ಹೀಚು, ಕಾಯಿ, ಪಾಡು (ದೋರೆಗಾಯಿ), ಹಣ್ಣು ಇದು ಬೆಳವಣಿಗೆಯ ಕ್ರಮ, ಸೃಷ್ಟಿಯ ರೀತಿ. ಹಣ್ಣಾದ ಬಳಿಕ ಕಳಿಯುವುದು, ಇಳಿಯುವುದು, ಕೊನೆಗೆ ಕೊಳೆಯುವುದು.

ತಿದ್ದುಪಡಿಗೆ ಎಡೆಯೆ ಇಲ್ಲವೆನ್ನುವಂತಹ ಕಲಾಕೃತಿಗಳೇ ಅಪರೂಪ ಎಲ್ಲವನ್ನೂ ಪರಿಪೂರ್ಣ-ಪಕ್ವಸ್ಥಿತಿಯಲ್ಲಿ ಆಸ್ವಾದಿಸಲು ದೊರೆಯುವುದು ರಸಿಕನ ಭಾಗ್ಯ. ಇದು ಎಲ್ಲರಿಗೂ ಸಾಧ್ಯವಲ್ಲ. ಏಕೆಂದರೆ ಕೆಲವರಿಗೆ ಕಾಡಾದುದು ಅಥವಾ ಹಣ್ಣಾದುದೇ ತಿಳಿಯುವುದಿಲ್ಲ; ತಿಳಿದವರು ತಿನ್ನಲು ಸಮರ್ಥರಾಗುವುದಿಲ್ಲ! ಬುದ್ಧಿಯೂ ಇದರಂತೆ ಕಾತು (ಕಾಯಾಗಿ), ಹಣ್ಣುವ ಕಾಲವು ಒಂದುಂಟು. ಇದನ್ನು ಅರಿತುಕೊಂಡರೆ ಅದರ ತನಿವಣ್ಣನ್ನು ತಾನು ಸವಿಯಬಹುದು. ವಿನಿಮಯದಲ್ಲಿ ಅದರ ಸರಿಯಾದ ಬೆಲೆಯನ್ನು ಪಡೆಯಬಹುದು.

ಜಯ ಜಯಕಾರವನ್ನು ಕೊನೆಗೆ ಹಾರೈಸು

ಮೊದಲೇ ಸುಖವನ್ನು ಹಾರೈಸಿದರೆ ಕೊನೆಗೆ ದುಃಖವು ತಪ್ಪಿದ್ದಲ್ಲ. ಮೊದಲು ಕಷ್ಟಪಟ್ಟು ಹೋರಾಡಿದರ ಕೊನೆಗೆ ವಿಜಯಶ್ರೀಯು ವರಿಸುವಳು. ಆದುದರಿಂದ, ಆರಂಭದ ಜಯಜಯಕಾರಕ್ಕಿಂತಲೂ ಕೈಕೊಂಡ ಕೆಲಸವು ಹೇಗೆ ಸೊಗಸಾಗಿ ಕೊನೆಗೊಂಡೀತೆಂಬ ಚಿಂತೆಯು ಮುಖ್ಯವಾಗಿರಲಿ. ವೈಭವದಿಂದ ಆರಂಭಿಸಿ, ವಿಪರೀತವಾಗಿ ಮುಗಿಸುವ ದುರ್ದೈವವು ಕೆಲರ ಪಾಲಿಗೆ ಬರುತ್ತದೆ. ಮೊದಮೊದಲು ಸೈ ಯೆನ್ನಲು ಎಲ್ಲರೂ ಸಿದ್ಧರೇ. ಆದರೆ ಇದರಲ್ಲಿ ಮೈ ಮರೆತರೆ ಕೊನೆಯು ಹದಗೆಡುವುದು. ಕೈಯಿಕ್ಕಿದೊಡನೆಯೆ ಭಾಪು ಎಂದು ಹೊಗಳಲು ತಕ್ಕವರು ತೀರ ವಿರಳಿ. ಅಡಿಯಿಟ್ಟೊಡನೆ ಜಯ ಲಕ್ಷ್ಮಿಯಿಂದ ಮಾಲೆ ಹಾಕಿಸಿಕೊಳ್ಳುವ ಭಾಗ್ಯವು ಎಷ್ಟು ಜನಕ್ಕೆ? ಬಂದೊಡನೆ, ಇವಳಿಂದ ತುಂಬ ಉಪಚಾರ, ಸುಖಃಸ್ವಾಗತವನ್ನು ಪಡೆದ ಅತಿಥಿಯು ಕೊನೆಗೆ ಅನಾದರವನ್ನು ಹೊಂದಿ ಒರಗು ಮೋರೆಯಿಂದ ಹೊರಬೀಳುವ ಸಂಭವವುಂಟು.

ನಿನ್ನದೇ ಕತೆ ಬೇಡ

ಹೊಗಳಿಕೊಂಡರೆ ಹೆಮ್ಮೆಯುವನೆನಿಸುವೆ; ತೆಗಳಿಕೊಂಡರೆ ಕಿರುಕುಳನಾಗುವೆ; ಕೇಳುವವರಿಗೆ ಅಸಹ್ಯವೆನಿಸುವಂತೆ ಆಡುವುದು ಕಿಳ್ಮೆಯ ಲಕ್ಷಣ. ಮನೆಮಾತಿನಲ್ಲಿಯೇ ಹೀಗೆ ಬಿಗಿಹಿಡಿಯುವುದು ಅವಶ್ಯವೆಂದ ಬಳಿಕ, ಕಚೇರಿಕಟ್ಟೆಗಳಲ್ಲಿ, ವ್ಯಾಸಪೀಠದಿಂದ ಉಪನ್ಯಾಸ ಮಕಾಡುವಾಗಂತೂ ಇನ್ನೂ ಹೆಚ್ಚು ಸಂಯಮವು ಅವಶ್ಯ. ಒಬ್ಬರು ಎದುರಿಗೆ ಇರುವಾಗ, ಮಾತಿನ ಹಿಡಿತವಿಲ್ಲದವರು ಮುಕ್ತಕಂಠದಿಂದ ಸ್ತುತಿ, ಇಲ್ಲವೆ ಬಾಯ್ಗೆ ಬಂದಂತೆ ನಿಂದೆ ಮಾಡುವರು. ಆದರೆ ಇವೆರಡೂ ಅತಿವಾದ.

ನಡೆನುಡಿಯಲ್ಲಿ ನಯವಿರಲಿ

ನಯವೆ ನಿಮ್ಮನ್ನು ಮುಂದಕ್ಕೆ ಒಯ್ಯುವುದು ನಾಲ್ವರ ಪ್ರೀತಿಗೆ ಪಾತ್ರರನ್ನಾಗಿ ಮಾಡುವುದು. ನಯವಿಲ್ಲದವರು ಸುಸಂಸ್ಕೃತರೇ ಅಲ್ಲ. ಹಲವರ ಒಲವನ್ನು ಗಳಿಸುವ ಮಂತ್ರ ಶಕ್ತಿಯು ನಯದಲ್ಲಿದೆ. ಉರುಟು ತನವು ಹಗೆಗಳನ್ನು ಹುಟ್ಟಿಸುವುದು. ಅಜ್ಞಾನದ ಉರುಟುತನವು ತಿರಸ್ಕಾರಕ್ಕೆ ಕಾರಣವಾಗುವುದು; ಹೆಮ್ಮೆಯಿಂದ ಹುಟ್ಟಿದುದು ಹೊಟ್ಟೆಯಲ್ಲಿ ಕಿಚ್ಚನ್ನು ಹೆಚ್ಚಿಸುವುದು. ಸುಸಂಸ್ಕಾರವಿಹೀನತೆಯಿಂದ ತಲೆ ದೋರಿದುದು ಕುಲಗೇಡಿ ಎಂಬ ಹೆಸರು ತರುವುದು. ಮೊದ್ದುತನ ಅಥವಾ ಉದ್ಧಟತನಕ್ಕಿಂತ, ನಯ-ವಿನಯಗಳು ಎಷ್ಟಿದ್ದರೂ ಕೇಡಲ್ಲ. ನಯದಲ್ಲಿಯೂ ವೈವಿಧ್ಯವಿರಲಿ; ನಾವೀನ್ಯವಿರಲಿ ಎಲ್ಲೆಲ್ಲಿಯೂ ಯಾವಾಗಲೂ ಒಂದೇ ತೆರನಾದ ನಯವಿದ್ದರೆ ಅದರ ಸೊಗಸು ಕಡಿಮೆಯಾಗುವುದು; ಅದರಿಂದ ತಾರತಮ್ಯವಿಹೀನತೆಯ ಆರೋಪವು ಬರುವುದು. ಎದುರಾಳಿಯೊಡನೆ ನಯದಿಂದ ಇದ್ದರೆ ಅದು ನಿಮ್ಮ ಔದಾರ್ಯಕ್ಕೆ ಸಾಕ್ಷಿ. ನಯದಿಂದ ಹಾನಿ ಕಡಿಮೆ; ಲಾಭವೇ ಹೆಚ್ಚು. ಮಾನ ಕೊಡುವವರೇ ಮಾನ ಪಡೆಯುವುದು. ನಯ-ವಿನಯ; ಮಾನ-ಮರ್ಯಾದೆಗಳನ್ನು ಬಳಿಸದಷ್ಟು ಅವು ನಿಮ್ಮಲ್ಲಿ ಉಳಿಯುವುವು.

ತಿಳಿಗೇಡಿತನ. ಲಕ್ಷಿಸಿದರೆ ಲಕ್ಷವಾಗಬಹುದಾದುದು. ದುರ್ಲಕ್ಷಿಸಿದರೆ ಶೂನ್ಯವಾಗುವುದು. ತಲೆಕೆಡಿಸಿಕೊಂಡರೆ ಶೂನ್ಯವಿದ್ದುದೇ ಭೂತವಾಗಿ ಕಾಣುವುದು. ಮೊದಲು ಸುಲಭವಾಗಿ ಬಿಡಿಸಬಹುದಾದ ಸರಗಂಟು, ಎಳೆದಾಡಿದರೆ ಕಗ್ಗಂಟಾಗುವುದು. ಹಲವು ಬಾರಿ ಬೇನೆಗೆ ಮಾಡಿದ ಉಪಾಯವೇ ಅಪಾಯವಾಗಿ ಪರಿಣಮಿಸುವುದು. ಆದುದರಿಂದ ಇಲ್ಲದುದನ್ನು ಹುಟ್ಟಿಸಿ ತಲೆಯಲ್ಲಿ ಹಾಕಿಕೊಂಡು ಕಂಗೆಡಬೇಡ.

ಪ್ರಕೃತಿ ಮತ್ತು ಸಂಸ್ಕೃತಿ

ಒಂದು ವಾಸ್ತವ. ಇನ್ನೊಂದು ಆದರ್ಶ. ಅಲಂಕೃತವಾಗದೆ ಸೌಂದರ್ಯವಿಲ್ಲ, ಅಲಂಕರಣಕ್ಕೆ ಕೈ-ಗೈ ಎಂದು ಹೇಳಿದುದು ಉಚಿತವಾಗಿದೆ. ಕಲಾವಿದನ ಕೈಆಡದೆ ಯಾವ ಚೆಲುವೂ ಚಿತ್ತಾಕರ್ಷಕವಾಗದು. ಕುಂದಣಗಾರನ ಕೈ ಸೋಂಕಿದ ಹರಳೇ ಅಮೌಲಿಕ ರತ್ನವೆನಿಸುವುದು. ಕೈಗೈದರೆ ಕುಂದು ದೂರವಾಗಿ ಕಳೆಯು ಹೆಚ್ಚುವುದು. ಕಳೆಯನ್ನು ಬೆಳಗುವುದೆ ಕಲೆ; ಸಂಸ್ಕೃತಿ ಸಂಸ್ಕಾರದಿಂದ 'ಉಳ್ಳುದು' ಒಳ್ಳಿತಾಗುವುದು ಆದುದರಿಂದ 'ಉಳ್ಳ' ಎಂದರೆ ಪ್ರಕೃತಿ; 'ಒಳ್ಳ' ಎಂದರೆ ಸಂಸ್ಕೃತಿ, ಅಥವಾ ಕಲೆ. ಸಂಸ್ಕರಣವಿಲ್ಲದೆ ಉಳ್ಳ, ಒಳ್ಳವಾಗಲಾರದು. ಮೂಲತಃ ಪ್ರಕೃತಿಯು ಎಷ್ಟೇ ಚೆನ್ನಾಗಿದ್ದರೂ ಸಾಧನೆಯಿಂದ, ಸಂಸ್ಕಾರದಿಂದ ಅದನ್ನು ಮೇಲುಮಟ್ಟಕ್ಕೆ ಒಯ್ಯದಿದ್ದರೆ ಅದಕ್ಕೆ ಬೆಲೆಬಾರದು. ಅದು ಕಾಡು, ಕಗ್ಗ, ಗಾಂಪ, ಎಗ್ಗ ಎನಿಸುವುದು. ಗಿಡದ ಮೇಲಣ ಪಾಡು (ದೋರೆ) ಮಾವು ಅಡಿಗೆ ಹಾಕಿದಾಗಲೇ ಅದರ ಸವಿಯು ಇಮ್ಮಡಿಸುವುದು. ಅದು ಇಮ್ಮಾವು (ಇನಿದು-ಮಾವು) ಆಗುವುದು. ಇದುವೆ ದ್ವಿಜತ್ವ.

ಸತ್ವ ಮತ್ತು ಸಿಪ್ಪೆ

ಹೊರಮಿಂಚಿನಿಂದ ಹುರುಳಿನ ಬೆಲೆ ಕಟ್ಟಬೇಡ. ಏಕೆಂದರೆ ಎಲ್ಲವೂ ತೋರುವಂತೆಯೆ ಇರುವುದಿಲ್ಲ. ಬಣ್ಣಕ್ಕೆ ಮನಸೋಲುವವರೆ ಹೆಚ್ಚು. ಒಳನೋಟದವರು ಸಾವಿರಕ್ಕೊಬ್ಬರು. ಸುಳ್ಳು, ಸತ್ಯದ ಸೋಗಿನಲ್ಲಿದ್ದಾಗ ಮತ್ತು ಲೋಕಕ್ಕೆ ತಾಪದಾಯಕವಾದಾಗ ಪ್ರತಿಭಟಿಸು. ಬಾಯಿಂದ ಬರಿ ಸತ್ಯಪಕ್ಷಪಾತಿಯಾದರೆ ಸಾಲದು.

ನಿನ್ನಲ್ಲಿ ನೀನು ನಂಬು

ಆದರೆ, ನೀನೇ ಒಬ್ಬನೆಂದು ಹೆಮ್ಮೆ ಬೇಡ. ಹಲವರಿಗೆ ಕಿವಿಗೊಡು. ಆದರೆ, ಅವರು ಹೇಳಿದಂತೆಯೇ ನಡೆವ ಗಡಿಬಿಡಿ ಬೇಡ. ನಿನಗೆ ನಿನ್ನ ಅಂತಃಪ್ರೇರಣೆಯೇ ಗುರುವಾಗಿರಲಿ. ಕೀಳು ಎನಿಸಿದುದನ್ನು ಹೆರವರ ಹೆದರಿಕೆಯಿಂದ ಬಿಡುವುದಕ್ಕಿಂತ, ಅದು ನಿನ್ನ ಮಾನಕ್ಕೆ ಕುಂದು ತರುವಂತಹದೆಂದು ನೀನಾಗಿಯೇ ದೂರವಿರು. ಜನದ ಅಥವಾ ನರಕದ ಭೀತಿಯಿಂದ ಒಳ್ಳಿದನಾದವನು ಹೇಡಿ. ಆತ್ಮವಿಶ್ವಾಸದಿಂದ ಆನಂದಕ್ಕಾಗಿ ಸನ್ಮಾರ್ಗದಲ್ಲಿರುವವನೇ ಧೀರನು.

ತಿಳಿವು ಹೆಚ್ಚಿನದು

ಪ್ರತಿಯೊಂದರಲ್ಲೂ ಬೇಕಾದಂತಹ ವಿಮರ್ಶನಾಶಕ್ತಿಯಿರಲಿ, ವಾದ ಪಟುತ್ವವಿರಲಿ. ಬುದ್ಧಿವಂತಿಕೆಯಿರಲಿ, ತಿಳಿವು ಬಾರದು. 'ತಿಳಿ'ಯದೆ ಇದ್ದಾಗ ಎಲ್ಲವೂ ಕಲಿಕೆ: ಎಂದರೆ ತಲೆ ಹಾಕಿದ್ದು, ತಲೆಯಲ್ಲಿ ತುಂಬಿಕೊಂಡಿದ್ದು ಅರೆದಾಟ ಮೀರಿ ಅನುಭವದ ಮಟ್ಟಕ್ಕೆ ಬಂದಾಗಲೇ ತಿಳಿವು. ತಿಳಿನೀರು ಲೋಕಕ್ಕೆ ಆರೋಗ್ಯಕರ, ಹಿತಕರ. ಬಲ್ಲಿದನಿಗಿಂತ ತಿಳಿದವನು ಮಿಗಿಲಾದವನು. 'ತಿಳಿ'ದವನೆಂದು ಹೆಸರು ಪಡೆಯುವುದೇ ಕೀರ್ತಿಯ ಪರಮೋಚ್ಚ ಬಿಂದುವು. ಓರ್ವ ತಿಳಿದವನಿಂದ ಭಾಪು ಎನಿಸಿಕೊಂಡರೆ ಜೀವನವು ಸಾರ್ಥಕವೆಂದು ತಿಳಿ.

ಹುಂ ಮತ್ತು ಉಹುಂ

ಹುಂ ಎನ್ನುವಷ್ಟೆ ಉಹುಂ ಎಂಬುದೂ ಬಿಗಿಯಾಗಿದೆ. ಆದುದರಿಂದ ಹುಂ ಗೆ ಎಷ್ಟು ವಿಚಾರವು ಆವಶ್ಯಕವೊ ಅಷ್ಟೇ ಉಹುಂಗೂ ಬೇಕು. ಪದವಿಯು ಉಚ್ಚವಾಗಿರುವಂತೆ ಇನ್ನೂ ಹೆಚ್ಚು ಹೆಚ್ಚು ಎಚ್ಚರಪಡಬೇಕು. ಉಹುಂ ಎನ್ನುವ ಬಗೆಯ ಮೇಲೆ ನಮ್ಮ ಬೆಲೆ ಗೊತ್ತಾಗುತ್ತಿರುತ್ತದೆ. ಹಲವರ ಹುಂವಿಗಿಂತ ಕೆಲವರ ಉಹುಂ ಹೆಚ್ಚು ವಿಚಾರಣೀಯವಾಗುತ್ತದೆ. ಒರಟು ಹುಂಕಾರಕ್ಕಿಂತ ಜೇನ್ನಾಲಗೆಯವರ ಉಹುಂ ಹೆಚ್ಚು ಸಮಾಧಾನ ಕರವೆನಿಸುವುದು. ಕೆಲರ ನಾಲಗೆಯ ಮೇಲೆ ಯಾವಾಗಲೂ ಉಹುಂ ಎಂಬುದೇ ಕುಣಿಯುತ್ತದೆ; ಇದರಿಂದ ಇವರು ಆಡುವುದೆಲ್ಲವೂ ಅರುಚಿಕರವಾಗುವುದು. ಮಾತಿಗೆ ಮೊದಲಲ್ಲಿ 'ಇಲ್ಲ' ಎಂದೇ ಆರಂಭಿಸುವುದು ಇವರ ರೀತಿ; ಮುಂದೆ 'ಸರಿ'. 'ಆಗಲಿ' ಎಂದರೂ, ಮೊದಲಿನ ಅಲ್ಲ ಅಥವಾ ಇಲ್ಲವು ಕೊನೆಯ ಸರಿ ಅಥವಾ

ಆಗಲಿಯ ಒಪ್ಪವನ್ನು ಹದಗೆಡಿಸಿಬಿಡುವುದು. ಮಾತಿಗೆ ಮೊದಲು ಹುಂದ ಒಪ್ಪಗೊಟ್ಟು ಕೊನೆಗೆ ಉಹುಂ ತರುವುದೂ ನಂಬಿಗೆಗೇಡಿಯಾಗುವುದಕ್ಕೆ ಸಂಚಕಾರ. ಸಯುಕ್ತಿಕವಾದ ಉಹುಂವು ಸಕಾರಣವಾಗಿದ್ದರೆ (ಮೊದಲು ಮೊದಲು ಸ್ವಲ್ಪ ಅಸಮಾಧಾನಕ್ಕೆ ಕಾರಣವಾದರೂ) ಒಬ್ಬರೊಬ್ಬರೊಳಗಿನ ವಿಶ್ವಾಸವನ್ನು ಸಂಪೂರ್ಣವಾಗಿ ನಾಶಮಾಡದು. ಹುಂ ಅಥವಾ ಉಹುಂ ಎನ್ನುವುದು ಹಗುರು ಆದರೆ ಅದರಿಂದ ಬರುವ ಹೊಣೆಗಾರಿಕೆಯನ್ನೂ, ಆಗುವ ಪರಿಣಾಮಗಳನ್ನೂ ನೆನೆದುಕೊಂಡೇ ಅದನ್ನು ಉಸಿರತಕ್ಕದ್ದು.

ಏಳಿಗೆಯಲ್ಲಿ ಇಳಿಗಾಲದ ಸಿದ್ಧತೆ ಇರಲಿ

ಬೇಸಗೆಯಲ್ಲಿ ಚಳಿಗಾಲಕ್ಕಾಗಿ ಅಣಿಮಾಡುವುದು ಸುಲಭ ಮತ್ತು ಅದೇ ಜಾಣತನ. ಏಳ್ಗೆಯಲ್ಲಿ ಎಲ್ಲರೂ ನಮಗೆ ನೆರವಾಗುವವರೇ. ಆಗ ಗೆಳೆಯರೂ ಸಾಕಷ್ಟು ಮಂದಿ. ಈ ಗೆಳೆಯರನ್ನು ಮುಂದೆ ಬರಬಹುದಾದ ದುರ್ದೈವದ ಆ ದಿನಗಳ ಸಲುವಾಗಿ ಕಾಯುವುದು ಒಳಿತು. ಏಕೆಂದರೆ, ಇಳಿಗೆಯಲ್ಲಿ ಎಲ್ಲವೂ ದೂರವಾಗುವುದು ಮತ್ತು ನೆರವಿಗೆ ಯಾರೂ ಬರುವುದಿಲ್ಲ. ಗೆಳೆತನದಿಂದಿರುವ ಮತ್ತು ನಿನ್ನ ಋಣದಲ್ಲಿರುವ ಜನರ ಗುಂಪನ್ನೊಂದು ಇಟ್ಟುಕೋ. ಇವರ ಬೆಲೆಯು ಬಹಳೇ ಏರುವ ದಿನವು ಬರಬಹುದು, ಕೀಳರು ಸುದೈವದ ಕಾಲದಲ್ಲಿ ಗೆಳೆಯರನ್ನು ಎಣಿಸುವುದಿಲ್ಲ. ದುರ್ದೈವದ ದಿನಗಳು ಬಂದಾಗ ಗೆಳೆಯರು ಇವರನ್ನು ಲೆಕ್ಕಿಸುವುದಿಲ್ಲ.

ನಯವಿರಲಿ; ಸವಿಯಿರಲಿ

ಸತ್ಯವಿದ್ದರೆ ಎಲ್ಲ ಆಗಲಿಲ್ಲ; ಅದನ್ನು ನಯವಾಗಿಸು, ಸವಿಯಾಗಿಸು. ಕೇವಲ ಪಥ್ಯ ಅರುಚಿಕರ. ಸಪ್ಪೆ, ಔಷಧಿಯಾದರೂ ಕಹಿಯಾಗಿದ್ದರೆ ವಾಂತಿಯಾಗುವುದು: ಅದರಿಂದ ಅದು ನಿರರ್ಥಕವಾಗುವುದು. ಸತ್ಯವು ಗಂಟಲಲ್ಲಿ ಇಳಿಯಲು ಅದು ಸವಿಯಾಗಿರಲಿ. ನಗ್ನ ಸತ್ಯ ಯಾರಗೂ ಸೇರದು. ಅದನ್ನು ಉಡಿಗೆ ತೊಡಿಗೆಗಳಿಂದ ಅಂದಗೊಳಿಸು. ಆಕರ್ಷಕ ಮಾಡು. ಹೃದಯವನ್ನು ಗೆಲ್ಲಲು ನಯದಷ್ಟು ಉತ್ತಮ ಸಾಧನವು ಬೇರೊಂದಿಲ್ಲ. ನಯದ ನಡೆ, ನಯದ ನುಡಿಯು ಬಾಳಿನಲ್ಲಿ ಸವಿಯನ್ನು ಹೆಚ್ಚಿಸುವವು. ಸಂಕಷ್ಟದೊಳಗಿಂದ ಹೊರಬರಲು ನೆರವಾಗುವುವು.

ಪ್ರದರ್ಶನದ ಆತುರವೇಕೆ?

ನೆರೆಯವರಂತೆ ನೀನು ಇರು. ಪ್ರತಿಯೊಬ್ಬರ ಎದುರೂ ನಿನ್ನ ಶಕ್ತಿ ಪ್ರದರ್ಶನದ ಅವಸರವೇಕೆ? ಎಲ್ಲರ ಎದುರೂ ಆವಶ್ಯಕತೆಗಿಂತ ಹೆಚ್ಚು ತೋರಿಸಿಕೊಳ್ಳಬೇಡ. ಬೇಟೆಗಾರನು ಹಕ್ಕಿಗಳನ್ನು ಹಿಡಿಯುವುದಕ್ಕಾಗಿ ಆವಶ್ಯಕತೆಗಿಂತ ಹೆಚ್ಚು ಗಿಡುಗಗಳನ್ನು ಎಂದೂ ಬಿಡುವುದಿಲ್ಲ. ಇಂದೇ ಎಲ್ಲವನ್ನು ತೀರಿಸಿಬಿಟ್ಟರೆ ನಾಳೆಗೆ ಬಂಡವಾಳವೇನೂ ಉಳಿಯಲಿಕ್ಕಿಲ್ಲ. ನಾಳೆಗೆ ಹೊಸದೇನೂ ನಿಮ್ಮಲ್ಲಿ ಇಲ್ಲವೆಂದು ತಿಳಿದರೆ ಲೋಕವು ನಿಮ್ಮ ಕಡೆಗೆ ಬೆನ್ನು ತಿರುವುವುದು, ನಿಮ್ಮ ಬೆಲೆ ಕಡಿಮೆಯಾಗುವುದು.

ನಿನ್ನ ನಡತೆಯು ಉತ್ತಮವೂ ಉದಾತ್ತವೂ ಆಗಿರಲಿ

ಹಿರಿಮೆಯುಳ್ಳವರು ಕಿರುಕುಳರಂತೆ ನಡೆಯಕೂಡದು. ಹೆರವರ ನಡೆನುಡಿಗಳಲ್ಲಿ ನಿರುಕಿಸಿ ನೋಡಕೂಡದು. ಅಪ್ರಿಯ ಸಂಗತಿಗಳಲ್ಲಿ ಈ ಮಾತು ಇನ್ನೂ ಸತ್ಯ. ಎಲ್ಲವನ್ನೂ ಬಲ್ಲವನಾದ ತಿಳಿದುಕೊಳ್ಳುವುದು ಅನಾವಶ್ಯಕ. ಇಂಥ ಸಂದರ್ಭಗಳಲ್ಲಿ, ಸಜ್ಜನರ ನಡೆ ಇರಲಿ; ವೀರನ ಔದಾರ್ಯವಿರಲಿ. ನಿನ್ನ ಗುಟ್ಟು ಆಪ್ತರಿಗೂ, ಇಷ್ಟರಿಗೂ ತಿಳಿಯದಿರಲಿ. ಹಗೆಗಳಿಗಂತೂ ಎಂದು ಗೊತ್ತಾಗಕೂಡದು. ಬಳಕೆಗೆ ಬೇಕಾದುದಕ್ಕಿಂತ ಹೆಚ್ಚಿನದೆಲ್ಲವೂ ಭಾರವಾದದ್ದೇ; ತಾಪದಾಯಕವಾದುದೇ. ತಾಪದಾಯಕವಾದುದರ ಸೂತ್ತಲೂ ಸುಳಿದಾಡುವುದು ಒಂದು ತರದ ಮರಳುತನವೇ ಸರಿ. ಸಾಮಾನ್ಯವಾಗಿ ಪ್ರತಿಯೊಬ್ಬನು ತನ್ನ ಹೃದಯವು ಹೇಳಿದಂತೆ, ತಲೆಗೆ ತಿಳಿದಂತೆ, ಆಚರಿಸುತ್ತಾನೆ.

ಮುಂಗಂಡು ನಡೆ

ಕೆಲರು ಮೊದಲು ಮಾಡಿ, ಬಳಿಕ ಮಿಡುಕುವರು. ವಿಚಾರದಲ್ಲಿ ಬೀಳುವರು. ಹಲರಿಗೆ ಮೊದಲಾಗಲಿ, ಕೊನೆಗಾಗಲಿ ವಿಚಾರದಲ್ಲಿದ್ದು ಅಥವಾ ವಿಚಾರದಲ್ಲಿ ಬಿದ್ದು ಗೊತ್ತೇ ಇಲ್ಲ. ದಿನಗಳೊಡನೆ ಉರುಳುತ್ತ ಹೋಗುವುದೊಂದೇ ಅವರ ಕೆಲಸ! ಇಡೀ ಆಯುಷ್ಯವು ಸುಸಂಬದ್ಧವಾಗಿದ್ದು ಸನ್ಮಾರ್ಗದಿಂದ ದೂರಹೋಗದಂತೆ ಎಚ್ಚರಿರಬೇಕು. ತ್ಯಾಗ ಮತ್ತು ದೂರದೃಷ್ಟಿಯು ನಾವು ಹಿಡಿಯತಕ್ಕ ಹಾದಿಯನ್ನು ನಿರ್ಧರಿಸಲು ನೆರವಾಗುತ್ತವೆ. ಇಂದಿನಲ್ಲಿ ತೊಡಗಿರುವಾಗ ನಾಳೆಯನ್ನು ಮರೆಯಲಾಗದು. ಮುಂಬರಲಿರುವಕುತ್ತ ಕಷ್ಟಗಳ ಸೂಚನೆಯು ಕೆಲಮಟ್ಟಿಗೆ ಮೊದಲೆ ಸಿಕ್ಕುವುದು. ಆದರೆ ಅದನ್ನು ಅರಿತುಕೊಂಬ ತಿಳಿನೋಟ ಬೇಕು. ಇದೇ ದೂರದ ದೃಷ್ಟಿ. ಗಡ್ಡಕ್ಕೆ ಬೆಂಕಿ ಬರುವ ವರೆಗೆ ಸುಮ್ಮನಿರಕೂಡದು. ಜಾಗ್ರತ ವಿಚಾರಿಗೆ ಯಾವ ಕುತ್ತವೂ ಪಾರಾಗಲು ಅಸಾಧ್ಯವಲ್ಲ. ಸಂಕಟ ಬಂದಮೇಲೆ ಜಾಗರವಾಗುವುದಕ್ಕಿಂತ, ಬರುವ ಮೊದಲೆ ಎಚ್ಚರ ಪಡಬೇಕು.

ಕೇಳಿ ಕಾಡುವುದಾಗಲಿ, ಕಾಡಿ ಕೇಳುವುದಾಗಲಿ ಮರ್ಯಾದೆಗೆ ಕುಂದು

ಎಷ್ಟೋ ಅಷ್ಟೇ ಒಳಿತು. ಹವಣು ಹಿತಕರ. ಬಾಯಿಬಿಟ್ಟು ಕೇಳದ ಹೆಮ್ಮೆಯವನೆಂದೆನಿಸಬೇಡ ಅಥವಾ ಹಂಬಲಿಸಿ ಹಲುಬಿ ಬೇಡುವ ದೈನ್ಯವನ್ನೂ ಸ್ವೀಕರಿಸಬೇಡ. ನಿನಗೆ ಆದರವು ಬೇಕಿದ್ದರೆ, ಇನ್ನೊಬ್ಬರ ವಿಷಯಕ್ಕೆ ನಿನ್ನಲ್ಲೂ ಆದರವಿರಲಿ. ಅತಿ ಪರಿಚಯವು ಅನಾದರಕ್ಕೆ ಕಾರಣ, ತೀರ ಹತ್ತಿರದಿಂದ ನೋಡುವ ಚಿತ್ರವು ಹುಳುಕು, ಚಿತ್ರದ ಚೆಲುವು ತಕ್ಕ ಅಂತರದಿಂದಲೇ ಎದ್ದು ಕಾಣುವುದು. ತಕ್ಕವರೆಂದೆನಿಸಿಕೊಳ್ಳುವ ಹಾರೈಸುವವರು ಯಾವಾಗಲೂ ತಕ್ಕ ಅಂತರದಿಂದ ಕಾಣಿಸಿಕೊಳ್ಳುವ ಹದವನ್ನು ಅರಿತುಕೊಳ್ಳಬೇಕು. ಕೇಳದೆ ಹೇಳಬೇಡ; ಕರೆಯದೆ ಹೋಗಬೇಡ. ನೀನಾಗಿಯೇ ಹೊಣೆಹೊತ್ತ ಕೆಲಸವು ಕೆಟ್ಟರೆ ಅದರ ಎಲ್ಲ ಅಪವಾದವೂ ನಿನ್ನ ತಲೆಯ ಮೇಲೆ; ಅದು ಕೈಗೂಡಿದರೆ ಅಭಿನಂದನೆಗಳ ಒಂದಂಶವೂ ನಿನಗಿಲ್ಲ. ಕೇಳಿ ಕಾಡುವವರಿಗೆ ತೆರವಾಯಿ ದಾಸರೆಂದು ನಿಂದಿಸಿಕೊಳ್ಳಬೇಕಾಗುವುದು; ಏಕೆಂದರೆ ಸಿಗ್ಗು-ಸಂಕೋಚವಿಲ್ಲದ ಒಬ್ಬರ ಹೊಸತಿಲೊಳಗೆ ಕಾಲಿಡುವವರು ಮರ್ಯಾದೆಯನ್ನು ಮೀರುವರು. ಹದ್ದು ಮೀರಿ ಅಡಿಯಿಟ್ಟುದಕ್ಕೆ ಮಾನಗೇಡಿಗಳಾಗಿ ಹೊರ ಬೀಳುವರು.

ಹಸಿವನ್ನು ಕಾಯು; ಕೊಲ್ಲಬೇಡ

ಅಮೃತವಿದ್ದರೂ ಅಜೀರ್ಣವಾದರೆ ಅಪಾಯಕರ. ಆವುದಕ್ಕೂ 'ಬೇಕು' ಇರುವಾಗಲೆ ಬೆಲೆ. 'ಸಾಕು' ಎಂಬುದೇ ಸಾವು. ಹಸಿವು ನಷ್ಟವಾದರೆ ರೋಗ; ಹಸಿವು ಇದ್ದರೆ ಆರೋಗ್ಯ, ಒಳ್ಳಿತ್ತಾದುದು ಸ್ವಲ್ಪವಿದ್ದರೆ ಅದರ ಸವಿ ಇಮ್ಮಡಿ, ಹೆಚ್ಚಾದರೆ ಅದು ಹುಚ್ಚು (ಹೊಲಸು). ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳು, ಮುಳ್ಳು. 'ಬೇಕು' ಇದ್ದಾಗಲೆ ಬೆಳೆದ ಆಸೆ. 'ಅಸಂತೋಷಃ ಶ್ರಿಯೋ ಮೂಲಂ' ಬೇಳ್ವೆ ಅಥವಾ ಬೇಳುವೆ (ಬೇಡುವುದು) ಎಂದರೆ ಯಜ್ಞ. ಯಜ್ಞವು ಏತಕ್ಕಾಗಿ? ಇಷ್ಟಸಿದ್ಧಿಗಾಗಿ: ಸಂಪಾದನೆಗಾಗಿ. ಬೇಡದೆ ಪಡೆಯ. 'ಸಾಕು' 'ತಣಿದೆ' ನೆಂಬುದು ಔಪಚಾರಿಕ. ನಿಜವಾಗಿಯೇ ಪೂರ್ಣ 'ತಣಿಯುವುದು' ಕೊನೆಗೇ. ಆಗ ಎಲ್ಲ ತಣ್ಣಗೆ! ಹೆಚ್ಚು ಆದೊಡನೆ ಹೆಚ್ಚಿ-ಎಂದರೆ ಹರಿದು ಹಂಚಿಹೋಗುವುದು. ಆದುದರಿಂದಲೇ ಗೊನೆಯೆ ಕೊನೆ. ಪೂರ್ಣವೆಂದರೆ ಮರಣ, ಈ ಕಾರಣದಿಂದಲೇ ಮೈ ಕೈ ತುಂಬಿದ ಎಳೆ ಮಕ್ಕಳಲ್ಲಿಯೂ, ಮದುಮಕ್ಕಳಲ್ಲಿಯೂ ಚೆಲುವಿನ ಸ್ವಲ್ಪ ಅಪೂರ್ಣತೆಯನ್ನು ತೋರುವುದಕ್ಕಾಗಿ ಗಲ್ಲಕ್ಕೆ ಸ್ವಲ್ಪ ಕಪ್ಪು ಹಚ್ಚುವರು. 'ಬೇಕು' ಇಲ್ಲದಾಗ ಬಂದುದು ಹಿಗ್ಗನ್ನೀಯದು. ಹಿಗ್ಗು ಬೇಕಾದವರು ಹಸಿವನ್ನು ಉಳಿಸಿಕೊಳ್ಳಬೇಕು. ಈ ಕಾಲಕ್ಕೆ ಪಡೆದುದೇ ಆನಂದವನ್ನೀಯುವುದು. ತುಂಬಿದ ಹೊಟ್ಟೆಯಲ್ಲಿ ತುರುಕಿದರೆ ಡೊಳ್ಳು ಬೆಳೆಯುವುದು; ಬೊಜ್ಜು ಬರುವುದು. ಇಂತಹರದು ಸುಳ್ಳು ಹಸಿವು. ರೋಗದ ಪೂರ್ವಸೂಚನೆ. ವ್ಯಾಯಾಮ, ಅಂಗ ಸಾಧನೆಯಿಂದ ಗಳಿಸಿದ ಹಸಿವು ಪ್ರಸಾದ-ಸೌಖ್ಯದ ಮುಂಗುರುತು.

ತಿಳಿದು ನಡೆ; ಹಟ ಬೇಡ

ಹಟವೆಂದರೆ ದುರಾಗ್ರಹ; ದುರಾಗ್ರಹವು ಮನಸ್ಸಿನ ಮಲ. ಅಡ್ಡ ದಾರಿ ಹಿಡಿದ ಬುದ್ಧಿಯ ಫಲ. ಆವುದೇ ಮಾತು ಹೊರಡಲಿ, ಇವರದೊಂದು ತೃತೀಯ ಪಂಥವು ಇದ್ದುದೇ. ಇವರೆದುರು ಮಾತಾಡುವುದೆ ತಡ: ತಿಕ್ಕಾಟಕ್ಕೆ ಆರಂಭವೇ. ತಮ್ಮದೇ ಮಿಗಿಲೆಂದು ಸಿದ್ಧಪಡಿಸುವ ಚಪಲವು ಇವರಿಗೆ! ಎಲ್ಲ ಮಾತುಗಳಲ್ಲೂ ಇವರಿಗೆ ಗೆಲವು ಬೇಕು. ಮಾತು ಬಂದಾಗ ಸೋತು ಗೆಲ್ಲುವ, ಜಾಣತನದ ಸೌಜನ್ಯದಿಂದ ಇವರು ಯಾವಾಗಲೂ ಹರದಾರಿ ದೂರ. ಶಾಂತಿಯಿಂದ ಹೊಂದಿಕೊಂಡು ಕೂಡಿ ನಡೆವ ಗೆಳೆತನದ ಒಗೆತನವನ್ನು ಇವರು ಅರಿಯರು, ಇಂತಹರು ಬಾಳಿನಲ್ಲಿ ಹೆಚ್ಚಾಗಿ ಗೆಳೆಯರಿಗಿಂತಲೂ ಹಗೆಗಳನ್ನೆ ಮಾಡಿಕೊಳ್ಳುವರು. ಇವರು ಬಹಳ ದೂರದರ್ಶಿಗಳಾಗಿ ಏನೊಂದು ವ್ಯವಹಾರವನ್ನು ಮಾಡಹೋಗಿ ಅದನ್ನು ಮೈಮೇಲೆ ಹಾಕಿಕೊಳ್ಳುವರು. ಏಕೆಂದರೆ ಈ ದುರಾಗ್ರಹಿಗಳ ನೆರಳಿಗೆ ನಿಲ್ಲುವುದಕ್ಕೆ ಯಾರಿಗೂ ಬೇಡ. ಇವರು ತಾವು ಮಾಡುವಂತಿಲ್ಲ, (ತಮಗೆ ಶರಣು ಬಾರದೆ ಇದ್ದವರು) ಮಾಡಿದ್ದುದನ್ನು ಮೆಚ್ಚುವಂತಿಲ್ಲ! ಏಕೆಂದರೆ : ಇವರ ತಲೆ ತಿರುಗಿರುತ್ತದೆ. ಎದೆ (ಹೃದಯ) ಕೆಟ್ಟಿರುತ್ತದೆ. ಇಂತಹರ ಕೂಡ ಇರುವುದಕ್ಕಿಂತ ಪಶು-ಪಕ್ಷಿಗಳ ಒಡನಾಟವೂ ಲೇಸು.

ನಡೆ-ನುಡಿಗಳು ಒಂದನ್ನೊಂದು ಹಿಂಬಾಲಿಸಲಿ

ತಿಳಿದವನೆಂದೆನಿಸು; ಬೆರಕೆ ಎನಿಸಿಕೊಳ್ಳಬೇಡ. ಅಂತಃಕರಣದ ಆವೇಶದಿಂದ ಕೆಲಸ ಮಾಡು. ಈ ಬಗೆಯು ಪ್ರಾಮಾಣಿಕವಾದ ಆಂತರಿಕ ಆವೇಶವು ಆದರವನ್ನು ಹೆಚ್ಚಿಸುತ್ತದೆ. ಇದನ್ನು ಎಲ್ಲರಲ್ಲಿಯೂ ಕಾಣಲಿಕ್ಕೆ ಸಿಕ್ಕುವುದು ಅಪರೂಪ. ಈ ಪ್ರಾಮಾಣಿಕತೆಯು ಎಬಡತನದಲ್ಲಿ ಪರಿಣಮಿಸಲಾಗದು, ಅಥವಾ ಬುದ್ಧಿವಂತಿಕೆಯ ಧೂರ್ತವಂಚಕತನವಾಗಕೂಡದು. ಬೆರಕೆಯ ಗತ್ತುಗಾರನೆಂದು ಜನರು ನಿನಗೆ ಬೆದರದಿರಲಿ: ತಿಳಿದವನು (ಜ್ಞಾನಿ) ಎಂದು ಆದರಿಸುವವರಾಗಲಿ. ಎದೆಗೆ ಬಾಯಿಯಿರುವವರು ಜನರನ್ನು ಒಲಿಸಿಕೊಳ್ಳುವರು: ಆದರೂ ಹೆರವರ ಬಲೆಯಲ್ಲಿ ಬೀಳುವರು. ತಲೆಗೆ ಬಾಯಿಯಿದ್ದವರು ಜನರನ್ನು ಬೆರಗುಗೊಳಿಸುವರು; ಆದರೂ ಜನರು ಇವರ ಹತ್ತಿರ ಬರಲು ಹೆದರುವರು. ಮೋಸವನ್ನು ಅರಿವ ಜಾಣ್ಮೆಯಿರಲಿ: ಆದರೆ ಮಾಡುವ ಮೋಹವು ಮಾತ್ರ ಬೇಡ.

ಎಣಿಕೆ (Plan) ಇಲ್ಲದ ಬಾಳು ಹಾಳು

ಗಾಳಿ ಹಾರಿಸಿದತ್ತ ಹೋಗಲು ನೀನೊಂದು ವರದಿ ಅಲ್ಲ. ವಿಚಾರ, ವಿವೇಕಗಳಿಂದ ಯುಕ್ತವಾದ ದೂರದೃಷ್ಟಿಯ ಬಲದಿಂದ ಎಣಿಕೆ ಹಾಕು. ಹಾಗೆ ನಡೆ. ನಡುನಡುವೆ ಸುಖ-ಸಂಕಥಾ ವಿನೋದವಿಲ್ಲದ ಬಾಳು. ಆಸರ ಬೇಸರ ಬಳಲಿಕೆಯಾದಾಗ ಉಡುಪಿಯವರ ಶಾಂತಿಸದನಗಳಿಲ್ಲದ ದೂರಿನ ದಾರಿಯಂತೆ. ನಾನಾ ವಿಷಯಗಳ ಜ್ಞಾನವು ಬಗೆಬಗೆಯ ಹಿಗ್ಗಿಗೆ, ಸೊಗಸಿಗೆ ಕಾರಣವಾಗಿರುತ್ತದೆ. ಉತ್ತಮ ಜೀವನದ ಒಂದು ದಿನವು ಹಿಂದಿನವರ ಅಂತರಾತ್ಮಗಳೊಡನೆ ಮಾತನಾಡುವಲ್ಲಿ ಹೋಗಲಿ. ಏಕೆಂದರೆ: ಅವರ ಉದ್ಗ್ರಂಥಗಳು ನಮ್ಮನ್ನು ಉದ್ಧರಿಸುತ್ತವೆ. ನಮ್ಮನ್ನು ಉತ್ತಮರನ್ನಾಗಿ ಮಾಡುತ್ತವೆ. ತಿಳಿದು ಬಾಳು, ಬಾಳಿ ತಿಳಿ. ತಿಳಿ-ಗನ್ನಡಿಯಲ್ಲಿ ನಿನ್ನನ್ನು ನೀನು ನೋಡುವ ಎದೆಗಾರನಾಗು. ಇನ್ನೊಂದು ದಿನವನ್ನು ಇಂದಿನವರೊಡನೆ ಕಳೆ. ಲೋಕದಲ್ಲಿ ಎಲ್ಲೆಡೆಗಳಲ್ಲಿ ಹಂಚಿರುವ ಒಳ್ಳಿತ್ತನ್ನೂ ಚೆಲುವನ್ನೂ ಕಂಡುಹಿಡಿ. ಇದೆಲ್ಲವೂ ಯಾವ ಒಂದೇ ನಾಡಿನ ಗುತ್ತಿಗೆಯಲ್ಲ. ಲೋಕದ ತಂದೆಯು ಎಲ್ಲರಿಗೂ ಇದನ್ನು ಹಂಚಿಕೊಟ್ಟಿದ್ದಾನೆ, ಕೆಲವು ವಿಷಯಗಳಲ್ಲಿ ಕನಿಷ್ಠರ ಪಾಲಿಗೇ ಹೆಚ್ಚಿನ ಸೊಗಸೂ, ಹಿಗ್ಗೂ ಬಂದುದು ಕಂಡುಬರುತ್ತದೆ. ಮಗದೊಂದು ದಿನವನ್ನು ನಿನಗಾಗಿಯೇ ಕಾದಿಡು. ಏಕೆಂದರೆ ತನ್ನ ತಾನು ಅರಿವುದೇ ಜೀವನದ ಗುರಿ. ಇದುವೆ ಶಾಂತಿ ಸುಖದ ಹಾದಿ. ಹೊರಗಣ ಇಡೀ ಜಗತ್ತೇ ಸೈಯೆಂದರೂ ಸೈಪು (ಶಾಂತಿ) ಸಿಕ್ಕದ್ದು- ನಿನ್ನ ಒಳಿಯ (ಅಂತರಾತ್ಮ)ನು ಸೈಯೆಂದಾಗಲೆ ಸೈಪು. ಸೈಪು ಇಲ್ಲದೆ

ಸುಖವಿಲ್ಲ. ನೀನಿಂತು ಹಿಂದು, ಇಂದು ಮತ್ತು ಮುಂದುಗಳ ಎಣಿಕೆಯಿಂದ ಬದುಕು. ಇಂತು ಎಣಿಕೆಯಿಂದ 'ಬದುಕು ಮಾಡು'ವನ ಭಾಗ್ಯಕ್ಕೆ ಎಣೆಯಿಲ್ಲ.

ಬಳಿಕ ಮೆಚ್ಚು (ಇನಾಮು) ಎನಿಸಬಹುದಾದುದನ್ನು ಮೊದಲೇ ಕೊಟ್ಟು, ಉಪಕಾರ ಮಾಡಿದ ಶ್ರೇಯ ಪಡೆ

ಮುಂಗಂಡು ನಡೆವ ವ್ಯವಹಾರಕುಶಲನ ಹದನವಿದು. ಮುಂದೆ ಮೆಚ್ಚಿ ಪಾರಿತೋಷಕವೆಂದು ಕೊಡಬೇಕಾಗುವುದನ್ನು, ಅದಕ್ಕೂ ಮೊದಲೇ ತಾನಾಗಿ ಕೈಯೆತ್ತಿ ಕೊಟ್ಟರೆ ದಯಾವಂತ, ಉಪಕಾರಿ ಎಂದು ಹೆಸರು ಪಡೆಯುವೆ. ಹೀಗೆ ಮಾಡುವಲ್ಲಿ ಇಮ್ಮಡಿ ಲಾಭವಿದೆ: ೧) ಸ್ವೀಕರಿಸುವವನು ತುಂಬ ಸಂತುಷ್ಟನಾಗಿ ನಿನಗೆ ಚಿರಋಣಿಯಾಗುವನು; ೨) ಸ್ವಲ್ಪ ತಡವಾದ ಬಳಿಕ 'ಮೆಚ್ಚು' ಎನಿಸಬಹುದಾದುದನ್ನು ಮೊದಲೇ ಇತ್ತರೆ ಉಪಕಾರವೆನಿಸುವುದು. ಪರಿಸ್ಥಿತಿಯ (ಒತ್ತಾಯದ) ಒದೆತಕ್ಕೆ ಕೈಸಡಿಲಿಸಬೇಕಾದಲ್ಲಿ ಮರ್ಯಾದೆಯಿಲ್ಲ. ಮುಂಗಂಡು ಕೈಯೆತ್ತಿ ನೀಡುವಲ್ಲಿಯೇ ಶ್ರೇಷ್ಠತೆಯಿದೆ: ಶ್ರೇಯಸ್ಸಿದೆ. ಆದರೆ ಯಾರ ಹಂಗು ನಮಗೇನು, ಎಂಬ ಉಪಕಾರಗೇಡಿಗಳೊಡನೆ ಸ್ವಲ್ಪ ಎಚ್ಚರ. ಕೀಳು ಮನಸಿನ ಹೆಮ್ಮೆಯವರು, ಮುಂಗಡ ಕೊಟ್ಟುದನ್ನು ಸಂಚಕಾರ ಅಥವಾ ಲಂಚವೆಂದು ಭಾವಿಸುವರೆ ಹೊರತು ಉಪಕಾರವೆಂದು ಎಣಿಸುವುದಿಲ್ಲ.

ಎಗ್ಗನೆನಿಸದಿರು

ಎಗ್ಗನೆಂದರೆ ಏಕಾಂಗಿ; ಒಂಟಿಗಣ್ಣಿನವ, ಒಂದರ ಹೊರತು ಇನ್ನೊಂದನ್ನು ಅರಿಯದವ. ಒಂದೇ (ನಿಟ್ಟಿನಿಂದ) ಕಂಡವ, ಒಂದೇ (ಪಕ್ಷವನ್ನು) ಕಿವಿದವ. ಅರ್ಥಾತ್ ಅಸಂಸ್ಕೃತ. ಸುಸಂಸ್ಕೃತ ಎಂದರೆ ಬಹುಶ್ರುತನು. ದೇವಾಂಶವನ್ನು ಹೆಚ್ಚಿಸಿಕೊಂಡವನು. ದೇವರಿಗೆಲ್ಲ ಹಲವು ಕಣ್ಣು, ಹಲವು ಕಿವಿ, ಹಲವು ಕೈ, ಹಲವು ಬಾಯಿಗಳು, ನಾಲ್ಕೂ ನಿಟ್ಟಿನಿಂದ ನೋಡಬಲ್ಲವನೇ 'ಚತುರ'. ಚತುರನು ಬಹುಶ್ರುತನು. ಇಂತಹನು ಒಬ್ಬನಿದ್ದರೂ ಒಬ್ಬನಲ್ಲ; ಹಲವರಿದ್ದಂತೆ. ಏಕೆಂದರೆ ಅವನು ಅನೇಕರ ಸಾರವನ್ನು ತನ್ನಲ್ಲಿ ಅಳವಡಿಸಿಕೊಂಡಿರುತ್ತಾನೆ. ಈತನ ಆನಂದ ಅನುಭವಗಳನ್ನು ಕಿವಿಯಲು ದೊರೆತವರಲ್ಲೂ ಒಂದು ಹೆಚ್ಚಿನ ಯೋಗ್ಯತೆಯು ಮೂಡಿ ಮಿನುಗುವುದು- ಅಯಸ್ಕಾಂತವು ಸೋಂಕಿದ ಕಬ್ಬಿಣದಂತೆ. ಒಂದೇ ಒಂದು ಎಂದರದೂ ತಲೆಬೇಸರ. ವೈವಿಧ್ಯದಲ್ಲಿಯೇ ಸೊಗಸಿದೆ. ಬಗೆಬಗೆಯೆಂದರೆ 'ಅಂದ' ಇದುವೆ 'ಚೆಂದ' ಷೋಡಶ ಕಲಾಪೂರ್ಣ. ಆದುದರಿಂದ ಅಂದವುಳ್ಳವನಾಗು. ಅಂದಗೇಡಿಯಾಗಬೇಡ. ಸತ್ಯ-ಸೌಂದರ್ಯಗಳ ಬಗೆಬಗೆಗಳನ್ನು ಅರಿತು ಆಸ್ವಾದಿಸುವ ಯೋಗ್ಯತೆಯು, ಸಿಕ್ಕ ದಾರಿ ಹೋಕರಿಗೆ ಬಾರದು. ಇಂತಹ ಸವಿಗಾರರೇ ರಸಿಕರು. ರಸವೆಂದರೆ ಸಾರ; ಸತ್ವ. ಇದುವೆ ಅಮೃತತತ್ವ, ರಸೋವೈಸಃ. ರಸವು ದಿವ್ಯ, ಆದುದರಿಂದ ರಸವೇ ದೇವ. ಕಸದಿಂದಲೇ ಸಂತುಷ್ಟನಾದವನು ಎಗ್ಗ, ಹುಲುದಿನಿ. ಚತುರ ಸುಸಂಸ್ಕೃತನು ರಸಜೀವಿ: ಆದುದರಿಂದ ನಿಜವಾದ ರಸಿಕನೆಂದರೆ ಆತನೇ-ಯೋಗಿ.

ಹದಗೇಡಿ ಮನಸ್ಸು

ವಿರೂಪ ಮನಸಿನಷ್ಟು, ಕುರೂಪವು ಅಸಹ್ಯವಲ್ಲ. ಮೊಂಡ ಮೂಗಿ, ಗುಳ್ಳಗಣ್ಣಿ, ಗುಜ್ಜ, ಚೊಂಚ ಎಂದು ನಿಂದಿಸುವುದು ಅನ್ಯಾಯ. ಏಕೆಂದರೆ: ರೂಪವು ಯಾರ ಕೈಯೊಳಗಿನ ಮಾತು? ಅದು ನಿಸರ್ಗದತ್ತ. ಆದರೆ ಗುಣಗಳ ಹೊಣೆಗಾರಿಕೆಯೊ? ಆ ಆ ವ್ಯಕ್ತಿಯ ಮೇಲಿದೆ. ದಾಂಭಿಕ, ಮದಾಂಧ. ಕಠೋರ, ಕ್ರೂರ, ಕೃತಘ್ನ, ಚಂಡಿ, ತಲೆತಿರುಕ, ಶೀಘ್ರಕೋಪಿ, ಛಾಂದಸಿ, ಸಂಶಯ, ಚಂಚಲ, ವಚನಭ್ರಷ್ಟ, ನಂಬಿಸಿ ತಿಂಬಲ, ವಿಘ್ನಸಂತೋಷಿ, ಜಾತ್ಯಂಧ, ಧರ್ಮಾಂಧ, ಎಂದು ಮುಂತಾಗಿ ಒಂದೊಂದು ಹೆಸರು ಪಡೆದವರ ಮನೋವಿಕೃತಿಯು, ಶಾರೀರಕ ಕುರೂಪಕ್ಕಿಂತಲೂ ಹೇಸಿಕೆಯನ್ನುಂಟುಮಾಡುವಂತಹದು. ಇಂತಹರು ಅಸುರಕೋಟಿಯ ಆಪ್ತರು. ಸಂಯಮ-ಹಿಡಿತವೆ ಗೊತ್ತಿಲ್ಲದ ಪ್ರಾಣಿಗಳು ಇವರು. ಮನಸ್ಸನ್ನು ಹದಗೊಳಿಸಿ (ಹೊರಗಿನ ಉಡುಪು- ತೊಡುಪುಗಳಿಗೆ ಲಕ್ಷ್ಯಕೊಡದಂತೆ), ಮನಸಿಗೂ ಸುಸಂಸ್ಕಾರಗಳಿಂದ ಅಲಂಕರಿಸಿ

ಅಂದಗೊಳಿಸಿದರೆ ಆಗದೆ? ತಮ್ಮ ಬಟ್ಟೆಗಳು ಹಸನಾಗಿರಬೇಕೆಂದು ಜಾಗ್ರತರಾಗಿರುವಷ್ಟಾದರೂ ತಮ್ಮ ಹೃದಯ-ಬುದ್ಧಿಗಳೂ ಪರಿಶುದ್ಧವಾಗಿರಬೇಕೆಂದು ಎಚ್ಚರಪಡುವವರು ಏಸು ಜನ? ಹದಗೇಡಿಗಳೇ ಕು...ಗೇಡಿಗಳು.

ಯೋಗಾಯೋಗವು

ಎಲ್ಲದರಲ್ಲೂ ಉಂಟು. ಕಾಲವು ಅನುಕೂಲವೋ, ಪ್ರತಿಕೂಲವೋ ಎಂಬುದನ್ನು ಅರಿತುಕೊಳ್ಳದೆ ಆವುದಕ್ಕೂ ಕೈಯಿಕ್ಕದಿರು. ಗೃಹಬಲ, ತಾರಾಬಲಕ್ಕಿಂತಲೂ ನಿನ್ನ ಹಾಗೂ ನಿನ್ನ ಸುತ್ತಲಿನ ಬಲಾಬಲಗಳನ್ನು ಚೆನ್ನಾಗಿ ವಿಮರ್ಶಿಸು. ನಿತ್ಯ ಸಂಕ್ರಮಣವು ನಡೆದಿದೆ. ತಿಳಿದವರಿಗೆ ಇದು ದಿನಾಲು ಕಾಣುವುದು. ಈ ಸೂಕ್ಷ್ಮ ದೃಷ್ಟಿಯಿಲ್ಲದ ತಿಳಿಗೇಡಿಗಳಿಗೆ ವಿಪರೀತ ವ್ಯತ್ಯಾಸಗಳಾದ ಬಳಿಕ, ಅವರ ಪಾಲಿಗೆ ವರ್ಷಕ್ಕೊಂದು ದಿನ 'ಸಂಕ್ರಾಂತಿ'. ನಮ್ಮ ಮೈ-ಮನಗಳು ಕೂಡ ಗಳಿಗೆಗಳಿಗೂ ಬದಲಾಗುತ್ತಲಿವೆ. ಪರಿಪಕ್ವತೆಯು ಕಾಲವನ್ನು ಅವಲಂಬಿಸಿದೆ. ಕಸುಕು ಹಣ್ಣಲು ಹೊತ್ತು ಬರಬೇಕು. ಹೊತ್ತು ಮೀರಿದರೂ ಹೋಯ್ತು! ಇದೇ ಯೋಗಾಯೋಗ, ಇದನ್ನು ಅರಿತು ಕೊಂಬುವ ಶಕ್ತಿಯನ್ನು ಸಂಪಾದಿಸು. ಆವುದೊಂದನ್ನು ಚೆನ್ನಾಗಿ ಕೊನೆಗಾಣಿಸಬೇಕೆಂದಿದ್ದರೆ ಅದನ್ನು, ಸಕಾಲದಲ್ಲಿ ಮಾಡಬೇಕು. ಮಣ್ಣು ಹೊನ್ನಾಗುವ ಕಾಲವು ಒಂದು ಇರುತ್ತದೆ. ಇದುವೆ ಸುಗ್ಗಿ. ಸುಗ್ಗಿಯಲ್ಲಿ ಸುಮ್ಮನೆ ಬಿದ್ದುಕೊಂಡು ಮುದಾದೆ ಮಿಡುಕುವುದೂ, ಕಣ್ಣೀರಿಡುವುದೂ ಮೂರ್ಖತನ, ಆದುದರಿಂದ ಸಕಾಲದಲ್ಲಿ ಮುಂದವರೆ! ಹೊನ್ನು ಮಣ್ಣಾಗುವ ಹೊತ್ತು ಬಂದಿದೆ, ಈ ಯೋಗಾಯೋಗಗಳನ್ನು ಅರಿತು ಅಡಿಯಿಡುವುದೇ ಜಾಣ್ಮೆ.

ಆಗಲೇಬೇಕಾದುದನ್ನು ಆಗಗೊಡು

ವೈಯಕ್ತಿಕ ಜೀವನದಲ್ಲಾಗಲಿ, ಸಾರ್ವಜನಿಕ ಜೀವನದಲ್ಲಾಗಲಿ, ಇದರಂತೆ ನಡೆದು ಕೊಳ್ಳುವುದೇ ಲೇಸು. ಕೆಲಸಾರೆ, ನಮ್ಮ ದಂದುಗದಲ್ಲಿ ಝುಂಝಾವಾತವು ತಲೆದೋರುವುದು. ಮನೋವಿಕಾರಗಳ ಬಿರುಗಾಳಿ ಬೀಸುವುದು, ಇಂತಹ ಹೊತ್ತಿನಲ್ಲಿ ಬಂದರದ ಸುರಕ್ಷಿತ ಸ್ಥಳದಲ್ಲಿ ಲಂಗರು ಹಾಕಿ ಆಶ್ರಯವನ್ನು ಪಡೆಯುವುದೇ ಜಾಣತನ. ಹಲವು ಬಾರಿ ಮಾಡಿದ ಉಪಾಯದಿಂದ, ಸರಳವಾಗಿದ್ದ ರೋಗವು ತೊಡಕಿನದಾಗುವುದು. ಇಂತಹ ಪ್ರಸಂಗದಲ್ಲಿ ಅದರ ಜೋರು ಕಡಿಮೆಯಾಗುವವರೆಗೆ ದಾರಿಕಾಯುವುದೇ ಲೇಸು. ಔಷಧವನ್ನು ಯಾವಾಗ ಕೊಡತಕ್ಕದ್ದಲ್ಲವೆಂಬುದನ್ನು ಶ್ರೇಷ್ಠರಾದ ವೈದ್ಯರೇ ಬಲ್ಲರು. ಸುಮ್ಮನೆ ಔಷಧಿಗಳನ್ನು ತುರುಕದಿರುವುದರಲ್ಲಿಯೇ ಚಾತುರ್ಯವಿದೆ. ಎದುರಾಳಿಯ ಸಿಟ್ಟಿನ ಸಿಡಿಲು, ಮಿಂಚಿನ ಆವೇಗವು ಸಣ್ಣಗಾಗುವವರೆಗೆ ನಿಮ್ಮ ಕೈ-ಬಾಯಿಗಳನ್ನು ಕಾಯ್ದು ಸುಮ್ಮನಿರುವುದೇ ಆ ರೊಚ್ಚಿನೊಳಗಿಂದ ಪಾರಾಗುವ ಸುಲಭ ಯುಕ್ತಿಯು. ಈಗ ಉಕ್ಕೇರಿ ಬರುವ ತೆರೆಗೆ ತಲೆವಾಗವುದೆಂದರೆ ಇನ್ನೊಮ್ಮೆ ಅದನ್ನು ಮೆಟ್ಟಿ ಮೇಲೆ ಏರುವ ಸಿದ್ಧತೆ ಮಾಡಿದಂತೆ. ಒರತೆಯ ನೀರು ಸ್ವಲ್ಪ ಕಲುಕಿದರೂ ರಾಡಿಯಾಗುವುದು. ಆ ನೀರು ತಿಳಿಯುವುದಕ್ಕೆ ಮತ್ತೆ ಕದಡುವುದು ಉಪಾಯವಲ್ಲ; ಸುಮ್ಮನೆ ಬಿಡುವುದೇ ತಕ್ಕ ಹಂಚಿಕೆ. ಆದುದರಿಂದ, ಅನಿವಾರ್ಯವಾದುದನ್ನು ಎದುರಿಸುವುದಕ್ಕಿಂತ ತನ್ನ ಸಂರಕ್ಷಣೆಯಲ್ಲಿ ಸುಮ್ಮನಿದ್ದು ಆಗಗೊಡುವುದರಲ್ಲಿಯೇ ಚಾತುರ್ಯವಿದೆ.

ಮಧ್ಯಲೋಕ-ಭೂಲೋಕ

ಮೇಲಣ ಲೋಕದಲ್ಲಿ ಎಲ್ಲವೂ ಸುಖ. ಕೆಳಗಣ ಲೋಕದಲ್ಲಿ ಎಲ್ಲವೂ ದುಃಖ. ನಮ್ಮದಿದು ನಡುವಣ ನಾಡು; ಭೂಲೋಕ. ಸುಖ-ದುಃಖಗಳ ಸಂಮಿಶ್ರಣ. ಉಯ್ಯಲೆಯ ತೂಗಾಟ ಸೊಗಸು ನಮ್ಮದು. ಒಮ್ಮೆ ಸುಖ ಒಮ್ಮೆ ದುಃಖ. ಹೀಗೆ, ಹಿಂದೊಮ್ಮೆ ಮುಂದೊಮ್ಮೆ ಅಲೆಯುತ್ತಿದ್ದೇವೆ. ನಮ್ಮಲ್ಲಿ ಆವುದೂ ಸಂಪೂರ್ಣ ಸುಖ ಅಥವಾ ಸಂಪೂರ್ಣ ದುಃಖವೆಂಬುದಿಲ್ಲ. ಅಡಿಗಡಿಗೂ ಸುಖದ ಒಡಲಲ್ಲಿ ದುಃಖವು ಹುದುಗಿದ್ದುದೂ, ದುಃಖದ ಮಡಲೊಳಗಿಂದ ಸುಖವು ಹೊರಬರುವುದೂ ಅನುಭವಕ್ಕೆ ಬರುತ್ತದೆ. ತಿಳಿದವರಿಗೆ ಲೋಕವು ಕೇವಲ ಶೂನ್ಯವಿದ್ದಂತೆ ಇದೆ. (ಸಂಸ್ಕೃತಿಯ) ಒಂದರ ಮುಂದಿನ ಶೂನ್ಯ ಸ್ವರ್ಗ-ಹತ್ತುಪಟ್ಟು. (ದುಷ್ಕೃತಿಯ)

ಒಂದರ ಹಿಂದಿನ ಚುಕ್ಕೆ ನರಕ ಹತ್ತು ಪಾಲು. ಈ ಜೀವನ ನಾಟಕವು ಮುಂದೆ ಸಾಗಿದಂತೆ ತೊಡಕಿನ ಪ್ರಸಂಗಗಳು ಹೆಚ್ಚುವುವು, ಕೊನೆ ಕೊನೆಗೆ ಆ ಸಮಸ್ಯೆಗಳು ಬಗೆಹರಿವುದು ನಿಶ್ಚಿತವಾದರೂ ಜೀವನನಾಟಕವು ಆನಂದವಲ್ಲಿ ಕೊನೆಗೊಳ್ಳಲಿ. ಸುರಮ್ಯವಾದ ನಿನ್ನ ಸತ್ಕೃತಿಯ ದೃಶ್ಯದ ಮುಕ್ತಾಯದೊಡನೆಯೇ ಕಡೆಯ ಅಂಕದ ಪರದೆ ಬೀಳಲಿ.

ಮರ್ಯಾದೆವಂತರೊಡನೆಯೆ ವ್ಯವಹಾರವಿರಲಿ

ಅವರನ್ನು ನೀನು ನಂಬು: ಅವರು ನಿನ್ನನ್ನು ನಂಬುವರು. ನಿಮ್ಮಿಬ್ಬರಲ್ಲಿ ತಪ್ಪು ತಿಳುವಳಿಕೆಗಳು ತಲೆದೋರಿ, ಆಗದವರಾದಾಗಲೂ ಅವರು ಅಡ್ಡ ಹಾದಿಯನ್ನು ಹಿಡಿಯರು. ಏಕೆಂದರೆ ಅವರಿಗೆ ತಮ್ಮ ಮಾನದ ಭಯವಿರುತ್ತದೆ. ಆದುದರಿಂದ, ಮಾನವಂತರೊಡನೆ ಆದ ಜಗಳದ ಕೇಡಿಗಿಂತ ಮಾನಗೇಡಿಗಳ ಮೇಲೆ ಪಡೆದ ವಿಜಯದ ದುಷ್ಪರಿಣಾಮಗಳನ್ನು ಹೆಚ್ಚು ಅನುಭವಿಸಬೇಕಾದೀತು. ಸೂರೆಗೆಯ್ದು ಹಾಳಾದವರ ನೆರಳಿಗೂ ಅಂಜು. ಏಕೆಂದರೆ ಅವರು ನಿರಾಧಾರವಿದ್ದು ನಿನ್ನ ಕೊರಳಿಗೆ ಗುದ್ದಿಯಾಗಬಹುದು. ಇಂತಹರೊಡನೆ ಗೆಳೆತನವೆಂಬುದೇ ಭ್ರಮೆ. ಮಾನ-ಮರ್ಯಾದೆಯ ಬಂಡವಾಳವೂ ಇಲ್ಲದ ಜನರೊಡನೆ ಎಷ್ಟು ಮಹತ್ವದ ಒಪ್ಪಂದ, ಕಟ್ಟುನಿಟ್ಟಿನ ಕರಾರುಗಳಾದರೂ, ಅವನ್ನು ಬರೆದ ಕಾಗದದಷ್ಟೂ ಅದಕ್ಕೆ ಬೆಲೆ ಇಲ್ಲ. ಏಕೆಂದರೆ ನೀತಿಮರ್ಯಾದೆಯ ಬಂಧನವಿಲ್ಲದವನಲ್ಲಿ ಅದಾವ ಒಪ್ಪವೂ ಇಲ್ಲ. ಅಂದವಂತೂ ಮೊದಲೇ ಇಲ್ಲ.

ಕಲಂಕರಹಿತನಾಗುವುದು

ಇದುವೆ ಬಾಳಿನ ಗುರಿ; ಪೂರ್ಣತೆಯ ಲಕ್ಷಣ. ಒಂದಿಲ್ಲೊಂದು ಬಗೆಯಾದ ದೈಹಿಕ ಅಥವಾ ಮಾನಸಿಕ ಕುಂದುಕೊರತೆಯು ಇಲ್ಲದವರೇ ವಿರಳ. ಈ ಕುಂದನ್ನು, ಅದೇನು ಮಹಾ? ಬೇಕಾದಾಗ ಕಳೆಯಬಹುದು;' ಎಂದು ಕಡೆಗಣಿಸುವವರು ಕೆಲರು ಚಂದಿರನ ಚೆಲುವನ್ನು ಹೆಚ್ಚಿಸುವ ಕಲಂಕದಂತೆ, ಅದೊಂದು ತಮಗೆ ಭೂಷಣವೇ ಎಂದು ಕೊರತೆಯನ್ನೂ ಹೆಗ್ಗಳಿಕೆಯೆಂದು ಬಗೆದವರು ಕೆಲರು. ಮನೋಹರವಾದ ಹಲವು ಗುಣರತ್ನಮಾಲೆಯಲ್ಲಿ ಒಂದೆರಡು ಕರ್ಮಣಿಗಳನ್ನು ಇರಗೊಟ್ಟುದಕ್ಕೆ ಗುಣಮಣಿಗಳನ್ನು ಕಂಡು ಮೆಚ್ಚಿ ಹಿಗ್ಗುವವರ ಎದೆಗೆ ಮುಳ್ಳುಚುಚ್ಚಿದಂತಾಗುವುದು. ಒಂದು ಮುಗಿಲತುಂಡೂ ಸೂರ್ಯನ ಹೊಳಪಿಗೆ ಅಡ್ಡಬರಬಲ್ಲದು. ಅದರಂತೆ ನಿಮ್ಮ ನಡೆವಳಿಯೊಳಗಿನ ಅಲ್ಪಸ್ವಲ್ಪ ಹೀನಾಂಶವೂ ನಿಮ್ಮ ಕೀರ್ತಿಗೆ ಕುಂದು ತರುವುದು. ಆಗದವರು ಅದನ್ನೆತ್ತಿ ಬಿಟ್ಟೂ ಬಿಡದೆ ಲೋಕಕ್ಕೆ ಸಾರುವರು. ಇಂತಹ ಸಂದರ್ಭದಲ್ಲಿ ನಿಮ್ಮಲ್ಲಿಯ ಕಿರಿಮೆಯೆ ಹಿರಿಮೆಯಾಗಿ ತೋರುವಂತೆ ಮಾಡುವುದೇ ಮಿಗಿಲಾದ ಹಂಚಿಕೆ. ತೊಡಕು, ನಿಮ್ಮ ತೊಡವು (ಅಲಂಕಾರ) ಆಗಲಿ. ಸೀಝರನು ತನ್ನ ಕೊರತೆಗಳನ್ನು ಗೆಲುವಿನ ಹೂಮಾಲೆಗಳಲ್ಲಿ ಅಡಗಿಸಿಬಿಟ್ಟನು.

ತೀರ್ಪುಗಳ ಪುನರ್ವಿಚಾರಣೆ

ನಿನ್ನ ತೀರ್ಪು ಕೊನೆಯದಾಗಲಿ ಬೇಡ. ನಿನ್ನ ಒಡೆಯ ಒಪ್ಪಿಗೆ ಪಡೆಯಲು, ಅದನ್ನು ಆತನಿದುರೂ ಒಮ್ಮೆ ಇರಿಸು. ಒಳಗಿದ್ದು ಆಳುವ ಆ ನಿನ್ನ ಒಡೆಯನು ಒಪ್ಪಿದ ತೀರ್ಪೇ ಕೊನೆಯ ತೀರ್ಪು. ಕೈಕೊಳ್ಳತಕ್ಕ ಕೆಲಸದ ಬಗ್ಗೆ ಸಂದೇಹವು ತಲೆದೋರಿದಾಗಲಂತೂ ಒಡೆಯನ ಅನುಮತಿಗಾಗಿ ದಾರಿಕಾಯುವುದು ಲಾಭದಾಯಕವೆ ಆಗಿದೆ. ಒಡೆಯನ ಒಪ್ಪಿಗೆ ಬರುವ ವರೆಗೆ, ನಿನಗೆ ಇನ್ನೂ ವಿಚಾರಿಸಲು ವೇಳೆ ದೊರೆಯುವುದು. ಆ ಅವಧಿಯಲ್ಲಿ ನಿನ್ನ ತೀರ್ಪನ್ನು ತಿಳಿದುಕೊಳ್ಳಬಹುದು; ಇಲ್ಲವೆ ಬಲಪಡಿಸಬಹುದು. ಅಷ್ಟರಲ್ಲಿ ಹಲವು ಹೊಸ ಸಂಗತಿಗಳು ನಿನ್ನ ಕಣ್ಣಿಗೆ ಬೀಳುವುವು. ಕೈಯೆತ್ತಿ ಕೊಡುವ ವಿಷಯವೇ ಆಗಿದ್ದರೆ, ಪಾತ್ರಾಪಾತ್ರ ವಿಚಾರಕ್ಕೆ ಎಡೆದೊರೆಯುವುದು. ಅವಸರದಿಂದ ಕೊಟ್ಟು ಮಿಡುಕುವುದಕ್ಕಿಂತ, ವಿಚಾರಿಸಿ, ವಿಮರ್ಶಿಸಿ ಸತ್ಪಾತ್ರದಲ್ಲಿ ಕೊಟ್ಟ ಸಮಾಧಾನವನ್ನು ಪಡೆಯುವುದು ಲೇಸು. ಕೂಡಲೆ ದೊರೆತುದಕ್ಕಿಂತ ತಡಮಾಡಿ ಪಡೆದುದರ ಹಿಗ್ಗು ವಿಶೇಷ. ಬರಿಗೈಯಿಂದ ಕಳಿಸುವುದಿದ್ದರೆ, ಆ ಅನಿವಾರ್ಯದ 'ಇಲ್ಲ'ವನ್ನು ಮಿದುಮಾಡಿ, ಸವಿಮಾಡಿ ಹೇಳುವ ಅಂದವನ್ನು ನಿರ್ಧರಿಸುವುದಕ್ಕೆ

ಅನುವು ದೊರೆಯುತ್ತದೆ. ಅಲ್ಲದೆ ಕೇಳಬಂದವನ ಮೊದಲ ಹಂಬಲದ ಆವೇಗವು ಕಡಿಮೆಯಾಗುವುದರಿಂದ, ಈ ಹೊತ್ತಿನಲ್ಲಿ ಹೇಳಿದ 'ಇಲ್ಲ'ವು ಮರ್ಮಭೇದಕವಾಗದು. ಮಾರುತ್ತರಕ್ಕಾಗಿ ಒತ್ತಾಯ ಆಗ್ರಹವು ಇದ್ದಾಗಲಂತೂ ನೇರವಾದ ಉತ್ತರಕ್ಕಿಂತಲೂ ಹೊತ್ತು ಗೆಳೆಯುವುದೆ ಒಳಿತು. ಏಕೆಂದರೆ ಅಷ್ಟರಲ್ಲಿ ನೀವು, ಅವರ ದೃಷ್ಟಿಕೇಂದ್ರದಿಂದ ಬದಿಗೆ ಸರಿಸಬಹುದು.

ಇರು ಮತ್ತು ತೋರು

ಇರುವುದಕ್ಕಿಂತ ತೋರುವುದಕ್ಕೆ ಬೆಲೆ ಹೆಚ್ಚು. ಲೋಕದಲ್ಲಿ ಇರುವುದನ್ನು ಅರಿಯಲು ಒಳಗಣ್ಣು ಬೇಕು. ತೋರುವುದನ್ನು ನೋಡಲು ಹೊರಗಣ್ಣೇ ಸಾಕು. ಏಕೆಂದರೆ ಇರುವು ಒಲಮ್ಮೆ, ತೋರಿಕೆ ಹೊರಮ್ಮೆ. ಬಣ್ಣದಿಂದ ಬೆಲೆ ಕಟ್ಟುವುದು ಲೋಕದ ಸ್ವಭಾವ. ಹೊರಮಿಂಚಿಗೆ ಮನಸೋಲದವರೇ ವಿರಳ. ಆದಕಾರಣ, ಇದ್ದುದರಿಂದಲೆ ತೃಪ್ತಿಬಡದೆ ಅದನ್ನು ತೋರಿಸುವ ಹದವನ್ನೂ ಅರಿ, ಒಬ್ಬನಲ್ಲಿ ಹಲವು ಸುಪ್ತಶಕ್ತಿಗಳಿರಬಹುದು. ಆದರೆ ಅವುಗಳಲ್ಲಿ ಒಂದನ್ನಾದರೂ ಜಾಗೃತಗೊಳಿಸಿ, ಸಮಾಜಕ್ಕೆ ಅದರ ಲಾಭವನ್ನು ತೋರಿಸಿಕೊಟ್ಟವನಿಗೇ ಇಮ್ಮಡಿ ಬೆಲೆ. ಮೊದಲಿನವನಿಗಿಂತಲೂ ಎರಡನೆಯವನಿಗೇ ಮೇಲಣ ಸ್ಥಾನ-ಹೆಚ್ಚಿನ ಮಾನ. ಇದ್ದೂ ಹೊರಬಾರದ್ದು ಇಲ್ಲದಂತೆಯೇ ಸರಿ. ಸರಿಯಾಗಿ ವ್ಯಕ್ತಿಗತವಾದ ಸತ್ಯವೂ, ಸುಳ್ಳೆನಿಸುವುದು. ನಿರೀಕ್ಷಿಸುವವರಿಗಿಂತ ನೋಡುವ ಜನಗಳೇ ಹೆಚ್ಚು. ತಿಳಿಯುವವರಿಗಿಂತ ಕಾಣುವವರೇ ಬಹಳ. ಮೊದಲನೆಯದಕ್ಕೆ ತಲೆ ಬೇಕು, ಎರಡನೆಯದಕ್ಕೆ ಕಣ್ಣೇ ಸಾಕು. ಎಲ್ಲವೂ ತೋರುವಂತೆ ಇರುವುದಿಲ್ಲವಾದರೂ, ಇದ್ದಂತೆ ತೋರುವ ಕೌಶಲ್ಯವು, ಬಾಳಿನಲ್ಲಿ ಗೆಲುವಿಗೆ ಕಾರಣವಾಗುವುದು. ಪೇಟೆಯಲ್ಲಿ ಹಣ್ಣಿನ ಯೋಗ್ಯತೆಯು ಅದರ ಬಣ್ಣದಿಂದಲೇ ನಿರ್ಧರಿಸಲ್ಪಡುತ್ತದೆ. ಒಳ್ಳೆಯ ಹೊದಿಕೆಯು, ಹುರುಳಿನ ಪ್ರಶಸ್ತಿ ಪತ್ರ,

ದುರ್ದೈವವನ್ನು ಎದುರಿಸುವ ಬಗೆ

ದೊಡ್ಡ ಗಂಡಾಂತರಗಳಲ್ಲಿ ತನ್ನ ಅದಿರದ ಎದೆಗಿಂತ ಮಿಗಿಲಾದ ಸಂಗಾತಿಯು ಯಾವನೂ ಇಲ್ಲ. ಆದರೆ ನಿನ್ನ ಎದೆಯೆ ಅಳುಕಿದರೆ ಅಥವಾ ಅದುರಿದರೆ ಸುವಿಚಾರದ ವಜ್ರಕವಚವನ್ನು ಅದಕ್ಕೆ ತೊಡಿಸು. ಹೀಗೆ ಎದೆಗಾರಿಕೆಯಿಂದ ಮುನ್ನುಗ್ಗುವ ಮನುಷ್ಯನ ಎದುರು ತೊಡಕು ತೊಂದರೆಗಳು ನಿಲ್ಲವು. ದುರ್ದೈವ ಬಂದಾಗ ಮನುಷ್ಯನು ಎಂದೂ ಕೈಕಾಲುಗೆಡಬಾರದು. ನೀವು ಬೆದರಿದರೆ ಅದು ನಿಮ್ಮನ್ನು ಇನ್ನೂ ಗೋಳಾಡಿಸುವುದು. ಹಲರು ಬೆದರಿ, ಕಷ್ಟಸಮಯದಲ್ಲಿ ತಮಗೆ ತಾವೇ ಹಗೆಗಳಾಗುವರು; ತೊಂದರೆಗಳನ್ನು ಹೆಚ್ಚಿಸಿಕೊಳ್ಳುವರು. ಸಂಕಟವನ್ನು ಹೇಗೆ ಎದುರಿಸಬೇಕೆಂಬುದೇ ಗೊತ್ತಾಗದೆ ಇಮ್ಮಡಿ ದುಃಖಕ್ಕೆ ಕಾರಣರಾಗುವರು. ತನ್ನ ತಾನರಿದವನು ತನ್ನ ದುರ್ಬಲತೆಯನ್ನು ತನಗೆ ಲಾಭಕರವಾಗುವಂತೆ ಹೇಗೆ ಬಲಗೊಳಿಸಬೇಕೆಂಬುದನ್ನು ಅರಿಯುವನು. ಒಬ್ಬ ಜಾಣ ಮನುಷ್ಯನು ಎಲ್ಲವನ್ನೂ ಎದುರಿಸಿ ಗೆಲ್ಲುವನು, ತನ್ನನ್ನು ಪೀಡಿಸುವ ಗ್ರಹಗಳನ್ನೂ ಕೂಡ ಅವನು ಲೆಕ್ಕಿಸನು.

ತೂಗಿ ನೋಡು

ಬಾಳಲು ಅನುಕೂಲವಾಗುವಂತೆ ಅವರವರ ಅಭಿಪ್ರಾಯಗಳು ಮಾರ್ಪಡುತ್ತವೆ. ಆದರೂ ನನ್ನ ಮತವೇ ಮತ, ಎಂಬ ಹೆಮ್ಮೆ ಎಲ್ಲರಿಗೂ! ತಮ್ಮ ಒಲವು, ಇರವುಗಳನ್ನು ಸಮರ್ಥಿಸುವಂತೆಯೆ ಹಲವರು, ತಮ್ಮ ವಿಚಾರ, ಅಭಿಪ್ರಾಯ, ಶ್ರದ್ಧೆಗಳನ್ನು ರೂಪಿಸಿಕೊಂಡಿರುತ್ತಾರೆ. ಆದರೂ, ತೀರ ಭಿನ್ನನೋಟದ ಇಬ್ಬರು ಕೂಡಿದಾಗ, 'ನಿನ್ನದು ಸುಳ್ಳು; ನನ್ನದೇ ಸತ್ಯ' ಎಂದು ವಾದಿಸುವರು. ಇದು ಅತಿವಾದಿಗಳ ರೀತಿ. ಆದರೆ ಇಂಥ ಸಂದರ್ಭಗಳಲ್ಲಿ, ತಿಳಿದವರು ತಮ್ಮನ್ನು ತೂಗಿ ನೋಡುವರು. ಎದುರಿಸದವರ ವಿಚಾರಸರಣಿಯನ್ನು ಅರಿತುಕೊಳ್ಳಲು, 'ತಮ್ಮದೂ ಏಕೆ ಸುಳ್ಳಿರಲಿಕ್ಕಿಲ್ಲಯೋ' ಎಂದು ಸಂದೇಹ ಪಟ್ಟುಕೊಳ್ಳುವ ಎದೆಗಾರಿಕೆಯನ್ನೂ ಅವರು ತೋರುವರು. ತಾವೇ ಅವರಾಗಿ, ಸಹ-ಅನುಭೂತಿಯಿಂದ ವಿಚಾರಿಸುವರು. ವಿರೋಧಿಸಿದವರು ಆ ಬಗೆಯಾದ ವಿಚಾರ-

ಶ್ರದ್ಧೆಗಳುಳ್ಳವರಾಗಲು ಕಾರಣಗಳೇನೆಂಬುದನ್ನು ಶಾಂತವಾಗಿ ತಿಳಿದು ನೋಡುವರು. ಅವರನ್ನು ಸುಮ್ಮನೆ ತಿರಸ್ಕರಿಸುವುದಿಲ್ಲ ಅಥವಾ ಅಸಂಬದ್ಧ ಮಾತಿನಿಂದ ತಮ್ಮ ಮಂಡನೆಯನ್ನೂ ಮಾಡಿಕೊಳ್ಳುವುದಿಲ್ಲ.

ನಾಲ್ವರ ಬಾಯಲ್ಲಿರು

ಎಲ್ಲರಿಗೂ ಬೇಕಾದವನಾಗಲು ಸವಿನುಡಿಯೆ ಮಂತ್ರ; ನಯ ವಿನಯವೇ ಸಾಧನ. ನಿನ್ನಲ್ಲಿ ಹುದುಗಿಕೊಂಡಿರುವ, ಹಲವರಿಗೆ ಆನಂದದಾಯಕವಾದ ಶಕ್ತಿಯನ್ನು ಹೆಚ್ಚಿಸು. ಈ ಶಕ್ತಿಯ ಅಯಸ್ಕಾಂತದ ಬಲದಿಂದ ಎಲ್ಲರನ್ನೂ ನಿನ್ನೆಡೆಗೆ ಆಕರ್ಷಿಸು. ಕೆಲಸ ಸಾಧಿಸುವ ಗಡಿಬಿಡಿಗಿಂತ ಹೆರವರ ಅಂತಃಕರಣವನ್ನು ಗೆಲ್ಲುವ ಹಂಬಲವೇ ಹೆಚ್ಚಾಗಿರಲಿ. ಗುಣವೊಂದಿದ್ದರೆ ಸಾಲದು. ನಯ-ವಿನಯದಿಂದ ಒಡಗೂಡಿದ ಗುಣದ ಬೆಲೆ ನೂರ್ಮಡಿ ಹೆಚ್ಚಾಗುವುದು. ಹಲವರ ಹೃದಯದಮೇಲೆ ಅಧಿಕಾರ ನಡೆಸಲು, ಇದುವೆ ಮಿಗಿಲಾದ ಹಂಚಿಕೆ. ಲೋಕಮಾನ್ಯವಾಗುವುದು ದೈವಾಧೀನ; ಆದರೂ ಮೇಲೆ ಕಾಣಿಸಿದ ಸಾಧನೆಯ ಬಲದಿಂದ ಕೆಲಮಟ್ಟಿಗಾದರೂ ಸಿದ್ಧಿಯನ್ನು ಪಡೆಯಬಹುದು. "ಯೋಗಃ ಕರ್ಮಸು ಕೌಶಲಂ." ಆದುದರಿಂದ ಇದನ್ನು ಸಾಧಿಸುವ ಕೌಶಲ್ಯವೂ ಒಂದು ಯೋಗವೇ. ಸ್ವಭಾವತಃ ಒಳ್ಳೆಯದರ ಕಡೆಗೆ ಒಲವಿದ್ದವರಿಗೆ ಈ ಯೋಗವು ಇನ್ನೂ ಚೆನ್ನಾಗಿ ಫಲಿಸುವುದು. ನಿನ್ನ ಮನಸ್ಸು ವಿಶಾಲವಾಗಿ, ಎಲ್ಲರ ಹಿತವನ್ನು ಹಾರೈಸುವವನು ನೀನಾದರೆ ಎಲ್ಲರೂ ನಿನ್ನ ಹಿತಚಿಂತಕರಾಗುವರು.

ಪರಿಪಕ್ವತೆ

ಉಡುಪು ನಡತೆಯನ್ನು ಹೇಳುತ್ತದೆ, ಆದರೆ. ನಡೆತೆಯಿಂದಲೇ ನಿಜವಾದ ಯೋಗ್ಯತೆ ತಿಳಿಯುತ್ತದೆ. ತೂಕದಿಂದ ಧಾತುಗಳು ಬೆಲೆ ಬಾಳುತ್ತವೆ. ಆದರೆ, ಮಾನವನಿಗೆ ಬೆಲೆ ಆತನ ನಡೆವಳಿಯಿಂದ. ಇದರಲ್ಲಿ ಒಗರು, ಕಸವು ಇದ್ದರೆ ರುಚಿ ಕಡಿಮೆ. ಹಣ್ಣಿನ ನಡೆವಳಿಯೇ ಮಾನವನು ಈ ಲೋಕದಲ್ಲಿ ಪಡೆಯಬೇಕಾದ ಸಿದ್ಧಿ! ಆಗ ಆತನಲ್ಲಿರುವ ಗುಣಗಳ ಬೆಡಗು ಹೆಚ್ಚುವುದು. ಆತನು ಜನರ ಆದರ ಪ್ರೀತಿಗಳ ಕೇಂದ್ರವಾಗುವನು. ಪ್ರಸನ್ನ ಗಂಭೀರತೆಯು, ಪರಿಪಕ್ವತೆಯ ಲಕ್ಷಣ. ಎಗ್ಗರ ಎಡಬಡತನದಲ್ಲಿ, ವಾಚಾಲರ ಹರಟೆ ಹುಚ್ಚಾಟಗಳಲ್ಲಿ ಇದು ಕಾಣದು; ಶಾಂತಿಯಲ್ಲಿ ಮಾತ್ರ ಇರಬಲ್ಲದು. ಪ್ರಸನ್ನ ಗಂಭೀರರ ಧೀರೋದಾತ್ತವಾದ ಒಂದು ಮಾತು, ಮಾತಾಳಿಗಳ ಹಲವು ಪ್ರವಚನಗಳಿಗಿಂತಲೂ ಮಿಗಿಲಾದ ಪರಿಣಾಮವನ್ನು ಮಾಡಬಲ್ಲದು. ಅವರ ಒಂದು ನಡೆಯೆ ಲೋಕದ ನಡೆವಳಿಯಾಗುವುದು. ಹುಡುಗುತನದ ಹುಡುಗಾಟವನ್ನು ಬಿಟ್ಟಮೇಲೆಯೇ ಗಾಂಭೀರ್ಯವೂ, ಪ್ರಭುತ್ವಶಕ್ತಿಯೂ ತಲೆದೋರುವುದು.

ಉದಾರ ಹೃದಯವು

ಕಿರುಕುಳವನ್ನು ಅರಿಯದು. ಉದಾತ್ತ ಕೃತಿಗಳಿಗೆ ಪ್ರೇರೇಪಿಸುವುದು. ನಡೆನುಡಿಯೊಳಗಿನ ಒರಟನ್ನು ಕಳೆದು ಒಪ್ಪಗೊಡುವುದು. ಬಾಳನ್ನು ಇನಿದಾಗಿಸುವುದು. ಎಲ್ಲೆಡೆಯಲ್ಲಿ, ಇದು ಸಿಕ್ಕುವುದಿಲ್ಲ ಏಕೆಂದರೆ, ಇದು ಅಸಾಮಾನ್ಯ ಗುಣ; ಲೋಕಾನುಭವದ ಕಹಿಯಿಂದ ಎದೆ ನಾಲಗೆ ಕೆಡದವರು ಅಪರೂಪ. ಹಗೆಯಾದವನ ಹಿತವನ್ನು ಕೋರುವುದು ಉದಾರ ಹೃದಯವು. ಹೊತ್ತು ಬಂದಾಗ ಅವನಿಗೆ ನೆರವಾಗುವಲ್ಲಿ ಹಿಗ್ಗುವುದು ಉದಾರ ಹೃದಯವು. ಸೇಡಿನ ಸಂಧಿ ದೊರೆತಾಗ ಅದು ಇನ್ನು ಉಜ್ವಲವಾಗುವುದು. ಅನಿರೀಕ್ಷಿತ ಪ್ರೀತಿ ವಿಶ್ವಾಸಗಳನ್ನು ತೋರಿ ಹಗೆತನದ ಕಾರ್ಮೋಡಗಳನ್ನು ನಾಶಮಾಡುವುದು. ಇದರಲ್ಲಿ ಅಮಾತ್ಯರ ದೂರದೃಷ್ಟಿಯ ಧೋರಣೆಯೂ ಇದೆ, ರಾಜ್ಯತಂತ್ರದ ಮಂತ್ರವಿದೆ. ಉದಾರ ಹೃದಯಕ್ಕೆ ಯಾರನ್ನೂ ಗೆದ್ದು ಅಂಕೆಯಲ್ಲಿರಿಸುವ ಆಸೆಯಿಲ್ಲ. ಬಾಳಿನ ಮರುಭೂಮಿಯೊಳಗಿಂದ ನಡೆವಾಗಿನ ಕಡುಬಿಸಿಲಿನ ತಾಪವನ್ನು ಉದಾರ ಹೃದಯವು ಬಲ್ಲದು. ತೊಟ್ಟು ನೀರು ದೊರೆಯದೆ ತಾನು ತೊಳಲಿದ್ದರೂ, ತನ್ನೊಳಗಿನ ಪ್ರೇಮಜಲವನ್ನು ಬತ್ತಗೊಡದೆ ಸಾಧ್ಯವಿದ್ದಷ್ಟು ಜನರಿಗೆ ಅದನ್ನು ಕೊಡುವ ಹಂಬಲವು ಇದಕ್ಕೆ ಯಾವಾಗಲೂ ಇರುತ್ತದೆ.

ಕರ್ಣನ ಮೂರುಚಿತ್ರಗಳು

ಅರಿಕೆ

ಇದು ಒಂದು ಉಪನ್ಯಾಸವೆಂದು ಪ್ರಕಟವಾಗುತ್ತಿದ್ದರೂ ಇದನ್ನು ಆ ಬಗೆಯಾದ ಶೈಲಿಯಲ್ಲಿ ಬರೆದಿಲ್ಲ. ಆದ ಉಪನ್ಯಾಸವು ೧-೧/೨ ತಾಸು. ಆಗ ಆಡುವ ಮಾತಿನ ಅಂದವೆ ಬೇರೆಯಿರಬೇಕಾಗುತ್ತದೆ. ಅಲ್ಲದೆ, ನಮ್ಮ ಜನಗಳಲ್ಲಿ ವ್ಯಾಖ್ಯಾನಗಳಿಗೆ ಬರುವವರಲ್ಲಿ ವಿಚಾರದ ವೈಭವಕ್ಕಿಂತ, ಮನೋರಂಜನೆಯ ವಿಲಾಸವನ್ನು ಹಾರಯಿಸುವವರೆ ಬಹಳ. ಅದರಿಂದ ಹಲವು ಪಟ್ಟಣಗಳಲ್ಲಿ ಮೃತಾತ್ಮರ ದುಃಖಸೂಚಕ ಸಭೆಗಳಲ್ಲಿಯೂ ಪ್ರೇಕ್ಷಕರನ್ನು ಆಕರ್ಷಿಸುವುದಕ್ಕಾಗಿ ಸಂಗೀತ, ನೃತ್ಯದ ಕಾರ್ಯಕ್ರಮವನ್ನೂ ಕೊನೆಗೆ ಇಟ್ಟಿರುವುದಾಗಿ ಪ್ರಸಿದ್ಧಿಸಿರುವುದನ್ನು ಕಾಣಬಹುದಾಗಿದೆ! ಕುಮಾರವ್ಯಾಸ, ಪಂಪರ ಕೃತಿ ಮತ್ತು ಸಂಸ್ಕೃತ ಭಾರತ ಇಂತಹ ಮಹಾ ಗ್ರಂಥಗಳಲ್ಲಿ ಕುಂದುಕೊರತೆಗಳುಂಟೆಂದು ಒಮ್ಮೆಲೆ ಹೇಳುವುದು ಒಂದು ಬಗೆಯ ಅವಿಚಾರದ ಸಾಹಸ, ಔದ್ಧತ್ಯವಾದೀತೆಂದು ಬಗೆದು ಈ ಸಂದೇಹಗಳನ್ನು ನನ್ನಲ್ಲಿಯೆ ಇಟ್ಟುಕೊಂಡಿದ್ದೆ. ಆದರೆ, ಹಲವು ಬಗೆಯಾಗಿ ವಿಚಾರ-ಚರ್ಚೆಗಳನ್ನು ನಡೆಸಿದ ನಂತರವೂ ನನ್ನ ಮೂಲಪ್ರಶ್ನೆಗೆ ಸರಿಯಾಗಿ ಯಾರಿಂದಲೂ ಉತ್ತರವು ದೊರೆಯದ್ದರಿಂದ ಕಂನಾಡ ಬಲ್ಲಿದರ ಎದುರಿಗೆ ನನ್ನ ಈ ವಿಚಾರಗಳನ್ನು ಮಂಡಿಸುವುದಕ್ಕೆ ಮನಸು ಮಾಡಿದ್ದೇನೆ.

ಇಂದಿನ ಪರಿಣಾಮದ ಕಾರಣವು ನಿನ್ನೆಯಲ್ಲಿರುತ್ತದೆ. ಈ ದೃಷ್ಟಿಯಿಂದ ನಮ್ಮ ಇಂದಿನ ರಾಷ್ಟ್ರೀಯ ಅವನತಿಯ ಬೇರುಗಳು, ನಮ್ಮ ಜನಗಳಿಗೆ ಆದರ್ಶವಾಗಿ ದಿನದ ನಡೆವಳಿಗೆ ಸ್ಫೂರ್ತಿಯನ್ನೀವ ಹಿಂದಿನ ಸಾಹಿತ್ಯದಲ್ಲಿ ಸೂಕ್ಷ್ಮವಾಗಿ ಎಲ್ಲಿಯಾದರೂ ಅಡಗಿಕೊಂಡಿರಲೇಬೇಕೆಂಬುದರಲ್ಲಿ ಸಂದೇಹವಿಲ್ಲ. ಈಗಿನ ನಮ್ಮ ಕೀಳ್ಮೆಗೆ ಕಾರಣವಾದ ಹಲವು ಮಾತುಗಳಲ್ಲಿ ಒಂದನ್ನು ಕಂಡುಕೊಂಡ ಸಮಾಧಾನವು ಈ ಪ್ರಕಟನೆಯಿಂದ ನನಗೆ ದೊರೆಯುತ್ತಲಿದೆ. 'ನಿನ್ನೆ' ಎಲ್ಲವೂ ದೋಷರಹಿತವೇ ಆಗಿದ್ದರೆ ಇಂದು ನರಳುವ, ಬಳಲುವ ಪಾಡು ಏಕೆ ಉಂಟಾಗುತ್ತಿತ್ತು? ನಿನ್ನೆಯೊಳಗಿನ ಗುಣದೊಡನೆ ಬೆರೆತುಕೊಂಡು ಕುಂದು-ಕೊರತೆಗಳನ್ನೂ ಗುಣವೆಂದೇ ಎತ್ತಿ ಕೊಂಡಾಡುವುದು ನಮ್ಮ ನಾಳಿನ ನೆಮ್ಮದಿಗೆ ಸಾಧನವಾಗದು. ಆದುದರಿಂದ ಹಿಂದಿನದು ಎಷ್ಟೇ ಹಿರಿದಾಗಿದ್ದರೂ ಏಳ್ಗೆಯನ್ನು ಹಾರಯಿಸುವ ಜನಾಂಗದವರು ಅದರ ಗುಣದೋಷಗಳನ್ನೂ ಸರಿಯಾಗಿ ಅರಿತುಕೊಳ್ಳುವುದು ಕರ್ತವ್ಯವಾಗಿದೆ.

'ಜಯಕರ್ನಾಟಕ' ಪತ್ರಿಕೆಯಲ್ಲಿ ಇದರ ಮುಖ್ಯಾಂಶಗಳು ಮೊದಲು ಪ್ರಕಟವಾದುವು. ಪಂಪ-ಕುಮಾರವ್ಯಾಸರ ಗ್ರಂಥಗಳ ಅಧ್ಯಯನವು ಹಲವು ಕಾಲದಿಂದ ನಡೆದಿದ್ದರೂ ಇದರೊಳಗಿನ ಈ ಮಾತುಗಳು ಯಾರಿಗೂ ಹೊಳೆಯದೇ ಹೋದುದು ಸೋಜಿಗದ್ದಾಗಿದೆ. ಮಹಾಕವಿಗಳಲ್ಲಿ ದೋಷಗಳನ್ನು ಎಣಿಸುವುದೆ? ಎಂದಿಗೂ ಅಲ್ಲದ ಮಾತು; ಪ್ರತಿಯೊಂದು ಪದವನ್ನೂ ಎತ್ತಿ ಕೊಂಡಾಡುವುದೇ ಹೊರತು ಕುಂದನ್ನೆಣಿಸಲಾಗದು; ಎಂಬುದೆ ಸಾಮಾನ್ಯವಾಗಿ ಈವರೆಗಿನ ನಮ್ಮವರ ಮನಸ್ಥಿತಿಯಿರುವುದರಿಂದ ಇದರೊಳಗಿನ ವಿಚಾರಗಳನ್ನೋದಿ ಬೆರಗಾದವರೆ

ಬಹಳ. ಮಾತು ಸರಿಯೆನಿಸಿದರೂ ಒಪ್ಪುವುದಕ್ಕೆ ಧೈರ್ಯಸಾಲದವರು ಹಲವರು. ನನ್ನ ವಿಚಾರ ಸರಣಿಗೆ ಶ್ರೀ ವ್ಯಾಸರ ಬೆಂಬಲವುಂಟೆಂದು ತಿಳಿದ ಬಳಿಕ, 'ಸರಿ; ನಿಮ್ಮ ಮಾತೂ ನಿಜ'ವೆಂದು ಕೆಲರು ಒಪ್ಪಲು ಸ್ವಲ್ಪ ಮನಸ್ಸುಳ್ಳವರಾದರು. ಇನ್ನು ಒಬ್ಬಿಬ್ಬರು ಪಂಪ-ಕುಮಾರವ್ಯಾಸರ ಕರ್ಣನ ಆ ನಡೆವಳಿಯನ್ನು ತಾವು ಸಮರ್ಥನ ಮಾಡುವುದಾಗಿಯೂ ತಿಳಿಸಿರುವರು. ಹಾಗಾದಲ್ಲಿ ಸಂತೋಷ; ಒಂದು ಸಮಸ್ಯೆಯ ಪರಿಹಾರವಾದ ಸಮಾಧಾನವು ನನಗೆ ದೊರೆಯುವುದು. ಸೂರ್ಯನಲ್ಲಿ ಕಪ್ಪುಕಲೆಗಳಿವೆಯೆಂದು ಸಂಶೋಧಕರು ಕಂಡಿಹಿಡಿದುದರಿಂದ ಸೂರ್ಯನ ಬೆಲೆಯು ಸ್ವಲ್ಪವೂ ಕಡಿಮೆಯಾಗಿಲ್ಲ; ಆಗಲಾರದು. ಅದನ್ನು ಕಂಡುಹಿಡಿದುದರ ಲಾಭವು ಮಾತ್ರ ಒಂದು ಆಗಿದೆ. ಈ ಕಪ್ಪುಕಲೆಗಳು ಭೂಮಿಯ ಕಡೆಗೆ ಬಂದಾಗ ಲೋಕದಲ್ಲಿ ಬರಗಾಲವು ಕಾಣಿಸಿಕೊಳ್ಳುವುದೆಂದು ಬಲ್ಲಿದರು ಕಂಡುಹಿಡಿದಿದ್ದಾರೆ. ನಮ್ಮ ಮಹಾಕವಿಗಳ ಕಾವ್ಯದೊಳಗಿನ ಕುಂದುಗಳೇ ಲೋಕದ ಆದರ್ಶವಾದಾಗ ನಮ್ಮ ನಾಡ ನಡೆವಳಿಯೂ ಬಡವಾಗುವುದೆಂದು ಮೇಲಣ ಸಾಮ್ಯದಿಂದ ನಿಶ್ಚಿತವಾಗಿ ಹೇಳಬಹುದಾಗಿದೆ. ನಾನಿಲ್ಲಿ ಎತ್ತಿ ತೋರಿಸಿದುವು ಕುಂದುಗಳೇ ನಿಜವಿದ್ದರೆ ಇನ್ನು ಮುಂದೆ ಇಂತಹ ತಪ್ಪಾಗದಂತೆ ನಾಡಿಗರು ಆದರಿಂದ ಎಚ್ಚರಪಡೆಯಬಹುದೆಂದು ಆಶಿಸುತ್ತೇನೆ.

ತನ್ನ ಮಹತ್ವಾಕಾಂಕ್ಷೆಗಳು ಮಣ್ಣುಗೂಡಿದುವೆಂದು ಆಜನ್ಮವೂ ಮಿಡುಕುವ ಕರ್ಣನು, ಆತನ ಕೀಳ್ಮೆಗೆ ಕಾರಣಳಾದ ವ್ಯಕ್ತಿ- ಕುಂತಿಯನ್ನು ಕಂಡಾಗ ತಾಯಿಯಾದರೂ ಅವಳನ್ನು ಹಿಗ್ಗಿ ಸ್ವಾಗತಿಸುವುದು ಸಹಜವೆ? ಜೋಳದ ಪಾಳಿಯನ್ನು ನೆನೆವೆನೆಂಬ ಕರ್ಣನು (ಅರ್ಜುನಾದಿಗಳು ತನ್ನ ತಮ್ಮಂದಿರೆಂದು ತಿಳಿದ ಬಳಿಕ) ಪಾಂಡವರನ್ನು ಹೇಗೆ ಕೊಲ್ಲಲಿ, ತನ್ನಿಂದ ಅದು ಆಗದು, ತಾನು ಕೊಲ್ಲಲಾರೆ ಎಂದು ನಿರ್ಧರಿಸಿದ ಮೇಲೂ ತನ್ನ ಒಡೆಯನ ಸೇನಾಪತಿ ಪದವನ್ನು ಅಶ್ವತ್ಥಾಮನಿಗೆ ಕೊಡಗೊಡದೆ ತಾನೇ ಸ್ವೀಕರಿಸಲು ಮುಂದೆ ಬಂದುದು ಸರಿಯೆ? ಕಾಳಗದಲ್ಲಿ ಅರ್ಜುನನ ಎದೆಗೆ ಬಾಣ ಹೂಡಿದರೆ ಆತನು ನಿಜವಾಗಿಯೆ ಸಾಯುವನು; ಕಾರಣ ಹಾಗೆ ಮಾಡಲಾರೆ; ಕೊರಳಿಗೇ ಗುರಿಯಿಡುವುದು ಲೇಸೆಂದು ಆತನು ಬಗೆದನೆಂದು ವರ್ಣಿಸಿದುದು, ಒಡೆಯನಿಗಾಗಿ ಪಾಂಡವರನ್ನು ಸಂಹರಿಸಿ ಸೋಲಿಸುವೆನೆಂದು ಹೊರಟ ಕರ್ಣನ ನನ್ನಿಗೆ, ಕೃತಜ್ಞತೆಗೆ ಸರಿಹೋಗುವುದೆ? ಎಂಬೀ ಬಗೆಯಾಗಿ ನನ್ನಲ್ಲಿ ತಲೆದೋರಿದ ಸಂದೇಹಗಳನ್ನು ಬಲ್ಲಿದರ ಪರಾಮರ್ಶೆಗಾಗಿ ಅರಿಕೆಮಾಡಿಕೊಂಡಿದ್ದೇನೆ.

ಕನ್ನಡ ಸಾಹಿತ್ಯ ಪರಿಷತ್ತಿನವರು, ದಿವಂಗತ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಸ್ಮಾರಕ ಉಪನ್ಯಾಸ ಮಾಡಲು ಎಡೆಕೊಟ್ಟು, ಆ ಪೂಜ್ಯ ಮಹನೀಯರಿಗೆ ನನ್ನ ಆದರದ ಕಾಣಿಕೆಯನ್ನು ಒಪ್ಪಿಸುವ ಸುಸಂಧಿಯನ್ನು ಒದಗಿಸಿಕೊಟ್ಟುದಕ್ಕಾಗಿ ನಾನು ಪರಿಷತ್ತಿಗೆ ಕೃತಜ್ಞನಾಗಿದ್ದೇನೆ. ಇದರ ಅಚ್ಚಿಗೆ ನೆರವೆಂದು ಅನಿರೀಕ್ಷಿತವಾಗಿ ತಾವಾಗಿಯೆ ಕೆಲವೊಂದು ನೆರವನ್ನು ಸಲ್ಲಿಸಿದ ಶ್ರೀಮಾನ್ ಪಾಟೀಲ ಮಾಧವರಾಯರಿಗೆ ನನ್ನ ವಂದನೆಗಳು.

ಭಾರತ ಹುಣ್ಣಿವೆ

೫-೨-೪೭

ಶಂ. ಬಾ. ಜೋಶಿ

ಮುನ್ನುಡಿ

He called tragedy a deception which is better to cause than not to cause, to succumb to it, shows the greater power of artistic appreciation than not to.

-Gourgeous

ಯಾವುದೊಂದು ಸಂಸ್ಕೃತಿಯನ್ನು ಮೂಲಗಾಮಿಯಾಗಿ ನೋಡುವ ಚಿಕಿತ್ಸಕನಿಗೆ ಆ 'ಸಂಸ್ಕೃತಿ'ಯ ಜೀವನಮಟ್ಟ, ಜೀವನ ವಿಧಾನವನ್ನು ರೂಪಿಸಿದ, ರೂಪಿಸುತ್ತಿರುವ 'ಸಾಹಿತ್ಯ'ದ ಸ್ತರಗಳನ್ನೂ ಕೂಡ ವಸ್ತುನಿಷ್ಠವಾಗಿ ನೋಡಬೇಕಾಗುತ್ತದೆ. ಆಯಾ 'ಸಂಸ್ಕೃತಿ'ಯ ವೈಪರೀತ್ಯಗಳೂ ವಿಸಂಗತಿಗಳೂ ವೈರುದ್ಧ್ಯಗಳೂ ಆಯಾ ಕಾಲದ 'ಸಾಹಿತ್ಯ'ದ ಆಹಾರವಾಗುತ್ತದೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮಹಾಭಾರತ, ರಾಮಾಯಣ ಸಂಸ್ಕೃತಾದಿ ಮಹಾಕಾವ್ಯಗಳ ಬಗೆಗೂ ಇನ್ನಿತರ 'ಕಲಾಪ್ರಕಾರ'ಗಳ ಬಗೆಗೂ ಈ 'ನಿಟ್ಟಿ'ನಲ್ಲಿ ಶೋಧನೆ, ಅಗತ್ಯವಿದೆ-ಎಂಬುದನ್ನು ಒತ್ತಿ ಹೇಳಬೇಕಾಗಿದೆ. 'ಮಹಾಭಾರತ'ದ ತಾತ್ವಿಕ ಜೀವನನಿಷ್ಠ ಆಶಯಗಳ ಕಡೆಗೆ ಮುಖ ಮಾಡಿ ನಿಂತು ಚರ್ಚೆಗೆ ಬಳಸಿಕೊಳ್ಳುವುದರಲ್ಲಿ ಈ 'ಅರ್ಥಗ್ರಹಣ'ವನ್ನು ಗಮನಿಸಬೇಕಾಗುತ್ತದೆಂದು ತೋರುತ್ತದೆ.

ಈ ಮೇಲಿನ ಮಾತುಗಳನ್ನು ಹೇಳುವುದಕ್ಕಿಂತ ಮುಂಚೆ 'ಮಹಾ ಭಾರತ' 'ರಾಮಾಯಣ' ಕುರಿತ ನನ್ನ ಅಧ್ಯಯನದ ಬೇರೆ ಬೇರೆ ನಿಲುವುಗಳನ್ನು ತಿಳಿಸಬೇಕಾಗಿದ್ದು, ಇದು ಇಲ್ಲಿ ಅಪ್ರಾಸಂಗಿಕ ಎಂದು ನಾನು ಬಗೆಯಲಾರೆ! ಪ್ರೇರಣಾದ್ವಂದ್ವಕ್ಕೆ ಪ್ರಾಧಾನ್ಯ ಕೊಡುವ 'ಮಹಾಭಾರತ'ದ ಆಶಯದ 'ನೆಲೆಯೇ ಈ ಹಿಂದೆ ನನಗೆ ತುಂಬಾ ಕಾಡಿಸಿತ್ತು. ಈ ವಿಚಾರದ ಹೆಚ್ಚಿನ ತಿಳಿವಳಿಕೆಗಾಗಿ ಮತ್ತೆ - ವಿ. ಎಸ್. ಸುಕಟಣಕರರ Prolegomena ಮತ್ತು on the meaning of Mahabharata ಗ್ರಂಥಗಳನ್ನು ಓದಿದೆ! ಸ್ವಲ್ಪ ರೀತಿಯ ಸಮಾಧಾನ ಆಯಿತು. ಆದರೂ ಸುಕಟಣಕರರು ಮಹಾಭಾರತದ ಮೋಡಿಗೆ, ಪ್ರಭಾವಕ್ಕೆ ಒಳಗಾಗಿದ್ದರೆಂಬುದೂ ಸತ್ಯವಾಗಿತ್ತು. ಅವರ ಕೃತಿಗಳ ಮೇಲಿನಿಂದ ಈ ಆಶಯವು ವ್ಯಕ್ತವಾಯಿತು. ಇದರಿಂದ ಭಾರತದ ತಳಪಾಯದ ವೈಶಿಷ್ಟ್ಯವನ್ನು ಸಾಂಪ್ರದಾಯಿಕ ರೀತಿಯಲ್ಲಿ ತಿಳಿದಿದ್ದ, ನನ್ನ ಹಿತೈಷಿಗಳೂ ಆಗಿದ್ದ ಒಬ್ಬ ಹಿರಿಯ ವಿದ್ವಾಂಸರ ಬಳಿ ಚರ್ಚಿಸಲು ಹೋದೆ! ಮಹಾಭಾರತದೊಳಗಿನ 'ಕೃಷ್ಣ ಮಹಾತ್ಮ್ಯೆ'ಯ ಸಂದರ್ಭದಲ್ಲಿ ಭಾವುಕರಾದ ಅವರು ಮುಂದೆ ನಾನು ಪ್ರಶ್ನಿಸಿದ ಸಂಗತಿಗಳಿಗೆ ಯಾವ ಉತ್ತರವೂ ಅವರಿಂದ ನಿರೀಕ್ಷಿಸಲು ಆಗಲಿಲ್ಲ.

ಭಾರತೀಯರ ಮನೋಧರ್ಮವನ್ನು, ಅವರ ಬದುಕಿನ ವಿಚಿತ್ರ ಧಾಟಿಯನ್ನು ರೂಪಿಸುತ್ತ ಬಂದ ತಾತ್ತ್ವಿಕ ನೆಲೆಯ ಆಶಯಗಳನ್ನು ಈ ಸಂಗತಿಗಳ ನೆರವಿನಲ್ಲಿ ಇನ್ನೂ ಹೆಚ್ಚಿಗೆ ಸ್ಪಷ್ಟಪಡಿಸಬಹುದೆಂಬ ಆಶಯವು ಈ ಮೂಲಕ ತಲೆದೋರಿತು. ಉದಾಹರಣೆಗಾಗಿ ಮೇಲಿನ ಒಂದು ಅನುಭವವನ್ನು ಉದಾಹರಿಸಿದ್ದೇನೆ. ಅಷ್ಟೇ!

ಮಹಾಭಾರತದ ಬಗೆಗೆ ಇದುವರೆಗೂ ಬಂದ ಅಧ್ಯಯನದ ಸಾಮಗ್ರಿಗಳ ಅಂಶಗಳು ಅದರ ಬಹಿರ್‌ವಲಯದ ಸಾಕ್ಷಿಯ ಕಡೆ ಮುಖಚಾಚಿ ನಿಂತಂಥವುಗಳು. ಮಹಾಭಾರತದ ಮೋಹಕತೆಗೆ, ಭಕ್ತಿಗೆ, ರಸಸ್ಯಂದಿತನಕ್ಕೆ ಬೆರಗಾದವರೇ ಹೆಚ್ಚು. ಆದರೆ, ಇದೇ ಸಂದರ್ಭದಲ್ಲಿ ನಾವು 'ಮೂರ್ತಸಂಸ್ಕೃತಿ'ಯ ಬಿಂಬವನ್ನು ಮಹಾಭಾರತದಲ್ಲೂ ಕಾಣುತ್ತಿರುವಾಗ ಈ ಬಿಂಬಕ್ಕೆ ಅರ್ಥಮೀಮಾಂಸೆಯ ತಾತ್ತ್ವಿಕ ಆಶಯದ ಕಡೆಗೂ ಗಮನ ಕೊಡಬೇಕಾಗುತ್ತದೆ. ಜೀವನ ವಿಶ್ವದ ದೃಷ್ಟಿಯಿಂದ ಕಲಾಕೃತಿ (ಸಾಹಿತ್ಯ ಕೃತಿ)ಯೊಂದನ್ನು ವಿಮರ್ಶಿಸಿ, ಸಮೀಕ್ಷಿಸಿ ನೋಡುವುದು ಅತ್ಯಗತ್ಯ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. 'ಮಹಾಭಾರತ'ವನ್ನು ಈ ನಿಟ್ಟಿನಲ್ಲಿ ನೋಡುವ ಆವಶ್ಯಕತೆ ದಿನದಿನಕ್ಕೂ ಹೆಚ್ಚಾಗಬೇಕಿದೆ.[೧] ಇಲ್ಲಿಯೇ 'ಸಾಹಿತ್ಯ' ಸಂದರ್ಭದ ಇತಿ-ಮಿತಿಗಳನ್ನು ಕುರಿತು ಹೇಳಬೇಕಾಗಿದೆ! ನಾವು ಇದು ವರೆಗೂ ಪಾಲಿಸಿಕೊಂಡು ಬಂದಿರುವ, ಸಾಹಿತ್ಯ ಚರ್ಚೆಯ ಸಂಭ್ರಾಮಕಾರಿವಾದ ಮಾತುಗಳನ್ನು ಬದಿಗಿಟ್ಟು, - ಈ ಸಾಹಿತ್ಯ, ಪ್ರಕಾರವನ್ನು 'ಜೀವನ' ಮತ್ತು 'ಸಂಸ್ಕೃತಿ' ಯ ಅನ್ಯೋನ್ಯತೆಯಲ್ಲಿ ನಾವು ಪರೀಕ್ಷಿಸಿದ್ದೇವೆಯೆ ಅಥವಾ ಗುರುತಿಸುತ್ತಿದ್ದೇವೆಯೇ ಅನ್ನುವ ಮಾತೊಂದು ಇಲ್ಲಿ ಬಹುಮುಖ್ಯವಾಗಿ ಕಾಡುತ್ತದೆಂದು ನನಗೆ ಅನಿಸಿದೆ.

ಸಾಹಿತ್ಯ, ಜೀವನ ಮತ್ತು ಸಂಸ್ಕೃತಿ ಈ ಮೂರರಲ್ಲಿ ಇರಲೇಬೇಕಾದ ಅನ್ಯೋನ್ಯವು ಇಂದು ವಿಕೃತಗೊಂಡಿದೆ.[೨] ಹಾಗೆಯೇ ಮಹಾಭಾರತದಂಥ ಸಾಹಿತ್ಯ ಪ್ರಕಾರದೊಳಗಿನ ಜೀವನಸ್ಥ ಆಶಯಗಳು ಹೇಗೆ ವಿಕೃತ ಹಾಗೂ ವೈರುದ್ಧ್ಯದ ನೆಲೆಗಳೊಳಗೆ ತಲುಪುತ್ತಿವೆ-ಎಂಬುದನ್ನು ಗಮನಿಸಬೇಕಾಗಿದೆ. ಉಚ್ಚ ಸಾಹಿತ್ಯ ಕಲಾಪ್ರಕಾರಗಳನ್ನು ಕುರಿತು ಈ ನಿಟ್ಟಿನಲ್ಲಿ ಆಲೋಚನೆಗೆ ಹಚ್ಚುವುದರ ಆಗತ್ಯವಿದೆ. 'ಇಡೀ ಮಹಾಭಾರತ ಜೀವಿತದ ಪಾತಳಿಗೆ ಬಂದು ನಿಂತಿದೆ'[೩] ಎಂಬ ಶಂ. ಬಾ. ಅವರ ಅಭಿಪ್ರಾಯವನ್ನು ಬೇರೆ ಬೇರೆ ನಿಟ್ಟಿನಿಂದ ಸಮೀಕ್ಷಿಸುವ ಅಗತ್ಯವಿದೆ. ಜೀವನ ಮತ್ತು ಜೀವಿತ ಈ ಎರಡೂ ಪರಿಭಾಷೆಗಳ ನೆರವಿನಲ್ಲಿ 'ಸಂಸ್ಕೃತಿ'ಯ ಅರ್ಥಗ್ರಹಣವನ್ನು ಸಂಸ್ಕೃತಿಯ ನೆಲೆಗಳನ್ನು; ಸ್ಪಷ್ಟವಾಗಿಸಿಕೊಳ್ಳಬೇಕಾದುದ್ದರ ಅಗತ್ಯವಿದೆ- ಎಂದು ತೋರುತ್ತದೆ!

ಇದು ವರೆಗೂ ನಡೆದ ಮಹಾಭಾರತದ ಅಧ್ಯಯನ ಮತ್ತು ಚರ್ಚೆಗಳು ಎರಡು ದೃಷ್ಟಿಕೋನಗಳನ್ನು ಹೊತ್ತುಕೊಂಡು ಹೊರಟಂಥವುಗಳು. ಆಧ್ಯಾತ್ಮಿಕದೃಷ್ಟಿಯ ಮೂಲಕ ದಿವ್ಯಕೃಷ್ಣಕತೆಯಾಗಿ ನೋಡುವುದು ಒಂದಾದರೆ; ಕಾವ್ಯಪ್ರಕ್ರಿಯೆಯ ದೃಷ್ಟಿಯಿಂದ ನೋಡಿ ಆನಂದಿಸಿದ್ದು ಮತ್ತೊಂದು ಮಾರ್ಗವಾಗಿದೆ! ಆದರೆ, ಇವೆರಡಕ್ಕೂ ಬೇರೆಯಾದ ಜೀವನ ತಾತ್ತ್ವಿಕ ಆಶಯಗಳ ಅರ್ಥಗ್ರಹಣದ ನೆಲೆಯಿಂದ ಮಹಾಭಾರತವನ್ನು ನೋಡುವುದು ಅಗತ್ಯವಿದೆ-ಎಂಬುದರ ಉದ್ದೇಶಕ್ಕಾಗಿ ಈ ಮಾತುಗಳನ್ನು ಸೂಚಿಸಬೇಕಾಯಿತು.

---

೧. ಶಂ.ಬಾ. ಜೋಶಿ ಅವರು ಹೇಳುವ ಈ ಮಾತಿನ ಕಡೆ ಓದುಗರ ಗಮನವನ್ನು ಸೆಳೆಯಲು ಬಯಸುತ್ತೇನೆ: "ಮೂರ್ತ ಸಂಸ್ಕೃತಿ ಹಾಗೂ ಇದರ ಇತಿಹಾಸದ ಸಂದರ್ಭದಿಂದ ಈ ಬಗೆಯ ಐತಿಹಾಸಿಕ ಕೃತಿಗೆ-ಆಕೃತಿಗೆ ಕಾರಣವಾದ ತಾತ್ತ್ವಿಕ ಪ್ರೇರಣಾ ಸ್ವರೂಪವು ಎಂಥದು ಎಂಬುದನ್ನು ಗ್ರಹಿಸಿಕೊಳ್ಳುವುದು ಹೆಚ್ಚು ಸುರಕ್ಷಿತ" (ಮಾನವಧರ್ಮದ ಆಕೃತಿ: ಪ್ರಕಟನೆಯ ಹಿಂದು ಮುಂದು; ಪು: ೧೧)

೨. ೪೭ನೇ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ, ೧೯-೧೧-೭೯

೩. 'ಮಾನವಧರ್ಮದ ಆಕೃತಿ'-ಶಂ. ಬಾ. ಜೋಶಿ; ಕಾಲಗತಿ ಪ್ರಕಾಶನ ಬೆಳಗಾಂವಿ ಪು : ೧೩೩, ೧೯೭೯

ಮಹಾಭಾರತದ ಇಡಿಯಾದ ಆಕೃತಿಯು Form ಯಾವುದು? ಎಂಬುದರ ಕಡೆ ವಿದ್ವಾಂಸರ ಗಮನವೂ ಹರಿಯದೆ ಹೋಗಿದೆ.[೪] ಇಲ್ಲಿ ವಿವರಿಸಬೇಕಾಗಿರುವ ಮುಖ್ಯ ಅಂಶಗಳು ಇಷ್ಟು : ಮಹಾಭಾರತದ ಕಟ್ಟಡ (Structure) ದ ಆಶಯ (Content) ಯಾವುದು? ಈ ಜೀವನ ವಿಶ್ವಸ್ಥ ಕಟ್ಟಡದ ಪತನಕ್ಕೆ ಕಾರಣರಾದವರು ಯಾರು? ಇದರೊಳಗೆ ಬರುವ ಸರ್ಪಯಾಗದ ಕತೆಯೊಳಗಿನ ಸಾಂಕೇತಿಕ ಆಶಯ ಯಾವುದು? ಅಭೀದ್ಧಾತ್ (instinct) ಶಕ್ತಿಯ ಪತನಕ್ಕೆ ಕಾರಣವಾದ ಕೃತಕಸೃಷ್ಟಿಯ ಸ್ವರೂಪದ ಕತೆಗಳು ಯಾವುವು? ಎಂಬುದರ ವಿಶ್ಲೇಷಣೆಯ ಮೇಲೆ ಇದರಲ್ಲಿರುವ ಸಮಸ್ಯೆಗಳು ಮತ್ತು ವ್ಯಾಸನ ಚಾಕಚಕ್ಯತೆಗಳು ಬಯಲಿಗೆ ಬರಬಹುದಾಗಿದೆ; ಬರಬೇಕಾಗಿದೆ! ಇಡಿಯಾಗಿ ಮಾನವ ಜೀವನವನ್ನು ಗುರುತಿಸುವುದರ ಮೂಲಕವೇ ಮಹಾಭಾರತದ ಕತೆಯೊಳಗಿನ ಸಾಂಕೇತಿಕ ಆಶಯಗಳ ಸ್ವರೂಪದ ಅರ್ಥಗ್ರಹಣವು ಸಾಧ್ಯವಾಗಬಹುದು. ಉದಾಹರಣೆಯಾಗಿ ಸರ್ಪಯಾಗ ಮಾಡುವ ಪರೀಕ್ಷಿತನು 'ಇಂದ್ರಾಯ ತಕ್ಷಕಾಯ ಸ್ವಾಹಾ' ಅನ್ನುವುದರೊಳಗಿನ ಇಂದ್ರ ಮತ್ತು ತಕ್ಷಕ ಇವರಿಬ್ಬರನ್ನೂ ಒಂದೇ ಭೂಮಿಕೆಗೆ, ಪಾತಳಿಗೆ ತರುವುದರ ಹಿನ್ನೆಲೆಯಲ್ಲಿರುವ ತಾತ್ವಿಕ ಆಶಯ ಯಾವುದು? ಅನ್ನುವ ಮುಖ್ಯ ಪ್ರಶ್ನೆಯೊಂದರಿಂದ ಇದರ ಬೆನ್ನೆಲುಬುಗಳ ಸ್ವಸ್ವರೂಪ ದರ್ಶನವನ್ನು ಗುರುತಿಸಬೇಕಾಗಿದೆ!

ಇಡಿಯಾಗಿ ಇದರ ವಿವರಣೆಗೆ ತೊಡಗುವುದರ ಮೊದಲು ಮಹಾಭಾರತದ ಆಕೃತಿ ಮತ್ತು ಆಶಯಕ್ಕೂ, ಋಗ್ವೇದದ ಆಕೃತಿ ಮತ್ತು ಆಶಯಕ್ಕೂ, ಎಷ್ಟು ಹೇಗೆ ಸಮೀಕರಣವಾಗುತ್ತಿದೆ ಎಂಬುದರ ವಿವರಣೆಯ ಕಡೆ ನೋಡಬಹುದು. ಋಗ್ವೇದದ ಪ್ರಧಾನ ದೈವತ ಇಂದ್ರ. ಆದರೆ, ಇಂದ್ರನನ್ನು ಇಂದ್ರಿಯದ ಪಾತಳಿಗೆ ತಂದು ನಿಲ್ಲಿಸಲಾಗಿದೆ! 'ಅಹಲ್ಯಾ ಜಾರ' ನೆಂಬ ಪುರಾಣದ ಸಾಂಕೇತಿಕ ಕಥೆಯೊಳಗೆ ಇದರ ಮುಂದಿನ ಪತನವನ್ನು ಗಮನಿಸಬೇಕಾಗಿದೆ! ವೃತ್ರ' ಮಹಾತ್ಮೆಯ ಪರಂಪರೆಯು ಜಾಡು ಹಿಡಿದು ನಡೆದದ್ದನ್ನು ಕೂಡ ಇದರ ಜೊತೆಗೆ ತುಲನೆ ಮಾಡಬಹುದು. 'ವೃತ್ರಾತ್ ಜಾತೋ ದಿವಾಕರಃ' ಅನ್ನುವ ಋಕ್ ಒಂದೇ ಸಾಕು ಈ ತಿರುವು-ಮುರುವು ಘಟಿಸಿರುವುದಕ್ಕೆ!

ಮಹಾಭಾರತದಲ್ಲಿ ಇಂದ್ರನ ಮಗ, ಪ್ರಕಾಶಪುತ್ರ ಅರ್ಜುನನನ್ನು (ವೈವಸ್ವತಮನು) ನರ (ಳ) ಎಂದು ಹೆಸರಿಸಿ ಮನುಜತ್ವದ (ಜೀವನದ) ಪಾತಳಿಯಿಂದ ಜೀವಿತದ ಹಂತಕ್ಕೆ ತಂದಿರಿಸಿದ್ದಾನೆ! ವೇದವ್ಯಾಸನ ಈ ಕೈಚಳಕವೂ ಕೂಡ ಬೇರೆ ಬೇರೆ ಬಗೆಯಲ್ಲಿ ಆಗಿರುವುದರ ಉದಾಹರಣೆಗಳಿವೆ. ಹಗಲಿಗೆ, ಜೀವನಕ್ಕೆ ಪ್ರಾಧಾನ್ಯವು ದೊರೆಯಬೇಕಿತ್ತು. ಆದರೆ, ಹಾಗಿಲ್ಲದೆ ಭಾರತದಲ್ಲಿ ನಾಯಕಪಟ್ಟ ಬಂದಿರುವುದು ಕೃಷ್ಣನಿಗೆ ಮಾತ್ರ. ಇದು ಯಾಕೆ ಹೀಗೆ!? ಇದು 'ವ್ಯಾಸ' ನು 'ವೇದವ್ಯಾಸ'ನಾಗಿರುವ ಪರಂಪರೆಯನ್ನು ಪರ್ಯಾಯವಾಗಿ ಉಳಿಸಿಕೊಂಡು ಬಂದಿರುವ ಅಂಶವಾಗಿ ಉಳಿದಿದೆ ಎಂದು ಹೇಳಬೇಕಾಗಿದೆ! ಮತ್ತು ಬೇರೊಂದು ರೀತಿಯಲ್ಲಿ ಈ 'ಅಂಶ'ಗಳನ್ನೇ ಹೇಳುವುದಾದರೆ: 'ಆದಿತ್ಯಮಹಾತ್ಮೆ'ಯನ್ನು[೫] ಭಾರತದಲ್ಲಿ ತಳವೂರಿಸಿದ ಅಂಶವೂ ಕೂಡ ಈ ಮೂಲಕ ಹೊರಕ್ಕೆ ಬರುತ್ತಿದೆ! ಸರ್ಪಯಾಗದ ಕತೆ ಇದಕ್ಕೊಂದು ಶ್ರೇಷ್ಠ ಉದಾಹರಣೆ!

---

೪. ಇದರ ಸಮ್ಮಿಶ್ರಣದ ಪ್ರಭಾವ ಬರವಣಿಗೆಯನ್ನು 'ಯುಗಾಂತ'ದಲ್ಲಿ ಡಾ।। ಇರಾವತಿ ಬಾಯಿ ಕರ್ವೆ ಅಕ್ಷಿಷ್ಟು ಮಾಡಿದ್ದಾರೆ. ಸುಕಟಣಕರರ on the meaning of mahabharata ಇದರ ಸಂದರ್ಭದಲ್ಲಿಯೇ ಆಸಕ್ತರು ನೋಡಬಹುದು.

೫. 'ಆದಿತ್ಯ' ಎಂದರೆ 'ಸೂರ್ಯ' ಎಂದು ನಂಬಿಸಿರುವಲ್ಲಿ ದೊಡ್ಡ ಮೋಸವಿದೆ. ಭಾನು-ಪ್ರಕಾಶವನ್ನು 'ಆದಿತ್ಯವಾರ' ಎಂದರೆ- ಇದರ ತಿರುವು ಮುರುವಿನ ಸ್ಪಷ್ಟತೆ ಅರಿಕೆಗೆ ಬರಬಹುದು. ಗೀತೆಯೊಳಗಿನ 'ಆದಿತ್ಯಾನಾಂ ಅಹಂ ವಿಷ್ಣುಃ' ಈ ಸಮೀಕರಣ, ಜೊತೆಗೆ ಸಾಂಪ್ರದಾಯಿಕ ಈ ಶ್ಲೋಕದೊಳಗಿನ ನೇತಾರರನ್ನೂ ಸಮೀಕರಿಸಿ ನೋಡಬಹುದು.
ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ।
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ।।
ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃ ಪೌತ್ರಮಕಲ್ಮಷಮ್।
ಪರಾಶರಸುತಂ ವನ್ದೇ ಶುಕತಾತ ತಪೋನಿಧಿಮ್।।

ಈ 'ಸರ್ಪಯಾಗ' ಕತೆಯೊಳಗಿನ ಸಾಂಕೇತಿಕ ಅಂಶಗಳನ್ನು ಲೆಕ್ಕಿಸಿಕೊಂಡು 'ಜೀವನ' ಮತ್ತು 'ಜೀವಿತ' ಈ ಪಾತಳಿಗಳನ್ನು ಗಣಿಸಬೇಕಿದೆ! 'ಇಂದ್ರಾಯ ತಕ್ಷಕಾಯ ಸ್ವಾಹಾ' ಅನ್ನುವುದರೊಳಗಿನ ಆಶಯವು: 'ಹಗಲನ್ನು ರಾತ್ರಿ ಆಕ್ರಮಿಸುತ್ತಿರುವು'ದರ ದೃಶ್ಯವೇ ಕಾಣುತ್ತಿದೆ! 'ನಾಗ ತಕ್ಷಕ ಇದು ಮೃತ್ಯುತತ್ತ್ವದ ಸಂಕೇತ. ಇದೇ ಮೇರೆಗೆ ಇಂದ್ರನು ಸಮಷ್ಟಿ ಜೀವನದ ಸಂಕೇತ'ಈ ತಾರತಮ್ಯವನ್ನು ನಾಶಪಡಿಸುವುದರಲ್ಲಿ ತೊಡಗಿರುವ 'ವ್ಯಾಸ'ನ ಪ್ರತಿಭಾ ಸಾಮರ್ಥ್ಯ ಅಸಾಧಾರಣವಿದೆ! ಇದರಿಂದಾಗಿ ಜೀವನವನ್ನು ಜೀವಿತದ ಮಧ್ಯಕ್ಕೆ ತಂದು ನಿಲ್ಲಿಸುವ ತಂತ್ರವೇ ಸರ್ಪಯಾಗದ ಕತೆಯಾಗಿದೆ; ಇದರ ಆಶಯವಾಗಿದೆ. : ಭಗವದ್ಗೀತೆಯೊಳಗಿನ 'ನಷ್ಟೋ ಮೋಹಃ ಸ್ಮೃತಿರ್ಲಬ್ಧ್ವಾ' ಮತ್ತು 'ಕರಿಷ್ಯೇ ತವ ವಚನಂ' ಅನ್ನುವ ಅರ್ಜುನನು ಕತ್ತಲೆಯ ನಾಗ ಸಂಕೇತನಾದ ಕೃಷ್ಣನನ್ನು ಅನುಸರಿಸುವುದರಲ್ಲಾಗಿರುವ ಆಶಯಗಳು ಬೇರೆಬೇರೆಯಾಗಿಲ್ಲ[೬] ಆದರೆ, ಭಾಷೆಯೊಳಗಿನ ಮುಗ್ಧತೆಯ ಸಂಪರ್ಕದಲ್ಲಿ ಇದರ 'ಅರಿವು, ಬೇಗನೆ ನಮ್ಮನ್ನು ತಟ್ಟುವುದಿಲ್ಲ. ಏಕೆಂದರೆ : 'ವ್ಯಾಸನ ಕೈ ಚಳಕ, ಚಮತ್ಕಾರ ಅದ್ಭುತ ಮಾಯಾವಿ ರೀತಿ'ಯ ಪ್ರತಿಭಾನ ಅದು ಮುಗ್ಧಭಾಷೆಯ ಮೋಡಿಯಲ್ಲಿ ಇದೆಯಾಗಿ ಆಕೃತಿಗಳ ತಳಪಾಯದ 'ವಿಸಂಗತಿ'ಗಳೇ ಅರ್ಥವಾಗದೆ ಉಳಿದು ಬಿಡುತ್ತದೆ! 'ವ್ಯಾಮಿಶ್ರೇಣೇವ ಇಮಂ ವಾಕ್ಯಂ ಮೋಹಯಸೀವ ಮೇ' ಅನ್ನುವ ಅರ್ಜುನನ ಕುತೂಹಲಕರವಾದ ಮಾತು ಈ ಮೇಲಿನ ನನ್ನ ವಿವರಣೆಗೆ ಸಹಾಯಕವಾದೀತು. 'ವ್ಯಾಮಿಶ್ರಶೈಲಿ'ಯ ಮಹಾಭಾರತ ಭಾಷೆಯ ದೃಷ್ಟಿಯಿಂದಂತೂ ದೊಡ್ಡ ಮೋಸವೊಂದನ್ನೇ ಸೃಷ್ಟಿಸಿದೆ.

ಮಹಾಭಾರತದ ಇಡಿಯಾದ ಕಟ್ಟಡದ ವೈಶಿಷ್ಟ್ಯಗಳನ್ನು ಕುರಿತು ಜೀವನ ವಿಶ್ವಸ್ಥ ಕಟ್ಟಡದ ದೃಷ್ಟಿಯಿಂದ ನೋಡಬೇಕಿದೆ-ಎಂಬುದರ ವಿವರಣೆಗಾಗಿ ಈ ಮೇಲಿನ ಮಾತುಗಳನ್ನು ಹೇಳಬೇಕಾಯಿತು "ನರ-ನಾರಾಯಣ ಸಂಪ್ರದಾಯದ ಪುನಃಸ್ಥಾಪನೆಗಾಗಿ ರಚಿತ ಮಹಾಭಾರತದ ವ್ಯಾಸನನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ. ಪ್ರಜ್ಞೋದಯಕ್ಕೂ ಮುಂಚಿನ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಪಾತಳಿಯ ಈ ವಿಭಾಗದ್ವಯದ ಸಂದರ್ಭದ ವೃತ್ತಾಕೃತಿಯ (ಚಾಂದ್ರ) ಜೀವನ ರೀತಿಯ ಪುನಸ್ಥಾಪನೆಯು ವ್ಯಾಸನ ಮಹಾಭಾರತದ ಉದ್ದೇಶವಿದ್ದದ್ದು. ಸರ್ವಮಾನ್ಯವಾಗಿದೆ"[೭] ವ್ಯಾಸನ ಈ ಮಾತುಗಳನ್ನೇ ಕೇಳಿ:

ಊರ್ಧ್ವಬಾಹು ವಿರೋಮ್ಯೇಷ
ನೈವ ಕಶ್ಚಿತ್ ಶೃಣೋತಿ ಮಾಂ।
ಧರ್ಮಾದರ್ಥಶ್ಚ ಕಾಮಶ್ಚ
ಸ ಧರ್ಮಃ ಕಿನ್ನ ಸೇವ್ಯತೇ॥*
ಇದು 'ವ್ಯಾಸ' ಸಂದೇಶ ಪರಂಪರೆಯಿಂದ ಪರಂಪರೆಗೆ!

ಧನ್ಯವಾದ

ಶಂ. ಬಾ. ಜೋಶಿ ಅವರ ಈ 'ಕೃತಿ'ಯು ನನ್ನ ಕೈಗೆ ಬಂದು ಈಗಾಗಲೇ ಎರಡು ವರ್ಷಗಳು ಮಿಕ್ಕಿದುವು. ಮೂಲದಲ್ಲಿ ಇದ್ದದ್ದನ್ನು ಸಂಪಾದಕನಾಗಿ ಬದಲಿಸಿಕೊಂಡ ಅಂಶಗಳು ಇಷ್ಟು.

---

೬. ಭಗವತ್ ಗೀತೆಯೊಳಗಿನ ರಾಜಯೋಗ'- ಶಂ. ಬಾ. ಜೋಶಿ, ಬುಕ್‌ಸೆಂಟರ್ ಹುಬ್ಬಳ್ಳಿ ಈ ಕೃತಿಯೊಳಗೆ ಇದರ ಬಗೆಗಿನ ವಿವರಣೆಗಳು ಇವೆ! ಆಸಕ್ತರು ಗಮನಿಸಬಹುದು.

೭. ಸಾಹಿತ್ಯ ಜೀವನ ಮತ್ತು ಸಂಸ್ಕೃತಿ - ೪೭ನೇ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ-೧೯೭೯ ಇದರೊಡನೆ 'ಮಾನವ ಧರ್ಮದ ಆಕೃತಿ'ಯಲ್ಲಿ ಐತಿಹಾಸಿಕ ಪದ್ಧತಿಯ ನೆಲೆಯೊಳಗಿಂದ 'ಮಹಾಭಾರತ'ವನ್ನು ವಿವರಣಾತ್ಮಕವಾಗಿ ಚರ್ಚಿಸಿದ್ದಾರೆ. ಪು : ೧೩೯ ರಿಂದ ೧೯೦ರ ವರೆಗೆ.

೧. ಪುನರುಕ್ತಿ ಬರುವ ವಾಕ್ಯಗಳನ್ನು ತೆಗೆದುಹಾಕಿ; ಇಡಿಯಾಗಿ ಕೃತಿಯನ್ನ ಶಾಸ್ತ್ರೀಯವಾಗಿ ವರ್ಗೀಕರಿಸಿದ್ದು.

೨. ಸಂಸ್ಕೃತ ಶ್ಲೋಕದೊಳಗಿನ ಕೆಲವು ಕಣ್ತಪ್ಪುಗಳನ್ನೂ, ಪಾಠ ಸಮಸ್ಯೆಗಳನ್ನೂ ಬೇರೆ ಬೇರೆ 'ಗ್ರಂಥ (Text) ಗಳ ಸಹಾಯದಿಂದ ತಿದ್ದಿದ್ದು.

೩. 'ಕರ್ಣನ ಮೂರು ಚಿತ್ರಗಳು' ಎಂಬ ಹೆಸರಿನಲ್ಲಿ ಪ್ರಕಟಗೊಂಡಿದ್ದ ಪುಸ್ತಕವನ್ನು "ಕರ್ಣ: ಒಂದು ಅಧ್ಯಯನ" ಎಂಬ ಹೆಸರಿನಲ್ಲಿ ತಿದ್ದಿ ಪರಿಷ್ಕೃತ ಪಡಿಸಿದ್ದು.

೪. ಶಂ. ಬಾ. ಜೋಶಿ ಅವರೊಡನೆ ಈ ವಿಷಯದಲ್ಲಿ ಪತ್ರ ವ್ಯವಹಾರ ಮಾಡಿ ಇದನ್ನು ಪರಿಷ್ಕರಿಸಿ ಈ ಆವೃತ್ತಿಯನ್ನು ಪ್ರಕಟಪಡಿಸಲಾಗಿದೆ! ಸಾಹಿತ್ಯಕ ದೃಷ್ಟಿಯಿಂದ ತುಂಬಾ ಮೌಲಿಕವಾದ ಕೃತಿಯನ್ನು ೧೯೪೭ರಲ್ಲೇ ಕೊಟ್ಟಿದ್ದ ಶಂ. ಬಾ. ಜೋಶಿ ಅವರು ಈ 'ಪರಿಷ್ಕಾರ'ಕ್ಕೆ ಒಪ್ಪಿಗೆ ಕೊಟ್ಟದ್ದೂ ಅಲ್ಲದೆ, ಪುನರ್‌ಮುದ್ರಣಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.*

ಪುಸ್ತಕವನ್ನು ಈ ರೂಪದಲ್ಲಿ ಹೊರಬರಲು ಎಲ್ಲಾ ರೀತಿಯಿಂದ ಕಾರಣ ಕರ್ತರಾಗಿದ್ದು ಮುದ್ರಣದುದ್ದಕ್ಕೂ ಸಹಕರಿಸಿ; ಅಂದವಾಗಿ ಮುದ್ರಿಸಿಕೊಟ್ಟ ಲಿಬರ್ಟಿ ಪ್ರಿಂಟರ್ಸ್‌ನ ಎಸ್. ಶಿವದೇವ್ ಅವರನ್ನು ಈ ಸಂದರ್ಭದಲ್ಲಿ ನೆನೆಯದೆ ಹೋದರೆ ಅಪರಾಧವಾದೀತು.

ಹೊದಿಕೆ ಚಿತ್ರ ಬರೆದ ಬಿ.ಪಿ. ಕಾರ್ತೀಕ್ ಮತ್ತು ಶಂ. ಬಾ. ಅವರ ಫೋಟೋ ತೆಗೆದುದ್ದನ್ನು ಕೊಟ್ಟ, ಕೆ. ಜಿ. ಸೋಮಶೇಖರ್ ಅವರನ್ನು ಈ ಸಂದರ್ಭದಲ್ಲಿ ತುಂಬು ಹೃದಯದಿಂದ ನೆನೆಯುತ್ತೇನೆ!

ಬೆಂಗಳೂರು **ಮಲ್ಲೇಪುರಂ ಜಿ. ವೆಂಕಟೇಶ**

೨೯-೨-೧೯೮೦

ಕುಮಾರವ್ಯಾಸನ ಕರ್ಣ

ಸುಪ್ರಸಿದ್ಧವಾದ ಕುಮಾರವ್ಯಾಸನ ಭಾರತದಲ್ಲಿ ಬಂದ ಕರ್ಣನ ವರ್ಣನೆಯನ್ನೋದುವಾಗ ನನಗೆ ಅದರಲ್ಲಿ ಕೆಲವೊಂದು ಸಂದೇಹಗಳು ತಲೆದೋರಿದುವು. ಅವನ್ನು ಪರಿಹರಿಸಿಕೊಳ್ಳಲು ಪಂಪಭಾರತ, ವ್ಯಾಸಭಾರತಗಳೊಡನೆ ಆ ಭಾಗವನ್ನು ಸರಿ ಹೋಲಿಸಿ ನೋಡುವುದು ಅವಶ್ಯ ಎನಿಸಿತು. ನನ್ನ ಈ ಅಭ್ಯಾಸದಲ್ಲಿ ಕಂಡು ಬಂದ ಸಂಗತಿಗಳನ್ನು ಬಲ್ಲಿದರ ಪರಾಮರ್ಶೆಗಾಗಿ ಮುಂದೆ ವಿವರಿಸುತ್ತಿದ್ದೇನೆ.

ಕರ್ಣಾರ್ಜುನರ ಕತೆ ಲೋಕಪ್ರಸಿದ್ಧವಾಗಿದೆ. ಆದುದರಿಂದ ಅದೆಲ್ಲವನ್ನೂ ಸಂಪೂರ್ಣವಾಗಿ ಇಲ್ಲಿ ವಿವರಿಸಿ ಹೇಳುವುದು ಅನಾವಶ್ಯಕ. ಆದಕಾರಣ ನನಗೆ ಸಂದೇಹವುಂಟಾದ ಭಾಗವನ್ನು ಮಾತ್ರ, ಎತ್ತಿ, ಇಲ್ಲಿ ಹೇಳಬೇಕೆಂದಿದ್ದೇನೆ. ಆ ತೆರನಾಗಿ ನನಗೆ ಮೊದಲು ಸಂದೇಹಕ್ಕೆ ಕಾರಣವಾದ ಕುಮಾರವ್ಯಾಸನ ವರ್ಣನೆಯನ್ನೆ ಮೊದಲು ತಕ್ಕೊಳ್ಳುವುದು ಕ್ರಮಪ್ರಾಪ್ತವಾಗಿದೆ.

ದುರ್ಯೋಧನನೊಡನೆ ಸಂಧಾನಕ್ಕಾಗಿ ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು. ದುರ್ಯೋಧನನು ಸಂಧಾನಕ್ಕೆ ಬಂದ ಕೃಷ್ಣನನ್ನೇ ಬಿಗಿದಿಡುವ ಹಂಚಿಕೆ ನಡಸುವನು. ಈ ಕುತ್ತದೊಳಗಿಂದ ಕೃಷ್ಣನು ಹೇಗೂ ಪಾರಾಗಿ ಹೊರಗೆ ಬರುವನು. ಇಂತು ಅಪಮಾನಿತನಾಗಿ ಸಂಕಟದೊಳಗಿಂದ ಹೊರಗೆ ಬಂದ ಕೃಷ್ಣನು ಮುಂದಿನ ಕೆಲಸಕ್ಕಾಗಿ ಕುಂತಿಯ ಸಲಹೆ ಪಡೆಯಲು ಹೋಗುತ್ತಾನೆ. ಕೌರವರ ಸಭೆಯಲ್ಲಾದ ಎಲ್ಲ ಸಂಗತಿಗಳನ್ನೂ ಕೇಳಿದ ಬಳಿಕ, ಇನ್ನು ಯುದ್ಧವಲ್ಲದೆ ಬೇರೆ ಗತಿಯಿಲ್ಲವೆಂದು ಕುಂತಿಯು ಧರ್ಮಾದಿಗಳಿಗೆ ಕಾಳಗಕ್ಕೆ ಅಣಿಯಾಗಲು ಸಂದೇಶವನ್ನು ಕಳಿಸುವಳು. ಕೃಷ್ಣನು ಆ ಸಂದೇಶವನ್ನು ಅರುಹಲು ಪಾಂಡವರೆಡೆಗೆ ಬೇಗನೆ ಹೊರಡುವನು. ದಾರಿಯಲ್ಲಿ ಭೀಷ್ಮಾದಿಗಳಿಗೆ ಬೀಳ್ಕೊಂಡು ಅಲ್ಲಿಯೆ ಕರ್ಣನನ್ನು ಕಂಡು 'ತನ್ನನ್ನು ಊರ ಹೊರಗೆ ಕಳಿಸಿ ಮರಳಿ ಬಾ' ಎಂದು ತನ್ನ ತೇರನೇರಿಸಿಕೊಂಡು ಆತನನ್ನು ಒಯ್ಯುವನು. ಊರ ಹೊರಗೆ ಸ್ವಲ್ಪ ತಡೆದು ಕರ್ಣನಿಗೆ ಆತನ ಹುಟ್ಟಿನ ಗುಟ್ಟನ್ನು ತಿಳಿಸಿ ಪಾಂಡವರ ಪಕ್ಷಕ್ಕೆ ಬರಲು ಬಗೆಬಗೆಯಾಗಿ ಬಿನ್ನವಿಸುವನು; ಆ ಕತೆ ಹೀಗಿದೆ :

೧. ಬಂಧು ವಿದುರನ ಮನೆಗೆ, ದೇವ ಮುಕುಂದನು ಕುಂತಿಯ ಕರೆದು, "ನಿನ್ನಯ ಕಂದರೈವರ ಮೇಲೆ ಕೌರವ ನೃಪನ ಖತಿ ಬಲುಹು ಇಂದು ಸಂಧಿ ಮುರಿದುದು. ನಿನ್ನಯ ಕಂದ ಕರ್ಣನ ಬೇಡಿಕೊಳು ನೀನು" ಎಂದು ಸೂಚಿಸಿ ಮುರವೈರಿ ಹರುಷದೊಳು ಮರಳಿದನು. (ಉದ್ಯೋ . ಪ. ೧೦. ೪೮)

೨. ಗಾಂಗೇಯಾದಿಗಳನು ಬೀಳುಕೊಟ್ಟರು. ನಿಂದು ರವಿಸುತನ ತಾಂ ಕರೆದನು, ರಥದ ಹೊರೆಗಾಗಿ; 'ಬಂದು ಕಳುಹುವುದು ಕಿರಿದೆಡೆ' ಎಂದು ಕರೆದನು. (ಉದ್ಯೋ. ಪ. ೧೦. ೫೦.)

ಕೃಷ್ಣ-ಕರ್ಣರ ಭೆಟ್ಟಿ

೧. ಧನುಜರಿಪು ರಥದೊಳು ಬರಸೆಳೆದು ಪೀಠದೊಳು ಕುಳ್ಳಿರಿಸಿದನು; ಕರ್ಣನ ಕೂಡೆ ಮೈದುನತನದ ಸರಸವನು ಎಸಗಿದನು. (೧೧-೨)

೨. ಆಗ ಕರ್ಣನು ಗಾಬರಿ ಸಂಕೋಚಗಳಿಂದ ಕೃಷ್ಣನ ಸರಿ ಸಮಾನನಂತೆ ಆತನ ತೊಡೆಸೋಂಕೆ ಕುಳ್ಳಿರಲಾರದೆ "ದೇವ, ಮುರಾರಿ! ನಿಮ್ಮಡಿಗಳೊಳು ಸಮಸೇವನೆಯೆ? ಅಂಜುವೆನು;" ಎಂದು ಬದಿಗೆ ಸರಿಯುವನು. ಆಗ ಕೃಷ್ಣನು ತಾನೇ ಕರ್ಣನ ಹತ್ತಿರ ಸರಿದು ಆತನ ತೊಡೆಸೋಂಕೆ ಕುಳಿತುಕೊಳ್ಳುವನು! (೧೧-೨) ಕುಳಿತು ಹೀಗೆ ಹೇಳುವನು: 'ಎಲೆ ಕರ್ಣ, ನಿಮ್ಮೊಳು ಯಾದವರು ಮತ್ತು ಕೌರವರೊಳಗೆ ಭೇದವಿಲ್ಲ. ವಿಚಾರಿಸಿ ನೋಡಿದರೆ ಮೊದಲು ಈ ಎರಡೂ ವಂಶಗಳೂ ಒಂದೇ ತಳಿಯವು; ಬೇರೆ ಅಲ್ಲ; ನಿನ್ನಾಣೆ! ಅಂಗರಾಜಾ, ನಾನು ಹೇಳಿದುದು ನಿನಗೆ ಇನ್ನೂ ತಿಳಿದಂತೆ ಕಾಣಲಿಲ್ಲ.' ಎನುತ್ತ ಹಾಗಾದರೆ ಕೇಳು ಎಂದು ಆತನ ಕಿವಿಯಲ್ಲಿ ಅವನ ಹುಟ್ಟಿನ ಬಗೆಯನೆಲ್ಲ ವಿವರಿಸಿದನು. (೧೧-೩)

೩. ಇಷ್ಟಾದರೂ ಕರ್ಣನಿಗೆ ಕೃಷ್ಣನ ಮಾತಿನಲ್ಲಿ ನಂಬುಗೆ ದೋರಲಿಲ್ಲ. ಆತನು ಇನ್ನೂ ಸಂಕೋಚ ಪಟ್ಟುಕೊಳ್ಳುತ್ತಲೇ ಉಸುರಿದನು: ದಾನವಾಂತಕ ಕೇಳು: ವಂಶವಿಹೀನನು ನಾನು. ನಿಮ್ಮಡಿಗಳೊಳು ಸಮ್ಮಾನಿಸುವರೆ? ಸಾಕು (ಬಿಡು). ಈ ಮಾತು' (೧೧-೪) ಎಂದು ಕೈಮುಗಿದು ತಲೆವಾಗಿ ಕುಳ್ಳಿರುವನು.

೪. ಕೃಷ್ಣನು ಮತ್ತೆ ತಿಳಿ ಹೇಳಿ ಹತ್ತಿರ ಕರೆಯುವನು. 'ಮಾನನಿಧಿಯೇ, ಎನ್ನಾಣೆ; ಬಾರೈ. ನೀನು ನಮ್ಮೆಲ್ಲರ ಹವಣು. ಅಲ್ಲದೆ, ವರಭಾನುವಂಶ ಲಲಾಮ; ಇಕ್ಷ್ವಾಕುವಂಶದ ರಾಮಂಗೆ ಸಮಾನನು. ಬಾ' (೧೧-೪) ಎಂದರೂ ಕರ್ಣನ ಸಂದೇಹವು ದೂರವಾಗಲಿಲ್ಲ. ಆಗ ಕೃಷ್ಣನು ಕರ್ಣನೊಡನೆ ಇರುವ ತಮ್ಮ ಆತ್ಮೀಯ ಸಂಬಂಧವನ್ನು ಮನವರಿಕೆ ಮಾಡಿಕೊಡಲು ಇನ್ನೂ ಹೆಚ್ಚಿನ ಪ್ರಮಾಣವೆಂದು, 'ಕಳೆದುಕೊಂಡನು ವೀಳೆಯವನಂಜುಳಿಯೊಳು ಆತಂಗಿತ್ತು' ಕರ್ಣನ ಕೆಲಕೆ ಬರಸೆಳೆದನು. ಅವನ ಕರದೊಳು ಕರತಳವನಿಕ್ಕಿ. 'ಎಲೆ ದಿವಾಕರತನಯ ನಿನ್ನಯ ಕುಲವನರಿಯೆಯಲಾ! ಸುಯೋಧನನೊಳು ವೃಥಾ ಸೇವಕನತದೊಳಿರುವುದು ಉಚಿತವಲ್ಲ' ಎಂದು ಹೇಳುವನು. (೧೧-೫).

೫. ಈಗ ಕರ್ಣನು ಮೊದಲಿನ ಸಂಕೋಚವನ್ನು ಮರೆತು ಕೃಷ್ಣನು ಹೇಳುವುದನ್ನು ನಂಬಿ ಅದಕ್ಕೆ ಕಿವಿಗೊಡುವನು. ಕರ್ಣನೇ ಪಾಂಡವರಲ್ಲಿ ಹಿರಿಯನಾದ್ದರಿಂದ ಆತನೇ ಹೇಗೆ ಪಟ್ಟಕ್ಕೆ ಬಾಧ್ಯನೆಂಬುದನ್ನು ವಿವರಿಸಿ ಕೃಷ್ಣನು ಅರಸುತನವನ್ನು ಕೈಕೊಳ್ಳಲು ಮನವೊಲಿಸುವನು. 'ಧಾರಿಣೀಪತಿ ನೀನಾಗಲು, ಇತ್ತಂಡಕ್ಕೂ ವೈರವಿಲ್ಲ; ನಡೆ. ನಾವೆಲ್ಲ ನಿನ್ನನ್ನು ಸೇವಿಸುವೆವು. ಆಗ ನಿನ್ನ ವೈಭವಕೆ ಆರು ಸರಿಯೈ; ಬಾ, ಪಾಂಡವರನ್ನು ಕೂಡಿಕೊ;' ಎಂದು ಬಿನ್ನವಿಸುವನು. (೧೧-೭-೧೦)

೬. ಆಗ ಕರ್ಣನ ಕೊರಳ ಸೆರೆ ಹಿಗ್ಗಿದುವು. ದೃಗುಜಲ ಉರುವಣಿಸಿದುದು. ಕಡುನೊಂದನು; ತನ್ನ ಮನದೊಳಗೇ 'ಅಕಟಾ! ಕುರುಪತಿಗೆ ಕೇಡಾದುದು; ಹರಿಯ ಹಗೆ ಕೌರವನ ಉರುಹದೆ ಹೋಹುದೆ? ಈತನು ಎನಗೆ ಜನನವ ಅರುಹಿ ಕೊಂದನು; ಹಲವು ಮಾತೇನು?' ಎಂದನು. (೧೧-೧೧) ಕರ್ಣನು ಧರ್ಮಸಂಕಟದಲ್ಲಿ ಸಿಕ್ಕು ಬಿದ್ದನು. 'ಕಾದಿಕೊಲುವಡೆ, ಪಾಂಡುಸುತರು ಸಹೋದರರು. ಅವರನ್ನು ಕೊಲ್ಲದೆ ಕಾದಿದಡೆ ಕೌರವನಿಗೆ ಸೋಲಲ್ಲದೆ ಬೇರೆ ಗತಿಯಿಲ್ಲ. ಆದುದರಿಂದ ಕೃಷ್ಣನು ಈ ಆತ್ಮೀಯತೆ ತೋರಿ ಹೊಟ್ಟೆಯಲ್ಲಿ ಹೊಕ್ಕು ಇರಿದನು. ಇನ್ನೇನು ಮಾಡುವುದು?' ಎಂಬ ಚಿಂತೋದಧಿಯೊಳು ಮುಳುಗಿದನು. ಏನೂ ಮಾತು ಬಾರದೆ ಮೌನದೊಳಿದ್ದನು.

೭. ಆಗ ಕೃಷ್ಣನು ಕೇಳುವನು:

'ಏನು ಹೇಳೈ ಕರ್ಣ, ಚಿತ್ತಗ್ಲಾನಿ ಯಾವುದು ? ದುಮ್ಮಾನವೇತಕೆ? ಮರುಳುತನ ಬೇಡ; ನಿನ್ನ ಅಪದೆಸೆಯ ಬಯಸುವವನಲ್ಲ. ಪಾಂಡವರಲ್ಲಿ ಹಿರಿಯನೆನಿಸಿ ಅರಸುತನವು ನಿನಗೆ ಸೇರದೆ?

೮. ಆಗ ಕರ್ಣನು ಉತ್ತರಿಸುವನು. ಮನದ ಕಳವಳವನ್ನು ಸ್ಪಷ್ಟಪಡಿಸುವನು.

'ಎಲೆ ಮರುಳ ಮಾಧವ, ಸಕಲರಾಜ್ಯದ ಸಿರಿಗೆ ಸೋಲುವನಲ್ಲ. ಕೌಂತೇಯರು ಸುಯೋಧನರು ಎನಗೆ ಬೇಸಕೆಯ್ವಲ್ಲಿ ಮನವಿಲ್ಲ. ಹೊರೆದ ದಾತಾರಂಗೆ ರಿಪುಗಳ ಶಿರಗಳ ತರಿದು ಒಪ್ಪಿಸುವೆನು; ಎಂಬೀ ಭರದೊಳಿದ್ದೆನು. ಆದರೇನು? ಕೌರವೇಂದ್ರನ ನೀ ಕೊಂದೆ; (ಪಾಂಡವರ) ಒಡನೆ ಹುಟ್ಟಿದೆನೆಂಬ ಕಥನವನು (ನನಗೆ ವಿಚಾರಕ್ಕೆ) ಎಡೆಗುಡದೆ ಬಣ್ಣಿಸಿದೆ, ಪಾಂಡವರ ಅಡಗು (ಮಾಂಸ) ಎನ್ನ ಬಾಣಕ್ಕೆ ಬಲಿ, ಎಂಬ ಛಲವ ಮಾಣಿಸಿದೆ. ದುಡಿದು ಫಲವೇನು? ಇನ್ನು ಸುಮ್ಮನೆ ಕಾದಿ ನಾನೆ ಮಡಿಯುವುದೊಂದೇ ದಾರಿ, ನಿಮ್ಮ ಪಕ್ಷಕ್ಕೆ ಬಾರೆನು. ನಿನ್ನವರ ನೀಂ ಹರಹಿಕೊಳು; ಅವರ ನಿಲಿಸು. (೧೧-೧೪,-೧೫) ಎಂದು ಹೇಳುವನಲ್ಲದೆ, 'ನಾನು ಬದುಕಿ ನಿಮ್ಮ ಪಕ್ಷಕ್ಕೆ ಬಂದೆನಾದೊಡೆ ರೂಢಿ ಮೆಚ್ಚದು; ಜನಗಳಿಗೆ ಸೊಗಸದು; ತನ್ನ ಜೀವದ ಗೆಳೆಯನಂತೆ ನಡಸಿಕೊಂಡ ಕೌರವೇಂದ್ರನನೆಂತು ಮರೆದಿಹೆನು?' (೧೧-೧೬) "ವೀರ ಕೌರವರಾಯನೇ ದಾತಾರನು; ಆತನ ಹಗೆಯೆ ಹಗೆ; ಕೈವಾರವೆ ಕೈವಾರ. ಕುರುನೃಪತಿ ಆದಂತೆ ಅಹೆನು. ನಾಳಿನ ಆಹವದೊಳು ಯಜ್ಞದೀಕ್ಷಿತನಾಗಿ ಕೌರವನ ಋಣಹಿಂಗೆ ಕಾದಿ ಆತ್ಮಾಹುತಿಯನು ಅರ್ಪಿಸುವೆನು. ನಿನ್ನಯ ವೀರರೈವರ ನೋಯಿಸೆನು; ರಾಜೀವ ಸಖನ ಆಣೆ." ಎಂದೂ ಒರಲುವನು (೧೧,೧೭-೨೦)

೯. ಕೃಷ್ಣನು ಧೂರ್ತತನದಿಂದ, 'ಪಾಂಡವರನ್ನು ನಿನ್ನ ಕೈಗೆ ಒಪ್ಪಿಸಿದ್ದೇನೆ. ಅನುಜರೈವರ ಹದನು ನಿನ್ನದು.' (ಅರ್ಥಾತ್ ಅವರನ್ನು ಕೊಲ್ಲಬೇಡ) ಎಂದು ಸೂಚಿಸುವನು. ಕರ್ಣ, ನೀನು ಪಾಂಡವರ ಕಡೆಗೆ ಬಂದೊಡೆ ಒಳ್ಳಿತು: ಬಾರದಿದ್ದೊಡೆ, ಮಧುರವಚನದೆ ಮಂದಮತಿಯನು (ದುರ್ಯೋಧನನು) ತಿಳುಹಿ ತಮ್ಮಂದಿರಿಗೆ ರಾಜ್ಯವನು ಕೊಡಿಸುವುದು ಉಚಿತ; ಕೌರವೇಶ್ವರನು ನಿನ್ನ ಮಾತನು ಹಿಂದುಗಳೆಯನು; ಎಂದು ಹೇಳುವನು. (೧೧.೨೨,೨೩)

೧೦. ಕರ್ಣನು ದುರ್ಯೋಧನನ ಮನಸ್ಥಿತಿಯನ್ನು ಚೆನ್ನಾಗಿಯೆ ಅರಿತನವನಾಗಿದ್ದನು. ಆದುದರಿಂದ ಆತನು ಸ್ಪಷ್ಟವಾಗಿ ಅದನು ಬಿಡಿಸಿ ಹೇಳಿದ್ದಾನೆ. ಇತ್ತಂಡಕ್ಕೆ ಮತ್ಸರವು ಮಸೆದಿದೆ. ಸಂಧಿಯನು ಉಸುರಿದೊಡೆ ಕೌರವೇಶ್ವರನು ಒಪ್ಪಲಾರನು. ಆತನು ವಿಷಮನಹ ಕಟ್ಟಾಳು. ಹೀಗೆ ಸಂಧಿಮಾಡೆಂದು ಹೇಳುವುದೂ ತನ್ನ ಬೀರಕೆ ಮಸುಳಹುದು. ಮುರವೈರಿ ನಾನು ಸಂಧಿಯನು ಅರಿಯೆನು. (೧೧-೨೨,೨೩)

೧೧. ಎಂದು ಬೀಳುಕೊಂಡು ಮನೆಗೆ ಬಂದು, ಕರ್ಣನು, ಇರುಳೆಲ್ಲ ಚಿಂತಿಸುತೆ ನಿದ್ರಾಂಗನೆಯನುಳಿದನು. ಕೃಷ್ಣನು ಮಾಡಿದ ಮಂತ್ರ ಮನದೊಳು ನಟ್ಟು ಬೇರ‍್ವರಿಯಿತು. ದುರ್ಯೋಧನನಿಗೆ ಇನ್ನು ಆಪ್ತರಾರೂ ಉಳಿಯಲಿಲ್ಲವೆಂದು ಮಮ್ಮಲನೆ ಮರುಗುತ್ತಿರಲು ಬೆಳಗಾಯಿತು. (೧೧-೨೪-೨೬)

ಕರ್ಣ-ಕುಂತಿಯರ ಬೆಟ್ಟಿ

ಇದು ಒಂದು ಭಾಗವಾಯಿತು. ಇನ್ನು ಕರ್ಣ-ಕುಂತಿಯರ ಬೆಟ್ಟಿ:

೧. ವೀರ ರವಿಸುತನು ಒಂದು ದಿನ ರವಿವಾರದೊಳು ಭಾಗೀರಥೀ ತೀರದೊಳು ಸೂರ್ಯಂಗೆ ಅರ್ಘ್ಯವನು ಕೊಟ್ಟು ಸೌರಮಂತ್ರವ ಜಪಿಸುತ್ತಿರಲು, ಕುಂತೀನಾರಿ, ಔದಾರಿಯದ ಸುರತರುವ ಕಾಣಲು ಆತ್ಮಜನು ಇದ್ದ ಎಡೆಗೆ ಬಂದಳು. (೧೧.೨೭)

ಬರಲು ತಾಯ್ಗೆ ಇದಿರಾಗಿ ರವಿಸುತನು ಇರದೆ ಬಂದನು. ಚರಣದೊಳು ಮೆಯ್ಯಿಕ್ಕಿದನು. ಆ ಕುಂತಿ ಆತನ ನೊಸಲ ನೆಗಹಿದಳು ಬರಸೆಳೆದು ಬಿಗಿಯಪ್ಪಿದಳು. ನಯನದೊಳು ನೀರು ಉರುವಣಿಸಿದುದು. ಆಳಲಿನ ಅಬುಧಿಯೊಳು ಅದ್ದಳು. (೧೧.೨೮)

೨. ಆ ಸಮಯದೊಳು ಗಂಗೆ (ನದಿ) ಯು ನಾರೀವೇಷದೊಳು ನಡೆತಂದು, ಎಂದುದೇನೆಂದರೆ: "ಎಲೆ ಕುಂತೀಸತಿಯೆ ಎನಗೆ ಕೈಯೆಡೆಯೆಂದು ಒಪ್ಪಿಸಿದ ಕಂದನನು ಮರಳಿ ಒಪ್ಪುಗೊಳು. ಈ ಸುದಿನ ಈತನ ಆಗುಹೋಗಿನ ಗಾಸಿಯನು ಸಲೆ ಕಾಯ್ದೆನು. ಎನ್ನಯ ಭಾಷೆ ಸಂದುದು." ಎನುತ್ತ ಕುಂತಿಗೆ ಆತ್ಮಜನ ಕೊಟ್ಟಳು. (೧೧.೨೯)

೩. ಇಷ್ಟರಲ್ಲಿಯೆ ರವಿ ಬಂದನು. ಏಕಾಂತಕ್ಕೆ ಕರೆದು ಕರ್ಣನಿಗೆ ಕಿವಿಮಾತು ಹೇಳಿದನು: "ಎಲೆ ಮಗನೆ, ನಿನಗೆ ಕುಂತಿಯು ತಾಯಿ ಅಹುದು. ಕೃಷ್ಣನ ಹೇಳಿಕೆಯಂತೆ ಅವಳು ನಿನ್ನಯ ಸರಳ ಬೇಡಲು ಬಂದಿಹಳು. ಅಂದು ಆ ಹರಿಗೆ ಕವಚವನು ಇತ್ತವೊಲು ಈ ಬಾರಿಯೂ ಮರುಳಾಗಬೇಡ. (೧೧.೩೦)

೪. ಸೂರ್ಯನ ಈ ಸೂಚನೆಗೆ ಕರ್ಣನು 'ಹಸಾದ' ವೆಂದು ಹೇಳಿ ಮನ್ನಿಸಿ ಆತನನ್ನು ಕಳುಹುವನು. ಇತ್ತ ಮಾತೆಯನ್ನು ಭಯ ಭಕ್ತಿಯೊಳು ಒಸೆದು ಕುಂತಿಯನ್ನು ಕೇಳುವನು: "ತಾಯಿ ಬಿಜಯಂಗೈದ ಹದನೇನು? ಉಸಿರಬೇಕು" (೧೧.೩೧) ಆತನ ಈ ಮಾತು ಕೇಳುತ್ತಲೆ ಕುಂತಿಯು ಶೋಕಿಸುತೆ ಕರ್ಣ ಬಿಗಿಯಪ್ಪಿ ನುಡಿದುದೇನೆಂದರೆ:

೫. "ಮಗನೆ ತಮ್ಮಂದಿರನು ಪಾಲಿಸು; ವಿಗಡತನವನು ಮಾಣು; ಪರರ ಓಲಗವ ನೀ ಮಾಡುವುದೇ? ಪಟ್ಟವ ಬಿಗಿಸಿಕೊಳು ನಡೆ" (೧೧.೩೨)

೧೬. ಅದಕ್ಕೆ ಕರ್ಣನ ಉತ್ತರವಿದು: "ನೀನು ತಾಯಿ, ಅಹುದು. ನಾನು ಬಲ್ಲೆನು. ಇದನು ಕೃಷ್ಣನು ಅರುಹೆ ತಿಳಿದೆನು. ಪಟ್ಟಕ್ಕೆ ನಾನೇ ಬಾಧ್ಯನು. ಇದೂ ನಿಜ. ಆದರೆ ದುರ್ಯೋಧನನು ಎನ್ನನು ನಚ್ಚಿ ಹೊರೆದನು. ಈಗ ಸಾಯಲು ಅಳುಕುವುದೆ? ಕೃತಘ್ನರಿಗೆ ಪರಗತಿಯಿಲ್ಲ. ಕೃತಘ್ನನಾಗಿ, ಸುಡು ಇದು ಏತರದು ಈ ಬಾಳು! ಹೇಸಳೇ ಜಯಲಕ್ಷ್ಮಿ? ಪಾಂಡವರೊಡಗೂಡಿದೊಡೆ ಅಪಕೀರ್ತಿ ಬಹುದು. ನಿಮ್ಮಡಿ ಬಂದ ಕಾರ್ಯವನು ಬೇಗ ಬೆಸಸಿ" (೧೧.೩೩-೩೫)

೧೭. ಆಗ ಕುಂತಿಯು ಕರ್ಣನಿಂದ ಈ ವಚನವನ್ನು ಕೇಳುವಳು: "ಹಾಗಾದರೆ, ಐವರು ಮಕ್ಕಳನು ತಲೆಗಾದು ತೋರ್ಪೆ ಕಂದಾ! ಹೋದ ಬಾಣವ ಮರಳಿ ತೊಡದಿರು. ಮಾಡು ಕಳೆಯೈ ವೈರವನು."

ಎಂದೊಡನೆ ಕರ್ಣನು 'ಹಸಾದ' ಎಂದು ಒಪ್ಪಿಕೊಂಡು ಮನೆಗೆ ಬರುವನು. (೧೧.೩೬)

ಕರ್ಣಾರ್ಜುನರ ಕಾಳಗದಲ್ಲಿ

ಇನ್ನು ಕೊನೆಯ ಭಾಗ. ಕೃಷ್ಣಾರ್ಜುನರ ಕಾಳಗದ್ದು. ಕರ್ಣನು ಹಲವು ವೀರರೊಡನೆ ಮೊದಲು ಕಾದುವನು. ಧರ್ಮನು ಎದುರಿಸಿದಾಗ ಆತನನ್ನು ನುಗ್ಗು ನುಸಿಮಾಡುವನು. ಆ ಕಾಲದ ವರ್ಣನೆ ಹೀಗಿದೆ:

೧. 'ಸಿಕ್ಕಿದೆಯಲಾ ಧರ್ಮ; ಕೌರವರಾಯನನು ಮರೆಹೊಕ್ಕು ಬದುಕು; ಧರ್ಮಸುತ! ಬಾ!' ಎಂದು ಕರ್ಣನು ಮೊದಲೆ ಗಾಯಗೊಂಡು ಹಣ್ಣಾದ ರಾಜನನ್ನು ಅಹ್ವಾನಿಸುವನು. ಧರ್ಮನಿಗೆ 'ಶ್ರುತಿ ರಹಸ್ಯವನು ಅರಿವ ಚತುರ ಪಂಡಿತರು, ನಿಮಗೆ ಈ ಕದನ ಕರ್ಕಶವಿದ್ಯೆಯೇಕೆ?' ಎಂದು ಮೂದಲಿಸಿ ನುಡಿಯುವನು. (ಕರ್ಣಪರ್ವ ೧೧-೫೭-೬೦) ಹೀಗೆ ನುಡಿಯುತ್ತಿರುವಾಗಲೆ ಕರ್ಣನಿಗೆ ಇನ್ನು ಒಂದು ಮಾತು ನೆನಪಾಗುವುದು.

'ಕೊಲುವೊಡೆ, ಅವ್ವೆಗೆ ಕೊಟ್ಟ ಮಾತಿಂಗೆ ಅಳುಕುವೆನು'. ಆದಕಾರಣ ಧರ್ಮನನ್ನು ಕುರಿತು ಕರ್ಣನು, 'ನೀ ಹೋಗು ಹರಿಬಕೆ; ಮಲೆವರಾಜರೆ ಆಹವಕೆ ಭೀಮಾರ್ಜುನರ ಕಳುಹು. ಉಲುಕಿದರೆ ನಿನ್ನಾಣೆ ಎನುತ ಇನ್ನೊಂದು ಬೇರೆ ದಂಡನ್ನು ಕಾದಲು ತನ್ನೊಡನೆ ಕಳುಹ ಹೇಳಿ ನಿಜಧನುವ ನುಡಿಸುತ ನಿಲ್ಲುವನು. (೧೧.೬೧)

೨. ಭೀಮನು ನಡುವೆ ಬಂದು ಧರ್ಮನನ್ನು ಗಾಯಗೊಳಿಸಿದ ಸೇಡನ್ನು ತೀರಿಸಿಕೊಳ್ಳುವನು. (೧೨ನೆಯ ಸಂಧಿ) ಭೀಮನಿಗೆ ಬುದ್ಧಿ ಕಲಿಸಲು ಕೌರವಸೇನೆ ಬಂದು ಆತನನ್ನು ಮುತ್ತಿತು. ಕೌರವ ಭಟರು ಭೀಮನ ಮುತ್ತಿ ಕೈಮಾಡಿದರು. (೧೨.೧೬) ಕರ್ಣನು ಧರ್ಮನ ಕಡೆಗೆ ರಥವ ಹೊರಳಿಸಿದನು. ಕಾಲಯಮನೊ ಎಂಬಂತೆ ಕರ್ಣನು ಭೂಪಾಲಕನ ಬೆಂಬತ್ತಿದನು. ಪಾಂಚಾಲಿಯ ಓಲೆ ಕಾವವರಿಲ್ಲವೆಂದು ದಂಡು ಮರುಗಿತು! (೧೩.೨೩)

ಆ ಯುದ್ಧದಲ್ಲಿ ಕರ್ಣನು, ನಕುಲನನು ನೋಯಿಸಿದ; ಸಹದೇವನ ಘಾಯಂಬಡಿಸಿದನು. ಇವನ ಕಟ್ಟಾಳುತನಕೆ ಪಾಂಡವಸೇನೆ ಬೆರಗಾಯ್ತು. ಇನ್ನು ಈ ಕರ್ಣನಿಂದ ನಕುಲ ಸಹದೇವ, ಧರ್ಮಾದಿಗಳೆಲ್ಲರೂ ಮಡಿಯುವರೆಂದು ಕಂಡೊಡನೆ ಶಲ್ಯನು ಕರ್ಣನಿಗೆ ನುಡಿಯುವುದೇನೆಂದರೆ. "ಅಕಟಕಟ, ರಾಧೇಯ ಕೇಳು.

ಈ ನಕುಲನು, ಈ ಸಹದೇವನು, ಈ ಕುಂತೀ ಕುಮಾರಕರು ಅಕುಟಿಲರು; ನಯಕೋವಿದರು; ಧಾರ್ಮಿಕರು. ಇವರ ಕೊಲಬೇಡ. ಅತಿ ಬಾಧಕರು ಭೀಮಾರ್ಜುನರು. ಅವರ ಸಂಹರಿಸು" (೧೩.೪೩)

"ಕಬ್ಬಿನ ತೋಟದಲಿ ನರಿ, ಹುಲಿಯವೊಲ್ ಗರ್ಜಿಸಿತು! ಬಾಲ ವೃದ್ಧರಲಿ ಹೆಕ್ಕಳಿಸಿ ಹೆಣಗಿದೆ! ನಿನಗೆ ಬಲುಹು ಉಂಟಾಗಿದ್ದರೆ ಅತ್ತ ಫಲ್ಗುಣನ ಕೂಡ ಆಡು, ನಡೆ, ಮರುವಲಗೆಯನು ಭೀಮನಲಿ ಬೇಡು." (೧೩.೪೪) ಈ ಮಾತು ಕೇಳಿ ಕಿಡಿಕಿಡಿಯಾಗಿ ಕರ್ಣನು, 'ಹಾಗಾದರೆ ಆ ಭೀಮಾರ್ಜುನರ ತೋರು,' ಎಂದು ಅತ್ತ ಮರಳುವನು. ಇಷ್ಟರಲ್ಲಿ ದುರ್ಯೋಧನನು ಭೀಮನ ಕೈಗೆ ಸಿಕ್ಕು ಗಾಸಿಯಾಗುತ್ತಿದ್ದುದು ತಿಳಿಯಿತು. ಅವನನ್ನು ಭೀಮನ ತೋಳು-ಬಲೆಯಿಂದ ಬಿಡಿಸಲು ಅನುವಾಗುವನು. (೧೩.೪೮)

೩. ಇಪ್ಪತ್ತೈದನೆಯ ಸಂಧಿಯಲ್ಲಿ ಕರ್ಣಾರ್ಜುನರ ಕಾಳಗದ ಪರಮಾವಧಿಯು ಆಗುವುದು. ಕರ್ಣನು ಅರ್ಜುನನ ಸಲುವಾಗಿ ಮೀಸಲಿರಿಸಿದ ಒಂದು ತೀಕ್ಷ್ಣ ಶರವನ್ನು ಆತನ ಕೊರಳಿಗೆ ಹೂಡುವನು. ಇನ್ನು ತನಗೆ ಗೆಲುವು ನಿಶ್ಚಿತವೆಂದು ಕರ್ಣನು ಹಿಗ್ಗುವನು. ಆ ಹಿಗ್ಗಿನಲ್ಲಿ ಶಲ್ಯನಿಗೆ ಹೀಗೆ ಪ್ರಶ್ನಿಸುವನು.

"ಏನು ಸಾರಥಿ, ಸರಳು ಪಾಂಡವ ಸೇನೆಯನು ಗೆಲಲಹುದೆ? ಪಾರ್ಥನ ಮಾನಿನಿಗೆ ವೈಧಮ್ಯದೀಕ್ಷಾವಿಧಿಯ ಕೊಡಲಹುದೆ? (ಇದನು). ಆನಲಮ್ಮುವರುಂಟೆ? ನಿನಗೆ ಇದು ಸಾನುರಾಗವೆ? ಹೇಳು" (೨೫.೧೩) ಎನಲು ಮಾದ್ರೇಶ ರವಿಸೂನುವಿನ ರೌದ್ರಾಸ್ತ್ರವನು ಹೊಗಳಿ, "ಲೇಸು ಮಾಡಿದೆ, ಕರ್ಣ ! ಕೌರವನು ಈ ಸುದಿನ ಸಾಕಿದ ಫಲವನು ನೀನು ಐಸಲೇ ತೋರಿದೆ! ಪೂತುರೆ!" ಎಂದನು (೨೫.೧೪) ಮತ್ತೆ ಶಲ್ಯನು ಎಂದುದೇನೆಂದರೆ: "ಆಯಿತು; ಇದು ಸರಳು ಒಳ್ಳಿತೈ; ಕುರುರಾಯನ ಅಭ್ಯುದಯ ಪ್ರಪಂಚವು ಇದು ಆಯಿತು. ನೀನು ಈ ಸಾಯಕವನು ತಿರುಗಿ ತೊಡು; ನಿರ್ದಾಯದಲಿ ನೆಲನಹುದಲಾ! ಕೊರಳಿಗೆ ಒಡ್ಡಲು ಹೊಳ್ಳುವಾರಿದ. ಸರಳು ಮುಕುಟವ ತಾಗುವುದು. ಮೇಣ್ ಉರಕೆ ತೊಟ್ಟರೆ ಈಗಳೆ ಅರ್ಜುನನ ಕೊರಳ ಕೊಯ್ವುದು. ಬೇಗ ಮರಳಿ ತೊಡು, ತೊಡು! ಕೌರವನ ಅರಸುತನ ಉಳಿವುದು ಕಣಾ! ಹೇವರಿಸದಿರು; (ನಾನು) ಹೇಳುವುದು (ನಿನಗೆ) ಪಥ್ಯವು." ೨೫.೧೩,೧೬

೪. ಆದರೆ, ಕರ್ಣನ ಹೆಮ್ಮೆಗೆ ಆತ್ಮವಿಶ್ವಾಸಕ್ಕೆ ಇದು ಸರಿ ಬರಲಿಲ್ಲ. ಆತನು ತಾನು ಇಟ್ಟ ಗುರಿ ತಪ್ಪುವದುಂಟೇ? ಎಂದು ಆಡಿದಂತೆ ಈ ಕೆಳಗಿನಂತೆ ಒರೆಯುವನು. "(ನನಗೆ) ಒಂದು ಶರಸಂಧಾನ; ಒಂದು ನಾಲಗೆ; ನಮ್ಮಲಿ ಶಲ್ಯ ! ಕುಟಿಲ ವಿದ್ಯವನು ಎಂದು ಕಂಡೆ? ಅಧರ್ಮದಲಿ ನಾವು ಅಡಿಯಿಡೆವು. ಇಂದು ಹೂಡಿದ ಶರವನು ಇಳುಹುವುದು ಅಂದವೆ? (ಇದನು) ನೀನು ಅರಿಯೆಯಾ? ಹೆರಸಾರು!" (೨೫.೧೭) ಎಂದವನೆ ಕರ್ಣನು ಆ ಉಗ್ರಬಾಣವನ್ನು ಅರ್ಜುನನ ಮೇಲೆ ಬಿಟ್ಟನು. ಲೋಕವೆಲ್ಲವೂ ನಡುಗಿತು. ಅರ್ಜುನನ ಅವಸ್ಥೆಯಾಯಿತೆಂದು ಎಲ್ಲೆಲ್ಲೂ ಪಾಂಡವರ ದಂಡಿನಲ್ಲಿ ಹಾಹಾಕಾರ! ಕೌರವರಲ್ಲಿ ವಿಜಯ ಗರ್ಜನೆಗಳು ನಡೆದುವು. ಆದರೆ, ಕೃಷ್ಣನು ಕೌಶಲದಿಂದ ಆ ಬಾಣದ ಗುರಿಯನ್ನು ತಪ್ಪಿಸಿದನು. ಅರ್ಜುನನ ಕೊರಳಿಗೆ ತಾಗದೆ ಅದು ಕಿರೀಟಕ್ಕೆ ಎರಗಿತು. ಅದರಿಂದ ಅರ್ಜುನನ ಮಕುಟದ ಬೆಸುಗೆ ಮುರಿಯಿತು. ಹರಿ ವರೂಥವನು ಕುಸಿಯಲು ಒತ್ತಿದನು ತೀವ್ರ ಫಣಿಬಾಣವು ತಪ್ಪಿತು. (೨೫-೦೧)

೫. ಅರ್ಜುನನ ಕೊಲೆಗೆ ಹೊಂಚುಹಾಕಿದ್ದ ಆ ಸರ್ಪಬಾಣವು ತನ್ನ ಕೆಲಸವು ಹುಸಿಯಾದುದನ್ನು ಕಂಡು, ಕಂಗನೆ ಕನಲಿತು. 'ಬದುಕಿದನೆ ಅರ್ಜುನನು! ಹಾ!' ಎನುತ ಹಲ್ಲುಮೊರೆಯುತ್ತ ಕರ್ಣನಿದ್ದೆಡೆಗೆ ಹರಿದಿತು. ಅವನಲ್ಲಿ ಬಂದು ಬೇಡಿಕೊಂಡಿತು: "ತೊಡು, ತೊಡು, ಇನ್ನೊಮ್ಮೆ! ಅಕಟಾ, ರಾಜ್ಯಕಾರ್ಯವ ಕೆಡಸಿದೆಯಲಾ! ನಿನ್ನ ಸಾರಥಿ ಲಕ್ಷ್ಯ ಭೇದನವನು ನುಡಿದು ಹೇಳನೆ? (ನನ್ನನ್ನು ಇನ್ನೊಮ್ಮೆ ಬಿಟ್ಟರೆ ನಾನು) ನರನನು ಈರೇಳು ಲೋಕದಲ್ಲಿ ಅಡಗಿದರೂ ಹುಡುಕಿ ತಿಂಬೆನು. ಬೇಗ ತೊಡು" (೨೫.೩೩)

೬. ಆಗ ಕರ್ಣನು ಅದಕ್ಕೆ ಮಾರು ನುಡಿದುದೇನೆಂದರೆ: 'ನೀನು (ಸರ್ಪ) ಎಂದು ನಾನು ಅರಿಯೆನು. ಕರ್ಣನು ಲೋಕದ ಮರೆಯಲಿ ಅರಿಗಳ ಗೆಲುವವನೆ? ನೀನು ಎನ್ನ ಹವಣವನು ಅರಿಯ; ತೊಡುವುದಿಲ್ಲ. (ನಡೆ). (೨೫.೩೭)

೭. ಈ ಮಾತು ಕೇಳುತ್ತಲೆ ಶಲ್ಯನು ನಿಟ್ಟುಸಿರಿಟ್ಟು. "ನೃಪಾಲ (ದುರ್ಯೋಧನ)ನ ಇರಿದೆಯೊ ರಾಧೇಯ!" ಎಂದು ಕೋಪಿಸುತ ಕರ್ಣನ ಬಯ್ದು ಗಜರಿದನು. "ನೃಪನು ನಿನ್ನನು ಬಿಡದೆ ಸಲಹಿದುದಕೆ ಇದು ಉಪಕಾರವೆ?" ಎಂದು ಮೂದಲಿಸಿದನು.

೮. ಆಗ ಕರ್ಣನು ಮನದಲ್ಲಿಯೇ ಹೀಗೆ ಆಲೋಚಿಸುವನು. "ಮಾತೆಗಿತ್ತೆನು ಭಾಷೆಯನು; ನಿನ್ನಾತಗಳೊಳು ಐವರೊಳಗೆ ಅರಿದಿರಾದಡೆಯು ತಲೆಗಾದು ಬಿಡುವೆನು; ಕೊಲುವುದಿಲ್ಲ. ಎಂದು (ಕೊಟ್ಟ) ಮಾತು ಹುಸಿಯಾಗುವುದು. ಕೊಟ್ಟ ಮಾತು ಹುಸಿಯಾದ ಬಳಿಕ ಬದುಕುವುದು ಏತಕ್ಕೆ? ನಾನೇ ಪಾರ್ಥನ ಬಾಣಕ್ಕೆ ಬಲಿಯಾಗುವೆನು." (೨೫-೪೧) ಎಂಬ ವಿಚಾರವು ಮನದೊಳಗೆ ಬಲವತ್ತರವಾಗಿದ್ದಿತು. ಆದರೂ ಆತನು ಶಲ್ಯನಿಗೆ ಹೊರಗೆ ಹೇಳಿದ ಮಾತು ಹೀಗಿದೆ : "ಮಾದ್ರೇಶ ನೀನು ಮರುಳಲಾ! ಮರಳಿದ ಶರವ ತೊಡುವೆನೆ? ಸೈರಿಸು" (ಕರ್ಣನ ಈ ಬಗೆಯ ನಡೆಯನ್ನು ಕಂಡು ಸೈರಿಸಲಾರದೆ ಶಲ್ಯನು ಕಡಿವಾಣವನ್ನು ಬಿಸುಟು ಹೋಗಿ ಬಿಡುವನು. (೨೫-೪೨)

೯. ಮುಂದೆ ಸ್ವಲ್ಪ ಹೊತ್ತಿನಲ್ಲಿ ಕರ್ಣನ ತೇರು ನೆಲದಲ್ಲಿ ಕುಸಿದು ಸಿಕ್ಕು ಬೀಳುವುದು. ಅದನ್ನೆತ್ತಲು ಕರ್ಣನು ರಥದೊಳಗೆ ಚಾಪವನು ಇಳುಹಿ, ಸೆರಗನು ಅಳವಡಿಸಿ, ಅಲ್ಲಿಂದಿಳಿದು ಗಾಲಿಯನು ಅಲುಗಿ ಪಾರ್ಥನ ನೋಡಿ ನಸುನಗುತ ಬಿನ್ನವಿಸುವನು: "ಎಲೆ ಪಾರ್ಥ, ರೂಢಿಸಿದ ಭಟ ನೀನು, ಪಂಥದ ಪಾಡುಗಳ ಬಲ್ಲವನು. ಶಾಸ್ತ್ರವ ಮೋಡಿಗಳೆವವನಲ್ಲ. ಲೌಕಿಕ, ವೈದಿಕ ಸ್ಥಿತಿಯ ನಾಡೆ ಬಲ್ಲಿರಿ. ಶಸ್ತ್ರಹೀನರ ಕೂಡೆ, ವಾಹನವಿಹೀನರಲಿ ಕೈಮಾಡಲು ಅನುಚಿತ, ಎಂಬುದನು ನೀನು ಬಲ್ಲೆ. ಅರಗಳಿಗೆಯನು ಸೈರಿಸುವುದು. ರಥವನು ಎತ್ತಿ ನಿನಗೆ ಆನು ಅಳವಿಗೊಡುವೆನು." (೨೬.೧೬.೧೭) ಎನುತ ಗಾಲಿಯನು ಅಲಿಗು ಕೀಲಚ್ಚಿನಲಿ ಮುಂಗೈ ಕೊಟ್ಟು ಮೊಳಕಾಲಿನಲಿ ಧರಣಿಯನು ಅವುಕಿ ತಗ್ಗಿದ ರಥವನು ನೆಗಹುತ್ತಿದನು. (೨೫.೧೮)

೧೦. ಕರ್ಣನ ಆ ಪಾಡು ನೋಡಿ ಅರ್ಜುನನಿಗೆ ಕನಿಕರವುಂಟಾಯಿತು. ಕೃಷ್ಣನು ಅರ್ಜುನನನ್ನು ಜರೆದು ಕರ್ಣನ ಬೇಗ ಮಾಡು, ಎಂದು ಒತ್ತಾಯಪಡಿಸುವನು. (೨೫-೨೦) ಅರ್ಜುನನು ಗ್ಲಾನಿಯಲಿ ಮುಳುಗಿದನು. ಶೋಕವು ಅವನನ್ನು ಸೂರೆಗೊಂಡಿತು. ಕಂಗಳಲಿ ನೀರು ಸೂಸಿದುವು. ಧನುವನು ಇಳುಹಿದನು. ಕೆಯ್ಯ ಕಣೆಗಳ ಇರಿಸಿ ಆತನು ಕೃಷ್ಣನಿಗೆ ಎಂದುದೇನೆಂದರೆ "ದೇವ, ಕರ್ಣನು ಹಗೆಯಾಗಿರನು. ಇದರ ಹದನವೇನೆಂದು ಅರಿಯೆನು. ಧನುವ ತುಡುಕುವಡೆ ಕೈಗಳು ಏಳವು. ಈತನ ಮೇಲೆ ಜೀವವು ಕರಗುವುದು. ಯುಧಿಷ್ಠಿರನ ಇಮ್ಮಡಿ ನೇಹವು ಇವನಲ್ಲಿ ತೋರುವುದು. ಕೃಷ್ಣ, ಇದು ಸೋಜಿಗವಲ್ಲವೆ? ಈ ಕರ್ಣನು (ನನಗೆ) ಯಾರು?" "ನಾನು ಕುರುಪತಿಗೆ ಧರೆಯ ಬಿಟ್ಟುಕೊಡುವೆವು. ನಾವು ಅರುವರೂ ಒಡಹುಟ್ಟಿದವರು. ವಿಪಿನಾಂತರದೊಳಗೆ ನಿನ್ನನು ಭಾವಶುದ್ಧಿಯಲಿ ಭಜಿಸುವೆವು. ತೆರಳುವ ಈ ಸಿರಿಗೋಸುಗ ಸೋದರನ ಕೊಲುವೆನೆ? ಕೃಷ್ಣ! ಕರುಣಿಸು. ಇವನಲಿ ಹಗೆ ಏರದು. ಕರ್ಣನು ಯಾರು?" (೨೬.೨೧.೨೯)

೧೧. ಅರ್ಜುನನ ಈ ಪಾಡು ನೋಡಿ ಕೃಷ್ಣನು ಮನದಲ್ಲಿ ಮರುಗಿದನು. ಆದರೂ ಹೊರಗೆ ಕೆರಳಿದಂತೆ ನಟಿಸಿ, ಆತನನ್ನು ಜರೆದು, ಮೂದಲಿಸಿ ಭಂಗಿಸಿ ನುಡಿದು ಕರ್ಣನ ಕೊಲೆಗೆ ಪ್ರೇರೇಪಿಸುವನು. 'ಕರ್ಣನು ವಂಶಹೀನನು; ಜಾತಿಸಂಕರದವನು. ತೊಲಗಿಸು ಸೂತಜನ ಶಿರವ' ಎಂದು ಆಜ್ಞಾಪಿಸುವನು. (೨೫.೪೦) "ಕರ್ಣನು, ತಲೆಯನು ಮಾರಿ ಶರೀರವನು ಸಲೆ ಸಲುಹಲೋಸುಗ ಕೌರವನ ಬಾಯತಂಬುಲಕೆ ಕೆಯ್ಯಾಂತವನು ಬಂಧುವೆ? ಜೂಜನಾಡಿಸಿ ನಾಡಕೊಳಿಸಿದ ಹಿಸುಣ ಬಂಧುವೆ? ಕಂದ ಅಭಿಮನ್ಯುವನು ಕೊಂದ ಬಾಲಹತ್ಯಾದೋಷಿ ಬಂಧುವೆ? ಈತನನು ಕೊಲ್ಲದೆ ಬಿಡುವುದು ಅನುಚಿತ" (೨೫.-೪೧-೪೩) ಎಂದು ಕೃಷ್ಣನು ನಿಜಮಾಯೆಯನು ಬೀಸಿದನು. ತಮವನು ಹರಹಿದನು. ನರನ ಮನದಲಿ ರೋಷವನು ಬಿತ್ತಿದನು. ಆಗ ಅರ್ಜುನನು "ಆಯಿತು; ಗುಣದೋಷ ನಿನ್ನದು, ಕೊಲ್ಲುವುದು ಪಾಪವೊಪುಣ್ಯವೊ ಅದರ ಗೊಡವೆ ತನಗೇಕೆ?" ಎಂದು ಬಾಣ ಹೂಡಿ ಕರ್ಣನನ್ನು ಹೊಡೆಯುವನು.

೧೨. ಕರ್ಣನು ಇನ್ನು ಧುರ್ಯೋಧನನಿಗೆ ಯಾರೂ ಆಪ್ತರು, ಬೆಂಬಲಿಗರು ಉಳಿಯಲಿಲ್ಲವೆಂದು ಮಿಡುಕುವನು. ಕೃಷ್ಣನು ಮುನ್ನಿನ (ತನ್ನ) ಕುಲವನು ಅರುಹಿ ತನ್ನ ಗೋಣ ಕೊಯ್ದನೆಂದು ಮರುಗುವನು. (೨೭.೫) 'ಕುಲಕೆ ಕೀಳಿವನು' ಎಂದು ಹೀಯಾಳಿಸಿದರೆ ಸಿಂಹಾಸನದಲಿ ಎನಗೆ ಅಭಿಷೇಕವನು ಮಾಡಿ, ಕುಲದ ಮಲಿನವ ತೊಳೆದ ದುರ್ಯೋಧನನನ್ನು ಹೇಗೆ ಮರೆಯಲೆಂದು ದುಃಖಿಸುವನು. ತನ್ನ ನೋಡಿ ದಣಿಯನು; ನಿತ್ಯದಲಿ ಉಚಿತವ ಮಾಡಿ ದಣಿಯನು; ತನ್ನೊಡನೆ ಖೇಳ-ಮೇಳದಲಿ ಅಡಿ ದಣಿಯನು. ಎಂದು ಮುಂತಾಗಿ ಕೌರವರಾಯನ ಉಪಕಾರವನ್ನು ನೆನೆಯುವನು 'ಸಲಹಿದ ಒಡೆಯನ ಜೋಳವಾಳಿಗೆ (ಉಪಕಾರಕ್ಕೆ) ತಲೆಯ ಮಾರುವುದೊಂದೆ ಪುಣ್ಯದ ಫಲವು' ಎಂದು ಸಮಾಧಾನವನ್ನು ತಂದುಕೊಂಡು ಕರ್ಣನು ಆತ್ಮಾಹುತಿಯನ್ನು ಅರ್ಪಿಸುವ ನಿಶ್ಚಯಮಾಡುವನು ಮತ್ತು 'ಸಾವಕಾಲದಲ್ಲಿ ಕೃಷ್ಣನ ಕಾಂಬ ಸುಕೃತವು ಇಳೆಯ ಮೇಲೆ ಎನಗಲ್ಲದೆ ಇನ್ನಾರಿಗೆ? ತಾನೆ ಧನ್ಯನು!' ಎಂಬ ಹಿಗ್ಗನ್ನು ತಾಳುವನು. ಕೃಷ್ಣನನ್ನು ಎವೆ ಹಳಚದೆ ನಿರೀಕ್ಷಿಸುವನು. ತನ್ನ ಹೃದಯಾಂಬುಜ ಮಧ್ಯದೊಳಗೆ ಹರಿ, ಹೊರಗೆ ಕಣ್ಣೆದುರು ಹರಿ ಕಾಣುತ ಹೀಗೆ ಹೊರಗೊಳಗೆ ಹರಿಯ ಕಾಣುತ ನಿಜದ ಎಚ್ಚರ ಸಮಾಧಿಗಳೊಳಗೆ ಕರ್ಣನಿದ್ದನು. (೨೭-೯,೧೦)

೧೩. ಅರ್ಜುನನಿಗೆ ಕರ್ಣನ ಮೇಲೆ ಮತ್ತೆ ಬಾಣಗಳನ್ನು ಎಸೆಯಲು ಮನಸಾಗದಾಯಿತು. "ಪಾರ್ಥ! ಸರಳ ತೊಡು; ತೊಡು. ಕರ್ಣನ ಶರವನಿಳುಹು. ಹಾರದಿರು; ಹೇವರಿಸದಿರು, ತೆಗೆ ದಿವ್ಯಶರವನು. ಬೇಗ ಮಾಡು;" ಎಂದು ಕೃಷ್ಣನು ಒತ್ತಾಯಪಡಿಸಲಾರಂಭಿಸಿದನು. (೨೭-೧೧) ಆದರೂ ಅರ್ಜುನನು ಸುಮ್ಮನಿದ್ದುದರಿಂದ 'ಕರಗುವರೆ ನೀ ಸಾರು! ಭೀಮನ ಕರೆದು ಕೊಲಿಸುವೆನು. ಈತನನು ನಿಷ್ಠುರನೆಂದೆನ್ನದಿರು, ತೆಗೆದು ಬಾಣಗಳ ಬಿಡು. ಯುಧಿಷ್ಠಿರನ ಅರಸುತನ ನಿಲಲಿ. ನೀನಂಜುವರೆ ಸಾರು" ಎಂದು ಇನ್ನೂ ಅಗ್ರಹ ಮಾಡುವನು. (೨೭-೧೨) ಅರ್ಜುನನಿಗೆ ಕೃಷ್ಣನ ಈ ದ್ವೇಷಬುದ್ಧಿಯ ಅರ್ಥವಾಗುವುದಿಲ್ಲ. 'ಕರ್ಣನ ಮೇಲೆ ಈಸು ಬಹಳ ದ್ವೇಷವೇನೋ?' ಎನುತ ಮನದಲಿ ಘಾಸಿಯಾಗುವನು, ಅನಿವಾರ್ಯವಾಗಿ ಕರ್ಣನ ಮೇಲೆ ಕೂರಂಬುಗಳನ್ನು ಎಸೆಯುವನು (೨೭.೧೩)

೧೪. ಇಷ್ಟಾದರೂ ಕರ್ಣನ ಹರಣವು ಇನ್ನೂ ಹಾರದೆ ಉಳಿದ ಮರ್ಮವನರಿತು ಕೃಷ್ಣನು ಕಡಿವಾಣವನ್ನಿಟ್ಟು ವಿಪ್ರವೇಷದಿಂದ ತಾನೇ ಕರ್ಣನಿದ್ದಲ್ಲಿಗೆ ಹೊರಟನು. (೨೭-೧೪) ಅಲ್ಲಿ ಬಂದು ಆ ಮಾಯಾ ಬ್ರಾಹ್ಮಣನು ಆತನನ್ನು ಕುರಿತು : "ನೀನು ಜಗದೊಳು ತ್ಯಾಗಿ ಎಂಬ ಕೀರ್ತಿಯ ಲೋಗರಿಂದವೆ ಕೇಳ್ದು ಬಂದೆನು. ಮೇಗಣ ಅತಿಶಯ ಪದವನೊಲುವಡೆ, ಮನದ ಬಯಕೆಗಳ ಈಗಳೆ ಈವುದು; ನಮ್ಮಭೀಷ್ಟ, ಶ್ರೀಗೆ ಮಂಗಳವು" ಎಂದು ಹರಸಿದನು. ಆಗ ಕರ್ಣನು ನಸುನಗುತ "ಸಿಂಹಾಸನದ ಮೇಲಿದ್ದಾಗ ತ್ಯಾಗಿ; (ಆಗ) ಬೇಡಿತನೀಯ ಬೇಹುದು. ಈಗಳೀವುದ ಬೆಸಸಿ" ಎನ್ನಲು ಆ ವಿಪ್ರನು "(ನಿನ್ನ ಕಿವಿಯಲಿ) ತೂಗುವ ಈ ಕುಂಡಲಗಳನು ಈವುದು; ಬೇಗ ಧಾರೆಯನು ಎರೆದು ಕೊಡಿ;" ಎಂದನು. ಕರ್ಣನು ಧಾರೆಯೆರೆಯಲು ನೀರು ಕಾಣದೆ ಇರಲು, ಆತನಿಗೆ "ನಿನ್ನಯ ಹೃದಯದೊಳಗಿರ್ದ ಅಮಲ ಗಂಗಾ ಜಲವನು ತೆಗೆದು, ಎನಗೆ ಹದುಳದಿಂದ ಧಾರೆಯನು ಎರೆ; ಸಂಪದದ ಮುಕುತಿಯ ಪದವ ನೊಲುವಡೆ ಇದು ಶುಭೋದಯವು." ಎಂದು ಆ ಮಾಯಾವಿಪ್ರನು ಹೇಳುವನು. (೨೭-೧೫-೧೭)

೧೫. ಕೂಡಲೆ ಕರ್ಣನು ಒಂದು ಬಾಣವನ್ನು ತಕ್ಕೊಂಡು ತನ್ನ ಎದೆಯನ್ನು ಬಗಿದುಕೊಂಡನು. ಘರಿಘರಿಲು ಘರಿಲೆಂದು ನಿರ್ಮಲೋದಕವನು ತೆಗೆದನು. ಪರಮಸಂತೋಷದಲಿ ಧಾರೆಯನೆರೆದು ಕುಂಡಲಗಳ ದಾನ ಮಾಡಿದನು. (೨೫-೧೮) ಪರಮ ಕರುಣಾಸಿಂಧು ಶ್ರೀಕೃಷ್ಣನು ಕರ್ಣಂಗೆ ನಿಜ ಮೂರ್ತಿಯನು ತೋರಿದನು. ಉರುತರ ಪ್ರೇಮದಲಿ ಮುಕುತಿ ಪದವನಿತ್ತನು. (೨೫-೧೯) ಅರ್ಜುನನು ಗಿರಿಜೆಯಿಂದ ಪಡೆದ ಅಂಜನ ಬಾಣವನ್ನು ಕರ್ಣನ ಮೇಲೆ ಬಿಟ್ಟು ಆತನ ಕೊರಳನು ತುಂಡರಿಸಿದನು. (೨೫.೨೦)

ಇಲ್ಲಿ ತಲೆದೋರುವ ಕೆಲವು ಪ್ರಶ್ನೆಗಳು

೧. 'ಜೋಳವಾಳಿಯನ್ನು' ನೆನೆದವನು; ಒಡೆಯನ ವಿಶ್ವಾಸ ಘಾತವನ್ನು ಮಾಡದೆ, ಆಳ್ದನ ಹಿತಕ್ಕಾಗಿ ತನ್ನ ದೇಹವನ್ನೇ ಈಡಾಡಿದವನೆಂದು ಖ್ಯಾತಿ ಕರ್ಣನದು. ಇದು ನಿಜವಿದ್ದರೆ, ಗದುಗಿನ ಭಾರತದೊಳಗಿನ ಕರ್ಣನ ಪಾತ್ರ ರಚನೆಯಲ್ಲಿ ವಿಸಂಗತಿಯುಂಟೆಂದು ಒಪ್ಪಬೇಕಾಗುತ್ತದೆ. ಏಕೆಂದರೆ:

(ಅ) ಕರ್ಣನು ಕೃಷ್ಣನಿಗೆ "ನಿನ್ನ ಐವರನು ನೋಯಿಸೆನು" ಎಂದು ಸೂರ್ಯನಾಣೆಯಿಟ್ಟುಕೊಂಡು ವಚನ ಕೊಡುತ್ತಾನೆ! (ಮೇಲೆ ೧೦ನೆಯದರಲ್ಲಿ ಬಂದ ಅಂಶ ನೋಡಿ).

(ಆ) "ಐವರ ತಲೆಗಾದು ತೋರ್ರೈ ಕಂದಾ; ಬಿಟ್ಟ ಬಾಣವನು ಬಿಡಬೇಡ ಕಂಡೆಯಾ" ಕುಂತಿ ಕೇಳಿಕೊಂಡಿದ್ದುದಕ್ಕೆ 'ಹಸಾದ" ಎಂದು ಒಪ್ಪಿಕೊಳ್ಳುತ್ತಾನೆ. (೨೦ ನೋಡು)

(ಇ) ಇಷ್ಟೇ ಅಲ್ಲ; ಅರ್ಜುನನನ್ನು ಹೊಡೆಯುವ ಕಾಲದಲ್ಲಿ ಕರ್ಣನಲ್ಲಿ, ಅರ್ಜುನನನ್ನು ಕೊಲ್ಲುವ ಮನಸ್ಸು ಇದ್ದಿಲ್ಲವೆಂಬುವಂತೆ ಕುಮಾರವ್ಯಾಸನು ವರ್ಣಿಸಿದ್ದಾನೆ. ಮಾತೆಗೆ ಮಾತು ಕೊಟ್ಟಿದ್ದೇನೆಂದು ನೆನೆದುಕೊಳ್ಳುವನೆಂದು ಹೇಳಿದ್ದಾನೆ. (೨೧ ಮತ್ತು ೨೪ ನೋಡು).

(ಈ) ಶಲ್ಯನು 'ಬಾಣ ಹೂಡು ಮತ್ತೆ,' ಎಂದಾಗ ಕರ್ಣನು, ಮನದಲ್ಲಿಯೇ, ತಾನು ತಾಯಿಗೆ ಕೊಟ್ಟ ವಚನಕ್ಕೆ ಬಾಧೆ ಬಂದೀತು; ಕಾರಣ ಈ ಬಾಣ ಹೂಡಲಾರೆ ಎಂದು ನಿರ್ಧರಿಸುವನು. ಆದರೆ, ಹೊರಗೆ ಶಲ್ಯನಿಗೆ ತೋರಿಕೆಯ ಬೇರೆ ಕಾರಣ ಹೇಳುವನು.

೨. ಆದುದರಿಂದ, ಇದು ನಿಜವಿದ್ದರೆ, ಕರ್ಣನಿಗೆ 'ಕೃತಜ್ಞ, ಪ್ರಾಮಾಣಿಕನೆಂದು ಹೇಳುವುದಕ್ಕಾಗಿದೀತೇ,?

೩. ಆದರೆ, ಈವರೆಗೆ ಲೋಕವೆಲ್ಲವೂ ಕರ್ಣನು ಉಂಡ ಮನೆಯ ಗಳ ಎಣಿಸುವ ಕೇಡಿಗನಲ್ಲವೆಂದೇ ಸಾರುತ್ತಿದೆ. ಸಾವಿರಾರು ವರುಷಗಳಿಂದ ನಡೆದು ಬಂದ ಈ ಪರಂಪರೆಗೂ ಬೆಲೆ ಕೊಡಬೇಕಾಗಿದ್ದರೆ, ಗದುಗಿನ ಭಾರತವನ್ನೂ ಅಲ್ಲಗಳೆಯಬಾರದಾಗಿದ್ದರೆ ಇನ್ನೊಂದು ದಾರಿಯಿದೆ: ಕರ್ಣನು ತಾನು ಏನು ಮಾಡುತ್ತಿರುವೆನೆಂಬ ಆಮೂಲಾಗ್ರ ವಿಚಾರಿಯಾಗಿರದೆ ಗೊಂದಲ ಬಡಕ, ಹಾಗೂ ಎಲ್ಲರನ್ನೂ ಸಂತೈಸಲು ಹವಣಿಸುವ ವ್ಯಕ್ತಿಯಾಗಿತ್ತೆನ್ನಬೇಕು. ಇಲ್ಲವೆ ತಾನು ಕೀಳನೆಂಬ ಅರಿಮೆಯ ತೊಡಕಿನಿಂದ ಬಳಲುತ್ತಿರುವ (Inferioriry complex) ವ್ಯಕ್ತಿಯಾಗಿರಬೇಕೆಂದೇ ಹೇಳಬೇಕಾಗುತ್ತದೆ. ಏಕೆಂದರೆ:

(ಅ) 'ಹೊರೆದ ದಾತಾರಂಗೆ ರಿಪುಗಳ ಸಿರಸ್ಮ ತರಿದು ಒಪ್ಪಿಸುವೆನು' ಎಂದು ದೃಢ ಪ್ರತಿಜ್ಞೆಯುಳ್ಳವನು, ಕೃಷ್ಣನಿಗೆ 'ನಿನ್ನ ಐವರ ನೋಯಿಸೆನು; ರಾಜೀವ ಸಖನಾಣೆ;' ಎಂದು ಫಕ್ಕನೆ ಹೇಳಿಬಿಡುವನು.

(ಆ) ತಂದೆ ಸೂರ್ಯನು ಬಂದು "ಎಲೆ ಮರುಳು ಮಗನೆ ತಾಯಿಗೆ ಮೋಸ ಹೋಗಬೇಡ, ಹಿಂದೊಮ್ಮೆ ಹೀಗೆಯೇ ನಾನು ಬೇಡವೆಂದರೂ ಹರಿಗೆ ಕವಚವನು ಕೊಟ್ಟೆ" ಎಂದು ಎಚ್ಚರಿಸಿದಾಗ ಆತನಿಗೆ 'ಹಸಾದ' ಅಪ್ಪಣೆ; ಹಾಗೆ ಆಗಲಿ ಎಂದು ಹೇಳಿದವನು,

(ಇ) ಕುಂತಿಯಲ್ಲಿಗೆ ಬಂದವನೆ ಅವಳಿಗೂ "ತೊಟ್ಟ ಬಾಣ ತೊಡದಿರು; ನಿನ್ನ ತಮ್ಮಂದಿರನ್ನು ಕೊಲ್ಲಬೇಡ" ವೆಂದರೆ ಆ ಮಾತಿಗೂ "ಹಸಾದ" ವೆಂದೇ ತಲೆವಾಗುವನು! ಇದೆಲ್ಲವೂ ಮನಸ್ಸಿನ ಗೊಂದಲದಲ್ಲಿ ಯಾವಮಾತಿಗೂ ನಿಶ್ಚಿತವಾಗಿ ಅಂಟಿಕೊಳ್ಳಲಿಕ್ಕಾಗದ ಎಬಡತನದ ಪರಿಣಾಮವೆಂದು ಹೇಳಬಹುದಾಗಿದೆ. ಎಬಡರು ತಾವು ಮಾತನಾಡುವಾಗ, ಆಶ್ವಾಸನ ಕೊಡುವಾಗ, ಒಳಗೊಂದು ಹೊರಗೊಂದನ್ನು ಅರಿಯರು. ಆ ಮಟ್ಟಿಗೆ ಅವರು ಪ್ರಾಮಾಣಿಕರೇ. ಹೀಗೆ ಪ್ರಾಮಾಣಿಕರಾಗಿದ್ದು ಪರಸ್ಪರ ವಿಸಂಗತ ವಿರೋಧದ ವರ್ತನವನ್ನು ಮಾಡಬಹುದು. ಕರ್ಣನಲ್ಲಿ ತೂಕ, ತಾರತಮ್ಯ ಕಡಿಮೆ ಎಂಬುದಕ್ಕೆ ಆತನ ನಡೆವಳಿಯಲ್ಲಿ ಇನ್ನೂ ಒಂದೆರಡು ಉದಾಹರಣೆಗಳನ್ನು ಕಾಣಬಹುದು.

(ಈ) ದೇಶ-ಕಾಲ-ಪಾತ್ರಗಳ ಯಾವ ವಿಚಾರವೂ ಇಲ್ಲದೆ ಅವಿಚಾರಿಯಾಗಿ ಎಂದರೆ ಏನೂ ವಿಚಾರವಿಲ್ಲದೆ ದಾನಮಾಡುವ ಆತನ ಸ್ವಭಾವವೂ ಮೇಲಣ ಆತನ ನಡೆವಳಿಯನ್ನೇ ಪುಷ್ಟಿಕರಿಸುವದೆಂದು ಗ್ರಹಿಸಬಹುದಾಗಿದೆ.

ಇಂತೀ ಬಗೆಯಾಗಿ ಕುಮಾರವ್ಯಾಸನು ಕರ್ಣನನ್ನು ಪ್ರಾಮಾಣಿಕ ಎಬಡ ಪ್ರಾಣಿಯೆಂದು ಗ್ರಹಿಸಿ ಆತನನ್ನು ಚಿತ್ರಿಸಿರುವನೊ? ಎಂಬ ಸಂದೇಹವುಂಟಾಗುವುದು. ಅಥವಾ

೪. ಕುಮಾರವ್ಯಾಸನು ಕೃಷ್ಣ ಕರ್ಣರ ಭೆಟ್ಟಿಯ ಈ ಪ್ರಸಂಗವನ್ನು ತುಂಬ ರಸವತ್ತಾಗಿ ಚಿತ್ರಿಸಿದ್ದಾನೆ. ಇದನ್ನು ಒಂದು ನಾಟಕವಾಗಿ ಆಡುವುದಕ್ಕೆ ಬರುವಂತೆ ಸೊಗಸಾದ ಸಂವಾದವು ಇದರಲ್ಲುಂಟು, ಅಭಿನಯಕ್ಕಂತೂ ತುಂಬ ಇಂಬಿದೆ. ಈ ಕಲಾಕೃತಿಯನ್ನು ನಿರ್ಮಿಸುವಲ್ಲಿ ಕುಮಾರವ್ಯಾಸನಿಗೆ ಶ್ರೀ ಕೃಷ್ಣನ ಅಲೌಕಿಕ ಸಾಮರ್ಥ್ಯವನ್ನು ಲೋಕಕ್ಕೆಲ್ಲ ಬೆರಗುಗೊಳಿಸುವ ರೀತಿಯಲ್ಲಿ ತೋರಿಸಬೇಕೆಂಬ ಹಂಬಲವಿರಬೇಕೆಂದು ತೋರುತ್ತದೆ. ಶ್ರೀ ಕೃಷ್ಣ ಮಹಿಮೆಯ ಪ್ರಭಾವದಿಂದ ಕರ್ಣನಿಗೆ ತಾನು 'ಪಾಂಡವರ ನೋಯಿಸೆ'ನೆಂದು ಮಾತು ಕೊಡುವಲ್ಲಿ ದುರ್ಯೋಧನನಿಗೆ ಕೇಡು ಬಗೆಯುತ್ತಿರುವೆನೆಂಬ ಅರಿವೂ ಉಳಿಯಲಿಲ್ಲವೆಂದು ಕುಮಾರವ್ಯಾಸನು ಬಗೆದಿರಬೇಕು. ಇಲ್ಲವಾದರೆ ಹೀಗೆ ತನ್ನ ಪೂರ್ವಚಾರಿತ್ರ್ಯಕ್ಕೆ ಅಸಂಬದ್ಧವಾದ ವಿಪರೀತ ವಚನವನ್ನು ಆತನು ಕೃಷ್ಣನಿಗೆ ಕೊಟ್ಟನೇಕೆ, ಎಂಬುದಕ್ಕೆ ಅರ್ಥವೇ ಆಗುವುದಿಲ್ಲ.

೫. ತಂದೆಗಿಂತಲೂ ತಾಯಿ ಹೆಚ್ಚಿನವಳು. ಉಪನಿಷತ್ತಿನಲ್ಲಿ ಕೂಡ ಮೊದಲು 'ಮಾತೃದೇವೋ ಭವ;' ಎಂದು ಆಜ್ಞಾಪಿಸಿ, ಬಳಿಕ 'ಪಿತೃ ದೇವೋಭವ' ಎಂಬ ಮಾತು ಬಂದಿದೆ. ಕುಮಾರವ್ಯಾಸನಿಗೂ ಈ ಮಾತನ್ನೇ ಸ್ಥಾಪಿಸಬೇಕಾಗಿದ್ದಿತೆಂದು ತೋರುತ್ತದೆ. ತಂದೆಯಾದ ಸೂರ್ಯನು, 'ಕುಂತಿಗೆ ವಚನ ಕೊಡಬೇಡ ಎಂದು ಹೇಳುತ್ತಿದ್ದರೂ ಆತನಿಗೆ 'ಹಸಾದ'ವೆಂದೆ ತಲೆವಾಗಿ-ತಲೆ ದೂಗಿ?-ಇತ್ತ ತಾಯಿಯ ಹತ್ತರ ಬರುತ್ತಲೆ ಅವಳಿಕೆ ಬೇಕಾದ ವಚನವನ್ನು ಕೊಟ್ಟು ಬಿಡುತ್ತಾನೆ ! (೧೬, ೧೭ ನೋಡು). ಲೋಕಕ್ಕೆ ಮಾತೃಭಕ್ತಿಯ ಉಪದೇಶವನ್ನು ಮಾಡುವುದಕ್ಕಾಗಿಯೆ ಕುಮಾರವ್ಯಾಸನು ಈ ಪ್ರಸಂಗವನ್ನು ಹೀಗೆ ಚಿತ್ರಿಸಿರಬೇಕೆಂದು ತೋರುತ್ತದೆ.

೬. ಕುಮಾರವ್ಯಾಸನ ಸಾಹಿತ್ಯದ ದೃಷ್ಟಿಗಿಂತ ಭಕ್ತಿಮಾರ್ಗದ ದೈವಿಕ ಭಾವನೆಯೆ ಈತನ ಬರೆವಣಿಗೆಯಲ್ಲಿ ಎದ್ದು ಕಾಣುತ್ತದೆ. ಪರಮಾತ್ಮನು ತನ್ನ ಅನಂತ ಲೀಲಾಮಾಯೆಯಿಂದ ಲೋಕವನ್ನು ರಕ್ಷಿಸುತ್ತಿದ್ದಾನೆ. ತನ್ನ ಭಕ್ತರನ್ನು 'ಉದ್ಧರಿಸಿ ಅವರಿಗೆ ಮುಕುತಿ ಪದವನ್ನು ಕೊಡುತ್ತಲಿದ್ದಾನೆಂಬುದನ್ನು ಈ ಕಾವ್ಯದ ಮೂಲಕವಾಗಿ ಲೋಕಕ್ಕೆ ಮನವರಿಕೆ ಮಾಡಿಕೊಡುವುದೇ ಕುಮಾರವ್ಯಾಸನ ಗುರಿಯಿರಬೇಕೆಂದು ಆತನ ಅನೇಕ ವಚನಗಳಿಂದ ಅರಿತುಕೊಳ್ಳಬಹುದಾಗಿದೆ. ಆದುದರಿಂದ, ಇದರಲ್ಲಿ ಸಾಹಿತ್ಯದಲ್ಲಿರುವ ಸುಸಂಬದ್ಧ ಪಾತ್ರರಚನೆಯನ್ನು ಅಪೇಕ್ಷಿಸುವುದೇ ಸರಿಯಾಗಲಾರದೆಂದು ಹೇಳಲು ಅಡ್ಡಿಯಿಲ್ಲ.

ಪಂಪನ ಕರ್ಣ

ಕುಮಾರವ್ಯಾಸನು ಚಿತ್ರಿಸಿದ ಕರ್ಣನ ಚಿತ್ರವನ್ನು ನೋಡಿದ ಬಳಿಕ ಪಂಪನು ಕರ್ಣನನ್ನು ಹೇಗೆ ಗ್ರಹಿಸಿದ್ದಾನೆಂಬುದನ್ನು ಅರಿತುಕೊಳ್ಳುವ ಕುತೂಹಲವು ತಲೆದೋರಿತು. ಪಂಪಭಾರತಕ್ಕೂ ಗದುಗಿನ ಭಾರತಕ್ಕೂ, ಸಾಮಾನ್ಯವಾಗಿ ಜನರು ಎಣಿಸಿದುದಕ್ಕಿಂತಲೂ ಹೆಚ್ಚು ಹೋಲಿಕೆಯುಂಟೆಂದು ನನಗೆ ಕಂಡುಬಂದಿತು. ಆದರೂ ಇವೆರಡರಲ್ಲಿ ಕೆಲವೊಂದು ವ್ಯತ್ಯಾಸವೂ ಇಲ್ಲದೆ ಇಲ್ಲ. ಕು. ವ್ಯಾಸನು ಪಂಪನ ಅಡಿಯಲ್ಲಿ ಅಡೆಯಿಟ್ಟೇ ಹೊರಟಿದ್ದಾನೆ. ಅವನು ಪಂಪಭಾರತವನ್ನು ಎಷ್ಟು ಮನದಟ್ಟಾಗಿಸಿಕೊಂಡಿದ್ದನೆಂಬುದು ಕೆಳಗಿನ ವಿವರಣೆಯಿಂದ ಚೆನ್ನಾಗಿ ಹೊರಪಡುವಂತಿದೆ.

೧. ಸಂಧಾನವು ವಿಫಲವಾದ ಬಳಿಕ ಕೃಷ್ಣನು ಕುಂತಿಗೆ ಏಕಾಂತದಲ್ಲಿ ಇಂತೆಂದನು: ನಾನುಂ ಎನ್ನ ಬಲ್ಲ ಮಾಳ್ಕೆಯಿಂ ಭೇದಿಸಿದಪೆನ್. ನೀಮುಂ ನಿಮ್ಮ ಚೊಚ್ಚಿಲ ಮಗನಪ್ಪ ಕರ್ಣನಂ ಸೂರ್ಯದಿನದಂದು ಕಂಡು ಕಾರ್ಯ ಸಿದ್ಧಿಯಂ ಮಾಡಿ ಬನ್ನಿಂ. (೯.೬೩ ವಚನ)

ಎಂದು ಕುಂತಿಯನ್ನು ಬೀಳ್ಕೊಂಡು ಪರಕೆಯಂ ಕೆಯ್ಕೊಂಡು ರಥಮಂ ಏರಿ ಕರ್ಣನ ಮನೆಯ ಮುಂದನೆ ಬಂದು ಮೇಲೆ ಬಿಳ್ದು (ಒತ್ತಾಯದಿಂದೆ), 'ಎಮ್ಮಂ ಕಿರಿದಂತರಂ ಕಳಿಪಿ ಮಗುಳ್ವೆ ಬಾ ಪೋಪಂ' (೯.೬೩ ವಚನ) ಎಂದು ತನ್ನೊಡನೆ ರಥಮಂ ಏರಿಸಿಕೊಂಡು ಪೋಗಿ ಮುಂದೆ ಒಂದೆಡೆಯೊಳ್ ನಿಂದು ನುಡಿದನ್ : "ಕರ್ಣ, ಭೇದಿಸಲೆಂದೆ ನುಡಿದರ್ ಎನ್ನದಿರ್; ಓಯ್ಯನೆ ಕೇಳ್ : ಕೊಂತಿ ನಿನಗೆ ಅಬ್ಬೆ; ಸೂರ್ಯ ತಂದೆ; ಪಾಂಡುನಂದನರ್ ಸೋದರರ್; ಆನ್ ಮಯ್ದುನನ್. ನಿನ್ನದು ಮೇದಿನಿ. ಪಟ್ಟಮುಂ ನಿನತೆ. ನೀನಿರೆ ಪೆರರ್ ಮತ್ತೆ ನರೇಂದ್ರರೆ?" (೯.೬೪) "ಕುಂತಿ ನಿನ್ನಂ ಗಂಗೆಗೆ ಕೆಯ್ಯೆಡೆಯೆಂದು ಕೊಟ್ಟು ಪೋಗೆ, ಸೂತಂ ಕಂಡು ಉಯ್ದು, ಆತ್ಮಾಂಗನೆಗೆ ರಾಧೆಗೆ ಇತ್ತನ್. ನೀನ್ ರಾಧೇಯನೆನಿಸಿ ಸೂತಜನಾದೈ." (೯.೬೫). "ದುರ್ಯೋಧನನ್ ತಾನು ಇದನರಿತು, ಮುಳ್ಳೊಳೆ ಮುಳ್ಳ ಕೀಳಲ್ ಬಗೆದು ನಿನ್ನಂ ನಯದಿಂದೆ ಪೆರ್ಚೆ ಪೊರೆದು, ಅಳ್ಕರೊಳ್ ಅಂದು ನಿನ್ನ ಒಡನೆ ಉಂಡನ್" (೯.೬೭) ಎಂದು ಕೃಷ್ಣನು, ದುರ್ಯೋಧನನ ಪ್ರೀತಿಯ ರಹಸ್ಯವನ್ನು ತಿಳಿಸಲು, ಕರ್ಣನು ದುಃಖಿತನಾಗಿ ಕಣ್ಣೀರಿಟ್ಟನು. 'ಕೃಷ್ಣಾ ! ಮುನ್ನೆ ನೀವು ಎನಗೆ ಇದನೇಕೆ ಪೇಳ್ದಿರೋ!' ಎಂದು ಒರಲಿದನು. 'ನೆಗಳ್ತೆ ಪೊಗಳ್ತೆಯಮಂ ಆಂಪಿನಂ ಸುಯೋಧನನ್ ಎನಗೆ ಬಳಿಕೆಯ್ದು ಕೃತಮಂ ಪೆರಗಿಕ್ಕಿ, ನೆಗಳ್ತೆ ಮಾಸೆ, ನಣ್ಪಿನ ನೆವದಿಂದೆ ಪಾಂಡವರಂ ಆಂ ಒಳವೊಕ್ಕೊಡೆ ನೀಮೆ ಪೇಸಿರೆ?' (೯.೬೮) 'ಆನ್ ಬೇಡರಿಂ ಕಡೆಯಲ್ಲವೆ? ಎನಗೆ ಒಳ್ಪಿಕೆಯ್ದ ಸುಯೋಧನನಂ ತೊರೆದು ಬಾಳ್ವುದೆ? (೯.೬೯) ಎಂದು ಮುಂತಾಗಿ ನುಡಿದು ದುರ್ಯೋಧನನಲ್ಲಿದ್ದ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವನು.

೨. ಆಗ ಕೃಷ್ಣನು 'ಈತಂ ತನಗೆ ಎಂತುಂ ಒಡಂಬಡನ್ ಎಂದು ಅರಿತು ಆತನಿಗೆ ಮಗುಳಲ್ವೇಳ್ದು ಪೋದನ್'. ಇತ್ತ ಕರ್ಣನುಂ ಚಿಂತಾಕ್ರಾಂತನಾಗಿ ಬಂದು, ಕುರುಪತಿಗೆ ದೈವಬಲಂ ಇಲ್ಲಪ್ಪೊಡು ಮಿಟ್ಟೆಂದು ಮಿಡುಕುವನು. 'ಸುಯೋಧನನ್ ಎನ್ನನೆ ನಚ್ಚಿ ಪೆರ್ಚಿ ಮುಂ ಪೊರೆದನ್. ಎನ್ನಯ ಸೋದರರ್ ಇದಿರ್ಚಿ ಕಾದುವರ್. ಎನ್ನವರಂ ಎಂತು ಕೊಲ್ವೆನ್? ಎನ್ನ ಒಡಲನೆ ತವಿಪೆನ್ ರಣರಂಗಭೂಮಿಯೊಳ್;' ಎಂದು ಆತ್ಮಾಹುತಿಗೊಡುವುದನ್ನು ನಿರ್ಧರಿಸುವನು. (೯.೭೦) 'ಪಾಂಡವರಂ ಸೋದರರೆಂದು ಅರಿದೆನ್. ಇನ್ನು ಎನ್ನರಂ ಎಂತು ಕೊಲ್ವೆನ್? ಅಳ್ಕರೊಳ್ ಎನ್ನ ಪೊರೆದು ಎಯ್ದೆ ನಂಬಿದ ಸುಯೋಧನಂಗೆ ಎಂತು ತಪ್ಪುವೆನ್' ಎಂಬ ಈ ಧರ್ಮಸಂಕಟದಿಂದ ಪಾರಾಗುವುದಕ್ಕೆ ತಿಳಿಯದೆ ಕೊನೆಗೆ ಕರ್ಣನು 'ವೈರಿಭೂಪರ ಬಲದ ಒಡ್ಡು ಅಳ್ಳಾಡೆ ಲೆಕ್ಕಕ್ಕೆ ತಳ್ತಿರಿದು ಎನ್ನ ಅರಸನಿಂ ಮುಂಚೆ ಆನೆ ಸಾವೆನ್' ಎಂದು ನಿಶ್ಚಯಿಸಿದನು. (೯.೭೧)

೩. ಬಳಿಕ ಒಂದು ರವಿವಾರದಂದು ಜಗನ್ಮಂಗಳ ಗಂಗಾವಾರಿಯೊಳ್ ಮಿಂದು, ಆದಿತ್ಯಂಗೆ ಅರ್ಘ್ಯಮಂ ಎತ್ತಿ ನೀರಂ ಸೂಸಿ ತ್ರಿಃಪ್ರದಕ್ಷಿಣಂ ಗೆಯ್ದಾಗಳ್, ಅಂಗನೃಪನ್ ಮುಂದೆ ನಿಂದ ಕೊಂತಿಯನ್ ಭೋಂಕನೆ ಕಂಡನ್, ಮನದೊಳ್ ಆದ ಎರಕದಿಂದ ಸಾಷ್ಟಾಂಗಂ ಎರಗಿದನ್. ಕೊಂತಿ ಪೊಡಮೊಟ್ಟೆ ನಿಜನಂದನನಂ ಅಳ್ಕರಿಂ ಅಪ್ಪಿಕೊಂಡು ಪರಮಾಶೀರ್ವಚನಂಗಳಿಂ ಪರಸಿದಳ್. ಮೊಲೆವಾಲ್ ಅಳ್ಕರಿಂದಂ ಅಂಕುರಿಸಿದುವು. ಆಗಳೆ ಮಗನಂ ಪೆತ್ತವೊಲ್ ಹುರುಷಮಾಯ್ತು. (೯.೭೧ ವಚನ -೭೪)

೪. ಅನಿತರೊಳ್ ಗಂಗಾದೇವಿಯುಂ ದಿವ್ಯಮೂರ್ತಿಯಂಕೆಯ್ಕೊಂಡು ಬಂದು ಕೊಂತಿಗೆ, "ಕೆಯ್ಯೆಡೆಯೆಂದು ಅಪ್ಪೈಸಿದ ನಿನ್ನ ಮಗನಂ ಈಗಳ್ ನಿನಗೆ ಒಪ್ಪಿಸಿದೆನ್." ಎಂದು ನುಡಿದು ಅಪ್ಪೈಸಿ ಪೋದಳ್. (೯. ೭೬)

೫. ಆಬಳಿಕ ಒಪ್ಪುವ ನಿಜ ಬಿಂಬದೊಳಗಣಿಂದಂ ದಿನಪಂ ಪೊರಮಟ್ಟು ಬಂದನ್. ತನ್ನ ಅಡಿಗೆ ಎರಗಿದ ನಿಜಸುತನಂ ಅಳ್ಕರಿಂಪರಿಸಿ, ಮನಂ ಮರುಗಿ ರವಿ ನುಡಿದನ್ : 'ಎಲೆ ಮರುಳ್ ಮಗನೆ, ಮುಂ ಹರಿಗೆ ಕವಚಮಂ ಇತ್ತೆ; ಅದು ಆಯ್ತು ಪೋಯ್ತು ಇಂದು ನಿನ್ನ ಅಂಬಿಕೆ ಕೊಂತಿ, ಹರಿಯ ಮತದಿಂ ತನ್ನ ಸುತರಂ ಕಾಯಲ್ಕೆ ಒಡರಿಸಿ ಬಂದಳ್. ಎನಿತು ಲಲ್ಲೈಸಿ ದೊಡಂ ಪುರಿಗಣೆಯಂ ಕುಡದಿರ್' (೯.೭೭,೭೮) ಎಂದು ಪೇಳಿ (ರವಿ) ಅಂತರಾಳಮಂ ಅಡರ್ದನ್.

೬. ಇತ್ತ ಕೊಂತಿಯಲ್ಲಿಗೆ ಬಂದು ಕರ್ಣಂ ಕೆಯ್ಮುಗಿದಂ ಇಂತೆಂದನ್ 'ಅಬ್ಬೆ, ಸೈಪುಬಂದಂತೆ, ಈಗಳ್ ಏವಂದಿರ್ಪುದು? ಈಗ ನೀನ್ ಬಂದ ಕಾರಣಮೇನ್? ನಿಮ್ಮ ಕರುಣಾಬಲದಿಂ, ನೀವ್ ಎನ್ನಂ ಇಂದು ಮಗನ್ ಎಂದುದರಿಂ ಚಲಮುಂ, ಚಾಗಮುಂ, ಅಳವುಂ, ಕಲಿತನವುಂ, ಕುಲಮುಂ ಈಗಳ್ ಎನ್ನಯ ಮೆಯ್ಯೊಳ್ ನೆಲಸಿದುವು.'(೯.೭೯,೮೦) ತಾಯುಂ ತಂದೆಯುಂ, ಒಡಲಂ ಪ್ರಾಣಮುಮಂ ಪಡೆದರ್ ಅವು ಅವರವು. ಅವಂ ಕೆಯ್ಯೆಡೆಯಂ ಕುಡುವುದು, ಏಂ ಅರಿದಾಯ್ತೆ? ನೀನ್ ಎನಗೆ ಎಡೆಮಡಗದೆ ಬೆಸಪ ತೊಳ್ತುವೆಸಂ ಬೆಸಸಿಂ" (೯.೮೧) ಆಗ ಕೊಂತಿ ಕರ್ಣನಿಗೆ ಹೇಳಿದುದೇನೆಂದರೆ: "ಮಗನೆ ಮನಂ ಬೆಳರದೆ ನೀನುಂ ಇತ್ತೆ; ಆನುಂ ಪೆತ್ತೆನ್; ನಂಬಿದ ನಿನ್ನ ಅನುಜರ್ ನಿನ್ನಂ ಬೆಸಕೆಯೆ ನೀನೆ ನೆಲನಂ ಆಳ್ವುದು ಕಂದಾ!" (೯.೮೨) ಎನೆ ಅದಂ ಕೇಳ್ದು ಮುಗುಳ್ನಗೆ ನಕ್ಕು ಕರ್ಣಂ -

೭. "ಭಯಮುಂ ಲೋಭಮುಂ ಎರಡುಂ ಪಾಪಕ್ಕೆ ಪಕ್ಕಾಗೆ ಆಳ್ದನ್ ಗೆಯ್ದ ಸುಕೃತಮುಮಂ ಪಿಂತಿಕ್ಕಿ, ಜೋಳಕ್ಕೆ ತಪ್ಪಿ, ಇಂಬಾಳ್ವುದೆ? ಅಬ್ಬೆ, ಈ ಒಡಲ್ ಎಂ ಕಲ್ಪಾಂತಸ್ಥಾಯಿಯೆ? (೯.೮೪)

೮. ಎಂದೊಡನೆ ಕುಂತಿಯು ಬೋರಾಡಿ ಅತ್ತು ತನ್ನ ದುಃಖವನ್ನು ಹೀಗೆ ಹೊರಪಡಿಸಿದಳು: 'ನಾನು ಹಾಳಾದೆ; ನೀನು ಹೀಗೆ ನೆಟ್ಟನೆ ಬರಲಾರೆನೆಂದು ಆಡಿಬಿಟ್ಟೆ! ಇನ್ನು ಚಂದ್ರವಂಶವು ಅಳಿಯಲಾರದೆ? ನನಗಿನ್ನು ಬಾಳ್ವ ಆಸೆಯೆಲ್ಲಿ? ಇನ್ನುಳಿದ ಮಕ್ಕಳ ಆಸೆಯನ್ನೂ ನಾನಿನ್ನು ಬಿಟ್ಟು ಬಿಡುವೆನು.' (೯.೮೬)

೯. ಕುಂತಿಯು ಹೀಗೆ ಗೋಳಿಡುವುದನ್ನು ನೋಡಲಾರದೆ ಕರ್ಣನು: 'ಅಬ್ಬೆ, ಇನಿತೇಂ ಚಿಂತಾಂತರಂ ಪೇಳ್; ಆಯ್ತು, ನರನ್ ಎಡೆ ಗೊಂಡೊಡಂ ಪಿಡಿಯೆನ್ ಪುರಿಗಣೆಯಂ; ನಿನ್ನ ಉಳಿದ ಮಕ್ಕಳಂ, ಏರ್ದೊಡಂ

ಅಳಿಯೆನ್; ಪೆರ್ಜಸಮನೆ ಪಿಡಿದು ಎನ್ನನೆ ರಣದೊಳ್ ಅಳಿವೆನ್." (೯.೮೭) ಎಂದು ಅವಳಿಗೆ ಮಾತು ಕೊಡುವನು!

೧೦. ಮುಂದೆ ದ್ರೋಣರು ಮಡಿದ ಬಳಿಕ ಕರ್ಣನು ತಾನೇ ಸೇನಾಪತಿಯಾಗಬಯಸುವನು. ದುರ್ಯೋಧನನೂ ಆತನಲ್ಲಿ ಸಂಪೂರ್ಣ ನೆಚ್ಚಿ ವೀರಪಟ್ಟಕಟ್ಟುವನು. "ಅಂಗಮಹೀತಳಾಧಿಪಾ, ಪಾಂಡವಬಲಂ ನಿನಗೆ ನಡುಗುವುದು; ಎನ್ನ ಬೆಳ್ಗೊಡೆಯುಮಂ, ಎನ್ನ ಪಟ್ಟಮುಮಂ, ಎನ್ನುಮಂ ಕಾವುದು." (೧೨.೫೧) ಎಂದು ದುರ್ಯೋಧನನು ಬಿನ್ನವಿಸುವನು. ಕರ್ಣನು ದುರ್ಯೋಧನನ ಈ ಕೃಪೆಗಾಗಿ ತನ್ನ ಕೃತಜ್ಞತೆಯನ್ನು ಸೂಚಿಸುವನು. ಯುದ್ಧಕ್ಕೆ ಹೊರಡುವ ಮೊದಲು ಹಿರಿಯರಾದ ಭೀಷ್ಮರ ಹರಕೆಗಳನ್ನು ಪಡೆಯಲು ಅವರಲ್ಲಿಗೆ ಹೋಗುತ್ತಾನೆ.

೧೧. 'ಆನ್ ಮಾತು ಅರಿಯದೆ ಮುಳಿದುಂ ನಿಮ್ಮಡಿಯಂ ನೋಯೆ ನುಡಿದೆನ್; ಬರಿದೆ ಏಳಿಸಲ್ ಏಂ ಎಮ್ಮ ಅಳವೆ? ಮನದ ಉಮ್ಮಚ್ಚರಂ, ಅಜ್ಜ, ಮರೆವುದು. (೧೨.೫೪) ಎಂದು ವಿನಯೋಕ್ತಿಯಿಂದ ಪಾರ್ಥಿಸಿ ನಮಿಸುವನು. ಅಲ್ಲಿ, ತನ್ನಿಂದ ಪಾಂಡವರನ್ನು ಗೆಲ್ಲುವುದಕ್ಕಾಗುವುದಿಲ್ಲವೆಂದು ಸೂಚಿಸುವನು. "ಧುರದೊಳ್ ನಿಮ್ಮಡಿಯುಂ ಗೆಲಲರಿಯವು; ಪಾಂಡುಸುತರಂ ಎಮ್ಮಂದಿಗರ್ ಗೆಲ್ವರ್ ಎಂಬುದು ಅಚ್ಚರಿಯಲ್ತೆ? ಆದೊಡಂ ಎಂತುಂ ಎನ್ನ ಚಲಮನೆ ಮೆರೆವೆನ್. (೧೨.೫೫)

೧೨. ಕರ್ಣನು ಭೀಷ್ಮರ ಎದುರು ತಾನೇನು ದೊಡ್ಡವನೆಂದು ಸೂಚಿಸಲು ಆಡಿದ ಆ ವಿನೀತಭಾವದ ಮಾತುಗಳಿಗೆ, ಅವರು ತೂಕ ಹಿಡಿದು ಆತನಿಗೆ ಪ್ರೋತ್ಸಾಹಿಸಿ ಹೀಗೆ ಹೇಳಿದ್ದುಂಟು : "ಕರ್ಣ, ನೀಂ ಪತಿಭಕ್ತಿಯ ಪಂಪಿನಿಂ ನುಡಿದೈ. ಆದೇಂ ತಪ್ಪಾದುದೇ? ಕುರುಮಹೀಪತಿ ನಿನ್ನ ನೆನಚ್ಚಿದಂ. ನಿನ್ನ ಶರಾಳಿಗಳ್ಗೆ ಮುನ್ನಂ ಅರಿಸಾಧನಸಂಪದಂ ನಡುಗುತ್ತುಂ ಇರ್ಪುದು. ಶಸ್ತ್ರಸಂಪನ್ನೆ ಆಗಿ ಕಾದು." (೧೨.೫೭) ಕರ್ಣನು ಹಿರಿಯರ ಮಾತಿಗೆ 'ಮಹಾಪ್ರಸಾದ'ವೆಂದು ಪೊಡಮಟ್ಟು ಸಂಗ್ರಾಮಭೂಮಿಗೆ ತೆರಳಿದನು.

೧೩. ಕರ್ಣನು ಯುಧಿಷ್ಠಿರನೊಡನೆ ಕಾದಿ ಆತನನ್ನು ಹೊಡೆದು ಮೂರ್ಛೆಗೊಳಿಸಿದನು. ಯುಧಿಷ್ಠಿರನ ಆ ಅವಸ್ಥೆಯನ್ನು ನೋಡಿ ಕರ್ಣನಿಗೆ ದುಃಖವಾಗಿ ಹೀಗೆ ಮಿಡುಕಿದನು: 'ಅಂತು ಕೊಂತಿಗೆ ನಾಲ್ವರೊಳ್ ಆರುಮಂ ಕೊಲ್ಲೆನೆಂದು ನುಡಿದ ತನ್ನ ತನ್ನಿಗೆ ಬನ್ನ ಬಂದಪುದು' (೧೨.೧೧೭ ವ.) ಎಂದು ಕಣ್ಣನು ಚಿಂತಿಸಿದನು.

೧೪. ಮುಂದೆ ಅರ್ಜುನನು 'ಕರ್ಣನ ಅಸುಂಗೊಳಿ' ಬಂದು ತಾಗಿದರೂ ಅವನು (ಕರ್ಣನು) ರೊಚ್ಚಿನಿಂದ ಕಾದದಿರುವುದನ್ನು ಕಂಡು ಅರ್ಜುನನು ಏಡಿಸಿ ನುಡಿಯುವನು: ಸುಯೋಧನನ್ ನಿನ್ನಂ ಪಿರಿದು ಪೊರೆದನ್; ನಿನಗೆ ಎನ್ನೊಳ್ ಪಿರಿದು ಕಲುಷಂ.' (೧೨.೧೭೩) ಎನ್ನ ಪೆಸರ್ ಕೇಳ್ದು ಸೈರಿಸದ (ನೀನ್) ಎನ್ನಯ ಅದೆಂತು ಈಗಳ್, ಎನ್ನ ರೂಪಂ ಕಂಡು, ನಿನ್ನ ಅರಸನ ಅಣುಗದಮ್ಮನ (ಮೇಣ್) ನಿನ್ನ ತನೂಭವನ ಸಾವು ಕಂಡುಂ (ಕರ್ಣಾ! ಇಂತು ಕೆಮ್ಮನೆ ಇರ್ಪುದು ಪಾಳಿಯೆ?) ಮಾಣ್ಬಾ?' (೧೨.೧೭೪) 'ಭಯಂ ಏಕೆ ಅಕ್ಕುಂ?... ನೀನ್ ಈ ಮಹಾಜಿಯೊಳ್ ಇಂತು ಏಂ ಎನಗೆ ಅಂಜಿ ಮಾಣ್ದೆ! ಪೆರತೆಂ? ಪೋ! ಮಾತು ಲೇಸಣ್ಣ! ಆಹವದೊಳ್ ಕುಸಿದು ಸೊಲ್ತು ಓಡಿ ಮಾನಿಸರ್ ಇನ್ನೂರು ವರ್ಷಂ ಬಳ್ದಪರೆ? (೧೨.೧೭೫,೧೭೬)

೧೫. ಅರ್ಜುನನ ಈ ಮೂದಲಿಕೆಗೆ ಕರ್ಣನು ನಕ್ಕು, 'ಈ ಬಾಯ್ವಾತಿನೊಳ್ ಏವಂದಪುದು?' ಎಂದು ಹೇಳಿ ಪೊಸಮಸೆಯ ಅಂಬಿನ ಬೆಳ್ಸರಿಯನ್ನು ನರನ ಮೇಲೆ ಸುರಿದನು. (೧೨.೧೮೩) ಇದಕ್ಕೆ ಪ್ರತಿಯಾಗಿ ಅರ್ಜುನನೂ ಬಾಣಗಳ ಮಳೆಗರೆದನು. ಆಗಳ್ ಮದ್ರರಾಜನ್ ಅಂಗಾಧಿರಾಜನಂ ಇಂತೆಂದನ್: ಈ ಅಂಬುಗಳೊಳ್ ಏಂ ತೀರ್ದಪುದೊ? ದಿವ್ಯಾಸ್ತ್ರಂಗಳಿಂದೆ ಎಚ್ಚು ಪಗೆಯಂ ಸಾಧ್ಯಂ ಮಾಡೆಂಬುದುಂ.'

೧೬. ಶಲ್ಯನ ಈ ಮಾತು ಕೇಳಿ ಕರ್ಣನಿಗೆ ಮತ್ತೆ ಧರ್ಮ ಸಂಕಟ: 'ಕೊಂತಿಗೆ ತನ್ನ ನುಡಿದ ನುಡಿವಳಿಯಂ ನೆನೆದು, ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ ರೌದ್ರಶರದ ದೊಣೆಗೆ ಕೆಯ್ಯಂ ನೀಡಿದನ್. (೧೨.೧೯೦.ವ) ಆದರೂ ಅರ್ಜುನನ ಮೇಲೆ ಹಗೆ ತೀರಿಸಲು ದಾರಿಕಾಯುತ್ತಲಿದ್ದ ಅಶ್ವಸೇನನು ಅರ್ಧಾವಲೀಕದ ಶರರೂಪದಿಂದ ಕರ್ಣನ ಕೈಸೇರಿ ಹೊಳೆಯುತ್ತ ಹೊರಗೆ ಬಂದು ಕೆಂಡಗಳನ್ನು ಕಾರುತ್ತಿರಲು ಕರ್ಣನು ಅದನ್ನು ಬಿಲ್ಲಿಗೆ ಹೂಡಿದನು.

ಕರ್ಣನು ಆ ರೌದ್ರಶರವನ್ನು ಅರ್ಜುನನ ತಲೆಗೆ ಗುರಿಯಿಟ್ಟಿದ್ದನು. ಅದನ್ನು ಕಂಡು ಶಲ್ಯನು 'ವಿವೇಕದಿಂ ಉರದೆಡೆಗೆ ತುಡದೆ ತಲೆಗೆಯೆ ತುಡುವಾ? ಉರದೆಡೆಗೆ ತುಡೆ, ಜಯಶ್ರೀಗೆ ಸುಯೋಧನನೊಳ್ ಇರಲೆಡೆ ಅಪ್ಪುದು, ದಿನಕರಸುತ! ಮೇಣ್ ತೊಡಲುಂಟೆ? ಬಗೆಯೆ ಸಂದೆಯಮುಂಟೆ? (೧೨.೧೯೫)

೧೭. ಶಲ್ಯನ ಈ ನುಡಿಯಂ ಅವಧಾರಿಸಿ ತನ್ನ ಮನದೊಳೆ ಕರ್ಣನ್ ಇಂತೆಂದನ್. ಎನಿತುಂ ಶಲ್ಯನ ಪೇಳ್ದ ಪಾಂಗೆ ತೊಡಲಿಲ್ಲ. ಇಂತಾದೊಡೆ ಆ ಶಕ್ರಪುತ್ರನಂ ಆನ್ ಕೊಂದೊಡೆ, ಧರ್ಮ ಪುತ್ರನ್ ಅಳಿಗುಂ! ತಾಯಂದೆ ಮುಂ...... ಬಂದು ಇನಿಸಂ ಪ್ರಾರ್ಥಿಸಿ ಪೋದಳ್...... ಈಗಳ್ ಆನ್ ಒಳ್ಪಿನಪೆರ್ಮಾತಿನ ನನ್ನಿ ಬನ್ನದೊಳ್ ಒಡಂಬಟ್ಟಿರ್ಪುದಂ ಮಾಳ್ಪೆನೆ?' (೧೨.೧೯೬) 'ಪಾಂಡವರ್ ಎನ್ನಂ ಇನ್ನುಂ ಅರಿಯರ್; (ಅರಿಪದಿರೆಂದು ಆನ್ ಚಕ್ರಿಗೆ ಅರಿಪಿರ್ದೆನ್;) ಪೃಥೆಯುಂ, ಮದೀಯ ಸುತರೊಳ್ ವೈಕರ್ತನನ್ (ಆನ್) ನನ್ನಿಯಂ ನಿರಿಸಲ್ಕೆ ಆರ್ಕುಂ ಅಮೋಘಂ, ಎಂದು ಮನದೊಳ್ ನಂಬಿರ್ದಳ್. ಇನ್ನಿಲ್ಲಿ ಪೆಂಪು ಎರಕಂಬೆತ್ತಿರೆ, ಕೆಯ್ಕೊಂಡ ಕಟ್ಟಾಯುಮಂ ಎನ್ನ ನುಡಿಯಂ ಕಾವೆನ್." (೧೨.೧೯೭) ಎಂದು ಮನದಲ್ಲಿ ನಿರ್ಧರಿಸಿ, ಹೊರಗೆ ಮದ್ರಪತಿಗೆ ಹೀಗೆಂದು ನುಡಿದನು. : 'ಕರ್ಣಂ ಭಯದಿಂ ಮುಂ ತೊಟ್ಟ ಅಂಬಂ ಉಗಿದು ಕುಂದಿಸಿದನ್ ಎಂದು ಲೋಕಂ ನಗದೆ?' (೧೨.೧೯೯) ಆದಕಾರಣ, ಲೋಕದಿಂದ ಪುಕ್ಕನೆನಿಸಿಕೊಳ್ಳಲಾರೆನೆಂದು ಶಲ್ಯನಿಗೆ ಹೇಳಿ ಕರ್ಣನು ಆ ಉಗ್ರಶರವನ್ನು ಹಾಗೆಯೆ ತಲೆಗೆ ಎಸೆದನು.

೧೮. ಕೃಷ್ಣನು 'ಬರಸಿಡಿಲೆರಪಂತೆ ಎರಪ ಸರಲ ಬರವಂ ಕಂಡು, ಆಗಳೆ ನರ-ರಥಮಂ ನೆಲದೊಳ್ ಎಣ್ಬೆರಲ್ ಅಡಂಗೆ ನಿಪುಣತೆಯಿಂ ಒತ್ತಿದನ್' (೧೨.೨೦೦) ಅರ್ಜುನ ಕಿರೀಟಕ್ಕೆ ಬಾಣವು ತಾಗಿತು. ಆ ಸರ್ಪಶರವು ಮರಳಿ ಕರ್ಣನಲ್ಲಿಗೆ ಬಂದು ಇನ್ನೊಮ್ಮೆ ತೊಡಲು ಕೇಳಿಕೊಂಡಿತು. ಆದರೆ ಕರ್ಣನು ತನ್ನ ಪರಾಕ್ರಮಕ್ಕೆ ಒಪ್ಪುವಂತೆ ಮಾತನಾಡಿ ಅದನ್ನು ಹಿಂದಕ್ಕೆ ಅಟ್ಟಿದನು. 'ಶರರೂಪದೊಳಿರೆ ನಿನ್ನ ಶರಂ ಎಂದೆ ಆನ್ ತೊಟ್ಟೆನ್; ನಿನ್ನಂ ಅರಿದು (ಇಂ) ತುಡುವೆನೆ? ನೆರದೊಳ್ ಕೊಲ್ವಂತೆ, ಗಾಂಡೀವಧನ್ವನ್ ಎನಗೆ ಏರಿ ಅರಿಯನೆ? (೧೨. ೨೦೪) ಹೆರವರ ನೆರವು ಪಡೆದು ಕೊಲ್ಲುವಷ್ಟು ಅರ್ಜುನನೇನು ನನಗೆ ಅರಿಯದವನೆ? ಎಂಬ ಆತ್ಮವಿಶ್ವಾಸದ ಮಾತುಗಳನ್ನು ಆಡಿದನು.

೧೯. ಶಲ್ಯನಿಗೆ ಕರ್ಣನ ಈ ಯಾವ ನಡೆನುಡಿಗಳೂ ಮನಸಿಗೆ ಬಾರದೆ ಸಿಟ್ಟಾಗಿ 'ಇಂತಪ್ಪ ಏಕಗ್ರಾಹಿಗಂ ಒರಂಟಂಗಂ ರಥಮಂ ಎಸಗೆನ್' ಎಂದು ತೇರಿನಿಂದಿಳಿದು ಹೋಗಿಬಿಟ್ಟನು. (೧೨.೨೦೫)

೨೦. ಅಷ್ಟರಲ್ಲಿ ಕರ್ಣನ ತೇರಿನ ಗಾಲಿಯು ನೆಲದಲ್ಲಿ ಇಳಿಯಿತು. ಆ ಗಾಲಿಯನ್ನು ಎತ್ತುವುದಕ್ಕೆ ಕರ್ಣನು ಇಳಿದನು. 'ಇವನನ್ನು ಈಗಳೆ ತುಂಡರಿಸಿ ಚೆಲ್ಲು' ಎಂದು ಅರ್ಜುನನಿಗೆ ಕೃಷ್ಣನು ಸೂಚಿಸಿದನು. ಆದರೆ, ಆ ಮಾತಿಗೆ ಅರ್ಜುನನು ಒಪ್ಪಲಿಲ್ಲ. "ಕರ್ಣಂಗೆ ಸಾರಥಿಯಿಲ್ಲ; ಮೆಯ್ಗೆ ಮರೆಯುಂ ತಾನಿಲ್ಲ; ಈಗಳ್ ತಾನ್ ಎಂತು ಇರಿವೆನ್? ಮತ್ತಂ ಒಂದನ್ ಇಸಲುಂ ಕೆಯ್ಯೇಳದು, ನೋಡಿರೆ! ಏಕೆ ಎಂಬುದನ್ ಆನ್ ಅರಿಯೆನ್! ಕೂರ್ಮೆ ಮಿಕ್ಕು ಬಂದಪುದು. ಇದರ್ಕೆ ಏಗೆಯ್ವೆನ್? ಮುನ್ನಿನ ಅದೊಂದು ವೈರಮಂ ಮರೆದಿರ್ದೆನ್." (೧೨.೨೦೭) ಅರ್ಜುನನಲ್ಲಿ ರೊಚ್ಚು ಹೆಚ್ಚಾಗುವಂತೆ ಕೃಷ್ಣನು ಕರ್ಣನ ಹಿಂದಿನ ದುಷ್ಕೃತಿಗಳನ್ನೆಲ್ಲ ವರ್ಣಿಸುವನು. ನೀನು ಯುದ್ಧ ಮಾಡದೆ ಇದ್ದರೆ ನಾನೇ ಚಕ್ರವನ್ನು ಹಿಡಿದು ಜಯಾಂಗನೆಯನ್ನು ವರಿಸುವೆನು (೧೨.೨೦೮) ಎಂದು ಹೇಳುವನು.

೨೧. ಅಷ್ಟರಲ್ಲಿ ಕರ್ಣನು ತನ್ನ ತೇರನ್ನು ಮೇಲಕ್ಕೆತ್ತಿ ಯುದ್ಧಕ್ಕೆ ಅಣಿಯಾಗಿ ಅರ್ಜುನನ್ನು ಎದುರಿಸಿದನು. ಅರ್ಜುನನು ಗಿರಿಜೆ ಕೊಟ್ಟ ಅಂಜನಾಸ್ತ್ರವನು ಪ್ರಯೋಗಿಸಿ ಕರ್ಣನ ಚೆಂಡಾಡಿದನು. (೧೨.೨೧೩) 'ಚಾಗದ ನನ್ನಿಯ, ಕಲಿತನದ ಆಗರಂ ಎನೆ ನೆಗಳ್ದ ಕರ್ಣನ ಒಡಲಿಂದೆ ಆಗಳ್ ಅದೊಂದು ತೇಜೋರೂಪಂ ಮೂರ್ತಿ ದಿನಪನೊಳ್ ಒಡಗೂಡಿದುದು. ಕರ್ಣನ್ ಪುರಿಗೆಣೆಯಂ ಪಿಡಿದನೆ? ಎರಳ್ನುಡಿದನೆ? ಬಳ್ಕಿದನೆ? ತಾನೆ ತನ್ನ ಚಲಮಂ ಪಿಡಿದು ಅಳಿದನ್' ಎಂದು ದೇವರ ಪಡೆ ಪೊಗಳ್ದುದು. (೧೨.೨೧೬) 'ನೆನೆಯದಿರಣ್ಣ, ಭಾರತದೊಳ್

ಇಂ ಪೆರರಾರುಮಂ, ಒಂದೆ ಚಿತ್ತದಿಂ! ನೆನೆವೊಡೆ ಕರ್ಣನಂ ನೆನೆಯ! ಕರ್ಣನೊಳ್ ಆರ್‌ದೊರೆ? ಕರ್ಣನ ಏರು, ಕರ್ಣನ ಕಡು ನನ್ನಿ, ಕರ್ಣನ ಅಳವು, ಅಂಕದ ಕರ್ಣನ ಚಾಗಂ ಎಂದು ಕರ್ಣನ ಪಡೆಮಾತಿನೊಳ್‌ಪುದಿದು ಕರ್ಣರಸಾಯನಂ ಅಲ್ತೆ ಭಾರತಂ! (೧೨.೨೧೭)

ಇದನ್ನು ಕುರಿತು ಕೆಲವು ವಿಚಾರಗಳು

೧. ಪಂಪನ ಈ ರಚನೆಯೂ ಸುಸಂಬದ್ಧವಾಗಿದೆಯೆಂದು ಹೇಳಲಿಕ್ಕಾಗುವುದಿಲ್ಲ. ಏಕೆಂದರೆ-

(ಅ) ಕರ್ಣನು, ಕೃಷ್ಣನಿಗೆ ಪಾಂಡವರನ್ನು ಕೊಲ್ಲನೆಂದು ಮಾತು ಕೊಡದಿದ್ದರೂ, ಚಿಂತಾಕ್ರಾಂತನಾಗಿ ಬಂದು, 'ಎನ್ನಯ ಸೋದರರಂ ಎಂತು ಕೊಲ್ವೆನ್? ಎನ್ನನೆ ಬಲಿಗೊಡುವೆನು' ಎಂದು ನಿರ್ಧರಿಸುತ್ತಾನೆ! ಇದು ಕರ್ಣನು ಕೃತಜ್ಞನೆಂಬುದಕ್ಕೆ ಬಾಧೆತರುತ್ತದೆ. (II ೨ ನೋಡು)

(ಬ) ಕುಂತಿಗೆ ತನ್ನ ಒಡೆಯನ ನಾಶಕ್ಕೆ ಕಾರಣವಾಗುವ ವಚನಕೊಡುವನು. ಸೂರ್ಯನು ಹೀಗೆ ಮರುಳನಂತೆ ನಡೆಯಬೇಡವೆಂದು ಎಚ್ಚರಿಸಿದ್ದರೂ ಆತನ ಮಾತನ್ನು ಅನುಸರಿಸಲಿಲ್ಲ.

ಇಲ್ಲಿ ಪಂಪನು ಮಾತೃಭಕ್ತಿಯೂ, ಮಾತೃಪ್ರೇಮವೂ ಅಸಾಧಾರಣವಾದುವೆಂದು ತೋರಿಸಿದ್ದಾನೆ. ಮಾತೃಭಕ್ತಿಯನ್ನು ತೋರುವಲ್ಲಿ ಕರ್ಣನು ದುರ್ಯೋಧನನಿಗೆ ಎರಡು ಬಗೆದುದು ಸುಳ್ಳಲ್ಲ. (II ನೋಡು)

(ಆ) ರೌದ್ರಶರವು ಅರ್ಜುನನನ್ನು ಕೊಲ್ಲಬಾರದೆಂದೇ ಆತನು ತಲೆಗೆ ಗುರಿಯಿಟ್ಟನು. ಎದೆಗೆ ಹೊಡೆದರೆ ಅರ್ಜುನನು ಸಾಯುವುದು ನಿಶ್ಚಿತ. ಹಾಗಾದಲ್ಲಿ ತಾನು ತಾಯಿಗೆ ಕೊಟ್ಟ ಮಾತು ಸುಳ್ಳಾಗುವುದು ಎಂದು ಆತನ ಮನಸಿನಲ್ಲಿ ವಿಚಾರಗಳು ಬಂದುವೆಂದು ಪಂಪನು ವರ್ಣಿಸಿದುದರಿಂದ ಕರ್ಣನು ದುರ್ಯೋಧನನಿಗೆ ತಿಳಿಯದೆ ಆತನನ್ನು ವಂಚಿಸಿದನೆಂದ ಹಾಗಾಗುತ್ತದೆ. (II ೧೬,೧೭ ನೋಡು)

(ಇ) ಮನಸ್ಸಿನಲ್ಲಿ ಅರ್ಜುನನನ್ನು ಕೊಲ್ಲಬಾರದೆಂದು ಇದ್ದುದರಿಂದಲೇ ಕರ್ಣನು ಎದೆಗೆ ಬಾಣ ಹೂಡದೆ ತಲೆಗೆ ಹೂಡಿದನೆಂದು ಪಂಪನು ವರ್ಣಿಸಿದ್ದುಂಟು. ಆದರೆ, ಶಲ್ಯನಿಗೆ ಆತನು ಬೇರೆ ಕಾರಣ ಹೇಳುವನು! 'ನಾನು ಇಟ್ಟ ಗುರಿ ಬದಲಿಸಿದರೆ ಅದು ನನ್ನಂತಹ ವೀರನಿಗೆ ಭೂಷಣವಲ್ಲ. ಲೋಕವು ನಾನು ಹೆದರಿದೆನೆಂದು ನಕ್ಕೀತು; ಕಾರಣ ನಾನು ಹೀಗೆಯೆ ಬಾಣವನ್ನು ಬಿಡುವೆನು' ಎಂದನಂತೆ. ಇದರಿಂದಂತೂ ಕರ್ಣನು ಒಳಗೊಂದು ಹೊರಗೊಂದು ಮಾತಿನ ಮೋಸಗಾರನೆಂಬ' ಅಪವಾದವು ಆತನನ್ನು ಆವರಿಸುವ ಸಂಭವವಿಲ್ಲವೆ? ಇದು ಕರ್ಣನ ನನ್ನಿಗೆ ಒಪ್ಪುವುದೆ?

(ಈ) ಅರ್ಜುನನು ಕರ್ಣನಿಗೆ ಮೂದಲಿಸಿ, ಏಡಿಸಿ, 'ನನ್ನ ಹೆಸರು ಕೇಳಿದರೆಯೆ ಕಿಡಿಕಿಡಿಯಾಗುವ ನೀನು, ನಾನು ಎದುರು ಬಂದಿದ್ದರೂ ಏಕೆ ಮೆತ್ತಗೆ ಇದ್ದಿಯೆ?' ಎನ್ನುವನು. ಕರ್ಣನು ಈ ಬಗೆಯ ನಡೆವಳಿಗೆ ಆತನ ತಾಯಿಗೆ ಇತ್ತ ವಚನವೇ ಕಾರಣ. ಒಡೆಯನಿಗಾಗಿ ಆತನು ಎರಡಿಲ್ಲದ ಮನಸ್ಸಿನಿಂದ ಕಾದಲೇ ಇಲ್ಲ! ಇದಾವ ಕೃತಜ್ಞತೆ? 'ಚೋಳದ ಪಾಳಿ?'

೨. ಕರ್ಣನು, ಕೃಷ್ಣನು ಭೆಟ್ಟಿಯಲ್ಲಿ ಆತನಿಗೆ 'ಪಾಂಡವರ ನೋಯಿಸೆನು' ಎಂದು ವಚನ ಕೊಟ್ಟ ಹಾಗೆ ಕು. ವ್ಯಾಸನು ಹೇಳುವನು. ಆದರೆ, ಪಂಪನು ಹಾಗೆ ಮಾಡಿಲ್ಲ. ತಾನು ಏನು ಹೇಳಿದರೂ ಕರ್ಣನು ಒಡಂಬಡನೆಂದು ಕೃಷ್ಣನಿಗೆ ಮನವರಿಕೆಯಾಗಿ ಆತನು ಕರ್ಣನಿಗೆ ಬೀಳ್ಕೊಟ್ಟು ಕಳುಹುವನು. (II ನೋಡು)

೩. ಪಂಪನಲ್ಲಿ ಕು. ವ್ಯಾಸನಂತೆ ಕೊನೆಗೆ ಹಾರುವನ ವೇಷವನ್ನು ತಾಳಿ ಕೃಷ್ಣನು ಕರ್ಣನ ಕುಂಡಲಗಳನ್ನು ದಾನ ಬೇಡಿದ ಭಾಗವು ಬರುವುದಿಲ್ಲ. ಬಾಣಗಳು ನಟ್ಟು ಮೆಯ್ಯೆಲ್ಲ ತೂತುತೂತಾಗಿ ನೆತ್ತರ ಬಸಿದು ಕರ್ಣನು ಮರಣೋನ್ಮುಖನಾಗಿದ್ದಾಗ, ಆತನ ಪ್ರಾಣವು ಬೇಗ ಹೋಗಲೊಲ್ಲದೆಂದೂ, ಈ ಬಲಾಢ್ಯ ಶತ್ರುವನ್ನು ಹೇಗೂ ಬೇಗನೆ ತೀರಿಸಿ ಬಿಡಬೇಕೆಂದೂ ಕೃಷ್ಣನು ಆ ತೆರನಾಗಿ ಮಾಡಿದ ಹಾಗೆ ಕು. ವ್ಯಾಸನ ವರ್ಣನೆಯಿದೆ. ಇದು ಕೃಷ್ಣನ ಬೆಲೆಯನ್ನು ಸ್ವಲ್ಪವೂ ಹೆಚ್ಚಿಸುವುದಿಲ್ಲ. ಹಣದ ಮೇಲಿನ ಅರಿವೆ ಅಲಂಕಾರಗಳಿಗಾಗಿ ಹಾತೊರೆವ ಹಾರುವರು, ಅವರು ಒಮ್ಮೆ ಸಮಾಜಕ್ಕೆ ಆದರ್ಶ ನೇತಾರರಾಗಿದ್ದವರು, ಈಗ ಹೀನ ದೀನ 'ಭಿಕ್ಷುಕ'ರಾಗಿ

ನಾಡಿನ ಕೀಳ್ಮೆಗೆ ಕಾರಣವಾದುದನ್ನೇ ಕು. ವ್ಯಾಸನ ಈ ವರ್ಣನೆಯು ಸೂಚಿಸುತ್ತದಲ್ಲದೆ ಬೇರೊಂದಿಲ್ಲ. (I ೩೪,೩೫ ನೋಡು).

೪. ಕೃಷ್ಣನು ಕರ್ಣನನ್ನು ಕಾಣುವಾಗ ತೋರಿದ ಆದರೋಪಚಾರಗಳ ವರ್ಣನೆ ಪಂಪನಲ್ಲಿ ಇಲ್ಲ. ಅದು ಕುಮಾರವ್ಯಾಸನ ಪ್ರತಿಭೆ. ಆ ವರ್ಣನೆಯೇನೊ ಸೊಗಸಾಗಿದೆ. ರಮ್ಯವಾಗಿದೆ. ಕರ್ಣನ ಸಂಕೋಚವೃತ್ತಿ ತನ್ನ ಮಾನಕ್ಕೆ ತಾನು ಹೆದರಿ ಹಿಂದೆ ಸರಿವ ಆತನ ಸ್ವಭಾವ, ಕೃಷ್ಣನ ಮಾತಿನ ಚಾತುರ್ಯ ಇದೆಲ್ಲವೂ ಸಮರ್ಪಕವಾಗಿದೆ. ಆದರೆ, ಅದೆ ೨-೩ ತಾಸುಗಳ ಮೊದಲು ಬಂಧಿತನಾಗಿ ಅವಮಾನಿತನಾಗಿ ಅದರೊಳಗಿಂದ ಹೇಗೂ ಪಾರಾಗಿ ಹೊರಗೆ ಬಂದ ಮನಃಸ್ಥಿತಿಯಲ್ಲಿ, ದುರ್ಯೋಧನನ ಪಕ್ಷದ ಕರ್ಣನೊಡನೆ ಇಷ್ಟೆಲ್ಲ ಸರಸಸಲ್ಲಾಪಗಳನ್ನು ಮಾಡಿರುವುದು ಸಂಭಾವ್ಯವೆ? ಅಲ್ಲದೆ, ಕೃಷ್ಣನು ತುಂಬ ಅವಸರದಲ್ಲಿದ್ದಾನೆ. ಕುಂತಿ ಹೇಳಿದ ಸಂದೇಶವನ್ನು ಪಾಂಡವರಿಗೆ ಅರುಹಲು, ಮುಂದಿನ ಸಿದ್ಧತೆಗೆ ಬೇಗನೆ ತೊಡಗಲು ಕೃಷ್ಣನು ವೇಗದಿಂದ ಮುಂದೆ ಹೊರಟಿದ್ದಾನೆ. ಇಂತಹ ಗಡಿಬಿಡಿಯ ಹಿನ್ನೆಲೆಯನ್ನು ನೆನೆದುಕೊಂಡರಂತೂ ಕು. ವ್ಯಾಸನ ಆ ವರ್ಣನೆಯು ಅಷ್ಟು ಉಚಿತವೆಂದು ಹೇಳಲಿಕ್ಕಾಗುವುದಿಲ್ಲ.

೫. ಕರ್ಣನು, ಭೀಷ್ಮರಂತೆ ದುರ್ಯೋಧನನಿಗೆ ಅವನ ತಪ್ಪುಗಳ ಬಗೆಗೆ, ಸೋಲಿನ ಬಗೆಗೆ ಸ್ಪಷ್ಟವಾಗಿ ಎದುರಿನಲ್ಲಿಯೆ ಪ್ರಾಮಾಣಿಕವಾಗಿ ಎಂದೂ ಹೇಳಿಲ್ಲ. (II ನೋಡು)

೬. ದುರ್ಯೋಧನನಿಗೆ-'ಒಡಲೆರಡುಂ ಒಂದೆ ಜೀವ' ಎಂಬಂತೆ ನಚ್ಚಿದ, ಅನಂತ ಉಪಕಾರ ಮಾಡಿದ ಗೆಳೆಯನಿಗೆ ಕರ್ಣನು ತಾನು ತಾಯಿಗೆ ಕೊಟ್ಟ ವಚನದ ಸುಳಿವನ್ನೂ ತೋರಗೊಟ್ಟಂತಿಲ್ಲ!

೭. ಕು. ವ್ಯಾಸನಂತೆ ಕೃಷ್ಣನಿಗೂ ಕುಂತಿಗೂ, ಪಂಪನಂತೆ ಕುಂತಿಗೂ ತನ್ನ ಮನದಲ್ಲಿಯೂ ಪಾಂಡವರನ್ನು ಕೊಲ್ಲುವುದಿಲ್ಲವೆಂಬ ನಿರ್ಧಾರ ಮಾಡಿದ ಕರ್ಣನು, ದ್ರೋಣರ ತರುವಾಯ ಸೇನಾಪತಿಪದವನ್ನಾದರೂ ಸ್ವೀಕರಿಸದೆ ಇದ್ದರೆ ಸರಿಯಾಗುತ್ತಿತ್ತು. ಅಶ್ವತ್ಥಾಮನನ್ನು ಹಿಂದಿಕ್ಕಿ ತಾನೇ ವೀರಪಟ್ಟವನ್ನು ಕಟ್ಟಿಸಿಕೊಂಡನು. ಪ್ರಾಮಾಣಿಕವಾಗಿ ಅರ್ಜುನಾದಿಗಳನ್ನು ಸಂಹರಿಸಿಯೇ ಬಿಡುವೆನೆಂದು ಸನ್ನದ್ಧನಾದ ಅಶ್ವತ್ಥಾಮನಿಗೇ ಸೇನಾಪತಿ ಪದವನ್ನು ಬಿಟ್ಟಿದ್ದರೆ, ನಿಜವಾಗಿಯೂ ದುರ್ಯೋಧನನ ಕಲ್ಯಾಣಕರ್ತನೆಂದು ಕರ್ಣನಿಗೆ ಹೇಳಬಹುದಾಗಿತ್ತು. ತಾನು ಮೊದಲೇ (ಅನಿವಾರ್ಯವಾಗಿ-ಪ್ರವಾಹಪತಿತನಾಗಿ) ವಚನದ ಕಟ್ಟಿನಲ್ಲಿ ಸಿಕ್ಕು ಬಿದ್ದುದರಿಂದ ಆ ಮಾತನ್ನು ದುರ್ಯೋಧನನಿಗೆ ತಿಳಿಸಿ, ಅಶ್ವತ್ಥಾಮನಿಗೇ ಸೇನಾಪತಿಯನ್ನು ಮಾಡಲು ತನ್ನ ಒಪ್ಪಿಗೆಯನ್ನು ಕೊಟ್ಟಿದ್ದರೆ ಕರ್ಣನು ಪ್ರಾಮಾಣಿಕ ಸತ್ಯವಂತನೆಂಬ ಹೊಗಳಿಕೆಗೆ ತಕ್ಕವನಾಗುತ್ತಿದ್ದನು. ಆದರೆ, ಈಗ ಕು. ವ್ಯಾಸ ಮತ್ತು ಪಂಪರ ವರ್ಣನೆಗಳು ಕರ್ಣನಿಗೆ ಕೃತಜ್ಞ, ಜೋಳದ ಪಾಳಿಯನ್ನು ಮೆರೆದನೆಂದು ಹೇಳಲು ಅಡ್ಡಿತರುತ್ತವೆ.

೮. ಭಾರತದಲ್ಲಿ ಅರ್ಜುನಾದಿಗಳೆಲ್ಲರಿಗಿಂತ ಕರ್ಣನೇ ಶ್ರೇಷ್ಠನೆಂದು ಪಂಪನು ವರ್ಣಿಸಿರುವುದಾಗಿ, 'ಭಾರತದೊಳ್ ಇಂ ಒಂದೆಚಿತ್ತದೊಳ್ ಪೆರರಾರುಮಂ ನೆನೆಯದಿರಣ್ಣ! ನೆನೆವೊಡೆ ಕರ್ಣನಂ ನೆನೆಯ.' ಎಂದು ಮುಂತಾಗಿ ಕರ್ಣನ ಮರಣಾನಂತರ ಕವಿಯ ಉದ್ಗಾರಗಳಿಂದಲೂ ಈ ಮೊದಲಿನ ಕರ್ಣನ ಸ್ನೇಹ, ಔದಾರ್ಯಾದಿ ಗುಣಗಳ ವರ್ಣನೆಯಿಂದಲೂ ಹೇಳಬಹುದಾಗಿದೆ. ಕು. ವ್ಯಾಸನೂ ಪಂಪನನ್ನೆ ಅನುಸರಿಸಿ ಹೀಗೆಯೆ ಕೊನೆಯ ಉದ್ಗಾರಗಳನ್ನು ತೆಗೆದಿದ್ದಾನೆ: 'ಅಳುಕಿದನೆ ರಥ ಮುಳುಗಿದರೆ? ಕಳವಳಿಸಿದನೆ ಶಲ್ಯಾಪಸರಣಕೆ? ನರನು ಅವಗಿಡಿಸಿ ಕಾದಿದಡೆ ಕೆಲಬಲನ ಹಾರಿದನೆ? ಧಾಪು, ಭಾಪೆಂದು ಹೊಗಳಿತು ವಂದಿ ಸಂದೋಹ. 'ಕೊಟ್ಟ ಭಾಷೆಗೆ ಮರಳಿ ಬಾಣವ ತೊಟ್ಟನೆ? ತಾನೇ ಒಡೆಯನೆಂದು ಅರೆಯಟ್ಟಿದನೆ? ಪಾಂಡವರೊಳು ಅನುಸಂಧಾನವ ಬಿಸುಟು ನಟ್ಟ ಕಣೆಗೆ ಅಳುಕಿದನೆ? ಕೌರವ ಕೆಟ್ಟನು, ಅಕಟಾ! ಎನುತ ಕಾಯವ ಬಿಟ್ಟನು. ಕರ್ಣನೊಳ್ ಆರು ಸರಿ? ಎನುತಿರ್ದುದು ಅಮರಗಣ.'

ಕವಿಗಳು ಒಂದೆಡೆಯಲ್ಲಿ - ಒಂದು ವಿಶೇಷ ಪ್ರಸಂಗದಲ್ಲಿ 'ಈತನಿಗೆ ಆರು ಸರಿ?' ಎಂದು ಯಾರನ್ನಾಗಲಿ ಹೊಗಳಿದ್ದರೆ ಅದು ಅವನ ಸಂಪೂರ್ಣ, ಒಳಗು ಹೊರಗಿಲ್ಲದ ಹೊಗಳಿಕೆಯೆಂದು ಗ್ರಹಿಸಲಿಕ್ಕಾಗದು. ಆ

ಹೊಗಳಿಕೆಯು ಆ ವಿಶಿಷ್ಟ ಪ್ರಸಂಗಕ್ಕಾಗಿ ಅನಿವಾರ್ಯವಾದುದಾಗಿ ಬಂದುದಾಗಿರುತ್ತದೆ. ಆದುದರಿಂದ ಅದರಲ್ಲಿ ಅತಿಶಯೋಕ್ತಿಯ ಅಂಶವು ಸೇರಿಕೊಳ್ಳುವುದು ಸಹಜ. ಮದುವೆಯ ಕಾಲಕ್ಕೆ, ಎಂತಹ ಕುರೂಪಿ, ಕಂಗಾಲ ವಧೂ-ವರರಿದ್ದರೂ 'ಲಕ್ಷ್ಮೀನಾರಾಯಣ ಸ್ವರೂಪಿಣೀವರಾಯ' ಎಂಬುದು ಸಂಪ್ರದಾಯ ಆಗ. ಆಗ ಅವರನ್ನು ಹೊಗಳಿ ಹಾಡಲೇ ಬೇಕು, ಅದರಲ್ಲಿಯೆ ಔಚಿತ್ಯವಿದೆ.

ಇದರಂತೆ ಯಾರನ್ನಾದರೂ ಅಗಲಿದಾಗ, ಅಗಲುವಾಗ ಅವರ ದೋಷಗಳು, ಕುಂದು ಕೊರತೆಗಳು ಮರೆತು ಅವರ ಗುಣಗಳೇ ಎದ್ದು ಕಾಣುವುವು. ಮಡಿದವರನ್ನು ನೆನೆನೆನೆದು ದುಃಖಿಸುವಾಗ ಅವರ ಗುಣಗಳನ್ನು ಹಾಡಿಕೊಳ್ಳುವ ವಾಡಿಕೆಯಿದೆ. ಸತ್ತ ಎಮ್ಮೆಗೆ ಶೇರು ಬೆಣ್ಣೆ, ಎಂಬ ಗಾದೆಯು ಇದೇ ಭಾವವನ್ನು ಹೇಳುತ್ತದೆ. ದುಃಖದ ಕಾಲದಲ್ಲಿ ಆಡುವ ಮಾತು, ವಿಮರ್ಶೆಯ ತೂಕದ ಮಾತುಗಳಲ್ಲ. ಕಡ್ಡಿಯಿದ್ದುದನ್ನೂ ಗುಡ್ಡವಾಗಿ ಮಾಡಿ ಹೇಳಿಕೊಳ್ಳುವ ಹೊತ್ತು ಅದು. ಆಗ ತೀರ ತೂಗಿ ಮಾತಾಡುವುದು ಯೋಗ್ಯವೆನಿಸುವುದಿಲ್ಲ. ಅವರಿಗೆ, ಮಡಿದವರ ಬಗೆಗೆ ದುಃಖ ಕಡಿಮೆ ಎಂಬುದರ ಸೂಚಕವಾಗಿ ಅವರು ಸಹಾನುಭೂತಿ, ಅಂತಃಕರಣ ಕಡಿಮೆ ಎಂಬ ಆರೋಪಕ್ಕೆ ಈಡಾಗಬೇಕಾಗುತ್ತದೆ.

ಆದುದರಿಂದ, ಮಡಿದ ಕಾಲಕ್ಕೆ ಆಡಿದ ಮಾತುಗಳು ಯಾವನಾದರೊಬ್ಬನ ನಿಜವಾದ ಗುಣವರ್ಣನೆಯೆಂದು ಗ್ರಹಿಸುವುದು ಸಮರ್ಪಕವಾಗಲಾರದು. ಪಂಪ ಮತ್ತು ಕುಮಾರವ್ಯಾಸರ ಕರ್ಣನ ಮರಣಾನಂತರದ ವರ್ಣನೆಗಳೂ ಇದೇ ಬಗೆಯವಾಗಿವೆ. ಪಂಪನಿಗೆ ಕರ್ಣನ ಗುಣಗಳಂತೆ ದೋಷಗಳ ಅರಿವೂ ಚೆನ್ನಾಗಿಯೆ ಇದ್ದಿತೆಂದು, ಆತನು ಶಲ್ಯನ ಬಾಯಲ್ಲಿ ಹಾಕಿದ ಮಾತುಗಳಿಂದ ಸ್ಪಷ್ಟವಾಗುತ್ತದೆ. 'ಇಂತಪ್ಪ ಏಕಗ್ರಾಹಿಗಂ, ಒರಂಟಂಗಂ ರಥಮಂ ಎಸಗೆನ್.' ಕರ್ಣನ ಸ್ವಭಾವದ ಸಂಪೂರ್ಣ ಚಿತ್ರವು, ಪಂಪನು ಬಳಸಿದ ಅತ್ಯಂತ ಸಮರ್ಪಕವಾದ ಏಕಗ್ರಾಹಿ ಮತ್ತು ಒರಂಟ ಎಂಬ ಎರಡು ವಿಶೇಷಣಗಳಲ್ಲಿ ಚೆನ್ನಾಗಿ ಒಡಮೂಡಿ ನಿಂತಿದೆ. 'ಏಕಗ್ರಾಹಿ' ಎಂಬುದು ನಿಂದಾವ್ಯಂಜಕ ಮಾತಾದರೆ ಅದೇ ಗುಣವನ್ನೆ 'ಚಲ'ವೆಂದು ಹೇಳಿದರೆ ಹೊಗಳಿಕೆಯಾಗುವುದು. 'ಏಕಗ್ರಾಹಿ'ಯು ಯಾವುದೊಂದು ವಿಷಯವನ್ನು ಇನ್ನೊಂದು ಬದಿಯಿಂದ ನೋಡುವುದಕ್ಕೆ ಅಸಮರ್ಥನಾಗಿರುತ್ತಾನೆ. ತನ್ನ ಹಟವೇ ಹಟ. ಆದುದರಿಂದ ಇಂತಹರು ಒರಟರೂ ಅಹುದು. ಕರ್ಣನಲ್ಲಿ ಈ ಎರಡೂ ಗುಣಗಳ ಅತಿರೇಕವನ್ನು ಅಡಿಗಡಿಗೂ ಕಾಣಬಹುದು.

ಇಂತಹನನ್ನು ಆದರ್ಶಪಾತ್ರವೆಂದು ಪಂಪನು ಗ್ರಹಿಸಿರುವನೆಂಬುದರಿಂದ ಪಂಪನ ಯೋಗ್ಯತೆಗೇ ಕುಂದು. ಆದರೆ, ಪಂಪನು, ಶಲ್ಯನಿಂದ ಕರ್ಣನ ನಿಜವಾದ ಯೋಗ್ಯತೆಯೇನೆಂಬುದನ್ನು ಒಂದೆಡೆಯಲ್ಲಿ ಉಚಿತ ರೀತಿಯಲ್ಲಿ ಒಡನುಡಿಸಿದ್ದಾನೆ. ಕರ್ಣನ ಸ್ನೇಹ, ಸಾಹಸ, ಔದಾರ್ಯಾದಿ ಗುಣಗಳ ಬಗೆಗೆ ಆದರವುಂಟಾದರೂ ಪಂಪನು ಆತನ ಅವಗುಣಗಳನ್ನೂ ಮರೆತಿರಲಿಲ್ಲ. ಒಳ್ಳೆಯ ಇಡೀಚಿತ್ರ ಮಸೀನುಂಗಿತೆಂಬಂತೆ ಈ ಕುಂದುಗಳೇ ಕರ್ಣನನ್ನು ಹಾಳುಮಾಡಿವೆ.

೯. ಕರ್ಣನ 'ಚಾಗ' ಆದರ್ಶವೆ? 'ದೇಶ-ಕಾಲ-ಪಾತ್ರ'ಗಳ ವಿವೇಕವಿಲ್ಲದೆ ಮನಬಂದಂತೆ ಕೊಡುವ ದಾನ ಹೀನದಾನ; ತಾಮಸ ದಾನವೆಂದು ಲೋಕವೆಲ್ಲ ಒಪ್ಪುವುದು. ಕರ್ಣನು ತನ್ನ ಹಗೆ ಇಂದ್ರನಿಗೆ ಕವಚದ ದಾನ ಮಾಡಿದ್ದು. ಆತನ ವೈಯಕ್ತಿಕ ಔದಾರ್ಯವನ್ನು ತೋರುತ್ತಿದ್ದರೂ ಅದು ಅನುಕರಣೀಯ ದಾನವೆನಿಸುವುದೆ? ಲೋಕಕ್ಕೆ ಇದು ಅನುಸರಣೀಯ, ಆದರ್ಶ, ಆಗಬಹುದೇ?

೧೦. ಕರ್ಣನ 'ನನ್ನಿ'ಯ ಕಲ್ಪನೆಯೂ ಹೀಗಿಯೆ ಸದೋಷವಾಗಿದೆ. ಏಕಗ್ರಾಹಿ, ಒರಟುತನವೆಂದರೆ 'ನನ್ನಿ'ಯಲ್ಲ; ಸತ್ಯ ನಿಷ್ಠುರತೆಯೂ ಅಲ್ಲ. ಏಕಗ್ರಾಹಿ ಒರಟರಿಂದ ಸತ್ಯವು ಬಹುದೂರ. ಸತ್ಯವು ಅನಂತ ಮುಖವಾಗಿದೆ. ಆದುದರಿಂದ, ಏಕಗ್ರಾಹಿಗಳು ಸತ್ಯವನ್ನು ಎಲ್ಲೆಡೆಗಳಿಂದ ಕಾಣಲು ಅಸಮರ್ಥರಾಗುತ್ತಾರೆ. ಏಕೆಂದರೆ, ಇವರು ಇನ್ನೊಂದು ದಿಕ್ಕಿನಿಂದ ನೋಡಲು ಸಿದ್ಧರೇ ಇರುವುದಿಲ್ಲ. ಸತ್ಯವು ಅತ್ಯಂತ ಸೂಕ್ಷ್ಮವಾಗಿದೆ.

ಅದನ್ನು ಒರಟರು ಅರಿಯಲರಿಯರು. ಎಗ್ಗತನದಿಂದ ಒತ್ತಾಯದ ಎಳೆದಾಟದಿಂದ ಸತ್ಯ ತಿಳಿಯದು ಇಂತಹರು 'ಶಾಬ್ದಿಕ ಸತ್ಯಕ್ಕೆ' ಅಂಟಿಕೊಂಡು ನಿಲ್ಲಬಲ್ಲರೇ ಹೊರತು ಸತ್ಯದ ಅಂತರಂಗವು ಇವರಿಗೆ ತಿಳಿಯಲಾರದು.

ಶ್ರೀವ್ಯಾಸರು ಕೃಷ್ಣನು ಪಾತ್ರದ ಮೂಲಕವಾಗಿ ಸತ್ಯದ ಅಂತರಂಗವನ್ನು ತಿಳಿದು ನಡೆವವನನ್ನು ಚಿತ್ರಿಸಿದ್ದಾರೆ. ಸತ್ಯದ ಸ್ಥೂಲರೂಪಕ್ಕೆ ಅಂಟಿಕೊಂಡ ಕರ್ಣನನ್ನು, ಸತ್ಯದ ಸೂಕ್ಷ್ಮ ಗಹನರೂಪವನ್ನು ಅರಿತ ಕೃಷ್ಣನ ಚಿತ್ರವನ್ನು ಚೆನ್ನಾಗಿ ಬಿಡಿಸಿ ತೋರಿಸುವುದಕ್ಕಾಗಿಯೆ ಭಾರತದಲ್ಲಿ ಉಪಯೋಗಿಸಿಕೊಂಡಂತಿದೆ. ಭೀಮಾರ್ಜುನರ ಪಾತ್ರಗಳೂ ಹೀಗೆಯೆ. ಯುಧಿಷ್ಠಿರನು ಕರ್ಣನಿಂದ ಗಾಯಗೊಂಡು ನಿರ್ವಿಣ್ಣನಾಗಿ ಶಿಬಿರಕ್ಕೆ ಮರಳಿದಾಗ ಅಣ್ಣನನ್ನು ಕಾಣಲು ಅರ್ಜುನನು ಬಂದನಂತೆ. ಅರ್ಜುನನಿಗೆ ಯುಧಿಷ್ಠಿರನು, 'ಕರ್ಣನನ್ನು ಕೊಂದು ಬಂದೆಯಾ?' ಎಂದು ಪ್ರಶ್ನಿಸಿದಾಗ, 'ಇನ್ನೂ ಇಲ್ಲ'ವೆಂದು ಅರ್ಜುನನು ನುಡಿದನು. 'ಹಾಗಾದರ ಗಾಂಢೀವವನ್ನು ಧರಿಸಿದ್ದು ವ್ಯರ್ಥವಾಯಿತು;' ಎಂದು ಯುಧಿಷ್ಠಿರನು ಉಸಿರುಗಳೆದನು. ಗಾಂಡೀವಕ್ಕೆ ಹೆಸರಿಟ್ಟವರನ್ನು ಕೊಲ್ಲುವೆನೆಂದು ಅರ್ಜುನನ ಪ್ರತಿಜ್ಞೆ, ಆಯ್ತು; ಅರ್ಜುನನು ತನ್ನ ಪ್ರತಿಜ್ಞೆಗೆ ಭಂಗ ಬರಬಾರದೆಂದು ಅಣ್ಣನ್ನು ಕೊಲ್ಲುವವನೆ! ಆದರೆ ಕೃಷ್ಣನು ಧರ್ಮದ ಸೂಕ್ಷ್ಮ ವಿಚಾರವನ್ನು ತಿಳಿಸಿದನು. ಹಿರಿಯರಿಗೆ ಅವಮಾನಮಾಡಿದರೆ ಅವರಿಗೆ ಮರಣದ ದಂಡನೆ ವಿಧಿಸಿದಂತೆ, ಎಂದು ತಿಳಿಸಿದನು. ಆ ಕುತ್ತದಿಂದ ಪಾಂಡವರನ್ನು ಪಾರುಗಾಣಿಸಿದನು. ಪ್ರತಿಜ್ಞೆಯ ಶಬ್ದಗಳಿಗೇ ಅಂಟಿಕೊಂಡಿದ್ದರೆ ಯುಧಿಷ್ಠಿರನ ಶಿರಚ್ಛೇದವು ಆಗಲೇ ಬೇಕಿತ್ತು. ಹಾಗೆ ಶಾಬ್ದಿಕ ಸತ್ಯಕ್ಕೆ-ಸ್ಥೂಲ ಸತ್ಯಕ್ಕೆ ಹಟದಿಂದ ಅಂಟಿಕೊಂಡಿರುವ ಛಲವೇ ಏಕಗ್ರಾಹಿಯಾದ ಒರಟುತನಕ್ಕೆ ಕಾರಣವಾಗುತ್ತದೆ. ಕರ್ಣನ ನನ್ನಿ ಈ ಬಗೆಯದು.

ಈ ಕಾರಣದಿಂದಲೇ ಕರ್ಣನ ಕೊನೆ ಆ ಬಗೆಯದಾಯಿತು. ವಿವೇಕಯುಕ್ತವಾದ ದಾನ, ಸತ್ಯದ ಸೂಕ್ಷ್ಮ ಗಹನ ತಿಳುವಳಿಕೆ ಇವು ಇದ್ದೂ-ಎಂದರೆ ಚಾಗಿ, ನನ್ನಿವೆಂಡಗನಾಗಿದ್ದೂ ಅವನ ದುರಂತವಾಯಿತೆಂಬುದು ಇದು ಅಸಂಬದ್ಧ. ವಿಪರೀತ. ಅವರವರ ಶೀಲವೇ ಅವರ ದೈವ. ನಡೆವಳಿಯೆ ಹಣೆಯ ಬರೆಹ.

ವ್ಯಾಸರ ಕರ್ಣ

ಕುಮಾರವ್ಯಾಸ ಕರ್ಣನನ್ನು ಕಂಡು ಉಂಟಾದ ಅತೃಪ್ತಿಯು ಪಂಪನ ಕರ್ಣನನ್ನು ನೋಡಿದ ಮೇಲೂ ಕಡಿಮೆಯಾಗಲಿಲ್ಲ. ಅಲ್ಲದೆ ಕುಮಾರವ್ಯಾಸ ಮತ್ತು ಪಂಪರ ವರ್ಣನೆಗಳಲ್ಲಿ ಕೆಲವೊಂದು ಭಿನ್ನತೆಯೂ ಕಂಡುಬಂದಿತು. ಕು. ವ್ಯಾಸನ ಕರ್ಣನು ಕೃಷ್ಣನಿಗೆ ವಚನಕೊಟ್ಟಿದ್ದಾನೆ. ಪಂಪನು ಹಾಗೆ ಹೇಳುವುದಿಲ್ಲ. ಇಂತಹ ಕೆಲವು ವ್ಯತ್ಯಾಸಗಳನ್ನು ನೋಡಿದ ಬಳಿಕ, ಮೂಲ ಸಂಸ್ಕೃತಭಾರತವನ್ನೆ ಒಮ್ಮೆ ನೋಡುವುದು ಲೇಸೆಂದು ತೋರಿತು. ಅಲ್ಲಿಯ ಕರ್ಣನು, ಕಂನುಡಿಯಲ್ಲಿ ಚಿತ್ರಿತನಾದ ಕರ್ಣನಿಂದ ತೀರ ಬೇರೆಯಾಗಿದ್ದುದು ಕಂಡುಬಂದಿತು.

೧. ಸಂವಿಧಾನವು ಮುರಿದ ಬಳಿಕ ಕೃಷ್ಣನು ಕುಂತಿಯನ್ನು ಕಂಡು ಪಾಂಡವರತ್ತ ಹೊರಟಾಗ ದಾರಿಯಲ್ಲಿ ಕರ್ಣನನ್ನು ಕಂಡು ಒಮ್ಮೆಲೇ ಮಾತಿಗೇ ಆರಂಭಿಸುವನು. ಅಲ್ಲಿ ಕುಮಾರವ್ಯಾಸನಂತಹ ಪೀಠಿಕೆಯಿಲ್ಲ. ಒಮ್ಮೆಲೆ ಮುಖ್ಯ ಮಾತನ್ನೇ ಆರಂಭಿಸಿ 'ನೀನು ರಾಧೇಯನಲ್ಲ; ಕುಂತೀಸುತನೆಂದು ಅರುಹುವನು.

ತತೋ ವಿಸರ್ಜಯಾಮಾಸ ಭೀಷ್ಮಾದೀನ್ ಕುರುಪುಂಗವಾನ್।
ಆರೋಪ್ಯಾಥ ರಥೇ ಕರ್ಣಂ ಪ್ರಾಯಾತ್ ಸಾತ್ಯಕಿನಾ ಸಹ॥

॥ ೩೭-೨೬॥

ತತೋ ನಿರ್ಯಾಯ ನಗರಾತ್ ಪ್ರಯಯೌ ಪುರುಷೋತ್ತಮಃ।
ಮಂತ್ರಯಾಮಾಸ ಚ ತದಾ ಕರ್ಣೇನ ಸುಚಿರಂ ಸಹ ॥ ೨೯॥

೨. ಕೃಷ್ಣನು ಕರ್ಣನಿಗೆ ಹೇಳಿದ ಮುಖ್ಯ ಮಾತಿದು:

ಉಪಾಸಿತಾಃ ತೇ ರಾಧೇಯ ಬ್ರಾಹ್ಮಣಾ ವೇದಪಾರಗಾಃ।
ತತ್ವಾರ್ಥಂ ಪರಿಪೃಷ್ಟಾಶ್ಚ ನಿಯತೇನಾನಸೂಯಯಾ ೧೪೦ ॥ ೬॥

ತ್ವಮೇವ ಕರ್ಣ ಜಾನಾಸಿ ವೇದವಾದಾನ್ ಸನಾತನಾನ್।
ತ್ವಮೇವ ಧರ್ಮಶಾಸ್ತ್ರೇಷು ಸೂಕ್ಷ್ಮೇಷು ಪರಿನಿಷ್ಠಿತಃ ॥ ೭॥

ಕಾನೀನಶ್ಚ ಸಹೋಢಶ್ಚ ಕನ್ಯಾಯಾಂ ಯಶ್ಚ ಜಾಯತೇ।
ವೋಢಾರಂ ಪಿತರಂ ತಸ್ಯ ಪ್ರಾಹುಃ ಶಾಸ್ತ್ರವಿದೋ ಜನಾಃ। ॥ ೮॥

ಸೋಽಸಿಕರ್ಣತಥಾ ಜಾತಃ ಪಾಂಡೋಃ ಪುತ್ರೋಽಸಿ ಧರ್ಮತಃ।
ನಿಗ್ರಹಾದ್ ಧರ್ಮಶಾಸ್ತ್ರಾಣಾಂ ಏಹಿ ರಾಜಾ ಭವಿಷ್ಯಸಿ ॥ ೯॥

ಪಿತೃಪಕ್ಷೇ ಚ ತೇ ಪಾರ್ಥಾ ಮಾತೃಪಕ್ಷೇ ಚ ವೃಷ್ಣಯಃ ।
ದ್ವೌ ಪಕ್ಷಾವಭಿಜಾನೀಹಿ ತ್ವಮೇತೌ ಪುರುಷರ್ಷಭ ॥ ೧೦॥

ಪ್ರಶಾಧಿ ರಾಜ್ಯಂ ಕೌಂತೇಯ.............. ॥ ೨೮॥

'ಕರ್ಣನೇ ನೀನು ಕಾನೀನ; ಆದಕಾರಣ ಧರ್ಮಶಾಸ್ತ್ರಗಳ ಆಧಾರದಿಂದ ನೀನೇ ರಾಜನಾಗಬೇಕು. ನಿನಗೆ ಪಾಂಡವರಂತಹ ವೀರರು ತಮ್ಮಂದಿರು; ತಾಯಿಯ ಕಡೆಯಿಂದ ಯಾದವರು ಆಪ್ತಬಾಂಧವರು. ನಿನ್ನ ವೈಭವಕ್ಕೆ ಎಣೆಯಿಲ್ಲ. ರಾಜನಾಗು ನಡೆ;' ಎಂದು ಮುಂತಾಗಿ ತಿಳಿಹೇಳುವನು.

೩. ಆದರೆ, ಕರ್ಣನಿಗೆ ಕೃಷ್ಣನು ಹೇಳಿದುದರಲ್ಲಿ ಹೊಸತು ಏನೂ ಎನಿಸಲ್ಲ. ಅದೆಲ್ಲವೂ ತನಗೆ ಗೊತ್ತಿದ್ದ ಹಾಗೆ ಮರಳಿ ಕೃಷ್ಣನಿಗೆ ಹೇಳಿದ್ದಾನೆ.

ಅಸಂಶಯಂ ಸೌಹೃದಾನ್ ಮೇ ಪ್ರಣಯಾಚ್ಚಾಥ ಕೇಶವ।
ಸಖ್ಯೇನ ಚೈವ ವಾರ್ಷ್ಣೇಯ ಶ್ರೇಯಸ್ಕಾಮತಯೈವ ಚ ॥ ೧೪೧.೧॥

ಸರ್ವಂ ಚೈವಾಭಿಜಾನಾಮಿ ಪಾಂಡೋಃ ಪುತ್ರೋಽಸ್ಮಿ ಧರ್ಮತಃ।
ನಿಶ್ಚಯಾತ್ ಧರ್ಮಶಾಸ್ತ್ರಾಣಾಂ ಯಥಾ ತ್ವಂ ಕೃಷ್ಣ ಮನ್ಯಸೇ ॥ ೨॥

ಕನ್ಯಾ ಗರ್ಭಂ ಸಮಾಧತ್ತ ಭಾಸ್ಕರಾನ್ಮಾಂ ಜನಾರ್ದನ।
ಆದಿತ್ಯವಚನಾತ್ ಚೈವ ಜಾತಂ ಮಾಂ ಸಾ ವ್ಯಸರ್ಜಯತ್ ॥ ೩॥

ಸೋಽಸ್ಮಿ ಕೃಷ್ಣ ತಥಾಜಾತಃ ಪಾಂಡೋಃ ಪುತ್ರೋಽಸ್ಮಿ ಧರ್ಮತಃ।
ಕುಂತ್ಯಾ ತು ಅಹಮಪಾಕೀರ್ಣಃ ಯಥಾ ನ ಕುಶಲಂ ತಥಾ ॥ ೪।.

ಸೂತೋ ಹಿ ಮಾಮಧಿರಥೋ ದೃಷ್ಟ್ವೈವಾಭ್ಯಾನಯದ್ಗೃಹಾನ್।
ರಾಧಾಯಶ್ಚೈವ ಮಾಂ ಪ್ರಾದಾತ್ ಸೌಹಾರ್ದಾನ್ ಮಧುಸೂದನ ॥ ೫॥

ಯತ್ ಸ್ನೇಹಾಚ್ಚೈವ ರಾಧಾಯಾಂಃ ಸದ್ಯಃ ಕ್ಷೀರಮವಾತರತ್।
ಸಾ ಮೇ ಮೂತ್ರ ಪುರೀಷಂ ಚ ಪ್ರತಿಜಗ್ರಾಹ ಮಾಧವ॥ ॥ ೬॥

ತಸ್ಯಾಃ ಪಿಂಡವ್ಯಪನಯಂ ಕುರ್ಯಾತ್ ಅಸ್ಮದ್ವಿಧಃ ಕಥಮ್।

....

ಭಾರ್ಯಾಶ್ಚೋಢಾ ಮಮ ಪ್ರಾಪ್ತೇ ಯೌವನೇ ತತ್ಪರಿಗ್ರಹಾತ್ ॥ ೧೦।.

ತಾಸು ಪುತ್ರಾಶ್ಚ ಪೌತ್ರಾಶ್ಚ ಮಮ ಜಾತಾ ಜನಾರ್ದನ।
ತಾಸು ಮೇ ಹೃದಯಂ ಕೃಷ್ಣ ಸಂಜಾತಂ ಕಾಮಬಂಧನಮ್ ॥ ೧೧।.

ನ ಪೃಥಿವ್ಯಾ ಸಕಲಯಾ ನ ಸುವರ್ಣಸ್ಯ ರಾಶಿಭಿಃ।
ಹರ್ಷಾದ್ ಭಯಾದ್ವಾ ಗೋವಿಂದ ಮಿಥ್ಯಾಕರ್ತುಂ ತದುತ್ಸಹೇ ॥ ೧೨॥

ವಧಾದ್ ಬಂಧಾದ್ ಭಯಾದ್ ವಾಽಪಿ ಲೋಭ್ಯಾದ್ವಾಪಿ ಜನಾರ್ದನ ।
ಅನೃತಂ ನೋತ್ಸಹೇ ಕರ್ತುಂ ಧಾರ್ತರಾಷ್ಟ್ರಸ್ಯ ಧೀಮತಃ ॥ ೧೭॥

'ಕೃಷ್ಣಾ, ನೀನು ಹೇಳುವುದೆಲ್ಲವನ್ನೂ ನಾನು ಬಲ್ಲೆ. ನೀನು ನನ್ನ ಮೇಲಿನ ಪ್ರೀತಿಯಿಂದಲೆ ಎಲ್ಲವನ್ನೂ ಹೇಳುತ್ತಿರುವೆ. ನಾನು ಪಾಂಡುಪುತ್ರ; ಮದುವೆಯ ಮೊದಲು ಕುಂತಿಯು ಸೂರ್ಯನಿಂದ ನನ್ನನ್ನು ಪಡೆದಳು.

ಅಧಿರಥನೆಂಬ ಸೂತನು ನನ್ನನ್ನು ಎತ್ತಿಕೊಂಡೊಯ್ದು ಹೆಂಡತಿ ರಾಧೆಗೆ ಇತ್ತನು. ಅವಳೇ ನನಗೆ ತಾಯಿ. ನನ್ನ ಹೇಲು-ಉಚ್ಚೆಯನ್ನೂ ತೆಗೆದಳು. ಅಂತಹಳಿಗೆ ನಾನು ಹೇಗೆ ಕೃತಘ್ನನಾಗಲಿ? ನನಗೆ ಸೂತಕುಲದಲ್ಲಿ ಮದುವೆಯಾಗಿ ಮೊಮ್ಮಕ್ಕಳೂ ಆಗಿದ್ದಾರೆ. ಅವರಲ್ಲಿ ನನ್ನ ಅಂತಃಕರಣವು ತೊಡಕಿಕೊಂಡಿದೆ. ಇದನ್ನು ಕಡಿದುಕೊಂಡು ಬರಲಾರೆ. ಎಲ್ಲ ಲೋಕದ ಒಡೆತನವನ್ನು ಕೊಟ್ಟರೂ ಬೇಡ. ಸುವರ್ಣರಾಶಿಯನ್ನು ಮುಂದೊಡಿದ್ದರೂ ನನಗೆ ಆಶೆಯಿಲ್ಲ. ಲೋಭದಿಂದ ಅಥವಾ ಮೋಹದಿಂದ ಇಲ್ಲವೆ ಹೆದರಿಕೆಯಿಂದ ಅಲ್ಲದ್ದನ್ನು ಮಾಡಲು ನನಗೆ ಮನಸ್ಸಿಲ್ಲ. ದುರ್ಯೋಧನನಿಗೂ ಕೇಡು ಬಗೆಯಲಾರೆ.

ಈ ಬಗೆಯ ನೇರವಾದ ನಿರ್ಧಾರದ ನುಡಿಗಳೊಂದಿಗೆ ಅಲ್ಲಿ ಕೊನೆಗೆ ಕರ್ಣನ ಬಾಯಲ್ಲಿ ಇನ್ನೂ ಕೆಲವು ಮಾತುಗಳು ಬಂದಿವೆ.

ಯದಿ ಜಾನಾತಿ ಮಾಂ ರಾಜಾ ಧರ್ಮಾತ್ಮಾ ಸಂಯತೇಂದ್ರಿಯಃ।
ಕುಂತ್ಯಾಃ ಪ್ರಥಮಜಂ ಪುತ್ರಂ ನ ಸ ರಾಜ್ಯಂ ಗ್ರಹೀಷ್ಯತಿ ॥ ೨೧॥

ಪ್ರಾಪ್ಯ ಚಾಪಿ ಮಹದ್ರಾಜ್ಯಂ ತದಹಂ ಮಧುಸೂದನ।
ಸ್ಫೀತಂ ದುರ್ಯೋಧನಾಯೈವ ಸಂಪದದ್ಯಾಮರಿಂದಮ ॥ ೨೨॥

ಸ ಏವ ರಾಜಾ ಧರ್ಮಾತ್ಮಾ ಶಾಶ್ವತೋಽಸ್ತು ಯುಧಿಷ್ಠಿರಃ
ನೇತಾ ಯಸ್ಯ ಹೃಷೀಕೇಶೋ ಯೋದ್ಧಾ ಯಸ್ಯ ಧನಂಜಯಃ ॥ ೨೩॥

ಪೃಥವೀ ತಸ್ಯ ರಾಷ್ಟ್ರಂ ಚ........... ॥ ೨೪॥

ನಾನು ಅಣ್ಣನೆಂದು ಧರ್ಮನಿಗೆ ಗೊತ್ತಾದರೆ ಆತನು ತನ್ನ ರಾಜ್ಯವನ್ನು ನನಗೆ ಕೊಡದೆ ಎಂದೂ ಇರನು. ಆ ರಾಜ್ಯವು ನನಗೆ ಬಂದರೂ ನಾನು ಅದನ್ನು ದುರ್ಯೋಧನನಿಗೇ ಒಪ್ಪಿಸುವೆನು. ಆದರೆ, ಧರ್ಮಾತ್ಮನಾದ ಯುಧಿಷ್ಠಿರನೇ ಶಾಶ್ವತವಾಗಿ ಆಳಲಿ. ಎಲ್ಲಿ ಹೃಷಿಕೇಶ ಕೃಷ್ಣನು ನೇತಾರನಾಗಿರುವನೊ ಅಲ್ಲಿಯೆ ನಿಶ್ಚಿತವಾಗಿ ಗೆಲುವು. ಅವರಿಗೇ ಪೃಥಿವಿಯ ರಾಜ್ಯವು. .

೪. ಕರ್ಣನು ಈ ಮಾತನ್ನೆ ಮುಂದುವರಿಸಿ ಜರುಗಲಿರುವ ಭಾರತೀಯ ಯುದ್ಧವನ್ನು ಒಂದು ರಣಯಜ್ಞಕ್ಕೆ ಹೋಲಿಸಿ ಅದರಲ್ಲಿ ತಮ್ಮೆಲ್ಲರ ಬಲಿದಾನವಾಗುವುದಿದ್ದು ನಿಮ್ಮ ಪಕ್ಷಕ್ಕೇ ಜಯವೆಂದು ವಿಸ್ತಾರವಾಗಿ ಹೇಳಿದ ವರ್ಣನೆಯಿದೆ:

ಧಾರ್ತರಾಷ್ಟ್ರಸ್ಯ ವಾರ್ಷ್ಣೇಯ ಶಸ್ತ್ರಯಜ್ಞೋ ಭವಿಷ್ಯತಿ।
ಅಸ್ಯ ಯಜ್ಞಸ್ಯ ವೇತ್ತಾ ತ್ವಂ ಭವಿಷ್ಯಸಿ ಜನಾರ್ದನ ॥೧೪೧.೨೯॥

ಅಸಯೋಽತ್ರ ಕಪಾಲಿನಿ ಪುರೋಡಾಶಾಃ ಶಿರಾಂಸಿ ಚ।
ಹವಿಸ್ತು ರುಧಿರಂ ಕೃಷ್ಣ ತಸ್ಮಿನ್ ಯಜ್ಞೇ ಭವಿಷ್ಯತಿ ॥ ೨೯॥

ದೀಕ್ಷಿತೋ ಧಾರ್ತರಾಷ್ಟ್ರೋಽತ್ರ ಪತ್ನೀ ಚಾಸ್ಯ ಮಹಾಚಮೂಃ ॥ ೪೨॥

ಯದಾ ದ್ರಕ್ಷ್ಯಸಿ ಮಾಂ ಕೃಷ್ಣ ನಿಹತಂ ಸವ್ಯಸಾಚಿನಾ।
ಪುನಶ್ಚಿತಿಸ್ತದಾ ಚಾಸ್ಯ ಯಜ್ಞಸ್ಯಾಥ ಭವಿಷ್ಯತಿ ॥ ೪೬।.

ದುಃಶಾಸನಸ್ಯ ರುಧಿರಂ ಯದಾ ಪಾಸ್ಯತಿ ಪಾಂಡವಃ।
....

ಯದಾ ದ್ರೋಣಂ ಚ ಭೀಷ್ಮಂ ಚ ಪಾಂಚಾಲ್ಯೌ ಪಾತಯಿಷ್ಯತಃ।
ತದಾ ಯಜ್ಞಾವಸಾನಂ ತದ್ಭವಿಷ್ಯತಿ ಜನಾರ್ದನ ॥ ೪೮॥
....

ಶಸ್ತ್ರಯಜ್ಞದ ಈ ವರ್ಣನೆಯಲ್ಲಿ ಮುಂದೆ ಒದಗಲಿರುವ ಸಂಗತಿಗಳೆಲ್ಲ ಯಥಾವತ್ತಾಗಿ ಕರ್ಣನ ಬಾಯಿಂದ ಬಂದಿವೆ. ತಾನು ಅರ್ಜುನನಿಂದ ಸಾಯುವುದು ನಿಶ್ಚಿತವೆಂದು ಕರ್ಣನು ಹೇಳುತ್ತಾನೆ. ದುಃಶಾಸನನ ನೆತ್ತರವನ್ನು ಭೀಮನು ಕುಡಿಯುವನು; ಪಾಂಚಾಲ ಪುತ್ರರಿಂದ ದ್ರೋಣಭೀಷ್ಮರು ಮಡಿಯುವರು; ದುರ್ಯೋಧನನು ಭೀಮನಿಂದ ಸಾಯುವನು. ಆಗ, ಈ ಯಜ್ಞವು ಸಮಾಪ್ತವಾಗುವುದು; ಎಂದು ಕರ್ಣನು ಹೇಳುತ್ತಾನೆ. ಕೊನೆಗೆ ತನ್ನ ಯುದ್ಧಕ್ಕೆ ಅರ್ಜುನನನ್ನು ಕರೆತರಲು ಕೃಷ್ಣನಿಗೆ ಬಿನ್ನವಿಸುತ್ತಾನೆ.

ಸಮುಪಾನಯ ಕೌಂತೇಯಂ ಯುದ್ಧಾಯ ಮಮ ಕೇಶವ।
ಮಂತ್ರ ಸಂವರಣಂ ಕುರ್ವನ್ ನಿತ್ಯಮೇವ ಪರಂತಪ ॥ ೬೭॥

ಇಲ್ಲಿಗೆ ಒಂದು ಅಧ್ಯಾಯವು (೧೪೧) ಮುಗಿಯುತ್ತದೆ.

೫. ಮುಂದಿನ ಅಧ್ಯಾಯದಲ್ಲಿ ಕೃಷ್ಣನು ಕರ್ಣನ ಈ ಮಾತುಗಳನ್ನು ಕೇಳಿ ನಕ್ಕು, ಹೀಗೆ ನುಡಿದ ವರ್ಣನೆಯಿದೆ.

ಕರ್ಣಸ್ಯ ವಚನಂ ಶ್ರುತ್ವಾ ಕೇಶವಃ ಪರವೀರಹಾ।
ಉವಾಚ ಪ್ರಹಸನ್ ವಾಕ್ಯಂ ಸ್ಮಿತಪೂರ್ವಮಿದಂ ಯಥಾ ॥ ೧೪೨.೧॥

ಅಪಿ ತ್ವಾಂ ನಲಭೇತ್ ಕರ್ಣ ರಾಜ್ಯಲಂಭೋಪಪಾದನಮ್।
ಮಯಾ ದತ್ತಾಂ ಹಿ ಪೃಥಿವೀಂ ನ ಪ್ರಶಾಸಿತುಮಿಚ್ಛಸಿ ॥ ೨॥

ಧ್ರುವೋ ಜಯಃ ಪಾಂಡವಾನಾಮಿತೀದಂ
ನ ಸಂಶಯಃ ಕಶ್ಚನ ನ ವಿದ್ಯತೇಽತ್ರ।
ಜಯಧ್ವಜೋ ದೃಶ್ಯತೇ ಪಾಂಡವಸ್ಯ
ಸಮುಚ್ಛ್ರಿತೋ ವಾನರರಾಜ ಉಗ್ರಃ ॥ ೩॥

....

ರಾಜಾನೋ ರಾಜಪುತ್ರಾಶ್ಚ ದುರ್ಯೋಧನವಶಾನುಗಾಃ।
ಪ್ರಾಪ್ಯ ಶಸ್ತ್ರೇಣ ನಿಧನಂ ಪ್ರಾಪ್ಸ್ಯಂತಿ ಗತಿಮುತ್ತಮಾಮ್ ॥ ೨೦॥

ಕೃಷ್ಣನ ಈ ಮಾತುಗಳಲ್ಲಿ (ಕರ್ಣನಂತಹ) ಮುಂದೆ ಒದಗುವ ಸಂಗತಿಗಳ ಸವಿಸ್ತೃತ ಭವಿಷ್ಯವು ಇಲ್ಲ. 'ಕಾಳಗದಲ್ಲಿ ಗೆಲವು ನಮಗೆ ನಿಶ್ಚಿತ; ನೀವು ಕೌರವರೆಲ್ಲರೂ ನೆಲಕ್ಕುರುಳುವಿರಿ' ಎಂಬೀ ಒಂದೇ ಮಾತು ಅದರಲ್ಲಿ ಇನ್ನೂ ಬೇರೆ ಬೇರೆ ಬಗೆಯಾಗಿ ಬಂದಿದೆ. ಇಲ್ಲಿ ೧೪೨ನೆಯ ಅಧ್ಯಾಯವು ಮುಗಿಯುವುದು.

೬. ೧೪೩ನೆಯ ಅಧ್ಯಾಯದಲ್ಲಿ ಕೃಷ್ಣನ ಈ ಮಾತಿಗೆ ಕರ್ಣನು ಕೊಟ್ಟ ಮಾರುತ್ತರವಿದು:

ಜಾನನ್ ಮಾಂ ಕಿಂ ಮಹಾಬಾಹೋ ಸಂಮೋಹಯಿತುಮಿಚ್ಛಸಿ।
ಯೋಽಯಂ ಪೃಥಿವ್ಯಾಃ ಕಾರ್ತ್ಸ್ನ್ಯೇನ ವಿನಾಶಃ ಸಮುಪಸ್ಥಿತಃ ॥ ೨॥

ನಿಮಿತ್ತಂ ತತ್ರ ಶಕುನಿರಹಂ ದುಃಶಾಸನಸ್ತಥಾ।
ದುರ್ಯೋಧನಶ್ಚ ನೃಪತಿರ್ಧೃತರಾಷ್ಟ್ರಸುತೋಽಭವತ್ ॥ ೩॥

ಅಸಂಶಯಮಿದಂ ಕೃಷ್ಣ ಮಹದ್ಯುದ್ಧಮುಪಸ್ಥಿತಮ್।
ಪಾಂಡವಾನಾಂ ಕುರೂಣಾಂ ಚ ಘೋರಂ ರುಧಿರಕರ್ದಮಮ್ ॥ ೪॥

ರಾಜಾನೋ ರಾಜಪುತ್ರಾಶ್ಚ ದುರ್ಯೋಧನವಶಾನುಗಾಃ।
ರಣೇ ಶಸ್ತ್ರಾಗ್ನಿನಾ ದಗ್ಧಾಃ ಪ್ರಾಪ್ಸ್ಯಂತಿ ಯಮಸಾದನಮ್ ॥ ೫॥

ಸ್ವಪ್ನಾ ಹಿ ಬಹವೋ ಘೋರಾ ದೃಶ್ಯಂತೇ ಮಧುಸೂದನ।
ನಿಮಿತ್ತಾನಿ ಚ ಘೋರಾಣಿ ತಥೋತ್ಪಾತಾಃ ಸುದಾರುಣಾಃ ॥ ೬॥

....

ವಿದಿತಂ ಮೇ ಹೃಷೀಕೇಶ ಯತೋ ಧರ್ಮಸ್ತತೋ ಜಯಃ ॥ ೩೬॥

....

ಯೂಯಂ ಸರ್ವೇ ವಧಿಷ್ಯಧ್ವಂ ತತ್ರ ಮೇ ನಾಸ್ತಿ ಸಂಶಯಃ।
ಪಾರ್ಥಿವಾನ್ ಸಮರೇ ಕೃಷ್ಣ ದುರ್ಯೋಧನಪುರೋಗಮಾನ್ ॥ ೩೮॥

ಕರ್ಣನು, ತನಗೆ ಕಂಡ ಶಕುನ ಮತ್ತು ಕನಸುಗಳಲ್ಲಿ ಕೌರವರು ಸೋಲುವ ಸೂಚನೆಯೂ ಪಾಂಡವರು ಗೆಲ್ಲುವ ಸೂಚನೆಗಳೂ ಉಂಟೆಂದು ವಿವರಿಸುವನು. ಘೋರ ಯುದ್ಧವು ನಿಶ್ಚಿತ. ಅದರಲ್ಲಿ ನಮ್ಮೆಲ್ಲರ ನಾಶವು ಆಗುವುದು ತಪ್ಪಿದ್ದಲ್ಲ. ಇದೆಲ್ಲವನ್ನೂ ಅರಿತ ನೀನು ನನ್ನನ್ನು ಪಾಂಡವರ ಕಡೆಗೆ ಬರಲು ಏಕೆ ಮೋಹಗೊಳಿಸುವೆ? ಶಕುನಿ, ನಾನು, ದುಃಶಾಸನನು ಮತ್ತು ದುರ್ಯೋಧನನು ಇದಕ್ಕೆ ನಿಮಿತ್ತಮಾತ್ರರಾಗಿದ್ದೇವೆ. ಎಲ್ಲೆಲ್ಲಿ ಧರ್ಮವೊ ಅಲ್ಲಿ ಗೆಲವು ಎಂಬುದನ್ನು ನಾನು ಬಲ್ಲೆ. ದುರ್ಯೋಧನನ ಪಕ್ಷವು ನಾಶಹೊಂದುವುದೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ಕರ್ಣನ ಮಾತು ಮುಗಿಯಬಂದಾಗ ಕೃಷ್ಣನು ಆತನಿಗೆ ತನ್ನ ಬಿನ್ನಹವನ್ನು ಮನ್ನಿಸಲು ಇನ್ನೂ ಒಮ್ಮೆ ಹೇಳುವನು:

ಉಪಸ್ಥಿತವಿನಾಶೇಯಂ ನೂನಮದ್ಯ ವಸುಂಧರಾ।
ಯಥಾ ಹಿ ಮೇ ವಚಃ ಕರ್ಣ ನೋಪೈತಿ ಹೃದಯಂ ತವ ॥ ೪೬॥

ಸರ್ವೇಷಾಂ ತಾತ ಭೂತಾನಾಂ ವಿನಾಶೇ ಪ್ರತ್ಯುಪಸ್ಥಿತೇ।
ಅನಯೋ ನಯಸಂಕಾಶೋ ಹೃದಯಾನ್ನಾಪಸರ್ಪತಿ ॥ ೪೮॥

ಆದರೆ, ಕರ್ಣನು ಕೃಷ್ಣನಿಗೆ ಮತ್ತೆ ಮುಂದೆ ಹೇಳಿದುದೇನೆಂದರೆ :

ಅಪಿ ತ್ವಾಂ ಕೃಷ್ಣ ಪಶ್ಯಾಮ ಜೀವಂತೋಽಸ್ಮಾನ್ಮಹಾರಣಾತ್।
ಸಮುತ್ತೀರ್ಣಾ ಮಹಾಬಾಹೋ ವೀರಕ್ಷತ್ರವಿನಾಶನಾತ್ ॥ ೪೮॥

ಅಥವಾ ಸಂಗಮಃ ಕೃಷ್ಣ ಸ್ವರ್ಗೇ ನೋ ಭವಿತಾ ಧ್ರುವಮ್।
ತತ್ರೇದಾನೀಂ ಸಮೇಷ್ಯಾಮಃ ಪುನಃ ಸಾರ್ಧಂ ತ್ವಯಾನಘ ॥ ೪೯॥

ಈ ಯುದ್ಧವು ಮುಗಿದ ಬಳಿಕ ಜೀವಂತರಾಗಿ ಉಳಿದರೆ ನಮ್ಮ ನಿಮ್ಮ ಭೆಟ್ಟಿ. ಇಲ್ಲವಾದರೆ ಸ್ವರ್ಗದಲ್ಲಿ ಕಾಣುವ ಎಂದು ನುಡಿದು ಕೃಷ್ಣನನ್ನು ಅಪ್ಪಿಕೊಂಡು ಆತನನ್ನು ಬೀಳುಕೊಂಡು ಖಿನ್ನಮನಸ್ಕನಾಗಿ ಮರಳಿದನು. (ನಿವವೃತೇ ರಾಧೇಯೋ ದೀನ ಮಾನಸಃ)

೭. ವಿದುರನು ಕುಂತಿಗೆ ಬೇಗನೆ ಜರುಗಲಿರುವ ಯುದ್ಧದ ಮಾತನ್ನೆತ್ತಿ ವೀರನಾಶವನ್ನು ನೆನೆದು ತನಗೆ ನಿನಗೆ ನಿದ್ರೆಯೂ ಬಾರದಾಗಿದೆಯೆಂದು ವರ್ಣಿಸಿ ಹೇಳುವನು. (೧೪೪.೧-೮) ಅದನ್ನು ಕೇಳಿ ಕುಂತಿಯು ಚಿಂತೆಯಿಂದ ಮನದಲ್ಲಿ ಆಲೋಚನೆಯನ್ನು ನಡೆಯಿಸುವಳು:

ಶ್ರುತ್ವಾ ತು ಕುಂತೀ ತದ್ವಾಕ್ಯಮರ್ಥಕಾಮೇನ ಭಾಷಿತಮ್।
ಸಾ ನಿಃಶ್ವಸಂತೀ ದುಃಖಾರ್ತಾ ಮನಸಾ ವಿಮಮರ್ಶ ಹ ॥ ೧೦॥

....

ಪಿತಾಮಹಃ ಶಾಂತನವ ಆಚಾರ್ಯಶ್ಚ ಯುಧಾಂ ಪತಿಃ।
ಕರ್ಣಶ್ಚ ಧಾರ್ತರಾಷ್ಟ್ರಾರ್ಥಂ ವರ್ಧಯಂತಿ ಭಯಂ ಮಮ ॥ ೧೪॥

ಅಯಂ ತು ಏಕೋ ವೃಥಾದೃಷ್ಟಿಃ ಧಾರ್ತರಾಷ್ಟ್ರಸ್ಯ ದುರ್ಮತೇಃ।
ಮೋಹಾನುವರ್ತೀ ಸತತಂ ಪಾಪೋ ದ್ವೇಷ್ಟಿ ಚ ಪಾಂಡವಾನ್ ॥ ೧೫॥

ಮಹತ್ಯನರ್ಥೇ ನಿರ್ಬಂಧೀ ಬಲವಾನ್ ಚ ವಿಶೇಷತಃ।
ಕರ್ಣಃ ಸದಾ ಪಾಂಡವಾನಾಂ ತನ್ಮೇ ದಹತಿ ಸಂಪ್ರತಿ ॥ ೧೬॥

ಆಶಂಸೇ ತು ಅದ್ಯ ಕರ್ಣಸ್ಯ ಮನೋಽಹಂ ಪಾಂಡವಾನ್ ಪ್ರತಿ।
ಪ್ರಸಾದಯಿತುಮಾಸಾದ್ಯ ದರ್ಶಯಂತೀ ಯಥಾತಥಮ್ ॥ ೧೭॥

....

ಇತಿ ಕುಂತೀ ವಿನಿಶ್ಚಿತ್ಯ ಕಾರ್ಯನಿಶ್ಚಯಮುತ್ತಮಮ್।
ಕಾರ್ಯಾರ್ಥಮಭಿನಿಶ್ಚಿತ್ಯ ಯಯೌ ಭಾಗೀರಥಿಂ ಪ್ರತಿ ॥ ೨೬॥

ಕುಂತಿಗೆ ಭೀಷ್ಮದ್ರೋಣರಿಗಿಂತ ಕರ್ಣನ ಮೂಲಕ ತನ್ನ ಮಕ್ಕಳಿಗೆ ಹಾನಿ ಹೆಚ್ಚು, ಎಂದು ಕಂಡುಬರುವುದು. ಬಲಿಷ್ಠನಾದ ಕರ್ಣನು ಮಹಾ ಅನರ್ಥಕ್ಕೆ ಕಾರಣನಾಗುತ್ತಿದ್ದಾನೆ. ಈ ಪಾಪಿಯಾದ ಕರ್ಣನು ಮೋಹದಿಂದ ದುರ್ಬುದ್ಧಿಯಾದ ದುರ್ಯೋಧನನನ್ನು ಅನುಸರಿಸುತ್ತಿದ್ದಾನೆ. ಪಾಂಡವರನ್ನು ದ್ವೇಷಿಸುತ್ತಾನೆ. ಇಂದು ಈತನನ್ನು ಪಾಂಡವರ ಕಡೆಗೆ ಬರುವಂತೆ ಮನಸ್ಸು ಒಲಿಸಲು ಹೋಗುವೆನು. ಆತನಿಗೆ (ಹುಟ್ಟಿನ) ನಿಜಸ್ಥಿತಿಯನ್ನು ಹೇಗಿದೆಯೋ ಹಾಗೆಯೇ ಹೇಳಿಬಿಡುವೆನು ಎಂದು ಕುಂತಿಯು ಆತನ ಜನ್ಮಕತೆಯನ್ನೆಲ್ಲ ಮನದಲ್ಲಿ ಮತ್ತೊಮ್ಮೆ ನೆನೆದುಕೊಳ್ಳುವಳು. ಬಳಿಕ ಕರ್ಣನನ್ನು ಕಂಡು ಆತನನ್ನು ಪಾಂಡವರನ್ನು ಕೂಡಿಕೊಳ್ಳಲು ಕೇಳುವುದನ್ನು ನಿರ್ಧರಿಸಿ ಭಾಗೀರಥೀ ತೀರಕ್ಕೆ ಬಂದಳು:

೮. ಕುಂತಿಯು ಕರ್ಣನನ್ನು ಎದುರಿಗೆ ಹೋಗಿ ಸಮ್ಮುಖದಲ್ಲಿ ಭೆಟ್ಟಿಯಾಗದೆ ಆತನ ಹಿಂಬದಿಯಲ್ಲಿ ನಿಂತು ಕಾಲನಿರೀಕ್ಷಣೆಯನ್ನು ಮಾಡುತ್ತಿದ್ದಳು. ಗಂಗಾತೀರದಲ್ಲಿ ಕರ್ಣನು ಜಪಮಾಡುತ್ತಿದ್ದನು. ಮೂಡಣ ದಿಕ್ಕಿಗೆ ಮೋರೆ ಮಾಡಿ ತೋಳುಗಳನ್ನು ಎತ್ತಿ ಆತನು ಪ್ರಾರ್ಥನೆಯಲ್ಲಿದ್ದಾಗ ಕುಂತಿಯು ಆತನ ಹಿಂಬದಿಯಲ್ಲಿ ಹೋಗಿ ನಿಂತಳು. (ಸಾಪರ್ಯತಿಷ್ಠತ ಪೃಷ್ಠತಃ). ರಾಜಮಹಿಷಿಯಾದ ಕುಂತಿಯು ಆ ಬಿಸಲಿನ ಬೇಗೆಯಿಂದ ಬೆಂದು ಬೆಂಡಾದಳು. ಆದರೂ ಅವಳಿಗೆ ತನ್ನ ಕಾರ್ಯಸಾಧನೆಗಾಗಿ ಹಾಗೆ 'ಕಾಯುತ್ತ' ಕರ್ಣನು ತನ್ನನ್ನು ಯಾವಾಗ ಹಿಂದಿರುಗಿ ನೋಡುವನೊ ನೋಡಲಿ, ಎಂದು ನಿಲ್ಲಲೇ ಬೇಕಿತ್ತು. ಆದರೆ, ಆ ಬಿಸಿಲನ್ನು ಸಹಿಸಲು ಆಗದೆ, ಕರ್ಣನು ಹೊದ್ದಬಟ್ಟೆಯ ನೆಳಲಲ್ಲಿ ನಿಂತಳು. (ಅತಿಷ್ಠತ್ ಸೂರ್ಯತಾಪಾರ್ತಾ ಕರ್ಣಸ್ಯೋತ್ತರ ವಾಸಸಿ) ಕರ್ಣನು ತನ್ನ ಜಪವು ಮುಗಿದ ಬಳಿಕ ಬಳಿಯಲ್ಲಿಯೆ ನಿಂತ ಕುಂತಿಯನ್ನು ಕಂಡು ಸೋಜಿಗಗೊಂಡನು. ಅವಳಿಗೆ ಕೈಜೋಡಿಸಿ ನಮಸ್ಕರಿಸಿ ಹೀಗೆ ನುಡಿದನು:

ರಾಧೇಯೋಽಹಮಾಧಿರಥಿಃ ಕರ್ಣಃ ತ್ವಮಾಭಿವಾದಯೇ।
ಪ್ರಾಪ್ತಾ ಕಿಮರ್ಥಂ ಭವತೀ ಬ್ರೂಹಿ ಕಿಂ ಕರವಾಣಿ ತೇ ॥ ೧೪೫.೧॥

ಅಧಿರಥನ ಮಗನೂ ರಾಧೆಯ ಕುವರನೂ ಆದ ನಾನು, ಕರ್ಣನು ನಮಸ್ಕರಿಸುತ್ತೇನೆ. ತಾವು ಇಲ್ಲಿಗೆ ಬಂದ ಕಾರಣವೇನು? ನನ್ನಿಂದ ತಮಗೆ ಏನಾಗಬೇಕು?

೯. ಕರ್ಣನು ತನಗೆ, ರಾಧೇಯನೆಂದುಕೊಂಡುದನ್ನು ಕೇಳಿ ಕುಂತಿಗೆ ತಡೆಯಲ್ಲಿಲ್ಲ. ಅವಳು ಆ ಮಾತಿನಿಂದಲೆ ತನ್ನ ಹೇಳಿತವನ್ನು ಆರಂಭಿಸುವಳು:

ಕೌಂತೇಯಃ ತ್ವಮ್; ನ ರಾಧೇಯಃ; ನ ತವ ಅಧಿರಥಃ ಪಿತಾ।
ನ ಅಸಿ ಸೂತಕುಲೇ ಜಾತಃ ಕರ್ಣ ತದ್ ವಿದ್ಧಿ ಮೇ ವಚಃ ॥ ೨॥

ಕಾನೀನಃ ತ್ವಂ ಮಯಾ ಜಾತಃ ಪೂರ್ವಜಃ ಕುಕ್ಷಿಣಾ ಧೃತಃ ॥ ೩॥
ಪ್ರಕಾಶಕರ್ಮಾ ತಪನಃ...ಅಜೀಜನತ್ ತ್ವಾಂ ಮಯಿೂ......।
ಜಾತಃ ತ್ವಮ ಅಸಿ ದುರ್ಧರ್ಷ ಮಯಾ ಪುತ್ರ ಪಿತೃಗೃಹೇ ॥ ೫॥

ಸ ತ್ವಂ ಭ್ರಾತೃನ್ ಅಸಂಬುದ್ಧ್ಯ ಮೋಹಾದ್ ಯತ್ ಉಪಸೇವಸೇ।
ಧಾರ್ತರಾಷ್ಟ್ರಾನ್ ನ ತದ್ ಯುಕ್ತಂ ತ್ವಯಿ ಪುತ್ರವಿಶೇಷತಃ ॥ ೬॥
ಅಸಾಧ್ಯಂ ಕಿಂ ನು ಲೋಕೇ ಸ್ಯಾಪ್ ಯುವಯೋಃ ಸಂಹಿತಾತ್ಮನೇ ॥ ೧೦॥
ಕರ್ಣ ಶೋಭಿಷ್ಯಸೇ ನೂನಂ ಪಂಚಭಿಃ ಭ್ರಾತೃಭಿಃ ವೃತಃ।
ದೇವೈಃ ಪರಿವೃತೋಃ ಬ್ರಹ್ಮಾ ವೇದ್ಯಾಮ್ ಇವ ಮಹಾಧ್ವರೇ ॥ ೧೧॥
ಉಪಪನ್ನಃ ಗುಣೈಃ ಸರ್ವೈಃ ಜ್ಯೇಷ್ಠಃ ಶ್ರೇಷ್ಠೇಷು ಬಂಧುಷು।
ಸೂತ ಪುತ್ರ ಇತಿ ಮಾ ಶಬ್ದಃ ಪಾರ್ಥಃ ತ್ವಮ್ ಅಸಿ ವೀರ್ಯವಾನ್ ॥ ೧೨॥

ಕರ್ಣ, ನೀನು ರಾಧೇಯನಲ್ಲ. ಕುಂತೀಪುತ್ರನಾಗಿರುವೆ. ನಾನು ಕೊಡಗೂಸಿರುವಾಗಲೆ ಸೂರ್ಯನಿಂದ ನಿನ್ನನ್ನು ಪಡೆದೆನು. ಕುಂತೀರಾಜನ ಮನೆಯಲ್ಲಿ ನೀನು ಜನ್ಮತಾಳಿದೆ. ನೀನು ಪಾಂಡವರನ್ನು ನಿನ್ನ ತಮ್ಮಂದಿರೆಂದು ತಿಳಿಯದೆ ಕೌರವರ ಸೇವಕನಾಗಿರುವೆ; ಇದು ತಕ್ಕುದಲ್ಲ. ತಾಯಿ ತಂದೆಗಳನ್ನು ಸಂತೋಷಪಡಿಸುವುದು ಮಾನವರ ಶ್ರೇಷ್ಠಕರ್ತವ್ಯವೆಂದು ಧರ್ಮಶಾಸ್ತ್ರವು ಹೇಳುತ್ತದೆ. ನೀನೂ ಪಾಂಡವರೂ ಒಂದಾದರೆ ಈ ಲೋಕದಲ್ಲಿ ಕೈಗೂಡದದು ಯಾವುದೂ ಇಲ್ಲ. ಕರ್ಣನೇ ನೀನು ನಿನ್ನ ಐವರು ತಮ್ಮಂದಿರಿಂದ ಒಡಗೂಡಿ ನಿಂತರೆ, ಮಹಾಯಜ್ಞದಲ್ಲಿ ದೇವರಿಂದ ಸುತ್ತುಗಟ್ಟಿದ್ದ ಬ್ರಹ್ಮನಂತೆ ಒಪ್ಪುವೆ. ಎಲ್ಲ ಗುಣಗಳಿಂದ ಭೂಷಿತವಾದ ನೀನು ನಿನ್ನ ಎಲ್ಲ ಹಿರಿಯ ಬಂಧುಗಳಲ್ಲಿ ಹಿರಿಯನಾಗಿರುವೆ. 'ಸೂತಪುತ್ರನು' ಎಂಬ ಮಾತು ಬೇಡ. ನೀನು ವೀರ್ಯವಂತನಾದ ಕೌಂತೇಯನಾಗಿರುವೆ. ಅರ್ಜುನನು ಗಳಿಸಿದ ರಾಜ್ಯವನ್ನು ಕೌರವರು ಅನ್ಯಾಯದಿಂದ ಸೆಳದುಕೊಂಡಿದ್ದಾರೆ. ಅದನ್ನು ಅವರಿಂದ ಮರಳಿ ದೊರಕಿಸಿ ನೀನು ಅದನ್ನು ಉಪಭೋಗಿಸು, ನಡೆ.

೧೦. ಇಷ್ಟರಲ್ಲಿ ಸೂರ್ಯಮಂಡಲದಿಂದ ಹೊರಟ ಮಾತುಗಳು ಕಿವಿಗೆ ಬರುವುವು:

ತತಃ ಸೂರ್ಯಾದ್‌ನಿಶ್ಚರಿತಾಂ ಕರ್ಣಃ ಶುಶ್ರಾವ ಭಾರತೀಮ್।
....
ಸತ್ಯಮ್ ಆಹ ಪೃಥಾ ವಾಕ್ಯಂ; ಕರ್ಣ, ಮಾತೃವಚಃ ಕುರು।
ಶ್ರೇಯಃ ತೇ ಸ್ಯಾತ್ ನರವ್ಯಾಘ್ರ ಸರ್ವಮ್ ಆಚರತಃ ತಥಾ ॥ ೧೪೬.೨॥

ಕುಂತಿಯು ಹೇಳಿದುದು ಸರಿ. ಕರ್ಣನೇ,ತಾಯಿಯು ಹೇಳಿದಂತೆ ನಡೆ. ಹಾಗೆ ನಡೆದಲ್ಲಿ ನಿನ್ನ ಕಲ್ಯಾಣವೆ ಇದೆ. ಆದರೆ ಕರ್ಣನು, ತನ್ನ ತಂದೆ ಸೂರ್ಯನ ಮಾತನ್ನಾಗಲಿ, ತಾಯಿ ಕುಂತಿಯ ಹೇಳಿತವನ್ನಾಗಲಿ ಆವುದನ್ನೂ ಲೆಕ್ಕಿಸಲಿಲ್ಲ ! ಕರ್ಣನು ತನ್ನ ದೃಢನಿಶ್ಚಯದಿಂದ ಕದಲಲಿಲ್ಲ! (ಚಚಾಲ ನೈವಕರ್ಣಸ್ಯ ಮತಿಃ)

೧೧. ಕರ್ಣನಿಗೆ ಕುಂತಿಯ ಮಾತಿನಿಂದಾಗಲಿ, ಸೂರ್ಯನ ಸೂಚನೆಯಿಂದಾಗಲಿ ಎಳ್ಳಷ್ಟೂ ಸಮಾಧಾನವಾಗದೆ ಹೊಟ್ಟೆಯಲ್ಲಿ ರೊಚ್ಚು ಹೆಚ್ಚಿದಂತಾಗಿರಬೇಕು. ಆತನು ಮೊದಲು ಆಡಿದ ಮಾತುಗಳು ಇವು:

ನ ಚ ಏತತ್ ಶ್ರದ್ದಧೇ ವಾಕ್ಯಂ ಕ್ಷತ್ರಿಯೇ, ಭಾಷಿತಂ ತ್ವಯಾ।
ಧರ್ಮದ್ವಾರಂ ಮಮ ಏತಸ್ಮಾತ್ ನಿಯೋಗಕರಂ ತವ ॥ ೪॥
ಅಕರೋತ್ ಮಯಿ ಯತ್ ಪಾಪಂ ಭವತೀ ಸುಮಹಾತ್ಯಯಮ್।
ಅಪಾಕೀರ್ಣಃ ಅಸ್ಮಿ ಯತ್ ಮಾತಃ ತದ್ಯತಃ ಕೀರ್ತಿನಾಶನಮ್। ॥ ೫॥
ಅಹಂ ಚೇತ್ ಕ್ಷತ್ರಿಯಃ ಜಾತಃ ನ ಪ್ರಾಪ್ತಃ ಕ್ಷತ್ರಸತ್ಕ್ರಿಯಾಮ್।
ತ್ವತ್ಕೃತೇ ಕಿಂ ನು ಪಾಪೀಯಃ ಶತ್ರುಃ ಕುರ್ಯಾತ್ ಮಮ ಅಹಿತಮ್ ॥ ೬॥
ಕ್ರಿಯಾಕಾಲೇ ತು ಅನುಕ್ರೋಶಂ ಅಕೃತ್ವಾತ್ವಂ ಇಮಂ ಮಮ।

ಹೀನ ಸಂಸ್ಕಾರಸಮಯಮ್ ಅದ್ಯ ಮಾಂ ಸಮಚೂಚುದಃ ॥ ೭ ॥
ನ ವೈ ಮಮ ಹಿತಂ ಪೂರ್ವಂ ಮಾತೃವತ್ ಚೇಷ್ಟಿತಂ ತ್ವಯಾ।
ಸಾ ಮಾಂ ಸಂಬೋಧಯಸಿ ಅದ್ಯ ಕೇವಲ ಆತ್ಮಹಿತೈಷಣೀ ॥ ೮ ॥

ಎಲೈ ಕ್ಷತ್ರಿಯ ಮಹಿಳೆಯೆ, ನೀನು ಹೇಳಿದಂತೆ ನಡೆಯುವುದು, ನನಗೆ ಧರ್ಮದ ಹಾದಿಯೆಂದು ನಾನು ಬಗೆಯುವುದಿಲ್ಲ. ನಾನು ಹುಟ್ಟುತ್ತಲೆ ನನ್ನನ್ನು ಬಿಸುಟು ನೀನು ಪಾಪವನ್ನು ಮಾಡಿರುವೆ. ತಾಯೆ, ಹಾಗೆ ನೀನು ಎಸೆದು ಬಿಟ್ಟುದ್ದರಿಂದ ನನ್ನ ಪ್ರಾಣಕ್ಕೂ ಅಪಾಯವಿತ್ತು. ನಿನ್ನ ಆ ಕೃತಿಯು ನನ್ನ ಯಶಸ್ಸು ಕೀರ್ತಿಗಳಿಗೆಲ್ಲ ಹಾನಿಯನ್ನುಂಟುಮಾಡಿತು. ನಾನು ನಿಜವಾಗಿಯೂ ಕ್ಷತ್ರಿಯನೆ ಇದ್ದರೆ ಕ್ಷತ್ರಿಯರಿಗೆ ಉಚಿತವಾದ ಸಂಸ್ಕಾರಗಳು ನನಗೆ ಲಭಿಸಲಿಲ್ಲ. ಇದಕ್ಕಿಂತಲೂ ಹೆಚ್ಚಿನ ಹಾನಿಯನ್ನು ಯಾವ ಹಗೆಯು ಮಾಡಬಲ್ಲನು? ಯಾವಾಗ ನೀನು ಕರುಣೆಯನ್ನು ತೋರಬೇಕಾಗಿದ್ದಿತೊ ಆಗ ನೀನು ತೋರಲಿಲ್ಲ. (ಕ್ರೂರಳಾದೆ). ನಾನು ಸಂಸ್ಕಾರಹೀನನಾಗ ಬೇಕಾಯಿತು. ಹೀಗಿರುವಾಗ, ನೀನು ಈಗ ನನಗೆ (ಹಾಗೆ ಮಾಡು, ಹೀಗೆ ನಡೆ ಎಂದು) ಆಜ್ಞಾಪಿಸುವೆಯಾ! ಈ ಮೊದಲು ಒಮ್ಮೆಯಾದರೂ ನೀನು ನನ್ನೊಡನೆ ತಾಯಿಯಂತೆ ನಡೆದುಕೊಂಡಿರುವೆಯಾ? ಈಗ ಕೇವಲ ಆತ್ಮಹಿತೈಷಿಣಿ (ಸ್ವಾರ್ಥ ಸಾಧಕಳು) ಆಗಿ ನನ್ನನ್ನು ಮಾತನಾಡಿಸ ಬಂದಿರುವೆ!

ಈ ಬಿಚ್ಚು ಮಾತುಗಳನ್ನಾಡಿದ ಬಳಿಕ ಕರ್ಣನು ಇನ್ನು ಬೇರೆ ಬಗೆಯಿಂದಲೂ ಆತನು ತನ್ನ ಅಭಿಪ್ರಾಯವನ್ನು ಅವಳಿಗೆ ತಿಳಿಸಿ ಹೇಳುವನು: ಕೃಷ್ಣನು ನೇತಾರನಾಗಿರುವಾಗ ಅರ್ಜುನನ ಕೂದಲೆಳೆಯನ್ನು ಕೊಂಕಿಸುವುದಕ್ಕೂ ಯಾರಿಂದಾಗದು. ಇವರ್ರಿವರು ಒಂದಿರುವಲ್ಲಿ ಇವರಿಗೆ ಅಂಜದ ಗಂಡುಗಲಿಗಳಾರು? ಇಂತಹ ಹೊತ್ತಿನಲ್ಲಿ ನಿಮ್ಮ ಪಕ್ಷಕ್ಕೆ ಬಂದರೆ ನನಗೆ ಪುಕ್ಕ ಜೀವಗಳ್ಳನೆಂದು ಲೋಕವು ನಗದೆ? ನನಗೆ ವೀರನೆಂದು ಯಾರು ತಾನೆ ಹೇಳಬಹುದು? ಅಲ್ಲದೆ, ನನ್ನನ್ನು ಆದರ ಸತ್ಕಾರಗಳಿಂದ ನಡಿಸಿಕೊಂಡು, ಎಲ್ಲ ಬಗೆಯ ಸುಖದಲ್ಲಿರಿಸಿದ ಒಡೆಯನ ಜೋಳಕ್ಕೆ ಹೇಗೆ ತಿರುಗಿ ಬೀಳಲಿ? 'ಭರ್ತೃಪಿಂಡಾಪಹಾರಿ'ಯಾಗಲು ನನಗೆ ಹೇಳಬೇಡಿ. ನಿನ್ನನ್ನು ಮೋಸಗೊಳಿಸಿಲಾರೆ. ಪಾಂಡವರೊಡನೆ ನನ್ನ ಶಕ್ತಿಯಿದ್ದಷ್ಟೂ ಹೋರಾಡುವುದು ನನ್ನ ಕರ್ತವ್ಯವಾಗಿದೆ. ನಾನು ನಿನ್ನ ಮಾತನ್ನು ಕೇಳಲಾರೆ. (ನ ಕರೋಮಿ ಅದ್ಯ ತೇ ವಚಃ)

ಆಗಲಿ ಆದರೂ ನಿನ್ನ ಕೇಳಿತ ತೀರ ವ್ಯರ್ಥವಾಗಲಾರದು, ಅರ್ಜುನನ್ನುಳಿದು ಬೇರೆ ನಾಲ್ವರನ್ನು ನಾನು ಕಾಳಗದಲ್ಲಿ ಎದುರಿಸಿ ಸಹಜವಾಗಿ ಕೊಲ್ಲಬಹುದಾಗಿದ್ದರೂ, ಅವರ ಗೋಜಿಗೆ ಹೋಗುವುದಿಲ್ಲ. ನಾನು ಅರ್ಜುನನ ಒಬ್ಬನೊಡನೆಯೇ ಕಾದುವೆನು. ಅರ್ಜುನನ್ನು ಕೊಂದರೆ ಅಥವಾ ಅವನಿಂದ ಕೊಲ್ಲಲ್ಪಟ್ಟರೆ ಅದರಲ್ಲಿ ಶ್ರೇಯಸ್ಸಿದೆ; ಕೀರ್ತಿಯಿದೆ. ಕುಂತಿಯೇ, ಅರ್ಜುನನು ಮಡಿದರೆ ನಾನು ಸಹಿತ ನಿನಗೆ ಐವರು; ನಾನು ಸತ್ತು ಅರ್ಜುನನು ಉಳಿದರೆ ಆ ಐವರು; ಅಂತೂ ಹೀಗೆ ನಿನಗೆ ಐವರು ಮಕ್ಕಳು ಉಂಟೇ ಉಂಟು. (ನಿರರ್ಜುನಾಃ ಸಕರ್ಣಾ ವಾ ಸಾರ್ಜುನಾ ವಾ ಹತೇ ಮಯಿ). ಕುಂತಿಯು ಈ ನುಡಿ ಕೇಳಿ ದುಃಖದಿಂದ ನಡನಡನೆ ನಡುಗಿದಳು. (ದುಃಖಾತ್ ಪ್ರವೇಪತಿ). ತನ್ನ ದೃಢನಿಶ್ಚಯದಿಂದ ಅವಿಚಲಿತನಾಗಿ ನಿಂತ ಕರ್ಣನನ್ನು ತಬ್ಬಿಕೊಂಡು ಹೀಗೆ ನುಡಿದಳು: ಕರ್ಣನೆ, ನೀನು ಹೇಳಿದಂತೆ ಕೌರವರು ನಾಶಹೊಂದುವ ಸಂಭವವುಂಟು. ದೈವವು ಬಲವತ್ತರವಾಗಿದೆ. (ಅದರ ಮುಂದೆ ಯಾರ ಆಟವು ನಡೆಯಬಲ್ಲುದು?) ಶತ್ರು ನಾಶಕನಾದ ಕರ್ಣನೆ, ಆಗಲಿ, ನೀನು ನಾಲ್ವರಿಗೆ ಅಭಯದ ಆಶ್ವಾಸನವನ್ನು ಕೊಟ್ಟಿರುವೆ. ಕಾದುವಾಗ ಬಾಣಬಿಡುವ ಸಮಯದಲ್ಲಿ ನಿನಗೆ ಈ ವಚನದ ನೆನಪಿರಲಿ, ಎಂದು ಹೇಳಿ ಕೊನೆಗೆ, ನಿನಗೆ ಕಲ್ಯಾಣವಾಗಲಿ, ಅನಾಮಯಾನಾಗು; ಎಂದು ಹರಿಸಿದಳು.

೧೨. ಬಳಿಕ ಭಾರತೀಯ ಯುದ್ಧವು ಆರಂಭವಾಗುವುದು. ಆ ಕಾಳಗವು ಗಂಭೀರ ಸ್ವರೂಪವನ್ನು ತಾಳಿದಾಗ ದುರ್ಯೋಧನನು ಕರ್ಣನನ್ನು ಕುರಿತು ಹೇಳಿದ ಮಾತು ದ್ರೋಣಪರ್ವದಲ್ಲಿ ಒಂದೆಡೆಗೆ ಹೀಗಿದೆ:

ಉದೀರ್ಯಮಾಣಂ ತತ್ ದೃಷ್ಟ್ವಾ ಪಾಂಡವಾನಾಂ ಮಹದ್ಬಲಮ್।
ಅವಿಷಹ್ಯಂ ಚ ಮನ್ವಾನಃ ಕರ್ಣಂ ದುರ್ಯೋಧನೋऽಬ್ರವಿತ್ ॥ ೧೫೯. ೧॥
ಅಯಂ ಸ ಕಾಲಃ ಸಂಪ್ರಾಪ್ತೋ ಮಿತ್ರಾಣಾಂ ಮಿತ್ರವತ್ಸಲ।
ತ್ರಾಯಸ್ವ ಸಮರೇ ಕರ್ಣ, ಸರ್ವಾನ್ ಯೋಧಾನ್ ಮಹಾರಥಾನ್ ॥ ೨॥

ಜೀವದ ಗೆಳೆಯನೆ, ಈಗ ನೀನು ನಿನ್ನ ಪರಾಕ್ರಮವನ್ನು ತೋರುವ ಕಾಲವು ಬಂದಿದೆ. ಪಾಂಡವರ ಮೇಲುಗೈಯಾಗುತ್ತಿದೆ. ಕರ್ಣನೆ ನಮ್ಮೆಲ್ಲರನ್ನೂ ಕಾಪಾಡು.

ದುರ್ಯೋಧನನ ಈ ಬಿನ್ನಹಕ್ಕೆ ಕರ್ಣನು ಇತ್ತ ಉತ್ತರವಿದು:

ಪರಿತ್ರಾತುಮ್ ಇಹ ಪ್ರಾಪ್ತಃ ಯದಿ ಪಾರ್ಥಂ ಪುರಂದರಃ।
ತಮ್ ಅಪಿ ಆಶು ಪರಾಜಿತ್ಯ ತತಃ ಹಂತಾऽಸ್ಮಿ ಪಾಂಡವಮ್ ॥ ೫॥

ಸತ್ಯಂ ತೇ ಪ್ರತಿಜಾನಾಮಿ ಸಮಾಶ್ವಸಿ ಹಿ ಭಾರತ।
ಹಂತಾಸ್ಮಿ ಪಾಂಡುತನಯಾನ್ ಪಾಂಚಾಲಾನ್ ಚ ಸಮಾಗತಾನ್ ॥ ೬॥

ಜಯಂ ತೇ ಪ್ರತಿದಾಸ್ಯಾಮಿ ವಾಸವಸ್ಯ ಇವ ಪಾವಕಿಃ।
ಪ್ರಿಯಂ ತವ ಮಯಾ ಕಾರ್ಯಮ್ ಇತಿ ಜೀವಾಮಿ ಪಾರ್ಥಿವ ॥ ೭॥

ಸರ್ವೇಷಾಮ್ ಏವ ಪಾರ್ಥಾನಾಮ್ ಫಲ್ಗುನೋ ಬಲವತ್ತರಃ।
ತಸ್ಯ ಅಮೋಘಾಮ್ ವಿಮೋಕ್ಷ್ಯಾಮಿ ಶಕ್ತಿಂ ಶಕ್ರವಿನಿರ್ಮಿತಾಮ್ ॥ ೮॥

ತಸ್ಮಿನ್ ಹತೇ ಮಹತೇಷ್ವಾಸೇ ಭ್ರಾತರಃ ಸತ್ಯ ಮಾನದ।
ತವ ವಶ್ಯಾ ಭವಿಷ್ಯಂತಿ ವನಂ ಯಾಸ್ಯಂತಿ ವಾ ಪುನಃ ॥ ೯॥

ಮಯಿ ಜೀವತಿ ಕೌರವ್ಯ ವಿಷಾದಂ ಮಾ ಕೃಥಾಃ ಕ್ವಚಿತ್।
ಅಹಂ ಜೇಷ್ಯಾಮಿ ಸಮರೇ ಸಹಿತಾನ್ ಸರ್ವಪಾಂಡವಾನ್ ॥ ೧೦॥

(ಶತ್ರೂನ್ ಸರ್ವಾನ್ ನಿಹತ್ಯ)... ತವ ದಾಸ್ಯಾಮಿ ಮೇದಿನೀಮ್ ॥ ೧॥

ಅರ್ಜುನನ್ನು ಕಾಪಾಡಲು ಇಂದ್ರನೇ ಇಳಿದು ಬಂದರೂ, ಅವನನ್ನೂ ಅರೆಗಳಿಗೆಯಲ್ಲಿ ಗೆದ್ದು ಅರ್ಜುನನ್ನು ಕೊಲ್ಲುವೆನು. ನಿಶ್ಚಿಂತನಾಗಿರು. ಪಾಂಚಾಲರನ್ನೂ ಪಾಂಡವರನ್ನೂ ನಾಶಮಾಡುವುದರಲ್ಲಿ ಸಂದೇಹವೇ ಇಲ್ಲ. ಕಾರ್ತಿಕೇಯನು ಇಂದ್ರನಿಗೆ ಗೆಲವು ತಂದುಕೊಟ್ಟಂತೆ ನಿನಗೆ ಜಯವನ್ನು ಸಂಪಾದಿಸಿಕೊಡುವವೆನು. ಈ ನನ್ನ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿಯೆ ಬದುಕಿದ್ದೇನೆ. ಪಾಂಡವರೆಲ್ಲರಲ್ಲಿ ಅರ್ಜುನನೇ ಬಲಿಷ್ಠನು. ಆತನ ಮೇಲೆ ಇಂದ್ರನಿರ್ಮಿತವಾದ ಅಮೋಘ ಶಕ್ತಿಯನ್ನು ಪ್ರಯೋಗಿಸುವೆನು. ಅರ್ಜುನನು ಸಾಯಲು ರಾಜ್ಯವು ನಿನಗೇ ದೊರೆಯುವುದು. ಆತನ ತಮ್ಮಂದಿರು ಅರಣ್ಯಕ್ಕೆ ಹೋಗುವರು. ನಾನು ಬದುಕಿರಲು, ಕೌರವನೇ ನೀನು ವಿಷಾದಿಸುವುದಕ್ಕೆ ಕಾರಣವಿಲ್ಲ. ಎಲ್ಲರನ್ನೂ ಗೆದ್ದು ನಿನಗೆ ರಾಜ್ಯವನ್ನು ದೊರಕಿಸಿಕೊಡುವೆನು.

೧೩. ಕರ್ಣನು ಅರ್ಜುನನ್ನು ಕೊಲ್ಲುವೆನೆಂದು ದುರ್ಯೋಧನನಿಗೆ ಸಂಪೂರ್ಣ ನಂಬುಗೆ. ಕರ್ಣನು ಹಾಗೆ ಆತ್ಮವಿಶ್ವಾಸದಿಂದ ಆಡಿ ತೋರುವನು. ಈ ಕಾರಣದಿಂದಲೇ ಕೌರವನು ಕರ್ಣನಿಗೆ ವೀರಪಟ್ಟವನ್ನು ಕಟ್ಟುವನು.

೧೪. ಕರ್ಣನೂ ಒಡೆಯನಿಗೆ ಗೆಲುವು ತರಬೇಕೆಂದು ಆವೇಶದಿಂದ ಹೋರಾಡುವನು. ಆ ಆವೇಶದಲ್ಲಿ, ತನ್ನೊಡನೆ ಹೋರಾಡಲು ತಕ್ಕವರಲ್ಲವೆಂದು ಬಗೆದ ಯುಧಿಷ್ಠಿರ ಮತ್ತು ನಕುಲ ಸಹದೇವರೊಡನೆಯೂ ಕರುಣೆದೋರದೆ ಕಾದಿ ಅವರ ಜೀವ ಹಿಂಡುವುದರಲ್ಲಿದ್ದನು. ಆಗ ತಾಯಿಗೆ ಕೊಟ್ಟ ವಚನವೂ ನೆನೆಪಿನಲ್ಲಿ ಉಳಿಯಲಿಲ್ಲ! ಆದರೆ, ಶಲ್ಯನೇ ಆತನನ್ನು ತಡೆದನು। 'ಕರ್ಣನೇ ನಿನ್ನ ಸಮಾನರೊಡನೆ ಕಾದು. ಅರ್ಜುನನ್ನು

ಹುಡುಕು. ಧರ್ಮರಾಜನೊಡನೆ ಏತಕ್ಕೆ ಕಾದುವೆ? ಎಂದು ಮುಂತಾಗಿ ಶಲ್ಯನು ಕರ್ಣನನ್ನು ವಿರೋಧಿಸಿದರೂ ಆತನು ತನ್ನ ರಭಸವನ್ನು ಕಡಿಮೆ ಮಾಡಲಿಲ್ಲ. ಆಗ ಶಲ್ಯನು ಮತ್ತೆ ನಕ್ಕು ಕರ್ಣನನ್ನು ಕುರಿತು ಹೀಗೆಂದನು: 'ದುರ್ಯೋಧನನು ನಿನ್ನನ್ನು ಯಾವನ ಸಂಹಾರಕ್ಕಾಗಿಯೆಂದು ಪೋಷಿಸಿ, ಮನ್ನಿಸಿದನೊ ಆ ಅರ್ಜುನನನ್ನು ಕೊಲ್ಲು. ಈ ಯುಧಿಷ್ಠರನನ್ನು ಕೊಂದು ಏನು ಬಂತು? (ಕಿಂ ತೇ ಹತ್ವಾ ಯುಧಿಷ್ಠಿರಮ್). ಅರ್ಜುನನನ್ನು ಗೆದ್ದರೆ ನಿಮಗೆ ನಿಶ್ಚಯವಾಗಿ ಗೆಲುವು. ಅಗೋ! ಅರ್ಜುನನ ಧ್ವಜವು ಕಾಣುತ್ತಲಿದೆ! ನಡೆ! ಅತ್ತ; ಈ ಯುಧಿಷ್ಠಿರನೊಡನೆ ನಿನಗೆ ಸಾಟಿಯೆ? ಅರ್ಜುನನು ಅತ್ತ ನಮ್ಮ ಸೈನ್ಯವನ್ನೆಲ್ಲ ಮುತ್ತಿ ತುಂಡರಿಸುತ್ತಿದ್ದಾನೆ."

"ಭೀಮಸೇನನು ದುರ್ಯೋಧನನ್ನು ಎದುರಿಸಿ ಆತನನ್ನು ಹಣ್ಣಿಗೆ ತಂದಿದ್ದಾನೆ. ನಮ್ಮ ರಾಜನು ಭೀಮನಿಂದ ಗಂಡಾಂತರಕ್ಕೀಡಾಗದಂತೆ ನೀನು ನೋಡಿಕೊಳ್ಳತಕ್ಕದ್ದು. ಆತನನ್ನು ಬಿಡಿಸಿಕೊಳ್ಳಲು ನಡೆ." ಅತ್ತ ಭೀಮನಿಂದ ಆವರಿಸಲ್ಪಟ್ಟ ದುರ್ಯೋಧನನ್ನು ಕಂಡು, ಕರ್ಣನು ಯುಧಿಷ್ಠಿರನನ್ನೂ ನಕುಲ ಸಹದೇವರನ್ನೂ, ಬಿಟ್ಟು ತನ್ನ ಒಡೆಯನ ಸಹಾಯಕ್ಕಾಗಿ ಧಾವಿಸಿದನು. (ಕರ್ಣಪರ್ವ ೬೬.೧೫-೩೧)

೧೫. ಮುಂದೆ ಕರ್ಣಾರ್ಜುನರ ಕಾಳಗಕ್ಕೆ ಆರಂಭವಾಗುವುದು. ಕರ್ಣ ಮೀಸಲಾಗಿಟ್ಟ ಒಂದು ಉಗ್ರಶರವನ್ನು ಅರ್ಜುನನ ಕೊರಳಿಗೆ ಹೂಡುವನು. ಆದರೆ, ಶಲ್ಯನು ಆತನಿಗೆ ಎಚ್ಚರಿಸಿ ಎದೆಗೆ ಹೂಡಲು ಹೇಳುವನು. ಕರ್ಣನು, ಇದು ತನ್ನ ಗುರಿಹೊಡೆಯುವಿಕೆಯಲ್ಲಿಯೆ ಸಂದೇಹ ಪಟ್ಟುಕೊಂಡಂತಾಯಿತು, ಆದಕಾರಣ ಹೀಗೆ ಹೇಳುವುದು ಅಪಮಾನವೆನಿಸಿ ಕಿಡಿಕಿಡಿಯಾದನು.

ತತೋ ರಿಪುಘ್ನಂ ಸಮಧತ್ತ ಕರ್ಣಂ ಸುಸಂಚಿತಂ ಸರ್ಪಮುಖಂ ಜ್ವಲಂತಮ್।
ರೌದ್ರಂ ಶರಂ ಸನ್ನುತಮುಗ್ರ ಧೌತಂ ಪಾರ್ಥಾರ್ಥಮಿತೇಽವ ಚಿರಾಭಿಗುಪ್ತಮ್ ॥ ೯.೭೨೦॥
ಸದಾರ್ಚಿತಂ ಚಂದನಚೂರ್ಣ ಶಾಯಿಂ ಸುವರ್ಣತೂಣೇರಶಯಂ ಮಹಾರ್ಚಿಷಮ್।
ಆಕರ್ಣಪೂರ್ಣಂ ವಿಚಕರ್ಷ ಕರ್ಣೋ ವಿಮೋಕ್ತು ಕಾಮಃ ಶರಮುಗ್ರವೇಗಮ್ ॥ ೨೧॥
....
ತಸ್ಮಿಂಸ್ತು ನಾಗೇ ಧನುಷಿಪ್ರಯುಕ್ತೇ ಹಾಹಾಕೃತಾ ಲೋಕಪಾಲಾಃ ಸಶಕ್ರಾಃ ॥ ೨೩॥
ತತೋ ಬ್ರವೀತ್ ಮದ್ರರಾಜೋ ಮಹಾತ್ಮಾ ದೃಷ್ಟ್ವಾ ಕರ್ಣಂ ಪ್ರಹೀತೇಷು ತಮುಗ್ರಮ್।
ಗ್ರೀವಾಯುತಃ ಕರ್ಣ ನ ಸಂಹಿತೇಽಯಂ ಸಮೀಕ್ಷ್ವ ಸಂಧಸ್ವ ಶರಂ ಪರಘ್ನಮ್ ॥ ೨೬॥
ಅಥಾಬ್ರವೀತ್ ಕ್ರೋಧಸಂರಕ್ತನೇತ್ರೋ ಮದ್ರಾಧಿಪಂ ಸೂತಪುತ್ರೋ ಮನಸ್ವೀ।
ನ ಸಂದತ್ತೇ ದ್ವಿಃ ಶರಂ ಶಲ್ಯ ಕರ್ಣೇ ನ ಮಾದೃತಾ ಜಿಹ್ಮಯುದ್ಧಾ ಭವಂತಿ ॥ ೨೭॥
ಇತೀದಮುಕ್ತ್ವಾ ವಿಸಸರ್ಜ ತಂ ಶರಂ ಪ್ರಯತ್ನತೋ ವರ್ಷಗಣಾಭಿಪೂಜಿತಮ್।
ಹತೋಽಸಿರೇ ಫಲ್ಗುನ ಇತ್ಯಧಿಕ್ಷಿಪ ನ್ನು ವಾಚ ಚೋಚ್ಚೈರ್ಗಿರಮೂರ್ಜಿತಾಂ ವೃಷಃ ॥ ೨೮॥

ಒಮ್ಮೆ ಹೂಡಿದ ಬಾಣವನ್ನು ಕೂಡಲೆ ಬದಲಿಸಿ ಹೊಡೆವ ಅಧರ್ಮ ಯುದ್ಧವನ್ನು ತನ್ನಂತಹರು ಮಾಡಲಾರರು. ತಾನು ಈ ಅಕೃತ್ಯವನ್ನು ಗೆಯ್ಯನೆಂದು ಕರ್ಣನು ಹಾಗೆಯೆ ಬಾಣವನ್ನು ಅರ್ಜುನನು ಮೇಲೆ ಎಸೆದನು. ಎಸೆವಾಗ 'ಸತ್ತೆಯೊ ಅರ್ಜುನಾ!' ಎಂದು ಆತ್ಮವಿಶ್ವಾಸದಿಂದ ಗರ್ಜಿಸಿದನು.

೧೬. ಕೃಷ್ಣನು ಅರ್ಜುನನ ತೇರನ್ನ ಐದು ಬೆರಳು ಕೆಳಗೆ ಒತ್ತಿ ಕರ್ಣನ ಆ ಉಗ್ರಶರದ ಗುರಿಯನ್ನು ತಪ್ಪಿಸುವನು. ಆ ಬಾಣವು ಕಿರೀಟಕ್ಕೆ ಮಾತ್ರ ತಾಗುವುದು. ಇಂತು ಆ ಅಮೋಘವಾದ ಬಾಣವು ವ್ಯರ್ಥವಾಗುವುದು. ಆಗ ಆ ನಾಗ (ಬಾಣ)ವು ಕರ್ಣನಲ್ಲಿ ಮರಳಿ ಬಂದು ಬೇಡಿಕೊಳ್ಳುವುದು: ಕರ್ಣನೇ ನೀನು ನನ್ನನ್ನು ಇನ್ನೊಮ್ಮೆ ತೊಡು, ಎಂದು ಅಂಗಲಾಚಿ ಪ್ರಾರ್ಥಿಸಿದರೂ ಕರ್ಣನು ಆ ಮಾತನ್ನು ಕಿವಿಯುವುದಿಲ್ಲ. 'ಎಲೈ ನಾಗನೇ, ರಣಾಂಗದಲ್ಲಿ ಕರ್ಣನು ಹೆರವರ ಬಲದಿಂದ ಗೆಲ್ಲಲು ನಿಂತಿಲ್ಲ. ಒಬ್ಬ ಅರ್ಜುನನ ಮಾತೇಕೆ? ನೂರು

ಅರ್ಜುನರನ್ನು ಕೊಲ್ಲಬಹುದಾಗಿದ್ದರೂ ಕರ್ಣನು ಎರಡು ಬಾರಿ ಹೂಡಲಾರನು. ನನ್ನಲ್ಲಿ ಬೇರೆ ಉಗ್ರಬಾಣಗಳಿವೆ. ಮೇಲ್ತರದ ಗತಿಯ ಯತ್ನವಿದೆ; ಸಾಕಷ್ಟು ರೊಚ್ಚಿದೆ. ಇವುಗಳ ಬಲದಿಂದ ಅರ್ಜುನನನ್ನು ಕೊಲ್ಲವೆನು. ನೀನು ಸುಖವಾಗಿ ಮರಳು;' ಎಂದು ಅದಕ್ಕೆ ಸ್ಪಷ್ಟವಾಗಿ ಹೇಳಿ ಹಿಂದೆ ಕಳುಹಿದನು. (ಕರ್ಣ ಪ. ೯೭.೬-೯ ಪಾಠಾಂತರ)

೧೭. ಮುಂದೆ ಅಲ್ಪಾವಧಿಯಲ್ಲಿಯೆ ಕರ್ಣನ ತೇರು ನೆಲದಲ್ಲಿ ಸಿಕ್ಕಿಬೀಳುವುದು. ಕರ್ಣನು ದುಃಖಿತನಾಗಿ ಅರ್ಜುನನಿಗೆ ಕ್ಷಣಕಾಲ ತಡೆಯಹೇಳುವನು. ಅಶಸ್ತ್ರರೂ, ಸಾಧನರಹಿತರೂ ಆದವರ ಮೇಲೆ ಬಾಣಗಳನ್ನು ಎಸೆಯುವುದು ಧರ್ಮವಲ್ಲವೆಂದು ತಿಳಿಸುವನು.

ತ್ವಂ ಶೂರತಮೋ ಲೋಕೇ ಸಾಧುವೃತ್ತಶ್ಚ ಪಾಂಡವ।
ಅಭಿಜ್ಞೋ ಯುದ್ಧಧರ್ಮಾಣಾಂ ತಸ್ಮಾತ್ ಕ್ಷಣ ಮುಹೂರ್ತಕಮ್ ॥ ೧೦೬॥

೧೮. ಆಗ ಕೃಷ್ಣನೇ ಕರ್ಣನಿಗೆ ನೇರವಾಗಿ ಉತ್ತರಕೊಡುವನು. ಆತನ ಹಿಂದಿನ ದುಷ್ಕೃತ್ಯಗಳನ್ನೆಲ್ಲ ನೆನಪಿಗೆ ತಂದುಕೊಟ್ಟು, ಆ ಕಾಲದಲ್ಲಿ ನಿನ್ನ ಧರ್ಮಬುದ್ಧಿ ಎಲ್ಲಿ ಅಡಗಿದ್ದಿತು? ಎಂದು ಮೂದಲಿಸುವನು. ಸಂಕಟದಲ್ಲಿ ಸಿಕ್ಕಾಗ ನೀಚರು ದೈವವನ್ನು ನೆನೆದು ಅದಕ್ಕೆ ದೋಷಕೊಡುವರು. ತಮ್ಮ ದುಷ್ಕೃತ್ಯಗಳಿಂದಲೇ ತಮಗೆ ಈ ಪಾಡು ಬಂದಿತೆಂದು ಬಗೆಯುವುದಿಲ್ಲ; ಎಂದು ಮುಂತಾಗಿ ಆಡುವನು. (ಕರ್ಣ ಪರ್ವ ೯೮.೧-೧೫)

೧೮. ಕೃಷ್ಣನ ಈ ನುಡಿ ಕೇಳಿ ಕರ್ಣನು ನಾಚಿಕೆಯಿಂದ ತಲೆ ತಗ್ಗಿಸುವನು. ಬೇಗನೆ ಕರ್ಣನ ಮೇಲೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸಲು ಕೃಷ್ಣನು ಅರ್ಜುನನಿಗೆ ಆದೇಶಿಸುವನು. ಕರ್ಣನ ಹಿಂದಿನ ಅಪಕೃತ್ಯಗಳ ಮಾಲಿಕೆಯನ್ನು ಕೇಳಿ ಕೆರಳಿದ ಅರ್ಜುನನು ಕರ್ಣನ ಮೇಲೆ ಕೂರಂಬುಗಳ ಮಳೆಗರೆಯುವನು. ಕೊನೆಗೆ ಅಂಜಲಿಕಾಸ್ತ್ರ ಪ್ರಯೋಗಿಸಿ ಕರ್ಣನನ್ನು ಸಂಹರಿಸುವನು.

ಏವ ಮುಕ್ತಸ್ತದಾಕರ್ಣೋ ವಾಸುದೇವೇನ ಭಾರತ।
ಲಜ್ಜಯಾವನತೋ ಭೂತ್ವಾ ನೋತ್ತರಂ ಕಿಂಚಿದುಕ್ತವಾನ್ ॥ ೧೬॥

ಕ್ರೋಧಾತ್ ಪ್ರಸ್ಫುರಮಾಣೌಷ್ಠೋ ಧನುರುದ್ಯಮ್ಯ ಭಾರತ।
ಯೋಧಯಾಮಾಸ ವೈ ಪಾರ್ಥ ಮಹಾವೇಗ ಪರಾಕ್ರಮಃ ॥ ೧೭॥

ತತೋಽಬ್ರವೀತ್ ವಾಸುದೇವಃ ಫಲ್ಗುನಂ ಪುರುಷರ್ಷಭಮ್।
ದಿವ್ಯಾಸ್ತ್ರೇಣೈವ ನಿರ್ಭಿದ್ಯ ಪಾತಯಸ್ವ ಮಹಾಬಲ ॥ ೧೮॥

ಏವ ಮುಕ್ತಸ್ತು ದೇವೇನ ಕ್ರೋಧಮಾಗಾತ್ ತದಾಽರ್ಜುನಂ।
ಮನ್ಯುಮಭ್ಯಾವಿಶತ್ ಘೋರಂ ಸ್ಮೃತ್ವಾತತ್ತು ಧನಂಜಯಂ ॥ ೧೯॥

ತಸ್ಯ ಕ್ರುದ್ಧಸ್ಯ ಸರ್ವೇಭ್ಯಃ ಸ್ರೋತೋಭ್ಯಸ್ತೇಜಸೋಽರ್ಚಿಷಃ।
ಪ್ರಾದುರಾಸಂಸ್ತದಾ ರಾಜಂಸ್ತದದ್ಭುತಮಿವಾಭವತ್ ॥ ೨೦॥

....

ಶರೋತ್ತಮೇನಾಂಜಲಿಕೇನ ರಾಜಂಸ್ತದಾ ಮಹಾಸ್ತ್ರಪ್ರತಿಮಂತ್ರಿತೇನ।
ಪಾರ್ಥೋಽಪರಾಹ್ಣೇ ಶಿರ ಉಚ್ಚಕರ್ತ ವೈಕರ್ತನಸ್ಯಾಥ ಮಹೇಂದ್ರಸೂನುಃ।
ಛಿನ್ನಂ ಪಪಾತಾಂಜಲಿಕೇನ ತೂರ್ಣಂ ಕಾಯಶ್ಚ ಪಶ್ಚಾತ್ ಧರಣೀಂ ಜಗಾಮ॥ ೫೧॥

ಮೂವರೂ ಕರ್ಣರ ತೂಕ (ವಿಮರ್ಶೆ)

ವ್ಯಾಸರ ಕರ್ಣನ ಮೇಲೆ, ಕಂನುಡಿಯಲ್ಲಿ ಚಿತ್ರಿಸಿದ ಪಾತ್ರಗಳಷ್ಟು ಕೃತಘ್ನತೆಯ ಆರೋಪವು ಬರುವುದಿಲ್ಲ. ಏಕೆಂದರೆ:

(ಅ) ಕೃಷ್ಣನು ಬಂದಾಗ ಕರ್ಣನು ಆತನಿಗೆ ಪಾಂಡವರನ್ನು ಕೊಲ್ಲುವುದಿಲ್ಲವೆಂಬ ಯಾವ ವಚನವನ್ನೂ ಕೊಟ್ಟಿಲ್ಲ. (III ೩ ನೋಡಿ)

(ಆ) ಅರಸೊತ್ತಿಗೆಯಲ್ಲದೆ ದ್ರೌಪದಿಯೂ ನಿನ್ನ ಸತಿಯಾಗುವಳು, ಎಂದು ಕೃಷ್ಣನು ಸೂಚಿಸಿದರೆ, ಆತನು 'ತನಗೆ ಸೂತನೆಂದು ಬಗೆದು ಮಾಡಿದ ಮದುವೆಯ ಹೆಂಡರಿದ್ದಾರೆ. ಅವರಿಗೆ ಮೊಮ್ಮಕ್ಕಳೂ ಆಗಿರುವರು. ಇವರನ್ನು ತೊರೆದು ಹೃದಯಬಂಧನವನ್ನು ಕಡಿದು ಬರಲು ನನಗೆ ಮನಸ್ಸಾಗದು. ಇವರ ಪ್ರೀತಿಗೆ ಎರವಾಗಿ ಯಾವ ವೈಭವಕ್ಕೂ ನಾನು ಆಶಿಸಲಾರೆ.' ಕರ್ಣನ ಈ ಮಾತುಗಳು ಆತನ ಧೀರೋದಾತ್ತ ವೃತ್ತಿಯ ಸೂಚಕವಾಗಿವೆ. ದುರ್ಯೋಧನನು ಸಾಕಿದವನು, ಆತನಿಗೆ ಎರಡು ಬಗೆಯ ಬಗೆಯಲಾರೆ; ನಾನು ನಿಮ್ಮತ್ತ ಬಂದರೆ ರೂಢಿ ಮೆಚ್ಚದು; ಲೋಕವು ನಗದೆ ಇರದು; ಎಂದು ಆತನು ಹೇಳುವ ಕಾರಣಗಳಂತೂ ಸರಿಯೆ. ಆದರೆ, ಮೇಲಣ ಕಾರಣವು ಇವೆಲ್ಲಕ್ಕಿಂತ ಆತನ ಪ್ರೀತಿ ವಿಶ್ವಾಸಗಳನ್ನು ಚೆನ್ನಾಗಿ ಹೊರಪಡಿಸುತ್ತದೆ. (III೩)

(ಇ) ಮುಂದೆ ಕುಂತಿಯು ಬರುವಳು. ಸೂರ್ಯನು ಆಕಾಶವಾಣಿಯಿಂದ ಕರ್ಣನಿಗೆ ತಿಳಿಯ ಹೇಳುವನು. 'ಎಲೆ ಕರ್ಣನೆ, ನಿಮ್ಮ ತಾಯಿಯು ಹೇಳಿದುದು ನಿಜವಿದೆ. ಅವಳ ಮಾತು ಕೇಳು. ನಿನ್ನ ಕಲ್ಯಾಣವಾದೀತು-' ಎಂದು ಸೂರ್ಯನು ಆಜ್ಞಾಪಿಸುವನು. (III ೧೦) ಕುಂತಿಯಂತೂ ಸರಿಯೆ; ಅವಳೂ ಕರ್ಣನಿಗೆ ತನ್ನ ಮಾತು ಕೇಳಲು ಬಿನ್ನವಿಸುವಳು. (III ೯) ಆದರೆ, ಕಂನುಡಿಯಲ್ಲಿ ಪಂಪ, ಕುಮಾರವ್ಯಾಸರು ಸೂರ್ಯನಿಂದ ಬೇರೆ ಬಗೆಯಾಗಿ ನುಡಿಸಿದ್ದಾರೆ. ಈ ಮಾರ್ಪಟದಿಂದ ಕರ್ಣನ ಬೆಲೆ ಅಲ್ಲಿ ಇನ್ನೂ ಕಡಿಮೆಯಾಗುವುದು. ತಂದೆಯಾದ ಸೂರ್ಯನು, ಕುಂತಿಗೆ ವಚನ ಕೊಡಬೇಡವೆಂದೂ ಅವಳು ನಿನಗೆ ಮೋಸಮಾಡಲು ಬಂದಿರುವಳೆಂದೂ ಎಚ್ಚರಿಸುತ್ತಾನೆ; ಆದರೂ ಕರ್ಣನು ಅವಳಿಗೆ ಮಾತು ಕೊಡುವನು! ನೀನು ಮರುಳನಾಗದಿರೆಂದು ಕರ್ಣನಿಗೆ ಸೂರ್ಯನು ಹೇಳಿರುವಾಗಲೂ ಆತನು ಮರುಳನಂತೆಯೆ ನಡೆದುಕೊಳ್ಳುವನು!

ಆದರೆ, ವ್ಯಾಸರು ಚಿತ್ರಿಸಿರುವುದರಲ್ಲಿ ಕರ್ಣನ ದೃಢನಿಶ್ಚಯವೇ ಎದ್ದು ತೋರುತ್ತದೆ. ತಾಯಿಯಾದ ಕುಂತಿಯ ಮಾತಿನಂತೆ ನಡೆಯೆಂದು ಸೂರ್ಯನು ಹೇಳಿದರೂ ತನ್ನ ಕಡುಹಗೆಯಾದ ಅರ್ಜುನನನ್ನು ಕೊಲ್ಲುವುದರಲ್ಲಿಯೆ ತನ್ನ ಪೌರುಷವಿದೆ; ತನ್ನ ಪ್ರತಿಜ್ಞೆಯನ್ನು ತಾನು ಎಂದಿಗೂ ಬಿಡಲಾರನೆಂದೇ ಸ್ಪಷ್ಟವಾಗಿ ತಾಯಿಗೆ ಹೇಳುವನು. ಇದು ಕರ್ಣನ ವಿಶೇಷಗುಣವೆಂದು ಹೊಗಳಿದ 'ಚಲ'ದ ದ್ಯೋತಕವಾಗಿದೆ. 'ಚಲದಲ್ಲಿ ಕರ್ಣನನ್ನು ಮೀರಿಸಿದವರು

ಯಾರೂ ಇಲ್ಲ'ವೆಂದು ಕಂನುಡಿಯಲ್ಲಿ ವರ್ಣಿಸಲ್ಪಟ್ಟಿರುವುದಾದರೂ ಆತನ 'ಚಲ'ದ ನಿಶ್ಚಲಚಿತ್ರವು ಒಂದೆಡೆಗೂ ಬಂದಿಲ್ಲ.

ಕುಮಾರವ್ಯಾಸ ಮತ್ತು ಪಂಪನಲ್ಲಿ ಈ ಪ್ರಸಂಗವು ಬಂದಿದ್ದರೂ ಅವರು ಮಾಡಿಕೊಂಡ ಕೆಲವೊಂದು ವ್ಯತ್ಯಾಸಗಳು ಕರ್ಣನ ಪಾತ್ರ ಪೋಷಣೆಗೆ ಉಪಯುಕ್ತವಾಗಿವೆಯೆ? ಎಂಬುದು ಸಂದೇಹಾಸ್ಪದವಾಗಿದೆ. ಯಾರನ್ನಾದರೂ ಮುಂದೆ ಮಾಡಿ, ಅವರ ಹಿಂದೆ ನಿಂತು ಹಗೆಯನ್ನು ಗೆಲ್ಲವವನು ತಾನಲ್ಲವೆಂದು ಕುಮಾರವ್ಯಾಸನು ಕರ್ಣನಿಂದ ನುಡಿಸಿದುದು ಬಹಳ ಚೆನ್ನಾಗಿ ಬಂದಿದೆ. ಭೀಷ್ಮರನ್ನು ಶಿಖಂಡಿಯ ಹಿಂದೆ ನಿಂತು ಕೊಂದ ಅರ್ಜುನನಂತೆ ತಾನು ಹೀನಕೆಲಸ ಮಾಡಲಾರೆನೆಂಬ ಧ್ವನಿಯು ಅದರಲ್ಲಿದೆ. ಇದು ಕವಿಯ ಪ್ರತಿಭೆಯ ದ್ಯೋತಕವಾಗಿದೆ. ಮೂಲ ವ್ಯಾಸಭಾರತಕ್ಕಿಂತಲೂ ಇದು ಹಗೆಗೆ ಆಡಿದ ವಿಶೇಷ ಚುಚ್ಚುಮಾತಾಗಿದೆ. ಕರ್ಣನು ತೋರಿಕೆಯಲ್ಲಿ ಈ ಬಗೆಯ ಮಾತನಾಡಿದನೇದೂ ಆತನ ಮನದಲ್ಲಿ, ಮಾತೆಗಿತ್ತ ಭಾಷೆಯ ನೆನಪಾಗಿ ಅವನು ಆ ಬಾಣವನ್ನು ತೊಡಲಿಲ್ಲವೆಂದೂ ಮುಂದೆ ಕವಿಯು ಬಣ್ಣಿಸಿದುದರ ಔಚಿತ್ಯವು ಇಲ್ಲಿ ಏನೋ ತಿಳಿಯದು. ಏಕೆಂದರೆ, ಕರ್ಣನಿಗೆ ಈ ಬಗೆಯ ವಿಚಾರಗಳು ತಲೆದೋರಿದುವು, ಎಂಬುದು ಆತನು ಕೌರವನಿಗೆ ದ್ರೋಹಿಯಾಗಿದ್ದನೆಂಬುದಕ್ಕೆ ಕಾರಣವಾಗುತ್ತವೆ. (೨೨-೨೮ ನೋಡಿ). ಪಂಪಭಾರತದಲ್ಲಿ, ಈ ಸರ್ಪವು ಮರಳಿ ಬಂದ ಬಳಿಕ ಕರ್ಣನುಕೊಟ್ಟ ಉತ್ತರವು ಮೂಲಭಾರತಕ್ಕೆ ಸರಿಯಾಗಿಯೆ ಇದೆ. ಈ ಪ್ರಸಂಗದಲ್ಲಿ ಪಂಪನು ಕು. ವ್ಯಾಸನಂತೆ, ಕರ್ಣನ ಮನದಲ್ಲಿ ತಾಯಿಗಿತ್ತ ಭಾಷೆಯ ನೆನೆಪಾದುದನ್ನು ಬಣ್ಣಿಸಿಲ್ಲ. ಆದರೆ, ಈ ಬಗೆಯ ವರ್ಣನೆಯು ಪಂಪನಲ್ಲಿ, ಇದಕ್ಕೂ ಸ್ವಲ್ಪ ಮೊದಲೆ ಬಂದುಹೋಗಿದೆ. ಶಲ್ಯನು, ಕರ್ಣನಿಗೆ ಆ ಬಾಣವನ್ನು ಎದೆಗೆ ಹೂಡು; ತಲೆಗೆ ಬೇಡ; ಎಂದು ಹೇಳಿದಾಗಲೆ ತಾನು ತಾಯಿಗೆ ಕೊಟ್ಟ ವಚನದ ನೆನೆಪಾಗಿ ಆತನು ಗುರಿಯನ್ನು ಬದಲಿಸಲಿಲ್ಲವೆಂದೂ ಹೊರತೋರಿಕೆಗೆ ಶಲ್ಯನಿಗೆ ತನ್ನ ಆತ್ಮಪೌರುಷದ ಬೇರೆ ಮಾತನ್ನು ಹೇಳಿದನೆಂದೂ ವರ್ಣನೆಯಿದೆ. (II ೧೬-೧೭ ನೋಡು)

ಕುಮಾರವ್ಯಾಸ ಮತ್ತು ಪಂಪರಲ್ಲಿ ಇಬ್ಬರಲ್ಲಿಯೂ ಕರ್ಣನು ಒಳಗೊಂದು ಹೊರಗೊಂದು ಮಾತಿನವನಾಗಿದ್ದ ಹಾಗೆ ವರ್ಣನೆ ಬಂದಿದೆ. ಕುಮಾರವ್ಯಾಸನು ಬಾಣಹೂಡುವ ಕಾಲದಲ್ಲಿ ಮೂಲಭಾರತವನ್ನು ಅನುಸರಿಸಿದ್ದರೂ ಸರ್ಪವು ಮರಳಿ ಬಂದಾಗ ಎರಡು ಬಗೆದುದುನ್ನೂ ಪಂಪನು ಬಾಣ ಹೂಡುವಾಗಲೆ ಎರಡು ಬಗೆದಂತೆ ಹೇಳಿ ಮುಂದೆ ಆ ಸರ್ಪವು ಬಂದಾಗ ಮೂಲ ಭಾರತದ ಹಾಗೆಯೆ ವರ್ಣಿಸಿದ್ದಾನೆ. ಆದರೆ, ವ್ಯಾಸಭಾರತದಲ್ಲಿ ಬಾಣ ತೊಡುವಾಗ ಆಗಲಿ, ಮರಳಿ ಆ ಸರ್ಪವು ಬಂದು ಕೇಳಿದಾಗಾಗಲಿ ಕಂನುಡಿಯ ಎರಡೂ ಭಾರತಗಳಲ್ಲಿರುವ ಎರಡು ಬಗೆದ ಮಾತು ಬಂದಿಲ್ಲ.

(ಊ) ಕುಂತಿಯನ್ನು ಕಂಡು ಕರ್ಣನು ಭಯಭಕ್ತಿಯುಳ್ಳವನಾದನೆಂದು ಪಂಪನು ಮತ್ತು ಕುಮಾರವ್ಯಾಸನೂ ಹೇಳುವರು.'ಮನದೊಳ್ ಎರಕವುಂಟಾಯ್ತು; ತನ್ನಪೂರ್ವ ಸುಕೃತವೆ ಮೈಗೊಂಡು ಬಂದಂತೆ (ಕುಂತಿ) ಬಂದಳು; ತಾಯನ್ನು ಕಂಡು ತಾನು ಧನ್ಯನಾದೆ, ಎಂದು ಮುಂತಾದ ವರ್ಣನೆಗಳು ಪಂಪನಲ್ಲಿ ಬಂದಿವೆ (II ೩,೬,೮ ನೋಡಿ). ಕುಮಾರವ್ಯಾಸನ ಕರ್ಣನು ಮಾತೃಭಕ್ತಿಯಿಂದ ತಾಯಿಗೆ ಅವಳು ಕೇಳಿದ ವಚನ ಕೊಡುವನು. 'ಕೃತಘ್ನರಿಗೆ ಪರಗತಿಯಿಲ್ಲ' ಎಂದು ಹೇಳುತ್ತಲಿದ್ದೂ ಮೊದಲು ಕೃಷ್ಣನಿಗೆ ಬಳಿಕ ಕುಂತಿಗೂ ಕರ್ಣನು ವಚನ ಕೊಟ್ಟುದನ್ನು ಕುಮಾರವ್ಯಾಸನು ವರ್ಣಿಸಿದ್ದಾನೆ (I ೧೦.೧೯ ನೋಡಿ)

ಆದರೆ ಸಂಸ್ಕೃತ ಭಾರತದಲ್ಲಿ ವ್ಯಾಸರು ಇದಕ್ಕೆ ತೀರಿ ವಿಪರೀತವಾಗಿ ಹೇಳಿದ್ದಾರೆ.

(ಋ) ಕುಂತಿಯು ಕರ್ಣನಲ್ಲಿ ಕೃಷ್ಣನ ಸೂಚನೆಯ ಮೇಲಿಂದ ಹೋದಳೆಂದು ಪಂಪನೂ ಕುಮಾರವ್ಯಾಸನೂ ವರ್ಣಿಸಿದ್ದಾರೆ. (ಪಂಪಭಾರತ ೯.೬೩ ವಚನ; ಕುಮಾರವ್ಯಾಸ ಉದ್ಯೋಗ ೧೧.-೭). ಆದರೆ, ವ್ಯಾಸರ ಭಾರತದಲ್ಲಿ ಇದಕ್ಕೆ ಆಧಾರವಿಲ್ಲ. ಕೃಷ್ಣನು, ಕುಂತಿಗೆ ನೀನು ಕರ್ಣನಲ್ಲಿಗೆ ಹೋಗು ಎಂದು, ತಾನೇ ಹೇಳದಿರುವುದೇ ಹೆಚ್ಚು ಸ್ವಾಭಾವಿಕವಾಗಿದೆ, ಅತ್ಯಂತ ಉಚಿತವೂ ಆಗಿದೆ. ಏಕೆಂದರೆ, ಕರ್ಣನ ಜನ್ಮದ ರೀತಿಯ ಬಗೆಗೆ ಕುಂತಿಗೇ

ನಾಚಿಕೆ. ಮಾಡಬಾರದ ಮಾಳ್ಕೆ ಅದು; ಆಗಬಾರದ್ದು ಆಗಿ ಹೋದುದಕ್ಕಾಗಿ ಅವಳು ಒಳಗೊಳಗೇ ನೊಂದು ಬೆಂದು ಬಳಲುತ್ತಿದ್ದಾಳೆ. ಹೆರವರ ಎದುರು, ಕರ್ಣನಂತಹ ಒಬ್ಬ ಮಗನ ಮತ್ತು ತನ್ನ ಸಂಬಂಧವನ್ನು (ಅವರಿಗೆ ಗೊತ್ತಿದ್ದರೂ) ಬಹಿರಂಗವಾಗಿ ಅಡಿಕೊಳ್ಳಲಿಕ್ಕೆ ಯಾವ ಮಾನಿನಿಯೂ ಒಪ್ಪಲಾರಳು. ಕೃಷ್ಣನಂತಹ ಸೂಕ್ಷ್ಮ ವಿಚಾರಿಯಾದರೂ ಈ ಬಗೆಯ ಮಾತನ್ನು ಇನ್ನೊಬ್ಬ ಹೆಣ್ಣುಮಗಳ ಮುಂದೆ ಆಡುವುದು ಸಾಧ್ಯವಿಲ್ಲ.

ಈ ದೃಷ್ಟಿಯಿಂದ ವ್ಯಾಸಭಾರತದ ವರ್ಣನೆಯು ಬಹಳ ಸಮರ್ಪಕವಾಗಿದೆ. ಸಂಧಾನ ಕಾಲದಲ್ಲಿ ಕುಂತಿ ವಿದುರನ ಮನೆಯಲ್ಲಿದ್ದಳು. ಸಂಧಾನವು ಮುರಿದ ಸುದ್ದಿಯನ್ನು ಅರುಹಿ ಕೃಷ್ಣನು ಕುಂತಿಯ ಸಂದೇಶವನ್ನು ಕೇಳಿಕೊಂಡು ಅದನ್ನು ಪಾಂಡವರಿಗೆ ತಿಳಿಸುವುದಕ್ಕಾಗಿ ಹೋಗುತ್ತಾನೆ. ಬಳಿಕ ವಿದುರನು ಬರಲಿರುವ ಭೀಕರ ಯುದ್ಧದ ಮಾತು ಎತ್ತುವನು. ಅದರ ಘೋರ ಪರಿಣಾಮಗಳನ್ನು ನೆನೆದು ತನಗೆ ನಿದ್ರೆಯೂ ಬರಲೊಲ್ಲದು, ಎಂದು ಕುಂತಿಯೊಡನೆ ಆತನ ಮಾತು ನಡೆಯುವುದು. ಬಳಿಕ ಕುಂತಿಯ ಮನದಲ್ಲಿ ಚಿಂತೆಯ ಹುತ್ತ ಏಳುವುದು. ಈ ಯುದ್ಧಕ್ಕೆ ಕಾರಣರಾರು? ಪಾಂಡವರಿಗೆ ಯಾರಿಂದ ಗಂಡಾಂತರವು ವಿಶೇಷ? ಎಂಬಿವೇ ಮೊದಲಾದ ಸಂಗತಿಗಳ ವಿಮರ್ಶೆಯನ್ನು ತನ್ನ ಮನದಲ್ಲಿಯೆ ಮಾಡಿ, ಕೊನೆಗೆ ಇದೆಲ್ಲಕ್ಕೂ ಕರ್ಣನೇ ಮೂಲ; ಮುಖ್ಯ. ಕಾರಣ ಆತನನ್ನು ಒಲಿಸಿಕೊಳ್ಳಬೇಕೆಂದು ನಿಶ್ಚಯಿಸುವಳು. ಒಂದು ರವಿವಾರದಂದು ಆತನನ್ನು ಕಾಣುವಳು. ಈ ಭೆಟ್ಟಿಯ ಪ್ರಸಂಗವನ್ನು ವರ್ಣಿಸಿದುದರಲ್ಲಿಯೂ ಮನುಷ್ಯ ಸ್ವಭಾವದ ಜ್ಞಾನವು ವ್ಯಾಸರಿಗೆ ಎಷ್ಟು ಸೂಕ್ಷ್ಮವಾಗಿ ಆಳವಾಗಿ ಇದ್ದಿತೆಂಬುದನ್ನು ಮನಗಾಣಬಹುದು.

ಕುಂತಿಗೆ ನೇರವಾಗಿ ಕರ್ಣನನ್ನು ಕಾಣುವ ಧೈರ್ಯವಿಲ್ಲ. ಅವಳು, ಆತನ ಅರಮನೆಗೆ ಹೋಗಲಿಲ್ಲ. ಅವನ ಇಷ್ಟ ದೈವತವಾದ ಸೂರ್ಯನ ಆರಾಧನೆಯ ಸಮಯವನ್ನು ಅವಳು ಸಾಧಿಸಿದ್ದಾಳೆ. ಆ ಹೊತ್ತಿನಲ್ಲಿ ಕೂಡ ಅವನ ಸಮ್ಮುಖದಲ್ಲಿ ಹೋಗಿ ಆತನನ್ನು ಕಾಣುವುದಕ್ಕೆ ಮೋರೆಯಿಲ್ಲ. ಅವಳು ಕರ್ಣನ ಹಿಂದೆ ಹೋಗಿ ಆತನು ಹೊರಳಿ ತಾನಾಗಿಯೇ ಯಾವಾಗ ತನ್ನನ್ನು ಕಾಣುವನೊ ಆಗ ನೋಡಲಿ, ಎಂದು ಅವಳ ಎಣಿಕೆಯಿರಬೇಕು. ಬಿಸಿಲಿನ ಬೇಗೆಯನ್ನು ತಾಳಲಾರದೆ ಬೆಂದು ಬೆಂಡಾದರೂ ಅವಳು ಕರ್ಣನ ಮುಂದೆ ಹೋಗದೆ ಹಿಂಬದಿಗೆ ನಿಂತಿದ್ದಳೆಂದು ವ್ಯಾಸರು ವರ್ಣಿಸಿದ್ದಾರೆ. ಬಿಸಿಲಿನ ತಾಪವು ಅಸಹ್ಯವಾಗಲು ಕರ್ಣನು ಹೊದ್ದ ಬಟ್ಟೆಯ ನೆರಳನ್ನು ಆಶ್ರಯಿಸಿದಳೆ ಹೊರತು, ಆತನ ಜಪವು ಮುಗಿಯುವ ವರೆಗೆ ಹತ್ತರಿನ ಯಾವುದಾದರೂ ಗಿಡದ ನೆರಳನ್ನು ಕೂಡ ಹಾರಯಿಸಲಿಲ್ಲ! ಬಳಲಿ ಬಸವಳಿದರೂ ಆ ಉರಿಬಿಸಿಲಲ್ಲಿ, ಹಿಂಬದಿಗೇ ನಿಂತುದರಲ್ಲಿ, ಕುಂತಿಯು ಎಷ್ಟೊಂದು ಸಂಕೋಚಭಾವದಿಂದ ಕರ್ಣನನ್ನು ಕಾಣಲು ಹೋದಳೆಂಬುದು ಬಹಳ ಚೆನ್ನಾಗಿ ಹೊರವಡುತ್ತದೆ. ತನ್ನ ಈ ಪಾಡಿನಿಂದ ಕರ್ಣನ ಅಂತಃಕರಣವು ಕರಗಿದರೆ ಕರಗಲಿ; ತಾನು ತಪ್ತೆ-ಅನುತಪ್ತೆ ಎಂಬುದನ್ನು ತೋರಿಸಿಕೊಳ್ಳುವುದೂ ಕುಂತಿಯ ಭಾವವಾಗಿತ್ತು. ಆದರೆ, ಈ ಔಚಿತ್ಯವು ಕನುಡಿಯ ಭಾರತಗಳಲ್ಲಿ ಬಂದಿಲ್ಲ.

(ಎ) ಕುಂತಿಯನ್ನು ಕಾಣುತ್ತಲೆ ಕರ್ಣನು ನಮಸ್ಕರಿಸುವನು. ನಿಜ. ಆದರೆ, ಆಗ ನಡೆದ ಪ್ರಸಂಗವನ್ನು ವ್ಯಾಸರು ಬಹಳ ಅರ್ಥವತ್ತಾಗಿ ವರ್ಣಿಸಿದ್ದಾರೆ. ಈಗ ತನಗೆ ಕಂಡವಳು ಕುಂತಿ, ತನ್ನ ಜನ್ಮಕೊಟ್ಟತಾಯಿ, ಎಂಬುದು ಕರ್ಣನಿಗೆ ಚೆನ್ನಾಗಿ ಗೊತ್ತಿದ್ದಿತು. ಆದರೂ ಅವಳಿಗೆ ಮೊದಲು 'ತಾಯಿ' ಎಂದು ಸಂಬೋದಿಸದೆ, 'ಕ್ಷತ್ರಿಯೇ, ನಿನಗೆ ನನ್ನಿಂದ ಏನಾಗಬೇಕು?' ಎಂದು ಕೇಳುತ್ತಾನೆ. ಇಷ್ಟೇ ಅಲ್ಲ, 'ರಾಧೇಯನು, ಅಧಿರಥನ ಮಗನು ನಾನು ನಮಸ್ಕರಿಸುತ್ತೇನೆ' ಎಂದು ಒಡನುಡಿಯುತ್ತಾನೆ! ಆತನು ಹೀಗೆ ತನಗೆ 'ಸೂತ್ರಪುತ್ರ'ನೆಂದುಕೊಂಡುದು ಬುದ್ಧಿಪೂರ್ವಕವಾಗಿ, ಕುಂತಿಗೆ ಏಡಿಸುವದಕ್ಕಾಗಿಯೆ ಎಂಬಲ್ಲಿ ಸಂದೇಹವಿಲ್ಲ. ಏಕೆಂದರೆ ಈ ಮೊದಲೆ ಕೃಷ್ಣನು ಕರ್ಣನಿಗೆ ಆತನ ಜನ್ಮವೃತ್ತಾಂತವನ್ನು ಹೇಳಿದ್ದನು. ಅಲ್ಲದೆ, ಕಂನುಡಿಯಲ್ಲಿ ವರ್ಣಿತವಾಗಿರುವಂತೆ, ಕರ್ಣನಿಗೆ ಆತನ ಹುಟ್ಟಿನ ಬಗೆಗೆ ಮೊದಲು ಕೃಷ್ಣನಿಂದಲೇ ತಿಳಿಯಿತೆಂಬುದಕ್ಕೂ ಸಂಸ್ಕೃತದ ಭಾರತದಲ್ಲಿ ಆಧಾರವಿಲ್ಲ. ಕರ್ಣನು ಆ ವೃತ್ತಾಂತವನ್ನೆಲ್ಲ ಮೊದಲೇ ಅರಿತಿದ್ದನು. ಕೃಷ್ಣನು ಅದನ್ನೇ ಮತ್ತೊಮ್ಮೆ ಆತನಿಗೆ ಹೇಳಿದಂತೆ

ಸಂಸ್ಕೃತ ಭಾರತದ ಉಲ್ಲೇಖಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಹೀಗೆ ಕರ್ಣನಿಗೆ ಬಂದವಳು, ತನ್ನ ತಾಯಿಯೆಂದು ತಿಳಿದಿದ್ದರೂ ಅವಳಿಗೆ ತಾನು ರಾಧೇಯನೆಂದು ಹೇಳಿ ನಮಸ್ಕರಿಸಿದುದರಲ್ಲಿ ತುಂಬ ವ್ಯಂಗ್ಯವಿದೆ; ಧ್ವನಿಯಿದೆ.

(ಏ) ಕೃಷ್ಣ ಮತ್ತು ಕರ್ಣ, ಕುಂತಿ ಮತ್ತು ಕರ್ಣರ ಸಂವಾದಗಳಲ್ಲಿರುವ (ವ್ಯಾಸರ) ಸ್ವಾರಸ್ಯವು ಅಪೂರ್ವವಾಗಿದೆ. ಕೃಷ್ಣನು ಕರ್ಣನಿಗೆ ಆತನ ಜನ್ಮವೃತ್ತಾಂತವನ್ನು ಬಹಳ ಚಾತುರ್ಯದಿಂದ ಹೇಳುತ್ತಾನೆ. ಅದರೊಳಗಿನ ಅರುಚಿಕರವಾದ ಭಾಗವನ್ನು ಕೃಷ್ಣನು ಬಿಟ್ಟುಬಿಟ್ಟು ನೀನು ಕಾನೀನನಾದರೂ ಅರಸುತನದ ಹಕ್ಕುದಾರ ನಾಗಿರುವೆಯೆಂದು ಆರಂಭಿಸಿ, ಬಳಿಕ ನೀನು ರಾಜನಾದರೆ ನಿನ್ನ ವೈಭವಕ್ಕೆ ಎಣೆಯಿಲ್ಲವೆಂದು ಬಾಯಿಗೆ ನೀರು ಊರುವಂತೆ ವರ್ಣಿಸುವನು. ಆದರೆ, ಕರ್ಣನು ಕೃಷ್ಣನಿಗೆ ತನ್ನ ಜನ್ಮವೃತ್ತಾಂತವನ್ನೆಲ್ಲ ಮರಳಿಹೇಳುವಾಗ ಕೃಷ್ಣನು ಬಚ್ಚಿಟ್ಟ ಅಥವಾ ಬಿಟ್ಟ ಕಹಿಸಂಗತಿಗಳನ್ನು ಒಂದೂ ಬಿಡದಂತೆ ಎತ್ತಿ ಆಡುವನು. 'ಸೂರ್ಯನಿಂದ ಕನ್ಯೆಯಾದ ಕುಂತಿಯಲ್ಲಿ ನಾನು ಹುಟ್ಟಿದ್ದು ನೀನು ಹೇಳುವಂತೆ ನಿಜವಾಗಿದೆ; (ಆದರೆ) ಅವಳು ನನ್ನನ್ನು (ಹುಟ್ಟಿದೊಡನೆ) ಚೆಲ್ಲಿಬಿಟ್ಟಳು! ಅವಳು ನನ್ನನ್ನು ಹಾಗೆ (ನೀರಿಗೆ) ಎಸೆದು ಬಿಟ್ಟುದರಿಂದ ನನ್ನ ಜೀವನ ಮಹತ್ವಾಕಾಂಕ್ಷೆಗಳೆಲ್ಲ ಇಂದು ಮಣ್ಣುಗೂಡಿವೆ. ನನ್ನ ಅಕಲ್ಯಾಣ ಮಾಡಿದ್ದಾಳೆ. ರಾಧೆಯು ನನ್ನನ್ನು ತಾಯಿಗಿಂತ ಹೆಚ್ಚಿನ ಕಕ್ಕುಲತೆಯಿಂದ ಜೋಪಾನ ಮಾಡಿದಳು.... ಇಂತಹರನ್ನು ನಾನು ಹೇಗೆ ಬಿಟ್ಟು ಬರಲಿ!

ಕುಂತಿಯೊಡನೆ ಆದ ಮಾತುಗಳಲ್ಲಿಯೂ ಕರ್ಣನು ಮತ್ತೆ ಇದನ್ನೆ ಒತ್ತಿ ಹೇಳಿದ್ದಾನೆ. ಕರ್ಣನು ಕುಂತಿಗೆ ಆಡಿದ ನಿಷ್ಠುರ ಸತ್ಯದ ಕಡುನುಡಿಗಳ ಗಂಧವು ಕೂಡ ಕಂನುಡಿಯ ಭಾರತದಲ್ಲಿಲ್ಲ. ಕೇವಲ ಮಾತೃಭಕ್ತಿಯನ್ನು ಮೆರೆಯಿಸುವಲ್ಲಿ ಈ ಬಗೆಯ ಮಾತುಗಳಿಗೆ ಅಲ್ಲಿ ಇಂಬಿಲ್ಲದಾಗಿದೆ. ಕುಂತಿಯು ಕರ್ಣನಿಗೆ, ನೀನು ರಾಧೇಯನಲ್ಲ; ಕೌಂತೇಯನಾಗಿರುವೆ. ಕಾನೀನನು ನೀನು; ಸೂರ್ಯನು ನಿನ್ನ ತಂದೆ. ನಿನ್ನ ತಮ್ಮಂದಿರೊಡಗೂಡಿ ರಾಜ್ಯವಾಳಿ ಲೋಕದಲ್ಲಿ ಮೆರೆ; ತಾಯಿತಂದೆಗಳಿಗೆ ಸಂತೋಷಿಸುವುದು ಮಕ್ಕಳ ಕರ್ತವ್ಯ; ಎನ್ನುವಳು. ಆದರೆ, ಕರ್ಣನು ಅವಳಿಗೆ ನೇರವಾಗಿ ಬಿಚ್ಚು ಮಾತಿನಿಂದ ಹೇಳುವನು. ನಿನ್ನ ಆಜ್ಞೆಯಂತೆ ನಡೆಯುವುದು ನನ್ನ ಧರ್ಮವೆಂದು ನಾನು ಬಗೆಯಲಾರೆನೆಂದು ಕುಂತಿಗೆ ತಟ್ಟನೆ ಕರ್ಣನ ಸಿಡಿಲುನುಡಿಯ ಮಾರುತ್ತರವು ದೊರೆಯುವುದು. ಈಗ ನೀನು ನನ್ನೆಡೆಗೆ ಬಂದುದು ನೀನು ಕೇವಲ ಆತ್ಮಹಿತೈಷಿಣಿಯಾಗಿ; ನನ್ನ ಕಲ್ಯಾಣಕ್ಕಾಗಿ ಅಲ್ಲ. ಈ ಮೊದಲು ನನ್ನನ್ನು ನೀನು ಒಮ್ಮೆಯಾದರೂ ತಾಯಿಯಂತೆ ಕರುಣೆಯಿಂದ ಕಂಡುದುಂಟೆ? ಎಂದೂ ಕೇಳುವನು.

ವ್ಯಾಸರ ಈ ಚಿತ್ರವು ಕರ್ಣನ ಸ್ವಭಾವದ ಸಂಪೂರ್ಣ ವಾಸ್ತವ ಚಿತ್ರವಾಗಿದೆ. ಏಕೆಂದರೆ, ಇದು ಆತನ ಇಡೀ ಜೀವನ ರೀತಿಗೆ ಸುಸಂಗತವಾಗಿದೆ. ಹುಟ್ಟಿದೊಡನೆ ನೀರಲ್ಲಿ ಎಸೆದು, ಮದುವೆಯ ಮೊದಲು ಹಡೆದ ಲೋಕಾಪವಾದವನ್ನು ತಪ್ಪಿಸಿಕೊಂಬ ಸ್ವಾರ್ಥದಲ್ಲಿ ತನ್ನ ಯಶಸ್ಸಿಗೂ ಕೀರ್ತಿಗೂ ಮಣ್ಣುಗೂಡಿಸಿದವಳ ವಿಷಯಕ್ಕೆ ಮತ್ತೆ ಮಾತೃಭಕ್ತಿಯೆ? ಕರ್ಣನ ಬಾಯಿಂದ ಮಾತೃಭಕ್ತಿಯ ನಲ್ನುಡಿಗಳು ಉಕ್ಕಿ ಬಂದುವೆಂಬುದು ಈ ಬಗೆಯ ಮನುಷ್ಯ ಸ್ವಭಾವದ ಕೇವಲ ಅಜ್ಞಾನವೇ ಸರಿ. ಕರ್ಣನು ತನ್ನ ಜೀವನ ಮಹತ್ವಾಕಾಂಕ್ಷೆಗಳೆಲ್ಲ ವ್ಯರ್ಥವಾದುವೆಂದು ಚಿಕ್ಕಂದಿನಿಂದಲೂ ಕಸಿವಿಸಿಗೊಳ್ಳುತ್ತಲಿದ್ದುದು ನಿಜವಿದ್ದರೆ, ಈ ಬಗೆಯಾಗಿ ತನಗೆ ಹಿರಿಮೆ ದೊರೆಯದಿರಲು ಕಾರಣಳಾದ ಕುಂತಿಯ ವಿಚಾರದಲ್ಲಿ ಕರ್ಣನಿಗೆ ಆದರ ಅಭಿಮಾನಗಳುಂಟಾದುವೆಂಬುದು ಅಸಂಗತ; ವಿಪರೀತ. ಕರ್ಣನನ್ನು ಕಾಣುತ್ತಲೆ ಕುಂತಿಗೆ ತಾಯ್ತನದ ಭಾವವು ಹೊರಹೊಮ್ಮಿ ಮೊಲೆವಾಲು ಅಂಕುರಿಸಿತೆಂದು ಹೇಳುವುದೂ ಆಯುಕ್ತವಾಗಿದೆ. ಈವರೆಗೆ ಒಮ್ಮೆಯೂ ಕರ್ಣನಲ್ಲಿ ಕರುಣೆ ತೋರಿಸದವಳು ಇಂದು ಒಮ್ಮೆಲೆ ಹೀಗೆ ಬದಲಾಗುವುದು ಸಾಧ್ಯವೆ, ಎಂಬ ಸಂದೇಹವುಂಟಾಗುವಂತಿದೆ. ತಾನು ಈ ವರೆಗೆ ಒಮ್ಮೆಯೂ ಆತನನ್ನು ಕಂಡು ಒಲ್ಮೆ-ಪ್ರೀತಿಗಳನ್ನು ವ್ಯಕ್ತಿಪಡಿಸದೆ ಇದ್ದವಳು, ಒಂದು ಬಗೆಯಾಗಿ ಅರ್ಜುನನ ಪಕ್ಷಪಾತಿಯಾಗಿ ಆತನ ವಿರೋಧವನ್ನೇ ಮಾಡಿದವಳು. ಇಂತಹಳು ಇಂದು ಅನಿವಾರ್ಯವಾಗಿ ಆತನ ಎದುರಿಗೆ ಹೋಗುವ ಹೊತ್ತು ಬಂದಾಗ ಅವಳಿಗೆ ಅದೆಷ್ಟು ಜೀವ ಸಣ್ಣಾಗಿರಲಿಕ್ಕಿಲ್ಲ? ಅಲ್ಲದೆ ಆತನ ಜನ್ಮಕತೆ, ಆತನನ್ನು ಚೆಲ್ಲಿ ಬಿಟ್ಟುದು

ಇಂತಹ ಪಾಪಗಳ ನೆನೆಪಿನಿಂದ ಅವಳು ಮನದಲ್ಲಿ ನುಚ್ಚುನೂರಾಗಿ ಗೋಳಾಡುತ್ತಿರಬೇಕು. ಈ ಕಾರಣದಿಂದಲೆ ಅವಳು ಊರಹೊರಗೆ, ನದೀತೀರದಲ್ಲಿ, ಕರ್ಣನ ಹಿಂಬದಿಗೆ ನಿಂತು, ಬಿಸಿಲಲ್ಲಿ ಕಾಯುತ್ತ ಆತನನ್ನು ಕಂಡುದು! ಈ ಬಗೆಯ ಸನ್ನಿವೇಶದಲ್ಲಿ ಕರ್ಣನನ್ನು ಕಂಡು ಕುಂತಿಗೆ ತಾಯ್ತನದ ಉಕ್ಕು ಬಂದಿತೆಂಬುದು ಅಸಂಬದ್ಧ, ಮನುಷ್ಯಸ್ವಭಾವಕ್ಕೆ ವಿಪರೀತ. ಇದನ್ನರಿತೇ ವ್ಯಾಸರು ಈ ಬಗೆಯ ವರ್ಣನೆ ಮಾಡಿಲ್ಲ. ಇಷ್ಟೇ ಅಲ್ಲ; ಕುಂತಿಯು ಕರ್ಣನಲ್ಲಿಗೆ ಬಂದುದು ಆಳವಾದ ರಾಜಕಾರಣ ಪಟುವಿನಂತೆ, ಕೇವಲ ಧೂರ್ತತನದಿಂದ ಎಂದೇ ವ್ಯಾಸರು ಅಲ್ಲಲ್ಲಿ ಸೂಕ್ಷ್ಮವಾಗಿ ಸೂಚಿಸಿದ್ದಾರೆ. ವಿದುರನ ಮಾತು ಕೇಳಿ ಕುಂತಿಯ ಮನದಲ್ಲಿ ಎದ್ದ ವಿಚಾರತರಂಗಗಳನ್ನು ವಿವರಿಸುವಾಗ ಕುಂತಿಯು ಕರ್ಣನಿಗೆ 'ಮೋಹಾನುವರ್ತಿಯೂ ಪಾಪಿಯೂ ಆದ ಕರ್ಣನು ಪಾಂಡವರನ್ನು ದ್ವೇಷಿಸುವನು' ಎಂದ ಹಾಗೆ ವರ್ಣಿಸಿದ್ದಾರೆ. (I ೭ ನೋಡಿ) ಕಿರುಕುಳರಾದ ನಾಲ್ವರೊಡನೆ ಕಾದುವುದು ತನಗೆ ಭೂಷಣವಲ್ಲ; ತಾನು ಅರ್ಜುನನನ್ನೇ ನೋಡಿಕೊಳ್ಳುವೆನೆಂದು ಕರ್ಣನು ಆಡಿದ ಮಾತುಗಳನ್ನು ಆತನಿಂದ ಆಶ್ವಾಸನವೆಂದು ಎತ್ತಿಕೊಂಡು, ಆತನನ್ನು ತೊಡಕಿಗೆ ಈಡುಮಾಡಿದಳು.

(ಐ) ಕರ್ಣನು ಎಷ್ಟೆಂದರೂ ವೀರ; ಸತ್ವಸಾಲಿ. ಆದುದರಿಂದ ತನ್ನಲ್ಲಿ ದೈನ್ಯದಿಂದ ಬೇಡಬಂದ ಹೆಣ್ಣು ಮಗಳಿಗೆ ತೀರ ನಿರಾಶೆಗೊಳಿಸಿ ಹಿಂದಕ್ಕಟ್ಟಬಾರದೆಂದು ಒಂದು ಮಾತನ್ನು ತನ್ನ ತತ್ವಕ್ಕೆ ಚ್ಯುತಿಬಾರದಂತೆ ಆಡಿದ್ದಾನೆ. ಕೃಷ್ಣನಂತಹನನ್ನೆ ಏನೂ ಮಾತುಕೊಡದೆ ಮರಳಿಸಿದ ಕರ್ಣನು, ಕುಂತಿಗೆ, ಸಮಾಧಾನಕ್ಕಾಗಿ ಏನೋ ಒಂದು ಮಾತು ಉಸುರಿದಂತೆ ಇದೆ, ಆತನ ಈ ನುಡಿ, ಅರ್ಜುನನ ಹೊರತಾಗಿ ಉಳಿದ ನಾಲ್ವರು ತನಗಿಂತಲೂ ಸಾಮರ್ಥ್ಯದಲ್ಲಿ ಕಡಿಮೆ. ಹೀಗೆ ಕಡಿಮೆಯವರೊಡನೆ ಕಾದುವಲ್ಲಿ ಏನು ದೊಡ್ಡಿತೆ? ಒಬ್ಬ ಪಾಂಡವನು ಮಡಿದರೂ ಯುಧಿಷ್ಠಿರನು ರಾಜ್ಯವನ್ನು ಆಳದೆ ಅಗ್ನಿಪ್ರವೇಶ ಮಾಡಿಯೊ, ವನಕ್ಕೆ ಹೋಗಿಯೋ ತನ್ನ ಕೊನೆಯನ್ನು ಮಾಡಿಕೊಳ್ಳತಕ್ಕವನಿದ್ದಾನೆ. ತಾನು ಒಬ್ಬ ಅರ್ಜುನನನ್ನು ಕೊಂದರೂ ಸರಿ; ತನ್ನ ಹೊರೆದ ದಾತಾರನ ಕೆಲಸವು ಕೈಗೂಡುವುದು. ಆತನಿಗೆ ರಾಜ್ಯವೈಭವವು ದೊರೆಯುವುದು ನಿಶ್ಚಿತ, ಎಂಬ ಆತ್ಯಂತಿಕ ಆತ್ಮವಿಶ್ವಾಸವುಳ್ಳ ಕರ್ಣನು ಕುಂತಿಗೆ 'ನಿನ್ನ ನಾಲ್ವರನ್ನು ನೋಯಿಸೆನು' ಎಂದು ಆಡಿದ್ದಲ್ಲಿ ಸೋಜಿಗವಿಲ್ಲ. ಈ ಮಾತು ಆತನ 'ಚಲದ' ಸ್ವಭಾವವನ್ನೆ ಚೆನ್ನಾಗಿ ಸ್ಪಷ್ಟಪಡಿಸುತ್ತದೆ. ಇಂತಿವೆಲ್ಲ ಕಾರಣಗಳಿಗಾಗಿ ವ್ಯಾಸರ ಕರ್ಣನ ಚಿತ್ರವು ಸುಸಂಗತವಾಗಿದೆ; ಸುಂದರವಾಗಿದೆಯೆಂದು ಒಪ್ಪಿಕೊಳ್ಳಬೇಕಾಗುತ್ತದೆ.

೨. ಅರ್ಜುನನಿಗೆ ಕರ್ಣನಲ್ಲಿ ಕೊನೆಗೆ ಕರುಣೆಯುಂಟಾಯಿತೆಂದು ಕುಮಾರವ್ಯಾಸ ಮತ್ತು ಪಂಪರು ವರ್ಣಿಸಿದ್ದಾರೆ. (I ೩೦; II ೨೦; ನೋಡಿ). ಆದರೆ, ಇದು ಸಂಸ್ಕೃತ ಭಾರತದಲ್ಲಿ ಇಲ್ಲ. ಭಾರತ ಯುದ್ಧದ ಮೊದಲಲ್ಲಿ ಅರ್ಜುನನಿಗೆ ಉಂಟಾದ ವಿಷಾದದಂತೆ ಕೊನೆಗೆ ಮತ್ತೆ ಮನಸು ಕರಗಿತೆಂದು ಕಲ್ಪಿಸಿಕೊಂಡುದುದರಿಂದ ಅವರು ಯಾವ ವಿಶೇಷ ಮಾತನ್ನು ಸಾಧಿಸಿದರೊ ತಿಳಿಯದು. ವ್ಯಾಸರು, ಆ ಪ್ರಸಂಗದ ನಿಮಿತ್ತದಿಂದ ಮಾನವರ ಅಂತರಂಗದಲ್ಲಿ ನಡೆವ, ಸಾರ್ವಕಾಲಿಕವಾದ ಘೋರಯುದ್ಧದ ಶಾಶ್ವತಸತ್ಯವನ್ನು ವಿವರಿಸಿದ್ದಾರೆ. ಭಾರತ ಸಾಹಿತ್ಯಕೃತಿಯ ತಾತ್ವಿಕ ಹಿನ್ನೆಲೆಯನ್ನು ಅದರಲ್ಲಿ ಕಾಣಿಸಿದ್ದಾರೆ.

ಆದರೆ, ನಮ್ಮ ಕವಿಗಳು ಈ ಪ್ರಸಂಗವನ್ನು ನಿರ್ಮಿಸಿಕೊಂಡು ಸಾಧಿಸಿಕೊಂಡುದೇನು? ಪಟ್ಟವನ್ನು ದೊರಕಿಸಹೊರಟ ಅರ್ಜುನನು ಯುದ್ಧದಿಂದ ಅಡಿಗಡಿಗೆ ಹಿಂದೆಗೆಯುವುದು? ಕೌರವರಿಗೂ ತನಗೂ (ಕೃಷ್ಣನಿಗೆ) ಪಾಂಡವರಷ್ಟು ದೀರ್ಘದ್ವೇಷಕ್ಕೆ ಕಾರಣವಿಲ್ಲದೆ ಇದ್ದರೂ ಕೃಷ್ಣನು ಮತ್ತೆ ಮತ್ತೆ ವೈರಿಯನ್ನು ಕೊಲ್ಲಲು ಕಟುಕನಂತೆ ಪ್ರೋತ್ಸಾಹಿಸುವನೆಂದು ತೋರಿಸುವುದು? ಕುಮಾರವ್ಯಾಸನಂತೂ, ಕೃಷ್ಣನನ್ನು (ಕರ್ಣನು ಅರೆಜೀವವಾಗಿ ಉಸಿರೆಳದಾಡುವ ಹೊತ್ತಿನಲ್ಲಿ) ಕುಂಡಲಗಳ ದಾನ ಬೇಡುವ ಹಾರುವನಾಗಿ ಆತನಲ್ಲಿ ಯಾಚಿಸಿದನೆಂದು ಚಿತ್ರಿಸಿ ಕೃಷ್ಣನ ಪಾತ್ರಕ್ಕೆ ಕುಂದನ್ನು ತಂದಿದ್ದಾನೆ.

೩. ಕುಂತಿಯು ಕರ್ಣನನ್ನು ಕಾಣಬಂದಾಗ ಗಂಗಾದೇವಿಯು ಸ್ತ್ರೀರೂಪತಾಳಿ ಅಲ್ಲಿಗೆ ಬಂದು, ಕುಂತಿಗೆ ಮರಳಿ ನಿನ್ನ ಮಗುವನ್ನು ತಕ್ಕೊ ಎಂದು ಅಂದು ಕಯ್ಯೆಡೆಯೆಂದು ಒಪ್ಪಿಸಿದ್ದನ್ನು ಮರಳಿ ಕೊಟ್ಟಂತೆ ಪಂಪ ಮತ್ತು

ಕುಮಾರವ್ಯಾಸರು ವರ್ಣಿಸಿದ್ದಾರೆ. ಆದರೆ, ಇದು ವ್ಯಾಸವರ್ಣನೆಯಲ್ಲಿ ಬಂದಿಲ್ಲ. ಪಂಪ ಮತ್ತು ಕುಮಾರವ್ಯಾಸರ ಭಾರತದೊಳಗಿನ ಈ ಎಲ್ಲ ಹೋಲಿಕೆಗಳನ್ನು ನೋಡಿದರೆ ಕು. ವ್ಯಾಸನು ಪಂಪನನ್ನು ಚೆನ್ನಾಗಿ ಓದಿಕೊಂಡಿದ್ದು ಅವನನ್ನು ಅನುಸರಿಸಿಯೆ ತನ್ನ ಕಾವ್ಯವನ್ನು ರಚಿಸಿದನೆಂದು ಹೇಳಬೇಕಾಗುತ್ತದೆ. ಕು. ವ್ಯಾಸನ ಭಾಷೆಯಲ್ಲಿ ಬರುವ ಪಂಪನ ಪದಪ್ರಯೋಗಗಳೂ ಇದಕ್ಕೆ ಪುಷ್ಟಿಯನ್ನೀಯುತ್ತವೆ. ಇದರಿಂದ ಪಂಪ ಮಹಾಕವಿಯ ವರ್ಚಸ್ಸು ಕುಮಾರವ್ಯಾಸನ ಕಾಲದ ವರೆಗೂ ಎಷ್ಟೊಂದು ಬಲವಾಗಿದ್ದಿತೆಂಬ ಮಾತು ಸ್ಪಷ್ಟವಾಗುತ್ತದೆ.

೪. ಪಂಪನೂ ಅವನನ್ನು ಹಿಂಬಾಲಿದ ಕುಮಾರವ್ಯಾಸನೂ ಬರೆದ ಕರ್ಣನ ಚಿತ್ರಕ್ಕೆ ಮೂಲವು ಆವುದಿರಬಹುದು? ಸಂಸ್ಕೃತದಲ್ಲಿ ವ್ಯಾಸರು ಬರೆದ ಭಾರತವನ್ನೆ ಇವರು ತಮ್ಮೆದುರು ಇಟ್ಟುಕೊಂಡಿದ್ದರೆ? ಅಥವಾ ಜಾನಪದ ಗೀತ, ಯಕ್ಷಗಾನಾದಿಗಳಲ್ಲಿ ತಮಗಿಂತ ಮೊದಲಿನಿಂದ ಬಂದಿದ್ದ ಪರಪಂರೆಗೆ ಅನುಸರಿಸಿ ಪಂಪ, ಕುಮಾರವ್ಯಾಸರು ಕಂನುಡಿಯಲ್ಲಿ ಈ ಬಗೆಯಾಗಿ ಕರ್ಣನನ್ನು ಚಿತ್ರಿಸಿರಬಹುದೆ?

ಕವಿಯು ನಿರಂಕುಶನು. ತನ್ನ ಪ್ರತಿಭೆಗೆ ಹೊಳೆದ ರೀತಿಯಲ್ಲಿ ಪಾತ್ರಗಳನ್ನು ಮಾರ್ಪಡಿಸಿಕೊಂಡು ಆ ಕಥಾವಸ್ತುವನ್ನು ಬೆಳಗಿಸಬಹುದು. ಆ ತೆರನಾಗಿ ಪಂಪ, ಕುಮಾರವ್ಯಾಸರೂ ಮೂಲ ಸಂಸ್ಕೃತಭಾರತವನ್ನೇ ತಮಗೆ ಸರಿದೋರಿದ ರೀತಿಯಲ್ಲಿ ಪಲ್ಲಟಿಸಿಕೊಂಡು ಕಂನುಡಿಯಲ್ಲಿ ಚಿತ್ರಿಸಿದ್ದಾರೆಂದು ನನ್ನ ತಿಳುವಳಿಕೆ. ಏಕೆಂದರೆ ೧. ಇವರಿಬ್ಬರ ಹಲವು ಶ್ಲೋಕಗಳು ಸಂ. ಭಾರತದಲ್ಲಿ ಬಂದ ಶ್ಲೋಕಗಳಿಗೆ ಸಾಟಿಯಾಗಿವೆ. ೨. ಪಂಪನು ತನಗೆ ಕವಿವ್ಯಾಸನೆಂಬ ಗರ್ವವಿಲ್ಲದುದಾಗಿ ಹೇಳುತ್ತಾನೆ. ಈ ವ್ಯಾಸನು ಸಂಸ್ಕೃತದಲ್ಲಿ ಬರೆದ ಮಹಾಭಾರತ ಕಾರನೊ, ಕಂನುಡಿಯಲ್ಲಿಯೆ ಗ್ರಂಥರಚನೆ ಮಾಡಿದ ಬೇರೊಬ್ಬ ವ್ಯಾಸನೊ ಎಂಬ ಸಂದೇಹಕ್ಕೆ ಎಡೆಯಿದೆ. ಆದರೂ ಆತನು 'ವ್ಯಾಸ' ಪರಂಪರೆಯನ್ನು ಅರಿತಿದ್ದನೆಂಬುದು ನಿಃಸಂದೇಹ. ೩. ಪಂಪನು ಕರ್ಣನ ಬಾಯಲ್ಲಿ ಹಾಕಿದ 'ನಾಲ್ವರೊಳ್ ಆರುಮಂ ಕೊಲ್ಲೆನ್' ಎಂಬುದು (೧೨.೧೧೭ ವ) ಮೂಲ ಭಾರತಕ್ಕೆ ಅನುಸರಿಸಿದ್ದಾಗಿದೆ. ೪. ಗದುಗಿನ ನಾರಾಯಣಪ್ಪನಂತೂ ಕುಮಾರವ್ಯಾಸನೆಂದು ತನಗೆ ಅಕ್ಕರೆಯಿಂದ ಇಟ್ಟುಕೊಂಡ ಹೆಸರೆ ಆತನು ವ್ಯಾಸರನ್ನು ಅನುಸರಿಸಬೇಕೆಂದಿದ್ದುದಕ್ಕೆ ಸಾಕ್ಷಿಯಾಗಿದೆ.

೫. ಹಾಗಾದರೆ, ವ್ಯಾಸಭಾರತವನ್ನೆ ಮೂಲ ಆಧಾರವಾಗಿ ಇಟ್ಟುಕೊಂಡವರು ಕರ್ಣನ ಪಾತ್ರವನ್ನು ಹೀಗೆ ಚಿತ್ರಿಸಲು ಕಾರಣವೇನು? ಅದರಲ್ಲಿ ಏನಾದರೂ ಇದಕ್ಕೆ ಆಧಾರವುಂಟೆ? ಎಂಬ ಮಾತು ತಲೆಯೆತ್ತುವುದು. ಮೇಲೆ ವಿವರಿಸಿದಂತೆ ಕರ್ಣನ ಪಾತ್ರವನ್ನು ಅತ್ಯಂತ ಸುಸಂಗತವಾಗಿ ಚಿತ್ರಿಸಿದ ವ್ಯಾಸರ ವರ್ಣನೆಯಲ್ಲಿಯೆ ಕೆಲವೊಂದು ವಿಸಂಗತದ ಮಾತು ಎನಿಸುವ ಹಾಗೆ ಒಂದೆಡೆಗೆ ಇಂಬಿದೆ. ಕರ್ಣನು, ತಾನು ಪಾಂಡವರನ್ನು ಕೂಡಿಕೊಳ್ಳುವುದು ಸಾಧ್ಯವಿಲ್ಲವೆಂದು ಹೇಳಿದುದು ಎಲ್ಲವೂ ಸರಿಯಾಗಿಯೆ ಇದೆ. ಆದರೆ, ನಡುವೆಯೆ, ಕರ್ಣನ ಬಾಯಿಂದ ಹೊರಟಿತೆಂದು ನಂಬುವುದಕ್ಕೆ ಆಗದಂತಹ ಒಂದು ಮಾತು ತಲೆಯೆತ್ತಿಕೊಂಡಿದೆ. 'ಕೃಷ್ಣಾ! ಪಾಂಡವರಿಗೆ ಗೆಲುವೆಂಬುದನ್ನು ನಾನು ಬಲ್ಲೆ. ನೀನು ಬೆಂಬಲಿಗನಾಗಿ ಇರುವಾಗ ಆತನಿಗೆ ಸೋಲೆಂಬುದು ಉಂಟೆ?' ಎಂದು ಮುಂತಾಗಿ ಕರ್ಣನು ಕೃಷ್ಣನಿಗೆ ವಿವರಿಸಿ ಹೇಳಿದ ವರ್ಣನೆಯುಂಟು (III ೩,೪ ನೋಡಿ) ಮುಂದೆ ಕುಂತಿಯ ಎದುರು ಕರ್ಣನು ಹೀಗೆಯೆ ನುಡಿದುದನ್ನು ಹೇಳಿದೆ. (III ೧೧ ನೋಡಿ).

ಕರ್ಣನು ಶಿಷ್ಟಾಚಾರಗಳನ್ನು ಪಾಲಿಸಿ, ಶಕ್ಯವಿದ್ದಷ್ಟೂ ನಯವಿನಯಗಳಿಂದ ಕೂಡಿದ ಮಾತುಗಳನ್ನೆ ಆಡತಕ್ಕವನೆಂದು ಆತನು ಕೃಷ್ಣ ಮತ್ತು ಕುಂತಿಯರನ್ನು ಕಂಡಾಗ ನಡೆದುಕೊಂಡ ಬಗೆಯಿಂದ ಅರಿತುಕೊಳ್ಳ ಬಹುದಾಗಿದೆ. ತನ್ನ ಮೇಲಿನ ಪ್ರೀತಿಯಿಂದ ತನ್ನ ಹಿತಕ್ಕಾಗಿಯೆ, ಕೃಷ್ಣಾ, ನೀನು ಹೇಳುತ್ತಿರುವೆಯೆಂಬುದರಲ್ಲಿ ಸಂದೇಹವಿಲ್ಲವೆಂದು ಕರ್ಣನು ಹೇಳಿರುವುದು ಆತನ ಸೌಜನ್ಯದ ದ್ಯೋತಕವಾಗಿದೆ. ಕುಂತಿಯ ಮೇಲೆ ಎಷ್ಟು ಆತನಿಗೆ ಅಸಂತುಷ್ಟಿಯೆಂಬುದನ್ನು ಆತನು ಆಡಿದ ಕಡುನುಡಿಗಳಿಂದ ವ್ಯಕ್ತವಾಗುವುದು. ಇಂತಹ ಕುಂತಿಗೆ, ನನ್ನಿಂದ ತಮಗೆ ಏನಾಗಬೇಕು? ಎಂದು ವಿನಯದ ಮಾತಿನಲ್ಲಿ ಕೇಳುವುದೂ ಆತನು ಕೈಲಾದ ಮಟ್ಟಿಗೂ ಶಿಷ್ಟಾಚಾರಗಳನ್ನು ಪಾಲಿಸತಕ್ಕವನೆಂಬುದನ್ನೆ ದೃಢಪಡಿಸುತ್ತದೆ. (III ೩ ಮತ್ತು ೮ ನೋಡಿ).

ಈ ದೃಷ್ಟಿಯಿಂದ ವಿಚಾರಿಸಿದರೆ ಕರ್ಣನು ಕೃಷ್ಣ ಮತ್ತು ಕುಂತಿಯರಿಗೆ 'ನಿಮಗೇ ಗೆಲುವು', ಎಂಬುದು ಅರ್ಥವಾದ, ಔಪಚಾರಿಕ ಸ್ತುತಿಯ ಮಾತೆಂದು ಗ್ರಹಿಸಲು ಇಂಬಿದೆ. ಪ್ರತಿಷ್ಠಿತರು ಹಿರಿಯರೊಡನೆ ಮಾತ ನಾಡುವಾಗ-ಅವರನ್ನು ಮೋಸಗೊಳಿಸಲಿಕ್ಕಲ್ಲ, ಸಂತೋಷಿಸಲಿಕ್ಕೆಂದು ಮೇಲ್ತೋರಿಕೆಯ ಅವರ ಸ್ತುತಿಯ ಕೆಲವೊಂದು ಮಾತುಗಳನ್ನೂ ತಮ್ಮ ಕಡಿಮೆತನವನ್ನು ತೋರಿಸಿಕೊಂಬ ವಿನಯೋಕ್ತಿಗಳನ್ನೂ ಒಂದು ಮಿತಿಯಲ್ಲಿ ಆಡುವುದು ವಾಡಿಕೆಯಾಗಿದೆ. ಈ ಬಗೆಯಾಗಿಯೆ ಕೃಷ್ಣ ಮತ್ತು ಕುಂತಿಯರಿಗೆ, ನಿಮಗೇ ಗೆಲುವು ಎಂದು ಕರ್ಣನು ಹೇಳಿರಬೇಕೆಂದು ಅರ್ಥಮಾಡಬಹುದಾಗಿದೆ. ಇಲ್ಲವಾದರೆ ವ್ಯಾಸರೂ ಇಲ್ಲಿ ಎಡಹಿದರೆಂದು ಹೇಳ ಬೇಕಾಗುವುದು. ಆದರೆ, ಈ ಒಂದೆಡೆಯನ್ನುಳಿದರೆ ಬೇರೆ ಎಲ್ಲ ಕಡೆಗೂ ಅತ್ಯಂತ ಉಚಿತವಾಗಿ, ಸ್ವಾರಸ್ಯವಾಗಿ, ಅರ್ಥಪೂರ್ಣವಾಗಿ ಪಾತ್ರಪೋಷಣೆಯನ್ನು ಮಾಡಿಕೊಂಡು ಬಂದ ವ್ಯಾಸರು, ಇಲ್ಲಿ ತಪ್ಪಿದರೆಂದು ಗ್ರಹಿಸಲಿಕ್ಕೆ ಮನಸ್ಸು ಬಾರದು.

(ಅ) ಏಕೆಂದರೆ ಕರ್ಣನು ದುರ್ಯೋಧನನ ಪಂಚಪ್ರಾಣ 'ಒಡಲೆರಡುಂ ಜೀವಂ ಒಂದೆ' ಎಂಬಂತೆ ನಡೆದವನು ಇವನು. ಕರ್ಣ, ಶಕುನಿ ಮತ್ತು ದುಃಶಾಸನರು ದುರ್ಯೋಧನನ ಒಳಗುಟ್ಟಿನ ಗೆಳೆಯರು. ಅವರೆಲ್ಲರೂ ಒಂದೇ ದೃಷ್ಟಿಯವರು. ಜೀವಾಳದ ಗೆಳೆಯರಲ್ಲಿ ಮುಖ್ಯ ಮಾತಿನ ವಿಷಯದಲ್ಲಿ ಭಿನಾಭಿಪ್ರಾಯಗಳು ಉಂಟಾದರೆ ಅವನ್ನು ಅವರು ಬಚ್ಚಿಡುವುದು ಅನ್ಯಾಯ, ಅನೀತಿ ಎನಿಸುವುದು. ಗೆಳೆಯನೆದುರು ಅವನು 'ಎಂದುದನೆ ಎಂದು.' ಹಿಂದುಗಡೆಯಲ್ಲಿ ಆತನ ವಿರೋಧವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅಪ್ರಾಮಾಣಿಕತನವಲ್ಲದೆ ಬೇರೆ ಮತ್ತೊಂದಲ್ಲ. ಕೃಷ್ಣನು ಸಂಧಾನಕ್ಕೆ ಬಂದಾಗ ಆತನ ಹೆಡೆಮುಡಿ ಕಟ್ಟಿ ಹಿಡಿದಿಡುವ ಹೊಂಚು ಸರಿಯಲ್ಲವೆಂದು ಕರ್ಣನು ದುರ್ಯೋಧನನಿಗೆ ಹೇಳಿಲ್ಲ. (ಉದ್ಯೋಗ ೧೩೦ ೯-೧೦) ಪಾಂಡವರಿಗೆ ನಂಜನುಣಿಸಿ ಹೊಳೆಯಲ್ಲಿ ಚೆಲ್ಲುವಲ್ಲಿಯಿಂದ ಇಲ್ಲಿಯ ವರೆಗೆ ಕರ್ಣನು ದುರ್ಯೋಧನನ ಆಪ್ತ ಮಂತ್ರಾಲೋಚಕರಲ್ಲಿ ಒಬ್ಬನಾಗಿದ್ದವನು! ಕೃಷ್ಣನು, ಸಂಧಾನವು ಬಗೆಹರಿಯದೆ, ತನಗೆ ಬಂದ ಇರುಕಿನೊಳಗಿಂದ ಪಾರಾಗಿ ಹೊರಗೆ ಬಂದ ನಾಲ್ಕಾರು ತಾಸುಗಳಲ್ಲಿಯೇ ಆದ ಸಂಭಾಷಣೆಯಲ್ಲಿ ಕರ್ಣನು ದುರ್ಯೋಧನನ ವಿರುದ್ಧವಾಗಿ-ಆತನಿಗೆ ಸೋಲು ನಿಶ್ಚಿತವೆಂದು ಮಾತನಾಡಿರುವುದು ಸಂಭವನೀಯವೆ?

(ಬ) 'ದುರ್ಯೋಧನನಿಗೆ ಸೋಲು ತಪ್ಪಿದ್ದಿಲ್ಲ' ಎಂಬುದನ್ನು ತಿಳಿದುಕೊಳ್ಳಲು ಬೇಕಾಗುವಷ್ಟು ಅಲಿಪ್ತ ದೃಷ್ಟಿಯು, ಕರ್ಣನಿಗೆ ಸಾಧ್ಯವೇ ಇಲ್ಲವೆಂಬುವಂತೆಯೆ ಆತನನ್ನು ಮೊದಲಿನಿಂದ ಕೊನೆಯ ವರೆಗೆ ಚಿತ್ರಿಸಲಾಗಿದೆ.

(ಕ) ಭೀಷ್ಮ, ದ್ರೋಣ ಮತ್ತು ವಿದುರರಿಗೆ ಈ ಅಲಿಪ್ತದೃಷ್ಟಿ ಸಾಧ್ಯವಿದ್ದಿತು. ಏಕೆಂದರೆ ಅವರು ಏಕಪಕ್ಷೀಯ ಆವೇಶದಿಂದ ಆಡುವ, ಮಾಡುವ ಸ್ವಭಾವದವರಾಗಿದ್ದಿಲ್ಲ. ಆದುದರಿಂದಲೇ ಅವರು ಎರಡೂ ಪಕ್ಷದವರಿಗೆ ತಮಗೆ ಸರಿಯೆನಿಸಿದ್ದನ್ನು ಹೇಳುವುದಕ್ಕೆ ಹಿಂಜರಿಯುತ್ತಿದ್ದಿಲ್ಲ.

(ಡ) ಭಾರತದಲ್ಲಿ ಕೃಷ್ಣನ ಹಿರಿಮೆ, ಮಹಿಮೆಗಳನ್ನು ಅರಿತು ಮಹಾತ್ಮನಂತೆ ಆತನೊಡನೆ ಭೀಷ್ಮಾದಿಗಳು ನಡೆದುಕೊಂಡ ಹಾಗೆ ವರ್ಣನೆಗಳಿವೆ. ಆದರೆ, ಆತನ ಈ ಮಹಾತ್ಮ್ಯವು ಸ್ವಲ್ಪವೂ ಸಮ್ಮತವಿಲ್ಲದ ಒಂದು ವರ್ಗವೂ ಇದ್ದಿತು. ಶಿಶುಪಾಲಾದಿಗಳು ಈ ಬಗೆಯವರು. ಈ ದೃಷ್ಟಿಯ ಜನಗಳಿಗೆ ಕೃಷ್ಣನು ಮಹಾತ್ಮನಂತೆ ಕಾಣುತ್ತಿದ್ದಿಲ್ಲ. ಇಡೀ ಭಾರತದಲ್ಲಿ ದುರ್ಯೋಧನ, ದುಃಶಾಸನ, ಶಕುನಿಗಳು ಕೃಷ್ಣನನ್ನು ಮಹಾತ್ಮನಂತೆ ಕಂಡ ಒಂದು ವರ್ಣನೆಯೂ ಬಂದಿಲ್ಲ. ಆದಕಾರಣ ದುರ್ಯೋಧನ, ದುಃಶಾಸನ ಮತ್ತು ಶಕುನಿಗಳ ಮಾಲಿಕೆಯಲ್ಲಿಯೇ ಅಗ್ರಗಣ್ಯನಾದ ಕರ್ಣನು (ಕೃಷ್ಣನನ್ನು ಶಿಷ್ಟಾಚಾರಕ್ಕೆ, ಸಭ್ಯತೆಗೆ ಅವಶ್ಯವಾದ ನಯವಿನಯಗಳಿಂದ ಕಂಡನಾದರೂ) ಆತನನ್ನು (ಕೃಷ್ಣನನ್ನು) ಮಹಾತ್ಮನೆಂದು ಭಾವಿಸಿ ಆತನ ಎದುರು ತನ್ನ ಎಲ್ಲ ಅಂತಃಕರಣವನ್ನು ಬಿಡಿಸಿ ಬಿಚ್ಚಿ ಹೇಳಿದನೆಂದು ಎಣಿಸುವುದು ಸರಿ ಹೋಗುವುದಿಲ್ಲ.

(ಈ) 'ದುರ್ಯೋಧನನ ಪಕ್ಷವು ಅನ್ಯಾಯದ್ದು. ಅನ್ಯಾಯಕ್ಕೆ ಸೋಲು ಬರಲೇಬೇಕೆ'ಂದು ಕರ್ಣನ ಬಾಯಿಂದ ಮಾತುಗಳು ಹೊರಟವೆಂದು ಗ್ರಹಿಸುವುದಕ್ಕೆ, ಆತನು ಏಕಗ್ರಾಹಿಯಾದರೂ ಪ್ರಾಮಾಣಿಕ, ಒಂದು

ನಾಲಗೆಯವನೆಂಬ ಅವ್ಯಾಹತವಾದ ಪ್ರಾಚೀನ ಪರಂಪರೆಯು ಅಡ್ಡಬರುತ್ತಿದೆ. 'ದುರ್ಯೋಧನನು ಮಾಡುತ್ತಿರುವುದು ತಪ್ಪು, ಅನ್ಯಾಯ' ಎಂದು ತನಗೆ ಎನಿಸುತ್ತಿರುವಾಗಲೂ ಕರ್ಣನು ಆತನನ್ನು ಕದನಕ್ಕೆ ಹುರಿದುಂಬಿಸುತ್ತಿದ್ದನೆಂದು ಗ್ರಹಿಸುವುದು ಕರ್ಣನ ಇಡೀ ಶೀಲಕ್ಕೆ ಕಲಂಕವನ್ನು ತರುತ್ತದೆ. ಕರ್ಣನಿಗೆ ತನ್ನ ಶೌರ್ಯದಲ್ಲಿ, ದುರ್ಯೋಧನನ ವಿಜಯದಲ್ಲಿ ಸಂಪೂರ್ಣ-ಅದೇಕೆ ಮಿತಿಮೀರಿದ ವಿಶ್ವಾಸವಿದ್ದುದರಿಂದಲೇ ಆತನು ಕಾಳಗಕ್ಕೆ ಅಣಿಯಾಗಿದ್ದಾನೆ. ದುರ್ಯೋಧನನಿಗೆ 'ತನಗೇ ವೀರಪಟ್ಟ ಕಟ್ಟು' ಎಂದು ಆಗಾಗ ಯಾವ ಸಂಕೋಚವಿಲ್ಲದೆ ಕೇಳಿದ್ದಾನೆ. ಆದುದರಿಂದ, ಕರ್ಣನ ಬಾಯಿಂದ ಕೃಷ್ಣ-ಕುಂತಿಯರ ಎದುರು 'ನಿಮಗೇ ಗೆಲುವು' ಎಂದು ಬಂದ ಮಾತು ಕೇವಲ ಔಪಚಾರಿಕವಾಗಿರಬೇಕು. ಆತನ ನಿಜವಾದ ಅಭಿಪ್ರಾಯವೇ ಅದು ಆಗಿದ್ದಿತೆಂದು ಬಗೆದರೆ ಕರ್ಣನು ಪ್ರಾಮಾಣಿಕನೆಂಬ ಲೋಕದ ಗ್ರಹಿಕೆಯಾದರೂ ಸುಳ್ಳೆನ್ನಬೇಕಾಗುವುದು.

೬. ಇದು ಏನೇ ಇದ್ದರೂ ಭಾರತದಲ್ಲಿ, ಕೃಷ್ಣನೊಡನೆ ಆದ ಕರ್ಣನ ಸಂಭಾಷಣೆಯಲ್ಲಿ ಕರ್ಣನ ಬಾಯಲ್ಲಿ ಹಾಕಿದ 'ನಿಮಗೇ ಗೆಲುವು' ಎಂಬರ್ಥ ವರ್ಣನೆಗಳು ಪ್ರಮಾಣಬದ್ಧವಾಗಿಲ್ಲವೆಂದು ಒಪ್ಪಿ ಕೊಳ್ಳಲೇಬೇಕು. ಉದ್ಯೋಗ ಪರ್ವದ ೧೪೦ನೆಯ ಅಧ್ಯಾಯದಲ್ಲಿ ಕರ್ಣನಿಗೆ ಕೃಷ್ಣನ ಹೇಳಿತವು ಇದೆ. ಬಳಿಕ ೧೪೧ನೆಯ ಅಧ್ಯಾಯದಲ್ಲಿ ಕೃಷ್ಣನಿಗೆ ಕರ್ಣನು ಹೇಳುವ ಮಾತಿಗೆ ಆರಂಭವಾಗುವುದು. ೧ ರಿಂದ ೨೦ ಶ್ಲೋಕಗಳಲ್ಲಿ ಕೃಷ್ಣನ ಕೇಳಿತಕ್ಕೆ ಕರ್ಣನ ಅತ್ಯಂತ ಸಮರ್ಪಕವಾದ ಉತ್ತರವುಂಟು.

(ಅ) ಆದರೆ, ಇದರ ಮುಂದಿನ ಮಾತುಗಳಲ್ಲಿ ಮೊದಲಿನ ಅಂದವಾದ ಎಲ್ಲ ಚಿತ್ರವನ್ನೂ ಮಶಿ ನುಂಗಿದಂತಾಗಿದೆ. ಕೃಷ್ಣಾ, ಯುಧಿಷ್ಠಿರನು, ನಾನು ಆತನ ಅಣ್ಣನೆಂದು ತಿಳಿದರೆ ತನ್ನ ರಾಜ್ಯವನ್ನೆಲ್ಲ ನನಗೇ ಒಪ್ಪಿಸದೆ ಇರಲಾರನು. ಇದನ್ನೆಲ್ಲ ನಾನು ದುರ್ಯೋಧನನಿಗೆ ಕೊಟ್ಟುಬಿಡುವುದು ನನಗೆ ಕ್ರಮಪ್ರಾಪ್ತವಾಗಿದೆ. ಆದರೆ ಧರ್ಮಾತ್ಮನಾದ ಯುಧಿಷ್ಠಿರನೇ ಕೊನೆಯ ವರೆಗೂ ಅರಸನಾಗಲಿ..... ಎಂದು ಮುಂತಾಗಿ ಕರ್ಣನು ಹೇಳಿದ ಹಾಗೆ ಆತನಿಂದ ನುಡಿಸಿದ್ದಾಗಿದೆ (III ೩, ೪ ನೋಡಿ). ತನ್ನ ಜೀವದ ಗೆಳೆಯನೂ ಹೊರೆದ ದಾತಾರನೂ ಆದ ದುರ್ಯೋಧನನಿಗೇ ರಾಜ್ಯವು ದೊರೆಯಬೇಕೆಂದು ಆಗ್ರಹಗ್ರಸ್ತನಾದ ಕರ್ಣನು ಹೀಗೆ 'ಯುಧಿಷ್ಠಿರನೇ ರಾಜನಾಗಿರಲಿ' ಎಂದು ಹೇಳುವುದು ಸಾಧ್ಯವೆ?

(ಬ) ಇನ್ನೂ ಮುಂದಕ್ಕೆ ಹಾಗೆಯೆ ಸಾಗಿ, ಕರ್ಣನು, ಬೇಗನೆ ಜರುಗಲಿರುವ ಶಸ್ತ್ರಯಜ್ಞವನ್ನು ಸವಿಸ್ತೃತವಾಗಿ ವಿವರಿಸುತ್ತಾನೆ. ಅದರಲ್ಲಿ ಭೀಷ್ಮ ದ್ರೋಣಾದಿಗಳು ಹೇಗೆ ಪಾಂಚಾಲ ರಾಜಕುಮಾರರಿಂದ ಕೊಲ್ಲಲ್ಪಡು ವರೆಂಬುದನ್ನೂ ಆತನು ಹೇಳಿದ್ದುಂಟು. ಭೀಷ್ಮರನ್ನು ಶಿಖಂಡಿಯೂ, ದ್ರೋಣರನ್ನು ಧೃಷ್ಟದ್ಯುಮ್ನನೂ ಕೊಲ್ಲುವರೆಂದು ಕಾದಾಟಕ್ಕೆ ಮೊದಲೇ ಕರ್ಣನು ಹೇಳುವುದು ಹೇಗೆ ಸಾಧ್ಯ? ಸಂಜಯನಂತೆ ಕರ್ಣನಿಗೂ ದಿವ್ಯದೃಷ್ಟಿಯು ದೊರೆತಿದ್ದಿತೆಂದು ಭಾರತದಲ್ಲಿ ಎಲ್ಲಿಯೂ ಉಲ್ಲೇಖವಿಲ್ಲ! ಆದುದರಿಂದ, ಕರ್ಣನು ಹಾಗೆಲ್ಲ ಬರಲಿರುವ ಯುದ್ಧದ ಭವಿಷ್ಯವನ್ನು ತಿಳಿದಿರುವುದು ಸಾಧ್ಯವಿಲ್ಲ.

(ಕ) ಒಂದು ವೇಳೆ, ಕರ್ಣನು ಕೃಷ್ಣನಿಗೆ 'ನಿಮಗೇ ಗೆಲುವು ನಿಶ್ಚಿತ' ವೆಂದು ಇಷ್ಟೆಲ್ಲ ೩೭ ಶ್ಲೋಕಗಳಷ್ಟು ವಿಸ್ತಾರದಿಂದ ಒತ್ತಿ ಒತ್ತಿ ಹೇಳಿದನೆಂದು ಕ್ಷಣಕಾಲ ಗ್ರಹಿಸಿದರೂ ಬಳಿಕ ೧೪೨ನೆಯ ಅಧ್ಯಾಯದಲ್ಲಿ ಆರಂಭವಾಗುವ (ಕರ್ಣನ ಮಾತಿಗೆ) ಕೃಷ್ಣನಿತ್ತ ಉತ್ತರದ ಮಹತ್ವವೇ ಹಾಳಾಗುವಂತಿದೆ.

ಕರ್ಣನ ಮಾತುಗಳನ್ನು ಕೇಳಿ ನಕ್ಕು ಕೃಷ್ಣನು ಆತನಿಗೆ ಹೇಳಿದನಂತೆ: ಕರ್ಣನೇ, ನಾನು ನಿನಗೆ ಕೊಡಮಾಡಿದ ಈ ಅರಸುತನವನ್ನು ನೀನು ಒಲ್ಲದಿದ್ದರೆ ಎಚ್ಚರ! ಪಾಂಡವರಿಗೇ ಗೆಲವು ನಿಶ್ಚಿತವೆಂಬಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ನೀವು ಕೌರವ ಪಕ್ಷದ ವೀರರೆಲ್ಲರೂ ನಾಶ ಹೊಂದುವಿರಿ! ಕೃಷ್ಣನಿಂದ ಈ ಬಗೆಯ ಕೊನೆಯ ಎಚ್ಚರಿಕೆಯ ಭೀಕರ ಗಂಭೀರ ಮಾತುಗಳು ಬರಲೇಬೇಕಾಗಿದ್ದರೆ, ಕರ್ಣನು 'ಕೃಷ್ಣಾ ನಿಮಗೇ ಗೆಲುವು ನಿಶ್ಚಿತ' ಎಂದು ಹೇಳಿರುವುದು ಸಾಧ್ಯವೊ? ಕರ್ಣನು, ಹಾಗೆ ತಾವು ಸೋಲುವೆವೆಂದೂ, ತಾವೆಲ್ಲ ಕಾಳಗದಲ್ಲಿ ನಾಶವಾಗ ತಕ್ಕವರೆಂದೂ ಹೇಳಿರುವಾಗಲೂ ಕೃಷ್ಣನು ಮತ್ತೆ ಬೆದರಿಕೆಯ ಗುಡುಗು ಹಾಕುವ ಕಾರಣವೇನಿತ್ತು? ಕೃಷ್ಣನು, ಎದುರಿನವರು ಆಡುವ ಮಾತಿನ ಸೂಕ್ಷ್ಮವನ್ನು ಅರಿಯದಷ್ಟು ತಿಳಿಗೇಡಿಯೆಂದು ಗ್ರಹಿಸಬೇಕೆ?

ಕರ್ಣನ ನುಡಿ ಕೇಳಿ ಕೃಷ್ಣನು ನಕ್ಕನಂತೆ. ಕೃಷ್ಣನು ಮುಂದೆ ಆಡಿದ ಬೆದರಿಕೆಯ ಮಾತುಗಳನ್ನು ನೆನೆದರೆ ಆತನ ಆ ನಗು ಸಂತೋಷದ ನಗೆಯೆಂದು ಭಾವಿಸುವುದು ಕಷ್ಟ. ಕರ್ಣನು 'ತಾವು ಸೋಲುವೆವು' ಎಂಬುದಕ್ಕೆ ಕೃಷ್ಣನಿಗೆ ಸಂತೋಷವಾಗಿ ಆತನು ನಕ್ಕು ಮುಂದೆ ಮಾತನಾಡಿದನೆಂದು ಗ್ರಹಿಸಿದರೆ, ಆತನ ಬೆದರಿಕೆಯ ಮಾತುಗಳಿಗೆ ಅರ್ಥವೆ ಉಳಿಯುವುದಿಲ್ಲ. ಕೃಷ್ಣನು ಮುಂದೆ ೨೦ ಶ್ಲೋಕಗಳಲ್ಲಿ ಮಾಡಿದ ತಮ್ಮ ಪರಾಕ್ರಮ, ವಿಜಯಗಳ ವರ್ಣನೆಯು ಒಣಹೆಮ್ಮೆಯ ದ್ವಿರುಕ್ತಿ ದೋಷವೆನಿಸುವುದು. ಕೃಷ್ಣನ ಆ ನಗೆಯಲ್ಲಿ ಸಂತೋಷವಿಲ್ಲ. ಕರ್ಣನ ಬಗೆಗೆ ಕರುಣೆಯ, ಉಪರೋಧದ, ತನ್ನ ಆತ್ಮವಿಶ್ವಾಸದ ಛಾಯೆಯಿದೆಯೆಂದು ಗ್ರಹಿಸಿದರೆ, ಮುಂದಿನ ಆತನ ಮಾತುಗಳ ಔಚಿತ್ಯವು ಚೆನ್ನಾಗಿ ಅನುಭವಕ್ಕೆ ಬರುವುದು. 'ಕರ್ಣಾ, ರಾಜ್ಯವನ್ನು ಸ್ವೀಕರಿಸು, ನಿನಗೆ ತಿಳಿಯದು; ನನ್ನ ಮಾತು ಕೇಳು' ಎಂದು ಮೊದಲು ನಕ್ಕು ಮಾತಿಗೆ ಆರಂಭಿಸಿರಬೇಕು. 'ನೋಡು, ಮತ್ತೆ ನೀನು ರಾಜ್ಯವನ್ನು ಒಲ್ಲದೆ ಹೋದರೆ ನಿಮ್ಮೆಲ್ಲರ ಸರ್ವಸ್ವ ನಾಶವಾದೀತು' ಎಂಬ ಎಚ್ಚರದ ಬೆದರಿಕೆಯ ಗುಡುಗು ಹಾಕುವಾಗ ಅದೇ ನಗೆಯು ಉಪರೋಧದ ಕಟಕಿಯಾಗುವುದು.

(ಅ) ಈ ಬಗೆಯಾಗಿ ಕೃಷ್ಣ ನಕ್ಕು; ರಾಜ್ಯಕೊಡುವ ಕರುಣೆಯ ಮಾತನಾಡಿ, ಕೊನೆಯ ಎಚ್ಚರಿಕೆಯನ್ನು ಕೊಡಬೇಕಾಗಿದ್ದಲ್ಲಿ. ನೀವು ಸೋತು ನಾಶವಾಗುವುದೇ ನಿಶ್ಚಿತವೆಂದು ಕೃಷ್ಣನಿಗೆ ಗುಡುಗಬೇಕಾದಲ್ಲಿ ಕರ್ಣನು ತಾವು ಸೋಲುವೆವೆಂದು ವಿಸ್ತಾರದಿಂದ ಹೇಳಿರುವ ಸಂಧವವೇ ಇಲ್ಲ.

(ಈ) ೧೪೨ನೆಯ ಅಧ್ಯಾಯದಲ್ಲಿ ಕೃಷ್ಣನ ಉತ್ತರವು ೨೦ ಶ್ಲೋಕಗಳಲ್ಲಿ ಚೊಕ್ಕಟವಾಗಿ ಅಡಕವಾಗಿದ್ದುದನ್ನು ಹಿಂದಿನ ಅಧ್ಯಾಯದ ಮಾತಿಗೆ ಹೋಲಿಸಿದರೆ ಅದೂ ೨೦ ಶ್ಲೋಕಗಳಲ್ಲೇ ಮುಗಿದಿರಬೇಕೆಂದು ಊಹಿಸಲು ಅವಕಾಶವಿದೆ.

(ಎ) ಅಲ್ಲದೆ, ದಿವ್ಯದೃಷ್ಟಿಯವೆಂದು ಅವಿಚ್ಛಿನ್ನ ಪರಂಪರೆಯು ಇರುವ ಕೃಷ್ಣನ ಮಾತಿನಲ್ಲಿ ಕಾಣಿಸಿಕೊಳ್ಳದ ಭಾವೀಯುದ್ಧದ ಸಂಪೂರ್ಣ ಭವಿಷ್ಯವು ಪಕ್ಷಾಂಧತೆಯಿಂದ ಕುರುಡನಾದ ಏಕಗ್ರಾಹಿ ಕರ್ಣನಿಗೆ ಗೊತ್ತಾಗಿ ಆತನು ಅದೆಲ್ಲವನ್ನೂ ಕೃಷ್ಣನೆದುರು ಆಡಿದನೆಂದು ತಿಳಿಯುವುದು ಹೇಗೆ?

(ಐ) ೧೪೧ನೆಯ ಅಧ್ಯಾಯದ ೨೧ನೆಯ ಶ್ಲೋಕದಿಂದ ಆರಂಭವಾದ ಕರ್ಣನ ತೂಕತಪ್ಪಿದ ಮಾತುಗಳು ಅದೇ ಅಧ್ಯಾಯಕ್ಕೆ ತೀರಿ ಹೋಗಿಲ್ಲ. ಕೃಷ್ಣನು ತಮಗೇ ವಿಜಯ, ನಿಮಗೆ ನಾಶ ನಿಶ್ಚಿತವೆಂದು ೧೪೨ನೆಯ ಅಧ್ಯಾಯದಲ್ಲಿ ಸ್ಪಷ್ಟಪಡಿಸಿದ ಮೇಲೆ ಮತ್ತೆ ೧೪೩ನೆಯ ಇಡೀ ಅಧ್ಯಾಯದಲ್ಲೆಲ್ಲ ಕರ್ಣನ ಹರಟೆಯ ಅಚಾತುರ್ಯದ ಪ್ರಲಾಪವು ಕಾಣಿಸಿಕೊಳ್ಳುತ್ತದೆ! ೧೪೩ನೆಯ ಅಧ್ಯಾಯದ ೪೫ ಶ್ಲೋಕಗಳಲ್ಲೆಲ್ಲ ಕರ್ಣನು, ತಮಗೇ ಸೋಲು ನಿಶ್ಚಿತವೆಂದು ಬಗೆಬಗೆಯ ಶಕುನ ಮತ್ತು ಕನಸಿನ ಸೂಚನೆಗಳಿಂದ ತನಗೆ ಮನವರಿಕೆಯಾಗಿದೆಯೆಂದು ಹೇಳಿದ್ದುದರ ವಿಸ್ತಾರವಾದ ವರ್ಣನೆಯಿದೆ! (III ೬ ನೋಡಿ). ತಾನು, ಶಕುನಿ, ದುಃಶಾಸನ ಮತ್ತು ದುರ್ಯೋಧನರು ಈ ಘೋರಕಾಳಗಕ್ಕೆ ಕಾರಣರೆಂದು ತಮ್ಮೊಡನೆ ತನ್ನ ಹೊರೆದ ದಾತಾರನನ್ನೂ ಯುದ್ಧಾಪರಾಧಿಗಳ ಪಟ್ಟಿಯಲ್ಲಿ ಸೇರಿಸಿದ್ದಾನೆ. 'ಯತೋ ಧರ್ಮಃ ತತೋ ಜಯಃ' ಎಂಬುದನ್ನು ತಾನು ಬಲ್ಲೆನೆಂದೂ ನೀವು ದುರ್ಯೋಧನನ ವೀರರನ್ನೆಲ್ಲ ನಾಶಗೊಳಿಸುವುದರಲ್ಲಿ ಸಂದೇಹವಿಲ್ಲವೆಂದೂ ಕರ್ಣನು ಹೇಳುವನು. ಮತ್ತು ಇದಕ್ಕೆ ಪೋಷಕವಾದ ಹಲವು ಶಕುನ ಮತ್ತು ಕನಸುಗಳನ್ನು ತಾನು ಕಂಡುದಾಗಿಯೂ ಹೇಳಿ ಅವುಗಳನ್ನು ಒಂದೊಂದಾಗಿ ವಿವರಿಸುವನು. ಪಾಂಡವರ ಕಡುಹಗೆಯಾದವನು, ಏನೆ ಆಗಲಿ ಅರ್ಜುನನನ್ನು ತಾನು ಕೊಲ್ಲತಕ್ಕವನೇ ಎಂದು ಬದ್ಧಪ್ರತಿಜ್ಞನಾದವನು, ಕೃಷ್ಣನ ಮುಂದೆ-ಪಾಂಡವರ ಪಕ್ಷಪಾತಿಯ ಎದುರು, ಒಮ್ಮೆಲೆ ಹೀಗೆ ಗಳುಹಿದನೆಂದು ಗ್ರಹಿಸಲು ಕರ್ಣನ ಪೂರ್ವಚರಿತ್ರೆಯೆ ಅಡ್ಡಬರುತ್ತಿದೆ. ಕರ್ಣನು ಅತ್ಯಂತ ಸ್ವಾಭಿಮಾನಿಯೆಂದು ಆತನ ನಡವಳಿಕೆಯಲ್ಲಿ ಎಲ್ಲೆಲ್ಲೂ ಅನುಭವಕ್ಕೆ ಬರುತ್ತದೆ. ಆದರೆ, ಕೃಷ್ಣನ ಎದುರು ಆತನು ಈ ಬಗೆಯಾಗಿ-ತನ್ನ ಒಡೆಯನ ವಿರುದ್ಧವಾಗಿ ಮತ್ತು ತನ್ನ ಆತ್ಮಗೌರವಕ್ಕೆ ಹಾನಿಬರುವ ತೆರನಾಗಿ ಸೊರಹಿದನೆಂದು ಭಾವಿಸಬಹುದೆ?

(ಒ) ಇದೇ ೧೪೩ನೆಯ ಅಧ್ಯಾಯದಲ್ಲಿ ಇನ್ನೂ ಒಂದು ವಿಚಾರಣೀಯಾಂಶವಿದೆ. ಕರ್ಣನು ಈ ಬಗೆಯಾಗಿ ಬಡಬಡಿಸಿದ ಬಳಿಕ ಕೃಷ್ಣನು ಆತನಿಗೆ ಮತ್ತೆ ಹೇಳಿದನಂತೆ : 'ಕರ್ಣಾ, ಈಗ ಲೋಕವಿನಾಶಕಾಲವು

ಬಂದುದರಲ್ಲಿ ಸಂಶಯವಿಲ್ಲ. ನನ್ನ ಮಾತನ್ನು ನೀನು ಕಿವಿಯದಿದ್ದರೆ ನರಮೇಧವು ತಪ್ಪಿದ್ದಲ್ಲ!' ಕೃಷ್ಣನ ಈ ಮಾತಿಗೆ ಬಂದ ಕರ್ಣನ ಉತ್ತರದಲ್ಲಿ ಮತ್ತೆ ಸ್ವಾಭಿಮಾನದ ಸತ್ವದ ಮಾತು ಕಾಣಿಸಿಕೊಳ್ಳುವುವು. 'ಬದುಕಿ ಉಳಿದರೆ ಈ ಮಹಾಯುದ್ಧವು ಮುಗಿದ ಬಳಿಕ ನಾವು ಒಬ್ಬರೊಬ್ಬರನ್ನು ಕಾಣುವ; ಇಲ್ಲವಾದರೆ ಸ್ವರ್ಗದಲ್ಲಿಯೆ ನಮ್ಮ ನಿಮ್ಮ ಭೆಟ್ಟಿ' ಎಂದು ಕರ್ಣನು ಹೇಳಿದನಂತೆ. ನೂರಾರು ಶಕುನ, ಹಲವಾರು ಕನಸುಗಳನ್ನು ನಂಬಿ ತನ್ನ ಒಡೆಯನ ಪಂಗಡದವರೂ ಹೇಳ ಹೆಸರಿಲ್ಲದಂತಾಗುವುದು ನಿಶ್ಚಿತವೆಂದು ಬಗೆದ ಕರ್ಣನು ಕೃಷ್ಣನಿಗೆ 'ಈ ಮಹಾಯುದ್ಧವು ಮುಗಿದ ಬಳಿಕ ಜೀವಂತವಾಗಿ ಉಳಿದರೆ ನಮ್ಮ ನಿಮ್ಮ ಭೆಟ್ಟಿಯೆಂದು ಹೇಳುವಲ್ಲಿ ತಾನು ಬದುಕಿ ಉಳಿಯುವ ಆಶೆಯನ್ನು ಹೇಗೆ ವ್ಯಕ್ತಪಡಿಸುವನು!

ಈ ಬಗೆಯಾಗಿ ಆತನಿಗೆ ಬದುಕಿನ ಜೀವಂತ ಉಳಿಯುವ ಆಶೆಯಿದ್ದುದು ನಿಜವಿದ್ದರೆ ತಾನು ಗೆಲ್ಲುವೆನೆಂಬ ವಿಶ್ವಾಸವು ಆತನಲ್ಲಿ ಸಂಪೂರ್ಣ ನಷ್ಟವಾಗಿದ್ದಿಲ್ಲ-ಚೆನ್ನಾಗಿಯೆ ಇದ್ದಿತೆಂದೇ ಧ್ವನಿತವಾಗುವುದಿಲ್ಲವೆ? ಏಕೆಂದರೆ ಸೋತೂ ಬದುಕುವ ಆಸೆಯನ್ನು ಹಿಡಿಯತಕ್ಕ ಆಸಾಮಿ ಕರ್ಣನಲ್ಲ.

(ಔ) ತಾನು ಜೀವಂತವಾಗಿ ಉಳಿಯತಕ್ಕವನು. ಅರ್ಥಾತ್ ಗೆಲ್ಲುವವನೇ; ಅರ್ಜುನನನ್ನು ಸಂಹರಿಸಿ ದುರ್ಯೋಧನನಿಗೆ ಅರಸುತನವನ್ನು ದೊರಕಿಸಿಕೊಡತಕ್ಕವನೇ ಎಂಬ ಆತ್ಮವಿಶ್ವಾಸವು ಇದ್ದುದರಿಂದಲೆ ಅಲ್ಲದೆ, ಇಲ್ಲಿ ಮೇಲೆ ಕಾಣಿಸಿದಂತೆ ಶಕುನ, ಕನಸುಗಳಿಂದ ನರಗುಂದಿದವನಾಗಿ. ತಾನು ಸೋತು ಮಡಿಯತಕ್ಕವನು ಎಂದು ಆತನು ತಿಳಿದಿದ್ದರೆ. ಮುಂದೆ ದ್ರೋಣಪರ್ವದ ಕಾಲದಲ್ಲಿ ಆ ಮೇಲೆ ತನಗೆ ವೀರಪಟ್ಟವನ್ನು ಬಯಸುವಾಗ ಆಡಿದ ವೀರ ನುಡಿಗಳಿಗೆ ಏನೆಂದು ಅರ್ಥ ಹೇಳುವುದು? 'ಇಂದ್ರನು ಬಂದು ಎದುರು ನಿಂತರೂ ಆತನನ್ನೂ ಸೋಲಿಸಿ ಅರ್ಜುನನ್ನು ಕೊಲ್ಲುವೆನು; ನಿನಗೆ ಜಯವನ್ನು ಸಂಪಾದಿಸುವೆನು' ಎಂದು ಆಡಿದ ಮಾತುಗಳು ಮೋಸಗಾರಿಕೆಯವೆ? ಮರುಳತನದುವೆ? (೧೨ ನೋಡು)

ಕರ್ಣನು ಪ್ರಾಮಾಣಿಕನೆಂಬ ಪರಂಪರೆ ನಿಜವಿದ್ದರೆ, ಇಂತೀ ಬಗೆಯ ಕಾರಣಗಳ ಮೂಲಕ ಕರ್ಣನ ಬಾಯಲ್ಲಿ ಹಾಕಿದ (೧೪೧ರಲ್ಲಿ ೨೧ ರಿಂದ ಮುಂದೆ; ೧೪೩ರಲ್ಲಿ ೪೫ ಶ್ಲೋಕಗಳು) ಹಲವು ಮಾತುಗಳು ತೂಕತಪ್ಪಿದ ವಿಸಂಗತದ ನುಡಿಗಳಾಗಿವೆಯೆಂದು ಹೇಳಬೇಕಾಗುತ್ತದೆ. ಆದುದರಿಂದ, ವ್ಯಾಸರಿಂದಲೇ ಬಂದುವು ಎಂದು ನಂಬುವುದಕ್ಕೆ ಮನಸ್ಸು ಒಪ್ಪದು.

೭. ಹೇಗೆ ಆಗಲಿ, ಪಂಪ-ಕುಮಾರವ್ಯಾಸರಿಗೆ ಆ ಕಾಲಕ್ಕೆ ಭಾರತದಲ್ಲಿಯೆ ಈ ಬಗೆಯಾದ ಕೆಲವೊಂದು ಆಧಾರವು ದೊರೆತು ಅವರು ಕರ್ಣನ ಪಾತ್ರರಚನೆಯಲ್ಲಿ ತಾವಷ್ಟು ಕೈಲೆ ಹಾಕಿ ಇನ್ನಿಷ್ಟು ಬದಲಾವಣೆಗಳನ್ನು ಮಾಡಿಕೊಂಡರೆಂದು ಕಾಣುತ್ತದೆ.

ಗೊನೆ

'ಈ ಪಾತ್ರವನ್ನು ಹೀಗಿಯೆ ಸೃಷ್ಟಿಸಿರಿ.' ಎಂದು ಕವಿಯನ್ನು ಯಾರೂ ಒತ್ತಾಯ ಪಡಿಸಲಾರರು. ಆದರೆ ಕವಿಗಳು ನಿರಂಕುಶರೆಂಬುದು ನಿಜವಾದರೂ ಅವರಿಗೂ ಒಂದು ಸಮಕಟ್ಟು-ಒಂದು ಹದವನ್ನು ಮೀರಿ ನಡೆಯಲಿಕ್ಕಾಗುವುದಿಲ್ಲ. ಪ್ರಸ್ತುತ 'ಕರ್ಣ'ನ ವಿಚಾರವನ್ನೆ ಇಲ್ಲಿ ಎತ್ತಿಕೊಳ್ಳಬಹುದು. ಕರ್ಣನು ಒಳ್ಳೆಯವನೊ ಕೇಡಾಳಿಯೊ ಎಂಬುದು ವಿಮರ್ಶಕರಿಗೆ ಸಂಬಂಧಪಟ್ಟ ಮಾತು ಅಲ್ಲ. ಆತನು ಎಂತಹನೆಂದು ಮೂಲದಲ್ಲಿ ಗ್ರಹಿಸಿ ಕವಿಗಳು ಚಿತ್ರಿಸುವರೊ ಚಿತ್ರಿಸಲಿ; ಆ ಪಾತ್ರಪೋಷಣೆಯು ಸುಸಂಬದ್ಧವಾಗಿರಬೇಕೆಂದು ಮಾತ್ರ ವಿಮರ್ಶಕರ ಬೇಡಿಕೆ ಕವಿಗಳಲ್ಲಿ

ಈಗ ಕುಮಾರವ್ಯಾಸ ಮತ್ತು ಪಂಪರ ಕರ್ಣನನ್ನು ನೋಡಿದರೆ ಆತನು 'ಜೋಳದ ಪಾಳಿ'ಯನ್ನು ನೆನೆವವನೆಂದು ಹೇಳಲಿಕ್ಕಾಗದು. ಮಾಡಿದ ಉಪಕಾರದ ಬಂಧನದಕ್ಕಿಂತಲೂ ತೀರ ಹತ್ತಿರದ ರಕ್ತಸಂಬಂಧದ ಆಕರ್ಷಣವು ಹೆಚ್ಚು ಬಲವತ್ತರವಾದುದು ಎಂದು ಇವರ ಕರ್ಣ ಪಾತ್ರರಚನೆಯಲ್ಲಿ ಹೊರಪಡುತ್ತದೆ. ಈ ಬಗೆಯ ಅನುಭವವೂ ಈ ಲೋಕದ ವ್ಯವಹಾರದಲ್ಲಿ ಬರುವುದು ನಿಜ. ಅದನ್ನೇ ಕರ್ಣನ ಪಾತ್ರ ಮುಖಾಂತರವಾಗಿ ನಮ್ಮ ಕವಿಗಳು ತೋರಿಸಬೇಕೆಂದು ಹಾರಯಿಸಿದ್ದರೆಂದೂ ನಾವು ಭಾವಿಸಿಕೊಳ್ಳಲು ಅಡ್ಡಿಯಿಲ್ಲ. ವ್ಯಾಸರನ್ನು ಹಿಂಬಾಲಿಸಿ ಅವರಂತೆಯೆ ಇವರೂ ಕರ್ಣನನ್ನು ಏಕೆ ವರ್ಣಿಸಲಿಲ್ಲವೆಂದು ಗೊಣಗುವುದು ತಪ್ಪು. ನಮ್ಮ ಕವಿಗಳ ಪ್ರತಿಭೆಯು ನವೋನವವಾಗಿ ಸ್ಫುರಿಸಿ ಕರ್ಣನ ಪಾತ್ರಕ್ಕೆ ಹೊಸ ಅರ್ಥದ ಹೊಸ ಬೆಡಗನ್ನು ತಂದಿದ್ದರೆ ನಾವು ಅದಕ್ಕಾಗಿ ಅವರನ್ನು ಹೊಗಳಲೇಬೇಕು.

ಆದರೆ, ಈ ಹೊಸ ಮಾರ್ಪಾಟಕ್ಕೆ ಕಳೆ ಏರುವಂತೆ ಕರ್ಣನ ಸ್ವಭಾವರಚನೆಯಲ್ಲಿ ಮಹತ್ವದ ಒಂದೆರಡು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿತ್ತು: ಕರ್ಣನು ಮಹತ್ವಾಕಾಂಕ್ಷಿಯೂ, ಏಕಗ್ರಾಹಿಯೂ ಎಂದು ಗ್ರಹಿಸಿ ವ್ಯಾಸರು ಕರ್ಣನ ಪಾತ್ರವನ್ನು ಸೃಜಿಸಿದ್ದಾರೆ. ಇಂತಹ ನಡೆವಳಿಯ ಗೊನೆಯೇನೊ ಅದನ್ನು ಅಲ್ಲಿ ಸಂಪೂರ್ಣವಾಗಿ ತೋರಿಸಿದ್ದಾರೆ. ಕರ್ಣನ ಈ ಸ್ವಭಾವ ವೈಶಿಷ್ಟ್ಯವನ್ನು ಪಂಪನು ಸ್ವೀಕರಿಸದೆ ಇದ್ದರೆ ಚೆನ್ನಾಗಿತ್ತು. ಏಕೆಂದರೆ ಏಕಗ್ರಾಹಿಯಾದ ಚಲದಂಕವೀರನು ಸೂಕ್ಷ್ಮ ವಿಚಾರಗಳ ಹೊಯ್ದಾಟವನ್ನೆ ಅರಿಯನು. ಎರಡು ಕರ್ತವ್ಯಗಳ ಎಳೆದಾಟದಲ್ಲಿ-ಧರ್ಮಸಂಕಟದಲ್ಲಿ ಸಿಕ್ಕಿಬಿದ್ದು ಗೋಳಾಡುವ ಮನಸ್ಥಿತಿ ಇವರದಲ್ಲ. ಹೀಗೆ ಕರ್ತವ್ಯಾಕರ್ತವ್ಯಗಳನ್ನು ತೂಗಿ ತಿಳಿಯುವ ಸ್ವಭಾವದವರು 'ಚಲ'ದೊಳಗೆ ಹೆಸರಾಗಿರಲಾರನು. ಏಕಾಗ್ರಾಹಿ-ಒರಟುತನವು ಆತನ ಹತ್ತಿರವೂ ಸುಳಿಯದು. ದೇಶ-ಕಾಲ-ಪಾತ್ರ ವಿಚಾರವಿಲ್ಲದೆ ಕವಚ-ಕುಂಡಲಗಳ ದಾನ ಮಾಡುವ ಬುದ್ಧಿ ಅವನಲ್ಲಿ ಎಂದೂ ತಲೆದೋರದು.

ಚಲದಂಕವೀರನು ವ್ಯಾಸರ ಕರ್ಣ. ಕರ್ತವ್ಯಾಕರ್ತವ್ಯದ ಇರುಕಿನಲ್ಲಿ-ಮಾತೃಭಕ್ತಿ ಮತ್ತು ಜೋಳದ ಪಾಳಿ, ಬಂಧುಪ್ರೇಮ ಮತ್ತು ಒಡೆಯನಲ್ಲಿ ನಿಷ್ಠೆ ಇಂತಹ ಎರಡು ಧರ್ಮಗಳ ಎಳೆದಾಟದಲ್ಲಿ-ತೊಳಲಾಡುವ ಕರ್ಣನು 'ಚಲ'ದ ಸ್ವಭಾವದವನಾಗಿರದೆ ಹ್ಯಾಮ್ಲೇಟನಂತೆ- ಬೇಕಾದರೆ ಅರ್ಜುನನಂತೆ ಎಂದೂ ಹೇಳಬಹುದು- ವಿಚಾರಶೀಲವ್ಯಕ್ತಿಯೆಂದು ಪಂಪನು ಮೊದಲಿನಿಂದಲೆ ಸೂಚಿಸುತ್ತ ಬಂದಿದ್ದರೆ ಲೇಸಾಗುತ್ತಿತ್ತು. ಅಂತಃಸಾಕ್ಷಿಗೆ ಅಥವಾ ಕೃಷ್ಣನಂತಹ ಬಹಿಸ್ಸಾಕ್ಷಿಗೆ ತನ್ನ ತೊಡಕನ್ನು ಬಗೆಹರಿಸಿಕೊಳ್ಳಲು ಕರ್ಣನು ಎಂದೂ ಕೇಳಿಕೊಂಡಂತೆ ಹೇಳಿಲ್ಲ. ಏಕಗ್ರಾಹಿಗಳಿಗೆ ಸಂದೇಹಗಳ ಬಾಧೆಯೆ ಇಲ್ಲ. ಪ್ರಶ್ನೆಗಳು ತಲೆದೋರುತ್ತಿರುವಾಗಲೆ ಅವುಗಳ ಉತ್ತರವು ಅವರಿಗೆ ಹೊಳೆದು ಬಿಡುವುದು. ಕರ್ಣನ ಸ್ವಭಾವವು ಇಂತಹದು. ಆತನಲ್ಲಿ ವಿಚಾರದ ಹೊಯ್ದಾಟವೆ ಇಲ್ಲ. ಒಂದೇ ನುಡಿ; ಒಂದೇ ನಡೆ; ಒಂದೇ ಬಾಣ; ಇಂತಿದು ವ್ಯಾಸರ ಕರ್ಣನ ಶೀಲ. ಇದುವೆ ಆತನ ಗುಣ; ಇದುವೆ ಆತನ ದೋಷ. ಆತನ ಏಳಿಗೆ ಇಳಿಗೆಗೂ ಇದೇ ಗುಣವು ಕಾರಣವಾಗಿರುವಂತೆ ವ್ಯಾಸರು ವರ್ಣಿಸಿದ್ದು ಅವರ ಪಾತ್ರರಚನೆಗೆ ಸುಸಂಗತವಾಗಿಯೆ ಇದೆ. ಆದರೆ, ಈ ಮೂಲಸ್ವಭಾವದಲ್ಲಿ ಬದಲಾವಣೆಯನ್ನು ಮಾಡಿಕೊಳ್ಳದೆ ಪರಿಣಾಮದಲ್ಲಿ ಮಾತ್ರ ಬೇರೆಯಾದಂತೆ ವರ್ಣಿಸುವುದು ಸುಸಂಗತವಾಗಲಾರದು. ಏಕೆಂದರೆ, ಜೋಳದ ಪಾಳಿಯನ್ನು ನೆನೆವ ಕರ್ಣನು ದುರ್ಯೋಧನನಿಗೆ ಅಹಿತಕಾರಕವಾಗಿ 'ನಿನ್ನವರ ನೋಯಿಸೆನು' ಎಂದು ಕೃಷ್ಣನಿಗೆ ಎಂದೂ ವಚನವನ್ನೀಯಲಾರನು. ತನ್ನ ಮಹತ್ವಾಕಾಂಕ್ಷೆಗಳೆಲ್ಲ ಯಾರ ಕೃತಿಯಮೂಲಕ ಮಣ್ಣು ಪಾಲಾದುವೊ ತನ್ನ ರಾಜ್ಯಾಧಿಕಾರ, ಮಾನಮರ್ಯಾದೆಗಳಲ್ಲವೂ ನಷ್ಟವಾಗಿ ಅಡಿಗಡಿಗೆ ಸೂತ ಪುತ್ರನೆಂದೆನಿಸಿಕೊಳ್ಳಬೇಕಾಯಿತೊ ಆ ಕುಂತಿಗೆ ಆತನು ಮಾತೃಭಕ್ತಿ ಉಕ್ಕಿ ಸ್ವಾಗತವನ್ನು ಬಯಸಲಾರನು. ಸುಮ್ಮನೆ ಇನಿತೆಲ್ಲ ಚರ್ಚೆಯಿಂದೇನು? ಕೊನೆಗೆ ಇವೆಲ್ಲ ಚರ್ಚೆಯ ಗೊನೆಯೇನು? ಎಂದು ಕೆಲರು ಕೇಳಬಹುದಾಗಿದೆ. 'ಔಚಿತ್ಯ ವಿಚಾರ' ಎಂದು ಇದಕ್ಕೆ ಒಂದೇ ಮಾತಿನಲ್ಲಿ ಉತ್ತರ. ಔಚಿತ್ಯವೇ ಆನಂದ; ಆನಂದವೇ ಸಾಹಿತ್ಯದ ಗುರಿ. ಆದುದರಿಂದ ಔಚಿತ್ಯವನ್ನು ಮೀರಿದ್ದು ಸಾಹಿತ್ಯವಲ್ಲ. ಸಾಹಿತ್ಯವೂ ಸತ್ಯದೇವನ ಪೂಜೆಗೆ ಹೊರಟಿದೆ. ಆದರೆ, ಅದು ತನಗೊಂದು ಮೇರೆಯನ್ನು ಹಾಕಿಕೊಂಡಿದೆ. ಆ ಮೇರೆಯೆ ಔಚಿತ್ಯ. ಶಾಸ್ತ್ರಿಗಳು ಸತ್ಯದ ದಿಗಂಬರ ರೂಪದ ಅರ್ಚಕರು. ಸಾಹಿತಿಗಳು ವಸ್ತ್ರಾಲಂಕಾರ ಭೂಷಿತ ಚೆನ್ನಿಗನ ಪೂಜಕರು. ಔಚಿತ್ಯದಲ್ಲಿಯೆ ಚೆನ್ನು ಇದೆ; ಚೆಂದವಿದೆ. ಔಚಿತ್ಯವೆ ಚೆಂದ. ಆದುದರಿಂದ, ಸಾಹಿತ್ಯವು ಅಂದಗೇಡಿಯಾಗಬಾರದಾಗಿದ್ದರೆ ಅದರಲ್ಲಿ ಔಚಿತ್ಯಕ್ಕೆ ಭಂಗಬರದಂತೆ ಜಾಗರೂಕತೆಯನ್ನು ವಹಿಸುವುದು ಕರ್ತವ್ಯವಾಗಿದೆ.

ಶಾಸ್ತ್ರ ಮತ್ತು ಸಾಹಿತ್ಯವೆಂಬುವು ನಾಡಿನ ಎರಡು ಕಣ್ಣುಗಳು. ಇವೆರಡರಿಂದುಂಟಾದ ಒಂದು ನೋಟ-ಸಮ್ಯಕ್ ದೃಷ್ಟಿಯೆ ಆ ನಾಡಿನ ಮುನ್ನಡೆಗೆ ಕಾರಣವಾಗುವುದು. ಔಚಿತ್ಯವು ಅಳಿದರೆ ಸಾಹಿತ್ಯದಿಂದ ದೊರೆವ ಬೆಳಕು ಕಳೆಗುಂದುವುದು. ದೃಷ್ಟಿಯಲ್ಲಿ ದೋಷವುಂಟಾಗುವುದು. ನಾಡು ತಿಳಿನೋಟಕ್ಕೆ ಎರವಾಗುವುದು. ಕಣ್ಣಿಗೆ ಭ್ರಾಂತಿಯುಂಟಾಗುವುದು. ಇಂತಹ ಭ್ರಾಂತರ ನಾಡಿಗೆ ಏಳ್ಗೆ ಎಲ್ಲಿಯದು? ಮೂಲ 'ಜಯ' ಎಂಬ ಗ್ರಂಥವು ಬೆಳೆದು 'ಭಾರತ'ವಾಯಿತೆಂದೂ, 'ಭಾರತವು' ಇನ್ನೂ ಬೆಳೆದು ಈಗಿನ 'ಮಹಾಭಾರತ' ವಾಯಿತೆಂದೂ ಆಧುನಿಕ ವಿದ್ವಾಂಸರು ಹೇಳುತ್ತಾರೆ. ಈ ಸಂಸ್ಕೃತ ಮಹಾಭಾರತದಿಂದಲೇ ಮತ್ತೆ ಕಂನುಡಿಯಲ್ಲಿ ಇನ್ನೂ ಬಗೆಬಗೆಯಾಗಿ ಭಾರತಗಳು ಹೇಗೆ ಬೆಳೆದುಕೊಂಡು ಬಂದಿವೆಯೆಂಬುದನ್ನು ಪಂಪ ಮತ್ತು ಕುಮಾರವ್ಯಾಸರ ಭಾರತಗಳನ್ನು ತೂಗಿ ನೋಡಿ ಮನಗಾಣುವಂತಿದೆ.

ನಮ್ಮ ನಾಡಿನ ತರುಣರಿಗೆ ಮಿಗಿಲಾದ ಆದರ್ಶಗಳನ್ನು ತೋರಿ, ಜನಜೀವನವನ್ನು ಉತ್ತಮಗೊಳಿಸುವ ಕಾರ್ಯವನ್ನು ರಾಮಾಯಣ ಮತ್ತು ಮಹಾಭಾರತಗಳು ಎಂದಿನಿಂದಲೂ ಮಾಡುತ್ತ ಬಂದಿವೆ. ಆದರೆ, ಈ ಕಾವ್ಯಗಳ ನಿರೂಪಣೆಯಲ್ಲಿ ಸಾಹಿತ್ಯದ ಔಚಿತ್ಯದ ದೃಷ್ಟಿಯು ಮಂದವಾಗಿ, ಭಕ್ತಿಯ ಆವೇಶವು ಹೆಚ್ಚಾದ ಹಾಗೆ ಇದರಿಂದ ಆದ ಕೆಲವೊಂದು ಲಾಭದೊಡನೆ ಹಾನಿಯೂ ತಲೆಯೆತ್ತಿಕೊಂಡು ಬಂದಿತು. ಸಾಹಿತ್ಯವೆಲ್ಲ ಪುರಾಣವಾಗಿ ಪರಿಣಮಿಸಿತು. ಭಕ್ತಿಯ ಆವೇಶವು ಹೆಚ್ಚಾದಂತೆ ಬುದ್ಧಿಯ ಕಣ್ಣುಗಳು ಮುಚ್ಚಿಕೊಳ್ಳುವುವು. ಯಾವುದೊಂದು

ವಿಷಯದಲ್ಲಿ ತೂಕಮೀರಿದ ಅಭಿಮಾನ ಇಲ್ಲವೆ ಭಕ್ತಿಯು ಬೆಳೆದು ಬಂದಂತೆ ಅದನ್ನು ಕುಂಠಿತ ವಿಚಾರ-ವಿಮರ್ಶೆಗಳು ಕಡಿಮೆಯಾಗುವುವು. ವಿಚಾರ ವಿವೇಕ ಮತ್ತು ವಿಮರ್ಶೆಗಳು ಕಡಿಮೆಯಾದ ಹಾಗೆ ತಿಳಿಗೇಡಿತನವು ಹೆಚ್ಚಾಗಿ ಜನಗಳು ಹಾನಿಗೆ ಗುರಿಯಾಗುವರು. ಇದಕ್ಕೆ ನಿದರ್ಶನವನ್ನು ಹುಡುಕಲು ಬಹುದೂರ ಹೋಗಬೇಕಾಗಿಲ್ಲ. ಇಂದಿನ ನಮ್ಮ ನಾಡಿನ ಪಾಡೇ ಇದಕ್ಕೆ ಒಳ್ಳೆಯ ಉದಾಹರಣವಾಗಿದೆ. ಪರಮಾತ್ಮನ ಮಹಿಮೆಯನ್ನು ವರ್ಣಿಸಿ ಆತನಲ್ಲಿ ಭಕ್ತಿಯನ್ನು ಬೆಳಸಬೇಕೆಂಬ ಆತುರದಲ್ಲಿ ನಮ್ಮ ಕವಿಗಳು ಎಷ್ಟೊಂದು ಅಸಂಗತ, ಅಸಂಬದ್ಧ,ಅವ್ಯವಹಾರ್ಯ, ಅಸಂಭವನೀಯ ಸಂಗತಿಗಳನ್ನು ಎತ್ತಿಕೊಂಡು ಅವನ್ನು ವರ್ಣಿಸುವಲ್ಲಿ, ಔಚಿತ್ಯದ ಎಳ್ಳಷ್ಟೂ ವಿಚಾರಮಾಡದೆ, ಹಲವು ಬಗೆಯ ಶಬ್ದಜಾಲವನ್ನು ನಿರ್ಮಿಸಿಕೊಂಡು ತಾವೂ ಅದರಲ್ಲಿ ಸಿಕ್ಕಿ ಬಿದ್ದು ನಾಡಿನ ಜನರನ್ನೂ ಅದರಲ್ಲಿ ತೊಡಿಕಿಸಿ ಇಟ್ಟಿರುವರು!

ನಮ್ಮ ಶಾಸನ ಕವಿಗಳು ನಮ್ಮ ನಾಡಿನ ರಾಜರನ್ನು ಹೊಗಳುವಾಗ 'ದಾನದೊಳ್ ಕರ್ಣನುಂ, ಸತ್ಯದೊಳ್ ಹರಿಶ್ಚಂದ್ರನುಂ...... ಎಂದು ಅವರ ಆದರ್ಶಗಳನ್ನು ಹೇಳಿದ್ದಾರೆ; ಲೋಕಕ್ಕೆ ಕೃಷ್ಣಮಹಿಮೆಯನ್ನು, ಆತನ ಅಸದೃಶ ಸಾಮರ್ಥ್ಯ, ವೈಭವಗಳನ್ನು ಸಾರುವ ಗಡಿಬಿಡಿಯಲ್ಲಿ ಕೃಷ್ಣನಿಗೆ ಹದಿನಾರು ಸಾವಿರ ಸತಿಯರಾದರು; ಕೃಷ್ಣನು ಕಪಟನಾಟಕಿಯಾದನು. ಸರ್ವ ಸಂಗ್ರಾಹಕ ದೃಷ್ಟಿಯ-ವಿಶಾಲತತ್ವದ ಅನುಸಂಧಾನದಲ್ಲಿ ಜೀವನವನ್ನು ಸಾಗಿಸಿದನೆಂದು ವ್ಯಾಸರು ಚಿತ್ರಿಸಬೇಕೆಂದಿದ್ದ ಕೃಷ್ಣನ ಆ ಸಮ್ಯಕ್‌ಸ್ವರೂಪದ ಆಕಲನ ಸಾಮರ್ಥ್ಯವಿಲ್ಲದೆ ಮುಂದಿನ ಕಾಲದ ಕವಿಗಳು ಆತನನ್ನು ಮೋಸಗಾರನಂತೆ ಎಣಿಸಿ (ಭಕ್ತಿಭಾವದಿಂದಲೇ ಮತ್ತೆ!) ವರ್ಣಿಸಿದ್ದಾರೆ! 'ಕೃಷ್ಣಲೀಲಾ', 'ಕೃಷ್ಣಕಾರಸ್ಥಾನ' ಎಂಬೀ ಪಡೆನುಡಿಗಳು ಕೃಷ್ಣನ ಚಾರಿತ್ರ್ಯದ ಬಗೆಗೆ ನಮ್ಮ ನಾಡಿಗರ ದೃಷ್ಟಿ ಎಂಥದಾಗಿದೆಯೆಂಬುದಕ್ಕೆ ಸಾಕ್ಷಿಯಾಗಿವೆ! 'ಏಕಗ್ರಾಹಿ, ಒರಂಟ'ನೆನಿಸಿದ ಕರ್ಣನು-ದೇಶ, ಕಾಲ, ಪಾತ್ರವಿಚಾರ ಶೂನ್ಯನಾದ ವ್ಯಕ್ತಿಯು ಆದರ್ಶವಾಗುತ್ತಾನೆ! ಪರಮಾತ್ಮನ ಭಕ್ತರು ಎಂತಹ ಪವಾಡಗಳನ್ನೂ ಮಾಡಬಲ್ಲರೆಂಬುದನ್ನು ತೋರುವುದಕ್ಕೆ ಹಲವರು ಸದೇಹ ಸ್ವರ್ಗಕ್ಕೆ ಹೋಗುತ್ತಾರೆ; ಕೆಲವರು ಬಂದ ವಿಮಾನದಲ್ಲಿ ಕುಳಿತು ಸ್ವರ್ಗದ ಪ್ರವಾಸವನ್ನು ಕೈಕೊಳ್ಳುತ್ತಾರೆ. ಇನ್ನು ಕೆಲವರು ತಮ್ಮೊಡನೆ ಊರಿಗೆ ಊರನ್ನೇ (ನೆಲ ಸಹಿತ) ಎತ್ತಿಕೊಂಡು ಸ್ವರ್ಗಕ್ಕೆ ನಡೆದರೆಂದೂ ವರ್ಣನೆಗಳಿವೆ. ಇಂತಹ ಸಾಹಿತ್ಯದಿಂದ ದೊರೆತ ಸಂಭ್ರಾಂತ ದೃಷ್ಟಿಯು ನಮ್ಮ ನಾಡಿನ ಜನಗಳ ದಾಸ್ಯಕ್ಕೆ ಕಾರಣವಾಯಿತು.

ಸಾಹಿತ್ಯವೆಂದರೆ ಕೇವಲ ಶಬ್ದಗಳ ಮಾಯಾಜಾಲವಲ್ಲ. ಶಬ್ದಬ್ರಹ್ಮರ ಆ ನೂತನ ಸೃಷ್ಟಿಯಲ್ಲಿಯೂ ತಾಳಮೇಳ, ಸುಸಂಬದ್ಧತೆ, ಔಚಿತ್ಯಗಳ ಆವಶ್ಯಕತೆಯಿದೆ. ತಾಳಮೇಳವಿಲ್ಲದುದು ಬೇತಾಳ. ಬೇತಾಳದ ಲೀಲಾ ವರ್ಣನೆಗಳು ಚಮತ್ಕೃತಿಯುಳ್ಳವೂ, ಕೆಲಕಾಲ ಚಿತ್ತಾಕರ್ಷಕವೂ ಆಗಿರಬಲ್ಲವು. ಆದರೆ, ನಿಜವಾದ ಆನಂದದಾಯಕವಾಗಲಾರವು. ನಿಜವಾದ ಆನಂದವು ಔಚಿತ್ಯದಲ್ಲಿದೆ. ಔಚಿತ್ಯ ಮೀರಿದಲ್ಲಿ ರಸದ ಸಿದ್ಧಿಯಾಗದು. ರಸದಲ್ಲಿ ಓಲಾಡದೆ,ತನ್ಮಯವಾಗದೆ ತತ್ಸತ್-ಆ ಸತ್ಯದ ಸಮಾಧಿಸುಖವು ದೊರೆಯದು. ಆದುದರಿಂದ, ಔಚಿತ್ಯವನ್ನು ಅರಿತವನೆ ರಸಿಕ; ಸತ್ಯಜ್ಞಾನಿ.

ಲೇಖಕರಿಗೂ ವಾಚಕರಿಗೂ ಔಚಿತ್ಯದ ಅರಿವನ್ನುಂಟುಮಾಡಿಕೊಡುವುದು ವಿಮರ್ಶಕರ ಕೆಲಸ. ಸತ್ಯದಲ್ಲಿ ಸ್ಥಿರದೃಷ್ಟಿಯುಳ್ಳವರಾಗಿ ನಿಷ್ಪಕ್ಷಪಾತ ಭಾವದಿಂದ ತೂಗಿ ಔಚಿತ್ಯದ ಚರ್ಚೆ, ವಿಮರ್ಶೆಗಳು ಕಾಲಕಾಲಕ್ಕೆ ನಡೆಯುತ್ತಿರಬೇಕು. ನಮ್ಮ ದೃಷ್ಟಿಯು ತಿಳಿಯಾಗಿ ಉಳಿಯುವುದಕ್ಕೆ ಈ ಬಗೆಯ ನೆರವು ಹೊತ್ತುಹೊತ್ತಿಗೆ ಅವಶ್ಯವೆಂದು ನನ್ನ ತಿಳುವಳಿಕೆ. ಔಚಿತ್ಯವನ್ನು ಅರಿತುಕೊಳ್ಳಲು ಮಾಡಿದ ನನ್ನ ವೈಯಕ್ತಿಕ ಅಲ್ಪಪ್ರಯತ್ನವಿದು. ಮತ್ತೆ ಇದರ ಔಚಿತ್ಯವನ್ನು ಬಲ್ಲಿದರಿಂದ ತಿಳಿದುಕೊಳ್ಳಬೇಕೆಂದು ಇದನ್ನು ತಿಳಿದ ಕನ್ನಡಿಗರ ಎದುರು ಇರಿಸುತ್ತಿದ್ದೇನೆ.

ಅನುಬಂಧಗಳು

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಆಕರಗ್ರಂಥಗಳ ಸೂಚಿ

ಶಬ್ದಸೂಚಿ

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತ್ರವು

ಇದು ಶಂಬಾ-ಜೋಶಿ ಅವರಲ್ಲಿ ಮೊದಲನೆಯ ಪುಸ್ತಕ. ಶ್ರೀ ಅರವಿಂದರ ಬಗೆಗೆ ಕನ್ನಡದಲ್ಲಿ ಬಂದ ಮೊದಲ ಪುಸ್ತಕ ಕೂಡಾ. ಇದು ೧೯೨೧ರಲ್ಲಿ ಮುದ್ರಣಗೊಂಡಿತು. ಈ ಪುಸ್ತಕವನ್ನು ದಿ ಕರ್ನಾಟಕ ಟ್ರೇಡಿಂಗ್ ಕಂಪೆನಿ ಧಾರವಾಡ ಇವರು ಮುದ್ರಿಸಿದರು. ಇದು ಉದ್ಬೋಧನ ಮಾಲೆಯ ಪ್ರಥಮ ಸುಮನ. ಶೀರ್ಷಿಕೆಯ ಪುಟದಲ್ಲಿ 'ಪ್ರಕಾಶಕ: ಗುರುರಾವ್ ಧಾರವಾಡಕರ' ಎಂದಿದೆ. Bay Lay ಎಂಬಾತನ ಕವಿತೆಯೊಂದು ಮುಖಪುಟದಲ್ಲಿ ಅಚ್ಚಾಗಿದೆ.

"ಕ್ಷುದ್ರ ಸಾಂಸಾರಿಕ ವಿಚಾರಗಳಿಗೆ ಆಸ್ಪದ ಕೊಟ್ಟು ಮನಸ್ಸನ್ನು ಮಲಿನ ಮಾಡದೆ
ಚಿದ್ಘನ ಪರಮೇಶನ ವಾಸಕ್ಕೆ ಪವಿತ್ರವಾಗಿಟ್ಟ ಶುಚಿಯಾದ ಅಂತಃಕರಣವುಳ್ಳ ಹಾಗೂ
ಹೃದಯಸ್ಥ ಸಚ್ಚಿದಾನಂದನ ಆದೇಶಗಳನ್ನು ತಿಳಿದು ಅದರಂತೆ ಆಚರಿಸಲು ತತ್ಪರಾಗಿರುವ
ಬಂಧು, ಭಗಿನಿಯರ ಕೈಯಲ್ಲಿ ಪ್ರೇಮ ಪುರಸ್ಸರವಾಗಿ ಈ ಅಲ್ಪಕೃತಿಯನ್ನು ಒಪ್ಪಿಸುತ್ತೇನೆ"

ಎಂದು 'ಸಂಪಾದಕ' ಎಂಬ ಹೆಸರಲ್ಲಿ ಮುಡಿಪಿಟ್ಟಿದ್ದಾರೆ. ಈ ವಾಕ್ಯದ ಮೊದಲು ಭಗವದ್ಗೀತೆಯ 'ಬ್ರಹ್ಮಾರ್ಪಣಂ ಬ್ರಹ್ಮಹರ್ವಿರ್ಬ್ರಹ್ಮಗ್ನೌ...." ಎಂಬ ಶ್ಲೋಕವನ್ನು ನೀಡಲಾಗಿದೆ. ಕರ್ನಾಟಕ ಕುಲಪುರೋಹಿತರಾದ ಆಲೂರ ವೆಂಕಟರಾಯರು 'ಪ್ರಸ್ತಾವನೆ' ಬರೆದಿದ್ದಾರೆ. ಈ ಪುಸ್ತಕವನ್ನು ಬರೆಯಲು ಆಧಾರವಾಗಿ ಉಪಯೋಗಿಸಿದ ಪುಸ್ತಕಗಳ ಹಾಗೂ ಲೇಖನಗಳ ವಿವರಗಳಿವೆ; ಶ್ರೀ ಅರವಿಂದರ ಭಾವಚಿತ್ರವಿದೆ. ಇದು ಡೆಮ್ಮೈ ೧/೮ ಆಕಾರವಿದ್ದು ಬೆಲೆ ೧೨ ಆಣೆ ಒಟ್ಟು ಪುಟಗಳು ೮೬.

ಟಿಳಕ ಕಥಾಮೃತಸಾರ

ಇದು ೧೯೩೨ರಲ್ಲಿ ಪ್ರಕಟಗೊಂಡಿತು. ಲೋಕಮಾನ್ಯ ತಿಲಕರನ್ನು ಕುರಿತು ಕನ್ನಡದಲ್ಲಿ ಪ್ರಕಟವಾದ ಮೊದಲ ಪುಸ್ತಕ. ಜೀವನ ವಿವರಗಳಿಗಿಂತ ಸಂದರ್ಭ ಹಾಗೂ ಘಟನೆಗಳ ಮುಖಾಂತರ ಜೀವನವನ್ನು ಕಟ್ಟಿಕೊಡುವ ಕ್ರಮ ಇಲ್ಲಿದೆ. ಪುಸ್ತಕದ ಮೇಲೆ ಶಂ. ಬಾ. ಜೋಶಿ ಅವರ ಹೆಸರು ಇಲ್ಲ. ಆದರೆ, ಶಂಬಾ ಅವರ ಆನಂತರದ ಪ್ರಕಟಣೆಗಳಲ್ಲಿ ಈ ಪುಸ್ತಕವು ಶಂಬಾ ಅವರದ್ದೆಂದಿದೆ. ಪುಸ್ತಕದ ಪ್ರಕಾಶಕರು ದ. ರಾ. ಕುಲಕರ್ಣಿ, ಪ್ರಕಾಶನ ಸ್ಥಳ ಮಂಗಳವಾರ ಪೇಟೆ ಧಾರವಾಡ. ಈ ಪುಸ್ತಿಕೆಯ ಮುದ್ರಕರು. ಕೆ. ಜಿ. ರಾಯದುರ್ಗ, ಇದು ಜಯಕರ್ನಾಟಕ ಮುದ್ರಣಾಲಯ ಧಾರವಾಡ ಇಲ್ಲಿ ಪ್ರಕಟವಾಗಿದೆ. ಇದು ಲೋಕಮಾನ್ಯ ಸ್ಮಾರಕ ಮಂಡಲದ ಮೊದಲ ಪುಸ್ತಕ. ಕ್ರೌನ್ ೧/೮ ಆಕಾರವಿದ್ದು ಒಟ್ಟು ಪುಟಗಳು ೫೨, ಪುಸ್ತಕದ ಬೆಲೆ ನಾಲ್ಕಾಣೆ.

ರೂಢಿ ಹಾಗೂ ಭಾವಿಕ ಕಲ್ಪನೆಗಳು

ಇದು ೧೯೪೦ರಲ್ಲಿ ಮುದ್ರಣಗೊಂಡಿತು. ಇದು ಶ್ರೀನಂದಿನೀ ಮುದ್ರಣಾಲಯ ಸಿರ್ಸಿಯಲ್ಲಿ ಮುದ್ರಿಸಲ್ಪಟ್ಟು ಶ್ರೀ ಮಹಾಬಲೇಶ್ವರ ಬಂಕಿಕೊಡ್ಲರವರಿಂದ ಗೋಕರ್ಣದ ಕೆಳೆಯರ ಕೂಟದ ಆಫೀಸಿನಲ್ಲಿ ಮುದ್ರಿಸಲ್ಪಟ್ಟಿತು. ಇದು ಕೆಳೆಯರ ಕೂಟದ ಮೊದಲನೆಯ ಕಿರಣ. ಮುದ್ರಿಸಿದ ಪ್ರತಿಗಳು ಐದುನೂರು. ಪುಸ್ತಿಕೆಯ ಕೊನೆಗೆ ಹಿನ್ನುಡಿ ಇದ್ದು ಅದರಲ್ಲಿ 'ಕೆಳೆಯರ ಕೂಟ'ದ ಬಗೆಗೆ ಕೆಲವು ಮಾತುಗಳಿವೆ. "ಗೋಕರ್ಣದ ಭದ್ರಕಾಶೀ ಶಾಲೆಯ ವಾರ್ಷಿಕೋತ್ಸವದ ಕಾಲಕ್ಕೆ ಶ್ರೀಮಾನ್ ಬೇಂದ್ರೆಯವರು ಆಗಮಿಸಿದ್ದರು. ಅವರ ಮಾತಿನಿಂದ ಸ್ಫೂರ್ತಿಗೊಂಡ ಎಳೆಯರು ಗೆಳೆಯರು ಕೂಡಿ ಕೆಳೆಯರ ಕೂಟವನ್ನು ಕಟ್ಟಿದರು." ಎಂಬ ಮಾತಿದೆ. ಈ ಅಂಶಗಳನ್ನು ಕೆಳೆಯರ ಕೂಟದ ಅಧ್ಯಕ್ಷರಾದ ಮಹಾಬಲೇಶ್ವರ ಬಂಕಿಕೊಡ್ಲ ಅವರು ೧೫-೭-೧೯೪೦ರಲ್ಲಿ ಬರೆದಿದ್ದಾರೆ. ಕ್ರೌನ್ ೧/೮ ಆಕಾರದ ಹದಿನಾರು ಪುಟಗಳಿವೆ.

ಅಗ್ನಿವಿದ್ಯೆ ಮತ್ತು ಅಸಂತೋಷವೇ ಏಳ್ಗೆಯ ಮೂಲ

ಇದು ಯಾವ ವರ್ಷ ಮುದ್ರಿತವಾಯಿತೋ ತಿಳಿಯದು. ಸರಸ್ವತಿ ನಿಲಯ ಧಾರವಾಡ ಇದರ ಪ್ರಕಾಶಕರು. ಪುಸ್ತಕದ ಕೊನೆಗೆ 'ಸೌಂದರ್ಯಾನುಭೂತಿ' ಅಥವಾ 'ದೇವತಾ ಸಾಕ್ಷಾತ್ಕಾರ' ಎಂಬ ಗ್ರಂಥದ ಒಂದು 'ಅಂಶ' ಎಂದಿದೆ. ಆದರೆ, ಶಂಬಾ ಅವರು ಸೂಚಿಸಿರುವ ಆ ಗ್ರಂಥವು ಪ್ರಕಟವಾಗಿಲ್ಲ. ಇದರಲ್ಲಿರುವ 'ಅಸಂತೋಷವೇ ಏಳ್ಗೆಯ ಮೂಲ' ಎಂಬ ಪ್ರಬಂಧವು ೧೯೪೩ರಲ್ಲಿ 'ಎದ್ದೇಳು ಕನ್ನಡಿಗಾ' 'ಅಸಂತೋಷವೇ ಏಳ್ಗೆಯ ಮೂಲ" ಎಂಬ ಹೆಸರಲ್ಲಿ ಪುಸ್ತಿಕೆಯಾಗಿ ಹೊರಬಂದಿತು. ಪುಸ್ತಿಕೆಯು ಕ್ರೌನ್ ೧/೧೨ ಆಕಾರವಿದ್ದು ಇದರ ಬೆಲೆ ನಾಲ್ಕು ಆಣೆ. ಒಟ್ಟು ಪುಟಗಳು ನಾಲ್ವತ್ತು. ಇದು 'ನಾಡನಡೆ' ಎಂದಿದ್ದು 'ರಾಷ್ಟ್ರಧರ್ಮ ಕಾರ್ಯಾಲಯ, ಧಾರವಾಡ' ಇವರ ಪ್ರಕಟಣೆಯಾಗಿದೆ. ಜಮಖಂಡಿ ವಿಠ್ಠಲರಾಯ ಇದರ ಪ್ರಕಾಶಕರು. ಇದನ್ನು ಸೇರಿಸಿಕೊಂಡು 'ಅಗ್ನಿವಿದ್ಯೆ ಮತ್ತು ಅಸಂತೋಷವೇ ಏಳ್ಗೆಯ ಮೂಲ' ಎಂಬ ಹೆಸರಲ್ಲಿ ಸಂಯುಕ್ತವಾಗಿ ಪ್ರಕಟವಾಗಿದೆ. ಇದರ ಬೆಲೆ ೧.೫೦. ಒಟ್ಟು ಪುಟಗಳು ಐವತ್ತೆರಡು.'

ಯಕ್ಷಪ್ರಶ್ನೆ ಅಥವಾ ಬರಲಿರುವ ಸಮಾಜ .

ಇದು ಪರ್ಣಕೂಟ ಗ್ರಂಥಮಾಲೆ ಗೋಕರ್ಣ ಇವರು ಪ್ರಕಟಿಸಿದ ಎರಡನೆಯ ಬಿಡಿಮುತ್ತು. ಇದು ೧೯೪೮ರಲ್ಲಿ ಪ್ರಕಟವಾಯಿತು. ಈ ಮಾಲೆಯ ಸಂಪಾದಕರು ಗೌರೀಶ ಕಾಯಿಕಿಣಿ, ವ್ಹಿ. ಜಿ. ಭಟ್ಟ ಸಂಚಾಲಕರು ಶಾ. ಗ. ಗೋಪಿ. ಗೋಕರ್ಣ ಇದು ಎಂ. ಜಿ. ಪಾಲೇಕರ ವಿಶಾಲಕರ್ನಾಟಕ ಪ್ರೆಸ್ ಧಾರವಾಡದಲ್ಲಿ ಮುದ್ರಿತವಾಯಿತು. ಪ್ರಕಾಶಕರು 'ಕೇಳಕರ ಗೋವಿಂದರಾಯರು, ಸರಸ್ವತೀ ನಿಲಯ ಧಾರವಾಡ. ಈ ಪುಸ್ತಕವು

> "ಯಾರೊಡನಾಡಿಯಾಗಿದ್ದಾಗ ಜಾತ್ಯತೀತ ದೃಷ್ಟಿಯು ಹಲಕಾಲದ ಹಿಂದೆ ಒಡಮೂಡಿತೋ. ಡಾ. ಜೋಗಳೇಕರ ಶಂಕರರಾಯರು, ಪ್ರಿ. ಗಾಡಗೀಳ ಧನಂಜಯರಾಯರು ಇವರಿಗೂ ಸರಿಯೆಂದು ಅರಿತುದನ್ನು ಆಚರಿಸುವ ಯಾರ ಎದೆಗಾರಿಕೆಯನ್ನು ಕಂಡು ಎದೆಗೊಂಡೆನೊ ಗೆಳೆಯ ಕೋಟ ಶಿವರಾಮ ಕಾರಂತರಿಗೂ ಯಾರ ನಡೆನುಡಿಗಳಿಂದ ಬಾಳಿನಲ್ಲಿ ಹೊಸ ಬೆಳಕು ಕಂಡಿತೊ ಪರಮ ವಂದ್ಯ ಬಾಪೂಜಿಯವರಿಗೂ ಯಾರ ಪೂಜ್ಯ ಬಾಪೂಜಿಯವರ ಜಾತ್ಯತೀತ ಸಮಾಜದ ಕನಸನ್ನು ನನಸಾಗಿಸುವ ನೋಂಪಿಗಾಗಿ ಅನುದಿನವೂ ದುಡಿಯುತ್ತಿರುವರೋ ಸರ್ವೋದಯ ಸಮಾಜದ ಸಂಚಾಲಕರಿಗೂ ಆದರದ ಕಾಣಿಕೆಯಾಗಿ ಮುಡಿಪು"

ಮಾಡಿದ್ದಾರೆ. ಇದು ಕ್ರೌನ್ ೧/೮ ಆಕಾರವಿದ್ದು ಒಟ್ಟು ಪುಟಗಳು ೧೯೬. ಪುಸ್ತಕದ ಬೆಲೆ ೩.೦೦ ರೂಪಾಯಿ.

ಮಕ್ಕಳ ಒಡಪುಗಳು

ಇದು ೧೯೪೦ರಲ್ಲಿ ಮೊದಲು ಪ್ರಕಟವಾಯಿತು. ಆನಂತರ ಹಲವು ಮುದ್ರಣಗಳನ್ನು ಕಂಡಿದೆ. ಈ ಪುಸ್ತಕವು ೧/೮ ಆಕಾರವಿದ್ದು ಒಟ್ಟು ನಾಲ್ವತ್ತು ಪುಟಗಳಿವೆ. ಈ ಮೊದಲ ಆವೃತ್ತಿಗೆ ಸುದೀರ್ಘವಾದ 'ಮುನ್ನುಡಿ' ಇದೆ. ಆನಂತರದ ಮರು ಆವೃತ್ತಿಗಳಲ್ಲಿ ಈ ಮುನ್ನುಡಿಯು ಮುದ್ರಿತವಾಗಿಲ್ಲ. ಆನಂತರ ೧೯೬೬ರಲ್ಲಿ ಸಮಾಜ ಪುಸ್ತಕಾಲಯ, ಧಾರವಾಡ ಇವರು ಹೊರತಂದಿದ್ದಾರೆ. ಬೆಲೆ ೪೦ ಪೈಸೆ. 'ಮಕ್ಕಳು ಒಡಪುಗಳನ್ನು ಏಕೆ ಓದಬೇಕು?' ಎಂಬ ಶೀರ್ಷಿಕೆಯಲ್ಲಿ ಏಳು ಉತ್ತರಗಳಿವೆ. ಇದು ಕಾರ್ತಿಕ ಶುದ್ಧ ಪಂಪದಿನದಂದು ಶಂ. ಬಾ ಜೋಶಿಯವರು ಬರೆದರು. ಇದು ಕ್ರೌನ್ ೧/೮ ಆಕಾರದ ಇಪ್ಪತ್ತೆಂಟು ಪುಟಗಳ ಪುಸ್ತಿಕೆಯಾಗಿದೆ.

ಸೌಂದರ್ಯವಿಚಾರ

ಇದು ೧೯೪೯ರಲ್ಲಿ ಪ್ರಕಟವಾಯಿತು. ಇದು ಉತ್ತರ ಕನ್ನಡಜಿಲ್ಲೆಯ ೨ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ. ಇದರ ಪ್ರಕಾಶಕರು ಮಾಧವ ಬಲ್ಲಾಳ ಬಂಧುಗಳು ಸಾಧನಕೆರೆ ಧಾರವಾಡ. ಮುದ್ರಕರು ಫಕೀರಪ್ಪಾ ಎಲ್ಲಪ್ಪಾ ಮಿಂಡಗುದ್ದಿ ಇವರು ರವೀಂದ್ರ ಮುದ್ರಣಾಲಯದಲ್ಲಿ ಮುದ್ರಿಸಿದರು. ಈ ಭಾಷಣ ನಡೆದ ಸ್ಥಳ ಕಾರವಾರ. ಇದು ಕ್ರೌನ್ ೧/೮ ಆಕಾರದ ೧೬ ಪುಟಗಳ ಪುಸ್ತಿಕೆ ಬೆಲೆ ನಾಲ್ಕು ಆಣೆ. ಇದರ ಮರುಮುದ್ರಣ ೧೯೯೨ರಲ್ಲಿ ಆಯಿತು. ಮಾನವಧರ್ಮ ಪ್ರತಿಷ್ಠಾನ, ರಾಯಬಾಗ ಬೆಳಗಾವಿ ಜಿಲ್ಲೆ ಇವರು ಹೊರತಂದರು. ತ್ವರಿತಮುದ್ರಣಾಲಯ, ಗದಗ ಇವರು ಮುದ್ರಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಭಾಸ್ಕರಪತ್ತಾರ ಅವರು 'ಪ್ರಸ್ತಾವನೆ' ಬರೆದಿದ್ದಾರೆ. ಪುಸ್ತಕವು ಕ್ರೌನ್ ೧/೮ ಆಕಾರವಿದ್ದು ಬೆಲೆ : ಆರು ರೂಪಾಯಿ.

ಸಮಾಜ ದರ್ಶನ

ಈ ಪುಸ್ತಕವು ಚಾಲುಕ್ಯ ವಿಕ್ರಮ ವರುಷ ೧೮೭೨ ಅಂದರೆ ೧೯೪೯ರಲ್ಲಿ ಮುದ್ರಿತವಾಯಿತು. ಇದು ಮಿಂಚಿನಬಳ್ಳಿಯ ೧೧ನೆಯ ವರ್ಷದ ೩ನೆಯ ಕುಡಿ. ಪ್ರಕಾಶಕರು ಬಿ. ಜಿ. ಅವಧಾನಿ, ಮಿಂಚಿನಬಳ್ಳಿ, ಧಾರವಾಡ. ಮುದ್ರಕರು : ಎನ್. ಎಸ್. ಬೆಂಗೇರಿ ವಿಜಯ ಮುದ್ರಣಾಲಯ, ಧಾರವಾಡ. ಬುರ್ಲಿ ಬಿಂದು ಮಾಧವ ಅವರು 'ಓದುಗರಲ್ಲಿ ಬಿನ್ನಹ' ಎಂದು ಪ್ರಕಾಶಕರ ಪರವಾಗಿ ಎರಡು ಪುಟ ಬರೆಹವನ್ನು ಬರೆದಿದ್ದಾರೆ. ಇದು ಕ್ರೌನ್ ೧/೮ ಆಕಾರವಿದ್ದು ಒಟ್ಟು ೧೩೨ ಪುಟಗಳಿವೆ. ಬೆಲೆ ೧ ರೂಪಾಯಿ ಎಂಟಾಣೆ.

ದಾರಿಯ ಬುತ್ತಿ

ಇದು ಹಲವು ಬಾರಿ ಮುದ್ರಿತವಾಗಿದೆ. ಇದರ ಮೊದಲ ಮುದ್ರಣ ೧೯೬೯ ಆದಂತೆ ತೋರುತ್ತದೆ. ಮೊದಲ ಆವೃತ್ತಿ ಎಂದು ಪ್ರಕಟವಾಯಿತೋ ಖಚಿತವಾಗಿ ತಿಳಿಯದು ಪುಸ್ತಿಕೆಯ ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಈ ಪುಸ್ತಕವು "ಇದರೊಳಗಣ ಹಲವು ವಚನಗಳನ್ನು ನೆನೆವಾಗ ಯಾರ ಮಧುರ-ಜೀವನದ ಸವಿನೆನಪುಗಳು ಮತ್ತೆ ಮತ್ತೆ ಕಣ್ಣೆದುರು ನಿಲ್ಲುವುವೋ ಆ ವಂದ್ಯ ಶ್ರೀ ಆಪ್ಟೆ ಶಂಕರರಾಯರಿಗೆ ಮುಡಿಪು" ಮಾಡಿದ್ದಾರೆ. ಪುನರ್ ಮುದ್ರಣ ೧೯೭೨, ೧೯೭೮ ವರ್ಷಗಳಲ್ಲಿ ಆಗಿದೆ. ೧೯೭೨ರ ಮುದ್ರಣವನ್ನು ಮನೋಹರ ಘಾಣೇಕರ್, ಸಮಾಜ ಪುಸ್ತಕಾಲಯ ಧಾರವಾಡ ಮಾಡಿದ್ದಾರೆ. ೧೯೭೮ರ ಮುದ್ರಣವು ವಿಚಾರಪ್ರಕಾಶನ, ನೆಲಮಂಗಲ ಇಲ್ಲಿಂದ ಪ್ರಸಿದ್ಧಿಸಿದೆ. ಈ ಮುದ್ರಣಕ್ಕೆ ಶ್ರೀ ಜೆ. ಶ್ರೀನಿವಾಸ ಮೂರ್ತಿ 'ಬೆನ್ನುಡಿ' ಬರೆದಿದ್ದಾರೆ. ೧೯೭೨ರ ಮುದ್ರಣ ಪ್ರತಿಯಲ್ಲಿ ೧/೮ ಆಕಾರದ ೪೪ ಪುಟಗಳಿವೆ. ೧೯೭೮ರ ಮುದ್ರಣಪ್ರತಿಯಲ್ಲಿ ಮಲ್ಲೇಪುರಂ ಜಿ. ವೆಂಕಟೇಶರ 'ಸಂಪಾದನೆ' ಎಂಬ ಹೆಸರಿನ ಒಂದು ಪುಟದ ನಿವೇದನೆ ಇದೆ. ಒಟ್ಟು ೩೬ ಪುಟಗಳು. ಬೆಲೆ ಒಂದು ರೂಪಾಯಿ ಐವತ್ತು ಪೈಸೆ.

ಕರ್ಣನ ಮೂರು ಚಿತ್ರಗಳು

ಇದು ೧೯೪೭ರಲ್ಲಿ ಮೊದಲು ಮುದ್ರಿತವಾಯಿತು. ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಸ್ಮಾರಕ ಉಪನ್ಯಾಸ ಮದರಾಸು ೧೯೪೬. ಪ್ರಕಾಶಕರು ಬಲ್ಲಾಳ ಜೋಶಿ ಬಿ. ಎಸ್ಸಿ. ಮಾಧವ ಬಲ್ಲಾಳ ಬಂಧುಗಳು ಸಾಧನಕೆರೆ ಧಾರವಾಡ. ವಿ. ಯ ಜತಾರ, ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್ ಧಾರವಾಡ ಇವರು ಮುದ್ರಿಸಿದ್ದಾರೆ. ಇದು ಶಂಬಾ ಅವರ ಹಿರಿಯ ಮಗನ ಹೆಸರಲ್ಲಿ ಪ್ರಕಾಶಿತವಾಗಿದೆ. ಪುಸ್ತಕದ ಒಳಗಡೆ ಬಳಸಿಕೊಂಡ ಕನ್ನಡ-ಸಂಸ್ಕೃತ ಆಕರಗ್ರಂಥ ವಿವರಗಳನ್ನು ನೀಡಿದ್ದಾರೆ. ಇದು ಕ್ರೌನ್ ೧/೮ ಆಕಾರವಿದ್ದು ಒಟ್ಟು ಪುಟಗಳು ೮೮. ಪುಸ್ತಕದ ೮೧ನೆಯ ಪುಟದ ಅನಂತರ ಇದೇ ಗ್ರಂಥಕಾರರ ಬೇರೆ ಪ್ರಕಟಣೆಗಳಾದ ಕರ್ಣಾಟಕದ ವೀರಕ್ಷತ್ರಿಯರು, ಕಂನಡದ ನೆಲೆ, ಕಂನುಡಿಯ ಹುಟ್ಟು, ಕಂನುಡಿಯ ಜೀವಾಳ ಕುರಿತು ಆರ್. ಆರ್. ದಿವಾಕರ್, ದೇವುಡು ನರಸಿಂಹಶಾಸ್ತ್ರೀ ಎಸ್. ಬಿ. ಸಾಲೆತೊರೆ ಪ್ರೊ. ಕೆ. ಜಿ. ಕುಂದಣಗಾರ, ಮಾಡರ್ನ್ ರಿವ್ಯೂನಲ್ಲಿ ಪ್ರೊ. ವಿ. ಬಿ. ನಾಯಕ ಇವರ ಅಭಿಪ್ರಾಯಗಳಿವೆ. ಇದು ಮರಳಿ ೧೯೮೦ರಲ್ಲಿ 'ಕರ್ಣ : ಒಂದು ಅಧ್ಯಯನ' ಎಂಬ ಹೆಸರಲ್ಲಿ ಮಲ್ಲೇಪುರಂ ಜಿ. ವೆಂಕಟೇಶ ಇವರ ಸಂಪಾದಕತ್ವದಲ್ಲಿ ಮರು ಮುದ್ರಣಗೊಂಡಿತು. ಸಂಸ್ಕೃತಿ ವಿಚಾರ ಮಾಲೆ ಶ್ರೀರಾಂಪುರಂ, ಬೆಂಗಳೂರು ಇದರ ಪ್ರಕಾಶಕರು. ಲಿಬರ್ಟಿ ಪ್ರಿಂಟರ್ಸ್ ಅರಳೇಪೇಟೆ, ಬೆಂಗಳೂರು ಇದರ ಮುದ್ರಕರು. ಸಂಪಾದಕರು ಎಂಟು ಪುಟಗಳ ಮುನ್ನುಡಿ ಬರೆದಿದ್ದಾರೆ; ವಿವರವಾದ ಗ್ರಂಥಸೂಚಿ ನೀಡಿದ್ದಾರೆ. ಬೆನ್ನುಡಿಗೆ ಶಿವರಾಮಕಾರಂತರ ಸ್ಮೃತಿಪಟಲದಿಂದ ತೆಗೆದ ಬರೆಹವಿದೆ. ಇದು ಕ್ರೌನ್ ೧/೮ ಆಕಾರವಿದ್ದು ಒಟ್ಟು ಎಂಬತ್ತು ಪುಟಗಳಿವೆ. ಪುಸ್ತಕದ ಬೆಲೆ ಐದು ರೂಪಾಯಿಗಳು.

ಆಕರಗ್ರಂಥಗಳ ಸೂಚಿ

ಇಂಗ್ಲಿಷ್

Bipin Chandra Pal, *Indian Nationalism : Its principles and personalities,* Calcutta

R. Palita, *Life of Sri Arvind Ghosh*

Nevlinson., *New Spirit in India*

R. G. De Beer; Ed. 1938, *Evolution*;

Jitendralal Banerjee; *A Study of Aurobindo Gosh,* Modern Review, September 1909

Arvind Ghosh, *The Synthesis of Yoga,* Arya Vol I

Arvind Ghosh, *Essays on Gita,* Arya Vol III

ಶಬ್ದಸೂಚಿ

ಡಾ. ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ ಡಾ. ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು.

ಡಾ. ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು–ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು.

ಡಾ. ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು ತಮ್ಮ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ, ಹೂತುಹೋಗಿದ್ದ ತಥ್ಯಗಳಿಗೆ ಜೀವದಾನ ಮಾಡಿ ಹೊಸಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲ ನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು–ಇವುಗಳೆಲ್ಲಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು

